TEST

Zit

TEST

[illegible]

TEST



START

START

START

MICROFILMED BY
KARNATAKA STATE
ARCHIVES
1987

"SAMACHAR NEWS PAPER

From 16:8:1950

To

14-08:1981

(30 Volumes)

CAMP

" MYSORE

File No. HKS 33 ARP 807

dated 25/6/88

CERTIFICATE OF AUTHENTICITY

Certified that the following issues of the SAMACHAR", a daily published from the City of Mysore have been microfilmed from the originals preserved in the office of Sri. G.Satyanarayana, Present Editor of "SAMACHAR". The originals are available in the office of the "SAMACHAR", Mysore, for verification.

Place: Mysore.
Date: 4th July 1988.

(H.P.Shashidharamurthy)
Deputy Director of Archives
Archives Unit, Mysore.
ಉಪ ನಿರ್ದೇಶಕರು.
ಪತ್ರಾಗಾರ ಘಟಕ, ಮೈಸೂರು.

CERTIFICATE OF AUTHENTICITY

Certified that the following issues of the "SAMACHAR", a daily published from the City of Mysore have been microfilmed from the originals preserved in the office of Sri. G.Satyanarayana, Present Editor of "SAMACHAR". The originals are available in the office of the "SAMACHAR", Mysore, for verification.

Place: Mysore.
Date: 4th July 1988.

(H.P.Shashidharamurthy)
Deputy Director of Archives
Archives Unit, Mysore.
ಉಪ ನಿರ್ದೇಶಕರು.
ಪತ್ರಾಗಾರ ಘಟಕ, ಮೈಸೂರು.

SAMACHAR

An Introduction:

The "Samachar" made its first appearance on August 15, 1950. The first day's copies of this two pages Kannada Morninger, priced at 3 paise a piece, were released in the Rangacharlu Memorial Hall, near the Palace. On 17th June 1952 the "Samachar" became an eveninger and continues to be so to this day. On August 15, 1954, it became an English Daily with a view "to supply the much-needed want of the city"

Referring to the policy of "Samachar" its Founder-editor Sri B. Gouri Lakshmana Swamy declared in the first issue: "We have put the country's interests before everything else in our humble endeavour to give the Public the 'Paper' that is much needed. Further, in his editorial of August 15, 1954, when the "Samachar" entered its fifth year, he wrote: "..... impelled by spirit of service and the vast vista of Post-independence promises, we plunged into this undertaking......."

Being a small local daily its progress was impeded by post-war inflationery pressures and acute newsprint shortage. Its survival has been attributed to the support of the citizens of Mysore. Sri G. Sathyanarayana, son of Sri B.G.L. Swamy, has been editing "Samachar" since May 1967, when his father died.

"Samachar" continues to be the cheapest newspaper of the city of Mysore being priced at 5 paise only. Speaking on the occassion of its Silver Jubilee Celebration, Sri Tulasidas Dasappa, M.P., said: "Samachar has a good record of maintaining a high standard of journalistic ethics and great objectivity in presenting facts to the public. The tradition set by the late Sri Swamy has been zealously followed by his son, Sri G. Sathyanarayana."

A few words about the Founder-Editor of "Samachar", Sri B.G.L. Swamy, will not be out of place here.

Sri B. Gouri Lakshmana Swamy, was born in a Brahmin family of Mysore on June 30, 1911, as the third son of Sri Gouri Subbanarasimhaiah, an Inspector of Schools. He studied at the Maharaja's High School and completed his matriculation in 1927. While his brother plunged into the freedom struggle, Sri Swamy took upon himself the responsibility of caring for the family, his father having died by then. He joined Government Service as a school teacher and worked at Kunigal, T. Narasipur, Talkad, Arsikere and Mysore. He started compiling 'Hand Books' on Several taluks and districts of the princely state of Mysore. In compiling these books he involved himself so much that he resigned from Government Service. With the permission of the Government of His Highness the Maharaja of Mysore, he compiled and printed a number of Taluk and district Hand Books. He also prepared and printed several maps, statistical and Industrial Guide Books.

In 1940, he opened the "Tourist Bureau", the first of its kind in South India. He brought out guide books for the tourists visiting Mysore State. Several of these guide books -- Srirangapatna, Krishnaraja Sagara, Somanathapur, Belur, Halebid, Sravanabelgola, Bangalore, Mysore, Coorg, etc. -- and Hand Books compiled and published by him are available in the Karnataka State Archives, Bangalore. In recognition of his services in promoting tourism in the State the Mysore Government started giving him a monthly subvention since 1945.

"The Mysore Municipal Journal", later converted into a bilingual (Kannada and English) weekly called "Mysore Poura Patrike" was another of his journalistic venture.

Sri B.T.L. Swamy died on May 5, 1967.

Date: 4th July 1983.

H.P. Sheshadri
(H. P. SHESHADRI MURTHY)
Deputy Director of Archives
Archives Unit, Mysore.
ಉಪ ನಿರ್ದೇಶಕರು.
ಪತ್ರಾಗಾರ ಘಟಕ, ಮೈಸೂರು.

The following issues of "Samachar" are microfilmed

Bound Volume No.	Chronological range
1	16-08-1950 to 14-08-1951
2	21-08-1951 to 15-06-1952
3	02-09-1952 to 14-08-1953
4	17-08-1953 to 13-08-1954
5	17-08-1954 to 13-08-1955
6	15-08-1955 to 14-08-1956
7	15-08-1956 to 14-08-1957
8	16-08-1957 to 14-08-1958
9	16-08-1958 to 14-08-1959.
10	Not Available .
11	16-08-1960 to 14-08-1961
12	16-08-1961 to 14-08-1962
13-	16-08-1962 to 14-08-1963
14	16-08-1963 to 14-08-1964
15	17-08-1964 to 14-08-1965
16	16-08-1965 to 13- 8- 1966
17	15-08-1966 to 14-08- 1967
18	16-08-1967 to 13-08-1968
19	15-08-1968 to 14-08-1969
20	16-08-1969 to 14-08-1970
21	15-08-1970 to 14-08-1971
22	15-08-1971 to 14-08-1972
23	16-08-1972 to 14-08-1973
24	16-08-1973 to 14-08-1974
25	16-08-1974 to 14-08-1975
26	16-08-1975 to 14-08-1976
27	16-08-1976 to 13-08-1977
28	16-08-1977 to 14-08-1978.
29	16-08-1978 to 14-08-1979
30	16-08-1979 to 14-08-1980
31	16-08-1980 to 14-08-1981.

- o o o -

Deputy Director of Archives
Archives Unit, Mysore.
ಉಪ ನಿರ್ದೇಶಕರು.
ಪತ್ರಾಗಾರ ಘಟಕ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೧೬—೮—೧೯೫೦ ನೇ ಬುಧವಾರ | ಸಂಚಿಕೆ ೨

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

★ ಮೈಸೂರಲ್ಲಿ ಅಂಗಡಿಗಳ ಪಿಕೆಟಿಂಗ್ ?

ಮಂಡ್ಯ ಸಕ್ಕರೆ ಕಾರ್ಖಾನೆ

ಕಬ್ಬಿನ ಸರಬರಾಯಿಯಿಲ್ಲದೆ ಮಂಡ್ಯದ ಸಕ್ಕರೆ ಕಾರ್ಖಾನೆ ಕೆಲಸ ನಿಂತಿದೆ

ಮದರಾಸು, ಬೀಹಾರದಲ್ಲಿ ಆಹಾರ

ಮದರಾಸು ಮತ್ತು ಬೀಹಾರಿನಲ್ಲಿ ಸಾಕಾದಷ್ಟು ಆಹಾರ ದಾಸ್ತಾನಿಲ್ಲದೆ ಕ್ಷಾಮದಿಂದ ಇಲ್ಲಿ ಜನರು ಸಾಯುತ್ತಲಿದ್ದಾರೆ. ಹೊಟ್ಟೆಗಿಲ್ಲದೆ ಹಣ್ಣು, ಸೊಪ್ಪು ಇತ್ಯಾದಿ ತಿನ್ನುತ್ತಿದ್ದಾರೆ, ಮಕ್ಕಳುಮರಿಗಳನ್ನು ಮಾರುತ್ತಿದ್ದಾರೆ ಎಂಬ ಕಥೆಗಳೆಲ್ಲಾ ಅಲ್ಲಿ ಕಾಣಬರುತ್ತಲಿಲ್ಲವೆಂದು ಆಹಾರ ಮಂತ್ರಿ ಕೆ. ಎಂ. ಮುನ್ಷಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ತುಟ್ಟಿಭತ್ಯ

ತುಟ್ಟಿಭತ್ಯವನ್ನು ಕೇಂದ್ರ ಸರ್ಕಾರವು ಕೊಡುತ್ತಲಿರುವಂತೆ ತಮಗೂ ೧೮ ರೂ. ಕೊಡಬೇಕೆಂದು ಬೆಂಗಳೂರು ಆಹಾರ ಕಛೇರಿಯ ಸುಮಾರು ೧೦೦ ಜನ ಜವಾನರು ಹಣಕಾಸಿನ ಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪನವರಲ್ಲಿ ಪ್ರಾರ್ಥಿಸಿಕೊಂಡರು.

ಪ್ರತಿಬಂಧಕವಿಲ್ಲ

ಹೈದರಾಬಾದ್ ನಿಜಾಮರು ಸಂಚರಿಸುವಾಗ ಇತರರ ಸಂಚಾರ ನಿಲ್ಲಿಸುವ ವಾಡಿಕೆಯಿಂದ ಆಗುತ್ತಿದ್ದ ತೊಂದರೆಯನ್ನು ನಿಜಾಮರ ಅವಗಾಹನೆಗೆ ತಂದುಕೊಂಡು ಇನ್ನು ಮುಂದೆ ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ನಿಜಾಮರು ಮುಖ್ಯ ಮಂತ್ರಿಗಳಿಗೆ ತಿಳಿಸಿದ್ದಾರೆ.

ಮೈಸೂರಿಗೆ ಸೋಲು

ಕಲ್ಕತ್ತಾದಲ್ಲಿ ನಡೆದ ರಾಷ್ಟ್ರೀಯ ಫುಟ್‌ಬಾಲ್ ಪಂದ್ಯದಲ್ಲಿ ಒರಿಸ್ಸಾ ಟೀಮಿಗೆ ಮೈಸೂರು ಟೀಮಿನವರು -೨ ಗೋಲುಗಳಿಂದ ಸೋತು ಹೋದರು. ಒರಿಸ್ಸಾನವರು ಬಂಗಾಳ ಟೀಮನ್ನು ಸೆಮಿಫೈನಲ್ಸ್‌ನಲ್ಲಿ ಎದುರಿಸುವರು.

ಮೈಸೂರಿನವರು ಕೊರಿಯಾದಲ್ಲಿ

ಮೈಸೂರಿನ ಸ್ಕಾಲರ್ ಶ್ರೀ ಕೆ. ನಾಗರಾಜರಾಯರವರು ಕೊರಿಯಾ ಟೆಕ್ನಾಲಜಿ ಸಂಸ್ಥೆಗೆ ಎರವಲಾಗಿ ಹೋಗಿರುವರು. ಕೊರಿಯಾ ಯುದ್ಧಾರಂಭವಾದಾಗಿನಿಂದ ಜಪಾನಿನಲ್ಲಿ ಸುರಕ್ಷಿತವಾಗಿದ್ದಾರೆಂದು ತಿಳಿಯಬಂದಿದೆ.

ಮಂತ್ರಿಮಂಡಲದ ಸಭೆ

ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲು, ಮೈಸೂರು ಮಂತ್ರಿಮಂಡಲವು ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸೇರಿತ್ತು. ಮೂರು ಗಂಟೆಗಳ ಕಾಲ ದೀರ್ಘ ಚರ್ಚೆ ನಡೆಸಿದರು

ರಾಷ್ಟ್ರಾಧ್ಯಕ್ಷರ ಸಂದೇಶ

ಭಾರತದ ಸ್ವಾತಂತ್ರ್ಯೋತ್ಸವ ಸಮಾರಂಭ ಸಮಯದಲ್ಲಿ ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರ ಪ್ರಸಾದರು ಒಂದು ಸಂದೇಶವನ್ನಿತ್ತು "ದೇಶಾದ್ಯಂತ ಪ್ರಜೆಗಳು ತಮ್ಮ ಸಕಲ ಸೌಲಭ್ಯಗಳನ್ನೂ ಆತ್ಮಶಕ್ತಿಯನ್ನೂ ರಾಷ್ಟ್ರದ ನೆರವಿಗಿತ್ತು, ಆಡಳಿತ ಯಂತ್ರವು ಸಮರ್ಪಕವಾಗಿ ನಡೆಯಲು ಎಲ್ಲರೂ ದುಡಿಯಬೇಕೆಂದು ತಿಳಿಸಿರುವರು.

ಉಪಮಂತ್ರಿಗಳು

ಕಾಂಗ್ರೆಸ್ ಸರ್ಕಾರದಲ್ಲಿ ಇನ್ನು ಮೂರು ಉಪಮಂತ್ರಿಗಳನ್ನು ನೇಮಿಸಿಕೊಳ್ಳುವ ವಿಚಾರ ಪರಿಶೀಲನೆಯಲ್ಲಿದೆ. ಕೇಂದ್ರದಲ್ಲಿ ಈಗ ೨೩ ಮಂತ್ರಿಗಳು ಉಪಮಂತ್ರಿಗಳಿರುವರು.

ದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವ

ಸ್ವಾತಂತ್ರ್ಯೋತ್ಸವ ಸಮಾರಂಭವು ನಿನ್ನೆ ದೆಹಲಿಯಲ್ಲಿ ಅತಿವೈಭವದಿಂದ ನಡೆಯಿತು. ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು, ಪ್ರಧಾನ ಮಂತ್ರಿ ನೆಹರೂರವರು ನಿನ್ನೆ ಪ್ರಾತಃಕಾಲ ಬಾಪೂಜೀಯವರ ಸಮಾಧಿಗೆ ಭೇಟಿಯಿತ್ತು ಪುಷ್ಪಗಳನ್ನರ್ಪಿಸಿದರು. ಅನಂತರ ನೆಹರೂರವರೂ ಕೆಂಪುಕೋಟೆಯ ಮೇಲೆ ರಾಷ್ಟ್ರಧ್ವಜಾರೋಹಣ ಮಾಡಿದರು. ಮಿಲಿಟರಿ, ಪೋಲಿಸ್ ಪಡೆಗಳು ಹಾಜರಿದ್ದು ನೆಹರೂರವರು ಸೆಲ್ಯೂಟ್ ಸ್ವೀಕರಿಸಿದರು. ಕೇಂದ್ರ ಮಂತ್ರಿಗಳು, ಉನ್ನತಾಧಿಕಾರಿಗಳು ರಾಯಭಾರಿಗಳವರು ಈ ಸಮಾರಂಭಗಳಲ್ಲಿ ಭಾಗವಹಿಸಿದ್ದರು.

ರಾತ್ರಿ ೮-೩೦ ಘಂಟೆಗೆ ದೇಶಕ್ಕೆಲ್ಲಾ ಒಂದು ರಾಷ್ಟ್ರಾಧ್ಯಕ್ಷರು ಸಂದೇಶವನ್ನಿತ್ತರು

ಜಯಪುರ, ಗ್ವಾಲಿಯರ್, ಸಂಸ್ಥಾನಗಳಲ್ಲಿ ಅಲ್ಲಿ ರಾಜಪ್ರಮುಖರು ರಾಷ್ಟ್ರಧ್ವಜಾರೋಹಣ ನಡೆಸಿದರು.

ಜಕರ್ತ, ಲಂಡನ್, ಟೊಕಿಯೋ ಮುಂತಾದ ಪಟ್ಟಣಗಳಲ್ಲಿಯೂ ಈ ಸಮಾರಂಭವು ಅಲ್ಲಿಯ ರಾಯಭಾರಿಯ ಕಛೇರಿಗಳಲ್ಲಿ ನಡೆಯಿತು. ಅನೇಕ ವಿದೇಶೀಯರು ಭಾಗವಹಿದ್ದರು.

ರಷ್ಯ ಬಹಿಷ್ಕಾರ

ಪ್ರಪಂಚ ಸಂಸ್ಥೆಯ ಅಧ್ಯಕ್ಷರಾಗಿರುವ ರಷ್ಯಾ ಪ್ರತಿನಿಧಿ ಜೆ ಮಾಲಿಕ್‌ರವರು ಅವಧಿಯು ಈ ತಿಂಗಳಲ್ಲಿ ಮುಗಿದ ಮೇಲೆ ಮುಂದಿನ ಸಭೆಗಳಿಗೆ ಅವರು ಹಾಜರಾಗದೆ ಬಹಿಷ್ಕರಿಸುವರೆಂದು ತಿಳಿಯ ಬಂದಿದೆ.

ಪ್ರತ್ಯೇಕ ನ್ಯಾಯಾಂಗ

ಸ್ವಾತಂತ್ರೋತ್ಸವ ಸಮಾರಂಭ ಸಮಯದಲ್ಲಿ ಮದರಾಸು ಪ್ರಾಂತ್ಯದಲ್ಲಿ ಇನ್ನೂ ೬ ಜಿಲ್ಲಾಗಳಲ್ಲಿ ನ್ಯಾಯಾಂಗವನ್ನು ಆಡಳಿತದಿಂದ ಪ್ರತ್ಯೇಕಿಸಿರುವರು.

ಅಂಗಡಿಗಳ ಮುಂದೆ ಪಿಕೆಟಿಂಗ್

ಆಹಾರ ಪದಾರ್ಥಗಳ ಮೇಲೆ ಬೆಲೆಯು ದಿನ ದಿನವೂ ಏರುತ್ತಲಿರುವ ಸಂದರ್ಭದಲ್ಲಿ ಅಹಿಂಸಾತ್ಮಕವಾಗಿ ಪಿಕೆಟ್ ಮಾಡಲು ಮೈಸೂರು ನಗರದ ಸರ್ವೋದಯ ಸಮಾಜ ನಿರ್ಧರಿಸಿದೆ.

ರಾಜಧಾನಿಯಲ್ಲಿ

ಮೈಸೂರಿನಲ್ಲಿ ನಿನ್ನೆ ಬೆಳಿಗ್ಗೆ ಪುರಭವನದ ಮೈದಾನದಲ್ಲಿ ನಗರ ಕಾಂಗ್ರೆಸ್ ಸಮಿತಿ, ಪೌರಸಭೆಯ ಆಶ್ರಯದಲ್ಲಿ ಪುರಸಭಾಧ್ಯಕ್ಷ ಶ್ರೀ. ಎಸ್. ಲಿಂಗಣ್ಣನವರು ಧ್ವಜಾರೋಹಣ ನಡೆಸಿದರು. ಜಿಲ್ಲಾಧಿಕಾರಿಗಳು, ಪೌರಸಭಾ ಕಮಿಷನರು, ಸರ್ಕಾರಿ ಅಧಿಕಾರಿಗಳು, ಅನೇಕ ಖಾಸಗೀ ಮಹನೀಯರು ಹಾಜರಿದ್ದರು.

ಪೋಲೀಸು, ಸ್ಕೌಟು ಮತ್ತು ಸೇವಾದಳದವರು ಭಾಗವಹಿಸಿದ್ದರು.

ಸಂಜೆ ಪುರಭವನದಲ್ಲಿ ಶ್ರೀ. ಎನ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ವಕೀಲ ಸಂಘದ ಅಧ್ಯಕ್ಷ ಸುಬ್ಬರಾಯರು, ನಿವೃತ್ತ ಸಂಸ್ಕೃ ಪ್ರೊಫೆಸರ್ ಸಿ. ಆರ್. ನರಸಿಂಹಶಾಸ್ತ್ರಿಗಳು, ಎಂ. ಪಿ ಜೋಯಿಸ್ ಮುಂತಾದವರು ಭಾಷಣಮಾಡಿದರ ಪೋಲೀಸು ಬಂದೋಬಸ್ತು ಚೆನ್ನಾಗಿತ್ತು.

ದಸರಾ ವಸ್ತುಪ್ರದರ್ಶನ ಸಮಿತಿ

ನೂತನವಾಗಿ ರಚಿಸಲಾಗಿರುವ ದಸರಾ ವಸ್ತುಪ್ರದರ್ಶನದ ಸಮಿತಿಯ ಪ್ರಥಮ ಸಭೆಯು ೧೪ ನೇ ತಾರೀಖು ಸಚಿವ ಆರ್. ಚೆನ್ನಿಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನಡೆಯಿತು.

ಶಿಕಾರಿಪುರ ಪೌರಸಭೆ

ಶಿಕಾರಿಪುರ ಪೌರಸಭೆಯಲ್ಲಿ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯದೆ ಜನರಿಗೆ ಅನೇಕ ರೀತಿ ತೊಂದರೆಗಳಾಗುತ್ತಲಿವೆ. ಸರ್ಕಾರದವರು ಕೂಡಲೇ ಇದಕ್ಕೆ ಗಮನವಿತ್ತು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೆಲವು ರೇಟುಪೇಯರುಗಳು ಕೋರುತ್ತಾರೆ.

ಭೂಕಂಪ

ಕಲ್ಕತ್ತಾ, ಗೌಹತಿ, ಶಿಲಾಂಗ್, ಪಶ್ಚಿಮ ಬಂಗಾಳದ ಕೆಲವು ಪ್ರದೇಶಗಳಲ್ಲಿ ನೆನ್ನೆ ಭೂಕಂಪವಾಯಿತು. ಅಸ್ಸಾಂಪ್ರದೇಶಗಳಲ್ಲಿ ತೀವ್ರ ಭೂಕಂಪವಾಯಿತು

ಅಮೇರಿಕಾದ ಕೆಲವು ಪ್ರದೇಶಗಳಲ್ಲಿಯೂ ರೀತಿ ಭೂಕಂಪವಾಯಿತೆಂದು ವರದಿಯಾಗಿ

ಸಮಾಚಾರ

ಮೈಸೂರು ಕಾಂಗ್ರೆಸ್ ಕಮಿಟಿ

ಮೈಸೂರು ಕಾಂಗ್ರೆಸ್ ಕಮಿಟಿಯು ಆಗಸ್ಟ್ ೨೭ ಲ್ಲಿ, ಬೆಂಗಳೂರಿನಲ್ಲಿಯೇ ನಡೆಯುವುದು ಅರಸೀ ರೆಯಲ್ಲಿ ನಡೆಯಲು ಹಿಂದೆ ನಿರ್ಧರಿಸಲಾಗಿತ್ತು.

ಸತ್ಕಾರ

ಸ್ವಾತಂತ್ರ ದಿನೋತ್ಸವ ಸಮಾರಂಭದಲ್ಲಿ ಇಂದ್ರಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದರು ಮೈಸೂರು ನಗರದ ಪತ್ರಿಕೋದ್ಯೋಗಿಗಳನ್ನು ಬರಮಾಡಿಕೊಂಡು ನಿನ್ನೆ ರಾತ್ರಿ ಭೋಜನಕೂಟವನ್ನೇರ್ಪಡಿಸಿದ್ದರು.

ರೇಡಿಯೋ ಭಾಷಣ

[illegible] ಸಚಿವರಾದ ಶ್ರೀ ಎಚ್ ಸಿ ದಾಸಪ್ಪನವರು ನಿನ್ನೆ ರಾತ್ರಿ ಆಲ್ ಇಂಡಿಯಾ ರೇಡಿಯೋ ಮೈಸೂರು ಕೇಂದ್ರದಿಂದ ಸ್ವಾತಂತ್ರೋತ್ಸವ ಸಮಾರಂಭವನ್ನು ಕುರಿತು ಭಾಷಣಮಾಡಿದರು

ಸಾರ್ವಜನಿಕ ವಿಚಾರ ಸಂಸ್ಥೆ

ಈ ಸಂಸ್ಥೆಯ ಅಂಗವಾಗಿ ಪ್ರತಿ ಶನಿವಾರ ಸಾಯಂಕಾಲ ಮೈಸೂರು ಮಾದರಿ ಶಾಲೆಯಲ್ಲಿ ಕಾರ್ಯಕಲಾಪಗಳು ನಡೆಯಲೇರ್ಪಟ್ಟಿವೆ.

ದುರ್ಮರಣ

ರಾಜಧಾನಿ ಕಾರಂಜೀಕೆರೆಯಲ್ಲಿ ಬಟ್ಟೆ ಒಗೆಯಲು ಹೋಗಿದ್ದ ಮೂವರು ಬಾಲಕರ ಪೈಕಿ ಅಂದಾನಿ ಎಂಬ ೧೪-೧೫ ವರ್ಷದ ಬಾಲಕನು ಕಾಲುಜಾರಿ ಬಿದ್ದು ಮೃತನಾದನು.

ಬೆಂಗಳೂರಿನಲ್ಲಿ

ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ನಿನ್ನೆ ಬೆಳಿಗ್ಗೆ ಸುಭಾಷ್‌ನಗರದಲ್ಲಿ ರಾಷ್ಟ್ರಧ್ವಜಾರೋಹಣವನ್ನು ನಡೆಸಿದರು ಸಂಜೆ ಅಲ್ಲಿಯೇ ನಡೆದ ಬಹಿರಂಗ ಸಭೆಯಲ್ಲಿ ಶ್ರೀ ಕೆ ಸಿ ರೆಡ್ಡಿ, ಕುಮಾರನ್, ಶ್ರೀಮತಿ ಯಶೋಧರ ದಾಸಪ್ಪನವರು ಭಾಷಣಮಾಡಿದರು ಶ್ರೀ. ಕೆ. ಶ್ಯಾಮರಾಜ ಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು.

ಸಿಲ್ಕ್‌ಫ್ಯಾಕ್ಟರಿಯಲ್ಲಿ

ಸ್ವಾತಂತ್ರಸಮಾರಂಭದ ಅಂಗವಾಗಿ ನಿನ್ನೆ ಹಣಕಾಸಿನ ಸಚಿವರ ಶ್ರೀ. ಎಚ್ ಸಿ. ದಾಸಪ್ಪನವರು ಸಿಲ್ ಫ್ಯಾಕ್ಟರಿಯಲ್ಲಿ ವನಮಹೋತ್ಸವವನ್ನು ನೆರವೇರಿಸಿದರು.

ಸಾರ್ವಜನಿಕ ವಿದ್ಯಾರ್ಥಿನಿಲಯ

ನಿನ್ನೆ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಸ್ವಾತಂತ್ರೋತ್ಸವ ಸಮಾರಂಭವು ಪೌರಸಭಾ ಸದಸ್ಯ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಪೌರಸಭಾಧ್ಯಕ್ಷ ಶ್ರೀ ಎ. ಲಿಂಗಣ್ಣನವರು ರಾಷ್ಟ್ರಧ್ವಜಾರೋಹಣ ನಡೆಸಿದರು. ೫೦ ಜನ ವಿದ್ಯಾರ್ಥಿಗಳಿಗೆ ಯಾವ ಕೋಮುವಾರು ಭಾವನೆಯೂ ಇಲ್ಲದೆ ಇಂದ್ರಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದರವರು

ಕರಾಚಿಯಲ್ಲಿ

ಕರಾಚಿಯಲ್ಲಿರುವ ಭಾರತ ಹೈಕಮಿಷನರಾದ ಶ್ರೀ ಸೀತಾರಾಂರವರು ಭಾರತ ರಾಷ್ಟ್ರಧ್ವಜವನ್ನು ಆರೋಹಣಮಾಡಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಿದರು.

ಕೊರಿಯಾ ಯುದ್ಧ

ಕೊರಿಯಾ ಯುದ್ಧವು ಕೂಡಲೇ ಮುಕ್ತಾಯವಾಗುವ ಹಾಗೆ ೬ ಅಂಶಗಳ ಒಂದು ಸಲಹೆಯನ್ನು ಭಾರತ ಪ್ರತಿನಿಧಿ ಶ್ರೀ ಬೆನಗಲ್ ನರಸಿಂಗರಾಯರು ಭದ್ರತಾಸಮಿತಿ ಮುಂದೆ ತರಲಿರುವರೆಂದು ತಿಳಿಯುಬರುತ್ತದೆ.

ಮುಷ್ಕರ

ಬೊಂಬಾಯಿನಲ್ಲಿಬಟ್ಟೆಗಿರಣಿ ಕೆಲಸಗಾರರ ಮುಷ್ಕರವು ೧೪ ನೇ ತಾರೀಖು ಬೆಳಗ್ಗೆ ಪ್ರಾರಂಭವಾಯಿತು. ಒಂದು ಲಕ್ಷ ಜನ ಮುಷ್ಕರದಲ್ಲಿ ಭಾಗವಹಿಸಿದ್ದರು. ಒಟ್ಟು ೧೪ ಗಿರಣಿಗಳು ಈ ಮುಷ್ಕರದ ಸಲುವಾಗಿ ಮುಚ್ಚಲ್ಪಟ್ಟಿದೆ

ಕೋಮುವಾರು ನೀತಿ

ಕಾಲೇಜುಗಳಲ್ಲಿ ಕೋಮುವಾರುನೀತಿ ಇರಬೇಕೆಂದು ಮದರಾಸು ಮತ್ತು ಕೆಲವು ಜಿಲ್ಲಾ ಮುಖ್ಯ ಪಟ್ಟಣಗಳಲ್ಲಿ ಪ್ರದರ್ಶನಗಳು ನಡೆಯುತ್ತಲಿವೆ.

ಸಂದೇಶ

ಪಾಕೀಸ್ಥಾನದ ರಾಷ್ಟ್ರೀಯ ದಿನಾಚರಣೆ ಸಂದರ್ಭದಲ್ಲಿ ಪ್ರಧಾನಿ ಪಂಡಿತ್ ನೆಹರೂರವರು ಪಾಕೀಸ್ಥಾನದ ವಿದೇಶಾಂಗ ಮಂತ್ರಿಗೆ, ಭಾರತ ಸರ್ಕಾರ ಮತ್ತು ಪ್ರಜೆಗಳ ಪರವಾಗಿ ಒಂದು ಸಂದೇಶವನ್ನು ಕಳುಹಿಸಿರುವರು

ಭಾರತ ಸ್ವಾತಂತ್ರ ಸಮಾರಂಭದಲ್ಲಿ ಪಾಕೀಸ್ಥಾನದ ಹೈಕಮಿಷನರವರು ಭಾರತ ರಾಷ್ಟ್ರಪತಿಗಳಿಗೆ ಒಂದು ಶುಭ ಸಂದೇಶವನ್ನು ಕಳುಹಿಸಿರುವರು.

ತಮಿಳುನಾಡು ಕಾಂಗ್ರೆಸ್

ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಕೆ ಕಾಮರಾಜನಾಡರ್, ಎಸ್ ಬಿ ಆದಿತ್ಯನ್, ಓ. ಪಿ. ರಾಮಸ್ವಾಮಿರೆಡ್ಡಿಯಾರ್ ಮತ್ತು ಸಿ ಬಿ ಸುಬ್ಬಯ್ಯನವರು ಸ್ಪರ್ಧಿಸಿದ್ದಾರೆ ಆಗಸ್ಟ್ ೨೭ ರಲ್ಲಿ ಚುನಾವಣೆ ನಡೆಯಲಿದೆ.

ಹೊಟೇಲ್ ಕೆಲಸಗಾರರ ಮುಷ್ಕರ

ಬೆಂಗಳೂರು ನಗರದಲ್ಲಿರುವ ಎಲ್ಲಾ ಹೊಟೇಲ್ ಕೆಲಸಗಾರರೂ ನಿನ್ನೆ ಬೆಳಗ್ಗೆ ಮುಷ್ಕರವನ್ನು ಹೂಡಿ ಚಿಕ್ಕಲಾಲ್‌ಬಾಗಿನಲ್ಲಿ ಸಭೆ ಸೇರಿದ್ದರು

ಕಾಂಗ್ರೆಸ್ ಸಂಸ್ಥೆಯ ನೂತನ ಕಟ್ಟಡ

ಕಾಂಗ್ರೆಸ್ ಸಂಸ್ಥೆಯ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಮೈಸೂರು ಕಾಂಗ್ರೆಸ್ ಅಧ್ಯಕ್ಷಿಣಿ ಶ್ರೀ. ಯಶೋಧರಾ ದಾಸಪ್ಪನವರು ನಿನ್ನೆ ಮಾಡಿದರು.

GURANTEED TYPEWRITER REPAIRS
S SUBBA RAO,
Typewriter Mechanic,
Bright College of Commerce,
MYSORE

ಪತ್ರವ್ಯವಹಾರ

ಸಮಾಚಾರಪತ್ರಿಕೆ ಸಂಪಾದಕರಲ್ಲಿ

ಸ್ವಾಮಿ,

ನಿನ್ನೆ ಸ್ವಾತಂತ್ರೋತ್ಸವ ಸಮಾರಂಭ ಪುರಭವ ಮೈದಾನದಲ್ಲಿ ನಡೆಯುವುದೆಂದು ಪುರಸಭೆ, ನಗರ ಕಾಂ ಸ್ ಸಮಿತಿ ಪ್ರಚಾರ ಮಾಡಿದ್ದರು. ಧ್ವಜಾರೋಹ ಮಾಡುವಾಗ ಜಿಲ್ಲಾಧಿಕಾರಿಗಳಾಗಲೀ, ನಗರ ಕಾಂಗ್ರೆಸ ಸಭೆಯ ಅಧ್ಯಕ್ಷರಾಗಲೀ ಯಾರೂ ವೇದಿಕೆಯ ಮೇ ಕಾಣಬರಲೇ ಇಲ್ಲ ಮಾರ್ಚ್‌ಪಾಸ್ಟ್ ನಡೆದು ಯಾರು ಸಲ್ಯೂಟ್ ತೆಗೆದುಕೊಳ್ಳಲಿಲ್ಲ. ಇದು ಬೇಡವೆಂದ ಕೇಂದ್ರದಿಂದೇನಾದರೂ ಸೂಚನೆ ಬಂದಿತ್ತೆ?

ಸಂಜೆ ಪುರಭವನದೊಳಗೆ ಸಾರ್ವಜನಿಕ ಸಭೆ ನ ದಾಗ ಸುಮಾರು ೨೫-೩೦ ಜನ ಪೋಲೀಸಿನವ ಬಹಳ ಉಸ್ತುವಾರಿಯಿಂದ ಒಳಗೂ ಹೊರಗೂ ಓಡ ಡುತ್ತಲಿದ್ದರು ಸ್ವಾತಂತ್ರ ದಿನಾಚರಣೆಯ ದಿನ ಉಸ್ತುವಾರಿ ಏಕೆ?

ಪುರಭವನದೊಳಗೆ ಭಾಷಣಗಳಾಗುವಾಗ ಹೊರ ಕೇಳುವವರಿಗೆ ಲೌಡ್‌ಸ್ಪೀಕರುಗಳ ಏರ್ಪಾಡು ಮಾ ಬಾರದಾಗಿತ್ತೇ?

ಪ್ರತ್ಯಕ್ಷದರ್ಶಿ.

ಎಂ. ಸುಬ್ಬರಾಮಯ್ಯ ಅಂಡ್ ಕಂಪೆನಿ.
(ಮೈಸೂರು ಸರ್ಕಾರದಿಂದ ಅನುಮೋದಿಸಲ್ಪಟ್ಟ ಸಂಸ್ಥೆ)
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲಾ ಸರ್ಕಾರಿ ಇಲಾಖೆ ಮತ್ತು ಸ್ಥಳೀಯ ಸಂ ಗಳಿಗೆ ಬೇಕಾಗುವ ಎಲ್ಲಾ ವಿಧವಾದ ಸೈನ್ ಬೋರ್ಡು ಗಳನ್ನು ತಯಾರಿಸುವವರು.

ರಣಜಿತ್ ಟಾಕೀಸ್
ತಾ ॥ 11-8-50 ರಿಂದ ಪ್ರತಿದಿನ 3 ಆಟಗಳು
ಎ. ವಿ. ಎಂ ರವರ ತೆಲುಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ
* ವೈಜಯಂತಿಮಾಲ ಮುಂತಾದವರು.
ಬೆಳಗಿನ ಪ್ರದರ್ಶನ
ಶಾ ಕುಂ ತ ಳ
ವಿ ಶಾಂತಾರಾಂ, ರವರ ಪೂರ್ತಿ ವರ್ಣರಂಜಿತ
ಹಿಂದಿ ಚಿತ್ರ

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ "ಸಮಾಚಾರ" ದಿನಪ ಯನ್ನು ಚಂದಾದಾರರಿಗೆ ಹಂಚಿ ಚಂದಾ ವ ಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏ ಟರು ಬೇಕಾಗಿದೆ ಅಂಥವರು ವ್ಯವಸ್ಥಾಪಕರ ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
"ಸಮಾಚಾರ" ದಿನಪತ್ರಿ

ಸಂಪಾದಕರು ಮತ್ತು ಪ್ರಕಾಶಕರು. ಜಿ
ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮ
ಜಿ. ಹೆಚ್ ರಾಮರಾವ್, ಬಿ ಎಸ್‌ಸಿ. ಮೈ

ರಘುಲಾಲ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು
ರಘುಲಾಲ್ ಅಂಡ್ ಕಂಪನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ
ಸಂಪುಟ ೧ | ೧೭—೮—೧೯೫೦ ನೇ ಗುರುವಾರ | ಸಂಚಿಕೆ ೩

RAGHULAL & Co.,
CHEMISTS
Sayyaji Rao Road
MYSORE
RAGHULAL & Co., (Bangalore)
CHEMISTS
70 Arcot Srinivasa Char Street
BANGALORE 2

★ ಮೈಸೂರಲ್ಲಿ ಹೋಟೇಲು ಮುಚ್ಚಿಸಿ

[೨ ನೇ ಪುಟದಿಂದ ಮುಂದುವರಿದುದು]

ಕೆ ನಾರಾಯಣಪ್ಪನವರು ಮಾತನಾಡುತ್ತಾ ಅಕ್ಕಿ ರಾಗಿ ಮುಂತಾದುವು ಕಾಳಸಂತೆಯಲ್ಲಿ ವಿಶೇಷವಾಗಿ ದೊರೆಯುತ್ತೆ ಈಗಿನ ಸ್ಥಿತಿಯಲ್ಲಿ ಯಾವ ಸರ್ಕಾರವು ಏನು ಮಾಡುವುದಕ್ಕೂ ಆಗುವುದಿಲ್ಲ. ಸುಗ್ಗಿಯ ಕಾಲದವರೆಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗಲಿರುವ ಪ್ರಮಾಣವನ್ನು ಎಲ್ಲಾ ಕಡೆಯೂ ೧೦ ಸೇರು ಇರುವಂತೇರ್ಪಡಬೇಕೆಂದು ಸಲಹೆ ಇತ್ತರು.

ಸುಬ್ಬಣ್ಣನವರು ಹೋಟೇಲುಗಳನ್ನು ನಾಲ್ಕು ತಿಂಗಳು ಕಾಲ ಮುಚ್ಚಿಸಬೇಕು, ಇಲ್ಲವೇ ಕಲ್ಕತ್ತಾ ಮುಂತಾದ ಕಡೆ ಇರುವಂತೆ ಈ ಹೋಟೇಲುಗಳಲ್ಲಿ ಕಾಫಿ ಬಿಸ್ಕತ್ತುಗಳು ಮಾತ್ರ ಮಾರುವಂತೇರ್ಪಡಿಸಬೇಕೆಂದರು.

ಬಿ. ಎಲ್. ರಾಮಸ್ವಾಮಿ ಶೆಟ್ಟರು ಹೋಟೇಲುಗಳನ್ನು ಮುಚ್ಚಿಸುವುದಕ್ಕಿಂತಲೂ ಜನರು ಹೋಟೇಲುಗಳಿಗೆ ಹೋಗುವುದನ್ನೆಲ್ಲ ನಿಲ್ಲಿಸಬೇಕು. ಆಗ ಹೋಟೇಲುಗಳು ತಾವಾಗಿಯೇ ಮುಚ್ಚಿ ಹೋಗುವವೆಂದು ಸಲಹೆ ಇತ್ತರು.

ಮೀರ್ ನೂರ್ ಹುಸೇನರವರು ವಿಶದವಾಗಿ ಚರ್ಚಿಸುತ್ತಾ, ಸರ್ಕಾರದ ವಿಧವು ಸಾಧುವಲ್ಲ. ಪಟ್ಟಣಿಗರಿಗಾಗಿ ಈಗ ಸಬ್ಸಿಡಿ ಕೊಡುತ್ತಲಿರುವುದು ತಪ್ಪೇನೂ ಅಲ್ಲ. ಆಹಾರ ಒದಗಿಸುವುದು ಸರ್ಕಾರದ ಕರ್ತವ್ಯ ಆಹಾರ ಇಲಾಖೆಯಲ್ಲಿ ಸಿಬ್ಬಂದಿಗಾಗಿ ವಿಶೇಷ ಹಣ ವ್ಯಯವಾಗುವುದನ್ನು ತಪ್ಪಿಸಬೇಕು ಹಳ್ಳಿಗಾಡಿನಲ್ಲಿ ಜನರು ಹಣವಂತರಾಗುತ್ತಲಿದ್ದಾರೆ ಪಟ್ಟಣಿಗರಲ್ಲಿ ಬಡವರು ವಿಶೇಷ. ಹೊಸದಾಗಿ ವ್ಯವಸಾಯ ತೆರಿಗೆ (Agricultural Incomtax) ಯನ್ನು ಹೆಚ್ಚಿಸಿದರೆ ಸರ್ಕಾರಕ್ಕೆ ೩೦-೪೦ ಲಕ್ಷ ರೂಪಾಯಿಗಳು ಬರುವುದು. ಲ್ಯಾಂಡ್ ರೆವಿನ್ಯೂ ಈಗ ಅನೇಕ ವರ್ಷಗಳಿಂದ ಒಂದೇ ರೀತಿ ಇರುತ್ತದೆ ಅದನ್ನು ಹೆಚ್ಚಿಸಬೇಕು ಅವಶ್ಯಕವಿದ್ದರೆ ಒಂದು ಹೊಸ ಸಾಲವನ್ನು ಸರ್ಕಾರ ತೆಗೆಯಲಿ ಈ ಸರ್ಕಾರವು ಅಕ್ಕಿಯ ಬೆಲೆಯನ್ನು ಕೂಡಲೇ ತಗ್ಗಿಸಬೇಕು. ವಸೂಲಿಕ್ರಮವು ಅಷ್ಟು ಸಮರ್ಪಕವಾಗಿಲ್ಲ. ಪುನಃ ಆಹಾರ ಧಾನ್ಯ ವಸೂಲಿಯನ್ನು ಮಾಡಲಿ ಎಂದರು.

ಅಬ್ದುಲ್ ರಹಿಮಾನ್‌ರವರು ಹಳ್ಳಿಗಳಲ್ಲಿ ಹಣವಂತರು ಬಹಳ ಕಡಿಮೆ. ಬಡವರೇ ಅಲ್ಲಿ ಹೆಚ್ಚು. ಈಗ ಕೊಡುತ್ತಲಿರುವ ಪಡಿತರ ೨೦ ದಿವಸಕ್ಕೆ ಸಾಲದು ಕಾಳಸಂತೆಯಲ್ಲಿ ಕೊಂಡು ಅನೇಕರು ತಿನ್ನುತ್ತಲಿರುವರು ಕಾಳಸಂತೆಯಲ್ಲಿ ಆಹಾರ ಸಿಗುವುದೆಂದರೆ ವಸೂಲಿ ಕ್ರಮವು ಸಮರ್ಪಕವಾಗಿಲ್ಲ ಸರ್ಕಾರವು ಒಂದು ಎಕರೆಗೆ ೬.೫ ಪಲ್ಲ ಅಕ್ಕಿ ಬೆಳೆಯುವರೆಂದು ಹೇಳುವುದು ತಪ್ಪು ೧೧-೧೨ ಪಲ್ಲ ಬೆಳೆಯುವುದು ಎಚ್. ಎಸ್. ಫಾರಂ ತಯಾರಿಗೆ ಸರಿಯಾಗಿಲ್ಲ ವಸೂಲಿಕ್ರಮ ಉತ್ತಮಪಡಿಸದಿದ್ದಲ್ಲಿ ಶೇಕಡ ೫೦ ವಸೂಲಿ ಮಾಡಬಹುದು ಅಕ್ಕಿ ಬೆಲೆ ಹೆಚ್ಚಿಸಿದರೆ ಕಾಳಸಂತೆ ಹೆಚ್ಚುವುದು. ಕಾಳಸಂತೆ ಹೋಗಬೇಕಾದರೆ ಸರ್ಕಾರಕ್ಕೆ ಎಷ್ಟು ನಷ್ಟವಾದರೂ ಸ್ವಲ್ಪ ಕಾಲವಾದರೂ ಅಕ್ಕಿ ಬೆಲೆ ಕಡಮೆ ಮಾಡಬೇಕೆಂದರು.

ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಮಾತನಾಡುತ್ತಾ ಇಷ್ಟು ಆಹಾರಪರಿಸ್ಥಿತಿಯನ್ನು ಚರ್ಚಿಸುವಾಗ ಬರೀ ರೇಷನ್ ಪದಾರ್ಥಗಳೇ ಅಲ್ಲ. ಬೆಲೆ ವಿಪರೀತ ಏರಿ ಹೋಗಿರುವ ಇತರ ಪದಾರ್ಥಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದರು

ಈ ನಡುವೆ ನೂರ್ ಹುಸೇನರವರು Have we any respect to the procedure ಅಂದರು ಶ್ರೀ ಪುಟ್ಟಸ್ವಾಮಿಯವರು ಈ ರೀತಿ ಸಭೆಗೆ ದೋಷಾರೋಪಣೆ ಮಾಡಲು ಸಭೆಗೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದರು. ಸಭೆಯಲ್ಲಿ ಮಾತು ಮಾತ್ರ ಸ್ವಲ್ಪ ಬಿಗಲಾಯಿಸಿತು.

ಬಿಸಿ ಬಿಸಿ ಚರ್ಚೆಯಾದ ನಂತರ ಅಧ್ಯಕ್ಷರು ಎಲ್ಲರನ್ನೂ ಸಮಾಧಾನಪಡಿಸಿದರು. ಪುನಃ ಇದರ ಚರ್ಚೆ ಪ್ರಾರಂಭವಾಯಿತು. ರಾಜಗೋಪಾಲಯ್ಯಂಗಾರ್‌ರವರು ಮುಂದುವರಿಸುತ್ತಾ ಈಗ ಆಹಾರ ಸರಬರಾಯಿ ಆಗುತ್ತಲಿರುವುದು ನಗರಗಳಿಗೆ ಮಾತ್ರ ಇರುವುದರಿಂದ ಇಲಾಖೆಯನ್ನೇ ಸಂಪೂರ್ಣವಾಗಿ ತೆಗೆದು ಹಾಕಿ ಪರಸ್ಪರ ಸಹಾಯ ಸಂಘಗಳ ಮೂಲಕ ಸರಬರಾಯಿಗೆ ೩೦-೪೦ ಲಕ್ಷ ರೂಪಾಯಿಗಳ ವೆಚ್ಚವಾಗುವುದು. ಕೆಲವು ಭೋಜನ ಮಂದಿರಗಳನ್ನು ನಡೆಯುವಂತೇರ್ಪಡಿಸುವುದು ಉತ್ತಮವೆಂದರು.

ಕೊನೆಯಲ್ಲಿ ಪಾಲಹಳ್ಳಿ ಸೀತಾರಾಮಯ್ಯನವರು ಈ ನಿರ್ಣಯವನ್ನು ಮಂಡಿಸಿದರು. ಎಲ್ಲಾ ನಿರ್ಣಯಗಳನ್ನು ಎಲ್ಲರೂ ಒಪ್ಪಿದರು ಆದರೆ ೩ ನೇ ನಿರ್ಣಯದಲ್ಲಿ ಅಕ್ಕಿ ಬೆಲೆಯನ್ನು ತಗ್ಗಿಸಬೇಕು ಎಂದು ಶ್ರೀ ಬಿ. ಕೆ. ರಾಮಕೃಷ್ಣಯ್ಯನವರು ತಿದ್ದುಪಡಿಯನ್ನು ಸೂಚಿಸಿದರು ತಿದ್ದುಪಡಿ ಸೂಚಿಸುತ್ತಾ ಅಕ್ಕಿ, ರಾಗಿ ಬೆಲೆಯನ್ನು ಹೆಚ್ಚಿಸಿರುವುದನ್ನು ಕೂಡಲೇ ತಗ್ಗಿಸಬೇಕು. ನಿರ್ದಿಷ್ಟವಿಲ್ಲದೆ ಪರಿಸ್ಥಿತಿಯು ಸರಿಯಾದ ಮೇಲೆ ತಗ್ಗಿಸಬೇಕೆನ್ನುವುದು ಅರ್ಥವಿಲ್ಲದ್ದು. ನಾವು ಹೇಳದೆಯೇ ಸರ್ಕಾರ ಇದನ್ನು ಮಾಡುವುದು, ಇಂದಿನ ಸ್ಥಿತಿಯಲ್ಲಿ ಕೂಡಲೇ ಬೆಲೆ ತಗ್ಗಿಸಬೇಕೆಂದರು.

ತಿದ್ದುಪಡಿಯನ್ನು ಅಬ್ದುಲ್ ರಹಮಾನ್, ಕೆ. ಪುಟ್ಟಸ್ವಾಮಿ, ನರಸಿಂಹಅಯ್ಯಂಗಾರ್‌ರವರು ವಿರೋಧಿಸಿ

ಮಂತ್ರಿ ಮಂಡಲಿ ಸಭೆ

ಮೈಸೂರು ಮಂತ್ರಿ ಮಂಡಲ ಸಭೆಯು ನಿನ್ನೆ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿ, ೪ ಗಂಟೆ ಕಾಲ ಸಮಾಲೋಚನೆಯಾಯಿತು ಸಭೆಯ ಮುಂದೆ ಆಡಳಿತಕ್ಕೆ ಸಂಬಂಧಪಟ್ಟ ತೀರ್ಮಾನವಾಗಬೇಕಾಗಿರುವ ಸುಮಾರು ೧೫೦ ವಿಷಯಗಳಿವೆಯೆಂದು ತಿಳಿದುಬರುತ್ತದೆ. ಸಭೆಯು ಈ ದಿನವೂ ನಡೆಯಲಿದೆ.

ರಜಾ

ಐ. ಜಿ. ಪಿ. ಶ್ರೀ ರಣಜೋಧಿಸಿಂಗರಿಗೆ ಆಗಸ್ಟ್ ೧ ರಿಂದ ಇನ್ನೂ ೩ ತಿಂಗಳು ರಜಾ ಮಂಜೂರಾಗಿದೆಯೆಂದು ತಿಳಿಯಬರುತ್ತದೆ.

ಲೆ॥ ಅಸೆಂಬ್ಲಿ

ಬೆಂಗಳೂರಿನಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಯು ಇದೇ ಮಾಹೆ ೨೮ ರಿಂದ ೬ ದಿನ ನಡೆಯುವುದು ೨೮ ನೆ ತಾರೀಖು ಮಧ್ಯಾಹ್ನ ರಾಜಪ್ರಮುಖರು ಪುರಭವನದಲ್ಲಿ ಅಧಿವೇಶನದ ಆರಂಭ ಭಾಷಣ ಮಾಡುವರು.

ಸರ್ಕಾರದವರು ಈಗ ಬೆಲೆ ಏರಿಸಿರುವುದು ಅತ್ಯಲ್ಪ ಮದರಾಸು, ಬೊಂಬಾಯಿಗಳಲ್ಲಿರುವಂತೆ ಮಾಡಿದ್ದರೆ ನಮಗೆ ರೂಪಾಯಿಗೆ ಒಂದು ಸೇರು ಅಕ್ಕಿ ರಾಗಿ ಸಿಕ್ಕುತ್ತಲಿತ್ತೋ ಇಲ್ಲವೊ? ಆದ್ದರಿಂದ ನಾವು ಸರ್ಕಾರವನ್ನು ವಂದಿಸಬೇಕು, ಎಂದು ಹೇಳಿದರು.

ಮುನಿಸಿಪಲ್ ಕಮಿಷನರವರು ಮೈಸೂರಿನ ಹಣಕಾಸಿನ ಪರಿಸ್ಥಿತಿಯನ್ನು ವಿವರಿಸುತ್ತಾ ಕೆಲವಕ್ಕೆ ಅನೇಕ ಬಾಬುಗಳು ಸೇರಿ ಹೋಗಿರುವುದರಿಂದ ದೇಶದ ಉತ್ಪತ್ತಿಯಲ್ಲಿ ಸುಮಾರು ೩ ಕೋಟಿ ರೂಪಾಯಿಗಳು ಕಡಿಮೆಯಾಗಿರುತ್ತದೆ. ಆದಾಗ್ಯೂ ರಾಷ್ಟ್ರನಿರ್ಮಾಣ ಕಾರ್ಯಗಳಿಗೆ ಹಿಂದೆ ಯಾವಾಗಲೂ ವೆಚ್ಚವಾಗದಷ್ಟು ಹಣವು ಈಗ ವೆಚ್ಚವಾಗುತ್ತಲಿದೆ. ಸಾಧುವಾದರೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಬಹುದು, ಆದರೆ ಅದನ್ನು ಪಟ್ಟಣಿಗರಿಗೆ ಆಹಾರ ಒದಗಿಸುವುದಾಗಿ ಸಬ್ಸಿಡಿ ಕೊಡಲು ಉಪಯೋಗಿಸುವುದು ಧರ್ಮವಲ್ಲ. ಗ್ರಾಮಾಂತರದಲ್ಲಿ ನಡೆಯಬೇಕಾದ ಕೆಲಸಗಳನೇಕವಿವೆ. ಅದಕ್ಕೆ ಹಣಬೇಕಾಗಿದೆ. ಪಟ್ಟಣಗಳಲ್ಲಿ [illegible] ಪಟ್ಟಣಗಳಲ್ಲಿ ಮಾತ್ರ ವೆಚ್ಚಮಾಡಬೇಕೆಂದರೆ ಸಾಧುವಾಗಬಹುದು ಎಂದು ತಿಳಿಸಿದರು.

ತಿದ್ದುಪಡಿಯನ್ನು ಓಟಿಗೆ ಹಾಕಿ ಬಿದ್ದು ಹೋಯಿತು.

ಸಭೆಯು ಮುಕ್ತಾಯವಾಗುವ ಮುನ್ನ ಮೈಸೂರು ಹಾಲ್ ಮಾಲೀಕರಾಗಿ ಹಿಂದೆ ಪೌರಸಭಾ ಸದಸ್ಯರಾಗಿದ್ದು ದಿವಗತರಾದ ಶ್ರೀ ಸೆಟ್ಟೊಜಿಯವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು.

ಸಮಾಚಾರ

ಮೈಸೂರು ಕಾಂಗ್ರೆಸ್ ಕಮಿಟಿ

ಮೈಸೂರು ಕಾಂಗ್ರೆಸ್ ಕಮಿಟಿಯು ಆಗಸ್ಟ್ ೨೭ ರಲ್ಲಿ, ಬೆಂಗಳೂರಿನಲ್ಲಿಯೇ ನಡೆಯುವುದು. ಅರಸೀಕೆರೆಯಲ್ಲಿ ನಡೆಯಲು ಹಿಂದೆ ನಿರ್ಧರಿಸಲಾಗಿತ್ತು.

ಸತ್ಕಾರ

ಸ್ವಾತಂತ್ರ ದಿನೋತ್ಸವ ಸಮಾರಂಭದಲ್ಲಿ ಇಂದ್ರಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದರು ಮೈಸೂರು ನಗರದ ಪತ್ರಿಕೋದ್ಯೋಗಿಗಳನ್ನು ಬರಮಾಡಿಕೊಂಡು ನಿನ್ನೆ ರಾತ್ರಿ ಭೋಜನಕೂಟವನ್ನೇರ್ಪಡಿಸಿದ್ದರು.

ರೇಡಿಯೋ ಭಾಷಣ

ಹಣಕಾಸಿನ ಸಚಿವರಾದ ಶ್ರೀ ಎಚ್ ಸಿ. ದಾಸಪ್ಪನವರು ನಿನ್ನೆ ಆಲ್ ಇಂಡಿಯಾ ರೇಡಿಯೋ ಮೈಸೂರು ಕೇಂದ್ರದಿಂದ ಸ್ವಾತಂತ್ರ್ಯೋತ್ಸವ ಸಮಾರಂಭವನ್ನು ಕುರಿತು ಭಾಷಣಮಾಡಿದರು

ಸಾರ್ವಜನಿಕ ವಿಚಾರ ಸಂಸ್ಥೆ

ಈ ಸಂಸ್ಥೆಯ ಅಂಗವಾಗಿ ಪ್ರತಿ ಶನಿವಾರ ಸಾಯಂಕಾಲ ಮೈಸೂರು ಮಾದರಿ ಶಾಲೆಯಲ್ಲಿ ಕಾರ್ಯಕಲಾಪಗಳು ನಡೆಯಲೇರ್ಪಟ್ಟಿವೆ.

ದುರ್ಮರಣ

ರಾಜಧಾನಿ ಕಾರಂಜೀಕೆರೆಯಲ್ಲಿ ಬಟ್ಟೆ ಒಗೆಯಲು ಹೋಗಿದ್ದ ಮೂವರು ಬಾಲಕರ ಪೈಕಿ ಅಂದಾನಿ ಎಂಬ ೧೧-೧೨ ವರ್ಷದ ಬಾಲಕನು ಕಾಲುಜಾರಿ ಬಿದ್ದು ಮೃತನಾದನು.

ಬೆಂಗಳೂರಿನಲ್ಲಿ

ಮುಖ್ಯಮಂತ್ರಿ ಶ್ರೀ. ಕೆ. ಸಿ ರೆಡ್ಡಿಯವರು ನಿನ್ನೆ ಬೆಳಗ್ಗೆ ಸುಭಾಸ್‌ನಗರದಲ್ಲಿ ರಾಷ್ಟ್ರಧ್ವಜಾರೋಹಣವನ್ನು ನಡೆಸಿದರು ಸಂಜೆ ಅಲ್ಲಿಯೇ ನಡೆದ ಬಹಿರಂಗ ಸಭೆಯಲ್ಲಿ ಶ್ರೀ ಕೆ. ಸಿ ರೆಡ್ಡಿ, ಕುಮಾರನ್, ಶ್ರೀಮತಿ ಯಶೋಧರ ದಾಸಪ್ಪನವರು ಭಾಷಣಮಾಡಿದರು. ಶ್ರೀ. ಕೆ. ಶ್ಯಾಮರಾಜ ಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು

ಸಿಲ್ಕ್‌ಫ್ಯಾಕ್ಟರಿಯಲ್ಲಿ

ಸ್ವಾತಂತ್ರ್ಯಸಮಾರಂಭದ ಅಂಗವಾಗಿ ನಿನ್ನೆ ಹಣಕಾಸಿನ ಸಚಿವರ ಶ್ರೀ. ಎಚ್ ಸಿ. ದಾಸಪ್ಪನವರು ಸಿಲ್ ಫ್ಯಾಕ್ಟರಿಯಲ್ಲಿ ವನಮಹೋತ್ಸವವನ್ನು ನೆರವೇರಿಸಿದರು.

ಸಾರ್ವಜನಿಕ ವಿದ್ಯಾರ್ಥಿನಿಲಯ

ನಿನ್ನೆ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಸ್ವಾತಂತ್ರ್ಯೋತ್ಸವ ಸಮಾರಂಭವು ಪೌರಸಭಾ ಸದಸ್ಯ ಶ್ರೀ. ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಪೌರಸಭಾಧ್ಯಕ್ಷ ಶ್ರೀ ಎ. ಲಿಂಗಣ್ಣನವರು ರಾಷ್ಟ್ರಧ್ವಜಾರೋಹಣ ನಡೆಸಿದರು. ೫೦ ಜನ ವಿದ್ಯಾರ್ಥಿಗಳಿಗೆ ಯಾವ ಕೋಮುವಾರು ಭಾವನೆಯೂ ಇಲ್ಲದೆ ಇಂದ್ರ ಮಾಲೀಕರಾದ ಶ್ರೀ ಬದರೀ ಪ್ರಸಾದರವರು

ಕರಾಚಿಯಲ್ಲಿ

ಕರಾಚಿಯಲ್ಲಿರುವ ಭಾರತ ಹೈಕಮಿಷನರಾದ ಶ್ರೀ ಸೀತಾರಾಂರವರು ಭಾರತ ರಾಷ್ಟ್ರಧ್ವಜವನ್ನು ಆರೋಹಣಮಾಡಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಿದರು.

ಕೊರಿಯಾ ಯುದ್ಧ

ಕೊರಿಯಾ ಯುದ್ಧವು ಕೂಡಲೇ ಮುಕ್ತಾಯವಾಗುವ ಹಾಗೆ ೬ ಅಂಶಗಳ ಒಂದು ಸಲಹೆಯನ್ನು ಭಾರತ ಪ್ರತಿನಿಧಿ ಶ್ರೀ ಬೆನಗಲ್ ನರಸಿಂಗರಾಯರು ಭದ್ರತಾಸಮಿತಿ ಮುಂದೆ ತರಲಿರುವರೆಂದು ತಿಳಿಯಬರುತ್ತದೆ.

ಮುಷ್ಕರ

ಬೊಂಬಾಯಿನಲ್ಲಿಬಟ್ಟೆಗಿರಣಿ ಕೆಲಸಗಾರರ ಮುಷ್ಕರವು ೧೪ ನೇ ತಾರೀಖು ಬೆಳಗ್ಗೆ ಪ್ರಾರಂಭವಾಯಿತು. ಒಂದು ಲಕ್ಷ ಜನ ಮುಷ್ಕರದಲ್ಲಿ ಭಾಗವಹಿಸಿದ್ದರು. ಒಟ್ಟು ೧೪ ಗಿರಣಿಗಳು ಈ ಮುಷ್ಕರದ ಸಲುವಾಗಿ ಮುಚ್ಚಲ್ಪಟ್ಟಿದೆ

ಕೋಮುವಾರು ನೀತಿ

ಕಾಲೇಜುಗಳಲ್ಲಿ ಕೋಮುವಾರುನೀತಿ ಇರಬೇಕೆಂದು ಮದರಾಸು ಮತ್ತು ಕೆಲವು ಜಿಲ್ಲಾ ಮುಖ್ಯ ಪಟ್ಟಣಗಳಲ್ಲಿ ಪ್ರದರ್ಶನಗಳು ನಡೆಯುತ್ತಲಿವೆ.

ಸಂದೇಶ

ಪಾಕೀಸ್ಥಾನದ ರಾಷ್ಟ್ರೀಯ ದಿನಾಚರಣೆ ಸಂದರ್ಭದಲ್ಲಿ ಪ್ರಧಾನಿ ಪಂಡಿತ್ ನೆಹರೂರವರು ಪಾಕೀಸ್ಥಾನದ ವಿದೇಶಾಂಗ ಮಂತ್ರಿಗೆ, ಭಾರತ ಸರ್ಕಾರ ಮತ್ತು ಪ್ರಜೆಗಳ ಪರವಾಗಿ ಒಂದು ಸಂದೇಶವನ್ನು ಕಳುಹಿಸಿರುವರು

ಭಾರತ ಸ್ವಾತಂತ್ರ ಸಮಾರಂಭದಲ್ಲಿ ಪಾಕೀಸ್ಥಾನದ ಹೈಕಮೀಷನರವರು ಭಾರತ ರಾಷ್ಟ್ರಪತಿಗಳಿಗೆ ಒಂದು ಶುಭ ಸಂದೇಶವನ್ನು ಕಳುಹಿಸಿರುವರು.

ತಮಿಳುನಾಡು ಕಾಂಗ್ರೆಸ್

ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಕೆ ಕಾಮರಾಜನಾಡರ್, ಎಸ್ ಬಿ ಅದಿತ್ಯನ್, ಓ. ಪಿ. ರಾಮಸ್ವಾಮಿರೆಡ್ಡಿಯಾರ್ ಮತ್ತು ಸಿ. ಬಿ. ಸುಬ್ಬಯ್ಯನವರು ಸ್ಪರ್ಧಿಸಿದ್ದಾರೆ. ಆಗಸ್ಟ್ ೨೭ ರಲ್ಲಿ ಚುನಾವಣೆ ನಡೆಯಲಿದೆ.

ಹೊಟೇಲ್ ಕಲಸಗಾರರ ಮುಷ್ಕರ

ಬೆಂಗಳೂರು ನಗರದಲ್ಲಿರುವ ಎಲ್ಲಾ ಹೊಟೇಲ್ ಕೆಲಸಗಾರರೂ ನಿನ್ನೆ ಬೆಳಗ್ಗೆ ಮುಷ್ಕರವನ್ನು ಹೂಡಿ ಚಿಕ್ಕಲಾಲ್‌ಬಾಗಿನಲ್ಲಿ ಸಭೆ ಸೇರಿದ್ದರು.

ಕಾಂಗ್ರೆಸ್ ಸಂಸ್ಥೆಯ ನೂತನ ಕಟ್ಟಡ

ಕಾಂಗ್ರೆಸ್ ಸಂಸ್ಥೆಯ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಮೈಸೂರು ಕಾಂಗ್ರೆಸ್ ಅಧ್ಯಕ್ಷಿಣಿ ಶ್ರೀ. ಯಶೋಧರಾ ದಾಸಪ್ಪನವರು ನಿನ್ನೆ ಮಾಡಿದರು.

GURANTEED TYPEWRITER REPAIRS
S SUBBA RAO,
Typewriter Mechanic,
Bright College of Commerce,
MYSORE

ಪತ್ರವ್ಯವಹಾರ

ಸಮಾಚಾರಪತ್ರಿಕೆ ಸಂಪಾದಕರಲ್ಲಿ

ಸ್ವಾಮಿ,

ನಿನ್ನೆ ಸ್ವಾತಂತ್ರ್ಯೋತ್ಸವ ಸಮಾರಂಭ ಪುರಭವನ ಮೈದಾನದಲ್ಲಿ ನಡೆಯುವುದೆಂದು ಪುರಸಭೆ, ನಗರ ಕಾಂಗ್ರೆಸ್ ಸಮಿತಿ ಪ್ರಚಾರ ಮಾಡಿದ್ದರು. ಧ್ವಜಾರೋಹಣ ಮಾಡುವಾಗ ಜಿಲ್ಲಾಧಿಕಾರಿಗಳಾಗಲೀ, ನಗರ ಕಾಂಗ್ರೆಸ್ ಸಭೆಯ ಅಧ್ಯಕ್ಷರಾಗಲೀ ಯಾರೂ ವೇದಿಕೆಯ ಮೇಲೆ ಕಾಣಬರಲೇ ಇಲ್ಲ ಮಾರ್ಚ್‌ಪಾಸ್ಟು ನಡೆದು ಯಾರೂ ಸಲ್ಯೂಟ್ ತೆಗೆದುಕೊಳ್ಳಲಿಲ್ಲ. ಇದು ಬೇಡವೆಂದು ಕೇಂದ್ರದಿಂದೇನಾದರೂ ಸೂಚನೆ ಬಂದಿತ್ತೆ?

ಸಂಜೆ ಪುರಭವನದೊಳಗೆ ಸಾರ್ವಜನಿಕ ಸಭೆ ನಡೆದಾಗ ಸುಮಾರು ೨೫-೪೦ ಜನ ಪೋಲೀಸಿನವರು ಬಹಳ ಉಸ್ತುವಾರಿಯಿಂದ ಒಳಗೂ ಹೊರಗೂ ಓಡಾಡುತ್ತಲಿದ್ದರು ಸ್ವಾತಂತ್ರ ದಿನಾಚರಣೆಯ ದಿನ ಈ ಉಸ್ತುವಾರಿ ಏಕೆ?

ಪುರಭವನದೊಳಗೆ ಭಾಷಣಗಳಾಗುವಾಗ ಹೊರಗೆ ಕೇಳುವವರಿಗೆ ಲೌಡ್‌ಸ್ಪೀಕರುಗಳ ಏರ್ಪಾಡು ಮಾಡಬಾರದಾಗಿತ್ತೇ?

ಪ್ರತ್ಯಕ್ಷದರ್ಶಿ.

ಎಂ. ಸುಬ್ಬರಾವ್ ಶಾಸ್ತ್ರಿ ಅಂಡ್ ಕಂಪೆನಿ.
(ಮೈಸೂರು ಸರ್ಕಾರದಿಂದ ಅನುಮೋದಿಸಲ್ಪಟ್ಟ ಸಂಸ್ಥೆ)
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲಾ ಸರ್ಕಾರಿ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಬೇಕಾಗುವ ಎಲ್ಲಾವಿಧವಾದ ಸೈನ್ ಬೋರ್ಡುಗಳನ್ನು ತಯಾರಿಸುವವರು.

ರಣಜಿತ್ ಟಾಕೀಸ್
ತಾ॥ 11-8-50 ರಿಂದ ಪ್ರತಿದಿನ 3 ಆಟಗಳು
ಎ. ವಿ. ಎಂ ರವರ ತೆಲಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ,
* ವೈಜಯಂತಿಮಾಲ ಮುಂತಾದವರು.
ಬೆಳಗಿನ ಪ್ರದರ್ಶನ
ಶಾಕುಂತಳ
ವಿ ಶಾಂತಾರಾಂ, ರವರ ಪೂರ್ತಿ ವರ್ಣರಂಜಿತ
ಹಿಂದಿ ಚಿತ್ರ.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ "ಸಮಾಚಾರ" ದಿನಪತ್ರಿಕೆಯನ್ನು ಚಂದಾದಾರರಿಗೆ ಹಂಚಿ ಚಂದಾ ವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
"ಸಮಾಚಾರ" ದಿನಪತ್ರಿಕೆ

ಸಂಪಾದಕರು ಮತ್ತು ಪ್ರಕಾಶಕರು. ಜಿ ಸ್ವಾಮಿ, ಟೂರಿಸ್ಟ್‌ಬ್ಯೂರೋ, ಮೈಸೂರು. ಮು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈ

ರಘುಲಾಲ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು
ಮತ್ತು
ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೧೭—೮—೧೯೫೦ ನೇ ಗುರುವಾರ | ಸಂಚಿಕೆ ೩

RAGHULAL & Co.,
CHEMISTS
Sayyaji Rao Road
MYSORE

RAGHULAL & Co., (Bangalore)
CHEMISTS
70 Arcot Srinivasa Char Street
BANGALORE 2

★ ಮೈಸೂರಲ್ಲಿ ಹೋಟೇಲು ಮುಚ್ಚಿಸಿ

[೨ ನೇ ಪುಟದಿಂದ ಮುಂದುವರಿದುದು]

ಕೆ ನಾರಾಯಣಸ್ವಾಮಿಯವರು ಮಾತನಾಡುತ್ತ ಅಕ್ಕಿ ಮುಂತಾದುವು ಕಾಳಸಂತೆಯಲ್ಲಿ ವಿಶೇಷವಾಗಿ ರಿಯುತ್ತಿವೆ. ಈಗಿನ ಸ್ಥಿತಿಯಲ್ಲಿ ಯಾವ ಸರ್ಕಾರವು ಮಾಡುವುದಕ್ಕೂ ಆಗುವುದಿಲ್ಲ. ಸುಗ್ಗಿಯ ಕಾಲ ರಿಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದು ಂಡು ಹೋಗಲಿರುವ ಪ್ರಮಾಣವನ್ನು ಎಲ್ಲಾ ಕಡೆ ೧೦ ಸೇರು ಇರುವಂತೇರ್ಪಡಬೇಕೆಂದು ಸಲಹೆ ರು.

ಸುಬ್ಬಣ್ಣನವರು ಹೋಟೇಲುಗಳನ್ನು ನಾಲ್ಕು ತಿಂಗಳು ಮುಚ್ಚಿಸಬೇಕು, ಇಲ್ಲವೇ ಕಲ್ಕತ್ತಾ ಮುಂತಾದ ಇರುವಂತೆ ಈ ಹೋಟೇಲುಗಳಲ್ಲಿ ಕಾಫಿ ಬಿಸ್ಕತ್ತು ಮಾತ್ರ ಮಾರುವಂತೇರ್ಪಡಿಸಬೇಕೆಂದರು.

ಬಿ. ಎಲ್. ರಾಮಸ್ವಾಮಿ ಶೆಟ್ಟರು ಹೋಟೇಲುಗಳ ಮುಚ್ಚಿಸುವುದಕ್ಕಿಂತಲೂ ಜನರು ಹೋಟೇಲುಗಳಿಗೆ ಗುವುದನ್ನೆಲ್ಲ ನಿಲ್ಲಿಸಬೇಕು. ಆಗ ಹೋಟೇಲುಗಳು ಾಗಿಯೇ ಮುಚ್ಚಿ ಹೋಗುವುವೆಂದು ಸಲಹೆ ಇತ್ತರು. ಮಾರ್ಷೂರ್ ಹುಸೇನರವರು ವಿಶದವಾಗಿ ಚರ್ಚಿ ತ್ತಾ ಸರ್ಕಾರದ ವಾದವು ಸಾಧುವಲ್ಲ. ಪಟ್ಟಣಿಗರಿ ಈಗ ಸಬ್ಸಿಡಿ ಕೊಡುತ್ತಲಿರುವುದು ತಪ್ಪೇನೂ ಆಹಾರ ಒದಗಿಸುವುದು ಸರ್ಕಾರದ ಕರ್ತವ್ಯ ರ ಇಲಾಖೆಗಳಲ್ಲಿ ಸಿಬ್ಬಂದಿಗಾಗಿ ವಿಶೇಷ ಹಣ ವಾಗುವುದನ್ನು ತಪ್ಪಿಸಬೇಕು. ಹಳ್ಳಿಗಾಡಿನಲ್ಲಿ ರು ಹಣವಂತರಾಗುತ್ತಲಿದ್ದಾರೆ ಪಟ್ಟಣಿಗರಲ್ಲಿ ಬಡ ವಿಶೇಷ. ಹೊಸದಾಗಿ ವ್ಯವಸಾಯ ಕಿರಿಗೆ griculteral Incomtax) ಯನ್ನು ಹೆಚ್ಚಿ ರೆ ಸರ್ಕಾರಕ್ಕೆ ೪೦-೫೦ ಲಕ್ಷ ರೂಪಾಯಿಗಳು ಬರುವುದು. ಲ್ಯಾಂಡ್‌ರೆವಿನ್ಯೂ ಈಗ ಅನೇಕ ವರ್ಷಗಳಿಂದ ಒಂದೇ ರೀತಿ ಇರುತ್ತದೆ ಅದನ್ನು ಹೆಚ್ಚಿಸಬೇಕು ಅವಶ್ಯಕವಿದ್ದರೆ ಒಂದು ಹೊಸ ಸಾಲವನ್ನು ಸರ್ಕಾರ ತೆಗೆಯಲಿ ಈ ಸರ್ಕಾರವು ಅಕ್ಕಿಯ ಬೆಲೆಯನ್ನು ಕೂಡಲೇ ತಗ್ಗಿಸಬೇಕು. ವಸೂಲಿಕ್ರಮವು ಅಷ್ಟು ಸಮರ್ಪಕವಾಗಿಲ್ಲ. ಪುನಃ ಆಹಾರ ಧಾನ್ಯ ವಸೂಲಿಯನ್ನು ಮಾಡಲಿ ಎಂದರು.

ಅಬ್ದುಲ್ ರಹಿಮಾನ್‌ರವರು ಹಳ್ಳಿಗಳಲ್ಲಿ ಹಣವಂತರು ಬಹಳ ಕಡಿಮೆ. ಬಡವರೇ ಅಲ್ಲಿ ಹೆಚ್ಚು. ಈಗ ಕೊಡುತ್ತಲ್ಲಿರುವ ಪಡಿತರ ೨೦ ದಿವಸಕ್ಕೆ ಸಾಲದು ಕಾಳಸಂತೆಯಲ್ಲಿ ಕೊಂಡು ಅನೇಕರು ತಿನ್ನುತ್ತಲಿರುವರು ಕಾಳಸಂತೆಯಲ್ಲಿ ಆಹಾರ ಸಿಗುವುದರಿಂದಲೆ ವಸೂಲಿ ಕ್ರಮವು ಸಮರ್ಪಕವಾಗಿಲ್ಲ ಸರ್ಕಾರವು ಒಂದು ಎಕರೆಗೆ ೬೫ ಪಲ್ಲ ಅಕ್ಕಿ ಬೆಳೆಯುವರೆಂದು ಹೇಳುವುದತಪ್ಪು ೧೧-೧೨ ಪಲ್ಲಾ ಬೆಳೆಯುವುದು ಎಚ್. ಎಸ್. ಫಾರಂ ತಯಾರಿಗೆ ಸರಿಯಾಗಿಲ್ಲ ವಸೂಲಿಕ್ರಮ ಉತ್ತಮ ಪಡಿಸದಿದ್ದಲ್ಲಿ ಶೇಕಡ೫೦ ವಸೂಲಿ ಮಾಡಬಹುದು. ಅಕ್ಕಿ ಬೆಲೆ ಹೆಚ್ಚಿಸಿದರೆ ಕಾಳಸಂತೆ ಹೆಚ್ಚುವುದು. ಕಾಳಸಂತೆ ಹೋಗಬೇಕಾದರೆ ಸರ್ಕಾರಕ್ಕೆ ಎಷ್ಟು ನಷ್ಟವಾದರೂ ಸ್ವಲ್ಪ ಕಾಲವಾದರೂ ಅಕ್ಕಿ ಬೆಲೆ ಕಡಮೆ ಮಾಡಬೇಕೆಂದರು.

ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಮಾತನಾಡುತ್ತಾ ನಾವು ಆಹಾರಪರಿಸ್ಥಿತಿಯನ್ನು ಚರ್ಚಿಸುವಾಗ ಬರೀ ರೇಷನ್ ಪದಾರ್ಥಗಳೇ ಅಲ್ಲ. ಬೆಲೆ ವಿಪರೀತ ಏರಿ ಹೋಗಿರುವ ಇತರ ಪದಾರ್ಥಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದರು.

ಈ ನಡುವೆ ನೂರ್ ಮುಸೇರವರು Have we any respect to the procedure ಅಂದರು ಶ್ರೀ ಪುಟ್ಟಸ್ವಾಮಿಯವರು ಈರೀತಿ ಸಭೆಗೆ ದೋಷಾರೋಪಣೆ ಮಾಡಲು ಸಭೆಗೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದರು. ಸಭೆಯಲ್ಲಿ ವಾತು ಮಾತ್ರ ಸ್ವಲ್ಪ ಬಿಸಿಲೇರಿಸಿತು.

ಬಿಸಿ ಬಿಸಿ ಚರ್ಚೆಯಾದ ನಂತರ ಅಧ್ಯಕ್ಷರು ಎಲ್ಲರನ್ನೂ ಸಮಾಧಾನಪಡಿಸಿದರು. ಪುನಃ ಇದರ ಚರ್ಚೆ ಪ್ರಾರಂಭವಾಯಿತು. ರಾಜಗೋಪಾಲಯ್ಯಂಗಾರ್‌ರವರು ಮುಂದುವರಿಸುತ್ತಾ ಈಗ ಆಹಾರ ಸರಬರಾಯಿ ಆಗುತ್ತಲಿರುವುದು ನಗರಗಳಿಗೆ ಮಾತ್ರ ಇರುವುದರಿಂದ ಇಲಾಖೆಯನ್ನೇ ಸಂಪೂರ್ಣವಾಗಿ ತೆಗೆದು ಹಾಕಿ ಪರಸ್ಪರ ಸಹಾಯ ಸಂಘಗಳ ಮೂಲಕ ಸರಬರಾಯಿಗೆ ೩೦-೪೦ ಲಕ್ಷ ರೂಪಾಯಿಗಳ ವೆಚ್ಚವಾಗುವುದು. ಕೆಲವು ಭೋಜನ ಮಂದಿರಗಳನ್ನು ನಡೆಯುವಂತೇರ್ಪಡಿಸುವುದು ಉತ್ತಮವೆಂದರು.

ಕೊನೆಯಲ್ಲಿ ಪಾಲಹಳ್ಳಿ ಸೀತಾರಾಮಯ್ಯನವರು ಈ ನಿರ್ಣಯಗಳನ್ನು ಮಂಡಿಸಿದರು. ಎಲ್ಲಾ ನಿರ್ಣಯಗಳನ್ನು ಎಲ್ಲರೂ ಒಪ್ಪಿದರು ಆದರೆ ೫ ನೇ ನಿರ್ಣಯದಲ್ಲಿ ಅಕ್ಕಿ ಬೆಲೆಯನ್ನು ತಗ್ಗಿಸಬೇಕು ಎಂದು ಶ್ರೀ ಬಿ. ಕೆ. ರಾಮಕೃಷ್ಣಯ್ಯನವರು ತಿದ್ದುಪಡಿಯನ್ನು ಸೂಚಿಸಿದರು ತಿದ್ದುಪಡಿ ಸೂಚಿಸುತ್ತಾ ಅಕ್ಕಿ, ರಾಗಿ ಬೆಲೆಯನ್ನು ಹೆಚ್ಚಿಸಿರುವುದನ್ನು ಕೂಡಲೇ ತಗ್ಗಿಸಬೇಕು. ನಿರ್ದಿಷ್ಟವಿಲ್ಲದೆ ಪರಿಸ್ಥಿತಿಯು ಸರಿಯಾದ ಮೇಲೆ ತಗ್ಗಿಸಬೇಕೆನ್ನುವುದು ಅರ್ಥವಿಲ್ಲದ್ದು. ನಾವು ಹೇಳದೆಯೇ ಸರ್ಕಾರ ಇದನ್ನು ಮಾಡುವುದು, ಇಂದಿನ ಸ್ಥಿತಿಯಲ್ಲಿ ಕೂಡಲೇ ಬೆಲೆ ತಗ್ಗಿಸಬೇಕೆಂದರು.

ತಿದ್ದುಪಡಿಯನ್ನು ಅಬ್ದುಲ್ ರಹಮಾನ್, ಕೆ. ಪುಟ್ಟಸ್ವಾಮಿ, ನರಸಿಂಹಅಯ್ಯಂಗಾರ್‌ರವರು ವಿರೋಧಿಸಿ

ಮಂತ್ರಿ ಮಂಡಲಿ ಸಭೆ

ಮೈಸೂರು ಮಂತ್ರಿ ಮಂಡಲ ಸಭೆಯು ನಿನ್ನೆ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿ, ೪ ಗಂಟೆ ಕಾಲ ಸಮಾಲೋಚನೆಯಾಯಿತು. ಸಭೆಯು ಮುಂಗಡಪತ್ರಕ್ಕೆ ಸಂಬಂಧಪಟ್ಟ ತೀರ್ಮಾನವಾಗಬೇಕಾದ ಸುಮಾರು ೧೩೦ ವಿಷಯಗಳಿವೆಯೆಂದು ತಿಳಿಯಬರುತ್ತದೆ. ಸಭೆಯು ಈ ದಿನವೂ ನಡೆಯಲಿದೆ.

ರಜಾ

ಐ. ಜಿ. ಪಿ. ಶ್ರೀ ರಣಜೋಧಿಸಿಂಗರಿಗೆ ಆಗಸ್ಟ್ ೧ ರಿಂದ ಇನ್ನೂ ೩ ತಿಂಗಳು ರಜಾ ಮಂಜೂರಾಗಿದೆಯೆಂದು ತಿಳಿಯಬರುತ್ತದೆ.

ಲೆ॥ ಅಸೆಂಬ್ಲಿ

ಬೆಂಗಳೂರಿನಲ್ಲಿ ಲೆಜಿಸ್ಲೆಟಿವ್ ಅಸೆಂಬ್ಲಿಯು ಇದೇ ಮಾಹೆ ೨೮ ರಿಂದ ೬ ದಿನ ನಡೆಯುವುದು ೨೮ ನೇ ತಾರೀಖು ಮಧ್ಯಾಹ್ನ ರಾಜಪ್ರಮುಖರು ಪುರಭವನದಲ್ಲಿ ಅಧಿವೇಶನದ ಆರಂಭ ಭಾಷಣ ಮಾಡುವರು.

ಸರ್ಕಾರದವರು ಈಗ ಬೆಲೆ ಏರಿಸಿರುವುದು ಅತ್ಯಲ್ಪ ಮದರಾಸು. ಬೊಂಬಾಯಿಗಳಲ್ಲಿರುವಂತೆ ಮಾಡಿದ್ದರೆ ನಮಗೆ ರೂಪಾಯಿಗೆ ಒಂದು ಸೇರು ಅಕ್ಕಿ ರಾಗಿ ಸಿಕ್ಕುತ್ತಲಿತ್ತೋ ಇಲ್ಲವೋ? ಆದ್ದರಿಂದ ನಾವು ಸರ್ಕಾರವನ್ನು ವಂದಿಸಬೇಕು, ಎಂದು ಹೇಳಿದರು.

ಮುನಿಸಿಪಲ್ ಕಮಿಷನರವರು ಮೈಸೂರಿನ ಹಣಕಾಸಿನ ಪರಿಸ್ಥಿತಿಯನ್ನು ವಿವರಿಸುತ್ತಾ ಕೆಲವಕ್ಕೆ ಅನೇಕ ಬಾಬುಗಳು ಸೇರಿ ಹೋಗಿರುವುದರಿಂದ ದೇಶದ ಉತ್ಪತ್ತಿಯಲ್ಲಿ ಸುಮಾರು ೩ ಕೋಟಿ ರೂಪಾಯಿಗಳು ಕಡಿಮೆಯಾಗಿರುತ್ತದೆ. ಆದಾಗ್ಯೂ ರಾಷ್ಟ್ರನಿರ್ಮಾಣ ಕಾರ್ಯಗಳಿಗೆ ಹಿಂದೆ ಯಾವಾಗಲೂ ವೆಚ್ಚವಾಗದಷ್ಟು ಹಣವು ಈಗ ವೆಚ್ಚವಾಗುತ್ತಲಿದೆ. ಸಾಧುವಾದರೆ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ್ ಹಾಕಬಹುದು, ಆದರೆ ಅದನ್ನು ಪಟ್ಟಣಿಗರಿಗೆ ಆಹಾರ ಒದಗಿಸುವುದಾಗಿ ಸಬ್ಸಿಡಿ ಕೊಡಲು ಉಪಯೋಗಿಸುವುದು ಧರ್ಮವಲ್ಲ. ಗ್ರಾಮಾಂತರದಲ್ಲಿ ನಡೆಯಬೇಕಾದ ಕೆಲಸಗಳನೇಕವಿದೆ ಅದಕ್ಕೆ ಹಣಬೇಕಾಗಿದೆ. ಪಟ್ಟಣಗಳಲ್ಲಿ ಬರುವಹಣವನ್ನು ಪಟ್ಟಣಗಲ್ಲಿ ಮಾತ್ರ ವೆಚ್ಚಮಾಡಬೇಕೆಂದರೆ ಸಾಧುವಾಗಬಹುದು. ಎಂದು ತಿಳಿಸಿದರು.

ತಿದ್ದುಪಡಿಯನ್ನು ಓಟಿಗೆ ಹಾಕಿ ಬಿದ್ದು ಹೋಯಿತು.

ಸಭೆಯು ಮುಕ್ತಾಯವಾಗುವ ಮುನ್ನ ಮೈಸೂರು ಹಾಲ್ ಮಾಲೀಕರಾಗಿ ಹಿಂದೆ ಪೌರಸಭಾ ಸದಸ್ಯರಾಗಿದ್ದ ದಿವಗತರಾದ ಶ್ರೀ ಸೆಟ್ಟಾಜಿಯವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು.

ಸಮಾಚಾರ

ಮೈಸೂರು ಕಾಂಗ್ರೆಸ್ ಕಮಿಟಿ

ಮೈಸೂರು ಕಾಂಗ್ರೆಸ್ ಕಮಿಟಿಯು ಅಗಸ್ಟ್ ೨೭ ರಲ್ಲಿ, ಬೆಂಗಳೂರಿನಲ್ಲಿಯೇ ನಡೆಯುವುದು. ಅರಿಸೀಕೆರೆಯಲ್ಲಿ ನಡೆಯಲು ಹಿಂದೆ ನಿರ್ಧಸಲಾಗಿತ್ತು.

ಸತ್ಕಾರ

ಸ್ವಾತಂತ್ರ ದಿನೋತ್ಸವ ಸಮಾರಂಭದಲ್ಲಿ ಇಂದ್ರಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದರು ಮೈಸೂರು ನಗರದ ಪತ್ರಿಕೋದ್ಯೋಗಿಗಳನ್ನು ಬರಮಾಡಿಕೊಂಡು ನಿನ್ನೆ ರಾತ್ರಿ ಭೋಜನಕೂಟವನ್ನೇರ್ಪಡಿಸಿದ್ದರು.

ರೇಡಿಯೋ ಭಾಷಣ

ಹಣಕಾಸಿನ ಸಚಿವರಾದ ಶ್ರೀ ಎಚ್. ಸಿ. ದಾಸಪ್ಪನವರು ನಿನ್ನೆ ರಾತ್ರಿ ಆಲ್ ಇಂಡಿಯಾ ರೇಡಿಯೋ ಮೈಸೂರು ಕೇಂದ್ರದಿಂದ ಸ್ವಾತಂತ್ರ್ಯೋತ್ಸವ ಸಮಾರಂಭವನ್ನು [illegible] ಭಾಷಣ ಮಾಡಿದರು

ಸಾರ್ವಜನಿಕ ವಿಚಾರ ಸಂಸ್ಥೆ

ಈ ಸಂಸ್ಥೆಯ ಅಂಗವಾಗಿ ಪ್ರತಿ ಶನಿವಾರ ಸಾಯಂಕಾಲ ಮೈಸೂರು ಮಾದರಿ ಶಾಲೆಯಲ್ಲಿ ಕಾರ್ಯಕಲಾಪಗಳು ನಡೆಯಲೇರ್ಪಟ್ಟಿವೆ.

ದುರ್ಮರಣ

ರಾಜಧಾನಿ ಕಾರಂಜೀಕೆರೆಯಲ್ಲಿ ಬಟ್ಟೆ ಒಗೆಯಲು ಹೋಗಿದ್ದ ಮೂವರು ಬಾಲಕರ ಪೈಕಿ ಅಂದಾನಿ ಎಂಬ ೧೪-೧೫ ವರ್ಷದ ಬಾಲಕನು ಕಾಲುಜಾರಿ ಬಿದ್ದು ಮೃತನಾದನು.

ಬೆಂಗಳೂರಿನಲ್ಲಿ

ಮುಖ್ಯಮಂತ್ರಿ ಶ್ರೀ. ಕೆ. ಸಿ ರೆಡ್ಡಿಯವರು ನಿನ್ನೆ ಬೆಳಗ್ಗೆ ಸುಭಾಸ್‌ನಗರದಲ್ಲಿ ರಾಷ್ಟ್ರಧ್ವಜಾರೋಹಣವನ್ನು ನಡೆಸಿದರು. ಸಂಜೆ ಅಲ್ಲಿಯೇ ನಡೆದ ಬಹಿರಂಗ ಸಭೆಯಲ್ಲಿ ಶ್ರೀ ಕೆ. ಸಿ ರೆಡ್ಡಿ, ಕುಮಾರನ್, ಶ್ರೀಮತಿ ಯಶೋಧರ ದಾಸಪ್ಪನವರು ಭಾಷಣಮಾಡಿದರು. ಶ್ರೀ. ಕೆ. ಶ್ಯಾಮರಾಜ ಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು.

ಸಿಲ್ಕ್ ಫ್ಯಾಕ್ಟರಿಯಲ್ಲಿ

ಸ್ವಾತಂತ್ರಸಮಾರಂಭದ ಅಂಗವಾಗಿ ನಿನ್ನೆ ಹಣಕಾಸಿನ ಸಚಿವರ ಶ್ರೀ. ಎಚ್. ಸಿ. ದಾಸಪ್ಪನವರು ಸಿಲ್ಕ್ ಫ್ಯಾಕ್ಟರಿಯಲ್ಲಿ ವನಮಹೋತ್ಸವವನ್ನು ನೆರವೇರಿಸಿದರು.

ಸಾರ್ವಜನಿಕ ವಿದ್ಯಾರ್ಥಿನಿಲಯ

ನಿನ್ನೆ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಸ್ವಾತಂತ್ರ್ಯೋತ್ಸವ ಸಮಾರಂಭವು ಪೌರಸಭಾ ಸದಸ್ಯ ಶ್ರೀ. ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪೌರಸಭಾಧ್ಯಕ್ಷ ಶ್ರೀ ಎಂ. ಲಿಂಗಣ್ಣನವರು ರಾಷ್ಟ್ರಧ್ವಜಾರೋಹಣ ನಡೆಸಿದರು. ೫೦ ಜನ ವಿದ್ಯಾರ್ಥಿಗಳಿಗೆ ಯಾವ ಕೋಮುವಾರು ಭಾವನೆಯೂ ಇಲ್ಲದೆ ಇಂದ್ರಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದರವರು [illegible]ಸಿದ್ದರು.

ಕರಾಚಿಯಲ್ಲಿ

ಕರಾಚಿಯಲ್ಲಿರುವ ಭಾರತ ಹೈಕಮಿಷನರಾದ ಶ್ರೀ ಸೀತಾರಾಂರವರು ಭಾರತ ರಾಷ್ಟ್ರಧ್ವಜವನ್ನು ಆರೋಹಣಮಾಡಿ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಿದರು.

ಕೊರಿಯಾ ಯುದ್ಧ

ಕೊರಿಯಾ ಯುದ್ಧವು ಕೂಡಲೇ ಮುಕ್ತಾಯವಾಗುವ ಹಾಗೆ ೬ ಅಂಶಗಳ ಒಂದು ಸಲಹೆಯನ್ನು ಭಾರತ ಪ್ರತಿನಿಧಿ ಶ್ರೀ ಬೆನಗಲ್ ನರಸಿಂಗರಾಯರು ಭದ್ರತಾಸಮಿತಿ ಮುಂದೆ ತರಲಿರುವರೆಂದು ತಿಳಿಯಬರುತ್ತದೆ.

ಮುಷ್ಕರ

ಬೊಂಬಾಯಿನಲ್ಲಿಬಟ್ಟೆಗಿರಣಿ ಕೆಲಸಗಾರರ ಮುಷ್ಕರವು ೧೪ ನೇ ತಾರೀಖು ಬೆಳಗ್ಗೆ ಪ್ರಾರಂಭವಾಯಿತು. ಒಂದು ಲಕ್ಷ ಜನ ಮುಷ್ಕರದಲ್ಲಿ ಭಾಗವಹಿಸಿದ್ದರು. ಒಟ್ಟು ೧೪ ಗಿರಣಿಗಳು ಈ ಮುಷ್ಕರದ ಸಲುವಾಗಿ ಮುಚ್ಚಲ್ಪಟ್ಟಿದೆ.

ಕೋಮುವಾರು ನೀತಿ

ಕಾಲೇಜುಗಳಲ್ಲಿ ಕೋಮುವಾರುನೀತಿ ಇರಬೇಕೆಂದು ಮದರಾಸು ಮತ್ತು ಕೆಲವು ಜಿಲ್ಲಾ ಮುಖ್ಯ ಪಟ್ಟಣಗಳಲ್ಲಿ ಪ್ರದರ್ಶನಗಳು ನಡೆಯುತ್ತಲಿವೆ.

ಸಂದೇಶ

ಪಾಕೀಸ್ಥಾನದ ರಾಷ್ಟ್ರೀಯ ದಿನಾಚರಣೆ ಸಂದರ್ಭದಲ್ಲಿ ಪ್ರಧಾನಿ ಪಂಡಿತ್ ನೆಹರೂರವರು ಪಾಕೀಸ್ಥಾನದ ವಿದೇಶಾಂಗ ಮಂತ್ರಿಗೆ, ಭಾರತ ಸರ್ಕಾರ ಮತ್ತು ಪ್ರಜೆಗಳ ಪರವಾಗಿ ಒಂದು ಸಂದೇಶವನ್ನು ಕಳುಹಿಸಿರುವರು

ಭಾರತ ಸ್ವಾತಂತ್ರ ಸಮಾರಂಭದಲ್ಲಿ ಪಾಕೀಸ್ಥಾನದ ಹೈಕಮಿಷನರವರು ಭಾರತ ರಾಷ್ಟ್ರಪತಿಗಳಿಗೆ ಒಂದು ಶುಭ ಸಂದೇಶವನ್ನು ಕಳುಹಿಸಿರುವರು.

ತಮಿಳುನಾಡು ಕಾಂಗ್ರೆಸ್

ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಕೆ. ಕಾಮರಾಜನಾಡರ್, ಎಸ್. ಬಿ. ಆದಿತ್ಯನ್, ಓ. ಪಿ. ರಾಮಸ್ವಾಮಿರೆಡ್ಡಿಯಾರ್ ಮತ್ತು ಸಿ. ಬಿ. ಸುಬ್ಬಯ್ಯನವರು ಸ್ಪರ್ಧಿಸಿದ್ದಾರೆ. ಅಗಸ್ಟ್ ೨೭ ರಲ್ಲಿ ಚುನಾವಣೆ ನಡೆಯಲಿದೆ.

ಹೊಟೇಲ್ ಕೆಲಸಗಾರರ ಮುಷ್ಕರ

ಬೆಂಗಳೂರು ನಗರದಲ್ಲಿರುವ ಎಲ್ಲಾ ಹೊಟೇಲ್ ಕೆಲಸಗಾರರೂ ನಿನ್ನೆ ಬೆಳಗ್ಗೆ ಮುಷ್ಕರವನ್ನು ಹೂಡಿ ಚಿಕ್ಕಲಾಲ್‌ಬಾಗಿನಲ್ಲಿ ಸಭೆ ಸೇರಿದ್ದರು.

ಕಾಂಗ್ರೆಸ್ ಸಂಸ್ಥೆಯ ನೂತನ ಕಟ್ಟಡ

ಕಾಂಗ್ರೆಸ್ ಸಂಸ್ಥೆಯ ನೂತನ ಕಟ್ಟಡದ ಶಂಕುಸ್ಥಾಪನೆಯನ್ನು ಮೈಸೂರು ಕಾಂಗ್ರೆಸ್ ಅಧ್ಯಕ್ಷಣಿ ಶ್ರೀ. ಯಶೋಧರಾ ದಾಸಪ್ಪನವರು ನಿನ್ನೆ ಮಾಡಿದರು.

GURANTEED TYPEWRITER REPAIRS

S. SUBBA RAO,
Typewriter Mechanic,
Bright College of Commerce,
MYSORE

ಪತ್ರವ್ಯವಹಾರ

ಸಮಾಚಾರಪತ್ರಿಕೆ ಸಂಪಾದಕರಲ್ಲಿ

ಸ್ವಾಮಿ,

ನಿನ್ನೆ ಸ್ವಾತಂತ್ರ್ಯೋತ್ಸವ ಸಮಾರಂಭ ಪುರಭವನ ಮೈದಾನದಲ್ಲಿ ನಡೆಯುವುದೆಂದು ಪುರಸಭೆ, ನಗರ ಕಾಂ[illegible]ಸ್ ಸಮಿತಿ ಪ್ರಚಾರ ಮಾಡಿದ್ದರು. ಧ್ವಜಾರೋಹ[illegible] ಮಾಡುವಾಗ ಜಿಲ್ಲಾಧಿಕಾರಿಗಳಾಗಲೀ, ನಗರ ಕಾಂಗ್ರೆ[illegible] ಸಭೆಯ ಅಧ್ಯಕ್ಷರಾಗಲೀ ಯಾರೂ ವೇದಿಕೆಯ ಮೇ[illegible] ಕಾಣಬರಲೇ ಇಲ್ಲ. ಮಾರ್ಚ್‌ಪಾಸ್ಟು ನಡೆದು ಯಾರ[illegible] ಸಲ್ಯೂಟ್ ತೆಗೆದುಕೊಳ್ಳಲಿಲ್ಲ. ಇದು ಬೇಡವೆಂ[illegible] ಕೇಂದ್ರದಿಂದೇನಾದರೂ ಸೂಚನೆ ಬಂದಿತ್ತೆ?

ಸಂಜೆ ಪುರಭವನದೊಳಗೆ ಸಾರ್ವಜನಿಕ ಸಭೆ ನ[illegible] ದಾಗ ಸುಮಾರು ೨೫-೩೦ ಜನ ಪೋಲೀಸಿನವ[illegible] ಬಹಳ ಉಸ್ತುವಾರಿಯಿಂದ ಒಳಗೂ ಹೊರಗೂ ಓ[illegible] ಡುತ್ತಲಿದ್ದರು. ಸ್ವಾತಂತ್ರ ದಿನಾಚರಣೆಯ ದಿನ [illegible] ಉಸ್ತುವಾರಿ ಏಕೆ ?

ಪುರಭವನದೊಳಗೆ ಭಾಷಣಗಳಾಗುವಾಗ ಹೊ[illegible] ಕೇಳುವವರಿಗೆ ಲೌಡ್‌ಸ್ಪೀಕರುಗಳ ಏರ್ಪಾಡು ಮಾ[illegible] ಬಾರದಾಗಿತ್ತೇ ?

ಪ್ರತ್ಯಕ್ಷದರ್ಶಿ.

ಎಂ. ಸುಬ್ಬರಾಮಯ್ಯ ಅಂಡ್ ಕಂಪೆನಿ.
(ಮೈಸೂರು ಸರ್ಕಾರದಿಂದ ಅನುಮೋದಿಸಲ್ಪಟ್ಟ ಸಂಸ್ಥೆ)
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲಾ ಸರ್ಕಾರಿ ಇಲಾಖೆ ಮತ್ತು ಸ್ಥಳೀಯ ಸಂ[illegible]ಗಳಿಗೆ ಬೇಕಾಗುವ ಎಲ್ಲಾ ವಿಧವಾದ ಸೈನ್ ಬೋರ್ಡು[illegible]ಗಳನ್ನು ತಯಾರಿಸುವವರು.

ರಣಜಿತ್ ಟಾಕೀಸ್
ತಾ॥ 11-8-50 ರಿಂದ ಪ್ರತಿದಿನ 3 ಆಟಗಳು
ಎ. ವಿ. ಎಂ ರವರ ತೆಲುಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ,
* ವೈಜಯಂತಿಮಾಲ [illegible]
ಬೆಳಗಿನ ಪ್ರದರ್ಶನ
ಶಾಕುಂತಳ
ವಿ. ಶಾಂತಾರಾಂ, ರವರ ಪೂರ್ತಿ ವರ್ಣರಂಜಿತ
ಹಿಂದಿ ಚಿತ್ರ.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ "ಸಮಾಚಾರ" ದಿನಪತ್ರಿಯನ್ನು ಚಂದಾದಾರರಿಗೆ ಹಂಚಿ ಚಂದಾ ವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ. ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
"ಸಮಾಚಾರ" ದಿನಪತ್ರಿಕೆ

ಸಂಪಾದಕರು ಮತ್ತು ಪ್ರಕಾಶಕರು: ಜಿ. [illegible] ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು- ಮುದ್ರಕ[illegible] ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂ[illegible] ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂ[illegible]

ರಘುಲಾಲ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು
ಮತ್ತು
ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್ ಸ್ವಾಮಿ
ಸಂಪುಟ ೧ | ೧೭—೮—೧೯೫೦ ನೇ ಗುರುವಾರ | ಸಂಚಿಕೆ ೩

RAGHULAL & Co.,
CHEMISTS
Sayyaji Rao Road
MYSORE
RAGHULAL & Co., (Bangalore)
CHEMISTS
70 Arcot Srinivasa Char Street
BANGALORE 2

★ ಮೈಸೂರಲ್ಲಿ ಹೋಟೇಲು ಮುಚ್ಚಿಸಿ

[೩ ನೇ ಪುಟದಿಂದ ಮುಂದುವರಿದುದು]

ಕೆ ನಾರಾಯಣಸ್ವಾಮಿಯವರು ಮಾತನಾಡುತ್ತ ಅಕ್ಕಿ ಹೀಗೆ ಮುಂತಾದುವು ಕಾಳಸಂತೆಯಲ್ಲಿ ವಿಶೇಷವಾಗಿ ಸೋರಿಯುತ್ತೆ ಈಗಿನ ಸ್ಥಿತಿಯಲ್ಲಿ ಯಾವ ಸರ್ಕಾರವು ಏನು ಮಾಡುವುದಕ್ಕೂ ಆಗುವುದಿಲ್ಲ. ಸುಗ್ಗಿಯ ಕಾಲ [illegible] ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆಗೆದುಕೊಂಡು ಹೋಗಲಿರುವ ಪ್ರಮಾಣವನ್ನು ಎಲ್ಲಾ ಕಡೆಯೂ ೧೦ ಸೇರು ಇರುವಂತೇರ್ಪಡಬೇಕೆಂದು ಸಲಹೆ ಇತ್ತರು

ಸುಬ್ಬಣ್ಣನವರು ಹೋಟೇಲುಗಳನ್ನು ನಾಲ್ಕು ತಿಂಗಳು ಕಾಲ ಮುಚ್ಚಿಸಬೇಕು, ಇಲ್ಲವೇ ಕಲ್ಕತ್ತೆ ಮುಂತಾದ ಕಡೆ ಇರುವಂತೆ ಈ ಹೋಟೇಲುಗಳಲ್ಲಿ ಕಾಫಿ ಬಿಸ್ಕತ್ತುಗಳು ಮಾತ್ರ ಮಾರುವಂತೇರ್ಪಡಿಸಬೇಕೆಂದರು

ಬಿ ಎಲ್. ರಾಮಸ್ವಾಮಿ ಶೆಟ್ಟರು ಹೋಟೇಲುಗಳನ್ನು ಮುಚ್ಚಿಸುವುದಕ್ಕಿಂತಲೂ ಜನರು ಹೋಟೇಲುಗಳಿಗೆ ಹೋಗುವುದನ್ನೆಲ್ಲ ನಿಲ್ಲಿಸಬೇಕು. ಆಗ ಹೋಟೇಲುಗಳು ತಾವಾಗಿಯೇ ಮುಚ್ಚಿ ಹೋಗುವವೆಂದು ಸಲಹೆ ಇತ್ತರು

ಮಿಸ್ಟರ್ ನೂರ್ ಹುಸೇನರವರು ವಿಶದವಾಗಿ ಚರ್ಚಿಸುತ್ತಾ ಸರ್ಕಾರದ ವಾದವು ಸಾಧುವಲ್ಲ. ಪಟ್ಟಣಿಗರಿಗಾಗಿ ಈಗ ಸಬ್ಸಿಡಿ ಕೊಡುತ್ತಲಿರುವುದು ತಪ್ಪೇನೂ ಅಲ್ಲ. ಆಹಾರ ಒದಗಿಸುವುದು ಸರ್ಕಾರದ ಕರ್ತವ್ಯ ಆಹಾರ ಇಲಾಖೆಯಲ್ಲಿ ಸಿಬ್ಬಂದಿಗಾಗಿ ವಿಶೇಷ ಹಣ ವ್ಯಯವಾಗುವುದನ್ನು ತಪ್ಪಿಸಬೇಕು ಹಳ್ಳಿಗಾಡಿನಲ್ಲಿ ಜನರು ಹಣವಂತರಾಗುತ್ತಲಿದ್ದಾರೆ ಪಟ್ಟಣಗಳಲ್ಲಿ ಬಡವರು ವಿಶೇಷ ಹೊಸದಾಗಿ ವ್ಯವಸಾಯ ತೆರಿಗೆ (Agricultural Incomtax) ಯನ್ನು ಹೆಚ್ಚಿಸಿದರೆ ಸರ್ಕಾರಕ್ಕೆ ೪೦-೫೦ ಲಕ್ಷ ರೂಪಾಯಿಗಳು ಬರುವುದು ಲ್ಯಾಂಡ್‌ರೆವಿನ್ಯೂ ಈಗ ಅನೇಕ ವರ್ಷಗಳಿಂದ ಒಂದೇ ರೀತಿ ಇರುತ್ತದೆ ಅದನ್ನು ಹೆಚ್ಚಿಸಬೇಕು ಅವಶ್ಯಕವಿದ್ದರೆ ಒಂದು ಹೊಸ ಸಾಲವನ್ನು ಸರ್ಕಾರ ತೆಗೆಯಲಿ ಈ ಸರ್ಕಾರವು ಅಕ್ಕಿಯ ಬೆಲೆಯನ್ನು ಕೂಡಲೇ ತಗ್ಗಿಸಬೇಕು. ವಸೂಲಿಕ್ರಮವು ಅಷ್ಟು ಸಮರ್ಪಕವಾಗಿಲ್ಲ ಪುನಃ ಆಹಾರ ಧಾನ್ಯ ವಸೂಲಿಯನ್ನು ಮಾಡಲಿ ಎಂದರು

ಅಬ್ದುಲ್ ರಹಿಮಾನ್‌ರವರು ಹಳ್ಳಿಗಳಲ್ಲಿ ಹಣವಂತರು ಬಹಳ ಕಡಿಮೆ ಬಡವರೇ ಅಲ್ಲಿ ಹೆಚ್ಚು. ಈಗ ಕೊಡುತ್ತಲಿರುವ ಪಡಿತರ ೨೦ ದಿವಸಕ್ಕೆ ಸಾಲದು ಕಾಳಸಂತೆಯಲ್ಲಿ ಕೊಂಡು ಅನೇಕರು ತಿನ್ನುತ್ತಲಿರುವರು ಕಾಳಸಂತೆಯಲ್ಲಿ ಆಹಾರ ಸಿಗುವುದೆಂದರೆ ವಸೂಲಿ ಕ್ರಮವು ಸಮರ್ಪಕವಾಗಿಲ್ಲ ಸರ್ಕಾರವು ಒಂದು ಎಕರೆಗೆ ೬.೫ ಪಲ್ಲ ಅಕ್ಕಿ ಬೆಳೆಯುವರೆಂದು ಹೇಳುವುದು ತಪ್ಪು ೧೧-೧೨ ಪಲ್ಲ ಬೆಳೆಯುವುದು ಎಚ್. ಎಸ್. ಫಾರಂ ತಯಾರಿಗೆ ಸರಿಯಾಗಿಲ್ಲ ವಸೂಲಿಕ್ರಮ ಉತ್ತಮಪಡಿಸದಿದ್ದಲ್ಲಿ ಶೇಕಡ ೩೦ ವಸೂಲಿ ಮಾಡಬಹುದು ಅಕ್ಕಿ ಬೆಲೆ ಹೆಚ್ಚಿಸಿದರೆ ಕಾಳಸಂತೆ ಹೆಚ್ಚುವುದು ಕಾಳಸಂತೆ ಹೋಗಬೇಕಾದರೆ ಸರ್ಕಾರಕ್ಕೆ ಎಷ್ಟು ನಷ್ಟವಾದರೂ ಸ್ವಲ್ಪ ಕಾಲವಾದರೂ ಅಕ್ಕಿ ಬೆಲೆ ಕಡಮೆ ಮಾಡಬೇಕೆಂದರು.

ಟಿ ಎಸ್. ರಾಜಗೋಪಾಲಯ್ಯಂಗಾರ್‌ರವರು ಮಾತನಾಡುತ್ತಾ ನಾವು ಆಹಾರಪರಿಸ್ಥಿತಿಯನ್ನು ಚರ್ಚಿಸುವಾಗ [illegible] ಪದಾರ್ಥಗಳೇ ಅಲ್ಲ ಬೆಲೆ ವಿಪರೀತ ಏರಿ ಹೋಗಿರುವ ಇತರ ಪದಾರ್ಥಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದರು

ಈ ನಡುವೆ ನೂರ್ ಹುಸೇನರವರು Have we any respect to the procedure ಅಂದರು ಶ್ರೀ ಪುಟ್ಟಸ್ವಾಮಿಯವರು ಈರೀತಿ ಸಭೆಗೆ ದೋಷಾರೋಪಣೆ ಮಾಡಲು ಸಭೆಗ ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದರು ಸಭೆಯಲ್ಲಿ ಮಾತು ಮಾತ್ರ ಸ್ವಲ್ಪ ಬದಲಾಯಿಸಿತು

ಬಿಸಿ ಬಿಸಿ ಚರ್ಚೆಯಾದ ನಂತರ ಅಧ್ಯಕ್ಷರು ಎಲ್ಲರನ್ನೂ ಸಮಾಧಾನಪಡಿಸಿದರು. ಪುನಃ ಇದರ ಚರ್ಚೆ ಪ್ರಾರಂಭವಾಯಿತು ರಾಜಗೋಪಾಲಯ್ಯಂಗಾರ್‌ರವರು ಮುಂದುವರಿಸುತ್ತಾ ಈಗ ಆಹಾರ ಸರಬರಾಯಿ ಆಗುತ್ತಲಿರುವುದು ನಗರಗಳಿಗೆ ಮಾತ್ರ ಇರುವುದರಿಂದ ಇಲಾಖೆಯನ್ನೇ ಸಂಪೂರ್ಣವಾಗಿ ತೆಗೆದು ಹಾಕಿ ಪರಸ್ಪರ ಸಹಾಯ ಸಂಘಗಳ ಮೂಲಕ ಸರಬರಾಯಿಗೆ ೩೦-೪೦ ಲಕ್ಷ ರೂಪಾಯಿಗಳ ವೆಚ್ಚವಾಗುವುದು. ಕೆಲವು ಭೋಜನ ಮಂದಿರಗಳನ್ನು ನಡೆಯುವಂತೇರ್ಪಡಿಸುವುದು ಉತ್ತಮವೆಂದರು

ಕೊನೆಯಲ್ಲಿ ಪಾಲಹಳ್ಳಿ ಸೀತಾರಾಮಯ್ಯನವರು ಈ ನಿರ್ಣಯ ಇನ್ನು ಮಂಡಿಸಿದರು ಎಲ್ಲಾ ನಿರ್ಣಯಗಳನ್ನು ಎಲ್ಲರೂ ಒಪ್ಪಿದರು ಆದರೆ ೩ ನೇ ನಿರ್ಣಯದಲ್ಲಿ ಅಕ್ಕಿ ಬೆಲೆಯನ್ನು ತಗ್ಗಿಸಬೇಕು ಎಂದು ಶ್ರೀ ಬಿ ಕೆ. ರಾಮಕೃಷ್ಣಯ್ಯನವರು ತಿದ್ದುಪಡಿಯನ್ನು ಸೂಚಿಸಿದರು ತಿದ್ದುಪಡಿ ಸೂಚಿಸುತ್ತಾ ಅಕ್ಕಿ, ರಾಗಿ ಬೆಲೆಯನ್ನು ಹೆಚ್ಚಿಸಿರುವುದನ್ನು ಕೂಡಲೇ ತಗ್ಗಿಸಬೇಕು. ನಿರ್ದಿಷ್ಟವಿಲ್ಲದ ಪರಿಸ್ಥಿತಿಯು ಸರಿಯಾದ ಮೇಲೆ ತಗ್ಗಿಸಬೇಕೆನ್ನುವುದು ಅರ್ಥವಿಲ್ಲದ್ದು ನಾವು ಹೇಳದೆಯೇ ಸರ್ಕಾರ ಇದನ್ನು ಮಾಡುವುದು, ಇಂದಿನ ಸ್ಥಿತಿಯಲ್ಲಿ ಕೂಡಲೇ ಬೆಲೆ ತಗ್ಗಿಸಬೇಕೆಂದರು.

ತಿದ್ದುಪಡಿಯನ್ನು ಅಬ್ದುಲ್ ರಹಮಾನ್, ಕೆ. ಪುಟ್ಟಸ್ವಾಮಿ, ನರಸಿಂಹಅಯ್ಯಂಗಾರ್‌ರವರು ವಿರೋಧಿಸಿ ಸರ್ಕಾರದವರು ಈಗ ಬೆಲೆ ಏರಿಸಿರುವುದು ಅತ್ಯಲ್ಪ. ಮದರಾಸು, ಬೊಂಬಾಯಿಗಳಲ್ಲಿರುವಂತೆ ಮಾಡಿದ್ದರೆ ನಮಗೆ ರೂಪಾಯಿಗೆ ಒಂದು ಸೇರು ಅಕ್ಕಿ ರಾಗಿ ಸಿಕ್ಕುತ್ತಲಿತ್ತೋ ಇಲ್ಲವೋ? ಆದ್ದರಿಂದ ನಾವು ಸರ್ಕಾರವನ್ನು ವಂದಿಸಬೇಕು, ಎಂದು ಹೇಳಿದರು

ಮುನಿಸಿಪಲ್ ಕಮಿಷನರವರು ಮೈಸೂರಿನ ಹಣಕಾಸಿನ ಪರಿಸ್ಥಿತಿಯನ್ನು ವಿವರಿಸುತ್ತಾ ಕೆಲವಕ್ಕೆ ಅನೇಕ ಬಾಬುಗಳು ಸೇರಿ ಹೋಗಿರುವುದರಿಂದ ದೇಶದ ಉತ್ಪತ್ತಿಯಲ್ಲಿ ಸುಮಾರು ೪ ಕೋಟಿ ರೂಪಾಯಿಗಳು ಕಡಿಮೆಯಾಗಿರುತ್ತದೆ ಆದಾಗ್ಯೂ ರಾಷ್ಟ್ರನಿರ್ಮಾಣ ಕಾರ್ಯಗಳಿಗೆ ಹಿಂದೆ ಯಾವಾಗಲೂ ವೆಚ್ಚವಾಗದಷ್ಟು ಹಣವು ಈಗ ವೆಚ್ಚವಾಗುತ್ತಲಿದೆ. ಸಾಧುವಾದರೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಬಹುದು, ಆದರೆ ಅದನ್ನು ಪಟ್ಟಣಿಗರಿಗೆ ಆಹಾರ ಒದಗಿಸುವುದಾಗಿ ಸಬ್ಸಿಡಿ ಕೊಡಲು ಉಪಯೋಗಿಸುವುದು ಧರ್ಮವಲ್ಲ ಗ್ರಾಮಾಂತರದಲ್ಲಿ ನಡೆಯಬೇಕಾದ ಕೆಲಸಗಳನೇಕವಿವೆ ಅವಕ್ಕೆ ಹಣಬೇಕಾಗಿದೆ. ಪಟ್ಟಣಗಳಲ್ಲಿ ಬರುವ ಹಣವನ್ನು ಪಟ್ಟಣಗಳಲ್ಲಿ ಮಾತ್ರ ವೆಚ್ಚಮಾಡಬೇಕೆಂದರೆ ಸಾಧುವಾಗಬಹುದು ಎಂದು ತಿಳಿಸಿದರು

ತಿದ್ದುಪಡಿಯನ್ನು ಓಟಿಗೆ ಹಾಕಿ ಬಿದ್ದು ಹೋಯಿತು.

ಸಭೆಯು ಮುಕ್ತಾಯವಾಗುವ ಮುನ್ನ ಮೈಸೂರು ಹಾಲ್ ಮಾಲೀಕರಾಗಿ ಹಿಂದೆ ಪ್ರಜಾಸಭಾ ಸದಸ್ಯರಾಗಿದ್ದ ದಿವಂಗತರಾದ ಶ್ರೀ ಸೆಟ್ಟೂಜಿಯರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು.

ಮಂತ್ರಿ ಮಂಡಲ ಸಭೆ

ಮೈಸೂರು ಮಂತ್ರಿ ಮಂಡಲ ಸಭೆಯು ನಿನ್ನೆ ಶ್ರೀ ಕೆ. ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿ, ೪ ಗಂಟೆ ಕಾಲ ಸಮಾಲೋಚನೆಯಾಯಿತು ಸಭೆಯ ಮುಂದೆ ಆಡಳಿತಕ್ಕೆ ಸಂಬಂಧಪಟ್ಟ ತೀರ್ಮಾನವಾಗಬೇಕಾಗಿರುವ ಸುಮಾರು ೧೩೦ ವಿಷಯಗಳಿವೆಯೆಂದು ತಿಳಿಯಬರುತ್ತದೆ. ಸಭೆಯು ಈ ದಿನವೂ ನಡೆಯಲಿದೆ

ರಜಾ

ಐ ಜಿ. ಪಿ. ಶ್ರೀ ರಣಜೋಧಿಸಿಂಗರಿಗೆ ಆಗಸ್ಟ್ ೧ ರಿಂದ ಇನ್ನೂ ೩ ತಿಂಗಳು ರಜಾ ಮಂಜೂರಾಗಿದೆಯೆಂದು ತಿಳಿಯಬರುತ್ತದೆ.

ಲೆ|| ಅಸೆಂಬ್ಲಿ

ಬೆಂಗಳೂರಿನಲ್ಲಿ ಲೆಜಿಸ್ಲೆಟಿವ್ ಅಸೆಂಬ್ಲಿಯು ಇದೇ ಮಾಹೆ ೨೮ ರಿಂದ ೬ ದಿನ ನಡೆಯುವುದು ೨೮ ನೇ ತಾರೀಖು ಮಧ್ಯಾಹ್ನ ರಾಜಪ್ರಮುಖರು ಪುರಭವನದಲ್ಲಿ ಅಧಿವೇಶನದ ಆರಂಭ ಭಾಷಣ ಮಾಡುವರು.

ಸಮಾಚಾರ

ವರ್ತಕರ ಕರ್ತವ್ಯವೇನು ?

ದೇಶಾದ್ಯಂತ ಆಹಾರದ ವಿಷಯದಲ್ಲಿ ಹಾಹಾಕಾರವು ಹೆಚ್ಚುತ್ತಲಿದೆ. ಆಹಾರ ಅಭಾವವು ಒಂದು ಕಡೆ, ಆಹಾರ ಪದಾರ್ಥಗಳ ಬೆಲೆ ಏರಿಸುವುದು ಮತ್ತೊಂದು ಕಡೆ. ಹಿಂದೆ ಸಾಮಾನ್ಯವಾಗಿ ಯುದ್ಧಕಾಲದಲ್ಲಿ ಜನರು ಅನೇಕ ರೀತಿಯಾದ ತೊಂದರೆಗಳನ್ನು ಅನುಭವಿಸುತ್ತಲಿದ್ದರು. ಈಗಲಾದರೋ ಯುದ್ಧನಿಂತು ೪-೫ [illegible]ಗಳಾಗುತ್ತ ಬಂದರೂ ತೊಂದರೆಗಳು ಒಂದಲ್ಲ ಒಂದು ರೀತಿ ಹೆಚ್ಚುತ್ತಲಿವೆಯೆ ಹೊರತು ಕಡಮೆಯಾಗುತ್ತಲಿಲ್ಲ. ಅದರಲ್ಲೂ ನಮ್ಮ ಪ್ರಜಾಸರ್ಕಾರವು ಸ್ಥಾಪಿತವಾದ ಮೇಲೆ ಈ ತೊಂದರೆಗಳು ಹೆಚ್ಚುತ್ತಲಿರುವುದು ಭಾರತದ ಪ್ರತಿಯೊಬ್ಬ ಮಾನವನ ಕರ್ತವ್ಯ ಲೋಪವನ್ನು ಎತ್ತಿ ತೋರಿಸುವಂತಾಗಿದೆ. ಬ್ರಿಟಿಷ್ ಆಡಳಿತವು ತೊಲಗಿ ನಮ್ಮದೇ ಸರ್ಕಾರವು ಬಂದರೆ ನಮ್ಮ ದೇಶಕ್ಕೆ ಸುಖವೆಂದು ಯಾವ ಜನರು ತಿಳಿದು ಎಷ್ಟು ಹೋರಾಡಿದರೋ, ಅದೇ ಜನರಲ್ಲಿ ಅನೇಕರು ನಮಗ್ಯಾಕೆ ಈ ಸ್ವಾತಂತ್ರ್ಯ ಬಂದಿತು, ಹಿಂದೆ ಹೊಟ್ಟೆ ಬಟ್ಟೆಗೆ ಸ್ವಲ್ಪವಾದರೂ ಸಿಕ್ಕುತ್ತಲಿತ್ತು, ಈಗ ಅದೂ ತಪ್ಪಿ ಹೋಯಿತು. ಎಂದು ಹೇಳುತ್ತಲಿರುವುದು ಎಲ್ಲೆಲ್ಲಿಯೂ ಕೇಳಿಬರುತ್ತಲಿದೆ.

ನಮ್ಮ ಜನರು ಕರ್ತವ್ಯಲೋಪರಾಗುತ್ತಲಿರುವುದೊಂದೇ ಕಾರಣವೆಂದು ಹೇಳಿದರೆ ಸುಳ್ಳಾಗಲಾರದು. ರೈತರು ಹಿಂದೆ ಯಾವ ರೀತಿಯಾಗಿ ಹಳ್ಳಿಗಾಡುಗಳಲ್ಲಿ ದುಡಿದು ಆಹಾರ ಪದಾರ್ಥಗಳನ್ನು ಬೆಳೆಯುತ್ತಲಿದ್ದರೋ ಹಾಗೆ ಈಗ ಬೆಳೆಯುತ್ತಲಿಲ್ಲ. ಬೆಳೆದರೂ ಸ್ವಾರ್ಥಗಳಾಗಿ ಯಾವುದಾದರೂ ಒಂದು ರೀತಿ ಸಂಪಾದಿಸಬೇಕೆಂದು ಅನೇಕ ಮಾರ್ಗಗಳನ್ನು ಹುಡುಕುತ್ತಲಿರುವರು. ಅದಕ್ಕಿಂತ ಹೆಚ್ಚಾಗಿ ನಮ್ಮ ವರ್ತಕಮಹಾಶಯರುಗಳು ವಿಶೇಷಲಾಭದ ಕಡೆಗೆ ಮನವನ್ನೀಯುತ್ತಾ ವ್ಯಾಪಾರ ನಡೆಯಿಸುತ್ತಲಿರುವುದರಿಂದ ನಮ್ಮ ನಿತ್ಯ ಜೀವನ ನಡೆಯುವುದೇ ಕಷ್ಟವಾಗಿದೆ.

ಹೊರ ದೇಶಗಳಿಂದ ಬರುವ ಆಹಾರ ಪದಾರ್ಥಗಳು ವಿನಹ ನಮ್ಮ ದೇಶದಲ್ಲಿಯೇ ಬೆಳೆಯುವ ಆಹಾರ ಪದಾರ್ಥಗಳ ಬೆಲೆಯು ಪ್ರತಿ ನಿತ್ಯವೂ ಏರಿಹೋಗುತ್ತಲಿದೆ. ನಿತ್ಯ ಜೀವನಕ್ಕೆ, ಧನಿಕನಾಗಲೀ ಬಡವನಾಗಲಿ, ಅಕ್ಕಿ, ಬೇಳೆ, ಉಪ್ಪು, ಹುಣಸೇಹಣ್ಣು, ಮೆಣಸಿನಕಾಯಿ, ಬೆಲ್ಲ, ಎಣ್ಣೆ, ಮುಂತಾದುವು ಅತ್ಯಗತ್ಯ ವಸ್ತುಗಳು. ಅಕ್ಕಿ ಬೇಳೆಗಳು ಹೊರದೇಶದಿಂದ ವಿಶೇಷವಾಗಿ ಬರುತ್ತಲಿರುವುದರಿಂದ ಅವುಗಳ ಬೆಲೆ ಯೇನೋ ಹೆಚ್ಚು ಎನ್ನುವುದಕ್ಕೆ ತಕ್ಕ ಕಾರಣಗಳಿವೆ. ಆದರೆ ನಮ್ಮಲ್ಲಿಯೇ ಬೆಳೆಯುವ ಇತರ ವಸ್ತುಗಳಾದ ಹುಣಸೆಹಣ್ಣು ದನಿಯ ಮೆಣಸಿನಕಾಯಿ ಬೆಲ್ಲ ಮುಂತಾದುವುಗಳ ಬೆಲೆಯು ಅಕ್ಕಿ, ರಾಗಿ ಬೇಳೆಗಳ ಬೆಲೆಗಿಂತ ಹೆಚ್ಚಾಗಿರುವುದು ಆಶ್ಚರ್ಯವನ್ನೂ ಖೇದವನ್ನೂ ಉಂಟುಮಾಡಿದೆ. ರೈತರಲ್ಲಿ ಮತ್ತು ಇತರ ಕಡೆ ಬೆಳೆಯುವ ಈ ಪದಾರ್ಥಗಳಿಗೆ ಪೈಪೋಟಿಯಿಂದ ಒಂದಕ್ಕೆರಡರಂತೆ ಬೆಲೆಯನ್ನು ಕೊಟ್ಟು ಕೊಂಡು ಶೇ|| ೫೦-೧೦೦ ರಷ್ಟು ಲಾಭದಿಂದ ಜನರಿಗೆ ಕೊಡುತ್ತಲಿರುವವರ್ಯಾರು? ರೆಗ್ಯುಲೇಟೆಡ್ ಮಾರ್ಕೆಟ್ಟುಗಳಲ್ಲಿ ಪೈಪೋಟಿಯಿಂದ ಸಾಮಾನುಗಳನ್ನು ಕೊಂಡು ಬೆಲೆ ಏರುತ್ತಲಿರುವುದಕ್ಕೆ ಸರ್ಕಾರದವರೇ ಹೊಣೆ ಎಂದು ಹೇಳುತ್ತಾ ಲಾಭ ಸಂಪಾದಿಸುತ್ತಲಿರುವವರೂ ವ್ಯಾಪಾರಸ್ಥರೇ. ರೈತರಿಂದ ಆಹಾರ ಪದಾರ್ಥಗಳನ್ನು ಕೊಳ್ಳುವಾಗ ಒಂದು ನಿಗದಿಯಾದ ಬೆಲೆಗೆ ಕೊಂಡು ಅಲ್ಪಲಾಭದಿಂದ ವರ್ತಕರು ಮಾರುವುದರಿಂದ ಅದರಿಂದ ದೇಶದ ಜನರ ಹಿತವಾಗುವುದು. ಸಾಮಾನ್ಯವಾಗಿ ಅನೇಕ ದೊಡ್ಡ ಪಟ್ಟಣಗಳಲ್ಲೆಲ್ಲಾ ವರ್ತಕ ಸಂಘಗಳಿವೆ. ಈ ಸಂಘದವರು ಒಂದು ಸುವ್ಯವಸ್ಥೆಯಿಂದ ಈ ಕಾರ್ಯ ಮಾಡಿ ಜನರು ಪಡುತ್ತಲಿರುವ ತೊಂದರೆಗಳಿಗೆ ಗಮನವಿಟ್ಟು ಅವರ ಹಿತಚಿಂತಕರಾಗಿ ಕೆಲಸ ಮಾಡುವುದು ಅವರ ಕರ್ತವ್ಯ.

ಈಗಾಗಲೇ ದೇಶದ ಅನೇಕ ಕಡೆ ವರ್ತಕರ ಅಂಗಡಿಗಳ ಮುಂದೆ ಜನರು ಪಿಕೆಟಿಂಗ್ ಮಾಡುತ್ತಲಿರುವರು. ಹೆಚ್ಚು ಬೆಲೆಗೆ ಮಾರುವುದನ್ನು ತಪ್ಪಿಸಲು ಉತ್ತಮ ಮಾರ್ಗವನ್ನು ಹುಡುಕುವುದು ಒಳ್ಳೆಯದು, ನಮ್ಮ ನಗರದಲ್ಲಿಯೂ ಸರ್ವೋದಯ ಸಮಾಜವು ನಿರ್ಧರಿಸಿರುವಂತೆ ಅಂಗಡಿಗಳ ಮುಂದೆ ಶಾಂತರೀತಿಯಿಂದ ಹೆಚ್ಚು ಬೆಲೆಗೆ ಆಹಾರವನ್ನು ಮಾರುವುದನ್ನು ತಪ್ಪಿಸಲು ಪಿಕೆಟಿಂಗ್ ನಡೆಯಲಿದೆ. ಅದು ಆಗುವುದಕ್ಕೆ ಮುಂಚೆಯೇ ವರ್ತಕರು ಎಚ್ಚೆತ್ತುಕೊಳ್ಳುವುದು ಉತ್ತಮ.

ನಗರ ಪೌರಸಭೆಯಲ್ಲಿ

ಆಹಾರ ವಿಷಯ ತೀವ್ರ ಚರ್ಚೆ

ಮೈಸೂರು ನಗರ ಪೌರಸಭೆಯು ನಿನ್ನೆ ವಿಶೇಷ ಸಭೆಯಲ್ಲಿ ದೇಶದ ಆಹಾರ ಪರಿಸ್ಥಿತಿಯನ್ನು ೩ ಗಂಟೆಕಾಲ ಚರ್ಚಿಸಿ ಸರ್ಕಾರಕ್ಕೆ ಕಳುಹಿಸಲು ಕೆಲವು ನಿರ್ಣಯಗಳನ್ನು ಮಾಡಿತು.

೧. ಕೇಂದ್ರ ಸರ್ಕಾರವು ಕೊಡುತ್ತೇವೆಂದು ವಾಗ್ದಾನ ಮಾಡಿದ್ದ ಆಹಾರ ಧಾನ್ಯಗಳನ್ನು ಪೂರ್ತಿ ಪ್ರಮಾಣದಲ್ಲಿ ಕೊಡುವಂತೆ ಒತ್ತಾಯ ಪಡಿಸುವುದು.

೨ ಕೇಂದ್ರಸರ್ಕಾರದವರು ಹೆಚ್ಚಿನ ಗೋಧಿಯನ್ನು ಕೊಡುವಂತೆ ಏರ್ಪಡಿಸಿ, ಎ ತರಗತಿಯವರಿಗೆ ಒಟ್ಟು ೧೦ ಔನ್ಸ್. ಬಿ ತರಗತಿಯವರಿಗೆ ೧೨.೫ ಔನ್ಸ್ ಪಡಿತರ ಕೊಡುವಂತೆ ಏರ್ಪಡಿಸುವುದು.

೩. ದೇಶದಲ್ಲಿ ಪರಿಸ್ಥಿತಿ ಉತ್ತಮಗೊಂಡೊಡನೆಯೇ ಅಕ್ಕಿಯ ಬೆಲೆಯನ್ನು ತಗ್ಗಿಸುವುದು.

೪. ಸ್ವಲ್ಪವೂ ಪಾಲೀಷ್‌ಯಿಲ್ಲದೆ ಈಗ ಕೊಡುತ್ತಲಿರುವ ಅಕ್ಕಿಯ ಬದಲು ಅದರಲ್ಲಿರುವ ಆಹಾರ ಸತ್ವವು ಹೋಗದಂತೆ ಅಕ್ಕಿಯನ್ನು ಪಾಲೀಷ್ ಮಾಡಿಸಿಕೊಡುವುದು.

೫. ಆಹಾರ ಪದಾರ್ಥಗಳನ್ನು ಕೊಡುವಾಗ ಕಲ್ಲು ಮಣ್ಣುಗಳನ್ನು ತೆಗೆಸಿ ಶುದ್ಧಮಾಡಿ ಕೊಡುವುದು.

ದೇಶದ ಆಹಾರ ಪರಿಸ್ಥಿತಿಯನ್ನು ಚರ್ಚಿಸುವ ಮುನ್ನ ಪೌರಸಭಾಧ್ಯಕ್ಷರು ಆಹಾರ ಮಂತ್ರಿಗಳು ಪೌರಸಭಾ ಸದಸ್ಯರು, ಆಹಾರ ಸಮಿತಿ ಸದಸ್ಯರು ಮತ್ತು ಕೆಲವು ವರ್ತಕರನ್ನು ಬರಮಾಡಿಕೊಂಡು ನಡೆಸಿದ ಸಭೆಯಲ್ಲಿ ಆಹಾರ ಮಂತ್ರಿಗಳು ಆಹಾರ ಪರಿಸ್ಥಿತಿಯ ವಿಷಯದಲ್ಲಿ ವಿವರಿಸಿದ ಅಂಶಗಳನ್ನು ಸದಸ್ಯರ ಅವಗಾಹನೆಗೆ ತಂದರು. ಪ್ರತಿವರ್ಷವೂ ಆಹಾರ ಪದಾರ್ಥಗಳನ್ನು ಕೊಳ್ಳಲು ಸರ್ಕಾರವು [illegible] ಒಂದುವರೆ ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತಾ ಬಂದ ಈಗಾಗಲೇ ಏಳೂವರೆ ಕೋಟಿ ರೂಪಾಯಿಗಳು ವೆಚ್ಚವಾಗಿದೆ. ಈ ವರ್ಷ ೯೫ ಲಕ್ಷ ರೂಪಾಯಿಗಳು ಅಂದಾಜಿನಲ್ಲಿ ಈಗಾಗಲೇ ೭೫ ಲಕ್ಷರೂಪಾಯಿಗಳು (ಒಂದೇ ಬಾಬಿನಲ್ಲಿ ಯು. ಪಿ. ಯಿಂದ ಅಕ್ಕಿಯನ್ನು ಕೊಳ್ಳಲು ೧೫ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ) ಖರ್ಚಾಗಿವೆ. ಈ ಆಹಾರವೆಲ್ಲವೂ ಪಟ್ಟಣಗಳಲ್ಲಿ—ಸ್ಟ್ಯಾಚ್ಯುಟರಿ ರೇಷನ್‌ಯಿರುವ ಮೈಸೂರು, ಬೆಂಗಳೂರು, ದಾವಣಗೆರೆ ಮತ್ತು ಕೋಲಾರ ಚಿನ್ನದ ಗಣಿಗಳಲ್ಲಿರುವ ಕೇವಲ ೧೩ ಲಕ್ಷ ಜನಗಳಿಗಾಗಿ ಮಾತ್ರ ವೆಚ್ಚವಾಗುತ್ತಲಿದೆ. ಇದರಿಂದ ಗ್ರಾಮಾಂತರ ಜನರಿಗೆ ಅಸಮಾಧಾನವಾಗಿದೆ. ಅಲ್ಲದೆ ನೆರೆಪ್ರದೇಶಗಳಾದ ಬೆಂಗಳೂರು ಮದರಾಸು ಮುಂತಾದ ಕಡೆ ಇಲ್ಲಿಯ ಪಡಿತರಕ್ಕಿಂತ ಕಡಿಮೆಯಾಗಿ, ಇಲ್ಲಿಯ ಬೆಲೆಗಿಂತ ಹೆಚ್ಚಿನ ಬೆಲೆಯಲ್ಲಿ ಜನರಿಗೆ ಒದಗಿಸುತ್ತಲಿದ್ದಾರೆ. ಆಹಾರ ಪದಾರ್ಥಗಳನ್ನು ಹೊರ ಪ್ರದೇಶಗಳಿಂದ [illegible] ತಂದ ಖರ್ಚು ಮುಂತಾದುವನ್ನೆಲ್ಲಾ ಜನರೇ ವಹಿಸಿಕೊಳ್ಳುವಂತೆ ಮಾಡಿದೆ ಎಂದು ಸಚಿವರು ಹೇಳಿದ ವಿಷಯಗಳನ್ನು ಪ್ರಸ್ತಾಪಿಸಿದರು.

ಡಾ| ಕೃಷ್ಣಸ್ವಾಮಿಯವರು ಚರ್ಚೆಯನ್ನಾರಂಭಿಸುತ್ತಾ ಉಪಹಾರ ಮಂದಿರಗಳಲ್ಲಿ ದೋಸೆ, ಇಡ್ಲಿ ಮಾಡುವ ಅನುಮತಿಯನ್ನು ಕೊಟ್ಟದುದು ನ್ಯಾಯವಲ್ಲ. ಅಕ್ಕಿಯನ್ನುಪಯೋಗಿಸದೆ ಇವುಗಳನ್ನು ಮಾಡಲು ಸಾಧ್ಯವಿಲ್ಲ. ಡಿಸೆಂಬರ್ ಅಖೈರವರೆಗಾದರೂ ಇದನ್ನು ತಪ್ಪಿಸಬೇಕು. ಊಟದ ಮಂದಿರಗಳಲ್ಲಿ ಕೊಡುವ ಪಡಿತರ ಕಡಿಮೆಯಿದ್ದರೂ ೫೦೦ ಜನರಿಗಾದರೂ ಊಟವನ್ನೊದಗಿಸಿವರು. ಆಹಾರ ಅಭಾವವೆಂದು ಹೇಳುವಾಗ ಇವರಿಗೆ ಅಕ್ಕಿ ಎಲ್ಲಿ ಸಿಕ್ಕುವುದು. [illegible] ಬೆಣ್ಣೆ, ಸೌದೆ, ತರಕಾರಿ ಮುಂತಾದುವೆಲ್ಲ ಈ ಹೋಟೆಲುಗಳಿಗಾಗಿ ಮೀಸಲಾಗಿರುವುದು. ಹೊರಪ್ರಾಂತದವರು ಇಲ್ಲಿಬಂದು ಹೋಟೇಲುಗಳನ್ನಿಟ್ಟು ಹಣ ಗಳಿಸುತ್ತಾ ಹೊರಗೆ ಆ ಹಣ ಹೋಗುತ್ತಲಿರುವುದು ನಮ್ಮ ಜನರಿಗೇನು ಪ್ರಯೋಜನ ಆದ್ದರಿಂದ ಹೋಟೆಲುಗಳನ್ನು ಮುಚ್ಚಿಸಬೇಕು ಕೆಲವು ವಿದ್ಯಾರ್ಥಿನಿಲಯಗಳು ಸುಳ್ಳು ಲೆಕ್ಕಗಳನ್ನು ಕೊಡುತ್ತಾ ಹೆಚ್ಚಿಗೇ ಪ್ರಮಾಣದಲ್ಲಿ ಅಕ್ಕಿ ಮುಂತಾದುವನ್ನು ಪಡೆದು ಕಾಳಸಂತೆಯಲ್ಲಿ ಮಾರುತ್ತಲಿರುವುದನ್ನು ತಪ್ಪಿಸಬೇಕು, ಗೋಧಿಯ ಬೆಲೆಯನ್ನು ಹೆಚ್ಚಿಸಿ ಅಕ್ಕಿಯಬೆಲೆಯು ಮೊದಲಿದ್ದಂತೆಯೇ ಇರಬೇಕೆಂದು ತಿಳಿಸಿದರು.

ಡಾ|| ಡೇವಿಡ್‌ರವರು ಮಾತನಾಡುತ್ತಾ ಹೋಟೆಲುಗಳನ್ನು ಸಂಪೂರ್ಣವಾಗಿ ಮುಚ್ಚಿಸಬೇಕು ಇಲ್ಲವಾದರೆ ಒಂದು ದಿನ ಬಿಟ್ಟು ಒಂದು ದಿನ ನಡೆಯುವಂತೆ ಏರ್ಪಡಿಸಬೇಕೆಂದರು.

(ಮೊದಲನೆ ಪುಟ ನೋಡಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

ರಘುಲಾಲ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೧೯—೮—೧೯೫೦ ನೇ ಶನಿವಾರ | ಸಂಚಿಕೆ ೫

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

★ ೧,೭೦,೦೦೦ ಟನ್ ಬರ್ಮಾ ಅಕ್ಕಿ ಭಾರತಕ್ಕೆ

ಒಂದು ಟನ್ನಿಗೆ ೬೦೦ ರೂ. ಗಳಂತೆ ೧,೭೦,೦೦೦ ಟನ್ನು ಅಕ್ಕಿಯನ್ನು ಭಾರತವು ಬರ್ಮಾದಿಂದಕೊಳ್ಳಲು ಏರ್ಪಾಡಾಗಿದೆ.

ದೊಡ್ಡಬಳ್ಳಾಪುರ ಪೌರಸಭೆ

ದೊಡ್ಡಬಳ್ಳಾಪುರ ಟೌನ್ ಪೌರಸಭೆಗೆ ಶ್ರೀ. ಎಂ. ನಂಜುಂಡಯ್ಯನವರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಆಟೋ ರಿಕ್ಷಾ

ಬೆಂಗಳೂರು ಕಾರ್ಪೊರೇಷನ್ ಸರಹದ್ದಿನಲ್ಲಿ ಓಡಾಡುವ ಆಟೋ ರಿಕ್ಷಾ (೩ ಜನರು ಕೂಡುವ) ದರವನ್ನು ಸರ್ಕಾರದವರು ನಿಗದಿಮಾಡಿರುವರು.
ಮೊದಲನೆ ಮೈಲಿ: ೪ ಆಣೆ, ಅನಂತರ ಮೈಲಿಗೆ ಒಂದಾಣೆ
ವೇಟಿಂಗ್ ಛಾರ್ಜ್: ೧೫ ನಿಮಿಷಕ್ಕೆ ೩ ಆಣೆ
ಸಾಮಾನುಗಳಿಗೆ: ಮಣ ಒಂದಕ್ಕೆ ಒಂದಾಣೆ

ಆರ್ಡಿನೆನ್ಸ್

ಭಾರತದಲ್ಲಿ ಜೀವನಕ್ಕೆಬೇಕಾದ ಅಗತ್ಯ ವಸ್ತುಗಳ ಬೆಲೆಯು ಇನ್ನು ಮುಂದೆ ಹೆಚ್ಚದಂತೆ ಮತ್ತು ಈಗಿರುವ ಬೆಲೆ ಕ್ರಮವಾಗಿ ಕಡಿಮೆಯಾಗುವಂತೆ ಮಾಡಲು ಭಾರತ ಸರ್ಕಾರವು ಒಂದು ಆರ್ಡಿನೆನ್ಸ್ ಹೊರಡಿಸಲಿದೆ.

ಅರ್ಜಿ ನಿರಾಕರಣೆ

:ಶ್ರೀ ಪುಟ್ಟರಾಜೆ ಅರಸಿನವರು ತಮಗೆ ಬರಬೇಕಾದ ಸಂಬಳಕೊಡುವಂತೆಸರ್ಕಾರಕ್ಕೆ ಒಂದು 'ಮ್ಯಾಂಡಮಸ್ ರಿಟ್' ಕೊಡಬೇಕೆಂದು ಪ್ರಾರ್ಥಿಸಿ ಹೈಕೋರ್ಟಿನಲ್ಲಿ ಹಾಕಿದ್ದ ಅರ್ಜಿಯನ್ನು ಜಸ್ಟಿಸ್ ಆರ್. ವೆಂಕಟರಾಮಯ್ಯ ಮತ್ತು ಜಸ್ಟಿಸ್ ಟಿ.ಎಸ್. ಮಲ್ಲಪ್ಪನವರು ತಿರಸ್ಕರಿಸಿದ್ದಾರೆ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಅವಕಾಶ ಕೊಡಲಾಗಿದೆ.

ಕೋಮುವಾರು ನೀತಿ

ಸರ್ಕಾರದ ಕಾರ್ಯ ನೀತಿಯಲ್ಲಿರುವ ಜಾತಿ, ಮತ ಭೇಧಗಳು ಸಂಪೂರ್ಣವಾಗಿ ಒಡೆದು ಹೋಗಬೇಕೆಂಬ ಶ್ರೀ ದಿವಾಕರ ಕಮಿಟಿಯು ಕೇಂದ್ರಕ್ಕೆ ಒಪ್ಪಿಸಲಿರುವ ವರದಿಯಲ್ಲಿದೆ.

ಸರ್ಕಾರಿ ನೌಕರಿ, ಕಾಲೇಜು ಪ್ರವೇಶ ಅರ್ಜಿಗಳಲ್ಲಿ ಜಾತಿ ಮತಗಳ ನಮೂನೆಯನ್ನು ಬಿಡುವುದು.

ಸಂಸ್ಥಾನ ಸರ್ಕಾರಗಳು ನ್ಯಾಯಾಲಯ, ಪೋಲೀಸ್, ಆಸ್ಪತ್ರೆ, ಜೈಲು ಇತ್ಯಾದಿಗಳಲ್ಲಿರುವ ಫಾರಂನಲ್ಲಿ ಜಾತಿಮತ ನಮೂದಿಸುವುದನ್ನು ತಪ್ಪಿಸುವುದು.

ಶಾಲಾಕಾಲೇಜುಗಳಿಗೆ ಪ್ರವೇಶಾವಕಾಶವನ್ನು ಯೋಗ್ಯತೆಯ ಆಧಾರದ ಮೇಲೆ ಕೊಡಬೇಕು. ನಿಮ್ನ ವರ್ಗ ಹಾಗೂ ಗುಡ್ಡಗಾಡಿನವರನ್ನೊಳಗೊಂಡ ಹಿಂದುಳಿದವರ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಬಹುದು-ಎಂದು ವರದಿಯಲ್ಲಿ ಶಿಫಾರಸ್ಸುಮಾಡಲಾಗಿದೆ.

ಮುಖ್ಯ ಮಂತ್ರಿಗಳ ವಿಚಾರಣೆ

ಗ್ವಾಲಿಯರ್‌ನಲ್ಲಿ ಆಗಸ್ಟ್ ೯ ರಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸಿನವರು ಗುಂಡು ಹಾರಿಸಿದ ವಿಚಾರಣೆಯನ್ನು ಮಾಡುತ್ತಲಿರುವ ವಿಶೇಷಾಧಿಕಾರಿಗಳು ಇಂದು ಮುಖ್ಯ ಮಂತ್ರಿ ಶ್ರೀ ಗೋಪೀಕೃಷ್ಣ ವಿಜಯವರ್ಗೀ, ಚೀಫ್ ಸೆಕ್ರೆಟರಿ ಲಾಲ್ ಮತ್ತು ಇತರರ ವಿಚಾರಣೆ ನಡೆಸಿದರು.

ಲೈಸೆನ್ಸ್ ಇಲ್ಲದವರಿಗೆ ಶಿಕ್ಷೆ

ರೇಡಿಯೋ ಲೈಸೆನ್ಸ್ ಇಲ್ಲದ ೩೦ ಜನರಿಗೆ ದೆಹಲಿಯಲ್ಲಿ ಶಿಕ್ಷೆಯನ್ನು ವಿಧಿಸಿದ್ದಾರೆ.

ಆದಿಜಾಂಬವಾಭಿವೃದ್ಧಿಸಮಿತಿ

ಮೈಸೂರುಆದಿಜಾಂಬವಾಭಿವೃದ್ಧಿಸಮಿತಿಯಆಶ್ರಯದಲ್ಲಿ ೧೫-೮-೫೦ ರಲ್ಲಿ ಸ್ವಾತಂತ್ರದಿನಾಚರಣೆಯು ಜಲಪುರಿಯಲ್ಲಿ ನಡೆಯಿತು. ಪೌರಸದಸ್ಯ ಶ್ರೀ ಎಚ್. ರಾಚಯ್ಯನವರು ಧ್ವಜಾರೋಹಣ ನಡೆಸಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸ್ವಾತಂತ್ರ ವಿಚಾರವಾಗಿ ಶ್ರೀಗಳಾದ ಎಚ್. ಸುಬ್ಬಯ್ಯ ಮತ್ತು ಎ ಪುಟ್ಟರಂಗಯ್ಯನವರು ಭಾಷಣಮಾಡಿದರು.

ಆಜ್ಞೋಲ್ಲಂಘನೆ

ಬೊಂಬಾಯಿನಲ್ಲಿ ಕಾರ್ಮಿಕರ ಮುಷ್ಕರದ ಫಲವಾಗಿ ಪೋಲೀಸ್ ಕಮೀಷನರು ಜಾರಿಮಾಡಿರುವ ೧೪೪ ನೇಸೆಕ್ಷನ್ನು ಎದುರಿಸಿ ಲಾಲ್‌ಬಾಗ್, ಭಾಯಿವಾಡ, ಮತ್ತು ಫರ್ಗ್ಯುಸನ್ ರೋಡ್ ಪ್ರದೇಶದಲ್ಲಿ ಈ ದಿನಗಳಲ್ಲಿ ಸೋಷಿಯಲಿಸ್ಟ್ ಮಿಲ್ ಮಜದೂರ್ ಸಭೆಯವರು ಆಜ್ಞೆಯನ್ನು ಉಲ್ಲಂಘಿಸಿದರೆಂದು ತಿಳಿದು ಬಂದಿದೆ.

ನಿರಾಶ್ರಿತರಿಗೆ

ಮೈಸೂರು ಸಂಸ್ಥಾನಕ್ಕೆ ಬಂದಿರುವ ನಿರಾಶ್ರಿತರಿಗಾಗಿ ಮಂಜೂರಾಗಿರುವ ೩೫ ಲಕ್ಷ ರೂಪಾಯಿಗಳ ಪೈಕಿ ೧ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ, ಶಿವಮೊಗ್ಗ ಜಿಲ್ಲೆಯಲ್ಲಿ ೮ ಸಾವಿರ ಎಕರೆಗಳ ಜಮೀನನ್ನು ಅವರಿಗೆ ಕೊಡಲು ಮೈಸೂರು ಶ್ರೀ ರಾಮಕೃಷ್ಣಾಶ್ರಮದ ಶ್ರೀ ಶಾಂಭವಾನಂದರವರು ತಕ್ಕ ಏರ್ಪಾಡು ಮಾಡಿರುವರು.

ಕಾಂಗ್ರೆಸ್ ಅಧಿವೇಶನ

ನಾಸಿಕದಲ್ಲಿ ಕಾಂಗ್ರೆಸ್ ಅಧಿವೇಶನವು ಬಹಿರಂಗವಾಗಿ ನಡೆಯುವುದು. ಆದರೆ ಸ್ಥಳಾಭಾವದಿಂದ ೧೫,೦೦೦ ಜನರಿಗೆ ಮಾತ್ರ ಸ್ಥಳವೊದಗಿಸಲಾಗುತ್ತೆ. ಕೆಲವು ಕಾಂಗ್ರೆಸ್ ಕೆಲಸಗಾರರಿಗೆ ಮಾತ್ರ ಸ್ಥಳವನ್ನು ಮೀಸಲಾಗಿಡಲಾಗುವುದು. ಹೊರಗಿನವರು ಸ್ವಾಗತ ಸಮಿತಿ ಸದಸ್ಯರಾಗಿ ಅಧಿವೇಶನಕ್ಕೆ ಬರಬಹುದು. ಸ್ವಾಗತಸಮಿತಿ ಸದಸ್ಯತ್ವಕ್ಕೆ ಚಂದ ನಾಲ್ಕು ರೀತಿಯನೆ. ೧೦೦೦ ರೂ, ೫೦೦ ರೂ ೨,೫೦೧ ರೂ ೧೦೦ ರೂ.

ಕೈಗೆ ಉಂಗುರ ಯೋಧರಿಗಲ್ಲ

ಭಾರತ ಸೈನ್ಯಾಧಿಕಾರಿಯೊಬ್ಬರು ಸಂಕೇತ ಉಂಗುರಗಳನ್ನು ವಿನಹ ರತ್ನ ಖಚಿತ ಉಂಗುರಗಳ. ಹಾಕಿಕೊಳ್ಳುವುದು ಸೈನಿಕರಿಗೆ ಯೋಗ್ಯವಲ್ಲ ಎಂದು ಹೇಳಿರುವರು.

ಹೊಟ್ಟೆಗಿಲ್ಲದೆ ಆತ್ಮಹತ್ಯೆ

ಸ್ವಾತಂತ್ರ ಸಮಾರಂಭದ ದಿನ ಕಾಸರಗೋಡು ತಾಲ್ಲೂಕಿನ ಹೊಸದುರ್ಗ ಜಿಲ್ಲೆಯಲ್ಲಿ ಡೆಪ್ಯುಟಿ ತಹಸಿಲ್ದಾರ್ ಆಫೀಸಿನ ಜವಾನನಾಗಿದ್ದ ದಾಸನ್ ಎಂಬುವನ ವಿಧವೆ ತನ್ನ ಮಕ್ಕಳನ್ನು ಭಾವಿಗೆ ಹಾಕಿ ತಾನೂ ಆತ್ಮಹತ್ಯ ಮಾಡಿಕೊಂಡಳು ಎಂದು ವರದಿಯಾಗಿದೆ. ಆಕೆಗೆ ಊಟಕ್ಕೆ ಮಾರ್ಗವಿಲ್ಲದ್ದೇ ಇದಕ್ಕೆ ಕಾರಣ.

ರೇಡಿಯೋ

೩೧೦ ಮೀಟರು ೪೮-೪೬ ಮೀಟರು

೭-೦ ಉದಯಗಾನ ೭-೫ ಚಿತ್ರ ಸಂಗೀತ ೭-೩೫ ಗಿಟಾರ್ ೭-೪೫ ಕನ್ನಡದಲ್ಲಿ ಸುದ್ದಿ ೮-೧೫ ಆರ್. ಕೆ. ಶ್ರೀಕಂಠನ್ ೮-೩೦ ಮುಕ್ತಾಯ.

೧-೦ ಬಾಲಜಗತ್ ೧-೩೦ ಇಂಗ್ಲೀಷಿನಲ್ಲಿ ಸುದ್ದಿ ೧-೪೦ ಹಿಂದಿಯಲ್ಲಿ ಸುದ್ದಿ ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಹಾಡುಗಳು ೨-೩೦ ಮುಕ್ತಾಯ.

೫-೩೦ ಎಸ್. ಬಿ. ಕೇಶವಮೂರ್ತಿ ೬-೦ ಇಂಗ್ಲೀಷ್ ಸುದ್ದಿ ೬-೧೦ ವಾದ್ಯಸಮ್ಮೇಳನ ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಹಿಂದಿಯಲ್ಲಿ ಸ್ಥಳೀಯ ಪ್ರಕಟನೆಗಳು ೭-೫ ಚಿತ್ರಲೋಕ ೭-೩೦ ಕರ್ನಾಟಕ ಕಲಾವೈಭವ-ಶಿಲ್ಪ, ಚಿತ್ರಕಲೆ. ೭-೪೫ ಕನ್ನಡದಲ್ಲಿ ಸುದ್ದಿ ೮ ಎ. ವಿ. ಕೃಷ್ಣಮಾಚಾರ್ (ಪಿಟೀಲು) ೯ ಇಂಗ್ಲಿಷ್ ಸುದ್ದಿ ೯-೧೫ ಹಿಂದಿ ಸುದ್ದಿ ೯-೩೦ ಸಾಮೂಹಿಕಶಾಲೆ (ನಾಟಕ) ೧೦ ಮುಕ್ತಾಯ.

ಭಾರತಕ್ಕೆ ಸಯಾಂ ಅಕ್ಕಿ

ಸಯಾಂನಿಂದ ೫೦ ಸಾವಿರ ಟನ್ ಅಕ್ಕಿ ಭಾರತಕ್ಕೆ ಸಲಿದೆ ಎಂದು ತಿಳಿದುಬರುತ್ತದೆ

ಕಾಶ್ಮೀರ ಭೂಸುಧಾರಣೆ

ಕಾಶ್ಮೀರ ಭೂಸುಧಾರಣೆಯ ಬಗ್ಗೆ ಭಾರತ ಕಾಶ್ಮೀರಗಳ ನಡುವೆ ಪೂರ್ಣ ಒಪ್ಪಂದವಾಗಿದೆ.

೫ ರೂಪಾಯಿಗೆ ಒಂದು ಮಗು

ತಿರುಮಂಗಲಂ ತಾಲ್ಲೂಕು ಕರುಮತ್ತೂರು ಕೀವಾರ್ ಜಾತಿಗೆ ಸೇರಿದ ಒಚಿಯು ಎಂಟ ಹೆಂಗಸು ತನ್ನ ೧೧ ತಿಂಗಳಿನ ಗಂಡು ಮಗುವನ್ನು ಕಡುಬಡತನಕ್ಕಾಗಿ ಒಂದು ಸೀರೆ ಮತ್ತು ೫ ರೂಪಾಯಿಗೆ ಮಾರಿದಳೆಂದು ವರದಿಯಾಗಿದೆ.

ದೆಹಲಿಗೆ ಜೈಪ್ರಕಾಶ್

ಭಾರತ ಸೋಷಿಯಲಿಸ್ಟ್ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶನಾರಾಯಣರವರು ದೆಹಲಿಗೆ ಹೋಗಿರುವರು. ಪ್ರಧಾನಿ ನೆಹರೂ ಮತ್ತು ಆಹಾರ ಸಚಿವ ಕೆ. ಎಂ. ಮುನ್ಷಿಯವರನ್ನು ಅವರು ಭೇಟಿಮಾಡುವರು.

ಸತ್ಕಾರ

ಭಾರತ ಪಾರ್ಲಿಮೆಂಟ್ ಸದಸ್ಯರೂ ಅಖಿಲ ಭಾರತ ಆಂಗ್ಲೋ ಇಂಡಿಯನ್ ಸಂಸ್ಥೆಯ ಮುಖ್ಯ ಅಧ್ಯಕ್ಷ ಶ್ರೀ ಫ್ರಾಂಕ್ ಆಂಥೋನಿಯವರಿಗೆ ೨೧-೮-೫೦ ನೇ ಸೋಮವಾರ ಮೈಸೂರು ಪೌರಸಭೆಯವರು ಸತ್ಕಾರಕೂಟವನ್ನೇರ್ಪಡಿಸಿರುವರು

ಸಾರ್ವತ್ರಿಕ ಸೇನಾ ಶಿಕ್ಷಣ

ಅಧ್ಯಕ್ಷ ಟ್ರೂಮನ್ನರು ಆಜ್ಞಾಪಿಸಿದೊಡನೆಯೇ ಕಾರ್ಯಾಚರಣೆಗೆ ಸಿದ್ಧವಾಗಿರುವಂತೆ ದೇಶಾದ್ಯಂತ ಸಾರ್ವತ್ರಿಕ ಸೇನಾ ಶಿಕ್ಷಣಕ್ಕೆ ಶಾಸನವಾಗಬೇಕೆಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿಗಳು ಒತ್ತಾಯ ಮಾಡುತ್ತಿದ್ದಾರೆ

ಉಪ ಮಂತ್ರಿಗಳು

ಶ್ರೀ ಎ. ತಿರುಮಲರಾವ್‌ರವರು ಆಹಾರ ಉಪ ಮಂತ್ರಿಗಳಾಗಿ ನೇಮಕವಾಗುವರೆಂದು ತಿಳಿದು ಬಂದಿದೆ.

ಹರಿಜನರಲ್ಲೊಬ್ಬರನ್ನು ಉಪಮಂತ್ರಿಗಳಾಗಿ ತೆಗೆದುಕೊಳ್ಳಬೇಕೆಂದು ಪ್ರಧಾನ ಮಂತ್ರಿಗಳಲ್ಲಿ ಕೆಲವರು ನಿಯೋಗ ಹೋಗಿದ್ದರು

ಅಸ್ಸಾಂ ಭೂಕಂಪ ದುರಂತ

ಮಂಗಳವಾರ ನಡೆದ ಅಸ್ಸಾಂ ಭೂಕಂಪ ದುರಂತದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಷ್ಟವು ವಿಶೇಷವಾಗಿದೆ ಕಟ್ಟಡಗಳು ಅನೇಕ ಬಿದ್ದು ಹೋಗಿವೆ ಸಂಚಾರವು ಅತಿ ಕಷ್ಟ. ರೈಲ್ವೆಯ ಲೈನುಗಳೆಲ್ಲವೂ ಉಪಯೋಗವಿಲ್ಲದಂತಾಗಿ ರೈಲ್ವೆ ಸಂಚಾರವೇ ನಿಂತು ಹೋಗಿದೆ ಪರಿಹಾರ ಕಾರ್ಯವೂ ಸಹ ಅತಿ ಕಷ್ಟವಾಗಿದೆ ಇಲ್ಲಿಯವರೆಗೆ ೨೦ ಜನ ಸತ್ತಿರುವರು. ಆಸ್ತಿಯ ನಷ್ಟ ಅನೇಕ ಕೋಟಿ ರೂಪಾಯಿಗಳು. ಅನೇಕ ಕಡೆ ಭೂಮಿಯು ೧೨ ಅಡಿ ಹಳ್ಳ ಬಿದ್ದಿದೆ ಎಂದು ವರದಿಯಾಗಿದೆ

ಅಧ್ಯಕ್ಷಸ್ಥಾನ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಈಗ ಉಮೇದುವಾರರಾಗಿ ಆಚಾರ್ಯ ಕೃಪಲಾನಿ, ಶಂಕರರಾವ್ ದೇವ್ ಮತ್ತು ಪುರುಷೋತ್ತಮದಾಸ್ ಟಾಂಡನರವರು, ಮಾತ್ರ ಸ್ಪರ್ಧಿಸಿದ್ದಾರೆ

ಶ್ರೀ ಬಿ. ಶಿವರಾವ್

ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗಾಗಿ ಪ್ರಪಂಚ ಸಂಸ್ಥೆಯು ರಚಿಸಿರುವ ವಾಚ್‌ಡಾಗ್ ಕಮಿಟಿಯ ಅಧ್ಯಕ್ಷರಾಗಿ ಭಾರತದ ಶ್ರೀ ಬಿ. ಶಿವರಾಯರು ಚುನಾಯಿತರಾಗಿದ್ದಾರೆ .

ಕಾಂಗ್ರೆಸ್ ಅಧ್ಯಕ್ಷ ಉಮೇದುವಾರಿಕೆ

ಶ್ರೀ ಎಸ್. ಕೆ. ಪಾಟೀಲ್ ಮತ್ತು ಸೇಟ್ ಗೋವಿಂದದಾಸರವರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿರುತ್ತಾರೆ

ನುಡಿಯಂತೆ ನಡೆಯಲಿಲ್ಲ

ಕೋಲಾರ ಜಿಲ್ಲೆಯ ಉಪಚುನಾವಣಾ ಪ್ರಾರಂಭ ಭಾಷಣವನ್ನು ಮಾಡುತ್ತಾ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು “ಅಧಿಕಾರ ವಹಿಸುವಾಗ ಬೆಟ್ಟದಷ್ಟು ಆಶಯಿಂದ ಇದ್ದೆವು. ನಾನಾ ಕಾರಣಗಳಿಗಾಗಿ ನಿರ್ದಿಷ್ಟ ಕಾಲದಲ್ಲಿ ಯೋಜನೆಗಳು ಪೂರೈಸಲಿಲ್ಲ ಉತ್ಸಾಹ, ಕಮ್ಮಿಯಾಗಿಲ್ಲ, ಯೋಜನಾ ಕಾರ್ಯಗಳನ್ನು ಸಾಧಿಸಿಯೇ ಸಾಧಿಸುವೆವು.” ಎಂದು ತಿಳಿಸಿದರು

ಹೋಟೆಲು ಕೆಲಸಗಾರರ ಸಂಘ

ಬೆಂಗಳೂರು ಹೋಟೇಲು ಕೆಲಸಗಾರರು ಮುಷ್ಕರ ಹೂಡಿ ನಿನ್ನೆ ಮೆರವಣಿಗೆ ಹೊರಟು ವಿಶ್ವೇಶ್ವರಪುರದಲ್ಲಿರುವ ಉಂಡ್‌ಲ್ಯಾಂಡ್ಸ್ ಹೊಟೆಲಿಗೆ ನುಗ್ಗಿ ೨-೩ ಸಾವಿರ ರೂಪಾಯಿಗಳ ನಷ್ಟವನ್ನುಂಟುಮಾಡಿರುವರು ಹೊಟೇಲಿನ ಮಾಲೀಕರ ಫಿರ್ಯಾದಿನ ಮೇಲೆ ಹೋಟೆಲು ಕೆಲಸಗಾರರ ಸಂಘದ ಸೆಕ್ರೆಟರಿ ಶ್ರೀ ಕೆಲರ್ ರಾಮಕೃಷ್ಣರಾವ್ ಮತ್ತು ೧೧ ಇತರರ ದಸ್ತಗಿರಿಯಾಯಿತು ಶ್ರೀರಾಮಕೃಷ್ಣರಾವ್‌ರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವರು.

ಉಚಿತ ವಿದ್ಯಾಭ್ಯಾಸ

ದೆಹಲಿಯಲ್ಲಿ ಹರಿಜನ ವಿದ್ಯಾರ್ಥಿಗಳಿಗೆಲ್ಲಾ ವೇತನವನ್ನು ಕೊಟ್ಟು ಉಚಿತ ವಿದ್ಯಾಭ್ಯಾಸವನ್ನು ಕೊಡಲು ತಕ್ಕ ಏರ್ಪಾಡುಗಳಾಗುತ್ತಲಿವೆ

ನರ್ಸಿಂಗ್ ಡಿಗ್ರಿ

ನಿನ್ನೆ ಮದರಾಸಿನಲ್ಲಿ ನಡೆದ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ೭ ಜನ ಸ್ತ್ರೀಯರಿಗೆ ನರ್ಸಿಂಗ್‌ನಲ್ಲಿ ಪದವಿಯನ್ನು ಕೊಟ್ಟಿರುವರು.

ಶ್ರೀ. ಸಿ ಎಸ್ ಶೇಷಾದ್ರಿ

ಪೂರ್ವಪಂಜಾಬಿಗೆ ಹೋಗಿದ್ದ ಅಸಿಸ್ಟೆಂಟ್ ಕಮಿಷನರ್ ಶ್ರೀ. ಸಿ ಎಸ್ ಶೇಷಾದ್ರಿಯವರನ್ನು ಮೈಸೂರು ಜಿಲ್ಲಾಭಿವೃದ್ಧಿ ಅಧಿಕಾರಿಗಳಾಗಿ ವರ್ಗಾಯಿಸಿದ್ದಾರೆ.

ನಗರ ಪೌರಸಭೆ

ನಗರ ಪೌರಸಭೆಗೆ ಶ್ರೀ ಎಂ. ಶಿವಲಿಂಗಪ್ಪನವರು ಉಪಾಧ್ಯಕ್ಷರಾಗಿ ಚುನಾಯಿಸಿದ್ದಾರೆ.

ಬೆಂಗಳೂರು ಜಿಲ್ಲಾ ಅಭಿವೃದ್ಧಿಸಮಿತಿ

ಬೆಂಗಳೂರು ಜಿಲ್ಲಾಭಿವೃದ್ಧಿಸಮಿತಿಯು ಈ ಕೆಳಗೆ ಕಂಡ ಸದಸ್ಯರಿಂದ ನೂತನವಾಗಿ ರಚಿತವಾಗಿದೆ.

ಶ್ರೀಗಳಾದ ಟಿ ಮಾದೇಗೌಡರು (ಅಧ್ಯಕ್ಷರು) ಗುರುವಾರೆಡ್ಡಿ, ಬೇಲೂರು ಶ್ರೀನಿವಾಸಯ್ಯಂಗಾರ್, ಎಂ. ವಿ. ಗೋಪಾಲಸ್ವಾಮಿಯ್ಯಂಗಾರ್, ಎಂ. ಜಿ. ಪದ್ಮನಾಭ, ಎಂ ಪಿ ಎಲ್. ಶಾಸ್ತ್ರಿ, ಸಿ ಕೆ ರಾಮಚಂದ್ರ, ಲೋಕಸೇವಾನಿರತ ಎಂ ಹನುಮಂತಯ್ಯ, ಪೂಜದಾಲಯ್ಯ, ಮರಿಯಪ್ಪ, (ಚನ್ನಪಟ್ಟಣ) ಮುನಿವೆಂಕಟಪ್ಪ ಮತ್ತು ಲಿಂಗಯ್ಯ.

ಪಾಂಡಿಚೆರಿಗೆ ಪಾಕಿಸ್ತಾನ್ ಅಕ್ಕಿ

ಪಾಂಡಿಚೆರಿಯಲ್ಲಿ ಅಕ್ಕಿ ಅಭಾವವುಂಟಾಗಿರುವುದರಿಂದ ಪಾಕಿಸ್ಥಾನದಿಂದ ಅಕ್ಕಿಯನ್ನು ತರಿಸಿಕೊಳ್ಳಲು ಸಂಧಾನ ನಡೆಯುತ್ತಲಿದೆ

ಜಲಸಮಾಧಿ

ಚಿತಗಾಂಗ್ ಬಳಿ ಕರ್ಣಫೂರ್ಣದಲ್ಲಿ ಪ್ರಯಾಣ ದೋಣಿಯೊಂದು ಮುಳುಗಿ [illegible] ನದಿಯ ಪಾಲಾದರು.

ರಾತ್ರಿ ಅಂಚೆ ಕಛೇರಿಗಳು

ಬೊಂಬಾಯಿ, ದೆಹಲಿ ಕಲ್ಕತ್ತ ಮತ್ತು ಮದರಾಸು ಮುಂತಾದ ಭಾರಿನಗರಗಳಲ್ಲಿ ರಾತ್ರಿಯವೇಳೆ ಕೆಲಸ ಮಾಡಲು ಅಂಚೆಕಛೇರಿಗಳನ್ನು ತೆರೆಯುವಯೋಚನೆ ಭಾರತಸರ್ಕಾರಕ್ಕಿದೆ.

ರಣಜಿತ್ ಟಾಕೀಸ್
ತಾ|| 18-8-50 ರಿಂದ 2 ವಾರ
ಎ. ವಿ. ಎಂ ರವರ ತೆಲುಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ,
* ವೈಜಯಂತಿಮಾಲ ಮುಂತಾದವರು.
ಬೆಳಗಿನ ಪ್ರದರ್ಶನ
ಶಾಕುಂತಳೆ
ವಿ. ಶಾಂತಾರಾಂ, ರವರ ಪೂರ್ತಿ ವರ್ಣರಂಜಿತ
ಹಿಂದಿ ಚಿತ್ರ.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ “ಸಮಾಚಾರ” ದಿನಪತ್ರಿಕೆಯನ್ನು ಚಂದಾದಾರರಿಗೆ ಹಂಚಿ ಚಂದಾ ವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
“ಸಮಾಚಾರ” ದಿನಪತ್ರಿಕೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

★ ಆಹಾರ ಸಮಸ್ಯೆಯು ಸಪ್ತಾಂಶ ಯೋಜನ

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೧—೮—೧೯೫೦; ಸೋಮವಾರ [ಸಂಚಿಕೆ ೩

ಅಕ್ರಮದಾಸ್ತಾನು—
ದುರ್ಲಾಭಗಳ ವಿರುದ್ಧ ಆರ್ಡಿನೆನ್ಸ್

ದೆಹಲಿಯಲ್ಲಿ ನಡೆದ ಮುಖ್ಯ ಮತ್ತು ಆಹಾರ ಸಚಿವರುಗಳ ಸಮ್ಮೇಳನದ ಎರಡು ದಿನಗಳ ಅಧಿವೇಶನದಲ್ಲಿ ಏಳು ಅಂಶಗಳ ನಿರ್ಧಾರವು ಹೊರಬಿದ್ದಿದೆ.

ಯುದ್ಧಕಾಲದಲ್ಲಿಯಿದ್ದಂತೆ ಆಹಾರ ಶೇಖರಣೆ ಮತ್ತು ಉತ್ಪತ್ತಿ, ಸಂಯುಕ್ತ ಕೇಂದ್ರೀಕೃತ ಆಹಾರ ನೀತಿಯ ನಿರ್ದೇಶ, ಸ್ವಯಂಪೂರ್ಣ ಯೋಜನೆಯ ಅನ್ವಯ, ಹತೋಟಿ ಧಾನ್ಯಗಳ ತೀವ್ರಶೇಖರಣೆ, ಎಲ್ಲಾ ಸಂಸ್ಥಾನಗಳಲ್ಲೂ ಅಕ್ರಮದಾಸ್ತಾನುಗಾರರ ಮೇಲೆ ಉಗ್ರ ಮತ್ತು ಏಕರೀತಿಯ ಕ್ರಮ, ಎಲ್ಲಾ ಸಂಸ್ಥಾನಗಳಲ್ಲಿರುವ ಆಹಾರ ಧಾನ್ಯ ಧಾರಣೆ ಹೊಂದಾಣಿಕೆ, ಪ್ರಾದೇಶಿಕ ಆಹಾರದ ಮೇಲೆ ಗಿರಣಿಗಳಿಗೆ ಕಬ್ಬಿನ ಹಂಚಿಕೆ ಇವು ನಿರ್ಧಾರದ ಮುಖ್ಯಾಂಶಗಳು.

ಮದರಾಸಿನಲ್ಲಿ ಆಹಾರ ಪರಿಸ್ಥಿತಿ

ಮದರಾಸಿನಲ್ಲಿ ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುತ್ತಲಿದೆ ಎಂದು ಮದರಾಸಿನ ಆಹಾರ ಮಂತ್ರಿಗಳು ತಿಳಿಸಿರುವರು.

ಮೈಸೂರು ರೈಲ್ವೆ ಕೆಲಸಗಾರರ ಸಂಘ

ಮೈಸೂರು ಸಂಸ್ಥಾನ ರೈಲ್ವೆ ಕೆಲಸಗಾರರ ಸಂಘದ ಸದಸ್ಯರ ಸಭೆಯು ಮೈಸೂರಿನಲ್ಲಿ, ಶ್ರೀ ಉಡ್‌ವರ್ಡ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸೆಂಟ್ರಲ್ ಕಮಿಷನ್ನಿನ ಆಧಾರದಮೇಲೆ ಇಲ್ಲಿಯ ಸಂಬಳಗಳನ್ನು ನಿಗದಿಮಾಡಲು ತಡಮಾಡುತ್ತಿರುವುದನ್ನು ಖಂಡಿಸಿ, ೪ನೆ ವರ್ಗದ ಕೆಲಸಗಾರರಿಗೆ ಮತ್ತು ಕೆಲವು ಕಾರ್ಯಗಳಿಗೆ,ಕೇಂದ್ರದಲ್ಲಿ ನಿಗದಿಯಾದ ಸಂಬಳವನ್ನು ಏಪ್ರಿಲು ೧ತಾರೀಖಿನಿಂದ ಕೊಡದೆ ಜೂಲೈ ೧ರಿಂದ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ತರಬೇಕೆಂದೂ ಸರ್ಕಾರದವರು ಏರುತ್ತಿರುವಬೆಲೆಯನ್ನು ಹತೋಟಿಗೆ ತರಬೇಕೆಂದೂ, ಅದಾಗುವ ತನಕ ಸೆಂಟ್ರಲ್ ಪೇ ಕಮಿಷನ್ನಿನ ಸ್ಕೇಲಿಗೆ ಅನುಗುಣವಾಗಿ ತುಟಿಭತ್ಯ ಹೆಚ್ಚಿಸಬೇಕೆಂದೂ. ರೈಲ್ವೆ ನೌಕರರ ಮಕ್ಕಳಿಗೆ ರಿಯಾಯಿತಿಕೊಡುವುದನ್ನ ನಿಲ್ಲಿಸಕೂಡದೆಂದೂ, ಉಳಿದ ರೈಲ್ವೆಗಳಂತೆ ಇಲ್ಲಿಯ ರೈಲ್ವೆ ಪೋಲೀಸರಿಗೆ ಜಾಸ್ತಿ ತುಟ್ಟಿಭತ್ಯ ಕೊಡಬೇಕೆಂದೂ ಸಂಘದಲ್ಲಿ ಕೆಲಸಮಾಡುವವರಿಗೆ ವರ್ಗಮಾಡುವುದು, ಕಿರುಕುಳಕೊಡುವುದು ಮುಂತಾದುವನ್ನು ತಪ್ಪಿಸಬೇಕೆಂದೂ ನಿರ್ಣಯಗಳನ್ನು ಮಾಡಿದರು.

ವರ್ಧಂತ್ಯುತ್ಸವ

ರಾಜಧಾನಿಯ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ೧೯-೮-೧೯೫೦ ರಲ್ಲಿ ರಾವ್‌ಬಹದ್ದೂರ್ ರಾಜಸೇವಾಸಕ್ತ ಶ್ರೀ ಎಂ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮಹಾರಾಜರ ವರ್ಧಂತ್ಯುತ್ಸವ ನಡೆಯಿತು.

ನೂತನ ಡೈರೆಕ್ಟರುಗಳು

ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕಿನ ಚುನಾವಣೆ ನಡೆದು ಮುಂದಿನ ಸಾಲಿಗೆ ಈ ಕೆಳಗೆ ಕಂಡವರು ಡೈರಕ್ಟರುಗಳಾಗಿ ಚುನಾಯಿತರಾಗಿದ್ದಾರೆ:--

ಶ್ರೀಯುತರುಗಳಾದ ಕೆ. ನಂದಿಬಸಪ್ಪ, ಡಿ. ಬಿ. ಕೃಷ್ಣಪ್ಪ, ಜನಾರ್ದನನಾಯ್ಡು, ಬಿ. ಎಸ್. ಸೂರ್ಯನಾರಾಯಣರಾವ್, ಚಂದ್ರಶೇಖರಗೌಡ, ಟಿ. ಗುಂಡಪ್ಪ, ಎ. ವಿ. ರಂಗರಾವ್, ಪಿಟಿ. ಕೃಷ್ಣಮೂರ್ತಿರಾವ್, ಜೌಡಯ್ಯ, ನಂಜನಗೂಡು ಶ್ರೀಕಂಠಶಾಸ್ತ್ರಿ, ಥಿಯೋಬಾಲ್ಡ್, ಗೌಸ್‌ಮೊಹಿಯುದ್ದೀನ್, ಎ. ಕೆ. ರಂಗರಾವ್ ಮತ್ತು ಮತ್ತು ಎಂ. ವಿ. ನಾರಾಯಣರಾವ್.

ಮೈಸೂರಿಗೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಬೋರ್ಡ್

ಮೈಸೂರು ಸಿವಿಲ್ ಅಧಿಕಾರಿಗಳಿಗೆ ಭೇಟಿಕೊಟ್ಟು, ಅವರಲ್ಲಿ ಕೆಲವರನ್ನು ಕೇಂದ್ರಕ್ಕೆ ತೆಗೆದುಕೊಳ್ಳುವುದನ್ನು ನಿರ್ಧರಿಸಲು ಕೇಂದ್ರದ ಸ್ಪೆಷಲ್ ರಿಕ್ರೂಟ್‌ಮೆಂಟ್ ಬೋರ್ಡ್ ಸದ್ಯದಲ್ಲೇ ಬರಲಿದೆ.

ಕೇಂದ್ರ ಸರ್ಕಾರವು ಕೆಲವು ಉನ್ನತ ಅಧಿಕಾರಸ್ಥಾನಗಳಿಗೆ ಕೆಲವು ರಾಜಮನೆತನದವರನ್ನು ನೇಮಕ ಮಾಡುವರೆಂದು ತಿಳಿಯಬರುತ್ತದೆ.

ಪೋಲಿಸು–ಕಾರ್ಮಿಕ ಘರ್ಷಣೆ

ನಿನ್ನೆ ಇಂದೂರಿನಲ್ಲಿ ಮಿಲ್ಲಿನ ೩,೦೦೦ ಕಾರ್ಮಿಕರಿಗೂ ಪೋಲಿಸಿನವರಿಗೂ ಘರ್ಷಣೆಯುಂಟಾಗಿ ಗೋಲಿಬಾರಾಯಿತು. ಅಸಿ॥ ಪೋಲಿಸ್ ಸೂಪರಿಂಟೆಂಡೆಂಟರಿಗೆ ಏಟು ಬಿದ್ದು ಮೃತರಾದರೆಂದು ವರದಿಯಾಗಿದೆ.

ರೈಲ್ವೆ ನೌಕರರಿಗೆ ತುಟ್ಟಿಭತ್ಯ

ನಿನ್ನೆ ದೆಹಲಿಯಲ್ಲಿ ನಡೆದ ರೈಲ್ವೆ ಫೆಡರೇಷನ್ನಿನ ಕಾರ್ಯಕಾರಿ ಸಮಿತಿಯಲ್ಲಿ ರೈಲ್ವೆನೌಕರರಿಗೆ ತುಟಿಭತ್ಯವನ್ನು ಹೆಚ್ಚಿಸಬೇಕೆಂದು ತೀರ್ಮಾನಿಸಿದರು.

ಉಪವಾಸ

೧೯೪೬ ರಲ್ಲಿ ಮತ್ತು ೧೯೪೭ ರಲ್ಲಿ ನಡೆದ ಗಲಭೆಗಳಿಗೆ ತುತ್ತಾದ ೫೦ ಜನ ನಿರಾಶ್ರಿತರು, ಪುನಃ ನೋಖಾಲಿಗೆ ಹೋಗುವುದಿಲ್ಲವೆಂದು ಹೇಳಿದಕ್ಕೆ ತಮಗೆ ಉಚಿತ ರೇಷನ್ನಿಲ್ಲಿಸಿರುವುದನ್ನು ಪ್ರತಿಭಟಿಸಿ ಮೊನ್ನೆಯಿಂದ ಉಪವಾಸ ಕೈಗೊಂಡಿದ್ದಾರೆ.

ರಣಜಿತ್ ಟಾಕೀಸ್
ತಾ|| 18-8-50 ರಿಂದ 2 ವಾರ
ಎ. ವಿ. ಎಂ ರವರ ತೆಲುಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ,
- ವೈಜಯಂತಿಮಾಲ ಮುಂತಾದವರು.
ಬೆಳಗಿನ ಪ್ರದರ್ಶನ
ಶಾಕುಂತಳೆ
ವಿ ಶಾಂತಾರಾಂ, ರವರ ಪೂರ್ತಿ ವರ್ಣರಂಜಿತ
ಹಿಂದಿ ಚಿತ್ರ.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ "ಸಮಾಚಾರ" ದಿನಪತ್ರಿಕೆಯನ್ನು ಚಂದಾದಾರರಿಗೆ ಹಂಚಿ ಚಂದಾ ವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ. ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
"ಸಮಾಚಾರ" ದಿನಪತ್ರಿಕೆ.

LATEST
ಬೆಂಗಳೂರು ಸ್ವ.ಸು.
೨೧ ಆಗಸ್ಟ

ಕಾಂಗ್ರೆಸ್ಸಿಗೇ ಜಯ

ಲೆಜಿಸ್ಲೆಟಿವ್ ಅಸೆಂಬ್ಲಿಯ ಉಪಚುನಾವಣೆಯು ನಿನ್ನೆ ಬಹಳ ಬಿರುಸಿನಿಂದ ನಡೆಯಿತು. ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ಉಮೇದುವಾರರಾಗಿ ನಿಂತಿದ್ದ ಮೈಸೂರು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ವಿ. ಎಸ್. ನಾರಾಯಣರಾಯರು ೨,೩೧೪ ಓಟುಗಳನ್ನು ಗಳಿಸಿ ವಿಜಯಿಗಳಾದರು. ಶ್ರೀಕಂಠೇಶ್ವರ (ಸಮತಾವಾದಿ ಪಕ್ಷ) ೧,೬೭೬, ನೀಲಗಿರಿ ಸಂಜೀವಯ್ಯ (ಸ್ವತಂತ್ರ) ೬೭೨, ಮತ್ತು ಜಿ. ವಿ. ರಾಮಾಚಾರ್ (ಹಿಂದೂ ಮಹಾಸಭೆ) ೪೮೮ ಓಟುಗಳನ್ನು ಪಡೆದು ಪರಾಜಿತರಾದರು. ಒಟ್ಟು ೫,೪೧೭ ಜನ ಓಟು ಮಾಡಿದರು. ೨೬೭ ಓಟುಗಳು ನಷ್ಟವಾದುವು. ಶ್ರೀ ಜಿ. ವಿ. ರಾಮಾಚಾರ್ಯರು ತಮ್ಮ ಠೇವಣಿಯನ್ನು ಕಳೆದುಕೊಳ್ಳಬಹುದೆಂದು ತಿಳಿಯಬರುತ್ತದೆ. ಮುನಿಸಿಪಲ್ ಕಾರ್ಪೊರೇಷನ್ ಭವನದ ಹೊರಗಡೆ ಸಾವಿರಾರು ಜನರು ಉತ್ಸಾಹದಿಂದ ಫಲಿತಾಂಶವನ್ನು ತಿಳಿಯಲು ಕಾತುರರಾಗಿ ಕಾದಿದ್ದರು. ಫಲಿತಾಂಶವು ಹೊರಬಿದ್ದೊಡನೆಯೇ ಜನರು ಕಾಂಗ್ರೆಸ್ಸಿಗೆ ಜಯಕಾರ ಮಾಡುತ್ತಾ ಶ್ರೀ ವಿ. ಎಸ್. ನಾರಾಯಣರಾಯರಿಗೆ ನೂರಾರು ಹೂಮಾಲೆಗಳನ್ನು ಅರ್ಪಿಸಿದರು.

ಭೂಕಂಪ ಅನಾಹುತ ನಿಂತಿಲ್ಲ

ಅಸ್ಸಾಮಿನಲ್ಲಿ ಇನ್ನೂ ಭೂಕಂಪವಾಗುತ್ತಲೇ ಇದೆ. ದಿಬ್ರೂಘರ್, ಶೋವಾಂಗ್ ಬಾರ್, ಬರುವಾ, ಬೋಹರ್ತ್ ಮತ್ತು ದುಪರ್‌ದುಮಾ ಊರುಗಳಲ್ಲಿ ಅನೇಕ ಮನೆಗಳು ಉರುಳಿ ನೆಲಸಮವಾಗಿರುವುವಲ್ಲದೆ ರಸ್ತೆಗಳೆಲ್ಲ ಬಿರುಕುಬಿಟ್ಟು ವಾಹನಸಂಚಾರವೇ ಇಲ್ಲದಂತಾಗಿದೆ. ಸಹಸ್ರಾರು ಜನರು ನಿರ್ಗತಿಕರಾಗಿದ್ದಾರೆ.

ಕಪ್ಪು ಕಂಪು ನೀರಿನ ಪ್ರವಾಹ

ಬ್ರಹ್ಮಪುತ್ರ ನದಿಯ ಪ್ರವಾಹವು ಉಕ್ಕಿ ಬರುತ್ತಿದೆ. ನೀರು ಕೆಸರಿನಿಂದ ಕಪ್ಪಾಗಿರುವುದಲ್ಲದೆ, ಕಂಪುವಾಸನೆ ಹೊಡೆಯುತ್ತಿದೆ. ನದಿಯಲ್ಲಿ ಮೀನುಗಳೂ ಸಹ ಇರಲು ಅಸಹ್ಯಪಟ್ಟು ನೂರಾರು ಸಂಖ್ಯೆಯಲ್ಲಿ ದಡದ ಮೇಲೆ ಹಾರಿ ಬೀಳುತ್ತಿವೆ. ಪೂರ್ವ ಟಿಬೆಟ್ಟಿನ ಭೂಗರ್ಭದಲ್ಲಿ ಭೂಕಂಪದ ಪರಿಣಾಮವಾಗಿ ಮಹತ್ವದ ಬದಲಾವಣೆ [illegible]ವುದೇ ಇದಕ್ಕೆ ಕಾರಣ.

ಮುಖ್ಯ ಮಂತ್ರಿಗಳ ಸಮ್ಮೇಳನ

ಶ್ರೀ ಕೆ. ಎಂ. ಮುನ್ಷಿಯವರ ಅಧ್ಯಕ್ಷತೆಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಪ್ರಧಾನಿ ಪಂಡಿತ ನೆಹರೂರವರು ದೇಶದಲ್ಲಿನ ಆಹಾರಾಭಾವ ಪರಿಸ್ಥಿತಿಯನ್ನು ಸುಧಾರಿಸಲು ತ್ವರಿತವಾಗಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು.

ಆದಿಲಪುರದಲ್ಲಿ ೧೨೫ ಜನರ ಬಂಧನ

ಉತ್ತರ ಪ್ರದೇಶದ ಆದಿಲಪುರದಲ್ಲಿ ೧,೧೦೦ ಎಕರೆ ರೈತರ ಜಮೀನನ್ನು ಸರ್ಕಾರವು ಯಂತ್ರ ಸಜ್ಜಿತ ಕೃಷಿಗಾಗಿ ವಶಪಡಿಸಿಕೊಂಡಿರುವುದರಿಂದ ಅಲ್ಲಿನ ರೈತರು ಸೋಷಿಯಲಿಸ್ಟ್ ಪಾರ್ಟಿಯ ನಾಯಕತ್ವದಲ್ಲಿ ಸರ್ಕಾರದ ವಿರುದ್ಧ ಸತ್ಯಾಗ್ರಹ ಹೂಡಿದ್ದರು. ಅವರ ಪೈಕಿ ೧೨೫ ಜನರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಲಾಗಿದೆ ಎಂದು ತಿಳಿದುಬಂದಿದೆ

ಹೈಕೋರ್ಟಿನಲ್ಲಿ ಅರ್ಜಿ ವಜಾ

ಮೈಸೂರು ಶಾಸನಸಭೆಯ ಉಪಚುನಾವಣೆಯನ್ನು ತಡೆಯಬೇಕೆಂದು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ನ್ಯಾಯಾಧೀಶರು ತಳ್ಳಿಹಾಕಿದರು.

ಮೈಸೂರಿನ ವಿದ್ಯಾರ್ಥಿಗೇ ಪ್ರಥಮಸ್ಥಾನ

ಕೇಂದ್ರ ಸರ್ಕಾರದ ಶಿಕ್ಷಣಶಾಖೆಯ ಡಿಪ್ಲೋಮಾ-ಇನ್-ಕಾಮರ್ಸ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಮೈಸೂರಿನ ಚಾಂಪಿಯನ್ ಮೆಟ್ರೋಪಾಲಿಟನ್ ಕಾಮರ್ಸ್ ಕಾಲೇಜಿನ ಶ್ರೀ ಬಿ ಎಂ. ನಾಯಕರೇ ಮೊದಲನೆಯವರಾಗಿದ್ದಾರೆ.

ಉಪಸಚಿವರು

ಅರ್ಥಶಾಖೆ ಮತ್ತು ಕೈಗಾರಿಕೆ ಶಾಖೆಗಳಿಗೆ ಒಬ್ಬೊಬ್ಬರಂತೆ ಇಬ್ಬರು ಉಪಸಚಿವರನ್ನು ಕೇಂದ್ರದಲ್ಲಿ ನೇಮಕಮಾಡುವರೆಂದು ತಿಳಿಯಬರುತ್ತದೆ.

ಮುಂಬೈನಲ್ಲಿ ದಸ್ತಗಿರಿ

೧೪೪ ನೇ ಸೆಕ್ಷನನ್ನು ಉಲ್ಲಂಘಿಸಿದರೆಂಬ ಅಪಾದನೆಯ ಮೇಲೆ ಬೊಂಬಾಯಿನ ಮೂರು ಮಿಲ್ಲು ಪ್ರದೇಶಗಳಲ್ಲಿ ೧೮ ಜನ ಸೋಷಿಯಲಿಸ್ಟರನ್ನು ದಸ್ತಗಿರಿ ಮಾಡಲಾಗಿದೆ.

ನಿರಾಶ್ರಿತರ ಮುಷ್ಕರ

ಕಲ್ಕತ್ತೆಯ ಬಳಿ ಇರುವ ನಿರಾಶ್ರಿತ ಶಿಬಿರದಲ್ಲಿ, ತಮ್ಮ ಕುಂದು ಕೊರತೆಗಳನ್ನು ನಿವಾರಿಸಬೇಕೆಂಬ ಕಾರಣದಿಂದ ೮೦ ಜನ ನಿರಾಶ್ರಿತರು ಉಪವಾಸ ಮುಷ್ಕರ ಹೂಡಿದ್ದಾರೆ.

ಹೋಟೇಲು ಕೆಲಸಗಾರರ ಬಂಧನ ಮತ್ತು ಬಿಡುಗಡೆ

ಬೆಂಗಳೂರಿನಲ್ಲಿ ಹೋಟೇಲು ಕೆಲಸಗಾರರು ಮುಷ್ಕರ ಹೂಡಿದ್ದ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿಯನ್ನೂ ಮತ್ತು ೧೦ ಕೆಲಸಗಾರರನ್ನು ಬಂಧಿಸಲಾಗಿತ್ತು. ಕಾರ್ಯದರ್ಶಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಪಾಕ್ ಜಮಾಯತ್ ಪ್ರಮುಖರ ದಸ್ತಗಿರಿ

ಪಾಕೀಸ್ಥಾನದಲ್ಲಿನ ಜಮಾಯತ್-ಉಲ್-ಉಲೇಮಾದ ಅಧ್ಯಕ್ಷರಾದ ಮೌಲಾನ ಅಬ್ದುಲ್ ಹಮೀದ್ ಬಾದೋನಿಯವರನ್ನು ಕರಾಚಿಯಲ್ಲಿ ಪಾಕಿಸ್ಥಾನ ಸರಕಾರವು ಬಂಧಿಸಿದೆ.

ಶ್ರೀ ಆಚಾರ್ಯ ಜೆ. ಬಿ. ಕೃಪಲಾನಿ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷತೆಗೆ ಸ್ಪರ್ಧಿಸಿರುವ ಮೂವರಲ್ಲಿ ಒಬ್ಬರಾದ ಶ್ರೀ ಆಚಾರ್ಯ ಜೆ. ಬಿ. ಕೃಪಲಾನಿಯವರು ಬಹಿರಂಗವಾಗಿ "ಕಳೆದ ವರ್ಷ ನಾನು ಅಧ್ಯಕ್ಷಸ್ಥಾನದಿಂದ ನಿವೃತ್ತನಾದುದು ನಾಯಕರ ಇಚ್ಛೆಯಂತೆಯೇ ವಿನಹ ಜವಾಬ್ದಾರಿ ಹೊರಲು ಹೆದರಿಕೊಂಡಲ್ಲ. ಸಾಮಾನ್ಯ ಪರಿಸ್ಥಿತಿಯಲ್ಲಿ ಈ ಗೌರವ ಸ್ಥಾನಕ್ಕೆ ಆಶಿಸುವ ಇಚ್ಛೆ ನನಗಿರಲಿಲ್ಲ. ಆದರೆ ಇಂದು ಕಾಂಗ್ರೆಸ್ ಅವನತಿದಾರಿ ಹಿಡಿದಿದೆ. ಈ ದಾರಿಯನ್ನು ತಡೆಗಟ್ಟಲು ಯತ್ನಿಸುವುದು ಪ್ರತಿಕಾಂಗ್ರೆಸ್ಸಿಗನ ಧರ್ಮ. ಸಂಸ್ಥೆಯಲ್ಲಿ ಮತ್ತೆ ಕೆಲವು ಕಾಲವಾದರೂ ಚೇತನ ತುಂಬಬಹುದೆಂಬ ಅಭಿಪ್ರಾಯವು ನನ್ನ ಕೆಲವು ಮಿತ್ರರದು.' ಎಂದು ನುಡಿದಿದ್ದಾರೆ.

೧೫೦ ಗ್ರಾಮಗಳಲ್ಲಿ ಪ್ರವಾಹ

ಗಂಗಾನದಿಯ ಪ್ರವಾಹ ಒತ್ತಡದಿಂದ ಗಂಗೆಯ ಉಪನದಿಯಾದ ಗೋಗ್ರಾ ನದಿಯಲ್ಲಿ ಭಾರಿ ಪ್ರವಾಹ ಉಂಟಾಗಿದೆ. ಇದರಿಂದ ಪಾಸರ್, ಬರಿಯಾಪೂರ್, ದವೇಲ್‌ಗಂಜ್, ಚಾಪ್ರಾ ಮತ್ತು ಠಾಣಾ ಜಿಲ್ಲೆಗಳಲ್ಲಿನ ೧೫೦ ಗ್ರಾಮಗಳಿಗೆ ನೀರುನುಗ್ಗಿ ಅನೇಕ ನಷ್ಟಗಳು ಸಂಭವಿಸಿವೆ.

ರೈತ ಕಾರ್ಮಿಕ ಪಕ್ಷದ ಬೆಂಬಲ

ಬೊಂಬಾಯಿನಲ್ಲಿ ಈಗ್ಗೆ ಆರು ದಿವಗಳಿಂದಲೂ ನಡೆಯುತ್ತಲಿರುವ ಒಂದು ಲಕ್ಷ ಬಟ್ಟೆಗಿರಣಿ ಕಾರ್ಮಿಕರ ಮುಷ್ಕರಕ್ಕೆ ಬೊಂಬಾಯಿನ ರೈತ-ಕಾರ್ಮಿಕರ ಪಕ್ಷವು ತನ್ನ ಪೂರ್ಣ ಬೆಂಬಲವನ್ನು ನೀಡಿದೆ.

ಚಿನ್ನದ ಗಣಿಯಲ್ಲಿ ಅಪಘಾತ

ಕೆ. ಜಿ. ಎಫ್. ಛಾಂಪಿಯನ್‌ರೀಫ್ಸ್ ಗಣಿಯಲ್ಲಿ, ಭೂಗರ್ಭದಲ್ಲಿ ಕೆಲಸಮಾಡುತ್ತಿರುವ ವೇಳೆ, ಬಂಡೆಯೊಡೆದು ಕುಸಿದುಬಿದ್ದು ಪಂಗನ್ ಎಂಬ ಕಾರ್ಮಿಕನು ಮೃತನಾದನೆಂದೂ ಮತ್ತು ಯೆಲ್ಲನ್ ಮತ್ತು ಕಣ್ಣನ್ ಎಂಬುವರಿಗೆ ತೀವ್ರಗಾಯಗಳಾಗಿವೆಯೆಂದು ತಿಳಿದುಬಂದಿದೆ.

ಬೊಂಬಾಯಿನಲ್ಲಿ ಮುಷ್ಕರ

ಬೊಂಬಾಯಿನಲ್ಲಿ ಗಿರಣಿ ಕೆಲಸಗಾರರ ಮುಷ್ಕರವು ಇನ್ನೂ ಮುಂದುವರಿಯುತ್ತಲಿದೆ. ೩ ಲಕ್ಷ ಕೆಲಸಗಾರರು ಮುಷ್ಕರಮಾಡುತ್ತಲಿರುವರು. ೬೨ ಗಿರಣಿಗಳಲ್ಲಿ, ೫೦ ಗಿರಣಿಗಳು ಕೆಲಸವಿಲ್ಲದೆ ಮುಚ್ಚಿಹೋಗಿವೆ. ೧ ಗಿರಣಿಯು ಪೂರ್ತಿ ಮತ್ತು ೧೧ ಗಿರಣಿಗಳು ಸ್ವಲ್ಪ ಕೆಲಸಮಾಡುತ್ತಲಿವೆ.

ಶ್ರೀ ತಿರುಮಲರಾವ್

ಪ್ರಧಾನ ಸಚಿವರ ಸಲಹೆ ಮೇಲೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಂ. ತಿರುಮಲರಾವ್ ಅವರನ್ನು ಕೇಂದ್ರ, ವ್ಯವಸಾಯ ಮತ್ತು ಆಹಾರ ಶಾಖೆಯ ಉಪಸಚಿವರಾಗಿ ನೇಮಕ ಮಾಡಲಾಗಿದೆ ಎಂದು ಸರ್ಕಾರಿ ಪ್ರಕಟಣೆ ಹೊರಟಿದೆ.

ರೇಡಿಯೋ

ಆಗಸ್ಟ್ ೨೨ ಮಂಗಳವಾರ

೩೧೦ ಮೀಟರು ೪೯–೪೬ ಮೀಟರು

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಚಿತ್ರಜಗತ್ ೭–೧೫ ಶ್ರೀ ಬಿ. ಕೃಷ್ಣಪ್ಪ ೭–೪೫ ಕನ್ನಡದಲ್ಲಿ ಸುದ್ದಿ ೮–೦ ಇಂಗ್ಲೀಷಿನಲ್ಲಿ ಸುದ್ದಿ ೮–೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಶ್ರೀ ಸಿ. ಎಸ್. ಶ್ರೀನಿವಾಸಮೂರ್ತಿ (ಪಿಟೀಲು) ೧-೩೦ ಇಂಗ್ಲೀಷಿನಲ್ಲಿ ಸುದ್ದಿ ೧-೪೦ ಹಿಂದಿಯಲ್ಲಿ ಸುದ್ದಿ ೧-೫೦ ರೆಕಾರ್ಡ್ ಸಂಗೀತ ೨-೦ ಬಿ. ಕೃಷ್ಣಪ್ಪ ೨-೩೦ ಮುಕ್ತಾಯ.

ಸಂಜೆ ೫-೩೦ ಶ್ರೀ ಟಿ. ನಾಗಮ್ಮ ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನ ವಿಹಾರ ೫–೩೦ ಸ್ಥಳೀಯ ಪ್ರಕಟನೆಗಳು ೬-೪೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೋ ೭-೫ ಮೈಸೂರು ಅರಮನೆ ಆರ್ಕೆಸ್ಟ್ರಾ ೭-೪೫ ಕನ್ನಡದಲ್ಲಿ ಸುದ್ದಿ ೮-೦ ಶ್ರೀ ಸಿ. ಎಸ್. ಶ್ರೀನಿವಾಸಮೂರ್ತಿ (ಪಿಟೀಲು) ೮-೩೦ ಶ್ರೀ ಟಿ. ನಾಗಮ್ಮ ೯-೦ ಇಂಗ್ಲೀಷಿನಲ್ಲಿ ಸುದ್ದಿ ೯-೧೫ ಹಿಂದಿಯಲ್ಲಿ ಸುದ್ದಿ ೯-೩೦ ಕರ್ನಾಟಕ ಸಂಗೀತ ೧೦-೦ ಮುಕ್ತಾಯ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂ

★ ಸಿರ್ಲೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

★ ಕಾಶ್ಮೀರ ಸಂಧಾನ ಮುರಿದುಬಿದ್ದಿತೇ

ಬಿಡಿ ಪತ್ರಿಕೆ ೩ ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ: ಜಿ. ಎಲ್ ಸ್ವಾಮಿ

ಸಂಪುಟ ೧] ೨೨—೮—೧೯೫೦ ನೇ ಮಂಗಳವಾರ [ಸಂಚಿಕೆ ೭

ಸರ್ ಓವನ್ ಡಿಕ್ಸನ್ ರವರು ಲೇಕ್ ಸಕ್ಸಸ್‌ಗೆ ಹಿಂತಿರುಗುವರು

ಕಾಶ್ಮೀರ ಸಮಸ್ಯೆಬಗ್ಗೆ ವಿಶ್ವಸಂಸ್ಥೆಯ ಮಧ್ಯಸ್ಥಿಕೆಗಾರರಾದ ಸರ್ ಓವನ್ ಡಿಕ್ಸನ್‌ರವರು ದೆಹಲಿಯಿಂದ ಕರಾಚಿಗೆ ಹಿಂತಿರುಗಿ ಪ್ರಧಾನಿ ಲಿಯಾಖತ್‌ರವರನ್ನು ಭೇಟಿಮಾಡಿದರು. ಕರಾಚಿಯಿಂದ ಲೇಕ್ ಸಕ್ಸೆಸ್ಸಿಗೆ ನಾಳೆ ಹಿಂತಿರುಗುವರು ಭಾರತ-ಪಾಕೀಸ್ತಾನಗಳ ನಡುವೆ ಒಪ್ಪಂದವನ್ನುಂಟುಮಾಡಲು ಮುಂದಿನ ಪ್ರಯತ್ನಗಳನ್ನೆಲ್ಲಾ ತ್ಯಜಿಸಿರುವರು. ತಮ್ಮ ಸಂಧಾನದ ವಿವರಗಳನ್ನೆಲ್ಲಾ, ವಿಶ್ವಸಂಸ್ಥೆಗೆ ಒಪ್ಪಿಸಿದ ನಂತರ, ಪ್ರಕಟಿಸುವರೆಂದು ತಿಳಿದುಬಂದಿದೆ.

ಪ್ರಪಂಚ ಸಂಸ್ಥೆಯ ಬಡ್ಜೆಟ್

ಪ್ರಪಂಚ ಸಂಸ್ಥೆಯ ಮುಂದಿನ ವರ್ಷದ ಬಡ್ಜೆಟು ೪,೩೮,೨೭,೦೦೦ ಡಾಲರುಗಳು.

ಮೈಸೂರು ಪತ್ರಿಕಾ ಸಲಹಾ ಸಮಿತಿ

ಮೈಸೂರು ಸೀಮೆ ಎಲ್ಲಾ ಪತ್ರಿಕೆಗಳ ಸಂಪಾದಕರುಗಳ ಸಭೆಯು, ಮೈಸೂರು ಪತ್ರಿಕಾ ಸಲಹಾ ಸಮಿತಿಗೆ ಸದಸ್ಯರನ್ನು ಚುನಾವಣೆ ಮಾಡಲು, ಇದೇ ಮಾಹೆ ೩೦ ನೇ ತಾರೀಖು ೫-೩೦ ಗಂಟೆಗೆ ಬೆಂಗಳೂರಿನಲ್ಲಿರುವ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದಲ್ಲಿ ನಡೆಯುವುದು.

ಶ್ರೀ ಫ್ರಾಂಕ್ ಆಂಥೋನಿ

ಅಖಿಲ ಭಾರತ ಆಂಗ್ಲೋ ಇಂಡಿಯನ್ ಸಂಘದ ಶ್ರೀ ಫ್ರಾಂಕ್ ಆಂಥೋನಿಯವರನ್ನು ರಾಜಧಾನಿಯ ಪುರಸಭೆಯವರು ನಿನ್ನೆ ಸಂಜೆ ಪುರಕಛೇರಿಯಲ್ಲಿ ಸತ್ಕರಿಸಿದರು.

ತೆರಿಗೆ ಇಲ್ಲ

ಮನೆಯಲ್ಲಿ ಮತ್ತು ನೀರಾವರಿ ಕೆಲಸಗಳಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಯ ಮೇಲೆ ತೆರಿಗೆ ವಿಧಿಸುವುದಿಲ್ಲವೆಂದು ಮೈಸೂರು ಸರ್ಕಾರ ಆಜ್ಞೆ ಹೊರಡಿಸಿದೆ.

ಆರಂಭೋತ್ಸವ

ಇದೇ ಮಾಹೆ ೨೮ ನೇ ತಾ|| ಬೆಳಿಗ್ಗೆ ೯ ಗಂಟೆಗೆ ಮೈಸೂರಿನ ರಾಜಪ್ರಮುಖರು ಬೆಂಗಳೂರಿನಲ್ಲಿ ದಾಸಪ್ಪ ಹೆರಿಗೆ ಆಸ್ಪತ್ರೆಯ ಆರಂಭೋತ್ಸವವನ್ನು ನೆರವೇರಿಸುವರು.

ದೆಹಲಿಗೆ ಆರೋಗ್ಯ ಸಚಿವರು

ಮೈಸೂರು ಆರೋಗ್ಯ ಸಚಿವರಾದ ಶ್ರೀ ಸಿದ್ದಲಿಂಗಯ್ಯನವರು ದೆಹಲಿಯಲ್ಲಿ ನಡೆಯುವ ಆರೋಗ್ಯ ಶಾಖಾ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಇದೇ ಮಾಹೆ ೩೦ ನೇ ತಾರೀಖು ದೆಹಲಿಗೆ ಪ್ರಯಾಣ ಮಾಡುವರು ಅಲ್ಲಿ ಅವರು ಒಂದು ವಾರವಿರುವರು.

ರೇಡಿಯೋ ಭಾಷಣ

ಪ್ರಧಾನಿ ಪಂಡಿತ ನೆಹರೂರವರು ಇಂದು ರಾತ್ರಿ -೩೦ ಗಂಟೆಗೆ ಆಹಾರ ವಿಷಯದಲ್ಲಿ, ಇಂಗ್ಲೀಷಿನಲ್ಲಿ ಮತ್ತು ಹಿಂದಿಯಲ್ಲಿ ಡೆಲ್ಲಿಯಿಂದ ರೇಡಿಯೋ ಭಾಷಣ ಮಾಡುವರು.

ವಿಮಾನದಿಂದ ಆಹಾರ

ಭೂಕಂಪಕ್ಕೆ ಒಳಗಾಗಿರುವ ಅಸ್ಸಾಂನ ಅನೇಕ ಪ್ರದೇಶಗಳಿಗೆ ವಿಮಾನದಲ್ಲಿ ಆಹಾರವನ್ನು ತೆಗೆದುಕೊಂಡು ಹೋಗಿ ಆಕಾಶದಿಂದಲೇ ಕೆಳಕ್ಕೆ ಹಾಕುತ್ತಲಿರುವರು.

ಬೊಂಬಾಯಿನ ಗಿರಣಿ ಮುಷ್ಕರ

ಬೊಂಬಾಯಿನಲ್ಲಿ ಗಿರಣಿ ಕೆಲಸಗಾರರ ಮುಷ್ಕರವು ಮುಂದುವರಿಯುತ್ತಲಿದೆ. ಈಗಾಗಲೇ ೬೨ ಗಿರಣಿಗಳಲ್ಲಿ ೫೯ ಮುಚ್ಚಿವೆ. ಸುಮಾರು ಶೇ|| ೯೫ ರಷ್ಟು ಕೆಲಸಗಾರರು ಮುಷ್ಕರ ಹೂಡಿರುವರು. ಈ ಮುಷ್ಕರವು ನ್ಯಾಯಬದ್ಧವಲ್ಲ ಮತ್ತು ತಾವು ಅದಕ್ಕೆ ಪ್ರವೇಶಿಸಿದರೆ ಪ್ರಯೋಜನವಿಲ್ಲವೆಂದು ಬೊಂಬಾಯಿನ ಸರ್ಕಾರ ಮಧ್ಯಸ್ಥಿಕೆಗೆ ಬರಲು ನಿರಾಕರಿಸಿದೆ.

ಹೊಡೆದಾಟ

ಪಶ್ಚಿಮ ಪಂಜಾಬಿನ ಮುಸ್ಲಿಂ ಲೀಗ್ ಅಧ್ಯಕ್ಷರಾಗಿ ಅಬ್ದುಲ್ ಅಮೀದ್‌ರವರು ಚುನಾಯಿತರಾದುದನ್ನು ಪ್ರತಿಭಟಿಸಿ ಗಲಭೆಯಾಗಿ ಹೊಡೆದಾಟ ನಡೆಯಿತು. ಮುಸ್ಲಿಂಲೀಗ್ ನ್ಯಾಷನಲ್ ಗಾರ್ಡಿನವರು ಪರಿಸ್ಥಿತಿಯನ್ನು ತಹಬಂದಿಗೆ ತಂದರು.

ಕಾಂಗ್ರೆಸ್ ಅಧ್ಯಕ್ಷ ಸ್ಥಾನ

ಭಾರತ ಕಾಂಗ್ರೆಸ್ ಅಧ್ಯಕ್ಷರು ಇನ್ನು ಮುಂದೆ ೩ ವರ್ಷಕಾಲ ತಮ್ಮ ಸ್ಥಾನದಲ್ಲಿರಬೇಕೆಂದು ಕೆಲವರ ಅಭಿಪ್ರಾಯವು ಹೊರಬಿದ್ದಿದೆ. ಕಾಂಗ್ರೆಸ್ ನಿಬಂಧನೆಯಲ್ಲಿ ಇದು ನಮೂದಿಸಿಲ್ಲವಾಗಿ ನಾಸಿಕದಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನದಲ್ಲಿ ಇದು ತೀರ್ಮಾನವಾಗುವುದೆಂದು ತಿಳಿಯಬರುತ್ತದೆ.

ಸಜಾ ಮತ್ತು ಜುಲ್ಮಾನೆ

೪೬ ಬೇಲು ಮಿಲ್ಲು ಬಟ್ಟೆಯನ್ನು ಕೈ ಮಗ್ಗಬಟ್ಟೆಯೆಂದು ಹೇಳಿ ಶ್ರೀನಗರಕ್ಕೆ ವಿಮಾನದಲ್ಲಿ ಕಳುಹಿಸಲು ಪ್ರಯತ್ನಿಸಿದ, ಅಮೃತಸರದ ಬಟ್ಟೆ ವ್ಯಾಪಾರಿ ಚುನ್ನೀಲಾಲ್ ಎಂಬುವನಿಗೆ ೧೦,೦೦೦ ರೂ ಜುಲ್ಮಾನೆ, ಎರಡು ವರ್ಷ ಕಠಿಣ ಸಜಾ ವಿಧಿಸಲಾಗಿದೆ.

ಠೇವಣಿ ಕಳೆದುಕೊಂಡರು

ನಿನ್ನೆ ಬೆಂಗಳೂರಿನಲ್ಲಿ ನಡೆದ ಶಾಸನ ಸಭೆಯ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ಶ್ರೀ ಜಿ. ವಿ. ರಾಮಾಚಾರ್ಯರು ತಮ್ಮ ಠೇವಣಿ ಮೊಬಲಗನ್ನು ಕಳೆದುಕೊಂಡರು.

ಬೆಂಗಳೂರು ಆಗಸ್ಟ್ ೨೨   ಸ್ವ. ಸು.

ಮೈಸೂರು ಕಾಂಗ್ರೆಸ್ ಅಧ್ಯಕ್ಷತೆ

ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ಭಾರತ ಕೇಂದ್ರ ಅಸೆಂಬ್ಲಿಯ ಸದಸ್ಯರೂ ಮತ್ತು ಪ್ರಮುಖ ಕಾಂಗ್ರೆಸ್ ನಾಯಕರೂ ಆದ ಶ್ರೀ ಕೆ. ಹನುಮಂತಯ್ಯನವರು ಸ್ಪರ್ಧಿಸುವರೆಂದು ಖಚಿತವಾಗಿ ತಿಳಿದುಬಂದಿದೆ.

ಎ. ಎಂ. ಸಿ. ಸಿ. ಅಧಿವೇಶನ

ಎ. ಎಂ. ಸಿ. ಸಿ. ಅಧಿವೇಶನವೂ ಮತ್ತು, ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಭೆಯೂ ಬೆಂಗಳೂರು ನಗರದಲ್ಲಿ, ಆರ್ಯ ವಿದ್ಯಾಶಾಲೆಯಲ್ಲಿ ತಾ|| ೨೯-೮-೫೦ ರಲ್ಲಿ, ಸೇರಲಿದೆ.

ಪಂಡಿತ ನೆಹರೂರವರು ಕಮ್ಯೂನಿಸ್ಟ್ ಚೀನಾಕ್ಕೆ

ಭಾರತ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರನ್ನು ಕಮ್ಯೂನಿಸ್ಟ್ ಚೀನಾಕ್ಕೆ ಭೇಟಿಕೊಡಬೇಕೆಂದು ಆಹ್ವಾನಿಸಿರುವರೆಂಬ ಸುದ್ದಿಗೆ ಆಧಾರವಿಲ್ಲವೆಂದು ತಿಳಿದುಬಂದಿದೆ.

ಪೌರಸಭಾಧ್ಯಕ್ಷರಲ್ಲಿ ನಯನಜಕ್ಷತ್ರಿಯರ ನಿಯೋಗ

ಮೈಸೂರು ಷೇವಿಂಗ್ ಸೆಲೂನ್ ಮಾಲೀಕರೆಲ್ಲರೂ, ತಮ್ಮ ಸಾಲಿಯಾನ ಕಂದಾಯವನ್ನು ಒಂದು ರೂಪಾಯಿನಿಂದ ಐದು ರೂಪಾಯಿಗೆ ಹೆಚ್ಚಿಸಿದುದನ್ನು ಪೌರಸಭಾಧ್ಯಕ್ಷರಲ್ಲಿ ಮನವಿಮಾಡಲು ಒಂದು ನಿಯೋಗ ಹೋಗಿದ್ದರು. ಪೌರಸಭಾಧ್ಯಕ್ಷರು ಅವರ ಅಹವಾಲುಗಳನ್ನು ಸಾವಧಾನದಿಂದ ಕೇಳಿ, ನಗರದಲ್ಲಿ ಪುರಸಭೆಯ ಎಲ್ಲಾ ಕಂದಾಯಗಳನ್ನೂ ಹೆಚ್ಚಿಸಿರುವುದು. ಹಾಗೆಯೇ ಷೇವಿಂಗ್ ಸೆಲೂನ್‌ಗಳ ವಿಚಾರದಲ್ಲಿಯೂ ಆಯಾ ಸೆಲೂನು ಕೊಡುತ್ತಿರುವ ಒಂದು ತಿಂಗಳ ಅಂಗಡಿ ಬಾಡಿಗೆಯಷ್ಟು ಇರಬೇಕೆಂದು ಸಲಹೆ ಬಂದಿತ್ತು. ಆದರೆ ಎಲ್ಲರಿಗೂ ಏಕರೀತಿಯಾಗಿ ಸಾಲಿಯಾನ ಐದು ರೂಪಾಯಿಗಳನ್ನು ವಿಧಿಸಲಾಗಿದೆ. ಎಂದು ಅವರಿಗೆ ಸಮಾಧಾನೋಕ್ತಿಗಳನ್ನು ಹೇಳಿದರು.

ಶ್ರೀ ಟಿ. ಸಿದ್ದಲಿಂಗಯ್ಯನವರ ಪ್ರವಾಸ

ನಾಳೆಯಿಂದ ಮೂರು ದಿನ ಆರೋಗ್ಯ ಮತ್ತು ವಿದ್ಯಾ ಸಚಿವರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರು.

ಸಮಾಚಾರ

ಮಂಗಳವಾರ ತಾ || ೨೨-೮-೫೦

ಗ್ರಾಮ ಸ್ವರಾಜ್ಯ

ಕಾಶ್ಮೀರ ಕಾಂಗ್ರೆಸ್ಸಿನ ಪ್ರಪ್ರಥಮ ನಾಯಕರಾದ ಷೇಕ್ ಮಹಮ್ಮದ್ ಅಬ್ದುಲ್ಲಾರವರ ವಿವೇಕಯುತ ನೇತೃತ್ವದಲ್ಲಿ, ಕಾಶ್ಮೀರ ಜನರು ಅಲ್ಲಿನ ನಿರಂಕುಶಪ್ರಭುತ್ವವನ್ನು ಯಶಸ್ವಿಯಾಗಿ ಎದುರಿಸಿ, ಪಾಕೀಸ್ಥಾನದ ಧಾಳಿಕೋರರನ್ನು ಬಡಿದಟ್ಟಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿದುದೂ ಮತ್ತು ಕಾಶ್ಮೀರ ಜನತೆಗೆ ಭಾರತ ರಿಪಬ್ಲಿಕ್ ಸಂಪೂರ್ಣ ಸಹಾನುಭೂತಿ ಮತ್ತು ಸಹಾಯವನ್ನು ನೀಡಿದುದೂ ಪ್ರತಿ ಭಾರತೀಯನಿಗೂ ತಿಳಿದ ವಿಷಯವೇ.

ಆಡಳಿತ ಯಂತ್ರದ ಸೂತ್ರವನ್ನು ವಹಿಸಿದ ಕೂಡಲೇ ಷೇರ್—ಇ—ಕಾಶ್ಮೀರ್ (ಕಾಶ್ಮೀರದ ಸಿಂಹ) ಅಬ್ದುಲ್ಲಾರವರ ಮಂತ್ರಿ ಮಂಡಲವು ಜನತೆಯ ಹಿತಕ್ಕಾಗಿ ಶ್ರದ್ಧೆಯಿಂದ ದುಡಿದ ನೀತಿಯ ಫಲವಾಗಿ, ಕಾಶ್ಮೀರದಲ್ಲಿ ಕಾಳಸಂತೆ ಇತ್ಯಾದಿ ಲೋಪದೋಷಗಳಳಿದುಹೋಗಿ, ಸ್ವಾತಂತ್ರ್ಯಪಥದಲ್ಲಿ ದಿನೇದಿನೇ ಮುಂದೊರೆಯುತ್ತಾ ಬರುತ್ತಲಿದೆ: ಅಂತೆಯೇ ಈಗ್ಗೆ ನಾಲ್ಕುದಿನಗಳ ಹಿಂದೆ ಕಾಶ್ಮೀರದಲ್ಲಿ ಒಂದು ನವಯುಗವೇ ಆರಂಭವಾಯಿತೆನ್ನಬಹುದು.

ಕಾಶ್ಮೀರ ಸಂಸ್ಥಾನದಲ್ಲಿ ಒಂದು ಕ್ರಾಂತಿಯುತ ಕಾನೂನನ್ನು ರಚಿಸಲಾಗಿದೆ—ಗ್ರಾಮಪಂಚಾಯಿತಿ ಬಿಲ್- ಇದು ಇಷ್ಟರಲ್ಲಿಯೇ ಕಾಶ್ಮೀರ ರಾಜ್ಯಾಂಗ ಶಾಸನದಲ್ಲಿ ಅಡಕವಾಗುವುದರಲ್ಲಿದೆ. ಈ ಕಾನೂನನ್ನನುಸರಿಸಿ ಜಮ್ಮು ಮತ್ತು ಕಾಶ್ಮೀರದ ಪ್ರತಿ ಹಳ್ಳಿ ಮತ್ತು ಹಳ್ಳಿಗಳ ಪ್ರಾದೇಶಿಕ ಗುಂಪಿಗೆ ಒಂದೊಂದು ಗ್ರಾಮ ಪಂಚಾಯಿತಿಯು, ಆಯಾ ಹಳ್ಳಿಯ ವಯಸ್ಕರೆಲ್ಲರ ಓಟಿನಿಂದ ಚುನಾಯಿತವಾಗುವುದು. ಹೀಗೆ ಹಳ್ಳಿಯ ವಯಸ್ಕ ಜನಸಾಮಾನ್ಯರಿಂದ ಚುನಾಯಿತ ಪಂಚಾಯಿತಿಗೆ ಸರ್ವಾಧಿಕಾರವಿರುವುದು. ಅಂದರೆ ಆಯಾ ಹಳ್ಳಿಯ ನ್ಯಾಯತೀರ್ಮಾನ, ಅಭಿವೃದ್ಧಿ, ಪೌರಾಡಳಿತ, ರಾಜಕೀಯಾಡಳಿತ, ಜನಹಿತಕಾರ್ಯ ವಿಚಕ್ಷಣೆ, ಮತ್ತು (ಕಾಶ್ಮೀರ ಕೇಂದ್ರ ಸರ್ಕಾರವು ಗ್ರಾಂಟು ಮೂಲಕ ಕೊಡುವ ಹಣದ ಸಹಾಯ ಒಂದೇ ಅಲ್ಲದೇ) ತನ್ನದೇ ಆದವ ಹಣವಸೂಲಿ ಕ್ರಮವನ್ನು ನಿರ್ಣಯಿಸಿ, ಜಾರಿಗೆ ತರುವ ಸಂಪೂರ್ಣ ಅಧಿಕಾರವೂ ಸಹ ಇರುತ್ತದೆ. ಇದೂ ಅಲ್ಲದೆ ಒಂದು ವರ್ಷಕ್ಕೆ, ಆಯಾ ಹಳ್ಳಿಗೆ ಅವಶ್ಯಕವಾದ ಅಂದಾಜು ಪಟ್ಟಿಯನ್ನು ತಯಾರಿಸಿ ತನ್ನದೇ ಆದ 'ಬಜೆಟ್'ನ್ನು ಆಯಾ ಹಳ್ಳಿಯವರೆಲ್ಲರ ಸಾಮಾನ್ಯ ಸಭೆ (ಜನರಲ್ ಮೀಟಿಂಗ್) ಯಲ್ಲಿ ನಿರ್ಣಯಿಸುವ ಸ್ವಾತಂತ್ರ್ಯವೂ ಪಂಚಾಯಿತಿಗೇ ಸೇರಿದೆ.

ಈ ಕಾನೂನಿನ ರಚನೆಯಿಂದ ಪ್ರತಿ ಹಳ್ಳಿಯೂ ಸ್ವತಂತ್ರವಾಗಿ ತನ್ನ ಕಾಲಿನಮೇಲೆ ತಾನೇ ನಿಂತು, ತನ್ನ ಅಭಿವೃದ್ಧಿಯನ್ನು ಸ್ವಹಸ್ತ ನಿರೂಪಿಸಿಕೊಳ್ಳುವ ಪೂರ್ಣ ಅವಕಾಶವು ಕಲ್ಪಿತವಾಗಿದೆ. ಅಲ್ಲದೆ ಪ್ರತಿ ಪಂಚಾಯಿತಿಯೂ ಮೊದಲು ತನ್ನ ಹಳ್ಳಿಯ ಅಥವಾ ಹಳ್ಳಿಯವರ ಸುಖಾಭಿವೃದ್ಧಿಗೆ ಗಮನಕೊಟ್ಟು ತನ್ಮೂಲಕ ದೇಶಾಭ್ಯುದಯಕ್ಕೆ ಸಂಪೂರ್ಣ ಸಹಕಾರ ನೀಡುವಂತಾಗಿದೆ.

ಈ ಸಂದರ್ಭದಲ್ಲಿ ನಾವು 'ಮಾದರಿ' ಮೈಸೂರಿನ ಗ್ರಾಮಪಂಚಾಯಿತಿ ಕ್ರಮವನ್ನು 'ಕಾಶ್ಮೀರ ಮಾದರಿ'ಯ ಮೇಲೆ ರಚಿಸುವುದರಿಂದ ಆಗುವ ಉಪಯುಕ್ತತೆಯನ್ನು ನೆನೆಯದೇ ಇರಲಾಗುವುದಿಲ್ಲ. ಈಗ ನಮ್ಮ ಸಂಸ್ಥಾನದಲ್ಲಿ ತಲೆದೋರಿರುವ ಆಹಾರಾಭಾವ, ಕಾಳಸಂತೆ, ಆರ್ಥಿಕ ಮತ್ತು ನೈತಿಕ ಅವನತಿಯನ್ನು ಹೋಗಲಾಡಿಸಲು ಅನೇಕ ಸಲಹೆಗಳು ಪ್ರತಿದಿನವೂ ಪತ್ರಿಕೆಗಳಲ್ಲಿ ಪತ್ರವ್ಯವಹಾರದ ಮೂಲಕವೂ, ಸಾಂಘಿಕವಾಗಿಯೂ, ವೈಯಕ್ತಿಕವಾಗಿಯೂ, ಭಾಷಣಗಳಲ್ಲಿಯೂ ಪ್ರಚುರವಾಗುತ್ತಲೇ ಇವೆ. ಆದರೆ ನಿಜವಿವೇಕಯುತವಾದ, ಕಾರ್ಯಗತವಾಗುವಂಥ ಕಾರ್ಯಕ್ರಮ ಪಟ್ಟಿಯಾವುದೂ, ಜನರ ಕಣ್ಮುಂದೆ ಕಂಡು ಬಂದಿಲ್ಲ. ಕೇವಲ ಹಳಿಯುವುದೂ ಇಲ್ಲವೇ ಕಣ್ಣೀರಿಡುವುದು ಇವೇ ಕಾಣಬರುತ್ತಲಿವೆಯೇ ವಿನಹ, ದೇಶದ ಬೆನ್ನುಮೂಳೆಯಾದ ಮತ್ತು ಇಡೀ ದೇಶಕ್ಕೇ ಅನ್ನದಾತರಾದ ರೈತರ ಅಂದರೆ ಹಳ್ಳಿಗರ ನಿಜಸ್ವಾತಂತ್ರ್ಯವನ್ನು ಕಾರ್ಯರೂಪದಲ್ಲಿ ದೊರಕಿಸಿಕೊಡುವ ಆಡಳಿತ ಪದ್ಧತಿಯು ಇನ್ನೂ ಕಾಣಬರಲಿಲ್ಲವೆಂದು ಹೇಳಬೇಕಾಗಿದೆ. ಇಂಥಹ ಪರಿಸ್ಥಿತಿಯಲ್ಲಿ, ಕಾಶ್ಮೀರದಲ್ಲಿ ರಚಿಸಿರುವ ಗ್ರಾಮಸ್ವರಾಜ್ಯ ಕಾನೂನು ನಮ್ಮ ಕಣ್ತೆರೆಯುವುದಾಗಿದೆ.

ಆ ಮಾದರಿಯನ್ನನುಸರಿಸಿ, ನಮ್ಮ ಸಂಸ್ಥಾನದಲ್ಲಿಯೂ ಪ್ರತಿ ಗ್ರಾಮಪಂಚಾಯಿತಿಯು ನಿಜವಾದ ಜನಪ್ರತಿನಿಧಿಯಾಗಿ, ಸ್ವಾತಂತ್ರ್ಯವನ್ನನುಭವಿಸಿ, ತಮ್ಮ ಹಳ್ಳಿಯ ಸರ್ವಾಡಳಿತವನ್ನೂ ತಾವೇ ನಡೆಸಿಕೊಂಡು ಹೋಗುವಂತೆ, ಚೇತನಭರಿತವಾಗುವಂತೆ ಕಾನೂನು ರಚಿಸಿದಲ್ಲಿ, ಖಂಡಿತವಾಗಿಯೂ ನಾವು ಬ್ರಿಟಿಷರನ್ನು ಹೊರದೂಡಿ ಗಳಿಸಿದ ಸ್ವಾತಂತ್ರ್ಯವು ನಿಜ ಸ್ವಾತಂತ್ರ್ಯವಾಗಿ, ಹಿಂದೆ ಭರತವರ್ಷದಲ್ಲಿ ಹಾಲು ಜೇನುತುಪ್ಪ ಹರಿಯುತ್ತಿದ್ದಂತೆ, ಹಳ್ಳಿಗಳು ಸುಖ-ಸಂಪತ್ತಿನ ನೆಲೆವೀಡಾಗಿ, ನೋಡಿದಲ್ಲೆಲ್ಲಾ ಸುಖ-ಶಾಂತಿಯು ಕಾಣುವಂತಾಗುವುದು.

ಈ ಸಂದರ್ಭದಲ್ಲಿ ಗ್ರಾಮಪಂಚಾಯಿತಿ ಪದ್ಧತಿಯು ಭಾರತದಲ್ಲಿಯೂ ಮತ್ತು ನಮ್ಮ ಮೈಸೂರಿನಲ್ಲಿಯೂ ಆರ್ಷೇಯವಾಗಿ ಬೆಳೆದುಬಂದುದೆಂಬುದನ್ನು ಜ್ಞಾಪಿಸುವುದು ಅಗತ್ಯವಾಗಿದೆ. ಹಿಂದಿನ ಕಾಲದಲ್ಲಿ "ಬಾರಾ ಬಲೂತಿ" ಪದ್ಧತಿಯು, ಪ್ರತಿ ಹಳ್ಳಿಯೂ ಸ್ವತಂತ್ರವಾಗಿಯೂ ಮತ್ತು ಸ್ವ-ಪರಿಪೂರ್ಣವಾಗಿಯೂ ಬಾಳಲು ನೆರವಾಗಿದ್ದಿತು. ಹಳ್ಳಿಯೇ ನಮ್ಮ ಜೀವನಾಡಿ. ಆದುದರಿಂದ ಗ್ರಾಮಸ್ವರಾಜ್ಯವಿಲ್ಲದ ಸ್ವಾತಂತ್ರ್ಯ ಎಂದಿಗೂ ನಿಜ ಸ್ವಾತಂತ್ರ್ಯವಾಗಲಾರದು. ಪ್ರತಿ ಹಳ್ಳಿಯಲ್ಲಿಯೂ ಗ್ರಾಮಪಂಚಾಯಿತಿಯು ಹಳ್ಳಿಗರ ನಿಜಪ್ರತಿನಿಧಿಯಾಗಿ, ಹಳ್ಳಿಗಳು ಆಯಾ ಪ್ರದೇಶದ ಪಂಚಾಯಿತಿಯೇರ್ಪಡಿಸಿಕೊಂಡು ಸಂಸ್ಥಾನದಾದ್ಯಂತ ಜಿಲ್ಲಾವಾರು ಪಂಚಾಯಿತಿ ಕೇಂದ್ರಗಳನ್ನು ರಚಿಸಿಕೊಂಡು, ಇಡೀ ಸಂಸ್ಥಾನಕ್ಕೆ ಒಮ್ಮುಖ ನೀತಿಯನ್ನನುಸರಿಸಲು, ಸಂಸ್ಥಾನ ಕೇಂದ್ರ ಪಂಚಾಯಿತಿಯನ್ನು ಚುನಾಯಿಸಿಕೊಳ್ಳುವುದಲ್ಲದೆ, ಈ ಕೇಂದ್ರೀಕೃತ ಸಂಸ್ಥೆಯ ಮೂಲಕ ಸರ್ಕಾರಕ್ಕೆ ತಮ್ಮ ಪ್ರತಿನಿಧಿಯನ್ನು ಕಳುಹಿಸಿ, ಇಡೀ ದೇಶೋನ್ನತಿಗೆ ನೇರವಾಗಿ ಸಹಾಯಕವಾಗುವಂತೆ ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸುವಂತಾಗಬೇಕು. ಆಗ ನಮ್ಮ ನಾಡು ಗ್ರಾಮ ಸ್ವರಾಜ್ಯವಾಗುವುದು; ರಾಮರಾಜ್ಯವಾಗುವುದು. ನಮ್ಮ ನೈತಿಕ ಮತ್ತು ಆರ್ಥಿಕ ಮಟ್ಟವೂ ಸಹ ಔನ್ನತ್ಯಕ್ಕೇರುವುದು.

ನಮ್ಮ ಮೈಸೂರು ಕಾಶ್ಮೀರಸಿಂಹನಾದ ಕೇಳಿಯಾದರೂ ಎಚ್ಚರಗೊಳ್ಳಲಿ.

ಗಂಗಾನದಿ ಪ್ರವಾಹ

ಗಂಗಾನದಿಯ ಪ್ರವಾಹದಿಂದ ೧೧,೦೦೦ ಎಕರೆಗಳ ಬತ್ತದ ಜಮೀನಿಗೆ ನೀರು ತುಂಬಿ ಬೆಳೆಯು ಹಾಳಾಗುತ್ತಲಿದೆ.

ಅಭಿನಂದನೆ

ಬೆಂಗಳೂರಿನ ಶಾಸನಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೆ ಜಯಗಳಿಸಿಕೊಟ್ಟ ಬೆಂಗಳೂರು ನಗರದ ಓಟರುಗಳಿಗೆ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಶಾಮರಾಜಯ್ಯಂಗಾರ್ರು ವಂದನೆಯನ್ನರ್ಪಿಸಿದ್ದಾರೆ.

ಶ್ರೀ ಕೆ. ಹನುಮಂತಯ್ಯನವರು ಡಬ್ಲಿನ್ನಿಗೆ

ಡಬ್ಲಿನ್ನಿನಲ್ಲಿ ನಡೆಯುವ ಅಂತರಾಷ್ಟ್ರೀಯ ಪಾರ್ಲಿಮೆಂಟು ಸಭೆಯಲ್ಲಿ ಭಾಗವಹಿಸಲು ಕೇಂದ್ರ ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ ಮಾವಲ್ಲಂಕರವರ ನೇತೃತ್ವದಲ್ಲಿ ಮೂರುಜನರಿಂದ ಕೂಡಿದ ಭಾರತ ನಿಯೋಗವು ಭಾಗವಹಿಸುವುದು. ಶ್ರೀ ಹನುಮಂತಯ್ಯನವರೂ ಆ ನಿಯೋಗದಲ್ಲಿದ್ದಾರೆ

ಹರಿಜನರು

ಹರಿಜನ ಕೆಲಸಗಾರರ ಸಭೆಯೊಂದು ದೆಹಲಿಯಲ್ಲಿ ನಡೆದಾಗ, ಪ್ರತ್ಯೇಕ ಸ್ಥಾನ ಮತ್ತು ಸೌಕರ್ಯಗಳು ಹರಿಜನರಿಗೆ ೨೦ ವರ್ಷ ಕಾಲವಿರಬೇಕು, ಹರಿಜನ ಸ್ತ್ರೀಯರಿಗೆ ಕೆಲವು ಸ್ಥಾನಗಳಿರಬೇಕು, ಕೇಂದ್ರದಲ್ಲಿ ಹರಿಜನರ ಒಂದು ಪ್ರತ್ಯೇಕ ಇಲಾಖೆಯಿರಬೇಕು ಮುಂತಾದ ಠರಾವುಗಳನ್ನು ಮಾಡಿದೆ.

ರೇಡಿಯೋ

ಆಗಸ್ಟ್ ೨೩ ಬುಧವಾರ

೩೧೦ ಮೀಟರು ೪೯-೪೬ ಮೀಟರು

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಚಿತ್ರವಾಣಿ ೭-೨೫ ದೇವರನಾಮ ಬಿ. ಕೆ ಪದ್ಮನಾಭರಾವ್ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಗಾನಸುಧಾ (ರಿ) ೧-೧೫ ಶಾಂತ ಮಣಿ—ಸಂಗೀತ, ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ (ಪಿಟೀಲು) ವಾದನ, ೨-೦ ವನಿತಾವಿಹಾರ—ಸ್ತ್ರೀಕಾರ್ಯಕ್ರಮ ೨-೩೦ ಮುಕ್ತಾಯ.

ಸಂಜೆ ೫-೩೦ (ಕೊಳಲು) ರಂಗಪ್ಪ ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ದ್ವಂದ್ವ ವೀಣೆ (ರಿ) ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಹಿಂದೀಕಾರ್ಯಕ್ರಮ ೭-೧೫ (ಕೊಳಲು) ರಂಗಪ್ಪ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಆರ್. ಕೆ. ಶ್ರೀಕಂಠನ್ ಸಂಗೀತ ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೧ ನಿಮ್ಮ ಮೆಚ್ಚಿನ ಹಾಡುಗಳು ೧೦-೦ ಮುಕ್ತಾಯ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರ್ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,

ಆಹಾರ ಹತೋಟಿ ತೆಗೆಯುವುದಿಲ್ಲ

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩-೮-೧೯೫೦ ನೇ ಬುಧವಾರ [ಸಂಚಿಕೆ ೮

ಧಾನ್ಯ ಶೇಖರಣೆ, ಹಂಚಿಕೆಕಾರ್ಯ ರೂಪಗೊಳ್ಳಬೇಕು.

೧೯೫೧ಕ್ಕೆ ಆಹಾರ ಸ್ವಯಂಪರಿಪೂರ್ಣತೆ— ಇದೇ ಸರ್ಕಾರದ ಧೋರಣೆ

ಪಂ। ನೆಹರು.

ಆಹ್ವಾನ

ಡಬ್ಲಿನ್‌ನಲ್ಲಿ ನಡೆಯುವ ಅಂತರರಾಷ್ಟ್ರೀಯ ಪಾರ್ಲಿಮೆಂಟ್ ಅಧಿವೇಶನಕ್ಕೆ ಭಾರತ ಪರವಾಗಿ ಹೋಗುವ ಶ್ರೀಗಳಾದ ಜಿ. ವಿ. ಮಾವಳಂಕರ್, ಕೆ. ಹನುಮಂತಯ್ಯ ಮತ್ತು ಯು. ಶ್ರೀನಿವಾಸ ಮಲ್ಲಯ್ಯರವರನ್ನು, ಅಧಿವೇಶನವು ಮುಗಿದನಂತರ ಐರ್ಲೆಂಡಿನಲ್ಲಿ ಸಂಚರಿಸಬೇಕೆಂದು ಐರಿಷ್ ಸರ್ಕಾರವು ಆಹ್ವಾನವಿತ್ತಿದೆ ಎಂದು ತಿಳಿಯಬರುತ್ತದೆ ಈ ನಿಯೋಗವು ಸೆಪ್ಟೆಂಬರ್ ಒಂದನೇ ತಾರೀಖು ಭಾರತದಿಂದ ಹೊರಡುವುದು.

ಶಾಸನಸಭೆ ಉಪಚುನಾವಣೆ

ಕೋಲಾರ ಜಿಲ್ಲೆಯಿಂದ ಶಾಸನಸಭೆಗೆ ಕಾಂಗ್ರೆಸ್ ಉಮೇದುವಾರರಿಂದ ಶ್ರೀ ಸುಬ್ಬರಾಯಶೆಟ್ಟರು ಜಯಶೀಲರಾದರು.

ಬೆಂಗಳೂರು ಜಿಲ್ಲೆಯಲ್ಲಿ ಪ್ರಜಾಪಕ್ಷದ ಉಮೇದುವಾರರಾದ ಶ್ರೀ ಚನ್ನಬೈರೇಗೌಡರು ಜಯಶೀಲರಾದರು.

LATEST

ಗೃಹನಿರ್ಮಾಣ ಸಹಕಾರ ಸಂಘ

ಮೈಸೂರು ಸಂಸ್ಥಾನಕ್ಕೆಲ್ಲಾ ಅನ್ವಯವಾಗುವಂತೆ ಒಂದು ಗೃಹನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸಲು ಇಂದು ಮಧ್ಯಾಹ್ನ ಬೆಂಗಳೂರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಸಂಸ್ಥಾನದ ಎಲ್ಲಾ ಗೃಹನಿರ್ಮಾಣ ಸಂಘಗಳ ಪ್ರತಿನಿಧಿಗಳು ಮತ್ತು ಹಣಕಾಸು ವಹಿವಾಟ ನಡೆಸುವ ಸಹಕಾರ ಸಂಘದ ಪ್ರತಿನಿಧಿಗಳೆಲ್ಲರೂ ಸೇರಿದ್ದರು. ಸಹಕಾರ ಸಚಿವ ಶ್ರಿ ಟಿ. ಮರಿಯಪ್ಪನವರು ಪ್ರಾರಂಭೋತ್ಸವ ನಡೆಸಿದರು.

ಆರೋಗ್ಯ ಸಚಿವರ ಪ್ರವಾಸ ರದ್ದು

ಆರೋಗ್ಯ ಸಚಿವರಾದ ಶ್ರಿ ಸಿದ್ದಲಿಂಗಯ್ಯನವರು ಮೈಸೂರು ಜಿಲ್ಲಾ ಪ್ರವಾಸವು ರದ್ದಾಗಿದೆಯೆಂದು ತಿಳಿದುಬಂದಿದೆ

ಕಾಂಗ್ರೆಸ್ಸಿಗೆ ಜಯ

ನ್ಯಾಯ ಸ ದು ಉಪಚುನಾವಣೆಯಲ್ಲಿ ಚಿತ್ರದುರ್ಗ ಕ್ಷೇತ್ರ ಹಾಸನಗಳೆರಡರಲ್ಲೂ ಕಾಂಗ್ರೆಸ್ಸೇ ಜಯಗಳಿ .

ದುರ್ಗದಲ್ಲಿ ಎ. ರಂಗರಾವ್ ಕಾಂಗ್ರೆಸ್ ೪,೩೪೦
ಲ್ಲ ಗೋವಿಂದರೆಡ್ಡಿ [ಸೋಷಿಯಲಿಸ್] ೩,೩೬೦
ಶಿವಲಿಂಗಪ್ಪ [ಸ್ವ.] ೬೪೧
[ಡಿಗಾಜಿಟ್ಟು ಕಳೆದುಕೊಂಡರು]
ಹಾಸನದಲ್ಲಿ ಸಿದ್ದನಂಜಪ್ಪ [ಕಾಂಗ್ರೆಸ್] ೪,೧೭೬
ಧರ್ಮಪ್ಪ [ಪ್ರಜಾಪಕ್ಷ] ೩,೧೪೦
ಕೆಟ್ಟವಾದ ಓಟುಗಳು ೫೧೪

ಖಾದಿಗೆ ಉತ್ತೇಜನವಿಲ್ಲ

ಬರ್ಕೈಲಿಯಲ್ಲಿ ಗಾಂಧಿ ಆಶ್ರಮದ ಮತ್ತು ಖಾದಿ ಭಂಡಾರದ ಆರಂಭೋತ್ಸವವನ್ನು ನೆರವೇರಿಸಿದ ಸಂದರ್ಭದಲ್ಲಿ ಆಚಾರ್ಯ ಕೃಪಲಾನಿಯವರು, ಕಾಂಗ್ರೆಸ್ಸಿಗರಲ್ಲಿ ಖಾದಿಯಲ್ಲಿನ ನಂಬಿಕೆಯು ದಿನೇದಿನೇ ಕಡಿಮೆಯಾಗುತ್ತಿರುವದನ್ನು ಕಂಡು ವಿಷಾದಿಸಿದರು. • ಮಹಾತ್ಮ ಗಾಂಧೀಜೀಯವರ ತತ್ವಗಳನ್ನು ಅನುಸರಿಸದೇ ಕೇವಲ ಬಾಹ್ಯಾಡಂಬರಕ್ಕಾಗಿಯೋ ಹಲವರು ಖಾದಿಯನ್ನು ಧರಿಸುತ್ತಿದ್ದಾರೆ. ಅನೇಕ ಕಾಳಸಂತೆಕೋರರು ಮತ್ತು ಲಾಭಬಡುಕರು ಖಾದಿಹಾಕಿಕೊಂಡು ತಾವು ದೇಶಭಕ್ತರೆಂದು ಹೇಳಿಕೊಳ್ಳುತ್ತಿದ್ದಾರೆ. ಬಾಪೂಜಿಯವರಲ್ಲಿ ನಂಬಿಕೆಯಿರುವವರೆಲ್ಲ ಖಾದಿ ಪ್ರಚಾರಕಾರ್ಯವನ್ನು ಮುಂದುವರಿಸಬೇಕು ಯಾರಿಗೆ ಬಾಪೂಜಿಯವರ ತತ್ವದಲ್ಲಿ ನಂಬಿಕೆಯಿಲ್ಲವೋ ಅಂಥವರು ಖಾದಿ ಧರಿಸಲೇಬಾರದು. ಎಲ್ಲಿಯವರೆಗೆ ರಾಷ್ಟ್ರೀಯ ಸರ್ಕಾರವು ಖಾದಿ ಮತ್ತಿತರ ಬಾಪೂಜೀಯವರ ರಚನಾತ್ಮಕ ಕಾರ್ಯದಲ್ಲಿ ಉಚಿತವಾದ ಧೋರಣೆ ಕೈಗೊಳ್ಳುವುದಿಲ್ಲವೋ, ಅಲ್ಲಿಯವರೆಗೆ ಜನಕ ಖಾದಿಯ ಪರಿಸ್ಥಿತಿ ಈಗಿರುವಂತೆಯೇ ಅಸ್ಪಷ್ಟವಾಗಿರುತ್ತದೆ' ಎಂದು ನುಡಿದರು

ಶಿಕ್ಷೆ ನ್ಯಾಯ

ತಮ್ಮ ಮಗಳ ಮದುವೆಯಲ್ಲಿ ೧೫೦ ಜನಕ್ಕೆ ಊಟ ಹಾಕಿದ ಆಪಾದನೆ ಮೇಲೆ ಅಹಮದಾಬಾದಿನಲ್ಲಿ ಶಾಂತಿಲಾಲ್ ಲಾಲುಭಾಯಿ ಯನ್ನು ಮಮನಿಗೆ ೧ ದಿವಸ ಸಾದಾಸಜ ಮತ್ತು ೫೦೦ ರೂ ಜುಲ್ಮಾನೆ ಮತ್ತು ಆ ಊಟದ ಸಾಮಾನುಗಳನ್ನು ಇಟ್ಟಿದ ನಿಯಮನೆಯು ೫ ಜನಕ್ಕೆ ೧ ದಿನ ಸಜ ಮತ್ತು ೧೦೦ ರೂ ಜುಲ್ಮಾನೆ ಹಾಕಿರುವುದು ಅತಿ ಕಡಿಮೆಯಾದ್ದರಿಂದ ಅದನ್ನು ಹೆಚ್ಚಿಸಬೇಕೆಂದು ಸರ್ಕಾರವು ಹೈಕೋರ್ಟಿಗೆ ಅರ್ಜಿಹಾಕಿದೆ.

ದೇಶದ ಆಹಾರ ಪರಿಸ್ಥಿತಿಯನ್ನು ಕುರಿತು ನಿನ್ನೆ ರಾತ್ರಿ ಪ್ರಧಾನಿ ಪಂಡಿತ ನೆಹರೂರವರು ಡೆಲ್ಲಿಯ ಆಲ್ ಇಂಡಿಯಾ ರೇಡಿಯೋ ಕೇಂದ್ರದಿಂದ ಭಾಷಣಮಾಡಿದರು. ಭಾಷಣದಲ್ಲಿ—ದೇಶದ ಪರಿಸ್ಥಿತಿಯು ಇನ್ನೂ ಉಗ್ರವಾಗುತ್ತಲಿದೆ. ತೊಂದರೆಗಳು ಇನ್ನೂ ಹೆಚ್ಚಬಹುದು. ನಮಗೆ ಬೇಕಾದಷ್ಟು ಆಹಾರವು ನಮ್ಮ ದೇಶದಲ್ಲಿದೆ. ನಾವು ಸ್ವಾವಲಂಬಿಗಳಾಗಬೇಕು. ಈಗಿನ ಆಹಾರ ಸಂಗ್ರಹಣ ಮತ್ತು ಹಂಚಿಕೆ ಕಾರ್ಯಗಳನ್ನು ರೂಪಗೊಳಿಸಬೇಕೇ: ಈಗಿನ ಹತೋಟಿಯನ್ನು ಖಂಡಿತವಾಗಿಯೂ ರದ್ದುಗೊಳಿಸುವುದಿಲ್ಲ. ಹತೋಟಿಯನ್ನು ಬಲಪಡಿಸಲಾಗುವುದು. ಅಲ್ಲದೆ ಆಹಾರ ಪರಿಸ್ಥಿತಿಯಲ್ಲಿ ಬದಲಾವಣೆ ಮಾಡಿಕೊಂಡು ಯಾವ ಆಹಾರ ಪದಾರ್ಥವು ಹೆಚ್ಚಾಗಿ ದೊರೆಯುವುದೋ ಅದನ್ನು ಜನರು ಉಪಯೋಗಿಸಬೇಕು ಈಗ ನಮಗೊದಗಿರುವ ಆಹಾರ ಅಭಾವವು ಅನಿರೀಕ್ಷಿತವಾಗಿ ದೇಶದಲ್ಲುಂಟಾಗಿರುವ ಭೀಕರ ದುರ್ಘಟನೆಗಳಿಂದ-ಪ್ರವಾಹಗಳು, ಭೂಕಂಪ ಮುಂತಾದುವುಗಳಿಂದ. ೧೯೫೧ ನೇ ವರ್ಷದ ಹೊತ್ತಿಗೆ ಆಹಾರ ಸ್ವಯಂಪೂರ್ಣತೆಯೇ ಸರ್ಕಾರದ ಈಗಿನ ಧೋರಣೆ. ಇದು ಖಂಡಿತ ಚುನಾವಣೆ ಪ್ರಚಾರವಲ್ಲ. ಇದೇ ಸರ್ಕಾರದ ಮುಖ್ಯ ಧೋರಣೆ ಆಹಾರ ಪದಾರ್ಥಗಳ ದಾಸ್ತಾನು ಮಾಡುವವರ ಮೇಲೆ ಕ್ರೂರ ಕಾರ್ಯಕ್ರಮವನ್ನು ತೆಗೆದುಕೊಂಡು ಕಠಿಣ ಶಿಕ್ಷೆಯನ್ನು ವಿಧಿಸಲಾಗುವುದು. ಭಾರತಾದ್ಯಂತ ಒಂದೇ ಆಹಾರ ರೀತಿಯನ್ನು ಅನುಸರಿಸಲಾಗುವುದು. ಪ್ರಜೆಗಳೆಲ್ಲರೂ ಸಹಕಾರದೊಡನೆ ಸರ್ಕಾರ ಈ ಆಹಾರ ಅಭಾವ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿದರು.

ಸ್ಥಳಾಂತರದವರು ಮೈಸೂರಿಗೆ

ಮೈಸೂರು ರಾಮಕೃಷ್ಣಾಶ್ರಮದವರು ಬಂಗಾಳದಲ್ಲಿ ಸ್ಥಳಾಂತರವಾದ ೫೦,೦೦೦ ಜನರಿಗೆ ಇಲ್ಲಿ ಸೌಕರ್ಯಗಳನ್ನೊದಗಿಸಲು ಏರ್ಪಾಡು ಮಾಡುತ್ತಲಿರುವರೆಂದು ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ದೆಹಲಿಯಲ್ಲಿ ತಿಳಿಸಿರುವರು.

ಡಿಕ್ಸನ್ನರ ಸಂಧಾನ ವಿಫಲ

ಸರ್ ಓವೆನ್ ಡಿಕ್ಸನ್ನರು ಇಂದು ಕರಾಚಿಯಿಂದ ಲಂಡನ್ ಮಾರ್ಗವಾಗಿ ಲೇಕ್ ಸಕ್ಸಸ್ಸಿಗೆ ಹಿಂದಿರುಗಿದರು.

ಕಾಶ್ಮೀರ ಸಮಸ್ಯೆಯಲ್ಲಿ ಅವರು ನಡೆಸಿದ ಸಂಧಾನಗಳೆಲ್ಲವೂ ವಿಫಲವಾಯಿತೆಂದು ಅವರು ಕರಾಚಿಯಲ್ಲಿ ತಿಳಿಸಿರುವರು ಲೇಕ್ ಸಕ್ಸೆಸ್ಸಿನ ವಿಶ್ವಸಂಸ್ಥೆಯಲ್ಲಿಯೂ ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

ಸರ್ ಓವೆನ್ ಡಿಕ್ಸನ್ನರು ಕರಾಚಿಯಲ್ಲಿ ನಿನ್ನೆ ಒಂದು ಹೇಳಿಕೆಯನ್ನಿತ್ತಾ

ನಾನು ಭಾರತ ಪಾಕಿಸ್ತಾನಗಳಿಗೆ ಒಪ್ಪಂದವನ್ನುಂಟುಮಾಡಲು ಅನೇಕ ರೀತಿ ಪ್ರಯತ್ನಪಟ್ಟುದುದು ಫಲಕಾರಿಯಾಗಲಿಲ್ಲ. ಭಾರತವಾಗಲೀ ಪಾಕೀಸ್ತಾನವಾಗಲೀ ಯಾವ ಸಲಹೆಯನ್ನೂ ನೀಡಲಿಲ್ಲ ನಾನೇ ಅವರಿಗೆ ಕೆಲವು ಸಲಹೆಗಳನ್ನು ನೀಡಿದೆನು.

ಪ್ರಜೆಗಳು ಎಲ್ಲಿ ಇಷ್ಟಪಟ್ಟಿರುವರೋ ಆ ಪ್ರದೇಶಗಳನ್ನು ಭೌಗೋಳಿಕ, ಆರ್ಥಿಕ ಮತ್ತಿತರ ದೃಷ್ಟಿಗಳಿಂದ ವಿಭಾಗಮಾಡಿ ಭಾರತ ಪಾಕಿಸ್ತಾನಗಳಿಗೆ ಹಂಚಬೇಕು ಇತರ ಪ್ರದೇಶಗಳಲ್ಲಿ ಪ್ಲೆಬಿಸೈಟು ನಡಿಸಬಹುದು ಎಂಬ ಸಲಹೆಯಿತ್ತೆನು ಭಾರತವು ಈ ಸಲಹೆಯನ್ನೊಪ್ಪಿತು. ಆದರೆ ಪಾಕೀಸ್ತಾನವು ಒಪ್ಪಲಿಲ್ಲ ಪುನಃ ಸಂಯುಕ್ತಾಧಿವೇಶನ ನಡೆಸುವುದರಿಂದ ಏನೂ ಪ್ರಯೋಜನವಿಲ್ಲ ಎಂದು ಹೇಳಿರುವರು.

ಆಹಾರ ಹಂಚಿಕೆ

ಆಗಸ್ಟ್ ೨೧ ನೇ ತಾರೀಖಿನ ಮೈಸೂರು ಸರ್ಕಾರಿ ಪ್ರಕಟಣೆಯು ಈ ರೀತಿ ತಿಳಿಸುತ್ತದೆ:—

೧. 'ಬಿ' ಕ್ಲಾಸ್ ರೇಷನ್ನು 'ಎ' ಕ್ಲಾಸಿಗೆ ಬದಲಾಯಿಸಬೇಕೆಂದೂ, ೨. ಗೋಧಿಯ ಬದಲು ಅಕ್ಕಿ ಮತ್ತು ರಾಗಿ, ಜೋಳವನ್ನು ಕೊಡಬೇಕೆಂದೂ, ೩. ಕಾರ್ಡಿನಲ್ಲಿರುವಷ್ಟು ಪೂರ್ತಾ ಸಣ್ಣಕ್ಕಿಯನ್ನೇ ಕೊಡಬೇಕೆಂದೂ, ೪. ಮದುವೆ, ಫಂಕ್ಷನ್ಸ್ ಇತ್ಯಾದಿ ಸಮಾರಂಭಗಳಿಗೆ ಬೇಕಾಗುವ ಧಾನ್ಯಗಳನ್ನು ಕೊಡಬೇಕೆಂದೂ ಕೇಳುವ ನೂರಾರು ಅರ್ಜಿಗಳು ರೇಷನ್ ಆಫೀಸರಿಗೂ ಮತ್ತು ಆಹಾರ ಇಲಾಖೆಯ ಡೈರೆಕ್ಟರಿಗೂ ಬರುತ್ತಲೇ ಇವೆ. ಇದುವರೆಗೂ ಸಾಧ್ಯವಾದಷ್ಟು ಈ ತೆರನಾದ ಅರ್ಜಿಗಳಿಗೆ ಗಮನಕೊಡಲಾಗುತ್ತಿತ್ತು. ಆದರೆ ಈಗಿನ ಆಹಾರ ಪರಿಸ್ಥಿತಿಯಲ್ಲಿ, ಈಗ ಖಾಲಿ [illegible] ಎರಡು ತಿಂಗಳಿಗೆ ಸಾಕಾಗುವಷ್ಟು ಮಾತ್ರ ಇರುವುದರಿಂದ, ತೀವ್ರ ಮಿತವ್ಯಯವು ಅಗತ್ಯವಾದ ಕಾರಣದಿಂದ, ಈ ಕೋರಿಕೆಗಳನ್ನು ಮನ್ನಿಸಿ ಆಹಾರ ಧಾನ್ಯಗಳನ್ನು ಕೊಡಲು ಸಾಧ್ಯವಿಲ್ಲ.

ಆದುದರಿಂದ ಈ ಲಾಗಾಯ್ತು ಗೋಧಿಗೆ ಬದಲು ಮತ್ತಿತರ ಧಾನ್ಯಗಳನ್ನು ಕೊಡುವುದನ್ನೂ ಮತ್ತು ಪೂರ್ಣವಾಗಿ ಸಣ್ಣಕ್ಕಿಯನ್ನೇ ಕೊಡುವುದನ್ನೂ, ಸಂಪೂರ್ಣವಾಗಿ ನಿಲ್ಲಿಸಲಾಗಿದೆ.

ಅಂತೆಯೇ ಸಕ್ಕರೆ ಪರಿಸ್ಥಿತಿಯೂ ಸಹ ಕಷ್ಟತರವಾಗಿದೆ. ಈಗಿರುವ ಸ್ಟಾಕು ಇನ್ನು ೪೫ ದಿನಗಳಿಗೂ ಸಾಕಾಗುವುದಿಲ್ಲ. ಆದುದರಿಂದ ಈ ಪರಿಸ್ಥಿತಿಯಲ್ಲಿ ಯಾವ ಕಾರಣದಿಂದಲೇ ಆಗಲಿ ಹೆಚ್ಚಿಗೆ ಸಕ್ಕರೆ ಕೊಡಲಾಗುವುದಿಲ್ಲ ಮತ್ತು ಹೆಚ್ಚಿಗೆ ಸಕ್ಕರೆ ಕೇಳುವ ಅರ್ಜಿಗಳನ್ನು ನಿರಾಕರಿಸಲಾಗುವುದು.

ಈಗಿನ ಆಹಾರದ ಉತ್ಕಟ ಪರಿಸ್ಥಿತಿಯನ್ನು ಗಮನಿಸಿ, ಸಾರ್ವಜನಿಕರು ಸರ್ಕಾರದ ಈ ಕಾರ್ಯಕ್ರಮದಲ್ಲಿ ತಮ್ಮ ಸಂಪೂರ್ಣ ಸಹಕಾರವಿತ್ತು ಸಹಾಯವನ್ನು ನೀಡುವರೆಂದು ನಂಬಲಾಗಿದೆ.

ಆಹಾರವಿಲ್ಲದೆ ಆರು ಜನರ ಮರಣ

ದಿಂಡಿಗಲ್ಲು ತಾಲ್ಲೂಕಿನ ಕೆಲವು ಹಳ್ಳಿಗಳ ರೇಷನ್ ಡಿಪೋಗಳಲ್ಲಿ ಕಳೆದವಾರ ಆಹಾರ ಧಾನ್ಯಗಳನ್ನು ಹಂಚದಿದ್ದುದರಿಂದ ಜನರು ಜೋಳಸರವನ್ನು ತಿನ್ನಬೇಕಾಯಿತು. ಜೋಳಸರದ ಬೇರನ್ನು ತಿಂದುದರ ಪರಿಣಾಮವಾಗಿ ಆರು ಜನರು ಸತ್ತರೆಂದು ತಿಳಿದು ಬಂದಿದೆ.

ತುಟ್ಟಿ ಭತ್ಯ ಹೆಚ್ಚಿಸಿ

ಮೈಸೂರು ನಾನ್ ಗೆಜೆಟೆಡ್ ನೌಕರರ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಕೇಂದ್ರ ಸರ್ಕಾರ ಕೊಡುತ್ತಲಿರುವಷ್ಟು ತುಟ್ಟಿ ಭತ್ಯ, ಮನೆ ಬಾಡಿಗೆ ಭತ್ಯ ಕೊಡಬೇಕೆಂದು, ಇಲಾಖೆಗಳಲ್ಲಿ ರಿಟ್ರೆಂಚ್‌ಮೆಂಟ್ ನಡೆದಾಗ ಆ ನೌಕರರಿಗೆ ಬೇರೆ ಉದ್ಯೋಗಗಳನ್ನು ಕಲ್ಪಿಸಿ ಕೊಟ್ಟು ಅವರ ಸಂಬಳ ಮತ್ತು ಸರ್ವಿಸ್ಸುಗಳಿಗೆ ಯಾವ ತೊಂದರೆಯೂ ಉಂಟಾಗದಂತೆ ಸರ್ಕಾರವು ನೋಡಿಕೊಳ್ಳಬೇಕೆಂದು ನಿರ್ಣಯವನ್ನು ಮಾಡಿತು.

ಕಾಳಸಂತೆಯ ವಿರುದ್ಧ ಪಿಕೆಟಿಂಗ್

ಕಾಳಸಂತೆಯ ವ್ಯಾಪಾರಿಗಳ ಮತ್ತು ಲಾಭಬಡುಕರ ವಿರುದ್ಧವಾಗಿ ಶಾಂತಿಯುತವಾಗಿ ಪಿಕೆಟಿಂಗ್ ನಡೆಸಬೇಕೆಂದು ಸೂರತ್ತಿನ ಸಾರ್ವಜನಿಕ ಸಭೆಯಲ್ಲಿ ನಿರ್ಣಯಿಸಿದ್ದಾರೆ.

ಉದಾರ ದಾನ

ಬೀರೂರ್ ಕಾಫಿ ಪ್ಲಾಂಟರ್ ಮತ್ತು ಗಣ್ಯವ್ಯಕ್ತಿಗಳಾದ ಶ್ರೀಗಳಾದ ಪಟ್ರೇ ಕೆ. ಚೆನ್ನವೀರಪ್ಪ ಮತ್ತು ಪಟ್ರೇ ಶಿವಪ್ಪಯ್ಯನವರು ತಮ್ಮ ತಾಯಿ ಶ್ರೀಮತಿ ಗಂಗಮ್ಮನವರ ಹೆಸರಿನಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ಕಟ್ಟಿಸಿಕೊಡಲು ೧೦,೦೦೦ ರೂಪಾಯಿಗಳನ್ನು ಉದಾರ ದಾನಮಾಡಿದ್ದಾರೆ.

ಹಾಸನಕ್ಕೆ ನೂತನ ಪಬ್ಲಿಕ್ ಪ್ರಾಸಿಕ್ಯೂಟರು

ಹಾಸನದಲ್ಲಿ ಇದುವರೆಗೂ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಶ್ರೀ ಎಚ್. ಸಿದ್ದನಂಜಪ್ಪನವರು ರಾಜೀನಾಮೆ ಕೊಟ್ಟಿದ್ದುದರಿಂದ, ಅವರ ಬದಲು ಶ್ರೀ ಎನ್. ಎಸ್. ಮುರಿಗಪ್ಪನವರನ್ನು ಸರ್ಕಾರದವರು ನೇಮಿಸಿದ್ದಾರೆ.

ಕೋಮುವಾರು ಆಜ್ಞೆ

ಕೋಮುವಾರು ಆಜ್ಞೆ ಪ್ರಕಾರ ತನಗೆ ಮದರಾಸು ಮೆಡಿಕಲ್ ಕಾಲೇಜಿಗೆ ಸೇರಲು ಅವಕಾಶ ಕೊಡದಿರುವುದು ನ್ಯಾಯಬದ್ಧವಲ್ಲವೆಂದು ಶ್ರೀ ಕೆ. ಜಿ. ಮೋಹನಭಕ್ತ ನೆಂಬ ವಿದ್ಯಾರ್ಥಿಯು ರಿಟ್‌ಆಫ್ ಮಾಂಡಮಸ್‌ಗಾಗಿ ಮದರಾಸ್ ಹೈಕೋರ್ಟಿನಲ್ಲಿ ಅರ್ಜಿಸಲ್ಲಿಸಿದ್ದಾನೆ

ರಾಷ್ಟ್ರಾಧ್ಯಕ್ಷರ ಭೇಟಿ

ಆಹಾರ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಮತ್ತು ಪ್ರೋಛಾನ್ಸಲರ್ ಶ್ರೀ ಸಿ. ಆರ್. ರೆಡ್ಡಿಯವರು ೨೦ ನೇ ತಾರೀಖು ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರನ್ನು ಭೇಟಿಮಾಡಿದರೆಂದು ತಿಳಿದುಬರುತ್ತದೆ.

ಗ್ರಾಮಾಭಿವೃದ್ಧಿ ಕಮಿಷನರು

ಮೈಸೂರು ಸಂಸ್ಥಾನ ಗ್ರಾಮಾಭಿವೃದ್ಧಿ ಕಮಿಷನರೂ ಮತ್ತು ಚೀಫ್ ಮಾರ್ಕೆಟಿಂಗ್ ಆಫೀಸರೂ ಆದ ಶ್ರೀ ಹಿರಣ್ಣಯ್ಯನವರು ಮೊನ್ನೆ ರಾಜಧಾನಿಗೆ ಬಂದು ಮೈಸೂರು ಜಿಲ್ಲಾ ಗ್ರಾಮಾಭಿವೃದ್ಧಿಯ ವಿಶೇಷ ಸಭೆಯಲ್ಲಿ ಭಾಗವಹಿಸಿ, ಗ್ರಾಮಾಭಿವೃದ್ಧಿಗಾಗಿ ಹಣ ಬೇಕೆಂದು ಕೇಳಿರುವ ೧,೧೯,೦೦೦ ರೂಪಾಯಿಗಳ ಗ್ರಾಂಟು ವಿಚಾರದಲ್ಲಿ ಚರ್ಚೆ ನಡೆಸಿದರು. ಸಂಜೆ ಮೈಸೂರು ಜಿಲ್ಲೆಯ ಮಾರ್ಕೆಟಿಂಗ್ ಸೊಸೈಟಿ ಸದಸ್ಯರಲ್ಲಿ ಮಾತು ಕತೆ ನಡೆಸಿದರು. ಪರಸ್ಪರ ಸಹಾಯ ಸಂಘದ ಇನ್ಸ್‌ಪೆಕ್ಟರುಗಳನ್ನು ಬರಮಾಡಿಕೊಂಡು ಸಂಘಗಳ ಬೆಳವಣಿಗೆಗೆ ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬ ವಿಷಯದಲ್ಲಿ ಸೂಚನೆಯನ್ನಿತ್ತರು.

ನಿನ್ನೆ ಬೆಳಗ್ಗೆ ತಾಲ್ಲೂಕಿನ ವಿವಿಧೋದ್ದೇಶ ಪರಸ್ಪರ ಸಂಘಕ್ಕೆ ಭೇಟಿಯಿತ್ತು, ಸಾಮಾನುಗಳನ್ನು ತುಂಬುವ ಕಣಜಗಳನ್ನು ಕಟ್ಟುವ ಮತ್ತು ಸಾಲಗಳ ವಿಚಾರ ಮತ್ತು ಈ ಸಂಘಗಳಲ್ಲಿ ರೇಷನ್ ಪದಾರ್ಥಗಳೇ ಅಲ್ಲದೆ ರೈತರಿಗೆ ಉಪಯುಕ್ತವಾದೆಲ್ಲಾ ಸಾಮಾನುಗಳನ್ನು ಮಾರುವ ಏರ್ಪಾಡು ಮುಂತಾದ ವಿಷಯದಲ್ಲಿ ಸಲಹೆ ಇತ್ತರು.

ರೇಡಿಯೋ

ಆಗಸ್ಟ್ ೨೪ ಗುರುವಾರ

೩೧೦ ಮೀಟರು ೪೯–೪೬ ಮೀಟರು

ಬೆಳಿಗ್ಗೆ ೭-೦ ಉದಯಗಾನ, ಕಾರ್ಯಕ್ರಮವಿವರಣೆ ೭-೫ ಜಿ. ಎನ್ ಬಾಲಸುಬ್ರಹ್ಮಣ್ಯ (ರೆ)೭-೧೫ ವಿ. ರಾಮಯ್ಯ (ಪಿಟೀಲು) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ನಾಗರಾಜಶಾಸ್ತ್ರಿ, ವರಹಾಸ್ವಾಮಿ (ದಿಲ [illegible]) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಕ್ಲಾರಿಯೋನೆಟ್ ೨-೦ ನಿಮ್ಮ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ.

ಸಂಜೆ ೫-೩೦ ವಿ. ರಾಮಯ್ಯ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಪಾಶ್ಚಿಮಾತ್ಯ ಸಂಗೀತ (ರೆ) ೬-೨೦ ಸ್ಥಳೀಯ ಪ್ರಕಟನೆಗಳು ೬-೩೦ ಗ್ರಾಮಸ್ಥರಿಗಾಗಿ, ೭-೦ ಸ್ಥಾನೀಯ ಸೂಚನಾಯೋ ೭-೫ ಚಿತ್ರ ಜಗತ್ (ರೆ) ೭-೧೫ ಎ. ಸೂರ್ಯನಾರಾಯಣರಾವ್ (ಸಂಗೀತ)೭-೪೫ ಕನ್ನಡದಲ್ಲಿ ವಾರ್ತೆ ೮-೦ ಮಲ್ಲಿಕಾರ್ಜುನಪ್ಪ (ವಚನಗಾನ) ೮-೧೫ ತಾಳವಾದ್ಯ ೮-೩೦ ಎ. ಸೂರ್ಯನಾರಾಯಣ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ೧೦-೦ ಮುಕ್ತಾಯ.

MAHARAJA'S COLLEGE CENTENARY CELEBRATION

It is proposed to celebrate the Centenary of the Maharaja's College in December next. In this connection a meeting of the old boys of the Maharaja's College will be held at 5-30 P. M. on Saturday the 26th instant in the Junior B. A. Hall of the College. The old boys of the Maharaja's College who are residing in Mysore City are requested to make it convenient to attend the meeting.

C. Narasimha Moorty,
Convenor,
Maharaja's College Centenary
Celebration, Mysore City.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಂಗರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು

★ ಸಿರ್ಹೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

★ ವರ್ತಕರಿಗೆ ಎಚ್ಚರಿಕೆ

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೧] ೨೪—೮—೧೯೫೦ ನೇ ಗುರುವಾರ [ಸಂಚಿಕೆ ೯

—ನಿತ್ಯೋಪಯುಕ್ತವಾದ ವಸ್ತುಗಳ
-ಬೆಲೆಯನ್ನು ಇಳಿಸಿ
ನಿಗದಿಮಾಡಲಾಗುವುದು

ಬೊಂಬಾಯಿನಲ್ಲಿ ಸಿವಿಲ್ ಸಪ್ಲೈ' ಮಂತ್ರಿಗಳಾದ ಶ್ರೀ ದಿನಕರ್‌ರಾವ್ ದೇಸಾಯಿಯವರು ದೇಶದಲ್ಲಿ ನಿತ್ಯ ಉಪಯುಕ್ತವಾದ ವಸ್ತುಗಳ ಬೆಲೆಯು ವಿಪರೀತವಾಗಿ ಏರಿಹೋಗುತ್ತಲಿರುವುದನ್ನು ಪತ್ರಿಕಾ ಸಮ್ಮೇಳನದಲ್ಲಿ ಪ್ರಸ್ತಾಪಿಸುತ್ತಾ, ವ್ಯಾಪಾರಸ್ಥರು ಕೂಡಲೇ ಬೆಲೆ ಏರುತ್ತಲಿರುವದನ್ನು ತಡೆಗಟ್ಟಬೇಕು. ಇಲ್ಲವಾದರೆ ಸರ್ಕಾರದವರೇ ಕಾರ್ಯಕ್ರಮವನ್ನು ತೆಗೆದುಕೊಂಡು ತಾವೇ ವ್ಯಾಪಾರಮಾಡುವುದಕ್ಕೆ ಏರ್ಪಾಡು ಮಾಡಲಾಗುವುದು. ಈಗ ಪದಾರ್ಥಗಳಿಗಿರುವ ಬೆಲೆಯನ್ನು ಪರಿಶೀಲಿಸುವುದಲ್ಲದೆ ಅವುಗಳ ಬೆಲೆಯನ್ನು ಕಡಿಮೆಮಾಡಿ, ಬೆಲೆಯನ್ನು ನಿಗದಿಮಾಡಲಾಗುವುದು. ಕೇಂದ್ರ ಸರ್ಕಾರವೂ ಸಹ ಪ್ರಾಂತೀಯ ಸರ್ಕಾರಗಳಿಗೆಲ್ಲಾ ವಿಶೇಷಾಧಿಕಾರವನ್ನು ಕೊಡುವುದೆಂದು ವ್ಯಾಪಾರಸ್ಥರಿಗೆ ಎಚ್ಚರಿಸಿದರು.

ಪುನಃ ಭೂಕಂಪ

ಅಸ್ಸಾಂನ ದುಭ್ರಾಘರಿನಲ್ಲಿ ನಿನ್ನೆ ಪುನಃ ಒಂದುಸಲ ಭೂಕಂಪವಾಯಿತೆಂದು ವರದಿಯಾಗಿದೆ.

ಅಸ್ಸಾಂನಲ್ಲಿ ಸಂಭವಿಸಿದ ಭೂಕಂಪ ಪರಿಣಾಮವಾಗಿ ಸುಮಾರು ೫೦ ಲಕ್ಷ ಜನರು ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ.

ಮೇಲಣ ಅಸ್ಸಾಂನಲ್ಲಿ ೧೨೫ ಚದುರ ಮೈಲಿ ಅರಣ್ಯವೆಲ್ಲವೂ ಬುಡಮೇಲಾಗಿದೆ.

೧೮೯೭ ರಲ್ಲಿ ಆದ ಭೂಕಂಪಕ್ಕಿಂತ ಈಗಿನದು ಅತಿ ಭಾರಿಯಾದುದೆಂದು ವೈಜ್ಞಾನಿಕರು ಅಭಿಪ್ರಾಯಪಡುತ್ತಲಿದ್ದಾರೆ.

ಪಾನನಿರೋಧ ಆಜ್ಞೆ

ಬೊಂಬಾಯಿನಲ್ಲಿ ಹೈಕೋರ್ಟು ಇತ್ತೀಚೆಗೆ ಪಾನನಿರೋಧ ಆಜ್ಞೆಯ ವಿಚಾರವಾಗಿ ಇತ್ತಿರುವ ತೀರ್ಮಾನವನ್ನು ಮದರಾಸು ಸರ್ಕಾರವೂ ತನ್ನ ಪ್ರಾಂತದಲ್ಲಿಯೂ, ಮಿಲಿಟರಿಯವರಿಗಾಗಿರುವ ವಿನಾಯಿತಿ ಮತ್ತು ಭಾರತೀಯರಿಗೂ ವಿದೇಶೀಯರಿಗೂ ಇರುವ ವ್ಯತ್ಯಾಸವನ್ನು ರದ್ದುಗೊಳಿಸುವ ವಿಷಯವನ್ನು ಪರಿಶೀಲಿಸುತ್ತಿದೆ.

ಕಾಂಗ್ರೆಸ್ ಅಧ್ಯಕ್ಷ ಗದ್ದುಗೆ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಶ್ರೀ ಪುರುಷೋತ್ತಮದಾಸ್ ತಾಂಡನರು, ಶಂಕರರಾವ್ ದೇವ್ ಮತ್ತು ಆಚಾರ್ಯ ಕೃಪಲಾನಿಯವರು ಸ್ಪರ್ಧಿಸುತ್ತಲಿರುವರು.

ಶ್ರೀತಾಂಡನ್ನರಿಗೆ ಸರ್ದಾರ್ ಪಟೇಲ್ ಮತ್ತು ಅವರ ಅನುಯಾಯಿಗಳ ಬೆಂಬಲವಿದೆ. ಶಂಕರರಾವ್ ದೇವರವರಿಗೆ ಸರದಾರರ ಬೆಂಬಲ ಖಂಡಿತವಿಲ್ಲ. ಅವರು ಚುನಾಯಿತರಾದರೆ ತಾವು ಕಾರ್ಯಕಾರಿ ಸಮಿತಿಯಲ್ಲಿರುವುದಿಲ್ಲವೆಂದು ಸರ್ದಾರರು ಹೇಳುತ್ತಲಿದ್ದಾರೆ.

ಶ್ರೀ ತಾಂಡನ್ನರೇನಾದರೂ ಅಧ್ಯಕ್ಷರಾದರೆ ತಾವು ಕಾಂಗ್ರೆಸ್ ಕಾರ್ಯಸಮಿತಿಯಲ್ಲಿರುವುದಿಲ್ಲವೆಂದು ಪಂಡಿತ ನೆಹರೂರವರು ಹೇಳುತ್ತಲಿದ್ದಾರೆ. ಅವರು ಮತ್ತು ಅವರ ಅನುಯಾಯಿಗಳೆಲ್ಲರೂ ಶ್ರೀ ಕೃಪಲಾನಿಯವರಿಗೆ ಬೆಂಬಲ ನೀಡುವವರಾಗಿದ್ದಾರೆ. ಕಾಂಗ್ರೆಸ್ ಗದ್ದುಗೆ ಯಾರಿಗೆ ಮೀಸಲಾಗಿದೆಯೊ ನೋಡಬೇಕು. ಅನಂತರ ರಾಜಕೀಯ ಬದಲಾವಣೆಗಳನ್ನೂ ನೋಡಬೇಕು.

ಗೋಧಿ ಯಿಲ್ಲಾ ?

ಮೈಸೂರು ನಗರದ ಕೆಲವು ರೇಷನ್ ಡಿಪೋಗಳಲ್ಲಿ ಗೋಧಿಯಿಲ್ಲವೆಂದು ತಿಳಿಯಬರುತ್ತದೆ. ಆಹಾರ ಅಧಿಕಾರಿಗಳು ಕೂಡಲೇ ಗೋಧಿಯನ್ನು ಅಂಥ ಡಿಪೋಗಳಿಗೆ ಸರಬರಾಜು ಮಾಡುವರೆ ?

ಸಕ್ಕರೆ ಪಡಿತರ ಪ್ರಮಾಣ ಕಡಿಮೆ

ಈಗಿರುವ ಸಕ್ಕರೆದಾಸ್ತಾನು ಸೆಪ್ಟೆಂಬರ್ ಅಂತ್ಯದವರಿಗೆ ಮಾತ್ರ ಸಾಕಾಗುವಷ್ಟು ಇರುವುದರಿಂದ ಈಗ ಕೊಡುತ್ತಲಿರುವ ಸಕ್ಕರೆ ಪಡಿತರ ಪ್ರಮಾಣ ಕಡಿಮೆಯಾದರೂ ಆಗಬಹುದೆಂದು ಪತ್ರಿಕಾಪ್ರತಿನಿಧಿಗಳೊಡನೆ ಮಾತನಾಡುತ್ತಾ ಮುಖ್ಯ ಮಂತ್ರಿ ಕೆ. ಸಿ. ರೆಡ್ಡಿಯವರು ತಿಳಿಸಿದರು.

ಅಕ್ಕಿ ಮಾರಬಹುದು

ಮದರಾಸು ಹಳ್ಳಿಗಳಲ್ಲಿ ಅಕ್ಕಿ ದಾಸ್ತಾನು ಇರುವವರು ತಮ್ಮ ಸ್ವಂತಕ್ಕೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡು ಉಳಿಕೆಯನ್ನು, ಸರ್ಕಾರೀ ದರದಂತೆ ಯಾರಿಗೆ ಬೇಕಾದರೂ, ಎರಡು ಪೌಂಡುಗಳಿಗೆ ಮೀರದಂತೆ ಮಾರಬಹುದು ಎಂದು ಮದರಾಸು ಸರ್ಕಾರ ಆಜ್ಞೆ ಮಾಡಿದೆ.

ಗೃಹನಿರ್ಮಾಣ ಸಂಸ್ಥೆ

ಬೆಂಗಳೂರಿನಲ್ಲಿ ಮೈಸೂರು ಸಂಸ್ಥಾನ ಗೃಹನಿರ್ಮಾಣ ಸಂಸ್ಥೆಯನ್ನು ಮಾನ್ಯ ಸಚಿವ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಸ್ಥಾನದ ನಾನಾಭಾಗಗಳಿಂದ ೧೫೦ ಜನ ಪ್ರತಿನಿಧಿಗಳು ಸೇರಿ ಸ್ಥಾಪಿಸಬೇಕೆಂದು ತೀರ್ಮಾನಿಸಿದರು. ಈ ಸಂಸ್ಥೆಯ ಬಂಡವಾಳಕ್ಕೆ ಬೆಂಗಳೂರು ಅಪೆಕ್ಸ್ ಬ್ಯಾಂಕಿನವರು ೧೦ ಲಕ್ಷ ರೂಪಾಯಿಗಳನ್ನು ಕೊಡಲೊಪ್ಪಿರುವರು. ೨೪೦೦೦ ಶೇರುಗಳು ಇತರ ಸಂಸ್ಥೆಗಳು ತೆಗೆದುಕೊಳ್ಳಲು ಮತ್ತು ೨೨೮೦೦ ರೂ ಡಿಪಾಜಿಟ್ಟುಗಳನ್ನು ಇಡಲು ಒಪ್ಪಿರುವವು—ಸಂಸ್ಥಾನದ ಎಲ್ಲಭಾಗಗಳಲ್ಲಿ ಮನೆಗಳನ್ನು ಕಟ್ಟಿ ಒದಗಿಸುವ ಕಾರ್ಯವನ್ನು ಈ ಸಂಘದ ಮೂಲಕ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

ನೆಹರೂರವರ ಪತ್ರಿಕಾ ಸಮ್ಮೇಳನ

ಇಂದು ಬೆಳಿಗ್ಗೆ ಪಂ. ನೆಹರೂರವರು ಪತ್ರಿಕಾ ಸಮ್ಮೇಳನದಲ್ಲಿ ಸರ್ ಓವೆನ್ ಡಿಕ್ಸನ್ನರವರು ಪರಾಭವವಾದುದಕ್ಕೆ ಭಾರತವು ಕಾರಣವಲ್ಲವೆಂದೂ, ಅವರು ಕೊಟ್ಟ ಸಲಹೆಗೆ ಭಾರತವು ಒಪ್ಪಿಕೊಟ್ಟಿತಾದರೂ ಪಾಕಿಸ್ತಾನವು ಒಪ್ಪಲಿಲ್ಲವಾಗಿ ಸಂಧಾನವು ವಿಫಲವಾಯಿತು ಎಂದು ಹೇಳಿದರು.

ಗೋಮಟೇಶ್ವರ ವಿಗ್ರಹ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಪಡೆದಿರುವ ಶ್ರವಣಬೆಳಗೊಳದಲ್ಲಿರುವ ಗೋಮಟೇಶ್ವರ ವಿಗ್ರಹವು ಬಿರುಕು ಬಿಟ್ಟಿರುವುದು ಹೆಚ್ಚಾಗುತ್ತಲಿದೆ. ಎಂದು ತಿಳಿಯಬರುತ್ತದೆ.

ಮೈಸೂರಿನ ಅಭಿವೃದ್ಧಿ ಕಾರ್ಯಗಳು

ಮೈಸೂರು ಸೀಮೆಯಲ್ಲಿ ನಡೆಯಬೇಕಾಗಿರುವ ಅಭಿವೃದ್ಧಿಕಾರ್ಯಗಳಿಗೆ ಕೇಂದ್ರವು ಒಂದು ಕೋಟಿ ರೂಪಾಯಿಗಳಿಗೆ ಕಡಮೆಯಿಲ್ಲದೆ ೩ ಕೋಟಿಗಳಿಗೆ ಹೆಚ್ಚಿಲ್ಲದೆ ಸಾಲ ಅಥವಾ ಗ್ರಾಂಟನ್ನು ಕೊಡುವ ಯೋಚನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಯಬರುತ್ತದೆ.

ಸಿಲೋನಿನಿಂದ ಅಕ್ಕಿ

ಭಾರತಕ್ಕೆ ಸಿಲೋನು ೧೦,೦೦೦ ಟನ್ನು ಅಕ್ಕಿಯನ್ನು ಎರವು ಕೊಡುವುದೆಂದು ತಿಳಿಯಬಂದಿದೆ

ಸಂಸ್ಥಾನ ಭಾಷೆಗೆ ಮನ್ನಣೆ

ಯೂನಿವರ್ಸಿಟಿ ಕಮಿಷನ್ನಿನ ಸಲಹೆಗಳನ್ನು ಪರಿಶೀಲಿಸಲು, ಮೈಸೂರು ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಿಲರು ನೇಮಿಸಿದ್ದ ಸ್ಪೆಷಲ್ ಕಮಿಟಿಯು ಈ ಸಲಹೆಗಳನ್ನೊಪ್ಪುತ್ತಾ ಸಂಸ್ಥಾನದ ಭಾಷೆಗೆ ರಾಷ್ಟ್ರಭಾಷೆಗೆ ಕೊಡುವ ಮನ್ನಣೆಯನ್ನೀಯಬೇಕೆಂದೂ, ಪಾಠಪ್ರವಚನಗಳನ್ನು ಇಂಗ್ಲೀಷಿನಲ್ಲಿ ನಡೆಸಬೇಡವೇ ಎಂಬ ವಿಷಯವನ್ನೂ ೧೫ ವರ್ಷನಂತರ ಪರಿಶೀಲಿಸಬೇಕೆಂದೂ ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರಿಗೆ ೬೦ ವರ್ಷವಾದಮೇಲೆ ವಿಶ್ರಾಂತಿ ಕೊಡಬಹುದೆಂದೂ ಆದರೆ ಅವರು ಇಷ್ಟಪಟ್ಟಲ್ಲಿ ೫೫ ನೇ ವರ್ಷದಲ್ಲಿಯೇ ಅವರು ವಿಶ್ರಾಂತಿ ಪಡೆಯಬಹುದೆಂದೂ ಅಭಿಪ್ರಾಯಕೊಟ್ಟಿದೆ.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ " ಸಮಾಚಾರ " ದಿನಪತ್ರಿಕೆಯನ್ನು ಚಂದಾದಾರರಿಗೆ ಹಂಚಿ ಚಂದಾವಸೂಲುಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ. ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
" ಸಮಾಚಾರ " [illegible]

ಬೊಂಬಾಯಿನಲ್ಲಿ ಪಾನ ನಿರೋಧ

ಮಿಲಿಟರಿಯವರಿಗೆ ಕೊಟ್ಟಿರುವ ವಿನಾಯಿತಿ ಮತ್ತು ಭಾರತೀಯ ಮತ್ತು ವಿದೇಶೀಯರಿಗಿರುವ ಪರ್ಮಿಟ್ ವ್ಯತ್ಯಾಸ ನ್ಯಾಯಬದ್ಧವಲ್ಲವೆಂದು ಬೊಂಬಾಯಿನ ಹೈಕೋರ್ಟು ಫುಲ್ ಬೆಂಚ್ ಪಾನನಿರೋಧ ಶಾಸನದ ರೀತ್ಯಾ ಒಂದು ಮೊಕದ್ದಮೆಯಲ್ಲಿ ತೀರ್ಪನ್ನಿತ್ತರು ಇದರ ಪರಿಣಾಮವಾಗಿ ಮಿಲಿಟರಿಯವರಿಗೆ ಕೊಟ್ಟಿದ್ದ ವಿನಾಯಿತಿಗಳನ್ನು ಮತ್ತು ವಿದೇಶೀಯರಿಗೆ ಕೊಟ್ಟಿರುವ ಪರ್ಮಿಟ್ಟುಗಳನ್ನು ಬೊಂಬಾಯಿ ಸರ್ಕಾರವು ಮನ್ನಾ ಮಾಡಿದೆ. ಹೊರಗಿನಿಂದ ಬರುವ ಖಾಯಂ ಅಲ್ಲದ (೬ ತಿಂಗಳೊಳಗೇ ಹೊರಟು ಹೋಗುವ) ವಿದೇಶೀಯರಿಗೆ ಸ್ಪೆಷಲ್ ಪರ್ಮಿಟ್ಟುಗಳನ್ನು ಮಾತ್ರ ಕೊಡಲಾಗುವುದು.

ಮಿತವ್ಯಯ

ಕೇಂದ್ರದ ಎಲ್ಲಾ ಶಾಖೆಗಳಲ್ಲೂ ಆಡಳಿತ ಖರ್ಚುಗಳನ್ನು ಕಡಿಮೆಮಾಡಿಕೊಳ್ಳುವಂತೆ ಪ್ರಧಾನ ಮಂತ್ರಿಗಳು ಸೂಚನೆಯನ್ನಿತ್ತಿರುವರು. ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಸಹ ಪ್ರಧಾನಿಗಳು ಎಲ್ಲಾ ಮುಖ್ಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದಿರುವರು. ಇದಕ್ಕಾಗಿ ಪ್ರತ್ಯೇಕವಾಗಿ ಒಬ್ಬ ರಿಟ್ರೆಂಚ್‌ಮೆಂಟ್ ಅಧಿಕಾರಿಗಳನ್ನು ನೇಮಿಸಲಾಗುವುದು.

ಸುಪ್ರೀಂ ಕೋರ್ಟಿಗೆ ಅಪೀಲು

ಕಾಲೇಜುಗಳಿಗೆ ಕೋಮುವಾರು ಭಾವವಿರಕೂಡದೆಂದು ಮದರಾಸು ಹೈಕೋರ್ಟು ಇತ್ತಿದ್ದ ಆಜ್ಞೆಯ ಮೇಲೆ ಮದರಾಸು ಸರ್ಕಾರವು ಸುಪ್ರೀಂ ಕೋರ್ಟಿಗೆ ಅಪೀಲು ಮಾಡಿದೆ.

ರೇಷನ್ ಖೋತಾ

ಮದರಾಸಿನಲ್ಲಿ ಹೊಟೇಲುಗಳಿಗೆ ಕೊಡುತ್ತಲಿದ್ದ ಅಕ್ಕಿಯ ಪಡಿತರವನ್ನು ೬ ಔನ್ಸುಗಳಿಂದ ೫ ಔನ್ಸುಗಳಿಗೆ ಇಳಿಸಲಾಗಿದೆ. ಆದರೆ ಒಟ್ಟು ಪಡಿತರವು ೧೨ ಔನ್ಸುಗಳಷ್ಟೇ ಇರುವಂತೆ ಇತರ ಕಾಳುಗಳನ್ನೊದಗಿಸಲಾಗುವುದು.

ಬೊಂಬಾಯಿನಲ್ಲಿಯೂ ಅಕ್ಕಿ ಪಡಿತರ ಖೋತಾ ಮಾಡುವ ಸಂಭವವಿದೆ. ಆದರೆ ೧೨ ಔನ್ಸು ಪಡಿತರ ಕೊಡುತ್ತಲಿರುವುದು ಕಡಿಮೆಯಾಗುವುದಿಲ್ಲ.

ಈ ವಾರಾಂತ್ಯದಲ್ಲಿ ಆರ್ಡಿನೆನ್ಸ್

ಆಹಾರ ಪದಾರ್ಥ ಬೆಲೆಯನ್ನು ತಡೆಗಟ್ಟಲು ಈ ವಾರಾಂತ್ಯದಲ್ಲಿ ವಿಶೇಷ ಆರ್ಡಿನೆನ್ಸ್ ಹೊರಡಿಸಲಿದೆಯೆಂದು ತಿಳಿಯಬರುತ್ತದೆ. ಯುದ್ಧ ಕಾಲದಲ್ಲಿದ್ದಂತೆಯೇ ಈ ಹೊಸ ಆರ್ಡಿನೆನ್ಸು ಜಾರಿಮಾಡಲಾಗುವುದು

ಪಿಕೆಟಿಂಗ್

ಕಾಳಸಂತೆಯನ್ನು ನಿರ್ಮೂಲ ಮಾಡಲು ಆಂಧ್ರ ಪ್ರಾಂತ್ಯ ಕಾಂಗ್ರೆಸ್ ಸಮಿತಿಯು ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಬೇಕೆಂದು ತೀರ್ಮಾನಿಸಿದೆ

ತೂಕ ಮಾಡಿ ಕೊಡಿ

ರೇಷನ್ ಅಂಗಡಿಗಳಲ್ಲೆಲ್ಲಾ ಸಾಮಾನುಗಳನ್ನು ತೂಕ ಮಾಡಿಯೇ ಕೊಡಬೇಕೆಂದು ಮದರಾಸ್ ಸರ್ಕಾರವು ಆಜ್ಞೆಯಿತ್ತಿದೆ.

ಪೌರಸಭಾಧಿವೇಶನ

ಇದೇ ಮಾಹೆ ೩೧ ನೇ ತಾರೀಖು ರಾಜಧಾನಿಯ ಪೌರಸಭೆಯ ಅಧಿವೇಶನವು ನಡೆಯುವುದು.

ಶ್ರೀ ಹೆಚ್. ಮುದ್ದಯ್ಯನವರು ಮುನಿಸಿಪಾಲಿಟಿಗೆ ಸಂಬಂಧಪಟ್ಟ ವ್ಯವಹಾರ ಮತ್ತು ರಿಕಾರ್ಡುಗಳೆಲ್ಲವೂ ಇನ್ನು ಮುಂದೆ ಕನ್ನಡದಲ್ಲಿಯೇ ನಡೆಯಬೇಕು.

ಶ್ರೀ ಪಿ. ಡಿ. ಕೃಷ್ಣಸ್ವಾಮಿಯವರು ಅತ್ಯಂತ ಉಪಯುಕ್ತವಾದ ಪೆನಿಸಲಿನ್, ಸ್ಟ್ರೆಪ್ಟೊಮಿಸಿನ್ ಮತ್ತು ಕ್ಲೋರೋ ಮಿಸೆಟಿನ್ ಮುಂತಾದ ಔಷಧಗಳನ್ನು ಪೌರಸಭೆಯವರೇ ಇಟ್ಟುಕೊಂಡು ಅವಶ್ಯಕವಿದ್ದವರಿಗ ಕೊಂಡ ಬೆಲೆಗೇ ಮಾರಬೇಕು.

ಡಾ॥ ಬಿ. ಜಿ ದಾಸ್‌ರವರು ವನಸ್ಪತಿಯು ದೇಹಾರೋಗ್ಯಕ್ಕೆ ಹಾನಿಕರವಾಗಿರುವುದರಿಂದ ಕೇಂದ್ರ ಪಾರ್ಲಿಮೆಂಟಿನಲ್ಲಿ ಶ್ರೀ ಭಾರ್ಗವರವರು ತಂದಿರುವ ವನಸ್ಪತಿ ವಿರೋಧ ಕಾನೂನನ್ನು ಪೌರಸಭೆ ಬೆಂಬಲಿಸಬೇಕು ಮತ್ತು ನಾಗಪುರ ಪೌರಸಭೆಯವರು ಏರ್ಪಡಿಸಿರುವಂತೆ ಮೈಸೂರು ನಗರದಲ್ಲಿರುವ ಸಿನಿಮಾ ಮತ್ತು ನಾಟಕ ಮಂದಿರಗಳಲ್ಲಿ ಧೂಮಪಾನ ನಿಲ್ಲಿಸಬೇಕು ಎಂಬೀ ನಿರ್ಣಯಗಳನ್ನು ಮಂಡಿಸಿರುವರು.

MAHARAJA'S COLLEGE CENTENARY CELEBRATION

It is proposed to celebrate the Centenary of the Maharaja's College in December next In this connection a meeting of the old boys of the Maharaja's College will be held at 5-30 P M. on Saturday the 26th instant in the Junior B. A Hall of the College. The old boys of the Maharaja's College who are residing in Mysore City are requested to make it convenient to attend the meeting

C. Narasimha Moorty,
Convenor,
Maharaja's College Centenary
Celebration, Mysore City.

ರೇಡಿಯೋ

ಆಗಸ್ಟ್ ೨೫ ಶುಕ್ರವಾರ

೩೧೦ ಮೀಟರು ೪೯-೪೬ ಮೀಟರು

ಬೆಳಗ್ಗೆ ೭-೦ ಉದಯಗಾನ, ಕಾರ್ಯಕ್ರಮ ವಿವರಣೆ ೭-೨೫ ಚಿತ್ರಗೀತ (ರಿ) ೭-೨೫ ದೇವೀ ಭಜನೆ (ರಕ್ಷಮ್ಮ ಕೃಷ್ಣಮೂರ್ತಿ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿ ಶಿಕ್ಷಣ ೮-೩೦ ಮುಕ್ತಾಯ

ಮಧ್ಯಾಹ್ನ ೧-೦ ಸಂಗೀತ (ಕೌಸಲ್ಯ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಮುಖವೀಣೆ ೨-೦ ಮುಕ್ತಾಯ.

ಸಂಜೆ ೫-೩೦ ಸಂಗೀತ (ಕೌಸಲ್ಯ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೩೦ ಕನ್ನಡದಲ್ಲಿ ಭಾಷಣ-ನಮ್ಮರಾಜ್ಯಾಂಗ ೭-೪೫ ಕನ್ನಡ ವಾರ್ತೆ ೮-೦ ನಾದಸುಧಾ (ರಿ) ೮-೧೫ ಹಿಂದೂಸ್ಥಾನಿ ಸಂಗೀತ ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವೃಂದ ಸಂಗೀತ ೧೦-೦ ಮುಕ್ತಾಯ.

ಯುಗಾಂತರ
ಪ್ರಗತಿಶೀಲ ಕನ್ನಡ ಮಾಸಪತ್ರಿಕೆ
ಸಂಪಾದಕ ಎನ್. ಡಿ. ಶಂಕರ್
ವಾರ್ಷಿಕ ಚಂದಾ: ಮೂರು ರುಪಾಯಿ
ಬಿಡಿಪತ್ರಿಕೆ ೪ ಆಣೆ.
ಮೊದಲನೆಯ ಸಂಚಿಕೆ
1—9—50
ಪ್ರಕಟವಾಗುವುದು
ಎಲ್ಲೆಲ್ಲೂ ಏಜೆಂಟರು ಬೇಕಾಗಿದ್ದಾರೆ
ವಿಳಾಸ:
ಯುಗಾಂತರ ಕಾರ್ಯಾಲಯ,
ಬಲಿಜ ಹಾಸ್ಟಲು ಕಟ್ಟಡ, ಚಾಮರಾಜಪೇಟೆ
ಬೆಂಗಳೂರು-೨.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಮೈಸೂರು ದಸರಾ ವಸ್ತುಪ್ರದರ್ಶನ ೧೯೫೦

೧೨-೧೦-೧೯೫೦ ರಿಂದ ೨೭-೧೦-೧೯೫೦ ವರೆಗೆ
(ಎರಡು ದಿನಗಳೂ ಸೇರಿ)

ಸ್ಟಾಲುಗಳನ್ನು ರಿಸರ್ವ್‌ಮಾಡಿಸಿಕೊಳ್ಳಲು ಕೊನೇದಿನ:— ೧೫-೯-೧೯೫೦
ಕುಶಲ ಕಲಾವಿಭಾಗಕ್ಕೆ ಚಿತ್ರ ಪಟಗಳನ್ನು ಕಳುಹಿಸಲು ಕೊನೇ ದಿನ (ವಿಧಾಯಕವಾದ ಫೀಯೊಡನೆ) ೨೫-೯-೧೯೫೦

ವಸ್ತು ಪ್ರದರ್ಶನದಲ್ಲಿ ಭಾಗವಹಿಸಬೇಕೆಂದಿರುವವರು ಪ್ರಾಸ್ಪೆಕ್ಟಸ್ ಮತ್ತು ಇತರ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಾರ್ಯದರ್ಶಿ
ಮೈಸೂರು ದಸರಾ ವಸ್ತುಪ್ರದರ್ಶನ ಸಮಿತಿ
ಮೈಸೂರು

RAGHULAL & Co.,
CHEMISTS
Sayyaji Rao Road,
MYSORE

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

ಬಿಡಿ ಪತ್ರಿಕೆ ೩ ಪೈ   ದಿನಪತ್ರಿಕೆ   **Phone: 574**

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್ ಸ್ವಾಮಿ

ಸಂಪುಟ ೧] ೨೫—೮—೧೯೫೦ ನೇ ಶುಕ್ರವಾರ [ಸಂಚಿಕೆ ೧೦

ರಘುಲಾಲ್ ಮತ್ತು ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

★ ಹೋಟೇಲುಗಳ ಲೈಸೆನ್ಸ್ ಫೀ ಏರಿತು

ಊಟದ ಮಂದಿರ, ಉಪಹಾರ ಮಂದಿರ, ಕಾಫಿ ಮತ್ತು ಟೀ ಅಂಗಡಿ, ರೊಟ್ಟಿ ಅಂಗಡಿ ಸಿಹಿತಿಂಡಿ ಅಂಗಡಿ, ಐಸ್ ಅಂಗಡಿ, ಮಾಂಸದ ಅಂಗಡಿ, ಇವುಗಳ ಲೈಸನ್ಸ್ ಫೀಯನ್ನು ಅವರು ಕೊಡುತ್ತಲಿರುವ ಒಂದು ತಿಂಗಳ ಬಾಡಿಗೆಯಷ್ಟು (೫ ರೂ. ಗೆ ಕಡಮೆಯಿಲ್ಲದೆ) ವಿಧಿಸಬೇಕೆಂದು ಮೈಸೂರು ನಗರ ಪೌರಸಭೆಯು ತೀರ್ಮಾನಿಸಿದ್ದುದಕ್ಕೆ ಸರ್ಕಾರದ ಒಪ್ಪಿಗೆಯಿತ್ತಿದೆ.

ಸೋಡಾ, ಕ್ರಷ್ ಅಂಗಡಿಗಳಿಗೆ ೩೦ ರೂಪಾಯಿ ಲೈಸೆನ್ಸ್ ಫೀ ವಿಧಿಸಬೇಕೆಂದು ತೀರ್ಮಾನಿಸಿರುವುದನ್ನೂ ಸರ್ಕಾರವು ಒಪ್ಪಿದೆ.

ಗೃಹನಿರ್ಮಾಣಕರ ಸಂಸ್ಥೆ

(Institute of Builders of India)

ಇದರ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಅಖಿಲ ಭಾರತ ಗೃಹನಿರ್ಮಾಣ ಕಾಂಗ್ರೆಸ್ ಅಧಿವೇಶನವು ಮುಂದಿನ ತಿಂಗಳು ೨೯, ೩೦ನೇ ತಾರೀಖುಗಳಲ್ಲಿ ಬೆಂಗಳೂರಿನಲ್ಲಿ ನಡೆಯುವುದು. ಸಂಸ್ಥೆಯ ಅಧ್ಯಕ್ಷರಾದ ಡಾ|| ಎಸ್. ಕಾಮೇಶಂರವರು ಅಧ್ಯಕ್ಷತೆ ವಹಿಸುವರು. ಕೇಂದ್ರ ಮರಾಮತ್ತು ಮಂತ್ರಿ ಶ್ರೀ ಎನ್. ವಿ. ಗಾಡ್ಗೀಲ್‌ರವರು ಪ್ರಾರಂಭೋತ್ಸವ ನಡೆಸುವರು. ಇದರ ಅಂಗವಾಗಿ ಮೈಸೂರು ಮುಖ್ಯ ಮಂತ್ರಿಗಳು ವಸ್ತುಪ್ರದರ್ಶನವನ್ನು ಆರಂಭಿಸುವರು ಭಾರತ, ಸಿಂಹಳ, ಬರ್ಮ ಮತ್ತು ಇಂಡೋನೇಷಿಯಾ ದೇಶಗಳ ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳ ಇಂಜನಿಯರುಗಳು ಈ ಅಧಿವೇಶನದಲ್ಲಿ ಭಾಗ ವಹಿಸುವರು.

ಪೆಟ್ರೋಲ್ ರೇಷನ್ ರದ್ದು

ಮೈಸೂರಿನಲ್ಲಿರುವ ಪೆಟ್ರೋಲ್ ರೇಷನನ್ನು ರದ್ದುಗೊಳಿಸಲಾಗುವುದೆಂದು ಖಚಿತವಾಗಿ ತಿಳಿದುಬಂದಿದೆ.

ಸಂಸ್ಥಾನದ ಇಂಜಿನಿಯರುಗಳ ಸಮ್ಮೇಳನ

ಮುಂದಿನ ತಿಂಗಳು ೩ ನೇ ತಾರೀಖು ಮೈಸೂರಿನ ಇಂಜನಿಯರುಗಳ ೩೦ ನೇ ವಾರ್ಷಿಕ ಸಮ್ಮೇಳನ ನಡಯುವುದು. ಸಚಿವ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆ ವಹಿಸುವರು. ಜಾಲಹಳ್ಳಿ ಟೆಕ್ನಿಕಲ್ ಟ್ರೈನಿಂಗ್ ಕಾಲೇಜಿನ ಡೈರೆಕ್ಟರಾದ ಕರ್ನಲ್ ಕೆ. ಟೆಂಕನ್‌ಸ್ಮಿತ್‌ರವರು ಪ್ರಾರಂಭ ಭಾಷಣ ಮಾಡುವರು.

ಶಿರಾಳಕೊಪ್ಪ ಪೌರಸಭೆ

೧-೧೨-೧೯೫೦ ರಿಂದ ಶಿರಾಳಕೊಪ್ಪ ಮೈನರ್ ಪೌರಸಭೆಯನ್ನು ಟವುನ್ ಪೌರಸಭೆಯಾಗಿ ಬದಲಾಯಿಸಲಾಗಿದೆ.

ವಿಶ್ವವಿದ್ಯಾನಿಲಯದ ವರದಿ

ಅಂತರ ವಿಶ್ವವಿದ್ಯಾನಿಲಯ ಮಂಡಲಿಯವರು ದೇಶಾದ್ಯಂತ ವಿಶ್ವವಿದ್ಯಾನಿಲಯಗಳಲ್ಲೆಲ್ಲಾ ಸಾಮಾನ್ಯ ಶಿಕ್ಷಣ ಮಾಧ್ಯಮವಿರಬೇಕೆಂದೂ, ಶಿಕ್ಷಣ ವಿಧಾನದಲ್ಲಿ ಬದಲಾವಣೆಗಳನ್ನು ಮಾಡುವುದಲ್ಲದೆ ಇಂಗ್ಲೀಷು ಭಾಷೆಯನ್ನು ತೊಡೆದುಹಾಕುವ ವಿಷಯವನ್ನು ಅತಿ ಜಾಗರೂಕತೆಯಿಂದ ಪರಿಶೀಲಿಸಬೇಕೆಂದೂ, ವಿಶ್ವವಿದ್ಯಾನಿಲಯವು ಆಡಳಿತದಲ್ಲಿ ಸ್ವತಂತ್ರವಾಗಿರಬೇಕೆಂದು ತಿಳಿಸಿ ತಮ್ಮ ವರದಿಯನ್ನು ಮುಂದಿನವಾರ ಸರ್ಕಾರಕ್ಕೆ ಒಪ್ಪಿಸಲಿರುವರೆಂದು ತಿಳಿಯಬರುತ್ತದೆ.

ಮೆಡಿಕಲ್ ಕಾಲೇಜಿನ ರಜತಮಹೋತ್ಸವ

ಮೈಸೂರು ಮೆಡಿಕಲ್ ಕಾಲೇಜಿನ ರಜತಮಹೋತ್ಸವವು ಮುಂದಿನ ಮಾಹೆ ೮-೯-೧೦ ನೇ ತಾರೀಖುಗಳಲ್ಲಿ ನಡೆಯುವುದು ಮೈಸೂರು ರಾಜಪ್ರಮುಖರು ಆರಂಭೋತ್ಸವ ನಡೆಸುವರು. ಪ್ರೊಛಾನ್ಸಲರ್ ಶ್ರೀ ಸಿ. ಆರ್. ರೆಡ್ಡಿಯವರು ಅಧ್ಯಕ್ಷತೆ ವಹಿಸುವರು.

ಕಮಿಷನರ್ ಆಫ್ ಸ್ಪೆಷಲ್ ಡ್ಯೂಟಿ

ದೆಹಲಿಯಲ್ಲಿ ಕೆಲಸಮಾಡಲು ಮೈಸೂರಿನ ಸ್ಪೆಷಲ್ ಆಫೀಸರನ್ನು ಇನ್ನು ಮುಂದೆ 'ಕಮಿಷನರ್ ಆಫ್ ಸ್ಪೆಷಲ್ ಡ್ಯೂಟಿ' ಎಂದು ಕರೆಯಲಾಗುವುದು.

ವಿಶ್ವವಿದ್ಯಾನಿಲಯದ

ಕಾಲೇಜು ಯೂನಿಯನ್‌ಗಳ ಅಂಗರಚನೆ

ಅಧಿಕಾರಿವರ್ಗದವರು ರೂಪಿಸಿ ಪ್ರಕಟಿಸಿರುವ ಯೂನಿಯನ್ನುಗಳ ಆಡಳಿತ ನಿಯಮಗಳು ಪ್ರಜಾಪ್ರಭುತ್ವ ತತ್ವಗಳಿಗೆ ವಿರೋಧವಾಗಿರುವುದರಿಂದ ಅವುಗಳನ್ನು ನಿರಾಕರಿಸಿ ಮೊದಲಿದ್ದಂತೆಯೇ ಆಡಳಿತ ನಿಯಮಗಳಿರಬೇಕೆಂದು ಆಡಳಿತವರ್ಗಕ್ಕೆ ಮನವಿಮಾಡಿಕೊಂಡಿದ್ದುದರ ಪರಿಣಾಮವಾಗಿ ಮಹಾರಾಜಾ ಕಾಲೇಜು ಪ್ರಿನ್ಸಿಪಾಲರು ಶ್ರೀ ಡಾ|| ಗೋಪಾಲಸ್ವಾಮಿಯವರು ವಿದ್ಯಾರ್ಥಿಗಳನ್ನು ಬರಮಾಡಿಕೊಂಡು ಈ ವಿಷಯಗಳನ್ನು ಚರ್ಚಿಸಿ ಹಿಂದೆ ಯಾವರೀತಿ ಚುನಾವಣೆಗಳು ನಡೆಯುತ್ತಲಿದ್ದುವೋ ಅದೇ ರೀತಿ ಈಗಲೂ ನಡೆಯಿಸಬಹುದೆಂದು ತಿಳಿಸಿದರು.

ಗೋಧಿಯ ಬೆಲೆ ಇಳಿತಾಯ

ಮದ್ರಾಸು ಸರ್ಕಾರವು ಗೋಧಿಯ ಬೆಲೆಯನ್ನು ಅಳತೆಯೊಂದಕ್ಕೆ ಒಂದೂವರೆ ಆಣೆ ಕಮ್ಮಿಮಾಡಿದೆ.. ಕೇಂದ್ರ ಸರ್ಕಾರವು ಮಣ ೧ ಕ್ಕೆ ೧೫ ರೂಪಾಯಿಂದ ೧೩|| ರೂಪಾಯಿಗೆ ಇಳಿಸಿದುದರ ಪರಿಣಾಮವಾಗಿ ಈ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಸರ್ಕಾರಿ ಸುದ್ದಿ

ಕೋಲಾರ ಸರ್ಕಲ್ ವ್ಯವಸಾಯ ಇಲಾಖೆ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ಸಿ. ಎಂ. ರೇವಣ್ಣನವರನ್ನು ಮೈಸೂರ ಸರ್ಕಲ್ಲಿಗೆ ವರ್ಗಾಯಿಸಲಾಗಿದೆ.

ವಿದೇಶದಿಂದ ಹಿಂತಿರುಗಿ ಬಂದಿರುವ ಹೆಲ್ತ್‌ಆಫೀಸರಾದ ಶ್ರೀ ಎಸ್ ಅನಂತಸ್ವಾಮಿಯವರನ್ನು ಬೆಂಗಳೂರ ಪಬ್ಲಿಕ್ ಹೆಲ್ತ್ ಇನ್ಸ್ಟಿಟ್ಯೂಟಿನ ಕೆಮಿಕಲ್ ಎಕ್ಸಾಮಿನರಾಗಿ ನೇಮಿಸಲಾಗಿದೆ

ಕೋಲಾರದ ಪೌರಸಭೆಗೆ ಅಧ್ಯಕ್ಷರಾಗಿ ಶ್ರೀ ಸಿ ಎಂ ಮುನಿಸ್ವಾಮಿಯವರು ಮತ್ತು ಚಿಂತಾಮಣಿ ಪೌರಸಭೆಗೆ ಅಧ್ಯಕ್ಷರಾಗಿ ಶ್ರೀ ಎಂ. ಸಿ. ಆಂಜನೇಯ ರೆಡ್ಡಿಯವರು ಚುನಾಯಿತರಾಗಿರುವುದನ್ನು ಸರ್ಕಾರವು ಅಂಗೀಕರಿಸಿದೆ.

ಆಹಾರ ಪರಿಸ್ಥಿತಿ ಬಗ್ಗೆ ಚರ್ಚೆ

ನಿನ್ನೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಸಂಸ್ಥಾನದ ಎಲ್ಲಾ ಜಿಲ್ಲಾಧಿಕಾರಿಗಳನ್ನೂ, ಆಹಾರಾಧಿಕಾರಿಗಳನ್ನೂ ಬರಮಾಡಿಕೊಂಡು ದೇಶದ ಆಹಾರ ಪರಿಸ್ಥಿತಿಯ ವಿಷಯವಾಗಿ ಚರ್ಚಿಸಿದರು. ಆಹಾರ ಮಂತ್ರಿ ಶ್ರೀ ಟಿ. ಮರಿಯಪ್ಪನವರೂ ಈ ಸಭೆಯಲ್ಲಿ ಹಾಜರಿದ್ದರು. ದೆಹಲಿಯಲ್ಲಿ ನಡೆದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿಯ ಸಲಹೆಗಳನ್ನೆಲ್ಲಾ ಅಧಿಕಾರಿಗಳ ಗಮನಕ್ಕೆ ತಂದು ಸಂಸ್ಥಾನದಲ್ಲಿ ಹಾಲಿ ಇರುವ ದಾಸ್ತಾನನ್ನು ಯಾವರೀತಿ ಹಂಚಿ ಪರಿಸ್ಥಿತಿಯು ವಿಷಮವಾಗದಂತೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ತಕ್ಕ ಸಲಹೆಗಳನ್ನಿತ್ತರು.

ರೇಡಿಯೋ

ಆಗಸ್ಟ್ ೨೬ ಶನಿವಾರ

೩೧೦ ಮೀಟರು ೪೯-೪೬ ಮೀಟರು

ಬೆಳಗ್ಗೆ ೭-೦ ಉದಯ ಗಾನ ಕಾರ್ಯಕ್ರಮ ವಿವರಣೆ ೭-೫ ಚಿತ್ರಗೀತ್ (ರಿ) ೭-೩೫ ದೇವರ ನಾಮ (ರಾಮಸ್ವಾಮಿ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಶಡಗೋಪನ್(ರಿ) ೮-೩೦ ಮುಕ್ತಾಯ.

ಮಧ್ಯಾಹ್ನ ೧೨-೦ ಸಂಗೀತ (ಲೀಲಾವತಿ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದೀಯಲ್ಲಿ ವಾರ್ತೆ ೧-೫೦ ಗಿಟಾರ್ ವಾದನ ೨-೦ ಬಾಲಜಗತ್ [illegible] ಮುಕ್ತಾಯ.

ಸಂಜೆ ೫-೩೦ ಸಂಗೀತ (ಲೀಲಾವತಿ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ತಬಲ ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕಥಾಕಾಲಕ್ಷೇಪ (ಲಕ್ಷ್ಮೀಪತಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೩೦ ಇಂಗ್ಲೀಷಿನಲ್ಲಿ ಭಾಷಣ ೯-೪೫ ವಾದ್ಯ ಸಮ್ಮೇಳನ ೧೦-೦ ಮುಕ್ತಾಯ.

ಸೂಚನೆ

ಉಪಾಕರ್ಮಪ್ರಯುಕ್ತ ನಾಳೆ ಪತ್ರಿಕೆಗೆ ರಜಾ ಕೊಡಲಾಗಿದೆ.

ಆಹಾರ ಸಮಸ್ಯೆ ಮತ್ತು ಸತ್ಯಾಗ್ರಹ

ರಾಷ್ಟ್ರಜೀವನದಲ್ಲಿ ಹಲವಾರು ಕಷ್ಟಪರಂಪರೆಗಳು ಸತತವಾಗಿ ಸಂಭವಿಸುತ್ತಬಂದು ಸಾಮಾನ್ಯ ಜನರ ನಿತ್ಯ ಜೀವನ ದುರ್ಭರವಾಗುತ್ತಾ ಸಾಗಿದೆ. ಆಹಾರ-ಸಮಸ್ಯೆಯಂತೂ ಎಲ್ಲ ಪರಿಹಾರ ಮಾರ್ಗಗಳನ್ನೂ ಸೋಲಿಸಿ ನಡೆದಿದೆ. ಇಂಥಹ ರಾಷ್ಟ್ರೀಯ ವಿಪತ್ತನ್ನೂ ಸ್ವಾರ್ಥ ಸಾಧನೆಗೆ ಉಪಯೋಗಿಸಿಕೊಂಡು ಅಕ್ರಮಲಾಭದ ಹೇಯಕಾರ್ಯಕ್ಕೆ ಕೈಹಾಕಿರುವ ಕೆಲವು ವ್ಯಾಪಾರಿಗಳ ಕಾರ್ಯ ಚಟುವಟಿಕೆ, ಸದುದ್ದೇಶಪೂರಿತ ಪ್ರಾರ್ಥನೆ ಮನವಿ, ಕಾನೂನುಗಳನ್ನೆಲ್ಲ ಅಲ್ಲಗಳೆದಿದೆ. ಸ್ವರಾಜ್ಯ ಬಂದಮೇಲೆ ಜನ ತಮ್ಮ ನಿತ್ಯ-ಜೀವನದ ಹೊಣಗಾರಿಕೆಯನ್ನೆಲ್ಲ ಸರ್ಕಾರದ ಮೇಲೆಹೊರಿಸಿ, ತಾವು ನಿಸ್ಸಹಾಯಕರಾಗಿ, ನಿರ್ವಿಣ್ಣರಾಗಿ, ನಿರುತ್ಸಾಹಿಗಳಾಗುತ್ತಿರುವುದು ನಾಡಿನ ದೌರ್ಭಾಗ್ಯ. ಜನಸಾಮಾನ್ಯರಲ್ಲಿ ಸ್ವಯಂ ಪ್ರೇರಿತವಾಗಿ ಸ್ವಾಭಾವಿಕವಾಗಿ ದುಷ್ಟಶಕ್ತಿಗಳನ್ನು ನಿರ್ಮೂಲ-ಮಾಡುವಂತಹ ನಿಸ್ಸೀಮ ಬಲ ಉತ್ಪನ್ನವಾಗಬೇಕಾಗಿದೆ ಗಾಂಧೀಜಿ ಹೇಳುತ್ತಿದ್ದಂತೆ ಜನರಲ್ಲಿ ಒಂದು ಅಕ್ಷಯ-ನೈತಿಕ-ವಿರೋಧ(a permanent tmoral opposition) ಸಂಘಶಕ್ತಿಯಾಗಿ ಪರಿಣಮಿಸಿದ ಹೊರತು ಈ ದಾರುಣ ಸಮಸ್ಯೆಗಳಿಂದ ಮುಕ್ತಿಯಿಲ್ಲ. ಈ ಪರಿಣಾಮ ದುಷ್ಟಶಕ್ತಿಗಳೆಲ್ಲದರೊಡನೆಯೂ ಅಹಿಂಸಾತ್ಮಕ ಧೃಢ ಅಸಹಕಾರದಿಂದ ಮಾತ್ರ ಸಾಧ್ಯ.

ಗಾಂಧೀಜಿ ಹೇಳಿದ್ದಾರೆ; ವ್ಯಾಪಾರಕ್ಕೂ ಅನೀತಿಗೂ ಬಿಡಿಸಲಾಗದ ಗಂಟನ್ನು ಹಾಕಲು ಕಾರಣವಾದರೂ ಏನು ? ವ್ಯಾಪಾರಿ ಎಂದರೆ ಸ್ವಾರ್ಥಿಎಂದೇ ಯಾವಾಗಲೂ ಭಾವಿತವಾಗಿದೆ. ಅವನ ಉದ್ದೇಶ ಕೇವಲ ಹೊಟ್ಟೆ ತುಂಬಿಕೊಳ್ಳುವುದು ಎಂದು ನಾವು ತಿಳಿಯುತ್ತೇವೆ. ಶಾಸನಗಳು ವ್ಯಾಪಾರಿಯು ಒಂದೇ ಅಪೋಷನಕ್ಕೆ ಅಪಹರಣ ನುಂಗಲಿಕ್ಕೆ ಅನುಕೂಲವಾಗುವಂತೆಯೇ ಆಗುತ್ತವೆ. ಅದಷ್ಟ ಚೌಕಾಸಿಮಾಡಿ ಕಡಿಮೆ ಬೆಲೆ ತೆಗೆದುಕೊಳ್ಳಬೇಕೆಂದು ಗಿರಾಕಿ-ಆದಷ್ಟೂ ಎಳೆದಾಡಿ ಹೆಚ್ಚು [illegible] ಕಸಿದುಕೊಳ್ಳಬೇಕೆಂದು ವ್ಯಾಪಾರಿ-ಹೀಗೆವಾಡಿಕೆಯೇ ಆಗಿಬಿಟ್ಟಿದೆ. ಇಂಥ ರೂಢಿಯನ್ನು ಜನ ವ್ಯಾಪಾರದಲ್ಲಿ ತಾವೇ ಬಿತ್ತಿದ್ದಾರೆ. ಈಗ ಬೆಳೆದು ಹಣ್ಣುಬಿಟ್ಟಾಗ ಅದು ಅಪ್ರಾಮಾಣಿಕತೆ ಎಂದು ಕೀಳುಗಣ್ಣಿನಿಂದ ನೋಡುತ್ತಾರೆ. ಈ ರೀತಿಯನ್ನು ಬದಲಿಸಬೇಕಾದದ್ದು ಅತ್ಯಗತ್ಯ. ವ್ಯಾಪಾರಿ ಸ್ವಾರ್ಥವನ್ನೇ ಸಾಧಿಸಬೇಕು ; ಹಣದ ಗುಡ್ಡೆಯನ್ನೇ ಹಾಕಬೇಕು-ಎಂಬುದು ನಿಯಮವೇನು ಅಲ್ಲ. ಈ ಬಗೆಯ ವ್ಯಾಪಾರ ವ್ಯಾಪಾರವಲ್ಲ; ಸುಲಿಗೆ; ಕಳ್ಳತನ. ಸಿಪಾಯಿ ದೇಶಕ್ಕಾಗಿ ಜೀವಕೊಡುವಂತೆ ವ್ಯಾಪಾರಿಯೂ ಜನಕ್ಕಾಗಿ ಹಣವನ್ನು ನೀಗಬೇಕು. ಜೀವವನ್ನು ತೆರಬೇಕು.

ಈ ದೃಷ್ಟಿಯಿಂದ ನೂತನ ಸಮಾಜ ರಚನೆಯಾಗಲು ಜನಸಾಮಾನ್ಯರಿಗೆ ಸತ್ಯಾಗ್ರಹವೊಂದೇ ಮಾರ್ಗ. ಸರ್ವೋದಯ ಕಾರ್ಯಕರ್ತರು, ಇಂದಿನ ಕ್ಷೋಭೆಗೆ ಅಹಿಂಸಾತ್ಮಕ, ಸುಸಂಘಟಿತ ಅಸಹಕಾರವೇ ಅತ್ಯುತ್ತಮ ಪರಿಹಾರಮಾರ್ಗವೆಂದು ನಂಬಿದ್ದೇವೆ. ಜನ ಜೀವನದಲ್ಲಿ ಇಂದು ಕಾಣಬರುತ್ತಿರುವ ನಿಸ್ಸಹಾಯಕತೆಯ ಪರಿಣಾಮವಾಗಿ ದುಷ್ಟಶಕ್ತಿಗಳು ಬೆಳೆತ್ತಿವೆ. ಇತ್ತೀಚೆಗೆ ಯಾವ ಕಾರಣವೂ ಇಲ್ಲದೆ ಕೇವಲ ವ್ಯಾಪಾರೀ ಮಾಯಾಜಾಲದಿಂದಆಹಾರ-ಸಾಮಗ್ರಿಗಳ ಬೆಲೆಗಳು ಗಗನಕ್ಕೇರಿರುವುದೊಂದು ಇಂಥ ನಿದರ್ಶನ. ಕೇಂದ್ರ ಸರ್ಕಾರವೂ ಈ ವಿಷಯದಲ್ಲಿ ಜನಸಾಮಾನ್ಯರು ತೆಗೆದುಕೊಳ್ಳಬಹುದಾದ ನ್ಯಾಯಬದ್ಧ ಅಹಿಂಸಾತ್ಮಕ ಚಳುವಳಿಗಳಿ ಬೆಂಬಲ ನೀಡಿವೆ.

ನಮ್ಮ ನಗರದಲ್ಲಿ ಈ ಎರಡುತಿಂಗಳಿಂದ ಅವ್ಯಾಹತವಾಗಿ ಅಸ್ವಾಭಾವಿಕವಾಗಿ ಏರುತ್ತಿರುವ ಬೆಲೆಗಳನ್ನು ತ ಗಟ್ಟಬೇಕಾಗಿದೆ. ಇದು ಹಲವು ಸ್ವಾರ್ಥಪರ ದುವ್ಯಾಪಾರಿಗಳ ಕಾರ್ಯವೆಂದು ಜನಗಳೂ ಸರ್ಕಾರವೂ ಮನಗಂಡಿದ್ದಾರೆ: ಇದಕ್ಕೆಲ್ಲ ಹೊಣೆಯಾರು ?. ಕಾರ ಲ್ಲಿದೆ ? ಪರಿಹಾರದ ಮಾರ್ಗಗಳಾವುವು ಎಂಬುದನ ಜನರೇ ಕಂಡುಕೊಂಡು ನಡೆಯಬೇಕು. ಸರ್ವೋದ ಸಮಾಜಕಾರ್ಯಕರ್ತರು ವ್ಯಾಪಾರೀ ವರ್ಗದ ಮನವೊಲಿಸಿ, ಜನರಲ್ಲಿ ಇಂಥ ಅನೀತಿ ಅನ್ಯಾಯಗಳನ ಅಹಿಂಸಾತ್ಮಕವಾಗಿ ಸಾಂಘಿಕ ನೈತಿಕಬಲದಿಂದ ಎ ರಿಸಿನಿಲ್ಲುವ ಶಕ್ತಿಯನ್ನು ಪುನರುಜ್ಜೀವನಗೊಳಿ ಸೌಹಾರ್ದಯುತ ಪರಿಹಾರ ಮಾರ್ಗವನ್ನು ಕಂ ಡುಹಿಡಿಯಲು [illegible] ವ್ಯಾಪಾರಿಗಳ ಅಂಗಡಿ ಮುಂದೆ ಶಾಂತರೀತಿಯ ಪಿಕೆಟಿಂಗ್' ನಡೆಸಲು ನಿಧ ಸಿದ್ದಾರೆ ಪ್ರಭಾವಶಾಲಿಯೂ, ಅನೇಕ ವರ್ಷಗಳ ಸಾರ್ವಜನಿಕ ಜೀವನದಲ್ಲಿ ಗಾಂಧೀ ಮಾರ್ಗವ ಅನುಸರಿಸಿ ಕಷ್ಟಸಮಸ್ಯೆಗಳನ್ನು ಪರಿಹರಿಸಿಯೂ ಇರ ಕಾಂಗ್ರೆಸ್ ಸಂಸ್ಥೆ ಈ ಕಾರ್ಯಕ್ರಮದಲ್ಲಿ ಮುಂದಾ ನಿಲ್ಲಬೇಕೆಂದು ವಿನಯಪೂರ್ವಕವಾಗಿ ಒತ್ತಾಯಮಾ ಬಯಸುತ್ತೇವೆ. ಹಾಗೆಯೇ ಸತ್ಯನಿಷ್ಠೆ ಸೇವಾಮನೆ ಭಾವವುಳ್ಳ ಎಲ್ಲ ಸಂಸ್ಥೆಗಳನ್ನೂ ವ್ಯಕ್ತಿಗಳನ್ನೂ ಕಾರ ನೀಡಬೇಕೆಂದು ಕೈಮುಗಿದು ಪ್ರಾರ್ಥಿಸುತ್ತೇ

ಸರ್ವೋದಯ ಸಮಾಜ ಕಾರ್ಯಕರ್ತ

ಚಾಮರಾಜನಗರ-ಕೊಯಮತ್ತೂರು ರೈಲ್ವೆ

ಚಾಮರಾಜನಗರ ಮತ್ತು ಕೊಯಮತ್ತೂರು ರೈ ಯನ್ನು ಹಾಕಲು ಆಗಬೇಕಾಗಿರುವ ಪೂರ್ವಭಾವಿ ಕೆ ಗಳೆಲ್ಲವೂ ಮುಗಿದಿವೆಯೆಂದೂ ಮುಂದಿನ ಕೆಲಸಗ ತ್ವರಿತವಾಗಿ ನಡೆಸಲು ತಕ್ಕ ಕಾರ್ಯಕ್ರಮವನ್ನು ಕೂ ಕೈಗೊಳ್ಳಲಾಗುವುದೆಂದು ತಿಳಿಯುಬರುತ್ತದೆ.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು ! ಬಹು ಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೇಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು.

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ;

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ಶಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ರಣಜಿತ್ ಟಾಕೀಸ್
ಅಮೋಘ 3ನೆ ವಾರ
ತಾ|| 25-8-50 ರಿಂದ
ಎ. ವಿ. ಎಂ ರವರ ತೆಲುಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ,
* ವೈಜಯಂತಿಮಾಲ ಮುಂತಾದವರು.
ಬೆಳಗಿನ ಪ್ರದರ್ಶನ: ೩ ದಿನಗಳು ಮಾತ್ರ
ಏಕ್ ರಾತ್
ಪಾತ್ರ--: * ಪೃಥ್ವಿರಾಜ್ * ನೀನಾ
ಹಿಂದೀ ಚಿತ್ರ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ
ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕ
ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂ
ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂ

★ ಅಲ್ಪಲಾಭಗಳಿಂದಲೇ ತೃಪ್ತಿಹೊಂದಿ

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ **Phone: 574**

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್ ಸ್ವಾಮಿ

ಸಂಪುಟ ೧] ೨೮—೮—೧೯೫೦ ನೇ ಸೋಮವಾರ [ಸಂಚಿಕೆ ೧೮

ಬಡತನವು ಕೆಲವರಲ್ಲಿ ನಮ್ರತೆಯನ್ನೂ ಹಲವರಲ್ಲಿ ಉಗ್ರತೆಯನ್ನೂ ಉಂಟುಮಾಡುತ್ತದೆ. ಆದಕಾರಣ, ಪುರೋಭಿವೃದ್ಧಿಸಾಧನೆಯ ಅವಕಾಶಗಳೂ ಮತ್ತು ಲಾಭದ ಭಾಗಗಳೂ ಅದೃಷ್ಟಹೀನರಾದ ದೇಶಬಾಂಧವರಿಗೂ ಲಭಿಸುವಂತೆ ಮಾಡುವುದೂ ಮತ್ತು ಈ ವಿಷಯದಲ್ಲಿ ಆತ್ಮಸಂತೋಷದಿಂದ ತಾವಾಗಿಯೇ ವರ್ತಿಸುವುದೂ, ಶ್ರೇಷ್ಠವಾದ ನಡವಳಿಕೆ.

ಮೈಸೂರು ಶ್ರೀಮನ್ಮಹಾರಾಜರು.

ಶ್ರೀಮನ್ಮಹಾರಾಜರವರು

ಬೆಂಗಳೂರಿಗೆ ಶ್ರೀಮನ್ಮಹಾರಾಜರು ಇಂದು ಬೆಳಿಗ್ಗೆ ಪ್ರಯಾಣಬೆಳಸಿದರು.

ಭಾರಿ ಪ್ರವಾಹ

ಉತ್ತರ ಪ್ರದೇಶದಲ್ಲಿ ಗಂಗಾ, ಸರಿಯೂ ಮುಂತಾದ ನದಿಗಳಲ್ಲಿ ಪ್ರವಾಹವು ವಿಶೇಷವಾಗಿ ಬಂದು ೨,೩೦೦ ಹಳ್ಳಿಗಳು ಮುಳುಗಿ ಹೋಗಿ, ೫ ಲಕ್ಷ ಜನರಿಗೆ ವಿಶೇಷ ತೊಂದರೆಯಾಗಿದೆ ಸುಮಾರು ೫ ಕೋಟಿ ರೂಪಾಯಿಗಳಷ್ಟು ಆಸ್ತಿ, ಬೆಳೆ ಮುಂತಾದುವುಗಳ ನಷ್ಟವಾಗಿರುವಂತೆ ತಿಳಿಯಬರುತ್ತದೆ.

ಓಟರುಗಳು

ಭಾರತದಲ್ಲಿ ಒಟ್ಟು ೧೮ ಕೋಟಿ ಓಟರುಗಳಿದ್ದಾರೆಂದು ಚುನಾವಣಾ ಮುಖ್ಯ ಕಮಿಷನರ್ ಶ್ರೀ ಎಸ್. ಸೇನ್‌ರವರು ತಿಳಿಸುವರು.

ಶ್ರೀ ರಾಮಸ್ವಾಮಿ ಮೊದಲಿಯಾರ್

ಪ್ರಪಂಚ ಸಂಸ್ಥೆಯ ಸೆಕ್ರೆಟರಿ ಜನರಲ್‌ರವರಾದ ಮಿ|| ಟ್ರಿಗ್ವೆಲಿಯವರ ಅಧಿಕಾರಾವಧಿಯು ಮುಗಿದ ನಂತರ ಅವರು ಪುನಃ ಆ ಸ್ಥಾನಕ್ಕೆ ನಿಲ್ಲುವುದಿಲ್ಲವೆಂದು ಮೈಸೂರು ಮಾಜಿ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರನ್ನು ಚುನಾಯಿಸಬಹುದೆಂದು ಊಹಿಸಲಾಗಿದೆ-

ಸ್ತ್ರೀಯರ ಪಾತ್ರ

ಸ್ತ್ರೀಯರು ಕಾಲೇಜುಗಳಲ್ಲಿ ಓದಿ ಡಿಗ್ರಿಗಳನ್ನು ಪಡೆಯುವುದಕ್ಕಾಗಿ ಕಾತುರರಾಗಿ ತಮ್ಮ ಕಾಲವನ್ನೆಲ್ಲಾ ವೃಥಾ ಕಳೆಯಬಾರದು. ಜೀವನವು ಸುಖಮಯವಾಗಿ ಸಾಗುವುದಕ್ಕೆ ಮತ್ತು ಜನಸೇವೆ ಮಾಡುವುದಕ್ಕೆ ತಕ್ಕಷ್ಟು ವಿದ್ಯೆಯನ್ನು ಕಲಿತರೆ ಸಾಕು ಎಂದು ಭಾರತ ದಂಡನಾಯಕ ಶ್ರೀ ಕಾರಿಯಪ್ಪನವರು ಬೊಂಬಾಯಿನ ಮಹಿಳಾಮಂಡಲಿಯವರಿತ್ತ ಸತ್ಕಾರಕೂಟದಲ್ಲಿ ಹೇಳಿದರು.

ವನಸ್ಪತಿಗೆ ಬಹಿಷ್ಕಾರ

ಮಧ್ಯಪ್ರದೇಶದಲ್ಲಿ ತುಪ್ಪತಯಾರಿಕೆಗೆ ಪ್ರಸಿದ್ಧವಾದ ಮಾಂಡ್ಯಜಿಲ್ಲೆಯ ಪ್ರಜೆಗಳ ಇಷ್ಟಾನುಸಾರ ಮಾಂಡ್ಯ ಪೌರಸಭೆಯು ತಮ್ಮ ಊರಿಗೆ ವನಸ್ಪತಿ ತುಪ್ಪವನ್ನು ಯಾರೂ ತರಿಸಕೂಡದೆಂದು ಆಜ್ಞೆಯಿತ್ತಿದೆ

ಸಾರ್ವತ್ರಿಕ ಚುನಾವಣೆ

ಭಾರತದಲ್ಲೆಲ್ಲಾ ಸಾರ್ವತ್ರಿಕ ಚುನಾವಣೆಯು ಮಾರ್ಚಿ ತಿಂಗಳ ಬದಲು ಅಕ್ಟೋಬರಿನಲ್ಲಿ ನಡೆಯಬಹುದೆಂದು ಚುನಾವಣಾ ಮುಖ್ಯ ಕಮಿಷನರ್ ಶ್ರೀ ಸೇನ್‌ರವರು ತಿಳಿಸಿರುವರು.

ಜಮೀನ್‌ದಾರಿ ರದ್ದು

ಪಂಜಾಬಿನಲ್ಲಿ ಭೂಸೌಮ್ಯ ಮತ್ತು ಜಮೀನ್ದಾರಿ ಪದ್ಧತಿಯನ್ನು ಕೂಡಲೇ ರದ್ದುಮಾಡಲು ತಕ್ಕ ಶಾಸನವನ್ನು ಮಾಡಲಿರುವರು.

ಕೃತಕ ಕೈ ಕಾಲುಗಳು

ಕೇಂದ್ರೀಯ ಸೈನ್ಯಶಾಖೆಗೆ ಸೇರಿದ ಕೃತಕ ಕೈ ಕಾಲು ಕೇಂದ್ರವು ಪೂನಾದಲ್ಲಿದೆ. ಭಾರತದಲ್ಲೆಲ್ಲಾ ಇದೊಂದೇ ಕೇಂದ್ರ. ಸಮರದಲ್ಲಿ ಕೈ ಕಾಲುಗಳನ್ನು ಕಳೆದುಕೊಂಡವರಿಗೆ ಇಲ್ಲಿ ಕೃತಕ ಕೈ ಕಾಲುಗಳನ್ನು ತಯಾರಿಸಿ ಮನುಷ್ಯನ ಶರೀರಕ್ಕೆ ಜೋಡಿಸುವರು. ನಡೆಯುವುದು, ಓಡುವುದು, ವಾಹನಗಳನ್ನು ನಡೆಸುವುದು ಮುಂತಾದ ಕಾರ್ಯಗಳೆಲ್ಲಾ ಯಾವ ಆತಂಕವೂ ಇಲ್ಲದೆ ಈ ಕೃತಕ ಕೈ ಕಾಲುಗಳ ಉಪಯೋಗದಿಂದ ನಡೆಸಬಹುದು. ಬರ್ಮಾದಿಂದ ಬಂದ ೬ ಜನ ಸೈನಿಕರಿಗೆ ಈ ಚಿಕಿತ್ಸೆ ಮಾಡಿ ಕಳುಹಿಸಲಾಗಿದೆ ಇದು ಬರ್ಮಾದಿಂದ ಬಂದ ಮೂರನೇ ತಂಡ.

ಪುನಃ ಭೂಕಂಪ

ಉತ್ತರ ಅಸ್ಸಾಂ, ಮೇಲಣ ಅಸ್ಸಾಂ ಮುಂತಾದ ಅಸ್ಸಾಂನ ನಾನಾ ಭಾಗಗಳಲ್ಲಿ ನಿನ್ನೆ, ಮೊನ್ನೆ ಪುನಃ ಭೂಕಂಪಗಳಾದುವು ದಿಬ್ರೂಘರಿನಲ್ಲಿ ೧೦ ಸೆಕೆಂಡುಗಳ ಕಾಲ ಭೂಕಂಪವಾಗಿ ಅನೇಕ ಕಟ್ಟಡಗಳಿಗೆ ನಷ್ಟ ಸಂಭವಿಸಿದೆ ಶೇಕಡ ೮೦ ಕ್ಕಿಂತ ಹೆಚ್ಚಾಗಿ ಕಟ್ಟಡಗಳೆಲ್ಲವೂ ಹಾಳಾಗಿವೆ ಸಂಪೂರ್ಣ ದಿಬ್ರೂಘರ್ ಊರೆಲ್ಲವೂ ಹಾಳಾಗುವ ಸಂಭವವಿದೆ. ಮೇಲಣ ಅಸ್ಸಾಂನಲ್ಲಿ ನಿನ್ನೆ ನಡೆದ ಭೂಕಂಪದ ಪರಿಣಾಮವಾಗಿ ಅನೇಕ ಎಣ್ಣೆ ಕೇಂದ್ರದ ಕಟ್ಟಡಗಳಿಗೂ, ಟೀ ತೋಟಗಳಿಗೂ ವಿಶೇಷ ನಷ್ಟವಾಗಿದೆ. ಆಹಾರದ ಪದಾರ್ಥಗಳನ್ನು ವಿಮಾನ ಮೂಲಕ ಕೊಂಡೊಯ್ದು ಈ ಸ್ಥಳಗಳಿಗೆ ವಿಮಾನದಿಂದಲೇ ಹಾಕಲು ಸಾಧ್ಯವಿಲ್ಲದೆ ವಿಮಾನಗಳೆಲ್ಲಾ ಹಿಂತಿರುಗಿದುವು. ಪ್ಯಾರಚೂಟ್ ಮೂಲಕ ಆಹಾರವನ್ನೊದಗಿಸುವ ಪ್ರಯತ್ನಗಳು ನಡೆಯುತ್ತಲಿವೆ.

ಬೀಹಾರಿನಲ್ಲಿ ಭಾರಿಪ್ರವಾಹ

ಬೀಹಾರ್ ಪ್ರಾಂತ್ಯದಲ್ಲಿರುವ ಕೋಶಿ ನದಿಯಲ್ಲಿ ಪ್ರವಾಹವು ಅಧಿಕವಾಗಿ ಬಂದು ಸುಮಾರು ೫೦೦ ಹಳ್ಳಿಗಳು ನೀರಿನಲ್ಲಿ ಮುಳುಗಿ ಹೋಗಿವೆ. ಅನೇಕ ರಸ್ತೆಗಳು ಹಾಳಾಗಿ ಹೋಗಿರುವುದಲ್ಲದೆ ಪೈರುಗಳೆಲ್ಲಾ ನಾಶವಾಗುತ್ತಲಿವೆ.

ಇಂದು ಬೆಳಿಗ್ಗೆ ಶ್ರೀಮನ್ಮಹಾರಾಜರವರು ಬೆಂಗಳೂರಿನಲ್ಲಿ ಶ್ರೀ ದಾಸಪ್ಪನವರು ಉದಾರದಾನಮಾಡಿ ಕಟ್ಟಿಸಿರುವ ದಾಸಪ್ಪ-ತಿರುಮಲಮ್ಮ ಹೆರಿಗೆ ಆಸ್ಪತ್ರೆಯ ಪ್ರವೇಶ ಮಹೋತ್ಸವವನ್ನು ನೆರವೇರಿಸಿದರು.

ಶ್ರೀಮನ್ಮಹಾರಾಜರವರು ಈ ಮಹೋತ್ಸವವನ್ನು ನೆರವೇರಿಸಲು ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾ :—

ಬೆಂಗಳೂರಿಗೆ ಬರುವುದಕ್ಕೆ ನಮಗೆ ಯಾವಾಗಲೂ ಅಕ್ಕರೆಯುಂಟು. ಬೆಂಗಳೂರಿನ ಹಿತವಾದ ವಾಯುಗುಣವೂ, ವಾಣಿಜ್ಯ ದೃಷ್ಟಿಯಿಂದ ಮತ್ತು ಆಡಳಿತ ದೃಷ್ಟಿಯಿಂದ ಬೆಂಗಳೂರಿಗೆ ಇರತಕ್ಕ ಪ್ರಾಧಾನ್ಯವೂ ಮಾತ್ರವೇ ಇದಕ್ಕೆ ಕಾರಣವಲ್ಲ. ನಾನಾ ಧರ್ಮಕಾರ್ಯಗಳನ್ನು ಆಗಾಗ್ಗೆ ನೆರವೇರಿಸಿ, ಅವುಗಳ ಸಂಬಂಧವಾಗಿ ನಡೆಯುವ ಉತ್ಸವಗಳಲ್ಲಿ ನಾವು ಭಾಗವಹಿಸುವುದಕ್ಕೂ, ಧರ್ಮಕರ್ತರ ಸೇವಾಕಾಂಕ್ಷೆಗಾಗಿ ಮತ್ತು ತ್ಯಾಗಬುದ್ಧಿಗಾಗಿ ನಾವು ಅವರನ್ನು ಪ್ರತ್ಯಕ್ಷವಾಗಿ ಅಭಿನಂದಿಸುವುದಕ್ಕೂ, ಅವಕಾಶಗಳನ್ನು ಕಲ್ಪಿಸುತ್ತಿರುವ ಅನೇಕ ಮಂದಿ ಧರ್ಮಾತ್ಮರಾದ ಮಹಾಶಯರೂ ಮಹಿಳೆಯರೂ ಈ ನಗರದಲ್ಲಿರುವುದೂ ಕೂಡ, ಅದಕ್ಕೆ ಕಾರಣವಾಗಿದೆ. ಸೇವಾಬುದ್ಧಿಯುಳ್ಳ ಧರ್ಮಾತ್ಮರಿಂದ ವಿಶೇಷವಾಗಿ ಈಚಿನ ವರ್ಷಗಳಲ್ಲಿ ಅನೇಕ ಧರ್ಮಕಾರ್ಯಗಳು ನಡೆಯುತ್ತಾ ಬಂದಿವೆ. ಹೀಗೆ ನಡೆಯುವ ಧರ್ಮಕಾರ್ಯಗಳು ಆಯಾ ಧರ್ಮಕರ್ತರ ಸಾಧನ ಸಂಪತ್ತುಗಳಿಗೆ ಅನುಗುಣವಾದ ಪ್ರಮಾಣಗಳಲ್ಲಿ ಮತ್ತು ಅವರ ಅಭಿರುಚಿಗಳಿಗೆ ಅನುಗುಣವಾದ ರೂಪಗಳಲ್ಲಿ ನಡೆದಿರುವುದು ಸಹಜವಾಗಿಯೇ ಇದೆ ಬಾಧೆಪಡುತ್ತಿರುವವರ ಬಾಧೆಯನ್ನು ಪರಿಹರಿಸುವ ವ್ಯಸ್ಥೆಗಿಂತಲೂ ಉತ್ತಮವಾದ ಧರ್ಮಕಾರ್ಯವು ಮತ್ತಾವುದೂ ಇಲ್ಲ. ಗರ್ಭಿಣಿಯರ ಹೆರಿಗೆಯ ಕಾಲದಲ್ಲಿ ಅವರಿಗೆ ಸಹಾಯಮಾಡಿ ನೋಡಿಕೊಳ್ಳುವುದಕ್ಕಿಂತಲೂ ಶ್ರೇಷ್ಠವಾದ ಪುಣ್ಯಕಾರ್ಯವು ಮತ್ತಾವುದೂ ಇಲ್ಲ. ನಮ್ಮಲ್ಲಿ ಪರೋಪಕಾರಿಗಳಾದ ಧರ್ಮಾತ್ಮರಲ್ಲಿ ಪ್ರತಿಯೊಬ್ಬರೂ ಪ್ರಥಮತಃ ಇಷ್ಟೆ [illegible], ಸಂಸ್ಥಾನದ ನಾನಾ ಭಾಗಗಳಲ್ಲಿಯೂ ಸುಸಜ್ಜಿತವಾದ ತಕ್ಕಷ್ಟು ಸಂಖ್ಯೆಯ ಹೆರಿಗೆ ಆಸ್ಪತ್ರೆಗಳೂ, ಹೆರಿಗೆ ಶಾಲೆಗಳೂ ಮತ್ತು ಹೆರಿಗೆ ವಾರ್ಡುಗಳೂ ಏರ್ಪಡಲು ಅನುಕೂಲವಾಗುವುದು.

ಅಸಾಧಾರಣವಾದ ವೆಚ್ಚಗಳ ಭಾರವನ್ನು ವಹಿಸಬೇಕಾಗಿರುವ ಈಗಿನ ಪರಿಸ್ಥಿತಿಯಲ್ಲಿ ಕೂಡ, ಸರ್ಕಾರದವರು ಸಾಮಾನ್ಯವಾಗಿ ವೈದ್ಯಸಹಾಯವನ್ನೊದಗಿಸುವ ವೆಚ್ಚಗಳಿಗೂ ಮತ್ತು ವಿಶೇಷವಾಗಿ ಮಹಿಳೆಯರ ಮತ್ತು ಮಕ್ಕಳ ಯೋಗಕ್ಷೇಮವನ್ನು ಸಾಧಿಸುವ ವೆಚ್ಚಗಳಿಗೂ

ಧಾರಾಳವಾಗಿ ಹಣವನ್ನೊದಗಿಸುತ್ತಿದ್ದಾರೆ. ಘನತರವಾದ ಈ ಉದ್ದೇಶಕ್ಕಾಗಿ ಇನ್ನೂ ಹೆಚ್ಚಿಗೆ ಹಣವನ್ನೊದಗಿಸುವುದು ಸರ್ಕಾರದವರಿಗೆ ಸಾಧ್ಯವಿದ್ದಪಕ್ಷದಲ್ಲಿ, ಅವರು ಸಂತೋಷದಿಂದ ಆ ರೀತಿ ಮಾಡುತ್ತಿದ್ದರು. ಆದಾಗ್ಗ್ಯೂ, ಎಷ್ಟೇ ಅನುಕೂಲ ಪರಿಸ್ಥಿತಿಗಳೇ ಇರುವಾಗಲೂ ಕೂಡ, ಸರ್ಕಾರದವರು ಈ ವೆಚ್ಚಗಳಿಗೆ ಹಣವನ್ನೊದಗಿಸುವುದಕ್ಕೂ ಒಂದು ಮಿತಿಯಿರಬೇಕೆಂಬುದು ನಿಮಗೆ ಗೊತ್ತೇ ಇದೆ. ಸರ್ಕಾರದವರು ಈ ವೆಚ್ಚಗಳಿಗೆ ಇನ್ನೂ ಹೆಚ್ಚು ಹಣವನ್ನೊದಗಿಸುವುದು ಈಗ ಸಾಧ್ಯವಿಲ್ಲ. ಆದಕಾರಣ, ಸರ್ಕಾರದವರು ಒದಗಿಸುವ ಹಣದ ಜೊತೆಗೆ, ಸ್ಥಳೀಯ ಸಂಸ್ಥೆಗಳೂ, ಧನಿಕರಾದ ಪ್ರಜೆಗಳೂ ಮತ್ತು ಸಂಸ್ಥಾನ ಪ್ರೇಮಿಗಳೂ ಹಣವನ್ನೊದಗಿಸಿ ಸಹಾಯ ಮಾಡುವುದು ಅವಶ್ಯಕವಾಗಿದೆ.

ವರ್ತಕ ಸಮುದಾಯದವರು ಹಿಂದಿನಿಂದಲೂ ಅನೇಕ ವಿಧಗಳ ಧರ್ಮಕಾರ್ಯಗಳನ್ನು ಮಾಡುವ ಮೂಲಕ [illegible]ಯಲ್ಲಿ ವರ್ತಿಸುತ್ತಿದ್ದಾರೆ. ನಮ್ಮ ದೇಶದಲ್ಲಿರುವ ಭವ್ಯತರವಾದ ಭಾರಿ ಭಾರಿ ದೇವಾಲಯಗಳು, ಧರ್ಮಶಾಲೆಗಳು, ಅನ್ನದಾನ ವ್ಯವಸ್ಥೆಗಳು, ಅಧಿಕ ಸಂಖ್ಯೆಯ ತೋಪುಗಳು, ಗೋಕಟ್ಟೆಗಳು, ಕುಡಿಯುವ ನೀರಿನ ಭಾವಿಗಳು, ಮುಂತಾದುವು ಅವರ ವಿವಿಧ ಧರ್ಮಕಾರ್ಯಗಳ ಕೆಲವು ನಿದರ್ಶನಗಳಾಗಿವೆ. ಗರ್ಭಿಣಿಯರ ಮತ್ತು ಮಕ್ಕಳ ಹಿತಸಾಧನೆಯು ತ್ವರ್ಯವಾಗಿ ನಡೆಯಬೇಕಾಗಿರುವ ಪ್ರಾಮುಖ್ಯ ಕಾರ್ಯವಾಗಿದೆ. ಅದು ಇನ್ನೂ ಸಮರ್ಪಕವಾಗಿ ನಡೆಯುವಂತೆ ಅವರು ಅದಕ್ಕೂ ಹೆಚ್ಚು ಹೆಚ್ಚಾಗಿ ಅನುಕೂಲಗಳನ್ನು ಕಲ್ಪಿಸಿ ಸಹಾಯ ಮಾಡಬೇಕೆಂದು ನಾವು ಸೂಚಿಸಲಿಚ್ಛಿಸುತ್ತೇವೆ. ಧರ್ಮಕಾರ್ಯಗಳಿಂದ ಧರ್ಮಕರ್ತರಿಗೆ ಲಭಿಸುವ ಪರಮ ತೃಪ್ತಿ ಸಂತೋಷಗಳೇ ಅವಕ್ಕೆ ಶ್ರೇಷ್ಠತಮವಾದ ಮತ್ತು ಘನತಮವಾದ ಪ್ರತಿಫಲಗಳೆಂದು ನಮ್ಮ ವರ್ತಕರಲ್ಲಿ ಬಹುಮಂದಿಗಳಿಗೆ ಮನವರಿಕೆಯಾಗಿದೆ. ಅವರಲ್ಲಿ ಹೆಚ್ಚು ಹೆಚ್ಚು ಮಂದಿಗಳು ಇನ್ನೂ ಭಾರಿ ಭಾರಿ ಪ್ರಮಾಣಗಳಲ್ಲಿ ವೈದ್ಯಸಹಾಯವನ್ನು ದೊರೆಯಿಸುವ ಧರ್ಮಕಾರ್ಯಗಳನ್ನು ನೆರವೇರಿಸಲು ಉತ್ಸಾಹದಿಂದ ಮುಂದೆ ಮುಂದೆ ಬರುವರೆಂದು ನಂಬಿದ್ದೇವೆ.

ಈಗ ಪ್ರಪಂಚದಲ್ಲೇ ಆವರಿಸಿರುವ ಕೋಟಲೆಗಳನ್ನು ಕುರಿತು ಈ ಸಂಬಂಧದಲ್ಲಿ ಒಂದೆರಡು ಸಂಗತಿಗಳನ್ನು ಸೂಚಿಸಬಹುದಾಗಿದೆ. ಅವುಗಳನ್ನು ಯಾವ ಹೆಸರುಗಳಿಂದಲೇ ಕರೆಯಲಿ, ಅವುಗಳು ಸಮಾಜದಲ್ಲಿ ಉಂಟಾಗಿರುವ ಅವ್ಯವಸ್ಥೆಯ ಫಲ; ಹಣದ ಮತ್ತು ಸಾಧನಸಂಪತ್ತುಗಳ ಹಂಚಿಕೆಯೂ, ಪ್ರೋತ್ಸಾಹ ಪ್ರತಿಫಲಗಳು ಲಭಿಸುವ ಸನ್ನಿವೇಶಗಳೂ ಮತ್ತು ಪುರೋಭಿವೃದ್ಧಿ ಸಾಧನೆಯ ಅವಕಾಶಗಳೂ ಯುಕ್ತ ರೀತಿಯಲ್ಲಿಲ್ಲದ ಕಾರಣದಿಂದ ಹುಟ್ಟಿದ ಅಸಮಾಧಾನ ಪೂರಿತವಾದ ಅತೃಪ್ತಿ, ಕುಂಠಿತವಾದ ಸಹಕಾರ, ಗೂಢವಾಗಿ ಹೂಡುವ ಪ್ರತಿಬಂಧ ಅಥವಾ ಬಹಿರಂಗವಾಗಿ ಪ್ರಕಟಿಸುವ ವಿರೋಧ - ಇವುಗಳ ದಾರುಣ ಪರಿಣಾಮ. ಏಕೆಂದರೆ, ಬಡತನವು ಕೆಲವರಲ್ಲಿ ನಮ್ರತೆಯನ್ನೂ ಹಲವರಲ್ಲಿ ಉಗ್ರತೆಯನ್ನೂ ಉಂಟುಮಾಡುತ್ತದೆ. ಆದಕಾರಣ, ಪುರೋಭಿವೃದ್ಧಿ ಸಾಧನೆಯ ಅವಕಾಶಗಳೂ ಮತ್ತು ಲಾಭದ ಭಾಗಗಳೂ ಅದೃಷ್ಟಹೀನ ದೇಶಬಾಂಧವರಿಗೂ ಲಭಿಸುವಂತೆ ಮಾಡುವುದೂ ಮತ್ತು ಈ ವಿಷಯದಲ್ಲಿ ಆತ್ಮಸಂತೋಷದಿಂದ ತಾವಾಗಿಯೇ ವರ್ತಿಸುವುದೂ, ಶ್ರೇಷ್ಠವಾದ ನಡವಳಿಕೆಯೆಂದು ತೋರುತ್ತದೆ. ಋಜುಮಾರ್ಗಾವಲಂಬಿಗಳಾಗಿ ಅಲ್ಪಲಾಭಗಳಿಂದಲೇ ತೃಪ್ತಿ ಹೊಂದಿ, ಆ ಅಲ್ಪ ಲಾಭದಲ್ಲಿ ಕೂಡ ಗಣನೀಯವಾದ ಭಾಗವನ್ನು ಇತರರ ಕಷ್ಟ ಪರಿಹಾರಕ್ಕಾಗಿ ವಿನಿಯೋಗಿಸುವ ಶ್ರೀ ಬಾಸಪ್ಪನವರಂಥ ವರ್ತಕರೆಲ್ಲರೂ ವಿಶೇಷ ಗೌರವಕ್ಕೆ ಅರ್ಹರಾಗಿದ್ದಾರೆ.

ಹಿಂದಿದ್ದ ಬೆಂಗಳೂರು ಸಿಟಿ ಮತ್ತು ಕಂಟೋನ್ಮೆಂಟ್ ಮುನಿಸಿಪಾಲಿಟಿಗಳು ಸುವ್ಯವಸ್ಥಿತವಾಗಿ ರೂಢಮೂಲವಾಗಿದ್ದ ಸಂಸ್ಥೆಗಳಾಗಿದ್ದುವು. ಅವುಗಳಿಗೆ ಬದಲಾಗಿ ಈಚೆಗೆ ಏರ್ಪಟ್ಟಿರುವ ಈಗಿನ "ಕಾರ್ಪೊರೇಷನ್" ಸಂಸ್ಥೆಯು ಅಭಿವೃದ್ಧಿಸ್ಥಿತಿಗೆ ಬರುವುದಕ್ಕೆ, ಸದ್ಭಾವನೆಗಳಿಂದ ಪ್ರೇರಿತರಾದ ಬೆಂಗಳೂರು ನಿವಾಸಿಗಳಲ್ಲಿ ಪ್ರತಿಯೊಬ್ಬರ ಸಹಾಯ ಸಹಕಾರಗಳೂ ಅವಶ್ಯಕ; ಉಪಕಾರ ಬುದ್ಧಿಯುಳ್ಳ ಧರ್ಮಾತ್ಮರ ಪರ್ಯಾಲೋಚನೆಗಾಗಿ ನಾವು ಒಂದೆರಡು ಸಲಹೆಗಳನ್ನು ಸೂಚಿಸಲಿಚ್ಛಿಸುತ್ತೇವೆ. ಮೊದಲನೆಯದಾಗಿ, ಹೆರಿಗೆ ಆಸ್ಪತ್ರೆಗಳನ್ನು ನಡೆಯಿಸಿಕೊಂಡು ಬರುವುದಕ್ಕಾಗಿ ದೊಡ್ಡದೊಂದು ನಿಧಿಯನ್ನು ಏರ್ಪಡಿಸುವುದು ಅವಶ್ಯಕ. ಹೆರಿಗೆ ಆಸ್ಪತ್ರೆಗಳನ್ನು ಕಟ್ಟಿಸಿಕೊಡುವ ಧರ್ಮಕಾರ್ಯದಂತೆಯೇ ಇಂಥ ನಿಧಿಯನ್ನು ಏರ್ಪಡಿಸುವುದೂ ಕೂಡ, ಮುಖ್ಯವಾದ ಮತ್ತು ಶ್ಲಾಘ್ಯವಾದ ಧರ್ಮಕಾರ್ಯವಾಗಿದೆ. ಎರಡನೆಯದಾಗಿ, ಹೆರಿಗೆ ಆಸ್ಪತ್ರೆಗಳಿಗೆ ಸೇರಿದಂತೆ, ಧರ್ಮಾರ್ಥವಾಗಿ ಹಾಲನ್ನು ಹಂಚುವ ಕೇಂದ್ರಗಳನ್ನೂ, ಮಕ್ಕಳ ಆಟದ ಬಯಲುಗಳನ್ನೂ, ಮತ್ತು ಗರ್ಭಿಣಿಯರ ಉಪಯೋಗಕ್ಕಾಗಿ ಉತ್ತಮರೀತಿಯ ಉದ್ಯಾನಗಳನ್ನೂ ಏರ್ಪಡಿಸುವುದರಿಂದ ಹೆಚ್ಚು ಪ್ರಯೋಜನವುಂಟು. —ಎಂದು ನುಡಿದರು.

ಕೇಂದ್ರೀಕರಣದಲ್ಲಿ ಮಿತಿಯಿರಬೇಕು

ವಿದ್ಯಾಸಚಿವ ಶ್ರೀ ಸಿದ್ದಲಿಂಗಯ್ಯ ಮತ್ತು ಮಾಜಿ ದಿವಾನ್ ಶ್ರೀ ಮಾಧವರಾಯರ ಸ್ಪಷ್ಟೋಕ್ತಿ

ಆಡಿಟರ್ ಜನರಲ್ ಮತ್ತು ಚೀಫ್‌ಸೆಕ್ರೆಟರಿ ಇವರಿಬ್ಬರನ್ನೂ ಕೇಂದ್ರದಿಂದ ಪ್ರತಿಯೊಂದು ಪ್ರಾಂತೀಯ ಸರ್ಕಾರದ ಮೇಲ್ವಿಚಾರಣೆಯಲ್ಲಿರಿಸಿ, ಒಳಾಡಳಿತವನ್ನೆಲ್ಲಾ ಪ್ರಾಂತೀಯ ಸರ್ಕಾರಕ್ಕೆ ಬಿಡುವುದು ಕ್ಷೇಮ. ಎಲ್ಲಾ ಆಡಳಿತ ಖಾತೆಗಳನ್ನೂ ಕೇಂದ್ರೀಕರಿಸುವ ನೀತಿಯಿಂದ ಪ್ರಾಂತ್ಯಗಳಲ್ಲಿ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುವುದಿಲ್ಲ. ಒಂದಿಲ್ಲೊಂದುದಿನ ಈಗಿನ ಸರ್ಕಾರದ ನೀತಿಗೆ ಆಘಾತವುಂಟಾಗುವುದು, ಎಂದು ಮೈಸೂರು ವಿದ್ಯಾಸಚಿವ ಶ್ರೀ ಸಿದ್ದಲಿಂಗಯ್ಯನವರು ನಿನ್ನೆ ಬೆಂಗಳೂರಿನಲ್ಲಿ ಲಾಕಾಲೇಜು ಸಂಘದ ಆರಂಭೋತ್ಸವದ ಅಧ್ಯಕ್ಷತೆ ವಹಿಸಿದ್ದಾಗ ಹೇಳಿದರು. ಮೈಸೂರು ದಿವಾನರಾಗಿದ್ದ ಶ್ರೀ ಎನ್. ಮಾಧವರಾಯರು ಆರಂಭ ಭಾಷಣ ಮಾಡಿದರು. ಅವರೂ ಸಹ ತಮ್ಮ ಭಾಷಣದಲ್ಲಿ ಅಧಿಕಾರ ಕೇಂದ್ರೀಕೃತವಾಗಿರುವುದರಿಂದ ಸಮ್ಮಿಶ್ರ ಫಲ ದೊರೆತಿದೆ. ಅನ್ಯೋನ್ಯ ಸಂಬಂಧ ಕಲ್ಪಿಸುವ ಸೋಗಿನಲ್ಲಿ ಪ್ರಾಂತಗಳ ಅಧಿಕಾರವನ್ನು ಬಹಳ ಕುಂಠಿತಗೊಳಿಸಲಾಗಿದೆ. ಕೇಂದ್ರ ಸರ್ಕಾರವು ಪ್ರಾಂತೀಯ ಸರ್ಕಾರಗಳ ಕೆಲಸ ಕಾರ್ಯಗಳಲ್ಲಿ ಆಗೊಮ್ಮೆ ಈಗೊಮ್ಮೆ

ನ್ಯಾಯವಿಧಾಯಕ ಸಭೆ

ಬೆಂಗಳೂರಿನಲ್ಲಿ ಇಂದು 12 ಗಂಟೆಗೆ ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನವು ಶ್ರೀ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಮೈಸೂರಿನ ರಾಜಪ್ರಮುಖರು ಆರಂಭೋತ್ಸವ ಭಾಷಣ ಮಾಡಿದರು.

ರೇಡಿಯೋ

ಆಗಸ್ಟ್ ೨೯ ಮಂಗಳವಾರ

೩೧೦ ಮೀಟರು ೪೯-೪೬ ಮೀಟರು

ಬೆಳಿಗ್ಗೆ ೭-೦ ಉದಯಗಾನ, ಕಾರ್ಯಕ್ರಮ ವಿವರಣೆ ೭-೫ ಚಿತ್ರಗೀತ್ ೭-೧೫ ಸಂಗೀತ (ಚಿಕ್ಕಸ್ವಾಮಿ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಹಿಂದೀಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಪಿಟೀಲು (ಚಲುವರಂಗರಾಜು) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಕರ್ನದೇವಿ (ರ) ೨-೦ ಸಂಗೀತ (ಚಿಕ್ಕಸ್ವಾಮಿ) ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ (ಆರ್. ಕೆ. ಶ್ರೀಕಂಠನ್)೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೆ ೭-೫ ಆರಮನೆ ಕರ್ನಾಟಕ ಬ್ಯಾಂಡು ೭-೩೦ ಕನ್ನಡ ಭಾಷಣ-ಕೈದೋಟ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಪಿಟೀಲು (ಚಲುವರಂಗರಾಜು) ೮-೩೦ ಸಂಗೀತ (ಆರ್. ಕೆ. ಶ್ರೀಕಂಠನ್) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿ ವಾರ್ತೆಗಳು ೯-೩೦ ರಾಜಗೋಪಾಲಕವ ೯ (ರ) ೧೦-೦ ಮುಕ್ತಾಯ.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ "ಸಮಾಚಾರ" ದಿನ ಪತ್ರಿಕೆಯನ್ನು ಚಂದಾದಾರರಿಗೆ ಹಂಚಿ ಚಂದಾವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ. ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
"ಸಮಾಚಾರ" ದಿನಪತ್ರಿಕೆ.

ರಣಜಿತ್ ಟಾಕೀಸ್
ಅಮೋಘ 3ನೆ ವಾರ
ತಾ|| 25-8-50 ರಿಂದ
ಎ. ವಿ. ಎಂ ರವರ ತೆಲುಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ,
* ವೈಜಯಂತಿಮಾಲ ಮುಂತಾದವರು.
ಬೆಳಗಿನ ಪ್ರದರ್ಶನ: ೩ ದಿನಗಳು ಮಾತ್ರ
ಏಕ್ ರಾತ್
ಪಾತ್ರ —: * ಪೃಥ್ವಿರಾಜ್ * ಮೀನಾ
ಹಿಂದೀ ಚಿತ್ರ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಶಾಸನಸಭೆಯ ವಿಶೇಷ ಅಧಿವೇಶನ

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ
Phone: 574

ಸಮಾಚಾರ

SAMACHARA, MYSORE
ಸಂಪಾದಕ: ಜಿ. ಎಲ್ ಸ್ವಾಮಿ
ಸಂಪುಟ ೧] ೧[illegible]——೧೯೫೦ ನೇ ಮಂಗಳವಾರ [ಸಂಚಿಕೆ ೧[illegible]

ಭಾರತವು ಈಗ ಕ್ಲೇಶದಾಯಕವಾದ ಕಷ್ಟಪರಿಸ್ಥಿತಿಯಲ್ಲಿದೆ. ಇದುವರೆಗಿನ ತೊಂದರೆಗಳೇ ದುರ್ಲಭವಾಗಿರುವಲ್ಲಿ ಅವುಗಳ ಜೊತೆಗೆ ಭಾರತದ ನಾನಾಭಾಗಗಳಲ್ಲಿ ಅನಾವೃಷ್ಟಿ, ಪ್ರವಾಹ, ಭೂಕಂಪ-ಇವೇ ಮುಂತಾದದಾರುಣ ವಿಪತ್ತುಗಳು ಬೇರೆ ಒದಗಿವೆ. ಅವುಗಳಿಂದ ಅನೇಕರು ನಾನಾ ಕಷ್ಟಗಳಿಗೂ ಗುರಿಯಾಗಿ ದುಃಖದಲ್ಲಿ ಮುಳುಗಿ ತೇಲುತ್ತಲಿದ್ದಾರೆ. ಈ ವಿಪತ್ತುಗಳಿಂದ ನೊಂದು ನರಳುತ್ತಿರುವವರಿಗೆ ನಮ್ಮೆಲ್ಲರ ಮನಃಪೂರ್ವಕ ಸಹಾನುಭೂತಿಯನ್ನು ಸೂಚಿಸಲಿಚ್ಛಿಸುತ್ತೇವೆ. ನಮ್ಮ ಸಂಸ್ಥಾನದಲ್ಲಿ ಕೂಡ, ಹಲವು ಸಮಸ್ಯೆಗಳನ್ನು ನಾವು ಎದುರಿಸಬೇಕಾಗಿದೆ. ನಾವೆಲ್ಲರೂ ಆತ್ಮಭರವಸೆಯಿಂದಲೂ, ಮತ್ತು ಧೈರ್ಯಸ್ಥೈರ್ಯಗಳಿಂದಲೂ ಅವುಗಳನ್ನು ದುರಿಸಿನಿಂತು, ಅವುಗಳನೆಲ್ಲ ಬಗೆಹರಿಸಿ, ಪ್ರಗತಿ ಸಾಧನೆ ಮಾಡುವಂತೆ ಭಗವಂತನು ಅನುಗ್ರಹಿಸಲೆಂಬುದೇ ನಮ್ಮ ಪ್ರಾರ್ಥನೆ.

ಎಂಬುದಾಗಿ ನಿನ್ನೆ ಬೆಂಗಳೂರಿನಲ್ಲಿ ನಡೆದ ಶಾಸನ ಸಭೆಯ ವಿಶೇಷ ಅಧಿವೇಶನಾರಂಭದಲ್ಲಿ ಮೈಸೂರು ರಾಜಪ್ರಮುಖರು ತಮ್ಮ ಭಾಷಣದಲ್ಲಿ ತಿಳಿಸಿದರು.

ಕೊರಿಯಾ ಯುದ್ಧದ ವಿಚಾರವಾಗಿ ಪ್ರಸ್ತಾಪಿಸುತ್ತಾ, [illegible]ಗೆ ವ್ಯಾಕುಲವನ್ನೂ ಮತ್ತು ವಿಷಾದವನ್ನೂ ಕೊರಿಯಾ ಯುದ್ಧವು ಉಂಟುಮಾಡುತ್ತಿದೆ. ಅದರ ವಿಚಾರವಾಗಿ ಭಾರತವು ತೋರಿಸಿದ ಮನೋಭಾವವು ಪ್ರಪಂಚದ ಇತರ ದೇಶಗಳ ಮೇಲೆ ಪರಿಣಾಮವುಳ್ಳದ್ದಾಗಿ ಬಹಳ ಅರ್ಥಗರ್ಭಿತವೆನಿಸಿತು. ಭಾರತದ ಮಾನ್ಯ ಪ್ರಧಾನ ಮಂತ್ರಿಯವರಿಂದ ಸೂಚಿತವಾದ ಮನೋಭಾವವು, ಶ್ರೇಷ್ಠರೀತಿಯ ರಾಜ್ಯತಂತ್ರಪರಾಕಾಷ್ಠೆಯಿಂದ ಕೂಡಿ ಭಾರತದ [illegible] ಸನಾದೀಕ್ಷೆಗನುಸಾರವಾಗಿ ಕೇವಲ [illegible]ಗಿಕವಾಗಿದ್ದುದೆನಿಸಿ ಅಂಗೀಕೃತವಾಗಿ [illegible] ಪಡೆದಿದೆ. ಕೊರಿಯಾ ಯುದ್ಧವು ಕೇವಲ ಸ್ಥಳೀಯ ಘಟನೆಯಂತೆ ಪರಿಣಮಿಸಿ ಮಿಕ್ಕೆಲ್ಲಿಗೂ ಹರಡದೇ ಅಲ್ಲಿಯೇ ಮುಕ್ತಾಯವಾಗುವಂತೆ ಮಾಡುವುದಕ್ಕಾಗಿ ನಡೆಯುತ್ತಿರುವ ಪ್ರಯತ್ನಗಳು ಸಫಲವಾಗಲೆಂದು ನಾವೆಲ್ಲರೂ ಹಾರೈಸೋಣ.

ಕಾಶ್ಮೀರ ವಿಚಾರವಾಗಿ ಹೇಳುತ್ತಾ, ಕಾಶ್ಮೀರದ ಬಿಕ್ಕಟ್ಟನ್ನು ಹೋಗಲಾಡಿಸಲು, ಭಾರತವು ಈಚೆಗೆ ಅತ್ಯಂತ ಮಹತ್ತರ ಪ್ರಯತ್ನಗಳನ್ನು ಮಾಡಿತು. ಈ ಪ್ರಯತ್ನಗಳೆಲ್ಲಾ ವಿಫಲವಾದುದು ನಮ್ಮೆಲ್ಲರಿಗೂ ವಿಷಾದಕರವಾಗಿದೆ.

ಸಂಸ್ಥಾನದ ಆಹಾರ ವಿಷಯವಾಗಿ ಪ್ರಸ್ತಾಪಿಸಿ, ಸಂಸ್ಥಾನದಲ್ಲಿಯೂ ಭಾರತದ ಇತರ ಅನೇಕ ಭಾಗಗಳಂತೆ, ಆಹಾರ ಸಮಸ್ಯೆ ಈಗಲೂ ಇನ್ನೂ ವಿಶೇಷ ಆತಂಕಜನಕವಾಗಿಯೇ ಇದೆ. ವ್ಯವಸಾಯಗಾರರಿಂದ ಆಹಾರಧಾನ್ಯಗಳನ್ನು ಸಂಗ್ರಹಿಸಿರುವ ವಿಚಾರದಲ್ಲಿ ಸಂಸ್ಥಾನದ ಪರಿಸ್ಥಿತಿಯು, ಭಾರತದ ಇತರ ಭಾಗಗಳ ಪರಿಸ್ಥಿತಿಯೊಡನೆ ಹೋಲಿಸಿದರೆ, ಉತ್ತಮವಾಗಿದೆಯೆಂದು ಹೇಳಬಹುದು. ಆದಾಗ್ಯೂ ನಾವು ತೃಪ್ತರಾಗಿ ನಿರಾತಂಕರಾಗಿರಬಹುದಾದಂಥ ಪರಿಸ್ಥಿತಿಯಿಲ್ಲ. ಅಖಿಲ ಭಾರತ ವ್ಯಾಪ್ತಿಯುಳ್ಳಂಥ ಸಮಗ್ರ ಕಾರ್ಯಾಚರಣೆಯನ್ನು ಕೈಗೊಳ್ಳಲು ನಮ್ಮ ಸರ್ಕಾರದವರು ಕೂಡಲೇ ಕ್ರಮ ಜರುಗಿಸುವವರಾಗಿದ್ದಾರೆ ಎಂದು ನುಡಿದರು.

ನಮ್ಮ ಸಂಸ್ಥಾನದ ಹುದ್ದೆಗಳನ್ನು ಅಖಿಲ ಭಾರತ ಹುದ್ದೆಗಳೊಡನೆ ಸಮ್ಮಿಳಿಗೊಳಿಸಿಕೊಳ್ಳುವ ಸಂದರ್ಭದಲ್ಲಿ ಸಂಸ್ಥಾನದ ಅಧಿಕಾರಿಗಳ ಹಿತಸಾಧನೆಗೆ ಯುಕ್ತವಾದ ರಕ್ಷಣೆ ದೊರೆಯುವುದೆಂದು ಹೇಳಿದರು.

ಆಹಾರ ಎಲ್ಲರಿಗೂ ದೊರೆಯಲಿ

ವರ್ತಕರು ಕಾಳಸಂತೆ ಉದ್ದೇಶದಿಂದ ದಾಸ್ತಾನನ್ನು ಬಚ್ಚಿಡುವ ಸುಳಿವು ಕಂಡುಬಂದರೆ ಸಮಾಜವಾದೀ ಕಾರ್ಯಕರ್ತರು ಧಾನ್ಯ ಅಂಗಡಿಗಳ ಮುಂದೆ ಪಿಕೆಟಿಂಗ್ ಆರಂಭಿಸಿರುವರೆಂದು ಭಾರತ ಸಮಾಜವಾದೀ ಪಕ್ಷದ ಮುಖಂಡ ಶ್ರೀ ಜಯಪ್ರಕಾಶನಾರಾಯಣರವರು ತಿಳಿಸಿರುವರು.

ದೇಶದಲ್ಲಿ ಆಹಾರವಿದ್ದರೆ ಮಾತ್ರ ಸಾಲದು ಅದು ಸಾಮಾನ್ಯ ಜನರಿಗೆ ದೊರೆಯುವಂತೆ ಕಡಮೆದರದಲ್ಲಿ ಸಿಕ್ಕುವಂತೆ ಮಾಡುವುದು ಅಗತ್ಯ. ಆಹಾರ ಸಮಸ್ಯೆಯನ್ನು ಜರೂರು ಸಮಸ್ಯೆಯೆಂದು ಪರಿಗಣಿಸುವುದಲ್ಲದೆ ಅದೊಂದು ಶಾಶ್ವತ ಸಮಸ್ಯೆಯೆಂದು ಪರಿಗಣಿಸಬೇಕು. ಆಹಾರ ಸಮಸ್ಯೆಯನ್ನು ಪರಿಹರಿಸಲು (೧) ಆರ್ಥಿಕ ಸಾಮಾಜಿಕ ರಚನೆ ಬದಲಾಯಿಸುವುದು (೨) ಪಾಳು ಭೂಮಿಯನ್ನು ವ್ಯವಸಾಯಕ್ಕೆ ಗುರಿಮಾಡುವುದು ಮತ್ತು (೩) ವ್ಯವಸಾಯಾಭಿವೃದ್ಧಿಗಾಗಿ ಭೂಸೇನೆಯ ಸಂಘಟನೆ ಕೈಗೊಳ್ಳುವುದು ಈ ಮೂರು ಮಾರ್ಗಗಳೇ ಎಂದು ತಿಳಿಸಿರುವರು.

ಕಾಶ್ಮೀರ ಪ್ರಶ್ನೆ ಹಿಂದಕ್ಕೆ ತೆಗೆದುಕೊಳ್ಳಿ

ಕಾಶ್ಮೀರ ಪ್ರಶ್ನೆಯನ್ನು ಪ್ರಪಂಚ ಸಂಸ್ಥೆಯಿಂದ ಹಿಂದಕ್ಕೆ ತೆಗೆದುಕೊಂಡು ಪಾಕೀಸ್ಥಾನವು ಒಂದು ಒಪ್ಪಂದಕ್ಕೆ ಬಾರದಿದ್ದರೆ ಸಶಸ್ತ್ರಕಾರ್ಯಾಚರಣೆಯನ್ನು ಮಾಡಬೇಕು ಎಂದು ಹಿಂದೂ ಮಹಾಸಭಾ ಅಧ್ಯಕ್ಷ ಡಾ|| ಎನ್. ಬಿ. ಖಾರೆಯವರು ಹೇಳಿರುವರು.

ಅಕ್ಕಿ ರಾಗಿ ಕಳ್ಳತನವೇ?

ನಿನ್ನೆಯ ದಿನ ಮೈಸೂರ [illegible]ನಂಜಾಂಬಾ ಅಗ್ರಹಾರದ ಸರ್ಕಾರದ ಧಾನ್ಯದ ಗೋಡೌನಿನಿಂದ ಅಕ್ಕಿ, ರಾಗಿಯನ್ನು ಮಧ್ಯಾಹ್ನ ೩|| ಗಂಟೆಯಲ್ಲಿ ಕಳ್ಳತನದಿಂದ ಸಾಗಿಸುತ್ತಿದ್ದುದನ್ನು ಅಲ್ಲಿಯೇ ವಾಸಿಸುತ್ತಿದ್ದ ಹೋಮ್ ಗಾರ್ಡ್‌ನವರು ಅವರನ್ನು ಹಿಡಿದು ಕೃಷ್ಣರಾಜ ಪೋಲೀಸಿನವರ ವಶಕ್ಕೆ ಕೊಟ್ಟಿರುವರೆಂದೂ ಈ ವಿಚಾರವನ್ನು ಎಲ್ಲಾ ಸರ್ಕಾರಿ ಮೇಲಧಿಕಾರಿಗಳಿಗೂ ತಿಳಿಸಿರುವರೆಂದೂ, ಪೋಲೀಸು ಅಧಿಕಾರಿಗಳು ತನಿಖೆ ಕ್ರಮವನ್ನು ನಡೆಸುತ್ತಿರುವರೆಂಬ ಸುದ್ದಿಯು ಬಂದಿದೆ.

ವಿಚಾರಿಸಿದ್ದರಲ್ಲಿ ಯಾರೋ ಪೋಲೀಸಿನವರಿಗೆ ಫಿರ್ಯಾದು ಕೊಟ್ಟಿರುವುದಾಗಿಯೂ, ಆದರೆ ಸಾಮಾನನ್ನಾಗಲೀ ಸಾಗಿಸುತ್ತಿದ್ದವರನ್ನಾಗಲೀ ಪೋಲೀಸರ ವಶಕ್ಕೆ ಯಾರೂ ಒಪ್ಪಿಸಿಲ್ಲವೆಂದೂ ತಿಳಿಯಬರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸುವರೇ?

ಪೆಟ್ರೋಲ್ ರೇಷನ್ ರದ್ದು

ಭಾರತ ದಕ್ಷಿಣ ಪ್ರಾಂತ್ಯಗಳಾದ ಮದರಾಸು, ಮೈಸೂರು, ಹೈದರಾಬಾದು, ತಿರುವಾಂಕೂರು ಕೊಚ್ಚಿನ್, ಒರಿಸ್ಸಾ, ಮತ್ತು ಪಶ್ಚಿಮ ಬಂಗಾಳಗಳಲ್ಲಿ ಸೆಪ್ಟೆಂಬರ್ ೧ರಿಂದ ರೇಷನ್ ಪದ್ಧತಿ ವಜಾ ಮಾಡಲಾಗುವುದೆಂದು ತಿಳಿಯಬರುತ್ತದೆ.

ಲೇಖಣಿ ಅಥವಾ ಕತ್ತಿ ಆಡಳಿತ

ಪಾಕೀಸ್ಥಾನ ಸರ್ಕಾರವು ಪಂಜಾಬ್ ಪ್ರಾಂತದ ಪ್ರಥಮ ಬ್ರಿಟಿಷ್ ಗೌರ್ನರಾಗಿದ್ದ ಲಾರ್ಡ್ ಲಾರೆನ್ಸ್‌ರ ೬ ಟನ್ ತೂಕದ ಕಂಚಿನ ಪ್ರತಿಮೆಯನ್ನು [illegible] ನಗರದ ಹಳೇ ಕೋಟೆಯಲ್ಲಿರುವ ಪ್ರಾಚ್ಯವಸ್ತುಗಳ ಕೊಠಡಿಗೆ ಸೇರಿಸಿದೆ.

ಈ ಪ್ರತಿಮೆಯ ಬಲಗೈಯಲ್ಲಿ ಲೇಖಣಿ, ಎಡಗೈಯಲ್ಲಿ ಕತ್ತಿ ಇದೆ. ಪೀಠದ ಮೇಲೆ "ನಿಮ್ಮ ಮೇಲೆ ಲೇಖಣಿಯ ಅಥವಾ ಕತ್ತಿಯ ಆಡಳಿತ" ಎಂಬುದಾಗಿ ಉಲ್ಲೇಖಿಸಿದೆ.

ಭಾರತೀಯ ಸಂಸ್ಕೃತಿ

ಭಾರತದ ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲಿಯೂ, ಭಾರತೀಯ ಸಂಸ್ಕೃತಿಯನ್ನು ಬೋಧಿಸುವ ಒಂದು ಶಾಖೆಯಿರಬೇಕೆಂದು ಪೂನಾ ವಿಶ್ವವಿದ್ಯಾನಿಲಯದ ವೈಸ್-ಛಾನ್ಸಲರ್ ಶ್ರೀ ಎಂ. ಆರ್. ಜಯಕರ್‌ರವರು ಪೂನಾ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ನುಡಿದರು.

ವಿಶ್ವವಿದ್ಯಾನಿಲಯದ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಯೋಜನೆಗಳೆಲ್ಲ ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದೂ ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಕೂಡಲೇ ಬದಲಾವಣೆಗಳಾಗಬೇಕೆಂದು ಸೂಚಿಸಿದರು.

ಆನೆ ಯಾರಿಗೆ ಬೇಕು?

ಗಂಗಾನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದ ಆನೆಯೊಂದು ಪೋಲೀಸರವರಲ್ಲಿ ಬೀಹಾರಿನ ಆಲಂಗಂಜಿನಲ್ಲಿ ಇದೆ. ಅದರ ಮಾಲೀಕರನ್ನು ಕಂಡುಹಿಡಿಯಲು ಪಾಟ್ನಾದಿಂದ ಕಾಶೀವರೆಗೆ ತಿಳಿಸಿದಾಗ್ಯೂ ಪತ್ತೆಯಾಗಿಲ್ಲ. ಪೋಲೀಸಿನವರು ಯಾರು ಆ ಆನೆಬೇಕೆಂದು ಕೇಳುವರೋ ಅವರಿಗೆ ಅದನ್ನು ಕೊಡಲು ಸಿದ್ಧರಾಗಿರುವರು.

ಶಾಂತಿ ಮನವಿ

ಯುದ್ಧಪ್ರದೇಶಗಳಲ್ಲಿ ಅಣುಬಾಂಬನ್ನಾಗಲೀ ಇನ್ನಿತರ ವಿನಾಶಕಾರಿ ಅಸ್ತ್ರಗಳನ್ನು ಉಪಯೋಗಿಸುವುದದನ್ನು ನಿಷೇಧಿಸಬೇಕೆಂದು ಸ್ಟಾಕ್‌ಹೋಂ ಮನವಿಗೆ ಸಹಿ ಹಾಕಲು ಶ್ರೀ ಜಯಪ್ರಕಾಶ್ ನಾರಾಯಣರವರು ನಿರಾಕರಿಸಿ, ಇಂತಹ ಮನವಿಗಳಲ್ಲಿ ನಂಬಿಕೆಯಿಲ್ಲವೆಂದು ತಿಳಿಸಿರುವರು

ವಿದ್ಯಾಭ್ಯಾಸ ಸಮ್ಮೇಳನ

ಅಖಿಲ ಮೈಸೂರು ವಿದ್ಯಾಭ್ಯಾಸ ಸಮ್ಮೇಳನವು ಮಂಡ್ಯದಲ್ಲಿ ಮುಂದಿನ ತಿಂಗಳು ನಡೆಯುವುದು.

ಸರ್ಕಾರಿ ಆಜ್ಞೆ

ಸರ್ಕಾರಿ ಅಧಿಕಾರಿಗಳಿಗೆ ಕೊಡುತ್ತಲಿರುವ ಕೆಲವು ಅಲೋಯನ್ಸ್‌ಗಳನ್ನು ಅಟಾಚ್‌ಮೆಂಟು ಮಾಡಕೂಡದೆಂದು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿರುವರು.

೧. ಮನೆ ಬಾಡಿಗೆ ಭತ್ಯ.

೨. ಪ್ರಯಾಣ ಭತ್ಯ.

೩. ಪ್ರಾದೇಶಿಕ ಮತ್ತು ಜೀವನಕ್ಕಾಗಿ [illegible] ಹೆಚ್ಚಿಗೆ ಭತ್ಯ. ಜೀವ ವಿಮೆ (ಸರ್ಕಾರಿ ಶಾಖೆ) ಮತ್ತು ಪ್ರಾವಿಡೆಂಟು ಫಂಡುಗಳಿಗೆ ಕೊಡುವ ಹಣದ ಅಟಾಚ್‌ಮೆಂಟು ಮಾಡಲಾಗದು.

ಎಸೆನ್ಷಿಯಲ್ ಸಪ್ಲೈ ಕಾನೂನು

ಕೇಂದ್ರ ಸರ್ಕಾರದವರು ಎಸೆನ್ಷಿಯಲ್ ಸಪ್ಲೈ ಕಾನೂನನ್ನು ೧೯೫೦ ನೇ ಆಗಸ್ಟು ೧೬ ರಿಂದ ಇಂದು [illegible] ಆಜ್ಞೆಯನ್ನಿತ್ತಿರುವರು.

೧. ಈ ಆಜ್ಞೆಯ ಪ್ರಕಾರ ಹತ್ತಿ ಸರಕುಗಳ ಸಂಬಂಧಪಟ್ಟ ಕಾನೂನು ಮೀರಿದರೆ ೩ ವರ್ಷ ಸಜಾ ಮತ್ತು ಜುಲ್ಮಾನೆ ಮತ್ತು ಆ ಸರಕನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವುದು.

೨. ನಿಗದಿಮಾಡಿರುವ ಆಹಾರ ಧಾನ್ಯದ ಎರಡರಷ್ಟಕ್ಕಿಂತ ಹೆಚ್ಚಿಗೆ ಆಹಾರ ಧಾನ್ಯವನ್ನು ಶೇಖರಿಸಿಟ್ಟುಕೊಂಡಿರುವವರಿಗೆ ೭ ವರ್ಷ ಸಜಾ ಮತ್ತು ಅವನಲ್ಲಿರುವ ದಾಸ್ತಾನಿನ ಬೆಲೆಯು ೨೫ ರಷ್ಟಕ್ಕೆ ಕಡಮೆಯಿಲ್ಲದೆ ಜುಲ್ಮಾನೆ ಮತ್ತು ಆ ದಾಸ್ತಾನನ್ನೆಲ್ಲಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು.

(೫ ಮಣಕ್ಕಿಂತ ಕಡಮೆ ದಾಸ್ತಾನಿರುವವನಿಗೆ ಇದು ಅನ್ವಯಿಸುವುದಿಲ್ಲ.)

ಹತ್ತಿ ಸರಕು ಮತ್ತು ಆಹಾರ ಧಾನ್ಯಗಳಲ್ಲದ ಇತರ ಅವಶ್ಯಕ ವಸ್ತುಗಳಿಗೆ ಸಂಬಂಧಪಟ್ಟ ಕಾನೂನು ಉಲ್ಲಂಘಿಸಿದವರಿಗೆ ೩ ವರ್ಷ ಸಜಾ ಮತ್ತು ಜುಲ್ಮಾನೆ ವಿಧಿಸಬಹುದೆಂದು ಈ ಕಾನೂನು ಅಧಿಕಾರವನ್ನಿತ್ತಿದೆ
ಈ ಕಾನೂನು ಭಾರತಾದ್ಯಂತ ಅನ್ವಯಿಸುವುದು.

ಸಿಂಹಳ ಅಕ್ಕಿ ಮದರಾಸಿಗೆ

ಮುಂದಿನ ತಿಂಗಳು ಸಿಲೋನಿನಿಂದ ೧೦,೦೦೦ ಟನ್ನು ಅಕ್ಕಿಯು ಭಾರತಕ್ಕೆ ಬರುವುದು. ಇದನ್ನೆಲ್ಲಾ ಮದರಾಸು ಪ್ರಾಂತ್ಯಕ್ಕೆ ಕೊಡಲಾಗುವುದೆಂದು ಕೇಂದ್ರ ಆಹಾರ ಮಂತ್ರಿ ಶ್ರೀ ಮುನ್ಷಿಯವರು ಹೇಳಿರುವರು.

ರಷ್ಯಾ ಸಾಮಾನುಗಳಿಗೆ ಬಹಿಷ್ಕಾರ

ರಷ್ಯಾ ದೇಶದಿಂದ ಯಾವ ಸಾಮಾನುಗಳನ್ನು ತರಿಸಿ, ಉಪಯೋಗಿಸಕೂಡದೆಂದು ಅಮೆರಿಕಾದಲ್ಲಿರುವ ಲಾಂಗ್‌ಷಾರ್ಮೆನ್ಸ್ ಸಂಘವು ಅಮೇರಿಕಾದಲ್ಲೆಲ್ಲಾ ಪ್ರಚಾರ ಮಾಡುತ್ತಲಿದೆ.

ಸೈನಿಕರಿಗೆ ಮದ್ಯ ಅವಶ್ಯಕವಲ್ಲ

ಭಾರತ ದಂಡನಾಯಕ ಜ|| ಕಾರಿಯಪ್ಪನವರು ಬೊಂಬಾಯಿನಲ್ಲಿ ಮಾತನಾಡುತ್ತಾ ಸೈನಿಕರು ಇತ್ತೀಚೆಗೆ ಕುಡಿಯುವುದು ಕಡಿಮೆಯಾಗಿದೆ. ಸೈನ್ಯದಲ್ಲಿ ಎಲ್ಲರೂ ವಿಶೇಷವಾಗಿ ಮದ್ಯ ಸೇವಿಸುವರೆಂದು ಜನರು ತಿಳಿದುಕೊಂಡಿರುವರು, ಅದು ಶುದ್ಧ ತಪ್ಪು. ಸೈನ್ಯಾಧಿಕಾರಿಗಳು ತಾವಾಗಿಯೇ ಕುಡಿಯುವುದನ್ನು ಕಡಿಮೆ ಮಾಡುತ್ತಲಿರುವರು ಎಂದು ಹೇಳಿದರು.

ನೂತನ ರೇಡಿಯೋ ಗನ್

ರೇಡಿಯೋ ಸಹಾಯದಿಂದ ಕೆಲಸ ಮಾಡುವ ರೇಡಿಯೋ ಗನ್ನುಗಳನ್ನು ರಷ್ಯನರು ಹೊಸದಾಗಿ ಕಂಡು ಹಿಡಿದಿರುವರೆಂದು ತಿಳಿಯಬಂದಿದೆ. ಈ ಫಿರಂಗಿಯನ್ನು ಸಣ್ಣದಾದ ಒಂದು ಗೂಡಿನಲ್ಲಿಟ್ಟು ವಿದ್ಯುಚ್ಛಕ್ತಿಯ ಅಥವಾ ರೇಡಿಯೋಸಹಾಯದಿಂದ ಹಾರಿಸಬಹುದು. ಒಬ್ಬನೇ ಒಬ್ಬ ಏಕಕಾಲದಲ್ಲಿ ೧೦-೧೨ ಈ ರೀತಿಯಾದ ಫಿರಂಗಿಗಳನ್ನು ಹಾರಿಸಬಲ್ಲನೆಂದು ತಿಳಿಯಬರುತ್ತದೆ.

ರಿಕ್ಷಾಗಳಿಗೆ ಬಹಿಷ್ಕಾರ

ಅಕ್ಟೋಬರ್ ಒಂದನೇ ತಾರೀಖಿನಲ್ಲಿ ಜನರು ಎಳೆಯುವ ರಿಕ್ಷಾಗಳು ಪಂಜಾಬು ಪ್ರಾಂತ್ಯದಲ್ಲೆಲ್ಲಿಯೂ ಇರಕೂಡದೆಂದು ಪಂಜಾಬು ಸರ್ಕಾರವು ಆಜ್ಞೆಯಿತ್ತಿದೆ.

ಪಾಕೀಸ್ಥಾನದ ದಾನ

ಅಸಾಂಮಿನಲ್ಲಿ ಭೂಕಂಪವಾಗಿ ವಿಶೇಷ ತೊಂದರೆ ಪಡುತ್ತಲಿರುವ ಜನರಿಗೆ ಪಾಕೀಸ್ಥಾನವು ೧೦,೦೦೦ ಮಣ ಅಕ್ಕಿಯನ್ನು ಉದಾರ ದಾನ ಮಾಡುವುದಾಗಿ ಪ್ರಧಾನಿ ಲಿಯಾಕತ್ ಅಲ್ಲಿಖಾನರವರು ಪಂಡಿತ್ ನೆಹರೂರವರಿಗೆ ತಿಳಿಸಿರುವರು. ಪಂಡಿತ್ ನೆಹರೂರವರು ಸಂತೋಷವನ್ನು ವ್ಯಕ್ತಪಡಿಸುತ್ತಾ ದಾನವನ್ನು ಸ್ವೀಕರಿಸಲೊಪ್ಪಿದರು. ಅಸ್ಸಾಂಮಿಗೆ ಕೂಡಲೇ ಅಕ್ಕಿಯನ್ನು ರವಾನೆ ಮಾಡಬೇಕೆಂದು ಪಾಕೀಸ್ಥಾನ ಸರ್ಕಾರವು ಪಶ್ಚಿಮ ಬಂಗಾಳಕ್ಕೆ ಅನುಮತಿಯಿತ್ತಿದೆ.

ಪಾಠಶಾಲೆಗಳಿಗೆಲ್ಲಾ ರೇಡಿಯೋ

ದೆಹಲಿ ಪ್ರಾಂತ್ಯದಲ್ಲಿರುವ ೩೦೫ ಗ್ರಾಮಗಳಲ್ಲಿರುವ ಪ್ರಾಥಮಿಕ ಪಾಠಶಾಲೆಗಳಿಗೆಲ್ಲಾ ಸರ್ಕಾರದವರು ಒಂದೊಂದು ರೇಡಿಯೋ ಸೆಟ್ಟನ್ನು ಒದಗಿಸಿರುವರು.

ದುರ್ನಕ್ಷತ್ರ

ಸೂರ್ಯಾಸ್ತಮಾನವಾದ ಕೂಡಲೇ ಒಂದು ನಕ್ಷತ್ರವು ಆಗ್ನೇಯ ದಿಕ್ಕಿನಲ್ಲಿ ಪ್ರತಿ ದಿನವೂ ಕಾಣಿಸಿಕೊಂಡು ಸೂರ್ಯೋದಯಕ್ಕೆ ಮುಂಚೆ ನೈರುತ್ಯದಲ್ಲಿ ಮುಳುಗುತ್ತಲಿರುವುದು ಪಾಟ್ನಾದಲ್ಲಿ ಕಾಣಬರುತ್ತಲಿದೆ. ಒಂದನೇ ಮಹಾಯುದ್ಧದ ಕಾಲದಲ್ಲೂ ಇದೇ ರೀತಿ ಕಾಣಬರುತ್ತಲಿತ್ತೆಂದೂ ಇದು ದೇಶಕ್ಕೆ ಹಾನಿಕರವೆಂದು ಹೇಳಲಾಗಿದೆ.

ನಿರಾಶ್ರಿತರಿಗೆ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ನಾಸಿಕದಲ್ಲಿ ಮುಗಿದೊಡನೆಯೇ ಅಲ್ಲಿ ಈಗ ಕಟ್ಟುತ್ತಲಿರುವ ಮನೆ, ಗುಡಿಸಲು ಮುಂತಾದುವನ್ನೆಲ್ಲಾ ನಿರಾಶ್ರಿತರಿಗಾಗಿ ಕೇಂದ್ರ ಸರ್ಕಾರವು ಕೊಂಡುಕೊಳ್ಳುವುದೆಂದು ನಿರಾಶ್ರಿತ ಮಂತ್ರಿ ಶ್ರೀ ಜೈನರವರು ತಿಳಿಸಿರುವರು.

೩ ತಿಂಗಳಿಗಿಂತ ಹೆಚ್ಚಾಗಿ ಪಡಿತರ ಮುಂಗಡವಾಗಿ

ರೇಷನ್ ಕಾರ್ಡಿನವರು ೩ ತಿಂಗಳುಗಳಿಗಿಂತ ಹೆಚ್ಚಾಗಿ ರೇಷನನ್ನು (೧೯೫೧ ನೇ ಮೇ ೩೧ ರ ವರೆಗೆ ವಿಚಾರದಂತೆ) ಸೆಪ್ಟಂಬರ್ ೧ ನೇ ತಾರೀಖಿನಂತರ, ಡಿಪೋದವರಿಗೆ ಒಂದು ವಾರ ಮುಂಚಿತವಾಗಿ ತಿಳಿಸಿ, ಮುಂಗಡವಾಗಿಯೇ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳಬಹುದೆಂದು ಪಂಜಾಬ್ ಸರ್ಕಾರವು ಪತ್ರಿಕಾ ಪ್ರಕಟಣೆ ಹೊರಡಿಸಿದೆ.

ಭೂಕಂಪ ನಿಧಿಗೆ

ಅಸ್ಸಾಂ ಭೂಕಂಪ ನಿಧಿಗೆ ಶ್ರೀ ಜಿ. ಡಿ. ಬಿರ್ಲಾರವರು ತಮ್ಮ ಸಂಸ್ಥೆಯ ಪರವಾಗಿ ೫೦,೦೦೦ ರೂ. ಕೊಟ್ಟಿರುವರು.

ರೇಷನ್ ಖೋತಾ

ವಾರಕ್ಕೆ ೨೪ ಔನ್ಸು ಅಕ್ಕಿಯನ್ನು ಕೊಡುತ್ತಲಿದ್ದುದನ್ನು ಬೊಂಬಾಯಿ ಸರ್ಕಾರವು, ೧೬ ಔನ್ಸುಗಳಿಗೆ ಇಳಿಸಿದೆ.

ರೇಡಿಯೋ

ಆಗಸ್ಟು ೩೦ ಬುಧವಾರ

೩೧೦ ಮೀಟರು ೪೯-೪೬ ಮೀಟರು

ಬೆಳಗ್ಗೆ ೭-೦ ಉದಯಗಾನ ಕಾರ್ಯಕ್ರಮ ವಿವರಣೆ ೭-೫ ಚಿತ್ರಗೀತ (ರಿ) ೭-೨೫ ದೇವರನಾಮ (ಟಿ. ನಾಗಮ್ಮ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ವೈ. ಕೆಂ. ಸರಸ್ವತೀ (ರಿ) ೧-೧೫ ವೀಣೆ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಮುಖವೀಣೆ ೨-೦ ವನಿತಾ ವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಕೊಳಲು (ಶ್ರೀನಿವಾಸಮೂರ್ತಿ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಚಿತ್ರಲೋಕ (ರಿ) ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಹಿಂದೀ ಕಾರ್ಯಕ್ರಮ ೭-೧೫ ಕೊಳಲು (ಶ್ರೀನಿವಾಸಮೂರ್ತಿ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಸಂಗೀತ (ಶಲ್ವಪಿಳ್ಳೈಯ್ಯಂಗಾರ್) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ನಿಮ್ಮ ಮೆಚ್ಚಿನ ಹಾಡುಗಳು ೧೦-೦ ಮುಕ್ತಾಯ.

ರಣಜಿತ್ ಟಾಕೀಸ್
ಅಮೋಘ 3ನೇ ವಾರ
ತಾ|| 25-8-50 ರಿಂದ
ಎ. ವಿ. ಎಂ ರವರ ತೆಲುಗು ಚಿತ್ರ
ಜೀವಿತಂ
* ನಾರಾಯಣರಾವ್ * ವರಲಕ್ಷ್ಮಿ,
* ವೈಜಯಂತಿಮಾಲ ಮುಂತಾದವರು.
ಮುಂದಿನ
ಪ್ಯಾರ್ ಕಿ ಮಂಜಿಲ್
ಪಾತ್ರ :— ರೆಹಮಾನ್, ಮನೋವರ್ ಸುಲ್ತಾನ,
ಗೋರಕ್.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ " ಸಮಾಚಾರ " ದಿನ ಪತ್ರಿಕೆಯನ್ನು ಚಂದಾದಾರರಿಗೆ ಹಂಚಿ ಚಂದಾವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ. ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
" ಸಮಾಚಾರ " ದಿನಪತ್ರಿಕೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂ

★ ಮೈ. ಕಾಂಗ್ರೆಸ್ಸಿಗೆ ನೂತನ ಅಧ್ಯಕ್ಷರು

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574
ಸಮಾಚಾರ
SAMACHARA, MYSORE
ಸಂಪಾದಕ: ಜಿ. ಎಲ್ ಸ್ವಾಮಿ
ಸಂಪುಟ ೧] ೩೦-೮-೧೯೫೦ ನೇ ಬುಧವಾರ [ಸಂಚಿಕೆ ೧೩

ಮೈಸೂರು ಕಾಂಗ್ರೆಸ್ ಸಂಸ್ಥೆಯು ಪ್ರಾಂತೀಯ ಸ್ಥಾನಗಳಿಸಿ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಯಾಗಿ ಪರಿಣಮಿಸಿತು. ಮೈಸೂರು ಕಾಂಗ್ರೆಸ್ ಅಧ್ಯಕ್ಷಣಿ ಶ್ರೀಮತಿ ಯಶೋಧರಾ ದಾಸಪ್ಪನವರು ರಾಜೀನಾಮೆ ಯಿತ್ತು, ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಅಧ್ಯಕ್ಷರಾಗಿ ಚುನಾಯಿತರಾದರು

ಯಾವಾಗಬೇಕಾದರೂ ಎಲ್ಲಿಬೇಕಾದರೂ ಬೆಳೆಯುವ ಗೋಧಿ

ಗೋಧಿ ಬೀಜಗಳನ್ನು ಮೊಳಕೆ ಬರುವಂತೆ ಬೆಳೆಸಿ ಯಾವಾಗಬೇಕಾದರೆ ಆಗ, ಎಲ್ಲಿ ಬೇಕಾದರೆ ಅಲ್ಲಿ, ಬಿತ್ತಿ ಬೆಳೆಸಲು ಅನುಕೂಲಿಸುವಂತೆ ಉತ್ತರ ಪ್ರದೇಶದ ಸಂಶೋಧನಾಲಯವೊಂದು ಪ್ರಯೋಗ ನಡೆಸುತ್ತಿದೆ. ಇದರಿಂದ ಪ್ರವಾಹ ಅನಾಹುತಗಳಿಂದಲೂ ಮತ್ತಿತರ ಕಾರಣದಿಂದಲೂ ಗೋಧಿಯ ಬೆಳೆಯು ನಷ್ಟವಾಗದಂತೆ ಅನುಕೂಲವಾಗಬಹುದು

ಷೇಕ್ ಅಬ್ದುಲ್ಲಾ

ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾರವರು ಕಾಶ್ಮೀರ ಮತ್ತು ಜಮ್ಮುವಿನ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಪುನಃ ಚುನಾಯಿತರಾಗಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯು ನಿನ್ನೆ ಭಾರತಾದ್ಯಂತ ನಡೆಯಿತು. ಅಧ್ಯಕ್ಷಸ್ಥಾನಕ್ಕೆ ಉಮೇದುವಾರರು ಮೂವರು ಆಚಾರ್ಯ ಕೃಪಾಲಿನಿ, ಶ್ರೀ ಪುರುಷೋತ್ತಮದಾಸ್ ತಾಂಡನ್ ಮತ್ತು ಶ್ರೀ ಶಂಕರರಾವ್ ದೇವ್‌ರವರು, ಅಧ್ಯಕ್ಷ ಚುನಾವಣಾ ಫಲಿತಾಂಶವು ಶುಕ್ರವಾರ ಹೊರಬೀಳುವುದೆಂದು ತಿಳಿಯಬರುತ್ತದೆ.

ಬೊಂಬಾಯಿನ ಮುಷ್ಕರ

ಗಿರಣಿ ಕೆಲಸಗಾರರ ಮುಷ್ಕರವು ಬೊಂಬಾಯಿನಲ್ಲಿ ಮುಂದುವರಿಯುತ್ತಲಿದೆ ನಿನ್ನೆ ಒಂದು ಗಿರಣಿಯು ಪೂರ್ತಿ, ೪ ಗಿರಣಿಗಳು ಸ್ವಲ್ಪ ಕೆಲಸ ಮಾಡುತ್ತಲಿದ್ದವು. ಕೇಂದ್ರ ಕಾರ್ಮಿಕ ಸಚಿವ ಶ್ರೀ ಜಗಜೀವನರಾಂರವರು ಮುಷ್ಕರವು ನ್ಯಾಯಬದ್ಧವಲ್ಲವೆಂದೂ ಕೂಡಲೇ ಎಲ್ಲರೂ ಕೆಲಸಕ್ಕೆ ಹಾಜರಾಗಬೇಕೆಂದು ಅಭಿಪ್ರಾಯಪಟ್ಟಿರುವರು.

ಬೊಂಬಾಯಿನಲ್ಲಿ ಅಶ್ರುವಾಯು ಪ್ರಯೋಗ

ನಿನ್ನೆ ಬೊಂಬಾಯಿನಲ್ಲಿ ಗಿರಣಿ ಮುಷ್ಕರಕಾರರು ಕಾನೂನು ವಿರುದ್ಧ ಸೇರಿದ ೭೦೦ ಜನ ಕಾರ್ಮಿಕರನ್ನು ಚದುರಿಸಲು ಅಲ್ಲಿನ ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿದರು

ಘೇಂಡಾಮೃಗ ಕೊಚ್ಚಿ ಬಂತು

ಅಸ್ಸಾಂನಲ್ಲಿ ಡಿಹಾಂಗ್ ನದಿಯ ಪ್ರವಾಹದಿಂದ ಪಸೀಘಾಟ್ ಎಂಬ ಪಟ್ಟಣವೇ ಕೊಚ್ಚಿ ಹೋಗುವ ಸ್ಥಿತಿಯಲ್ಲಿದೆ. ಈ ನದಿಯಲ್ಲಿ ಒಂದು ಆನೆಯೂ, ಒಂದು ಘೇಂಡಾಮೃಗವೂ ಮತ್ತು ೫ ಜನರ ಹೆಣವೂ ಕೊಚ್ಚಿ ಬಂದುವು.

ಅಸ್ಸಾಮಿನಲ್ಲಿ ಪುನಃ ಭೂಕಂಪ

ಅಸ್ಸಾಮಿನ ಜಬ್ರು ನದಿ ಪ್ರದೇಶದಲ್ಲಿ ಪುನಃ ಭಾರಿ ಭೂಕಂಪವಾಯಿತು. ಉತ್ತರ ಲಕ್ಷ್ಮೀಪುರದ ಬಳಿ ಭೂಕಂಪದಿಂದ ನೊಂದ ಜನರಿಗೆ ೧,೨೦೦ ಪೌಂಡು ಆಹಾರವನ್ನು ವಿಮಾನದಿಂದ ಎಸೆಯಲಾಯಿತು. ಈ ಭೂಕಂಪಗಳ ಪರಿಣಾಮವಾಗಿ ಹಿಮಾಲಯ ಪರ್ವತದ ಎತ್ತರವು ೨೯,೦೦೨ ಅಡಿಯಿಂದ ೨೯,೨೦೦ ಅಡಿಗಳಿಗೆ ಏರಿತು ಎಂದು ಭೂಸಂಶೋಧಕರು ತಿಳಿಸಿರುತ್ತಾರೆ.

ನ್ಯಾಯವಿಧಾಯಕ ಸಭೆಯಲ್ಲಿ ಸದಸ್ಯರ ಸಭಾತ್ಯಾಗ

ನಿನ್ನೆ ನ್ಯಾಯವಿಧಾಯಕ ಸಭೆಯು ಆರಂಭವಾದಾಗ ವಿರೋಧ ಪಂಗಡದ ನಾಯಕರಾದ ಜನಾಬ್ ಜೆ. ಮಹಮ್ಮದ್ ಇಮಾಂರವರು ತಂದ ನಿಲುವಳಿ ಸೂಚನೆಗಳನ್ನು ಅಧ್ಯಕ್ಷರು ತಳ್ಳಿಹಾಕಿದುದರಿಂದ, ಅವರೂ ಮತ್ತು ಅವರ ಪಕ್ಷದ ಸದಸ್ಯರೂ ಸಭಾ ಪರಿತ್ಯಾಗ ಮಾಡಿದರು.

ಮೊದಲನೆಯ ನಿಲುವಳಿ ಸೂಚನೆಯು ಮಂತ್ರಿಗಳು ಉಪಚುನಾವಣೆಯ ಸಂದರ್ಭದಲ್ಲಿ ತಮ್ಮ ಪ್ರಭಾವವನ್ನು ಬೀರಿದುದನ್ನೂ, ಸರ್ಕಾರಿ ಕಾರುಗಳನ್ನು ಚುನಾವಣಾ ಕಾರ್ಯಕ್ಕೆ ಉಪಯೋಗಿಸಿದುದನ್ನೂ, ಮತ್ತು ಚುನಾವಣಾ ಕಾರ್ಯವನ್ನು ಅಸಮಾಧಾನಕರವಾಗಿ ನಡೆಸಿದುದನ್ನೂ ಚರ್ಚಿಸುವುದಾಗಿತ್ತು. ಎರಡನೆಯ ಸೂಚನೆಯು ಶ್ರೀ ಹುಚ್ಚೇಗೌಡರದು. ಈಚೆಗೆ ರೇಷನ್ ಪ್ರಮಾಣದಲ್ಲಿ ವ್ಯತ್ಯಾಸವಾದುದನ್ನೂ ಮತ್ತು ರೇಷನ್ ಧಾನ್ಯ ಬೆಲೆ ಏರಿಸಿದುದನ್ನೂ ಚರ್ಚಿಸುವುದಾಗಿದ್ದಿತು.

ರಾಜಕುವರಿಗೆ ನಾಮಕರಣ

ಇಂಗ್ಲೆಂಡಿನ ರಾಜಕುಮಾರಿ ಎಲಿಸಬೆತ್‌ರವರ ನೂತನ ಕುವರಿಗೆ ಆನ್ ಎಲಿಸಬೆತ್ ಅಲಿಸ್ ಲೂಯಿಸ್ ಎಂದು ನಾಮಕರಣವಾಯಿತು.

ಎ. ಎಂ. ಸಿ. ಸಿ. ಅಂತಿಮ ಅಧಿವೇಶನ

ಮೈಸೂರು ಕಾಂಗ್ರೆಸ್ ಸಂಸ್ಥೆಯು ಪ್ರಾಂತೀಯ ಸ್ಥಾನಮಾನದಿಂದ ಕೂಡಿ ಕಾರ್ಯಕಲಾಪಗಳನ್ನು ನಡೆಸಲು ಅನುಕೂಲಿಸುವಂತೆ ನಿರ್ಣಯವನ್ನು, ನಿನ್ನೆ ಬೆಂಗಳೂರಿನಲ್ಲಿ ಸೇರಿದ ಎ. ಎಂ. ಸಿ. ಸಿ. ಅಂತಿಮ ಅಧಿವೇಶನವು ಅಂಗೀಕರಿಸಿತು. ಅಂತೆಯೇ ಎ. ಎಂ. ಸಿ. ಸಿ. ಯನ್ನು ರದ್ದುಗೊಳಿಸಲಾಯಿತು. ಎಲ್ಲಾ ಮಂತ್ರಿಗಳೂ, ಎ. ಎಂ. ಸಿ. ಸಿ. ಸದಸ್ಯರೂ ಮತ್ತು ಡಾ॥ ಎನ್. ಎಸ್. ಹರ್ಡಿಕರರೂ ಈ ಸಭೆಯಲ್ಲಿ ಹಾಜರಿದ್ದರು.

ಬೆಂಗಳೂರಿನಲ್ಲಿ ವಿಮಾನ ಅಪಘಾತ ಇಬ್ಬರ ಮರಣ

ನಿನ್ನೆ ಮಧ್ಯಾಹ್ನ ಬೆಂಗಳೂರು-ಮಾಗಡಿ ರಸ್ತೆ ೧೩ ನೇ ಮೈಲಿ ಕಲ್ಲಿನ ಬಳಿ ವಿಮಾನವು ಬಿದ್ದು ಬೆಂಕಿ ಹತ್ತಿಕೊಂಡುದರ ಪರಿಣಾಮವಾಗಿ ವಿಮಾನದಲ್ಲಿದ್ದ ಇಬ್ಬರೂ ಸುಟ್ಟು ಮೃತರಾದರು. ಸಂಬಂಧಪಟ್ಟ ಅಧಿಕಾರಿಗಳು ಅಪಘಾತದ ಪರಿಶೀಲನೆ ನಡೆಸಿದರು.

ತಮಿಳುನಾಡು ಕಾಂಗ್ರೆಸ್

೧೯೪೦ ನೇ ಇಸವಿಯಿಂದಲೂ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರಾಗಿರುವ ಶ್ರೀ ಕಾಮರಾಜನಾಡರವರೇ ಪುನಃ ೧೬೫ ಓಟುಗಳನ್ನು ಪಡೆದು ಜಯಶೀಲರಾದರು. ಪ್ರತಿಸ್ಪರ್ಧಿಗಳಾದ ಶ್ರೀ ಸಿ. ಪಿ ಸುಬ್ಬಯ್ಯನವರಿಗೆ ೫೫ ಓಟುಗಳು ಲಭಿಸಿದುವು

ಉತ್ತರ ಪ್ರದೇಶದಲ್ಲಿ ಪ್ರವಾಹ ಅನಾಹುತ

ಉತ್ತರ ಪ್ರದೇಶದ ಮಥುವಾಣಿ ಸಬ್‌ಡಿವಿಜನ್ ಪ್ರದೇಶದಲ್ಲಿ ೧ ಲಕ್ಷಕ್ಕಿಂತಲೂ ಹೆಚ್ಚಾಗಿ ಜನರು ಅನಾಹುತಕ್ಕೊಳಗಾಗಿದ್ದಾರೆ.

ಸೇಠ್ ದಾಲ್ಮಿಯಾರವರ ದಾನ

ಭೂಕಂಪ ಅನಾಹುತದಿಂದ ನೊಂದವರಿಗೆ ಪರಿಹಾರ ನೀಡುವ ಸಲುವಾಗಿ ಸೇಠ್ ದಾಲ್ಮಿಯಾರವರು ೫೦,೦೦೦ ರೂಗಳನ್ನು ದಾನಮಾಡಿದ್ದಾರೆ.

ಅಖಿಲ ಭಾರತ ಕಾಂಗ್ರೆಸ್ ಚುನಾವಣೆ

ಕಾಂಗ್ರೆಸ್ ಅಧ್ಯಕ್ಷಗಿರಿಯ ಚುನಾವಣಾ ಕಾರ್ಯವು ಬಿರುಸಾಗಿ ಸಾಗುತ್ತಿದೆ. ಇದುವರೆಗೆ ನಡೆದಿರುವ ಓಟಿಂಗಿನಲ್ಲಿ ಶ್ರೀ ಕೃಪಲಾನಿಯವರಿಗೂ ಮತ್ತು ಶ್ರೀ ತಾಂಡನ್ನರವರಿಗೂ ಸುಮಾರಾಗಿ ಸರಿಸಮವೆಂದು ತಿಳಿದು ಬರುತ್ತದೆ

★ ಸಿರ್ಲೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಪ್ರಧಾನಿಯ ಅಭಿಪ್ರಾಯವನ್ನೇ ಒಪ್ಪುವುದು ಅನಗತ್ಯ

ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿರುವ ಶ್ರೀ ಪುರುಷೋತ್ತಮದಾಸ್ ತಾಂಡನರವರು ಗಾಂಧೀಜೀಯವರಿಂದ ಸ್ಥಾಪಿತವಾದ 'ಹರಿಜನ' ಪತ್ರಿಕೆಯ ಸಂಪಾದಕರಾದ ಶ್ರೀ ಮಶ್ರೂವಾಲರವರಿಗೆ ಈ ಕೆಳಗೆ ಕಂಡಂತೆ ಪತ್ರ ಬರೆದಿದ್ದಾರೆ:—

ನನ್ನ ಹೆಸರನ್ನು ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಸೂಚಿಸಲಾಗಿದೆ. ಉನ್ನತಸ್ಥಾನದಲ್ಲಿಲ್ಲದೆಯೇ ಉನ್ನತ ಸೇವೆಯೆಸಗಲು ಯಾವೊಬ್ಬನಿಗೂ ಸಾಧ್ಯವಿದೆ. ನನ್ನ ಹೆಸರನ್ನು ಸೂಚಿಸಬೇಡಿ ಎಂದು ನನ್ನಗೆಳೆಯರಿಗೆ ಹೇಳಿದರೂ ಸಹ, ನನ್ನಿಂದ ಸೇವೆಯಾಗಬಹುದೆಂಬ ನಂಬುಗೆಯ ಮೇಲೆ ಸೂಚಿಸಿದ್ದಾರೆ. ನಾನು ಅವರನ್ನು ಅನೇಕ ಬಾರಿ ನನ್ನ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿದರೂ, ಅದಕ್ಕೊಪ್ಪಲಿಲ್ಲ. ನನ [illegible] ದೆ ನಿಲ್ಲಿಸಬೇಕೆಂಬ ಅಭಿಲಾಷೆಯಿಲ್ಲವೆಂದು ಹೇಳಲಾರೆ–ಅದನ್ನು ನಿರ್ಧರಿಸುವುದು ಇತರರಿಗೆ ಸೇರಿದುದು

ಕಾಂಗ್ರೆಸ್ ಸರ್ಕಾರವನ್ನು ರಚಿಸಿದವರು ಕಾಂಗ್ರೆಸ್ಸಿಗರು. ಅದನ್ನು ಬಲಗೊಳಿಸುವುದೂ ಮತ್ತು ಅದಕ್ಕೆ ಸಹಕಾರ ನೀಡುವುದೂ ನಮ್ಮೆಲ್ಲರ ಕರ್ತವ್ಯ.

ಕಾಂಗ್ರೆಸ್ ಸರ್ಕಾರದ ಸೂತ್ರವೆಲ್ಲ ಮುಖ್ಯ ಮಂತ್ರಿಯ ಕೈಯಲ್ಲಿದೆ. ಆದುದರಿಂದ ಅದನ್ನು ಬಲಗೊಳಿಸುವಲ್ಲಿ ಮುಖ್ಯ ಮಂತ್ರಿಯು ಸದಾ ನಮ್ಮ ಕಣ್ಮುಂದಿರುತ್ತಾನೆ. ಹಾಗೆಂದ ಮಾತ್ರಕ್ಕೆ ನಾವೆಲ್ಲರೂ ಪ್ರತಿ ವಿಷಯದಲ್ಲಿಯೂ (ಸಣ್ಣದೇ ಆಗಲಿ, ದೊಡ್ಡದೇ ಆಗಲಿ) ಮುಖ್ಯ ಮಂತ್ರಿಯು ಯೋಚಿಸುವಂತೆಯೇ ಆಲೋಚಿಸಬೇಕೆಂಬ ನಿಯಮವೇನೂ ಇಲ್ಲ. ತಾವು (ಶ್ರೀ ಮಶ್ರೂವಾಲರವರು) ಹೇಳಿರುವಂತೆಯೇ ಗ್ರಾಮಪುನರುಜ್ಜೀವನ ಕಾರ್ಯಕ್ರಮದಲ್ಲಿ ಪ್ರಧಾನಿಯವರ ನೀತಿಯು ರಚನಾತ್ಮಕ ಕೆಲಸಗಾರರನ್ನು ಚಕಿತಗೊಳಿಸಿದೆ.

ಖಾದಿ ಪ್ರಚಾರ ಮತ್ತು ಗ್ರಾಮ ಕೈಗಾರಿಕೆಗಳನ್ನು ಮುಂದೊರೆಸುವುದು ನಮ್ಮ ದೇಶಕ್ಕೆ ಅಗತ್ಯವೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಇದಕ್ಕೆ ತಕ್ಕಷ್ಟು ಗಮನ ಕೊಡುತ್ತಿಲ್ಲ.

ಜನಾರೋಗ್ಯ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರದ ಧೋರಣೆಯು ಪ್ರಕೃತಿಪರದಂತೆಯೇ ಇದೆ

ಸರ್ಕಾರವನ್ನೂ ಮತ್ತು ಪ್ರಧಾನಿಯನ್ನೂ ಬಲಗೊಳಿಸಬೇಕೆಂದು ನಾವು ದೃಢಮನಸ್ಕರಾದಾಗ್ಯೂ, ನಮಗಾವ ಆದರ್ಶದಲ್ಲಿ ನಂಬಿಕೆಯಿದೆಯೋ ಆ ಆದರ್ಶವನ್ನು ನಮ್ಮ ಕಣ್ಮುಂದಿರಿಸಿಕೊಳ್ಳುವುದೂ ಮತ್ತು ಸರ್ಕಾರವು ಅದನ್ನೊಪ್ಪಿ ನಡೆಯುವಂತೆ ಒತ್ತಾಯಪಡಿಸುವುದೂ ನಮ್ಮ ಕರ್ತವ್ಯ.

ಈಗ ಅತ್ಯಗತ್ಯವಾಗಿರುವುದೇನೆಂದರೆ, ನಮ್ಮ ನಾಡಿನ ಮತ್ತು ಕಾಂಗ್ರೆಸ್ಸಿಗರ ನೈತಿಕಮಟ್ಟವನ್ನು ಉನ್ನತಗೊಳಿಸುವುದು. ತಾವೂ ಸಹ ತಮ್ಮ ಪತ್ರದಲ್ಲಿ ಅದರ ಕಡೆ ಗಮನ ಸೆಳೆದಿರುವಿರಿ. ಇಂದು ಆತ್ಮಶಕ್ತಿಯಿಂದ ಅದ್ಭುತ ಕಾರ್ಯಗಳನ್ನೆಸಗಿ ದೇಶವನ್ನು ಉನ್ನತಸ್ಥಿತಿಗೆ ತಂದ ಮಹಾತ್ಮ ಗಾಂಧೀಜಿಯವರು ನಮ್ಮ ಮಧ್ಯೆ ಇಲ್ಲ; ಆದರೆ ನಮ್ಮ ಕಣ್ಮುಂದೆ ಆ ಮಾರ್ಗವಿದೆ. ಪ್ರತಿಯೊಬ್ಬನೂ ತನ್ನ ಶಕ್ತ್ಯನುಸಾರ ಸಾಧಿಸಲು ಯತ್ನಿಸಬಹುದು ಮತ್ತು ತನ್ನ ಕರ್ತವ್ಯವನ್ನು ಪರಿಪಾಲಿಸಬಹುದು.

ಭಾರತದ ಪಶುಸಂಪತ್ತು

ಪಶುಸಂಪತ್ತಿನಲ್ಲಿ ಪ್ರಪಂಚದಲ್ಲೇ ಭಾರತವು ಮೊದಲನೆಯದು. ೧೩ ಕೋಟಿ ೬೦ ಲಕ್ಷ ಗೋವುಗಳೂ, ೪ ಕೋಟಿ ಎಮ್ಮೆಗಳೂ, ಅಂದರೆ ಪ್ರಪಂಚದ ಒಟ್ಟು ಪಶುಸಂಪತ್ತಿನ ಕಾಲುಭಾಗವು ಭಾರತದಲ್ಲಿದೆ. ಇಲ್ಲದೆ ೩ ಕೋಟಿ ೭೭ ಲಕ್ಷ ಕುರಿಗಳೂ, ೪ ಕೋಟಿ ೬೫ ಲಕ್ಷ ಮೇಕೆಗಳೂ, ಮತ್ತು ೩೩ ಲಕ್ಷ ಮಾನವ ಜೀವನೋಪಯುಕ್ತವಾದ ಇತರ ಪ್ರಾಣಿಗಳೂ ಇವೆ. ಈ ಪಶುಗಳೆಲ್ಲವೂ ನಮ್ಮ ವ್ಯವಸಾಯ ಅಭಿವೃದ್ಧಿ ಮತ್ತು ಆರ್ಥಿಕ ಜೀವನದಲ್ಲಿ ಬಹು ಪ್ರಾಮುಖ್ಯ ಪಾತ್ರವಹಿಸುತ್ತಿವೆ. ಸರಾಸರಿ ತಲೆಯೊಂದಕ್ಕೆ ಪ್ರಪಂಚದ ಇತರ ಭಾಗಗಳಲ್ಲಿರುವ ಪಶುಸಂಖ್ಯೆಗಿಂತ ಹೆಚ್ಚಾಗಿದೆ. ಆದರೆ ಈ ಪರಿಸ್ಥಿತಿಯು ದೇಶಗಳ ನಾನಾ ಭಾಗದಲ್ಲಿ ಏಕರೀತಿಯಾಗಿಲ್ಲ. ಈ ಸಂಪತ್ತನ್ನು ಅಭಿವೃದ್ಧಿಗೊಳಿಸಲು ಏಕಮುಖವಾದ ಯೋಜನೆಯನ್ನು ತಯಾರಿಸುವಲ್ಲಿ ಅನೇಕ ವಿಧವಾದ ಅಡಚಣೆಗಳಿವೆ.

ಪಶುಸಂಪತ್ತನ್ನು ಹೆಚ್ಚಿಸುವಲ್ಲಿ ಈ ಕೆಳಗಿನ ನಾಲ್ಕು ಅಂಶಗಳನ್ನು ಗಮನಿಸುವುದು ಅತ್ಯವಶ್ಯಕ, (೧) ಗೂಳಿಗಳನ್ನು ಸಾಕುವುದು, (೨) ಪಶು ಆಹಾರ (ಮೇವು ಇತ್ಯಾದಿ ವಿಷಯ), (೩) ಪಶು ರೋಗಗಳು, (೪) ಪಶುಪಾಲನೆ. ಸರಿಯಾದ ಜಾತಿ–ಹಸುಗಳನ್ನು ಹೆಚ್ಚಿಸಲು ಉತ್ತಮದರ್ಜೆಯ ಗೂಳಿಗಳನ್ನು ಹೆಚ್ಚಿಸಿಕೊಳ್ಳಬೇಕು. ದೇಶಾದ್ಯಂತ ಶ್ರೇಷ್ಠಗೋವುಗಳನ್ನು ಅಧಿಕ ಸಂಖ್ಯೆಯಲ್ಲಿ ಹೆಚ್ಚಿಸಲು ೧೦ ಲಕ್ಷ ಗೂಳಿಗಳ ಅವಶ್ಯಕ. ಆದರೆ ನಮ್ಮ ದೇಶದಲ್ಲಿ ಈಗಿರುವ ಉತ್ತಮದರ್ಜೆಯ ಗೂಳಿಗಳ ಸಂಖ್ಯೆ ಕೇವಲ ೫ ಸಾವಿರ ಮಾತ್ರ. ಪಶು ಆಹಾರವೂ ಸಹ ಈಗ ಸಾಲದೇ ಇದೆ. ಈಗ ದೇಶದಲ್ಲಿರುವ ಹಿಂಡಿ ಧಾನ್ಯಾಹಾರ ಕೇವಲ ೬-೭ ಕೋಟಿ ಪಶುಗಳಿಗೆ ಸಾಕಷ್ಟು ಇವೆ, ಆದರೆ ಒಟ್ಟು ಪಶುಸಂಖ್ಯೆ ೨೬ ಕೋಟಿ ೩೪ ಲಕ್ಷ. ಹಸುರು ಮೇವು ಮತ್ತು ಜೋಳದ ಕಡ್ಡಿ, ಸೊಪ್ಪುಹುಲ್ಲು ಇತ್ಯಾದಿ ಕೇವಲ ೧೮-೧೯ ಕೋಟಿ ಪಶುಗಳಿಗೆ ಸಾಕಾಗುವಷ್ಟು ಮಾತ್ರ ಇದೆ. ಆದುದರಿಂದ ಈ ವಿಷಯದಲ್ಲಿಯೂ ಸಹ ತಕ್ಕ ಯೋಜನೆಯು ಅತ್ಯವಶ್ಯಕವಾಗಿ ಕಾಣಬರುತ್ತಿದೆ. ಇದೂ ಅಲ್ಲದೆ ಪಶುರೋಗಗಳನ್ನು ಸರಿಯಾಗಿ ಔಷಧಿ ಉಪಚಾರಗಳಿಂದ ಗುಣಪಡಿಸಲೂ ಮತ್ತು ಸಾಂಕ್ರಾಮಿಕರೋಗಗಳನ್ನು ತಡೆಗಟ್ಟಲೂ ವೈದ್ಯಕೀಯ ಸಹಾಯವೂ ಸಹ ಅತ್ಯವಶ್ಯಕವಾಗಿದೆ. ಅನುಭವದಿಂದ ಪ್ರತಿ ೨೫,೦೦೦ ಪಶುಗಳಿಗೆ ಒಬ್ಬನಂತಾದರೂ ಪಶುವೈದ್ಯನ ಅವಶ್ಯಕತೆಯು ಕಂಡುಬಂದಿದೆ.

ಇದೂ ಅಲ್ಲದೆ ನಮ್ಮ ದೇಶದ ರೈತಾಪಿ ಜನರಲ್ಲಿನ ಅಜ್ಞಾತೆಯೂ ಸಹ ಪಶುಸಂಪತ್ತನ್ನು ಹೆಚ್ಚಿಸಿಕೊಳ್ಳುವ ಯೋಜನೆಯಲ್ಲಿ ತೊಡಕನ್ನು ತಂದೊಡ್ಡುತ್ತಿದೆ. ಅವರಲ್ಲಿ ಬೇರೂರಿರುವ ತಪ್ಪುತಿಳುವಳಿಕೆಗಳನ್ನು [illegible] ಶಾಸ್ತ್ರೀಯ ವಿಧಾನಗಳನ್ನು ಅನುಸರಿಸುವಂತೆ ಪ್ರೇರೇಪಿಸುವುದು ಅಗತ್ಯವಾಗಿರುತ್ತದೆ.

ಎಲ್ಲವಕ್ಕಿಂತಲೂ ಹೆಚ್ಚಾಗಿ ಪಶುಗಳಿಂದ ಉತ್ಪತ್ತಿಯಾಗುವ ಪದಾರ್ಥಗಳಿಗೆ ಸರಿಯಾದ ಬೆಲೆಯೂ ಮತ್ತು ಅವನ್ನು ಪಾಲನೆಮಾಡುವವನ ಜೀವನವೂ ಸುಗಮವಾಗಿ ನಡೆಯಲು ಸಾಕಾದಷ್ಟು ವರಮಾನವೂ ಲಭಿಸುವುದು ಅಗತ್ಯ. ಈ ಸಂದರ್ಭದಲ್ಲಿ ಬೆರಕೆಮಾಡಿ ಮಾರುವವರನ್ನು ಶಿಕ್ಷಿಸಲೂ, ಹಾಲಿನ ಗುಣಾವಗುಣದ ಮೇಲೆ ದರ್ಜೆವಾರು ವಿಂಗಡಿಸಿ ಬೆಲೆ ನಿರ್ಣಯಿಸುವುದೂ, ಮತ್ತು ಪಶುಗಳನ್ನು ಸಾಂಕ್ರಾಮಿಕ ರೋಗ ಹರಡುವ ಕಾಲದಲ್ಲಿ ಪ್ರತ್ಯೇಕವಾಗಿರಿಸಿ, ಅವನ್ನು ಸರಿಯಾಗಿ ವೈದ್ಯಕೀಯ ದೃಷ್ಟಿಯಿಂದ, ಶಾಸ್ತ್ರೀಯವಾಗಿ ಪರೀಕ್ಷಿಸಿ, ಅವುಗಳಿಗೆ ಔಷಧಿ ಪ್ರಯೋಗನಡೆಸುವುದೂ ಮತ್ತು ರೋಗಗಳು ಹರಡದಂತೆ ತಡೆಗಟ್ಟುವುದೂ, ಅತಿ ಮುಖ್ಯವಾದ ವಿಷಯಗಳಾಗಿರುತ್ತವೆ. ಇದಕ್ಕಾಗಿ ಪ್ರತ್ಯೇಕ ಶಾಸನಗಳನ್ನು ಮಾಡಬೇಕಾಗಿರುತ್ತದೆ.

ಭಾರತವು ಬಹು ದೊಡ್ಡದೇಶ.

ವಿವಿಧ ತರನಾದ ಸನ್ನಿವೇಶಗಳಿಗೆ ಅನ್ವಯಿಸಿ, ಆಯಾ ಭಾಗಗಳಿಗೆ ಅನುಕೂಲಿಸುವಂತೆ, ಮತ್ತು ಇಡೀ ಭಾರತದ ಪಶುಸಂಪತ್ತು ಹೆಚ್ಚುವಂತೆ ಸಮಂಜಸವಾದ ಮತ್ತು ಕ್ರಮಬದ್ಧವಾದ ಯೋಜನೆಯು ಅತ್ಯವಶ್ಯಕ ಎಚ್ಚರಿಕೆಯಿಂದಲೂ ಮತ್ತು ಶಿಸ್ತಿನಿಂದಲೂ ಯೋಜನೆಯನ್ನು ತಯಾರಿಸತಿದಿದ್ದಲ್ಲಿ ಅದು ಯಶಸ್ವಿಯಾಗಲಾರದು

ರೇಡಿಯೋ

ಆಗಸ್ಟ್ ೩೧ ಗುರುವಾರ

೩೧೦ ಮೀಟರು ೪೯-೪೬ ಮೀಟರು

ಬೆಳಿಗ್ಗೆ ೭-೦ ಉದಯಗಾನ ಕಾರ್ಯಕ್ರಮ ವಿವರಣೆ ೭-೫ ಅರಿಯಕುಡಿ ರಾಮಾನುಜಯ್ಯಂಗಾರ್ (ರೆ) ೭-೧೫ ಪಿಟೀಲು (ಎಂ. ಎಸ್. ಸುಬ್ರಮಣ್ಯಂ) ೭-೪೮ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಕ್ಲಾರಿಯೋನೆಟ್ (ಬಿ. ನಾಗೇಂದ್ರಪ್ಪ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ವೀಣೆ ೨-೦ ನಿಮ್ಮ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ.

ಸಂಜೆ ೫-೩೮ ಪಿಟೀಲು (ಎಂ. ಎಸ್. ಸುಬ್ರಹ್ಮಣ್ಯಂ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಪಾಶ್ಚಿಮಾತ್ಯ ಸಂಗೀತ ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಚಿತ್ರವಾಣಿ (ರೆ) ೭-೧೫ ಸಂಗೀತ (ಪ್ರಸನ್ನ ಕುಮಾರ್) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕನ್ನಡವಾದ್ಯಗಳು ೮-೧೫ ತಾಳವಾದ್ಯ ೮-೩೦ ಸಂಗೀತ (ಪ್ರಸನ್ನ ಕುಮಾರ್) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ [illegible] ೧೦-೦ ಮುಕ್ತಾಯ

MYSORE CITY MUNICIPALITY

NOTICE

Sealed tenders will be received by the Municipal Engineer for the following works up to 4 P. M. on 6-9-1950 :

1. Giving water connection to the newly constructed Bus Shelter for ladies and gents at Bus Terminus.
2. Improving the Sheep Slaughter house at Jalapuri, in Lashker Mohalla.

Each tender should accompanied with a challen for having remitted Rs 25 and 65 respectively in the Municipal Treasury for the above works.

For more particulars please see the detailed notification at the Notice Board.

(sd) V. K. Mukundan,
Municipal Engineer.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಕಾರ್ಮಿಕರ ಸಾರ್ವತ್ರಿಕ ಮುಷ್ಕರ ?

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್ ಸ್ವಾಮಿ

ಸಂಪುಟ ೧] ೩೧ - ೮ --೧೯೫೦ ನೇ ಗುರುವಾರ [ಸಂಚಿಕೆ ೧೪

ಬೊಂಬಾಯಿನಲ್ಲಿ ಗಿರಣಿ ಕೆಲಸಗಾರರ ಮುಷ್ಕರವು ಮುಂದುವರಿಯುತ್ತಲಿದೆ. ಸುಮಾರು ೨ ಲಕ್ಷ ಗಿರಣಿ ಕೆಲಸಗಾರರು ಮುಷ್ಕರದಲ್ಲಿ ತೊಡಗಿದ್ದಾರೆ. ಒಂದೇ ಒಂದು ಗಿರಣಿಯು ಕೆಲಸಮಾಡುತ್ತಿದೆ. ಬೊಂಬಾಯಿನಲ್ಲೆಲ್ಲಾ ಇಂದು ಸಾರ್ವತ್ರಿಕ ಮುಷ್ಕರವನ್ನು ಹೂಡಬೇಕೆಂದು ರೈಲ್ವೆ, ರೈಲ್ವೆವರ್ಕ್‌ಷಾಪ್, ಮುಂತಾದ ಎಲ್ಲಾ ಕಾರ್ಮಿಕರೂ ಇದಕ್ಕೆ ಬೆಂಬಲ ಕೊಡಬೇಕೆಂದು ಕೋರಲಾಗಿತ್ತು. ಆದರೆ ರೈಲ್ವೆ, ಟ್ರಾಂವೇ ಮುಂತಾದುವು ಮಾಮೂಲಿನಂತೆ ನಡೆಯುತ್ತಲಿವೆ. ಕೆಲಸಕಾರ್ಯಗಳಿಗೆ ಅಡ್ಡಿಬಂದ ಕೆಲವರನ್ನು ದಸ್ತಗಿರಿಮಾಡಲಾಗಿದೆ

ಶ್ರೀ ಆಚಾರ್ಯ ಕೃಪಲಾನಿಯವರಿಗೇ ಬೆಂಬಲ

ಮೈಸೂರಿನಿಂದ ನಾಸಿಕ ಕಾಂಗ್ರೆಸ್ಸಿಗೆ ಹೋಗುವ ಪ್ರತಿನಿಧಿಗಳು ಆಚಾರ್ಯ ಕೃಪಲಾನಿಯವರಿಗೇ ಓಟುಮಾಡುವರೆಂದೂ ಮತ್ತು ಕರ್ಣಾಟಕಪ್ರಾಂತೀಯ ಕಾಂಗ್ರೆಸ್ಸಿನ ಬಹು ಮಂದಿ ಶ್ರೀ ಕೃಪಲಾನಿಯವರಿಗೇ ಓಟುಮಾಡುವರೆಂದೂ ತಿಳಿದುಬಂದಿದೆ.

ಹಿಮಾಲಯಾ ಪರ್ವತಶ್ರೇಣಿಯಲ್ಲಿನ ಬೆಟ್ಟಗಳು ಮಾಯವಾಗಿವೆ

ಇತ್ತೀಚಿನ ಭಾರಿ ಭೂಕಂಪದ ಪರಿಣಾಮವಾಗಿ ಅನೇಕ ಬೆಟ್ಟಗಳು ಹಿಮಾಲಯ ಪರ್ವತಶ್ರೇಣಿಯಲ್ಲಿ ಮಾಯವಾಗಿದೆಯೆಂದು, ಅಲ್ಲಿ ವಿಮಾನದಿಂದ ಪರಿಶೀಲನೆ ನಡೆಸಿದವರು ತಿಳಿಸಿದ್ದಾರೆ ಇದಲ್ಲದೆ ಅನೇಕ ಭೌಗೋಳಿಕ ಬದಲಾವಣೆಗಳೂ ಆಗಿವೆಯೆಂದು ತಿಳಿದು ಬಂದಿದೆ.

ಗೋಧಿ

ಪಂಜಾಬ್ ಸರ್ಕಾರವು ಬೀಹಾರಿನ ದುರಂತಸ್ಥಿತಿಗೊಳಗಾಗಿರುವವರಿಗಾಗಿ ಇನ್ನು ೧೨,೫೦೦ ಟನ್ ಗೋಧಿಯನ್ನು ಕೊಡುವುದಾಗಿ ತಿಳಿಸಿರುವುದು.

ಸೈನ್ಯದ ಬದಲು ಗೋಧಿ

ಕೊರಿಯಾ ಯುದ್ಧಕ್ಕೆ ಪಾಕೀಸ್ತಾನವು ಸೈನ್ಯವನ್ನೇನೂ ಕಳುಹಿಸಲಾರದೆಂದೂ ಆದರೆ ೫ ಸಾವಿರ ಟನ್ ಗೋಧಿ ಕಳುಹಿಸಲು ಸಿದ್ಧವಿದೆಯೆಂದು ಪ್ರಪಂಚಸಂಸ್ಥೆಯ ಪಾಕೀಸ್ತಾನದ ಪ್ರತಿನಿಧಿಯು ಸೆಕ್ರೆಟರಿ ಜನರಲ್‌ರವರಿಗೆ ಪತ್ರ ಬರೆದಿದ್ದಾರೆ.

ಆಂಟಿ–ಆಟಂ ಯುದ್ಧಹಡಗು

ಬಿಕನಿ ಆಟಂ ಬಾಂಬು ಪ್ರಯೋಗ ಅನುಭವದ ಮೇಲೆ ಅಣು ಅಸ್ತ್ರವನ್ನೆದುರಿಸುವ ಯುದ್ಧ ಹಡಗನ್ನು ಡಚ್ಚರು ತಯಾರಿಸಿದ್ದಾರೆ. ಅದರ ಹೆಸರು "ಸೆವೆನ್ ಪ್ರಾವಿನ್ಸೆಸ್" ಎಂದು ಈಗ್ಗೆ ಎರಡು ವರ್ಷಗಳ ಹಿಂದೆ ತಯಾರಿಸಿದ ಬ್ರಿಟಿಷ್ ಯುದ್ಧ ನೌಕೆಗಳೂ ಸಹ ಈ ಗುಪ್ತ ಮಾದರಿಯ ಮೇಲೆ ತಯಾರಿಸಲ್ಪಟ್ಟವೆಯೆಂದು ತಿಳಿದು ಬರುತ್ತವೆ.

ಶ್ರೀ ಕೆ. ಸಿ. ರೆಡ್ಡಿಯವರಿಗೆ ಅಸ್ವಸ್ಥತೆ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಅಸ್ವಸ್ಥತೆ ನಿಮಿತ್ತ ನೆನ್ನೆ ಲೆಜಿಸ್ಲೆಟಿವ್ ಅಸೆಂಬ್ಲಿ ಅಧಿವೇಶನಕ್ಕೆ ಬಂದಿರಲಿಲ್ಲ ಅವರ ಪರವಾಗಿ ಸಚಿವ ಹೆಚ್. ಸಿ. ದಾಸಪ್ಪನವರೇ ಉತ್ತರವಿತ್ತರು.

೫ ಕೋಟಿ ರೂಪಾಯಿ ಸಾಲ

ಆರ್ಥಿಕ ಯೋಜನೆಗಳಿಗಾಗಿ ಮೈಸೂರು ಸರ್ಕಾರವು ೫ ಕೋಟಿ ರೂಪಾಯಿ ಸಾಲ ತೆಗೆಯಲು ಕೇಂದ್ರ ಸರ್ಕಾರವು ಅನುಮತಿ ಕೊಟ್ಟಿದೆ.

ಬಿರುದು ಕೊಡಲವಕಾಶ

ಮೈಸೂರು ರಾಜಪ್ರಮುಖರಾಗಲಿ ಸರ್ಕಾರವಾಗಲೀ ಬಿರುದು ಮತ್ತು ಸಾರ್ವಜನಿಕ ಪದಕಗಳನ್ನು ಕೊಡಲು ಅವಕಾಶವೀಯಬೇಕೆಂದು ಕೇಂದ್ರ ಸರ್ಕಾರವನ್ನು ಮೈಸೂರು ಸರ್ಕಾರ ಪ್ರಾರ್ಥಿಸಿದೆ.

ಸಿಂಹಳ ದ್ವೀಪದಲ್ಲಿ

ಸಿಂಹಳದ್ವೀಪದಲ್ಲಿ ಒಂದು ಪ್ರಚಂಡ ಮಾರುತವು ಬೀಸಿ ೧೩೦೦ ದೋಣಿಗಳು ಕೊಚ್ಚಿಕೊಂಡು ಹೋಗಿವೆ. ೯೩ ಮಂದಿ ಬೆಸ್ತರು ಪತ್ತೆಯಿಲ್ಲ. ವಿಮಾನದಳಗಳು ಆಕಾಶದಲ್ಲಿ ಹಾರಾಡಿ ಪತ್ತೆ ಹಚ್ಚುತ್ತಲಿವೆ. ಕೆಲವು ಮಂದಿ ಬೆಸ್ತರು ನೀರಿನಲ್ಲಿ ಮುಳುಗಿಹೋಗುತ್ತಿರುವುದು ಕಂಡು ಬಂದಿತೆಂದು ತಿಳಿಯಬರುತ್ತದೆ.

ಹಂಸರಾಜ, ಜಯ ಚಾಮುಂಡಿ

ನೆನ್ನೆ ಮೈಸೂರು ಅರಮನೆಯಲ್ಲಿ ಸುಮಾರು ೩೦ ವರ್ಷ ವಯಸ್ಸಿನ, ಒಂದು ಆನೆಗೆ 'ಹಂಸರಾಜ' ಮತ್ತು ೩॥ ವರ್ಷದ ಒಂದು ಹಸುವಿಗೆ 'ಜಯ ಚಾಮುಂಡಿ' ಎಂಬ ನಾಮಧೇಯಮಾಡಿ, ರಾಜಮರ್ಯಾದೆಯೊಡನೆ ಪಟ್ಟವನ್ನು ಕಟ್ಟಿದರು.

ಇನ್ನು ೫೦ ವರ್ಷಗಳಲ್ಲಿ ಎಣ್ಣೆಯ ಕ್ಷಾಮ

ಪ್ರಪಂಚದಲ್ಲಿ, ಹೊಸ ಹೊಸ ಪೆಟ್ರೋಲ್ ಖನಿಜಗಳನ್ನು ಕಂಡುಹಿಡಿದರೂ, ಇನ್ನು ಐವತ್ತು ವರ್ಷಗಳಲ್ಲಿ ಪೆಟ್ರೋಲ್ ಅಭಾವವು ಉತ್ಕಟ ಪರಿಸ್ಥಿತಿಗೆ ಬರುವುದೆಂದೂ ಮತ್ತು ಎಣ್ಣೆ ಕ್ಷಾಮವೇರ್ಪಡುವುದೆಂದೂ ಪೆಟ್ರೋಲ್ ವಿಜ್ಞಾನಿ ಡಾ॥ ಎ. ಪಾರ್ಕರವರು ಬ್ರಿಟಿಷ್ ಕೈಗಾರಿಕಾ ಸಂಶೋಧನ ಸಂಸ್ಥೆಯ ಮುಂದೆ ಭಾಷಣ ಮಾಡುತ್ತಾ ತಿಳಿಸಿದರು.

ವಸ್ತುಗಳಬೆಲೆ ಏರದಂತೆ ತಡೆ

ವಸ್ತುಗಳ ಬೆಲೆ ಏರದಂತೆ ತಡೆಗಟ್ಟಲು ಹತೋಟಿಗಳು, ಫಂಡ್‌ಗಂಡಾಯ, ತಯಾರಿಕೆ ಹೆಚ್ಚುವುದು ಇವೇ ಮೊದಲಾದ ಕ್ರಮಗಳು ಅತ್ಯಗತ್ಯವೆಂದು ದೆಹಲಿಯಲ್ಲಿ ಸೇರಿದ್ದ ಆರ್ಥಿಕ ಪ್ರವೀಣರ ವಿಚಾರಗೋಷ್ಠಿ ಸೂಚಿಸಿದೆ.

ಕೂಲಿಗೆ ಬದಲು ಮಜ್ದೂರ್

ಉತ್ತರ ಪ್ರದೇಶದ ಸರ್ಕಾರವು ಅಧಿಕಾರಿ ಕಾಗದಪತ್ರಗಳಲ್ಲಿ 'ಕೂಲಿ' ಎಂಬ ಪದವನ್ನು ಉಪಯೋಗಿಸುವುದನ್ನು ನಿಲ್ಲಿಸಿ 'ಮಜ್ದೂರ್' ಎಂಬ ಪದವನ್ನು ಉಪಯೋಗಿಸಬೇಕೆಂದು ಆಜ್ಞೆಮಾಡಿದ್ದಾರೆ.

ಸರ್ಕಾರಿ ಅಧಿಕಾರಿಗೆ ಶಿಕ್ಷೆ

ಕೇಂದ್ರಸರ್ಕಾರಕ್ಕೆ ೪೯ ೭೫೦ ರೂಪಾಯನ್ನು ಕಲ್ಕತ್ತಾದ ಪ್ರಸಿದ್ಧ ವ್ಯಾಪಾರಿಯಾದ ಕೇದಾರನಾಥ ಬಜೋರಿಯಾ ಎಂಬುವವನು ಮೋಸಮಾಡಿದಕ್ಕೆ ಸಹಾಯಮಾಡಿದರೆಂದು, ಭಾರತ ಸರ್ಕಾರದ ಉನ್ನತಾಧಿಕಾರಿಯಾಗಿದ್ದ ಶ್ರೀ ಹೆಚ್. ಆರ್. ವೇದ್ ಎಂಬುವವರಿಗೆ ೧ ವರ್ಷ ಕಠಿಣ ಸಜಾ ಮತ್ತು ೧,೦೦೦ ರೂ ಜುಲ್ಮಾನೆ ವಿಧಿಸಲಾಗಿದೆ

ಪಂಡಿತ ನೆಹರೂ ಅಸ್ಸಾಂನಿಗೆ

ಅಸ್ಸಾಂನಲ್ಲಿ ಭೂಕಂಪಪೀಡಿತ ಪ್ರದೇಶಗಳಿಗೆ ಪಂ। ನೆಹರೂರವರು ಮುಂದಿನವಾರ ಭೇಟಿಕೊಟ್ಟು ಅಲ್ಲಿನ ಜನರ ಹೃದಯವಿದಾರಕ ಪರಿಸ್ಥಿತಿಯನ್ನು ಸ್ವತಃ ಪರಿಶೀಲಿಸಲಿರುವರು.

ಗೋಧಿ ಮತ್ತು ಅಕ್ಕಿ ಸರಬರಾಜು

ಮದ್ರಾಸಿನ ಆಹಾರಕಾರ್ಯದರ್ಶಿಯು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿಕೆ ಕೊಡುತ್ತಾ, ಕೇಂದ್ರದಿಂದ ಮದ್ರಾಸಿಗೆ ಒಟ್ಟು ಬರಬೇಕಾದ ೨,೩೦,೦೦೦ ಟನ್ನುಗಳ ಪೈಕಿ ಈಗಾಗಲೇ ೧,೬೪,೩೧೭ ಟನ್ನುಗಳು ಆಹಾರ ಸರಬರಾಜಾಗಿದೆ.

LATEST

ಮೈಸೂರು. ಆ. ೩೧.

ಮೈಸೂರು ಪೌರಸಭೆಯ ಸಹಾಯ

ಇಂದು ಮೈಸೂರು ಪೌರಸಭೆಯ ಮಾಹೆಯಾನ ಮೀಟಿಂಗು ನಡೆದು ಅಸ್ಸಾಂ ಭೂಕಂಪದಲ್ಲಿ ನೊಂದವರ ಪರಿಹಾರ ನಿಧಿಗಾಗಿ ೨,೦೦೦ ರೂ ಗಳನ್ನು ಕೊಡಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಪೌರಸಭಾತ್ರಯದಲ್ಲಿ ಮೈಸೂರು ನಗರದ ಗಣ್ಯವ್ಯಕ್ತಿಗಳ ಸಭೆಯೊಂದನ್ನು ನಡೆಸಿ, ಇನ್ನೂ ಹೆಚ್ಚಿಗೆ ಪರಿಹಾರದ್ರವ್ಯವನ್ನು ವಸೂಲ್ಮಾಡಿ ಕಳುಹಿಸಬೇಕೆಂದೂ ತೀರ್ಮಾನವಾಯಿತು.

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಮೈಸೂರು ಪ್ರಾಂತ್ಯ ಕಾಂಗ್ರೆಸ್ ನೂತನ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯನ್ನು ನೂತನವಾಗಿ ರಚಿಸಿರುದರು. ಅದರಲ್ಲಿರುವ ಸದಸ್ಯರು :—

ಶ್ರೀಗಳಾದ

೧. ಎಚ್. ಎಸ್. ರುದ್ರಪ್ಪ (ಉಪಾಧ್ಯಕ್ಷರು ಮತ್ತು ಖಜಾಂಚಿ)
೨. ಟಿ. ಸುಬ್ರಹ್ಮಣ್ಯಂ
೩. ಎಸ್. ಚೆನ್ನಯ್ಯ
೪. ಟಿ. ಸಿದ್ದಲಿಂಗಯ್ಯ
೫. ಎಚ್. ಸಿದ್ದಯ್ಯ
೬. [illegible]
೭. ವೀರಣ್ಣಗೌಡ
೮. ವೈ. ಎಂ. ಚಂದ್ರಶೇಖರಯ್ಯ
೯. ಹುಚ್ಚೆಮಾಸ್ತಿಗೌಡ
೧೦. ಆರ್. ಸುಬ್ಬಣ್ಣ
೧೧. ಎ. ಜಿ. ರಾಮಚಂದ್ರರಾವ್ (ಕಾರ್ಯದರ್ಶಿ)

ಹರಿಜನರಿಗೆ ೨, ಸ್ತ್ರೀಯರಿಗೆ ೧, ಮೈಸೂರು ಮತ್ತು ಚಿತ್ರದುರ್ಗದ ಪ್ರತಿನಿಧಿಗಳಿಗಾಗಿ ಒಂದೊಂದು ಒಟ್ಟು ೫ ಸ್ಥಾನಗಳನ್ನು ಮೀಸಲಾಗಿಡಲಾಗಿದೆ ಅಧ್ಯಕ್ಷರು ಡಬ್ಲಿಗೆ ಪ್ರಯಾಣಮಾಡಿ, ಅಂತರ ರಾಷ್ಟ್ರೀಯಯ ಪಾರ್ಲಿಮೆಂಟರಿ ಸಭೆಯಲ್ಲಿ ಭಾಗವಹಿಸಿ ಹಿಂತಿರುಗಿದನಂತರ ಈ ಜಾಗಗಳನ್ನು ಭರ್ತಿ ಮಾಡಲಾಗುವುದೆಂದು ತಿಳಿಯಬರುತ್ತದೆ.

ಭದ್ರತಾ ಸಮಿತಿಗೆ

ಸೆಪ್ಟಂಬರ್ ಒಂದರಿಂದ ಭದ್ರತಾ ಸಮಿತಿಗೆ ಬ್ರಿಟಿಷ್ ಪ್ರತಿನಿಧಿಯು ಅಧ್ಯಕ್ಷರಾಗಿರುವರು. ಆಗಸ್ಟು ತಿಂಗಳಲ್ಲಿ ರಷ್ಯಾ ಪ್ರತಿನಿಧಿಯು ಅಧ್ಯಕ್ಷರಾಗಿದ್ದರು.

ಮುಷ್ಕರ

ಬೊಂಬಾಯಿನ ಮಿಲ್ಲುಗಳ ಕೆಲಸಗಾರರ ಮುಷ್ಕರವು ಇನ್ನೂ ಮುಂದುವರಿಯುತ್ತಲಿದೆ. ೬ ಗಿರಣಿಗಳು ಪೂರ್ತಾ ಮತ್ತು ೪ ಸ್ವಲ್ಪ ಕೆಲಸಗಾರರೊಡನೆ ಕೆಲಸ ಮಾಡುತ್ತಲಿದ್ದುವು. ಒಟ್ಟು ೯,೦೦೦ ಜನರು ಕೆಲಸದಲ್ಲಿ ತೊಡಗಿದ್ದರು.

ಪ್ರವಾಹ

ಬ್ರಹ್ಮಪುತ್ರಾ ಮತ್ತು ಅದರ ಉಪನದಿಗಳ ಪ್ರವಾಹವು ಇಳಿಮುಖವಾಗಿದೆಯೆಂದು ತಿಳಿಯಬರುತ್ತದೆ.

ಎ. ಐ. ಸಿ. ಸಿ.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ, ಮೈಸೂರಿಗಿರುವ ಒಂಭತ್ತು ಸ್ಥಾನಗಳಿಗೆ ಶ್ರೀಗಳಾದ ಕೆ. ಸಿ. ರೆಡ್ಡಿ, ಎಸ್. ಚನ್ನಯ್ಯ, ಎಸ್. ಎನ್. ನದಸಯ್ಯ, ಎ. ಜಿ. ಬಂದೀಗೌಡ, ಕೆ. ಹನುಮಂತಯ್ಯ, ಎ. ಜಿ. ರಾಮಚಂದ್ರರಾವ್. ಎಚ್. ಎನ್. ರುದ್ರಪ್ಪ, ಎಚ್. ಸಿದ್ಧವೀರಪ್ಪ ಮತ್ತು ಟಿ. ಸುಬ್ರಹ್ಮಣ್ಯರವರು ಸರ್ವಾನುಮತದಿಂದ ಸದಸ್ಯರಾಗಿ ಚುನಾಯಿತರಾದರು.

ಶ್ರೀ ನಿಜಲಿಂಗಪ್ಪ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ನಿಜಲಿಂಗಪ್ಪನವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಈಗಿನ ಪದ್ಧತಿ ಬದಲಾಯಿಸಿ

ಸರ್ಕಾರದ ಆಡಳಿತ ಪದ್ಧತಿಯನ್ನು ನೋಡುವುದಾದರೆ ಕೇಂದ್ರ ಹಾಗೂ ಎಲ್ಲೆಡೆಗಳಲ್ಲೂ ಇನ್ನೂ "ಅಧಿಕಾರಶಾಹಿ" ಹಾಗೆಯೇ ಉಳಿದಿದೆ, ಮಂತ್ರಿಗಳು ಮಾತ್ರ ಬೇರೆಯವರಿದ್ದಾರೆ. ಕಾಂಗ್ರೆಸ್ ಮೇಲಿರುವ ಆಕ್ಷೇಪಣೆಗಳಿಗೆ ಕಾಂಗ್ರೆಸ್ ಆಡಳಿತ ಪದ್ಧತಿಯೇ ಮೂಲಕಾರಣ. ಸರ್ಕಾರದ ಆಗುಹೋಗುಗಳಲ್ಲಿ ಸಂಸ್ಥೆಯ ಕೀರ್ತಿ ಅವಲಂಬಿಸಿದೆ. ಪದ್ಧತಿಯ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಮಂತ್ರಿಮಂಡಲಕ್ಕೂ ಕಾಂಗ್ರೆಸ್ ಸಮಿತಿಗೂ ನಿಕಟ ಸಂಬಂಧವಿರಬೇಕು ಎಂದು ನೂತನ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷ ಚುನಾವಣೆಯಾದನಂತರ ತಿಳಿಸಿದರು.

ದೆಹಲಿಯಲ್ಲಿ ಊಹಾಪೋಹ

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಬಿರುಸಿನಿಂದ ಸಾಗುತ್ತಿರುವ ಈ ಸಮಯದಲ್ಲಿ, ದೆಹಲಿಯಲ್ಲಿ ಈ ಚುನಾವಣೆಯ ಫಲಿತಾಂಶದ ಪ್ರತಿಕ್ರಿಯೆಯ ಬಗ್ಗೆ ಊಹಾಪೋಹೆಗಳಾಗುತ್ತಿವೆ. ಶ್ರೀ ಟಂಡನ್‌ರವರು ಜಯಶೀಲರಾದರೆ ಪ್ರಧಾನಿ ನೆಹರೂರವರು ಸಂದಿಗ್ಧ ಪರಿಸ್ಥಿತಿಗೆ ಗುರಿಯಾಗುವರೆಂದೂ, ಶ್ರೀ ಕೃಪಲಾನಿಯವರು ಚುನಾಯಿತರಾದರೆ ಸರ್ದಾರ ಪಟೇಲರಿಗೆ ಅಸಮಾಧಾನ ವಾಗಬಹುದೆಂದೂ ಹೇಳಲಾಗುತ್ತಿದೆ.

ಶ್ರೀ ಟಂಡನರವರೇನಾದರೂ ಅಧ್ಯಕ್ಷರಾದರೆ, ಪಾಕೀಸ್ತಾನದೊಂದಿಗೆ ಇನ್ನೂ ಖಂಡಿತವಾದ ಧೋರಣೆಯನ್ನು ಅನುಸರಿಸಬೇಕಾಗುವುದೆಂದೂ, ನಿರಾಶ್ರಿತರ ಬಗ್ಗೆ ಇನ್ನೂ ಹೆಚ್ಚಿನ ಸಹಾಯಕವಾದ ಧೋರಣೆಯನ್ನು ಅನುಸರಿಸಬೇಕಾಗುವುದೆಂದೂ, ಮತ್ತು ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಅನುಸರಿಸುವಲ್ಲಿ ಇನ್ನೂ ತೀವ್ರ ಕಾರ್ಯಕ್ರಮವನ್ನು ಅನುಸರಿಸಬೇಕಾಗುವುದೆಂದೂ, ಊಹಿಸಲಾಗಿದೆ. ಶ್ರೀ ಕೃಪಲಾನಿಯವರೇನಾದರೂ ಚುನಾಯಿತರಾದರೆ ಸರ್ಕಾರದ ಆಡಳಿತವನ್ನು ಶುದ್ಧೀಕರಣ ಮಾಡಬೇಕಾಗುವುದೆಂದೂ, ಸಮಾಜದ್ರೋಹಿಗಳಾದ ಕಾಳಸಂತೆ ಕೋರರನ್ನೂ, ಲಾಭ ಬಡುಕರನ್ನೂ ಮತ್ತು ಲಂಚಗುಳಿತನವನ್ನೂ ತೀವ್ರವಾಗಿ ಎದುರಿಸಬೇಕಾಗುವುದೆಂದೂ ಹೇಳಲಾಗುತ್ತಿದೆ. ಶ್ರೀ ಶಂಕರರಾವ್‌ದೇವ್‌ರವರು ಚುನಾಯಿತರಾಗಿದ್ದರೆ ಈ ರೀತಿಯ ಯಾವತೊಂದರೆಗಳೂ ಉಂಟಾಗುವುದಿಲ್ಲವೆಂದು ಹೇಳಲಾಗುತ್ತಿದೆ.

ಬೊಂಬಾಯಿ ಕಾರ್ಪೋರೇಷನಲ್ಲಿ ಸಭಾತ್ಯಾಗ

ಈಗ್ಗೆ ೧೨ ದಿನಗಳಿಂದಲೂ ನಡೆಯುತ್ತಿರುವ ಗಿರಣಿ ಮುಷ್ಕರದಾರರಿಗೆ ಸಹಾನುಭೂತಿ ತೋರುವ ಮತ್ತು ಮಾಲೀಕರನ್ನು ಖಂಡಿಸುವ ನಿರ್ಣಯವೊಂದನ್ನು ಸೋಷಿಯಲಿಸ್ಟ್ ಪ್ರತಿನಿಧಿಗಳು ಬೊಂಬಾಯಿನ ಕಾರ್ಪೋರೇಷನಲ್ಲಿ ಮಂಡಿಸಲು ತಂದರು. ಅದನ್ನು ಕಾರ್ಪೋರೇಷನ್ ಮೇಯರಾದ ಶ್ರೀ ಎಸ್. ಕೆ. ಪಾಟೀಲರು ತಳ್ಳಿಹಾಕಿದರು. ಇದಕ್ಕೆ ಅಸಮಾಧಾನ ಸೂಚಿಸಲು ಸೋಷಿಯಲಿಸ್ಟ್ ಪ್ರತಿನಿಧಿಗಳೆಲ್ಲರೂ ಸಭಾಪರಿತ್ಯಾಗ ಮಾಡಿದರು.

ಭಾಷಣ

ಮೈಸೂರು ಅಶೋಕ ಚಕ್ರ ಸಂಘದ ಆಶ್ರಯದಲ್ಲಿ ಇದೇ ಸೆಪ್ಟಂಬರ್ ೧ ನೇ ಶುಕ್ರವಾರ ಸಂಜೆ ೬॥ ಗಂಟೆಗೆ ಸಾಧ್ವೀ ಆಫೀಸಿನಲ್ಲಿ ಮೈಸೂರು ಸೆಂಟ್ ಫಿಲೋಮಿನಾ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀ ಕೆ. ಎಸ್. ಚಕ್ರವರ್ತಿಯವರು "ಧರ್ಮ ಮತ್ತು ಅರ್ಥ" ಎಂಬ ವಿಷಯದಲ್ಲಿ ಭಾಷಣ ಮಾಡುವರು.

ಮದರಾಸಿನಲ್ಲಿ ರಾತ್ರಿ ಪೋಸ್ಟಾಫೀಸು

ಮದರಾಸಿನಲ್ಲಿ ನಾಳೆಯಿಂದ ರಾತ್ರಿವೇಳೆ ನಡೆಯುವ ಎರಡು ಪೋಸ್ಟಾಫೀಸುಗಳನ್ನು ಸಾರ್ವಜನಿಕರಿಗಾಗಿ ತೆರೆಯಲಾಗುವುದೆಂದು ತಿಳಿದುಬಂದಿದೆ. ಮೊದಲನೆಯದು ಜನರಲ್ ಪೋಸ್ಟಾಫೀಸ್ ಬಳಿಯೂ, ಮತ್ತೊಂದು ಟ್ರಿಪ್ಲಿಕೇನ್ ಮತ್ತು ಮೌಂಟ್‌ರೋಡ್ ಮಧ್ಯೆ ಇರುವುದೆಂದು ತಿಳಿದು ಬಂದಿದೆ. ಇವು ರಾತ್ರಿ ೧೦ ಘಂಟೆಯವರೆಗೆ ತೆರೆದಿರುತ್ತವೆ.

ತುಳಿಸಿ ಗಿಡದಿಂದ ಕರ್ಪೂರ

ಡೆಹರಾಡೂನಿನ ಅರಣ್ಯ ಶಾಖೆಯ ಇನ್ಸ್ಟಿಟ್ಯೂಟಿನಲ್ಲಿ ಸಂಶೋಧನೆ ನಡೆಸಿದ ಪರಿಣಾಮವಾಗಿ ತುಳಸಿಗಿಡದಿಂದ ಕರ್ಪೂರವನ್ನು ತಯಾರಿಸಬಹುದೆಂದು ಕಂಡುಹಿಡಿದಿದ್ದಾರೆ. ಈ ಸಂಶೋಧನೆಯನ್ನನುಸರಿಸಿ, ಮಧ್ಯ ಭಾರತದಲ್ಲಿ ತುಳಸೀ ಗಿಡಗಳಿಂದ ಕರ್ಪೂರವನ್ನು ಮಾರಾಟಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲು ಸಿದ್ಧತೆಗಳಾಗುತ್ತಿವೆ.

ರೇಡಿಯೋ

ಸೆಪ್ಟೆಂಬರ್ ೧ ಶುಕ್ರವಾರ

೩೧೦ ಮೀಟರು ೪೯-೪೬ ಮೀಟರು

ಬೆಳಗ್ಗೆ ೭-೦ ಉದಯಗಾನ, ಕಾರ್ಯಕ್ರಮ ವಿವರಣೆ ೭-೫ ಚಿತ್ರಸಂಗೀತ (ರೆ) ೭-೨೫ ದೇವೀಭಜನ್ (ಕೃಷ್ಣಯ್ಯಂಗಾರ್) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧೨-೦ ಸಂಗೀತ (ರಾಮನಾಥನ್) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೫ ಹಿಂದಿಯಲ್ಲಿ ವಾರ್ತೆ ೧-೫೦ ಜಲತರಂಗ್ ೨-೦ ತಾರಾಗಣ (ರೆ) ೩-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ (ರಾಮನಾಥನ್) ೬-೦ ಇಂಗ್ಲೀಷಿನಲ್ಲಿವಾರ್ತೆ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೆ ೭-೫ ಹಿಂದಿಯಲ್ಲಿ ಕಾರ್ಯಕ್ರಮ ೭-೧೦ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ: ನವ್ಯ ರಾಜ್ಯಾಂಗ; ರಾಷ್ಟ್ರಪತಿಯ ಕರ್ತವ್ಯಮತ್ತು ಕನ್ನಡದಲ್ಲಿ ಅಧಿಕಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದಸುಧಾ ೮-೧೫ ರಾಗ, ತಾನ, ಪಲ್ಲವಿ (ಕೃಷ್ಣಯ್ಯಂಗಾರ್) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩ ನೃತ್ಯ ಸಂಗೀತ ೧೦-೦ ಮುಕ್ತಾಯ.

ಸಂಪಾದಕರು ಮತ್ತು ಪ್ರಕಾಶಕರು : ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

★ ಬೊಂಬಾಯಿನಲ್ಲಿ ಗೋಲಿಬಾರು

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE 2

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧—೯—೧೯೫೦ ನೇ ಶುಕ್ರವಾರ [ಸಂಚಿಕೆ ೧೫

ರಘುಲಾಲ್ ಮತ್ತು ಕಂಪನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.
—ಇಲ್ಲಿ—
ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬೊಂಬಾಯಿನಲ್ಲಿ ಮುಷ್ಕರ ಪರಿಸ್ಥಿತಿ

ಬೊಂಬಾಯಿನಲ್ಲಿ ಕಾರ್ಮಿಕರ ಮುಷ್ಕರವು ಅಷ್ಟು ಫಲಕಾರಿಯಾಗಲಿಲ್ಲವೆಂದು ತಿಳಿಯುಬರುತ್ತದೆ ಗಿರಣಿ ಕೆಲಸಗಾರರಲ್ಲದೆ ಇತರ ಕೈಗಾರಿಕೆಗಳಿಗೆ ಸಂಬಂಧಪಟ್ಟ ೭೫ ಸಾವಿರ ಜನರು ಮಾತ್ರ ಮುಷ್ಕರದಲ್ಲಿ ಭಾಗವಹಿಸಿದ್ದರು. ರೈಲ್ವೆ ಟ್ರಾಂವೇ ವರ್ಕ್‌ಷಾಪ್, ಬಂದರು ಮುಂತಾದ ಪ್ರದೇಶಗಳಲ್ಲಿ ಮಾಮೂಲಿನಂತೆ ಕೆಲಸಗಳು ನಡೆಯುತ್ತಲಿದ್ದುವು. ಗಿರಣಿಗಳಿರುವ ಪ್ರದೇಶಗಳಲ್ಲಿ ಮಾತ್ರ ಸ್ವಲ್ಪ ಗಲಾಟೆಗಳಾದುವು ಚಲಿಸುತ್ತಲಿದ್ದ ಬಸ್ಸುಗಳು, ಟ್ರಾಂವೆಗಳ ಮೇಲೆ ಪುಂಡರು ಕಲ್ಲುಗಳನ್ನೆಸೆದು ಗಲಾಟೆಮಾಡಿದರು ಪೋಲೀಸಿನವರು ಟಿಯರ್ ಗ್ಯಾಸು ಉಪಯೋಗಿಸಿ ಜನರನ್ನು ಚದುರಿಸಿದರು. ಪುನಃ ಪುಂಡರು ಸೇರಿ ಗಲಾಟೆ ಮಾಡಲಾರಂಭಿಸಿದರು. ಪೋಲೀಸಿನವರು ೫ ಬಾರಿ ಗುಂಡನ್ನು ಹಾರಿಸಿದರು. ತತ್ಪರಿಣಾಮವಾಗಿ ಇಬ್ಬರು ಸತ್ತರು, ೨೯ ಜನರಿಗೆ ಗಾಯಗಳಾಯಿತು. ಸುಮಾರು ೧೦೦ ಜನರನ್ನು ದಸ್ತಗಿರಿ ಮಾಡಲಾಯಿತು. ಪರಿಸ್ಥಿತಿಯು ಈಗ ಶಾಂತವಾಗಿದೆಯೆಂದು ತಿಳಿಯುಬರುತ್ತದೆ

ಪೆಟ್ರೋಲ್ ರೇಷನ್

ಇಂದಿನಿಂದ, ಮದರಾಸು, ತಿರುವಾಂಕೂರು ಕೊಚ್ಚಿನ್ ಒಕ್ಕೂಟ, ಮೈಸೂರು, ಹೈದರಾಬಾದು, ಕೊಡಗು, ದೆಹಲಿ, ಆಗ್ರ, ರಾಜಸ್ಥಾನ ಮುಂತಾದ ಹನ್ನೊಂದು ಪ್ರಾಂತ್ಯಗಳಲ್ಲಿ ಪೆಟ್ರೋಲ್ ರೇಷನ್ ರದ್ದುಗೊಳಿಸಲಾಗಿದೆ

ಆರೋಗ್ಯ ಮಂತ್ರಿಗಳ ಸಮ್ಮೇಳನ

ಭಾರತದ ನಾನಾ ಪ್ರಾಂತ್ಯಗಳ ಆರೋಗ್ಯ ಮಂತ್ರಿಗಳ ಸಮ್ಮೇಳನವು ನಿನ್ನೆ ದೆಹಲಿಯಲ್ಲಿ ಕೇಂದ್ರದ ಆರೋಗ್ಯ ಮಂತ್ರಿ ಶ್ರೀಮತಿ ರಾಜಕುಮಾರಿ ಅಮೃತ ಕೌರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಧಾನಿ ಪಂಡಿತ ನೆಹರೂರವರು ಉದ್ಘಾಟನವನ್ನು ಮಾಡುತ್ತಾ ದೇಶೀಯ ಮತ್ತು ಹೋಮಿಯೋಪತಿ ಔಷಧಗಳಿಗೆ ಹೆಚ್ಚು ಉತ್ತೇಜನವನ್ನು ಕೊಡಬೇಕೆಂದೂ, ಈ ವಿಚಾರದಲ್ಲಿ ದೇಶದಾದ್ಯಂತ ಏಕರೀತಿಯಾದ ಕ್ರಮವನ್ನನುಸರಿಸಬೇಕೆಂದೂ, ದೇಶದಲ್ಲಿ ಆರೋಗ್ಯಸ್ಥಿತಿಯು ಅಷ್ಟು ಸಮರ್ಪಕವಾಗಿಲ್ಲವಾದ್ದರಿಂದ ಸ್ಥಿತಿಯು ಉತ್ತಮಗೊಳ್ಳುವಂತೆ ಅಖಿಲಭಾರತ ಆರೋಗ್ಯ ಕೇಂದ್ರದ ಆಶ್ರಯದಲ್ಲಿ ಇನ್ನೂ ಹೆಚ್ಚಿನ ಪರಿಶೋಧನೆ, ಶಿಕ್ಷಣ ಮುಂತಾದುವು ನಡೆಯಬೇಕೆಂದು ತಿಳಿಸಿದರು.

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರು ?

ಶ್ರೀ ಪುರುಷೋತ್ತಮ ಟಾಂಡನ್‌ರವರೇ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಬರುವ ನಿರೀಕ್ಷೆಯಿದೆಯೆಂದು ತಿಳಿಯಬರುತ್ತದೆ.

[illegible] ೩,೫೮೫ ಜನರು ಎಲ್ಲಾ ಕ್ಷೇತ್ರಗಳಿಂದ ಓಟುಮಾಡಿರುವುದಾಗಿಯೂ ಅದರಲ್ಲಿ ೧,೭೪೦ ಶ್ರೀ ಪುರುಷೋತ್ತಮ ಟಾಂಡನ್‌ರವರಿಗೂ, ೬೩೮ ಶ್ರೀ ಆಚಾರ್ಯ ಕೃಪಲಾನಿಯವರಿಗೂ, ಕೇವಲ ೧೬೫ ಶ್ರೀ ಶಂಕರರಾವ್ ದೇವರವರಿಗೂ ಬಂದಿರಬಹುದೆಂದು ಊಹಿಸಲಾಗಿದೆ. ಮೈಸೂರಿನಲ್ಲಿ ೭೦ ಜನರು ಓಟು ಮಾಡಿರುವುದಾಗಿಯೂ ಅದರಲ್ಲಿ ಶ್ರೀ ಟಾಂಡನ್‌ರವರಿಗೆ ೫೩ ಶ್ರೀ ಕೃಪಲಾನಿಯವರಿಗೆ ೧೫ ಓಟು ಬಂದಿದೆಯೆಂದು ಅಂದಾಜು ಮಾಡಲಾಗಿದೆ.

ಕಬ್ಬಿಣ, ಸಿಮೆಂಟು ಉಕ್ಕು

ಚಲನಚಿತ್ರಮಂದಿರ, ನೃತ್ಯಮಂದಿರ, ಸ್ಟೂಡಿಯೋ, ಮನರಂಜಕ ಗೃಹ ಮುಂತಾದುವಕ್ಕೆ ನೂತನ ಕಟ್ಟಡಗಳನ್ನು ಕಟ್ಟಲು ಮದರಾಸು ಸರ್ಕಾರ ಕಬ್ಬಿಣ, ಉಕ್ಕು ಮತ್ತು ಸಿಮೆಂಟುಗಳನ್ನು ಕೊಡಕೂಡದೆಂದು ಆಜ್ಞೆ ಇತ್ತಿದೆ. ೬ ಸಾವಿರ ಚದರಡಿಗಳಿಗಿಂತ ದೊಡ್ಡದಾಗುವ ವಾಸದ ಮನೆ ಮತ್ತು ೧೦ ಸಾವಿರ ಚದರಡಿಗಳಿಗಿಂತ ದೊಡ್ಡದಾಗುವ ಇತರ ಕಟ್ಟಡಗಳಿಗೂ ಸಹ ಇದು ಅನ್ವಯಿಸುತ್ತದೆ.

ಭೂಕಂದಾಯ

ಭೂಕಂದಾಯ ವಿಚಾರಣಾ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದೆಯೆಂದೂ ಅದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಮೈಸೂರು ರೆವಿನ್ಯೂ ಮಂತ್ರಿ ಶ್ರೀ ಹೆಚ್. ಸಿದ್ದಯ್ಯನವರ ತಿಳಿಸಿರುವರು

ಬೊಂಬಾಯಿಗೆ ಶ್ರೀ ಹನುಮಂತಯ್ಯ

ಡಬ್ಲಿನ್ನಿನಲ್ಲಿ ನಡೆಯುವ ಅಂತರ ಪಾರ್ಲಿಮೆಂಟರಿ ಸಮ್ಮೇಳನದಲ್ಲಿ ಭಾಗವಹಿಸಲು ನಿನ್ನೆ ಬೆಳಗ್ಗೆ ಶ್ರೀ ಕೆ. ಹನುಮಂತಯ್ಯನವರು ವಿಮಾನದಲ್ಲಿ ಬೊಂಬಾಯಿಗೆ ಪ್ರಯಾಣ ಮಾಡಿದರು

ಮಾಸ್ಕೋ ರೇಡಿಯೊ.

ಮಾಸ್ಕೊ ರೇಡಿಯೋವಿನಿಂದ ಭಾರತ ಪಾಕೀಸ್ಥಾನಗಳಿಗಾಗಿ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

೧೯, ೨೫, ೩೧, ೧೬, ಮತ್ತು ೩೦.೭೪ ಮೀಟರ್‌ಗಳಲ್ಲಿ ಪ್ರತಿ ಸಂಜೆ ಭಾರತ ಟೈಂ ೭-೩೦ ರಿಂದ ೮-೧೫ರ ವರೆಗೆ ಇಂಗ್ಲೀಷಿನಲ್ಲಿ, ೮-೧೫ ರಿಂದ ೮-೪೫ ರವರೆಗೆ ಹಿಂದಿಯಲ್ಲಿ ಪ್ರಸಾರ ಕಾರ್ಯಕ್ರಮವು ಏರ್ಪಡಿಸಲಾಗಿದೆ.

ಮೈಸೂರು ಪುರಸಭಾಧಿವೇಶನ

ಮೈಸೂರುನಗರ ಪುರಸಭೆಯ ಮಾಹೆಯಾನ ಅಧಿವೇಶನವು ನಿನ್ನೆ ಸಂಜೆ ಶ್ರೀ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಸ್ಸಾಂನಲ್ಲಿ ಭೂಕಂಪದ ಪರಿಣಾಮವಾಗಿ ತೊಂದರೆಗೀಡಾದವರಿಗೆ ಅನುತಾಪವನ್ನು ವ್ಯಕ್ತಪಡಿಸುತ್ತಾ ನೊಂದವರ ಪರಿಹಾರ ನಿಧಿಗಾಗಿ ೩೦೦೦ ರೂಪಾಯಿಗಳನ್ನು ಕೊಡಬೇಕೆಂದೂ ಪೌರಸಭಾಶ್ರಯದಲ್ಲಿ ನಗರದ ಗಣ್ಯವ್ಯಕ್ತಿಗಳ ಸಭೆಯೊಂದನ್ನು ನಡೆಯಿಸಿ, ಇನ್ನೂ ಹೆಚ್ಚಿಗೆ ಹಣವನ್ನು ವಸೂಲ್ಮಾಡಿ ಕಳುಹಿಸಬೇಕೆಂದೂ ತೀರ್ಮಾನವಾಯಿತು.

ಕನ್ನಡದಲ್ಲಿ ಕಾರ್ಯಕಲಾಪ

ಅನಂತರ ಇತರ ಸಾಮಾನ್ಯ ವಿಷಯಗಳ ಪರಿಶೀಲನೆಯಾದನಂತರ ಶ್ರೀ ಹೆಚ್. ಎನ್. ಮಾದಯ್ಯನವರು ಮುನಿಸಿಪಾಲಿಟಿಗೆ ಸಂಬಂಧಪಟ್ಟ ವ್ಯವಹಾರ ಮತ್ತು ರಿಕಾರ್ಡುಗಳೆಲ್ಲವೂ ಇನ್ನು ಮುಂದೆ ಕನ್ನಡದಲ್ಲಿಯೇ ನಡೆಯಬೇಕೆಂದು ಮಂಡಿಸಿದ್ದ ನಿರ್ಣಯವು ಪರಿಶೀಲನೆಗೆ ಬಂದಿತು. ಸದಸ್ಯರೊಬ್ಬರು ಕ್ರಿಯಾಲೋಪವನ್ನೆತ್ತಿ ನಗರ ಪೌರಸಭೆಗಳ ಆಕ್ಟಿನ ೨೬-೯ ನೇ ಸೆಕ್ಷನ್ನಲ್ಲಿ ಪೌರಸಭೆಯ ಕಾರ್ಯಕಲಾಪಗಳು ಇಂಗ್ಲೀಷಿನಲ್ಲಿರಬೇಕೆಂದು ಇರುವುದರಿಂದ ಆಕ್ಟನ್ನು ಬದಲಾಯಿಸದ ಹೊರತು ಈ ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ನುಡಿದರು. ಅಧ್ಯಕ್ಷರು ಈ ನಿರ್ಣಯವನ್ನು ತಳ್ಳಿಹಾಕಿದರು. ಅನಂತರ ಡಾ॥ ಪಿ ಡಿ. ಕೃಷ್ಣಸ್ವಾಮಿಯವರ, ಅತಿ ಉಪಯುಕ್ತವಾದ ಪೆನಿಸಿಲಿನ್, ಸ್ಟ್ರೆಪ್ಟೋಮೈಸಿನ್, ಮತ್ತು, ಕ್ಲಾರೋಮೈಸಿಟಿನ್‌ಗಳನ್ನು ಪೌರಸಭೆಯವರು ಜನರಿಗೆ ಸುಲಭವಾಗಿ ದೊರೆಯುವಂತೆ ಪೌರಸಭೆಯವರೇ ಕೊಂಡು ಮಾರುವಂತೇರ್ಪಡಿಸಬೇಕೆಂದು ತಂದಿದ್ದ ನಿರ್ಣಯವು ಹಣಕಾಸಿನ ವಹಿವಾಟಿನ [illegible] ಕೂಲಂಕುಶವಾಗಿ ಪರಿಶೀಲಿಸಲು, ಸ್ಟ್ಯಾಂಡಿಂಗ್ ಕಮಿಟಿಗೆ ಕಳುಹಿಸಿ, ಅವರಿಂದ ವರದಿಯನ್ನು ತರಿಸಿಕೊಂಡು ಅನಂತರ ಪರಿಶೀಲಿಸಬೇಕೆಂದು ತೀರ್ಮಾನವಾಯಿತು

ವನಸ್ಪತಿ ನಿರೋಧ

ಭಾರತ ಪಾರ್ಲಿಮೆಂಟಿನಲ್ಲಿ ಪಂಡಿತ ಡಾ॥ ಗೋಪೀನಾಥ್ ಭಾರ್ಗವರವರು ಮಂಡಿಸಿರುವ ವನಸ್ಪತಿ ನಿರೋಧ ಕಾನೂನಿಗೆ ಮೈಸೂರುನಗರ ಪೌರಸಭೆಯು ಬೆಂಬಲವೀಯಬೇಕೆಂದು ಶ್ರೀ ಬಿ. ಜಿ ದಾಸ್‌ರವರು ತಂದ ನಿರ್ಣಯವು ಪರಿಶೀಲನೆಗೆ ಬಂದಿತು. ಶ್ರೀ ದಾಸ್‌ರವರು ವನಸ್ಪತಿಯಿಂದ ಆಗುತ್ತಲಿರುವ ತೊಂದರೆಗಳನ್ನು ವಿವರಿಸಿ, ಮಹಾತ್ಮಗಾಂಧಿ ಮತ್ತು ಅನೇಕ ವೈಜ್ಞಾನಿಕ ಸಂಸ್ಥೆಯವರು ಇದರ ವಿಷಯದಲ್ಲಿಟ್ಟಿರುವ ಅಭಿಪ್ರಾಯ

ಗಳನ್ನು ಸಭೆಯ ಗಮನಕ್ಕೆ ತಂದು, ವನಸ್ಪತಿ ತಯಾರಿಕೆಯನ್ನು ಕೂಡಲೇ ತಡೆಗಟ್ಟಬೇಕೆಂದು ತಿಳಿಸಿದರು. ಜನಾಬ್ ಮಿರ್ಜಾ ನೂರ್ ಹುಸೇನ್‌ರವರು ಈ ನಿರ್ಣಯವನ್ನು ಪುಷ್ಟೀಕರಿಸುತ್ತಾ ಈಗ ಜನರಲ್ಲಿರುವ ದೌರ್ಬಲ್ಯಕ್ಕೆ ಈ ವನಸ್ಪತಿಯೇ ಕಾರಣ ಅಷ್ಟು ಉತ್ತಮವಾದ ವಸ್ತುವಾದಲ್ಲಿ ವನಸ್ಪತಿ ತಯಾರಿಸುವವರು, ಜನಗಳಿಂದ ಒತ್ತಾಯಪಡಿಸಿ ವನಸ್ಪತಿಯು ಉತ್ತಮವಾದುದೆಂದು ಅಚ್ಚುಹಾಕಿ ಬಂದಿದ್ದ ಮನವಿಗೆ ರುಜು ಹಾಕಿಸುತ್ತಲೇ ಇರಲಿಲ್ಲವೆಂದೂ ತಿಳಿಸಿದರು. ಶ್ರೀ ಟಿ. ನರಸಿಂಗಯ್ಯಂಗಾರ್‌ರವರು ವನಸ್ಪತಿಯಿಂದ ಬೇಕಾದಷ್ಟು ತೊಂದರೆಗಳಾಗಿವೆ. ಆದರೆ ವೈಜ್ಞಾನಿಕರಲ್ಲಿ ವಿಧವಿಧವಾದ ಅಭಿಪ್ರಾಯಗಳು ಹೊರಬೀಳುತ್ತಲಿರುವುದರಿಂದ, ದೇಹಕ್ಕೆ ಅತ್ಯಂತ ಹಾನಿಕರವೆಂಬುದನ್ನು ನಮೂದಿಸದೆ ಪಂಡಿತ ಭಾರ್ಗವರವರ ಮಸೂದೆಗೆ ಈ ಸಭೆಯು ಬೆಂಬಲವೀಯುವುದೆಂದು ನಿರ್ಣಯಮಾಡುವುದು ಸೂಕ್ತವೆಂದು ತಿಳಿಸಿದರು. ಅದರಂತೆಯೇ ನಿರ್ಣಯವಾಯಿತು.

ಧೂಮಪಾನ ನಿರೋಧ

ನಾಗಪುರ ಪೌರಸಭೆಯವರು ಮಾಡಿರುವಂತೆ, ಮೈಸೂರುನಗರದಲ್ಲಿರುವ ಎಲ್ಲಾ ಚಿತ್ರಮಂದಿರಗಳಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸಬೇಕೆಂದು ಶ್ರೀ ಬಿ. ಜಿ. ದಾಸ್‌ರವರ ನಿರ್ಣಯವು ಚರ್ಚೆಗೆ ಬಂದಿತು. ಶ್ರೀ ದಾಸ್‌ರವರು ಮನರಂಜಿಕ ಪ್ರದೇಶದಲ್ಲಿ ಈ ಧೂಮಪಾನದಿಂದ ಆರೋಗ್ಯಕ್ಕೆ ಕೆಡಕುಂಟಾಗುವುದೆಂದು ತಿಳಿಸಿದರು ಜನಾಬ್ ನೂರ್‌ಹುಸೇನ್‌ರವರು ಈ ನಿರ್ಣಯವನ್ನು ವಿರೋಧಿಸುತ್ತಾ, ಇದು ಮನುಷ್ಯನ ಹಕ್ಕುಬಾಧ್ಯತೆಯನ್ನು ಮೊಟಕು ಮಾಡುವುದಾದ್ದರಿಂದ ಈ ನಿರ್ಣಯಕ್ಕೆ ಬೆಂಬಲವೀಯಕೂಡದೆಂದು ವಾದಿಸಿದರು. ಧೂಮಪಾನವನ್ನು ಚಿತ್ರಮಂದಿರಗಳಲ್ಲಿ ನಿಷೇಧಿಸುವಂತೆ ಆಜ್ಞೆ ಮಾಡಲು ಸರ್ಕಾರವನ್ನು ಪ್ರಾರ್ಥಿಸಿಕೊಳ್ಳಬಹುದೆಂದು ಬಹುಮತದಿಂದ ನಿರ್ಣಯವಾಯಿತು.

ಪೌರಸಭೆಯು ಲೈಸೆನ್ಸಿಂಗ್ ಅಧಿಕಾರಿಗಳಾಗಿ ಒಬ್ಬರನ್ನು ಆರಿಸಿಕೊಳ್ಳಲು ಪಿ. ಡಬ್ಲ್ಯು ಇಲಾಖೆಯಿಂದ ಕಳುಹಿಸಿದ್ದ ೩ ಜನರ ಪಟ್ಟಿಯಲ್ಲಿ ಶ್ರೀ ಗುರಪ್ಪ, ಬಿ.ಎಸ್‌ಸಿ ಬಿ.ಇ. ರವರನ್ನು ತೆಗೆದುಕೊಳ್ಳಬಹುದೆಂದು ತೀರ್ಮಾನವಾಯಿತು

ಮೆಡಿಕಲ್ ಸ್ಕೂಲು

ಬೆಂಗಳೂರಿನಲ್ಲಿರುವ ಮೆಡಿಕಲ್ ಸ್ಕೂಲನ್ನು ರದ್ದುಗೊಳಿಸಿ, ಕಾಲೇಜಾಗಿ ಪರಿವರ್ತಿಸುವರೋ ಎಂಬ ಪ್ರಶ್ನೆಗೆ ವಿದ್ಯಾಮಂತ್ರಿ ಶ್ರೀ ಸಿದ್ದಲಿಂಗಯ್ಯನವರು ಈ ವಿಷಯ ಪರ್ಯಾಲೋಚನೆಯಲ್ಲಿದೆಯೆಂದು ನಿನ್ನೆ ಶಾಸನ ಸಭೆಯಲ್ಲಿ ತಿಳಿಸಿದರು.

ಜಹಗೀರಿಗಳಿಗೆ ಪರಿಹಾರ

೨೬,೫೦೦ ಚದರ ಮೈಲಿಗಳಷ್ಟು, ಸಂಸ್ಥಾನದ ಒಟ್ಟು ವಿಸ್ತೀರ್ಣದ ೧/೩ ಭಾಗ, ಜಹಗೀರಿಗಳನ್ನು ಹೈದರಾಬಾದು ಸರ್ಕಾರವು ತನ್ನ ಆಡಳಿತಕ್ಕೆ ಸೇರಿಸಿಕೊಂಡಿದೆ ಇದಕ್ಕಾಗಿ ೧೮ ಕೋಟಿ ರೂಪಾಯಿಗಳ ಪರಿಹಾರವನ್ನು ಜಹಗೀರ್‌ದಾರರಿಗೆ ಕೊಡಬೇಕಾಗಿದೆಯೆಂದು ತಿಳಿಯಬರುತ್ತದೆ.

ಮೈಸೂರಿನಲ್ಲಿ ಆಹಾರ

ಮೈಸೂರಿನಲ್ಲಿ ೧। ಲಕ್ಷ ಟನ್ನುಗಳಷ್ಟು ಆಹಾರಧಾನ್ಯಗಳ ಕೊರತೆಯುದೆಯೆಂದೂ ಅವುಗಳಲ್ಲಿ ೭೫ ಸಾವಿರ ಟನ್ನುಗಳಷ್ಟು ಕೇಂದ್ರ ಸರ್ಕಾರವು (೨೫ ಸಾವಿರ ಟನ್ ಅಕ್ಕಿ, ೭೫ ಸಾವಿರ ಟನ್ ಗೋಧಿ) ಸರಬರಾಜುಮಾಡಬಹುದೆಂದೂ ಅದರ ಪೈಕಿ ೧೮,೪೪೩ ಟನ ಅಕ್ಕಿ, ೩೦,೭೯೮ ಟನ್ ಗೋಧಿ ಈಗಾಗಲೇ ಸರಬರಾಯಿಯಾಗಿದೆ ಎಂದು ಆಹಾರಮಂತ್ರಿ ಶ್ರೀ ಟಿ. ಮರಿಯಪ್ಪನವರು ತಿಳಿಸಿರುವರು.

ದಿವಾಕರ್‌ರವರು ಮೈಸೂರಿಗೆ

ಕೇಂದ್ರ ಸಮಾಚಾರ. ಮತ್ತು ವಿಸರಣ ಶಾಖೆಯ ಮಂತ್ರಿಗಳಾದ ಶ್ರೀ ಆರ್. ಆರ್. ದಿವಾಕರ್‌ರವರು ಸೆಪ್ಟೆಂಬರ್ ೩ ನೇ ತಾರೀಖು, ಮೈಸೂರು ನಗರದಲ್ಲಿರುವ ಆಲ್ ಇಂಡಿಯಾ ರೇಡಿಯೋ ಕೇಂದ್ರಕ್ಕೆ ಭೇಟಿ ಕೊಡುವರೆಂದು ತಿಳಿಯಬರುತ್ತದೆ.

ಅಗ್ರಿಕಲ್ಚರಲ್ ಪ್ರೊಬೇಷನರು

ಮೈಸೂರು ಸರ್ಕಾರವು ೬ ಜನ ಅಗ್ರಿಕಲ್ಚರಲ್ ಪ್ರೊಬೇಷನರುಗಳ ಸ್ಥಾನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತೆಂದೂ,೬ ಸ್ಥಾನಗಳಲ್ಲಿ ನೇಮಕವಾಗಿವೆ ಸದ್ಯದಲ್ಲಿಯೇ ಸರ್ಕಾರಿ ಆಜ್ಞೆ ಹೊರಡಲಿದೆಯೆಂದು ವ್ಯವಸಾಯ ಮಂತ್ರಿ ಶ್ರೀ ಮರಿಯಪ್ಪನವರು ಶಾಸನ ಸಭೆಯಲ್ಲಿ ತಿಳಿಸಿದರು.

ಫಾರ್ಮೋಸದಲ್ಲಿ ಅಮೇರಿಕಾಸೈನ್ಯ

ಕೊರಿಯಾ ಯುದ್ಧವು ಮುಗಿದ ನಂತರ ಫಾರ್ಮೋಸಾದಿಂದ ಅಮೇರಿಕಾಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುವುದು ಅಧ್ಯಕ್ಷ ಟ್ರೂಮನ್‌ರವರು ತಿಳಿಸಿರುವರು.

ಬೆಂಗಳೂರಿನಲ್ಲಿ ಅಂತರ ರಾಷ್ಟ್ರೀಯ ಸಮ್ಮೇಳನ

ಭಾರತ ಸರ್ಕಾರದ ಆಹ್ವಾನದ ಮೇಲೆ ನಾಲ್ಕು ಅಂತರ ರಾಷ್ಟ್ರೀಯ ಸಮ್ಮೇಳನಗಳು ಭಾರತದಲ್ಲಿ ನಡೆಯುವುವು—ವರ್ಲ್ಡ್ ಪವರ್ ಕಾನ್ಫರೆನ್ಸು, ಅಂತರಾಷ್ಟ್ರೀಯ ಅಣೆಕಟ್ಟುಗಳ ಸಮಿತಿ, ಅಂತರರಾಷ್ಟ್ರೀಯ ವ್ಯವಸಾಯ ಅಭಿವೃದ್ಧಿ ಕಾಲುವೆಗಳ ಸಮಿತಿ, ಜಲಶಕ್ತಿ ಯಂತ್ರ ಸಂಶೋಧಕರ ಸಭೆ, ಇವುಗಳಲ್ಲಿ ವರ್ಲ್ಡ್ ಪವರ್ ಕಾನ್‌ಫರೆನ್ಸು ಮತ್ತು ಅಂತರಾಷ್ಟ್ರೀಯ ಅಣೆಕಟ್ಟುಗಳ ಸಮಿತಿಯ ಸಭೆಗಳು ೧೯೫೧ ನೇ ಜನವರಿ ಮಾಹೆಯ ಅಂತ್ಯದಲ್ಲಿ ಬೆಂಗಳೂರಿನಲ್ಲಿ ನಡೆಯುವುವು ಪ್ರಪಂಚದ ೩೮ ರಾಷ್ಟ್ರಗಳು ಈ ಸಮ್ಮೇಳನಗಳಲ್ಲಿ ಭಾಗವಹಿಸುವುವು. ಈ ಸಮ್ಮೇಳನದ ಕೆಲಸ ಕಾರ್ಯಗಳನ್ನು ಮಾಡಲು ಮೈಸೂರು ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರು, ಇರಿಗೇಷನ್ ಚೀಫ್ ಇಂಜನಿಯರ್, ಪಿ. ಡಬ್ಲ್ಯು ಸೆಕ್ರೆಟರಿ ಮತ್ತು ಇಂಡಿಯನ್ ಸೈನ್ಸ್ ಇನ್‌ಸ್ಟಿಟ್ಯೂಟ್ ಡೈರಕ್ಟರವರನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಶಂಕುಸ್ಥಾಪನೆ

ಕೃಷ್ಣರಾಜನಗರ ತಾಲ್ಲೂಕು ಹನಸೋಗೆಯ ಕರ್ನಾಟಕ ಸಂಘ ಮತ್ತು ವಾಚನಾಲಯ ಶಂಕುಸ್ಥಾಪನಾ ಮಹೋತ್ಸವವು ಇದೇ ಮಾಹೆ ೬ ನೇ ತಾರೀಖು ಮೈಸೂರು ಜಿಲ್ಲಾಧಿಕಾರಿ ಜನಾಬ್ ಕೆ. ಮಹಮದ್ ಅಹಮದ್ ರವರು ನೆರವೇರಿಸುವರು. ಜಿಲ್ಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ರಂಗರಾಮಯ್ಯನವರು ಅಧ್ಯಕ್ಷತೆ ವಹಿಸುವರು.

ರೇಡಿಯೋ

೩೧೦ ಮೀಟರು ೪೯–೪೬ ಮೀಟರು

ಸೆಪ್ಟೆಂಬರ್ ೨ ಶನಿವಾರ

ಬೆಳಿಗ್ಗೆ ೭-೦ ಉದಯಗಾನ, ಕಾರ್ಯಕ್ರಮ ವಿವರಣ ೭-೫ ಚಿತ್ರಗೀತೆ (ರಿ) ೭-೨೫ ರಾಮಚಂದ್ರರಾವ್ (ದೇವರನಾಮ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲಿಷಿನಲ್ಲಿ ವಾರ್ತೆ ೮-೧೫ ವಸಂತಕೋಕಿಲ (ರಿ) ೮-೩ ಮುಕ್ತಾಯ.

ಮಧ್ಯಾಹ್ನ ೧೨-೦ ದೊರೆಸ್ವಾಮಿ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಪಿಟೀಲು ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ದೊರೆಸ್ವಾಮಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ತಬಲ ೭-೧೫ ವನಿತಾಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕಥಾಕಾಲಕ್ಷೇಪ (ನರಸಿಂಹಮೂರ್ತಿ) ೯-೦ ಇಂಗ್ಲೀಷಿನಲ್ಲಿ ವಾರ್ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಇಂಗ್ಲೀಷಿನಲ್ಲಿ ಭಾಷಣ ೯-೪೫ ವಾದ್ಯಸಮ್ಮೇಳನ ೧೦-೦ ಮುಕ್ತಾಯ.

ವಿಮಾನ ಅಪಘಾತ

ಬೊಂಬಾಯಿನಿಂದ ಅಮೇರಿಕಾಕ್ಕೆ ಹೊರಟ ಅಮೇರಿಕಾ ವಿಮಾನವು ನಿನ್ನೆ ಕೈರೋದಿಂದ ರೋಮಾಗ ದಲ್ಲಿ ಕೈರೋವಿಗೆ ೭೦ ಮೈಲಿ ದೂರದಲ್ಲಿ, ಯಂತ್ರ ತೊಂದರೆಯಿಂದ ಕೆಳಗೆ ಬಿದ್ದು ಸುಟ್ಟುಹೋಯಿತೆಂದು ವರದಿಯಾಗಿದೆ. ಅದರಲ್ಲಿದ್ದ ೪೮ ಜನ ಪ್ರಯಾಣಿಕರು ಮತ್ತು ೭ ಜನ ವಿಮಾನ ನೌಕರರು ಒಟ್ಟು ೫೫ ಜನರೆಲ್ಲರೂ ಸುಟ್ಟು ಮೃತರಾದರೆಂದು ತಿಳಿಯಬರುತ್ತದೆ. ಈ ವಿಮಾನ ಅಪಘಾತಕ್ಕೊಳಗಾದವರಲ್ಲಿ ೮ ಜನರು ಭಾರತೀಯರು.

ರಣಜಿತ್ ಟಾಕೀಸ್
ತಾ|| 1-9-50 ರಿಂದ
ದಿನವಹಿ 3 ಆಟಗಳು
ರೂಮಾಲ್ ★ ROOMAL
ಪಾತ್ರ :- ನರ್ಗೀಸ್, ರೆಹಮಾನ್, ಜೈರಾಜ್,
ಜೀವನ್, ಕುಕ್ಕೂ.

1-9-50 ರಿಂದ ಬೆಳಗಿನ ಪ್ರದರ್ಶನ
ಮೂರು ದಿನಗಳು ಮಾತ್ರ
ದರ್ದ್
ಪಾತ್ರ : ಸುರಯ್ಯ

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ "ಸಮಾಚಾರ" ದಿನ ಪತ್ರಿಯನ್ನು ಚಂದಾದಾರರಿಗೆ ಹಂಚಿ ಚಂದಾವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ. ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
"ಸಮಾಚಾರ" ದಿನಪತ್ರಿಕೆ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರ ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಕಾಂಗ್ರೆಸ್ ಅಧ್ಯಕ್ಷರು ಶ್ರೀಕೃಪಲಾನಿಯವರೇ?

ಬಿಡಿ ಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨—೯—೧೯೫೦ ನೇ ಶನಿವಾರ [ಸಂಚಿಕೆ ೧೬

ಅ. ಭಾ. ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯು ಬಹು ಪೈಪೋಟಿಯಿಂದ ಸಾಗುತ್ತಿದೆ. ಈ ದಿನ ಮಧ್ಯಾಹ್ನ ೪ ಘಂಟೆಯ ವರೆವಿಗೂ ಓಟುಗಳ ಎಣಿಕೆಯು ನಡೆಯಿತು. ದೇಶದ ನಾನಾ ಪ್ರಾಂತ್ಯಗಳ ಓಟು-ಎಣಿಕೆಯು (ಕರ್ನಾಟಕ ಪ್ರಾಂತ್ಯವೊಂದ ವಿನಹ) ನೆನ್ನೆ ಸಂಜೆ ಎಣಿಸಲಾಗಿತ್ತು.

ಅದರ ವಿವರ ಈ ರೀತಿಯಿದೆ.

ಶ್ರೀಗಳಾದ :

ಪುರುಷೋತ್ತಮದಾಸ್ ಟಾಂಡನ್	೧,೨೬೩
ಆಚಾರ್ಯ ಕೃಪಲಾನಿ	೧,೩೨೧
ಶಂಕರರಾವ್ ದೇವ್	೨೦೧
ನಷ್ಟವಾದ ಓಟುಗಳು	೨೯
ಒಟ್ಟು ಓಟುಮಾಡಿದವರ ಸಂಖ್ಯೆ	೨,೫೫೪

ಈ ಮೇಲಿನ ಓಟುಗಳು ಕಿರಿ ಒಲವಿನ (ಸೆಕೆಂಡ್ ಪ್ರಿಫರೆನ್ಸ್) ಓಟನ್ನು ಸೇರಿಸಿದ ಮೊತ್ತ ಸಂಖ್ಯೆ ಆಂದರೆ ಶ್ರೀ ಶಂಕರರಾವ್ ದೇವ್‌ರವರಿಗೆ ಓಟು ಮಾಡಿದ ೨೦೧ ಜನರ ಪೈಕಿ ೧೨೫ ಜನರು ತಮ್ಮ ಕಿರಿ ಒಲುಮೆಯನ್ನು ಶ್ರೀ ಕೃಪಲಾನಿಯವರಿಗೆ ವ್ಯಕ್ತಪಡಿಸಿದ್ದಾರೆ. ಕರ್ನಾಟಕದ ಓಟಿನ ಮೇಲೆ ಅರ್ಧ ಶ್ರೀ ಕೃಪಲಾನಿಯವರಿಗೆ ಬರುವ ನಿರೀಕ್ಷಣೆಯಿದೆ

ವಿಶ್ವಸಂಸ್ಥೆಯೊಡನೆ ಸಹಕರಿಸಿ

ವಿಶ್ವಸಂಸ್ಥೆಯ ಸೈನ್ಯಗಳು ಮುಂದಕ್ಕೆ ಪ್ರವೇಶಿಸದೆ, ಕೊರಿಯ ದೇಶಕ್ಕೆಲ್ಲಾ ಒಂದೇ ಒಂದು ಸಂಯುಕ್ತ ಸರ್ಕಾರವನ್ನು ಏರ್ಪಡಿಸುವುದಕ್ಕೆ ವಿಶ್ವಸಂಸ್ಥೆಯೊಡನೆ ಸಹಕರಿಸಿ, ಶಸ್ತ್ರಗಳನ್ನು ಬದಿಗಿಟ್ಟು ಬನ್ನಿ ಎಂದು ಉತ್ತರ ಕೊರಿಯನ್ನಿನ ಕಮ್ಯೂನಿಸ್ಟರಿಗೆ ಅಮೆರಿಕಾ ಸೆಕ್ರಿಟರಿ ಆಫ್ ಸ್ಟೇಟ್ ಮಿ|| ಡೀನ್ ಅಚೇಸನ್ನರವರು ಒಂದು ಮನವಿ ಕಳುಹಿಸಿರುವುದಾಗಿ ವರದಿಯಾಗಿದೆ

ಪಾಕಿಸ್ಥಾನಕ್ಕೆ ಹಿಂತಿರುಗುವುದಿಲ್ಲ?

ಪಾಕಿಸ್ಥಾನ ವಿದೇಶಾಂಗ ಮಂತ್ರಿ ಸರ್ ಜಫರಲ್ಲಾಖಾನರು ಕರಾಚಿಯಿಂದ ಲೇಕ್‌ಸಕ್ಸೆಸ್ಸಿಗೆ ಹಿಂತಿರುಗುತ್ತಾ, ಕಾಶ್ಮೀರ ಪ್ರಶ್ನೆಯನ್ನು ಭದ್ರತಾ ಸಮಿತಿ ತೀರ್ಮಾನಿಸುವರೆಗೂ ತಾವು ಪಾಕಿಸ್ಥಾನಕ್ಕೆ ಬರುವುದಿಲ್ಲವೆಂದು ತಿಳಿಸಿದರು.

ಬಾಂಬು ಹಾಕಿದ್ದಕ್ಕೆ ಪರಿಹಾರ

ಮಂಚೂರಿಯಾದ ಕೆಲವು ಪಟ್ಟಣಗಳ ಮೇಲೆ ಅಮೆರಿಕನರು ಬಾಂಬು ಹಾಕಿರುವರೆಂದು ಚೈನಾದಿಂದ ಬಂದಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಅಮೆರಿಕಾ ಪ್ರತಿನಿಧಿಯು ಭದ್ರತಾ ಸಮಿತಿಯಲ್ಲಿ ತಿಳಿಸಿದರು. ಹಾಗೇನಾದರೂ ಅಮೆರಿಕಾ ವಿಮಾನಗಳು ಬಾಂಬು ಹಾಕಿದ್ದರೆ ಅದು ತಪ್ಪಿನಿಂದಿರಬಹುದೆಂದೂ ಅದಕ್ಕೆ ಅಮೆರಿಕಾವು ಪರಿಹಾರ ಕೊಡಲು ಸಿದ್ಧವಿರುವುದೆಂದೂ ಅವರು ತಿಳಿಸಿದರು.

ಅಟಾಮಿಕ್ ಬಾಂಬು ಬಿದ್ದರೆ

ಅಟಾಮಿಕ್ ಬಾಂಬ್‌ಗಳೇನಾದರೂ ಬಿದ್ದರೆ ಸರ್ಕಾರಿ ಕಛೇರಿಗಳು ಸುರಕ್ಷಿತವಾಗಿರುವಂತೆ ಏರ್ಪಡಿಸಲು, ವಾಷಿಂಗ್‌ಟನ್ನಿಗೆ ಸ್ವಲ್ಪ ದೂರದಲ್ಲಿ ಈ ಕಛೇರಿಗಳನ್ನು ನಡೆಸಲು ತಕ್ಕ ಬಂದೋಬಸ್ತು ಮಾಡಬೇಕೆಂದು ಅಧ್ಯಕ್ಷ ಟ್ರೂಮನ್ನರು ೧೪೫,೮೨೦,೦೦೦ ಡಾಲರುಗಳು ಬೇಕೆಂದು ಕಾಂಗ್ರೆಸ್ಸನ್ನು ಕೇಳಿರುವರು.

ರಕ್ತದ ಕೋಡಿ

ಕಾಶ್ಮೀರನ್ನೇನಾದರೂ ವಿಭಾಗಮಾಡಿದಲ್ಲಿ ಖಂಡಿತವಾಗಿಯೂ ದೇಶವು ಹಾಳಾಗುವುದಲ್ಲದೆ ದೇಶದಲ್ಲೆಲ್ಲಾ ರಕ್ತದ ಕೋಡಿ ಹರಿಯುವುದೆಂದು ಕಾಶ್ಮೀರ ಅಭಿವೃದ್ಧಿ ಶಾಖಾ ಮಂತ್ರಿ ಜನಾಬ್ ಗುಲಾಮ್ ಮಹಮ್ಮದ್ ಸಾದಿಕ್‌ರವರು ಹೇಳಿರುವರು.

ಅಂಚೆ ನೌಕರರಿಗೆ ಸೌಕರ್ಯ

ಭಾರತ ಅಂಚೆ ಇಲಾಖೆಯಲ್ಲಿ ತಿಂಗಳಿಗೆ ೩೦೦ ರೂಪಾಯಿಗಳಿಗೂ ಕಡಿಮೆ ಸಂಬಳ ಬರುವ ನೌಕರರು ತಮ್ಮ ರಜಾ ಕಾಲವನ್ನು ಬೆಟ್ಟಗಳಲ್ಲಿರುವ ವಿಶ್ರಾಂತಿ ಗೃಹಗಳಲ್ಲಿ ಕಳೆಯಲು ವಿಶೇಷ ರಿಯಾಯಿತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಅವರಿಗಾಗಿಯೇ ಪ್ರತ್ಯೇಕ ವಿಶ್ರಾಂತಿ ಗೃಹಗಳನ್ನೇರ್ಪಡಿಸಿ ಅವರ ಸಂಬಳದಲ್ಲಿ ಶೇ|| ೧೦ ಬಾಡಿಗೆಯನ್ನು ಕೊಟ್ಟು ಅಲ್ಲಿ ಇರಲು ಅವಕಾಶ ಕೊಡಲಾಗುವುದು.

೩ ಬ್ರಿಟಿಷರಿಗೆ ಫಾಶೀ

ನಿನ್ನೆ ಬೆಳಗಿನಜಾವ ಈಜಿಪ್ಟಿನ ಫಾಯಿದ ನಗರದಲ್ಲಿ ಮೂವರು ಬ್ರಿಟಿಷ್ ಯೋಧರನ್ನು, ಒಬ್ಬ ಈಜಿಪ್ಟ್ ಕಾವಲುಗಾರನನ್ನು ಖೂನಿಮಾಡಿದರೆಂಬುದು ರುಜುವಾತಾಗಿ, ಗಲ್ಲಿಗೇರಿಸಲಾಯಿತು. ಇದಕ್ಕಾಗಿ ಇಂಗ್ಲೆಂಡಿನಿಂದಲೇ ಫಾಶೀ ಹಾಕುವವರು ಬಂದಿದ್ದರು. ಈ ರೀತಿ ಈಜಿಪ್ಟಿನವನನ್ನು ಕೊಲೆಮಾಡಿದ ಬಿಳೀಯರನ್ನು ಫಾಸಿಗೆ ಹಾಕಿದುದು ಇದೇ ಮೊದಲು.

ಶಾರದಾ ಪೂಜೆ

ನಿನ್ನೆ ಕೇಂದ್ರ ಭಾರತ ಸೇವಾ ಸಮಾಜದ ಆಶ್ರಯದಲ್ಲಿ ಶ್ರೀ ಜಂಬನಾಥನ್‌ರವರ ಅಧ್ಯಕ್ಷತೆಯಲ್ಲಿ ಶಾರದಾ ಪೂಜೆಯು ನಡೆದು, ಪ್ರಸಾದ ವಿನಿಯೋಗವಾದನಂತರ ಸಮಾರಂಭವು ಮುಕ್ತಾಯಗೊಂಡಿತು.

ವಿದ್ಯಾರ್ಥಿಗಳ ಮುಷ್ಕರ

ದಾವಣಗೆರೆ ಮುನಿಸಿಪಲ್ ಹೈಸ್ಕೂಲಿನ ಸಂಸ್ಕೃತ ಪಂಡಿತರನ್ನು ಕೆಲಸದಿಂದ ತೆಗೆದುಹಾಕಿದುದರ ಪರಿಣಾಮವಾಗಿ, ಹೈಸ್ಕೂಲಿನ ವಿದ್ಯಾರ್ಥಿಗಳೆಲ್ಲರೂ ಅವರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುವವರೆಗೂ ಮುಷ್ಕರ ಮಾಡುತ್ತೇವೆಂದು ಪಣತೊಟ್ಟು ಮುಷ್ಕರ ಹೂಡಿದ್ದಾರೆಂದು ತಿಳಿದುಬಂದಿದೆ.

೫೦,೦೦೦ ರೂ. ಗಳ ಹಗಲು ದರೋಡೆ

ಕಲ್ಕತ್ತಾದ ಹೂಗ್ಲಿ ಬ್ಯಾಂಕಿನ ವಠಗಂಗೆಯ ಶಾಖೆಯ ಗೇಟಿನ ಬಳಿ ಮೊನ್ನೆ ಮಧ್ಯಾಹ್ನ ೧೨-೩೦ ಕ್ಕೆ ರಿವಾಲ್ವರು ಸಹಿತ ನಾಲ್ವರು, ಹೂಗ್ಲಿ ಬ್ಯಾಂಕಿನ ನೌಕರರನ್ನು ಹೆದರಿಸಿ, ಕೋಣೆಯೊಳಗೆ ಕೂಡಿ, ಕಟ್ಟಿಹಾಕಿ, ಬ್ಯಾಂಕಿನಲ್ಲಿದ್ದ ನಗದು ೫೦,೦೦೦ ರೂ ಗಳನ್ನು ದರೋಡೆ ಮಾಡಿಕೊಂಡು ಪರಾರಿಯಾದರೆಂದೂ ತಿಳಿದು ಬಂದಿದೆ. ಅಪರಾಧಿಗಳಿನ್ನೂ ಪತ್ತೆಯಾಗಿಲ್ಲ.

ವಿಜ್ಞಾನಿಗಳಿಗೆ ಮನವಿ

ರಾಷ್ಟ್ರಾಧ್ಯಕ್ಷ ಶ್ರೀ ಬಾಬು ರಾಜೇಂದ್ರಪ್ರಸಾದರವರು ದೆಹಲಿಯ ಭಾರತೀಯ ವ್ಯವಸಾಯ ಸಂಶೋಧನಾ ಇನ್ಸ್ಟಿಟ್ಯೂಟಿನ ಪದವೀಧರರಾದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಅವರು ರೈತರೊಂದಿಗೆ ಹೊಂದಿಕೊಂಡು, ರೈತರ ಕಷ್ಟವನ್ನು ತಿಳಿದ ಕೂಂಗು ವ್ಯವಸಾಯ ಮಾಡುವವರಿಗೆ ಸಹಾಯಕರಾಗಬೇಕೇ ವಿನಹ ಹಳಿಯುವರೆಂದು ಅವರನ್ನು ಹಾಸ್ಯ ಮಾಡಬಾರದೆಂದು, ನುಡಿದರು. ಮತ್ತು ಭಾರತದಲ್ಲಿ ಸಾಗುವಳಿಯಾಗುತ್ತಿರುವ ಭೂಮಿಯಿಂದ ಈಗ ಉತ್ಪತ್ತಿಯಾಗುತ್ತಿರುವುದು, ಅದೇ ಭೂಮಿಯಿಂದ ಉತ್ಪತ್ತಿ ಮಾಡಬಹುದಾದುದರ ಕಾಲುಭಾಗಕ್ಕಿಂತಲೂ ಕಮ್ಮಿಯಾಗಿದೆಯೆಂದೂ, ಇತರ ದೇಶಗಳಲ್ಲಿ ವಿಜ್ಞಾನ ಸಾಧನಗಳು ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸಿರುವಂತೆಯೇ ಭಾರತದಲ್ಲಿಯೂ ಸಹ ಬೆಳೆಯನ್ನು ಹೆಚ್ಚಿಸಲು ಸಹಾಯಕವಾಗಲು ಸಾಧ್ಯವೆಂದೂ, ಇದನ್ನೇ ಸಂಶೋಧಕರು ಗುರಿಯಾಗಿಟ್ಟುಕೊಂಡು, ಭಾರತದ ಪರಿಸ್ಥಿತಿಗೆ ಅನುಗುಣವಾದ ಮತ್ತು ಕಾರ್ಯರೂಪದಲ್ಲಿ ಸಾಧ್ಯವಾದ ಕಾರ್ಯಕ್ರಮವನ್ನು ಹೊರಗೆಡಹಿ ದೇಶಾಭ್ಯುದಯಕ್ಕೆ ನೆರವಾಗಬೇಕೆಂದು ವಿಜ್ಞಾನಿಗಳೆಲ್ಲರಿಗೂ ಮನವಿ ಮಾಡಿದರು.

ವಿಮಾನದಿಂದ ಆಹಾರ

ಅಸ್ಸಾಮಿನಲ್ಲಿ ಭೂಕಂಪದಿಂದ ಪೀಡಿತರಾದ ಜನರಿಗೆ ಈಗ್ಯೆ ಒಂದು ವಾರದಿಂದಲೂ ವಿಮಾನದ ಮೂಲಕ ಆಹಾರ ಎಸೆಯಲಾಗುತ್ತಿದೆ. ಇದುವರೆಗೆ ೫,೨೦೦ ಪೌಂಡು ತೂಕ ಆಹಾರವನ್ನು ಒದಗಿಸಲಾಗಿದೆ. ಇನ್ನು ಮೂರು ವಾರಗಳಲ್ಲಿ ೩೦,೪೦೦ ಪೌಂಡು ಆಹಾರವನ್ನು ಒದಗಿಸಲಾಗುವುದು.

ಕಾಂಗ್ರೆಸ್ ಕಛೇರಿ ಲೂಟಿ

ಬೊಂಬಾಯಿನ ಮುಷ್ಕರದಾರರ ಪೈಕಿ ೨೦೦ ಗೂಂಡಾಗಳು ದಾದರ್-ವಾರ್ಡ ಕಾಂಗ್ರೆಸ್ ಕಛೇರಿಯನ್ನು ಮುತ್ತಿ ಅಲ್ಲಿದ್ದ ಸಾಮಾನುಗಳನ್ನು ಲೂಟಿಮಾಡಿದರೆಂದು ತಿಳಿದುಬಂದಿದೆ.

★ ಸಿರ್ಲೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಜನಗಣತಿ

ಭಾರತಾದ್ಯಂತ ನಡೆಯುವ ೧೯೫೧ ನೇ ಇಸ್ವಿಯ ಜನಗಣತಿಯು ಭರದಿಂದ ಸಾಗುತ್ತಿದೆ. ಈ ಕಾರ್ಯದ ಮೊದಲನೆಯ ಅಂಗವಾಗಿ ಪ್ರತಿ ಮನೆಗೂ ನಂಬರು ಹಾಕುವ ಕೆಲಸವು ಮುಗಿದಿದೆ.

ಮುರುಕು ಗುಡಿಸಿಲಿನಿಂದ ಹಿಡಿದು ಬಹು ಸೊಗಸಿನ ಅರಮನೆಯವರೆಗೂ ಎಣಿಸಲಾಗಿದೆ. ಎಲ್ಲ ವಿಧವಾದ ವಾಸಗೃಹಗಳ ಒಟ್ಟು ಸಂಖ್ಯೆ ೬ ಕೋಟಿ ೪೦ ಲಕ್ಷ.

ಹಿಂದಿನಂತೆ, ಜಾತಿ, ಮತ, ಕೋಮು ಇತ್ಯಾದಿ ವಿಷಯ ಅದರಲ್ಲಿ ನಮೂದಿಸಲಾಗುವುದಿಲ್ಲ. ಈ ತೆರನಾಗಿ ಜನಗಣತಿ ನಡೆಸುವುದು ಇದೇ ಮೊದಲು. ಆದರೆ ಜನತೆಯ ಪಟ್ಟಿಯು ಆಯಾ ಕಸಬಿಗನುಸಾರವಾಗಿ [illegible] ವುದು.

ಇದಲ್ಲದೆ ೧೯೩೧ ನೇ ಇಸ್ವಿಯ ಆರ್ಥಿಕ ವಿಂಗಡಣೆಯನ್ನನುಸರಿಸಿ ಉದ್ಯೋಗ ಮತ್ತು ವರಮಾನ ವಿಷಯವನ್ನು ಸಂಗ್ರಹಿಸಲಾಗುವುದು. ಈ ವಿಷಯ ಪಟ್ಟಿಯಿಂದ ಭಾರತೀಯರ ಗೋಷ್ವಾರೆ ಆರ್ಥಿಕ ಪರಿಸ್ಥಿತಿಯನ್ನು ಅಂತರ ರಾಷ್ಟ್ರೀಯ ಆರ್ಥಿಕ ಮಟ್ಟಕ್ಕೆ ಹೋಲಿಸಿ ವಿಷಯ ಪರಿಶೀಲನೆ ನಡೆಸಲು ನೇರವಾಗಿ ಅನುಕೂಲಿಸುವುದು.

ಇಡೀ ಭಾರತವನ್ನೇ, ಅಂದರೆ ಹಿಂದೆ ದೇಶೀಯ ಸಂಸ್ಥಾನವೆಂದು ಕರೆಯಲಾಗುತ್ತಿದ್ದ ಪ್ರದೇಶಗಳನೆಲ್ಲ ಒಳಗೊಂಡ ದೇಶ ಪ್ರತಿ ಭಾಗವನ್ನೂ (ಕಾಶ್ಮೀರವಿನಹ) ಪ್ರಥಮತಃ ಜನಗಣತಿಯ ಕಾರ್ಯದಲ್ಲಿ ಪರಿಗಣಿಸಲಾಗುವುದು.

ಮತ್ತು ಕೇಂದ್ರ ಜನಗಣತಿ ಸಂಸ್ಥೆಯು ಏರ್ಪಾಡಾಗಿದೆ. ಇದರಿಂದ ಆವಶ್ಯಕವೆಂದು ತೋರಿದಾಗ, ಯಾವ ವಿಷಯದಲ್ಲಿಯಾದರೂ ಸಂಖ್ಯಾಪಟ್ಟಿ ಬೇಕಾದಾಗ, ಆ ನಿರ್ದಿಷ್ಟ ವಿಷಯದ ಬಗ್ಗೆ ಶ್ರೀಘ್ರ ಪರಿಶೀಲನೆ ನಡೆಸಲು ಬಹು ಉಪಯುಕ್ತವಾಗಿದೆ.

ರಾಷ್ಟ್ರೀಯ ' ರಿಜಿಸ್ಟರ್ '

ಪ್ರತಿ ತಾಲ್ಲೂಕಿನಲ್ಲಿಯೂ ಆ ತಾಲ್ಲೂಕಿನ ಅಂಕೆ ಅಂಶಗಳನ್ನು ಶೇಖರಿಸಿ ಒಂದು ಪುಸ್ತಕರೂಪದಲ್ಲಿ ಕಾದಿಡಲಾಗುವುದು. ಇದು ರಹಸ್ಯ ರಿಕಾರ್ಡೆಂದು ಪರಿಗಣಿತವಾಗುವುದು.

ಭಾರತಾದ್ಯಂತ ಜನದ ಮತ್ತಿತರ ಸಂಬಂಧ ಪಟ್ಟಿ ವಿಷಯಗಳ ಎಣಿಕೆಯು ೧೯೫೧ ನೇ ಇಸವಿ ಫೆಬ್ರವರಿ ೯ ನೇ ತಾರೀಖು ಪ್ರಾರಂಭವಾಗಿ ಮಾರ್ಚಿ ೧೮ ವರೆಗೆ ನಡೆಯುವುದು. ನಂತರ ೩ ದಿನಗಳು ಆ ಎಣಿಕೆಗಳನ್ನೆಲ್ಲ ಪುನಃ ಸರಿಯಾಗಿದೆಯೋ ಇಲ್ಲವೋ ಎಂದು ವಿಚಕ್ಷಣೆಯಿಂದ ಪರೀಕ್ಷಿಸಲಾಗುವುದು. ತದನಂತರ ಪಟ್ಟಿಗಳ ತಯಾರಿಕೆಯು ಆರಂಭವಾಗಿ ವರ್ಷಾಂತ್ಯದಲ್ಲಿ ಮುಖ್ಯ ಪಟ್ಟಿಗಳು ಹೊರಬೀಳುವುವು.

ಇಡೀ ಪ್ರಪಂಚದಲ್ಲಿಯೇ, ಈ ಭಾರತಾದ್ಯಂತ ನಡೆಯುವ ಜನಗಣತಿಯ ಕಾರ್ಯಕ್ಕೆ ಹಿರಿದಾದ ಕಾರ್ಯವಿಲ್ಲ. ಮತ್ತು ಇಷ್ಟನಷ್ಟು ಸ್ವಲ್ಪ ಖರ್ಚಿನಲ್ಲಿ ಮತ್ತೆಲ್ಲಿಯೂ ನಡೆಯುವುದಿಲ್ಲ. ಯಾವ ರೀತಿಯ ಹಣದ ಪ್ರತಿಫಲವಿಲ್ಲದೆಯೇ ಸ್ವಯಂಸೇವಕರಾಗಿ ಕೆಲಸ ಮಾಡುವವರು, ಲಕ್ಷಾಂತರ ಮಂದಿ ದುಡಿಯುವುದರ ಫಲವಾಗಿ ಭಾರತದ ಜನಗಣತಿಯು ಬಹು ಅಗ್ಗವಾಗಿ ನಡೆಯಲು ಸಾಧ್ಯವಾಗಿದೆ. ಜನಗಣತಿಗಾಗಿ ಭಾರತಾದ್ಯಂತ ದುಡಿಯುವವರ ಸಂಖ್ಯೆ ೧೦ ಲಕ್ಷ.

ಅಮೆರಿಕಾದಲ್ಲಿ

೧೯೪೦ ನೇ ಇಸವಿಯಲ್ಲಿ ಪ್ರತಿ ಸಾವಿರ ಜನದ ಗಣತಿಗೆ ಖರ್ಚು ಮಾಡಿದುದು ೧,೪೪೦ ರೂಪಾಯಿಗಳು, ೧೯೨೧ ನೇ ಇಸವಿಯಲ್ಲಿ, ಬ್ರಿಟನಲ್ಲಿ ಸಾವಿರ ಜನರ ಎಣಿಕೆಗೆ ಖರ್ಚಾದುದು ೧೧೧ ರೂಪಾಯಿಗಳು,೧೯೩೧ ನೇ ಇಸವಿಯಲ್ಲಿ ಭಾರತದಲ್ಲಿಯಾದರೋ ಪ್ರತಿ ಸಾವಿರಕ್ಕೆ ಕೇವಲ ೧೬ ರೂಪಾಯಿಗಳು ಮಾತ್ರ ಖರ್ಚಾಯಿತು.

ಜನಗಣತಿಯ ಕೈಪಿಡಿ

ಜನಗಣತಿಯ ವಿಷಯವನೆಲ್ಲಾ ಒಳಗೊಂಡ ಕೈಪಿಡಿಯನ್ನು ಆಯಾ ಪ್ರಾಂತೀಯ ಸರ್ಕಾರವು ಪ್ರಕಟಿಸಬೇಕೆಂದು ತೀರ್ಮಾನಿಸಲಾಗಿದೆ. ತಮ್ಮ ತಮ್ಮ ಪ್ರದೇಶದ ಬಗ್ಗೆ ಹೆಚ್ಚಿನ ತಿಳುವಳಿಕೆ ವಿದ್ಯಾರ್ಥಿಗಳಿಗೆ ಉಂಟಾಗಲೆಂದು ಪ್ರತಿ ಶಾಲಾ ಪಠ್ಯ ಪುಸ್ತಕದಲ್ಲಿಯೂ ಈ ವಿಷಯಗಳನ್ನು ಸೇರಿಸಿ ಅಚ್ಚುಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ಈ ಖಾನೇಷುಮಾರಿಯಲ್ಲಿ ಈ ಕೆಳಗೆ ಕಾಣಿಸಿರುವಂತೆ ಐದು ಬಗೆಯ ಪಟ್ಟಿಗಳಿವೆ:

೧. ಒಟ್ಟು ಜನಸಂಖ್ಯೆ ೨ ಆರ್ಥಿಕ ವಿಷಯ : ಉದ್ಯೋಗ, ೩ ಪ್ರತಿ ಸಂಸಾರದ ಸಂಖ್ಯೆ: ಕೆಲವು ಮಾದರಿಗಳು. ೪. ಸಾಮಾಜಿಕ ಮತ್ತು ಸಾಂಸ್ಕೃತಿಕ; ಭಾಷೆ, ಧರ್ಮ, ವಿದ್ಯೆ, ಹಿಂದುಳಿದ ಪಂಗಡಗಳು, ಪ್ರವಾಸಿಗಳು, ನಿರಾಶ್ರಿತರು, ವಿದೇಶಿಯರು ಇತ್ಯಾದಿ. ೫. ಪ್ರತಿ ಡಿಸ್ಟ್ರಿಕ್ಟ್‌ವಾರು ಅಂಕೆ ಅಂಶಗಳು.

ಹಿಂದಿಯಲ್ಲಿ

೧೯೪೪ ರಿಂದ ಬಿ.ಎ., ಬಿಎಸ್.ಸಿ., ಬಿ.ಕಾಂ, ಎಲ್ ಎಲ್.ಬಿ, ಪರೀಕ್ಷೆಗಳ ಪ್ರಶ್ನಪತ್ರಿಗಳಿಗೆಲ್ಲಾ ಹಿಂದೀ ಭಾಷೆಯಲ್ಲಿಯೇ ಉತ್ತರವನ್ನು ಬರೆಯಬೇಕೆಂದು ಲಕ್ನೋ ವಿಶ್ವವಿದ್ಯಾನಿಲಯದವರು ಆಜ್ಞೆಯಿತ್ತಿರುವರು.

ಶ್ರೀ ಪುರುಷೋತ್ತಮದಾಸ್ ತಾಂಡನ್

ಶ್ರೀ ಪುರುಷೋತ್ತಮದಾಸ್ ತಾಂಡನ್ನರವರು ಕಾಶಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾಗಬಹುದೆಂದು ತಿಳಿಯಬರುತ್ತದೆ.

ಸಂಚಾರ ಕಾನೂನು

ಪಾಠಶಾಲೆಯಲ್ಲಿ ಓದುವ ಮಕ್ಕಳಿಗೆ ಸಂಚಾರ ಕಾನೂನನ್ನು ಬೋಧಿಸಿದಲ್ಲಿ ಒಳ್ಳೆಯ ಪರಿಣಾಮವುಂಟಾಗುವುದೆಂಬ ಉದ್ದೇಶದಿಂದ, ದೆಹಲಿಯ ಪಾಠಶಾಲೆಗಳಲ್ಲಿ, ಪೋಲೀಸು ಇಲಾಖಾ ಅಧಿಕಾರಿಯೋರ್ವರು ಭಾಷಣಗಳನ್ನು ಮಾಡಲು ಏರ್ಪಡಿಸಿರುವರು.

ಏಜೆಂಟರು ಬೇಕಾಗಿದೆ

ಮೈಸೂರು ನಗರದಲ್ಲಿ " ಸಮಾಚಾರ " ದಿನ ಪತ್ರಿಕೆಯನ್ನು ಚಂದಾದಾರರಿಗೆ ಹಂಚಿ ಚಂದಾ ವಸೂಲ್ಮಾಡಲೂ, ಪತ್ರಿಕೆಯನ್ನು ಪ್ರಚಾರಮಾಡಲೂ ಏಜೆಂಟರು ಬೇಕಾಗಿದೆ. ಅಂಥವರು ವ್ಯವಸ್ಥಾಪಕರನ್ನು ಕಂಡು ಮಾತನಾಡಬೇಕೆಂದು ತಿಳಿಸಲಾಗಿದೆ.

ವ್ಯವಸ್ಥಾಪಕ,
" ಸಮಾಚಾರ " ದಿನಪತ್ರಿಕೆ.

ರೇಡಿಯೋ

೩೧೦ ಮೀಟರು ೪೯-೪೬ ಮೀಟರು

ಸೆಪ್ಟೆಂಬರ್ ೩ ಭಾನವಾರ

ಬೆಳಿಗ್ಗೆ ೭-೦ ಉದಯಗಾನ, ಕಾರ್ಯಕ್ರಮ ವಿವರಣೆ, ೭-೫ ಚಿತ್ರಲೋಕ (ರಿ) ೭-೩೫ ಗಿಟಾರ್, ದಿಲ್‌ರೂಬ, ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಕನ್ನಡ ಗೀತೆಗಳು (ಶಮಂತಕಮಣಿ) ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಬಾಲಜಗತ್, ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಗೀತೆಗಳು. ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ (ಚೌಡಮ್ಮ) ೬-೦ ಇಂಗ್ಲೀಷ್ ವಾರ್ತೆ ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆಗಳು. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೆ ೭-೫ ವೈ. ಕಂ. ಸರಸ್ವತಿ (ರಿ) ೭-೩೦ ಕನ್ನಡದಲ್ಲಿ ಭಾಷಣ-ಕನ್ನಡ ಕಲಾವೈಭವ; ಗಾನಕಲೆ, ೭-೪೫ ಕನ್ನಡದಲ್ಲಿ ವಾರ್ತೆ ೮-೦ ಸಂಗೀತ (ರಾಮಚಂದ್ರ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಕನ್ನಡದಲ್ಲಿ ನಾಟಕ-ವಾಲ್ಮೀಕಿಯ ಭಾಗ್ಯ ೧೦-೦ ಮುಕ್ತಾಯ.

ಸೆಪ್ಟೆಂಬರ್ ೪ ಸೋಮವಾರ

ಬೆಳಿಗ್ಗೆ ೭-೦ ಉದಯಗಾನ, ಕಾರ್ಯಕ್ರಮ ವಿವರಣೆ, ೭-೫ ನಂದಬಾಲ ೭-೧೫ ದೇವರ ನಾಮ (ಸರೋಜ, ಇಂದಿರ) ೭-೩೫ ಪಕ್ಷಿನೋಟ (ವಾರದ ಕಾರ್ಯಕ್ರಮ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಸಂಗೀತ (ಸಿ ವಿ. ನಾಗರಾಜ್) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಕೊಳಲು ೨-೦ ಗೋಪಾಲಕೃಷ್ಣ (ರಿ) ೨-೧೫ ವಾದ್ಯ ಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ವೀಣೆ (ವಿ. ಎಸ್. ಐಯ್ಯರ್) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೭-೦ ಸ್ಥಾನೀಯ ಸೂಚನಾಯೆ ೭-೫ ಹಿಂದೀ ಕಾರ್ಯಕ್ರಮ ೭-೧೫ ಸಂಗೀತ (ಸಿ. ವಿ. ನಾಗರಾಜ್) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಪಾಂಚಜನ್ಯ ೮-೩೦ ಸಂಗೀತ (ಸರೋಜ, ಇಂದಿರ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಇಂಗ್ಲೀಷಿನಲ್ಲಿ ಭಾಷಣ–ಗೀತೆ. ೯-೪೫ ಮೀರಾ-ಸುಬ್ಬಲಕ್ಷ್ಮಿ (ರಿ) ೧೦-೦ ಮುಕ್ತಾಯ.

ರಣಜಿತ್ ಟಾಕೀಸ್
ತಾ॥ 1-9-50 ರಿಂದ
ದಿನವಹಿ 3 ಆಟಗಳು
ರೂಮಾಲ್★ROOMAL
ಪಾತ್ರ:- ನರ್ಗೀಸ್, ರೆಹಮಾನ್, ಜೈರಾಜ್, ಜೀವನ್, ಕುಕ್ಕು.
1-9-50 ರಿಂದ ಬೆಳಗಿನ ಪ್ರದರ್ಶನ
ಮೂರು ದಿನಗಳು ಮಾತ್ರ
ದರ್ದ್
ಪಾತ್ರ: ಸುರೈಯಾ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಕೋಮುವಾರು ಭಾವನೆ ನಿರ್ಮೂಲಮಾಡಿ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೫-೯—೧೯೫೦ ನೇ ಮಂಗಳವಾರ [ಸಂಚಿಕೆ ೧೮

ಪ್ರಧಾನಿ ಪಂಡಿತ್‌ನೆಹರೂರವರು ನಿನ್ನೆ ಗೋಷ್ಠಿಯಲ್ಲಿ, ಮಾತನಾಡುತ್ತಾ, ಅಸ್ಸಾಂನಲ್ಲಿ ಭೂಕಂಪ, ಪ್ರವಾಹಗಳಿಂದ ನೊಂದವರಿಗೆ ಯುದ್ಧ ಸಮಯದಲ್ಲಿ ನೆರವು ನೀಡುವಂತೆ ಈಗಲೂ ಸಹಾಯಮಾಡಬೇಕೆಂದು ತಿಳಿಸಿದರು.

ದೇಶದಲ್ಲಿರುವ ಕೋಮುವಾರು ಭಾವನೆಯನ್ನು ಪ್ರಸ್ತಾಪಿಸಿ ದೇಶಾದ್ಯಂತ ಈಕೋಮುವಾರು ಭಾವನೆಯು ಸಂಪೂರ್ಣವಾಗಿ ನಿರ್ಮೂಲವಾಗಬೇಕು. ಅದರಿಂದ ದೇಶೋನ್ನತಿಯಾಗದೆ ದೇಶಕ್ಕೆ ಅತ್ಯಂತ ಹಾನಿಕರವೆಂದು ತಿಳಿಸಿದರು.

ಕಾಶ್ಮೀರ ವಿಷಯವಾಗಿ ಮಾತನಾಡುತ್ತಾ, ಕಾಶ್ಮೀರ ಪ್ರಶ್ನೆಯು ಕೇವಲ ರಾಜಕೀಯಕ್ಕೆ ಸಂಬಂಧಪಟ್ಟಿದೆ. ಕೋಮುವಾರು ಪ್ರಶ್ನೆಯಲ್ಲ, ಪಾಕೀಸ್ಥಾನವು ಅದನ್ನು ಕೋಮುವಾರು ಸಮಸ್ಯೆಯಾಗಿ ಪರಿಗಣಿಸುತ್ತಲಿದೆ ಎಂದು ತಿಳಿಸಿದರು.

ಅಧ್ಯಕ್ಷ ಚುನಾವಣೆ ವಿಷಯದಲ್ಲಿ

ಶ್ರೀ ಕೃಪಲಾನಿಯವರ ವಿವರಣೆ

“ಹೊಸ ರಾಜ್ಯವ್ಯವಸ್ಥೆಯಲ್ಲಿ ತಲೆಹಾಕುವ ಸರ್ವಾಧಿಕಾರತ್ವ ನಮ್ಮ ಸಂಸ್ಥೆಯನ್ನು ಇನ್ನೂ ಪೂರ್ಣವಾಗಿ ಕಬಳಿಸಿಲ್ಲ. ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಭವಿಷ್ಯವಿದೆ ಎಂಬುದು ಇದರಿಂದ ವ್ಯಕ್ತಪಡುತ್ತದೆ. ವ್ಯಕ್ತಿಗಳೇ ಸರ್ವಸ್ವವಲ್ಲ. ಆದ್ದರಿಂದ ಯಾರೂ ತಮ್ಮ ಸಮಾನವಿಲ್ಲವೆಂದುಕೊಳ್ಳುವುದು ಬೇಡ. ಮುಖ್ಯವಾದ ಸಾರ್ವಜನಿಕ ಘಟನೆಗಳು ವ್ಯಕ್ತಿಗಳೊಬ್ಬಿಬ್ಬರ ಪ್ರಭಾವದಿಂದ ಇತ್ಯರ್ಥವಾಗುವುದಿಲ್ಲ. ಈ ಸಮಯದಲ್ಲಿ ನಡೆಯುವ ಘಟನೆಗಳು, ಬೀರುವ ಪ್ರಭಾವಗಳು ಇವುಗಳ ಒಟ್ಟಿನ ಮೇಲಿನ ಪ್ರತಿಕ್ರಿಯೆಯ ಫಲಿತಾಂಶವೇ ಅದು. ಈ ಚುನಾವಣೆ ಪ್ರಜಾಪ್ರಭುತ್ವದಲ್ಲಿ ನಂಬುಗೆ ಇಟ್ಟುಕೊಂಡು ವಿರೋಧಶಕ್ತಿಗಳೊಡನೆ ಹೋರಾಡುತ್ತಿರುವವರಿಗೆ ಕಣ್ಣು ತೆರೆಸುವ ಅಂಜನವಾಗಿ ಪರಿಣಮಿಸಲಿ” ಎಂದು ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯ ವಿಚಾರದಲ್ಲಿ ಸಿಂಹಾವಲೋಕನಮಾಡಿ ಒಂದು ಹೇಳಿಕೆ ಕೊಟ್ಟಿದ್ದಾರೆ.

ಪಂಜಿನ ಮೆರವಣಿಗೆ

ಕಾಳಸಂತೆಯನ್ನು, ಲಂಚರುಷುವತ್ತನ್ನೂ ಖಂಡಿಸುವ ಘೋಷಣೆಗಳನ್ನು ಮಾಡುತ್ತ ೨೦೦ ಮಂದಿ ಸೋಷಿಯಲಿಸ್ಟರು ಲಕ್ನೋ ನಗರದ ಮುಖ್ಯ ಬೀದಿಗಳಲ್ಲಿ ಪಂಜು ಹಿಡಿದುಕೊಂಡು ಪ್ರದರ್ಶನ ನಡೆಸಿದರು.

ವಿಶ್ವಸಂಸ್ಥೆಯ ಸಹಾಯ

ಅಸ್ಸಾಮಿನ ಭೂಕಂಪದಿಂದ ಕಷ್ಟಕ್ಕೀಡಾದವರಿಗೆ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯು ನೆರವು ನೀಡುವುದಾಗಿ ತಿಳಿಸಿದೆ. ಇದಕ್ಕೆ ಪ್ರಧಾನಿ ನೆಹರೂರವರು ಕೃತಜ್ಞತೆ ಸೂಚಿಸಿದ್ದಾರೆ.

ಮೈಸೂರಿನಲ್ಲಿ ಕಾಳಸಂತೆ

ರಾಜಧಾನಿಯ ‘ಮೈಸೂರು ಡ್ರಗ್‌ಹೌಸ್’ ನವರು ೪ ರೂ ಬೆಲೆಯ ಪೆನ್ಸಿಲಿನ್ನನ್ನು ೨೩॥ ರೂಪಾಯಿಗೆ, ರಜಪುಟಾಣ ಟ್ರೇಡಿಂಗ್ ಕಂಪನಿಯವರು ಗ್ಲೂಕೋಸನ್ನು ೨ ರೂ ೬ ಆಣೆಯದ್ದನ್ನು ೩ ರೂ. ಗೆ ಮಾರಿದ್ದಕ್ಕೆ ಅವರಮೇಲೆ ಕ್ರಮ ಜರುಗುತ್ತಲಿದೆಯೆಂದು ತಿಳಿದುಬಂದಿದೆ.

ರಾಜಕೀಯದಿಂದ ದೂರವಿರಿ

ಭಾರತದಂಡನಾಯಕ ಶ್ರೀ ಕಾರಿಯಪ್ಪನವರು ಪೂನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ರಾಜಕೀಯದಿಂದ ದೂರವಿರಬೇಕೆಂದೂ ಜನರ ದೇಶಸೇವೆಗೆ ತಯಾರಾಗಬೇಕೆಂದು ತಿಳಿಸಿದರು.

ಸರ್ದಾರ್ ಪಟೇಲರು ಬೊಂಬಾಯಿಗೆ

ಉಪಪ್ರಧಾನಿ ಸರ್ದಾರ್ ಪಟೇಲರು ಇಂದು ಬೊಂಬಾಯಿಗೆ ಬರುವರೆಂದು ತಿಳಿದು ಬರುತ್ತದೆ.

ಆರ್ಡಿನೆನ್ಸ್ ಜಾರಿ

ಅಲಹಾಬಾದಿನ ಸುಮಾರು ೧೦೦ ಅಂಗಡಿಗಳಿಗೆ ಪೋಲೀಸಿನವರೂ ರೇಷನಿಂಗ್ ಅಧಿಕಾರಿಗಳೂ ಹಠಾತ್ತನೆ ಹೋಗಿ ಭಾರತ ಸರ್ಕಾರವು ಹೊರಡಿಸಿರುವ ಹೊಸ ಆಜ್ಞೆಯ ವ್ಯಾಪ್ತಿಗೆ ಸೇರಿದ ಕೆಲವು ಪದಾರ್ಥಗಳನ್ನು ವಶಪಡಿಸಿಕೊಂಡಿರುತ್ತಾರೆ.

ಸ್ಪೆಷಲ್ ಕೂಪನ್ನುಗಳು

ಸರ್ಕಾರದವರು ೧೯೫೦ ನೇ ಮೇ ಮಾಹೆಯಲ್ಲಿ, ದೇಶದ ಆಹಾರ ಪರಿಸ್ಥಿತಿಯನ್ನು ಪ್ರಜೆಗಳ ಗಮನಕ್ಕೆ ತಂದು ಸ್ಪೆಷಲ್ ಕೂಪನ್ನುಗಳನ್ನು ಕೇಳುವುದು, ಆಹಾರ ಪರ್ಮಿಟ್ ಆಜ್ಞೆಯನ್ನು ವಿನಾಮಾಡಿ ಹೆಚ್ಚಿಗೆ ಜನರಿಗೆ ಊಟವನ್ನು ಹಾಕಲು ಅರ್ಜಿಗಳನ್ನು ಯಾರೂ ಹಾಕಿಕೊಳ್ಳಬಾರದೆಂದು ತಿಳಿಸಿದ್ದಾಗ್ಯೂ ಯಾರೂ ಗಮನವೀಯುತ್ತಲಿಲ್ಲ. ಸಂಸ್ಥಾನದ ಆಹಾರ ಪರಿಸ್ಥಿತಿಯು ಇನ್ನೂ ಕ್ಷೀಣವಾಗುತ್ತಲಿರುವುದರಿಂದ [illegible] ಸಂಸ್ಥಾನದಹೊರಗಿನಿಂದ ಆಹಾರ ಬರುವುದು ಅನಿರ್ದಿಷ್ಟವಾಗಿರುವುದರಿಂದ ಇನ್ನು ಮುಂದೆ ಯಾವ ವಿಧವಾದ ಸಪ್ಲಿಮೆಂಟರಿ ಕೂಪನ್ನುಗಳನ್ನು ಅಥವಾ ಆಹಾರ ಪರ್ಮಿಟ್ ಆಜ್ಞೆಯನ್ನುವಿನಾಮಾಡಿ ಅವಕಾಶವನ್ನು ಕೊಡಲಾಗುವುದಿಲ್ಲ. ಪ್ರಜೆಗಳು ಸರ್ಕಾರದೊಡನೆ ಸಹಕರಿಸುವರೆಂದು ನಂಬಿದೆಎಂದು ಮೈಸೂರು ಸರ್ಕಾರೀ ಪತ್ರಿಕಾ ಪ್ರಕಟಣೆ ಹೊರಬಿದ್ದಿದೆ.

ಸ್ವತಂತ್ರ ನ್ಯಾಯಾಂಗವಿರಬೇಕು

ಭಾರತದಲ್ಲಿ ಸ್ವತಂತ್ರ ನ್ಯಾಯಾಂಗವಿರಬೇಕು, ನ್ಯಾಯವಾದಿಗಳಿಗೂ ಸ್ವಾತಂತ್ರ್ಯವಿರಬೇಕೆಂದು ಕೇಂದ್ರದ ಆಹಾರಮಂತ್ರಿ ಶ್ರೀಕೆ. ಎಂ ಮುನ್ಷಿಯವರು ಲಕ್ನೋ ವಿಶ್ವವಿದ್ಯಾನಿಲಯದ ಲಾ ಸೊಸೈಟಿ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು.

ಮೈಸೂರಿನಲ್ಲಿ ಡಾ॥ಹಾರ್ಡೀಕರರು

ಡಾ॥ ಹಾರ್ಡೀಕರರವರು ವಿದ್ಯಾರ್ಥಿ ವಿದ್ಯಾರ್ಥಿನೀಯರಲ್ಲಿ ಚಾರಿತ್ರ್ಯದ ಸಂದೇಶ ಸಾರಲು ಆರಂಭಿಸಿದರು. ಜಿಲ್ಲಾ ವಿದ್ಯಾಧಿಕಾರಿಗಳು ಸಂಸ್ಥಾನದ ಮಾನ್ಯವಿದ್ಯಾಧಿಕಾರಿಗಳಿಗೆ ಆಪ್ತಕಾರ್ಯದರ್ಶಿಗಳು ಮತ್ತು ಭಾರತ ಸೇವಾದಳದ ಅಧಿಕಾರವರ್ಗ ಡಾ॥ ರವರೊಂದಿಗೆ ಪ್ರವಾಸ ಮಾಡುತ್ತಿರುವರು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರವರು ಮತ್ತು ಜಿಲ್ಲಾಧಿಕಾರಿಗಳು ಸೇರಿ ಶೇಷಾದ್ರಿ ಭವನಕ್ಕೆ ಆಗಮಿಸಿ ತಮ್ಮ ಗೌರವವನ್ನು ವ್ಯಕ್ತಪಡಿಸಿದರು.

ಸೋಮವಾರ ಪ್ರಾತಃಕಾಲ ೯-೩೦ ಗಂಟೆಗೆ ಮಹಾರಾಣಿ ಹೈಸ್ಕೂಲ್‌ಗೆ ಭೇಟಿ ಇತ್ತಾಗ ವಿದ್ಯಾರ್ಥಿನಿಯರು ಗೌರವರಕ್ಷೆಯನ್ನು ಸಲ್ಲಿಸಿದರು. ಮಹಾರಾಣಿ ಹೈಸ್ಕೂಲು, ಮಹಿಳಾ ಟ್ರೈನಿಂಗ್ ಕಾಲೇಜು, ಮಹಾರಾಣಿ ಮಿಡ್ಲ್ ಸ್ಕೂಲಿನ ಒಂದೂವರೆ ಸಹಸ್ರಮಂದಿ ವಿದ್ಯಾರ್ಥಿನಿಯರು ಹಾಗೆ ಶಿಕ್ಷಕರ ವೃಂದಕ್ಕೆ ರಾಷ್ಟ್ರದ ಚಾರಿತ್ರ್ಯವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬರಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಸೇವಾದಳದ ಮೂಲಕ ಈ ಕಾಣಿಕೆ ರಾಷ್ಟ್ರಕ್ಕೆ ಸಲ್ಲಿಸಲು ಇರುವ ಅವಕಾಶವನ್ನುಸೂಕ್ಷ್ಮವಾಗಿ ತಿಳಿಸಿದರು. ಇಲ್ಲಿನಎಲ್ಲಾ ಕಾರ್ಯಕ್ರಮಗಳು ಮಧುರ ವಾತಾವರಣದಿಂದ ಕೂಡಿ ಸೇನಾಧಿಪತಿಗಳ ಸಂಪರ್ಕ ಹಾಗೂ ಸಂದೇಶಗಳು ಮಹತ್ವದ ವಾತಾವರಣವನ್ನು ಸೃಷ್ಟಿಸಲು ಕಾರಣವಾಯಿತು.

ಮಧ್ಯಾಹ್ನದ ನಂತರ ಶಾರದಾವಿಲಾಸ ಕಾಲೇಜು ಮತ್ತು ಹೈಸ್ಕೂಲಿಗೆ ಭೇಟಿಇತ್ತರು ಕಾಲೇಜಿನ ವಿದ್ಯಾರ್ಥಿಗಳು ಕೊಟ್ಟ ಮಾರ್ಚ್‌ಪಾಸ್ಟ ಸೆಲ್ಯೂಟನ್ನು ಸ್ವೀಕರಿಸಿದರು. ಕಾಲೇಜಿನಎಲ್ಲಾ ವಿದ್ಯಾರ್ಥಿ ವಿದ್ಯಾನಿಯರು ಭಾಗವಹಿಸಿದ್ದರು. ಕಾಲೇಜಿನ ಅಧಿಕಾರಿವರ್ಗದವರು ಸೇನಾಪತಿಗಳು ಸಂಸ್ಥಾನದಲ್ಲಿ ಕೃಪೆಯಿಂದ ಜರುಗಿಸಿರುವ ಯುವಜನ ಚಳುವಳಿಗೆ ಪೂರ್ಣ ಸಹಾಯವನ್ನು ನೀಡುವುದಾಗಿ ಸಾರಿದರು. ಕೀರ್ತಿಶೇಷ ಭಕ್ಷಿನರಸಪ್ಪನವರಿಂದ ಪ್ರಾರಂಭಿಸಲ್ಪಟ್ಟು ಮೈಸೂರಿನ ವೃದ್ಧಪಿತಾಮಹರಾಗಿದ್ದ ಶ್ರೀ॥ ವೆಂಕಟಕೃಷ್ಣಯ್ಯನವರ ಪರಿಶ್ರಮದಿಂದ ಪರಿಪೋಷಿಸಲ್ಪಟ್ಟ ಈ ಸಂಸ್ಥೆಯು ಇನ್ನೂ ಎಂಟು ವರ್ಷಗಳಲ್ಲಿ ಶತಮಾನೋತ್ಸವವನ್ನು ಆಚರಿಸತಕ್ಕದ್ದಿದೆ.

ಮಧ್ಯಾಹ್ನದ ನಂತರ ದಳವಾಯಿ ಹೈಸ್ಕೂಲಿಗೆ ಸೇನಾಪತಿಗಳು ಭೇಟಿ ಇತ್ತಾಗ ಅಧಿಕಾರವರ್ಗವು

ಮತ್ತು ವಿದ್ಯಾರ್ಥಿಗಳು ಭಕ್ತಿಪೂರ್ವಕವಾಗಿ ಸೇನಾಪತಿಗಳನ್ನು ಬರಮಾಡಿಕೊಂಡು ಶ್ರೀ ಕೃಷ್ಣ ಜನ್ಮಾಷ್ಟಮಿಯ ಪವಿತ್ರ ದಿನದ ಸ್ಮರಣೆಮಾಡಿ ಮಾನ್ಯ ನಾಯಕರಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನು ಕರುಣಿಸಲೆಂದು ಹಾರೈಸಿದರು ಮತ್ತು ಡಿಸೆಂಬರ್ ೨೮ ರಂದು ಜರುಗುವ ಸೇವಾದಳದ ಜಿಲ್ಲಾ ರ್ಯಾಲಿಗೆ ತಮ್ಮ ಪೂರ್ಣ ಕಾಣಿಕೆಯನ್ನು ಸಲ್ಲಿಸುವುದಾಗಿ ಶಾಲೆಯ ವತಿಯಿಂದ ಆಶ್ವಾಸನವಿತ್ತರು. ಈ ಸಮಯದಲ್ಲಿ ಶ್ರೀ ಕೃಷ್ಣ ಭಗವಾನನು ತನ್ನ ಉದ್ಧಾರವು ಇಲ್ಲವೇ ಅವನತಿಯು ಸಂಪೂರ್ಣವಾಗಿ ತನ್ನನ್ನೇ ಸೇರಿದೆ ಎಂಬ ಸಂದೇಶವನ್ನು ಮಹಾತ್ಮರು ಗ್ರಹಿಸಿ ದೇಶಕ್ಕೆ ಸ್ವಾವಲಂಬನದ ಮಂತ್ರೋಪದೇಶಮಾಡಿದರು. ಈ ಮಂತ್ರವನ್ನು ಸಾಮೂಹಿಕವಾಗಿ ಭಾರತವು ಜರುಗಿಸಿ ರಾಜಕೀಯ ಸ್ವಾತಂತ್ರವನ್ನು ಗಳಿಸಿಕೊಂಡಿತು. ಇಂದು ಈ ಸ್ವಾತಂತ್ರ್ಯವು ಚಿರಾಯುವಾಗಲು ಇದೇ ಮಂತ್ರವನ್ನೇ ರಾಷ್ಟ್ರವು ಜಪಿಸಬೇಕಾಗಿದೆ. ಹೀಗೆ ಜಪಿಸಲು ಇಡೀ ದೇಶಕ್ಕೆ ಚಾರಿತ್ರ್ಯವು ಅತ್ಯಗತ್ಯ. ಇಂತಹ ಚಾರಿತ್ರ್ಯವನ್ನು ಈ ಪರ್ವಕಾಲದಲ್ಲಿ ಉಳಿಸಿ ಬೆಳೆಸಲು ಸಂಸ್ಥಾನದಲ್ಲಿ ಸೇವಾದಳದ ಮೂಲಕ ಯುವಜನ ಚಳುವಳಿಯನ್ನು ರೂಪುಗೊಳಿಸುತ್ತಿರುವುದಾಗಿ ಸೇನಾಪತಿಗಳು ತಿಳಿಸಿದರು.

ನಂತರ ಶ್ರೀ ಟಿ- ಎಸ್. ಸುಬ್ಬಣ್ಣನವರಿಂದ ಸ್ಥಾಪಿಸಲ್ಪಟ್ಟು ಇಂದು ಮೈಸೂರಿನಲ್ಲಿ ಸೇವಾದಳಕ್ಕೆ ಆಧಾರಸ್ಥಳವಾಗಿರುವ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಸೇನಾಪತಿಗಳು ಭೇಟಿಯಿತ್ತು ಎಲ್ಲಾ ಕಾರ್ಯಕಲಾಪಗಳನ್ನು ಪರಿಶೀಲಿಸಿ ತಮ್ಮ ಪೂರ್ಣ ಆಶೀರ್ವಾದವನ್ನು ಈ ಸಂಸ್ಥೆಗೆ ನೀಡಿದರು.

ಹೈದರಾಬಾದು ಜಹಗೀರುಗಳಿಗೆ

ಹೈದರಾಬಾದು ಸರ್ಕಾರವು ವಹಿಸಿಕೊಂಡಿರುವ ಜಹಗೀರಿಗಳಿಗೆ ೧೮ ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕಾಗಿದೆ. ೧೦ ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿ ಪರಿಹಾರವನ್ನು ಕೊಡಬೇಕಾದವರಿಗೆ ೧೦ ವರ್ಷಗಳಲ್ಲಿ, ೧ ಲಕ್ಷದವರೆಗೆ ೧೫ ವರ್ಷಗಳಲ್ಲಿ, ೧ ಲಕ್ಷಕ್ಕಿಂತ ಹೆಚ್ಚಾಗಿ ಕೊಡಬೇಕಾದವರಿಗೆ ೨೦ ವರ್ಷಗಳಲ್ಲಿ, ಈ ಪರಿಹಾರ ದ್ರವ್ಯವನ್ನು ವರ್ಷಂಪ್ರತಿ ಹಂಚಲಾಗುವುದೆಂದು ಹೈದರಾಬಾದು ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ವರ್ತಕರ ಸಮ್ಮೇಳನ

ಅಖಿಲ ಮೈಸೂರು ವರ್ತಕರ ಸಮ್ಮೇಳನವು ದಾವಣಗೆರೆಯಲ್ಲಿ ನಡೆಯುವುದು. ಸಮ್ಮೇಳನಕ್ಕೆ ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಬೇಕೆಂದು ಸಮ್ಮೇಳನದ ಸ್ವಾಗತ ಸಮಿತಿ ನಿರ್ಧರಿಸಿದೆ.

ಕೋಮುವಾರು ಭಾವನೆ ಇರಕೂಡದು

ಮದರಾಸು ಹೈಕೋರ್ಟಿನ ತೀರ್ಪನ್ನು ಭಾರತ ಸರ್ಕಾರವು ಮೈಸೂರು ಸರ್ಕಾರದ ಗಮನಕ್ಕೆ ತಂದು, ಸಂಸ್ಥಾನದಲ್ಲಿ ಶಾಲಾಕಾಲೇಜುಗಳಲ್ಲಿ ಕೋಮುವಾರ ರೀತ್ಯಾ ಸ್ಥಾನಗಳನ್ನು ಮೀಸಲಾಗಿಡುವುದು ರಾಜ್ಯಾಂಗ ಆಶಯಗಳಿಗೆ ವಿರೋಧವಾಗಿದೆಯೆಂದು ಸೂಚಿಸಿದ್ದಾರೆಂದು ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಅಸೆಂಬ್ಲಿಯಲ್ಲಿ ತಿಳಿಸಿದರು.

ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಕೇಂದ್ರದೊಡನೆ ಐಕ್ಯ

“ದೇಶದ ಹಿತದೃಷ್ಟಿಯಿಂದ ಕೇಂದ್ರದ ಅಡ್ಮಿನಿಸ್ಟ್ರೇಟಿವ್ ಯೋಜನೆಯನ್ನು ಒಪ್ಪಿ ನಮ್ಮ ಸಂಸ್ಥಾನವೂ ಕೇಂದ್ರದೊಡನೆ ಐಕ್ಯವಾಗಲೇಬೇಕು. ಇದಕ್ಕೆ ನಾವಾಗಲೇ ಒಪ್ಪಿಗೆಯಿತ್ತಿದ್ದೇವೆ. ಈಗ ಹಿಂತೆಗೆಯಲಾಗುವುದಿಲ್ಲ.”

“ಪಂಜರದಲ್ಲಿರುವ ಗಿಣಿಯ ಹಾಗೆ ನಮಗೊಂದೂ ಬೇಡ, ನಮ್ಮಷ್ಟಕ್ಕೆ ನಾವಿರೋಣ ಎಂಬ ಮನೋಭಾವದಿಂದ ಇಂದು ನಮಗೆ ಪ್ರಯೋಜನವಿಲ್ಲ. ಆ ಕಾಲ ಹೋಯಿತು. ವಿಶಾಲದೃಷ್ಟಿ, ಅಖಿಲ ಭಾರತದ ಹಿತ ಹಾಗೂ ಮೈಸೂರಿನ ಹಿತ, ಇದು ಇಂದಿನ ಆಗತ್ಯ. ಯಾವಾಗ ನಾವು ದೇಶದ ರಾಜ್ಯಾಂಗವನ್ನೊಪ್ಪಿ ಅಮೇಲೆ ಅ|| ಭಾ|| ಹಿತದ ದೃಷ್ಟಿಯಿಂದ ರಾಜ್ಯಾಂಗದ ‘ಇಂಟೆಗ್ರೇಷನ್’ ಹಣಕಾಸಿನ ‘ಇಂಟೆಗ್ರೇಷನ್’ ಮಿಲಿಟರಿ ‘ಇಂಟೆಗ್ರೇಷನ್’ ಮೊದಲಾಗಿ ಮುಖ್ಯವಾದುದನ್ನೆಲ್ಲ ಒಪ್ಪಿಕೊಂಡೆವೋ, ಈಗ ಇಡೀ ದೇಶದ ಹಿತದೃಷ್ಟಿಯಿಂದ ಬಂದಿರುವ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಯೋಜನೆಯನ್ನು ಒಪ್ಪದಿರುವುದರಲ್ಲಿ ಅರ್ಥವೇನು? ನಾವಿಂದಿರುವುದು ಹೊಸ ಚೌಕಟ್ಟಿನಲ್ಲಿ. ೧೯೪೭ ರ ಆಗಸ್ಟ್ ಗೆ ಮುಂಚಿನ ದಿನಗಳಲ್ಲಲ್ಲ. ಈಗಿನ ಸಂದರ್ಭಗಳೇ ಬೇರೆ, ಸನ್ನಿವೇಶಗಳೇ ಬೇರೆ, ಈ ಮೂರು ವರ್ಷಗಳಲ್ಲಿ ದೇಶದಲ್ಲಿ ಎಂತೆಂಥ ಘಟನೆಗಳಾಗಿವೆ, ಯಾವಾವುದು ಮಾರ್ಪಟಾಗಿದೆ ಎಂಬುದನ್ನು ಸದಸ್ಯರು ಗಮನಕ್ಕೆ ತಂದುಕೊಳ್ಳಬೇಕು. ಈ ದೃಷ್ಟಿಯಿಂದ ನಾವು ಕೇಂದ್ರದ ಕೈಯನ್ನು ಬಲಪಡಿಸಿಕೊಂಡು ಬರಬೇಕೆಂದು ಈ ಮೂರು ವರ್ಷಗಳಲ್ಲಿ ಹೆಜ್ಜೆ ಹೆಜ್ಜೆಗೂ ಹೇಳುತ್ತಲೇ ಮುಂದುವರಿಯುತ್ತಿದ್ದೇವೆ. ಒಂದೊಂದಾಗಿ ನಮ್ಮ ಅನೇಕ ಇಲಾಖೆಗಳನ್ನು ಕೇಂದ್ರಕ್ಕೆ ಕೊಟ್ಟುಬಿಟ್ಟಿದ್ದೇವೆ. ಆದ್ದರಿಂದ ಅಡ್ಮಿನಿಸ್ಟ್ರೇಟಿವ್ ಸರ್ವಿಸ' ತತ್ವಕ್ಕೆ ನಾವು ಒಪ್ಪಿಗೆ ಕೊಟ್ಟಿರುವುದರಲ್ಲಿ ಏನೇನೂ ತಪ್ಪಿಲ್ಲ. ನಾವು ಅನುಸರಿಸಿರುವ ಮಾರ್ಗವು ಸರಿಯಾಗಿಯೇ ಇದೆ. ಒಪ್ಪಿದ ಮೇಲೆ ಹಿಂದಕ್ಕೆ ಹೆಜ್ಜೆಯಿಡುವುದು ಸಾಧ್ಯವೇ ಇಲ್ಲ. ಕಷ್ಟ ಬರುವುದಾದರೆ ಏನು ಬರುತ್ತೋ ನೋಡೋಣ. ಒಂದುವೇಳೆ ಬಂದರೆ ಧೈರ್ಯದಿಂದ ಎದುರಿಸೋಣ. ನಾವು ಯೋಜನೆಯನ್ನೊಪ್ಪಿ ಸರಿಯಾದ ಮಾರ್ಗವನ್ನೇ ಅನುಸರಿಸಿರುವೆಂದು ಬಲವಾಗಿ ಮನದಟ್ಟಾಗಿರುವವರಲ್ಲಿ ನಾನೊಬ್ಬ. ನಾನಾ ಬಾಬುಗಳಲ್ಲಿ ‘ಇಂಟೆಗ್ರೇಷನ್’ ಆಗದೇ ಇದಿದ್ದರೆ ಮೈಸೂರು ಹಿಂದೆ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಇಂದೂ ಇರಬೇಕಾಗಿರುತ್ತಿತ್ತು. ಕೇಂದ್ರದಲ್ಲಿ ಮೈಸೂರಿನವರನ್ನು ಕೇಳುವವರೇ ಇರುತ್ತಿರಲಿಲ್ಲ. ಮೈಸೂರು ಜನಗಳಿಗೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯವಿರುತ್ತಿರಲಿಲ್ಲ. ನಾವು ಈಗ ರಾಜಕೀಯವಾಗಿಯೂ ಶಾಸನ ರೀತಿಯಾಗಿಯೂ ಬೆಳೆದಿದ್ದೇವೆ. ಈಗ ಮೈಸೂರಿನ ಜನಗಳು ತಲೆ ಎತ್ತಿ ನಿಂತು ಭಾರತದ, ಕೇಂದ್ರದ ಆಗುಹೋಗುಗಳಲ್ಲಿ ಪಾತ್ರವಹಿಸಿದ್ದೇವೆ. ಎಂದು ಹೇಳಿಕೊಳ್ಳಲವಕಾಶವಿದೆ ಎಂಬುದಾಗಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಲೆ|| ಅಸೆಂಬ್ಲಿಯಲ್ಲಿ ಅ|| ಭಾ|| ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಯೋಜನೆಯ ಬಗ್ಗೆ ಶ್ರೀ ಭೀಮಪ್ಪನಾಯಕರು ಮಂಡಿಸಿದ ನಿರ್ಣಯದ ಮೇಲೆ ನಡೆದ ಚರ್ಚೆಗೆ ಜವಾಬು ಕೊಟ್ಟು, ಮೈಸೂರು ಸರ್ಕಾರ ಆ ಯೋಜನೆ ಮೈಸೂರಿನಲ್ಲೂ ಜಾರಿಗೆ ಬರಲು ಒಪ್ಪಿ ತೆಗೆದುಕೊಂಡಿರುವ ಹೆಜ್ಜೆಯನ್ನು ಸದಸ್ಯರಿಗೆ ಮನದಟ್ಟಾಗುವಂತೆ ಸಮರ್ಥಿಸಿದರು.

ರೇಡಿಯೋ

೩೧೦ ಮೀಟರು ೪೯·೪೭ ಮೀಟರು

ಸೆಪ್ಟೆಂಬರ್ ೬ ಬುಧವಾರ

ಬೆಳಗ್ಗೆ ೭-೦ ಉದಯಗಾನ ಕಾರ್ಯಕ್ರಮ ವಿವರಣೆ ೭-೫ ಚಿತ್ರಗೀತೆ (ರೆ) ೭-೨೫ ಎಸ್. ಬಿ. ಕೃಷ್ಣಮೂರ್ತಿ (ದೇವರನಾಮ) ೭-೫೫ ಕನ್ನಡದಲ್ಲಿ ವಾರ್ತೆ, ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಜಿ. ಎನ್. ಬಾಲಸುಬ್ರಹ್ಮಣ್ಯಂ (ರೆ) ೧-೧೫ ಲಕ್ಷ್ಮೀರಾಮಚಂದ್ರನ್ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಗಿಟಾರ್ ೨-೦ ವನಿತಾವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಎಂ. ಆರ್. ದೊರಸ್ವಾಮಿ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಚಲನಚಿತ್ರ ಸಂಗೀತ (ರೆ) ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೋ ೭-೫ ಹಿಂದೀ ಕಾರ್ಯಕ್ರಮ ೭-೧೫ ದೊರಸ್ವಾಮಿ (ಕೊಳಲು) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಆರ್. ಕೆ. ಶ್ರೀಕಂಠನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ನಿಮ್ಮ ಮೆಚ್ಚಿನಗೀತೆಗಳು (ರೆ) ೧೦ ಮುಕ್ತಾಯ.

LATEST

ಮೈಸೂರು ಹೆಲ್ತ್ ಆಫೀಸರು

ಮೈಸೂರು ನಗರಕ್ಕೆ ಒಬ್ಬ ಹೆಲ್ತಾಫೀಸರನ್ನು ಆರಿಸಿಕೊಳ್ಳಲು ಮೈಸೂರು ಸರಕಾರದವರು ಕಳುಹಿಸಿದ್ದ ಪಟ್ಟಿಯಲ್ಲಿ ಇಂದು ನಡೆದ ಮೈಸೂರು ನಗರ ಪೌರಸಭೆಯ ವಿಶೇಷಾಧಿವೇಶನದಲ್ಲಿ ಡಾಕ್ಟರ್ ಎಸ್. ಶೇಷಗಿರಿರಾಯರನ್ನು ತೆಗೆದುಕೊಳ್ಳಲಾಯಿತು. ಇವರು ಹಿಂ ಮೈಸೂರಿನಲ್ಲಿ ಹೆಲ್ತ್ ಆಫೀಸರಾಗಿದ್ದರು.

ಭಿಕ್ಷುಕರ ದಸ್ತಗಿರಿ

ಇಂದು ಬೆಳಗ್ಗೆ ಭಿಕ್ಷುಕರ ಕಾನೂನು ಪ್ರಕಾರ, ಭಿಕ್ಷುಕ ಗೃಹಾಧಿಕಾರಿಗಳಾದ ನಗರ ಪೌರಸಭೆಯ ಉಪಾಧ್ಯಕ್ಷರು ೪೪ ಜನ ಭಿಕ್ಷುಕರನ್ನು ಪೋಲೀಸಿನವರ ಸಹಾಯದಿಂದ ದಸ್ತಗಿರಿ ಮಾಡಿದರು.

WANTED

Those who are interested to take up the Sole Agency of the 'Samachara' Kannada daily, may contact in person.

The Manager,
'Samachara' daily,
Lansdowne Buildings, Mysore.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಬೊಂಬಾಯಿನಲ್ಲಿ ಸಾಮಾನುಗಳೇ ಮಾಯ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಪಿ. ಆರ್. ಸ್ವಾಮಿ

ಸಂಪುಟ ೧] ೬—೯—೧೯೫೦ ನೇ ಬುಧವಾರ [ಸಂಚಿಕೆ ೧೯

ಭಾರತ ರಾಷ್ಟ್ರಾಧ್ಯಕ್ಷರು ಈಚೆಗೆ ಹೊರಡಿಸಿರುವ ನೂತನ ಆರ್ಡಿನೆನ್ಸ್ ದೇಶಾದ್ಯಂತ ೨ ನೇ ತಾರೀಖಿನಿಂದ ಜಾರಿಗೆ ಬಂದಿದ್ದರೂ, ಆರ್ಡಿನೆನ್ಸ್ ಪ್ರತಿಗಳು ಇನ್ನೂ ಬೊಂಬಾಯಿ ಸರ್ಕಾರಕ್ಕೆ ಬಾರದಿರುವುದರಿಂದ ಆ ಸರ್ಕಾರವು ಇನ್ನೂ ಯಾವ ರೀತಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೂ ಮುಂದುವರಿಯುತ್ತಲಿಲ್ಲ. ಆ ಕಾನೂನಿನ ಪ್ರಕಾರ ಸರ್ಕಾರದ ಅಧಿಕಾರವೇನೆಂಬುದು ಸಂಪೂರ್ಣವಾಗಿ ತಿಳಿಯದೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೂ ಆಗುವುದಿಲ್ಲವೆಂದು ಅಲ್ಲಿನ ಅಧಿಕಾರವೃತ್ತಗಳಲ್ಲಿ ಹೇಳುತ್ತಲಿರುವರು. ಈ ಸಾವಧಾನದಿಂದ ಆರ್ಡಿನೆನ್ಸಿನಲ್ಲಿ ನಮೂದಿಸಿರುವ ಸಾಮಾನುಗಳೆಲ್ಲವೂ ಮಾಯವಾಗಿವೆ. ಆದ್ದರಿಂದ ಆ ಸಾಮಾನುಗಳನ್ನು ಸರ್ಕಾರ ವಶಪಡಿಸಿಕೊಳ್ಳುವುದು ಸುಲಭವಲ್ಲವೆಂದು ತಿಳಿಯಬರುತ್ತದೆ.

ಸಾರ್ವಜನಿಕ ವಿದ್ಯಾರ್ಥಿನಿಲಯ ಮೈಸೂರು

ನಿನ್ನೆ ಸಾಯಂಕಾಲ ಡಾ॥ ನಾ. ಸು. ಹರ್ಡೀಕರ್ ರವರು ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಭೇಟಿ ಕೊಟ್ಟಾಗ ನಿಲಯದ ವಿದ್ಯಾರ್ಥಿಗಳು ಗಾರ್ಡ್ ಆಫ್ ಆನರ್ ಕೊಟ್ಟು ಡಾಕ್ಟರವರನ್ನು ಸ್ವಾಗತಿಸಿದರು. ನಿಲಯದ ವ್ಯವಸ್ಥಾಪಕರಾದ ಶ್ರೀ ಟಿ. ಎಸ್. ಸುಬ್ಬಣ್ಣನವರು ನಿಲಯಸ್ಥಾಪಿತವಾದಾಗಿನಿಂದ ಕಾರ್ಯಕ್ರಮವನ್ನು ವಿಶದವಾಗಿ ವಿವರಿಸಿ ಸಾರ್ವಜನಿಕರಿಂದಲೇ ಈ ನಿಲಯವು ನಡೆಯುತ್ತಾ ಬಂದಿದೆ ಎಂದು ತಿಳಿಸಿದರು. ಡಾಕ್ಟರವರು ವಿದ್ಯಾರ್ಥಿಗಳನ್ನು ಕುರಿತು ಸ್ವಾತಂತ್ರ್ಯವನ್ನು ಗಳಿಸಿದನ್ನು ರಕ್ಷಣೆ ಮಾಡಬೇಕಾದರೆ ಶಿಸ್ತಿನ ಸೇವಾದಳ ಬೋಧರಿಂದಲೇ ಸಾಧ್ಯ, ದೇಶದ ಎಲ್ಲಾ ಕಡೆಯಲ್ಲಿಯೂ ರಾಷ್ಟ್ರಸೇವಾದಳವನ್ನು ಸ್ಥಾಪಿಸಿ ಶಾಶ್ವತವಾದ ಸ್ವಾತಂತ್ರ್ಯವು ಸಿಕ್ಕುವಹಾಗೆ ಮಾಡಬೇಕೆಂದು ತಿಳಿಸಿದರು. ಮತ್ತು ಈ ನಿಲಯಕ್ಕೆ ಸರಕಾರದವರೂ ಸಾರ್ವಜನಿಕರೂ ಹೆಚ್ಚು ಹೆಚ್ಚಾಗಿ ಸಹಾಯ ನೀಡಬೇಕೆಂದು ಮನವಿ ಮಾಡಿದರು. ಕೊನೆಯದಾಗಿ ಈ ನಿಲಯಕ್ಕೆ ನಾನು ಭೇಟಿಕೊಟ್ಟಿದ್ದು ನನಗೆ ಬಹಳ ಅಪರಿಮಿತ ಆನಂದವಾಗಿದೆ ಎಂದು ತಿಳಿಸಿ ಬಡತನಕ್ಕೆ ಹೆದರಬಾರದೆಂದೂ, ಮುಂದೆ ಇದು ದೇಶದಲ್ಲೇ ಮಾದರಿಯಾಗುವುದೆಂದೂ ತಿಳಿಸಿದರು. ಇವರ ಜೊತೆಯಲ್ಲಿ ಮೈಸೂರು ಜಿಲ್ಲಾ ಜಕೇರ್ಪ ಆಫೀಸರವರೂ, ರಮಾಲಿ ಚನ್ನಬಸಪ್ಪನವರೂ, ನಾಡಿಗ ಕೃಷ್ಣಮೂರ್ತಿಯವರೂ ಆಗಮಿಸಿದ್ದರು. ವಿದ್ಯಾರ್ಥಿ ನಾರಾಯಣಸ್ವಾಮಿಯವರ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಪಂಡಿತ ನೆಹರೂ

ಅಸ್ಸಾಂ ಭೂಕಂಪ ಪರಿಸ್ಥಿತಿಯನ್ನು ಪರಿಶೀಲಿಸಲು ತೆರಳಿರುವ ಭಾರತ ಪ್ರಧಾನಿ ಪಂಡಿತ ನೆಹರೂರವರು ದಿಬ್ರೂಘರಿನಲ್ಲಿ ಮಾತನಾಡುತ್ತಾ ಅಸ್ಸಾಂನಲ್ಲಿ ಭೂಕಂಪದಿಂದ ನೊಂದವರಿಗೆ ಭಾರತಾದ್ಯಂತ ಪ್ರಜೆಗಳೆಲ್ಲರೂ ತಮ್ಮ ನೆರವನ್ನು ನೀಡುವರು. ಆದಾಗ್ಯೂ ಅಸ್ಸಾಂನ ಪ್ರಜೆಗಳು ತಮ್ಮ ಪ್ರಾಂತ್ಯದ ಪುನರ್ನಿರ್ಮಾಣಕ್ಕಾಗಿ ವಿಶೇಷವಾಗಿ ದುಡಿಯಬೇಕು. ಅಲ್ಲದೆ ಕಾಳಸಂತೆ, ಆಹಾರ ದಾಸ್ತಾನು ಮಾಡುವವರಿಗೆ ಉತ್ತೇಜನವೀಯದೆ ಅವರನ್ನು ಸದೆಬಡಿಯಲು ಜನರು ಸಹಕರಿಸಬೇಕು. ಸರ್ಕಾರವು ಕ್ರೂರ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದೆಂದು ಹೇಳಿದರು.

ಕಾಂಗ್ರೆಸ್ ಸಂಸ್ಥೆಗೆ ಮಾರ್ಗದರ್ಶಿ ನೆಹರೂ ಮತ್ತು ಪಟೇಲ್

ಶ್ರೀ ಪುರುಷೋತ್ತಮದಾಸ ಟಂಡನ್‌ರವರು ಕಾಂಗ್ರೆಸ್ ಅಧ್ಯಕ್ಷರಾದ ಮಾತ್ರಕ್ಕೆ ಕೇಂದ್ರ ಸರ್ಕಾರದ ಆಡಳಿತದಲ್ಲಿ ಬದಲಾವಣೆಗಳಾಗುವುದೆಂದು ಎದ್ದಿರುವ ಊಹಾಪೋಹಗಳು ಬುಡವಿಲ್ಲದ್ದು. ಕಾಂಗ್ರೆಸ್ ಅಧ್ಯಕ್ಷರು ಯಾರೇ ಇರಲಿ, ಕಾಂಗ್ರೆಸ್ ಸಂಸ್ಥೆಗೆ ಮಾರ್ಗದರ್ಶಿಗಳು ಪಂಡಿತ ನೆಹರೂ ಮತ್ತು ಸರ್ದಾರ್ ಪಟೇಲರುಗಳು. ಮತ್ತು ಕಾರ್ಯಕಾರಿ ಸಮಿತಿಯು ನಿರ್ಣಯಗಳಾಗಲು ತಮ್ಮ ಪ್ರಭಾವವನ್ನು ಬೀರಿ, ಸರ್ಕಾರದ ಸೂತ್ರಗಳನ್ನು ನಡೆಸುವರೆಂದು ದೆಹಲಿಯಲ್ಲಿ ಅಧಿಕಾರಯುಕ್ತವಾಗಿ ತಿಳಿಯಬರುತ್ತದೆ.

ಶ್ರೀ ಕೆ. ಟಿ. ಭಾಷ್ಯಂ ಮತ್ತು ಶ್ರೀ ಸಿದ್ದಲಿಂಗಯ್ಯ

ನ್ಯಾಯ ಮತ್ತು ಕಾರ್ಮಿಕ ಸಚಿವ ಶ್ರೀ ಕೆ. ಟಿ. ಭಾಷ್ಯಂ ಮತ್ತು ಆರೋಗ್ಯ ಮತ್ತು ವಿದ್ಯಾ ಸಚಿವ ಶ್ರೀ ಸಿದ್ದಲಿಂಗಯ್ಯನವರು ೮ನೇ ತಾರೀಖು ಬೆಳಗ್ಗೆ ನಡೆಯುವ ಮೈಸೂರು ಮೆಡಿಕಲ್ ಕಾಲೇಜು ರಜತಮಹೋತ್ಸವದಲ್ಲಿ ಭಾಗವಹಿಸಲು ನಾಳೆ ಮೈಸೂರಿಗೆ ಬರಲಿರುವರು.

ಭಾರತಕ್ಕೆ ಈಜಿಪ್ಟಿನ ಅಕ್ಕಿ

ಭಾರತಕ್ಕೆ ಈಜಿಪ್ಟಿನಿಂದ ೬೦,೦೦೦ ಟನ್ ಅಕ್ಕಿಯನ್ನು ಕೊಳ್ಳಲು ಭಾರತ ಸರ್ಕಾರವು ಏರ್ಪಾಡು ಮಾಡಿದೆ

ಭಾರತಕ್ಕೆ ಸಕ್ಕರೆ

ಭಾರತ ಸರ್ಕಾರವು ಹೊರಗಿನಿಂದ ೨೫,೦೦೦ ಟನ್ನು ಸಕ್ಕರೆಯನ್ನು ಕೊಳ್ಳಲು ಏರ್ಪಾಡು ಮಾಡಿದೆ

ದೀಪಾವಳಿ ಮತ್ತು ದಸರಾ ಹಬ್ಬಗಳಿಗೆ ಮದರಾಸಿನಲ್ಲಿ ಹೆಚ್ಚಿಗೆ ಸಕ್ಕರೆಯನ್ನು ಕೊಡಲಾಗುವುದೆಂದು ಅಲ್ಲಿಯ ಆಹಾರ ಮಂತ್ರಿಗಳು ತಿಳಿಸಿರುವರು.

ಬೀಹಾರ ಪ್ರವಾಹ ಅನಾಹುತ

ಬೀಹಾರದಲ್ಲಿಯ ಪ್ರವಾಹಗಳ ಅನಾಹುತದಿಂದ ಬೆಳೆಯಾಗುತ್ತಲಿದ್ದ ೪ ಲಕ್ಷ ಎಕರೆ ಜಮೀನುಗಳು ನೀರಿನಲ್ಲಿ ಮುಳುಗಿಹೋಗಿವೆ. ಸುಮಾರು ೧ ಲಕ್ಷ ಟನ್ನು ಅಕ್ಕಿಯ ಬೆಳೆಯು ಈ ಪ್ರವಾಹದ ಫಲದಿಂದ ಬೀಹಾರಿನಲ್ಲಿ ಕಡಮೆ ಬೆಳೆಯಾಗುವುದೆಂದು ಅಂದಾಜು ಮಾಡಲಾಗಿದೆ.

ರಷ್ಯಾ ನಿಯೋಗ

ವಿಶ್ವ ಸಂಸ್ಥೆಗೆ ರಷ್ಯಾ ವಿದೇಶ ಮಂತ್ರಿ ಶ್ರೀ ವಿಷಿನ್ಸ್ಕಿಯವರ ನೇತೃತ್ವದಲ್ಲಿ ನಿಯೋಗ ಹೋಗಲಿದೆ.

ಜಪಾನಿನಲ್ಲಿ ಚಂಡಮಾರುತ

ಪಶ್ಚಿಮ ಜಪಾನಿನಲ್ಲಿ ಪ್ರಚಂಡಮಾರುತದ ವಸೆಯಿಂದ ೨೫೦ ಜನ ಮರಣಹೊಂದಿ ಸುಮಾರು ೩ ಲಕ್ಷ ಜನರಿಗೆ ನಿಲ್ಲಲು ನೆರಳಿಲ್ಲದಂತಾಗಿ ಮನೆಗಳೆಲ್ಲಾ ಉರುಳಿಹೋಗಿವೆ. ಬಂದರುಗಳಲ್ಲಿ ೭೦೦ ಹಡಗುಗಳು ನಾಶವಾಗಿವೆ. ಅತ್ಯಂತ ಜನಭರಿತವಾದ ಓಸಾಕ ಕೋಬೆ ಪ್ರದೇಶದಲ್ಲಿ ೧೨ ಸಾವಿರ ಮನೆಗಳು ಸಂಪೂರ್ಣವಾಗಿ ಹಾಗೂ ೨೨ ಸಾವಿರ ಮನೆಗಳು ಅರ್ಧಮರ್ಧ ನಾಶವಾಗಿವೆ.

ಕಾಂಗ್ರೆಸ್ಸಿನವರಿಗೆ ನೋಟೀಸು

ಮದರಾಸು ಶಾಸನ ಸಭೆಯ ಕಾಂಗ್ರೆಸ್ ಕಾರ್ಯನಿರ್ವಾಹಕಮಂಡಲಿಯು ಆಗಸ್ಟು ಮಾಹೆಯಲ್ಲಿ ಶಾಸನಸಭಾಧಿವೇಶನದಲ್ಲಿ ಆಹಾರ ಚರ್ಚೆ ನಡೆದಾಗ ಸರ್ಕಾರದ ವಿರುದ್ಧ ಮತಕೊಟ್ಟರೆಂಬ ಕಾರಣದಿಂದ ಶ್ರೀ ವಿ. ವೈದ್ಯನಾಥ ಅಯ್ಯರ್ ಮತ್ತು ಇತರ ಮೂವರ ಮೇಲೆ ಶಿಸ್ತಿನ ಕ್ರಮವನ್ನೇಕೆ ತೆಗೆದುಕೊಳ್ಳಬಾರದೆಂದು ಆ ಸದಸ್ಯರಿಂದ ವಿವರಣೆಯನ್ನು ಕೇಳಿದೆ.

ಆಹಾರ ಪರಿಸ್ಥಿತಿ

ಮೈಸೂರು, ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ಕಾರದವರು [illegible] ಪ್ರಕಟಣೆ ಹೊರಡಿಸಿ ಚಿತ್ರದುರ್ಗ ಮತ್ತು ಮೈಸೂರಿನ ಕೆಲವು ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿಯುಂಟಾಗಿದೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಸುದ್ದಿ ಸುಳ್ಳೆಂದು ತಿಳಿಸಿದ್ದಾರೆ.

ಕಳೆದ ಜೂನ್ ತಿಂಗಳಲ್ಲಿ ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ಮತ್ತಿತರ ೪ ತಾಲ್ಲೂಕುಗಳಲ್ಲಿ ಮಳೆಯಿಲ್ಲದೆ ಬೆಳೆಗೆ ತೊಂದರೆಯಾಗಿ ಆಹಾರ ಪರಿಸ್ಥಿತಿ ಸ್ವಲ್ಪ ಶೋಚನೀಯವಾಗಿತ್ತೆಂದೂ, ಅಲ್ಲಿ ತಕ್ಷಣವೇ ಹೊಸ ಡಿಪೋಗಳ ಮೂಲಕ ಧಾನ್ಯ ಒದಗಿಸಲಾಯಿತೆಂದೂ ತಿಳಿಸಿದ್ದಾರೆ. ಬರುವ ಸುಗ್ಗಿಕಾಲದ ತನಕ ಅಲ್ಲಿನ ಜನರಿಗೆ ಬೇಕಾದ ಆಹಾರ ಸರಬರಾಜಿಗೆ ತಕ್ಕ ವ್ಯವಸ್ಥೆ ಮಾಡಲಾಗಿದೆಯೆಂದೂ ತಿಳಿಸಿದ್ದಾರೆ. ಗೃಹ ಸಚಿವರು ಆ ಸ್ಥಳಗಳಿಗೆ ಭೇಟಿಯಿತ್ತು, ಅಲ್ಲಿನ ಜನರಿಗೆ ಸೂಕ್ತ ಸಲಹೆಯಿತ್ತರೆಂದೂ, ಈಗ ಸ್ವಲ್ಪ ಪರಿಸ್ಥಿತಿ ಸುಧಾರಿಸಿದೆಯೆಂದೂ ತಿಳಿಸಿದ್ದಾರೆ.

ಕಳೆದ ಜುಲೈನಲ್ಲಿ ಸರಿಯಾಗಿ ಮಳೆ ಬೀಳದೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಜಗಳೂರು, ಮೊಳಕಾಲ್ಮೂರು ಮತ್ತು ಕೆಲವು ಪ್ರದೇಶಗಳಲ್ಲಿ ಬೆಳೆಗೆ ತೊಂದರೆಯುಂಟಾಗಿತ್ತೆಂದೂ, ಇತ್ತೀಚಿಗೆ ಮಳೆ ಬಿದ್ದು ಪರಿಸ್ಥಿತಿ ತಕ್ಕಮಟ್ಟಿಗಿದೆಯೆಂದು ತಿಳಿಸಿದ್ದಾರೆ. ಜನರು ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಕೇಳಿದ್ದಾರೆ.

ಮೈಸೂರು ಪೌರಸಭಾಧಿವೇಶನ

ಮೈಸೂರು ನಗರ ಪೌರಸಭೆಯ ಮುಂದುವರಿದ ಅಧಿವೇಶನವು ನಿನ್ನೆ ಸಂಜೆ ಶ್ರೀ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಾಮಾನ್ಯ ವಿಷಯಗಳು ಚರ್ಚೆಯಾದೊಡನೆ, ನಗರಾಭಿವೃದ್ಧಿ ಸಮಿತಿಗೆ ಪೌರಸಭಾಧ್ಯಕ್ಷರೇ ಅಧ್ಯಕ್ಷರಾಗಿರಬೇಕೆಂದು ಪೌರಸಭೆಯು ತೀರ್ಮಾನಿಸಿರುವ ವಿಷಯದಲ್ಲಿ ಸರ್ಕಾರದವರು, ಎಲ್ಲಾ ವಿಷಯಗಳನ್ನೂ ವಿಶದವಾಗಿ ಪರಿಶೀಲಿಸಿ ಪ್ರತ್ಯೇಕ ಅಧ್ಯಕ್ಷರನ್ನು ನೇಮಿಸಲಾಯಿತೆಂದೂ ಆಜ್ಞೆಯನ್ನು ಬದಲಾಯಿಸುವ ಆವಶ್ಯಕತೆಯಿಲ್ಲವೆಂದು ಬರೆದಿರುವ ವಿಷಯವನ್ನು ಸರ್ಕಾರದವರು ಪುನಃ ವಿಮರ್ಶೆ ಮಾಡಬೇಕೆಂದು ಸಭೆಯಲ್ಲಿ ೧೭-೮ ಓಟುಗಳಿಂದ ಅಂಗೀಕಾರವಾಯಿತು.

ಮೈಸೂರು ನಗರಕ್ಕೆ ಹೊರಗಿನಿಂದ ಗೋಮಾಂಸವನ್ನು ತರಿಸುವ ವಿಷಯದಲ್ಲಿ [illegible] ಚರ್ಚೆಗಳಾದುವು. ಶ್ರೀ ಕೃಷ್ಣಮೂರ್ತಿಯವರು, ಪೌರಸಭೆಯ ವಿಷಯದಲ್ಲಿ ಸರ್ಕಾರಕ್ಕೆ ಯಾವ ಸಲಹೆಯನ್ನು ಕೊಡುವುದು ಅನಾವಶ್ಯಕ ಮತ್ತು ಅನುಚಿತವೆಂದು ಒಂದು ನಿರ್ಣಯವನ್ನು ಮಂಡಿಸಿದರು. ಶ್ರೀ ಚೌಡಯ್ಯನವರು ಅನುಮೋದಿಸಿದರು. ಪ್ರಜಾಸಂಘದ ಸದಸ್ಯರನೇಕರು ನಾವು ಖಚಿತವಾಗಿ ಮೈಸೂರು ನಗರಕ್ಕೆ ಗೋಮಾಂಸ ಬರುತ್ತಿರುವುದನ್ನು ನಿಷೇಧಿಸಬೇಕೆಂದು ಈ ನಿರ್ಣಯವನ್ನು ವಿರೋಧಿಸಿದರು. ಕೊನೆಗೆ ೧೩-೧೧ ಓಟುಗಳಿಂದ ನಿರ್ಣಯವು ಅಂಗೀಕಾರವಾಯಿತು.

ಮುಂದುವರಿದ ಸಭೆಯು ನಡೆಯುವುದಕ್ಕೆ ಮುಂಚೆ ವಿಶೇಷ ಸಭೆಯು ನಡೆದು ಸರ್ಕಾರದವರು ನಗರ ಹೆಲ್ತಾಫೀಸರನ್ನು ಆರಿಸಿಕೊಳ್ಳಲು ಕಳುಹಿಸಿದ್ದ ಪಟ್ಟಿಯನ್ನು ಪರಿಶೀಲಿಸಿ ಡಾ|| ಶೇಷಗಿರಿರಾಯರನ್ನು ಹೆಲ್ತಾಫೀಸರನ್ನಾಗಿ ತೆಗೆದುಕೊಳ್ಳಬಹುದೆಂದು ಸರ್ವಾನುಮತದಿಂದ ತೀರ್ಮಾನವಾಯಿತು.

ಕಾಳಸಂತೆ

ಸಾಮಾನುಗಳನ್ನು ಎಲ್ಲಿ ಮುಚ್ಚಿಟ್ಟಿರುವರು, ಎಲ್ಲಿ ಕಾಳಸಂತೆಯಲ್ಲಿ ಮಾರಾಟವಾಗುತ್ತಲಿದೆ ಎಂಬುದನ್ನು ಕಂಡು ಹಿಡಿದು ವರದಿಮಾಡಲು ಪ್ರತಿಯೊಂದು ವಾರ್ಡಿನಲ್ಲೂ ಒಂದೊಂದು ಸಮಿತಿ ಇರಬೇಕೆಂದು ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜನಾಡರವರು ಮಧುರಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳುತ್ತಾ, ಕೇವಲ ಕಾನೂನು ಮಾಡುವುದರಿಂದ ಕಾಳಸಂತೆ ನಿಲ್ಲುವುದಿಲ್ಲ. ಜನತೆಯ ಸಹಕಾರದಿಂದಲೇ ಈ ದುಷ್ಟ ಪದ್ಧತಿಯು ಅಡಗಬೇಕಾಗಿದೆಯೆಂದು ನುಡಿದರು.

ವನಮಹೋತ್ಸವ

ವನಮಹೋತ್ಸವ ಸಮಾರಂಭವು ಪ್ರಾರಂಭವಾದ ಜುಲೈ ಒಂದರಿಂದ ಜುಲೈ ಮಾಹೆ ಅತ್ಯಂದವರೆಗೆ ಮೈಸೂರು ಸಂಸ್ಥಾನದಲ್ಲಿ ೫,೨೧,೮೯೪ ಗಿಡಗಳನ್ನು ನೆಡಲಾಯಿತೆಂದು ಒಂದು ಸರ್ಕಾರೀ ಪ್ರಕಟಣೆ ಹೊರಬಿದ್ದಿದೆ.

ಸರ್ಕಾರಿ ಆಜ್ಞೆ

ಚಾಮರಾಜನಗರದ ಎಲ್. ಎಫ್. ಆಸ್ಪತ್ರೆಯ ಡಾಕ್ಟರ್ ಜನಾಬ್ ಅಬ್ದುಲ್ ಸಮದ್ ಷರೀಫ್‌ರವರನ್ನು ಮೈಸೂರು ಮೆಡಿಕಲ್ ಕಾಲೇಜಿಗೆ ಫಾರ್ಮಕಾಲಜಿ ಲೆಕ್ಚರರಾಗಿ ವರ್ಗಮಾಡಿದ್ದಾರೆ.

ಜಪಾನಿಗೆ ಹೋಗುವ ಪ್ರಯಾಣಿಕರಿಗೆ

ವ್ಯಾಪಾರ ಮತ್ತು ಸ್ವಂತ ಕೆಲಸಗಳಿಗಲ್ಲದೆ ಜಪಾನನ್ನು ನೋಡಲು ಹೋಗುವವರು ಸರ್ಕಾರದ ಮೂಲಕವೇ ಪ್ರಯಾಣಕ್ಕೆ ಏರ್ಪಾಡು ಮಾಡಿಕೊಳ್ಳಬೇಕು. ಭಾರತದಲ್ಲಿ ಈ ರಹದಾರಿಗಳನ್ನು ಕೊಡುವವರಿಗೆ ಬರೆದುಕೊಳ್ಳಬೇಕು. ಜಪಾನಿನಲ್ಲಿ ೧೮೦ ದಿವಸಗಳು ಪ್ರವಾಸ ಮಾಡಲು ಅನುಮತಿ ಕೊಡಲಾಗುವುದೆಂದು ಕೇಂದ್ರ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿರುವರು.

ಅನಾವರಣ ಮಹೋತ್ಸವ

ಮೈಸೂರು ಪುರಸಭಾ ಕಛೇರಿಯಲ್ಲಿ, ರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರ ಪ್ರಸಾದರವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಮುಖ್ಯಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರು ಆಗಸ್ಟು ೮ನೇ ಶುಕ್ರವಾರ ಸಂಜೆ ೬-೩೦ ಗಂಟೆಗೆ ನೆರವೇರಿಸುವರು.

ಮನೆ ಕಟ್ಟಲು ಸಾಮಾನಿಲ್ಲ

ವಾಸದ ಮನೆಗಳು ವಿನಹ ಇನ್ಯಾವರೀತಿಯಾದ ಮನೆಯನ್ನು ಕಟ್ಟುವುದಕ್ಕೂ ಹೈದರಾಬಾದು ಸರ್ಕಾರವು ಹತೋಟಿಯಲ್ಲಿರುವ ಕಟ್ಟಡ ಸಾಮಾನುಗಳನ್ನು ಕೊಡುವುದಿಲ್ಲವೆಂದು ಆಜ್ಞೆ ಹೊರಡಿಸಿದೆ. ವಾಸದ ಮನೆಯ ವಿಸ್ತೀರ್ಣವೂ ಸಹ ೮೦೦ ಚದರಡಿಗಳಿಗೆ ಮೀರಕೂಡದು.

ಸಕ್ಕರೆ ಕಾಳಸಂತೆ

ಸಕ್ಕರೆಯನ್ನು ಕಾಳಸಂತೆಯಲ್ಲಿ ಮಾರಿದರೆಂಬ ಆಪಾದನೆ ಮೇಲೆ ಪಾಟಿಯಾಲಾ ಸರ್ಕಾರವು ಒಬ್ಬ ಸಿವಿಲ್ ಸಪ್ಲೈ ಅಧಿಕಾರಿ, ಒಬ್ಬ ಸೂಪರ್‌ವೈಸರ್, ನಾಯಬ್ ತಾಸಿಲ್‌ದಾರರನ್ನು ಕೆಲಸದಿಂದ ಸಸ್ಪೆಂಡ್ ಮಾಡಿ ವಿಚಾರಣೆಯನ್ನು ನಡೆಸುತ್ತಲಿರುವನು.

ಜನರಲ್ ಕಾರಿಯಪ್ಪ ಮೈಸೂರಿಗೆ

ಭಾರತ ದಂಡನಾಯಕ ಜನರಲ್ ಕಾರಿಯಪ್ಪನವರು ಇದೇ ಮಾಹೆ ೧೧ನೇ ತಾರೀಖು ಬೆಂಗಳೂರಿಗೆ ಬಂದು ಬೆಂಗಳೂರು ಮತ್ತು ಮೈಸೂರಿನಲ್ಲಿ ೩ ದಿನವಿರುವರೆಂದು ತಿಳಿಯಬರುತ್ತದೆ.

ಪತ್ರವ್ಯವಹಾರ

ಸ್ವಾಮಿ,—

ಈಗ ಬಹಳ ದಿನಗಳಿಂದಲೂ ನಮ್ಮ ಮೈಸೂರು ಸಂಸ್ಥಾನದಲ್ಲಿ ಗೋವಧೆಯನ್ನು ನಮ್ಮ ಘನ ಸರ್ಕಾರದವರು ಬಹಿಷ್ಕರಿಸಿರುವುದು ಜನ ಸಾಮಾನ್ಯರಿಗೆ ತಿಳಿದ ವಿಷಯವಾಗಿದೆ ಆದರೆ ಈಗ ಕೆಲವು ದಿನಗಳಿಂದ ನಗರದ ಪ್ರಾಣಿ ಸಂಗ್ರಹಾಲಯದಲ್ಲಿ ಮಾಮೂಲಿನಂತೆ ಸರಬರಾಜಾಗುತ್ತಿದ್ದ ಕುರಿ ಅಥವಾ ಆಡಿನ ಮಾಂಸದ ಬೆಲೆಯು ಜಾಸ್ತಿಯಾಗಿದೆಯೆಂಬ ಕಾರಣದಿಂದ ಗೋಮಾಂಸ ಸರಬರಾಜು ಮಾಡುತ್ತಿದ್ದಾರೆಂದು ನಂಬಲರ್ಹವಾದ ಕಡೆಯಿಂದ ತಿಳಿದುಬಂದಿದೆ. ಇದರಿಂದ ನಮ್ಮ ಪವಿತ್ರ ಹಿಂದೂ ಧರ್ಮಕ್ಕೆ ಒಂದು ಕಂಟಕ ಉಂಟಾಗಿದೆ. ಇದನ್ನು ಕೂಡಲೆ ನಿಲ್ಲಿಸಲು ನಮ್ಮ ಘನ ಸರ್ಕಾರದವರು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಂಬಿರುವ,

ಸ್ವಯಂ ಸೇವಕರು,
ನಜರ್‌ಬಾದ್ ಮೊಹಲ್ಲಾ.

ರೇಡಿಯೋ

೩೧೦ ಮೀಟರು ೪೯.೪೬ ಮೀಟರು
ಸೆಪ್ಟೆಂಬರ್ ೭ ಗುರುವಾರ

ಬೆಳಿಗ್ಗೆ ೭-೦ ಉದಯಗಾನ ಕಾರ್ಯಕ್ರಮ ವಿವರಣೆ ೭-೫ ಸತ್ತೂರು ಸುಬ್ರಹ್ಮಣ್ಯ ಐಯ್ಯರ್ (ಓ) ೭-೧೫ ಎಸ್. ಸಿ. ಬೇಲೂರಯ್ಯ (ನಾದಸ್ವರ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಹೆಚ್. ಟಿ. ಪುಟ್ಟಸ್ವಾಮಯ್ಯ (ಪಿಟೀಲು) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಕ್ಲಾರಿಯೊನೆಟ್ ೨-೦ ಚಿತ್ರಲೋಕ ೨-೩೦ ಮುಕ್ತಾಯ.

ಸಂಜೆ ೫-೩೦ ಹೆಚ್. ಟಿ. ಪುಟ್ಟಸ್ವಾಮಯ್ಯ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಪಾಶ್ಚಿಮಾತ್ಯ ಸಂಗೀತ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾವೆ. ೭-೫ ಶಹಜರ್ಹಾ (ಓ) ೭-೧೫ ಟಿ. ನಾಗಮ್ಮ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಮಾಯಿಗೌಡ (ಭಾರತವಚನ) ೮-೧೫ ತಾಳ ವಾದ್ಯ ೮-೩೦ ಟಿ ನಾಗಮ್ಮ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವಿಶೇಷ ಕಾರ್ಯಕ್ರಮ ೧೦-೦ ಮುಕ್ತಾಯ.

ಆಂಧ್ರ ಕಾಂಗ್ರೆಸ್ಸಿಗರ ಪ್ರತಿಕ್ರಿಯೆ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಶ್ರೀ ಎಸ್. ಕೆ ಪಾಟೀಲರನ್ನು ಆಂಧ್ರ ಪ್ರಾಂತ್ಯ ಕಾಂಗ್ರೆಸ್ಸಿನ ಸರ್ವಾಡಳಿತವನ್ನು ನಡೆಯಿಸಲು ನೇಮಿಸಿರುವುದಲ್ಲದೆ ಅದಕ್ಕೆ ಸಂಬಂಧಪಟ್ಟ ಹಣ ಮತ್ತು ಕಾಗದ ಪತ್ರಗಳನ್ನು ಅವರಿಗೆ ವಹಿಸಿಕೊಡಬೇಕೆಂದು ತೀರ್ಮಾನಿಸಿ, ಹಾಲಿ ಇದ್ದ ಆಂಧ್ರ ಪ್ರಾಂತ್ಯ ವರ್ಕಿಂಗ್ ಕಮಿಟಿಯನ್ನು ರದ್ದುಗೊಳಿಸಿರುವುದು ಆಂಧ್ರ ಪ್ರಾಂತ್ಯದಲ್ಲಿ ವಿಶೇಷ ಪ್ರತಿಕ್ರಿಯೆಯನ್ನುಂಟುಮಾಡಿದೆ. ಆಂಧ್ರ ಪ್ರಾಂತ್ಯ ಕಾಂಗ್ರೆಸ್ಸಿನ ಅನೇಕ ಮುಖಂಡರುಗಳು ಕಾಂಗ್ರೆಸ್ ವರ್ಕಿಂಗ ಕಮಿಟಿಯು ಮಾಡಿರುವ ಈ ನಿರ್ಧಾರವನ್ನು ಸಂಪೂರ್ಣವಾಗಿ ವಿರೋಧಿಸಿರುವರು. ಇದರ ಪರಿಣಾಮವೇನಾಗುವುದೆಂದು ಈಗಲೇ ಹೇಳಲು ಸಾಧ್ಯವಿಲ್ಲ. ಅನೇಕ ಕಾಂಗ್ರೆಸ್ ನಾಯಕರು ಈ ಸಂಸ್ಥೆಯನ್ನು ಬಿಟ್ಟು ಬೇರೆ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತದರಲ್ಲಿದ್ದಾರೆಂದು ತಿಳಿಯಬರುತ್ತದೆ.

ಬೊಂಬಾಯಿ ನಗರದ ಕಾಂಗ್ರೆಸ್ಸಿನ ಅನೇಕ ಕ್ಷೇತ್ರಗಳಲ್ಲಿ ಪರಾಜಿತರಾದ ಹೊರಗಿನವರನ್ನು ಇಲ್ಲಿಗೆ ನೇಮಿಸಿ ಅವರಿಗೆ ಇಲ್ಲಿಯ ಸರ್ವಾಡಳಿತವನ್ನು ವಹಿಸಿರುವುದು ಆಂಧ್ರರಿಗೆಲ್ಲಾ ಅವಮಾನಪಡಿಸಿದಂತಾಗಿದೆ. ಆಂಧ್ರರಾದ ಶ್ರೀ ಪಟ್ಟಾಭಿ ಸೀತಾರಾಮಯ್ಯ, ಮತ್ತು ಶ್ರೀ ಕಾಳ ವೆಂಕಟರಾಯರು ಇದ್ದೂ ಈ ರೀತಿ ತೀರ್ಮಾನವಾದುದು ಆಶ್ಚರ್ಯ ಮತ್ತು ವಿಷಾದಕರವೆಂದು ಅನೇಕರು ಅಭಿಪ್ರಾಯ ಪಡುತ್ತಲಿದ್ದಾರೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ಸಕ್ಕರೆ ಸಮಿತಿಗೆ ಸರ್ವಾಧಿಕಾರ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೭—೯—೧೯೫೦ ನೇ ಗುರುವಾರ [ಸಂಚಿಕೆ ೨೦

ಸಕ್ಕರೆ ಬಿಕ್ಕಟ್ಟಿನ ವಿಚಾರಣಾ ಸಮಿತಿಗೆ ಪೂರ್ಣಾಧಿಕಾರವನ್ನು ಕೊಡುವ ಆರ್ಡಿನೆನ್ಸ್‌ನ್ನು ರಾಷ್ಟ್ರಾಧ್ಯಕ್ಷರು ಮೊನ್ನೆ ಹೊರಡಿಸಿದ್ದಾರೆ. ಈ ಸಮಿತಿಗೆ ಸಂಪೂರ್ಣ ನ್ಯಾಯತೀರ್ಮಾನ ಅಧಿಕಾರವಿದೆ. ಜಮ್ಮೂ ಮತ್ತು ಕಾಶ್ಮೀರ ಸಂಸ್ಥಾನಗಳ ವಿನಹ ಭಾರತಾದ್ಯಂತ ಈ ಆರ್ಡಿನೆನ್ಸು ಅನ್ವಯಿಸುವುದು. ಸಕ್ಕರೆ ವಿಚಾರಣೆ ಸಮಿತಿಗೆ, (ಅ) ಯಾರನ್ನೂ ಬೇಕಾದರೂ ಸಮಿತಿಯ ಮುಂದೆ ಬಂದು ಸಾಕ್ಷ್ಯಕೊಡಲು ಒತ್ತಾಯಪಡಿಸುವ (ಆ) ಯಾವುದೇ ಕಾಗದಪತ್ರವನ್ನು ಹುಡುಕಲು ಮತ್ತು ಹಾಜರುಪಡಿಸಲು ಒತ್ತಾಯಪಡಿಸುವ (ಇ) ಮತ್ತು ಸಮಿತಿಯ ಮುಂದೆ ಪ್ರಮಾಣಪೂರ್ವಕವಾಗಿ ಸ್ವೀಕೃತವಾದ ಹೇಳಿಕೆಯ ನಿಜತ್ವವನ್ನು ತಿಳಿಯಲು ಸಾಕ್ಷಿಗಳನ್ನು ಒತ್ತಾಯದಿಂದ ಬರಮಾಡಿಕೊಳ್ಳುವ (ಈ) ಯಾವುದೇ ಕಛೇರಿಯಿಂದಾಗಲಿ ಅಥವಾ ಆಫೀಸಿನಿಂದಾಗಲಿ ರಿಕಾರ್ಡುಗಳನ್ನು ಒತ್ತಾಯದಿಂದ ತರಿಸಿಕೊಳ್ಳುವ ಮತ್ತು (ಉ) ಸಾಕ್ಷಿಗಳನ್ನು ತಪಾಸು ಮಾಡಲು ಕಮಿಷನ್ ಏರ್ಪಡಿಸುವ ಸಂಪೂರ್ಣ ಸಂಸ್ಥಾಧಿಕಾರವನ್ನು ಈ ಆರ್ಡಿನೆನ್ಸ್ ಮೂಲಕ ಕೊಡಲಾಗಿದೆ. ಈ ಸಮಿತಿಯಿಂದ ಅಧಿಕಾರಪಡೆದ ಅಧಿಕಾರಿಗಳು ಯಾವಾಗಬೇಕಾದರೂ ಎಲ್ಲಿ ಬೇಕಾದರೂ ಒಳನುಗ್ಗಿ ತನಿಖೆಕ್ರಮ ನಡೆಸಬಹುದೆಂದೂ ಮತ್ತು ಈ ಸಮಿತಿಯ ಮುಂದೆ ಕೊಟ್ಟ ಸಾಕ್ಷ್ಯವನ್ನು ಆ ಸಾಕ್ಷಿಯ ವಿರುದ್ಧ ಮತ್ತಾವ ಕ್ರಿಮಿನಲ್ ಯಾ ಸಿವಿಲ್ ಕೋರ್ಟಿನಲ್ಲಿ ಉಪಯೋಗಿಸಲಾಗದೆಂದೂ ಆರ್ಡಿನೆನ್ಸಿನಲ್ಲಿ ಉಕ್ತವಾಗಿದೆ.

ಟೀ ನಷ್ಟ

ಅಸ್ಸಾಂನಲ್ಲಿ ಭೂಕಂಪದ ಪರಿಣಾಮವಾಗಿ ೭೫೦,೦೦೦ ಟನ್ನು ಟೀ ನಾಶವಾಗಿದೆ

ಬೊಂಬಾಯಿನಲ್ಲಿ ಮುಷ್ಕರ

ಬೊಂಬಾಯಿನಲ್ಲಿ ಪೋಲೀಸ್ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಆಪಾದನೆ ಮೇಲೆ ೧೨ ಜನರನ್ನು ದಸ್ತಗಿರಿ ಮಾಡಿದ್ದಾರೆ

ಜಮೀನ್ದಾರಿ ರದ್ದು ಶಾಸನ ಅಕ್ರಮ

ಜಮೀನ್ದಾರಿ ರದ್ದು ಶಾಸನ ಭಾರತ ರಾಜ್ಯಾಂಗಕ್ಕೆ ವಿರುದ್ಧವಾದುದೆಂದೂ, ಈ ಬಗ್ಗೆ ತಮ್ಮ ಅರ್ಜಿಗಳ ಪರಿಶೀಲನೆ ಮುಗಿಯುವವರೆಗೂ ತಮ್ಮ ಜಮೀನುಗಳನ್ನು ಸರ್ಕಾರ ವಶಪಡಿಸಿಕೊಳ್ಳದಂತೆ ತಾತ್ಕಾಲಿಕ ಆಜ್ಞೆ ಈಯಬೇಕೆಂದ. ೧೨ ಜನ ಸಲ್ಲಿಸಿದ ಅರ್ಜಿಗಳನ್ನು ಹೈಕೋರ್ಟು ಸ್ವೀಕರಿಸಿ, ತಡೆ ಆಜ್ಞೆ ಇತ್ತಿರುವುದಲ್ಲದೆ ಸರ್ಕಾರಕ್ಕೆ ನೋಟೀಸು ಜಾರಿ ಮಾಡಿದೆ.

ಷಾಪ್ ಅಸಿಸ್ಟೆಂಟು ಆಕ್ಟ್

ಮಾಲೀಕರು ಅಥವಾ ಅವನ ಸಂಸಾರಕ್ಕೆ ಸೇರಿದವರು ಮಾತ್ರ ಕೆಲಸ ಮಾಡುತ್ತಲಿರುವ ಅಂಗಡಿಗಳಿಗೆ ಷಾಪ್ ಅಸಿಸ್ಟೆಂಟ್ ಆಕ್ಟಿನ ೭ ಮತ್ತು ೪೭ನೇ ಸೆಕ್ಷನ್ನಿನ ಕಾನೂನು ಅನ್ವಯಿಸುವುದಿಲ್ಲ (ಅವರು ಅಂಗಡಿಗಳನ್ನು ಎಲ್ಲಾ ದಿವಸಗಳಲ್ಲಿಯೂ ತೆಗೆದಿರಬಹುದು) ಎಂದು ಮದರಾಸು ಕಾರ್ಮಿಕ ಮಂತ್ರಿ ಶ್ರೀ ಸೀತರಾಮರೆಡ್ಡಿಯವರು ಅಲ್ಲಿಯ ಶಾಸನ ಸಭೆಯಲ್ಲಿ ತಿಳಿಸಿದರು.

ಧಾರ್ಮಿಕ ಇಲಾಖಾ ರದ್ದು

ಭಾರತ ಸರ್ಕಾರದ ಜಾತ್ಯಾತೀತ ನೀತಿಗನುಸಾರವಾಗಿ ಹೈದರಾಬಾದಿನಲ್ಲಿನ ಧಾರ್ಮಿಕ ಇಲಾಖೆಯನ್ನು ರದ್ದುಗೊಳಿಸಲಾಗಿದೆಯೆಂದು ತಿಳಿದುಬರುತ್ತದೆ ಈ ಇಲಾಖೆಯ ಸಾಲಿಯಾನ ಖರ್ಚು ೧೫ ಲಕ್ಷ ರೂಪಾಯಿಗಳು

ಬರ್ಮಾ ಅಕ್ಕಿ.

ಮದ್ರಾಸ್ ಪ್ರಾಂತದ ಆಹಾರಾಭಾವ ಪರಿಸ್ಥಿತಿ ಸುಧಾರಿಸಲು ಬರ್ಮಾದಿಂದ ೭೦೦ ಟನ್ನು ಅಕ್ಕಿ ಮದ್ರಾಸಿಗೆ ಬಂದಿದೆ. ಸೆಪ್ಟೆಂಬರ್ ಮಾಹೆಯಲ್ಲಿ ಕೇಂದ್ರ ಸರ್ಕಾರವು ಮದರಾಸಿಗೆ ೧೦,೦೦೦ ಟನ್ ಅಕ್ಕಿಯನ್ನು ಸರಬರಾಯಿ ಮಾಡುವುದು.

ಬೊಂಬಾಯಿನಲ್ಲಿ ನಿರ್ಬಂಧಾಜ್ಞೆ

ಬೊಂಬಾಯಿನಲ್ಲಿ ಸಭೆ, ಮೆರವಣಿಗೆ ಇತ್ಯಾದಿಗಳನ್ನು ನಿರ್ಬಂಧಿಸುವ ಆಜ್ಞೆಯನ್ನು ಸೆಪ್ಟೆಂಬರ್ ೨೩ ರ ವರೆಗೂ ಹೆಚ್ಚಿಸಲಾಗಿದೆಯೆಂದು ತಿಳಿದುಬರುತ್ತದೆ.

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ನಿಜಲಿಂಗಪ್ಪನವರು ಈ ಕೆಳಗೆ ಕಾಣಿಸಿರುವಂತೆ ತಮ್ಮ ಕಾರ್ಯಕಾರಿ ಸಮಿತಿಯನ್ನು ರಚಿಸಿದ್ದಾರೆ.

ಶ್ರೀ. ಟಿ ಟಿ. ಶೆಟ್ಟಿ ಮತ್ತು ಶ್ರೀ. ಯು. ಶ್ರೀನಿವಾಸ ಮಲ್ಯರವರು ಉಪಾಧ್ಯಕ್ಷರುಗಳು. ಶ್ರೀ ಜಿ. ವಿ. ಹಳ್ಳೀಕೇರಿ ಮತ್ತು ಶ್ರೀ. ವಿ ಟಿ ಮಾಗಡಿ ಪ್ರಧಾನ ಕಾರ್ಯದರ್ಶಿಗಳು. ಮತ್ತು ಶ್ರೀಗಳಾದ ವೆಂಕಟ ರೆಡ್ಡಿ ಹುಲಿ, ಬಿ. ವೈ. ದೇಶಪಾಂಡೆ, ಜಿ. ಜೆ. ಅಂಟಳಿ. ಆರ್ ಜಿ ದುಬೇ, ಬಿ ಡಿ ಜಟ್ಟಿ, ಕೆ ಕೆ ಶೆಟ್ಟಿ, ಬಿ. ಆರ್. ಕರಕರೆ, ಮುರಿಸ್ವಾಮಿ ಪಾಟೀಲ್, ದೇವಯ್ಯ ಮುರನಾಡು, ಮತ್ತು ಬಸವೇನಪ್ಪ ಶನಿಕೊಪ್ಪ, ಈ ಹತ್ತು ಮಂದಿ ಸಮಿತಿಯ ಸದಸ್ಯರು

ಅಕ್ಕಿ ಆಮದು

ಭಾರತ ಸರ್ಕಾರವು ಈಜಿಪ್ಟಿನಿಂದ ೬೦.೦೦೦ ಟನ್ ಅಕ್ಕಿಯನ್ನು ತರಿಸಿಕೊಳ್ಳುವ ಏರ್ಪಾಟು ಪೂರೈಸಿದೆ. ಇಟಲಿಯಿಂದ ಅಕ್ಕಿ ಆಮದುಮಾಡಿಕೊಳ್ಳುವ ಪ್ರಯತ್ನವು ವಿಫಲವಾಯಿತು.

ಕಲ್ಲಿದ್ದಲಿಗೆ ಬದಲು ಅಕ್ಕಿ

ಪೂರ್ವ ಪಾಕಿಸ್ತಾನದ ಸರ್ಕಾರವು ಭಾರತ ಸರ್ಕಾರಕ್ಕೆ ೬೫,೦೦೦ ಟನ್ ಅಕ್ಕಿಯನ್ನು ಕಲ್ಲಿದ್ದಲು ಮತ್ತಿತರ ಕಚ್ಚಾಮಾಲಿಗೆ ಬದಲುಕೊಡಲು ಸಿದ್ಧವಿದೆಯೆಂದು ತಿಳಿಸಿದೆ.

ಭವಿಷ್ಯವು ನಿಜವಾಯಿತು

ಈಗ್ಯೆ ೫೦ ವರ್ಷಗಳ ಹಿಂದೆ ಇಬ್ಬರು ಜಪಾನೀ ಭೂಗರ್ಭ ಶಾಸ್ತ್ರಜ್ಞರು ವೈಷಿನ್‌ಸಿಂಗಿಗೆ ಭೇಟಿಕೊಟ್ಟು ಅಲ್ಲಿಗೆ ೩೦ ಮೈಲಿಯ ಫಾಸಲೆಯಲ್ಲಿರುವ ಮಧುಪುರ ಅರಣ್ಯವನ್ನು ಪರೀಕ್ಷಿಸಿದಾಗ, ಇನ್ನು ೫೦ ವರ್ಷಗಳಲ್ಲಿ (ಅಂದರೆ ೧೯೫೨ ನೆ. ಇಸ್ವಿಯೊಳಗೇ) ಕಾಂಗ್ರಾ ಕಣಿವೆ ಮತ್ತು ಸೂರ್ಮಾ ಕಣಿವೆಗಳ ಮಧ್ಯೆ ಭೂಮಿಯು ಅಗಾಧ ಬಿರುಕು ಬಿಟ್ಟು ಅಸ್ಸಾಂವಿನ ಭೌಗೋಳಿಕ ಲಕ್ಷಣಗಳೇ ಮಾರ್ಪಾಡಾಗುವುದೆಂದು ಭವಿಷ್ಯ ನುಡಿದಿದ್ದರು. ಗುಡುಗುಡೆಂದು ಗುಡುಗಿನ ಧ್ವನಿಯು ಆ ಮಧುಪುರಿ ಅರಣ್ಯ ಪ್ರದೇಶದಿಂದಲೇ ಕೇಳಿಬರುತ್ತಿರುವುದೂ ಮತ್ತು ಪುನಃ ಪುನಃ ಭೂಕಂಪವಾಗುತ್ತಲಿರುವುದೂ ಆ ಭವಿಷ್ಯವು ನಿಜವಾಗುವುದೆಂಬ ಸೂಚನೆಗಳೇ ಎಂದು ಹೇಳಲಾಗುತ್ತಿದೆ

ಪಂಡಿತ ನೆಹರೂ

ಪ್ರಧಾನಿ ಪಂಡಿತ ನೆಹರೂ ನಿನ್ನೆ ಗೌಹತಿಗೆ ಹಿಂತಿರುಗಿ ಪುನಃ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ತಮ್ಮ ಪ್ರವಾಸವನ್ನೆಲ್ಲಾ ಮುಗಿಸಿಕೊಂಡು ಇಂದು ದೆಹಲಿಗೆ ಹಿಂತಿರುಗಿದರು

ಪಂಜಾಬಿನಲ್ಲಿ ಪ್ರವಾಹ

ಪಂಜಾಬಿನಲ್ಲಿರುವ ರಾವಿ, ಬೀಯಾಸ್, ಸೆಟ್ಲೆಜ್ ಮುಂತಾದ ನದಿಗಳಲ್ಲೆಲ್ಲಾ ವಿಶೇಷ ಪ್ರವಾಹವು ಬಂದು ಪ್ರಾಂತ್ಯದ ಸುಮಾರು ೧೩ ಜಿಲ್ಲೆಗಳಲ್ಲಿ ವಿಶೇಷ ನಷ್ಟವುಂಟಾಗಿದೆ

ರಬ್ಬರ್ ದೋಣಿ

ಪ್ರವಾಹ ಪ್ರದೇಶಗಳಲೆಲ್ಲಾ ತೊಂದರೆಗೀಡಾದ ಜನರನ್ನು ಇತರ ಸ್ಥಳಗಳಿಗೆ ಸಾಗಿಸಲೋಸುಗ ವಿಮಾನಗಳಿಂದ ರಬ್ಬರ್ ದೋಣಿಗಳನ್ನು ನೀರು ತುಂಬಿರುವ ಪ್ರದೇಶಗಳಿಗೆ ಮೇಲಿನಿಂದ ಹಾಕುತ್ತಲಿರುವರು. ಅದರಲ್ಲಿ ಜನರನ್ನು ಸುರಕ್ಷಿತ ಸ್ಥಳಗಳಿಗೊಯ್ಯುತ್ತಲಿರುವರು

ಪತ್ರ ನಿರಾಕರಣೆ

ಅಮೆರಿಕಾ ಯುದ್ಧ ವಿಮಾನಗಳು ರಷ್ಯದ ವಿಮಾನಗಳ ಮೇಲೆ ಧಾಳಿಯನ್ನು ನಡೆಯಿಸಿದುದನ್ನು ಪ್ರತಿಭಟಿಸಿ ರಷ್ಯಾದ ವಿದೇಶಾಂಗ ಮಂತ್ರಿ ವಿಷಿನ್ಸ್ಕಿಯವರು ಕಳುಹಿಸಿದ್ದ ಪತ್ರವನ್ನು ಮಾಸ್ಕೋದಲ್ಲಿರುವ ಅಮೇರಿಕಾ ರಾಯಭಾರಿ ಸ್ವೀಕರಿಸಲು ನಿರಾಕರಿಸಿದರೆಂದು ತಿಳಿಯಬರುತ್ತದೆ.

ಮದ್ರಾಸಿನಲ್ಲಿ ಸಹಾನುಭೂತಿ ಮುಷ್ಕರ

ಬೊಂಬಾಯಿನ ಗಿರಣಿ ಕೆಲಸಗಾರರ ಮುಷ್ಕರಕ್ಕೆ ಸಹಾನುಭೂತಿ ತೋರಿಸಲು ಮದ್ರಾಸಿನ ಬಕಿಂಗ್ಹಾಂ ಮತ್ತು ಕರ್ನಾಟಕ ಮಿಲ್ಲಿನ ಕೆಲಸಗಾರರು ಒಂದು ದಿನದ ಸಹಾನುಭೂತಿ ಮುಷ್ಕರವನ್ನು ಹೂಡಿದ್ದರೆಂದು ತಿಳಿದುಬರುತ್ತದೆ.

ಗ್ರಾಮ ಪಂಚಾಯಿತಿ ಸುಧಾರಣೆ

ಮೈಸೂರು ಸಂಸ್ಥಾನದ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಬೋರ್ಡು, ಗ್ರಾಮಾಭಿವೃದ್ಧಿ ಸಮಿತಿಗಳು ಮತ್ತು ಗ್ರಾಮ ಪಂಚಾಯಿತಿಗಳ ಆಡಳಿತವನ್ನು ಸ್ಪಷ್ಟೀಕರಿಸಲು ಮೈಸೂರು ನ್ಯಾಯವಿಧಾಯಕ ಸಭೆಯ ಸ್ಪೀಕರಾದ ಶ್ರೀ. ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯು ತನ್ನ ಅಭಿಪ್ರಾಯವನ್ನು ಹೊರಗೆಡಹಿದೆ. ಆ ಸಮಿತಿಯ ಅಭಿಪ್ರಾಯಗಳ ಸಾರಾಂಶವು ಹೀಗಿದೆ :—

ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ಪ್ರದೇಶದಲ್ಲಿ ಆಡಳಿತ, ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಳಿಗೆ ಕೇಂದ್ರವಾಗಿ ಪರಿಣಮಿಸಬೇಕು. ಈ ಗುರಿ ಸಾಧಿತವಾಗಬೇಕಾದರೆ ಹಣಕಾಸಿನ ಮತ್ತು ಆಡಳಿತದ ವಿಕೇಂದ್ರೀಕರಣವಾಗಬೇಕು.

ಗ್ರಾಮ ಪಂಚಾಯಿತಿಯನ್ನು ಹೊಸದಾಗಿ ಮಾರ್ಪಡಿಸುವಲ್ಲಿ ಗ್ರಾಮ ಸಭೆ' ಎಂದು ಕರೆಯಬೇಕು. ಪ್ರಾದೇಶಿಕವಾಗಿ ಈ ಸಮಿತಿಗಳನ್ನು ಗುಂಪುಗಳಾಗಿ ವಿಂಗಡಿಸಬೇಕು. (೨,೦೦೦ ಜನ ಸಂಖ್ಯೆಗೆ ಕಮ್ಮಿಯಿಲ್ಲದೆ ಮತ್ತು ೫,೦೦೦ ಕ್ಕೆ ಮೀರದಂತೆ) ೨,೦೦೦ ಜನಕ್ಕಿಂತಲೂ ಹೆಚ್ಚಾಗಿರುವ ಹಳ್ಳಿ ತನ್ನದೇ ಆದ ಪಂಚಾಯಿತಿಯನ್ನೇರ್ಪಡಿಸಿಕೊಳ್ಳಬಹುದು. ಪ್ರತಿ ಪಂಚಾಯಿತಿಯಲ್ಲಿ ಮೂ ೧೦ ಜನಕ್ಕೆ ಕಮ್ಮಿಯಿಲ್ಲದೆ ೧೫ ಕ್ಕೆ ಮೀರದಂತೆ ಸದಸ್ಯರಿರಬೇಕು. ಪ್ರಾದೇಶಿಕ ಗ್ರಾಮಸಮಿತಿಯಲ್ಲಿ ಪ್ರತಿ ಗ್ರಾಮದಿಂದಲೂ ಒಬ್ಬ ಪ್ರತಿನಿಧಿಯಾದರೂ ಇರುವಂತೆ ಏರ್ಪಡಿಸಬೇಕು. ಈ ಸಮಿತಿಗೆ ಚುನಾವಣೆಯನ್ನು ವಯಸ್ಕರ ಮತದಾನ ಪದ್ಧತಿಯ ಮೇರೆ ನಡೆಸಬೇಕು. ಮತ್ತು ಓಟುಗಳು 'ರಹಸ್ಯ ಪೆಟ್ಟಿಗೆ' ಯ ಪದ್ಧತಿಯನ್ನನುಸರಿಸಬೇಕು. ಯಾರಿಗೆ ಬಹುಮತ ದೊರೆಯುವುದೋ ಅವರನ್ನೇ ಚುನಾಯಿತ ಪ್ರತಿನಿಧಿಯಾಗಿ ಆರಿಸಿಕೊಳ್ಳತಕ್ಕದ್ದು. ಮತ್ತು ಹಿಂದುಳಿದ ಪಂಗಡಗಳ ಪ್ರತಿನಿಧಿಯನ್ನು 'ನಾಮಿನೇಟ್' ಮಾಡಿಕೊಳ್ಳಬಹುದು.

ಹೀಗೆ ರಚಿತವಾದ ಪಂಚಾಯಿತಿಯು ನಾಲ್ಕು ವರ್ಷಗಳ ಕಾಲ ಕೆಲಸ ಮಾಡತಕ್ಕದ್ದು. ಮತ್ತು ಈ ಪಂಚಾಯಿತಿ ಕಾನೂನು ರಚಿಸುವಲ್ಲಿ ನಿರ್ದಿಷ್ಟ ವಿಶೇಷಾಧಿಕಾರವನ್ನು ಪಂಚಾಯಿತಿ ಕಾರ್ಯದರ್ಶಿಗೆ ಕೊಟ್ಟು, ಕಾರ್ಯದರ್ಶಿಯ ಕಾರ್ಯವ್ಯಾಪ್ತಿಯನ್ನು ಕಾನೂನು ಬದ್ಧಿತವಾಗಿ ಮಾಡಬೇಕು. ಮತ್ತು ಈಗಿರುವ ಆದಾಯ ತೆರಿಗೆಯಲ್ಲದೆ ಈ ಕೆಳಗೆ ಕಾಣಿಸಿರುವ ಆದಾಯ ವಿಧಾನಗಳನ್ನು ಜಾರಿಯಲ್ಲಿ ತರತಕ್ಕದ್ದು.

೧. ಆಯಾ ಪಂಚಾಯಿತಿಯು ಹಾಲಿ ವಿಧಿಸಿರುವ ಭೂಕಂದಾಯಕ್ಕೆ ಶೇಕಡ ೧೨॥ ಯಂತೆ ಹೆಚ್ಚಿಸುವುದು.

೨. ಗ್ರಾಮಾಭಿವೃದ್ಧಿ ತೆರಿಗೆ: ಪ್ರತಿ ಸಂಸಾರಕ್ಕೂ ೬ ರೂ. ಯಿಂದ ೧೦ ರೂ. ವರೆಗೆ ವಿಧಿಸುವುದು (ಹಣದ ಬದಲು ದುಡಿಮೆ ರೂಪದಲ್ಲಿ ಅದನ್ನು ತೀರಿಸುವ ಅವಕಾಶವನ್ನು ಕಲ್ಪಿಸುವುದು.)

೩. ಉದ್ಯೋಗ ತೆರಿಗೆ ೪. ಯಾತ್ರಿಕ ತೆರಿಗೆ (ಪಿಲಿಗ್ರಿಂಟ್ಯಾಕ್ಸ್)

೫. ಸಂತೆಗಳ ಮೇಲೆ, ಜಾತ್ರೆಗಳ ಮೇಲೆ ಮತ್ತು ಮನರಂಜಕಗಳ ಮೇಲೆ ತೆರಿಗೆ ವಿಧಿಸುವುದು.

೬. ಮೀನು ಹಿಡಿಯುವುದರ ಮೇಲೆ ತೆರಿಗೆ, ೭. ಅಮರಾಯಿ ಆದಾಯ. ೮. ಇಟ್ಟಿಗೆಗೂಡು, ಸುಣ್ಣದ ಗೂಡು ಮತ್ತಿತರ ಕ್ವಾರಿಗಳಿಂದ ವಸೂಲುಮಾಡುವ 'ರಾಯಲ್ಟಿ.'

ಅಂತೆಯೇ ಜಿಲ್ಲಾ ಬೋರ್ಡನ್ನು ಜಿಲ್ಲಾ ಸಮಿತಿಯೆಂದು ಕರೆಯುವುದು. ಪ್ರತಿ ತಾಲ್ಲೂಕಿನ ೨೫,೦೦೦ ಜನಕ್ಕೆ ಒಬ್ಬರಂತೆ ಈ ಸಮಿತಿಯಲ್ಲಿ ಪ್ರಾತಿನಿಧ್ಯವಿರತಕ್ಕದ್ದು. ಶಾಸನ ಸಭೆಯ ಸದಸ್ಯರೆಲ್ಲ ಆಯಾ ಜಿಲ್ಲಾ ಸಮಿತಿಯಲ್ಲಿ (ಓಟಿನ ಅಧಿಕಾರವಿಲ್ಲದೇ) ಸದಸ್ಯರಾಗಿರತಕ್ಕದ್ದು. ಅಂತೆಯೇ ಆಯಾ ಜಿಲ್ಲಾ ರೆವಿನ್ಯೂ ಅಧಿಕಾರಿಗಳೂ ಸಹ (ಓಟಿನ ಹಕ್ಕಿಲ್ಲದೆ) ಜಿಲ್ಲಾ ಸಮಿತಿಯಲ್ಲಿರತಕ್ಕದ್ದು. ಜಿಲ್ಲಾ ಸಮಿತಿಯ ಸದಸ್ಯನಾಗಲು ಕನಿಷ್ಟ ೨೫ ವರ್ಷಗಳಾದರೂ ಆಗಿರಬೇಕು. ಜಿಲ್ಲಾ ಸಮಿತಿಯ ಅವಧಿಯು ಪಂಚಾಯಿತಿಯ ಅವಧಿಯಷ್ಟೇ ಇರುವುದಲ್ಲದೆ ಅದರ ವರ್ಷಾವಧಿಯನ್ನೇ ಅನುಸರಿಸಬೇಕು. ಈ ಸಮಿತಿಗೆ ಹಾಲಿ ಇರುವ ಆದಾಯ ಬಿಟ್ಟು, ಸರ್ಕಾರವೂ ಮತ್ತು ಈ ಜಿಲ್ಲಾಸಮಿತಿಯೂ ಜಾಯಿಂಟಾಗಿ ರೆವಿನ್ಯೂ ಮತ್ತು ಎಕ್ಸೈಜ್ ಸೆಸ್ಸುಗಳಲ್ಲಿನ (ವಸೂಲಿಮಾಡುವ ಖರ್ಚು ಜಾತಾ) ಪಾಲನ್ನು ನಿರ್ಧರಿಸತಕ್ಕದ್ದು. ಸಂಸ್ಥಾನಾದ್ಯಂತ ಒಟ್ಟು ಭೂಕಂದಾಯದ 1/8 ಪಾಲನ್ನು ಜಿಲ್ಲಾ ಸಮಿತಿಗಳಿಗಾಗಿ ಮೀಸಲಾಗಿಡತಕ್ಕದ್ದು.

ಈ ಸಂಸ್ಥಾನಾದ್ಯಂತ ಏರ್ಪಡುವ ಜಿಲ್ಲಾ ಸಮಿತಿಗಳ ಆಡಳಿತವನ್ನು ನಡೆಸಲು ಒಬ್ಬ ಸ್ಥಳೀಯ ಸಂಸ್ಥೆಗಳ ಕಮೀಷನರನ್ನು ನೇಮಿಸುವುದು. ಮತ್ತು ಈ ಕಮೀಷನರು ಡೆಪ್ಯುಟಿ ಕಮೀಷನರ್ ಮತ್ತು ರೆವಿನ್ಯೂ ಸಬ್ ಡಿವಿಜನ್ ಆಫೀಸರ ಮೂಲಕ ಪಂಚಾಯಿತಿ ಕಾರ್ಯಾಡಳಿತವನ್ನು ನಡೆಸತಕ್ಕದ್ದು. ಜಿಲ್ಲಾ ಸಮಿತಿಯ ಆಡಳಿತವು ಈ ಕಮೀಷನರ ನೇರವಾದ ಆಡಳಿತಕ್ಕೆ ಒಳಪಟ್ಟಿರತಕ್ಕದ್ದು.

ಈ ಮೇಲಿನ ಸುಧಾರಣೆಗಳಿಂದ ಸ್ಥಳೀಯ ಸಂಸ್ಥೆಗಳಲ್ಲಿ ನವಚೇತನವುಂಟಾಗಿ, ಸ್ಥಳೀಯಾಡಳಿತವು ಯಶಸ್ವಿಯಾಗಿ ನಡೆದು, ಅಲ್ಪ ಖರ್ಚಿನಲ್ಲಿಯೇ ಗ್ರಾಮಾಭಿವೃದ್ಧಿಯೂ ಯಶಸ್ವಿಯಾಗಿ ಜರುಗುವುದೆಂದು ಆಶಿಸುತ್ತದೆ. ಆದರೆ ಈ ಆಡಳಿತದಲ್ಲಿ ದಕ್ಷತೆಯೂ ಮತ್ತು ಶ್ರದ್ಧೆಯೂ ಅವಶ್ಯವೆಂಬುದನ್ನೂ ಗಮನದಲ್ಲಿಟ್ಟುಕೊಂಡಿದೆ. ಸಾಕಷ್ಟು ಮುಂಜಾಗ್ರತೆಯಿಂದ ಕೆಲಸ ಮಾಡಿದಲ್ಲಿ ಮೇಲಿನ ಸುಧಾರಣೆ ಜನರಿಗೆ ನಿಜವಾಗಿಯೂ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲವೆಂದು ಈ ಗ್ರಾಮಾಭ್ಯುದಯ ಸಲಹಾಸಮಿತಿಯ ನಂಬಿಕೆ.

ಅಮೆರಿಕನರ ಸಾವು

ಕೊರಿಯಾ ಯುದ್ಧರಂಗದಲ್ಲಿ ೮,೯೦೦ ಅಮೆರಿಕನರು ಇದುವರೆಗೂ ಸತ್ತಿದ್ದಾರೆಂದು ಜನರಲ್ ಮೆಕಾರ್ಥರವರ ಅಧಿಕೃತ ಪ್ರಕಟಣೆಯು ತಿಳಿಸುತ್ತದೆ.

ಚುನಾವಣೆ

ಭಾರತಾದ್ಯಂತ ಕೇಂದ್ರ ಮತ್ತು ಪ್ರಾಂತ್ರೀಯ ಚುನಾವಣೆಗಳೆಲ್ಲ ಏಕಕಾಲದಲ್ಲಿಯೇ ನಡೆಯುವುದಕ್ಕೆ ಸರ್ಕಾರ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಲಿರುವರು.

ತೀರ್ಪು

ಹೈದರಾಬಾದಿನ ವಿಶೇಷ ಕೋರ್ಟಿನಲ್ಲಿ ಜರುಗಿದ ಓಬಿದುಲ್ಲಾ ಬೀಬಿನಗರದ ಖೂನಿ ಮೊಕದ್ದಮೆಯ ತೀರ್ಪು ಸೋಮವಾರಕ್ಕಾಗುವದೆಂದು ತಿಳಿಯಬರುತ್ತದೆ.

ಭಾರತಕ್ಕೆ ಯುದ್ಧ ವಿಮಾನಗಳು

ಬ್ರಿಟನ್ನಿನಿಂದ ಭಾರತ ಕೊಂಡುಕೊಂಡಿರುವ ೩೧ ಯುದ್ಧ ವಿಮಾನಗಳು ಕೈರೊ ಮಾರ್ಗವಾಗಿ ಭಾರತಕ್ಕೆ ಬರುತ್ತಲಿವೆ.

ರೇಡಿಯೋ

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೮ ಶುಕ್ರವಾರ

ಬೆಳಗ್ಗೆ ೭-೦ ಉದಯಗಾನ ಕಾರ್ಯಕ್ರಮ ವಿವರಣೆ ೭-೫ ಚಿತ್ರಜಗತ್ (ರೆ) ೭-೨೫ ದೇವಿಭಜನ (ಎ. ವಿ. ನಾರಾಯಣಪ್ಪ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಸಂಗೀತ (ವೈ. ಟಿ. ಕೃಷ್ಣಪ್ಪ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಜಲತರಂಗ್ ೨-೦ ನಿಮ್ಮ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ, (ವೈ. ಟಿ. ಕೃಷ್ಣಪ್ಪ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಾಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೆ ೭-೫ ಹಿಂದೀ ಕಾರ್ಯಕ್ರಮ ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ-ನಮ್ಮ ಸಂವಿಧಾನ (ಕಾರ್ಯಾಂಗ ಮತ್ತು ಶಾಸನಾಂಗ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದಸುಧಾ (ರೆ) ೮-೧೫ ಹಿಂದೂಸ್ಥಾನಿ ಸಂಗೀತ ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವೃಂದ ಸಂಗೀತ ೧೦-೦ ಮುಕ್ತಾಯ.

ಪಾಕಿಸ್ಥಾನಕ್ಕೆ ಹೊಸ ದಂಡನಾಯಕ

ಮೇಜರ್-ಜನರಲ್ ಮಹಮ್ಮದ್ ಅಬೀದ್‌ಖಾನ್‌ರವರನ್ನು ಪಾಕಿಸ್ಥಾನದಲ್ಲಿ ದಂಡನಾಯಕರನ್ನಾಗಿ ನೇಮಿಸಲಾಗಿದೆ. ದಂಡನಾಯಕರಾಗಿ ನೇಮಕವಾಗಿರುವ ಮಹಮ್ಮದೀಯರಲ್ಲಿ ಈವರೇ ಮೊದಲನೆಯವರು.

ಸಂಪಾದಕರ ಸಮ್ಮೇಳನ

ಭಾರತ ನಾನಾ ಪತ್ರಿಕೆಗಳ ಸಂಪಾದಕರ ಸಮ್ಮೇಳನವು ಶ್ರೀ ಸಿ. ಆರ್. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ಪ್ರಾರಂಭವಾಯಿತು. ವಾರ್ತಾ ಶಾಖಾ ಮಂತ್ರಿ ಶ್ರೀ ದಿವಾಕರವರು ಇಂದು ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ರಣಜಿತ್ ಟಾಕೀಸ್
ತಾ॥ 8-9-50 ರಿಂದ 2ನೇ ವಾರ
ದಿನವಹಿ 3 ಆಟಗಳು
ರೂಮಾಲ್ ★ ROOMAL
ಪಾತ್ರ :- ನರ್ಗೀಸ್, ರೆಹಮಾನ್, ಜೈರಾಜ್, ಜೀವನ್, ಕುಕ್ಕೂ.
ಬೆಳಗಿನ ಪ್ರದರ್ಶನ
ಮೂರು ದಿನಗಳು ಮಾತ್ರ
ಕುಸ್ವಾರ ಬಾಪ್
ಪಾತ್ರ : ಕಿಶೋರ್ ಸಾಹು

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಚ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

★ಮೆಡಿಕಲ್ ಕಾಲೇಜು ಅಮರಕೀರ್ತಿ ಗಳಿಸಲಿ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೯—೧೯೫೦ ನೇ ಶುಕ್ರವಾರ [ಸಂಚಿಕೆ ೨೧

ಈ ಬೆಳಿಗ್ಗೆ ೧೦ ಗಂಟೆಗೆ ಮೈಸೂರು ಮೆಡಿಕಲ್ ಕಾಲೇಜಿನ ರಜತಮಹೋತ್ಸವ ಸಮಾರಂಭದ ಉದ್ಘಾಟನೆಯ ಸಂದರ್ಭದಲ್ಲಿ ಮೈಸೂರು ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಜಿ.ಸಿ.ಬಿ.ಜಿ.ಸಿ.ಎಸ್.ಐ. ರವರು ಮಾಡಿದ ಭಾಷಣ.

ಮೈಸೂರು ಮೆಡಿಕಲ್ ಕಾಲೇಜಿನ ರಜತಮಹೋತ್ಸವ ಸಮಿತಿಯ ಅಧ್ಯಕ್ಷರೇ, ಸದಸ್ಯರೇ, ಮಹಿಳೆಯರೇ ಮತ್ತು ಮಹನೀಯರೇ,

ಅಸ್ಸಾಮಿನಲ್ಲಿ ಪುನಃ ಭೂಕಂಪ

ಅಸ್ಸಾಮಿನ ಮಾರ್ಘರಿಟಾ ಎಂಬ ಪ್ರದೇಶದಲ್ಲಿ ಪುನಃ ನಾಲ್ಕುಬಾರಿ ಭೂಕಂಪವಾಯಿತೆಂದು ಅಲ್ಲಿನ ಜನರು ಗಾಬರಿಗೊಂಡಿದ್ದಾರೆಂದು ತಿಳಿಯ ಬರುತ್ತದೆ.

ಬ್ರಿಟನ್ನಿಂದ ಭಾರತಕ್ಕೆ

ಭಾರತ ಸರ್ಕಾರವು ೨೫,೦೦೦ ಟನ್ ಸಕ್ಕರೆಯನ್ನು ಬ್ರಿಟನ್ನಿಂದ ಆಮದು ಮಾಡಲು ಏರ್ಪಡಿಸಿದೆ. ಇದೇ ಪ್ರಮಾಣವು ಇನ್ನು ಕೆಲವು ತಿಂಗಳಲ್ಲಿ ಭಾರತಕ್ಕೆ ತಲುಪುವುದು.

ಚಕ್ರಬಂಧಸ್ಪರ್ಧೆ ನಿಲ್ಲಿಸಿ

ಬೊಂಬಾಯಿ ಪ್ರಾಂತ್ಯದ ಹಲವು ವೃತ್ತಪತ್ರಿಕೆಗಳಲ್ಲಿ ಚಕ್ರಬಂಧಸ್ಪರ್ಧೆಯ ಹಾವಳಿಯು ಬಹಳವಾಗಿರುವುದರಿಂದ ಪ್ರಾಂತೀಯ ಪತ್ರಿಕೋದ್ಯೋಗಿ ಸಂಘದಲ್ಲಿ ಈ ಸ್ಪರ್ಧೆಯನ್ನೇ ರದ್ದುಗೊಳಿಸಬೇಕೆಂದು ಬೊಂಬಾಯಿ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಮಾಡಿದ್ದಾರೆ

ರಾಷ್ಟ್ರಪತಿ ರಾಜೇಂದ್ರರು

ಭಾರತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಅಕ್ಟೋಬರ್ ೧೪ನೇ ತಾರೀಕು ದೆಹಲಿಯಿಂದ ತೆರಳಿ ಗುಜರಾತಿನ ಅಹಮದಾಬಾದ್, ಮಹಮದಾಬಾದ್, ಬಾರ್ದೋಲಿ ಮತ್ತು ದೊಹದ್‌ಗಳ ಪ್ರವಾಸವನ್ನು ೪ ದಿನಗಳಲ್ಲಿ ಮುಗಿಸಿಕೊಂಡು, ವಾಪಸ್ಸಾಗುವಾಗ ಸೂರತ್ತಿಗೂ ಭೇಟಿ ಕೊಡಲಿರುವರು.

ಅಕ್ಕಿ ಸಂಶೋಧನೆ

ಒರಿಸ್ಸಾದಲ್ಲಿರುವ ಕೇಂದ್ರ ಅಕ್ಕಿ ಸಂಶೋಧನಾ ಸಂಸ್ಥೆಯು ಚೀಣಾದಿಂದ ವಿಶೇಷತರಹದ ಭತ್ತವನ್ನು ತಂದು ಬೆಳೆದು ಸಂಶೋಧನೆ ನಡೆಸಿದುದರ ಫಲವಾಗಿ ಶೀಘ್ರವಾಗಿಯೂ ಮತ್ತು ಫಲವತ್ತವಾಗಿಯೂ ಬೆಳೆಯುವ ಎರಡು ಬಗೆಯ ಭತ್ತದ ಪೈರನ್ನು ಕಂಡು ಹಿಡಿದಿದ್ದಾರೆ. ಇದೂ ಅಲ್ಲದೆ ವಿವಿಧ ಗೊಬ್ಬರಗಳ ಬಳಕೆಯಿಂದ ಪೈರು ಹೇಗೆ ಬೆಳೆಯುವುದೆಂಬುದನ್ನೂ ಭತ್ತದ ಪೈರಿಗೆ ತಗಲುವ ಜಾಡ್ಯಗಳ ವಿಚಾರದಲ್ಲಿಯೂ ಮತ್ತು ಭತ್ತದ ಪೈರನ್ನು ನಾಶಪಡಿಸುವ ಚಿಟ್ಟೆಗಳನ್ನು ಯಾವ ಬಗೆಯಿಂದ ವಿನಾಶಗೊಳಿಸಬೇಕೆಂಬ ವಿಷಯದಲ್ಲಿಯೂ ಬಹು ಉಪಯುಕ್ತವಾದ ಸಂಶೋಧನೆಗಳನ್ನು ನಡೆಸಿದ್ದಾರೆ.

ಕೇಂದ್ರ ಸರ್ಕಾರದ ಸಹಾಯ

ಮೈಸೂರು ಸಂಸ್ಥಾನದ ಆರ್ಥಿಕ ವಿಲೀನೀಕರಣ ಮತ್ತು ಮಹದ್ಯೋಜನಗಳಿಗೆ ಕೇಂದ್ರದಿಂದ ಸಹಾಯ ಪಡೆಯುವ ವಿಷಯವಾಗಿ ಮೈಸೂರು ಹಣಕಾಸಿನ ಸಚಿವ ಶ್ರೀ ಎಚ್. ಸಿ. ದಾಸಪ್ಪನವರು ಸಂಸ್ಥಾನಗಳ ಸಚಿವ ಶಾಖೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೇನನ್ನರೊಂದಿಗೆ ಚರ್ಚಿಸಿದರು. ಪ್ರಥಮ ೫ ವರ್ಷಗಳಲ್ಲಿ ಸಂಸ್ಥಾನದ ಬಜೆಟ್ಟಿನಲ್ಲಿ ಖೋತಾವಾಗುವ ಮೊಬಲಗನ್ನು ಕೇಂದ್ರವು ಭರ್ತಿಮಾಡಿಕೊಡುವ ವಿಚಾರವಾಗಿಯೂ ಮತ್ತು ಹಾಲಿ ಜಾರಿಯಲ್ಲಿರತಕ್ಕ ಭಾರಿ ಯೋಜನೆಯನ್ನು ನಿಲ್ಲಿಸದೇ ಮುಂದುವರೆಸುವ ವಿಚಾರವಾಗಿಯೂ ಮತ್ತು ಸಂಸ್ಥಾನದ ಬೇಡಿಕೆಗಳನ್ನು ಚರ್ಚಿಸಿದರೆಂದು ತಿಳಿದು ಬರುತ್ತದೆ

ಭಾವಚಿತ್ರ ಅನಾವರಣ

ಇಂದು ಸಂಜೆ ೬-೩೦ ಗಂಟೆಗೆ ಮೈಸೂರು ಮುನಿಸಿಪಲ್ ಆಫೀಸಿನಲ್ಲಿ ಪೌರಸಭಾ ಸದಸ್ಯ ಶ್ರೀ ಟಿ. ವೆಂಕಟರಮಣಯ್ಯನವರು ದಾನಮಾಡಿರುವ ಡಾ|| ಬಾಬು ರಾಜೇಂದ್ರಪ್ರಸಾದರವರ ಭಾವಚಿತ್ರ ಅನಾವರಣೋತ್ಸವವನ್ನು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನೆರವೇರಿಸುವರು.

ಬೊಂಬಾಯಿನಲ್ಲಿ ಕಾರ್ಮಿಕರು

ಬೊಂಬಾಯಿನ ಮುಷ್ಕರ ಪರಿಸ್ಥಿತಿಯು ಸುಧಾರಿಸಿ, ಇಂದು ೨೦ ಗಿರಣಿಗಳು ಪೂರ್ಣ ಕೆಲಸ ಮಾಡುತ್ತಿವೆಯೆಂದೂ ಮತ್ತು ೧೬,೬೦೦ ಕಾರ್ಮಿಕರು ಕೆಲಸಕ್ಕೆ ಮರಳಿರುವರೆಂದು ತಿಳಿದು ಬಂದಿದೆ.

ಆನೆಗೆ ಬದಲು ಆರ್ಕೆಸ್ಟ್ರಾ

ಪ್ರಧಾನಿ ಪಂಡಿತ ನೆಹರೂರವರು ಜಪಾನಿನ ಮಕ್ಕಳ ಕೋರಿಕೆಯಂತೆ ಭಾರತದಿಂದ ಆನೆಯನ್ನು ಕಳುಹಿಸಿದ್ದಕ್ಕೆ ಕೃತಜ್ಞತೆ ಸೂಚಿಸಿ, ಭಾರತಕ್ಕೆ ಪ್ರತ್ಯೇಕವಾಗಿ ತಯಾರಿಸಿದ ಜಪಾನೀ ಆರ್ಕೆಸ್ಟ್ರಾವನ್ನು ಕಳುಹಿಸಿಕೊಟ್ಟಿದ್ದಾರೆ. ಇದನ್ನು ಭಾರತಾದ್ಯಂತ ಪ್ರದರ್ಶಿಸಲಾಗುವುದು.

ಕೆನಡಾದಿಂದ ಭಾರತಕ್ಕೆ

ಕೆನಡಾದ ಪ್ರಧಾನಿಯವರು, ಭಾರತ ಪ್ರಧಾನಿ ಪಂ|| ನೆಹರೂರವರು ಕೆನಡಾಕ್ಕೆ ಭೇಟಿಯಿತ್ತುದದನ್ನು ಗೌರವಿಸುವ ಸಲುವಾಗಿ, ಭಾರತಕ್ಕೆ ಭೇಟಿಕೊಟ್ಟು ತಮ್ಮ ಕೃತಜ್ಞತೆಯನ್ನು ಸೂಚಿಸುವವರಿದ್ದಾರೆ.

ಈ ರಜತ ಮಹೋತ್ಸವ ಸಮಾರಂಭದ ಉದ್ಘಾಟನೆ ನಡೆಸಲು ನಮಗೆ ಸಂತೋಷವಾಗಿದೆ. ಪ್ರಿನ್ಸಿಪಾಲರು ನಮಗೆ ಒಪ್ಪಿಸಿದ ಬಿನ್ನವತ್ತಳೆಯು ಬಹು ಸ್ವಾರಸ್ಯವಾಗಿ ಈ ಕಾಲೇಜು ೧೯೨೪ ನೇ ಇಸ್ವಿಯಲ್ಲಿ ಸಣ್ಣದಾಗಿ ಆರಂಭಿತವಾದಾಗಿನಿಂದ ಈಗಿನ ಬೃಹದಾಕಾರವನ್ನು ಹೇಗೆ ತಾಳಿತೆಂಬುದನ್ನೂ ಮತ್ತು ಈ ರಜತಮಹೋತ್ಸವದ ಸಂವತ್ಸರದಲ್ಲಿಯೇ ಇದರ ಚರಿತ್ರಾರ್ಹವಾದ ಘಟನೆಯೂ ಸಮ್ಮಿಳಿತವಾಗಿದೆಯೆಂಬುದನ್ನೂ, ಅಂದರೆ, ಅಖಿಲಭಾರತೀಯ ವೈದ್ಯಸಮಿತಿಯು ಈ ಕಾಲೇಜಿನ ವೈದ್ಯಪದವಿಯನ್ನು ಅಂಗೀಕರಿಸಿದುದನ್ನೂ, ಉಲ್ಲೇಖಿಸುವುದಾಗಿದೆ. ಈ ಸಮಾರಂಭದ ಸಂತೋಷ ಮತ್ತು ಧನ್ಯತೆಗೆ ಇದೂ ಹೆಚ್ಚಿನ ಕಳೆ ಕೂಡಿಸುವುದಾಗಿದೆ. ಕಾಲೋಚಿತವಾದ ಉಪಯುಕ್ತ ಕಾರ್ಯ, "ಧೈರ್ಯದಿಂದ ಆರಂಭಿಸಿದ ಮತ್ತು ಅಮೋಘವಾಗಿ ನಡೆಸಿದ" ಕಾರ್ಯಕ್ಕಾಗಿ, ಯಾವ ಸಂಸ್ಥೆಯೇ ಯಾಗಲಿ ನ್ಯಾಯವಾಗಿ ಹೆಮ್ಮೆ ಪಡಬೇಕಾದುದೇ. ಮತ್ತು ಈ ಸಂಸ್ಥೆಯನ್ನು ಭಾರತೀಯ ವೈದ್ಯಸಮಿತಿಯು ಅನುಮೋದಿಸಿರುವುದು, ಸಂಸ್ಥೆಯ ಸಂಚಾಲಕರನ್ನು ಮತ್ತು ಕೆಲಸಗಾರರನ್ನೂ ಇಮ್ಮಡಿಸಿ ವಂದಿಸುವಂತೆ ಮಾಡಿದೆ. ಈ ಸಂತೋಷ ಸಮಾರಂಭದಲ್ಲಿ ತಾವು ಹೆಮ್ಮೆಯಿಂದ ನಮೂದಿಸಿರುವ ಎಲ್ಲರನ್ನೂ ಕೃತಜ್ಞತೆಯಿಂದ ನೆನೆಯಬೇಕಾದುದು ನಮ್ಮ ಕರ್ತವ್ಯ; ಕರ್ನಲ್ ಸ್ಮಿತ್, ಕರ್ನಲ್ ಮೆಕ್‌ಗನ್, ಮತ್ತು ಡಾ|| ಆರ್ಮುಗಂ ಮೊದಲಿಯಾರಂಥ ಮಹನೀಯರು ನಮ್ಮ ವೈದ್ಯಶಾಲೆಯ ಕೀರ್ತಿಯನ್ನು ಬೆಳೆಸಿದರಲ್ಲದೆ ಅದರ ಮರ್ಯಾದೆಯನ್ನು ತಂದೆಯಂತೆ ಪರಿಪಾಲಿಸಿದರು. ಅವರ ನಿಸ್ವಾರ್ಥ ಮತ್ತು ಅಮೋಘ ಸೇವೆಗಾಗಿ ಅವರನ್ನು ಗೌರವಿಸುವುದಲ್ಲದೆ, ಅವರು ನಮಗೆ ಹಾಕಿಕೊಟ್ಟ ಮೇಲ್ಪಂಕ್ತಿಯನ್ನನುಸರಿಸಿ ಇನ್ನೂ ಹೆಚ್ಚು ಸೇವೆ ಸಲ್ಲಿಸುವಂತೆ ದೃಢಮನಸ್ಕರಾಗೋಣ

ಮೆಡಿಕಲ್ ಸ್ಕೂಲು ಆರಂಭವಾದಾಗ ವಿದ್ಯಾರ್ಥಿಗಳಿಗೆ ಎಲ್ಲ ವಿಧ ಸೌಕರ್ಯಗಳನ್ನೊದಗಿಸಿ ಅವರು ಸ್ಕೂಲು ಸೇರಲು ಒತ್ತಾಯಪಡಿಸಿದ ಕಾಲದಿಂದ ಇದುವರೆಗೆ ೧೩೩೭ ವಿದ್ಯಾರ್ಥಿಗಳು, ೪೧ ವಿದ್ಯಾರ್ಥಿನಿಯರೂ ಸೇರಿ, ಈಗ ಪದವೀಧರರಾಗಿರುವುದನ್ನೂ ಮತ್ತು ಈಗಿನ ಒಟ್ಟು ವಿದ್ಯಾರ್ಥಿ ಸಂಖ್ಯೆಯು ಆ ಮೊತ್ತವನ್ನೇ ಮೀರಿರುವುದನ್ನೂ ಕೇಳಿ ನಮಗೆ ಆನಂದವಾಗಿದೆ. ಹಿಂದೆ ಪ್ರತಿ ವರ್ಷ ಸೇರುವ ವಿದ್ಯಾರ್ಥಿಗಳ ಸಂಖ್ಯೆ ೩೦ರಷ್ಟೇ ಇದ್ದುದೂ ಮತ್ತು ಈ ವರ್ಷ ಅದರ ಮೂರರಷ್ಟಾಗಿರುವುದೂ ತಿಳಿದು ನಮಗೆ ಹರ್ಷವಾಯಿತು. ಇದೆಲ್ಲವೂ ನಮ್ಮ ಭವಿಷ್ಯ ಸುಖದ ಸೂಚನೆಗಳು, ಯೇಕೆಂದರೆ ಈಗಿರುವ ವೈದ್ಯರ ಸಂಖ್ಯೆಗಿಂತ ಅಧಿಕವಾಗಿ ನಮ್ಮ ದೇಶಕ್ಕೆ ಅವಶ್ಯಕವಾಗಿದೆ. ಸಿವಿಲ್ ಮತ್ತು ಸೈನ್ಯದಲ್ಲಿ ಅವರೆಲ್ಲರಿಗೂ ಕೆಲಸ ದೊರಕುವ ಅವಕಾಶವಿದೆ—ವೈದ್ಯರು ಹೆಚ್ಚಿದಷ್ಟೂ ಒಳ್ಳೆಯದೇ.

ಭಾರತೀಯ ಸೈನ್ಯ ವೈದ್ಯಶಾಖೆಯ ಮುಖ್ಯಾಧಿಕಾರಿಗಳು ನಮ್ಮ ಕಾಲೇಜಿನ ವೈದ್ಯರ ವಿಷಯದಲ್ಲಿ ಸದಭಿಪ್ರಾಯವನ್ನು ವ್ಯಕ್ತಪಡಿಸಿದುದನ್ನು ಕಂಡು ನಮಗೆ ಅಪರಿಮಿತ ಸಂತೋಷವಾಗಿದೆ

ತಮ್ಮ ಬಿನ್ನವತ್ತಳೆಯಿಂದ ತಾವು ಗಳಿಸಿದ ಕೀರ್ತಿಗೇ ಸಂತುಷ್ಟರಾಗದೆ, ಮುಂದೆ ಇನ್ನೂ ಹೆಚ್ಚಿನ ಕಾರ್ಯವಿದೆಯೆಂಬುದನ್ನು ಅರಿತಿರುವುದ ಕಂಡು ನಾವು ಸಂತೋಷಿಸುತ್ತೇವೆ. ಸರಿಯಾದ ವಿದ್ಯಾರ್ಥಿನಿಲಯ ಮತ್ತು ಶಿಕ್ಷಣ ಸೌಲಭ್ಯ ಮತ್ತು ಇನ್ನೂ ಹೆಚ್ಚಿನ ಪ್ರಯೋಗಶಾಲೋಪಕರಣಗಳು ಮತ್ತು ಆಟದ ಬಯಲು ವಿಷಯದಲ್ಲಿ ತಾವು ಸೂಚಿಸಿರುವ ಆಶಯಗಳು ಶೀಘ್ರದಲ್ಲಿಯೇ ಏರ್ಪಡುವುದೆಂದು ಆಶಿಸುತ್ತೇವೆ.

ರಜತ ಮಹೋತ್ಸವವನ್ನು ಚಿರಸ್ಮರಣೀಯವಾಗಿರಿಸಲು ಒಂದು ಬಹುಮಾನವನ್ನು ಏರ್ಪಡಿಸಬೇಕೆಂಬ ಸೂಚನೆಯನ್ನು ಸ್ವಾಗತಿಸುತ್ತೇವೆ. ಅಂತೆಯೇ ಸಂಶೋಧನಾ ಕ್ಷೇತ್ರದಲ್ಲಿಯೂ ಚೇತನಗೊಳಿಸಲು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಬಹುದೇ? ಈಗ್ಯೆ ೧೨ ವರ್ಷಗಳ ಹಿಂದೆ ಶ್ರೀ ಜಯದೇವ ಮುರುಘರಾಜೇಂದ್ರ ಪ್ಯಾಥಾಲಜಿಕಲ್ ಲ್ಯಾಬೂರೆಟರಿಯ ಅಸ್ಥಿಭಾರ ಸಮಾರಂಭಕಾಲದಲ್ಲಿ ನಮ್ಮ ಘನ ಕೀರ್ತಿಶೇಷರಾದ ದೊಡ್ಡಪ್ಪನವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ತಮ್ಮ ನೆನಪಿಗೆ ತರಲಿಚ್ಛಿಸುತ್ತೇವೆ:—

"ಈ ದಾನದಿಂದ ಫಲಹೊಂದುವ ಯುವಕರು ಮತ್ತು ಈ ಪ್ರಯೋಗ ಶಾಲೆಯಲ್ಲಿ ಅಭ್ಯಾಸಮಾಡುವವರು ಭಾರತದ ಮೆಡಿಕಲ್ ಕಾಲೇಜುಗಳಲೆಲ್ಲಾ ಮೈಸೂರು ಮೆಡಿಕಲ್ ಕಾಲೇಜು ಅತ್ಯುತ್ತಮವೆಂದು ಕೀರ್ತಿಗಳಿಸುವುದೇ ಅಲ್ಲದೆ, ಮಾನವತೆಗೇ ಅತ್ಯುಪಯುಕ್ತವಾದ ಹೆಚ್ಚಿನ ಸಂಶೋಧನೆಗಳನ್ನೂ ಮತ್ತು ಹೊಸ ಹೊಸ ವಿಧಾನಗಳನ್ನೂ ಕಂಡುಹಿಡಿದು ಈ ಪ್ರಯೋಗ ಶಾಲೆಯನ್ನು ಸದುಪಯೋಗಪಡಿಸಿಕೊಳ್ಳುವರೆಂದು ಆಶಿಸುತ್ತೇವೆ."

ನಮ್ಮ ದೇಶವು ಇತರ ವಿಜ್ಞಾನ ಶಾಸ್ತ್ರಗಳಲ್ಲಿ (ಭೌತಿಕಶಾಸ್ತ್ರ ಮತ್ತು ರಸಾಯನಿಕಶಾಸ್ತ್ರ) ಅಮೌಲ್ಯ ಸಂಶೋಧನೆಗಳನ್ನು ನಡೆಸಿದೆ. ಮತ್ತು ಈ ಶಾಸ್ತ್ರಗಳಲ್ಲಿ ಮಾನವನ ಜ್ಞಾನ ಬಂಢಾರಕ್ಕೆ ನಮ್ಮನಾಡು ಸಲ್ಲಿಸಿರುವುದನ್ನು ಪ್ರಪಂಚಾದ್ಯಂತ ಹೊಗಳಿದ್ದಾರೆ. ಆದರೆ ಔಷಧಿ ವೈದ್ಯ ವಿಚಾರದಲ್ಲಿಯೂ ಅದರಲ್ಲಿಯೂ ಶಸ್ತ್ರ ವೈದ್ಯ ವಿಚಾರದಲ್ಲಿ ಕೆಲವು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ನಾವು ಬಹಳ ಹಿಂದುಳಿದಿದ್ದೇವೆ; ಆದರೆ 'ಕ್ಯಾನ್ಸರ್' ಮುಂತಾದ ಕೈಗೆ ದಕ್ಕದ ರೋಗದ ವಿಚಾರದಲ್ಲಿ ಇತರರಂತೆಯೇ ನಾವು ಕಗ್ಗತ್ತಲೆಯಲ್ಲಿ ತಡವರಿಸುತ್ತಿದ್ದೇವೆ ನಮ್ಮ ದೇಶದಲ್ಲಿ ಈಗ್ಯೆ ಕೆಲವು ವರ್ಷಗಳಿಂದ ಆಧುನಿಕ ವೈದ್ಯವು ಶಾಸ್ತ್ರೀಯವಾಗಿ ಅಭ್ಯಸಿಸಲ್ಪಟ್ಟು ಮುಂದೊರೆಯುತ್ತಿದೆ ದೊಡ್ಡನಗರಗಳಲ್ಲಿಯೂ ಮತ್ತು ಟವರ್ಗಳಲ್ಲಿಯೂ ವೈದಕೀಯ ಸಹಾಯವು ದೊರೆಯುವಂತಾಗಿದ್ದರೂ, ಗ್ರಾಮ ಪ್ರದೇಶಗಳಲ್ಲಿ ಸುಶಿಕ್ಷಿತ ವೈದ್ಯರ ಅವಶ್ಯಕತೆಯು ಅಗತ್ಯವಾಗಿಯೇ ಇದೆ.

ತಮ್ಮ ಭಾಷಣವನ್ನು ಮುಂದೊರೆಸಿ ರೋಗ ನಿವಾರಣೆಯೊಂದೇ ವೈದ್ಯ ಶಾಸ್ತ್ರದ ಗುರಿಯಲ್ಲದೆ ಮುಂಜಾಗ್ರತೆಯಾಗಿ ರೋಗಗಳು ಬಾರದಂತೆ ತಡೆಗಟ್ಟುವುದೂ ಮತ್ತು ಮಾನವನ ಜೀವಾವಧಿಯನ್ನು ಹೆಚ್ಚಿಸುವುದೂ ವೈದ್ಯದ ಉದ್ದೇಶವೆಂದು ನುಡಿದರು. ಅಂತೆಯೇ ಆಧುನಿಕ ವೈದ್ಯದ ಪ್ರಗತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಜನಾರೋಗ್ಯದ ಕಡೆಗೆ ಹೆಚ್ಚು ಗಮನವೀಯಬೇಕೆಂದೂ ಮತ್ತು ರಾಷ್ಟ್ರೀಯ ಆರೋಗ್ಯ ಇನ್ಶ್ಯೂರೆನ್ಸ್ ಮುಂತಾದ ವಿಷಯದಲ್ಲಿ ವೈದ್ಯರು ಹೆಚ್ಚು ಸಹಾಯಕರಾಗಬೇಕೆಂದು ಕೋರಿದರು. ನಮ್ಮ ದೇಶದಲ್ಲಿ ಈಗ ಸರಾಸರಿ ಕೇವಲ ೨೭ ವರ್ಷ ಬದಕುವುದನ್ನು ಕಂಡು ವಿಷಾದಿಸಿ, ಆಯುಃ ಪರಿಮಿತಿಯನ್ನು ಹೆಚ್ಚಿಸಲು ವೈದ್ಯರೆಲ್ಲರೂ ಶ್ರಮಿಸಬೇಕೆಂದುದು ನುಡಿದರು. ಭಾಷಣದ ಕೊನೆಯಲ್ಲಿ ವೈದ್ಯರ ಲಕ್ಷಣಗಳನ್ನು ಕುರಿತು ಹೇಳುತ್ತಾ ಪ್ರಸಿದ್ಧ ಫ್ರೆಂಚ್ ಡಾಕ್ಟರೊಬ್ಬರ, "ಕೆಲವು ವೇಳೆ ರೋಗ ಗುಣಪಡಿಸುವುದು, ಕೆಲವು ಸಮಯ ಪರಿಹರಿಸುವುದು, ಮತ್ತು ಸದಾ ರೋಗಿಯನ್ನು ಸಮಾಧಾನ ಪಡಿಸುವುದು" ಎಂಬ ವಾಕ್ಯಗಳನ್ನು ನೆನಪಿಗೆ ತಂದು, ವೈದ್ಯರು ವಿನಯ ಮತ್ತು ಕರುಣಾಪೂರಿತರಾಗಿ ಜನಸೇವೆ ಮಾಡುವುದೇ ಮುಖ್ಯ ಕರ್ತವ್ಯವೆಂದು ಮನಗಾಣಿಸಿದರು. ಮತ್ತು ವೈದ್ಯರ ಶ್ರಮಕ್ಕೆ ತಕ್ಕ ಫಲ ದೊರೆಯದಿದ್ದರೂ ಬಡವರ ಮತ್ತು ರೋಗಿಗಳ ಸೇವೆಯಿಂದ ಈಶ ಸೇವೆ ಮಾಡಿದಂತಾಗುವುದೆಂಬ ತತ್ವವನ್ನೇ ವೈದ್ಯರು ಅನುಸರಿಸುವುದೇ ಸೂಕ್ತವೆಂದು ನುಡಿದರು. ಮೈಸೂರು ಮೆಡಿಕಲ್ ಕಾಲೇಜು ಅಮರ ಕೀರ್ತಿಗಳಿಸಲೆಂದೂ, ವೈದ್ಯಕೀಯ ಸಂಶೋಧನೆಯಲ್ಲಿ ಪ್ರಥಮಸ್ಥಾನ ಪಡೆಯಲೆಂದು ಹಾರೈಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ತಾಯಿಯೇ ಮಕ್ಕಳನ್ನು ಕೊಂದಳು

ಜೀವನದಲ್ಲಿ ಬೇಸತ್ತು ತನ್ನ ಎರಡು ಮಕ್ಕಳನ್ನು ಭಾವಿಗೆ ಹಾಕಿ ತಾನೂ ಭಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡ ಸ್ತ್ರೀಯು ಕಡೂರಿನಿಂದ ಬಂದಿದೆ. ಪೋಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆಂದು ವರದಿಯಾಗಿದೆ.

ರಷ್ಯಾದ "ಗುಪ್ತನಿಯೋಗ"

ಚೀಣಾ ಮತ್ತು ಹಲವು ಐರೋಪ್ಯ ರಾಷ್ಟ್ರಗಳಲ್ಲಿ, ಬ್ರಿಟನ್ ಮತ್ತು ಅಮೇರಿಕಾ ಸರ್ಕಾರಗಳು ಯುದ್ಧಾನಂತರ ಜರ್ಮನಿಯೊಂದಿಗೆ ಪ್ರತ್ಯೇಕ ಶಾಂತಿಸ್ಥಾಪನೆಗಾಗಿ ಪ್ರಯತ್ನಿಸುವುದನ್ನು ನಿರೂಪಿಸುವ "ಗುಪ್ತನಿಯೋಗ" ಎಂಬ ನೂತನ ರಷ್ಯನ್ ಚಲನಚಿತ್ರವನ್ನು ಪ್ರದರ್ಶಿಸುತ್ತಿದ್ದಾರೆಂದು ವರದಿಯಾಗಿದೆ.

ಕರಾಚಿಯಲ್ಲಿ ಮುಷ್ಕರ

ಕರಾಚಿಯ "ಸಿವಿಲ್ ಮತ್ತು ಮಿಲಿಟರಿ ಗೆಜೆಟ್ಟ್"ನ ಸಂಪಾದಕೀಯ ವಿಭಾಗದವರೆಲ್ಲರೂ ಮುಷ್ಕರ ಹೂಡಿದುದರ ಪರಿಣಾಮವಾಗಿ ಆ ಪತ್ರಿಕೆಯ ಕಚೇರಿಯ ಕೆಲಸ ಮಾಡದಂತಾಗಿದೆಯೆಂದು ತಿಳಿದು ಬಂದಿದೆ.

ಮೈಸೂರು ಜೈಲಿಗೆ ಪ್ರೇಕ್ಷಕರು

ಶ್ರೀಗಳಾದ ಇ ಪಿ. ನಂಜಪ್ಪ, ಯು.ಎಲ್. ರಾಮಚಂದ್ರರಾವ್, ಎಸ್. ಲಿಂಗಣ್ಣ, ಎಂ.ಆರ್.ಸಿ. ಬಸಪ್ಪ ಮತ್ತು ಜನಾಬ್ ಮಿರ್‌ನೂರ್‌ಹುಸೇನ್, ಇವರುಗಳನ್ನು ಮೈಸೂರು ಸಬ್ ಜೈಲಿನ ಪ್ರೇಕ್ಷಕರಾಗಿ (ಎರಡು ವರ್ಷಕಾಲ) ಮೈಸೂರು ಸರ್ಕಾರದಿಂದ ನೇಮಿತರಾಗಿದ್ದಾರೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು 'ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಮೈಸೂರು ಎ. ಐ. ಆರ್.

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೯ ಶನಿವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಚಿತ್ರವಾಣಿ ೭-೨೫ ಶ್ರೀ ಟಿ ನಾಗಮ್ಮ (ದೇವರ ನಾಮ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಶ್ರೀ. ಟಿ. ಎಂ. ರಾಜಗೋಪಾಲ ಶರ್ಮ (ರ) ೮-೩೦ ಮುಕ್ತಾಯ

ಮಧ್ಯಾಹ್ನ ೧-೦ ಸಂಗೀತ (ಶ್ರೀ ಟಿ ಆರ್. ರಂಗಸ್ವಾಮಿ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಮುಖವೀಣೆ ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ. ೬-೩೦ ಸ್ಥಳೀಯ ಪ್ರಕಟಣೆಗಳು ೬-೪೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಕೆ ಎಲ್. ಸೈಗಾಲ್ (ರ) ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಕಥಾಕಾಲಕ್ಷೇಪ ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಇಂಗ್ಲೀಷಿನಲ್ಲಿ ಭಾಷಣ ೯-೪೫ ವಾದ್ಯಸಮ್ಮೇಳನ ೧೦-೦ ಮುಕ್ತಾಯ.

ಮೆಡಿಕಲ್ ಕಾಲೇಜ್ ರಜತ ಮಹೋತ್ಸವ

ಇಂದಿನಿಂದ ಮೈಸೂರು ಮೆಡಿಕಲ್ ಕಾಲೇಜ್ ರಜತ ಮಹೋತ್ಸವ ಸಮಾರಂಭವು ಮೈಸೂರು ವಸ್ತುಪ್ರದರ್ಶನದ ಕಟ್ಟಡದಲ್ಲಿ ಆರಂಭವಾಯಿತು. ಮೈಸೂರು ಶ್ರೀಮನ್ಮಹಾರಾಜರವರು ಈ ಬೆಳಿಗ್ಗೆ ೧೦ ಘಂಟೆಗೆ ಸಮಾರಂಭ ಉದ್ಘಾಟನೆಯನ್ನು ನೆರವೇರಿಸಿದರು. ಶಸ್ತ್ರವೈದ್ಯಪ್ರವೀಣ ಡಾ|| ಎಸ್. ಸುಬ್ಬರಾಯರು ಆ ಸಮಾರಂಭದ ಅಂಗವಾಗಿ ಏರ್ಪಡಿಸಿರುವ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು. ರಜತ ಸಮಾರಂಭವು ೮, ೯ ಮತ್ತು ೧೦ನೇ ತಾರೀಖು (ಮೂರು ದಿನಗಳು) ನಡೆಯುತ್ತದೆ. ಪ್ರದರ್ಶನವು ೮, ೯, ೧೦ ಮತ್ತು ೧೧ (ನಾಲ್ಕು ದಿನಗಳು) ತೆರೆದಿರುತ್ತದೆ.

ಈ ಸಮಾರಂಭದಲ್ಲಿ ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಹಣಕಾಸಿನ ಸಚಿವ ಶ್ರೀ ಎಚ್. ಸಿ. ದಾಸಪ್ಪ, ಗೃಹಸಚಿವ ಶ್ರೀ ಟಿ. ಮರಿಯಪ್ಪ, ನ್ಯಾಯಾಂಗ ಸಚಿವ ಶ್ರೀ ಕೆ. ಟಿ. ಭಾಷ್ಯಂ ಮತ್ತು ವಿದ್ಯಾಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಹಾಜರಿದ್ದರು.

ಚಿದಂಬರ ರಹಸ್ಯ

ರಾಷ್ಟ್ರೀಯ ಭೌತಶಾಸ್ತ್ರ ಪ್ರಯೋಗಶಾಲೆಗೆ ರಾಷ್ಟ್ರಾಧ್ಯಕ್ಷರು ಭೇಟಿಯಿತ್ತಾಗ ಯುರೇನಿಯಂ ಲೋಹದ ಗಣಿಗಳು ಭಾರತದಲೆಲ್ಲಿವೆಯೆಂದು ಪ್ರಶ್ನಿಸಿದಾಗ, ಅಲ್ಲಿನ ಅಧಿಕಾರಿಗಳು ಅದನ್ನು ತಿಳಿಸಲಾಗುವುದಿಲ್ಲವೆಂದು ನುಡಿದರು ಸರ್ಕಾರದವರು ಯುರೇನಿಯಂ ವಿಚಾರವನ್ನು ರಹಸ್ಯವಾಗಿಡಬೇಕೆಂದು ಕಟ್ಟಾಜ್ಞೆ ಮಾಡಿರುವುದೇ ಇದಕ್ಕೆ ಮುಖ್ಯಕಾರಣ. ಯುರೇನಿಯಂ ಲೋಹವು ಆಟಂಬಾಂಬು ತಯಾರಿಕೆಗೆ ಅತ್ಯವಶ್ಯಕವಾದ ಲೋಹ, ಆದುದರಿಂದಲೇ ಈ 'ಚಿದಂಬರ ರಹಸ್ಯ'ದ ಅವಶ್ಯಕತೆ.

ರಘುಲಾಲ್ ಮತ್ತು ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574
ಸಮಾಚಾರ
SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ
ಸಂಪುಟ ೧] ೯—೯—೧೯೫೦ ನೇ ಶನಿವಾರ [ಸಂಚಿಕೆ ೨೨

RAGHULAL & Co.,
CHEMISTS
Sayyaji Rao Road,
MYSORE

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

★ ಬೊಂಬಾಯಿನಲ್ಲಿ ಪುನಃ ಗೋಲೀಬಾರು

ಬೊಂಬಾಯಿ ಪೋಲೀಸ್ ಆಜ್ಞೆಯನ್ನುಲ್ಲಂಘಿಸಿ ಮೆರವಣಿಗೆ ಹೊರಟುದುದನ್ನು ಪೋಲೀಸಿನವರು ತಡೆಗಟ್ಟಿದರು. ಗುಂಪನ್ನು ಚದುರಿಸಲು ಮೊದಲು ಅಶ್ರುವಾಯುವನ್ನುಪಯೋಗಿಸಲಾಯಿತು. ಗುಂಪು ಚದುರದೆ ಪೋಲೀಸಿನವರ ಮೇಲೆ ಕಲ್ಲುಗಳನ್ನು ಎಸೆಯಲಾರಂಭಿಸಲಾಗಿ ಪೋಲೀಸಿನವರು ಗುಂಡು ಹಾರಿಸಿ, ಗುಂಪನ್ನು ಚದುರಿಸಿದರು. ಇದರ ಫಲವಾಗಿ ಮೂವರಿಗೆ ಗಾಯಗಳಾಗಿವೆಯೆಂದು ತಿಳಿಯಬರುತ್ತದೆ.

ಈ ಕೃತ್ಯವೆಲ್ಲವೂ ಕಮ್ಯೂನಿಷ್ಟರದು, ಮುಷ್ಕರಗಾರರೆಲ್ಲರೂ ಶಾಂತಯುತವಾಗಿ ವರ್ತಿಸಬೇಕೆಂದು ಸಮತಾವಾದಿ ಮುಖಂಡ ಶ್ರೀ ಜಯಪ್ರಕಾಶ ನಾರಾಯಣರವರು ತಿಳಿಸಿರುವರು.

ರಾಷ್ಟ್ರಾಧ್ಯಕ್ಷರ ಭಾವಚಿತ್ರ ಅನಾವರಣ

ನಿನ್ನೆ ಸಂಜೆ ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಗರ ಪುರಸಭೆಯಲ್ಲಿ ರಾಷ್ಟ್ರಾಧ್ಯಕ್ಷ ಶ್ರೀ ಬಾಬುರಾಜೇಂದ್ರ ಪ್ರಸಾದರವರ ಭಾವಚಿತ್ರ ಅನಾವರಣ ಮಾಡಿದರು. ವಿದ್ಯಾಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರೂ ಹಾಜರಿದ್ದರು.

ಪೌರಸಭಾಧ್ಯಕ್ಷ ಶ್ರೀ ಲಿಂಗಣ್ಣನವರು ಪೌರಸಭೆಯ ಕಾರ್ಯಕಲಾಪಗಳ ವಿಷಯ ಪ್ರಸ್ತಾಪಿಸಿ ಸರ್ಕಾರ ಮತ್ತು ಮುಖ್ಯಮಂತ್ರಿಗಳು ನಗರಾಭಿವೃದ್ಧಿ ವಿಷಯನಲ್ಲಿ ಅತ್ಯಂತ ಆಸಕ್ತಿಭರಿತರಾಗಿ ಅನೇಕ ಅಭಿವೃದ್ಧಿಕಾರ್ಯಗಳನ್ನು ಮಾಡುವುದರಲ್ಲಿ ಸಹಾಯ ನೀಡುತ್ತಲಿರುವರೆಂದು ತಿಳಿಸಿ. ಸರ್ಕಾರವು ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡುವರೆಂದು ಆಶಿಸಿದರು. ಮಾಜಿ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರಪ್ರಸಾದರವರ ಗುಣಕಥನ ಮಾಡಿ, ಮೈಸೂರು ಕಲಾನಿಪುಣರಾದ ಶ್ರೀ ಎಸ್. ಎನ್. ಸ್ವಾಮಿಯವರಿಂದ ತಾವು ಬರೆಸಿ ಪುರಸಭೆಗೆ ಕೊಟ್ಟಿರುವ ಈ ಭಾವಚಿತ್ರ ಅನಾವರಣ ಮಹೋತ್ಸವ ನಡೆಸಬೇಕೆಂದು ಮುಖ್ಯ ಮಂತ್ರಿಗಳನ್ನು ಕೋರಿದರು.

ಮುಖ್ಯಮಂತ್ರಿಗಳು, ಭಾವಚಿತ್ರ ಅನಾವರಣಮಾಡುತ್ತ, ಸ್ವಾತಂತ್ರ್ಯಗಳಿಸಿದ ಮೇಲೆ ಜನರಲ್ಲಿ ಅನೀತಿ ಕಾಣಬರುತ್ತಲಿದೆ. ಅಂಥಹ ಈ ಸಮಯದಲ್ಲಿ, ದೇಶದಲ್ಲೆಲ್ಲಾ ಅತ್ಯಂತ ಖ್ಯಾತಿಯನ್ನು ಗಳಿಸಿ ಎಲ್ಲರಿಗೂ ಆದರ್ಶಪ್ರಾಯರಾಗಿರುವ ಬಾಬುರಾಜೇಂದ್ರ ಪ್ರಸಾದರ ಭಾವಚಿತ್ರವನ್ನು ಈ ಪುರಸಭೆಯಲ್ಲಿ ಅನಾವರಣ ಮಾಡುವುದು, ಯಾವ ಭೇದಭಾವವನ್ನು ಇಟ್ಟುಕೊಳ್ಳದೆ ಜನಸೇವೆ ಮಾಡಬೇಕಾಗಿರುವ ಪೌರಸಭಾಸದಸ್ಯರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿದಂತಾಗುತ್ತದೆ ಎಂದು ತಿಳಿಸಿ ಪೌರಸಭೆಯ ವಿಷಯ ಪ್ರಸ್ತಾಪಿಸುತ್ತಾ, ಸರ್ಕಾರವು ಯಾವಾಗಲೂ ಮೈಸೂರು ನಗರಾಭಿವೃದ್ಧಿ ವಿಚಾರದಲ್ಲಿ ಇಷ್ಟರವರೆಗೆ ಗಳಿಸಿರುವ ಖ್ಯಾತಿಯನ್ನು ಉಳಿಸಿಕೊಳ್ಳಲು ತಕ್ಕ ಕಾರ್ಯಕ್ರಮಗಳನ್ನು ನಡೆಸುವುದರಲ್ಲಿ ಹಿಂತೆಗೆಯುವುದಿಲ್ಲವೆಂದೂ ಪೌರಸಭೆಯವರೂ ತಮ್ಮ ಗುರುತರವಾದ ಜವಾಬ್ದಾರಿಯನ್ನರಿತು ಕೆಲಸ ಮಾಡುತ್ತಲಿರುವರೆಂಬುವುದರಲ್ಲಿ ಸಂಶಯ ವಿಲ್ಲವೆಂದು ತಿಳಿಸಿದರು.

ಭಾವಚಿತ್ರ ಅನಾವರಣವಾದನಂತರ ಉಪಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರ ವಂದನೆಯನ್ನರ್ಪಿಸಿದರು.

ಸರ್ದಾರ್ ಪಟೇಲರ ಜನ್ಮದಿನ

ಕೇಂದ್ರ ಗೃಹಮಂತ್ರಿ ಸರದಾರ್ ಪಟೇಲರ ೭೫ ನೇ ಜನ್ಮದಿನಾಚರಣೆಯನ್ನು ಅಕ್ಟೋಬರ್ ೩೧ ನೇ ತಾರೀಖು ಅಹಮದಾಬಾದಿನಲ್ಲಿ ಬಹು ವಿಜೃಂಭಣೆಯಿಂದ ನಡೆಸಲಾಗುತ್ತದೆಂದು ತಿಳಿದುಬಂದಿದೆ.

ವಿಮಾನ ಕಾರ್ಖಾನೆಯಲ್ಲಿ ಮುಷ್ಕರ?

ಬೆಂಗಳೂರಿನಲ್ಲಿ ಹಿಂದೂಸ್ಥಾನ ವಿಮಾನ ಕಾರ್ಖಾನೆಯ ಕಾರ್ಮಿಕರು ಬಹುಮತದಿಂದ ಲಾಭದಲ್ಲಿನ ಬೋನಸ್ಸಿಗಾಗಿ ಮುಷ್ಕರ ಹೂಡಬೇಕೆಂದು ತೀರ್ಮಾನಿಸಿರುವರೆಂದ. ತಿಳಿಯಬಂದಿದೆ.

ಪಂಡಿತ ನೆಹರೂರವರ

ರೇಡಿಯೋ ಭಾಷಣ

ಈ ರಾತ್ರಿ ೮-೩೦ ಗಂಟೆಗೆ

ಪ್ರಧಾನಿ ಪಂಡಿತ ನೆಹರೂರವರು ತಮ್ಮ ಅಸ್ಸಾಂ ಪ್ರವಾಸದ ವಿಷಯವಾಗಿ ಈ ರಾತ್ರಿ ೮-೩೦ ಗಂಟೆಗೆ ಇಂಗ್ಲೀಷು ಮತ್ತು ಹಿಂದಿಯಲ್ಲಿ ಸುಮಾರು ಅರ್ಧ ಗಂಟೆ ಕಾಲ ಭಾಷಣ ಮಾಡುವರು. ಆಲ್ ಇಂಡಿಯಾ ರೇಡಿಯೋ ಎಲ್ಲಾ ಕೇಂದ್ರಗಳಲ್ಲಿಯೂ ಈ ಭಾಷಣವನ್ನು ಪ್ರಸಾರ ಮಾಡಲಾಗುವುದು.

ಬೊಂಬಾಯಿನಲ್ಲಿ ನಿರಾಶ್ರಿತರು

ಡಾ|| ಜೀವರಾಜ್ ಮೆಹ್ತಾರವರು, ಬೊಂಬಾಯಿ ನಗರವೊಂದರಲ್ಲಿಯೇ ೧೨ ಲಕ್ಷ ಜನರು ಇರಲು ಮನೆಯಿಲ್ಲದೆ ನಿರಾಶ್ರಿತರಾಗಿದ್ದಾರೆಂದೂ, ಅವರಿಗೆಲ್ಲಾ ವಸತಿ ಏರ್ಪಡಿಸಲು ೨,೫೦,೦೦೦ ಮನೆಗಳ ಆವಶ್ಯಕತೆಯಿದೆಯೆಂದೂ ಮತ್ತು ಇದಕ್ಕಾಗಿ ೧೨೫ ಕೋಟಿ ರೂಪಾಯಿಗಳು ಬೇಕಾಗುವುದೆಂದೂ ಅಂದಾಜುಮಾಡಿದ್ದಾರೆ.

ಲಾಹೋರಿನಲ್ಲಿ ಪ್ರವಾಹ

ರಾವಿನದಿಯ ಪ್ರವಾಹದಿಂದ ಸುಮಾರು ೧ ಲಕ್ಷ ಜನರು ನಿರಾಶ್ರಿತರಾಗಿದ್ದಾರೆಂದೂ ಅವರಿಗೆ ಸಹಾಯ ನೀಡಲಾಗುತ್ತಿದೆಯೆಂದೂ ವರದಿಯಾಗಿದೆ. ಈ ಪ್ರವಾಹವು ಇಳಿಮುಖವಾಗುತ್ತಿದೆಯೆಂದು ತಿಳಿಯಬರುತ್ತದೆ.

ಗೋಧಿ ನಷ್ಟ

ಪಶ್ಚಿಮ ಪಂಜಾಬಿನ ಸರ್ಕಾರವು ತರನ್‌ತರನ್ನಲ್ಲಿ ಸ್ಟಾಕು ಇಟ್ಟಿದ್ದ ೮೪,೦೦೦ ಗೋಧಿ ಚೀಲಗಳೆಲ್ಲ ಪ್ರವಾಹದಿಂದ ಹಾಳಾದುವೆಂದು ವರದಿಯಾಗಿದೆ.

ಸರ್ಕಾರಿ ಆಜ್ಞೆ

ವಿಶ್ವವಿದ್ಯಾನಿಲಯದ ಅಸಿಸ್ಟೆಂಟ್ ರಿಜಿಸ್ಟ್ರಾರಾಗಿ ವರ್ಗವಾಗಿದ್ದ ಅಸಿಸ್ಟೆಂಟ್ ಕಮಿಷನರ್ ಶ್ರೀ ಎಂ. ನಾರಾಯಣಮೂರ್ತಿಯವರನ್ನು ಅಲ್ಲಿಗೆ ಬದಲಾಗಿ ಹಾಸನ ಸಬ್ ಡಿವಿಜನ್ನಿಗೆ ವರ್ಗಾಯಿಸಲಾಗಿದೆ.

ಮದ್ಯಪಾನ ನಿರೋಧ ಆಜ್ಞೆ

ಮದ್ಯಪಾನನಿರೋಧ ಆಜ್ಞೆಯು ರಾಜ್ಯಾಂಗದ ಮೂಲಭೂತ ಹಕ್ಕುಗಳಿಗೆ ವಿರುದ್ಧವೆಂದ. ಈ ಆಜ್ಞೆಯನ್ನು ಪ್ರಶ್ನಿಸಬೇಕೆಂದು ಒಬ್ಬ ವ್ಯಾಪಾರಿಯು ಮದರಾಸಿನ ಹೈಕೋರ್ಟಿನಲ್ಲಿ ಒಂದು ಮನವಿಯನ್ನು ಸಲ್ಲಿಸಿದ್ದಾರೆ.

ಸ್ಕಾಟ್ಲೆಂಡಿನ ಗಣಿಗಳಲ್ಲಿ

ಸ್ಕಾಟ್ಲೆಂಡಿನ ಗಣಿಗಳಲ್ಲೊಂದರಲ್ಲಿ ಕೆಲಸ ಮಾಡುತ್ತಲಿದ್ದ ೧೨೦ ಜನರು ಒಂದು ಭಾಗವು ಕುಸಿದು ಕೆಳಗೆ ಮಣ್ಣಿನಲ್ಲಿ ಹೂತುಹೋಗಿರುವರು ಅವರೊಡನೆ ಮಾತನಾಡಲು ತಕ್ಕ ಏರ್ಪಾಡು ಮಾಡಲಾಗಿದೆ ಅವರನ್ನೆಲ್ಲಾ ಅಲ್ಲಿಂದ ಪಾರುಮಾಡಲು ತಕ್ಕ ವ್ಯವಸ್ಥೆಮಾಡಲಾಗುತ್ತಲಿದೆಯೆಂದು ತಿಳಿಯಬರುತ್ತದೆ.

ಧಾರ್ಮಿಕ ಶಿಕ್ಷಣ

ಮದರಾಸು ಪ್ರಾಂತ್ಯದ ಎಲ್ಲಾ ಕಾಲೇಜುಗಳಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಶಿಕ್ಷಣವನ್ನು ಕೊಡಬೇಕೆಂದು ಮದರಾಸು ವಿಶ್ವವಿದ್ಯಾನಿಲಯದ ಕೌನ್ಸಿಲ್ಲು ತೀರ್ಮಾನಿಸಿರುವುದಾಗಿ ತಿಳಿಯ ಬರುತ್ತದೆ.

ವ್ಯಾಪಾರ ಸಂಸ್ಥೆ

ಭಾರತ ಮತ್ತು ಪಾಕಿಸ್ಥಾನಗಳಲ್ಲಿ ವ್ಯಾಪಾರಮಾಡಲು ಜಪಾನು ಭಾರತದಲ್ಲೆರಡು ಮತ್ತು ಪಾಕಿಸ್ಥಾನದಲ್ಲೊಂದು ವ್ಯಾಪಾರ ಸಂಸ್ಥೆಗಳನ್ನು ಸದ್ಯದಲ್ಲಿಯೇ ಸ್ಥಾಪಿಸುವುದೆಂದು ತಿಳಿಯಬರುತ್ತದೆ.

★ ಸಿರ್ರೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಅಕ್ರಮಣಕಾರರೊಡನೆ ರಾಜಿಬೇಡ

ನಾಸಿಕದಲ್ಲಿ ನಡೆಯಲಿರುವ ಅಖಿಲಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಪಶ್ಚಿಮಬಂಗಾಳದ ನ್ಯಾಯಾಂಗ ಸಚಿವರಾದ ಶ್ರೀ ನಿಹರೇಂದುದತ್ತ ಮಜುಂದಾರ್‌ರವರು ಕಾಶ್ಮೀರದ ಅಕ್ರಮಕಾರರೊಡನೆ ರಾಜಿಯಾಗಕೂಡದೆಂದೂ ಮತ್ತು ದೇಶದ್ರೋಹಕರ ಕೋಮುವಾರು ನೀತಿ ಮತ್ತು ಮತೀಯ ನಿರಂಕುಶಾಧಿಕಾರವನ್ನು ಎದುರಿಸಬೇಕೆಂದೂ ಒಂದು ನಿರ್ಣಯವನ್ನು ಕಳುಹಿಸಿದ್ದಾರೆ.

ನಿರಾಶ್ರಿತರು ಅಂಡಮಾನದಲ್ಲಿ

ಅಂಡಮಾನಿನ ಚೀಫ್ ಕಮಿಷನರಾದ ಶ್ರೀ ಎಂ.ಕೆ. ಘೋಷರು ಇದುವರೆಗೂ ೨೫೦ ಪಾಕ್ ನಿರಾಶ್ರಿತ ಸಂಸಾರಗಳಿಗೆ ನೆಲೆಸಲು ಅನುಕೂಲ ಕಲ್ಪಿಸುವುದೆಂದೂ ಇನ್ನೂ [illegible] ಸಂಸಾರಗಳಿಗೆ ಅವಕಾಶ ಕಲ್ಪಿಸಿದೆಯೆಂದೂ ಮತ್ತು ಮುಂದಿನ ವರ್ಷ ೩೦೦ ಸಂಸಾರಗಳಿಗೆ ಅನುಕೂಲವೇರ್ಪಡಿಸಲಾಗುವುದೆಂದು ಹೇಳಿದ್ದಾರೆ.

ಸರ್ ಎಂ. ವಿ. ಯವರಿಗೆ ಸನ್ಮಾನ

ಜಗತ್ಪ್ರಸಿದ್ಧ ಮೇಧಾವಿಗಳಾದ ಮೈಸೂರು ಮಾಜಿ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಬೆಂಗಳೂರು ಕಾರ್ಪೋರೇಷನ್ ಮಾನಪತ್ರವನ್ನರ್ಪಿಸಬೇಕೆಂದು ತೀರ್ಮಾನಿಸಿ ೧೦೦೦ ರೂಪಾಯಿಗಳನ್ನು ಮಂಜೂರ್ಮಾಡಿದೆ.

ಮೈಸೂರು ಮಂತ್ರಿಗಳ ಸಭೆ

ಮೈಸೂರು ಮಂತ್ರಿಮಂಡಲದ ಸಭೆಯು ೧೨, ೧೩ ಮತ್ತು ೧೪ನೇ ತಾರೀಖಿನಲ್ಲಿ ಬೆಂಗಳೂರಿನಲ್ಲಿ ನಡೆಯುವುದು. ದೇಶದಲ್ಲಿನ ಈಗಿನ ಪರಿಸ್ಥಿತಿಯನ್ನು ಚರ್ಚಿಸಲಾಗುವುದೆಂದು ತಿಳಿಯಬರುತ್ತದೆ.

ಅ॥ ಇನ್ಫರ್ಮೇಷನ್ ಆಫೀಸರು

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಕಾರ್ಯಕಾರಿ ಸಮಿತಿಯು ಅಸಿಸ್ಟೆಂಟ್ ಇನ್ಫರ್ಮೇಷನ್ ಆಫೀಸರ ಹುದ್ದೆಗೆ ಒಬ್ಬ ನುರಿತ ಕಾರ್ಯನಿರತ ಪತ್ರಿಕೋದ್ಯೋಗಿಯನ್ನು ನೇಮಕಮಾಡಬೇಕೆಂದು ನಿರ್ಣಯ ಮಾಡಿದೆ.

ಪ್ರಾಣಿವಧೆ ನಿಷೇಧ

ಮದರಾಸ್ ಪ್ರಾಂತದ ದೇವಾಲಯದ ಆವರಣದಲ್ಲಿ ಪ್ರಾಣಿಗಳ ಮತ್ತು ಪಕ್ಷಿಗಳ ವಧೆಯನ್ನು ನಿಷೇಧಿಸುವ ಮಸೂದೆಯು ಮದರಾಸ್ ಅಸೆಂಬ್ಲಿಯಲ್ಲಿ ಅನುಮೋದಿತವಾಯಿತು.

ಕಾಂಗ್ರೆಸ್ ಬೆಂಬಲ ಮಹಾಸಭೆಗೇ ?

ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಅಧ್ಯಕ್ಷ ಚುನಾವಣೆಯಲ್ಲಿ ವಿಜಯಗಳಿಸಿದುದು ಕಾಂಗ್ರೆಸ್ಸಿಗರು ಹಿಂದೂ ಮಹಾಸಭೆಯ ಧೋರಣೆಗೆ ಮನ ಒಲಿದಿರುವುದನ್ನು ಸೂಚಿಸುವುದಾಗಿದೆಯೆಂದು ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯದರ್ಶಿಯವರು, ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ಮುಷ್ಕರ

ದೆಹಲಿಯ ಬಸ್ ಕೆಲಸಗಾರರ ಸಂಘವು ಮುಷ್ಕರ ಹೂಡಬೇಕೆಂದು ೧೨೦೦ ಜನರು ಮುಷ್ಕರ ಪರವಾಗಿಯೂ ೬ ಜನರು ವಿರೋಧವಾಗಿಯೂ ಓಟುಮಾಡಿದರೆಂದು ತಿಳಿದುಬಂದಿದೆ.

ಮದ್ರಾಸಿನಲ್ಲಿ ಬಟ್ಟೆ ಗಿರಣಿಗಳು

ಮದ್ರಾಸ್ ಪ್ರಾಂತ್ಯದಲ್ಲಿ ೧೮ ನೂತನ ಬಟ್ಟೆ ಗಿರಣಿಗಳನ್ನು ಸ್ಥಾಪಿಸಲು ಸರ್ಕಾರವು ಅನುಮತಿ ಕೊಟ್ಟಿದೆ.

ರಣಜಿತ್ ಟಾಕೀಸ್
ತಾ॥ 8-9-50 ರಿಂದ 2ನೇ ವಾರ
ದಿನವಹಿ 3 ಆಟಗಳು
ರೂಮಾಲ್★ROOMAL
ಪಾತ್ರ:- ನರ್ಗೀಸ್, ರೆಹಮಾನ್, ಪೈರಾಜ್, ಜೀವನ್, ಕುಕ್ಕೂ.
ಬೆಳಗಿನ ಪ್ರದರ್ಶನ
ಮೂರು ದಿನಗಳು ಮಾತ್ರ
ಕುನ್ವಾರ ಬಾಪ್
ಪಾತ್ರ: ಕಿಶೋರ್ ಸಾಹು

MYSORE CITY MUNICIPALITY

NOTICE

Sealed tenders will be received by the Municipal Engineer for the following works up to 4 P. M. on 13-9-1950 :

1 Fixing 1 H P. Motor and pump with necessary things in the new public bath near existing latrine in Nazarbad Mohalla.

2. Constructing a compound wall on the easternside of Amble Annaiah pundit's choultry in K R. Mohalla.

Each tender must be accompanied with a chellan for having remitted to Municipal Treasury the sum of Rs. 85 and 30 respectively as earnest money for the above works

For full particulars please see the detailed notification on the office notice board.

Sd/. V. K. MUKUNDAN,

Municipal Engineer.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೧೦ ಭಾನುವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಮನರಂಜನೆ (ರಿ) ೭-೩೫ ಗಿಟಾರ್ ಮತ್ತು ದಿಲ್‌ರೂಬ. ೭-೪೫ ಕನ್ನಡದಲ್ಲಿ ವಾರ್ತೆ ೮-೧೫ ಕನ್ನಡ ಗೀತೆಗಳು (ಶ್ರೀ. ಟಿ. ಎಸ್. ಲಕ್ಷಮ್ಮ) ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಬಾಲಜಗತ್ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ನಾವು ಮತ್ತು ನಮ್ಮವರು. ೨-೦ ನಿಮ್ಮ ಮೆಚ್ಚಿನ ಗೀತೆಗಳು (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ (ಶ್ರೀ. ರಾಜಮ್ಮ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಾನೀಯ ಸೂಚನಾಯೇ. ೭-೩೦ ವಿಶ್ವವಾರ್ತೆ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಸಂಗೀತ (ಎಂ. ಎಸ್. ಕಲ್ಪಪಿಳ್ಳೆ ಅಯ್ಯಂಗಾರ್) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಪ್ರೇಮ ಪರೀಕ್ಷೆ (ನಾಟಕ) ೧೦-೦ ಮುಕ್ತಾಯ.

ಸೆಪ್ಟೆಂಬರ್ ೧೧ ಸೋಮವಾರ.

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಅನಂತಲಕ್ಷ್ಮಿ ಶಡಗೋಪನ್ (ರಿ) ೭-೧೫ ಶ್ರೀ ಎಸ್. ಆರ್. ಹರಿಕ್ಸ (ದೇವರನಾಮ) ೭-೩೫ ಪಕ್ಷಿ ನೋಟ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಹಿಂದಿ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಸಂಗೀತ (ಶ್ರೀ. ಎ. ಎಸ್. ನಾರಾಯಣಪ್ಪ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ದಿಲ್‌ರೂಬ. ೨-೦ ತಲಾತ್ ಮಹಮದ್ (ರಿ) ೨-೧೫ ವಾದ್ಯ ಸಮ್ಮೇಳನ. ೨-೩೦ ಮುಕ್ತಾಯ.

ಸಂಜೆ ೫-೩೦ ವೀಣೆ (ಶ್ರೀ. ಎ. ಎಸ್. ಚಂದ್ರಶೇಖರಯ್ಯ) ೬-೫ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಹಿಂದೀ ಶಿಕ್ಷಣ ೭-೧೫ ಸಂಗೀತ (ಶ್ರೀ. ಎಂ. ಎನ್. ಗೋವಿಂದ ಸ್ವಾಮಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಇಂಗ್ಲೀಷಿನಲ್ಲಿ ಭಾಷಣ. ೯-೪೫ ರಿಕಾರ್ಡ್ಸ್ ೧೦-೦ ಮುಕ್ತಾಯ.

ಸಕ್ಕರೆ ಖೋತಾ

ಹೊಟೇಲುಗಳಿಗೂ, ಸಿಹಿತಿಂಡಿ ತಯಾರಿಸುವವರಿಗೂ ಕೊಡುತ್ತಿರುವ ಸಕ್ಕರೆ ಪ್ರಮಾಣದಲ್ಲಿ ಶೇ ೧೦ ರಷ್ಟು ಖೋತಾ ಮಾಡಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಭೂಕಂಪನಿಧಿಗೆ ಉದಾರಸಹಾಯ ನೀಡಿ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೧—೯—೧೯೫೦ ನೇ ಸೋಮವಾರ [ಸಂಚಿಕೆ ೨೩

ಕಾಂಗ್ರೆಸ್ ಸೆಕ್ರೆಟರಿಗೆ ಸಜಾ

ಮೈಸೂರು ಚಿಲ್ಲಮೊಹಲ್ಲಾದ ಕಾಂಗ್ರೆಸ್ ಸೆಕ್ರೆಟರಿಯಾದ ಮತ್ತು ಮಹಾತ್ಮ ಬಿಸ್ಕತ್ ಫ್ಯಾಕ್ಟರಿಯ ಮಾಲೀಕರಾದ ಶ್ರೀ ಎ. ಎಸ್. ಕೃಷ್ಣಮೂರ್ತಿಯವರು ಸುಳ್ಳು ಡಿಕ್ಲರೇಷನ್ ಕೊಟ್ಟು ೪ ರೇಷನ್‌ಕಾರ್ಡುಗಳನ್ನು (ಒಟ್ಟು ೧೬ ಜನರ ರೇಷನ್) ಕಳ್ಳತನದಿಂದ ಪಡೆದಿದ್ದರೆಂಬುದನ್ನು ಫುಡ್‌ರೈಡ್‌ಪಾರ್ಟಿ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ಪತ್ತೆಹಚ್ಚಿ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದುದರ ಪರಿಣಾಮವಾಗಿ ಸದರಿ ಕಾಂಗ್ರೆಸ್ಸಿಗರಿಗೆ ನ್ಯಾಯಾಧೀಶರು ಕೋರ್ಟು ಬರಖಾಸ್ತು ಆಗುವವರೆಗೆ ಸಜವನ್ನೂ ಮತ್ತು ೫೦ ರೂ ಜುಲ್ಮಾನೆಯನ್ನೂ ವಿಧಿಸಿದರು.

ಆಂಧ್ರದಿಂದ ಎ.ಐ.ಸಿ. ಸಿಗೆ

ನಾಸಿಕದಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನಕ್ಕೆ ಆಂಧ್ರದಿಂದ ಈ ಕೆಳಗಿನವರನ್ನು ಚುನಾಯಿಸಲಾಗಿದೆ. ಪ್ರೊ॥ ಎನ್.ಜಿ ರಂಗ, ಆಂಧ್ರ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು. ಶ್ರೀ. ಟಿ. ಪ್ರಕಾಶಂ ಶ್ರೀ. ಕಾಳ ವೆಂಕಟರಾವ್, ಅ ಭಾ.ಕಾಂ. ಪ್ರಧಾನಕಾರ್ಯದರ್ಶಿ. ಶ್ರೀ ಕೋಟಿ ರೆಡ್ಡಿ ಶ್ರೀ. ಪಿ ಎಲ್ ಎನ್. ರಾಜು ಮತ್ತು ೩೬ ಇತರರು. ಶ್ರೀಯುತರಾದ ಟಿ ಪ್ರಕಾಶಂ ಮತ್ತು ಪ್ರೊ॥ ಎನ್.ಜಿ. ರಂಗರವರು ಆಂಧ್ರಪ್ರಾಂತ್ಯ ಕಾಂಗ್ರೆಸ್ ಕಾರ್ಯಗಳನ್ನು ನೋಡಿಕೊಳ್ಳಬೇಕೆಂದು ತೀರ್ಮಾನಿಸಿರುವರು.

ತುಪ್ಪದ ಹತೋಟಿ ರದ್ದು

ಭಾರತ ಸರ್ಕಾರವು ತುಪ್ಪದ ಮೇಲಿನ ಹತೋಟಿಯನ್ನು ರದ್ದುಮಾಡಿ, ತುಪ್ಪವನ್ನು ಎಲ್ಲಿಂದ ಎಲ್ಲಿಗೆ ಬೇಕಾದರೂ ಸಾಗಿಸಬಹುದೆಂದು, ಆದರಮೇಲಿನ ಬೆಲೆ ಹತೋಟಿಯನ್ನು ತೆಗೆದುಹಾಕಲಾಗಿದೆಯೆಂದೂ ಪ್ರಕಟಣೆಯೊಂದರಲ್ಲಿ ತಿಳಿಸಿದೆ.

ಮದ್ರಾಸಿನಲ್ಲಿ ಸೇಲ್ಸ್‌ಟ್ಯಾಕ್ಸ್ ವಜಾ

೧೯೫೧ ನೇ ಇಸ್ವಿ ಜನವರಿ ೧ ನೇ ತಾರೀಖಿನಿಂದ ಪತ್ರಿಕೆಗಳಮೇಲಿನ ಸೇಲ್ಸ್‌ಟ್ಯಾಕ್ಸನ್ನು ವಜಾಮಾಡಲಾಗುವುದೆಂದು ಹಣಕಾಸಿನ ಮಂತ್ರಿ ಶ್ರೀ. ಬಿ. ಗೋಪಾಲರೆಡ್ಡಿಯವರು ಮದ್ರಾಸಿನ ಅಸೆಂಬ್ಲಿಯಲ್ಲಿ ಹೇಳಿಕೆಯಿತ್ತಿದ್ದಾರೆ.

ಖಾಸಿಂರಜ್ವಿಗೆ ಜೀವಾವಧಿ ಶಿಕ್ಷೆ

ಹೈದರಾಬಾದಿನಲ್ಲಿ ರಜಕಾರರ ಹಾವಳಿಗೆ ಕಾರಣನಾದ ಖಾಸಿಂರಜ್ವಿಗೆ ಹೈದರಾಬಾದು ನ್ಯಾಯಾಲಯವು ಜೀವಾವಧಿ ಜೈಲುವಾಸ ಶಿಕ್ಷೆಯನ್ನು ವಿಧಿಸಿದೆ.

ಭಾರತ ಮತ್ತು ಪಾಕಿಸ್ತಾನ ದಂಡನಾಯಕರು

ಪಾಕಿಸ್ತಾನದ ನೂತನ ದಂಡನಾಯಕ ಮೇಜರ್ ಜನರಲ್ ಅಯೂಬ್ ಖಾನರವರಿಗೆ ಭಾರತದ ದಂಡನಾಯಕ ಜನರಲ್ ಕಾರಿಯಪ್ಪನವರು ತಮ್ಮ ಶುಭಾಶಯಗಳನ್ನು ಕೋರಿ ಸಂದೇಶವನ್ನು ಕಳುಹಿಸಿದ್ದಾರೆ.

ಬ್ರಿಟನ್ನಿಗೆ ಒತ್ತಾಯ

ಪಾಕಿಸ್ತಾನದ ವಿದೇಶಾಂಗ ಮಂತ್ರಿ ಸರ್ ಜಫರುಲ್ಲಾಖಾನ್‌ರವರು ಪ್ರಪಂಚ ಸಂಸ್ಥೆಯು ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಮಾಡಬೇಕೆಂದು ಬ್ರಿಟನ್ನು ಒತ್ತಾಯಪಡಿಸಬೇಕು ಎಂದು ಬ್ರಿಟಿಷ್ ಪ್ರಪಂಚ ಸಂಸ್ಥೆಯ ಪ್ರತಿನಿಧಿಗಳನ್ನು ಒತ್ತಾಯಪಡಿಸುತ್ತಿದ್ದಾರೆಂದು ಲಂಡನ್ನಿನ ವಾರ್ತೆಯು ತಿಳಿಸುತ್ತದೆ.

ಶ್ರೀಮನ್ಮಹಾರಾಜರು-ಟ್ರಸ್ಟ್ ಬೋರ್ಡ್ ಚೇರ್ಮನ್ ಭೇಟಿ

ಮೈಸೂರು ಶ್ರೀಮನ್ಮಹಾರಾಜರು ಟ್ರಸ್ಟ್‌ಬೋರ್ಡ್ ಚೇರ್‌ಮನ್ ಶ್ರೀ ಪಿ ಗೋಪಾಲಕೃಷ್ಣಶೆಟ್ಟರಿಗೆ ಇಂದ ಬೆಳಿಗ್ಗೆ ಭೇಟಿ ದಯಪಾಲಿಸಿ, ಚೇರ್‌ಮನ್ನರು ಅವರಿಗೆ ಜಿಲ್ಲಾಭಿವೃದ್ಧಿಯ ವಿಷಯದಲ್ಲಿ ತಿಳಿಸಿದ ಅಂಶಗಳನ್ನೆಲ್ಲಾ ಸಾವಧಾನದಿಂದ ಕೇಳಿ, ಜಿಲ್ಲಾಭಿವೃದ್ಧಿಕಾರ್ಯವು ಯಶಸ್ವಿಯಾಗಿ ನಡೆಯುತ್ತಿರುವುದನ್ನು ಮನಗಂಡು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರಿನಲ್ಲಿ

ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು ಜಿಲ್ಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ. ಪಿ. ಗೋಪಾಲಕೃಷ್ಣಶೆಟ್ಟಿಯವರೊಂದಿಗೆ ಜಿಲ್ಲಾಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಿ, ಅಂತೆಯೇ ಜಿಲ್ಲಾ ಬೋರ್ಡು ಇಟ್ಟಿಗೆಗೂಡಿನಲ್ಲಿ ಕಟ್ಟಿಸುತ್ತಿರುವ ಮಾದರಿ ಮನೆಗಳಿಗೆ ಭೇಟಿಯಿತ್ತು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಭಾರತ ಪ್ರಧಾನಿ ಪಂಡಿತ ನೆಹರೂರವರು ತಮ್ಮ ರೇಡಿಯೋ ಭಾಷಣದಲ್ಲಿ,

ಭಾರತ ಸ್ವಾತಂತ್ರ ದಿನಾಚರಣೆಯ ದಿನ, ದೇಶಾದ್ಯಂತ ಜನರು ಸಂತೋಷದಿಂದ ಆಚರಿಸುತ್ತಿದ್ದ ಸಮಯದಲ್ಲಿ, ಆಸ್ಸಾಮಿನಲ್ಲಿ ಮಹದ್ಭೂಕಂಪವಾಯಿತು. ವಾಹನ ಸಂಚಾರಮಾರ್ಗಗಳೂ ಮತ್ತು ವಾರ್ತಾವಾಹಿನಿಗಳೂ ಕಡಿದು ಹೋದುದರಿಂದ ಆ ಸುದ್ದಿಯೇ ನಮಗದರ ಅರಿವಾಗಲಿಲ್ಲ. ನಂತರ ಅಲ್ಲಿನ ದುರಂತದ ವಿಷಯ ಅಲ್ಪಸ್ವಲ್ಪ ತಿಳಿದುಬಂದಿತು ಈಗಲೂ ಸಹ ಅಲ್ಲಿನ ನಿಜಪರಿಸ್ಥಿತಿಯ ಪೂರ್ಣ ಅರಿವು ನಮಗಾಗಿಲ್ಲ. ಈ ಭಾರಿ ಭೂಕಂಪದಿಂದ ಮನೆಗಳೂ, ಟೀ ತೋಟಗಳೂ ಮತ್ತು ಅನೇಕ ಪುರಾತನ ಚಾರಿತ್ರಾರ್ಹ ದೇವಾಲಯಗಳೂ ನಿರ್ನಾಮವಾದುವು. ಪರ್ವತಶ್ರೇಣಿಯೇ ಕುಸಿದುಬಿದ್ದಿತು. ನದಿಗಳು ತಮ್ಮ ಹರಿಯುವ ಪಾತ್ರವನ್ನೇ ಬದಲಾಯಿಸಿದುವು. ಹೊಳೆಯು ಹರಿಯುವ ನೀರು ಗಂಧಕಮಿಶ್ರವಾಯಿತು. ಕುಡಿಯುವ ನೀರು ಕುಡಿಯಲಸಾಧ್ಯವಾಯಿತು. ಭೂಕಂಪದಿಂದ ಸತ್ತವರಲ್ಲದೆ, ಅನೇಕರು ಹಸಿವು ಬಾಯಾರಿಕೆಗಳಿಂದ ಪ್ರಾಣನೀಗಿದರು. ಅನೇಕ ಸರ್ಕಾರಿ, ಪೌರಸಭೆ ಮತ್ತು ಖಾಸಗಿ ಮಂದಿರಗಳೆಲ್ಲ ಉರುಳಿ ನೆಲಸಮವಾದುವು. ನದಿಗಳಲ್ಲಿ ಉಕ್ಕಿಬಂದ ಪ್ರವಾಹದಲ್ಲಿ ಆನೆಗಳೂ, ಮೀನುಗಳೂ, ಮರದ ದಿಮ್ಮಿಗಳೂ ಮತ್ತು ಮೃತರ ಶವಗಳೂ ತೇಲಿ ಬಂದುವು. ಭಾರತ ಸರ್ಕಾರವು ವಿಮಾನಗಳ ಮೂಲಕ ಆಹಾರ ಸರಬರಾಜು ಮಾಡುತ್ತಿದೆ ಖಾಸಗೀ ವಿಮಾನಗಳೂ ಈ ಆಹಾರ ಎಸೆಯುವುದರಲ್ಲಿ ಸಹಾಯ ಮಾಡುತ್ತಿವೆ. ಆಸ್ಸಾಮಿನಲ್ಲಿಯೇ ಸ್ಥಳೀಯ ಸಂಸ್ಥೆಗಳೂ ಮತ್ತು ಸಾರ್ವಜನಿಕರೂ ಸ್ವಯಂಸೇವಕರಾಗಿ ಮುಂದೆ ಬಂದು ಸಹಾಯ ನೀಡುತ್ತಿದ್ದಾರೆ. ಭಾರತೀಯ ಸೈನ್ಯವೂ ಸಹ ತನ್ನ ಸಹಾಯ ಹಸ್ತ ನೀಡಿದೆ.

ಭಾರತೀಯ ಇಂಜಿನೀಯರುಗಳು, ಬ್ರಹ್ಮಪುತ್ರ ನದಿಯ ಪ್ರವಾಹದಿಂದ ಸುತ್ತುವರಿಯಲ್ಪಟ್ಟ ವಿಬ್ರೂಘರನ್ನು ಉಳಿಸಲು ಸತತ ಪ್ರಯತ್ನ ಮಾಡುತ್ತಿದ್ದಾರೆ. ಈ ಭೂಕಂಪದಲ್ಲಿ ಬಹು ನೊಂದವರೆಂದರೆ ಗುಡ್ಡಗಾಡಿನವರು. ನಾವು ಈ ನೊಂದವರಿಗೆಲ್ಲಾ ಉದಾರ ಹೃದಯದಿಂದ ಸಹಾಯಮಾಡಬೇಕಾಗಿದೆ. ಪ್ರಾಂತೀಯ ಗೌರ್ನರುಗಳು ತೆರೆದಿರುವ ಭೂಕಂಪನಿಧಿಗೆ ಎಲ್ಲರೂ ಮುಕ್ತಹಸ್ತದಿಂದ ಸಹಾಯಮಾಡಬೇಕು ಮತ್ತು ಸ್ವಾರ್ಥತ್ಯಾಗ ಮನೋಭಾವದಿಂದ ನಮ್ಮ ಆಹಾರ ಪ್ರಮಾಣವನ್ನು ಕಡಿಮೆ ಮಾಡಿಕೊಂಡು ಅಸ್ಸಾಮಿನಲ್ಲಿ ನೊಂದವರಿಗೆ ಆಹಾರ ಒದಗಿಸಬೇಕು ಇಂಥಹ ಪರಿಸ್ಥಿತಿಯಲ್ಲಿ ಕೆಲವರು ಅಧಿಕಲಾಭಗಳಿಸುವುದಕ್ಕಾಗಿ ಪದಾರ್ಥಗಳನ್ನು ಅಧಿಕ ಬೆಲೆಗೆ ಮಾರುತ್ತಿದ್ದಾರೆ. ಅವರೆಲ್ಲ ಮಾನವ ವರ್ಗಕ್ಕೇ ದ್ರೋಹಿಗಳು. ಸರ್ಕಾರವು ಅವರನ್ನೆಲ್ಲಾ ಉಗ್ರಶಿಕ್ಷೆಗೆ ಗುರಿಪಡಿಸುತ್ತದೆ. ನಮ್ಮ ದೇಶದ ಮುಂದೆ ಈಗಿರುವ ಸಾಮಾಜಿಕ, ರಾಜಕೀಯ ಕಷ್ಟಗಳಲ್ಲದೆ ಪ್ರಕೃತಿ ಕ್ರೋಧದಿಂದುಂಟಾದ ಈ ದುರಂತವನ್ನೂ ನಾವು ಎದುರಿಸಬೇಕಾಗಿದೆ. ದೃಢಮನಸ್ಸಿನಿಂದ, ಐಕ್ಯತೆಯಿಂದ, ನಮ್ಮ ಮುಂದಿರುವ ಸಮಸ್ಯೆಗಳನ್ನೆಲ್ಲಾ ಎದುರಿಸಿದರೆ ಮಾತ್ರ ನಾವು ಈ ಕಠಿಣ ಪರಿಸ್ಥಿತಿಯಿಂದ ಪಾರಾಗಲು ಸಾಧ್ಯ, ಎಂದು ನುಡಿದರು.

ಅಸ್ಸಾಂ ಭೂಕಂಪನಿಧಿ

ಸೆಪ್ಟೆಂಬರ್ ೧೨ ಮಂಗಳವಾರ ಸಂಜೆ ೫ ಗಂಟೆಗೆ ಮೈಸೂರು ನಗರ ಪ್ರಮುಖರ ಸಭೆಯನ್ನು ಭೂಕಂಪನಿಧಿ ವಸೂಲಿನಿಮಿತ್ತ ಪುರಸಭೆಯ ಕಛೇರಿಯಲ್ಲಿ ಏರ್ಪಡಿಸಿರುವರು. ಈ ನಿಧಿಗೆ ಮೈಸೂರು ಪೌರಸಭೆಯು ೨೦೦೦ ರೂಪಾಯಿಗಳನ್ನು ಈಗಾಗಲೇ ಮಂಜೂರ್ಮಾಡಿದೆ.

★ ಸಿರ್ಲೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ವಿವಿಧೋದ್ದೇಶ ಪರಸ್ಪರ ಸಂಘಗಳ ಸಮ್ಮೇಳನ

ತುಮಕೂರು ಜಿಲ್ಲಾಭಿವೃದ್ಧಿ ಸಮಿತಿಯ ಛೇರ್ ಮನ್ನರು ತಮ್ಮ ಜಿಲ್ಲೆಯ ಎಲ್ಲಾ ವಿವಿಧೋದ್ದೇಶ ಪರಸ್ಪರ ಸಹಕಾರಸಂಘಗಳ ಮತ್ತು ಅಡಿಕೆ ಬೆಳೆಯುವವರ ಸಮ್ಮೇಳನವನ್ನು ಅಕ್ಟೋಬರ್ ೧ನೇ ತಾರೀಖು ನಡೆಸಲಿರುವರು. ಸಹಕಾರಸಂಘಗಳ ರಿಜಿಸ್ಟ್ರಾರ್ರವರು ಅಧ್ಯಕ್ಷತೆ ವಹಿಸಲಿರುವರು.

ಸ್ವಯಂ ರೇಷನ್ ಖೋತಾ ಮಾಡಿಕೊಂಡರು

ದೆಹಲಿಯಲ್ಲಿ ಅನೇಕ ಜನರು ವಾರಕ್ಕೊಂದುದಿನ ರೇಷನ್ ಕಡಿಮೆ ಮಾಡಿಕೊಳ್ಳಲು ಸ್ವಯಂ ಪ್ರೇರಿತರಾಗಿ ಮುಂದೆ ಬಂದಿದ್ದಾರೆ. ಅಲ್ಲಿನ ರೇಷನ್ ಅಧಿಕಾರಿಗಳು ಅವರ ವರ್ತನೆಯನ್ನು ಶ್ಲಾಘಿಸಿ ಅವರಿಗೆ ಅದಕ್ಕೆ ಅವಕಾಶವಿತ್ತಿದ್ದಾರೆ

ಚೀಣಾಕ್ಕೆ ಬರಬೇಡಿ

ಅಮೇರಿಕಾ ವಿಮಾನಗಳು ವಾಯುಸಂಚಾರ ನಿಯಮವನ್ನು ಉಲ್ಲಂಘಿಸಿತೆಂಬ ಅಪಾದನೆಯ ಬಗ್ಗೆ ತನಿಖೆ ನಡೆಸಲು ವಿಶ್ವಭದ್ರತಾ ಸಮಿತಿಯ ನಿಯೋಗವು ಚೀಣಾಕ್ಕೆ ತೆರಳುವುದರಲ್ಲಿತ್ತು. ವಿಶ್ವಭದ್ರತಾ ಸಮಿತಿಯಲ್ಲಿ ಕಮ್ಯೂನಿಸ್ಟ್ ಚೀಣಾ ಪ್ರತಿನಿಧಿಯನ್ನು ಅಂಗೀಕರಿಸುವವರೆಗೂ ವಿಶ್ವಸಂಸ್ಥೆಯ ಪ್ರತಿನಿಧಿಗಳು ಚೀಣಾಕ್ಕೆ ಬರಕೂಡದೆಂದು ಪೀಕಿಂಗ್ ರೇಡಿಯೋ ಪ್ರಕಟಿಸಿದೆ.

ಲಾಭಬಡುಕರ ಸ್ಥಾನಬದ್ಧತೆ

ಬೀಹಾರಿನಲ್ಲಿ ಮುಖ್ಯವಸ್ತುಗಳ ಅಧಿಕದಾಸ್ತಾನು ಮಾಡುವವರನ್ನೂ ಪ್ರಿವೆಂಟಿವ್ ಡಿಟೆನ್ಷನ್ ಆಕ್ಟಿನಪ್ರಕಾರ ಡಿಟೆನ್ಷನ್ನಲ್ಲಿಡಲಾಗುವುದು. ಇದು ಇತರ ಸಮಾಜದ್ರೋಹಿಗಳಿಗೂ ಅನ್ವಯಿಸುವುದು.

ಪೋಲಿಸು ಇಲಾಖೆಗೆ ಮುಸ್ಲಿಮರು

ರಾಜಕೀಯ ಪರಿಸ್ಥಿತಿಯು ಈಗ ಬದಲಾಯಿಸಿರುವುದರಿಂದ ಮುಸ್ಲಿಮರನ್ನು ಪೋಲಿಸು ಇಲಾಖೆಗೆ ಸೇರಿಸಿಕೊಳ್ಳಬಹುದೆಂದು ಮತ್ತು ಹಿಂದೆ ಅವರನ್ನು ನಿಷೇಧಿಸಿದ್ದ ಆಜ್ಞೆಯನ್ನು ತೆಗೆದುಹಾಕಲಾಗುವುದೆಂದು ಮದರಾಸ್ ಅಸೆಂಬ್ಲಿಯಲ್ಲಿ ಗೃಹಸಚಿವ ಶ್ರೀ ಟಿ. ಗೋಪಾಲರೆಡ್ಡಿಯವರು ತಿಳಿಸಿದರು.

ಭಾರತವಲ್ಲ "ಇಂಡಿಯಾ"

"ಇಂಡಿಯಾ" ಎಂಬುದರ ಬದಲು "ಭಾರತ" ಎಂದು ಪಶ್ಚಿಮ ಪಂಜಾಬ್ ಸರ್ಕಾರಿ ಪ್ರಕಟಣೆಗಳಲ್ಲಿಯೂ ಮತ್ತು ಪಾಕಿಸ್ಥಾನ ಪತ್ರಿಕೆಗಳಲ್ಲಿಯೂ ಉಪಯೋಗಿಸಲಾಗುತ್ತಿದೆ. ಲಾಹೋರಿನಲ್ಲಿರುವ ಇಂಡಿಯಾದ ಡೆಪ್ಯುಟಿ ಹೈ ಕಮಿಷನರವರು ಇದನ್ನು ಖಂಡಿಸಿ, ವಿಶ್ವಸಂಸ್ಥೆಯಲ್ಲಿ "ಇಂಡಿಯಾ" ಎಂಬ ಹೆಸರಿನಲ್ಲಿಯೇ ಎಲ್ಲ ವ್ಯವಹಾರಗಳನ್ನು ನಡೆಸುತ್ತಿರುವುದರಿಂದ, "ಭಾರತ" ಎಂದು ದುರುಪಯೋಗಪಡಿಸದೆ "ಇಂಡಿಯಾ" ಎಂದೇ ಪದಪ್ರಯೋಗಮಾಡಬೇಕೆಂದು ಸರ್ಕಾರಿ ಪ್ರಕಟಣೆ ಹೊರಡಿಸಿದ್ದಾರೆ.

ರಾಜಕೋಟೆ ರೈಲು ಉರುಳಿತು

ರಾಜಕೋಟೆಗೆ ಹೋಗುತ್ತಿದ್ದ ಗೂಡ್ಸ್‌ಗಾಡಿಯು ರಾಜಕೋಟೆಯ ಬಳಿ ಉರುಳಿದುದರಿಂದ ೨೮ ವ್ಯಾಗನ್ನುಗಳು ಕೆಳಕ್ಕೆ ಬಿದ್ದು ಜಜ್ಜಿಹೋದುವು. ಪ್ರಾಣಹಾನಿಯೇನೂ ಆಗಿಲ್ಲ.

ಶ್ರೀ ಸುಭಾಷ್ ಬದುಕಿರುವರೇ ?

ಲಂಡನಲ್ಲಿರುವ ಶ್ರೀ ಟಿ. ಬಿ. ಸೀಲ್‌ರವರು, ಶ್ರೀ ಬೋಸರು ಜೀವಂತರಾಗಿದ್ದಾರೆಂದೂ, ಅವರು ಮಂಗೋಲಿಯದ ಉಲಾರ್‌ಬಾಟಿನ ಒಂದು ಆಶ್ರಮದಲ್ಲಿದ್ದಾರೆಂದೂ, ಅವರು ಇನ್ನು ಮುಂದೆ ರಾಜಕೀಯದಲ್ಲಿ ಭಾಗವಹಿಸಲು ಇಷ್ಟಪಡುವುದಿಲ್ಲವೆಂದೂ ತಿಳಿಸಿದ್ದಾರೆ.

ಭಾರತದಲ್ಲಿ ವಿದೇಶಿಯರು

ಭಾರತದಲ್ಲಿರುವ ರಿಜಿಸ್ಟರಾದ ವಿದೇಶೀಯರ ಒಟ್ಟು ಸಂಖ್ಯೆ ೪೫,೬೬೧ ಇವರಲ್ಲಿ ೩೫,೫೫೬ ಮಂದಿ ಗಂಡಸರು. ಇವರೆಲ್ಲಾ ತಮ್ಮ ಚಲನವಲನಗಳನ್ನು ಪೋಲೀಸರಿಗೆ ತಿಳಿಸಬೇಕಾಗುವುದು. ಇಂತಹ ವಿದೇಶೀಯರ ಅತ್ಯಧಿಕ ಸಂಖ್ಯೆ ಚೀಣೀಯರದು (೧೩,೫೪೯) ಭಾರತದಲ್ಲಿರುವ ಇತರ ಜನಾಂಗಗಳೆಂದರೆ ೩೩೨ ಮಂದಿ ರಷ್ಯನರು, ೪೧೫೭ ಅಮೆರಿಕನರು, ೭೬೩೦ ಗಡಿನಾಡಿನ ಪಠಾಣರು, ೪೬೭೯ ಅಫ್‌ಘನರು, ೮ ವಿಯಟ್‌ನಾಮಿಗಳು ಮತ್ತು ೧೦ ಇಥಿಯೋಪಿಯನರು.

ಭಾರತದ ವಿದೇಶಾಂಗ ಕಚೇರಿಗಳು

ಭಾರತದ ಆಡಿಟರ್ ಜನರಲ್ ಶ್ರೀ ವಿ. ನರಹರಿರಾಯರು ವಿವಿಧ ದೇಶಗಳಲ್ಲಿರುವ ಭಾರತದ ವಿದೇಶಾಂಗ ಕಚೇರಿಗಳಿಗೆ ಭೇಟಿಕೊಟ್ಟು ಪರಿಶೀಲಿಸುತ್ತಲಿದ್ದಾರೆ. ಅವರು ತಮ್ಮ ಹೇಳಿಕೆಯಲ್ಲಿ ಭಾರತದ ವಿದೇಶಾಂಗ ಕಚೇರಿಗಳನ್ನು ಪುನರ್ವ್ಯವಸ್ಥೆಗೊಳಿಸಬೇಕೆಂದೂ ಮತ್ತು ಅವರ ಹಣಕಾಸಿನ ವೈವಾಟನ್ನು ಪರಿಶೀಲಿಸಲೋಸುಗ ಪ್ರತ್ಯೇಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವೆಂದೂ, ಈ ವಿದೇಶಾಂಗ ಕಚೇರಿಗಳಿಗಾಗಿ ೧೮೦ ಕೋಟಿ ರೂ.ಗಳೂ ಖರ್ಚಾಗುತ್ತಿದೆಯೆಂದೂ ಮತ್ತು ಈ ಆರ್ಥಿಕವೆಚ್ಚವನ್ನು ಸುವ್ಯವಸ್ಥಿತ ರೀತಿಯಲ್ಲಿ ಉಪಯೋಗವಾಗುವಂತೆ ಏರ್ಪಡಿಸಲು ಆಡಿಟ್ ಮತ್ತು ಅಕೌಂಟ್ಸ್ ಶಾಖೆಗಳನ್ನು ಬೇರ್ಪಡಿಸುವುದು ಸೂಕ್ತವೆಂದೂ ಹೇಳಿದ್ದಾರೆ.

ಸಲಗದ ಹಾವಳಿ

ಹೆಗ್ಗಡದೇವನಕೋಟೆ ಪ್ರದೇಶದಲ್ಲಿ ಭಾರಿ ಸಲಗವೊಂದು ಅಲ್ಲಿನ ಜನರಿಗೆ ತನ್ನ ಹಾವಳಿಯಿಂದ ಬಹು ಕಳವಳವನ್ನುಂಟುಮಾಡಿತ್ತು. ಮೈಸೂರು ಶ್ರೀಮನ್ಮಹಾರಾಜರು ಅಲ್ಲಿ ಆನೆ ಶಿಕಾರಿಗೆ ದಯಮಾಡಿಸಿ ಈ ಸಲಗವನ್ನು ಗುಂಡಿಟ್ಟುಕೊಂದು ಅದರ ಹಾವಳಿಯಿಂದ ಜನರನ್ನು ಪಾರುಮಾಡಿದರು.

ಅಸ್ಸಾಮಿಗೆ ಬರ್ಮಾ ಅಕ್ಕಿ

ಈಗಾಗಲೇ ಭಾರತ ಆಹಾರಾಭಾವ ನಿವಾರಣೆಗಾಗಿ ಬರ್ಮಾದಿಂದ ಭಾರತಕ್ಕೆ ಕೊಟ್ಟಿರುವ ೧,೦೦೦ ಟನ್ ಅಕ್ಕಿ ಬಿಟ್ಟು, ಅಸ್ಸಾಂ ಭೂಕಂಪ ಪೀಡಿತರಿಗಾಗಿಯೇ ಇನ್ನೂ ೧,೦೦೦ ಟನ್ ಅಕ್ಕಿಯನ್ನು ಬರ್ಮಾ ಭಾರತಕ್ಕೆ ದಾನ ಮಾಡುವುದೆಂದು ಮದ್ರಾಸಿನಲ್ಲಿ ಆರೋಗ್ಯ ಚಿಕಿತ್ಸೆಗಾಗಿ ಬಂದಿರುವ ಬರ್ಮಾ, ವ್ಯವಸಾಯ ಮಾಜೀಮಂತ್ರಿ ಥಾಕಿನ್ ಟಿನ್‌ರವರು ತಿಳಿಸಿದ್ದಾರೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೧೨ ಮಂಗಳವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ **ಚಿತ್ರಲೋಕ.** ೭-೧೫ ಸಂಗೀತ (ಶ್ರೀ ಗೌರಿ ಕುಪ್ಪುಸ್ವಾಮಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಶ್ರೀ. ಬಿ.ಟಿ. ರಾಜಪ್ಪ (ಪಿಟೀಲು) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೦-೫೦ ಶ್ರೀ ಹೇಮಂತ ಕುಮಾರ (ರ) ೨-೦ ಸಂಗೀತ (ಶ್ರೀ. ಗೌರಿ ಕುಪ್ಪುಸ್ವಾಮಿ) ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ (ಶ್ರೀ. ಕೆ. ವಿ. ಸಂಪತ್) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಮೈಸೂರು ಅರಮನೆ ಆರ್ಕೆಸ್ಟ್ರಾ ೭-೩೦ ಕನ್ನಡದಲ್ಲಿ ಭಾಷಣ "ಕಾಯಿ ತೋಟ" ೭-೪೫ ಕನ್ನಡದಲ್ಲಿ ವಾರ್ತೆ ೮-೦ ಶ್ರೀ. ಬಿ. ಟಿ. ರಾಜಪ್ಪ (ಪಿಟೀಲು) ೮-೩೦ ಸಂಗೀತ (ಶ್ರೀ. ಕೆ. ವಿ. ಸಂಪತ್) ೯.೦ ಇಂಗ್ಲೀಷಿನಲ್ಲಿ ವಾರ್ತೆಗಳು ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನ ವೈವಿಧ್ಯ (ರ) ೧೦-೦ ಮುಕ್ತಾಯ.

ರಣಜಿತ್ ಟಾಕೀಸ್
ತಾ॥ 8-9-50 ರಿಂದ 2ನೇ ವಾರ
ದಿನವಹಿ 3 ಆಟಗಳು
ರೂಮಾಲ್★ROOMAL
ಪಾತ್ರ :- ನರ್ಗೀಸ್, ರೆಹಮಾನ್, ಜೈರಾಜ್, ಜೀವನ್, ಕುಕ್ಕೂ.
ಬೆಳಗಿನ ಪ್ರದರ್ಶನ
ಮೂರು ದಿನಗಳು ಮಾತ್ರ
ಕುನ್ವಾರ ಬಾಪ್
ಪಾತ್ರ : ಕಿಶೋರ್ ಸಾಹು

WANTED

Those who are interested to take up the *Sole Agency* of the 'Samachara' Kannada daily, may contact in person.

The Manager,
'Samachara' daily,
Lansdowne Buildings, Mysore.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಫೀಲ್ಡ್ ಮಾರ್ಷಲ್ ಸ್ಮಟ್ಸರ ನಿಧನ

೩ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨ --೯—೧೯೫೦ ನೇ ಮಂಗಳವಾರ [ಸಂಚಿಕೆ ೨೪

೧೯೧೯ರಿಂದ ೧೯೨೪ ಮತ್ತು ೧೯೩೯ರಿಂದ ೧೯೪೮ರ ವರೆಗೆ ದಕ್ಷಿಣ ಆಫ್ರಿಕಾದಲ್ಲಿ ಮುಖ್ಯ ಮಂತ್ರಿಗಳಾಗಿದ್ದ, ಫೀಲ ಮಾರ್ಷಲ್ ಸ್ಮಟ್ಸ್‌ರವರು ಸ್ವಲ್ಪದಿವಸಗಳಿಂದ ಇನ್‌ಫ್ಲುಯಂಜ ದಿಂದ ನರಳುತ್ತಿದ್ದು ನಿನ್ನೆ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಯ ಬರುತ್ತದೆ. ಅವರಿಗೆ ೮೦ ವಯಸ್ಸಾಗಿತ್ತು. ಅವರು ದಕ್ಷಿ ಆಫ್ರಿಕಾದಲ್ಲಿ ಯುನೈಟೆಡ್ ಪಾರ್ಟಿಯ ಲೀಡರ್ ಆಗಿದ್ದರು.

ಅಪಹೃತ ಹಿಂದೂ ಮಹಿಳೆಯರು

ಅತಿ ಪ್ರಾಚೀನವಾದ, ಹಿಂದೂ ವೈದಿಕ ಧರ್ಮದ ಆದಿ ಮಠವಾದ, ಶ್ರೀ ಶೃಂಗೇರಿ ಆದಿ ಶಂಕರಮಠದ ಶ್ರೀ ಜಗದ್ಗುರುಗಳು ಪೂರ್ವ ಪಾಕಿಸ್ಥಾನ ಮತ್ತು ಪಶ್ಚಿಮ ಪಂಜಾಬುಗಳಲ್ಲಿ ಮುಸ್ಲಿಮರ ಅತ್ಯಾಚಾರಕ್ಕೆ ತುತ್ತಾದ ಅಪಹೃತ ಹಿಂದೂ ಮಹಿಳೆಯರ ವಿಚಾರದಲ್ಲಿ ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಆ ಸ್ತ್ರೀಯರನ್ನು ಹೀನಾಯವಾಗಿ ಕಾಣುವುದು ಅಸಾಧುವೆಂದೂ, ಅವರು ಅಂತಃ ಉಗ್ರ ಪರಿಸ್ಥಿತಿಯಲ್ಲಿಯೂ ತಮ್ಮ ಧರ್ಮ ಬಿಡದೆ ಸ್ವಧರ್ಮ ನಿರತರಾಗಿದ್ದುದು ಅಭಿನಂದನಾರ್ಹವೆಂದೂ, ಅವರಿಗೆ ಮರಳಿ ಹಿಂದೂ ಸಮಾಜದಲ್ಲಿ ಎಂದಿನಂತೆಯೇ ಸ್ಥಾನಮಾನಕೊಟ್ಟು ಗೌರವಿಸಬೇಕೆಂದೂ, ಇದು ಪೂರ್ಣ ಶಾಸ್ತ್ರ ಸಮ್ಮತವಾದ ನಡವಳಿಕೆಯೇ ಆಗಿದೆಯೆಂದೂ, ಹಿಂದೂ ಶಾಸ್ತ್ರಗಳಲ್ಲಿ ಈ ತೆರನಾದ ಸಮಾಜದುರಂತ ಪ್ರಕರಣಗಳಲ್ಲಿ ನಡೆಯುವ ಘೋರಪಾಪಗಳಿಗೆ ಪ್ರಾಯಶ್ಚಿತ್ತವನ್ನು ಏರ್ಪಡಿಸಿರುವರೆಂದೂ, ತಿಳಿಸಿದ್ದಾರೆ.

ವಿಷಿನ್ಸ್ಕಿ

ರಷ್ಯಾ ವಿದೇಶಾಂಗ ಮಂತ್ರಿ ವಿಷಿನ್ಸ್ಕಿಯವರು ವಿಶ್ವ ಸಂಸ್ಥೆಯಲ್ಲಿ ಭಾಗವಹಿಸಲು ಮಾಸ್ಕೋದಿಂದ ಅಮೇರಿಕಾಕ್ಕೆ ಹೊರಟಿರುವರು.

ರಹದಾರಿಯಿಲ್ಲದೆ ದವಸವನ್ನು ಸಾಗಿಸಬಹುದು

ಹಾಸನ ಜಿಲ್ಲೆಯಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರಹದಾರಿಯಿಲ್ಲದೆ ಸುಮಾರು ೨೦ ಸೇರು ದವಸವನ್ನು ತೆಗೆದುಕೊಂಡು ಹೋಗಬಹುದೆಂದು ಜಿಲ್ಲಾಧಿಕಾರಿಗಳು ಎಲ್ಲರ ಅನುಕೂಲಕ್ಕಾಗಿ ಆಜ್ಞೆಯನ್ನು ವಿಶದಪಡಿಸಿರುವರು.

(ಈ ಆಜ್ಞೆಯು ಜಿಲ್ಲಾಧಿಕಾರಿಗಳ ಆಜ್ಞೆಯೇ ಅಥವಾ ಸರ್ಕಾರದ ಆಜ್ಞೆಯೇ ? ಇದೇ ರೀತಿಯಾಗಿ ವಿನಾಯತಿಯನ್ನು ಇತರ ಜಿಲ್ಲೆಗಳಲ್ಲೂ ಯಾಕೆ ಕೊಡಬಾರದು. ಹಾಗೆ ವಿನಾಯತಿಯನ್ನು ಕೊಟ್ಟಿದ್ದರೆ ಸರ್ಕಾರವು ಆ ಆಜ್ಞೆಯನ್ನು ಹೊರಗೆಡಹಲಿ. ಸಂಪಾದಕ).

ಕಲ್ಕತ್ತಾದಲ್ಲಿ ಸಾರ್ವತ್ರಿಕ ಮುಷ್ಕರ ?

ಕಲ್ಕತ್ತಾದಲ್ಲಿ ಇಂದು ಸಾರ್ವತ್ರಿಕ ಮುಷ್ಕರವನ್ನು ಹೂಡಬೇಕೆಂದು ಹವಣಿಸುತ್ತಿದ್ದ ೨೪ ಜನ ಕಾರ್ಮಿಕರನ್ನು ನಿನ್ನೆ ದಸ್ತಗಿರಿ ಮಾಡಲಾಗಿದೆ. ಅವರ ಪೈಕಿ ಒಬ್ಬ ಸ್ತ್ರೀಯನ್ನೂ ಬಂಧಿಸಲಾಗಿದೆ.

ಮೀರ್ ಲಾಯಕ್ ಆಲಿ ಲಂಡನ್ನಿಗೆ

ಹೈದರಾಬಾದ್ ಮಾಜೀ ಮುಖ್ಯಮಂತ್ರಿ ಮೀರ್ ಲಾಯಕ್ ಆಲಿಯವರು ಹೈದರಾಬಾದಿನಿಂದ ತಪ್ಪಿಸಿಕೊಂಡು ಕರಾಚಿಗೆ ಹೋಗಿದ್ದು, ಈಗ ಲಂಡನ್ನಿಗೆ ತೆರಳುವರಿದ್ದಾರೆಂದೂ, ಅಲ್ಲಿಂದ ಅಮೇರಿಕಾಕ್ಕೆ ಹೋಗುವರೆಂದು ಕರಾಚಿಯಿಂದ ಬಂದ ಸುದ್ದಿಯು ತಿಳಿಸುತ್ತದೆ.

ಭಾರತಕ್ಕೆಲ್ಲಾ ಒಂದೇ ಚಲಚ್ಚಿತ್ರ ಸೆನ್ಸಾರ್ ಸಮಿತಿ

ಹಾಲಿ ಅನೇಕ ಸಂಸ್ಥಾನಗಳಲ್ಲಿರುವ ಚಲಚ್ಚಿತ್ರ ಸೆನ್ಸಾರ್ ಸಮಿತಿಗಳಿಗೆ ಬದಲು ಕೇಂದ್ರ ಚಲಚ್ಚಿತ್ರ ಸಮಿತಿಯೊಂದನ್ನು ರಚಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ ಎಂದು ವಾರ್ತಾ ಮಂತ್ರಿ ಶ್ರೀ ಆರ್. ಆರ್. ದಿವಾಕರರು ತಿಳಿಸಿರುವರು.

ಅಸ್ಸಾಂ ಪೀಡಿತರಿಗೆ ಸಹಾಯ

ಅಸ್ಸಾಂ ಭೂಕಂಪ ಪೀಡಿತರ ಪರಿಹಾರ ನಿಧಿಗೆ ಹೈದರಾಬಾದ್ ಸರ್ಕಾರವು ೫೦,೦೦೦ ರೂ. ಗಳನ್ನು ಕೊಟ್ಟಿದೆ.

ಕಪಿ, ಮುಳ್ಳುಹಂದಿ ಕೊಂದವರಿಗೆ ಬಹುಮಾನ

ಬೆಳೆಗಳನ್ನು ನಾಶಪಡಿಸುತ್ತಲಿರುವ ಕಪಿ ಮತ್ತು ಮುಳ್ಳುಹಂದಿಗಳನ್ನು ಕೊಂದು ಅವರ ತಲೆ ತರುವವರಿಗೆ ಪಶ್ಚಿಮ ಬಂಗಾಳ ಸರ್ಕಾರ ಬಹುಮಾನ ಕೊಡುವುದು. ಕಪಿ ತಲೆಗೆ ೩ ರೂ. ಮುಳ್ಳು ಹಂದಿ ತಲೆಗೆ ೪ ರೂಪಾಯಿ.

ಪ್ರಧಾನಿಗಳು ಪ್ರವೇಶಿಸುವುದಿಲ್ಲ

ನಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ ಪ್ರಧಾನಿ ಪಂಡಿತ ನೆಹರೂರವರು ಹೋಗುವ ಮುನ್ನ ಬೊಂಬಾಯಿಗೆ ಹೋಗಿ ಅಲ್ಲಿ ನಡೆಯುತ್ತಲಿರುವ ಗಿರಣಿ ಮುಷ್ಕರ ವಿಷಯದಲ್ಲಿ ಪ್ರವೇಶಿಸುವರೆಂದು ಕೆಲವು ಕಡೆ ಬಂದಿರುವ ಸುದ್ದಿಗಳು ನಿರಾಧಾರವೆಂದು ಬೊಂಬಾಯಿನ ಕಾರ್ಮಿಕ ಸಚಿವರು ತಿಳಿಸಿರುವರು.

ಅಸ್ಸಾಮಿಗೆ

ಅಸ್ಸಾಮಿನಲ್ಲಿ ಭೂಕಂಪದ ಪರಿಸ್ಥಿತಿಯನ್ನು ಪರಿಶೀಲಿಸಿ ಸ್ವಂತವಾಗಿ ನೋಡಿಹೋಗಲು ವಿಶ್ವಸಂಸ್ಥೆಯ ಕೆಲವು ಅಧಿಕಾರಿಗಳು ಬರುವರೆಂದು ತಿಳಿಯಬರುತ್ತದೆ.

ತಿರುವನಂತಪುರದಲ್ಲಿ ಆಹಾರ ತೀವ್ರ ಬಿಕ್ಕಟ್ಟು

ತಿರುವನಂತಪುರದಲ್ಲಿ ಆಹಾರದ ಬಿಕ್ಕಟ್ಟು ತೀ ವಾಗಿದೆ. ನಿನ್ನೆ ದಿವಸ ವಯಸ್ಕರಿಗೆ ಕೇವಲ ಎರ ಔನ್ಸು ಅಕ್ಕಿಯನ್ನು ಕೊಟ್ಟಿರುವರು.

ಯಳಂದೂರು ಪೌರಸಭೆ

ಯಳಂದೂರು ಮೈನರ್ ಪೌರಸಭೆಗೆ ಖಾಸಗೀ ಅ ಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕನ್ನು ಸರ್ಕಾರ ವರು ಕೊಟ್ಟಿರುವರು.

ಶಾಸನಸಭೆ ಸದಸ್ಯರಿಗೆ ಅಲೋಯನ್ಸ್

ಮೈಸೂರು ಶಾಸನಸಭೆಯ ಸದಸ್ಯರುಗಳಿಗೆ ಸಮಿ ಗಳಲ್ಲಿ ಭಾಗವಹಿಸಲು ದಿನವೊಂದಕ್ಕೆ ೧೫ ರೂಪಾ ಅಲೋಯನ್ಸ್, ರೈಲ್ವೆ ಮೊದಲನೇ ತರಗತಿ ಎರ ಪ್ರಯಾಣದ ಖರ್ಚು ಮತ್ತು ಮೈಲಿಗೆ ೬ ಆಣೆ ಮತ ೬ ಆಣೆಯ ಶೇ. 33⅓ ರಷ್ಟು ಅಲೋಯನ್ಸನ್ನು ಕೊ ಲಾಗುವುದೆಂದು ಸರ್ಕಾರದವರು ಆಜ್ಞೆ ಹೊರಡಿಸಿ ವರು.

ಬೊಂಬಾಯಿನಲ್ಲಿ ಪುನಃ ಗೋಲಿಬಾರು

ನಿನ್ನೆ ಬೊಂಬಾಯಿನಲ್ಲಿ ಸೇರಿದ್ದ ಸಭೆಯನ ಪೋಲೀಸಿನವರು ಚದುರಿಸುವ ಸಮಯದಲ್ಲಿ ಕೆಲ ಪುಂಡರು ಪೋಲೀಸಿನವರ ಮೇಲೆ ಕಲ್ಲುಗಳನ್ನೆಸೆಯ ಪೋಲೀಸಿನವರು ಗುಂಡುಹಾರಿಸಿದರು. ಯಾರಿಗ ಏನೂ ಅಪಾಯವಾಗಿಲ್ಲವೆಂದು ತಿಳಿಯಬರುತ್ತದೆ. ೬ ಗಿರಣಿಗಳಲ್ಲಿ ೬ ಪೂರ್ತಿ ಮತ್ತು ೬ ಸ್ವಲ್ಪ ಕೆ ದಲ್ಲಿ ತೊಡಗಿದವು.

ವಿಶ್ವಸಂಸ್ಥೆಗೆ ಭಾರತೀಯರು

ಆರ್ಥಿಕ ಮತ್ತು ಆಡಳಿತ ವಿಚಾರದಲ್ಲಿ ವಿಶೇ ವಿದ್ಯಾವ್ಯಾಸಂಗಮಾಡಲು ಇಷ್ಟಪಡುವ ಮೈಸೂ ಸರ್ಕಾರಿ ನೌಕರರಿಗೆ ವಿಶ್ವಸಂಸ್ಥೆಯು ವಿದ್ಯಾರ್ಥಿ ವೇ ವನ್ನೂ ಮತ್ತು ಮಾಹೆಯಾನ ಜೀವನ ವೇತನವನ ಕೊಡಲು ನಿರ್ಧರಿಸಿರುವರು. ಈ ಅವಕಾಶವನ್ನು ಉ ಯೋಗಪಡಿಸಿಕೊಳ್ಳಬೇಕೆಂದಿರುವ ಮೈಸೂರು ಸಕ ರದ ಅಧಿಕಾರಿಗಳು ಮುಂದಿನ ತಿಂಗಳು ೧ ನೇ ತಾ ಖಿನೊಳಗೆ ಮೈಸೂರು ಸರ್ಕಾರದ ವಿದ್ಯಾ ಇಲಾ ಕಾರ್ಯದರ್ಶಿಯವರಿಗೆ ಅರ್ಜಿಯನ್ನು ಬರೆದುಕೊ ಬೇಕೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಭಾರತದಿಂದ ಬ್ರಿಟನ್ನಿಗೆ

ಭಾರತದ ಒಟ್ಟು ಟೀ ಬೆಳೆಯು ೫೭॥ ಕೋಟಿ ಪೌಂಡುಗಳು. ಅದರ ಪೈಕಿ ೨೭॥ ಕೋಟಿ ಪೌಂಡು ಟೀ ಯನ್ನು ಭಾರತವು ಬ್ರಿಟನ್ನಿಗೆ ರಫ್ತು ಮಾಡುವುದಾಗಿ ತಿಳಿದುಬಂದಿದೆ.

ಕೊರಿಯಾ ರಣರಂಗ

ಕೊರಿಯಾದ ರಣರಂಗವು ಉಗ್ರರೂಪವನ್ನು ತಾಳುತ್ತಿದೆ. ಉತ್ತರ ಕೊರಿಯನ್ನರ ಪ್ರಬಲಧಾಳಿಯು ಅಮೆರಿಕನರ "ರಕ್ಷಣಾವ್ಯೂಹ"ವನ್ನು ಛೇಧಿಸಿ ಮುನ್ನುಗ್ಗುತ್ತಿರುವುದಾಗಿ ತಿಳಿಯಬರುತ್ತದೆ. ಕಮ್ಯೂನಿಸ್ಟರ ಒಟ್ಟು ಸೈನ್ಯ ಬಲವು ೧೨ ಲಕ್ಷಕ್ಕೆ ಮೀರಿದುದಾಗಿದೆಯೆಂದು ಅಂದಾಜು ಮಾಡಲಾಗಿದೆ. ಈಗ ಕೆಂಪು ಸೈನ್ಯವು ಟೇಗೂವಿನಿಂದ ೬ ಮೈಲಿಗೂ ಹತ್ತಿರ ಮುನ್ನುಗ್ಗಿ ಬಂದಿವೆಯೆಂದೂ, ಇದರ ಪರಿಣಾಮವಾಗಿ ೩,೫೦೦ ಜನ ಸಿಪಾ[illegible] ಕ್ಷೇತ್ರದಲ್ಲಿ ಮರೆಯೊಕ್ಕು ಟೇಗೂ ಕಡೆಯಿಂದ ಓಡಿಬಂದವರೆಂದೂ ವರದಿಯಾಗಿದೆ

ಮತ್ತೆಮತ್ತೆ ಭೂಕಂಪ

ಅಸ್ಸಾಮಿನ ದಿಬ್ರೂಘರ ಪ್ರದೇಶದಲ್ಲಿ ಪುನಃಪುನಃ ಭೂಕಂಪವಾಗುತ್ತಲಿದೆ. ನಿನ್ನೆ ಬೆಳಗ್ಗೆ ೨ ಬಾರಿಯೂ ಮತ್ತು ಮಧ್ಯಾನ್ಹ ಒಂದು ಬಾರಿಯೂ ಭೂಕಂಪವಾಯಿತೆಂದು ಸುದ್ದಿ ಬಂದಿದೆ.

ಗೆದ್ದ ಕುದುರೆ ಸತ್ತಿತು

ಪೂನಾದಲ್ಲಿ ನಡೆದ ಕುದುರೆ ಜೂಜಿನಲ್ಲಿ ೬ ವರ್ಷದ ಇಂಗ್ಲಿಷ್ ಕುದುರೆ "ಕ್ವಿಕ್‌ಸ್ಯಾಂಡ್" ಪ್ರಥಮಸ್ಥಾನಗಳಿಸಿ, ಅಂತ್ಯದಲ್ಲಿ ಆ ಸ್ಥಳದಲ್ಲಿಯೇ ಸತ್ತುಬಿದ್ದಿತು. ಪಶ್ಚಿಮ ಭಾರತ ಕುದುರೆ ಜೂಜಿನಲ್ಲಿ ಈ ರೀತಿಯ ವಿಷಾದಾಂತ ಪ್ರಕರಣವಾದುದು ಇದೇ ಮೊದಲು.

ಚಿತ್ತಗಾಂಗ್ ರೈಲ್ವೆ ಅನಾಹುತ

ಪೂರ್ವ ಪಾಕಿಸ್ಥಾನದಲ್ಲಿ ಡಾಕಾದಿಂದ ಚಿತ್ತಗಾಂಗಿಗೆ ಹೋಗುವ ರೈಲ್ವೆಗಾಡಿಯ ರೈಲ್ವೆ ಇಂಜಿನ್ನು ಮತ್ತು ಮೂರು ಪ್ರಯಾಣೀಕರು ಕುಳಿತಿದ್ದ ಗಾಡಿಗಳು ಕಂಬಿ ತಪ್ಪಿ ಉರುಳಿ ಬಿದ್ದುದರ ಪರಿಣಾಮವಾಗಿ ೨೭ ಜನರು ಸತ್ತರೆಂದೂ ಮತ್ತು ೫೦ ಜನರಿಗೆ ತೀವ್ರ ಗಾಯಗಳಾಗಿವೆಯೆಂದು ತಿಳಿದುಬರುತ್ತದೆ ಈ ದುರಂತಕ್ಕೆ ವಿನಾಶಕ್ಮಕರ ಹಿಂಸಾತ್ಮಕ ಚಳುವಳಿಯೇ ಕಾರಣವೆಂದು ಹೇಳಲಾಗಿದೆ.

ಎ. ಐ. ಆರ್. ಪ್ರಚಾರಕ್ಕಲ್ಲ

ಕೇಂದ್ರ ವಾರ್ತಾಶಾಖೆಯ ಉಪಸಚಿವರಾದ ಶ್ರೀ. ಆರ್. ಆರ್. ದಿವಾಕರರವರು ಮದ್ರಾಸಿನಲ್ಲಿ ಪತ್ರಿಕೋದ್ಯೋಗಿಗಳ ಪ್ರಶ್ನೆಗಳಿಗೆ ಉತ್ತರವೀಯುತ್ತ ಎ.ಐ. ಆರ್., ಬಿ.ಬಿ.ಸಿ.ಯ ನೀತಿಯನ್ನೇ ಅನುಸರಿಸುತ್ತಿರುವುದಾಗಿಯೂ, ಯಾವ ರಾಜಕೀಯ ಪಕ್ಷಕ್ಕೂ ತನ್ಮೂಲಕವಾಗಿ ಪ್ರಚಾರಮಾಡಲು ಅವಕಾಶವಿಲ್ಲವೆಂದೂ ಹೇಳಿದರು. ಬಿ.ಬಿ.ಸಿ.ಯಲ್ಲಿ ಇತ್ತೀಚೆಗೆ ಕೆಲವು ರಾಜಕೀಯ ಪಕ್ಷಗಳಿಗೆ ಪ್ರಚಾರಾವಕಾಶವನ್ನು ಕೊಟ್ಟಿದೆಯೆಂದೂ, ಹಾಗೇನಾದರೂ ಭಾರತ ಸರ್ಕಾರವು ಅವಕಾಶಕೊಡುವ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳಿಗೂ ಸಮಾನಾವಕಾಶ ಕೊಡಲಾಗುವುದೆಂದೂ ತಿಳಿಸಿದರು.

ಶ್ರೀ ಕೆ.ಸಿ. ರೆಡ್ಡಿಯವರು ನಾಸಿಕಕ್ಕೆ

ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಾಸಿಕದಲ್ಲಿ ನಡೆಯಲಿರುವ ಅ. ಭಾ. ಕಾಂಗ್ರೆಸ್ ಅಧಿವೇಶನಕ್ಕೆ ಸೆ. ೧೬ ನೇ ತಾರೀಖು ಬೊಂಬಾಯಿಗೆ ವಿಮಾನ ಮಾರ್ಗವಾಗಿ ತೆರಳಿ, ೧೭ ನೇ ತಾರೀಖು ಬೊಂಬಾಯಿನಿಂದ ನಾಸಿಕಕ್ಕೆ ಹೊರಡುವರು. ಕಾಂಗ್ರೆಸ್ ಎ.ಐ.ಸಿ.ಸಿ. ಮತ್ತು ಬಹಿರಂಗ ಅಧಿವೇಶನದಲ್ಲಿ ಭಾಗವಹಿಸಿ ಸೆ. ೨೨ ರಲ್ಲಿ ಬೆಂಗಳೂರಿಗೆ ವಾಪಸ್ಸಾಗುವರು.

ಸರ್ ಎಂ. ವಿ. ಯವರ ಜನ್ಮದಿನ

ಮೈಸೂರಿನ ಮಾಜೀ ದಿವಾನರೂ, ಜಗತ್ಪ್ರಸಿದ್ಧ ಇಂಜಿನೀಯರೂ ಮತ್ತು ಮೇಧಾವಿಗಳೂ ಆದ ಸರ್. ಎಂ ವಿಶ್ವೇಶ್ವರಯ್ಯನವರಿಗೆ ಸೆಪ್ಟೆಂಬರ್ ೧೫ಕ್ಕೆ ೯೦ ವರ್ಷ ತುಂಬುತ್ತದೆ ಅವರ ೯೦ನೇ ಜನ್ಮದಿನೋತ್ಸವವನ್ನು ಸಂಸ್ಥಾನಾದ್ಯಂತ ಮೈಸೂರಿನವರೆಲ್ಲರೂ ಅತಿ ವಿಜೃಂಭಣೆಯಿಂದ ಜರುಗಿಸಬೇಕೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ. ಕೆ. ಸಿ ರೆಡ್ಡಿಯವರು ಮನವಿ ಮಾಡಿದ್ದಾರೆ.

ಅಸ್ಸಾಮಿಗೆ ವಿಶೇಷಸಮಿತಿ

ಅಸ್ಸಾಂ ಗೌರ್ನರ್ ಜೈರಾಮ್‌ದಾಸ್ ದೌಲತ್‌ರಾಮ್ ರವರ ಅಧ್ಯಕ್ಷತೆಯಲ್ಲಿ ಅಸ್ಸಾಮಿನಲ್ಲಿ ಉದ್ಭವಿಸಿರುವ ಹಲವಾರು ಜಟಿಲ ಪ್ರಶ್ನೆಗಳನ್ನು ಎದುರಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವ ನಿಮಿತ್ತ ಒಂದು ವಿಶೇಷ ಸಮಿತಿಯನ್ನು ರಚಿಸಲಾಗಿದೆಯೆಂದು ತಿಳಿದುಬರುತ್ತದೆ.

ರಾಷ್ಟ್ರಾಧ್ಯಕ್ಷರಿಗೇ ಪ್ರಥಮಸನ್ಮಾನ

ಭಾರತ ಸೈನ್ಯದಲ್ಲಿ ಜರಗುವ ಸಂತೋಷ ಸಮಾರಂಭದಲ್ಲಿ ಇದುವರೆಗೂ ಚಕ್ರವರ್ತಿಯವರಿಗೆ ಪ್ರಥಮ ಸನ್ಮಾನಮಾಡುವ ಪದ್ಧತಿಯು ಜಾರಿಯಲ್ಲಿದ್ದಿತು. ಇನ್ನು ಮುಂದೆ ಭಾರತ ರಾಷ್ಟ್ರಾಧ್ಯಕ್ಷರಿಗೇ ಆ ಗೌರವ ಸಲ್ಲುವುದು. ಮತ್ತು ಜನಗಣಮನ ರಾಷ್ಟ್ರಗೀತೆಯನ್ನು ಅಂತ್ಯದಲ್ಲಿ ಹಾಡಲಾಗುವುದು.

ಬ್ರಿಟನ್ನಿಗೆ ಒತ್ತಾಯ

ಪಾಕಿಸ್ತಾನದ ವಿದೇಶಾಂಗಮಂತ್ರಿ ಸರ್ ಜಫರುಲ್ಲಾಖಾನರವರು ಪ್ರಪಂಚಸಂಸ್ಥೆಯು ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಮಾಡಬೇಕೆಂದು ಬ್ರಿಟನ್ನನ್ನು ಒತ್ತಾಯಪಡಿಸಬೇಕು ಎಂದು ಬ್ರಿಟಿಷ್ ಪ್ರಪಂಚಸಂಸ್ಥೆಯ ಪ್ರತಿನಿಧಿಗಳನ್ನು ಒತ್ತಾಯಪಡಿಸುತ್ತಿದ್ದಾರೆಂದು ಲಂಡನ್ನಿನ ವಾರ್ತೆಯು ತಿಳಿಸುತ್ತದೆ.

ಸುಪ್ರೀಂ ಕೋರ್ಟಿಗೆ ವಿದೇಶೀಯರು

ಭಾರತ ರಾಷ್ಟ್ರಾಧ್ಯಕ್ಷರು ರಾಜ್ಯಾಂಗ ಶಾಸನದ ೩೯೨ (೧) ವಿಧಿಯನ್ನನುಸರಿಸಿ, ಹಾಲಿ ಇರತಕ್ಕ ಚೀಫ್ ಜಡ್ಜಿಗಳಲ್ಲಿ ಯಾರನ್ನು ಬೇಕಾದರು (ಅಂದರೆ ವಿದೇಶೀಯರಾದರೂ ಸರಿಯೇ) ಸುಪ್ರೀಂಕೋರ್ಟಿಗೆ ಶ್ರೇಷ್ಠ ನ್ಯಾಯಾಧೀಶರನ್ನಾಗಿ ನೇಮಕಮಾಡುವ ಆಜ್ಞೆಯನ್ನು ಹೊರಡಿಸಿದ್ದಾರೆ. ಇದರಿಂದ ನ್ಯಾಯಶಾಖೆಯಲ್ಲಿ ವಿದೇಶೀಯರನ್ನು ಶ್ರೇಷ್ಠ ನ್ಯಾಯಾಧೀಶರನ್ನಾಗಿ ನೇಮಕ ಮಾಡಲು ಇದ್ದ ತೊಡಕು ನಿವಾರಣೆಯಾಗಿದೆ.

ಬರ್ನಾರ್ಡ್‌ಷಾ

ಬರ್ನಾರ್ಡ್‌ಷಾರವರು ಎಲುಬು ಮುರಿದು ಆಸ್ಪತ್ರೆಗೆ ದಾಖಲಾಗಿರುವರು. ಆರೋಗ್ಯವು ತೃಪ್ತಿಕರವಾಗಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೧೩ ಬುಧವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಸಂಗೀತ ೭-೨೫ ಶ್ರೀ. ಎಸ್. ಕೇಶವಮೂರ್ತಿ (ದೇವರನಾಮ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾನ್ಹ ೧-೦ ಶ್ರೀ. ಮುಶರೀ ಸುಬ್ರಹ್ಮಣ್ಯ ಐಯ್ಯರ್(ರ) ೧-೧೫ ಶ್ರೀ. ಜಿ.ಟಿ. ಶುಭಾಂಗಿ (ಹಾಡುಗಾರಿಕೆ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಕ್ಲಾರಿಯೋನೆಟ್ ೨-೦ ವನಿತಾ ವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಶ್ರೀ ರಂಗಪ್ಪ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೧೫ ಗಾನಾಮೃತ (ರ) ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ. ೭-೫ ಹಿಂದಿಕಾರ್ಯಕ್ರಮ ೭-೧೫ ಶ್ರೀ. ರಂಗಪ್ಪ (ಕೊಳಲು) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಶ್ರೀ ವಿ. ಚೊಕ್ಕಮ್ಮ (ವೀಣಾ ಮತ್ತು ಹಾಡುಗಾರಿಕೆ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು (ರ) ೧೦-೦ ಮುಕ್ತಾಯ.

೧೫ನೇ ಶತಮಾನದ ಫಿರಂಗಿ

ಮಲಬಾರಿನ ವಳ್ಳುವನಾಡು ತಾಲ್ಲೂಕಿನ ಹಳ್ಳಿಯೊಂದರಲ್ಲಿ ಹೊಲ ಉಳುತ್ತಿರುವಾಗ ಭೂಮಿಯಲ್ಲಿ ಹೂತುಹೋಗಿದ್ದ ಫಿರಂಗಿಯು ದೊರಕಿತು. ಅದನ್ನು ಪರೀಕ್ಷಿಸಲಾಗಿ ೧೫ನೇ ಶತಮಾನದ ಪೋರ್ಚುಗೀಸರದೆಂದು ಕಂಡು ಹಿಡಿಯಲಾಯಿತು. ಆ ಫಿರಂಗಿಯನ್ನು ಈಗ ಮದರಾಸ್ ಮ್ಯೂಸಿಯಂನಲ್ಲಿಡಲಾಗಿದೆ.

ಮೈಸೂರು ಸಿಟಿ ರೇಷನಿಂಗ್ ಆಫೀಸು

ಪ್ರಕಟನೆ

ತಾ॥ 9-9-1950 ನಂ. A1-250/50-51

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಇದೇ ಮಾಹೆ ೧೫ನೇ ತಾ॥ ಶುಕ್ರವಾರ "ಗಣೇಶ ಹಬ್ಬದ" ಪ್ರಯುಕ್ತ ಪೂರ್ತಾ ಮುಚ್ಚಲ್ಪಡುತ್ತವೆ.

(Sd) D. J. Balaraj,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಕಾಂಗ್ರೆಸ್ಸಿನ ಇಂದಿನ ನೀತಿಯೇನು?

ಬಿಡಿ ಪತ್ರಿಕೆ 3 ಪೈ **ದಿನಪತ್ರಿಕೆ** **Phone: 574**

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೩—೯—೧೯೫೦ ನೇ ಬುಧವಾರ [ಸಂಚಿಕೆ ೨೫

ನಾಸಿಕದಲ್ಲಿ ನಡೆಯಲಿರುವ ಅ. ಭಾ ಕಾಂಗ್ರೆಸ್ ಅಧಿವೇಶನದಲ್ಲಿ ಅಂತರ ರಾಷ್ಟ್ರೀಯ, ಆರ್ಥಿಕ ಮತ್ತು ಜಾತೀಯತೆಯ ವಿಷಯದಲ್ಲಿ ಕಾಂಗ್ರೆಸ್ಸಿನ ನೀತಿಯೇನೆಂಬುದನ್ನು ಸ್ಪಷ್ಟಪಡಿಸಬೇಕು ವಿದೇಶಾಂಗ ನೀತಿಯಲ್ಲಿ ಕಾಂಗ್ರೆಸ್ಸಿನ ಬೆಂಬಲವು ಸರ್ಕಾರಕ್ಕೆ ಸಂಪೂರ್ಣವಾಗಿರಬೇಕು. ದೇಶದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಹೆಚ್ಚು ಗಮನವನ್ನೀಯುವುದಲ್ಲದೆ, ಜಮೀನ್ದಾರಿ, ದಳ್ಳಾಳಿತನ ಮುಂತಾದುವನ್ನೆಲ್ಲಾ ಸಂಪೂರ್ಣವಾಗಿ ತಪ್ಪಿಸಲು ತ್ವರಿತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. ದೇಶವಿಭಜನೆಯಾದ ಮೇಲೂ ಪಾಕಿಸ್ತಾನವು ಜಾತೀಯತೆಯು ಹೆಚ್ಚಾಗಿ ಬೆಳೆಯಲು ಕಾರಣವಾದಾಗ್ಯೂ ಭಾರತದಲ್ಲಿ ಜಾತೀಯತೆಯು ಸಂಪೂರ್ಣವಾಗಿ ತೊಡೆದುಹೋಗಬೇಕು, ಈಗ ನಡೆದ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ವಿವಿಧ ಚೈತನ್ಯಗಳು ಕೆಲಸ ಮಾಡಿರುವುದಲ್ಲದೆ. ದೇಶದಲ್ಲೆಲ್ಲಾ ಇದನ್ನು ಮಹತ್ವಪೂರಿತವಾಗಿ ಪರಿಗಣಿಸಿದ್ದಾರೆ

ಇದರಿಂದ ಪ್ರಜೆಗಳಲ್ಲಿ ಒಂದು ರೀತಿಯಾದ ಮನೋಭಾವವು ವಿಕಸಿತವಾಗಿದೆ. ಅಲ್ಲದೆ ಕಾಂಗ್ರೆಸ್ಸಿಗರಲ್ಲಿ ಅಧಿಕಾರಲಾಲಸೆ, ಚುನಾವಣಾ ಕ್ಷೇತ್ರಗಳಲ್ಲಿ ವಿಜಯ ಹೊಂದಿ ಸ್ಥಾನಗಳನ್ನು ಗಳಿಸಬೇಕೆಂಬ ಆಸೆ, ಇವೆಲ್ಲವೂ ಕಾಂಗ್ರೆಸ್ ತತ್ವಕ್ಕೆ ವಿರುದ್ಧವಾಗಿ ಕಳಂಕ ತರುವುದಾಗಿದೆ. ಆದ್ದರಿಂದ ಕಾಂಗ್ರೆಸ್ಸಿನ ಇಂದಿನ ನೀತಿಯೇನೆಂಬುದು ನಾಸಿಕದಲ್ಲಿ ನಡೆಯುವ ಅಧಿವೇಶನದಲ್ಲಿ ಸ್ಪಷ್ಟಪಡಿಸಬೇಕಾದುದು ಅತ್ಯವಶ್ಯಕವಾಗಿದೆಯೆಂದು ಪ್ರಧಾನಿ ಪಂಡಿತ ನೆಹರೂರವರು ಹೇಳಿರುವರು

ಅಸ್ಸಾಂ ಪರಿಹಾರ ಸಮಿತಿ ಮೈಸೂರು ನಗರದಲ್ಲಿ

ಮೈಸೂರು ನಗರ ಪೌರಸಭೆಯ ಕಚೇರಿಯಲ್ಲಿ ಪೌರ ಸಭಾಧ್ಯಕ್ಷ ಶ್ರೀ. ಎಸ್. ಲಿಂಗಣ್ಣನವರು ಮೈಸೂರು ನಗರದ ಪ್ರಮುಖರ ಒಂದು ಸಭೆಯನ್ನು ಕರೆದಿದ್ದರು. ಶ್ರೀ. ಲಿಂಗಣ್ಣನವರು ಅಸ್ಸಾಂ ಪ್ರಾಂತದಲ್ಲಿ ಆಗಿರುವ ಭೂಕಂಪ ದುರ್ಘಟನೆಯನ್ನು ವಿವರಿಸಿ, ರಾಷ್ಟ್ರಾಧ್ಯಕ್ಷರೂ, ಪಂ|| ನೆಹರೂ ಮತ್ತು ಮೈಸೂರಿನ ಮುಖ್ಯಮಂತ್ರಿ ಶ್ರೀ. ಕೆ. ಸಿ. ರೆಡ್ಡಿ ಮುಂತಾದವರು ಹೊರಡಿಸಿರುವ ಮನವಿಯನ್ನು ತಿಳಿಸಿ, ಈ ಭೂಕಂಪನಿಧಿಗೆ ಸಹಾಯಮಾಡುವುದು ಪ್ರತಿಯೊಬ್ಬ ಭಾರತೀಯ ಪ್ರಜ್ಞ ಮಾನವನ ಕರ್ತವ್ಯವೆಂದು ತಿಳಿಸಿದರು ಹಾಜರಿದ್ದ ಅನೇಕರು ಪರಿಹಾರ ದ್ರವ್ಯವನ್ನು ಮೈಸೂರು ನಗರದಲ್ಲಿ ಮನೆಮನೆಗೂ ಹೋಗಿ, ಈ ದುರ್ಘಟನೆಯನ್ನು ತಿಳಿಸಿ, ಹಣವನ್ನು ವಸೂಲಿಮಾಡಬೇಕೆಂದೂ ಅದಕ್ಕಾಗಿ ಒಂದು ಮನವಿಯನ್ನೂ ಪ್ರಕಟಿಸಬೇಕೆಂದು ತಿಳಿಸಿದರು. ಇದಕ್ಕಾಗಿ ಒಂದು ಕೇಂದ್ರ ಸಮಿತಿಯನ್ನ ನೇಮಿಸಿ, ಮೊಹಲ್ಲಾಗಳಲ್ಲಿ ಮೊಹಲ್ಲಾಸಮಿತಿ ರಚಿಸಿ, ಸಂಗ್ರಹ ಕಾರ್ಯವನ್ನ ಹಣ, ಪದಾರ್ಥ—ಬಟ್ಟೆ ಮುಂತಾದ ರೂಪದಲ್ಲಿ ಆದಷ್ಟು ಜಾಗ್ರತೆ ವಸೂಲುಮಾಡಿ ಕಳುಹಿಸಬೇಕೆಂದು ತೀರ್ಮಾನವಾಯಿತು.

ಶ್ರೀಯುತರಾದ ನಂದೀಬಸಪ್ಪ, ರಟ್ಟೀಹಳ್ಳಿ ರಾಮಪ್ಪ, ಬದರೀಪ್ರಸಾದ್, ಚೌಡಯ್ಯ, ಸಾ|| ಚನ್ನಯ್ಯ, ಪಿ ಗೋಪಾಲಕೃಷ್ಣಶೆಟ್ಟಿ, ಜಿ. ಎಲ್. ಸ್ವಾಮಿ, ಟಿ. ಎಸ್. ರಾಜಗೋಪಾಲಯ್ಯಂಗಾರ್, ಎಂ ರಾಮಸ್ವಾಮಿ, ನರಸಿಂಹಯ್ಯ, ಜಿಲ್ಲಾಧಿಕಾರಿಗಳೂ, ಮುಂತಾದವರನ್ನೊಳಗೊಂಡ ೨೫ ಜನರ ಒಂದು ಕೇಂದ್ರ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಶನಿವಾರ ಬೆಳಗ್ಗೆ ೧೦ ಗಂಟೆಗೆ ಸೇರಿ ಮುಂದಿನ ಕಾರ್ಯಕ್ರಮವನ್ನು ನಡೆಸುವುದು. ಈ ಉಪಸಮಿತಿಗೆ ಪೌರಸಭಾಧ್ಯಕ್ಷ ಶ್ರೀ. ಎಸ್. ಲಿಂಗಣ್ಣನವರು ಅಧ್ಯಕ್ಷರು ಮತ್ತು ಮುನಿಸಿಪಲ್ ಕಮಿಷನರ್ ಶ್ರೀ ಸಿ. ನರಸಿಂಹಮೂರ್ತಿಯವರು ಕನ್ವೀನರ್ ಮತ್ತು ಖಜಾಂಚಿಗಳು.

ನಿನ್ನೆ ನಡೆದ ಈ ಪ್ರಮುಖರ ಸಭೆಗೆ ೧೨ ಜನ ಪೌರಸಭಾಸದಸ್ಯರೂ, ೧೧ ಪತ್ರಿಕೋದ್ಯೋಗಿಗಳೂ, ೫ ಜನ ನಗರ ಪ್ರಮುಖರೂ ಬಂದಿದ್ದರು.

ತೋಳು ಕಚ್ಚಿದ್ದಕ್ಕೆ ಶಿಕ್ಷೆ

ಒಬ್ಬ ಪೋಲೀಸಿನವನ ಎಡತೋಳನ್ನು ಕಚ್ಚಿದಳೆಂಬ ಅಪವಾದದ ಮೇಲೆ ೩೨ ವರ್ಷದ ಸ್ಟೈಬ್ಸ್‌ಮೇಲ್ಲೆ ಎಂಬುವವಳಿಗೆ ಲಂಡನ್ನಿನ ಒಂದು ಕೋರ್ಟಿನಲ್ಲಿ ೪ ತಿಂಗಳು ಸಜಾ ಆಯಿತು.

ಸಹಾನುಭೂತಿ ಮುಷ್ಕರ

ಬೊಂಬಾಯಿನ ಗಿರಣಿ ಮುಷ್ಕರಕ್ಕೆ ಸಹಾನುಭೂತಿ ನೀಡುವುದಕ್ಕೋಸ್ಕರ ಕಾನ್ಪುರದಲ್ಲಿ ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನಾಚರಿಸಬೇಕೆಂದು ಸೋಷಿಯಲಿಸ್ಟರು ಕರೆಕೊಟ್ಟಿದರು. ಕಾನ್ಪುರದ ೧೩ ಮಿಲ್ಲುಗಳ ಪೈಕಿ ಮೂರು ಮಿಲ್ಲುಗಳು ಪೂರ್ಣವಾಗಿ ಮುಚ್ಚಿವೆ. ೬ ಮಿಲ್ಲುಗಳು ಪೂರ್ಣ ಕೆಲಸಮಾಡುತ್ತಿವೆ ಮಿಕ್ಕವುಗಳಲ್ಲಿ ಶೇಕಡ ೬೦ ರಷ್ಟು ಜನರು ಕೆಲಸ ಮಾಡುತ್ತಿದ್ದಾರೆಂದು ತಿಳಿದುಬಂದಿದೆ.

ಭೂಕಂಪದಿಂದ ನಷ್ಟ

ಆಗಸ್ಟ್ ೧೫ ರಿಂದ ಇದುವರೆಗುಂಟಾದ ಭೂಕಂಪಗಳಿಂದ ಅಸ್ಸಾಮಿನ ಜೋರ್ಹಟ್ ಸಬ್ ಡಿವಿಜನ್ಒಂದರಲ್ಲಿಯೇ ೮೦ ಲಕ್ಷ ರೂಪಾಯಿಯಷ್ಟು ಆಸ್ತಿಪಾಸ್ತಿಗಳ ನಷ್ಟವಾಗಿದೆಯೆಂದು ಮತ್ತು ೬,೧೨೨ ಜನರು ಕಷ್ಟಗಳಿಗೆ ಗುರಿಯಾಗಿದ್ದಾರೆಂದೂ, ಅಲ್ಲಿನ ಭೂಕಂಪ ಪರಿಹಾರ ಸಮಿತಿಯು ತಿಳಿಸಿದೆ.

ಅಸ್ಸಾಂಗೆ ದಂಡನಾಯಕರು

ಅಸ್ಸಾಂನಲ್ಲಿ ಆಗಿರುವ ಭೂಕಂಪದ ದುರ್ಘಟನೆಯನ್ನು ಪರಿಶೀಲಿಸಿ, ಸೈನ್ಯದವರು ಯಾವ ರೀತಿಯಾಗಿ ಆ ಪ್ರಾಂತ್ಯದಲ್ಲಿ ಕಷ್ಟಪಡುತ್ತಿರುವವರಿಗೆ ನೆರವು ನೀಡಬಹುದೆಂಬುದನ್ನು ಪರೀಕ್ಷಿಸಲು ಭಾರತದ ದಂಡನಾಯಕ ಜನರಲ್ ಕಾರಿಯಪ್ಪನವರು ಇಂದು ದೆಹಲಿಯಿಂದ ಅಸ್ಸಾಮಿಗೆ ಪ್ರಯಾಣ ಮಾಡಿದರು.

ಕೋಮುವಾರು ಪ್ರಾತಿನಿಧ್ಯ ರದ್ದು

ಭಾರತ ರಾಜ್ಯಾಂಗಕ್ಕನುಗುಣವಾಗಿ ಸರ್ಕಾರಿ ಉದ್ಯೋಗಗಳಲ್ಲಿ ಕೋಮುವಾರು ಪ್ರಾತಿನಿಧ್ಯವಿರಕೂಡದೆಂದು ಉತ್ತರ ಪ್ರದೇಶ ಸರ್ಕಾರವು ಸೂಚಿಸಿ ಪ್ರತ್ಯೇಕ ಪ್ರಾತಿನಿಧ್ಯ ಕೊಡುವ ಶಾಸನಗಳನ್ನೆಲ್ಲಾ ರದ್ದುಗೊಳಿಸಿದೆ.

ಬಸ್ ರಾಷ್ಟ್ರೀಕರಣ ಅತ್ಯಗತ್ಯ

ನಿನ್ನೆ ಸಂಜೆ ಬೆಂಗಳೂರಿನಲ್ಲಿ ನಡೆದ ಸರ್ಕಾರದ ಬಸ್ ಟ್ರಾನ್ಸ್‌ಪೋರ್ಟ್ ಸಂಸ್ಥೆಯ ದ್ವಿತೀಯ ವಾರ್ಷಿಕೋತ್ಸವದ ಅಧ್ಯಕ್ಷ ಭಾಷಣ ಮಾಡುತ್ತಾ, ಕೆಲವು ಕೈಗಾರಿಕೆಗಳನ್ನು ಹಾಗೂ ಸರ್ವಿಸ್ಸುಗಳನ್ನು ರಾಷ್ಟ್ರೀಕರಣ ಮಾಡುವುದು ಒಳ್ಳೆಯದೇ ಅಲ್ಲದೆ ಅತ್ಯವಶ್ಯಕವೂ ಹೌದು. ಇವಲ್ಲಿ ಕೆಲವು ರಾಷ್ಟ್ರೀಯವೂ ಅಲ್ಲದ ಅಂತರ ರಾಷ್ಟ್ರೀಯವೂ ಆಗಬೇಕು. ಆದುದರಿಂದ ಮೈಸೂರು ಬಸ್ ಟ್ರಾನ್ಸ್‌ಪೋರ್ಟನ್ನು ರಾಷ್ಟ್ರೀಕರಣ ಮಾಡಿರುವುದು ಸರಿಯಾಗಿಯೇ ಇದೆ, ಆದರೆ ರಾಷ್ಟ್ರೀಕರಣದ ಸರ್ವಿಸ್ಸನ್ನು ಖಾಸಗೀ ಉದ್ಯಮದೊಂದಿಗೆ ಪೈಪೋಟಿ ನಡೆಯಿಸುವುದು ಒಳ್ಳೆಯದಲ್ಲ. ಈ ದೃಷ್ಟಿಯಿಂದ ಸಂಸ್ಥಾನದ ಬಸ್ ಸರ್ವೀಸುಗಳನ್ನೆಲ್ಲ ನಾವು ಶೀಘ್ರವಾಗಿ ಹತೋಟಿಗೆ ತೆಗೆದುಕೊಂಡುಬಿಡಬೇಕು, ಎಂಬುದಾಗಿ ಸಚಿವ ಶ್ರೀ. ಭಾಷ್ಯಂರವರು ನುಡಿದರು.

ಮುಖ್ಯ ಮಂತ್ರಿಗಳ ಮನವಿ

ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರು, ಅಸ್ಸಾಮಿನ ಭೂಕಂಪ ದುರ್ಘಟನೆಯಿಂದ ನೊಂದವರಿಗೆ ಸಹಾಯಮಾಡಬೇಕೆಂದು ಮನವಿಮಾಡಿದ್ದಾರೆ ಅದರಲ್ಲಿ ಅಲ್ಲಿನ ಭೀಕರ ಪರಿಸ್ಥಿತಿಯನ್ನು ವಿವರಿಸಿ, ಪ್ರತಿಮಾನವನೂ ಆ ನೊಂದವರಿಗೆ ತನ್ನ ಕೈಲಾದಷ್ಟು ಸಹಾಯವನ್ನು ನೀಡಬೇಕೆಂದೂ, ಪರಿಹಾರ ಯಾರು ಬೇಕಾದರೂ ತಮ್ಮ ಕಾಣಿಕೆಯನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಟ್ರೆಜರಿಗೆ ಪಾವತಿ ಮಾಡುವಂತೆ ಸರ್ಕಾರವು ಏರ್ಪಡಿಸಲಿದೆಯೆಂದೂ. ಮತ್ತು ಪ್ರತಿ ಜಿಲ್ಲಾಧಿಕಾರಿಯೂ ತನ್ನ ಜಿಲ್ಲೆಯಲ್ಲಿ ಅಧಿಕಾರಿಗಳ ಮತ್ತು ಪುರಪ್ರಮುಖರನ್ನೊಳಗೊಂಡ ಪರಿಹಾರ ಸಮಿತಿಗಳನ್ನು ರಚಿಸಿ ಎಲ್ಲ ವಿಧದಿಂದಲೂ ಅಸ್ಸಾಂ ಭೂಕಂಪ ಪೀಡಿತರಿಗೆ ಸಹಾಯವನ್ನು ತ್ವರಿತಗೊಳಿಸುವಂತೆ ಏರ್ಪಡಿಸಬೇಕೆಂದು ಸೂಚಿಸಿದ್ದಾರೆ.

ಕಾಲೇಜಿನ ಪ್ರಿನ್ಸಿಪಾಲರು

ಬೆಂಗಳೂರು ಸೆಂಟ್ರಲ್ ಕಾಲೇಜಿನ ಭೂಗರ್ಭಶಾಸ್ತ್ರದ ಪ್ರೊಫೆಸರಾದ ಶ್ರೀ. ಎಲ್. ರಾಮರಾಯರನ್ನು ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕ ಮಾಡಿದ್ದಾರೆ.

ಸರ್ ಎಂ. ವಿ. ಯವರ ೯೦ ನೇ ಜನ್ಮದಿನೋತ್ಸವ

ಮೈಸೂರು ಪೌರಸಭೆಯ ಆಶ್ರಯದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ೯೦ನೇ ಜನ್ಮ ದಿನೋತ್ಸವವನ್ನು ಇದೇ ಸೆಪ್ಟೆಂಬರ್ ೧೫ನೇ ತಾ|| ಶುಕ್ರವಾರ ಸಾಯಂಕಾಲ ೬ ಘಂಟೆಗೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಆಚರಿಸಲಾಗುವುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರೊ ಚಾನ್ಸಲರಾದ ಡಾ|| ಸಿ. ಆರ್. ರೆಡ್ಡಿಯವರು ಅಧ್ಯಕ್ಷತೆ ವಹಿಸುವರು. ಪುರಜನರೆಲ್ಲ ದಯಮಾಡಿ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ ಎಂದು ಪುರಸಭಾಧ್ಯಕ್ಷ ಶ್ರೀ. ಎಸ್. ಲಿಂಗಣ್ಣನವರು

ಶಿವಮೊಗ್ಗದಿಂದ ಅಸ್ಸಾಂ ಪರಿಹಾರನಿಧಿಗೆ

ಮೊನ್ನೆ ಶಿವಮೊಗ್ಗ ಪೌರಸಭೆಯ ವಿಶೇಷ ಸಭೆ ಸೇರಿ ಅಸ್ಸಾಂ ಪರಿಹಾರ ನಿಧಿಗೆ ೧೦೦೧ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನಿಸಿತು.

೨೬,೦೦೦ ಟನ್ ಅಕ್ಕಿ ಬೀಹಾರಿಗೆ

ಬೀಹಾರದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಭಾರತ ಸರ್ಕಾರದ ಆಹಾರ ಶಾಖೆಯು ಬೀಹಾರಿಗೆ ೨೬,೦೦೦ ಟನ್ ಅಕ್ಕಿಯನ್ನು ಮಂಜೂರ್ಮಾಡಿದೆ. ಇದರ ಪೈಕಿ ೧೫,೦೦೦ ಟನ್ ತಕ್ಷಣವೇ ಮಧ್ಯಪ್ರಾಂತ್ಯದಿಂದ ಒದಗಿಸಲಾಗುವುದು.

೧೪,೦೦೦ ಮುಷ್ಕರಕಾರರು

ಕಲ್ಕತ್ತಾದ ಸರ್ಕಾರಿ ಆರ್ಡಿನೆನ್ಸ್ ಕಾರ್ಖಾನೆಗಳ ೧೪,೦೦೦ ನೌಕರರು [illegible], ಕಲ್ಕತ್ತಾ ಬಳಿಯ ಇಚಾಪುರ ಮತ್ತು ಕಾನ್ಪುರದಲ್ಲಿ ಮುಷ್ಕರ ಆರಂಭಿಸಿರುವರೆಂದು ತಿಳಿಯಬರುತ್ತದೆ.

ನಾಸಿಕ್ ಕಾಂಗ್ರೆಸ್

ಅ. ಭಾ. ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆಯು ನಾಸಿಕದಲ್ಲಿ ೧೬ ನೇ ತಾರೀಖು ಮಧ್ಯಾಹ್ನ ೨ ಗಂಟೆಗೆ ಸೇರಲಿದೆ

ವಿಷಯ ನಿಯಾಮಕ ಸಮಿತಿಯು ೧೮ ನೇ ತಾರೀಖು ನಾಸಿಕ್ ಅಧಿವೇಶನಕ್ಕಾಗಿ ತಯಾರಿಸಿರುವ "ಗಾಂಧೀನಗರ'' ದಲ್ಲಿ ಸಭೆ ಸೇರಿ, ಮರುದಿನ ಚರ್ಚೆಯ ವಿವರಗಳನ್ನು ಪ್ರಕಟಿಸುವುದು.

ಸೆಪ್ಟೆಂಬರ್ ೨೦ ನೇ ತಾ|| ಬುಧವಾರ ಮಧ್ಯಾಹ್ನ ೨ ಗಂಟೆಗೆ ಬಹಿರಂಗ ಅಧಿವೇಶನವು ಸಮಾವೇಶಗೊಳ್ಳುವುದು.

ಬೆಂಗಳೂರು ಕಾರ್ಪೊರೇಷನ್

ಬೆಂಗಳೂರು ಕಾರ್ಪೋರೇಷನ್ ಶಾಸನದ ಪ್ರಕಾರ ಸರ್ಕಾರವು ಆಜ್ಞೆಹೊರಡಿಸಿ, ೬ ಸ್ಥಾನಗಳನ್ನು ನಿಮ್ನ ವರ್ಗದವರಿಗೂ, ೬ ಸ್ಥಾನಗಳನ್ನು ಮಹಿಳೆಯರಿಗೂ, ಕಾದಿರಿಸಿದೆ.

ಸರ್ದಾರ್ ಪಟೇಲರಿಗೆ ೨೦ ಲಕ್ಷ ರೂಪಾಯಿ

ಭಾರತದ ಉಪಪ್ರಧಾನಿ ಸರ್ದಾರ್ ಪಟೇಲರಿಗೆ ಅವರ ೭೫ ನೇ ಜನ್ಮೋತ್ಸವದ ಸಮಯದಲ್ಲಿ ಅ ೩೧ ನೇ ತಾರೀಖು ಅಹಮದಾಬಾದಿಗೆ ಬಂದಾಗ ಅವರಿಗೆ ನಿಧಿಯನ್ನರ್ಪಿಸಲು ಗುಜರಾತಿನ ಎಲ್ಲಾ ಭಾಗಗಳಿಂದಲೂ ಚಂದಾ ವಸೂಲು ಮಾಡಿ ೨೦ ಲಕ್ಷ ರೂಪಾಯಿಗಳನ್ನು ಕೊಡಲಾಗುವುದು.

ಪಂ|| ನೆಹರೂ ಮತ್ತು ಕೊರಿಯಾ

ಕೊರಿಯಾ ಪ್ರಶ್ನೆಯನ್ನು ಶಾಂತಿಯುತವಾಗಿ ಪರಿಹರಿಸುವ ಯಾವ ಯೋಜನೆಯಾಗಲಿ, ಅದು ಪ್ರಪಂಚ ಸಂಸ್ಥೆಯಲ್ಲಿ ಸೂಚಿಸಲ್ಪಡಲಿ ಅಥವಾ ಹೊರಗಡೆ ಸೂಚಿಸಲ್ಪಡಲಿ, ಅಂಗೀಕಾರಾರ್ಹವೆಂದು ಪಂ|| ನೆಹರೂರವರು ತಿಳಿಸಿದರೆಂದು ವಾಷಿಂಗಟನ್ನಿನ "ಯುನೈಟೆಡ್ ನ್ಯೂಸ್ ಅಂಡ್ ವರ್ಲ್ಡ್ ರಿಪೋರ್ಟರ್" ಎಂಬ ವಾರಪತ್ರಿಕೆ ಪ್ರಕಟಿಸಿದೆ.

ಭಾರತಕ್ಕೆ ಚೀಣಾ ರಾಯಭಾರಿ

ಭಾರತದಲ್ಲಿ ಕಮ್ಯೂನಿಸ್ಟ್ ಚೀಣಾ ಪ್ರಥಮರಾಯಭಾರಿಯಾದ ಜನರಲ್ ಯುವಾನ್ ಚುಂಗ್ ಹ್ಸಿಂಗರವರು ನಿನ್ನೆ ಸಂಜೆ ದೆಹಲಿಗೆ ಆಗಮಿಸಿದರು.

೨೦೦ ಹಳ್ಳಿಗಳಿಗೆ ನೀರು ನುಗ್ಗಿದೆ

ಬಿಯಾಸ್‌ನದಿಯ ಪ್ರವಾಹದ ನೀರು ಕಪೂರ್ಥಲಾ ಜಿಲ್ಲೆಯ ೨೦೦ ಹಳ್ಳಿಗಳಿಗೆ ನುಗ್ಗಿ ಪೈರೆಲ್ಲವೂ ಮುಳುಗಿಹೋಗಿವೆ. ಸಂಚಾರಮಾರ್ಗಗಳು ಉಪಯೋಗವಿಲ್ಲದಂತಾಗಿವೆ. ಇದರಿಂದ ಆಗುವ ನಷ್ಟವನ್ನು ಅಧಿಕಾರಿಗಳು ಲೆಕ್ಕಮಾಡುತ್ತಿದ್ದಾರೆ.

ಅಸ್ಸಾಂ ಪರಿಹಾರ ನಿಧಿಗೆ

ಮದರಾಸಿನ ಜೈನರು ಅಸ್ಸಾಂ ಪರಿಹಾರನಿಧಿಗೆ ೬,೦೦೦ ರೂಪಾಯಿಗಳನ್ನು ಕೊಟ್ಟಿದಾರೆಂದು, ಅಖಿಲ ಭಾರತ ಜೈನರ ಸಂಘದ ಸಹಕಾರ್ಯದರ್ಶಿ ಶ್ರೀ. ಥರಿವಾಲರವರು ತಿಳಿಸಿದ್ದಾರೆ.

ದಿಬ್ರೂಘರ್ ನಡುಗುತ್ತಿದೆ

ಅಸ್ಸಾಮಿನ ದಿಬ್ರೂಘರ ಪ್ರದೇಶದಲ್ಲಿ ಪುನಃ ಪುನಃ ಭೂಕಂಪವಾಗುತ್ತಲಿದೆ ನಿನ್ನೆ ಮತ್ತೆ ನಾಲ್ಕುಭಾರಿ ಭೂಮಿ ನಡುಗಿತು.

ಬೊಂಬಾಯಿ ಮುಷ್ಕರ ಪರಿಸ್ಥಿತಿ

ಬೊಂಬಾಯಿ ಗಿರಣಿ ಮುಷ್ಕರವು ಸುಧಾರಿಸುತ್ತಿದೆಯೆಂದೂ, ನಿನ್ನೆ ಮತ್ತೊಂದು ಗಿರಣಿಯು ಪೂರ್ಣ ಕೆಲಸಮಾಡಲು ಆರಂಭಿಸಿತೆಂದೂ ಈಗ ಒಟ್ಟು ೧೫೦೦೦ ಕೆಲಸಗಾರರು ಕೆಲಸಕ್ಕೆ ಹಾಜರಾಗಿದ್ದಾರೆಂದು ತಿಳಿಯಬರುತ್ತದೆ

ಬೊಂಬಾಯಿನಲ್ಲಿ ಭಾರಿ ಮಳೆ

ಭಾರಿ ಮಳೆ ಬಿದ್ದುದರ ಪರಿಣಾಮವಾಗಿ ಬೊಂಬಾಯಿನ ಕೆಳಮಟ್ಟ ಪ್ರದೇಶಗಳೆಲ್ಲಾ ನೀರುತುಂಬಿ ನಿಂತಿದೆಯೆಂದೂ, ಆದರೂ ವಾಹನ ಸಂಚಾರಕ್ಕೇನೂ ಅಡ್ಡಿಯಾಗಿಲ್ಲವೆಂದು ವರದಿಯಾಗಿದೆ.

ಹೇಬಿಯಸ್ ಕಾರ್ಪಸ್ ಅರ್ಜಿ

ಬೊಂಬಾಯಿ ಹೈಕೋರ್ಟಿನ ಜಡ್ಜಿಗಳಾದ ಶ್ರೀ ಜಸ್ಟಿಸ್ ಗಜೇಂದ್ರಗಡಕರ್ ಮತ್ತು ಜಸ್ಟಿಸ್ ದೀಕ್ಷಿತರು ನಾಸಿಕ ಜೈಲಿನಲ್ಲಿನ ೫೫ ವಂದಿ ಡಿಟೆನ್ಯೂಗಳ ಹೇಬಿಯಸ್ ಕಾರ್ಪಸ್ ಅರ್ಜಿಗಳ ವಿಚಾರಣೆಗೆ ಅವಕಾಶವಿತ್ತಿದ್ದಾರೆ

ಪರಿಸ್ಥಿತಿ ಕಠಿಣವಾಗುವುದು

ಪಾಕಿಸ್ತಾನದ ವಿದೇಶಾಂಗ ಮಂತ್ರಿ ಸರ್ ಜಫರುಲ್ಲಾಖಾನರು, ಭಾರತ ಮತ್ತು ಪಾಕಿಸ್ತಾನದ ಭಿನ್ನತೆಗಳನ್ನು ಬೇಗನೆ ನಿವಾರಿಸದೇ ಹೋದಲ್ಲಿ ಪರಿಸ್ಥಿತಿಯು ಬಹಳ ಕಠಿಣವಾಗುವುದೆಂದು ನೂಯಾರ್ಕ್ ಸಭೆಯೊಂದರಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಬ್ರಿಟಿಷ್ ಲಾಭಕೋರನಿಗೆ ಹಬ್ಬ!

ಭಾರತ-ಪಾಕಿಸ್ತಾನಗಳಲ್ಲಿ ವೈಗತ್ಯ ಹೆಚ್ಚಿದುದರಿಂದ ಆ ರಾಷ್ಟ್ರಗಳ ಪರಸ್ಪರ ವ್ಯಾಪಾರ ಬಂದಾಯಿತು ಇದರಿಂದ ಬ್ರಿಟಿಷ್ ಲಾಭಕೋರ ವರ್ತಕರಿಗೆ ಹೆಚ್ಚು ಲಾಭಗಳಿಸಲು ಅನುಕೂಲವಾಯಿತು, ಎಂದು ರಷ್ಯದ ಇಜ್ವೆಸ್ತಿಯಾ ಪತ್ರಿಕೆ ಟೀಕಿಸಿದೆ.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯-೪೬ ಮೀಟರು
ಸೆಪ್ಟೆಂಬರ್ ೧೪ ಗುರುವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಶ್ರೀ ಎಸ್. ಎ. ಸುಂದರಂ (ರಿ) ೭-೧೫ ವೆಂಕಟಸ್ವಾಮಯ್ಯ (ನಾದಸ್ವರ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ. ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಶ್ರೀ. ವಿ. ಎಸ್. ರಾವ್ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಗಿತಾರ್ ೨-೦ ನಿಮ್ಮ ಮೆಚ್ಚಿನ ಕಲಾವಿದರು (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಶ್ರೀ ವೆಂಕಟಸ್ವಾಮಯ್ಯ (ನಾದಸ್ವರ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಪಾಶ್ಚಿಮಾತ್ಯ ಸಂಗೀತ (ರಿ) ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೋ: ೭-೫ ಶ್ರೀ. ಟಿ. ವಿ. ರತ್ನಂ (ಗಿ) ೭-೧೫ ಶ್ರೀ ಎನ್. ಚೆನ್ನಕೇಶವಯ್ಯ (ಹಾಡುಗಾರಿಕೆ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಶ್ರೀ ಆರ್. ಚಂದ್ರ (ಕವನ ವಾಚನ) ೮-೧೫ ತಾಳವಾದ್ಯ ೮ ೩೦ ಶ್ರೀ ಎನ್. ಚೆನ್ನಕೇಶವಯ್ಯ (ಹಾಡುಗಾರಿಕೆ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಕಣ್ಣಾಮುಚ್ಚಾಲೆ (ಶ್ರೀ. ಕೆ. ವೆಂಕಟರಾಮಪ್ಪ) ೧೦-೦ ಮುಕ್ತಾಯ.

ಮೈಸೂರು ಸಿಟಿ ರೇಷನಿಂಗ್ ಆಫೀಸು

ಪ್ರಕಟನೆ

ತಾ|| 9-9-1950 ನಂ. A1-250/50-51

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಇದೇ ಮಾಹೆ ೧೫ನೇ ತಾ|| ಶುಕ್ರವಾರ "ಗಣೇಶ ಹಬ್ಬದ" ಪ್ರಯುಕ್ತ ಪೂರ್ತಾ ಮುಚ್ಚಲ್ಪಡುತ್ತವೆ.

(Sd) D J. Balaraj,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

ರಣಜಿತ್
ತಾ|| 14-9-50 ರಿಂದ 8 ದಿನಗಳು ಮಾತ್ರ
ದಿನವಹಿ 3 ಆಟಗಳು
ಮಹಾಜನಗಳ ಕೋರಿಕೆಯ ಮೇಲೆ
ಅಂದಾಜ್
ಪಾತ್ರ:–ನರ್ಗೀಸ್, ಮತ್ತು ರಾಜಕಪೂರ್
ಬೆಳಗಿನ ಪ್ರದರ್ಶನ
15-9-50ರಿಂದ ಮೂರು ದಿನಗಳು ಮಾತ್ರ
ನಾಟಿಕ್
ಪಾತ್ರ: ಸುರೈಯ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ.ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು. ಪ್ರಿಂಟಿಂಗ್ ಅಂಡ್ ಪಬಿಷಿಂಗ್ ಹೌಸ್ ಮೈಸೂರು

★ ಕೋಮುವಾರು ಪ್ರಾತಿನಿಧ್ಯ ರದ್ದು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೪—೯—೧೯೫೦ ನೇ ಗುರುವಾರ [ಸಂಚಿಕೆ ೨೬

ಸರ್ಕಾರಿ ನೌಕರಿಗಳಲ್ಲಿ ಕೋಮುವಾರು ಪ್ರಾತಿನಿಧ್ಯವನ್ನು ರದ್ದುಮಾಡಬೇಕೆಂಬ ಕೇಂದ್ರ ಸರ್ಕಾರದ ನೀತಿಗನುಸಾರವಾಗಿ ಹಿಂದುಳಿದ ವರ್ಗದವರಿಗೆ ಮಾತ್ರ ಕೆಲವು ಸ್ಥಾನಗಳನ್ನು ಮೀಸಲಾಗಿರಿಸಿ, ಬೀಹಾರ ಪ್ರಾಂತದಲ್ಲಿ ಸರ್ಕಾರಿ ನೌಕರಿಗೆ ಸೇರಿಸಿಕೊಳ್ಳಲಾಗುವುದೆಂದು ಬೀಹಾರ ಪ್ರಾಂತೀಯ ಸರ್ಕಾರವು ತನ್ನ ನೀತಿಯನ್ನು ಸ್ಪಷ್ಟೀಕರಿಸಿದೆ. ಅಂತೆಯೇ ಹಿಂದೆ ಭಾರತದಲ್ಲಿ ಜನ್ಮತಾಳಿದವರೇ ಅಥವಾ ನೆಲೆಸಿದವರೇ ಎಂದು ಪ್ರಶ್ನಿಸುತ್ತಿದ್ದುದನ್ನೂ ರದ್ದುಗೊಳಿಸಲಾಗಿದೆ. ಈ ಕೋಮುವಾರು ಭಾವನೆ ಬೆಳೆಯದಂತೆ, ಐಕ್ಯಭಾವನೆಯ ವೃದ್ಧಿಗೆ ಸಹಾಯಕವಾಗಿದೆ.

ಕಾಂಗ್ರೆಸ್ಸು ಮಹಾ ಚುನಾವಣೆಗಳಿಗೆ ಕೈಹಾಕಬಾರದು

ಭಾರತದ ರಾಜಕೀಯದಲ್ಲಿ ಇತ್ತೀಚೆಗೆ ಬಹಳ ಬದಲಾವಣೆಗಳಾಗಿವೆ. ಅವುಗಳಲ್ಲಿ ಕೆಲವು ಭಯಂಕರವಾಗಿವೆ. ಕಾಂಗ್ರೆಸ್ ಸಂಸ್ಥೆಯು ದೇಶದ ಸ್ವಾತಂತ್ರ್ಯವನ್ನು ಗಳಿಸಿತು. ಈಗಿನ ನಿಯಮಾವಳಿಪ್ರಕಾರ ಕಾಂಗ್ರೆಸ್ಸಿನ ಕೆಲಸವು ಮುಗಿದಿದೆ. ಇನ್ನು ಮುಂದೆ ಕಾಂಗ್ರೆಸ್ ರಾಜಕೀಯಕ್ಕೆ ಪ್ರವೇಶಿಸದೆ ರಚನಾತ್ಮಕ ಕಾರ್ಯದಲ್ಲಿ ತೊಡಗಬೇಕು. ಕಾಂಗ್ರೆಸ್ ಹೆಸರಿನಲ್ಲಿ ಚುನಾವಣೆಗಳಲ್ಲಿ ಭಾಗವಹಿಸದೆ ತಮ್ಮ ಸ್ವಸಾಮರ್ಥ್ಯದಿಂದ ಈಗಿನ ಕಾಂಗ್ರೆಸ್ಸಿನವರು ಚುನಾವಣೆಗಳಲ್ಲಿ ನಿಂತು ಜಯಶೀಲರಾಗಬೇಕು. ಹಾಗಿಲ್ಲದಿದ್ದರೆ ಕಾಂಗ್ರೆಸ್ ಸಂಸ್ಥೆಗೇ ಕೊನೆಯಲ್ಲಿ ಅವಮಾನವುಂಟಾಗುವ ಪರಿಸ್ಥಿತಿ ಬರುವುದು. ಆದ್ದರಿಂದ ಕೂಡಲೇ ಭಾರತ ಪ್ರಧಾನಿಮಂತ್ರಿಗಳು ಒಂದು ಸಮಿತಿಯನ್ನು ಏರ್ಪಡಿಸಿ, ಆ ಸಮಿತಿಯು ಮುಂದಿನ ಚುನಾವಣೆಗಳಿಗೆ ಉಮೇದುವಾರರನ್ನು ಆರಿಸುವಂತೇರ್ಪಡಿಸಬೇಕು. ಆ ಉಮೇದುವಾರರು ಕಾಂಗ್ರೆಸ್ಸಿನವರಾಗಲೀ ಅಲ್ಲದಿರಲೀ ಅತ್ಯಂತ ಮೇಧಾವಿಗಳಾಗಿದ್ದು ದೇಶೋನ್ನತಿಗೆ ಸೇವೆಯೆಸಗುವವರಾಗಿರಬೇಕು. ಆಗ ಭಾರತದ ಕೀರ್ತಿಯು ಅತ್ಯಂತ ಶೋಭಾಯಮಾನವಾಗುವುದು ಎಂದು ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣಮೆಹ್ತಾಬರವರು ಹೇಳಿರುವರು.

ಉಪ್ಪಿನ ಹತೋಟಿ

ಕಲ್ಕತ್ತೆಯಲ್ಲಿ ಉಪ್ಪಿನ ಒಟ್ಟು ಮಾರಾಟದ ಬೆಲೆ ಮತ್ತು ಹಂಚಿಕೆಯ ಮೇಲೆ ಹತೋಟಿಯಿಡಲು ಕೇಂದ್ರ ಸರ್ಕಾರ ಆಜ್ಞೆ ಹೊರಡಿಸಿದೆ.

ಮದ್ರಾಸಿನ ಅಕ್ಕಿ ಕೋಟಾ ಹೆಚ್ಚಿತು

ಮದ್ರಾಸು ಪ್ರಾಂತ್ಯದ ಅಕ್ಕಿ ಕೋಟಾವನ್ನು ಭಾರತ ಸರ್ಕಾರವು ೨೫,೦೦೦ ಟನ್ನುಗಳಷ್ಟು ಹೆಚ್ಚಿಸಿದೆಯೆಂದು ತಿಳಿಯಬರುತ್ತದೆ.

ಮೈಸೂರು ಮಂತ್ರಿಮಂಡಲ ಸಭೆ

ಮೈಸೂರು ಮಂತ್ರಿಮಂಡಲ ಸಭೆಯು ಇಂದು ಬೆಂಗಳೂರು ಅಠಾರಕಚೇರಿಯಲ್ಲಿ ಸೇರಲಿದೆ. ನಿನ್ನೆ ಬೆಳಗ್ಗೆ ಮತ್ತು ಮಧ್ಯಾಹ್ನವೂ ಸಭೆ ಸೇರಿತ್ತು. ದೇಶದಲ್ಲಿನ ಪರಿಸ್ಥಿತಿಯನ್ನು ಚರ್ಚಿಸಲಾಯಿತೆಂದು ತಿಳಿದುಬರುತ್ತದೆ.

೯೦ ಜನರ ದಸ್ತಗಿರಿ

ಕಲ್ಕತ್ತಾದಲ್ಲಿ ಸೋಷಿಲಿಸ್ಟರು ಸಾರ್ವತ್ರಿಕ ಮುಷ್ಕರ ಕರೆಯನ್ನು ಕೊಟ್ಟಿದುದರ ಪರಿಣಾಮವಾಗಿ ಕಲ್ಕತ್ತ ಮತ್ತು ಸುತ್ತುಮುತ್ತಲಿನ ಪ್ರದೇಶದಲ್ಲಿ ಮುಷ್ಕರವು ಯಶಸ್ವಿಯಾಗದೇ, ಅಲ್ಲಿನ ವಾತಾವರಣವು ಶಾಂತವಾಗಿಯೇ ಇದೆಯೆಂದೂ ಮತ್ತು ಮುಂಜಾಗ್ರತೆಕ್ರಮವಾಗಿ ೯೦ ಜನ ಕಾರ್ಮಿಕರ ದಸ್ತಗಿರಿಯಾಗಿದೆಯೆಂದೂ ವರದಿಯಾಗಿದೆ.

ದಿಬ್ರೂಘರಿನಲ್ಲಿ ಭೂಕಂಪ ನಿಂತಿಲ್ಲ

ಅಸ್ಸಾಮಿನ ದಿಬ್ರೂಘರಿನಲ್ಲಿ ಭೂಕಂಪವಾಗುತ್ತಲೇ ಇದೆ ಪುನಃ ಮೂರುಬಾರಿ ಭೂಮಿ ನಡುಗಿತು. ಈ ರೀತಿಯಾದ. ಪುನಃಪುನಃ ಭೂಕಂಪವಾಗುತ್ತಲಿರುವುದು ಅಲ್ಲಿನ ಜನರಿಗೆ ಬಹಳ ಗಾಭರಿಯನ್ನುಂಟುಮಾಡಿದೆ.

ನವಶಿಲಾ ದೇವಾಲಯ

ಅಸ್ಸಾಮಿನ ಇತರ ಪ್ರದೇಶಗಳಲ್ಲಿ ಆಗಸ್ಟ್ ೧೫ ರಿಂದ ನಡೆಯುತ್ತಲಿರುವ ಭೂಕಂಪದ ದೆಸೆಯಿಂದ, ಕೆಲವೆಡೆ ಹಳ್ಳಗಳಾಗಿವೆ, ಪರ್ವತಗಳು ಒಡೆದುಹೋಗಿ, ನದಿ ಪಾತ್ರಗಳೇ ಬದಲಾಯಿಸಿವೆ, ಹಳ್ಳಿಗಳೂ ನಿರ್ನಾಮವಾಗಿವೆ, ಮಂದಿರಗಳು ನೆಲಸಮವಾಗಿವೆ. ಆದರೆ ಬರ್ಮಾದ ಸರಹದ್ದಿನೊಳಗೆ ಲಿಡೋ ಬಳಿ ಒಂದು ಆಶ್ಚರ್ಯವಾದ ಸಂಗತಿ ಜರುಗಿದೆ. ಒಂದು ಭಾರಿ ಬಂಡೆಯು ಮೇಲೆದ್ದು ಬಂದಿದೆ. ಅದು ಒಂದು ಶಿಲಾದೇವಾಲಯ. ಪಾರ್ವತಿ ಪರಮೇಶ್ವರನ ವಿಗ್ರಹಗಳಿವೆ. ಇದು ಲಿಡೋಗೆ ೧೦೦ ಮೈಲಿ ದೂರದಲ್ಲಿ ಪರ್ವತ ಶ್ರೇಣಿಗಳ ನಡುವೆಯಿದೆ. ಈಗಾಗಲೇ ಅನೇಕರು ಅಲ್ಲಿಗೆ ಹೋಗಿ ಆ ದೇವರಿಗೆ ಪೂಜೆ ಸಲ್ಲಿಸುತ್ತಿದ್ದಾರೆಂದು ತಿಳಿದು ಬಂದಿದೆ.

ಹೈದರಾಬಾದಿನಲ್ಲಿ ದಸ್ತಗಿರಿ

ಸುಲ್ತಾನಾ ಬಜಾರಿನಲ್ಲಿ ಮೆರವಣಿಗೆ ನಡೆಸುತ್ತಿದ್ದ ಹೈದರಾಬಾದಿನ ೩೨ ಜನ ಸೋಷಿಯಲಿಸ್ಟರನ್ನು ಬಂಧಿಸಲಾಗಿದೆ.

ವಿದ್ಯಾಗಣಪತಿ ಮಹೋತ್ಸವ

ಮೈಸೂರು, ಮಾದರಿಶಾಲೆಯಲ್ಲಿ ವಿದ್ಯಾಗಣಪತಿ ಮಹೋತ್ಸವವನ್ನು ನಾಳೆಯಿಂದ ೨೦ ನೇ ತಾರೀಖು ಸಂಜೆಯವರೆಗೂ ಆಚರಿಸುವರು. ಪ್ರತಿ ಸಂಜೆ ಹರಿಕಥೆ ಸಂಗೀತ ಇತ್ಯಾದಿ ಏರ್ಪಾಡು ಮಾಡಿದ್ದಾರೆ. ಸರ್ವರೂ ಈ ಉತ್ಸವದಲ್ಲಿ ಭಾಗವಹಿಸಬೇಕೆಂದು ಮಾದರಿಶಾಲೆಯ ಅಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ಪ್ರಾರ್ಥಿಸಿರುತ್ತಾರೆ.

ಸಂಸ್ಕೃತ ರಾಷ್ಟ್ರಭಾಷೆ

ಸಂಸ್ಕೃತವನ್ನು ಭಾರತ ರಾಷ್ಟ್ರ ಭಾಷೆಯನ್ನಾಗಿ ಮಾಡಬೇಕೆಂದು ಕಲ್ಕತ್ತಾದಲ್ಲಿ ನಡೆದ ಸಂಸ್ಕೃತ ಮಹಾಸಮ್ಮೇಳನದಲ್ಲಿ ಠರಾವು ಮಾಡಿರುವರು. ಪಶ್ಚಿಮ ಬಂಗಾಳ ಗೌರ್ನರ್ ಡಾ॥ ಕೆ. ಎನ್. ಖಟ್ಜುರವರು ಸಮ್ಮೇಳನದಲ್ಲಿ ಭಾಗ ವಹಿಸಿದ್ದರು.

ಸೂಚನೆ.

ಗಣೇಶಹಬ್ಬದ ಪ್ರಯುಕ್ತ ನಾಳೆ (೧೫-೯-೫೦) ಪತ್ರಿಕೆಗೆ ರಜಾ ಕೊಡಲಾಗಿದೆ.

೧,೦೦,೦೦೦ ಮಕ್ಕಳ ಮೂಲ ಪುರುಷ

ಈಗ್ಗೆ ೩೦೦ ವರ್ಷಗಳ ಹಿಂದೆ ಫ್ರಾನ್ಸಿನಿಂದ ಕೆನೆಡಾಕ್ಕೆ ಬಂದು ನೆಲೆಸಿದ ಡೇನಿಯಲ್ ಲೆಬ್ಲಾಂಕ್ ಎಂಬುವನ ಸಂತತಿಯವರೆಲ್ಲರ ಒಟ್ಟು ಸಂಖ್ಯೆ ೧ ಲಕ್ಷ. ಪ್ರತಿ ತಲೆಮಾರಿನಲ್ಲಿಯೂ ಒಬ್ಬೊಬ್ಬನೂ ನಾಲ್ಕು ಗಂಡು ಮಕ್ಕಳನ್ನು ಪಡೆದು ಸಂತಾನಾಭಿವೃದ್ಧಿಗೊಂಡಿತು. ಆ ಸಂತತಿಯವರೆಲ್ಲ ಮಾಂಕಟನ್ ಎಂಬಲ್ಲಿ ಒಟ್ಟುಸೇರಿ ಮೂಲಪುರುಷನ ೩ ನೇ ಶತಮಾನೋತ್ಸವ ನಡೆಸಿದರು.

ನಾಸಿಕ್ ಕಾಂಗ್ರೆಸ್

ಪ್ರಧಾನಿ ಪಂಡಿತ ನೆಹರೂ ಮತ್ತು ಉಪಪ್ರಧಾನಿ ಸರ್ದಾರ್ ಪಟೇಲರು ನಾಸಿಕ್ ಕಾಂಗ್ರೆಸ್ ಅಧಿವೇಶನಕ್ಕೆ ೧೯ ಮತ್ತು ೧೮ ತಾ॥ ತಲುಪುವರು. ಪ್ರಧಾನಿ ಪಂ॥ ನೆಹರೂರವರು ನಾಸಿಕ್ ರಸ್ತೆಯಲ್ಲಿರುವ ರಾಂಬಾಗಿನಲ್ಲಿಯೂ ಮತ್ತು ಸರ್ದಾರ್ ಪಟೇಲರು ಅದೇ ರಸ್ತೆಯಲ್ಲಿರುವ ಬಿರ್ಲಾಭವನದಲ್ಲಿಯೂ ತಂಗುವರೆಂದು ತಿಳಿಯಬಂದಿದೆ

೧,೨೦೦ ಅತಿಥಿಗಳು

ನಾಸಿಕ್ ಕಾಂಗ್ರೆಸ್ಸಿಗೆ ೧,೨೦೦ ಅತಿಥಿಗಳು ಬರುವರೆಂದು ನಿರೀಕ್ಷಿಸಲಾಗಿದೆ. ಎ. ಐ. ಸಿ. ಸಿ. ಸದಸ್ಯರಿಗೆ ೪೦೦ ಸ್ಥಾನಗಳನ್ನು ಪ್ರತಿನಿಧಿಗಳಿಗೆ ೨,೫೦೦ ಸ್ಥಾನಗಳನ್ನೂ ಮೀಸಲಿಡಲಾಗಿದೆ.

ಶ್ರೀ ಡಾಂಗೇ ಮನವಿ

ಬೊಂಬಾಯಿನ ಕಾರ್ಮಿಕ ಮುಂದಾಳುಗಳಾದ ಶ್ರೀ. ಡಾಂಗೆಯವರು, ಬಟ್ಟೆಗಿರಣಿಗಳ ಮುಷ್ಕರಕಾರರಿಗೆ ಜರೂರು ಪರಿಹಾರ ನೀಡಬೇಕೆಂದು ವಿಶ್ವ ಟ್ರೇಡ್ ಯೂನಿಯನ್ ಫೆಡರೇಷನ್ನಿಗೆ ಮನವಿಮಾಡಿದ್ದಾರೆಂದು ತಿಳಿದು ಬರುತ್ತದೆ.

ಸಮಾಚಾರ

ಸೆಪ್ಟೆಂಬರ್ ೧೪-೯-೫೦ ಗುರುವಾರ

ಅಸ್ಸಾಂ ಭೂಕಂಪ ನಿಧಿ

ಭಾರತವು ಸ್ವತಂತ್ರವಾದ ದಿನ ಅಗಸ್ಟ್ ೧೫ ರಂದು ಇಡೀ ವಿಶ್ವದ ಚರಿತ್ರೆಯಲ್ಲಿಯೇ ಇದುವರೆಗೆ ಕಾಣದ, ಕೇಳದ, ಅಪಘಾತವು ಅಸ್ಸಾಮಿನಲ್ಲಿ ನಡೆಯಿತು; ಮಹದ್ಭೂಕಂಪ.

ಅಂದಿನಿಂದಲೂ ಪ್ರತಿ ದಿನವೂ ಪುನಃ ಪುನಃ ಅಸ್ಸಾಮಿನಲ್ಲಿ ಭೂಕಂಪವಾಗುತ್ತಲೇ ಇದೆ. ಹಿಂದಿನ ಕಾಲದಲ್ಲಿ ಹೇಳುತ್ತಿದ್ದ ಜಲಪ್ರಳಯ, ಅಗ್ನಿಪ್ರಳಯ, ಭೂಪ್ರಳಯವೆಂಬ ಭಯಂಕರ ವಿನಾಶ ಚಿತ್ರಗಳ ವರ್ಣನೆಗೂ ಮೀರಿದುದಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಪರ್ವತಶ್ರೇಣಿಗಳೇ ಭೂಮಿಯಲ್ಲಿ ಹೂತುಹೋಗಿ ಮಾಯವಾದುವು. ಭೂಮಿಯು ಬಾಯಿಬಿಟ್ಟು ಸಜೀವ ನಿರ್ಜೀವ ವಸ್ತುಗಳನ್ನ "ಸ್ವಾಹಾ" ಮಾಡಿತು ಜನರು ದಿಕ್ಕೆಟ್ಟು ಓಡಿದರು. ನದಿಗಳು ತಮ್ಮ ಹರಿಯುತ್ತಲಿದ್ದ ಪಾತ್ರವನ್ನೇ ಬದಲಾಯಿಸಿದುವು. ನೆರೆ ಉಕ್ಕಿ, ಜಲಪ್ರಳಯವಾಯಿತು. ಕುಡಿಯುವ ನೀರು ಗಂಧಕ ಮಿಶ್ರವಾಯಿತು. ಮಂದಿರಗಳು ನೆಲಸಮವಾದುವು ಮಾನವರು ನಿಸ್ಸಹಾಯರಾದರು. ಹಸಿವು, ಬಾಯಾರಿಕೆ ಮತ್ತು ಭಯದಿಂದ ಸಹಸ್ರಾರು ಸಂಖ್ಯೆಯಲ್ಲಿ ಪ್ರಾಣನೀಗಿದರು. ದನಕರುಗಳು ಮತ್ತಿತರ ಪ್ರಾಣಿಗಳೂ ಪ್ರವಾಹ ಹೊಡೆತಕ್ಕೆ ಸಿಕ್ಕಿ ಪ್ರಾಣಬಿಡಬೇಕಾಯಿತು ಈ ದುರ್ಘಟನೆಯ ಭೀಕರ ದೃಶ್ಯವು ಮಾನವನ ಹೃದಯ ಕರಗಿಸುವುದಾಗಿದೆ

ಭಾರತ ಪ್ರಧಾನಿ ಪಂ॥ ನೆಹರೂರವರು ಭೂಕಂಪ ಪೀಡಿತ ಪ್ರದೇಶಕ್ಕೆ ಭೇಟಿಯಿತ್ತು ಅಲ್ಲಿನ ಘೋರ ಹೃದಯ ವಿದ್ರಾವಕ ದೃಶ್ಯವನ್ನು ಕಣ್ಣಾರೆ ಕಂಡು ಬಂದನಂತರ ರೇಡಿಯೋದ ಮೂಲಕ ಇಡೀ ಭಾರತಕ್ಕೆ ತಮ್ಮ ಹೃತ್ಪೂರ್ವಕ ಸಹಾಯ ಮನವಿಯನ್ನು ಮಾಡಿದರು. ಅಂತೆಯೇ ಭಾರತ ರಾಷ್ಟ್ರಾಧ್ಯಕ್ಷರೂ (ಈಗ್ಗೆ ಸುಮಾರು ೧೬ ವರ್ಷಗಳ ಹಿಂದೆ ಬಿಹಾರಿನಲ್ಲಾದ ಭೂಕಂಪ ಪೀಡಿತರಿಗೆ ಅಮಿತ ಸಹಾಯಕ್ಕೆ ಕಾರಣರಾದವರು ಬಾಬುರಾಜೇಂದ್ರರು) ಭಾರತೀಯರೆಲ್ಲ ಈ ಅಸ್ಸಾಂ ಭೂಕಂಪ ಪರಿಹಾರ ನಿಧಿಗೆ ಉದಾರ ಸಹಾಯ ನೀಡಬೇಕೆಂದು ಮನವಿಮಾಡಿದ್ದಾರೆ. ಅಂತೆಯೇ ಅಸ್ಸಾಂ ಪರಿಹಾರ ಕೇಂದ್ರ ಸಮಿತಿಯೂ ರಚಿತವಾಗಿರುವುದಲ್ಲದೆ, ಪ್ರತಿ ಪ್ರಾಂತ ಗೌರ್ನರುಗಳೂ ಅಸ್ಸಾಂ ಪರಿಹಾರನಿಧಿಯನ್ನು ಏರ್ಪಡಿಸಿದ್ದಾರೆ.

ಈಗಾಗಲೇ ದೇಶಾದ್ಯಂತ ಅನೇಕ ಖಾಸಗೀ ಸಂಸ್ಥೆಗಳು ತಮ್ಮ ನಮ್ರ ಕಾಣಿಕೆಯನ್ನು ಸಲ್ಲಿಸುತ್ತಿವೆ.

ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳ ಮನವಿಯ ಮೇರೆ, ಅನೇಕ ಖಾಸಗೀ ಮಹನೀಯರೂ, ಖಾಸಗೀ ಸಂಸ್ಥೆಗಳೂ, ಪುರಸಭೆಗಳೂ ಅಸ್ಸಾಂ ಭೂಕಂಪ ಪೀಡಿತರಿಗೆ ಉದಾರಸಹಾಯಮಾಡಬೇಕೆಂದು ಪಣತೊಟ್ಟು ಧನ-ಧಾನ್ಯ-ಪದಾರ್ಥಗಳ ಸಂಗ್ರಹಣ ಕಾರ್ಯದಲ್ಲಿ ತೊಡಗಿದ್ದಾರೆ. ಈ ಕಾರ್ಯದಲ್ಲಿ ಅಧಿಕಾರಿಗಳೂ ಸಹ ಸಹಕಾರಹಸ್ತ ನೀಡಿದ್ದಾರೆ.

ಅಸ್ಸಾಂ ಭೂಕಂಪದಿಂದ ನೊಂದವರಿಗೆ ಸಹಾಯ ನೀಡುವುದು ಪ್ರತಿಭಾರತೀಯನ ಕರ್ತವ್ಯ-ಪ್ರತಿ ಮಾನವನ ಕರ್ತವ್ಯ. ಜಾತಿ, ಮತ, ಕೋಮು, ರಾಜಕೀಯ ಪಕ್ಷ, ಮತ್ತಾವುದೇ ಭಿನ್ನಭಾವನೆಗಳಿರಲಿ ಅದನ್ನೆಲ್ಲ ಬದಿಗೊತ್ತಿ ಐಕ್ಯತೆಯಿಂದ ಮೈಸೂರಿನವರೆಲ್ಲರೂ ಈ ನಿಧಿ ಸಂಗ್ರಹಣಕಾರ್ಯಕ್ಕೆ ನೆರವಾಗುವುದು ಮಾದರಿ ಮೈಸೂರಿನವರ ಕರ್ತವ್ಯ.

ಮೈಸೂರು ಪೌರಸಭಾಶ್ರಯದಲ್ಲಿ ಪುರಪ್ರಮುಖರನ್ನೊಳಗೊಂಡ ಅಸ್ಸಾಂ ಪರಿಹಾರನಿಧಿ ಸಮಿತಿಯು ರಚಿತವಾಗಿದೆ. ಈ ಸಮಿತಿಯ ಕಾರ್ಯದಲ್ಲಿ ಮೈಸೂರು ನಗರದ ಪೌರರೆಲ್ಲರೂ, ತಮ್ಮ ತಮ್ಮ ಭಿನ್ನಾಭಿಪ್ರಾಯಗಳೇನೆ ಇರಲಿ ಅದನ್ನೆಲ್ಲಾ ಬದಿಗಿಟ್ಟು, ವಿಶಾಲಹೃದಯದಿಂದ ಹೃತ್ಪೂರ್ವಕವಾಗಿ ಸಹಕರಿಸಿ ಸಂಸ್ಥಾನದಲ್ಲಿಯೇ ಮೈಸೂರು ನಿಧಿ ಸಂಗ್ರಹಣ ಕಾರ್ಯದಲ್ಲಿ ಮಾದರಿಯೆಂದು ಕೀರ್ತಿಗಳಿಸುವಂತೆ ಶ್ರಮಿಸಬೇಕೆಂದು ಸೂಚಿಸುತ್ತೇವೆ.

ಈ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಪ್ರತಿನಿಧಿಗಳೂ ಅಸ್ಸಾಂ ಭೂಕಂಪದಿಂದುಂಟಾದ ಕಷ್ಟ-ನಷ್ಟಗಳನ್ನು ವೀಕ್ಷಿಸಲು ಬರಲಿದ್ದಾರೆಂಬ ವಿಷಯವನ್ನು ನೆನಪಿಗೆ ತರಲು ಬಯಸುತ್ತೇವೆ. ಭಾರತದ ಒಂದು ಅಂಗವಾದ ಅಸ್ಸಾಮಿಗೆ ಬಂದೊದಗಿರುವ ವಿಪತ್ತಿನಲ್ಲಿ ಸಹಾಯ ಮಾಡುವುದರಲ್ಲಿ ಪರಕೀಯರಿಗಿಂತಲೂ ನಾವೇನೂ ಕಡಿಮೆಯಿಲ್ಲವೆಂದೂ, ಅವರಿಗಿಂತಲೂ ಹೆಚ್ಚಾಗಿ ನಮ್ಮ ಜನದಮೇಲೆ ನಮಗೆ ಅಂತಃಕರಣ ಮತ್ತು ವಿಶ್ವಾಸವಿದೆಯೆಂಬುದನ್ನು ಕಾರ್ಯತಃ ತೋರ್ಪಡಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ ?

ಈ ನಿಧಿ ಸಂಗ್ರಹಣ ತ್ವರಿತಗೊಂಡು, ಯಶಸ್ವಿಯಾಗಿ ಸಂತಪ್ತರಿಗೆ ನಮ್ಮ ನೆರವು ನೇರವಾಗಿ ಮುಟ್ಟಲು ಪೋಸ್ಟಲ್ ಇಲಾಖಾದವರೂ ಸಹ ಈ ನಿಧಿ ಕಳುಹಿಸುವಲ್ಲಿ ಸಂಪೂರ್ಣ ಸಹಾನುಭೂತಿಯನ್ನು ತೋರಿಸಬೇಕಾಗಿದೆ ಈ ನಿಧಿಯನ್ನು ಟಪಾಲ್ ಮೂಲಕ ಮಣಿ ಆರ್ಡರ್ ಕಮಿಷನ್ ಇತ್ಯಾದಿಯನ್ನು ತೆಗೆದುಕೊಳ್ಳದೇ ಎಲ್ಲ ಖರ್ಚುಗಳನ್ನು ಉಳಿಸಿ "ಫ್ರೀ" ಸೇವೆಯನ್ನು ಸಲ್ಲಿಸುವುದು ಸೂಕ್ತವೆಂದು ಸೂಚಿಸುತ್ತೇವೆ. ಅಂತೆಯೇ ಅಂಚೆ ಇಲಾಖೆಯವರು ಪರಿಹಾರನಿಧಿ ಸ್ಟಾಂಪುಗಳನ್ನು ಅಚ್ಚುಹಾಕಿ (ಹಿಂದೆ ನ್ಯಾಷನಲ್ ಸೇವಿಂಗ್ಸ್ ಸ್ಟಾಂಪುಗಳನ್ನು ಏರ್ಪಡಿಸಿದ್ದಂತೆ) ಪರಿಹಾರನಿಧಿಗೆ ತಾವೂ ಸಹ ನೇರವಾಗಿ ಸಹಾಯಕವಾಗಲೆಂದು ಸೂಚಿಸುತ್ತೇವೆ

ಮೈಸೂರಿನ ನಾಗರೀಕರೆಲ್ಲರೂ ನಮ್ಮ ನಾಯಕರೆಲ್ಲರ ಮನವಿಗೆ ಕಿವಿಗೊಟ್ಟು ತಮ್ಮ ಮುಕ್ತಹಸ್ತದಿಂದ ಉದಾರವಾಗಿ ಈ ಅಸ್ಸಾಂ ಪರಿಹಾರನಿಧಿಗೆ ಸಹಾಯ ಮಾಡುವಂತಾಗಲಿ.

ಜೈ ಹಿಂದ್.

ಪತ್ರವ್ಯವಹಾರ

ನಗರದಲ್ಲಿ ನೀರಿಲ್ಲ

ಸ್ವಾಮಿ,—

ಮೈಸೂರು ನಗರದ ಕೃಷ್ಣರಾಜ ಮೊಹಲ್ಲಾ ಮುಂತಾದ ಕೆಲವೆಡೆಗಳಲ್ಲಿ ಮಾಮೂಲಿನಂತೆ ಈ ಗೌರೀ ಹಬ್ಬದ ದಿವಸದಲ್ಲೂ ಬೆಳಗ್ಗೆ ನೀರಿನ ಸರಬರಾಯಿ ಸಂಪೂರ್ಣವಾಗಿ ನಿಂತುಹೋಗಿ ಜನರು ಪಡುತ್ತಲಿರುವ ಕಷ್ಟವು ಹೇಳತೀರದಾಗಿದೆ ಇದೇನು ಇಲಾಖಾ ವೈಖರಿಯೋ ತಿಳಿಯದು. ಹಾಗೇನಾದರೂ ನೀರು ನಿಲ್ಲಿಸುವುದಾಗಿದ್ದರೆ ಮುಂಚೆಯೇ ತಿಳಿಸಬಾರದಾಗಿತ್ತೇ ? ಆಕಸ್ಮಿಕವಾಗಿ ಏನಾದರೂ ತೊಂದರೆಯಾಗಿದ್ದರೆ ಜನರಿಗೆ ತಿಳುವಳಿಕೆ ಕೊಡಬಾರದೇ ? ವಾಣೀವಿಲಾಸ ವಾಟರ್‌ವರ್ಕ್ಸ್‌ಗೆ ಈ ವಿಚಾರ ಫೋನ್ ಮಾಡಿದರೆ ಕೇಳುವವರೇ ಇಲ್ಲ ಇಲಾಖೆಯವರಲ್ಲಿ ಇದೇಕೆ ಈ ತಾತ್ಸಾರ? ಜನರ ತೊಂದರೆಗಳನ್ನು ನಿವಾರಿಸಲಿರುವ ಈ ಎಸೆನ್ಷಿಯಲ್ ಸರ್ವಿಸ್ ಇಲಾಖೆ ಕೆಲಸಕಾರ್ಯಗಳಲ್ಲಿ ಚಟುವಟಿಕೆಯೇ ಬೇಡವೆ ?

ಕೃಷ್ಣರಾಜ ಸಾಗರದಲ್ಲಿ ನೀರು ಸಂಪೂರ್ಣವಾಗಿ ಬತ್ತಿಹೋಗಿದ್ದಾಗ ಸಹ ಕೃಷ್ಣರಾಜಮೊಹಲ್ಲಾ ಬಂಡೀಕೇರಿ ಮುಂತಾದಕಡೆ ನೀರಿನ ಸರಬರಾಯಿ ಚೆನ್ನಾಗಿತ್ತು. ಈಗ ನೀರಿನ ಸರಬರಾಯಿ ಸ್ವಲ್ಪವೂ ಸಮರ್ಪಕವಾಗಿಲ್ಲ.

ನೀರಿನ ಇಲಾಖೆಯವರು ಜನರು ಪಡುತ್ತಲಿರುವ ಈ ತೊಂದರೆಯನ್ನು ತಪ್ಪಿಸಲು ತಕ್ಕ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳುವುದು ಅವರ ಕರ್ತವ್ಯ.

ಒಬ್ಬ ಪೌರ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೬ ಮೀಟರು

ಸೆಪ್ಟೆಂಬರ್ ೧೫ ಶುಕ್ರವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಶ್ರೀ. ಕೆ. ಎಸ್. ವಿಶ್ವನಾಥಶಾಸ್ತ್ರಿ (ದೇವಿಭಜನ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ. ೮-೨೦ ಮುಕ್ತಾಯ.

ಮಧ್ಯಾಹ್ನ ೧-೦ ಶ್ರೀ. ಬಿ. ಎಂ. ಶಿವಪ್ಪ (ಹಾಡುಗಾರಿಕೆ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಜಲತರಂಗ್ ೨-೦ ಚಲನಚಿತ್ರ ಸಂಗೀತ (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಶ್ರೀ. ಬಿ. ಎಂ. ಶಿವಪ್ಪ (ಹಾಡುಗಾರಿಕೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಹಿಂದೀಕಾರ್ಯಕ್ರಮ ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ: ನಮ್ಮ ರಾಜ್ಯಾಂಗ ಮತ್ತು ಸಂಸ್ಥಾನಗಳು ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದ ಶ್ರೀ ೮-೧೫ ಶ್ರೀ. ಕೆ. ಎಸ್. ವಿಶ್ವನಾಥಶಾಸ್ತ್ರಿ (ರಾಗ, ತಾನ, ಮತ್ತು ಪಲ್ಲವಿ) (ರಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವೃಂದ ಸಂಗೀತ ೧೦-೦ ಮುಕ್ತಾಯ.

ಸೆಪ್ಟೆಂಬರ್ ೧೬ ಶನಿವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಚಿತ್ರಲೋಕ ೭-೨೫ ಶ್ರೀ. ಎಸ್. ರಾಮಚಂದ್ರರಾವ್ (ದೇವರನಾಮ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಚೂಡಾಮಣಿ (ರಿ) ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಶ್ರೀ ಅರಕೆರೆ ನಾರಾಯಣರಾವ್ (ಹಾಡುಗಾರಿಕೆ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ [illegible] ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಶ್ರೀ. ಅರಕೆರೆ ನಾರಾಯಣರಾವ್ (ಹಾಡುಗಾರಿಕೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ತಬಲ ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕಥಾಕಾಲಕ್ಷೇಪ ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಇಂಗ್ಲೀಷಿನಲ್ಲಿ ಭಾಷಣ (ಶ್ರೀ. ಬಿ. ವಿ. ನಾರಾಯಣ ರೆಡ್ಡಿ) ೯-೪೫ ವಾದ್ಯ ಸಮ್ಮೇಳನ ೧೦-೦ ಮುಕ್ತಾಯ.

ರಣಜಿತ್
ತಾ॥ 14-9-50 ರಿಂದ 8 ದಿನಗಳು ಮಾತ್ರ
ದಿನವಹಿ 3 ಆಟಗಳು
ಮಹಾಜನಗಳ ಕೋರಿಕೆಯ ಮೇಲೆ
ಅಂದಾಜ್
ಪಾತ್ರ :—ನರ್ಗೀಸ್, ಮತ್ತು ರಾಜಕಪೂರ್
ಬೆಳಗಿನ ಪ್ರದರ್ಶನ
15-9-50 ರಿಂದ ಮೂರು ದಿನಗಳು ಮಾತ್ರ
ನಾಟಕ್
ಪಾತ್ರ : ಸುರೈಯ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಘುಲಾಲ್ ಮತ್ತು ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ
ಸಂಪುಟ ೧] ೧೬—೯—೧೯೫೦ ನೇ ಶನಿವಾರ [ಸಂಚಿಕೆ ೨೭

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char St. et.
BANGALORE—2

ಕೊರಿಯಾ ಯುದ್ಧ

ಯುದ್ಧ ಪ್ರಾರಂಭವಾದ ಎರಡು ತಿಂಗಳಲ್ಲಿ, ತಮ್ಮ ಸೈನ್ಯವು ೧೫,೧೭೬ ಜನರನ್ನು ಕೊಂದು, ೪೫,೦೦೦ ಜನರಿಗೆ ಘಾಯಪಡಿಸಿ, ೧,೭೨೬ ಜನರನ್ನು ಕೈಸೆರೆ ಹಿಡಿದಿರುವುದಾಗಿಯೂ, ಈಗಾಗಲೇ ಶೇಕಡ ೯೫ ರಷ್ಟು ಕೊರಿಯಾ ರಾಜ್ಯವೂ, ಶೇ. ೯೭ ರಷ್ಟು ಕೊರಿಯನ್ನರೂ ತಮ್ಮ ಸರ್ಕಾರದ ವಶದಲ್ಲಿರುವರೆಂದೂ ಉತ್ತರಕೊರಿಯ ಮುಖ್ಯಮಂತ್ರಿ ಹೇಳಿರುವರು.

ರಷ್ಯಾ ಸೈನ್ಯಬಲ

ರಷ್ಯಾ ದೇಶದಲ್ಲಿ ಈಗಾಗಲೇ ೪೫ ಲಕ್ಷ ಸೈನಿಕರಿಗೆ ಮತ್ತು ವಿಶೇಷ ಸಂಖ್ಯೆಯಲ್ಲಿ ಹೋಂ ಗಾರ್ಡುಗಳಿಗೆ ಸೈನ್ಯಶಿಕ್ಷಣವನ್ನು ಕೊಡಲಾಗುತ್ತಲಿದೆ. ದೇಶದ ಆದಾಯದಲ್ಲಿ ಶೇ. ೩೦ ರಷ್ಟು ಸೈನ್ಯಸಿದ್ಧತೆಗಾಗಿ ರಷ್ಯಾ ವೆಚ್ಚ ಮಾಡುತ್ತಲಿದೆ. ರಷ್ಯಾ ದೇಶದಲ್ಲಿ ಕೈಗಾರಿಕೆಯೆಲ್ಲವೂ ಯುದ್ಧಸಾಮಗ್ರಿಗಳ ತಯಾರಿಕೆ ಉದ್ಯಮದಲ್ಲಿಯೇ ಇರುವುದರಿಂದ ಇತರ ಕೈಗಾರಿಕೆಗಳಲ್ಲಿ ಕೆಲಸಗಾರರಿಲ್ಲದೆ ತೊಂದರೆಯುಂಟಾಗಿದೆಯೆಂದು ಅಮೆರಿಕಾ ಸೈನ್ಯವು ತಿಳಿಸಿರುತ್ತದೆ.

ಹತ್ತುಸಾವಿರ ರೂ. ಜುಲ್ಮಾನೆ

೪೦,೦೦೦ ರೂ. ಬೆಲೆಬಾಳುವ ಗಿರಣಿ ಬಟ್ಟೆಯನ್ನು ರಹದಾರಿಯಿಲ್ಲದೆ ದೆಹಲಿಯಿಂದ ಹೊರಕ್ಕೆ ಸಾಗಿಸಬೇಕೆಂದು ಪ್ರಯತ್ನಪಟ್ಟ, ಕಲ್ಕತ್ತಾ ವ್ಯಾಪಾರಿ ಕನ್ಹೈಲಾಲ್ ಎಂಬುವವನಿಗೆ ದೆಹಲಿ ಮ್ಯಾಜಿಸ್ಟ್ರೇಟರು ಆ ಬಟ್ಟೆಗಳನ್ನು ಮುಟ್ಟುಗೋಲು ಹಾಕಿಕೊಂಡದ್ದಲ್ಲದೆ ೧೦,೦೦೦ ರೂ. ಜುಲ್ಮಾನೆ, ಕೋರ್ಟು ಏಳುವವರೆಗೆ ಶಿಕ್ಷೆಯನ್ನು ವಿಧಿಸಿರುವರು.

ಡಾ|| ಶ್ಯಾಮಪ್ರಸಾದ್ ಮುಖರ್ಜಿ

ಕೇಂದ್ರ ಸರ್ಕಾರದ ಮಾಜಿ ಕೈಗಾರಿಕಾ ಮಂತ್ರಿ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ದಸ್ತಗಿರಿಯಾಗಿರುವ ಅಕಾಲಿ ಮುಖಂಡ ಶ್ರೀ ತಾರಾಸಿಂಗರ ಪರವಾಗಿ ವಕಾಲತ್ತು ವಹಿಸಿದರೆಂದು ತಿಳಿಯಬರುತ್ತದೆ.

ಈಜಿಪ್ಟಿನ ಅಕ್ಕಿ

ಭಾರತವು ಈಜಿಪ್ಟಿನಿಂದ ೬೦,೦೦೦ ಟನ್ನು ಮಂಜೂರಿಯಾಅಕ್ಕಿಯನ್ನು ಕೊಳ್ಳುವುದು ಅದರ ಪೈಕಿ ಈಗಾಗಲೆ ೬೦೦೦ ಟನ್ನು ಈಜಿಪ್ಟಿನಿಂದ ಹೊರಟಿದೆ. ಭಾರತವು ಅದಕ್ಕೆ ಬದಲಾಗಿ, ೧೩,೦೦೦ ಟನ್ನು ಸೆಣಬು ವಸ್ತ್ರ, ೧೦,೦೦೦ ಟನ್ನು ಹತ್ತಿ ಪ್ಯಾಕುಗಳು, ೧೦೦೦ ಟನ್ನು ಉರುಳಿ ಪೊಟ್ಟಣಗಳು ಮತ್ತು ೨,೦೦೦ ಟನ್ನು ಹೆಸ್ಸಿಯಾ (Hessian) ಸರಬರಾಯಿ ಮಾಡುವುದು.

ಜನಗಣತಿಗಾಗಿ ಮನೆಯಲ್ಲೇ ಬಂಧನ

ಅಬ್ಸೀನಿಯಾದಲ್ಲಿ ಜನಗಣತಿಯನ್ನು ತೆಗೆದುಕೊಳ್ಳಲು ಪಿರಾನ ಸರ್ಕಾರವು ಏರ್ಪಾಡುಮಾಡಿದೆ. ಈ ಸಮಯದಲ್ಲಿ ಜನರಿಗೆ ಎಚ್ಚರಿಕೆಯನ್ನು ಕೊಡುತ್ತಾ ಜನಗಣತಿಯನ್ನು ತೆಗೆದುಕೊಳ್ಳುವಾಗ ೨೪ ಗಂಟೆಗಳಕಾಲ [illegible] ಮನೆಯಿಂದ ಹೊರಗೆ ಬರಕೂಡದು, ಪೋಲೀಸ್ ಜನಗಣತಿ ಅಧಿಕಾರಿಗಳು ವಿನಹ ಮತ್ಯಾರೂ ರಸ್ತೆಗಳಲ್ಲಿರಕೂಡದು, ಮನೆಯಲ್ಲಿ ಸಾವೇನಾದರೂ ಉಂಟಾದರೂ ಆಗಲೂ ಮನೆಯಲ್ಲಿಯೇ ಇರಬೇಕು, ಆದರೆ ಮನೆಯ ಯಜಮಾನನು ಮನೆಯ ಕಿಟಕಿಯಿಂದ ಹೊರಕ್ಕೆ ತಲೆಹಾಕಿಕೊಂಡಿದ್ದು ಪೋಲೀಸಿನವನ ಕಣ್ಣಿಗೆ ಬಿದ್ದ ಸಂಗತಿಯನ್ನು ತಿಳಿಸಬಹುದೆಂದು ಕಟ್ಟಾಜ್ಞೆಯನ್ನಿತ್ತಿದೆ.

ಲಾರ್ಡ್ ಮೌಂಟ್ ಬ್ಯಾಟನ್

ಭಾರತದ ಮಾಜಿ ಗೌರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ನರವರು ಇಂಗ್ಲೆಂಡಿನ ರಕ್ಷಣಾಮಂತ್ರಿಗಳಾಗಬಹುದೆಂದು ಇಂಗ್ಲೆಂಡಿನ ಪಾರ್ಲಿಮೆಂಟು ವೃತ್ತಗಳಲ್ಲಿ ವರ್ತಮಾನ ಹುಟ್ಟಿದೆ.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಅಧಿಕಾರಿಗಳ ಮೇಲೆ ಕಾರ್ಯಕ್ರಮ

ಅಧಿಕಾರಿಗಳು ಬಂಧಿಸಿದ ಜನರನ್ನು ಅವರ ಮೇಲ್ಪಟ್ಟ ಅಧಿಕಾರಿಗಳು ಬಿಟ್ಟುಬಿಟ್ಟರೆ ಬಂಧಿಸಿದ ಅಧಿಕಾರಿಗಳ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಭಾರತ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಶ್ರೀ. ಪತಂಜಲಿ ಶಾಸ್ತ್ರಿಗಳು ಹೇಳಿರುವರು.

ಹೆಚ್ಚಿಗೆ ಸರಬರಾಯಿ ಇಲ್ಲ

ಈಗ ನಿಗದಿಮಾಡಿರುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಹಾರಪದಾರ್ಥಗಳನ್ನು ಸರಬರಾಯಿ ಮಾಡಲು ಸಾಧ್ಯವಿಲ್ಲ. ಸಂಸ್ಥಾನದಲ್ಲಿರುವ ದಾಸ್ತಾನನ್ನೇ ಸರಿಯಾಗಿ ವಸೂಲ್ಮಾಡಬೇಕೆಂದು ಕೇಂದ್ರ ಸರ್ಕಾರವು ತಿರುವಾಂಕೂರು-ಕೊಚ್ಚಿ ಒಕ್ಕೂಟಕ್ಕೆ ತಿಳಿಸಿರುವುದಾಗಿ ವರದಿಯಾಗಿದೆ.

ಸುಪ್ರೀಂ ಕೋರ್ಟಿಗೆ

ಮದರಾಸು ಹೈಕೋರ್ಟಿನಲ್ಲಿ ನ್ಯಾಯಾಧೀಶರಾಗಿ ನಿವೃತ್ತರಾಗಿದ್ದ ಶ್ರೀ. ಎನ್. ಚಂದ್ರಶೇಖರಯ್ಯರ್‌ರವರು ಭಾರತ ಸುಪ್ರೀಂಕೋರ್ಟಿನ ನ್ಯಾಯಾಧೀಶರಾದ ನೇಮಕರಾಗಿದ್ದಾರೆ.

ರೈಲ್ವೆ ವ್ಯಾಗನ್ನುಗಳು

ಆರುಕೋಟಿ ರೂಪಾಯಿಯ, ೬,೦೦೦ ರೈಲ್ವೆ ವ್ಯಾಗನ್ನುಗಳನ್ನು ಕೇಂದ್ರ ಸರ್ಕಾರವು ಕೊಳ್ಳಲು ಏರ್ಪಾಡು ಮಾಡುತ್ತಲಿದೆ. ಈ ವ್ಯಾಗನ್ನುಗಳು ೧೯೫೧-೫೨ರಲ್ಲಿ ಭಾರತಕ್ಕೆ ಬರಲಿವೆ ಇದೇರೀತಿಯಾಗಿ ೧೯೫೨-೫೩, ೫೩-೫೪ ಮತ್ತು ೫೪-೫೫ರಲ್ಲಿ ವ್ಯಾಗನ್ನುಗಳನ್ನು ಭಾರತವು ಹೊರಗಿನಿಂದ ಕೊಳ್ಳುವುದು.

ರೇಷನ್

ಅಕ್ಟೋಬರ್ ೧ನೇ ತಾರೀಖಿನಿಂದ ಮದರಾಸಿನಲ್ಲಿ ಹತ್ತಿನೂಲಿನ ರೇಷನ್‌ಪದ್ಧತಿಯು ಜಾರಿಗೆ ಬರಲಿದೆ.

ಸಮಾಜ ದ್ರೋಹ

ಬೆಂಕಿ ಎಣ್ಣೆಯನ್ನು ಮಾರಿದ್ದಕ್ಕೆ ಕಲ್ಕತ್ತಾ ಹೈಕೋರ್ಟು ವಿಧಿಸಿದ ಶಿಕ್ಷೆಯಮೇಲೆ ಹಿತ್ಸರ್ ಕಂಪೆನಿಯವರು ಭಾರತ ಸುಪ್ರೀಂ ಕೋರ್ಟಿಗೆ ಅಪೀಲು ಅರ್ಜಿಯನ್ನು ಸಲ್ಲಿಸಿದ್ದನ್ನು ಭಾರತ ಶ್ರೇಷ್ಠ ನ್ಯಾಯಾಧೀಶರು ನಿರಾಕರಿಸುತ್ತಾ ಈ ಜನರು ಸಮಾಜ ಶತ್ರುಗಳೆಂದು ತಿಳಿಸಿರುವರು.

ಸ್ವಂತ ಆಸ್ತಿಯಲ್ಲ

ಆಂಧ್ರ ಪ್ರಾಂತ್ಯ ಕಾಂಗ್ರೆಸ್ ಸಮಿತಿಯು ತಾವು ಉಮೇದವಾರಿಕೆಗೆ ಸಲ್ಲಿಸಿದ್ದ ಸದಸ್ಯರ ವಿರುದ್ಧವಾಗಿ ಗೋದಾವರೀ ಜಿಲ್ಲಾ ಬೋರ್ಡು ಅಧ್ಯಕ್ಷಸ್ಥಾನಕ್ಕೆ ನಿಂತರೆಂಬ ಆಪಾದನೆ ಮೇಲೆ ಮ|| ಸೀತಾರಾಮದಾಸ್ ಮತ್ತು ೧೫ ಇತರರ ಮೇಲೆ ಕ್ರಮ ಜರುಗಿಸಿದ್ದನ್ನು ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪಟ್ಟಾಭಿಸೀತಾರಾಮಯ್ಯನವರು ತಳ್ಳಿಹಾಕಿ, ಜಿಲ್ಲಾಬೋರ್ಡಿನ ಅಧ್ಯಕ್ಷಸ್ಥಾನವು ಸಂಪಾದನೆಗೆ ರಿಯಾಯತಿಗಾಗಿರುವ ಯಾವ ಸ್ವಂತ ಆಸ್ತಿಯಲ್ಲವೆಂದು ತಿಳಿಸಿರುವರು.

ತಂದೆ ಪತಿಯನ್ನು ಹುಡುಕಬೇಕಾಗಿಲ್ಲ !

“ಕಾಲೇಜಿನಲ್ಲಿ ಓದುವ ಯುವತಿಯರು ಗಂಡಂದಿರನ್ನು ತಾವೇ ಹುಡುಕಿಕೊಂಡು ತಮ್ಮ ತಾಯಿತಂದೆಯರಿಗೆ ತೊಂದರೆ ತಪ್ಪಿಸಿಬಿಟ್ಟಿದ್ದಾರೆ” ಎಂದು ಮದ್ರಾಸ್ ಶಿಕ್ಷಣ ಸಚಿವ ಮಾಧವಮೇನನ್ನರು ನುಡಿದರು. ಸಭೆಯಲ್ಲಿದ್ದವರೆಲ್ಲಾ ಘೊಳ್ಳೆಂದು ನಕ್ಕರು.

★ ಸಿರೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★

ಸಮಾಚಾರ

ಸೆಪ್ಟೆಂಬರ್ ೧೪-೯-೫೦ ಗುರುವಾರ

ಅಸ್ಸಾಂ ಭೂಕಂಪ ನಿಧಿ

ಭಾರತವು ಸ್ವತಂತ್ರವಾದ ದಿನ ಆಗಸ್ಟ್ ೧೫ ರಂದು ಇಡೀ ವಿಶ್ವದ ಚರಿತ್ರೆಯಲ್ಲಿಯೇ ಇದುವರೆಗೆ ಕಾಣದ, ಕೇಳದ, ಅಪಘಾತವು ಅಸ್ಸಾಮಿನಲ್ಲಿ ನಡೆಯಿತು; ಮಹದ್ಭೂಕಂಪ.

ಅಂದಿನಿಂದಲೂ ಪ್ರತಿ ದಿನವೂ ಪುನಃ ಪುನಃ ಅಸ್ಸಾಮಿನಲ್ಲಿ ಭೂಕಂಪವಾಗುತ್ತಲೇ ಇದೆ. ಹಿಂದಿನ ಕಾಲದಲ್ಲಿ ಹೇಳುತ್ತಿದ್ದ ಜಲಪ್ರಳಯ, ಅಗ್ನಿಪ್ರಳಯ, ಭೂಪ್ರಳಯವೆಂಬ ಭಯಂಕರ ವಿನಾಶ ಚಿತ್ರಗಳ ವರ್ಣನೆಗೂ ಮೀರಿದುದಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಪರ್ವತಶ್ರೇಣಿಗಳೇ ಭೂಮಿಯಲ್ಲಿ ಹೂತುಹೋಗಿ ಮಾಯವಾದುವು. ಭೂಮಿಯು ಬಾಯಿಬಿಟ್ಟು ಸಜೀವ ನಿರ್ಜೀವ ವಸ್ತುಗಳನ್ನು 'ಸ್ವಾಹಾ'' ಮಾಡಿತು ಜನರು ದಿಕ್ಕೆಟ್ಟು ಓಡಿದರು. ನದಿಗಳು ತಮ್ಮ ಹರಿಯುತ್ತಲಿದ್ದ ಪಾತ್ರವನ್ನೇ ಬದಲಾಯಿಸಿದುವು ನೆರೆ ಉಕ್ಕಿ, ಜಲಪ್ರಳಯವಾಯಿತು. ಕುಡಿಯುವ ನೀರು ಗಂಧಕ ಮಿಶ್ರವಾಯಿತು. ಮಂದಿರಗಳು ನೆಲಸಮವಾದುವು. ಮಾನವರು ನಿಸ್ಸಹಾಯರಾದರು. ಹಸಿವು, ಬಾಯಾರಿಕೆ ಮತ್ತು ಭಯದಿಂದ ಸಹಸ್ರಾರು ಸಂಖ್ಯೆಯಲ್ಲಿ ಪ್ರಾಣನೀಗಿದರು.. ದನಕರುಗಳು ಮತ್ತಿತರ ಪ್ರಾಣಿಗಳೂ ಪ್ರವಾಹ ಹೊಡೆತಕ್ಕೆ ಸಿಕ್ಕಿ ಪ್ರಾಣಬಿಡಬೇಕಾಯಿತು ಈ ದುರ್ಘಟನೆಯ ಭೀಕರ ದೃಶ್ಯವು ಮಾನವನ ಹೃದಯ ಕರಗಿಸುವುದಾಗಿದೆ

ಭಾರತ ಪ್ರಧಾನಿ ಪಂ॥ ನೆಹರೂರವರು ಭೂಕಂಪ ಪೀಡಿತ ಪ್ರದೇಶಕ್ಕೆ ಭೇಟಿಯಿತ್ತು, ಅಲ್ಲಿನ ಘೋರ ಹೃದಯ ವಿದ್ರಾವಕ ದೃಶ್ಯವನ್ನು ಕಣ್ಣಾರೆ ಕಂಡು ಬಂದನಂತರ ರೇಡಿಯೋದ ಮೂಲಕ ಇಡೀ ಭಾರತಕ್ಕೆ ತಮ್ಮ ಹೃತ್ಪೂರ್ವಕ ಸಹಾಯ ಮನವಿಯನ್ನು ಮಾಡಿದರು. ಅಂತೆಯೇ ಭಾರತ ರಾಷ್ಟ್ರಾಧ್ಯಕ್ಷರೂ (ಈಗ್ಯೆ ಸುಮಾರು ೧೬ ವರ್ಷಗಳ ಹಿಂದೆ ಬಿಹಾರಿನಲ್ಲಾದ ಭೂಕಂಪ ಪೀಡಿತರಿಗೆ ಅಮಿತ ಸಹಾಯಕ್ಕೆ ಕಾರಣರಾದವರು ಬಾಬು ರಾಜೇಂದ್ರರು) ಭಾರತೀಯರೆಲ್ಲ ಈ ಅಸ್ಸಾಂ ಭೂಕಂಪ ಪರಿಹಾರ ನಿಧಿಗೆ ಉದಾರ ಸಹಾಯ ನೀಡಬೇಕೆಂದು ಮನವಿಮಾಡಿದ್ದಾರೆ. ಅಂತೆಯೇ ಅಸ್ಸಾಂ ಪರಿಹಾರ ಕೇಂದ್ರ ಸಮಿತಿಯೂ ರಚಿತವಾಗಿರುವುದಲ್ಲದೆ, ಪ್ರತಿ ಪ್ರಾಂತ ಗೌರ್ನರುಗಳೂ ಅಸ್ಸಾಂ ಪರಿಹಾರನಿಧಿಯನ್ನು ಏರ್ಪಡಿಸಿದ್ದಾರೆ.

ಈಗಾಗಲೇ ದೇಶಾದ್ಯಂತ ಅನೇಕ ಖಾಸಗೀ ಸಂಸ್ಥೆಗಳು ತಮ್ಮ ನಮ್ರ ಕಾಣಿಕೆಯನ್ನು ಸಲ್ಲಿಸುತ್ತಿವೆ.

ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳ ಮನವಿಯ ಮೇರೆ, ಅನೇಕ ಖಾಸಗೀ ಮಹನೀಯರೂ, ಖಾಸಗೀ ಸಂಸ್ಥೆಗಳೂ, ಪುರಸಭೆಗಳೂ ಅಸ್ಸಾಂ ಭೂಕಂಪ ಪೀಡಿತರಿಗೆ ಉದಾರಸಹಾಯಮಾಡಬೇಕೆಂದು ಪಣತೊಟ್ಟು ಧನ-ಧಾನ್ಯ-ಪದಾರ್ಥಗಳ ಸಂಗ್ರಹಣ ಕಾರ್ಯದಲ್ಲಿ ತೊಡಗಿದ್ದಾರೆ. ಈ ಕಾರ್ಯದಲ್ಲಿ ಅಧಿಕಾರಿಗಳೂ ಸಹ ಸಹಕಾರಹಸ್ತ ನೀಡಿದ್ದಾರೆ.

ಅಸ್ಸಾಂ ಭೂಕಂಪದಿಂದ ನೊಂದವರಿಗೆ ಸಹಾಯ ನೀಡುವುದು ಪ್ರತಿಭಾರತೀಯನ ಕರ್ತವ್ಯ-ಪ್ರತಿ ಮಾನವನ ಕರ್ತವ್ಯ. ಜಾತಿ, ಮತ, ಕೋಮು, ರಾಜಕೀಯ ಪಕ್ಷ, ಮತ್ತಾವುದೇ ಭಿನ್ನಭಾವಗಳಿರಲಿ ಅದನ್ನೆಲ್ಲ ಬದಿಗೊತ್ತಿ ಐಕ್ಯತೆಯಿಂದ ಮೈಸೂರಿನವರೆಲ್ಲರೂ ಈ ನಿಧಿ ಸಂಗ್ರಹಣಕಾರ್ಯಕ್ಕೆ ನೆರವಾಗುವುದು ಮಾದರಿ ಮೈಸೂರಿನವರ ಕರ್ತವ್ಯ.

ಮೈಸೂರು ಪೌರಸಭಾಶ್ರಯದಲ್ಲಿ ಪುರಪ್ರಮುಖರನ್ನೊಳಗೊಂಡ ಅಸ್ಸಾಂ ಪರಿಹಾರನಿಧಿ ಸಮಿತಿಯು ರಚಿತವಾಗಿದೆ. ಈ ಸಮಿತಿಯ ಕಾರ್ಯದಲ್ಲಿ ಮೈಸೂರು ನಗರದ ಪೌರರೆಲ್ಲರೂ, ತಮ್ಮ ತಮ್ಮ ಭಿನ್ನಾಭಿಪ್ರಾಯಗಳೇನೆ ಇರಲಿ ಅದನ್ನೆಲ್ಲಾ ಬದಿಗಿಟ್ಟು, ವಿಶಾಲಹೃದಯದಿಂದ ಹೃತ್ಪೂರ್ವಕವಾಗಿ ಸಹಕರಿಸಿ ಸಂಸ್ಥಾನದಲ್ಲಿಯೇ ಮೈಸೂರು ನಿಧಿ ಸಂಗ್ರಹಣ ಕಾರ್ಯದಲ್ಲಿ ಮಾದರಿಯೆಂದು ಕೀರ್ತಿಗಳಿಸುವಂತೆ ಶ್ರಮಿಸಬೇಕೆಂದು ಸೂಚಿಸುತ್ತೇವೆ.

ಈ ಸಂದರ್ಭದಲ್ಲಿ ವಿಶ್ವಸಂಸ್ಥೆಯ ಪ್ರತಿನಿಧಿಗಳೂ ಅಸ್ಸಾಂ ಭೂಕಂಪದಿಂದುಂಟಾದ ಕಷ್ಟ-ನಷ್ಟಗಳನ್ನು ವೀಕ್ಷಿಸಲು ಬರಲಿದ್ದಾರೆಂಬ ವಿಷಯವನ್ನು ನೆನಪಿಗೆ ತರಲು ಬಯಸುತ್ತೇವೆ. ಭಾರತದ ಒಂದು ಅಂಗವಾದ ಅಸ್ಸಾಮಿಗೆ ಬಂದೊದಗಿರುವ ವಿಪತ್ತಿನಲ್ಲಿ ಸಹಾಯ ಮಾಡುವುದರಲ್ಲಿ ಪರಕೀಯರಿಗಿಂತಲೂ ನಾವೇನೂ ಕಡಿಮೆಯಿಲ್ಲವೆಂದೂ, ಅವರಿಗಿಂತಲೂ ಹೆಚ್ಚಾಗಿ ನಮ್ಮ ಜನದಮೇಲೆ ನಮಗೆ ಅಂತಕರಣ ಮತ್ತು ವಿಶ್ವಾಸವಿದೆಯೆಂಬುದನ್ನು ಕಾರ್ಯತಃ ತೋರ್ಪಡಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ ?

ಈ ನಿಧಿ ಸಂಗ್ರಹಣ ತ್ವರಿತಗೊಂಡು, ಯಶಸ್ವಿಯಾಗಿ ಸಂತಪ್ತರಿಗೆ ನಮ್ಮ ನೆರವು ನೇರವಾಗಿ ಮುಟ್ಟಲು ಪೋಸ್ಟಲ್ ಇಲಾಖಾದವರೂ ಸಹ ಈ ನಿಧಿ ಕಳುಹಿಸುವಲ್ಲಿ ಸಂಪೂರ್ಣ ಸಹಾನುಭೂತಿಯನ್ನು ತೋರಿಸಬೇಕಾಗಿದೆ. ಈ ನಿಧಿಯನ್ನು ಟಪಾಲ್‌ಮೂಲಕ ಮಣಿ ಆರ್ಡರ್ ಕಮಿಷನ್ ಇತ್ಯಾದಿಯನ್ನು ತೆಗೆದುಕೊಳ್ಳದೇ ಎಲ್ಲ ಖರ್ಚುಗಳನ್ನು ಉಳಿಸಿ "ಫ್ರೀ'' ಸೇವೆಯನ್ನು ಸಲ್ಲಿಸುವುದು ಸೂಕ್ತವೆಂದು ಸೂಚಿಸುತ್ತೇವೆ. ಅಂತೆಯೇ ಅಂಚೆ ಇಲಾಖೆಯವರು ಪರಿಹಾರನಿಧಿ ಸ್ಟಾಂಪುಗಳನ್ನು ಅಚ್ಚುಹಾಕಿ (ಹಿಂದೆ ನ್ಯಾಷನಲ್ ಸೇವಿಂಗ್ಸ್ ಸ್ಟಾಂಪುಗಳನ್ನು ಏರ್ಪಡಿಸಿದ್ದಂತೆ) ಪರಿಹಾರನಿಧಿಗೆ ತಾವೂ ಸಹ ನೇರವಾಗಿ ಸಹಾಯಕವಾಗಲೆಂದು ಸೂಚಿಸುತ್ತೇವೆ

ಮೈಸೂರಿನ ನಾಗರೀಕರೆಲ್ಲರೂ ನಮ್ಮ ನಾಯಕರೆಲ್ಲರ ಮನವಿಗೆ ಕಿವಿಗೊಟ್ಟು ತಮ್ಮ ಮುಕ್ತಹಸ್ತದಿಂದ ಉದಾರವಾಗಿ ಈ ಅಸ್ಸಾಂ ಪರಿಹಾರನಿಧಿಗೆ ಸಹಾಯ ಮಾಡುವಂತಾಗಲಿ.

ಜೈ ಹಿಂದ್.

ಪತ್ರವ್ಯವಹಾರ

ನಗರದಲ್ಲಿ ನೀರಿಲ್ಲ

ಸ್ವಾಮಿ,—

ಮೈಸೂರು ನಗರದ ಕೃಷ್ಣರಾಜ ಮೊಹಲ್ಲಾ ಮುಂತಾದ ಕೆಲವೆಡೆಗಳಲ್ಲಿ ಮಾಮೂಲಿನಂತೆ ಈ ಗೌರೀ ಹಬ್ಬದ ದಿವಸದಲ್ಲೂ ಬೆಳಗ್ಗೆ ನೀರಿನ ಸರಬರಾಯಿ ಸಂಪೂರ್ಣವಾಗಿ ನಿಂತುಹೋಗಿ ಜನರು ಪಡುತ್ತಲಿರುವ ಕಷ್ಟವು ಹೇಳತೀರದಾಗಿದೆ ಇದೇನು ಇಲಾಖಾ ವೈಖರಿಯೋ ತಿಳಿಯದು. ಹಾಗೇನಾದರೂ ನೀರು ನಿಲ್ಲಿಸುವುದಾಗಿದ್ದರೆ ಮುಂಚೆಯೇ ತಿಳಿಸಬಾರದಾಗಿತ್ತೇ ? .ಆಕಸ್ಮಿಕವಾಗಿ ಏನಾದರೂ ತೊಂದರೆಯಾಗಿದ್ದರೆ ಜನರಿಗೆ ತಿಳುವಳಿಕೆ ಕೊಡಬಾರದೇ ? ವಾಣೀವಿಲಾಸ ವಾಟರ್‌ವರ್ಕ್ಸ್‌ಗೆ ಈ ವಿಚಾರ ಫೋನ್‌ಮಾಡಿದರೆ ಕೇಳುವವರೇ ಇಲ್ಲ. ಇಲಾಖೆಯವರಲ್ಲಿ ಇದೇಕೆ ಈ ತಾತ್ಸಾರ? ಜನರ ತೊಂದರೆಗಳನ್ನು ನಿವಾರಿಸಲಿರುವ ಈ ಎಸೆನ್ಷಿಯಲ್ ಸರ್ವಿಸ್ ಇಲಾಖೆ ಕೆಲಸಕಾರ್ಯಗಳಲ್ಲಿ ಚಟುವಟಿಕೆಯೇ ಬೇಡವೆ ?

ಕೃಷ್ಣರಾಜ ಸಾಗರದಲ್ಲಿ ನೀರು ಸಂಪೂರ್ಣವಾಗಿ ಬತ್ತಿಹೋಗಿದ್ದಾಗ ಸಹ ಕೃಷ್ಣರಾಜಮೊಹಲ್ಲಾ ಬಂಡೀಕೇರಿ ಮುಂತಾದಕಡೆ ನೀರಿನ ಸರಬರಾಯಿ ಚೆನ್ನಾಗಿತ್ತು. ಈಗ ನೀರಿನ ಸರಬರಾಯಿ ಸ್ವಲ್ಪವೂ ಸಮರ್ಪಕವಾಗಿಲ್ಲ.

ನೀರಿನ ಇಲಾಖೆಯವರು ಜನರು ಪಡುತ್ತಲಿರುವ ಈ ತೊಂದರೆಯನ್ನು ತಪ್ಪಿಸಲು ತಕ್ಕ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳುವುದು ಅವರ ಕರ್ತವ್ಯ.

ಒಬ್ಬ ಪೌರ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೧೫ ಶುಕ್ರವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಶ್ರೀ. ಕೆ. ಎಸ್. ವಿಶ್ವನಾಥಶಾಸ್ತ್ರಿ (ದೇವಿಭಜನ) ೭-೪೫ ಕನ್ನಡದಲ್ಲಿ ವಾರ್ತೆ. ೮- ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ. ೮- ಮುಕ್ತಾಯ

ಮಧ್ಯಾಹ್ನ ೧-೦ ಶ್ರೀ. ಬಿ. ಎಂ. ಶಿವಪ್ಪ (ಹಾಡುಗಾರಿಕೆ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪ ಹಿಂದಿಯಲ್ಲಿ ವಾರ್ತೆ. ೧-೫೦ ಜಲತರಂಗ್ ೨-೦ ಚ ನಚಿತ್ರ ಸಂಗೀತ (ರ) ೨-೩೦ ಮುಕ್ತಾಯ.

ಸಂಜೆ ೫-೩೦ ಶ್ರೀ. ಬಿ. ಎಂ. ಶಿವಪ್ಪ (ಹಾಡುಗಾರಿಕೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾ ವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭- ಹಿಂದೀಕಾರ್ಯಕ್ರಮ ೭-೧೫ ಗೀತಾಂಜಲಿ ೭-೩೦ ಕನ್ನ ದಲ್ಲಿ ಭಾಷಣ: ನಮ್ಮ ರಾಜ್ಯಾಂಗ ಮತ್ತು ಸಂಸ್ಥಾ ಗಳು ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದ ಶ್ರೀ ೮-೧೫ ಶ್ರೀ. ಕೆ. ಎಸ್. ವಿಶ್ವನಾಥಶಾಸ್ತ್ರಿ (ರಾಗ, ತಾನ ಮತ್ತು ಪಲ್ಲವಿ) (ರ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧ ಹಿಂದಿಯಲ್ಲಿ ವಾರ್ತೆ ೯-೩೦ ವೃಂದ ಸಂಗೀತ ೧೦- ಮುಕ್ತಾಯ.

ಸೆಪ್ಟೆಂಬರ್ ೧೬ ಶನಿವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಚಿತ್ರಲೋಕ ೭-೨೫ ಶ್ರೀ. ಎನ್. ರಾಮಚಂದ್ರರಾವ್ (ದೇವರನಾಮ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಚೂಡಾಮಣಿ (ರ) ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಶ್ರೀ ಅರಕೆರೆ ನಾರಾಯಣರಾವ್ (ಹಾಡುಗಾರಿಕೆ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪ ಹಿಂದಿಯಲ್ಲಿ ವಾರ್ತೆ ೧-೫೦ [illegible] ಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಶ್ರೀ. ಅರಕೆರೆ ನಾರಾಯಣರಾವ್ (ಹಾಡುಗಾರಿಕೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭- ತಬಲ ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕಥಾಕಾಲಕ್ಷೇಪ ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಇಂಗ್ಲೀಷಿನಲ್ಲಿ ಭಾಷಣ (ಶ್ರೀ. ಬಿ. ವಿ. ನಾರಾಯಣ ರೆಡ್ಡಿ) ೯-೪೫ ವಾದ್ಯ ಸಮ್ಮೇಳನ ೧೦-೦ ಮುಕ್ತಾಯ.

ರಣಜಿತ್
ತಾ॥ 14-9-50 ರಿಂದ 8 ದಿನಗಳು ಮಾತ್ರ
ದಿನವಹಿ 3 ಆಟಗಳು
ಮಹಾಜನಗಳ ಕೋರಿಕೆಯ ಮೇಲೆ
ಅಂದಾಜ್
ಪಾತ್ರ:—ನರ್ಗೀಸ್, ಮತ್ತು ರಾಜಕಪೂರ್
ಬೆಳಗಿನ ಪ್ರದರ್ಶನ
15-9-50ರಿಂದ ಮೂರು ದಿನಗಳು ಮಾತ್ರ
ನಾಟಕ್
ಪಾತ್ರ: ಸುರೈಯ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು: ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ರಘುಲಾಲ್ ಮತ್ತು ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬—೯—೧೯೫೦ ನೇ ಶನಿವಾರ [ಸಂಚಿಕೆ ೨೭

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street.
BANGALORE—2

ಕೊರಿಯಾ ಯುದ್ಧ

ಯುದ್ಧ ಪ್ರಾರಂಭವಾದ ಎರಡು ತಿಂಗಳಲ್ಲಿ, ತನ್ನ ನ್ಯವು ೧೫,೧೭೬ ಜನರನ್ನು ಕೊಂದು, ೪೫,೦೦೦ ನರಿಗೆ ಘಾಯಪಡಿಸಿ, ೧,೭೩೬ ಜನರನ್ನು ಕೈಸೆರೆ ಡಿದಿರುವುದಾಗಿಯೂ, ಈಗಾಗಲೇ ಶೇಕಡ ೯೫ ರಷ್ಟು ಾರಿಯಾ ರಾಜ್ಯವೂ, ಶೇ. ೯೭ ರಷ್ಟು ಕೊರಿಯನ್ನರೂ ಮ್ಮ ಸರ್ಕಾರದ ವಶದಲ್ಲಿರುವರೆಂದೂ ಉತ್ತರಕೊರಿಯ ುಖ್ಯಮಂತ್ರಿ ಹೇಳಿರುವರು.

ರಷ್ಯಾ ಸೈನ್ಯಬಲ

ರಷ್ಯಾ ದೇಶದಲ್ಲಿ ಈಗಾಗಲೇ ೪೫ ಲಕ್ಷ ಸೈನಿಕರಿಗೆ ತ್ತು ವಿಶೇಷ ಸಂಖ್ಯೆಯಲ್ಲಿ ಹೋಂ ಗಾರ್ಡುಗಳಿಗೆ ನ್ಯಶಿಕ್ಷಣವನ್ನು ಕೊಡಲಾಗುತ್ತಲಿದೆ. ದೇಶದ ಆದಾ ದಲ್ಲಿ ಶೇ. ೩೦ ರಷ್ಟು ಸೈನ್ಯಸಿದ್ಧತೆಗಾಗಿ ರಷ್ಯಾ ಚ್ಚ ಮಾಡುತ್ತಲಿದೆ. ರಷ್ಯಾ ದೇಶದಲ್ಲಿ ಕೈಗಾರಿಕೆ ಲ್ಲವೂ ಯುದ್ಧಸಾಮಗ್ರಿಗಳ ತಯಾರಿಕೆ ಉದ್ಯಮ ಯೇ ಇರುವುದರಿಂದ ಇತರ ಕೈಗಾರಿಕೆಗಳಲ್ಲಿ ಕೆಲಸ ರರಿಲ್ಲದೆ ತೊಂದರೆಯುಂಟಾಗಿದೆಯೆಂದು ಅಮೆರಿಕಾ ನ್ಯವು ತಿಳಿಸಿರುತ್ತದೆ.

ಹತ್ತುಸಾವಿರ ರೂ. ಜುಲ್ಮಾನೆ

೪೦,೦೦೦ ರೂ. ಬೆಲೆಬಾಳುವ ಗಿರಣಿ ಬಟ್ಟೆಯನ್ನು ದಾರಿಯಿಲ್ಲದೆ ದೆಹಲಿಯಿಂದ ಹೊರಕ್ಕೆ ಸಾಗಿಸಬೇಕೆಂದು ಪ್ರಯತ್ನಪಟ್ಟ, ಕಲ್ಕತ್ತಾ ವ್ಯಾಪಾರಿ ಕನ್ಯಾ ಲ್ ಎಂಬುವವನಿಗೆ ದೆಹಲಿ ಮ್ಯಾಜಿಸ್ಟ್ರೇಟರು ಆ ಟ್ಟಿಗಳನ್ನು ಮುಟ್ಟುಗೋಲು ಹಾಕಿಕೊಂಡದ್ದಲ್ಲದೆ ,೦೦೦ ರೂ. ಜುಲ್ಮಾನೆ, ಕೋರ್ಟು ಏಳುವವರೆಗೆ ಕ್ಷೆಯನ್ನು ವಿಧಿಸಿರುವರು.

ಡಾ|| ಶ್ಯಾಮಪ್ರಸಾದ್ ಮುಖರ್ಜಿ

ಕೇಂದ್ರ ಸರ್ಕಾರದ ಮಾಜಿ ಕೈಗಾರಿಕಾ ಮಂತ್ರಿ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ದಸ್ತಗಿರಿಯಾಗಿರುವ ಅಕಾಲಿ ಮುಖಂಡ ಶ್ರೀ ತಾರಾಸಿಂಗರ ಪರವಾಗಿ ವಕಾಲತ್ತು ವಹಿಸಿದರೆಂದು ತಿಳಿಯಬರುತ್ತದೆ.

ಈಜಿಪ್ಟಿನ ಅಕ್ಕಿ

ಭಾರತವು ಈಜಿಪ್ಟಿನಿಂದ ೬೦,೦೦೦ ಟನ್ನು ನಂಜೂರಿಯನಾ ಅಕ್ಕಿಯನ್ನು ಕೊಳ್ಳುವುದು ಅದರ ಪೈಕಿ ಈಗಾಗಲೆ ೬೦೦೦ ಟನ್ನು ಈಜಿಪ್ಟಿನಿಂದ ಹೊರಟಿದೆ. ಭಾರತವು ಅದಕ್ಕೆ ಬದಲಾಗಿ, ೧೫,೦೦೦ ಟನ್ನು ಸೆಣಬು ವಸ್ತ್ರ, ೧೦,೦೦೦ ಟನ್ನು ಹತ್ತಿ ಪ್ಯಾಕುಗಳು, ೧೦೦೦ ಟನ್ನು ಈರುಳ್ಳಿ ಪೊಟ್ಟಣಗಳು ಮತ್ತು ೨,೦೦೦ ಟನ್ನು ಹೆಸ್ಸಿಯಾ (Hessian) ಸರಬರಾಯಿ ಮಾಡುವುದು.

ಜನಗಣತಿಗಾಗಿ ಮನೆಯಲ್ಲೇ ಬಂಧನ

ಅಲ್ಜೀರಿಯಾದಲ್ಲಿ ಜನಗಣತಿಯನ್ನು ತೆಗೆದುಕೊಳ್ಳಲು ಫ್ರಾನ್ಸ ಸರ್ಕಾರವು ಏರ್ಪಾಡುಮಾಡಿದೆ. ಈ ಸಮಯದಲ್ಲಿ ಜನರಿಗೆ ಎಚ್ಚರಿಕೆಯನ್ನು ಕೊಡುತ್ತಾ ಜನಗಣತಿಯನ್ನು ತೆಗೆದುಕೊಳ್ಳುವಾಗ ೨೪ ಗಂಟೆಗಳಕಾಲ ಯಾರೂ ಮನೆಯಿಂದ ಹೊರಗೆ ಬರಕೂಡದು, ಪೋಲೀಸ್ ಜನಗಣತಿ ಅಧಿಕಾರಿಗಳು ವಿನಹ ಮತ್ಯಾರೂ ರಸ್ತೆಗಳಲ್ಲಿರಕೂಡದು, ಮನೆಯಲ್ಲಿ ಸಾವೇನಾದರೂ ಉಂಟಾದರೂ ಆಗಲೂ ಮನೆಯಲ್ಲಿಯೇ ಇರಬೇಕು, ಆದರೆ ಮನೆಯ ಯಜಮಾನನು ಮನೆಯ ಕಿಟಕಿಯಿಂದ ಹೊರಕ್ಕೆ ತಲೆಹಾಕಿಕೊಂಡಿದ್ದು ಪೋಲೀಸಿನವನ ಕಣ್ಣಿಗೆ ಬಿದ್ದ ಸಂಗತಿಯನ್ನು ತಿಳಿಸಬಹುದೆಂದು ಕಟ್ಟಾಜ್ಞೆಯನ್ನಿತ್ತಿದೆ.

ಲಾರ್ಡ ಮೌಂಟ್ ಬ್ಯಾಟನ್

ಭಾರತದ ಮಾಜಿ ಗೌರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ನರವರು ಇಂಗ್ಲೆಂಡಿನ ರಕ್ಷಣಾಮಂತ್ರಿಗಳಾಗಬಹುದೆಂದು ಇಂಗ್ಲೆಂಡಿನ ಪಾರ್ಲಿಮೆಂಟು ವೃತ್ತಗಳಲ್ಲಿ ವರ್ತಮಾನ ಹುಟ್ಟಿದೆ.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಅಧಿಕಾರಿಗಳ ಮೇಲೆ ಕಾರ್ಯಕ್ರಮ

ಅಧಿಕಾರಿಗಳು ಬಂಧಿಸಿದ ಜನರನ್ನು ಅವರ ಮೇಲ್ಪಟ್ಟ ಅಧಿಕಾರಿಗಳು ಬಿಟ್ಟುಬಿಟ್ಟರೆ ಬಂಧಿಸಿದ ಅಧಿಕಾರಿಗಳ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಭಾರತ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಶ್ರೀ. ಪತಂಜಲಿ ಶಾಸ್ತ್ರಿಗಳು ಹೇಳಿರುವರು.

ಹೆಚ್ಚಿಗೆ ಸರಬರಾಯಿ ಇಲ್ಲ

ಈಗ ನಿಗದಿಯಾಗಿರುವ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಹಾರಪದಾರ್ಥಗಳನ್ನು ಸರಬರಾಯಿ ಮಾಡಲು ಸಾಧ್ಯವಿಲ್ಲ. ಸಂಸ್ಥಾನದಲ್ಲಿರುವ ದಾಸ್ತಾನನ್ನೇ ಸರಿಯಾಗಿ ವಸೂಲ್ಮಾಡಬೇಕೆಂದು ಕೇಂದ್ರ ಸರ್ಕಾರವು ತಿರುವಾಂಕೂರು-ಕೊಚಿನ್ ಒಕ್ಕೂಟಕ್ಕೆ ತಿಳಿಸಿರುವುದಾಗಿ ವರದಿಯಾಗಿದೆ.

ಸುಪ್ರೀಂ ಕೋರ್ಟಿಗೆ

ಮದರಾಸು ಹೈಕೋರ್ಟಿನಲ್ಲಿ ನ್ಯಾಯಾಧೀಶರಾ ನಿವೃತ್ತರಾಗಿದ್ದ ಶ್ರೀ. ಎನ್. ಚಂದ್ರಶೇಖರಯ್ಯರ್‌ರವರ ಭಾರತ ಸುಪ್ರೀಂಕೋರ್ಟಿನ ನ್ಯಾಯಾಧೀಶರಾದ ನೇಮರಾಗಿದ್ದಾರೆ.

ರೈಲ್ವೆ ವ್ಯಾಗನ್ನುಗಳು

ಆರುಕೋಟಿ ರೂಪಾಯಿಯ, ೬,೦೦೦ ರೈಲ್ವೆ ವ್ಯಾಗನ್ನುಗಳನ್ನು ಕೇಂದ್ರ ಸರ್ಕಾರವು ಕೊಳ್ಳಲು ಏರ್ಪಾಡ ಮಾಡುತ್ತಲಿದೆ. ಈ ವ್ಯಾಗನ್ನುಗಳು ೧೯೫೧-೫೨ರ ಭಾರತಕ್ಕೆ ಬರಲಿವೆ ಇದೇರೀತಿಯಾಗಿ ೧೯೫೨ ೫೩ ೫೩-೫೪ ಮತ್ತು ೫೪-೫೫ರಲ್ಲಿ ವ್ಯಾಗನ್ನುಗಳನ್ನು ಭಾರತವು ಹೊರಗಿನಿಂದ ಕೊಳ್ಳುವುದು.

ರೇಷನ್

ಅಕ್ಟೋಬರ್ ೧ನೇ ತಾರೀಖಿನಿಂದ ಮದರಾಸಿನಲ್ಲಿ ಹತ್ತಿನೂಲಿನ ರೇಷನ್‌ಪದ್ಧತಿಯು ಜಾರಿಗೆ ಬರಲಿದೆ.

ಸಮಾಜ ದ್ರೋಹ

ಬೆಂಕಿ ಎಣ್ಣೆಯನ್ನು ಮಾರಿದ್ದಕ್ಕೆ ಕಲ್ಕತ್ತಾ ಹೈಕೋರ್ಟು ವಿಧಿಸಿದ ಶಿಕ್ಷೆಯ ಮೇಲೆ ಹಿತ್ಸರ್ದ ಕಂಪೆನಿಯವರು ಭಾರತ ಸುಪ್ರೀಂ ಕೋರ್ಟಿಗೆ ಅಪೀಲು ಅರ್ಜಿಯನ್ನು ಸಲ್ಲಿಸಿದ್ದನ್ನು ಭಾರತ ಶ್ರೇಷ್ಠ ನ್ಯಾಯಾಧೀಶರು ನಿರಾಕರಿಸುತ್ತಾ ಈ ಜನರು ಸಮಾಜ ಶತ್ರುಗಳೆಂದು ತಿಳಿಸಿರುವರು.

ಸ್ವಂತ ಆಸ್ತಿಯಲ್ಲ

ಆಂಧ್ರ ಪ್ರಾಂತ್ಯ ಕಾಂಗ್ರೆಸ್ ಸಮಿತಿಯು ತಾವು ಉಮೇದವಾರಿಕೆಗೆ ಸಲ್ಲಿಸಿದ್ದ ಸದಸ್ಯರ ವಿರುದ್ಧವಾಗಿ ಗೋದಾವರೀ ಜಿಲ್ಲಾ ಬೋರ್ಡು ಅಧ್ಯಕ್ಷಸ್ಥಾನಕ್ಕೆ ನಿಂತರೆಂಬ ಅಪಾದನೆ ಮೇಲೆ ಮ|| ಸೀತಾರಾಮದಾಸ್ ಮತ್ತು ೧೫ ಇತರರ ಮೇಲೆ ಕ್ರಮ ಜರುಗಿಸಿದ್ದನ್ನು ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪಟ್ಟಾಭಿಸೀತಾರಾಮಯ್ಯನವರು ತಳ್ಳಿಹಾಕಿ, ಜಿಲ್ಲಾಬೋರ್ಡಿನ ಅಧ್ಯಕ್ಷಸ್ಥಾನವು ಸಂಪಾದನೆಗೆ ರಿಯಾಯತಿಗಾಗಿರುವ ಯಾವ ಸ್ವಂತ ಆಸ್ತಿಯಲ್ಲವೆಂದು ತಿಳಿಸಿರುವರು.

ತಂದೆ ಪತಿಯನ್ನು ಹುಡುಕ ಬೇಕಾಗಿಲ್ಲ !

“ಕಾಲೇಜಿನಲ್ಲಿ ಓದುವ ಯುವತಿಯರು ಗಂಡಂದಿರನ್ನು ತಾವೇ ಹುಡುಕಿಕೊಂಡು ತಮ್ಮ ತಾಯಿತಂದೆಯರಿಗೆ ತೊಂದರೆ ತಪ್ಪಿಸಿಬಿಟ್ಟಿದ್ದಾರೆ” ಎಂದು ಮದ್ರಾಸ್ ಶಿಕ್ಷಣ ಸಚಿವ ಮಾಧವಮೇನನ್ನರು ನುಡಿದರು. ಸಭೆಯಲ್ಲಿದ್ದವರೆಲ್ಲಾ ಘೊಳ್ಳೆಂದು ನಕ್ಕರು.

★ ಸಿರ್ಲೋಜೈಮ್ ★ಮಕ್ಕಳ ಲಿವರ್ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★

ಮುಖ್ಯ ಪದಾರ್ಥಗಳ ಮೇಲಿನ ವಿಶೇಷಾಜ್ಞೆ

ಪದಾರ್ಥಗಳ ಸರಬರಾಜು ಮತ್ತು ಬೆಲೆಗೆ ಸಂಬಂಧಿಸಿದ ಆರ್ಡಿನೆನ್ಸು ವಿಚಾರದಲ್ಲಿ ಈಗ ಪ್ರಾಂತೀಯ ಸರ್ಕಾರಗಳೊಂದಿಗೆ ಚರ್ಚೆಯಾಗುತ್ತಿದೆ. ಬೊಂಬಾಯಿ ಸರ್ಕಾರವು ಈ ವಿಶೇಷಾಜ್ಞೆಯು ಪರಿಸ್ಥಿತಿಗೆ ಸಾಲದೆಂದೂ ಮತ್ತು ಆದರಿಂದ ಕಕ್ಕಷ್ಟು ಉಪಯೋಗವಾಗುವುದಿಲ್ಲವೆಂದು ಹೇಳಿರುವುದು ಕೇಂದ್ರ ಸರ್ಕಾರಕ್ಕೆ ಆಶ್ಚರ್ಯವನ್ನುಂಟುಮಾಡಿದೆ ಆ ಆರ್ಡಿನೆನ್ಸನ್ನು ಕಾರ್ಯರೂಪಕ್ಕೆ ತಂದು ನಿರ್ದಿಷ್ಟಕಾರ್ಯಕ್ರಮ ಕೈಗೊಳ್ಳುವವರೆಗೂ ಈ ಬಗ್ಗೆ ಕೇಂದ್ರ ಸರ್ಕಾರವು ಟೀಕೆಮಾಡಲು ಇಷ್ಟಪಡುವುದಿಲ್ಲವೆಂದು ತಿಳಿಸಿದೆ

ಉಪಾಧ್ಯಕ್ಷರು

ಕೃಷ್ಣರಾಜಪೇಟೆ ಟೌನ್ ಮುನಿಸಿಪಾಲಿಟಿಗೆ ಶ್ರೀ. ಕೆ. ಎಸ್. ಶ್ರೀಕಂಠಯ್ಯನವರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಅಸ್ಸಾಂ ಭೂಕಂಪನಿಧಿ

ಅಸ್ಸಾಂ ಭೂಕಂಪನಿಧಿಯ ಮೈಸೂರು ನಗರ ಸಮಿತಿಯ ಪರವಾಗಿ ಅಧ್ಯಕ್ಷ ಶ್ರೀ. ಲಿಂಗಣ್ಣನವರು ನಾಗರೀಕರೆಲ್ಲರೂ ಭೂಕಂಪದಲ್ಲಿ ನೊಂದವರಿಗೆ ತಮ್ಮ ಕೈಲಾದಷ್ಟು ಸಹಾಯಮಾಡಬೇಕೆಂದು ಈ ಮನವಿಯಲ್ಲಿ ಹೊರಡಿಸಿರುವರು.

ಈಚೆಗೆ ಅಸ್ಸಾಂ ದೇಶದಲ್ಲಿ ಸಂಭವಿಸಿದ ಭೂಕಂಪದ ಪರಿಣಾಮವಾಗಿ ಅಲ್ಲಿನ ನಿವಾಸಿಗಳಿಗೆ ಉಂಟಾಗಿರುವ ಅಪಾರವಾದ ಕಷ್ಟನಷ್ಟಗಳು ಮಹಾಜನಗಳೆಲ್ಲರಿಗೂ ತಿಳಿದ ವಿಷಯವಾಗಿರುತ್ತೆ ಭಾರತದ ಪ್ರಧಾನಸಚಿವರಾದ ಪಂಡಿತ ನೆಹರೂರವರು ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳೂ ಅಸ್ಸಾಂನಲ್ಲಿ ನಷ್ಟಹೊಂದಿದ ಪ್ರಜೆಗಳಿಗೆ ನೆರವನ್ನು ನೀಡುವ ವಿಷಯದಲ್ಲಿ ಮನವಿಮಾಡಿರುವುದೂ ಸಹ ಮಹಾಜನರಿಗೆ ವೇದ್ಯವಾಗಿದೆ. ಮೈಸೂರು ನಗರದಿಂದಲೂ ಸಹ ಅಸ್ಸಾಂಭೂಕಂಪದ ಸಹಾಯನಿಧಿಗೆ ಆದಷ್ಟು ದ್ರವ್ಯವಗೈರೆಗಳನ್ನು ಕಳುಹಿಸಿಕೊಡುವ ಕಾರ್ಯಕ್ರಮವನ್ನು ಕೈಕೊಳ್ಳುವ ಬಗ್ಗೆ ೧೨-೯-೫೦ ರಲ್ಲಿ, ಪುರಸಭಾ ಭವನದಲ್ಲಿ ನಡೆದ ಪುರಪ್ರಮುಖರ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯವರು ಪರಿಹಾರನಿಧಿಯಶೇಖರಣೆಗೆ ಬೇಕಾದ ಕಾರ್ಯಕ್ರಮಗಳನ್ನು ಕ್ಷಿಪ್ರದಲ್ಲೇ ಕೈಗೊಳ್ಳುವವರಾಗಿದ್ದಾರೆ

ಮೈಸೂರು ನಗರದ ಮಹಾಜನಗಳು ಸಮಿತಿಯವರಿಗೆ ಬೆಂಬಲಕೊಟ್ಟು ಮೈಸೂರು ನಗರದಿಂದ ಆದಷ್ಟು ದ್ರವ್ಯ ಶೇಖರಣೆಗೆ ಸಹಾಯಮಾಡಿ, ಅಸ್ಸಾಂ ಪ್ರಾಂತ್ಯದ ಜನರ ಕಷ್ಟದುಃಖಗಳನ್ನು ಪರಿಹರಿಸುವ ಪವಿತ್ರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ

ನಗರದಲ್ಲಿ ಸೈಕಲ್-ಕಾರು ಢಿಕ್ಕಿ

ನಿನ್ನೆ ಮಧ್ಯಾಹ್ನ ಸುಮಾರು ೧೨ ಗಂಟೆ ಸಮಯದಲ್ಲಿ ಮೈಸೂರು ನಗರದ ಸಿದ್ದಪ್ಪ ಸ್ಕ್ವೇರ್ ಬಳಿ ಕೋರ್ಟ್ ಕಡೆಯಿಂದ ಬರುತ್ತಿದ್ದ ಒಂದು ಸೈಕಲ್ಲಿಗೂ ಮತ್ತು ನಾರಾಯಣಶಾಸ್ತ್ರಿರೋಡಿನಿಂದ ಬರುತ್ತಿದ್ದ ಶ್ರೀ ರಂಗನಾಥ ಮೋಟಾರ್‌ಸರ್ವಿಸ್ ಮಾಲೀಕರ ಕಾರಿಗೂ ಢಿಕ್ಕಿಯಾಯಿತು ಸೈಕಲ್‌ಸವಾರಿ ಮಾಡುತ್ತಿದ್ದ ಹುಡುಗನಿಗೆ ಗಾಯಗಳಾಗಿ ಆಸ್ಪತ್ರೆಗೆ ದಾಖಲ್ಮಾಡಿದೆಯೆಂದು ತಿಳಿದುಬರುತ್ತದೆ.

ವಿದ್ಯಾ ಗಣಪತಿ ಪೂಜೆ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ೧೫-೯-೫೦ ರಿಂದ ಪ್ರತಿದಿನ ಸಂಜೆ ವಿದ್ಯಾಗಣಪತಿ ಮಹೋತ್ಸವವು ನಡೆಯುವುದು. ಆಸ್ತಿಕ ಮಹಾಶಯರೆಲ್ಲರೂ ಈ ಉತ್ಸವದಲ್ಲಿ ಭಾಗಿಯಾಗಬೇಕೆಂದು ಸಂಚಾಲಕರಾದ ಮೈಸೂರು ಸಹೋದರರು ಪ್ರಾರ್ಥಿಸುತ್ತಾರೆ

ಸಂಪಾದಕರು ಮತ್ತು ಪ್ರಕಾಶಕರು. ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್ ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೧೭ ಭಾನುವಾರ

ಬೆಳಿಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಸಂಗೀತ (ರಿ) ೭-೩೫ ಗಿಟಾರ್ ದಿಲ್‌ರುಬ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಕನ್ನಡ ಗೀತೆಗಳು (ಸರೋಜ) ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಬಾಲವನತ್ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಗೀತೆಗಳು ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ (ರಾಜಮ್ಮ ಶೇಷಾದ್ರಿ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಮಿಶ್ರ ಮಾಧುರಿ ೭-೩೦ ಕನ್ನಡದಲ್ಲಿ ಭಾಷಣ: ೭-೪೫ ಕನ್ನಡದಲ್ಲಿ ವಾರ್ತೆ ೮-೦ ಸಂಗೀತ (ರಾಮರತ್ನಂ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಕಥೆ: ಬಹದ್ದೂರ್ ಬಿದ್ದ ಬೇಸ್ತು ೧೦-೦ ಮುಕ್ತಾಯ

ಸೆಪ್ಟೆಂಬರ್ ೧೮ ಸೋಮವಾರ

ಬೆಳಿಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಅನಂತ ಲಕ್ಷ್ಮೀಶಡಗೋಪನ್ (ರಿ) ೭-೧೫ ದೇವರನಾಮ (ಎಸ್. ಬಿ. ಕೆ. ಮೂರ್ತಿ) ೭-೩೫ ಪಕ್ಷಿನೋಟ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿ ಶಿಕ್ಷಣ ೮-೩೦ ಮುಕ್ತಾಯ

ಮಧ್ಯಾಹ್ನ ೧-೦ ಸಂಗೀತ (ಎಸ್. ಬಿ. ಕೆ. ಮೂರ್ತಿ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ಗಿಟಾರ್ ೨-೦ ಸೈಗಾಲ್ (ರಿ) ೨-೧೫ ವಾದ್ಯ ಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ವೀಣೆ (ಶಾರದಾಂಬಾ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ, ೭-೦ ಸ್ಥಾನೀಯ ಸೂಚನಾಯೇ ೭-೫ ಹಿಂದೀಕಾರ್ಯಕ್ರಮ ೭-೧೫ ಸಂಗೀತ (ಆರ್. ಕೆ. ನಾರಾಯಣಸ್ವಾಮಿ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ವೀಣೆ (ಶಾರದಾಂಬ) ೮-೩೦ ಸಂಗೀತ (ಕೆ. ನಾರಾಯಣಸ್ವಾಮಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಗಾನ ಸಮ್ಮೇಳನ (ರಿ) ೧೦-೦ ಮುಕ್ತಾಯ.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ
ಮಾದರಿಯಾದ ಗುಣವುಳ್ಳವು ! ಬಹು ಕಾಲ ಬಾಳಿಕೆ ಬರುವುವು !!
ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!
ಮೈಸೂರು ಉಕ್ಕಿನ ಸಾಮಾನುಗಳು
ಗಾಡಿಪಟ್ಟಿ ಅಥವಾ ಪಟ್ಟಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೇಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು
ಮೈಸೂರು ಬೀಡು ಕಬ್ಬಿಣ (Charcoal Pig Iron)
ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು
ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)
೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ
ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)
ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಬಗಳೂ
ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ,
ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)
ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.
ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.
ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ರಣಜಿತ್
ತಾ|| 14-9-50 ರಿಂದ 3 ದಿನಗಳು ಮಾತ್ರ
ದಿನವಹಿ 3 ಆಟಗಳು
ಮಹಾಜನಗಳ ಕೋರಿಕೆಯ ಮೇಲೆ
ಅಂದಾಜ್
ಪಾತ್ರ:–ನರ್ಗೀಸ್, ಮತ್ತು ರಾಜಕಪೂರ್
ಬೆಳಗಿನ ಪ್ರದರ್ಶನ
15-9-50ರಿಂದ ಮೂರು ದಿನಗಳು ಮಾತ್ರ
ನಾಟಕ್
ಪಾತ್ರ: ಸುರೈಯ

★ ಗಾಂಧೀಜೀ ತೋರಿಸಿದ ಮಾರ್ಗವಲ್ಲ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮—೯—೧೯೫೦ನೇ ಸೋಮವಾರ [ಸಂಚಿಕೆ ೨೮

ಪ್ರಧಾನಿ ಪಂಡಿತ ನೆಹರೂರವರು ನಾಸಿಕದಲ್ಲಿ ಜರುಗಿದ ಮಹಾರಾಷ್ಟ್ರ ಯುವಕ ಸಮ್ಮೇಳನದಲ್ಲಿ ಮಾತನಾಡುತ್ತಾ "ಅತ್ಯಾಶೆ, ಅಧಿಕಾರಲಾಲಸೆ, ಸ್ಥಾನಗಳಿಗಾಗಿ ಹೊಡೆದಾಟ, ಇವುಗಳಿಗೆ ಕಾಂಗ್ರೆಸ್ಸಿಗರು ತುತ್ತಾಗುತ್ತಿದ್ದಾರೆ. ಸ್ವಾರ್ಥಿಗಳು ಕಾಂಗ್ರೆಸ್ಸ ಸೇರಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ತಮ್ಮ ಸ್ವಾರ್ಥಕ್ಕಾಗಿ ಕಾಂಗ್ರೆಸ್ಸನ್ನು ಸಾಧನವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಮನೋಭಾವ ಇತರ ಕಾಂಗ್ರೆಸ್ಸಿಗರಲ್ಲಿಯೂ ಕಾಣಬರುತ್ತಿರುವುದು ಶೋಚನೀಯವೇ ಸರಿ. ಗಾಂಧೀಜಿ ತೋರಿಕೊಟ್ಟ ಪವಿತ್ರ ಮಾರ್ಗವನ್ನಲ್ಲ ಅವರು ಅನುಸರಿಸುತ್ತಿರುವುದು" ಎಂದು ಕಟುವಾಗಿ ಟೀಕಿಸಿದರು.

ಆಹಾರವಿಲ್ಲದೆ ಸಾವು

ಬಿಹಾರಿನಲ್ಲಿ ಆಹಾರವಿಲ್ಲದೆ ೩೦೦ ಜನವಾದರೂ ಸತ್ತಿರುವರೆಂದು ಸೋಷಿಯಲಿಸ್ಟ್ ನಾಯಕ ಶ್ರೀ ಜಯಪ್ರಕಾಶ್ ನಾರಾಯಣರು ತಮ್ಮ ಹಿಂದಿನ ಹೇಳಿಕೆಯನ್ನೇ ಪುನಃ ಸಮರ್ಥಿಸಿರುವರು.

ಧಾನ್ಯ ರವಾನೆಗೆ ಅವಕಾಶ

ಮೈಸೂರು ಸಂಸ್ಥಾನದಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ೪೦ ಸೇರು ಧಾನ್ಯವನ್ನು ರಹದಾರಿಯಿಲ್ಲದೆ ನವಂಬರ್ ಮಧ್ಯಭಾಗದವರೆಗೆ ಸಾಗಿಸಲು ಅವಕಾಶ ಕೊಡಬಹುದೆಂದು ಜಿಲ್ಲಾಧಿಕಾರಿಗಳಿಗೆ ಸರ್ಕಾರದವರು ಸೂಚನೆಯಿತ್ತಿರುವರು. ರೇಷನ್ ಜಾರಿಯಲ್ಲಿರುವ ಪ್ರದೇಶಕ್ಕೆ ಈ ಅವಕಾಶ ಅನ್ವಯಿಸುವುದಿಲ್ಲ.

ಮಲೇರಿಯಾ ನಿವಾರಣೆಗೆ ೩೦ಕೋಟಿ ರೂ ಬೇಕು

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರವರು ಭಾರತ ಮಲೇರಿಯಾ ಕೇಂದ್ರಕ್ಕೆ ಭೇಟಿಯಿತ್ತಾಗ, ಅಲ್ಲಿಯ ಅಧಿಕಾರಿಗಳು, ಭಾರತದಲ್ಲಿ ಮಲೇರಿಯಾ ರೋಗವನ್ನು ಹೋಗಲಾಡಿಸಲಾಗುವುದಿಲ್ಲವಾದರೂ, ಅದನ್ನು ತಹಬಂದಿಗೆ ತರಬಹುದು. ಪ್ರತಿವರ್ಷವೂ ೩೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೆ ವಿಶೇಷ ಪ್ರಯೋಜನವಾಗುವುದೆಂದು ತಿಳಿಸಿದರು ಈಗ ವರ್ಷಕ್ಕೆ ೮೦-೯೦ ಲಕ್ಷ ರೂಪಾಯಿಗಳು ಮಾತ್ರ ವೆಚ್ಚವಾಗುತ್ತಲಿರುವುದು.

ಶರಣಾಗತರಾಗಿ ಇಲ್ಲವೇ ಮಡಿಯಿರಿ

ಕೊರಿಯಾ ರಣರಂಗದಲ್ಲಿ ೩ ಲಕ್ಷ "ಹ್ಯಾಂಡ್ ಬಿಲ್ಲು" ಗಳನ್ನು ಉತ್ತರಕೊರಿಯನ್ ಸೈನವೆಲ್ಲೆಲ್ಲಿದೆಯೋ ಅಲ್ಲೆಲ್ಲಾ ವಿಮಾನ ಮೂಲಕ ಎಸೆಯಲಾಗಿದೆ. ಅದರಲ್ಲಿ ಜ॥ ಡಗ್ಲಾಸ್ ಮೆಕಾರ್ಥರವರು ಕಮ್ಯೂನಿಸ್ಟ್ ಉತ್ತರ ಕೊರಿಯನ್ನರಿಗೆ "ಶರಣಾಗತರಾಗಿ ಇಲ್ಲವೇ ಮಡಿಯಿರಿ" ಎಂದು ಹೇಳಿದ್ದಾರೆ.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಗುಜರಾತಿ ಸಂಸ್ಥಾನ ಭಾಷೆ

ಸೌರಾಷ್ಟ್ರದಲ್ಲಿ ಗುಜರಾತಿಯು ಸರ್ಕಾರದ ಕಾರ್ಯಕಲಾಪಗಳಲ್ಲಿ ಸಂಸ್ಥಾನ ಭಾಷೆಯಾಗಿರುವಂತೆ ಒಂದು ಮಸೂದೆಯನ್ನು ಅಲ್ಲಿಯ ಶಾಸನ ಸಭೆಯು ಅನುಮೋದಿಸಿದೆ.

ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿ ಸಮ್ಮೇಳನ

ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿ ಸಮ್ಮೇಳನದ ಸ್ವಾಗತಸಮಿತಿಯ ಸಭೆಯು ನಿನ್ನೆ ಸಂಜೆ ಪತ್ರಿಕೋದ್ಯೋಗಿಗಳ ಸಂಘದಲ್ಲಿ ನಡೆದು ಸ್ವಾಗತ ಸಮಿತಿಗೆ ಶ್ರೀ. ಗಳಾದ ಹೆಚ್. ಕೆ. ಕುಮಾರಸ್ವಾಮಿಯವರು ಅಧ್ಯಕ್ಷ, ಆರ್. ಗೋಪಾಲಕೃಷ್ಣರಾವ್, ಟಿ. ಕೃಷ್ಣರಾವ್ ಮತ್ತು ಬಿ ಜಿ. ಗೌಡರವರು ಉಪಾಧ್ಯಕ್ಷರು, ಜಿ. ಎಲ್. ಸ್ವಾಮಿ, ಮತ್ತು ಬಿ ಬಾಲಯ್ಯನವರು ಕಾರ್ಯದರ್ಶಿಗಳು ಮತ್ತು ಅಗರಂ ರಂಗಯ್ಯನವರು ಖಜಾಂಚಿಗಳಾಗಿ ಚುನಾಯಿತರಾದರು ದ್ರವ್ಯಸಂಗ್ರಹಣ, ಪ್ರಚಾರ ವಸತಿ, ಮುಂತಾದ ಕಾರ್ಯಗಳಿಗೆ ಉಪಸಮಿತಿಗಳು ನೇಮಕವಾದುವು. ಮೈಸೂರು ನಗರ ಮತ್ತು ಜಿಲ್ಲೆಯ ಎಲ್ಲಾ ಪತ್ರಿಕೋದ್ಯೋಗಿಗಳೂ ಮೂರು ರೂಪಾಯಿ ಶುಲ್ಕವನ್ನು ಕೊಟ್ಟು ಸ್ವಾಗತಸಮಿತಿಯ ಸದಸ್ಯರಾಗಬಹುದೆಂದೂ ತೀರ್ಮಾನಿಸಲಾಯಿತು.

ಅಸ್ಸಾಂ ಪರಿಹಾರ ನಿಧಿಗೆ ೨೫ ರೂಪಾಯಿಗಳು ಪತ್ರಿಕೋದ್ಯೋಗಿ ಸಂಘದಿಂದ ಕೊಡಬಹುದೆಂದು ತೀರ್ಮಾನವಾಯಿತು.

"ಪರಮಪೂಜ್ಯರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ೯೦ ನೇ ವರ್ಷ ವರ್ಧಂತಿ ಸಮಾರಂಭದ ಈ ಸಂತೋಷ ಸಮಯದಲ್ಲಿ ಶ್ರೀ ಮೋಕ್ಷಗುಂಡಂರವರಿಗೆ ಮೈಸೂರು ಪತ್ರಿಕೋದ್ಯೋಗಿಗಳು ತಮ್ಮ ಅನಂತ ಶುಭಾಶಂಸಗಳನ್ನು ಸಲ್ಲಿಸುತ್ತಾರೆ. ಅಲ್ಲದೆ ಭಗವಂತನು ಶ್ರೀಯುತರಿಗೆ ದೀರ್ಘ ಆಯುಸ್ಸು ಮತ್ತು ಆರೋಗ್ಯವನ್ನು ಕರುಣಿಸಿರುವುದು ಪ್ರಗತಿ ಸಾಧನೆಯಲ್ಲಿ ಅವರು ಇನ್ನೂ ಹೆಚ್ಚಾಗಿ ಸೇವೆ ಸಲ್ಲಿಸಲು ಶಕ್ತಿಯನ್ನು ದಯಪಾಲಿಸಲೆಂದು ಮೈಸೂರು ಪತ್ರಿಕೋದ್ಯೋಗಿಗಳು ಪರಮಾತ್ಮನಲ್ಲಿ ಪ್ರಾರ್ಥಿಸುತ್ತಾರೆ" ಎಂಬ ನಿರ್ಣಯವನ್ನು ಸಂಘದಲ್ಲಿ ಮಾಡಲಾಯಿತು.

ಕರ್ನಾಟಕ ವಿಶ್ವವಿದ್ಯಾನಿಲಯ

ಕರ್ನಾಟಕ ವಿಶ್ವವಿದ್ಯಾನಿಲಯದ ಪದವೀದಾನ ಮಹೋತ್ಸವ ಉದ್ಘಾಟನೆಯನ್ನು ಮೈಸೂರಿನ ರಾಜಪ್ರಮುಖರು ನಡೆಸುವರೆಂದು ತಿಳಿದು ಬರುತ್ತದೆ.

ಶ್ರೀ. ಸರ್ ಎಂ. ವಿ.

ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ೯೦ನೇ ವರ್ಷ ವರ್ಧಂತ್ಯುತ್ಸವವು ಮೈಸೂರು ಪುರಸಭಾಶ್ರಯದಲ್ಲಿ ಪುರಭವನದಲ್ಲಿ ಶುಕ್ರವಾರ ಸಂಜೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಪ್ರೊ ಛಾನ್ಸಲರ್ ಪ್ರೊ. ಸಿ. ಆರ್ ರೆಡ್ಡಿಯವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಸೆಂಟ್ ಫಿಲೋಮಿನಾ ಕಾಲೇಜು ಪ್ರಿನ್ಸಿಪಾಲ್ ಶ್ರೀ.ಸಿ. ಜೆ. ವಾರ್ಕಿ, ಶ್ರೀಗಳಾದ ಅಗರಂ ರಂಗಯ್ಯ, ಸಿ. ನರಸಿಂಹಮೂರ್ತಿ, ಎಸ್ ಲಿಂಗಣ್ಣ, ಎಚ್. ಸುಬ್ಬರಾವ್ ಎಂ ರಾಮಸ್ವಾಮಿ ಮುಂತಾದವರು ಶ್ರೀ ವಿಶ್ವೇಶ್ವರಯ್ಯನವರು ಮೈಸೂರು ದೇಶಕ್ಕೆಮಾಡಿರುವ ಸೇವೆಯನ್ನು ಪ್ರಶಂಸಿಸಿ, 'ಕೃಷ್ಣರಾಜಸಾಗರ, ಭದ್ರಾವತಿ ಕಬ್ಬಿಣ ಕಾರ್ಖಾನೆ ಮುಂತಾದ ನಿರ್ಮಾಣಕ್ಕೆಲ್ಲಾ ಇವರೇ ಕಾರಣ ಭೂತರು, ಮೈಸೂರು ಸಂಸ್ಥಾನವು 'ಮಾದರೀ ಸಂಸ್ಥಾನ'ವೆನಿಸಿಕೊಳ್ಳುವುದಕ್ಕೆ ಇವರು ಪಟ್ಟ ಶ್ರಮದ ಫಲವೇ ಎಂದೂ ತಿಳಿಸಿದರು.

ಡಾ॥ ರೆಡ್ಡಿಯವರೂ ಶ್ರೀ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನವೇ ಅಲ್ಲದೆ ಇಡೀ ಭಾರತಕ್ಕೇ ವಿಶೇಷ ಸೇವೆಯನ್ನು ಸಲ್ಲಿಸಿಯೂ ಈ ವೃದ್ಧಾಪ್ಯದಲ್ಲಿ ಇನ್ನೂ ಸೇವೆಯನ್ನೆಸಗುತ್ತಲಿರುವರೆಂದೂ ತಿಳಿಸಿ ದೇವರು ಅವರಿಗೆ ಇನ್ನೂ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂದು ಹಾರೈಸಿದರು.

ಈ ಸಮಾರಂಭದ ಅಂಗವಾಗಿ ಶ್ರೀಪತಿ ಚೊಕ್ಕಮ್ಮನವರ ಸಂಗೀತ ನಡೆಯಿತು.

ಪಟ್ಟಾಭಿಷೇಕ ಮಹೋತ್ಸವ

ರಾಜಧಾನಿಯಲ್ಲಿ ಇಂದು ಬೆಳಿಗ್ಗೆ ಶ್ರೀಮನ್ಮಹಾರಾಜರ ಪಟ್ಟಾಭಿಷೇಕೋತ್ಸವವು ೨೧ ಕುಶಾಲತೋಪುಗಳ ಹಾರಿಸುವಿಕೆಯಿಂದ ಆರಂಭವಾಗಿ [illegible] ಅರಮನೆ ಕಛೇರಿ, ಮತ್ತು ಅರಮನೆಗೆ ಸಂಬಂಧಿಸಿದ ಕಟ್ಟಡಗಳ ಮೇಲೆ ಗಂಡಭೇರುಂಡ ಧ್ವಜವನ್ನು ಹಾರಿಸಲಾಯಿತು. ದೇವಸ್ಥಾನಗಳಲ್ಲೆಲ್ಲಾ ಪೂಜೆಯೇರ್ಪಾಡಾಗಿತ್ತು. ಅರಮನೆ ಅಧಿಕಾರಿಗಳೂ, ಸರದಾರರು ಮುಂತಾದವರು ಜಗನ್ಮೋಹನ ಬಂಗಲೆಯಲ್ಲಿ ಶ್ರೀಮನ್ಮಹಾರಾಜರ ಆಪ್ತಕಾರ್ಯದರ್ಶಿಗಳಾದ ಶ್ರೀ ಸಫೀ ದಾರಾಷಾರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಮನ್ಮಹಾರಾಜರವರಿಗೆ ಶುಭವನ್ನು ಕೋರುವ ಠರಾವನ್ನು ಅನುಮೋದಿಸಿದರು. ಈ ದಿನ ಸಂಜೆ ಮೈಸೂರು ಅರಮನೆಯು ವಿದ್ಯುದ್ದೀಪಾಲಂಕೃತವಾಗುವುದು.

ಸರ್ಕಾರದಿಂದ ಸಾಲ ಬೇಕಾಗಿಲ್ಲ

ಮೈಸೂರು ಪೌರಸಭೆಯ ನಿರ್ಣಯ

ನಗರದಲ್ಲಿ ಒಳಚರಂಡಿ ವ್ಯವಸ್ಥೆಗೆ ಶೇ|| ಐದರ ಬಡ್ಡಿಯ ೪ ಲಕ್ಷ ರೂ. ಗಳ ಸಾಲವನ್ನು ಪಡೆಯುವ ವಿಷಯದಲ್ಲಿ ಮೊನ್ನೆ ಪೌರಸಭೆಯ ವಿಶೇಷ ಅಧಿವೇಶನವು ನಡೆಯಿತು. ಮೈಸೂರು ನಗರದಲ್ಲಿ ಒಳಚರಂಡಿಗಳನ್ನು ಹಾಕುವ ಜವಾಬ್ದಾರಿಯೆಲ್ಲವೂ ನಗರಾಭಿವೃದ್ಧಿ ಸಮಿತಿಗೆ ಸೇರಿದುದು. ಆದರೂ ನಗರದ ಹಳೆಯ ಭಾಗಗಳಲ್ಲಿ ಒಳ ಚರಂಡಿಗಳಿಲ್ಲದೆ ತೊಂದರೆಯುಂಟಾಗಿರುವುದನ್ನು ತಪ್ಪಿಸಲು ಪೌರಸಭೆಯವರು ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಈ ಕೆಲಸಕ್ಕಾಗುವ ಖರ್ಚಿನ ಅರ್ಧವನ್ನು, ಉಳಿದುದನ್ನು ನಗರಾಭಿವೃದ್ಧಿ ಸಮಿತಿಯವರು ವಹಿಸಿಕೊಳ್ಳುವಂತೆ ಹಿಂದೆಯೇ ನಿರ್ಧರಿಸಿದ್ದ ಪ್ರಕಾರ ಈಗಲೂ ಮಾಡಲು ಪೌರಸಭೆಯ ಆಯವ್ಯಯದಲ್ಲಿ ಏರ್ಪಾಟುಗಳೇ ಮಾಡಲಾಗಿದೆಯಾದ್ದರಿಂದ ಶೇ|| ೫ ರಷ್ಟು ದುಬಾರಿಯ ಬಡ್ಡಿಯನ್ನು ಕೊಟ್ಟು ಸರ್ಕಾರದಿಂದ ಸಾಲವನ್ನು ತೆಗೆದುಕೊಳ್ಳಬೇಕಾಗಿಲ್ಲವೆಂದು ಸಭೆಯು ತೀರ್ಮಾನಿಸಿತು ಅಲ್ಲದೆ ಒಳ ಚರಂಡಿ ವ್ಯವಸ್ಥೆಯನ್ನು ನಗರಾಭಿವೃದ್ಧಿ ಸಮಿತಿಯವರೇ ನಡೆಸುವಂತೆ ಸರ್ಕಾರವನ್ನು ಒತ್ತಾಯಪಡಿಸಬೇಕೆಂದೂ ಸಹ ತೀರ್ಮಾನವಾಯಿತು.

ಹಣಕಾಸಿನ ಐಕ್ಯತೆ

ಮೈಸೂರು ಸರ್ಕಾರದ ಕೆಲವು ಇಲಾಖೆಗಳು ಕೇಂದ್ರದೊಡನೆ ಐಕ್ಯವಾದ ಪರಿಣಾಮವಾಗಿ ಮೈಸೂರು ಸರ್ಕಾರಕ್ಕೆ ಪ್ರತಿ ವರ್ಷವೂ ೩ಕೋಟಿ ರೂಪಾಯಿಗಳ ಆದಾಯವು ಕಡಮೆಯಾಗುವುದನ್ನು ಕೇಂದ್ರ ಸರ್ಕಾರವು ೧೯೫೦ನೇ ಏಪ್ರೆಲ್ ೧ರಿಂದ ೫ ವರ್ಷಕಾಲ ಕೊಡುವುದಾಗಿ ಒಪ್ಪಂದವಾಗಿತ್ತು. ಈಚಿನ ಸಂಧಾನದ ಮೇರೆ ಕೇಂದ್ರ ಸರ್ಕಾರವು ಪ್ರತಿವರ್ಷವೂ ೩.೪೫ ಕೋಟಿ ರೂಪಾಯಿಗಳನ್ನು ೫ವರ್ಷಕಾಲ ಕೊಡುವುದಲ್ಲದೆ, ಅನಂತರ ಪ್ರತಿವರ್ಷವೂ ಶೇಕಡ ೮ರಂತೆ ಈ ಮೊಬಲಗನ್ನು ಕಡಿಮೆ ಮಾಡುತ್ತಾ ೧೦ ವರ್ಷಗಳಾದ ನಂತರ ಈ ಹಣವನ್ನು ಕೊಡುವುದನ್ನು ನಿಲ್ಲಿಸುವಂತೆ ಒಪ್ಪಂದವಾಗಿದೆಯೆಂದು ತಿಳಿಯಬರುತ್ತದೆ.

ಸಿನಿಮಾಕ್ಕೆ ಹುಡುಗರಿಗೆ ಪ್ರವೇಶವಿಲ್ಲ

ಸಿನಿಮಾದಲ್ಲಿ ರಾತ್ರಿ ಎರಡನೇ ಆಟಕ್ಕೆ ೬ ವರ್ಷದಿಂದ ೧೮ ವರ್ಷದವರೆಗಿನ ಹುಡುಗರು ತಾವಾಗಿ ಸಿನಿಮಾಕ್ಕೆ ಹೋಗುವಂತಿಲ್ಲ. ತಮ್ಮ ಪೋಷಕನ ಅಥವಾ ತಂದೆ ತಾಯಂದಿರ ಜೊತೆಯಲ್ಲಿ ಹೋಗಬಹುದು. ಸರ್ಕಾರಿ ರಜಾದಿನಗಳು ಮತ್ತು ಭಾನುವಾರ ಬಿಟ್ಟು ಇತರ ದಿನಗಳಲ್ಲಿ ಬೆಳಗಿನ ಮತ್ತು ಮಧ್ಯಾಹ್ನ ಪ್ರದರ್ಶನಗಳಿಗೂ ಹುಡುಗರು ಹೋಗದಂತೆ ಅಲಹಾಬಾದಿನಲ್ಲಿ ನಿರ್ಬಂಧ ವಿಧಿಸಲಾಗಿದೆ.

ಸರ್. ಎಂ. ವಿ. ಯವರಿಂದ

ದೊಡ್ಡ ಬಳ್ಳಾಪುರನಲ್ಲಿ ಗ್ರಾಮ ಕೈಗಾರಿಕೆಯಲ್ಲಿ ಶಿಕ್ಷಣ ಪಡೆದು ವಿಲೇಜ್ ಗ್ರೂಪ್ ಡೆವಲಪ್‌ಮೆಂಟ್ ಇನ್ಸ್‌ಪೆಕ್ಟರುಗಳಿಗೆ ೨೦ನೆಯ ತಾರೀಖು ಸರ್. ಎಂ. ವಿಶ್ವೇಶ್ವರಯ್ಯನವರು ಮುಕ್ತಾಯ ಭಾಷಣ ಮಾಡುವರು ಕೈಗಾರಿಕಾ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸುವರು.

ಸಂಸ್ಥಾನ ವಿದ್ಯಾಭ್ಯಾಸ ಸಮ್ಮೇಳನ

ಮಂಡ್ಯದಲ್ಲಿ ಸೆಪ್ಟೆಂಬರ್ ೩೦ರಲ್ಲಿ ನಡೆಯಬೇಕಾಗಿದ್ದ ಮೈಸೂರು ಸಂಸ್ಥಾನ ವಿದ್ಯಾಭ್ಯಾಸ ಸಮ್ಮೇಳನವನ್ನು ಅಕ್ಟೋಬರ್ ಮಾಹೆಗೆ ಮುಂದುವರಿಸಿದೆ

ಶ್ರೀ ರಾಮಸ್ವಾಮಿ ರೆಡ್ಡಿಯಾರ್

ಮದರಾಸಿನ ಮಾಜಿ ಮುಖ್ಯ ಮಂತ್ರಿ ಶ್ರೀ ಒ. ಪಿ. ರಾಮಸ್ವಾಮಿ ರೆಡ್ಡಿಯಾರ್‌ರವರು ತಮಿಳುನಾಡು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೆ ರಾಜಿನಾಮೆಯನ್ನಿತ್ತು ತಮಿಳು ನಾಡಿನಲ್ಲಿ ಕಾಂಗ್ರೆಸ್ ಕೆಲಸಗಳಾವುವೂ ನಡೆಯುತ್ತಲಿಲ್ಲ. ಕಾಂಗ್ರೆಸ್ಸಿಗರೆಲ್ಲ ಅಧಿಕಾರ ವ್ಯಾಮೋಹಕ್ಕೆ ಸಿಕ್ಕಿಬಿದ್ದಿರುವುದೇ ಎಲ್ಲಕ್ಕೂ ಕಾರಣ ಬರುತ್ತಲಿದೆಯೆಂದು ಹೇಳಿರುವರು.

ಅಸ್ಸಾಂ ಭೂಕಂಪ ನಿಧಿಗೆ ಮನಿಯಾರ್ಡರ್ ಕಮಿಷನ್ನಿಲ್ಲ

ಅಸ್ಸಾಂ ಗವರ್ನರು ಮತ್ತು ಭಾರತ ಪ್ರಧಾನಿಗಳು ಏರ್ಪಡಿಸಿರುವ ಅಸ್ಸಾಂ ಪರಿಹಾರನಿಧಿಗೆ ಯಾರು ಬೇಕಾದರೂ ಮನಿಯಾರ್ಡರ್ ಕಮಿಷನ್ನಿಲ್ಲದೆ ಹಣವನ್ನು ಕಳುಹಿಸಬಹುದೆಂದು ಅಂಚೆ ಇಲಾಖೆಯು ಪ್ರಕಟಿಸಿದೆ.

ಲಾಯಕಾಲಿ ಪಾಶ್ಚಿಮಾತ್ಯ ಪ್ರವಾಸ

ಬಂಧನದಿಂದ ತಪ್ಪಿಸಿಕೊಂಡು ಪಾಕಿಸ್ತಾನಕ್ಕೆ ಹೋದ ಹೈದರಾಬಾದ್ ಮಾಜಿ ಮುಖ್ಯಮಂತ್ರಿ ಲಾಯಕಾಲಿಯವರು ಪಾಶ್ಚಿಮಾತ್ಯ ಪ್ರವಾಸವನ್ನು ಕೈಗೊಂಡಿರುವರು. ತಾವು ಹೈದರಾಬಾದಿನಿಂದ ತಪ್ಪಿಸಿಕೊಂಡು ಕರಾಚಿಯಲ್ಲಿದ್ದ ಆರು ತಿಂಗಳೂ ಪಾಕಿಸ್ತಾನ ಸರ್ಕಾರಕ್ಕೆ ಔದ್ಯೋಗಿಕ ಸಲಹೆಯನ್ನೂ ಮತ್ತೆ ಕೆಲವು ದೇಶಗಳಿಗೆ ಕೈಗಾರಿಕಾಭಿವೃದ್ಧಿ ಸಲಹೆಯನ್ನೂ ಕೊಡುತ್ತಲಿದ್ದರೆಂದೂ ತಿಳಿಸಿರುವರು.

ವಿದ್ಯಾರ್ಥಿಗಳ ಮುಷ್ಕರ

ಚಿತ್ರದುರ್ಗ ಇಂಟರ್ ಮೀಡಿಯೆಟ್ ಕಾಲೇಜಿಗೆ ಎಷ್ಟು ಸಲ ಪ್ರಾರ್ಥಿಸಿದಾಗ್ಯೂ ಒಬ್ಬ ತರ್ಕಶಾಸ್ತ್ರ ಅಧ್ಯಾಪಕನನ್ನು ನೇಮಕಮಾಡದಿರುವುದರಿಂದ ಆರ್ಟ್ಸ್‌ಸೆಕ್ಷನ್ನಿನ ವಿದ್ಯಾರ್ಥಿಗಳೆಲ್ಲರೂ ಮುಷ್ಕರ ಹೂಡಿರುವರೆಂದು ತಿಳಿಯಬಂದಿದೆ ಪೌರಸಭಾಧ್ಯಕ್ಷ ಶ್ರೀ. ಭೀಮಪ್ಪನಾಯಕರು ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಿಗೆ ಕೂಡಲೇ ಒಬ್ಬ ಅಧ್ಯಾಪಕರನ್ನು ಕಳುಹಿಸಬೇಕೆಂದು ತಂತಿಕೊಟ್ಟಿರುವರು.

ಅಸ್ಸಾಮಿನಲ್ಲಿ ಆನೆ ಹಾವಳಿ

ಅಸ್ಸಾಮಿನಲ್ಲಿ ಬೆಳೆಗಳನ್ನು ತುಳಿದು ಹಾಳುಮಾಡುತ್ತಲಿದ್ದ ೩೮೮ ಆನೆಗಳನ್ನು ಹಿಡಿಯುವುದರಲ್ಲಿದ್ದಾರೆ. ಇದರಿಂದ ಸಹಸ್ರಾರು ಎಕರೆ ಭೂಮಿಯಲ್ಲಿ ಬೆಳೆ ಉಳಿತಾಯವಾಗುವುದಲ್ಲದೆ, ಖೆಡ್ಡಾದಲ್ಲಿ ಸಿಕ್ಕಿ ಬಿದ್ದ ಪ್ರತಿ ಆನೆಗೂ ೭೬೦ ರೂ. ರಾಯಲ್ಟಿ ದೊರಕುವುದಲ್ಲದೆ, ಪ್ರತಿ ಗಂಡಾನೆಗೆ ೬೦೦ ರೂ. ಮತ್ತು ಪ್ರತಿ ಹೆಣ್ಣಾನೆಗೆ ೭೦೦ ರೂಪಾಯಿನಂತೆ ಮಾರಲೂ ಬಹುದು.

ಪೆಟ್ರೋಲ್ ರೇಷನ್

ಭಾರತಾದ್ಯಂತ ಇದೇ ವರ್ಷ ಅಕ್ಟೋಬರ್ ಆಖೈರಿನೊಳಗೆ ಪೆಟ್ರೋಲ್ ರೇಷನ್ ವಜಾ ಆಗುವುದೆಂದು ತಿಳಿಯಬರುತ್ತದೆ.

ಬಿರುದು ಬಾವಲಿಗಳಿಲ್ಲ

ಬ್ರಿಟಿಷರಿತ್ತಿದ್ದ ಕೆಲವು ಬಿರುದುಗಳನ್ನು ಇನ್ನೂ ಉಳಿಸಿ ಕೊಂಡು ಬರಲು ಅವಕಾಶವೀಯಬೇಕೆಂದು ಪ್ರಾಂತ್ಯ ಸರ್ಕಾರವೊಂದು ಕೇಳಿದ್ದ ಬೇಡಿಕೆಯನ್ನು ಕೇಂದ್ರ ಸರ್ಕಾರವು ತಳ್ಳಿಹಾಕಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೭ ಮೀಟರು

ಸೆಪ್ಟೆಂಬರ್ ೧೯ ಮಂಗಳವಾರ

ಬೆಳಿಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಗೀತೆ (ರ) ೭-೩೫ ಹಾಡುಗಾರಿಕೆ (ಕಮಲಾಶಂಕರ್) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಗೋವಿಂದಸ್ವಾಮಿ (ವೀಣೆ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಹೇಮಂತ ಕುಮಾರ್ (ರ) ೨-೦ ಹಾಡುಗಾರಿಕೆ (ಕಮಲಾಶಂಕರ್) ೨-೩೦ ಮುಕ್ತಾಯ.

ಸಂಜೆ ೫-೩೦ ಹಾಡುಗಾರಿಕೆ (ಟಿ ನಾಗಮ್ಮ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೫ ಮೈಸೂರು ಅರಮನೆ ಗಾನ ವೃಂದ ೭-೩೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಗೋವಿಂದ ಸ್ವಾಮಿ (ವೀಣೆ) ೮-೩೦ ಹಾಡುಗಾರಿಕೆ (ಟಿ. ನಾಗಮ್ಮ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿವಾರ್ತೆ ೯-೩೦ ಗಾನಸಮ್ಮೇಳನ (ರ) ೧೦-೦ ಮುಕ್ತಾಯ.

ರಣಜಿತ್
ತಾ|| 14-9-50 ರಿಂದ 8 ದಿನಗಳು ಮಾತ್ರ
ದಿನವಹಿ 3 ಆಟಗಳು
ಮಹಾಜನಗಳ ಕೋರಿಕೆಯ ಮೇಲೆ
ಅಂದಾಜ್
ಪಾತ್ರ:-ನರ್ಗೀಸ್, ಮತ್ತು ರಾಜಕಪೂರ್

ಬೆಳಗಿನ ಪ್ರದರ್ಶನ
15-9-50ರಿಂದ ಮೂರು ದಿನಗಳು ಮಾತ್ರ
ನಾಟಕ್
ಪಾತ್ರ: ಸುರೈಯ

WANTED

Those who are interested to take up the Sole Agency of the 'Samachara' Kannada daily, may contact in person

The Manager,
'Samachara' daily,
Lansdowne Buildings, Mysore.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಭಾರತ ವಿದೇಶಾಂಗ ನೀತಿ

ಬಿಡಿ ಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೯—೯—೧೯೫೦ನೇ ಮಂಗಳವಾರ [ಸಂಚಿಕೆ ೨೯

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಅಂಗೀಕೃತವಾದ ಭಾರತ ವಿದೇಶಾಂಗ ನೀತಿಗೆ ಸಂಬಂಧಪಟ್ಟ ನಿರ್ಣಯವನ್ನು ನಿನ್ನೆ ಪಂಡಿತ ಗೋವಿಂದವಲ್ಲಭ ಪಂತರವರು ವಿಷಯ ನಿಯಾಮಕ ಸಮಿತಿಯಲ್ಲಿ ಮಂಡಿಸಿದರು. ಅದು ಸಮಿತಿಯಲ್ಲಿ ಅಂಗೀಕಾರವಾಯಿತು ಅದನ್ನು ಮಹಾಧಿವೇಶನದಲ್ಲಿ ಮಂಡಿಸಲಾಗುವುದು.

ಭಾರತವು ಯಾವ ಪಕ್ಷದೊಡನೆಯೂ ಸೇರುವುದಿಲ್ಲ. ಎಲ್ಲಾ ಪಕ್ಷ, ರಾಷ್ಟ್ರಗಳ ಸ್ನೇಹವು ಭಾರತಕ್ಕೆ ಬೇಕು. ಇದು ಕಾಂಗ್ರೆಸ್ಸಿನ ನೀತಿ. ಕೊರಿಯಾ ಯುದ್ಧದ ವಿಷಯದಲ್ಲಿ ಸಹ ಭಾರತವು ಕದನ ವಿಸ್ತರಿಸುವುದನ್ನು ತಡೆದು ಶಾಂತಿ ಸ್ಥಾಪನೆಯಾಗಬೇಕೆಂಬುದೇ ಅದರ ಧ್ಯೇಯವನ್ನಿಟ್ಟುಕೊಂಡು ಕೆಲಸಮಾಡುತ್ತಲಿದೆ. ಸ್ಟಾಲಿನ್ ಮತ್ತು ಟ್ರೂಮನ್ನರೊಡನೆ ತಾವು ಪತ್ರವ್ಯವಹಾರ ನಡೆಸಿದುದು ಇದೇ ಧ್ಯೇಯದಿಂದ. ಯಾರನ್ನೂ ಸಮಾಧಾನ ಪಡಿಸಲೂ ಅಲ್ಲ. ಇದರಿಂದ ಲಾಭ ಪಡೆಯಬೇಕೆಂದೂ ಅಲ್ಲ ನಾವುಗಳು ಮಹಾಘಟನೆಗಳ ಪರ್ವಕಾಲದಲ್ಲಿದ್ದೇವೆ.

ಕಾಶ್ಮೀರ ವಿಷಯವಾಗಿ ಮಾತನಾಡುತ್ತಾ ಕಾಶ್ಮೀರ ನೀತಿಯಲ್ಲಿ ಪಕ್ಷಪಾತ ನಡೆದಿದೆ. ಈ ವಿಷಯದಲ್ಲಿ ನಮ್ಮ ನೀತಿಯು ದೃಢವಾಗಿದೆ. ಬದಲಾವಣೆಯೇನೂ ಇಲ್ಲ. ಆಗುವಹಾಗೆಯೂ ಇಲ್ಲ. ಆದರೆ ವಿಷಯ ಗೊಂದಲ ಬೇಡ. ಎಲ್ಲವೂ ಶಾಂತಿರೀತಿಯಿಂದ ನಡೆಯಲಿ, ಎಂದು ಪ್ರಧಾನಿ ಪಂಡಿತ ನೆಹರೂರವರು ಈ ಸಂದರ್ಭದಲ್ಲಿ ಮಾತನಾಡುತ್ತಾ ತಿಳಿಸಿದರು

ಭಾರತದಲ್ಲಿ ಇನ್ನೂ ಪರರ ಆಳ್ವಿಕೆಯಿರುವುದನ್ನು ನಿರೋಧಿಸಿ ಶ್ರೀ. ಪಟ್ಟಾಭಿ ಸೀತಾರಾಮಯ್ಯನವರು ಒಂದು ನಿರ್ಣಯವನ್ನು ಈ ಸಮಿತಿಯಲ್ಲಿ ಮಂಡಿಸಿದರು ಭಾರತದಲ್ಲಿ ಪರರ ಆಳ್ವಿಕೆಯು ಕೂಡಲೇ ಕೊನೆಗಾಣಬೇಕೆಂಬುದೇ ಈ ನಿರ್ಣಯದ ತತ್ವ.

ಚೀನಾ ರಾಯಭಾರಿ

ಭಾರತದಲ್ಲಿ ನೇಮಕವಾಗಿರುವ ಚೀನಾ ರಾಯಭಾರಿ ಜನರಲ್ ಯುವಾನ್-ಚುಂಗ್-ಹ್ಸೀನ್‌ರವರು ನಿನ್ನೆ ರಾಷ್ಟ್ರಾಧ್ಯಕ್ಷರಿಗೆ ತಮ್ಮ ಪ್ರಶಸ್ತಿ ಪತ್ರಗಳನ್ನು ಒಪ್ಪಿಸಿದರು. ಭಾರತ ಚೈನಗಳ ಮೈತ್ರಿ ಬೆಳೆದು, ಮುಂದುವರಿಯುವುದಕ್ಕೆ ಇದು ಶುಭ ಸೂಚನೆಯೆಂದು, ಈ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರು ನುಡಿದರು.

ದಸರಾ ವಸ್ತುಪ್ರದರ್ಶನ-ನಡೆಯುವುದು

ದಸರಾ ವಸ್ತುಪ್ರದರ್ಶನವು ಈ ಬಾರಿ ನಡೆಯುವುದಿಲ್ಲವೆಂದು ಸುದ್ದಿ ಹರಡಿದೆ. ಇದು ನಿಜವಲ್ಲ. ಹಿಂದೆಯೇ ನಿರ್ಧರಿಸಿರುವಂತೆ ಅಕ್ಟೋಬರ್ ೧೨ ನೇ ತಾರೀಖಿನಿಂದ ದಸರಾವಸ್ತು ಪ್ರದರ್ಶನವು ನಡೆಯುವುದೆಂದು ನಿನ್ನೆ ಸರ್ಕಾರವು ಒಂದು ಪತ್ರಿಕಾಪ್ರಕಟಣೆ ಹೊರಡಿಸಿದೆ.

ವಿಶ್ವಸಂಸ್ಥೆಯ ಅಧ್ಯಕ್ಷ ಚುನಾವಣೆ

ವಿಶ್ವಸಂಸ್ಥೆಯ ಅಧ್ಯಕ್ಷಸ್ಥಾನಕ್ಕೆ ಪಾಕಿಸ್ತಾನ್ ಪ್ರತಿನಿಧಿ ಮಿ॥ ಮಹಮದ್ ಜಫರುಲ್ಲಾಖಾನ್ ಮತ್ತು ಪರ್ಶಿಯಾ ಪ್ರತಿನಿಧಿ ನಸರುಲ್ಲಾ ಇಂಟೆಜಾನ್‌ರವರು ಸ್ಪರ್ಧಿಸಲಿರುವರು.

ಚೈನಾ ಪ್ರಜಾ ಸರ್ಕಾರಕ್ಕೆ ಸ್ಥಾನ

ವಿಶ್ವಸಂಸ್ಥೆಯಲ್ಲಿ ಚೈನಾಪ್ರಜಾಸರ್ಕಾರಕ್ಕೆ ಮನ್ನಣೆ ಕೊಟ್ಟು ಸ್ಥಾನವನ್ನು ಕೊಡಬೇಕೆಂದು ಭಾರತವು ಇಂದಿನ ಅಧಿವೇಶನದಲ್ಲಿ ಒಂದು ನಿರ್ಣಯವನ್ನು ಮಂಡಿಸಲಿದೆ.

ವಿದ್ಯಾರ್ಥಿಗಳಿಗೆ ಎಚ್ಚರಿಕೆ

ಮಧ್ಯ ಭಾರತ ಸರ್ಕಾರವು ಗ್ವಾಲಿಯರಿನಲ್ಲಿ ಮುಷ್ಕರ ನಡೆಯಿಸುತ್ತಲಿರುವ ವಿದ್ಯಾರ್ಥಿಗಳಿಗೆ ಎಚ್ಚರಿಸಿ ಅವರು ವರ್ತನೆ ಸರಿಪಡಿಸಿಕೊಳ್ಳದಿದ್ದಲ್ಲಿ ಅನಿರ್ದಿಷ್ಟವಾಗಿ ಶಾಲಾ ಕಾಲೇಜುಗಳನ್ನೆಲ್ಲಾ ಮುಚ್ಚಲಾಗುವುದೆಂದು ತಿಳಿಸಿರುವರು

ಮೈಸೂರಿಗೆ ಶ್ರೀ ರಾಜಾಜಿ

ಮೈಸೂರು ಜಿಲ್ಲಾ ಪರಸ್ಪರ ಸಹಕಾರ ಸಂಘದ ರಜತ ಮಹೋತ್ಸವವು ಮುಂದಿನ ತಿಂಗಳು ನಡೆಯಲಿದೆ. ಈ ರಜತ ಮಹೋತ್ಸವ ಸಮಾರಂಭದ ಉದ್ಘಾಟನೆಯನ್ನು ಮಾಜೀ ಗೌರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಚಾರಿಯವರು ನೆರವೇರಿಸುವಂತೆ ಪ್ರಾರ್ಥಿಸಲಾಗಿದೆ

ಪತ್ರಿಕೋದ್ಯೋಗಿ ಸಮ್ಮೇಳನ

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಸ್ವಾಗತ ಸಮಿತಿ ಕಛೇರಿಯನ್ನು ಮೈಸೂರು ನಗರ ಪತ್ರಿಕೋದ್ಯೋಗಿ ಸಂಘದ ಕಛೇರಿಯಲ್ಲಿ (ಫ್ರೀಹಾಳ) ತೆರೆಯಲ್ಪಟ್ಟಿದೆ.

ಮೈಸೂರು ಮಂತ್ರಿಗಳಿಂದ

ಅಸ್ಸಾಂ ಪರಿಹಾರನಿಧಿಗೆ

ಶ್ರೀಯುತರಾದ ಕೆ ಟಿ ಭಾಷ್ಯಂ, ಮರಿಯಪ್ಪ, ಚನ್ನಿಗರಾಮಯ್ಯನವರು ೧೦೦ ರೂ, ಶ್ರೀಯುತರಾದ ಸಿದ್ದಯ್ಯ, ಕೆ. ಸಿ ರೆಡ್ಡಿಯವರು ೧೧೧ ರೂಪಾಯಿಗಳನ್ನು ಅಸ್ಸಾಂ ಪರಿಹಾರನಿಧಿಗೆ ಕೊಟ್ಟಿರುವರು.

ಚಿತ್ರದುರ್ಗ ಶ್ರೀ. ಮುರುಘರಾಜೇಂದ್ರಸ್ವಾಮಿಗಳು ೧೦೦ರೂ, ಬೆಂಗಳೂರು ಮಾಡರನ್ ಹಿಂದೂಹೋಟೇಲು ಮಾಲೀಕರಾದ ಶ್ರೀ. ಕೆ. ಟಿ. ಅಪ್ಪಣ್ಣನವರು ೧೦೦೦ ರೂ, ಬೆಂಗಳೂರಿನ ಎಸ್. ವಿ ಎಸ್. ಹತ್ತಿ ಗಿರಣಿಯ ಶ್ರೀ ಟಿ. ಮೂಡಲಯ್ಯನವರು [illegible] ಗಳನ್ನು ಪರಿಹಾರ ನಿಧಿಗೆ ಕೊಟ್ಟಿರುವರು.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ
~
ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಮೈಸೂರು ರಾಜಪ್ರಮುಖರಿಂದ

ಅಸ್ಸಾಂ ನಿಧಿಗೆ

ಅಸ್ಸಾಂ ಭೂಕಂಪ ನಿಧಿಗೆ ಮೈಸೂರಿನ ರಾಜಪ್ರಮುಖರು ಒಂದು ಲಕ್ಷ ರೂಪಾಯಿಗಳನ್ನು ದಾನಮಾಡಿದ್ದಾರೆ.

ರಷ್ಯಾಕ್ಕೆ ರವಾನೆಯಿಲ್ಲ

ಬ್ರಿಟನ್ನಿನಿಂದ ರಷ್ಯಾ, ಪೋಲೆಂಡ್ ಮುಂತಾದ ರಾಷ್ಟ್ರಗಳಿಗೆ ಕಳುಹಿಸತಕ್ಕ ಅನೇಕ ಸಾಮಗ್ರಿಗಳು ಇಂದಿನ ಪ್ರಪಂಚದ ಪರಿಸ್ಥಿತಿಯಲ್ಲಿ ತಮಗೇ ಆವಶ್ಯಕವಾಗಬಹುದೆಂದು, ಇನ್ನು ಮುಂದೆ ರವಾನೆಯನ್ನು ನಿಲ್ಲಿಸಲಾಗಿದೆ.

ವಿವಾಹ ಮಹೋತ್ಸವ

ನಿನ್ನೆ "ಪೌರವಾಣಿ" ಪತ್ರಿಕೆಯ ಸಂಪಾದಕರಾದ ಶ್ರೀ ಎಚ್. ಎಸ್. ದೊರೆಸ್ವಾಮಿ ಮತ್ತು ಶ್ರೀಮತಿ ಲಲಿತಾ ಇವರ ವಿವಾಹಮಹೋತ್ಸವವು ಬಸವನಗುಡಿಯಲ್ಲಿ ನೆರವೇರಿತು.

ಕೋಮಿಂಟಾಂಗ್ ಪ್ರತಿನಿಧಿ

ಪ್ರಪಂಚ ಸಂಸ್ಥೆಯಲ್ಲಿ ಈಗಿರುವ ಕೋಮಿಂಟಾಂಗ್ ಪ್ರತಿನಿಧಿಯು ಫಾರ್ಮೋಸಾಕ್ಕೆ ಮಾತ್ರ ಪ್ರತಿನಿಧಿಯೇ ಹೊರತು ಚೀನಾದೇಶಕ್ಕಲ್ಲ. ಆದ್ದರಿಂದ ಚೀನಾ ಪ್ರಜಾ ಸರ್ಕಾರದ ಪ್ರತಿನಿಧಿಗೆ ಮಾನ್ಯತೆ ಕೊಟ್ಟು ವಿಶ್ವಸಂಸ್ಥೆಯಲ್ಲಿ ಚೀನಾ ಪ್ರಜಾಸರ್ಕಾರಕ್ಕೆ ಸ್ಥಾನವನ್ನು ಕೊಡಲೇಬೇಕು ಇಲ್ಲವಾದರೆ ಪರಿಸ್ಥಿತಿ ಕೆಡುವುದೆಂದು ಪ್ರಧಾನಿ ಪಂಡಿತ ನೆಹರೂ ತಿಳಿಸಿರುವರು.

ವಿಶ್ವಸಂಸ್ಥೆಯಲ್ಲಿ ಮೆಕಾರ್ಥರ್ ವರದಿ

ಕೊರಿಯಾ ಯುದ್ಧಕ್ಕೆ ರಷ್ಯನ್ನರು ಮದ್ದು, ಗುಂಡು, ಮುಂತಾದ ಯುದ್ಧ ಸಾಮಗ್ರಿಗಳನ್ನೆಲ್ಲಾ ಸರಬರಾಯಿ ಮಾಡುತ್ತಲಿರುವರು. ಮಂಚೂರಿಯಾದಲ್ಲಿ ರಷ್ಯನ್ನರಿಗೆ ಮತ್ತು ಕೊರಿಯನ್ನರಿಗೆ ಸೈನ್ಯ ಶಿಕ್ಷಣವನ್ನು ಕೊಡುತ್ತಲಿವೆ ಎಂದು ಮೆಕಾರ್ಥರವರು ಮಾಡಿರುವ ವರದಿಯನ್ನು ನಿನ್ನೆ ಪ್ರಪಂಚ ಸಂಸ್ಥೆಯು ಪರಿಶೀಲನೆಗೆ ತೆಗೆದುಕೊಂಡಿತು. ರಷ್ಯಾ ಪ್ರತಿನಿಧಿ ಈ ವರದಿಯು ಆಧಾರವಿಲ್ಲದ್ದು ಅದನ್ನು ಪರಿಶೀಲಿಸಬೇಕಾಗಿಲ್ಲ ಎಂದು ವಿರೋಧಿಸಿದರು.

LATEST

ನಿಧನ

ಮೈಸೂರು ಮಹಾರಾಜ ಕಾಲೇಜಿನ ರಿಟೈರ್ಡ್ ಸಂಸ್ಕೃತ ಪ್ರೊಫೆಸರೂ ಮತ್ತು ಪ್ರಸಿದ್ಧ ಗ್ರಂಥಕರ್ತರೂ ಆಗಿದ್ದ ಶ್ರೀ. ಎಂ. ಹಿರಿಯಣ್ಣನವರು ಇಂದು ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ

ಪತ್ರವ್ಯವಹಾರ

ಸ್ವಾಮಿ,

ಕೆಂಪನಂಜಾಂಬಾ ಅಗ್ರಹಾರದ ಇಳಿಜಾರು ಚೌಕದಿಂದ ದಾರಿಯ ಎರಡು ಕಡೆಗಳಲ್ಲಿಯೂ ತೊಗರಿಯನ್ನು ಪ್ರತಿ ದಿನವೂ ಹರಡುತ್ತಿದ್ದಾರೆ. ಮೇಲಿನಿಂದ ಬರತಕ್ಕ ವಾಹನಗಳೂ ಜನರೂ ಹೋಗಲು ದಾರಿ ಇಲ್ಲದೇ ತೊಗರಿಯ ಮೇಲೆ ಹೋಗುವಂತಾಗಿ ಜಾರಿಬಿದ್ದು ಅಪಘಾತಕ್ಕೆ ಗುರಿಯಾಗುತ್ತಿರುತ್ತಾರೆ. ಇದೇರೀತಿ ೧೭-೯-೫೦ರ ದಿನ ೨-೩೦ ಗಂಟೆಯಲ್ಲಿ ಶ್ರೀ ಲಕ್ಷ್ಮಣ್ ಎಂಬುವರು ಸೈಕಲ್ ಮೇಲೆ ಆ ದಾರಿಯಲ್ಲಿ ಬರಲು ಅವರು ಜಾರಿ ಬಿದ್ದು ೫-೧೦ ನಿಮಿಷ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಹತ್ತಿರದಲ್ಲಿದ್ದವರು ಅವರನ್ನು ಉಪಚರಿಸಿದರು. ಈ ರೀತಿ ದಿನವಹಿ ೩-೪ ಅಪಘಾತಗಳು ನಡೆಯುತ್ತಿರುತ್ತೆ. ಈ ವಿಷಯವಲ್ಲದೆ ಆ ಇಳಿಜಾರು ಚೌಕದ ತಿರುಗಣಿಯು ಮುಂದೆ ಬರುತ್ತಿರುವ ವಾಹನಗಳು ಕಾಣದಂತಾಗಿ ವಾಹನಗಳು ಅನೇಕಾವರ್ತಿ ಢಿಕ್ಕಿಹೊಡೆದು ಅಪಾಯವಾಗಿರುತ್ತದೆ. ಆದ್ದರಿಂದ ಪುರಸಭೆಯವರು ಇಂತಹಅಪಘಾತವಾಗದಂತೆ ಜರೂರು ಕಾರ್ಯವನ್ನು ಕೈಗೊಳ್ಳುವರೆಂದು ನಂಬಿ, ಈ ಮೇಲಿನ ವಿಷಯವನ್ನು ಪುರಸಭೆಗೆ ತಿಳಿಸಲಾಗಿತ್ತು. ಆಗಲೂ ಎಂದಿನಂತೆ ಅಲ್ಲಿಯವರು ತೊಗರಿಯನ್ನು ಹರಡುತ್ತಿರುತ್ತಾರೆ. ಕಾರಣವೇನು ?

ಎಸ್. ಎನ್. ಶರ್ಮ.

ರಾಜಧಾನಿಯಲ್ಲಿ ಹಿಂದೀ ತರಗತಿಗಳು

ರಾಜಧಾನಿಯ ಭಾರತ್ ಸೇವಾ ಸಮಾಜದಾಶ್ರಯದಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಾಧ್ಯಮ, ರಾಷ್ಟ್ರಭಾಷಾ, ಪ್ರಾವೇಶಿಕ ಮತ್ತು ವಿಶಾರದ ತರಗತಿಗಳನ್ನು ಸಂಜೆ ೬-೩೦ ರಿಂದ ೭-೩೦ ರವರೆಗೆ, ಲಕ್ಷ್ಮೀಪುರಂ ಪೋಲೀಸ್ ಸ್ಟೇಷನ್ ಬಳಿಯ ಅಪ್ಪರ್ ಪ್ರೈಮರಿ ಗರ್ಲ್ಸ್‌ಸ್ಕೂಲ್, ಒಂಟಿಕೊಪ್ಪಲಿನ ಮಾತೃಮಂಡಲಿ, ಹಳ್ಳದ ಕೇರಿಯ ಕೇಂದ್ರದಲ್ಲಿ ಅಕ್ಟೋಬರ್ ೧ ರಿಂದ ನಡೆಸಲಾಗುವುದು ಸೇರಲಿಚ್ಛಿಸುವವರು ಇದೇ ಮಾಹೆ ೩೦ನೇ ತಾರೀಖಿನೊಳಗೆ ತಮ್ಮ ಪ್ರವೇಶ ಪತ್ರಗಳನ್ನು ಆಯಾ ಕೇಂದ್ರಗಳಲ್ಲಿ ಕೊಟ್ಟು ಸೇರಬೇಕೆಂದು ಸಂಚಾಲಕರು ತಿಳಿಸಿರುತ್ತಾರೆ.

ಮುಷ್ಕರ ಪರಿಸ್ಥಿತಿ

ಬೊಂಬಾಯಿ ಗಿರಣಿ ಕೆಲಸಗಾರರ ಮುಷ್ಕರ ಪರಿಸ್ಥಿತಿಯು ಉತ್ತಮ ಗೊಳ್ಳುತ್ತಲಿದೆ. ನಿನ್ನೆ ೨೭ ಗಿರಣಿಗಳಲ್ಲಿ ೨೫೦೦೦ ಜನರು ಕೆಲಸಮಾಡುತ್ತಲಿದ್ದರು. ೧೧ ಗಿರಣಿಗಳು ಪೂರ್ತಾ ಕೆಲಸಮಾಡುತ್ತಲಿದ್ದುವು. ನಗರದ ಮಧ್ಯಭಾಗದಲ್ಲಿ ಸ್ವಲ್ಪ ಗಲಾಟೆಯಾಯಿತು. ಪೋಲೀಸಿನವರು ಲಾಠಿ ಪ್ರಹಾರಮಾಡಿ ಜನರನ್ನು ಚದುರಿಸಿದರು ೩ ಗಿರಣಿಗಳ ಕೆಲಸಗಾರರ ಮೇಲೆ ಕಲ್ಲು ಎಸೆದುದರ ಫಲವಾಗಿ ಕೆಲವು ಕೆಲಸಗಾರರಿಗೆ ಏಟುಬಿತ್ತು. ೬ ಜನ ದಸ್ತಗಿರಿಯಾದರು.

ಆಹಾರ

ಮದರಾಸಿಗೆ ಆಸ್ಟ್ರೇಲಿಯಾದಿಂದ ೯೩೬೦ ಟನ್ನು ಗೋಧಿ, ಕೊಚ್ಚಿನ್ನಿಗೆ ಈಜಿಪ್ಟಿನ ೧೬೦೦ ಟನ್ನು ಅಕ್ಕಿ ಬಂದಿದೆ.

ಕಾಮನ್ ವೆಲ್ತ್ ಕ್ರಿಕೆಟ್

ಕಾಮನ್‌ವೆಲ್ತ್ ಕ್ರಿಕೆಟ್ ಟೀಮ್ ಇದೇ ಮಾಹೆ ೨೯ ನೇ ತಾರೀಖು ಬೊಂಬಾಯಿಗೆ ಆಗಮಿಸಲಿದೆ. ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾ ಮೇಲೆ ಪ್ರಥಮ ಆಟ ಪ್ರಾರಂಭವಾಗುವುದು.

ಪೆಟ್ರೋಲ್ ರೇಷನ್

ಮದರಾಸು, ಮೈಸೂರು, ಹೈದರಾಬಾದ್, ತಿರುವಾಂಕೂರು, ಕೊಚ್ಚಿನ್, ಒಕ್ಕೂಟಗಳಲ್ಲಿ ಸೆಪ್ಟಂಬರ್ ೧ ರಿಂದ ಪೆಟ್ರೋಲ್ ರೇಷನ್ ವಜಾ ಮಾಡಲಾಗಿದೆಯೆಂದು ಕೇಂದ್ರ ಸರ್ಕಾರವು ಆಜ್ಞೆ ಮಾಡಿತು ಈ ಆಜ್ಞೆಯು ಆಗಸ್ಟ್ ೩೧ ನೇ ತಾರೀಖು ಹೊರಬಿತ್ತು. ಮದರಾಸಿನಲ್ಲಿ ಪೆಟ್ರೋಲ್ ರೇಷನ್ ರದ್ದಾಗಿದೆ ಆದರೆ ಆ ಪ್ರಾಂತ್ಯದ ಸುತ್ತಮುತ್ತಲಿರುವ ಮೈಸೂರು ಹೈದರಾಬಾದು ಮುಂತಾದ ಪ್ರಾಂತ್ಯಗಳಲ್ಲಿ ಪೆಟ್ರೋಲ್ ರೇಷನ್ ಇದೆಯೆಂದು ಮದರಾಸು ಸರ್ಕಾರವು ಸೆಪ್ಟಂಬರ್ ೯ ನೇ ತಾರೀಖು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿತು. ೧೭ ನೇ ತಾರೀಖು ಮದರಾಸು ಸರ್ಕಾರವು ಪುನಃ ಇನ್ನೊಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ೯ ನೇ ತಾರೀಖು ತಾವು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದಾಗ ನೆರೆಯ ಪ್ರಾಂತ್ಯಗಳಲ್ಲಿ ರೇಷನ್ ಇಲ್ಲವೆಂಬುದು ತಮಗೆ ಗೊತ್ತೇ ಇಲ್ಲವೆಂದೂ ಈಚೆಗೆ ಕೇಂದ್ರ ಸರ್ಕಾರವು ತಿಳಿಸಿದ ಮೇಲೆ ಗೊತ್ತಾಯಿತೆಂದು ಪ್ರಕಟಿಸಿರುವರು.

ಕೇಂದ್ರ ಸರ್ಕಾರದ ಆಜ್ಞೆಯು ಎಲ್ಲಾ ಪ್ರಾಂತ್ಯಗಳಿಗೆ ಸೆಪ್ಟಂಬರ್ ೧ ನೇ ತಾರೀಖಿನಲ್ಲೇ ಬಂದಿತು. ಪತ್ರಿಕೆಗಳಲ್ಲಿ, ರೇಡಿಯೋ ಮುಂತಾದಕಡೆ ಪ್ರಕಟವಾಯಿತು ಮದರಾಸು ಸರ್ಕಾರವು ಒಂದುವಾರವಾದಾಗ್ಯೂ ತಮಗೆ ಗೊತ್ತೇ ಇರಲಿಲ್ಲವೆಂದು ಹೇಳುವುದು ವಿಚಿತ್ರವಲ್ಲವೆ? ಸರ್ಕಾರದ ದಕ್ಷತೆ ಹೇಗಿದೆಯೆಂಬುದಕ್ಕೆ ಇದು ಉದಾಹರಣೆ.

ಅಮೆರಿಕಾ ಮೆಲೋ ಮೈಸೂರಿಗೆ

ಅಮೆರಿಕಾವು ಭಾರತಕ್ಕೆ ೪೨,೦೦೦ ಟನ್ನು ಮೆಲೋವನ್ನು ಕಮ್ಮಿದರದಲ್ಲಿ ಕೊಡಲೊಪ್ಪಿದೆ ಅದರಿಂದ ಭಾರತ ಸರ್ಕಾರಕ್ಕೆ ೧,೬೨,೦೦,೦೦೦ ರೂ. ಗಳ ಉಳಿತಾಯವಾಗುತ್ತದೆ ಈ ಆಹಾರ ಪದಾರ್ಥ ಬರುವುದರಿಂದ ಬೊಂಬಾಯಿ, ಮದರಾಸು, ಮೈಸೂರು, ಹೈದರಾಬಾದು ಬಿಹಾರ್ ಮುಂತಾದ ಆಹಾರ ಕೊರತೆಯಿರುವ ಪ್ರಾಂತ್ಯಗಳಿಗೆ ಹೆಚ್ಚಿಗೆ ಆಹಾರವನ್ನು ಕೊಡಲವಕಾಶವುಂಟಾಗಿದೆಯೆಂದು ಕೇಂದ್ರ ಆಹಾರ ಮಂತ್ರಿ ಶ್ರೀ. ಕೆ ಎಂ. ಮುನ್ಷಿಯವರು ತಿಳಿಸಿರುವರು. ಈ ಪದಾರ್ಥವು ನವೆಂಬರಿನ ಹೊತ್ತಿಗೆ ಭಾರತಕ್ಕೆ ಬರುವುದು.

ಪಾಕಿಸ್ಥಾನದಲ್ಲಿ ಕಾಶ್ಮೀರ ದಿನಾಚರಣೆ

ಪಾಕಿಸ್ಥಾನದಲ್ಲಿ ಕರಾಚಿ ಮುಸ್ಲಿಂ ಲೀಗಿನವರು ಕಾಶ್ಮೀರ ದಿನಾಚರಣೆಯನ್ನು ೧೫ ನೇ ತಾರೀಖು ನಡೆಸಿದರು ಪಾಕಿಸ್ಥಾನದ ಅನೇಕ ಪಟ್ಟಣಗಳಲ್ಲಿ ಈ ದಿನಾಚರಣೆಯು ನಡೆಯಿತು. ವಿಶ್ವಸಂಸ್ಥೆಯು ಕೂಡಲೇ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಬೇಕೆಂದೂ, ಇನ್ನೂ ತಡಮಾಡುತ್ತಲಿರುವುದಕ್ಕೆ ತಮ್ಮ ವಿಷಾದವನ್ನು ಸೂಚಿಸುತ್ತಾ, ಇನ್ನು ಸ್ವಲ್ಪವೂ ತಡಮಾಡಲು ಸಾಧ್ಯವಿಲ್ಲವೆಂದು ನಿರ್ಣಯವನ್ನು ಪಕ್ಷದಲ್ಲಿ ಮಾಡಲಾಯಿತು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಸೆಪ್ಟೆಂಬರ್ ೨೦ ಬುಧವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಲೋಕ (ರ) ೭-೩೫ ದೇವರ ನಾಮ (ಎಂ. ಎಸ್. ಶೆಲ್ವಪಿಳ್ಳೆಯ್ಯಂಗಾರ್) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಎಂ. ಎಲ್. ವಸಂತ ಕುಮಾರಿ(ರ) ೧-೧೫ ಸಂಗೀತ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ವೀಣಾ ೨-೦ ವನಿತಾ ವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಸಾಕ್ಸೊಫೋನ್ (ಎಂ. ವಿ. ಲಕ್ಷ್ಮೀನರಸಿಂಹಯ್ಯ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಚಿತ್ರಗೀತೆ (ರ) ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೧ ಸ್ಥಾನೀಯ ಸೂಚನಾಯೆ ೭-೫ ಹಿಂದೀ ಕಾರ್ಯಕ್ರಮ ೭-೧೫ ಸಾಕ್ಸೋಫೋನ್ (ಎಂ. ವಿ. ಲಕ್ಷ್ಮೀನರಸಿಂಹಯ್ಯ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಸಂಗೀತ (ರತ್ನಮ್ಮ ಕೃಷ್ಣಮೂರ್ತಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿವಾರ್ತೆ ೯-೩೦ ನಿಮ್ಮ ಮೆಚ್ಚಿನ ಗೀತೆಗಳು ೧೦-೦ ಮುಕ್ತಾಯ.

ಕಾಶ್ಮೀರ ವಿಭಜನೆ ಕೂಡದು

ಆಜಾದ್ ಕಾಶ್ಮೀರ ಮುಖಂಡ ಚೌಧರಿ ಗುಲಾಮ್ ಅಬ್ಬಾಸ್‌ರವರು ಕಾಶ್ಮೀರವನ್ನು ವಿಭಜನೆ ಮಾಡ ಕೂಡದು. ವಿಶ್ವಸಂಸ್ಥೆಯು ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥ ಮಾಡದಿದ್ದರೆ ಪಾಕೀಸ್ಥಾನವು ವಿಶ್ವಸಂಸ್ಥೆಯ ಸದಸ್ಯತ್ವವನ್ನು ತ್ಯಜಿಸಬೇಕೆಂದು ಹೇಳಿರುವರು.

ಭಾರತ ಪಾಕಿಸ್ಥಾನ್ ವ್ಯಾಪಾರ

ಭಾರತ ಪಾಕಿಸ್ಥಾನ ನಾಣ್ಯ ವಿನಿಮಯದ ಬಿಕ್ಕಟ್ಟು ಬಗೆಹರಿಯದಿದ್ದರೆ ತಾತ್ಕಾಲಿಕ ವ್ಯಾಪಾರದ ಒಪ್ಪಂದ ಸೆಪ್ಟಂಬರ್ ೩೦ ಕ್ಕೆ ಮುಗಿದನಂತರ ಭಾರತ ಪಾಕಿಸ್ಥಾನಗಳ ವ್ಯಾಪಾರ ನಿಂತೇಹೋಗಬಹುದೆಂದು ಅಧಿಕೃತವಾಗಿ ಕೆಲವರು ಹೇಳುತ್ತಲಿರುವರು.

ಚರ್ಮದ ಚಪ್ಪಲಿಹಾಕಿಲ್ಲ

ಚರ್ಮದ ಚಪ್ಪಲಿಗೆ ಉಪಯೋಗಿಸುವ ಚರ್ಮಕ್ಕಾಗಿ ಗೋವುಗಳನ್ನು ಕೊಲ್ಲುವರೆಂದು ತಿಳಿದೇ ತಾವು ಚರ್ಮದ ಚಪ್ಪಲಿಯನ್ನು ಹಾಕುವುದಿಲ್ಲವೆಂದು ಪ್ರತಿಜ್ಞೆ ತೆಗೆದುಕೊಂಡು ೧೯೦೪ ರಿಂದ ಅದನ್ನು ಹಾಕಿಲ್ಲ, ಬಟ್ಟೆ ಅಥವಾ ರಬ್ಬರ್ ಚಪ್ಪಲಿಯಲ್ಲೇ ಕಾಲಕಳೆಯುತ್ತಲಿರುವುದಾಗಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾಬು ಪುರುಷೋತ್ತಮದಾಸ್ ಟಾಂಡನ್ನರು ಗೋರಕ್ಷಣಾ ಸಮ್ಮೇಳನದಲ್ಲಿ ತಿಳಿಸಿರುವರು

● ಮೈಸೂರು ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ೧೭-೯-೫೦ರಲ್ಲಿ, ಶ್ರೀ ರಾಮಚಂದ್ರಯ್ಯನವರ ಅಧ್ಯಕ್ಷತೆಯಲ್ಲಿ ಸರ್. ಎಂ. ವಿ. ಯವರ ೯೦ ನೇ ಜನ್ಮ ದಿನಾಚರಣೆಯನ್ನು ವಿಜೃಂಭಣೆಯಿಂದ ನೆರವೇರಿಸಿದರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು, ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಫ್ಯಾಸಿಸ್ಟರೊಂದಿಗೆ ಹೊಡೆದಾಡುವರು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦—೯—೧೯೫೦ನೇ ಬುಧವಾರ [ಸಂಚಿಕೆ ೨೦

ಕಾಂಗ್ರೆಸ್ಸಿನ ಮುಖ್ಯ ಪ್ರಶ್ನೆಗಳನ್ನು ಶ್ರೀ ಪುರುಷೋತ್ತಮದಾಸ್ ಟಾಂಡನ್ನರವರ ನೇತೃತ್ವದಲ್ಲಿ ತೀರ್ಮಾನಿಸಿರುತ್ತದೆಯಷ್ಟೆ. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶ್ರೀ ಆಚಾರ್ಯ ಕೃಪಲಾನಿಯವರ ಗುಂಪಿನವರು ಗಾಂಧೀನಗರದಲ್ಲಿ ತಮ್ಮ ಭವಿಷ್ಯ ನೀತಿಯೇನೆಂಬುದನ್ನು ನಿರ್ಧರಿಸಲು ಸಭೆ ಸೇರಿದ್ದರು. ಕಾಂಗ್ರೆಸ್ಸಿನಲ್ಲಿ ಫ್ಯಾಸಿಸ್ಟ್ ಮನೋಭಾವ ಬೆಳೆಯುತ್ತಿದೆಯೆಂದು ಶ್ರೀ ಆಚಾರ್ಯರು ಆರೋಪಿಸಿದ್ದರು. ಇವರ ಅನುಯಾಯಿಗಳು ಇದನ್ನೆಲ್ಲಾ ಕೂಲಂಕುಷವಾಗಿ ಚರ್ಚಿಸಿ ಕಾಂಗ್ರೆಸ್ಸಿನಲ್ಲಿಯೇ ಒಂದು ವಿರೋಧ ಪಕ್ಷವನ್ನು ಸ್ಥಾಪಿಸುವ ಸಾಧಕ ಬಾಧಕಗಳನ್ನು ವಿಮರ್ಶಿಸಿದರೆಂದು ತಿಳಿದುಬರುತ್ತದೆ.

ಮಹಾರಾಜಾ ಕಾಲೇಜು ಸಂಘದ ಚುನಾವಣೆ

ಕಳೆದ ೪ನೇ ತಾರೀಖು ನಡೆದ ಮಹಾರಾಜಾ ಕಾಲೇಜು ಸಂಘದ ಚುನಾವಣೆಯಲ್ಲಿ ಶ್ರೀ ಎಸ್. ಸಿದ್ದಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಕೆ. ಎಲ್. ಶೇಷಗಿರಿರಾಯರು ಕಾರ್ಯದರ್ಶಿಗಳಾಗಿ ಚುನಾಯಿತರಾದರು.

ಕೊರಿಯಾ ಯುದ್ಧದಲ್ಲಿ ಸಂಧಾನವೇ ?

ಇಂಛಾನ್‌ನ ಬಳಿ ಮೆಕಾರ್ಥರ ಸೈನ್ಯವು ಮುಂದುವರಿದು ಬರುತ್ತಲಿರುವಾಗಿನಿಂದ, ಉತ್ತರ ಕೊರಿಯನ್ನರು ಸಂಧಾನಕ್ಕೆ ಬರುವ ಸೂಚನೆಗಳು ಕಾಣಬರುತ್ತಲಿವೆಯೆಂದು ಸುದ್ದಿ ಹರಡಿದೆ.

ರೈಲನ್ನು ಉರುಳಿಸಲು ಯತ್ನ

ನಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ ಬಿಹಾರ ಮತ್ತು ಬಂಗಾಳದ ಸದಸ್ಯರು ಹೋಗುತ್ತಲಿದ್ದ ಬೊಂಬಾಯಿ-ಮೇಲ್ ಗಾಡಿಯನ್ನು ಬಿಹಾರ ಉತ್ತರ ಪ್ರದೇಶ ಗಡಿಯಲ್ಲಿ ಕರಮನಾಶ ಸ್ಟೇಷನ್ನಿನ ಬಳಿ ಉರುಳಿಸಲು ಯಾರೋ [illegible] ರೈಲ್ವೆ ಕಂಬಿಗಳನ್ನು ತೆಗೆದು ಹಾಕಿದ್ದರು. ರೈಲಿನ ಡ್ರೈವರು ಜಾಗರೂಕತೆಯಿಂದ ರೈಲನ್ನು ನಿಲ್ಲಿಸಲಾಗಿ ಯಾವ ಅಪಘಾತವೂ ನಡೆಯಲಿಲ್ಲ. ಅವರ ಬಳಿ ಸಿಡಿಯದೆಯಿದ್ದ ಒಂದು ಬಾಂಬು ಬಿದ್ದಿತ್ತು.

ಮೈಸೂರು ಜಿಲ್ಲಾ ಬೋರ್ಡ್ ಮೀಟಿಂಗ್

ಮೈಸೂರು ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯು ಇದೇ ಮಾಹೆ ೨೯ನೇ ತಾರೀಖು ಶುಕ್ರವಾರ ಮಧ್ಯಾಹ್ನ ೧ ಘಂಟೆಗೆ ನಡೆಯುವುದು.

ನದಿಗಳ ಪ್ರವಾಹ

ಜಲಂಧರ್ ಗುರ್ದಾಸಪುರ ಮುಂತಾದ ಪ್ರದೇಶಗಳಲ್ಲಿ ನರ್ಮದಾ, ಸಬರಮತಿ, ವಿಶ್ವಾಮಿತ್ರ ಮುಂತಾದ ನದಿಗಳಲ್ಲಿ ಪ್ರವಾಹವು ವಿಶೇಷವಾಗಿ ಬಂದು ಅಕ್ಕಪಕ್ಕದಲ್ಲಿರುವ ಹಳ್ಳಿಗಳಲ್ಲಿ ಸಾವಿರಾರು ಮನೆಗಳು ಬಿದ್ದುಹೋಗಿ, ನೀರು ತುಂಬಿಕೊಂಡು ಜನರು ವಿಶೇಷ ತೊಂದರೆಗೀಡಾಗಿದ್ದಾರೆ. ಅನೇಕ ದನಕರುಗಳೂ, ಫಸಲೂ ನಾಶವಾಗಿಹೋಗುತ್ತಲಿವೆ.

ಕಾಶ್ಮೀರದಲ್ಲಿ ಜನಾಭಿಪ್ರಾಯ ಅವಶ್ಯಕ

ಕಾಶ್ಮೀರ ಸಂಧಾನವು ಈಗ ವಿಫಲವಾದುದರಿಂದ, ಕಾಶ್ಮೀರದಲ್ಲಿ ನಿಷ್ಪಕ್ಷಪಾತವಾದ ಪ್ರಜಾಭಿಪ್ರಾಯವನ್ನು ವಿಶ್ವಸಂಸ್ಥೆಯೇ ಪಡೆಯಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಯಾರು ಈ ಪ್ರಜಾಭಿಪ್ರಾಯವನ್ನು ತೆಗೆದುಕೊಳ್ಳುವ ಕಾರ್ಯಕ್ಕೆ ಅಡ್ಡಿ ಬರುವರೋ ಅವರಿಗೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಬೇಕು. ಪ್ರಪಂಚ ಶಾಂತಿ ಸ್ಥಾಪನೆಯನ್ನು ವಿಶ್ವಸಂಸ್ಥೆಯು ಮಾಡಬೇಕಿದ್ದರೆ ಸದಸ್ಯರಾಗಿರುವವರಿಗೆ ಸಂಸ್ಥೆಯಲ್ಲಿ ನಂಬಿಕೆಯು ಕಡಮೆಯಾಗುವುದಲ್ಲದೆ ಸಂಸ್ಥೆಯ ಧ್ಯೇಯಗಳು ಮಣ್ಣುಪಾಲಾಗುವುವು. ಕಾಶ್ಮೀರವು ಸ್ವತಂತ್ರವಾಗುವವರೆಗೂ ಪಾಕಿಸ್ತಾನಕ್ಕೆ ಸ್ವಪರಿಪೂರ್ಣವಾಗಿರುವುದಕ್ಕಾಗುವುದಿಲ್ಲ. ನಾವು ಯಾವ ರೀತಿ ಸ್ವಾತಂತ್ರ್ಯವನ್ನು ಗಳಿಸಿದೆವೋ ಅದೇ ರೀತಿ ಕಾಶ್ಮೀರಿಗಳೂ ತಮ್ಮ ಸ್ವಾತಂತ್ರ್ಯವನ್ನು ಪಡೆಯುವವರೆಗೂ ನಮ್ಮ ಹೋರಾಟವು ನಿಲ್ಲುವುದಿಲ್ಲ. ತಮ್ಮ ಭವಿಷ್ಯವನ್ನು ತಾವೇ ನಿರ್ಧಾರಮಾಡುವುದಕ್ಕೆ ಕಾಶ್ಮೀರಿಗಳಿಗೆ ಸರ್ವ ಸ್ವಾತಂತ್ರ್ಯವಿದೆ. ಅವರು ಪಾಕಿಸ್ತಾನಕ್ಕೆ ಸೇರಬೇಕೇ ಅಥವಾ ಭಾರತಕ್ಕೆ ಸೇರಬೇಕೆ ಎಂಬುದನ್ನು ಸ್ವತಂತ್ರವಾಗಿ ಅವರೇ ನಿರ್ಧರಿಸಬೇಕು. ಆಗ ನಾವು ಒಪ್ಪುವೆವು ಎಂದು ಪಾಕಿಸ್ತಾನ ಗೌರ್ನರ್ ಜನರಲ್ ಖ್ವಾಜಾ ನಾಜಿಮುದ್ದೀನರವರು ಹೇಳಿರುವರು.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ
~
ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

❂ ಕೃಷ್ಣರಾಜಪೇಟೆ ಅಂಗಡಿ ಬೀದಿಯಲ್ಲಿರುವ ಸಿದ್ದಲಿಂಗಯ್ಯ ಎಂಬುವರು ತಮ್ಮ ಅಂಗಡಿಯಲ್ಲಿ ಸರ್ಕಾರದಿಂದ ವಿಧಾಯಕವಾಗದೆ ಇರುವ ಅಳತೆ ಸಾಧನಗಳಲ್ಲಿ ಮತ್ತು ಕಂಡೆಮ್ಡ್ ಸೇರಿನಲ್ಲೂ ಅಳತೆ ಮಾಡುತ್ತಿದ್ದರೆಂದು ಅಳತೆ ತೂಕದ ಇನ್‌ಸ್ಪೆಕ್ಟರಾದ ಶ್ರೀ. ಟಿ. ಕೆ ಸುಬ್ಬಾರಾಮರಾಯರು ಶ್ರೀರಂಗಪಟ್ಟಣದಲ್ಲಿ ಫಸ್ಟ್‌ಕ್ಲಾಸ್ ನ್ಯಾಯಾಧೀಶರಲ್ಲಿ ಮೊಕದ್ದಮೆ ಹೂಡಿದ್ದರು. ನ್ಯಾಯಾಧೀಶರು ಸಿದ್ದಲಿಂಗಯ್ಯನವರಿಗೆ ೨೦ ರೂಪಾಯಿ ಜುಲ್ಮಾನೆ ತಪ್ಪಿದಲ್ಲಿ ೧ ತಿಂಗಳು ಸಾದಾ ಸಜ ವಿಧಿಸಿರುವರು.

ಕಾರ್ಯಕಾರೀ ಸಮಿತಿಗೆ ಪಂ॥ ನೆಹರೂ ಇಲ್ಲ

ನೂತನವಾಗಿ ರಚಿಸಲಾಗಿರುವ ಅ. ಭಾ. ಕಾಂ. ಕಾರ್ಯಕಾರಿ ಸಮಿತಿಗೆ ಪ್ರಧಾನಿ ಪಂ. ನೆಹರೂ, ಮೌಲಾನಾ ಆಜಾದ್ ಮಿ॥ ರಫೀ ಅಹಮದ್ ಕಿದ್ವಾಯಿ, ಶ್ರೀ ಹರೇಕೃಷ್ಣ ಮೆಹ್ತಾಬರವರು ಸೇರುವುದಿಲ್ಲವೆಂದು ತಿಳಿಯಬರುತ್ತದೆ.

ಮೈಸೂರಿನಲ್ಲಿ ಹಿಂದೀ ಭಾಷಾ ಪ್ರಚಾರಕ್ಕೆ

ಅಲಹಾಬಾದ್ ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀ ಚಂದ್ರಬಲಿ ಪಾಂಡೇಯವರ ಮುಖಂಡತ್ವದಲ್ಲಿ ಒಂದು ನಿಯೋಗವು ದಕ್ಷಿಣ ಭಾರತದಲ್ಲಿ ಹಿಂದೀ ಪ್ರಚಾರಮಾಡುವುದಕ್ಕಾಗಿ ಬೆಜವಾಡ, ಮದರಾಸು, ಬೆಂಗಳೂರು, ಮೈಸೂರು ಮುಂತಾದ ಪ್ರದೇಶಗಳಿಗೆ ಭೇಟಿ ಕೊಡುವರು. ಈ ನಿಯೋಗವು ಸೆ. ೨೭ರಲ್ಲಿ ಕಾಶಿಯಿಂದ ಹೊರಡುವುದು.

ಅನುಮತಿಯಿಲ್ಲ

ಮದರಾಸಿನ ಕೆಲವು ವರ್ತಕರು ಪರದೇಶಗಳಿಂದ ಅಕ್ಕಿಯನ್ನು ತರಿಸಲು ರಹದಾರಿ ಬೇಕೆಂದು ಸರ್ಕಾರವನ್ನು ಕೋರಿದ್ದರು. ಈ ಕೋರಿಕೆಯು ಕೇಂದ್ರಕ್ಕೆ ಹೋಗಲಾಗಿ, ಪ್ರಸ್ತುತದಲ್ಲಿ ಹೊರ ದೇಶಗಳಿಂದ ಭಾರತಕ್ಕೆ ಅಕ್ಕಿ ತರಿಸುವುದರಲ್ಲಿ ತಾವು ಆಸಕ್ತರಾಗಿಲ್ಲ. ದೇಶಕ್ಕೆ ೧೯೫೦ರಲ್ಲಿ ಬೇಕಾಗುವಷ್ಟು ಅಕ್ಕಿಯನ್ನು ಕೊಳ್ಳಲು ಈಗಾಗಲೇ ತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆಯೆಂದು ಕೇಂದ್ರ ಸರ್ಕಾರವು ತಿಳಿಸಿದೆ

ಅಧ್ಯಕ್ಷರಲ್ಲಿ ಮನವಿ

ಅಖಿಲ ಭಾರತ ಕಾಂಗ್ರೆಸ್ಸಿಗೆ ಫ್ರೆಂಚ್ ಇಂಡಿಯಾದಿಂದ ಹೋಗಿರುವ ಪ್ರತಿನಿಧಿಗಳು ಕಾಂಗ್ರೆಸ್ಸು ಅಧ್ಯಕ್ಷರಿಗೆ ಒಂದು ವರದಿಯನ್ನು ಸಲ್ಲಿಸಿ, ಅಲ್ಲಿಯ ಸರ್ಕಾರದ ಈಗಿನ ಪ್ರಭಾವದಿಂದ ಜನಾಭಿಪ್ರಾಯ ಸಂಗ್ರಹಣೆಯು ನ್ಯಾಯವಾಗಿ ನಡೆಯುವುದಿಲ್ಲ. ಆದರೂ ಫ್ರೆಂಚ್ ಇಂಡಿಯಾ ಪ್ರಾಂತ್ಯವು ಭಾರತದ ಅಂಗವೇ ಆಗಿರುವುದರಿಂದ ಭಾರತಕ್ಕೆ ನಾವು ಸೇರಲೇಬೇಕು ಅದಕ್ಕೆ ತಕ್ಕ ಕಾರ್ಯಕ್ರಮ ನಡೆಸಬೇಕೆಂದು ತಿಳಿಸಿರುವರು

❂ ಮೈಸೂರು ಗೌರ್ನಮೆಂಟ್ ಸಿಲ್ಕ್ ಫ್ಯಾಕ್ಟರಿ ಲೇಬರ್ ಅಸೋಸಿಯೇಷನ್ ಅಸ್ಸಾಂ ನಿಧಿಗೆ ರೂ. ೨೩೪-೯-೦ ಯನ್ನು ವಸೂಲು ಮಾಡಿದ್ದಾರೆ. ಕೈಗಾರಿಕಾ ಮಂತ್ರಿಗಳ ಮೂಲಕ ಆ ಮೊಬಲಗನ್ನು ಅಸ್ಸಾಮಿಗೆ ತಲುಪಿಸುವ ವ್ಯವಸ್ಥೆ ಮಾಡಿದ್ದಾರೆ.

★ ಸಿರ್ಲೋಜೈವ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಪಾನಿವಾಲಾ ಮಹರಾಜ್

ಭೂಗರ್ಭದಲ್ಲಡಗಿರುವದನ್ನು ಕಾಣುವ ದಿವ್ಯದೃಷ್ಟಿ

೫೦ ವಯಸ್ಸಿನ ಶ್ರೀ ಜೀವರಾಂವ್ಯಾಸರ ಈ ದಿವ್ಯ ದೃಷ್ಟಿಯನ್ನು ಕಂಡು (ಭೂಗರ್ಭದಲ್ಲಿ ೧ ಮೈಲಿ ಕೆಳಗಿನವರೆಗೂ ಇರುವ ಜಲ ಪ್ರದೇಶವನ್ನು ಕಂಡು ತೋರಿಸುವ ಶಕ್ತಿ) ಅನೇಕ ವಿಜ್ಞಾನಿಗಳೂ ಸಹ ಆಶ್ಚರ್ಯಚಕಿತರಾಗಿದ್ದಾರೆ. ಈಗಾಗಲೇ ಸುಮಾರು ೨೫ ಕಡೆಯಲ್ಲಿ, ನೀರಿಲ್ಲದೆ ಬೆಂಗಾಡಾಗಿದ್ದ ಪ್ರದೇಶದಲ್ಲಿ, ತಮ್ಮ ದಿವ್ಯ ದೃಷ್ಟಿಯಿಂದ ಭೂಮಿಯ ಕೆಳಗೆ ಹರಿಯುತ್ತಲಿದ್ದ ಜಲಸ್ಥಾನವನ್ನು ಕಂಡುಹಿಡಿದು "ಟ್ಯೂಬ್" ಭಾವಿಗಳನ್ನು ತೋಡಿಸಲಾಗಿದೆ. ಈ ಅದ್ಭುತ ಶಕ್ತಿಯಿಂದ ಅನೇಕ ಹಳ್ಳಿಗರಿಗೆ ನೀರಿನ ಅಭಾವ ನಿವಾರಣೆಯಾಗಿ, ಬಹು ಸಹಾಯಕವಾಗಿದೆ. ಈ ಯೋಗಿಗೆ ಮತ್ತಾರ ಸಹಾಯಕರ ಅವಶ್ಯಕತೆಯೇ ಇಲ್ಲ.

ಅವರು ಜಲ ಸ್ಥಳವನ್ನು ಕಂಡು ಹಿಡಿಯುವ ಬಗೆಯು ಈ ರೀತಿಯಾಗಿದೆ. ಕೆಲಸಮಯ ಆ ಪ್ರದೇಶದ ನಕ್ಷೆಯ ಮೇಲೆ ತಮ್ಮ ಅಂಗೈಯಾಡಿಸುತ್ತಾ, ತಮ್ಮ ಕೈಬೆರಳನ್ನು ನಿರ್ದಿಷ್ಟ ಸ್ಥಾನದಲ್ಲಿಟ್ಟು ತೋರಿಕೊಡುವರು ಅವರು ಕೆಲವು ಸಮಯ ಕಾರಿನಲ್ಲಿ ಸಂಚಾರ ಮಾಡುತ್ತಾ ತಮ್ಮ ಅಂತಃ ಚಕ್ಷುವಿನ ಮುಂದೆ ಕಾರ್ಮೋಡಕವಿದಂತಾಗಿ ಭೂಮಿಯಡಿ ಇರುವ ನೀರು ಗೋಚರವಾಗುತ್ತದೆ ತಕ್ಷಣ ಆ ಪ್ರದೇಶದಲ್ಲಿ ನಿಂತು ಸ್ಥಾನ ನಿರ್ಣಯಿಸುತ್ತಾರೆ. ಭಾವಿತೋಡಿದರೆ ಉಪ್ಪು ನೀರು ಸಿಗುವುದೇ, ಸಿಹಿನೀರು ದೊರಕುವುದೇ ಎಷ್ಟು ಸಹಸ್ರ ಗ್ಯಾಲನ್ ದೊರಕುವುದು, ಮುಂತಾದ ವಿಷಯಗಳನ್ನು ಪೂರ್ವೀ ಭಾವಿಯಾಗಿ ನಿರ್ಣಯಿಸಿ ತಮ್ಮ ಸ್ಪಷ್ಟೋಕ್ತಿ ನುಡಿಯುತ್ತಾರೆ. ಇವರ ಬಾಲ್ಯಜೀವನದ ಅರಿವು ಯಾರಿಗೂ ಇಲ್ಲ. ಇವರು ಗಿರ್‌ನಾರ್ ಅರಣ್ಯದಲ್ಲಿ ತಪಸ್ಸುಮಾಡಿ ಸಿದ್ಧಿಗಳಿಸಿನರೆಂದು ತಿಳಿಯಬರುತ್ತದೆ

ಇವರ ವಿಷಯದಲ್ಲಿ ಅನೇಕ ಕಟ್ಟುಕಥೆಗಳು ಪ್ರಚಲಿತವಾಗಿದೆ. ಅವಲ್ಲಿ ಅನೇಕವು ನಿರಾಧಾರವಾದುವು. ಕೆಲವರು ಇವರಿಗೆ ಸರ್ಕಾರವು ಸಹಸ್ರಾರು ರೂಪಾಯಿ ಸಂಬಳ ಕೊಡುತ್ತಿದೆಯೆಂದು ಹೇಳುತ್ತಲಿದ್ದಾರೆ. ಇವರ ಸಂಬಳ ತಿಂಗಳಿಗೆ ೫೦೦ ರೂ. ಮಾತ್ರ. ಸೌರಾಷ್ಟ್ರದಲ್ಲಿರುವ ಅವರ ಆಶ್ರಮ ನಡೆಯಿಸಲು ಅದನ್ನು ವಿನಿಯೋಗಿಸುತ್ತಿರುತ್ತಾರೆ. ಇವರು ಸಸ್ಯಾಹಾರಿಗಳು, ಆಚಾರವಂತರು ಮತ್ತು ದೈವ ಭಕ್ತರು.

೧೯೪೯ ನೇ ಇಸ್ವಿ ಡಿಸೆಂಬರಿನಲ್ಲಿ ಸ್ಥಾಪಿತವಾದ ರಾಜಾಸ್ಥಾನದ ಭೂಗರ್ಭ ನೀರಿನ ಬೋರ್ಡಿನ ಸದಸ್ಯರಾಗಿದ್ದಾರೆ. ಅದಕ್ಕೆ ಮುಂಚೆ ಸೌರಾಷ್ಟ್ರ ಸರ್ಕಾರವು ಇವರನ್ನು ನೇಮಕಮಾಡಿಕೊಂಡಿತ್ತು.

ಇವರು ಭೂಗರ್ಭಾಂತರದಲ್ಲಿರುವ ನೀರನ್ನೊಂದನ್ನೇ ಅಲ್ಲದೆ ಇತರ ಖನಿಜ ಪದಾರ್ಥಗಳನ್ನು ತೋರಿಸಬಲ್ಲರೆಂದು ಅವರ ಅನುಯಾಯಿಗಳು ಹೇಳುತ್ತಾರೆ. ಆದರೆ ಆ ವಿಚಾರದಲ್ಲಿನ್ನೂ ಯಾರೂ ಪರೀಕ್ಷೆ ನಡೆಸಿಲ್ಲವೆಂದು ತಿಳಿದುಬರುತ್ತದೆ.

ಒಟ್ಟಿನಲ್ಲಿ ಇವರ ಈ ದಿವ್ಯದೃಷ್ಟಿಯ ಶಕ್ತಿಯನ್ನು ಹೀಯಾಳಿಸುವವರೂ ಸಹ ಅವರ ಫಲಕಂಡನಂತರ ವಿಸ್ಮಿತರಾಗಬೇಕಾಗಿದೆ. ವಿಜ್ಞಾನಕ್ಕೂ ಸಹ ಇವರ ಈ ಯೋಗಸಿದ್ಧಿಯನ್ನು ಒಡೆದು ತಿಳಿಯಲು ಅಸಾಧ್ಯವಾಗಿದೆ.

ಬ್ರಿಟಿಷ್ ಪುಸ್ತಕ ಮತ್ತು ಪತ್ರಿಕಾ ಪ್ರದರ್ಶನ

ಭಾರತ, ಪಾಕಿಸ್ತಾನ ಮತ್ತು ಸಿಲೋನ್ ದೇಶಗಳಲ್ಲಿ ಸಂಚಾರ ಮಾಡಿ ಆಧುನಿಕ ಬ್ರಿಟಿಷ್ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಪ್ರದರ್ಶಿಸುವ ಸಲುವಾಗಿ, ಭಾರತ ಮತ್ತು ಪಾಕಿಸ್ತಾನಗಳಲ್ಲಿರುವ ಬ್ರಿಟಿಷ್ ಕೌನ್ಸಿಲ್‌ಗಳಿಗೆ ಸಹಸ್ರ ಪುಸ್ತಕಗಳು ಮತ್ತು ೨೫೦ ಪತ್ರಿಕೆಗಳು ಬಂದಿವೆ.

ಈ ಪ್ರದರ್ಶನವು ದೆಹಲಿಯಲ್ಲಿ ಅಕ್ಟೋಬರ್ ೧೬ ರಿಂದ ಆರಂಭವಾಗಿ ಅಲ್ಲಿಯೇ ಒಂದುವಾರಕಾಲ ಜರುಗಲಿದೆ. ನಂತರ ಅಲ್ಲಿಂದ ಹೊರಟು ಬೊಂಬಾಯಿ, ನಾಗಪುರದಲ್ಲಿ ನವಂಬರ್ ತಿಂಗಳಿನಲ್ಲಿಯೂ, ಡಿಸೆಂಬರಿನಲ್ಲಿ ಹೈದರಾಬಾದಿನಲ್ಲಿಯೂ ಮತ್ತು ಫೆಬ್ರವರಿ ೧೯೫೧ ರವರೆಗೆ ಮದರಾಸು ಮತ್ತು ಅದರ ನೆರೆಯಪ್ರದೇಶಗಳಲ್ಲಿಯೂ ಸಂಚರಿಸಿ ಪ್ರದರ್ಶನ ನಡಿಸಲು ಏರ್ಪಾಟುಗಳಾಗಿವೆ. ಬೆಂಗಳೂರು, ಮೈಸೂರು, ಮಧುರೆ, ಅನಂತಶಯನ ಮತ್ತು ಪಾಲ್ಘೈರ್ ನಗರಗಳಿಗೂ ಈ ಪ್ರದರ್ಶನವು ಭೇಟಿ ಕೊಡುವ ಸಂಭವವಿದೆ.

೧೯೫೧ ನೇ ಫೆಬ್ರವರಿ ಮಧ್ಯಭಾಗದಿಂದ ಏಪ್ರಿಲ್ ಅಂತ್ಯದವರೆಗೆ ಕಲ್ಕತ್ತಾನಲ್ಲಿದ್ದು, ಪಾಟ್ನಾ, ಕಟಕ್, ಗೌಹತಿ ಮುಂತಾದ ಪ್ರದೇಶಗಳಿಗೆ ಭೇಟಿ ಕೊಡುವುದು. ಅಲ್ಲಿಂದ ಆಗ್ರಾಕ್ಕೆ ಬಂದು, ಪುನಃ ಹೊಸ ಪುಸ್ತಕಗಳನ್ನು ಭರ್ತಿಮಾಡಿಕೊಂಡು, ಸಿಮ್ಲಾ, ಮಸ್ಸೂರಿ, ಡೆಹರಾಡೂನ್‌ಗಳಿಗೆ ಭೇಟಿ ಕೊಡುವುದು. ಜುಲೈ ತಿಂಗಳಲ್ಲಿ ಲಕ್ನೋ, ಕಾಶಿ, ಮತ್ತು ಅಲಹಾಬಾದ್ ವಿಶ್ವವಿದ್ಯಾನಿಲಯ ಕೇಂದ್ರಗಳಲ್ಲಿ ಪ್ರದರ್ಶನ ನಡೆಸುವುದು.

ಈ ಪುಸ್ತಕ ಪ್ರದರ್ಶನದಲ್ಲಿ, ಕಟ್ಟುಕಥೆ, ಕಾದಂಬರಿ, ಮಕ್ಕಳಿಗಾಗಿಯೇ ರಚಿಸಿದ ಪುಸ್ತಕಗಳು, ಕಲೆ, ಶಿಲ್ಪ, ನಗರ ನಿರ್ಮಾಣ ಮತ್ತು ರಚನಾಯೋಜನೆ, ಭೌತಿಕ, ರಸಾಯನಿಕ ಶಾಸ್ತ್ರಗಳು, ಗಣಿತ, ವೈದ್ಯ, ಜೀವನ ಚರಿತ್ರೆ, ನಾಟಕ ಮತ್ತು ಚಲನಚಿತ್ರ, ಸಾಹಿತ್ಯ ವಿಮರ್ಶೆ ಮತ್ತು ಲಲಿತ ಪತ್ರಗಳ ಸಂಗ್ರಹ, ಅರ್ಥಶಾಸ್ತ್ರ, ಇಂಜಿನೀಯರಿಂಗ್, ಆಟಗಳು, ಮತ್ತಿರ ವಿಷಯಗಳ ಪುಸ್ತಕಗಳಿರುತ್ತವೆ.

ಇದಲ್ಲದ ಕವಿಗಳ, ಗ್ರಂಥಕರ್ತರ, ಚರಿತ್ರಕಾರರ ಭಾವಚಿತ್ರಗಳೂ, ಪ್ರದರ್ಶನವನ್ನು ತಿಳಿಯಲು ಸಹಕಾರಿಯಾಗುವ ಮತ್ತಿತರ ಚಿತ್ರಗಳೂ ಇರುತ್ತವೆ.

ಪಟಾಸು-ಬೆಳ್ಳುಳ್ಳಿ ಪಟಾಸು

ಸಿಡಿಮದ್ದು ತಯಾರಿಸುವವರು ಮತ್ತು ಅದನ್ನು ಮಾರುವವರು ತಮ್ಮ ಮನೆಯಲ್ಲಿಯೇ ಸಿಡಿಯುವ ಪಟಾಕಿಗಳನ್ನು ತಯಾರಿಸುತ್ತಿರುತ್ತಾರೆ. ಇದನ್ನು ತಯಾರಿಸುವಾಗ ಅನೇಕ ಅಪಾಯಗಳು ಉಂಟಾಗುತ್ತವೆ. ಇದನ್ನು ತಯಾರಿಸಲು ಲೈಸೆನ್ಸ್ ಪಡೆದಿದ್ದಂತಹವರು ತಮ್ಮ ಹೆಸರನ್ನು ಹತ್ತಿರದ ಪೋಲೀಸ್ ಸ್ಟೇಷನ್ನಿಗೆ ಕೊಡಬೇಕು. ತಮ್ಮ ಹೆಸರನ್ನು ಕೊಡದೆ ಇರುವವರು ಸಿಕ್ಕಿಬಿದ್ದ ಪಕ್ಷದಲ್ಲಿ ಅಂಥಹವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು ಪಟಾಸು ಮತ್ತು ಬೆಳ್ಳುಳ್ಳಿ ಪಟಾಸನ್ನು ಯಾರೂ ತಯಾರಿಸಕೂಡದು ಎಂದು ಸರ್ಕಾರಿ ಪ್ರಕಟಣೆ ಹೊರಟಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೨೧ ಗುರುವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಮಧುರೆ ಮಣಿ ಅಯ್ಯರ್ (ರಿ) ೭-೧೫ ಚ. ಸೂರಯ್ಯ (ಪಿಟೀಲು) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಶಂಕರಮೂರ್ತಿ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ದಿಲ್‌ರೂಬ ೨-೦ ನಿಮ್ಮ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ

ಸಂಜೆ ೫-೩೦ ಚ. ಸೂರಯ್ಯ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಪಾಶ್ಚಿಮಾತ್ಯ ಸಂಗೀತ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನೆ ೭-೫ ಹಿಂದೀ ಗೀತಾ (ರಿ) ೭-೧೫ ಕ್ಲಾರಿಯೋನೇಟ್ (ಆರ್. ನಾಗೇಂದ್ರಪ್ಪ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕನ್ನಡ ಪದ್ಯಗಳು (ಎಚ್. ಕೆ. ರಾಮಸ್ವಾಮಿ) ೮-೧೫ ತಾಳವಾದ್ಯ ೮-೩೦ ಸಂಗೀತ (ಶಂಕರಮೂರ್ತಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ದುನಿಯ ಚಿತ್ರ ಕಥೆ (ರಿ) ೧೦-೦ ಮುಕ್ತಾಯ.

ಕಾಂಗ್ರೆಸ್ ಪೂರ್ಣಾಧಿವೇಶನ

ನಾಸಿಕದಲ್ಲಿ ಕಾಂಗ್ರೆಸ್ ಪೂರ್ಣಾಧಿವೇಶನವು ಇಂದು ಮಧ್ಯಾಹ್ನ ೨॥ ಗಂಟೆಯಿಂದ ೬॥ ಗಂಟೆಯವರೆಗೆ ನಡೆಯುವುದು.

ವಿಶ್ವಸಂಸ್ಥೆಯಲ್ಲಿ ನಿರಾಕರಣೆ

ವಿಶ್ವಸಂಸ್ಥೆಯಲ್ಲಿ ಚೀಣಾ ಪ್ರಜಾ ಸರ್ಕಾರಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ಭಾರತ ಪ್ರತಿನಿಧಿಯು ತಂದಿದ್ದ ನಿರ್ಣಯವು ನಿನ್ನೆ ನಡೆದ ಸಭೆಯಲ್ಲಿ ೧೬-೩೩ ಓಟುಗಳಿಂದ ತಿರಸ್ಕೃತವಾಯಿತು. ಆದರೆ ಈ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂದು ತೀರ್ಮಾನವಾಯಿತು.

ಡಾ॥ ಮಲೋಕಾರವರ ಆರ್ಭಟ

ಆಫ್ರಿಕಾದ ಭಾರತೀಯ ಕಾಂಗ್ರೆಸ್ ಸಮ್ಮೇಳನದಲ್ಲಿ ಡಾ॥ ಮಲೋಕಾರವರು ಮಾತನಾಡುತ್ತಾ ಭಾರತೀಯರು ಭಾರತಕ್ಕೆ ತೆರಳಿದ್ದಾರೆ ಯುರೋಪಿಯನ್ನರು ಯುರೋಪಿಗೆ ತೆರಳಬೇಕು ಎಂದೂ ಆಫ್ರಿಕನ್ನರು ಮಧ್ಯ ಆಫ್ರಿಕಾಕ್ಕೆ ತೆರಳಬೇಕೆಂತಲೂ ಹೇಳುತ್ತಾ ಈ ವರ್ಣಭೇದದ ನೀತಿ ಅಪಾಯಕರವೆಂದೂ ಹಲವು ಸ್ವಾರ್ಥಸಾಧಕರು ಈ ವಿಷಬೀಜಬಿತ್ತಿದರೆಂದು ತಿಳಿಸಿದರು.

● ಬ್ರೈಟ್ ಕಾಲೇಜ್ ಆಫ್ ಕಾಮರ್ಸ್ ಸಂಸ್ಥೆಯ (ಸಿಲ್ವರ್ ಜ್ಯೂಬಲಿ) ರಜತಮಹೋತ್ಸವವನ್ನು ಬರುವ ಡಿಸೆಂಬರ್ ಮಾಹೆಯಲ್ಲಿ ಆಚರಿಸಬೇಕೆಂದು ಕಮಿಟಿಯವರು ತೀರ್ಮಾನಿಸಿರುವುದರಿಂದ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ತಮ್ಮ ವಿಳಾಸವನ್ನು ತಿಳಿಸಬೇಕಾಗಿ ಕಾಲೇಜಿನ ಪ್ರಿನ್ಸಿಪಾಲರು ಕೋರುತ್ತಾರೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಚ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಹತೋಟಿಗಳು ಮುಂದುವರಿಯಬೇಕು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE.
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೧—೯—೧೯೫೦ನೇ ಗುರುವಾರ [ಸಂಚಿಕೆ ೬೦

ಗಾಂಧೀ ನಗರದಲ್ಲಿ ನಡೆದ ವಿಷಯ ನಿಯಾಮಕ ಸಮಿತಿಯಲ್ಲಿ ದೇಶದ ಆರ್ಥಿಕ ಕಾರ್ಯಕ್ರಮ ಮತ್ತು ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಪ್ರಗತಿಗೆ ವೈಜ್ಞಾನಿಕ ಸಂಶೋಧನೆ ಅವಶ್ಯಕವೆಂಬ ನಿರ್ಣಯಗಳು ಅಂಗೀಕಾರವಾದವು. ಅಭಾವ ಪರಿಸ್ಥಿತಿ ಇರುವವರೆಗೂ ಅವಶ್ಯ ಸಾಮಾನುಗಳ ಮೇಲಿನ ಹತೋಟಿ ಮುಂದುವರಿಯಬೇಕು. ದೇಶದಲ್ಲಿ ಆಹಾರ ಸ್ವಯಂ ಪರಿಪೂರ್ಣತೆ, ಪದಾರ್ಥಗಳ ಬೆಲೆಯ ಮಟ್ಟ ವ್ಯವಸ್ಥಿತ ರೀತಿಯಲ್ಲಿ ಕಡಿಮೆಮಾಡುವುದು, ಕೈಗಾರಿಕೆಗೆ ಬೇಕಾದ ಸಾಕಷ್ಟು ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುವುದು, ವಿದ್ಯುಚ್ಛಕ್ತಿ ಮತ್ತು ನೀರಾವರೀ ಅಭಿವೃದ್ಧಿಗೆ ಬೇಕಾದ ಸೌಲಭ್ಯಗಳನ್ನು ಇರುವ ಉತ್ಪನ್ನ ಮೂಲಗಳಿಂದಲೇ ವ್ಯವಸ್ಥೆಯಾಗಬೇಕು ಎಂಬ ವಿಚಾರಗಳಲ್ಲಿ ಜರೂರು ಕ್ರಮ ಕೈಗೊಳ್ಳಬೇಕೆಂಬ ನಿರ್ಣಯವು ಅಂಗೀಕಾರವಾಯಿತು.

ಭಾರತವು ಕೋಮುವಾರು ರಾಷ್ಟ್ರವಲ್ಲ

ಭಾರತ ರಾಜ್ಯಾಂಗವು ಯಾವ ವರ್ಣಭೇದದ ಆಧಾರದ ಮೇಲೆ ರಚಿತವಾಗಿಲ್ಲ. ಮತ ಜಾತಿ ಭೇದವಿಲ್ಲದೆ ಎಲ್ಲಾ ಪ್ರಜೆಗಳಿಗೂ ಸಮಾನವಾದ ಹಕ್ಕುಬಾಧ್ಯತೆಗಳಿವೆ. ಪಾಕೀಸ್ತಾನವು ತಪ್ಪು ಹಾದಿ ಹಿಡಿಯದೆ ನಮ್ಮ ನೀತಿಯನ್ನೆ ಅನುಸರಿಸಿದರೆ ದೇಶದಲ್ಲಿರುವ ಅನೇಕ ತೊಡಕುಗಳು ನಿವಾರಣೆಯಾಗುವುವು. ಪ್ರಧಾನಿ ಪಂಡಿತ ನೆಹ್ರೂರವರ ವಿದೇಶಾಂಗ ನೀತಿಯನ್ನು ನಾವು ಸಂಪೂರ್ಣವಾಗಿ ಸಮರ್ಥಿಸುತ್ತೇವೆ ಹಿಂದಿಯು ರಾಷ್ಟ್ರಭಾಷೆಯಾಗಿ ಆಗಲು ಆಗತ್ಯವಾದ ತಿದ್ದುಪಡಿಯು ರಾಜ್ಯಾಂಗದಲ್ಲಿರಬೇಕು. ನಿರಾಶ್ರಿತರಿಗೆ ಕಷ್ಟನಿವಾರಣೆ ಮಾಡಲು ನಮಗೆ ನೂರಾರು ಕೋಟಿ ರೂಪಾಯಿಗಳು ಬೇಕಾಗುವುವು. ಈ ಹಣಕ್ಕಾಗಿ ರಾಷ್ಟ್ರದಮೇಲೆ ತೆರಿಗೆ ಹಾಕಬೇಕು. ಕಾಂಗ್ರೆಸ್ಸಿನವರಿಗೆ ಕಾಂಗ್ರೆಸ್ ಎಂದರೆ ಹಿಂದೆ ಒಂದು ಸೇವಾದೀಕ್ಷೆಯಾಗಿತ್ತು. ಆದರೆ ಇಂದು ಕಾಂಗ್ರೆಸ್ ಎಂದರೆ ಒಂದು ಅಧಿಕಾರಗಳಿಸುವ ಸಂಸ್ಥೆಯಾಗಿದೆ ಕಾಂಗ್ರೆಸ್ ಸದಸ್ಯರ ಸಂಖ್ಯೆ ಕಡಿಮೆಯಾದರೂ ಚಿಂತೆಯಿಲ್ಲ. ಪ್ರಾಮಾಣಿಕರನ್ನು ಮಾತ್ರ ಕಾಂಗ್ರೆಸ್ಸಿನಲ್ಲಿ ಇಟ್ಟುಕೊಂಡರೆ ಆಗ ಕಾಂಗ್ರೆಸ್ಸಿನ ಪ್ರತಿಷ್ಠೆ ಉಳಿಯುವುದು. ಬರೀ ಅಧಿಕಾರಲಾಲಸೆಯಿಂದ ಕಾಂಗ್ರೆಸ್ಸನ್ನು ಸೇರುವವರಿಗೆ ಕಾಂಗ್ರೆಸ್ಸಿನಲ್ಲಿ ಸ್ಥಾನ ಕೊಡಕೂಡದು ಎಂದು ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನರವರು ನಾಸಿಕದಲ್ಲಿ ನಡೆಯುತ್ತಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ನೆನ್ನೆ ಅಧ್ಯಕ್ಷಭಾಷಣಮಾಡುತ್ತಾ ಘೋಷಿಸಿರುವರು.

ಮಿ॥ ಬರ್ನಾರ್ಡ್ ಷಾ

ಮಿ॥ ಬರ್ನಾರ್ಡ್ ಷಾರವರ ದೇಹಸ್ಥಿತಿಯು ಉತ್ತಮಗೊಳ್ಳುತ್ತಿದೆಯೆಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ಸರ್ ಡಿಕ್ಸನ್ನರ ವರದಿ

ಪ್ರಪಂಚ ಸಂಸ್ಥೆಯ ಕಾಶ್ಮೀರದ ಮಧ್ಯಸ್ಥಿಕೆಗಾರರಾದ ಸರ್ ಓವನ್ ಡಿಕ್ಸನ್‌ರು ಸೆಕ್ಯೂರಿಟಿ ಕೌನ್ಸಿಲ್ಲಿಗೆ ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಆ ವರದಿಯಲ್ಲಿ ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಮಾಡಿಕೊಳ್ಳುವುದನ್ನು ಭಾರತ ಮತ್ತು ಪಾಕೀಸ್ತಾನಗಳಿಗೆ ಬಿಟ್ಟುಬಿಡಬೇಕು, ಕಾಶ್ಮೀರದಲ್ಲಿರುವ ಭಾರತ-ಪಾಕೀಸ್ತಾನಗಳ ಸೈನ್ಯಬಲವು ಕಡಿಮೆಯಾಗಬೇಕು, ಕಾಶ್ಮೀರದಲ್ಲಿರುವ ಪ್ರಪಂಚಸಂಸ್ಥೆಯ ಮಿಲಟರೀ ವೀಕ್ಷಕರನ್ನು ಸೀಜ್ ಫೈರ್‌ಗಾಗಿ ನೇಮಿಸಬೇಕೆಂದು ಸಲಹೆಯನ್ನು ಕೊಟ್ಟಿದ್ದಾರೆ.

ಕೋರಿಯಾ ಯುದ್ಧ

ಕೋರಿಯಾ ಕದನವು ಎಲ್ಲಾ ಕ್ಷೇತ್ರಗಳಲ್ಲಿಯೂ ಬಹಳ ಉಗ್ರವಾಗಿದೆ. ಜ॥ ಮೆಕಾರ್ಥರ ಸೈನ್ಯವು ಮುಂದುವರಿಯುತ್ತಿದೆಯೆಂದು ವರದಿಯಾಗಿದೆ.

ಬೊಂಬಾಯಿ ಗಿರಣಿ ಮುಷ್ಕರ

ನಿನ್ನೆ ಬೊಂಬಾಯಿನಲ್ಲಿ ಹತ್ತು ಗಿರಣಿಗಳಲ್ಲಿ ಸುಮಾರು ೨೨ ಸಹಸ್ರ ಜನರು ಕೆಲಸದಲ್ಲಿ ತೊಡಗಿದ್ದರು. ಕೆಲಸಕ್ಕೆ ಹೋಗುತ್ತಿದ್ದ ಕೆಲವು ಗಿರಣಿ ಕೆಲಸಗಾರರಿಗೆ ಕಲ್ಲಿನ ಏಟುಬಿದ್ದಿತೆಂದು ವರದಿಯಾಗಿದೆ.

ವಿಶ್ವಸಂಸ್ಥೆ ಅಧ್ಯಕ್ಷಸ್ಥಾನ

ವಿಶ್ವಸಂಸ್ಥೆ ಅಧ್ಯಕ್ಷ ಸ್ಥಾನಕ್ಕೆ ಪರ್ಷಿಯಾ ಪ್ರತಿನಿಧಿ ನಜುಉಲ್ಲಾ ಇಂಟೆಜಾನ್ ಮತ್ತು ಪಾಕೀಸ್ಥಾನದ ಪ್ರತಿನಿಧಿ ಜಫರುಲ್ಲಾಖಾನ್‌ರವರು ಸ್ಪರ್ಧಿಸಿದ್ದರು. ಪರ್ಷಿಯಾ ಪ್ರತಿನಿಧಿ ನಜರುಲ್ಲಾರವರು ೩೦-೨೩ ಓಟುಗಳಿಂದ ಚುನಾಯಿತರಾದರು.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ದಸರಾ ವಸ್ತು ಪ್ರದರ್ಶನದಲ್ಲಿ

ಜಪಾನಿನ ಮಕ್ಕಳು ಪ್ರಧಾನಿ ಪಂಡಿತ ನೆಹರೂರವರಿಗೆ ಇತ್ತಿರುವ ಬೊಂಬೆ ವಾದ್ಯಘೋಷ್ಠಿ ಬಹುಮಾನವು ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲ್ಪಡುವುದು.

ಖಾದಿಯೇ ಮುಖ್ಯ ಗ್ರಾಮ ಕೈಗಾರಿಕೆ

ನಾಸಿಕ್ ಗಾಂಧೀ ನಗರದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಖಾದಿ ವಿಷಯದಲ್ಲಿ ತನ್ನ ಖಚಿತ ನೀತಿಯನ್ನು ವ್ಯಕ್ತಪಡಿಸುವ ಠರಾವನ್ನು ಪಾಸು ಮಾಡಿತು. "ಅನೇಕ ವರ್ಷಗಳಿಂದ ಕಾಂಗ್ರೆಸ್ಸಿನವರು ಆರ್ಥಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಉಪಯೋಗಿಸುತ್ತಿರುವ ಖಾದಿಯೇ ಲಕ್ಷಾಂತರ ಗ್ರಾಮಸ್ಥರಿಗೆ ಉದ್ಯೋಗ ಕಲ್ಪಿಸಿದೆ. ಖಾದಿ ತಯಾರಿಕೆಯೇ ಮುಖ್ಯ ಗ್ರಾಮ ಕೈಗಾರಿಕೆ" ಎಂದು ಹೇಳಿದ್ದಾರೆ.

ಆರ್ಡಿನೆನ್ಸ್

ಆಗಸ್ಟ್ ೯ ನೇ ತಾರೀಖು ಗ್ವಾಲಿಯರಿನಲ್ಲಿ ಆದ ಗೋಲಿಬಾರು ಪ್ರಕರಣವನ್ನು ವಿಚಾರಣೆ ನಡೆಸಲು ಒಂದು ನ್ಯಾಯಾಲಯವನ್ನು ಮಧ್ಯ ಭಾರತ ರಾಜಪ್ರಮುಖರು ಒಂದು ಆರ್ಡಿನನ್ಸ್ ಮೂಲಕ ಸ್ಥಾಪಿಸಿ ಶ್ರೀ. ಪಿ. ವಿ. ದೀಕ್ಷಿತರನ್ನು ನ್ಯಾಯಮೂರ್ತಿಗಳಾಗಿ ನೇಮಿಸಿದ್ದಾರೆ.

ಶಾಲೆಗಳು ಮುಚ್ಚಲ್ಪಟ್ಟವು

ಸರ್ಕಾರದ ಎಚ್ಚರಿಕೆಗೆ ಗಮನಕೊಡದೆ ೨,೫೦೦ ವಿದ್ಯಾರ್ಥಿಗಳು ಪಾಠಶಾಲೆ ಹೋಗದೆ ನಿಂತ ಪ್ರಯುಕ್ತ ಗ್ವಾಲಿಯರಿನಲ್ಲಿ ೩ ಕಾಲೇಜು ಮತ್ತು ಅದಕ್ಕೆ ಸೇರಿರುವ ಹಾಸ್ಟಲುಗಳನ್ನು ಗ್ವಾಲಿಯರ್ ಸರ್ಕಾರವು ಬಂದುಮಾಡಿದೆ.

ಚಂಡಮಾರುತ

ನಿನ್ನೆ ರಾತ್ರಿ ಪಂಜಾಬಿನಲ್ಲಿ ಚಂಡಮಾರುತ ಗಂಟೆಗೆ ೨೫ ರಿಂದ ೫೦ ಮೈಲಿಗಳ ವೇಗದಲ್ಲಿ ಬೀಸಿ ಅನೇಕ ಮನೆಗಳು ಬಿದ್ದುಹೋಗಿ ವಿಶೇಷ ನಷ್ಟ ಸಂಭವಿಸಿದೆ. ಅಂಬಾಲದಿಂದ ಲೂಧಿಯಾನ ದೆಹಲಿ ಮುಂತಾದ ಸ್ಥಳಗಳಿಗೆ ಟೆಲಿಗ್ರಾಫ್, ಟೆಲಿಫೋನ್ ತಂತಿಗಳೆಲ್ಲವೂ ಕತ್ತರಿಸಿಹೋಗಿವೆ. ಕಪೂರ್ತಲಾದಲ್ಲಿ ೨೪ ಗಂಟೆಗಳಲ್ಲಿ ೧೩ ಅಂಗುಲ ಮಳೆಯಾಗಿದೆ. ಗುಜರಾತಿನಲ್ಲಿ ೪೮ ಗಂಟೆಗಳಿಂದ ಮಳೆ ನಿಂತಿದೆಯೆಂದು ತಿಳಿಯಬರುತ್ತದೆ.

ಅಸ್ಸಾಂ ಪರಿಹಾರನಿಧಿಗೆ

ಮೈಸೂರು ರಾಜ ಪ್ರಮುಖರ ಪ್ರಾರ್ಥನೆ

ಅಸ್ಸಾಂ ಪರಿಹಾರನಿಧಿಗೆ ಮೈಸೂರು ಸಂಸ್ಥಾನದ ಪ್ರತಿಯೊಬ್ಬ ಪ್ರಜೆಯೂ, ಧನಿಕರೂ, ಬಡವರೂ ಎಲ್ಲರೂ ಸಹಾಯ ನೀಡಬೇಕೆಂದು ಸೂಚಿಸಿ ಒಂದು ಮನವಿಯನ್ನು ಮಾಡಿದ್ದಾರೆ.

* * *

ಮೈಸೂರು ಪೋಲೀಸು ಸೀನಿಯರ್ ಅಧಿಕಾರಿಗಳೊಬ್ಬರ ಕಛೇರಿಯಲ್ಲಿ ಲೆಖ್ಖಪತ್ರ, ರಿಕಾರ್ಡು ಮುಂದಿಡುವಲ್ಲಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿಮಾಡಲು ನೇಮಕವಾಗಿದ್ದ ಶ್ರೀ ಜಸ್ಟಿಸ್ ಆರ್. ವೆಂಕಟರಾಮಯ್ಯನವರು ತಮ್ಮ ವರದಿಯನ್ನು ಸಿದ್ಧಗೊಳಿಸುತ್ತಿದ್ದಾರೆಂದು ತಿಳಿಯಬರುತ್ತದೆ.

ಶ್ರೀ ಜಯಪ್ರಕಾಶರ ಕಾರಿಗೆ ಕಲ್ಲು

ಮುಂಬೈನ ಮಿಲ್ ಪ್ರದೇಶಗಳಲ್ಲಿ ಪರಿಶೀಲನೆ ಮಾಡುತ್ತಿದ್ದ ಶ್ರೀ ಜಯಪ್ರಕಾಶರ ಕಾರು, ಬೈಕುಲಾ ಪ್ರದೇಶಕ್ಕೆ ಬಂದಾಗ ಕಾರಿನತ್ತ ಕಲ್ಲುಗಳನ್ನು ಎಸೆಯಲಾಯಿತು. ಕಾರಿನಸುತ್ತ ಇದ್ದ ೭ ಮಂದಿ ಮಜ್‌ದೂರ್ ಸಭಾ ಕಾರ್ಯಕರ್ತರಿಗೆ ಏಟುಬಿದ್ದು ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು.

ಕಾಂಗ್ರೆಸ್ ಅಧ್ಯಕ್ಷ ಪದವಿ

ನಿವೃತ್ತ ಕಾಂಗ್ರೆಸ್ ಅಧ್ಯಕ್ಷ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಎ. ಐ. ಸಿ. ಸಿ.ಯ ಸಭೆಯಲ್ಲಿ ತಮ್ಮ ಮುಕ್ತಾಯ ಭಾಷಣದಲ್ಲಿ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಬೆಲೆಯಿಲ್ಲದಂತಾಗಿದೆ ಎಂದು ಹೇಳಿದಾಗ ಸಭೆ ನಗುವಿನಲ್ಲಿ ಮುಳುಗಿತು. ಮುಂದುವರಿಸುತ್ತಾ ಈ ಅಧ್ಯಕ್ಷತೆ ಮುಳ್ಳಿನ ಕಿರೀಟ ಹಾಗೂ ಜವಾಬ್ದಾರಿ ಇದೆ, ಅವಕಾಶವಿಲ್ಲ, ಆಶಯಗಳವೆ ಅದಕ್ಕೆ ಅವಕಾಶವಿಲ್ಲ, ಗೌರವವಿದೆ ಅದಕ್ಕೆ ತಕ್ಕ ಅಧಿಕಾರಸ್ವಾಮ್ಯವಿಲ್ಲ ಎಂಬುದಾಗಿ ಹೇಳಿದರು.

ಗ್ವಾಲಿಯರ್ ವಿದ್ಯಾರ್ಥಿಗಳ ಮೇಲೆ ಅಶ್ರುವಾಯು ಪ್ರಯೋಗ

ಗ್ವಾಲಿಯರ್‌ನಲ್ಲಿ ಸಭೆ ಮತ್ತು ಮೆರವಣಿಗೆ ನಡೆಸಕೂಡದೆಂದು ಹಾಕಿದ್ದ ಪ್ರತಿಬಂಧನೆಯನ್ನುಲ್ಲಂಘಿಸಿ ಮೆರವಣಿಗೆ ಹೊರಟ ವಿದ್ಯಾರ್ಥಿಗಳಮೇಲೆ ಪೋಲೀಸರು ಅಶ್ರುವಾಯುವನ್ನು ಪ್ರಯೋಗಿಸಿದರು. ೬ ಜನರನ್ನು ಬಂಧಿಸಲಾಯಿತು.

ನೆಹರೂರವರ ನೀತಿಯು ಫಲಪ್ರದವಾಗಿದೆಯೆ ?

ಕೊರಿಯಾ ಯುದ್ಧವು ಹರಡುವ ಸಂಭವವು ಮೊದಲಿಗಿಂತಲೂ ಈಗ ಇನ್ನೂ ಕಡಿಮೆಯಾಗಿದೆ. ಕೊರಿಯಾ ಯುದ್ಧ ಪ್ರಾರಂಭವಾದ ಲಾಗಾಯಿತು ಅದು ವಿಶ್ವ ಯುದ್ಧವಾಗಿ ವಿಸ್ತರಿಸುವುದನ್ನು ತಡೆಯಲು ನಾವು ಕೈಲಾದ ಮಟ್ಟಿಗೂ ಶ್ರಮಿಸಿದ್ದೇವೆ. ಈಬಗ್ಗೆ ನಾವು ಅನುಸರಿಸಿದ ನೀತಿಯು ಸ್ವಲ್ಪಮಟ್ಟಿಗೆ ಫಲಪ್ರದವಾಗಿದೆ ಎಂದು ಪಂ|| ನೆಹರೂರವರು ನುಡಿದರು.

ನೆಹರೂ ಮತ್ತು ಪಟೇಲರಿಗೆ ಜೆ. ಪಿ. ಯವರ ಪತ್ರ

ಮುಂಬೈ ಗಿರಣಿಯ ಮುಷ್ಕರದ ಬಗ್ಗೆ ತುರ್ತು ಒಪ್ಪಂದವನ್ನು ಆಗಮಾಡಿಸಲು ಪ್ರಧಾನಿ ನೆಹರೂ ಮತ್ತು ಉಪಪ್ರಧಾನಿ ಪಟೇಲ್‌ರವರಿಗೆ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಪ್ರಾರ್ಥಿಸಿ ತಮ್ಮ ಓರ್ವ ಮಿತ್ರನೊಂದಿಗೆ ಆ ಪತ್ರವನ್ನು ಕಳುಹಿಸಿದ್ದಾರೆಂದು ತಿಳಿದುಬಂದಿದೆ.

ಈಜಿಪ್ಟ್ ಅಕ್ಕಿ

೧೫೦೦ ಟನ್ನು ಈಜಿಪ್ಟ್ ಅಕ್ಕಿ ಕೊಚ್ಚಿನ್ ಬಂದರಿಗೆ ಬಂದಿದೆ. ಇದನ್ನು ಮದರಾಸಿನಲ್ಲಿ ದಾಸ್ತಾನುಮಾಡಲಾಗುವುದೆಂದು ತಿಳಿಯಬರುತ್ತದೆ.

೫೦೦೦ ಟನ್ನು ಇಟಲಿ ಅಕ್ಕಿ ಮತ್ತು ಥೈಲ್ಯಾಂಡಿನಿಂದಲೂ ಅಕ್ಕಿ ಭಾರತ

ಆಹಾರ ಧಾನ್ಯಗಳ ಇನ್ಸ್ಪೆಕ್ಷನ್ ಕಮಿಟಿ

ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಮತ್ತು ರೇಷನ್ ಜಾರಿಯಲ್ಲಿರುವ ಊರುಗಳಲ್ಲಿ ಹಾಲಿ ಇರುವ ಫುಡ್ ಕೌನ್ಸಿಲ್ ಜೊತೆಗೆ ಜನರಿಗೆ ಒಳ್ಳೆಯ ಆಹಾರ ಪದಾರ್ಥಗಳನ್ನು ಕೊಡುವ ಉದ್ದೇಶದಿಂದ ಆಹಾರ ಧಾನ್ಯಗಳ ಇನ್ಸ್ಪೆಕ್ಷನ್ ಕಮಿಟಿಗಳನ್ನು ಮೈಸೂರು ಸರ್ಕಾರದವರು ನೇಮಿಸಿರುವರು. ಮೈಸೂರು ನಗರದಲ್ಲಿ ಚೀಫ್ ರೇಷನ್ ಆಫೀಸರ್ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಎಸ್. ರಂಗರಾಮಯ್ಯ, ಎಂ. ಎನ್. ಮಹಾಂತದೇವರು, ಪೌರಸಭಾ ಅಧ್ಯಕ್ಷ ಎಸ್. ಲಿಂಗಣ್ಣ, ಪಿ. ಎನ್. ಸಂಗಪ್ಪ, ಜನಾಬ್ ಫಸಲೂ ರಹಿಮಾನ್, ಜಿಲ್ಲಾಧಿಕಾರಿಗಳ ಫುಡ್ ಅಸಿಸ್ಟೆಂಟ್ ಇವರುಗಳನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಈ ಸಮಿತಿಗೆ ರೇಷನ್ ಆಫೀಸರ್ ಕಾರ್ಯದರ್ಶಿಗಳು.

ಮಂತ್ರಿಗಳ ಪ್ರವಾಸ

ಮೈಸೂರು ಸರ್ಕಾರದ ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ಇದೇ ಮಾಹೆ ೨೧ ರಿಂದ ೨೪ರ ವರೆಗೆ ಮಂಡ್ಯ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು.

ಪುನಃ ಭೂಕಂಪ

ದಿಬ್ರೂಘರ್‌ನಲ್ಲಿ ನೆನ್ನೆ ಪುನಃ ಎರಡು ಬಾರಿ ಭೂಕಂಪವಾಯಿತು. ಬ್ರಹ್ಮಪುತ್ರಾ ಮತ್ತು ಸುಬನ್‌ಸಿರಿ ನದಿಗಳಲ್ಲಿ ಪ್ರವಾಹವು ಹೆಚ್ಚುತ್ತಿದೆಯೆಂದು ತಿಳಿದು ಬಂದಿದೆ. ಇದರಿಂದ ವಿಮಾನದಿಂದ ಆಹಾರ ಹಾಕುವುದಕ್ಕೆ ಅಡ್ಡಿಯುಂಟಾಗಿದೆ.

ಕಾಂಗ್ರೆಸ್ಸನ್ನು ಅಧಿಕಾರದಿಂದ ಉರುಳಿಸಿ

ಭಾರತದಲ್ಲಿರುವ ಬಡತನ ಮತ್ತು ತೊಂದರೆಗಳು ನಿವಾರಣೆ ಮಾಡಬೇಕಾದರೆ ಅಧಿಕಾರದಿಂದ ಕಾಂಗ್ರೆಸ್ಸನ್ನು ಉರುಳಿದರೆ ಮಾತ್ರ ಸಾಧ್ಯ, ಅದು ರಚನಾತ್ಮಕ ರೀತಿಯಿಂದ ನಡೆಯಬೇಕು. ಎಂದು ಸಮಾಜವಾದಿ ಮುಖಂಡ ಶ್ರೀ. ಜಯಪ್ರಕಾಶ ನಾರಾಯಣರವರು ಕಲ್ಕತ್ತಾದಲ್ಲಿ ಹೇಳಿರುವರು.

ಯಂತ್ರ ಸಲಕರಣೆಗಳ ಕಾರ್ಖಾನೆ

ಬೆಂಗಳೂರಿಗೆ ಹತ್ತು ಮೈಲಿಯಲ್ಲಿರುವ ಜಾಲಹಳ್ಳಿಯಲ್ಲ ಭಾರತ ಸರ್ಕಾರವು ಆಧುನಿಕ ಯಂತ್ರ ಸಲಕರಣೆಗಳ ಕಾರ್ಖಾನೆಯನ್ನು ಸದ್ಯದಲ್ಲೇ ಸ್ಥಾಪಿಸಲಿರುವರು. ವಿದೇಶಿ ಪ್ರವೀಣರನ್ನು ನೇಮಕಮಾಡುವರು.

ಕೈದಿಗಳ ಪರಾರಿ

ಬೆಂಗಳೂರಿನ ಸಬ್ ಜೈಲಿನಿಂದ ೪ ಜನ ಕೈದಿಗಳು ಕಂಬಿ ಮುರಿದು ರಾತ್ರಿಕಾಲದಲ್ಲಿ ಪರಾರಿಯಾಗಿದ್ದಾರೆ. ಮೊಕದ್ದಮೆಯೊಂದರ ವಿಚಾರಣೆಗಾಗಿ ೭ ಜನರನ್ನು ಜೈಲಿನಲ್ಲಿ ಇಡಲಾಗಿತ್ತು. ಆ ಪೈಕಿ ೪ ಮಂದಿ ಓಡಿದ್ದಾರೆ. ಅಲ್ಲಿಯ ಪೋಲೀಸ್‌ನವರು ತರದೂದು ತಲಾಷ್ ಮಾಡುತ್ತಿದ್ದಾರೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಸಪ್ಟೆಂಬರ್ ೨೨ ಶುಕ್ರವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಗೀತೆ (ರ) ೭-೨೫ ಎಸ್. ರಾಮಚಂದ್ರರಾವ್ (ದೇವಿಭಜನ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಎಂ. ವಿ. ನಾಗಮ್ಮ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಜಲತರಂಗ್ ೨-೦ ಚಿತ್ರಲೋಕ (ರ) ೨-೩೦ ಮುಕ್ತಾಯ.

ಸಂಜೆ ೫-೩೦ ಎಂ. ವಿ. ನಾಗಮ್ಮ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೇ ೭-೫ ಹಿಂದೀ ಕಾರ್ಯಕ್ರಮ ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ: ಅಲ್ಪ ಸಂಖ್ಯಾತರು ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದಸುಧಾ (ರ) ೮-೧೫ ಶಂಕರರಾವ್ (ಹಿಂದುಸ್ತಾನಿ ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವೃಂದ ಸಂಗೀತ ೧೦-೦ ಮುಕ್ತಾಯ.

ಅವಿಶ್ವಾಸ ನಿರ್ಣಯ

ಉಕ್ಕಿನ ರಾಷ್ಟ್ರೀಕರಣ ವಿಷಯದಲ್ಲಿ ಇಂಗ್ಲೆಂಡ್ ಪಾರ್ಲಿಮೆಂಟಿನಲ್ಲಿ ವಿರೋಧಪಕ್ಷದ ನಾಯಕರಾದ ಮಿ|| ಚರ್ಚಿಲ್ಲರು ಸರ್ಕಾರದ ಮೇಲೆ ಒಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದರು. ಅದು ೩೦೦-೩೦೬ ಓಟುಗಳಿಂದ ಬಿದ್ದುಹೋಯಿತು. ಆ ಅವಿಶ್ವಾಸ ನಿರ್ಣಯವೇನಾದರೂ ಬಿದ್ದುಹೋಗದಿದ್ದರೆ ಮಿ|| ಅಟ್ಲಿ ಸರ್ಕಾರವು ರಾಜೀನಾಮೆಯಿತ್ತು ಪುನಃ ಚುನಾವಣೆಗಳಾಗಬೇಕಾಗುತ್ತಿತ್ತು.

ರಣಜಿತ್
ತಾ|| 22-9-50 ರಿಂದ ದಿನವಹಿ 3 ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸುವ
ಕಿಲಾಡಿ, (Khilari)
(ಹಿಂದಿ)

ಬೆಳಗಿನ ಪ್ರದರ್ಶನ
22-9-50ರಿಂದ ಮೂರು ದಿನಗಳು ಮಾತ್ರ
ಮೈಸೂರು ಸಾಬು ಪಾತ್ರವಹಿಸಿರುವ
ವರ್ಣರಂಜಿತ ಹಿಂದಿ ಚಿತ್ರ
ಬಾಗದಾದ್-ಕ-ಚೋರ್

ಐ. ಜಿ. ಪಿ. ಶ್ರೀ. ಸೋಮಪ್ಪನವರಿಗೆ ಇಂದಿನಿಂದ ಇನ್ನೂ ಒಂದು ತಿಂಗಳ ರಜವನ್ನು ಹೆಚ್ಚಿಸಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

★ ಕಾಂಗ್ರೆಸ್ ಶುದ್ಧೀಕರಣಕ್ಕಾಗಿ ನೂತನ ಪಕ್ಷ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧೨] ೨೫—೮—೧೯೫೦ನೇ ಶುಕ್ರವಾರ [ಸಂಚಿಕೆ ೩೭

ಶ್ರೀ. ಆಚಾರ್ಯ ಕೃಪಲಾನಿಯವರ ಅನುಯಾಯಿಗಳು ನಾಸಿಕದಲ್ಲಿ ಈಗ್ಗೆ ಕೆಲವು ದಿನಗಳ ಹಿಂದೆ ಸಭೆ ಸೇರಿ ಕಾಂಗ್ರೆಸ್ಸಿನಲ್ಲಿನ ಲೋಪದೋಷಗಳನ್ನು ತಿದ್ದುವ ಸಲುವಾಗಿಯೂ, ಕಾಂಗ್ರೆಸ್ಸಿನ ಮಹೋದ್ದೇಶಗಳಿಗೆ ಭಂಗ ಬಾರದಂತೆ ತಡೆಗಟ್ಟುವ ಸಲುವಾಗಿಯೂ ಮತ್ತು ಕಾಂಗ್ರೆಸ್ ಸಂಸ್ಥೆಯು ಅವನತಿಯ ದಾರಿಗೆ ಹೋಗದಂತೆಯೂ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿದುದರ ಫಲವಾಗಿ ಕಾಂಗ್ರೆಸ್ಸಿನಲ್ಲಿಯೇ ಒಂದು ನೂತನಪಕ್ಷವು ಸ್ಥಾಪಿತವಾಗಿದೆ. ಈ ಪಕ್ಷದಲ್ಲಿ ಖಾದಿ ಕೆಲಸಗಾರರೂ ರಚನಾತ್ಮಕ ಕೆಲಸಗಾರರೂ ಮತ್ತು ಸಂಪೂರ್ಣ ಗಾಂಧೀಆದರ್ಶವಾದಿಗಳೂ ಇದ್ದಾರೆಂದು ತಿಳಿದುಬರುತ್ತದೆ. ಇದಕ್ಕೆ "ಡೆಮೊಕ್ರಾಟಿಕ್ ಬ್ಲಾಕ್" ಎಂದು ಹೆಸರು ಕೊಡಲಾಗಿದೆ.

ಕೋಮುವಾರು ಆಧಾರದ ಮೇಲೆ ಪ್ರಾತಿನಿಧ್ಯವಿಲ್ಲ

ಮದರಾಸು ಸಂಸ್ಥಾನದ ಪೌರಸಭೆಗಳಲ್ಲಿ ಕೋಮುವಾರು ಆಧಾರದ ಮೇಲೆ ಸ್ಥಾನಗಳನ್ನು ಕಾಯ್ದಿರಿಸುವುದನ್ನು ರದ್ದುಗೊಳಿಸಲಾಗಿದೆ.

ಟಿಬೆಟ್ ಮತ್ತು ಟೈವಾನ್ ಬಿಡುಗಡೆಗೆ ಪ್ರಯತ್ನ

ಟಿಬೆಟ್ ಮತ್ತು ಟೈವಾನ್‌ಗಳನ್ನು ಆದಷ್ಟು ಬೇಗ ಕೋಮಿಂಗ್‌ಟಾಂಗ್ ಪ್ರತಿಗಾಮಿ ಶಕ್ತಿಗಳಿಂದ ಮುಕ್ತ ಮಾಡಲು ಕಮ್ಯುನಿಸ್ಟ್ ಚೀಣಾ ಪ್ರಯತ್ನಿಸಿದೆಯೆಂದು ಬರ್ಮದಲ್ಲಿ ಕಮ್ಯುನಿಸ್ಟ್ ರಾಯಭಾರಿಯಾಗಿರುವ ಯೋಚುಂಗ್ ಮಿಂಗ್‌ರವರು ತಿಳಿಸಿದ್ದಾರೆ.

ಭಾಷಾ ಸಮಸ್ಯೆ

ಮೈಸೂರು ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ ೨೬-೮-೫೦ ನೇ ಶನಿವಾರ ಸಂಜೆ ೬ ಘಂಟೆಗೆ ಜಗನ್ಮೋಹನಬಂಗಲೆಯ ಹತ್ತಿರ ಇರುವ "ಮಾದರಿ ಶಾಲೆಯಲ್ಲಿ" "ಭಾಷಾಸಮಸ್ಯೆಯ" ಮೇಲೆ ಉಪನ್ಯಾಸಮಾಲೆಯನ್ನು ಏರ್ಪಡಿಸಲಾಗಿದೆ. ಶ್ರೀಗಳಾದ ಎ. ಸಿ. ದೇವೇಗೌಡ, ಎಂ. ಎ. ದೊರಸ್ವಾಮಿ ಐಯ್ಯಂಗಾರ್, ಟಿ. ಎನ್. ಕೃಷ್ಣರಾವ್ ಮತ್ತು ಎಚ್. ವಿ. ಶ್ರೀನಿವಾಸರಾಯರು ಮಾತನಾಡುವರು.

ಪ್ರಾಂತೀಯ ಗೃಹ ನಿರ್ಮಾಣ ಕಾರ್ಪೊರೇಷನ್

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಪ್ರಾಂತೀಯ ಗೃಹನಿರ್ಮಾಣ ಕಾರ್ಪೊರೇಷನ್ನಿಗೆ ಪ್ರಥಮ ಬೋರ್ಡಿನ ಡೈರೆಕ್ಟರುಗಳು :

ಮೈಸೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು, ಬೆಂಗಳೂರು ಗೃಹನಿರ್ಮಾಣ ಸಂಘದ ಅಧ್ಯಕ್ಷರು, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾದ ಶ್ರೀ. ಎ. ಆರ್. ನಾಗೇಶ್ವರಯ್ಯರ್, ಭಾರತ ರೈಲ್ವೆ ನಿವೃತ್ತ ಅಕೌಂಟ್ಸ್ ಅಧಿಕಾರಿಗಳಾದ ಶ್ರೀ. ಕೆ. ಶ್ರೀಕಂಠಯ್ಯನವರು, ನಿವೃತ್ತ ಚೀಫ್ ಇಂಜನಿಯರ್ ಶ್ರೀ. ಎಂ. ನರಸಿಂಹಯ್ಯನವರು, ಚನ್ನಪಟ್ಟಣ, ಮೈಸೂರು, ಹಾಸನ, ಮಂಡ್ಯ ಚಿಕ್ಕಮಗಳೂರು ಚಿಂತಾಮಣಿ, ಶಿವಮೊಗ್ಗಾ ಮತ್ತು ದಾವಣಗೆರೆಯಲ್ಲಿರುವ ಗೃಹನಿರ್ಮಾಣ ಸಹಕಾರ ಸಂಘಗಳ ಅಧ್ಯಕ್ಷರು.

● ಅಸ್ಸಾಂ ನಿಧಿಗೆ ರಾಜಧಾನಿಯಿಂದ ಇಂದಿನ ಚಂದಾ ವಸೂಲಿ : ಶಿವರಾಂಪೇಟೆ ಕಡಲೆ ಅಂಗಡಿ ಶ್ರೀ. ರತ್ನಶೆಟ್ಟಿಯವರಿಂದ ೫೦೧ ರೂ. ದೇವರಾಜ ಮಾರ್ಕೆಟ್ಟಿನ ಚಿಲ್ಲರೆ ಅಂಗಡಿ ವ್ಯಾಪಾರಿಗಳಿಂದ ಒಟ್ಟು ೫೦೦ ರೂ.

ಅಸ್ಸಾಂ ಪರಿಹಾರನಿಧಿಗೆ

ಮೈಸೂರು ನಾಗರೀಕರಲ್ಲಿ ವಿಜ್ಞಾಪನೆ:— ಈಚೆಗೆ ಅಸ್ಸಾಂ ದೇಶದಲ್ಲಿ ಸಂಭವಿಸಿದ ಭೂಕಂಪದ ಪರಿಣಾಮವಾಗಿ ಅಲ್ಲಿನ ನಿವಾಸಿಗಳಿಗೆ ಉಂಟಾಗಿರುವ ಅಪಾರವಾದ ಕಷ್ಟನಷ್ಟಗಳು ಮಹಾಜನಗಳೆಲ್ಲರಿಗೂ ತಿಳಿದ ವಿಷಯವಾಗಿರುತ್ತೆ. ಭಾರತದ ಪ್ರಧಾನಸಚಿವರಾದ ಪಂಡಿತ್ ನೆಹರೂರವರು ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳು ಅಸ್ಸಾಂನಲ್ಲಿ ನಷ್ಟಹೊಂದಿದ ಪ್ರಜೆಗಳಿಗೆ ನೆರವನ್ನು ನೀಡುವ ವಿಷಯದಲ್ಲಿ ಮನವಿಮಾಡಿರುವುದೂ ಸಹ ಮಹಾಜನರಿಗೆ ವೇದ್ಯವಾಗಿದೆ. ಮೈಸೂರು ನಗರದಿಂದ ಸಹ ಅಸ್ಸಾಂ ಸಹಾಯನಿಧಿಗೆ ಆದಷ್ಟು ದ್ರವ್ಯ ವಗೈರೆಗಳನ್ನು ಕಳುಹಿಸಲು ಕಾರ್ಯಕ್ರಮವನ್ನು ಕೈಕೊಳ್ಳುವ ಬಗ್ಗೆ ೧೭-೮-೫೦ ರಲ್ಲಿ ಪುರಸಭಾ ಭವನದಲ್ಲಿ ನಡೆದ ಪುರಪ್ರಮುಖರ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯವರು ಪರಿಹಾರನಿಧಿಯ ಶೇಖರಣೆಗೆ ಬೇಕಾದ ಕಾರ್ಯಕ್ರಮಗಳನ್ನು ಕ್ಷಿಪ್ರದಲ್ಲಿಯೇ ಕೈಗೊಳ್ಳುವವರಾಗಿದ್ದಾರೆ

ಮೈಸೂರು ನಗರದ ಮಹಾಜನಗಳು ಸಮಿತಿಯವರಿಗೆ ಬೆಂಬಲಕೊಟ್ಟು ಮೈಸೂರು ನಗರದಿಂದ ಆದಷ್ಟು ದ್ರವ್ಯ ಶೇಖರಣೆಗೆ ಸಹಾಯಮಾಡಿ ಅಸ್ಸಾಂ ಪ್ರಾಂತ್ಯದ ಜನರ ಕಷ್ಟದುಃಖಗಳನ್ನು ಪರಿಹರಿಸುವ ಪವಿತ್ರಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ, ಎಂದು ಮೈಸೂರು ಪುರಸಭಾಧ್ಯಕ್ಷ ಶ್ರೀ ಲಿಂಗಣ್ಣನವರು ಒಂದು ಮನವಿಯನ್ನು ಹೊರಡಿಸಿರುವರು.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಜುಲ್ಮಾನೆ

ಹಾಲಿಗೆ ನೀರನ್ನು ಬೆರಸಿದರೆಂದು ಮೈಸೂರು ಪೌರಸಭೆಯ ಆರೋಗ್ಯಾಧಿಕಾರಿಗಳು ಮಾಡಿದ ಆಪಾದನೆ ಮೇಲೆ, ಕಳೆದವಾರ ಮೊದಲನೇ ಸಿಟಿ ಮ್ಯಾಜಿಸ್ಟ್ರೇಟರು ಈ ಕೆಳಗೆ ಕಂಡವರಿಗೆ ಜುಲ್ಮಾನೆ ವಿಧಿಸಿದರು.

ಶಂಭುಲಿಂಗಯ್ಯ, ಗಿರಿಯಪ್ಪ, ಮಲ್ಲಯ್ಯ, ನರಸಿಂಹಯ್ಯ, ತಿಮ್ಮಮ್ಮ ಎಂಬುವವರಿಗೆ ತಲಾ ೧೦ ರೂ. ಸಿದ್ದಮ್ಮ, ಜವರಮ್ಮ ಎಂಬುವವರಿಗೆ ೨೦ ರೂ. ಬಿಳಿಗಿರಿರಂಗಯ್ಯನೆಂಬುವವನಿಗೆ ೩೦ ರೂ.

ಹುಡುಗಿಯರ ಅಪಹರಣ

ದಸ್ತಗಿರಿ

ಕಾಳಮ್ಮನಗುಡಿಬೀದಿಯಲ್ಲಿ ವಾಸವಾಗಿರುವ ಸುಮಾರು ೬೦ ವರ್ಷ ವಯಸ್ಸಿನ ಶ್ರೀರಂಗಪಟ್ಟಣದ ಕೃಷ್ಣಯ್ಯಂಗಾರ್ ಉರುಫ್ ಕೃಷ್ಣಮಾಚಾರಿಯೆಂಬವರು ವೆಂಕಟಮ್ಮ, ಚನ್ನಮ್ಮ ಮತ್ತು ದಾಸಮ್ಮ ಎಂಬ ಮೂವರು ಹುಡುಗಿಯರನ್ನು ಅಪಹರಿಸಿಕೊಂಡು ಎಂ. ಜಡ್ ೯೮೦೬ ಜಡ್. ಟ್ಯಾಕ್ಸಿಯಲ್ಲಿ ನಿನ್ನೆ ಬೆಳಗಿನ ಜಾವ ೫ ಗಂಟೆಗೆ ಪಶ್ಚಿಮವಾಹಿನಿಗೆ ಕರೆದುಕೊಂಡು ಹೋಗಬೇಕಾಗಿದ್ದ ಸಮಯದಲ್ಲಿ ನಗರದ ಮಂಡಿ ಪೋಲೀಸ್ ಸ್ಟೇಷನ್ ದಫೇದಾರ್ ಶ್ರೀ ನಂಜುಂಡಯ್ಯನವರು ಅನುಮಾನದಿಂದ ಸ್ಟೇಷನ್ನಿಗೆ ಕೊಂಡೊಯ್ದರು. ಕೃಷ್ಣಯ್ಯಂಗಾರ್‌ರನ್ನು ಸಿ. ಆರ್. ಪಿ. ಸಿ. ೫೪ (೧) ಮತ್ತು ಇ ಪಿ.ಕೋ ೩೬೬ ಮತ್ತು ೫೧೧ ನೇ ಸೆಕ್ಷನ್ ಪ್ರಕಾರ ದಸ್ತಗಿರಿಮಾಡಲಾಗಿದೆ. ಅದೇ ಟ್ಯಾಕ್ಸಿಯಲ್ಲಿ ಕೃಷ್ಣಯ್ಯಂಗಾರ್ ಹೆಂಡತಿಯೆಂದು ಹೇಳಿಕೊಂಡು ಅವರ ಜೊತೆಯಲ್ಲಿಯೇ ವಾಸಿಸುತ್ತಿದ್ದ ಸುಮಾರು ೩೫ ವರ್ಷ ವಯಸ್ಸಿನ ಲಕ್ಷ್ಮೀದೇವಮ್ಮ, ಒಂದು ೬-೭ ವರ್ಷದ ಹೆಣ್ಣುಮಗು, ಆ ಮೂವರು ಹುಡುಗಿಯರನ್ನು ಪೋಲೀಸ್ಟೇಷನ್ನಿಗೆ ಕೊಂಡೊಯ್ದು ದಸ್ತಗಿರಿಮಾಡಿ, ಟ್ಯಾಕ್ಸಿಯಲ್ಲಿದ್ದ ಹಲ ಕೆಲವು ಸಾಮಾನು ಮತ್ತು ಕಾಗದಪತ್ರಗಳನ್ನು ಪೋಲೀಸಿನವರು ವಶಪಡಿಸಿಕೊಂಡಿರುವರು. ಕೃಷ್ಣಯ್ಯಂಗಾರ್ ಇದೇ ರೀತಿ ಸುಮಾರು ೯೦ ಹುಡುಗಿಯರನ್ನು ಹೈದರಾಬಾದು ಮುಂತಾದ ಊರುಗಳಿಗೆ ಕೊಂಡೊಯ್ದರೆಂದೂ ವದಂತಿಯಿದೆ.

● ಯುನೈಟೆಡ್ ಫ್ರಂಟ್ ಆಫ್ ಗೋವನ್ಸ್ ಸಂಸ್ಥೆಯ ಮೂವರು ಪ್ರತಿನಿಧಿಗಳು ಪಂಡಿತ ನೆಹರೂರವರನ್ನು ಭೇಟಿಮಾಡಿ, ಗೋವೆಯು ಭಾರತದಲ್ಲಿ ಐಕ್ಯವಾಗುವ ವಿಷಯವನ್ನು ಚರ್ಚಿಸಿದರೆಂದು ತಿಳಿಯಬರುತ್ತದೆ.

● ಇಂದು ಬೆಳಗ್ಗೆ ೯ ಗಂಟೆಗೆ ಗಾಂಧಿನಗರದಲ್ಲಿ (ನಾಸಿಕ್) ಪ್ರಧಾನಿ ಪಂಡಿತ ನೆಹರೂರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣಮಾಡಿದರು. ಇಂದಿನ ಭಾರತದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿಯನ್ನು ವಿವರಿಸಿ, ವಿದ್ಯಾರ್ಥಿಗಳು ಸಾಮೂಹಿಕವಾಗಿ ರಾಜಕೀಯ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸಕೂಡದೆಂದು ಹೇಳಿದರು.



ಬ್ರಿಟನ್ನಿನ ಸೈನ್ಯಬಲ ಹೆಚ್ಚಿಸಲಾಗುತ್ತಿದೆ.

ಕೊರಿಯಾ ಯುದ್ಧದಲ್ಲಿ ಪ್ರಪಂಚ ಸಂಸ್ಥೆಗೆ ನೆರವು ನೀಡಲೂ ಮತ್ತು ಸ್ವದೇಶದ ರಕ್ಷಣೆಗಾಗಿಯೂ ಬ್ರಿಟನ್ನಿನ ಸೈನ್ಯಬಲವನ್ನು ಹೆಚ್ಚಿಸಲಾಗುವುದೆಂದು ಬ್ರಿಟಿಷ್ ರಕ್ಷಣಾ ಮಂತ್ರಿ ನುಡಿದರು ಈ ಮೇಲ್ಕಾಣಿಸಿರುವ ೪೦ ಟನ್ ಹೊಸಮಾದರಿಯ "ಸೆಂಚುರಿಯಾನ್" ಎಂಬ ಟ್ಯಾಂಕುಗಳನ್ನು ವಿಶೇಷವಾಗಿ ತಯಾರಿಸಲಾಗುತ್ತಿದೆ. ಇವು ಭಾರಿ ತುಪಾಕಿಗಳಿಂದ ಸುಸಜ್ಜಿತವಾಗಿವೆ.

ಕೊರಿಯಾಧಾಳಿಗಾಗಿ:
ಕೊರಿಯಾ ಯುದ್ಧದಲ್ಲಿ ಭಾಗವಹಿಸುತ್ತಿರುವ ಬ್ರಿಟಿಷ್ ನೌಕಾ ಸೈನ್ಯದ ಮುಖ್ಯಾಧಿಕಾರಿ ಲೆ|| ಕರ್ನಲ್ ಡಿ ಬಿ. ಡ್ರೈಸ್ಡೇಲ್.

ಪಂಡಿತ ನೆಹರೂ ಕಾರ್ಯಕಾರಿ ಸಮಿತಿಯಲ್ಲಿರಬೇಕು

ಪ್ರಧಾನಿ ಪಂಡಿತ ನೆಹರೂರವರು ಕಾರ್ಯಕಾರಿ ಸಮಿತಿಯಲ್ಲಿ ಇರಲೇ ಬೇಕೆಂದು ಒಂದು ಮನವಿ ಸಲ್ಲಿಸಲು ಅನೇಕರ ರುಜುಗಳನ್ನು ಪಡೆಯಲಾಗುತ್ತಲಿದೆ.

ಸರ್ದಾರ್ ಪಟೇಲರು ಹೈದರಾಬಾದಿಗೆ

ಭಾರತ ಉಪಪ್ರಧಾನಿ ಸರ್ದಾರ್ ಪಟೇಲರು ಅಕ್ಟೋಬರ್ ತಿಂಗಳಲ್ಲಿ ಹೈದರಾಬಾದಿಗೆ ಭೇಟಿ ಈಯುವರು ಅಕ್ಟೋಬರ್ ೭ ರವರೆಗೆ ಅಲ್ಲಿರುವರು.

ಮುಷ್ಕರ ಪರಿಸ್ಥಿತಿ

ಬೊಂಬಾಯಿನ ಗಿರಣಿ ಮುಷ್ಕರ ಪರಿಸ್ಥಿತಿಯು ಉತ್ತಮಗೊಳ್ಳುತ್ತಲಿದೆ. ನಿನ್ನೆ ೨೨ ಗಿರಣಿಗಳು ಕೆಲಸ ಮಾಡುತ್ತಲಿದ್ದುವು.—ಸಭೆಗಳನ್ನು ಮಾಡಕೂಡದೆಂದು ಇತ್ತಿದ್ದ ಆಜ್ಞೆಯನ್ನು ಇನ್ನೂ ೧೫ ದಿನ ಮುಂದುವರಿಸಲಾಗಿದೆ.

ಕಂಟ್ರೋಲ್

ನಿನ್ನೆ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕೆಲವು ಸದಸ್ಯರು ದೇಶದಲ್ಲಿರುವ ಪದಾರ್ಥಗಳ ಮೇಲಿನ ಕಂಟ್ರೋಲ್ ಹೋಗಬೇಕೆಂದು ವಾದಿಸಿದರು ನಿರ್ಣಯವನ್ನು ಓಟಿಗೆ ಹಾಕಲಾಗಿ ೧೧೭-೧೯೦ ಓಟುಗಳಿಂದ ನಿರ್ಣಯವು ಬಿದ್ದುಹೋಯಿತು.

ಅಂತರರಾಷ್ಟ್ರೀಯ ಕಾನೂನಿಗೆ ವಿರುದ್ಧ

ವಿಶ್ವಸಂಸ್ಥೆಯ ಕಾಶ್ಮೀರ ಮಧ್ಯಸ್ಥಿಕೆಗಾರರಿಂದ ಸರ್ ಓವೆನ್‌ಡಿಕ್ಸನ್ನರು, ವಿಶ್ವಸಂಸ್ಥೆಗೆ ಒಪ್ಪಿಸಿರುವ ತಮ್ಮ ವರದಿಯಲ್ಲಿ ಪಾಕೀಸ್ಥಾನ ಸೈನ್ಯವು ಕಾಶ್ಮೀರ ಸಂಸ್ಥಾನಕ್ಕೆ ಪ್ರವೇಶಿಸಿದುದು ಅಂತರರಾಷ್ಟ್ರೀಯ ಕಾನೂನಿಗೆ ವಿರುದ್ಧವೆಂದು ಹೇಳಿರುವರು. ಇವರ ವರದಿಯನ್ನು ವಿಶ್ವಸಂಸ್ಥೆಯು ಮುಂದಿನವಾರದ ಅಧಿವೇಶನದಲ್ಲಿ ಪರಿಶೀಲಿಸುವುದು

ಮುಕ್ತಾಯ

ಅಖಿಲಭಾರತ ಕಾಂಗ್ರೆಸ್ ೫೬ನೇ ಅಧಿವೇಶನವು ನಿನ್ನೆ ನಾಸಿಕದಲ್ಲಿ ಮುಕ್ತಾಯವಾಯಿತು ಮುಕ್ತಾಯ ಭಾಷಣದಲ್ಲಿ ಅಧ್ಯಕ್ಷ ಶ್ರೀ ಬಾಬು ಪುರುಷೋತ್ತಮ ದಾಸ್ ತಾಂಡನ್ನರವರು ಭಾಷಣಮಾಡುತ್ತ, ಕಾಂಗ್ರೆಸ್ಸಿನಲ್ಲಿ ಭೇದಭಾವವು ವಿಶೇಷವಾಗಿ ತಲೆದೋರಿ ಒಡಕುಂಟಾಗಿ ಬಿಕ್ಕಟ್ಟಿನ ಸ್ಥಿತಿಗೆ ಬಂದಿದೆ. ಅದರ ಪರಿಣಾಮದಿಂದ ಕಾಂಗ್ರೆಸ್ಸಿನ ಚಟುವಟಿಕೆ ಬದಲಾಯಿಸುವೆಂದು ತಿಳಿದಿದ್ದ ಅನೇಕರಿಗೆ ಆಶಾಭಂಗವಾಗಿರಬಹುದು ಆದರೂ ಕಾಂಗ್ರೆಸ್ಸಿನ ನೀತಿಯಲ್ಲಿ ಏನೂ ಬದಲಾವಣೆಯಿಲ್ಲ ಕಾಂಗ್ರೆಸ್ಸಿನ ಕೆಲವರಲ್ಲಿ ಮೂಡಿರುವ ಸ್ವಾರ್ಥ ಮತ್ತು ಅಧಿಕಾರಲಾಲಸೆ ತೊಲಗಬೇಕು ಸೇವೆ ಮತ್ತು ತ್ಯಾಗ ಉದ್ದೇಶಗಳಿಂದಲೇ ನಾವು ಕೆಲಸವನ್ನು ಮಾಡಬೇಕೆಂದು ತಿಳಿಸಿರುವರು.

ಜಿಲ್ಲಾಬೋರ್ಡು ಮೀಟಿಂಗ್

೨೯-೯-೫೦ರಲ್ಲಿ ನಡೆಯಲೇರ್ಪಡಿಸಿದ್ದ ಮೈಸೂರು ಜಿಲ್ಲಾ ಬೋರ್ಡು ಮೀಟಿಂಗ್ ೨೬-೯-೫೦ನೇ ಮಂಗಳವಾರ ಮಧ್ಯಾಹ್ನ ೧೨ ಗಂಟೆಗೆ ಜಿಲ್ಲಾ ಭವನದಲ್ಲಿ ನಡೆಯುವುದು

ಅಂಚೆ ಕಛೇರಿಗೆ ರಜಾ

ಬಕ್ರೀದ್ ಹಬ್ಬದ ಪ್ರಯುಕ್ತ ನಾಳೆ ಎಲ್ಲಾ ಅಂಚೆ ಕಛೇರಿಗಳಿಗೆ ರಜಾ ಕೊಡಲಾಗಿದೆ

ಶ್ರೀ ರಾಜಾಜಿ ಮೈಸೂರಿಗೆ

ಮೈಸೂರಿನಲ್ಲಿರುವ ಆಹಾರ ಸಂಶೋಧನಾಕೇಂದ್ರದ ಆರಂಭೋತ್ಸವವನ್ನು ನೆರವೇರಿಸಲು ಕೇಂದ್ರಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಅಕ್ಟೋಬರ್ ೩ನೇ ವಾರ ಮೈಸೂರಿಗೆ ಬರುವರು

ಸಿಯೋಲ್‌ಗೆ ಅಮೆರಿಕನ್ನರ ಪ್ರವೇಶ

ದಕ್ಷಿಣ ಕೊರಿಯಾ ರಾಜಧಾನಿ ಸಿಯೋಲ್ ನಗರದ ಉಪನಗರ ಭಾಗಗಳನ್ನು ಅಮೇರಿಕನ್ ಸೈನ್ಯಗಳು ಪ್ರವೇಶಿಸಿದವು ಎಂಬುದಾಗಿ ಜನರಲ್ ಮೆಕಾರ್ಥರವರು ಪ್ರಕಟಿಸಿದ್ದಾರೆ

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೬ ಮೀಟರು
ಸೆಪ್ಟೆಂಬರ್ ೨೩ ಶನಿವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಚಿತ್ರ ಸಂಗೀತ ೭-೨೫ ಎಸ್ ಬಿ. ಕೇಶವಮೂರ್ತಿ ೭-೪೫ ಕನ್ನಡದಲ್ಲಿ ವಾರ್ತೆ ೮ ೦ ಇಂಗ್ಲೀಷಿನಲ್ಲಿ ವಾರ್ತೆ ೮ ೧೫ ಎಸ್ ವಿ ಪಾರ್ಥಸಾರಥಿ (ಹಾಡುಗಾರಿಕೆ) ೮ ೩೦ ಮುಕ್ತಾಯ

ಮಧ್ಯಾಹ್ನ ೧-೦ ಬಿ ದೊರೆಸ್ವಾಮಿ (ಸಂಗೀತ) ೧ ೩೦ ಇಂಗ್ಲೀಷಿನಲ್ಲಿ ವಾರ್ತೆ ೧ ೪೦ ಹಿಂದಿಯಲ್ಲಿ ವಾರ್ತೆ. ೧-೫೦ ಕೊಳಲು ೨-೦ ಬಾಲಜಗತ್ (ಮಕ್ಕಳಿಗಾಗಿ ಕಾರ್ಯಕ್ರಮ) ೧-೩೦ ಮುಕ್ತಾಯ

ಸಂಜೆ ೫-೩೦ ಬಿ. ದೊರೆಸ್ವಾಮಿ (ಸಂಗೀತ) ೬ ೧ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬ ೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ ೭-೦ ಸ್ಥಾನೀಯ ಸೂಚನಾಯೇ ೭-೫ ವಾದ್ಯಗೋಷ್ಠಿ ೭-೧೫ ಮಹಿಳೆಯರಿಗಾಗಿ ಕಾರ್ಯಕ್ರಮ ೭ ೪೫ ಕನ್ನಡದಲ್ಲಿ ವಾರ್ತೆ ೮ ೦ ಕಥಾ ಕಾಲಕ್ಷೇಪ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯ ೩೦ ಎಲ್ ಎಸ್ ಹಿರಣ್ಣಯ್ಯನವರಿಂದ ಸೋಷಿಯಲ್ ಔಟ್‌ಲುಕ್ ಎಂಬ ವಿಷಯದಲ್ಲಿ ಭಾಷಣ ೯ ೪೫ ವಾದ್ಯಸಮ್ಮೇಳನ ೧೦-೦ ಮುಕ್ತಾಯ.

ರಣಜಿತ್
ತಾ|| 22-9-50 ರಿಂದ ದಿನವಹಿ 3 ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ, (Khilari)
(ಹಿಂದಿ)

ಬೆಳಗಿನ ಪ್ರದರ್ಶನ
22-9 50ರಿಂದ ಮೂರು ದಿನಗಳು ಮಾತ್ರ
ಮೈಸೂರು ಸಾಬು ಪಾತ್ರವಹಿಸಿರುವ
ವರ್ಣ ಚಿತ್ರ ಹಿಂದಿ ಚಿತ್ರ
ಬಾಗದಾದ್-ಕ-ಚೋರ್

ಸಂಪಾದಕರು ಮತ್ತು ಪ್ರಕಾಶಕರು ಟಿ ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೯—೧೯೫೦ನೇ ಶನಿವಾರ [ಸಂಚಿಕೆ ೩೩

RAGHULAL & Co.,
CHEMISTS
Sayyaji Rao Road
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE--2

ಪೋಲೀಸು ರಕ್ಷಣೆ

ಗ್ವಾಲಿಯರಿನಲ್ಲಿ, ವಿದ್ಯಾರ್ಥಿಗಳು ಪಾಠಶಾಲೆಗಳಿಗೆ ಹೋಗದ ನಿಮಿತ್ತ ಸರ್ಕಾರದವರು ಮುಚ್ಚಿದ್ದ ಶಾಲಾ ಕಾಲೇಜುಗಳ ರಕ್ಷಣೆಗೆ ಪೋಲೀಸರನ್ನು ಹಾಕಲಾಗಿದೆ. ಈ ಶಾಲಾಕಾಲೇಜುಗಳಿಗೆ ಸೇರಿದ ಹಾಸ್ಟಲುಗಳಲ್ಲಿರುವ ವಿದ್ಯಾರ್ಥಿಗಳೆಲ್ಲರೂ ೨೪ ಗಂಟೆಗಳಲ್ಲಿ ಖಾಲಿಮಾಡಿ ಹೊರಟುಹೋಗಬೇಕೆಂದು ತಿಳಿಸಲಾಗಿದೆ.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಸ್ವೀಕಾರ

ಯುಗಾಂತರ: ಮಾಸಪತ್ರಿಕೆ:—ಸಂಪಾದಕರು ಶ್ರೀ ಎನ್. ಡಿ. ಶಂಕರ್, ಬಿಡಿ ಪತ್ರಿಕೆ ೦-೪-೦.

ಈಗ್ಯ ಸುಮಾರು ಕಾಲುಶತಮಾನದಿಂದ ಕಾಂಗ್ರೆಸ್, ಹಿಂದೀಪ್ರಚಾರ, ವಿದ್ಯಾರ್ಥಿ ಮತ್ತು ಶ್ರಮಜೀವಿ ಚಳುವಳಿಗಳಲ್ಲಿ ಮುಂದಾಳುತನದಿಂದ ಸೇವೆಸಲ್ಲಿಸಿ, "ಯುಗಾಂತರ" ಮೂಲಕ ಜನತಾಸೇವಾಕಾಂಕ್ಷಿಗಳಾದ ಶ್ರೀ ಎನ್. ಡಿ. ಶಂಕರವರ 'ಶಿಶು' ನಮ್ಮ ಹಸ್ತಗತವಾಗಿದೆ.

ಕನ್ನಡದಲ್ಲಿ ರಾಜಕೀಯ, ಆರ್ಥಿಕ, ಸಮಾಜಕೀಯ ಮತ್ತು ಸಾಹಿತ್ಯವಿಚಾರದಲ್ಲ ಮೇಲ್ತರಗತಿಯ ಮಾಸಪತ್ರಿಕೆಯ ಅತ್ಯವಶ್ಯಕತೆಯು ತಲೆದೋರಿರುವ ಈ ಸಮಯದಲ್ಲಿ 'ಯುಗಾಂತರ'ಕ್ಕೆ ಸ್ವಾಗತ ಬಯಸದಿರುವಂತಿಲ್ಲ.

ಶ್ರೀಯುತರಾದ ಅ.ನ.ಕೃ; ಗೋಪಾಲಕೃಷ್ಣ ಅಡಿಗ, ಕುಮಾರವೆಂಕಣ್ಣ, ಹಾ.ಶ್ರೀ. ದೊರೆಸ್ವಾಮಿ ಮುಂತಾದ ಸಾಹಿತಿ, ಕವಿ, ಕಲಾವಿದ ಮತ್ತು ಪತ್ರಿಕಾಕರ್ತರ ಲೇಖನಗಳಿಂದ ಯುಗಾಂತರವು ಹೊಸ ತರಹದ ವಸ್ತು ವಿಷಯ ವಿಮರ್ಶಾತ್ಮಕವಾಗಿ,ಉಪಯುಕ್ತವಾಗಿ, ಬೋಧಪ್ರದವಾಗಿ ಪ್ರಕಟಿತವಾಗಿದೆ.

'ಪ್ರಗತಿಯ ಘರ್ಷಣೆಯ ಪ್ರತೀಕ' — ಅಂತೆಯೇ ಪ್ರಗತಿಶೀಲ 'ಯುಗಾಂತರ'ವೂ ಸಹ ಇಂದಿನ ದೇಶದಲ್ಲಿನ ಭಾವನೆಗಳ ಘರ್ಷಣೆಯ ಪ್ರತೀಕವಾಗಿಯೇ ಇದೆ.

ಕನ್ನಡ ಓದುಗರಿಗೆ ಚಿರ ಪರಿಚಿತರಾದ ಶ್ರೀ. ಗೊರೂರರವರು ತಮ್ಮ ಶುಭಾಶಯದಲ್ಲಿ ಕೋರಿರುವಂತೆ 'ಧೈರ್ಯವಾಗಿ ಮುಂದೆ ನುಗ್ಗಿ' 'ಯುಗಾಂತರ'ವು ದೇಶದ (ಜನತೆಯ) ಪ್ರಗತಿಗೆ ಸಹಾಯಕವಾಗಲಿ.

ಧೂಮಪಾನ ನಿಷೇಧ

ಮೈಸೂರು ಸಂಸ್ಥಾನದಲ್ಲಿ ಯಾವ ಸಿನಿಮಾ ಮಂದಿರದಲ್ಲಿಯೂ ಕೂಡ ಬೀಡಿ, ಸಿಗರೇಟು ಮುಂತಾದುವನ್ನು ಸೇದಕೂಡದೆಂದು ಸರ್ಕಾರವು ಆಜ್ಞೆ ಹೊರಡಿಸಿದೆ.

ಮುಷ್ಕರ

ಹಿಂದೂಸ್ಥಾನ ವಿಮಾನಕಾರ್ಖಾನೆಯನ್ನು ಮ್ಯಾನೇಜ್‌ಮೆಂಟಿನವರು ನಿನ್ನೆ ರಾತ್ರಿಯಿಂದ ಮುಚ್ಚಿದ್ದಾರೆ. ಕಾರ್ಖಾನೆಯ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಬಿ. ಸಿಂಗ್‌ರವರನ್ನು ಕೆಲಸದಿಂದ ವಜಾಮಾಡಬಹುದೆಂಬ ಸೂಚನೆ ತಿಳಿದು ಕೆಲಸಗಾರರು ತಮ್ಮ ಪ್ರತಿಭಟನೆಯನ್ನು ಸೂಚಿಸಲೆಂದು ಗುರುವಾರ ಮಧ್ಯಾಹ್ನ ಕೆಲಸಗಾರರು ಮುಷ್ಕರ ಆಚರಿಸಿದರು. ಆದ್ದರಿಂದ ಕಾರ್ಖಾನೆ ಮುಚ್ಚಲು ಆಡಳಿತವರ್ಗ ನಿಶ್ಚಯಿಸಿದೆಯೆಂದು ತಿಳಿಯಬಂದಿದೆ.

ಕಾರ್ಖಾನೆಯ ಸುತ್ತಲೂ ಮೂರು ಮೈಲಿಯ ಒಳಪ್ರದೇಶದಲ್ಲಿ ಸಭೆ ಮತ್ತು ಮೆರವಣಿಗೆ ನಿಷೇಧಿಸಿ ಪ್ರತಿಭಂದಾಜ್ಞೆಯನ್ನು ಬೆಂಗಳೂರು ನಗರದ ದ್ವಿತೀಯ ಮ್ಯಾಜಿಸ್ಟ್ರೇಟರು ಹೊರಡಿಸಿರುವರು.

ಮುಂಬಯಿ ಗಿರಣಿ ಮುಷ್ಕರ

ಮುಷ್ಕರದಿಂದ ಕಾರ್ಮಿಕರಿಗೆ ವಿಶೇಷ ನಷ್ಟವಾಗಿರುವುದಲ್ಲದೆ ಬಟ್ಟೆಯ ಉತ್ಪತ್ತಿಯು ನಿಂತುಹೋಗಿ ದೇಶಕ್ಕೆ ಅಪಾರ ಹಾನಿಯಾಗಿದೆ. ಕಾರ್ಮಿಕರ ಮುಷ್ಕರದ ಬಗ್ಗೆ ತಮಗೆ ಸಹಾನುಭೂತಿಯಿದೆ. ಅವರ ಹೋರಾಟ ನ್ಯಾಯ ಸಮ್ಮತವಾಗಿದ್ದರೂ ಇರಬಹುದು. ತಾವು ಕಾರ್ಮಿಕರಿಗೆ ಸಹಾಯನೀಡಲು ಸಿದ್ಧರಾಗಿರುತ್ತೇನೆ. ಆದರೆ ಅವರು ತಮ್ಮ ಬೇಡಿಗೆ ಈಡೇರುವವರೆಗೆ ಕೆಲಸಕ್ಕೆ ಹಿಂತಿರುಗಲು ತಯಾರಿಲ್ಲವೆಂದು ಹೇಳಕೂಡದೆಂದೂ ಬೊಂಬಾಯಿ ಸರ್ಕಾರವು ವ್ಯವಹರಿಸುತ್ತಿರುವ ವಿಷಯದಲ್ಲಿ ತಾವು ಕೈಹಾಕುವುದು ಸರಿಯಲ್ಲವೆಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ಬೊಂಬಾಯಿಯಲ್ಲಿ ಬಹಿರಂಗ ಭಾಷಣ ಸಭೆಯೊಂದರಲ್ಲಿ ಮಾತನಾಡುತ್ತಾ ನುಡಿದರು.

ಸರ್ಪಗಳ ಮೆರವಣಿಗೆ

ಶ್ರೀ ನಗರಕ್ಕೆ ೬ ಮೈಲಿ ದೂರದಲ್ಲಿ ಜೀಲಂನದಿಯಲ್ಲಿ ಹೆಡೆಗಳನ್ನು ಎತ್ತಿಕೊಂಡು ನೀರಿನ ಪ್ರವಾಹದಲ್ಲಿ ನೂರಾರು ಹಾವುಗಳು ಹೋಗುತ್ತಲಿದ್ದವೆಂದು ವರದಿಯಾಗಿದೆ.

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನ

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ೭ನೇ ಸಮ್ಮೇಳನವು ಮೈಸೂರು ನಗರದಲ್ಲಿ ೧೯೫೦ ನೇ ನವಂಬರ್ ೪-೫ ರಲ್ಲಿ ನಡೆಯುವುದು. ಈ ಪತ್ರಿಕೋದ್ಯೋಗಿಗಳ ಸಮ್ಮೇಳನವು ಮೈಸೂರಿನಲ್ಲಿ ನಡೆಯುವುದು ಇದೇ ಪ್ರಥಮ. ಸಮ್ಮೇಳನಕ್ಕೆ ಸಂಸ್ಥಾನದ ನಾನಾಭಾಗಗಳಿಂದ ಸುಮಾರು ಮುನ್ನೂರು ಮಂದಿ ಪತ್ರಿಕೋದ್ಯೋಗಿಗಳು ಆಗಮಿಸುವರಾಗಿದ್ದಾರೆ. ಸಾರ್ವಜನಿಕ ಸೇವೆಯಲ್ಲಿ ಸದಾ ನಿರತರಾದ ಪತ್ರಿಕಾಕರ್ತರು ಒಂದೆಡೆ ಸೇರಿ ವೃತ್ತಿಗೆ ಸಂಭಂಧಿಸಿದ ವಿಷಯಗಳನ್ನು ಚರ್ಚಿಸುವುದಲ್ಲದೆ ಸಾರ್ವಜನಿಕ ಸೇವೆ ಮತ್ತು ಹೆಚ್ಚಾಗಿ ಮಾಡಲು ಕಾರ್ಯಕ್ರಮಗಳನ್ನು ಗೊತ್ತುಮಾಡುವುದೇ ಈ ಸಮ್ಮೇಳನದ ಮುಖ್ಯೋದ್ದೇಶ.

ಈ ಗುರುತರ ಕಾರ್ಯವನ್ನು ಪತ್ರಿಕೋದ್ಯೋಗಿಗಳು ನೆರವೇರಿಸಲು ಸಾರ್ವಜನಿಕರ ಬೆಂಬಲವು ಅತ್ಯಗತ್ಯ. ಅದರಲ್ಲೂ ಮೈಸೂರು ನಗರದ ಈ ಸಮ್ಮೇಳನವು ಯಶಸ್ವಿಯಾಗಿ ನಡೆಯಬೇಕಾದರೆ ಮೈಸೂರು ನಗರ ಮತ್ತು ಜಿಲ್ಲೆಯ ಸಾರ್ವಜನಿಕರ ಸಹಕಾರವು ಅವಶ್ಯಕ. ಈ ನಗರದ ಘನತೆಗೆ ತಕ್ಕಂತೆ ಸಮ್ಮೇಳನವನ್ನು ನಡೆಸಲು ಸುಮಾರು ೪ ಸಾವಿರ ರೂಪಾಯಿಗಳು ಬೇಕೆಂದು ಅಂದಾಜುಮಾಡಲಾಗಿದೆ. ಆದ್ದರಿಂದ ರಾಜಧಾನಿಯ ಮಾನ್ಯ ಮಹಾಜನರು ಸಾರ್ವಜನಿಕ ಮತ್ತು ಸ್ಥಳೀಯ ಸ ಗಳು ಈ ಮಹತ್ಕಾರ್ಯಕ್ಕೆ ಮುಕ್ತ ಹಸ್ತದಿಂದ ಧನಸ ಯ ಮಾಡಿ ಪತ್ರಿಕಾಸಮ್ಮೇಳನವು ಯಶಸ್ವಿಯಾಗಿ ದು ನಗರದ ಕೀರ್ತಿಯು ಹೆಚ್ಚಾಗಿ ಬೆಳಗುವಂತೆ ಡಬೇಕೆಂದು ಕೋರುತ್ತೇವೆ, ಎಂದು ಸಮ್ಮೇಳ ಸ್ವಾಗತಸಮಿತಿಯವರು ಮನವಿ ಮಾಡಿದ್ದಾರೆ.

ಖಾಸಿಂರಜ್ವಿ ಅಪೀಲು

ಹೈದರಾಬಾದಿನಲ್ಲಿ ರಜಾಕಾರರ ಮುಖಂಡನಾ ಖಾಸಿಂ ರಜ್ವಿಗೆ ವಿಶೇಷ ನ್ಯಾಯಾಲಯವು ಜೀವಾ ಶಿಕ್ಷೆಯನ್ನು ವಿಧಿಸಿದ್ದರಮೇಲೆ ಹೈದರಾಬಾದು [illegible] ನ್ಯಾಯಾಲಯ ದಲ್ಲಿ ಅಪೀಲು ಹೂಡಿದ್ದಾನೆ.

ಮಹಾತ್ಮರ ಹೆಸರನ್ನುಪಯೋಗಿ ಬೇಡಿ

ಮಹಾತ್ಮಾಜಿಯವರ ತತ್ವ ಮತ್ತು ಬೋಧನೆಗಳ ಮಾತ್ರ ನಾವು ಆಚರಣೆಗೆ ತರಬೇಕೇ ವಿನಹ ಯೊಬ್ಬ ಕಾಂಗ್ರೆಸ್ಸಿಗನೂ ಮಹಾತ್ಮಜಿಯವರ ಹೆಸರ ಪ್ರತಿಯೊಂದಕ್ಕೂ ಉಪಯೋಗಿಸುವುದು ನ್ಯಾಯ ವೆಂದು ಪಂಡಿತನೆಹರೂರವರು ಕಾಂಗ್ರೆಸ್ ಅಧಿವೇ ದಲ್ಲಿ ತಿಳಿಸಿದರು.

★ ಸಿರ್ಲೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಸಮಾಚಾರ

ಸೆಪ್ಟೆಂಬರ್ ೨೩-೯-೫೦ ಶನಿವಾರ

ವಿವೇಕವಾಣಿ

ಬಾಬು ಪುರುಷೋತ್ತಮದಾಸ್ ತಾಂಡನ್ನವರ ಅಧ್ಯಕ್ಷತೆಯಲ್ಲಿ ಜರುಗಿದ ೫೬ನೇ ನಾಸಿಕ್ ಕಾಂಗ್ರೆಸ್ ಮಹಾಧಿವೇಶನವು ಚರಿತ್ರಾರ್ಹವಾದುದು. ಈ ಅಧಿವೇಶನಕ್ಕೆ ಮುಂಚೆ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗುವುದೆಂದು ಭಾವಿಸಿದ್ದ ಅನೇಕರಿಗೆ, ಅಲ್ಲಿನ ತೀರ್ಮಾನಗಳನ್ನು ಕಂಡು ಆಶ್ಚರ್ಯವಾಗದಿರದು. ಕಾಂಗ್ರೆಸ್ ಮಹಾಸಂಸ್ಥೆಯು ದೇಶದ ಏಕೈಕ ಪ್ರತಿಭಾಯುತ ರಾಷ್ಟ್ರೀಯ ಸಂಸ್ಥೆ. ಅದರ ಸ್ಥಾನದಲ್ಲಿ ಮತ್ತಾವ ರಾಜಕೀಯ ಪಕ್ಷವೂ ಸರಿತೂಗಲಾರದು.

ಬಾಬು ಪುರುಷೋತ್ತಮರ ಅಧ್ಯಕ್ಷಭಾಷಣವು ವಿವೇಕವಾಣಿಯಿಂದ [illegible]. ಅನೇಕರು ಶ್ರೀ. ತಾಂಡನ್ನರವರ ನೇತೃತ್ವದಿಂದ ಕಾಂಗ್ರೆಸ್ಸು ಜಾತೀಯತೆ (ಹಿಂದೂ) ಯ ನೀತಿಯನ್ನನುಸರಿಸುವಂತಾಗಬಹುದೆಂದು ನಿರೀಕ್ಷಿಸಿದ್ದರು. ಆದರೆ ಈಗ್ಯೆ ಹಲವು ತಲೆಮಾರಿನಿಂದ ಕಾಂಗ್ರೆಸ್ಸಿನಲ್ಲಿಯೇ ಶ್ರದ್ಧಾಯುತರಾಗಿ ಸೇವೆಸಲ್ಲಿಸಿದ ಶ್ರೀ. ತಾಂಡನ್ನವರು ತಮ್ಮ ಮತವಿಚಾರದಲ್ಲಿ ಅಭಿಮಾನಿಗಳಾದರೂ ಅನ್ಯಮತ ದ್ವೇಷಿಗಳಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಂತೆಯೇ ಭಾರತವು ಜಾತ್ಯಾತೀತರಾಜ್ಯವಾಗಿರಬೇಕೆಂಬ ತತ್ವಕ್ಕೆ ಪೂರ್ಣಬೆಂಬಲ ಕೊಟ್ಟಿದ್ದಾರೆ. ಪಾಕಿಸ್ಥಾನವಿಚಾರದಲ್ಲಿಯೂ ಮತ್ತು ಪಂ|| ನೆಹರೂ–ಲಿಯಾಖತ್ ದೆಹಲಿ ಒಪ್ಪಂದ ವಿಚಾರದಲ್ಲಿಯೂ ತಮ್ಮ ಸ್ಪಷ್ಟಾಭಿಪ್ರಾಯವನ್ನು ಹೊರಗೆಡಹಿ, ಎರಡು ರಾಷ್ಟ್ರಗಳ ಪರಸ್ಪರ ಸೌಹಾರ್ದತೆಗೆ ಸಹಕಾರಿಯಾಗುವ ಉಚಿತ ಧೋರಣೆಯನ್ನು ದೃಢತೆಯಿಂದ ಅನುಸರಿಸಬೇಕೆಂದು ಹೇಳಿದ್ದಾರೆ. ಭಾರತದ ವಿದೇಶಾಂಗ ನೀತಿಯ ವಿಷಯದಲ್ಲಿ ಪಂ|| ನೆಹರೂರವರ ಭಾರತದ ಸ್ವತಂತ್ರತಾಟಸ್ಥ್ಯನೀತಿಗೆ ಪೂರ್ಣ ಒಪ್ಪಿಗೆಕೊಟ್ಟಿದ್ದಾರೆ. ಮತ್ತು ಕೇವಲ ಸಂಪ್ರದಾಯ ಮತ್ತು ಅಧಿಕಾರಗಳ ಬಲೆಗೆ ಸಿಲುಕದಂತೆ ವಿವೇಕಯುತ ಮಾರ್ಗವನ್ನು ರಾಷ್ಟ್ರವು ಅವಲಂಬಿಸಬೇಕೆಂದು ಸಲಹೆಮಾಡಿರುವುದು ಅವರ ವಿಶಾಲದೃಷ್ಟಿ–ಸೂಚಕವಾಗಿದೆ.

ಕಾಂಗ್ರೆಸ್ಸಿಗರು ಖಾದಿ ವಿಚಾರದಲ್ಲಿ ಉದಾಸೀನ ಮನೋಭಾವ ವ್ಯಕ್ತಪಡಿಸುತ್ತಿರುವುದನ್ನು ಕಂಡು ಖಾದಿಯ ಗಣ್ಯಸ್ಥಾನವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಖಾದಿಯು ಗ್ರಾಮ ಕೈಗಾರಿಕೆ—ಅದರಿಂದ ಹಳ್ಳಿಹಳ್ಳಿಯಲ್ಲಿಯೂ ಬಡವರ ಜೀವನಕ್ಕೆ ದಾರಿಮಾಡಿಕೊಡಬಹುದು. ಅಲ್ಲದೆ ಕೈಗಾರಿಕಾ ವಿಕೇಂದ್ರೀಕರಣದ ಅಗತ್ಯವನ್ನು ಪ್ರಸ್ತಾಪಿಸಿ, ಖಾದಿ ಮತ್ತಿತರ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಹಿಂದೀ ಭಾಷೆಯು ರಾಷ್ಟ್ರಭಾಷೆಯಾಗಿ ಏರ್ಪಡಿಸುವ ವಿಚಾರದಲ್ಲಿ ಇನ್ನೂ ಹೆಚ್ಚಿನ ಆಸಕ್ತಿಯನ್ನು ತೋರಬೇಕೆಂದೂ, ಈಗ ಸರ್ಕಾರದವರು ೧೫ ವರ್ಷಗಳ ಅವಧಿಯಲ್ಲಿ ರಾಷ್ಟ್ರಭಾಷಾ ಪ್ರಶ್ನೆಯು ಪೂರ್ಣವಾಗಬೇಕೆಂಬುದನ್ನು ತ್ವರಿತಗೊಳಿಸಬೇಕೆಂದು ಆಶಿಸಿದ್ದಾರೆ.

ನಿರಾಶ್ರಿತರ ವಿಷಯದಲ್ಲಿ ಭಾರತ ರಾಷ್ಟ್ರೀಯ ನೀತಿಯ ಪರಿಣಾಮವಾಗಿ (ಅಂದರೆ ಭಾರತ ವಿಭಜನೆಗೆ ಒಪ್ಪಿಗೆ ಕೊಟ್ಟುದುದರಿಂದ) ನಿರಾಶ್ರಿತ ಪ್ರಶ್ನೆಯು ಉದ್ಭವಿಸಿತಾದ್ದರಿಂದ, ಆ ನಿರಾಶ್ರಿತರಿಗೆ ಸಹಾನುಭೂತಿ ಮತ್ತು ಸಹಾಯ ನೀಡುವುದೂ ಸಹ ರಾಷ್ಟ್ರದ ಜವಾಬ್ದಾರಿಯೆಂದು ಭಾರತೀಯರೆಲ್ಲರ ಕರ್ತವ್ಯವನ್ನು ಸ್ಪಷ್ಟೀಕರಿಸಿದ್ದಾರೆ. ಅಂತೆಯೇ ಅಸ್ಸಾಂ ಭೂಕಂಪ ಪೀಡಿತರ ವಿಚಾರದಲ್ಲಿಯೂ ಭಾರತೀಯರೆಲ್ಲರೂ ಅಸ್ಸಾಮಿಗೆ ಸಹಾಯ ಮಾಡಬೇಕೆಂದು ಕೋರಿದ್ದಾರೆ.

ಈ ಮೇಲಿನ ಎಲ್ಲಾ ವಿಷಯಗಳೂ ಗಮನಾರ್ಹ. ಕಾಂಗ್ರೆಸ್ಸಿನವರು ಎಲ್ಲಿಯೇ ಇರಲಿ, ಅವರ ಜವಾಬ್ದಾರಿಯು ಗುರುತರವಾದುದು ಮತ್ತು ಕಷ್ಟವಾದುದು. ಅವರ ಕರ್ತವ್ಯವೇನೆಂಬುದೂ ಸಹ ಸ್ಪಷ್ಟವಾಗಿಯೇ ಇದೆ: ನಿಸ್ವಾರ್ಥತೆಯಿಂದ, ಶ್ರದ್ಧೆಯಿಂದ, ಒಮ್ಮನಸ್ಸಿಂದ, ಅಧಿಕಾರ ಲಾಲಸೆ ತೊರೆದು, ಜನರೊಂದಿಗೆ "ದರಿದ್ರನಾರಾಯಣ" ನ ಸೇವೆಯನ್ನು ನಿರ್ವಂಚನೆಯಾಗಿ ಮಾಡಬೇಕು. ತಮ್ಮ ತಮ್ಮಲ್ಲಿನ ಭಿನ್ನಭಾವನೆಗಳನ್ನು ತೊರೆದು ಒಗ್ಗಟ್ಟಿನಿಂದ ದೇಶದ ಆರ್ಥಿಕ ಮತ್ತು ನೈತಿಕ ಮುನ್ನಡೆಗಾಗಿ ಬೆವರು ಸುರಿಸಬೇಕು. ರಾಷ್ಟ್ರನಾಯಕರ ಮಹತ್ಕಾರ್ಯಕ್ಕೆ ತಮ್ಮ ಸಂಪೂರ್ಣ ನೆರವು ನೀಡಬೇಕು. ರಚನಾತ್ಮಕ ಕಾರ್ಯಕ್ಕೆ ಹೆಚ್ಚು ಗಮನ ಕೊಟ್ಟು ಶ್ರಮವಹಿಸಿ ದುಡಿಯಬೇಕು.

ಎಲ್ಲದಕ್ಕಿಂತಲೂ ಹೆಚ್ಚಾಗಿ ದೀನದಲಿತರೊಂದಿಗೆ ಕಲೆತು ಅವರೊಂದಿಗೇ ಕೆಲಸಮಾಡಿ ಅವರ ಕಷ್ಟಗಳನ್ನು ಪರಿಹರಿಸುವಲ್ಲಿ ಕಾಂಗ್ರೆಸ್ ಸಂಸ್ಥೆಯ ನಿಜವಾದ ಸಹಾನುಭೂತಿಯಿದೆಯೆಂಬುದನ್ನು ಅವರ ಹೃದಯ ನಾಟುವಂತೆ ಕಾರ್ಯರೂಪದಲ್ಲಿ ಕಾಣಿಸಬೇಕು.

ಈ ಮಹಾತ್ಕಾರ್ಯಸಾಧನೆಗೆ ಸಾರ್ವಜನಿಕರ ಸಹಕಾರವು ಅತ್ಯಗತ್ಯ. ಕೇವಲ ಆರೋಪಣೆಗಳಲ್ಲಿ ಮಗ್ನರಾಗದೆ, ಕಾಂಗ್ರೆಸ್ ಸಂಸ್ಥೆಯು ಈಗ್ಯೆ ೬೫ ವರ್ಷಗಳಿಂದ ಸಲ್ಲಿಸಿರುವ ಪ್ರಜಾಸೇವೆಯನ್ನು ಮರೆಯದೇ, ಕಾಂಗ್ರೆಸ್ಸಿಗರ ಕಾರ್ಯತತ್ಪರತೆಯು ಇನ್ನೂ ಹೆಚ್ಚಿ ಬೆಳೆಯುವಂತೆ ಸಾರ್ವಜನಿಕರು ಕಾಂಗ್ರೆಸ್ಸಿಗರಿಗೆ ಪ್ರೋತ್ಸಾಹಿಸಬೇಕು. ಭಾರತದ ಭವಿಷ್ಯವು ಕಾಂಗ್ರೆಸ್ಸಿನ ಕಾರ್ಯತತ್ಪರತೆಯ ಮೇಲೆ ನಿಂತಿದೆ. ಕಾಂಗ್ರೆಸ್ಸಿನ ದುಡಿಮೆಯಿಂದಲೇ ಭಾರತಸ್ವಾತಂತ್ರ್ಯಗಳಿಸಿತು. ಅದನ್ನು ಉಳಿಸಿಕೊಂಡು, ಭಾರತವು ಪ್ರಪಂಚಕ್ಕೇ ಮಾದರಿಯಾಗುವಂತೆ ಸಾಧಿಸುವುದೂ ಸಹ ಕಾಂಗ್ರೆಸ್ಸಿನ ಶಕ್ತಿಯನ್ನನುಸರಿಸಿದೆ. ಆ ಶಕ್ತಿಯನ್ನು ನೂರ್ಮಡಿಸುವುದು ಭಾರತೀಯರೆಲ್ಲರ ಕರ್ತವ್ಯ.

ಜೈಹಿಂದ್.

ರಣಜಿತ್
ತಾ|| 22-9-50 ರಿಂದ ದಿನವಹಿ 3 ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ, (**Khilari**)
(ಹಿಂದಿ)

ಬೆಳಗಿನ ಪ್ರದರ್ಶನ
22-9-50ರಿಂದ ಮೂರು ದಿನಗಳು ಮಾತ್ರ
ಮೈಸೂರು ಸಾಬು ಪಾತ್ರವಹಿಸಿರುವ
ವರ್ಣರಂಜಿತ ಹಿಂದಿ ಚಿತ್ರ
ಬಾಗದಾದ್-ಕ-ಚೋರ್

ರೇಡಿಯೋ

ಎ. ಐ. ಆರ್. ಮೈಸೂರು

೩೧೨ ಮೀಟರು ೪೯.೪೬ ಮೀಟರು

ಸೆಪ್ಟೆಂಬರ್ ೨೪ ಭಾನುವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರ ಸಂಗೀತ (ರೆ) ೭-೨೫ ದೇವರ ನಾಮ (ಎಸ್. ಬಿ. ಕೇಶವಮೂರ್ತಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಎಸ್. ವಿ ಪಾರ್ಥಸಾರಥಿ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಕೆ. ದೊರೆಸ್ವಾಮಿ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಕೊಳಲು ೨-೦ ಬಾಲಜಗತ್ ೧-೩೦ ಮುಕ್ತಾಯ

ಸಂಜೆ ೫-೩೦ ಕೆ. ದೊರೆಸ್ವಾಮಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆಗಳು (ಹಿಂದಿ) ೭-೫ ತಬಲ ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಆರ್. ಎಸ್. ಶೇಷಗಿರಿದಾಸ್ (ಕಥಾಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಇಂಗ್ಲೀಷಿನಲ್ಲಿ ಭಾಷಣ ೯-೪೫ ವಾದ್ಯ ಸಮ್ಮೇಳನ ೧೦-೦ ಮುಕ್ತಾಯ.

ಸೆಪ್ಟೆಂಬರ್ ೨೫ ಸೋಮವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರ ಸಂಗೀತ (ರೆ) ೭-೩೫ ಗಿಟಾರ್ ಮತ್ತು ದಿಲ್‌ರುಬ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಎಸ್. ಶಾರದ (ಕನ್ನಡ ಗೀತೆ) ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಬಾಲಜಗತ್ (ಮಕ್ಕಳಿಗಾಗಿ ಕಾರ್ಯಕ್ರಮ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ ೧-೫೦ ನಾವು ಮತ್ತು ನಮ್ಮವರು ೨-೧ ನಿಮ್ಮ ಮೆಚ್ಚಿನ ಹಾಡುಗಳು ೨-೩೦ ಮುಕ್ತಾಯ.

ಸಂಜೆ ೫-೩೦ ಜಿ. ಆರ್. ನಾಗರತ್ನಬಾಯಿ (ಹಾಡುಗಾರಿಕೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟನೆಗಳು ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ ೭-೦ ಸ್ಥಾನೀಯ ಸೂಚನಾಯೇ ೭-೧೫ ಗಾನಾಮೃತ (ರೆ) ೭-೩೦ ವಿಶ್ವವಾರ್ತೆ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಆರ್. ಎಸ್. ದೊರೆಸ್ವಾಮಿ (ವೀಣಾವಾದನ) ೯-೦ ಇಂಗ್ಲೀಷಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಎರಡು ಕಿರುತಾರೆಗಳು (೧. ಅಲಮೇಲು ಆಚಾರ್ಯರವರಿಂದ ಬರೆದ ನಂದಿದ ದೀಪ, ೨. ಹೆಚ್. ವಿ. ರಾಮಸ್ವಾಮಿಯವರಿಂದ ಬರೆದ "ಗಾಳಿ ಗೋಪುರ") ೧೦-೦ ಮುಕ್ತಾಯ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕ ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ., ಮೈಸೂ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೫—೯—೧೯೫೦ನೇ ಸೋಮವಾರ [ಸಂಚಿಕೆ ೩೪

ಬೆಂಗಳೂರು ಹಿಂದೂಸ್ಥಾನ್ ವಿಮಾನಕಾರ್ಖಾನೆಯಲ್ಲಿ ಪ್ರತಿಭಟನೆ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ ವಿಮಾನಕಾರ್ಖಾನೆಯ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ. ಎಂ. ಬಿ. ಸಿಂಗರವನ್ನು ಕಾರ್ಖಾನೆಯ ಟರ್ಮಿನೇಷನ್ ಎನ್‌ಕ್ವೈರಿ ಕಮಿಟಿಯು ಕೆಲಸದಿಂದ ವಜಾಮಾಡಿದೆ.

ಈ ಮೇಲಿನ ಕಾರಣದಿಂದ ಕಾರ್ಖಾನೆ ಕೆಲಸಗಾರರು ಪ್ರತಿಭಟನೆ ಸೂಚಿಸಲು ಗುರುವಾರ (ತಾ॥ ೨೧) ಮುಷ್ಕರ ಆರಂಭಿಸಬೇಕೆಂದಿದ್ದರು. ಕಾರ್ಖಾನೆಯವರೇ ಮುಂಜಾಗ್ರತಾ ಕ್ರಮವಾಗಿ ಕೆಲಸ ಬಂದುಮಾಡಿದರು.

ಈ ಲಾಕ್‌ಔಟ್ ಸಂಬಂಧವಾಗಿ ನಿನ್ನೆ ಸಂಜೆ ಬನ್ನಪ್ಪಪಾರ್ಕನಲ್ಲಿ ನಡೆದ ಕಾರ್ಮಿಕರ ಸಭೆಯಲ್ಲಿ ಶ್ರೀ ಸಿಂಗರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳುವವರೆಗೂ ಕಾರ್ಮಿಕರು ಕೆಲಸಕ್ಕೆ ಹೋಗಕೂಡದೆಂದು, ನಿರ್ಣಯವಾಯಿತು. ಶ್ರೀ ಸಿಂಗರವರ ವಜಾ ಆಜ್ಞೆಯನ್ನು ಕಾರ್ಖಾನೆಯ ನೌಕರರ ಮೂಲಕ ಸಭೆಯಲ್ಲಿ ಅವರಿಗೆ ತಲಪಿಸಲು ಯತ್ನಿಸಿದಾಗ ಗಲಾಟೆಯಾದುದಲ್ಲದೆ, ಅದನ್ನು ಅವರು ಸ್ವೀಕರಿಸಲು ನಿರಾಕರಿಸಿದರು. ಸಭೆಗೆ ಸುಮಾರು ೧೦ ೦೦೦ ಜನ ಬಂದಿದ್ದರು.

ಮತ್ತೊಂದು ನಿರ್ಣಯದಲ್ಲಿ, ಕಾರ್ಮಿಕರಿಗೆ ಯೋಗ್ಯ ಸಲಹೆಗಳನ್ನು ಕೊಡಲು ಕ್ರಿಯಾಸಮಿತಿ ರಚಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರ ಕೊಡಲಾಯಿತು.

ಕಾರ್ಖಾನೆ ಸರಹದ್ದಿನಲ್ಲಿ ಸಭೆ ನಡೆಸದಂತೆ ತಡೆಗಟ್ಟಿರುವುದನ್ನು ಪ್ರತಿಭಟಿಸಿ, ಕೂಡಲೇ ಆ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಮಾಡುವ ನಿರ್ಣಯವೂ ಸಹ ಸರ್ವಾನುಮತದಿಂದ ಅಂಗೀಕಾರವಾಯಿತು.

ಫ್ರೆಂಚ್ ಇಂಡಿಯಾ ಪರಿಸ್ಥಿತಿ

ಕೇಂದ್ರ ಸರ್ಕಾರದ ವಿದೇಶಾಂಗ ಶಾಖಾ ಉಪಸಚಿವ ಕೇಸ್ಕರರವರು ಪಾಂಡಿಚೆರಿಗೆ ಹೋಗಿ ಫ್ರೆಂಚ್ ಇಂಡಿಯನ್ನರ ಸ್ಥಿತಿಗತಿಗಳನ್ನು ತಿಳಿದುಕೊಂಡು ಬಂದನಂತರ ಫ್ರೆಂಚ್ ಇಂಡಿಯಾದಲ್ಲಿರುವ ಸರ್ಕಾರ ಮತ್ತು ಅದರ ಅನುಯಾಯಿಗಳು ಶ್ರೀಯುತ ಕೇಸ್ಕರ್ ಮತ್ತು ಭಾರತ ಸರ್ಕಾರದ ಮೇಲೆ ಅಪಪ್ರಚಾರಮಾಡುತ್ತಾ, ಭಾರತದೊಡನೆ ಈ ಪ್ರಾಂತ್ಯವು ಸೇರಬೇಕೆಂದು ಪ್ರಯತ್ನಿಸುತ್ತಲಿರುವ ಸಂಸ್ಥೆಗೆ ನಾನಾವಿಧದ ತೊಂದರೆಗಳನ್ನು ಕೊಡುತ್ತಿರುವುದಲ್ಲದೆ ಸ್ವತಂತ್ರವಾಗಿ ವರ್ತಿಸುತ್ತಾ, ಅನೇಕ ಅಧಿಕಾರಿಗಳಿಗೂ ಕಿರುಕುಳ ಕೊಡುತ್ತಲಿರುವರೆಂದು ತಿಳಿಯಬರುತ್ತದೆ. ವಿದೇಶ ರಾಜ್ಯಗಳಿಗೆ ಭಾರತದಲ್ಲಿ ಇನ್ನು ಮುಂದೆ ಸ್ಥಳವಿಲ್ಲವೆಂದು ಭಾರತ ಪ್ರಧಾನಿ ಪಂಡಿತ ನೆಹರೂರವರು ನಾಸಿಕದಲ್ಲಿ ಹೇಳಿದುದು ವಿಶೇಷ ಪರಿಣಾಮವನ್ನುಂಟುಮಾಡಿರುವುದಾಗಿ ವರದಿಯಾಗಿದೆ.

ಬ್ರಿಟಿಷ್ ಸೈನ್ಯದಮೇಲೆ ಅಮೇರಿಕಾ ಧಾಳಿ

ಆಗ್ನೇಯ ಕೊರಿಯಾ ರಕ್ಷಣಾಕ್ಷೇತ್ರದಲ್ಲಿ ಯುದ್ಧಮಾಡುತ್ತಲಿದ್ದ ಬ್ರಿಟಿಷ್ ಸೈನ್ಯಗಳ ಮೇಲೆ ಅಮೇರಿಕಾ ಫೈಟರ್ ಬಾಂಬರ್ ವಿಮಾನಗಳು ತಪ್ಪಿನಿಂದ ಧಾಳಿ ನಡೆಸಿದುವು. ಅವರ ಮೇಲೆ ಅನೇಕ ಅಗ್ನ್ಯುತ್ಪಾದಕ ಬಾಂಬುಗಳನ್ನು ಹಾಕಿ ಗುಂಡು ಹಾರಿಸಿದುದರ ಪರಿಣಾಮವಾಗಿ ೧೫೦ ಜನರು ಈ ಧಾಳಿಗೆ ತುತ್ತಾಗಿ ಹಲವರು ಸತ್ತಿದ್ದಾರೆ. ಅಮೇರಿಕನ್ನರು ತಮ್ಮ ತಪ್ಪಿಗಾಗಿ ವ್ಯಸನವನ್ನು ಸೂಚಿಸಿರುವರು.

ಶ್ರೀ. ತಾಂಡನ್ನರು ಕಲ್ಕತ್ತೆಗೆ

ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ತಾಂಡನ್ನರವರು ಕಲ್ಕತ್ತೆಗೆ ಸೆ. ೩೦ ರಲ್ಲಿ ಹೋಗುವರು. ಅಲ್ಲಿ ಅನೇಕ ಸಭೆಗಳೇರ್ಪಾಡಾಗಿವೆ. ಬಾಬು ಪುರುಷೋತ್ತಮರು ಆ ಸಭೆಗಳಲ್ಲಿ ಭಾಷಣ ಮಾಡುವರೆಂದು ತಿಳಿಯಬರುತ್ತದೆ.

ತ್ರಿರಾಷ್ಟ್ರ ಸಮ್ಮೇಳನ

ಅಮೇರಿಕಾ, ಇಂಗ್ಲೆಂಡ್ ಮತ್ತು ಫ್ರಾನ್ಸ್ ರಾಷ್ಟ್ರಗಳು ಯುದ್ಧ ರಕ್ಷಣಾಕ್ರಮಗಳನ್ನು ಕುರಿತು ವಿಷದವಾಗಿ ಚರ್ಚಿಸಿದರು. ಈ ಸಮ್ಮೇಳನದಲ್ಲಿ ಏಕಮುಖವಾದ ಮತ್ತು ಸುವ್ಯವಸ್ಥಿತವಾದ ರಕ್ಷಣಾಯೋಜನೆಯನ್ನು ಪರಿಶೀಲಿಸಿದರೆಂದು ತಿಳಿಯಬರುತ್ತದೆ.

ಸ್ತ್ರೀ ಕೈದಿಗಳಮೇಲೆ ಲಾಠಿ ಚಾರ್ಜು

ಪೂರ್ವ ಪಾಕಿಸ್ತಾನದ ಸಿಲ್ಹೇಟ್ ಸಬ್ ಜೈಲಿನಲ್ಲಿದ್ದ ಸ್ತ್ರೀ ಕೈದಿಗಳ ಮೇಲೆ ಬಲವಾದ ಲಾಠಿ ಚಾರ್ಜ್ ಮಾಡಿದರೆಂದು ತಿಳಿಯಬರುತ್ತದೆ. ಅವರಿಗೆ ತೀವ್ರ ಘಾಯಗಳಾಗಿವೆಯೆಂದು ವರದಿಯಾಗಿದೆ. ಕಿಸಾನ್ ಚಳುವಳಿಯಲ್ಲಿ ಭಾಗವಹಿಸಿದರೆಂದು ಅವರನ್ನು ಬಂಧಿಸಲಾಗಿದೆ.

ಕಮ್ಯೂನಿಸ್ಟರ ಶಾಂತಿ ಸಮ್ಮೇಳನ

ಬ್ರಿಟನ್ನಿನ ಷೆಫೀಲ್ಡಿನಲ್ಲಿ ಇದೇ ನವಂಬರ್ ತಿಂಗಳಿನಲ್ಲಿ ನಡೆಯಲಿರುವ "ಪ್ರಪಂಚದ ಶಾಂತಿ ರಕ್ಷಕರ ಸಮ್ಮೇಳನ"ಕ್ಕೆ ಪೂರ್ವಸಿದ್ಧತೆಗಳನ್ನು ಬ್ರಿಟಿಷ್ ಕಮ್ಯೂನಿಸ್ಟ್ ಪಾರ್ಟಿಯು ಮಾಡುತ್ತಿದೆ. ಈ ಸಮ್ಮೇಳನಕ್ಕೆ ೨,೫೦೦ ಪ್ರತಿನಿಧಿಗಳು ಬರುವಂತೆ ಏರ್ಪಡಿಸಲಾಗುವುದೆಂದು ತಿಳಿಯಬರುತ್ತದೆ. ಈ ಕಾಂಗ್ರೆಸ್ಸಿನ ಶಾಂತಿ ಮನವಿಗೆ ಸೋವಿಯೆಟ್ ರಷ್ಯಾದ ವಯಸ್ಕರೆಲ್ಲರೂ ಸಹಿ ಹಾಕಿದ್ದಾರೆಂದು ತಿಳಿಯಬರುತ್ತದೆ. (೧೧, ೫೨, ೭೫, ೬೪೦).

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಬಾಬು ತಾಂಡನ್ನರು ತಾತನ ಸಹಿ ಕಂಡರು!

ಶ್ರೀ ಬಾಬು ಪುರುಷೋತ್ತಮದಾಸ್ ತಾಂಡನ್ನರು ಗೋದಾವರಿ ನದೀ ಮೂಲವನ್ನು ನೋಡಲೋಸುಗ ನಾಸಿಕದಿಂದ ೧೮ ಮೈಲಿ ದೂರದಲ್ಲಿರುವ ತ್ರಿಯಂಬಕೇಶ್ವರಕ್ಕೆ ಭೇಟಿಕೊಟ್ಟಾಗ, ಅಲ್ಲಿ ವೃದ್ಧ ಪುರೋಹಿತರೊಬ್ಬರು ಶ್ರೀ. ತಾಂಡನ್ನವರ ತಾತಂದಿರಾದ ದಿವಂಗತ ಲಾಲಾ ಫಕೀರಚಂದರ ಸಹಿಯನ್ನು ತಮ್ಮ ಪೌರೋಹಿತ್ಯ ಪುಸ್ತಕದಲ್ಲಿ ತೋರಿಸಿದರು. ಶ್ರೀ. ತಾಂಡನ್ನವರ ತಾತಂದಿರು ೧೯[illegible]ನೇ ಇಸ್ವಿಯಲ್ಲಿ ನಾಸಿಕಕ್ಕೆ ಯಾತ್ರೆ ಹೋಗಿದ್ದಾಗ ಈ ಪುರೋಹಿತರಿಂದಲೇ ಪೂಜೆ ಇತ್ಯಾದಿ ಕರ್ಮಗಳನ್ನು ನಡೆಸಿದ್ದರೆಂದೂ ಮತ್ತು ಅಲ್ಲಿನ ಪುರೋಹಿತರ ಪದ್ಧತಿಯಂತೆ ಪುಸ್ತಕದಲ್ಲಿ ಸಹಿಹಾಕಿರಿಸಿದ್ದರೆಂದೂ ತಿಳಿದುಬಂದಿದೆ.

ಚರ್ಚ್ ಅಪಘಾತ

ಅತಿವೃಷ್ಟಿಯ ಕಾರಣದಿಂದ ಫಿರೋಜಪುರದಲ್ಲಿನ ಶೇ. ೩೦ ರಷ್ಟು ವಾಸಗೃಹಗಳು ಕುಸಿದುಬಿದ್ದಿವೆ. ಅಮೆರಿಕನರ ಕ್ರಿಶ್ಚಿಯನ್ ಮಿಷನ್ನಿಗೆ ಸೇರಿದ ಚರ್ಚ್ ಮತ್ತು ಶಾಲಾಕಟ್ಟಡಗಳೂ ಸಹ ಜಖಂ ಆಗಿವೆ. ಇದರ ನಷ್ಟ ಸುಮಾರು ೭ ಲಕ್ಷವೆಂದು ಅಂದಾಜು ಮಾಡಲಾಗಿದೆ. ಒಂದು ವಾರದಲ್ಲಿ ೨೭ ಅಂಗುಲ ಭಾರಿ ಮಳೆಯಾದುದೇ ಇದಕ್ಕೆ ಮೂಲಕಾರಣವೆಂದು ತಿಳಿದುಬರುತ್ತದೆ.

ವಿಮಾನದಿಂದ ಆಹಾರ

ಪಂಜಾಬಿನಲ್ಲಿ ಪ್ರವಾಹಕ್ಕೀಡಾದ ಪ್ರದೇಶಗಳಿಗೆ ಫ್ಲೈಟ್. ಲೆ॥ ಜಸ್‌ಪಾಲ್ ಸಿಂಗರ ನೇತೃತ್ವದಲ್ಲಿ ಭಾರತೀಯ ವಿಮಾನದಳದ ವಿಮಾನಗಳ ಮೂಲಕ [illegible]೦೦೦ ಪೌಂಡು (ಚಪಾತಿ, ಹುರಿದ ಧಾನ್ಯಗಳು, ಓಟ್ಸ್, ತರಕಾರಿ, ಉಪ್ಪು ಮತ್ತು ಟೀ) ಹಾಕಲಾಯಿತೆಂದು ವರದಿಯಾಗಿದೆ.

ಭಾರತದಲ್ಲಿ ಮತದಾರರು

ಭಾರತದಲ್ಲಿ ಒಟ್ಟು ಮತದಾರರು ಸುಮಾರು ೧೭ ಕೋಟಿಯಾಗಬಹುದೆಂದು ಚುನಾವಣಾಮುಖ್ಯಾಧಿಕಾರಿ ಶ್ರೀ, ಸೇನರವರು ತಿಳಿಸಿರುವರು.

★ ಸಿರ್ಹೋಜೈಮ್ ★ ಮಕ್ಕಳ ಲಿವರ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★

ರೈಲ್ವೆ ಅಪಘಾತ

ಇಲ್ಲಿಗೆ ೫ ಮೈಲಿ ದೂರದಲ್ಲಿ ಮೈಸಾಲ್ ಬಳಿ ಒಂದು ಗುಡ್ಸ್ ರೈಲಿನ ೧೪ ವ್ಯಾಗನ್‌ಗಳು ಕಂಬಿ ತಪ್ಪಿದವೆಂದೂ ರೈಲಿನ ಗಾರ್ಡಿಗೆ ಗಾಯಗಳಾಗಿವೆಯೆಂದೂ ತಿಳಿದುಬಂದಿದೆ.

ರೈಲ್ವೆ ನಿಲ್ದಾಣದಲ್ಲಿ ದರೋಡೆ

ನಾಲ್ವರು ಆಗಂತುಕರು ಕತ್ತಿ, ಕುಡುಗೋಲುಗಳನ್ನು ಹಿಡಿದುಕೊಂಡು ನಿನ್ನೆ ರಾತ್ರಿ ಬಂದು ಮುಂಬ್ರಾ ರೈಲ್ವೆ ನಿಲ್ದಾಣದಲ್ಲಿ ಸ್ಟೇಷನ್ ಮಾಸ್ಟರರ ಮೇಲೆ ಬಿದ್ದು ೧೦೪೪ ರೂ. ಗಳ ಚೀಲವೊಂದನ್ನು ಅಪಹರಿಸಿದರೆಂದು ತಿಳಿದುಬಂದಿದೆ. ಸ್ಟೇಷನ್ ಮಾಸ್ಟರಿಗೆ ಗಾಯವೇನೂ ಆಗಿಲ್ಲವೆಂದೂ ಆಗಂತುಕರು ತಲೆತಪ್ಪಿಸಿಕೊಂಡು ಓಡಿದರೆಂದೂ ಹೇಳಲಾಗಿದೆ.

ಲಕ್ನೋದಲ್ಲಿ

ಮೊನ್ನೆ ಕೋಮುವಾರು ಘರ್ಷಣೆ ನಡೆದನಂತರ ಇದೀಗ ಶಾಂತಪರಿಸ್ಥಿತಿ ಮೂಡಿದೆ. ಕಂಟೋನ್ಮೆಂಟ್ ಪ್ರದೇಶದಲ್ಲಿ ನಿನ್ನೆ ಬೆಳಗ್ಗೆ ೧೦ ಘಂಟೆಗೆ ಕರ್ಫ್ಯೂ ರದ್ದಾಗಿದೆ.

ಸಿಡಿಮದ್ದಿನ ಕಾರ್ಖಾನೆಯ ಬಳಿ ೨೦೦೦ ಮಂದಿ ನಿರಾಶ್ರಿತರ ಗೃಹಗಳಿರುವೆಡೆಯಲ್ಲಿ ಕೆಲವು ಗಂಟೆಗಳ ಕಾಲ ಕರ್ಫ್ಯೂ ನಡಿಸಲಾಗಿದೆ.

ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಆಪಾದನೆ ಮೇಲೆ ಇದುವರೆಗೆ ೧೫೫ ಜನರನ್ನು ದಸ್ತಗಿರಿಮಾಡಲಾಗಿದೆ.

ಪಂಜಾಬಿನಲ್ಲಿ ವಿಪರೀತ ನಷ್ಟ

ಗುರುದಾಸಪುರ ಜಿಲ್ಲೆಯಲ್ಲಿ ಪ್ರವಾಹದಿಂದ ವಿಪರೀತ ಪ್ರಮಾಣದಲ್ಲಿ ಮನೆಮಠಗಳು ನಷ್ಟವಾಗಿವೆ. ಬಟೇಲ ತಾಲ್ಲೂಕಿನಲ್ಲಿ ೮೦೦೦ ಮನೆಗಳೂ, ಬಟೇಲ ಊರಿನಲ್ಲೇ ೧೦೦೦ ಮನೆಗಳೂ ನಷ್ಟವಾಗಿವೆ.

ಸೈನ್ಯ ವಿಸ್ತರಣೆ

ಇಟಲಿಯಲ್ಲಿ ಸುಮಾರು ೭೩ ಕೋಟಿ ರೂಪಾಯಿಗಳನ್ನು ಹಣವನ್ನು ವ್ಯಯಮಾಡಿ ಈಗಿರುವ ಸೈನ್ಯ ಸಂಖ್ಯೆಯನ್ನು ಹೆಚ್ಚಿಸಲಾಗುವುದೆಂದು ತಿಳಿಯುಬರುತ್ತದೆ.

ಕೇಂದ್ರದಿಂದ ಮೈಸೂರಿಗೆ

ಅಭಿವೃದ್ಧಿಕಾರ್ಯಗಳಿಗಾಗಿ ಕೇಂದ್ರ ಸರ್ಕಾರವು ಮೈಸೂರಿಗೆ ೨೦ ಕೋಟಿ ರೂಪಾಯಿಗಳನ್ನು ಕೊಡುವುದಾಗಿ ತಿಳಿದುಬರುತ್ತದೆ. ಈ ಮೊಬಲಗನ್ನು ಗ್ರಾಂಟ್ ಎಂದು ಕೊಡುವರೊ ಅಥವಾ ಸಾಲವೋ ಇನ್ನೂ ಇತ್ಯರ್ಥವಾಗಿಲ್ಲ.

೧೯೫೧ ಕ್ಕೆ ಗೋಧಿ

ಭಾರತಕ್ಕೆ ೧೯೫೧ ರಲ್ಲಿ ಬೇಕಾಗುವ ಗೋಧಿಯನ್ನು ಅಮೆರಿಕಾ ಮತ್ತು ಕೆನಡಾಗಳಿಂದ ಕೊಳ್ಳಲು ಸಾಧ್ಯವೇಯೆಂಬುದನ್ನು ಪರಿಶೀಲಿಸಲು ಕೇಂದ್ರ ಆಹಾರ ಕಾರ್ಯದರ್ಶಿಗಳು ಅಮೆರಿಕಾಕ್ಕೆ ಹೊರಟಿರುವರು.

ಶ್ರೀ ಸಿ. ಎನ್. ಶೇಷಾದ್ರಿ

ಡಿಸ್ಟ್ರಿಕ್ಟ್ ಡೆವಲೆಪ್‌ಮೆಂಟ್ ಆಫೀಸರಾದ ಶ್ರೀ. ಸಿ. ಎನ್. ಶೇಷಾದ್ರಿಯವರನ್ನು ಮೈಸೂರು ಜಿಲ್ಲೆಗೆ ವರ್ಗಾಯಿಸಿರುವುದನ್ನು ಸರ್ಕಾರದವರು ರದ್ದುಮಾಡಿದ್ದಾರೆ.

ತುಪ್ಪದಮೇಲಿನ ಹತೋಟಿ

ತುಪ್ಪದ ಮೇಲಿನ ಹತೋಟಿಯನ್ನು ಕೇಂದ್ರ ಸರ್ಕಾರವು ರದ್ದುಮಾಡಿರುವುದರಿಂದ, ಮೈಸೂರು ಸಂಸ್ಥಾನದಲ್ಲಿಯೂ ರದ್ದಾಗಿದೆ. ತುಪ್ಪದ ವ್ಯಾಪಾರ, ಸಾಗಾಣಿಕೆ ನಿರಾಂತಕವಾಗಿ ಭಾರತದ ಎಲ್ಲಾ ಭಾಗದಲ್ಲೂ ನಡೆಸಬಹುದು.

ವರ್ತಕ ಸಮ್ಮೇಳನ

ದಾವಣಗೆರೆಯಲ್ಲಿ ಇದೇ ಮಾಹೇ ೨೯ನೇ ತಾ|| ನಡೆಯಲಿರುವ ವರ್ತಕಸಮ್ಮೇಳನದ ಆರಂಭೋತ್ಸವವನ್ನು ಶ್ರೀ ಪಾಮಡಿ ಸುಬ್ಬರಾಮಶೆಟ್ಟಿಯವರು ನೆರವೇರಿಸುವರು.

ಶ್ರೀ ಬಿ. ಕೃಷ್ಣರಾಯರು

ಮೈಸೂರು ಮರಿಮಲ್ಲಪ್ಪ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ. ಬಿ. ಕೃಷ್ಣರಾಯರು ಚಿತ್ರದುರ್ಗಜಿಲ್ಲಾ ವಿದ್ಯಾಧಿಕಾರಿಗಳಾಗಿ ನೇಮಕವಾಗಿದ್ದಾರೆ.

ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷತೆ

ಮೈಸೂರು ನಗರದಿಂದ ಪತ್ರಿಕೋದ್ಯೋಗಿ ಸಮ್ಮೇಳನ ಅಧ್ಯಕ್ಷತೆಗೆ ಉಮೇದುವಾರರಾಗಿದ್ದ ಅರುಣ ಪತ್ರಿಕೆ ಸಂಪಾದಕ ಶ್ರೀ. ಹೆಚ್. ಕೆ. ಕುಮಾರಸ್ವಾಮಿಯವರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿರುವುದಾಗಿ ತಿಳಿಯುಬರುತ್ತದೆ.

ಶಾಸನ ತಿದ್ದುಪಡಿ

ಪಾನನಿರೋಧ ವಿಧಿಯ ಕೆಲವು ಭಾಗಗಳು ಬೊಂಬಾಯಿ ಶ್ರೇಷ್ಠ ನ್ಯಾಯಾಲಯವು ನ್ಯಾಯಸಮ್ಮತವಲ್ಲವೆಂದು ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದನ್ನು ಬೊಂಬಾಯಿ ಸರ್ಕಾರವು ಒರಿಸಿಕೊಂಡು ಜಾರಿಗೆ ತರಲು ಪಾನನಿರೋಧ ಶಾಸನದ ಕೆಲವು ವಿಧಿಗಳನ್ನು ತಿದ್ದುಪಡಿಮಾಡಿರುವರು. ಆರೋಗ್ಯನಿಮಿತ್ಯ ೩ ಯೂನಿಟ್ಟುಗಳಿಂದ ೪ ಯೂನಿಟ್ಟುಗಳಿಗೆ ರಹದಾರಿ ಕೊಡಬಹುದೆಂದು ಆಜ್ಞೆ ಹೊರಡಿಸಿದೆ.

ತೃತೀಯ ಯುದ್ಧ

ಮೂರನೇ ಯುದ್ಧವೇನಾದರೂ ಸಂಭವಿಸಿದರೆ ಬ್ರಿಟನ್ ಉಳಿಯಲಾರದು. ಕೂಡಲೇ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಬ್ರಿಟನ್ನಿನಿಂದ ಜನರು ತೆರಳಬೇಕು ಎಂದು ಟರ್ಬೋಜೆಟ್ ಇಂಜನ್ನಿನ ತಯಾರಿಕೆಗಾರರಾದ ಸರ್ ಫ್ರಾಂಕ್‌ವಿಟ್ಲ್‌ರವರು ಹೇಳುತ್ತಾ ಬ್ರಿಟನ್ನಿನಲ್ಲಿರುವ ೩ ಕೋಟಿ ಜನರನ್ನು ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಸಾಗಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದಲ್ಲದೆ ಬ್ರಿಟಿಷರು ಯುದ್ಧ ಕೈಗಾರಿಕಾ ಕಾರ್ಖಾನೆಗಳು, ವಿಮಾನ ಧಾಳಿ ಭೀತಿಯಿಲ್ಲದಿರುವ ಕೆನಡಾಕ್ಕೆ ರವಾನಿಸಬೇಕೆಂದು ಹೇಳಿದ್ದಾರೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೬ ಮೀಟರು

ಸೆಪ್ಟೆಂಬರ್ ೨೬ ಮಂಗಳವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರ ಸಂಗೀತ (ರ) ೭-೧೫ ಪಾರ್ವತಿ ಮತ್ತು ತಂಗಮ್ಮ. (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೩೦ ಎಚ್. ಟಿ. ವೆಂಕಟರಮಣಯ್ಯ (ಪಿಟೀಲು) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಹೇಮಂತ ಕುಮಾರಿ (ರ) ೨-೦ ಪಾರ್ವತಿ ಮತ್ತು ತಂಗಮ್ಮ (ಸಂಗೀತ) ೨-೩೦ ಮುಕ್ತಾಯ

ಸಂಜೆ ೫-೩೦ ವಾದ್ಯತ್ರಯ ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆಗಳು (ಹಿಂದಿ) ೭-೫ ಅರಮನೆ ಕರ್ನಾಟಕ ಬ್ಯಾಂಡ್ ೭-೩೦ ಕಿರುಗಥೆ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಹೆಚ್. ಟಿ. ವೆಂಕಟರಮಣಯ್ಯ (ಪಿಟೀಲು) ೮-೩೦ ವಾದ್ಯತ್ರಯ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ, ೯-೩೦ ಗಾನವರ್ಷಿಣಿ (ರ) ೧೦-೦ ಮುಕ್ತಾಯ.

ರಣಜಿತ್
ತಾ|| 22-9-50 ರಿಂದ ದಿನವೂ 3 ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ, (Khilari)
(ಹಿಂದಿ)
ಬೆಳಗಿನ ಪ್ರದರ್ಶನ
22-9-50ರಿಂದ ಮೂರು ದಿನಗಳು ಮಾತ್ರ
ಮೈಸೂರು ಸಾಬು ಪಾತ್ರವಹಿಸಿರುವ
ವರ್ಣರಂಜಿತ ಹಿಂದಿ ಚಿತ್ರ
ಬಾಗದಾದ್-ಕ-ಚೋರ್

WANTED

Those who are interested to take up the Sole Agency of the 'Samachara' Kannada daily, may contact in person.

The Manager,
'Samachara' daily,
Lansdowne Buildings, Mysore.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೬—೯—೧೯೫೦ ನೇ ಮಂಗಳವಾರ [ಸಂಚಿಕೆ ೩೫

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ರಚನೆ

ಬಾಬು ಪುರುಷೋತ್ತಮದಾಸ್ ಟಾಂಡನ್‌ರವರು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದ ಮೇಲೆ ತಮ್ಮ ಕಾರ್ಯಕಾರಿ ಸಮಿತಿ ರಚಿಸಲು ದಿಲ್ಲಿಗೆ ಆಗಮಿಸಿದ್ದಾರೆ. ಪ್ರಧಾನಿ ಪಂಡಿತ ನೆಹರೂ, ಸರದಾರ್ ಪಟೇಲ್ ಮತ್ತಿತರ ಕಾಂಗ್ರೆಸ್ ನಾಯಕರುಗಳನ್ನೂ ಮತ್ತು ಕೇಂದ್ರ ಸರ್ಕಾರದ ಮಂತ್ರಿಗಳನ್ನೂ ಭೇಟಿಮಾಡಿ ಸಲಹೆ ಪಡೆಯಲಿರುವರು. ನಾಸಿಕ ಕಾಂಗ್ರೆಸ್ಸಿನ ತೀರ್ಮಾನಕ್ಕನುಸಾರವಾಗಿ, ಇವರೆಲ್ಲರ ಸಲಹೆ ಪಡೆದ ನಂತರ, ಕಾಂಗ್ರೆಸ್ಸಿನ ಘೋಷಣೆಯನ್ನು ಯಶಸ್ವಿಯಾಗಿ ಕಾರ್ಯರೂಪದಲ್ಲಿ ತರಲು ಸಹಾಯಕವಾಗುವ ಸಮಿತಿಯನ್ನು ರಚಿಸುವರೆಂದು ತಿಳಿದು ಬರುತ್ತದೆ.

ಬೆಂಗಳೂರು ವಿಮಾನ ಕಾರ್ಖಾನೆ ಮುಷ್ಕರ ಪರಿಸ್ಥಿತಿ

ಕೆಲಸದಿಂದ ವಜಾಮಾಡಲ್ಪಟ್ಟಿರುವ ತಮ್ಮ ಸಂಘದ ಕಾರ್ಯದರ್ಶಿ ಶ್ರೀ ಎಂ. ಬಿ. ಸಿಂಗರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವವರೆಗೆ ಕೆಲಸಕ್ಕೆ ಹೋಗಬಾರದೆಂದು ಮೊನ್ನೆ ಬನಪ್ಪಾ ಪಾರ್ಕಿನಲ್ಲಿ ನಡೆದ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಕೆಲಸಗಾರರು ಸರ್ವಾನುಮತದಿಂದ ತೀರ್ಮಾನಿಸಿದ್ದಾರೆ.

ಸಭೆಯು ಪ್ರಾರಂಭವಾದ ಸಮಯದಲ್ಲಿ ಶ್ರೀ ಸಿಂಗರಿಗೆ ಕೆಲಸದಿಂದ ವಜಾಮಾಡಿರುವ ಆಜ್ಞೆಯನ್ನು ಕೊಡಲು ಆಡಳಿತಪರವಾಗಿ ಒಬ್ಬರು ಬಂದುದನ್ನು ಅವರು ಸ್ವೀಕರಿಸಕೂಡದೆಂದು ಸರ್ವಾನುಮತ ಅಭಿಪ್ರಾಯದಂತೆ ನಿರಾಕರಿಸಲಾಯಿತು.

ಪ್ರಜಾಸತ್ತಾತ್ಮಕ ಕಾರ್ಮಿಕ ಚಳುವಳಿಯನ್ನು ತಡೆಯಲು ಹಾಕಿರುವ ಪ್ರತಿಬಂಧಕಾಜ್ಞೆಗಳನ್ನು ಖಂಡಿಸಿ, ಕೂಡಲೇ ಅದನ್ನು ವಾಪಸ್ಸು ಪಡೆಯಬೇಕೆಂದು ಸಭೆಯು ಒಮ್ಮತಾಭಿಪ್ರಾಯಪೂರ್ವಕ ನಿರ್ಣಯಮಾಡಿತು.

ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಲು ಒಂದು ಕ್ರಿಯಾಸಮಿತಿಯೊಂದನ್ನು ಕಾರ್ಯನಿರ್ವಾಹಕ ಸಮಿತಿ ರಚಿಸಬೇಕೆಂದು ತೀರ್ಮಾನವಾಯಿತು.

ಸಂಘದ ಉಪಾಧ್ಯಕ್ಷ ಶ್ರೀ ಜಿ. ದಂಡಾಯುಧಂರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಎಂ. ಬಿ. ಸಿಂಗರು ಭಾಷಣಮಾಡಿ ತಾವು ಆಗಲೇ ಇತ್ತ ಹೇಳಿಕೆಯನ್ನು ಸಮರ್ಥಿಸಿದರು.

ಕಾರ್ಖಾನೆಯ ಅವಶ್ಯ ನೌಕರ ಸಿಬ್ಬಂದಿಯು ಕೆಲಸಕ್ಕೆ ಹಿಂತಿರುಗಲು ಕೆಲಸಗಾರರ ಸಂಘದ ಕ್ರಿಯಾಸಮಿತಿ ಅನುಮತಿಯಿತ್ತಿದೆ. ವಾಚ್‌ಅಂಡ್‌ವಾರ್ಡ್, ಫೈರ್‌ಪ್ರೊಟೆಕ್ಷನ್ ಸಿವಿಲ್ ಮತ್ತು ಆರೋಗ್ಯಶಾಖೆ, ಬಸ್‌ಡ್ರೈವರುಗಳು, ನೀರು ಲೈಟು ಮತ್ತು ಕ್ಯಾಂಟಿನ್ ಸಿಬ್ಬಂದಿ ಸುಮಾರು ೧೫೦ ಮಂದಿ ನೌಕರರು ಈ ಅವಶ್ಯ ನೌಕರ ಸಿಬ್ಬಂದಿಗೆ ಸೇರಿದವರು.

ಪೋಲೀಸಿನವರಿಂದ ಢಕಾಯಿತರ ದಸ್ತಗಿರಿ

ಮಧ್ಯ ಭಾರತ್ ಮತ್ತು ವಿಂಧ್ಯ ಪ್ರದೇಶ ಈ ಎರಡು ಪ್ರಾಂತಗಳ ನಡುವೆ ಢಕಾಯಿತರ ಗುಂಪನ್ನೂ ಮಧ್ಯ ಭಾರತ ಸರ್ಕಾರ ಪೋಲೀಸಿನವರು ದಸ್ತಗಿರಿಮಾಡಿದ್ದಾರೆ. ಇವರು ಕಳೆದ ಫೆಬ್ರವರಿ ಮಾಹೆಯಿಂದ ಅನೇಕ ಢಕಾಯಿತಿ ಕೆಲಸಗಳಲ್ಲಿ ತೊಡಗಿದ್ದಲ್ಲದೆ ಅನೇಕ ಅಮಾನುಷ ಕೃತ್ಯಗಳನ್ನೂ ಎಸಗಿದರೆಂದೂ ಈ ಗುಂಪಿನಲ್ಲಿ ಒಂಭತ್ತು ಮಂದಿ ಇದ್ದರೆಂದೂ ಗೊತ್ತಾಗಿದೆ.

ಮೈಸೂರು ಸೋಷಲಿಸ್ಟ್‌ಪಾರ್ಟಿ ಕರೆ

ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷ ಆಚಾರ್ಯ ನರೇಂದ್ರದೇವ್‌ರವರು ಮನವಿಗನುಸಾರವಾಗಿ ಮೈಸೂರು ದೇಶದ ಅದ್ಯಂತ ಮುಂಬೈಯಿ ಗಿರಣಿಗಳ ಮುಷ್ಕರಗಾರರ ಹೋರಾಟಕ್ಕೆ ಬೆಂಬಲನೀಡಲು ಇದೇ ೨೭ ನೇ ತಾರೀಖಿನಂದು ಮೈಸೂರು ಸಂಸ್ಥಾನ ಎಲ್ಲಾ ಕಡೆಗಳಲ್ಲಿಯೂ ಮುಂಬೈಯಿ ಮುಷ್ಕರದಿನಾಚರಣೆಯನ್ನು ಆಚರಿಸಬೇಕೆಂದು ಸಂಸ್ಥಾನದ ಶಾಖೆಯ ಸೋಷಿಯಲಿಸ್ಟ್‌ಪಾರ್ಟಿ ಕಾರ್ಯದರ್ಶಿಗಳು ಸೂಚಿಸಿದ್ದಾರೆ.

ಕಾಂಗ್ರೆಸ್ ಪುರಸದಸ್ಯರ ಧೈರ್ಯ

ಬಳ್ಳಾರಿ ಪುರಸಭಾ ಕಾಂಗ್ರೆಸ್ ಸದಸ್ಯರಾದ ಶ್ರೀ. ಡಿ. ಎಚ್. ವೆಂಕೋಬರಾಯರು ನೆನ್ನೆ ದಿನ ತಮ್ಮ ಕೈಲಿ ಬಂದೂಕನ್ನಿಟ್ಟುಕೊಂಡು ಇಬ್ಬರು ಪೋಲೀಸರಕ್ಷಣೆಯನ್ನು ಪಡೆದು ಪುರಸಭೆಯ ಕೌನ್ಸಿಲ್ ಸಭೆಗೆ ಹಾಜರಾದರು. ಏಕೆಂದರೆ ಪಾಸನಿಷೇಧದ ಬಗ್ಗೆ ಅಪಾದನೆಗಳನ್ನು ಹುಡುಕಲು ಪೋಲೀಸರಿಗೆ ಸಹಕಾರ ನೀಡುವರೆಂಬ ಕಾರಣದಿಂದ ಅವರನ್ನು ಕೊಲ್ಲುವುದಾಗಿ ಹಲವರು ಬೆದರಿಸಿದ್ದರು. ಆದ್ದರಿಂದ ಅವರು ಎಚ್ಚರಿಕೆಯಾಗಿರಲು ಈ ರೀತಿ ಕ್ರಮ ಕೈಗೊಂಡರು.

ಅಸ್ಸಾಂ ಭೂಕಂಪನಿಧಿಗೆ

ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ

ಅಸ್ಸಾಂ ಭೂಕಂಪನಿಧಿ ಸಮಿತಿ

ಮುನಿಸಿಪಲ್ ಆಫೀಸ್, ಮೈಸೂರು.

ದಸ್ತಗಿರಿ ಅಕ್ರಮ

ಆಕಾಲಿದಳದ ನಾಯಕರಾದ ಮಾಸ್ಟರ್ ತಾರಾಸಿಂಗರವರನ್ನು ಸಾರ್ವಜನಿಕ ರಕ್ಷಣಾಕಾನೂನಿನ ಪ್ರಕಾರವಾಗಿ ಬಂಧಿಸಿರುವುದು ಅಕ್ರಮವೆಂದೂ ಮತ್ತು ರಾಜ್ಯಾಂಗ ಶಾಸನಕ್ಕೆ ವಿರುದ್ಧವೆಂದೂ ಡಿಫೆನ್ಸ್ ವಕೀಲರು ಹೈಕೋರ್ಟಿನ ಮುಂದೆ ವಾದಿಸಿದ್ದಾರೆ.

ಬಾಲಕನ ಕಾಣಿಕೆ

ಕಲ್ಕತ್ತಾದ ಶಾಲಾ ಬಾಲಕ ಅರುಣ್ ಎನ್. ದೋಷಿಯು ಪ್ರಧಾನಿ ನೆಹರೂರವರಿಗೆ ೨೫ ರೂ. ಚೆಕ್ಕನ್ನು ಅಸ್ಸಾಂ ಪರಿಹಾರ ನಿಧಿಗಾಗಿ ಕಳುಹಿಸಿ ಅದಕ್ಕೆ ಬದಲು ಪಂ|| ನೆಹರೂರವರ ಹಸ್ತಾಕ್ಷರದಿಂದ ಕೂಡಿದ ಭಾವಚಿತ್ರವನ್ನು ಅಪೇಕ್ಷಿಸಿದ್ದಾನೆ.

ಮೈಸೂರಿನಿಂದ-ಬೊಂಬಾಯಿಗೆ

ಬೊಂಬಾಯಿ ರೋಡ್ ಟ್ರಾನ್ಸ್‌ಪೋರ್ಟ್ ಶಾಖೆಯ ಉಪಾಧ್ಯಕ್ಷರಾದ ಶ್ರೀ. ಡಿ.ಡಿ. ಸಾಥೆಯವರು ಬೊಂಬಾಯಿ–ಮೈಸೂರು ಮತ್ತು ಬೊಂಬಾಯಿ-ಹೈದರಾಬಾದ್‌ಗಳಿಗೆ ನೇರವಾಗಿ ಬಸ್ ಸರ್ವಿಸ್ ವ್ಯವಸ್ಥೆ ಏರ್ಪಡಲಿದೆಯೆಂದೂ, ಈ ವಿಷಯದಲ್ಲಿ ಆಯಾ ಸಂಸ್ಥಾನದ ಸರ್ಕಾರದೊಡನೆ ಸಮಾಲೋಚಿಸುವರೆಂದೂ ತಿಳಿಯಬಂದಿದೆ.

ವಿಮಾನ ಕಾರ್ಖಾನೆ

ಬೆಂಗಳೂರು ವಿಮಾನ ಕಾರ್ಖಾನೆಯಲ್ಲಿ ಪರಿಸ್ಥಿತಿಯು ಶಾಂತವಾಗಿದೆಯೆಂದೂ, ಮತ್ತು ಎಸೆನ್‌ಷಿಯಲ್ ಸರ್ವಿಸ್ಸುಗಳಲ್ಲಿ ೪೦೦ ಜನ ಕೆಲಸಗಾರರು ಮಾಮೂಲಿನಂತೆ ಕೆಲಸ ಮಾಡುತ್ತಿದ್ದಾರೆಂದೂ ಅಧಿಕೃತ ಪ್ರಕಟಣೆಯು ತಿಳಿಸುತ್ತದೆ.

ಚೀಣಾದ ಮೇಲೆ ಅಮೇರಿಕನ್ ಧಾಳಿ

ಚೀಣೀ ಪ್ರದೇಶದಮೇಲೆ ಮೂರುಸಲ ಅಮೆರಿಕನ್ ವಿಮಾನಗಳು ಬಾಂಬು ಹಾಕಿದವೆಂದು ಪೀಕಿಂಗ್ ರೇಡಿಯೋ ಆಪಾದಿಸಿದೆ. ಲಕೊಹಾವೋ ಮತ್ತು ಅಂಟುಂಗ್ ಹಳ್ಳಿಗಳ ಮೇಲೆ ಈ ಧಾಳಿ ನಡೆಯಿತೆಂದೂ ಇದರಿಂದ ೭ ಜನಗಳಿಗೆ ಗಾಯಗಳಾಯಿತೆಂದೂ ಮತ್ತು ಒಟ್ಟು ೨೦ ಬಾಂಬುಗಳನ್ನು ಹಾಕಿದರೆಂದೂ ವರದಿಯಾಗಿದೆ

ಧೂಮಪಾನ ನಿಷೇಧ

೧೬ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಬೀಡಿ, ಸಿಗರೇಟು ಇತ್ಯಾದಿ ಸೇವಿಸಕೂಡದೆಂದು ಬೊಂಬಾಯಿ ಸರ್ಕಾರ ಆಜ್ಞೆಹೊರಡಿಸಲಿದೆಯೆಂದು ತಿಳಿದು ಬರುತ್ತದೆ.

ಪೀಕಿಂಗ್ ಸರ್ಕಾರಕ್ಕೆ ಮನ್ನಣೆ

ಅಮೇರಿಕಾದಲ್ಲಿನ ನ್ಯಾಷನಲ್ ಬೋರ್ಡ್ ಆಫ್ ಅಮೆರಿಕನ್ಸ್ ಫಾರ್ ಡೆಮೋಕ್ರಾಟಿಕ್ ಆಕ್ಷನ್, ಚಿಯಾಂಗ್ ಕೈಷೇಕರ ರಾಷ್ಟ್ರೀಯ ಸರ್ಕಾರಕ್ಕೆ ಅಮೆರಿಕಾ ಸರ್ಕಾರವು ಕೊಟ್ಟಿರುವ ಮನ್ನಣೆಯನ್ನು ರದ್ದುಮಾಡಿ, ಈಗ ಚೀಣದಲ್ಲಿ ಜನತೆಯ ಬೆಂಬಲದಿಂದ ಸ್ಥಾಪಿತವಾಗಿರುವ ಪೀಕಿಂಗ್‌ಸರ್ಕಾರಕ್ಕೇ ಮನ್ನಣೆ ಕೊಡಬೇಕೆಂದು ಒತ್ತಾಯಪಡಿಸುತ್ತಿದೆ.

ಗಾಂಧೀ ಜಯಂತಿ

ಶ್ರೀ ಬಾಬು ಪುರುಷೋತ್ತಮದಾಸ್ ಟಾಂಡನ್ನರವರು ಮಹಾತ್ಮ ಗಾಂಧೀಜಿಯ ಜನ್ಮೋತ್ಸವವನ್ನು ಅಕ್ಟೋಬರ್ ೨ ರಂದು ಕಲ್ಕತ್ತೆಯಲ್ಲಿ ಆಚರಿಸುವರೆಂದು ತಿಳಿಯಬಂದಿದೆ.

ಆತ್ಮಹತ್ಯ

ದೊಡ್ಡ ಬಾಣವರದ ರೈಲ್ವೆಸ್ಟೇಷನ್ ಮಾಸ್ಟರು ಗುಂಡಿನಿಂದ ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ತಿಳಿದುಬಂದಿದೆ.

ಬಿಕ್‌ನೀರ್ ಮಹಾರಾಜರ ನಿಧನ

ಬಿಕನೀರ್ ಮಹಾರಾಜರವರು ಲಂಡನ್ನಿನಲ್ಲಿ ಸೆಂಟ್ ಆಂಥಿಯಲ್ ಎಂಬಲ್ಲಿರುವ ತಮ್ಮ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಯಬಂದಿದೆ.

ಅಸ್ಸಾಂ ನಿಧಿಗೆ

ಅಸ್ಸಾಂ ಗೌರ್‍ನರರ ಭೂಕಂಪ ಪರಿಹಾರನಿಧಿಗೆ ಇಲ್ಲಿಯವರೆಗೆ ೭,೬೧,೬೧೫ ರೂಪಾಯಿಗಳು ವಸೂಲಾಗಿರುತ್ತದೆ.

ಇಂಡೋನೇಷಿಯಾ

ಇಂಡೋನೇಷಿಯಾವು ತನಗೂ ಒಂದು ಸ್ಥಾನವನ್ನು ವಿಶ್ವಸಂಸ್ಥೆಯಲ್ಲಿ ಕೊಡಬೇಕೆಂದು ಪ್ರಪಂಚ ಸಂಸ್ಥೆಯನ್ನು ಕೇಳಿದೆ.

ವಾಣಿಜ್ಯ ಸಂಘ

ಸಿಂಹಳದಲ್ಲಿ ಒಂದು ನೂತನ ವಾಣಿಜ್ಯ ಸಂಘವು ಸ್ಥಾಪನೆಯಾಯಿತು. ಸಿಂಹಳದಲ್ಲಿ ಹುಟ್ಟಿದವರಿಗೆ ಮಾತ್ರ ಈ ಸಂಘಕ್ಕೆ ಪ್ರವೇಶ.

ಅವಧಿ ಹೆಚ್ಚಿತು

ಬೊಂಬಾಯಿನ ಕೆಲವು ಪ್ರಾಂತ್ಯಗಳಲ್ಲಿ ಮೆರವಣಿಗೆ ಸಭೆಗಳನ್ನು ಮಾಡಕೂಡದು, ಒಂದೆಡೆ ಜನರು ಸೇರಕೂಡದೆಂದು ನಿಷೇಧಿಸಿದ್ದ ಆಜ್ಞೆಯು ಮುಂದುವರಿದಿದೆ.

ಅಂತರಾಷ್ಟ್ರೀಯ ಪೋಲೀಸುದಳ

ವಿಶ್ವದಶಾಂತಿಯನ್ನು ಕಾಪಾಡಲು ಅಂತರ ರಾಷ್ಟ್ರೀಯ ಪೋಲೀಸ್ ದಳವನ್ನು ಸ್ಥಾಪಿಸಬೇಕೆಂದು ಅಮೆರಿಕಾವು ವಿಶ್ವಸಂಸ್ಥೆಯಲ್ಲಿ ಒಂದು ಸೂಚನೆ ತಂದಿದೆ. ಅದಕ್ಕೆ ಬ್ರಿಟನ್ನಿನ ಬೆಂಬಲವಿದೆ.

ಬೊಂಬಾಯಿನಲ್ಲಿ ಮುಷ್ಕರ ಪರಿಸ್ಥಿತಿ

ಬಟ್ಟೆಗಿರಣಿ ಕಾರ್ಮಿಕರ ಮುಷ್ಕರ ಪರಿಸ್ಥಿತಿಯು ದಿನದಿನಕ್ಕೆ ಸ್ವಲ್ಪಸ್ವಲ್ಪ ಉತ್ತಮಗೊಳ್ಳುತ್ತಿದೆ. ಒಟ್ಟು ೨೨ ಗಿರಣಿಗಳಲ್ಲಿ ೨೧,೫೨೫ ಕೆಲಸಗಾರರು ಎರಡು ಸರದಿಗಳಲ್ಲಿ ಕೆಲಸಮಾಡುತ್ತಿದ್ದಾರೆಂದು ತಿಳಿದುಬರುತ್ತದೆ.

ಸರ್ಕಾರಿ ಆಜ್ಞೆ

ಅಸಿಸ್ಟೆಂಟ್ ಇಂಜನಿಯರ್ ಶ್ರೀ. ಇ. ವಿ ಶೇಷಾದ್ರಿಯವರು ಮೈಸೂರು ಸರ್ಕಾರಿ ರೋಡ್ ಟ್ರಾನ್ಸ್‌ಪೋರ್ಟ್ ಜನರಲ್ ಮ್ಯಾನೇಜರವರ ಟೆಕ್ನಿಕಲ್ ಅಸಿಸ್ಟೆಂಟರಾಗಿ ನೇಮಕವಾಗಿದ್ದಾರೆ.

ಅರಸೀಕೆರೆ ಪೌರಸಭೆಗೆ ಶ್ರೀ. ಎ. ಬಿ. ಫಕೀರಪ್ಪನವರು ಅಧ್ಯಕ್ಷರಾಗಿ, ಹೊಳೇನರಸೀಪುರಕ್ಕೆ ಶ್ರೀ ಎಂ. ಎನ್. ಸುಬ್ಬಣ್ಣನವರು, ಯಳಂದೂರಿಗೆ ಆರ್. ನಾಗರಾಜರವರು ಟಿ. ನರಸೀಪುರಕ್ಕೆ ಎಂ. ಪಿ ಪುಟ್ಟಸ್ವಾಮಿಯವರು ಮತ್ತು ಗುಂಡ್ಲುಪೇಟೆಗೆ ಜಿ. ಎನ್. ಹೊನ್ನಪ್ಪನವರು ಪೌರಸಭಾ ಉಪಾಧ್ಯಕ್ಷರುಗಳಾಗಿ ಚುನಾಯಿತರಾಗಿರುವುದನ್ನು ಸರ್ಕಾರವು ಅಂಗೀಕರಿಸಿದೆ.

ತೋಳಗಳ ಬೇಟೆ

ಲಕ್ನೋದ ಬಳಿ ತೋಳಗಳು ಬಹಳ ಹಾವಳಿಯನ್ನುಂಟುಮಾಡುತ್ತಿವೆ. ಅನೇಕ ಮಕ್ಕಳನ್ನು ಎಳೆದುಕೊಂಡು ಹೋಗಿ ತಿಂದುಹಾಕಿವೆ. ಅಲ್ಲಿನ ಜನರು ಭಯಭೀತರಾಗಿ, ಅದನ್ನು ಹಿಡಿಯಲು ಬಹಳ ಪ್ರಯಾಸಪಟ್ಟರೂ ವಿಫಲರಾದುದರಿಂದ ಈಗ ಮಿಲಟರಿ ಶಿಕಾರಿ ಕಾರ್ಯಕ್ರಮಗಳನ್ನು ಸಧ್ಯದಲ್ಲಿಯೇ ಕೈಗೊಳ್ಳಲಾಗುವುದೆಂದು ತಿಳಿದುಬಂದಿದೆ. ತೋಳಗಳ ಗುಹೆಗಳನ್ನು ನಾಶಪಡಿಸಲು ಆಸ್ಫೋಟಕ ವಸ್ತುಗಳನ್ನು ಉಪಯೋಗಿಸಲಾಗುವುದೆಂದು ತಿಳಿಯಬರುತ್ತದೆ.

ಕಾಶ್ಮೀರವನ್ನು ವಿಭಾಗಿಸಿ

ಶ್ರೀ ಜಯಪ್ರಕಾಶ್ ನಾರಾಯಣರವರ ಕರೆ

ಭಾರತ ಪಾಕೀಸ್ತಾನಗಳ ಸಂಬಂಧವು ಬೆಳೆಯಲೋಸುಗ ಕಾಶ್ಮೀರವನ್ನು ವಿಭಾಗಿಸಬೇಕಾದ್ದಲ್ಲಿ ವಿಭಾಗಿಸುವುದೇ ಉತ್ತಮ. ಸೈನ್ಯ ಸಿಬ್ಬಂದಿಯ ವೆಚ್ಚ ವೇರುತ್ತಲಿರುವುದು. ದೇಶದಲ್ಲಿ ಜಾತಿಭಾವವು ಹೆಚ್ಚಾಗುತ್ತಲಿರುವುದು. ಈ ಕಾಶ್ಮೀರ ಸಮಸ್ಯೆಯಿಂದ ಈ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕೆಂದು ಸಮತವಾದಿಪಕ್ಷ ಮುಖಂಡ ಶ್ರೀ. ಜಯಪ್ರಕಾಶ ನಾರಾಯಣರವರು ಪಾಟ್ನಾದಲ್ಲಿ ಹೇಳಿದರು.

ಸೈನ್ಯ ಶಿಕ್ಷಣ

ಭಾರತ ದೇಶದಾದ್ಯಂತ ಮನುಷ್ಯ ಶಕ್ತಿಯು ವಿಶೇಷವಾಗಿದೆ. ಆದರೆ ದೇಶದ ಸಂರಕ್ಷಣೆಗೆ ಸ್ವಲ್ಪವೂ ಪ್ರಯೋಜನವಿಲ್ಲ. ಹುಡುಗರಿಗೆ ಶಿಕ್ಷಣ ಕೊಡುವಾಗ, ಸೈನ್ಯ ಶಿಕ್ಷಣವನ್ನು ಕಡ್ಡಾಯವಾಗಿ ಎಲ್ಲರಿಗೂ ಕೊಡಲೇಬೇಕು. ಅವರಿಷ್ಟಪಟ್ಟರೆ ಸೈನ್ಯಕ್ಕೆ ಸೇರಬಹುದು ಇಲ್ಲದಿದ್ದರೆ ಇಲ್ಲ. ಆದರೆ ದೇಶದ ಸಂರಕ್ಷಣೆಗೆ ಎಲ್ಲರೂ ಸಿದ್ಧರಿರುವಂತೆ ಶಿಕ್ಷಣವು ಅವಶ್ಯಕವೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾಬು ಪುರುಷೋತ್ತಮ ಟಾಂಡನ್ನರು ನಾಸಿಕದಲ್ಲಿ ಹೇಳಿರುವರು.

ಆಚಾರ್ಯ ಕೃಪಲಾನಿಯವರ ನೂತನ ಪಕ್ಷ

ಆಚಾರ್ಯಕೃಪಲಾನಿಯವರು ಸದ್ಯದಲ್ಲೆ ತಮ್ಮ ನೂತನ ಪಕ್ಷವಾದ ಡೆಮೋಕ್ರಾಟ್ ಕಾಂಗ್ರೆಸ್ ಫ್ರಂಟ್‌ನ್ನು ರಚಿಸುವ ವಿಷಯದಲ್ಲಿ ಒಂದು ಹೇಳಿಕೆನ್ನೀಯುವರೆಂದು ತಿಳಿಯಬರುತ್ತದೆ. ದೇಶದಲ್ಲಿ ಅದರಲ್ಲೂ ಕಾಂಗ್ರೆಸಿಗರಲ್ಲಿ ಮತ್ತು ಸರ್ಕಾರದಲ್ಲಿರುವ ಲಂಚಕೋರತನ, ಬ್ಲಾಕ್ ಮಾರ್ಕೆಟ್ ಮುಂತಾದುವನ್ನು ನಿರ್ಮೂಲ ಮಾಡುವುದೇ ಈ ನೂತನಪಕ್ಷದ ಧ್ಯೇಯ. ಕೇಂದ್ರದ ಪ್ರಧಾನಿ ಮತ್ತು ಉಪಪ್ರಧಾನಿಗಳವರ ಸಹಕಾರವನ್ನು ಈ ಪಕ್ಷಕ್ಕೆ ಕೋರಲಾಗುವುದೆಂದು ತಿಳಿದುಬರುತ್ತದೆ.

ಹೊಸ ನೀರಾವರಿ ಕೆಲಸಗಳು

ಮೈಸೂರು ಸಂಸ್ಥಾನದಲ್ಲಿ ಹೊಸ ನೀರಾವರಿ ಕೆಲಸಗಳಿಗಾಗಿ ೯೦ ಲಕ್ಷ ರೂಪಾಯಿಗಳ ಅಂದಾಜಿನ ಯೋಜನೆಯು ತಯಾರಾಗಿದೆ. ಇದು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಯಬರುತ್ತದೆ. ಈ ಮೊಬಲಗಿನ ಪೈಕಿ ೫೭·೭೫ ಲಕ್ಷ ರೂಪಾಯಿಗಳನ್ನು ಕೇಂದ್ರವು ಕೊಡುವುದು.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯·೪೬ ಮೀಟರು
ಸೆಪ್ಟೆಂಬರ್ ೨೭ ಬುಧವಾರ

ಬೆಳಿಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಲೋಕ (ರಿ) ೭-೨೫ ರತ್ನಮ್ಮ ಕೃಷ್ಣಮೂರ್ತಿ (ದೇವರನಾಮ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಹಿಂದಿ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ರಾಜಂ ಪುಷ್ಪವನಂ (ರಿ) ೧-೧೫ ಕೆ. ಎಸ್. ನಾಗಮಣಿ ಮತ್ತು ಕೆ. ಎಸ್. ಶಾಂತಾ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೫ ಹಿಂದಿಯಲ್ಲಿ ವಾರ್ತೆ. ೧-೫೦ ಮುಖವೀಣೆ. ೨-೦ ವನಿತಾವಿಹಾರ ೨-೩೦ ಮುಕ್ತಾಯ

ಸಂಜೆ ೫-೩೦ ರಂಗಪ್ಪ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಚಿತ್ರಗೀತೆ (ರಿ) ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಾನೀಯ ಸೂಚನಾಯೋ. ೭-೫ ಹಿಂದೀ ಕಾರ್ಯಕ್ರಮ. ೭-೧೫ ರಂಗಪ್ಪ (ಕೊಳಲು) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಆರ್. ಕೆ. ರಾಮನಾಥನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು (ರಿ) ೧೦-೦ ಮುಕ್ತಾಯ.

ಐದು ಅಮೇರಿಕನ್ ವಿಮಾನಗಳ ನಾಶ

ಇಮ್‌ಜಿನ್ ನದಿಯ ಸಮೀಪದಲ್ಲಿ ಉತ್ತರ ಕೊರಿಯನ್ ಸೈನ್ಯಗಳು ೫ ಅಮೇರಿಕನ್ ವಿಮಾನಗಳನ್ನು ಹೊಡೆದುರುಳಿಸಿವೆಯೆಂದೂ ಅಲ್ಲದೆ ಇತರ ಕ್ಷೇತ್ರಗಳಲ್ಲಿ ಹತ್ತು ಟ್ಯಾಂಕುಗಳನ್ನೂ ಅನೇಕ ಮದ್ದು ಗುಂಡುಗಳನ್ನೂ ಸೈನಿಕರನ್ನೂ ನಾಶಪಡಿಸಲಾಯಿತೆಂದು ಗೊತ್ತಾಗಿದೆ.

ಅಸ್ಸಾಮಿನಲ್ಲಿ ಪ್ರವಾಹ

ಮೊನ್ನೆ ಬ್ರಹ್ಮಪುತ್ರಾನದಿಯಲ್ಲಿ ಒಂದು ಆಳು ಎತ್ತರ ನೀರಿನಮಟ್ಟ ಹೆಚ್ಚಿದೆ. ಪ್ರವಾಹವು ಹೆಚ್ಚುತಲಿದೆ. ಅದರ ಉಪನದಿ ಲೋಹಿತ್ ಸಹ ತನ್ನ ಪಾತ್ರ ಪ್ರದೇಶದಲ್ಲಿ ಹಾವಳಿಯನ್ನುಂಟುಮಾಡುತ್ತದೆಯೆಂದು ವರದಿಯಾಗಿದೆ.

ರಣಜಿತ್
ತಾ|| ೨೭-೯-೫೦ ರಿಂದ ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ (Khilari)
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು, ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಕೋರ್ಟು ಕಟ್ಟಡವು ನೀರುಪಾಲಾಯಿತು

ಬಿಡಿ ಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭——೯——೧೯೫೦ ನೇ ಬುಧವಾರ [ಸಂಚಿಕೆ ೩೬

ಪ್ರಚಂಡ ಚಂಡ ಮಾರುತವು ಅಲ್ಲೋಲಕಲ್ಲೋಲವಾಗಿ ಬೀಸಿದುದರಿಂದ ಬ್ರಹ್ಮಪುತ್ರ ನದಿಯಲ್ಲಿ ಹುಚ್ಚು ಪ್ರವಾಹವು ಹೆಚ್ಚಿ ದಿಬ್ರೂಘರಿನ ದಡವೆಲ್ಲ ಕೊಚ್ಚಿಹೋಯಿತು. ಪ್ರವಾಹವು ರಭಸದಿಂದ ಊರಿನಲ್ಲಿ ನುಗ್ಗಿ ಅನೇಕ ಹಳೆಯ ಕಟ್ಟಡಗಳು ಕುಸಿದುಬಿದ್ದುವು. ದಿಬ್ರೂಘರಿನ ಕೋರ್ಟು ಕಟ್ಟಡವು ನೀರು ಪಾಲಾಯಿತು. ಪ್ರವಾಹವನ್ನು ತಡೆಗಟ್ಟುವ ಎಲ್ಲ ಪ್ರಯತ್ನಗಳೂ ವಿಫಲವಾದುದರಿಂದ, ಜನರು ಮನೆಯ ಮುಟ್ಟುಗಳನ್ನೂ ಸಹ ತೆಗೆದುಕೊಂಡು ದಿಕ್ಕೆಟ್ಟು ಬಿಟ್ಟೋಡುತ್ತಿದ್ದಾರೆ. ಅಲ್ಲಿನ ಪರಿಸ್ಥಿತಿಯು ಬಹು ಚಿಂತಾಜನಕವಾಗಿದೆ.

ಪಾಕ್ ರಾಯಭಾರಿ

ಪಾಕಿಸ್ಥಾನದ ರಕ್ಷಣಾ ಉಪಸಚಿವ ಶ್ರೀ [illegible] ನವಾಬ್‌ಖಾನ್‌ರವರನ್ನು ಫ್ರಾನ್ಸಿನಲ್ಲಿ ಪಾಕಿಸ್ಥಾನದ ರಾಯಭಾರಿಯಾಗಿ ನೇಮಿಸಲಾಗಿದೆ.

ಸುಳ್ಳು ರೇಸ್ ಕಾರ್ಡುಗಳ ಪತ್ತೆ

೧,೧೧೨ ಸುಳ್ಳು ರೇಸ್‌ನ ಕಾರ್ಡುಗಳನ್ನು ವಿಶೇಷ ಶ್ರಮದಿಂದ ಆಗಸ್ಟ್ ತಿಂಗಳಲ್ಲಿ ಮದರಾಸ್ ಪ್ರಾಂತದಲ್ಲಿ ಪತ್ತೆ ಹಚ್ಚಿದ್ದಾರೆ

ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನ

ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನ ಸ್ವಾಗತಸಮಿತಿ ಸಭೆಯು ನಿನ್ನೆ ಪತ್ರಿಕೋದ್ಯೋಗಿ ಸಂಘದಲ್ಲಿ ನಡೆಯಿತು. ನವಂಬರ್ ೪ ೫ರಲ್ಲಿ ನಡೆಯುವ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಲು ಶ್ರೀಮನ್ಮಹಾರಾಜರನ್ನು ಕೋರಬೇಕೆಂದೂ, ಪತ್ರಿಕೋದ್ಯೋಗಿಗಳನ್ನುದ್ದೇಶಿಸಿ ಭಾಷಣಮಾಡಲು ಅಖಿಲಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಕೆ. ರ್. ಶ್ರೀನಿವಾಸನ್‌ರವರನ್ನು ಆಹ್ವಾನಿಸಬೇಕೆಂದು ತೀರ್ಮಾನವಾಯಿತು.

ವಿಮಾನಕಾರ್ಖಾನೆ ಮುಷ್ಕರ ಪರಿಸ್ಥಿತಿ

ಬೆಂಗಳೂರು ವಿಮಾನ ಕಾರ್ಖಾನೆ ಪರಿಸ್ಥಿತಿಯು ಶಾಂತಿಯುತವಾಗಿಯೂ, ಹತೋಟಿಯಲ್ಲಿಯೂ ಇರುವು ಕಾರ್ಖಾನೆಯ ಜನರಲ್ ಮ್ಯಾನೇಜರ್ ಪ್ರಕಟಿಸಿ .

ಕಾರ್ಖಾನೆಯ ಕೆಲಸಗಾರರ ಸಂಘದ ಕಾರ್ಯದರ್ಶಿ ವಿ. ಬಿ. ಸಿಂಗ್‌ರವರಿಗೆ ಕೆಲಸದಿಂದ ವಜಾಮಾಡಿ ನೋಟೀಸನ್ನು ಅಲಸೂರುಗೇಟ್ ಪೋಲೀಸಿನ ಲಕ ಶ್ರೀ. ಸಿಂಗರಿಗೆ ತಲುಪಿಸಲು ಯತ್ನಿಸಿ ವಿಫಲ ಯಿತೆಂದು, ತಿಳಿಯಬರುತ್ತದೆ.

ಸರ್ವಸಿದ್ಧತೆ

ಇದೇ ತಿಂಗಳು ೨೯-೩೦ ತಾ|| ಗಳಲ್ಲಿ ದಾವಣಗೆರೆ ನಡೆಯಲಿರುವ ಅಖಿಲ ಮೈಸೂರು ವರ್ತಕರ ಳನಕ್ಕೆ ಸಕಲ ಸಿದ್ಧತೆಗಳೂ ಆಗುತ್ತಿವೆ. ಈ ಳನವು ದಾವಣಗೆರೆ ರೈಲ್ವೆ ನಿಲ್ದಾಣದ ಹತ್ತಿರವಿ ಧರ್ಮಪ್ರವರ್ತಕ ಶ್ರೀ. ರಾಜನಹಳ್ಳಿ ಹನುಮಂ ನವರ ಛತ್ರದಲ್ಲಿ ನಡೆಯುವುದು

ವಿಮಾನಾಪಘಾತ

ಏರ್ ಇಂಡಿಯಾದ ಡಕೋಟ ವಿಮಾನವೊಂದು ಸಿಲಿಗುರಿ ವಿಮಾನ ನಿಲ್ದಾಣದಲ್ಲಿ ನಿನ್ನೆ ಬೆಳಿಗ್ಗೆ ಹಠಾತ್ತನೆ [illegible] ವೇಗವಾಗಿ ಬಂದುದರಿಂದ ಅಗ್ನಿ ಜ್ವಾಲೆ ತಗುಲಿ ಉರಿದುಬಿತ್ತು. ಇಬ್ಬರು ಪೈಲೆಟ್ಟುಗಳಿಗೆ ತೀವ್ರ ಗಾಯಗಳಾಗಿವೆಯೆಂದು ತಿಳಿಯಬರುತ್ತದೆ

ಕಮ್ಯೂನಿಸ್ಟರ ಧಾಳಿ

ಗುಂಟೂರು ಜಿಲ್ಲೆ ಪಲ್‌ನಾಡ್ ತಾಲ್ಲೂಕು ಎಲಿಯಾಂ ಪೇಟೆಯಲ್ಲಿನ ಸಶಸ್ತ್ರ ರಿಜರ್ವ್ ಪೋಲೀಸ್ ದಳದ ಮೇಲೆ ೨೦೦ ಜನ ಹೈದರಾಬಾದ್ ಕಮ್ಯೂನಿಸ್ಟ್ ಪುಂಡರು ಧಾಳಿ ನಡೆಸಿದರೆಂದು ತಿಳಿಯಬರುತ್ತದೆ

ಅಸ್ಸಾಂ ಭೂಕಂಪನಿಧಿಗೆ

ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ

ಅಸ್ಸಾಂ ಭೂಕಂಪನಿಧಿ ಸಮಿತಿ

ಮುನಿಸಿಪಲ್ ಆಫೀಸ್, ಮೈಸೂರು.

ಕಪ್ಪೆ ಹಾವನ್ನು ನುಂಗಿತು !

ಕಲ್ಕತ್ತೆಯ ಬಳಿ ಬಾಲೂರುಘಾಟಿನಲ್ಲಿ ಒಂದು ಭಾರಿ ಕಪ್ಪೆಯು ೧೮ ಅಂಗುಲ ನಾಗರಹಾವೊಂದಿಗೆ ಒಂದು ಗಂಟೆಯಕಾಲ ಹೋರಾಡಿ, ಕೊನೆಯಲ್ಲಿ ಆ ಹಾವನ್ನು ಸಂಪೂರ್ಣವಾಗಿ ನುಂಗಿ ವಿಜಯಗಳಿಸಿತು.

ಮುಷ್ಕರವಿಲ್ಲ

ಕಲ್ಕತ್ತೆಯ ಸೆಣಬು ಕೆಲಸಗಾರರು ೨೭ನೇ ತಾ|| ತಮ್ಮ ಕೋರಿಕೆಗಳ ಬಗ್ಗೆ ಸಾಂಕೇತಿಕ ಮುಷ್ಕರವನ್ನು ಆಚರಿಸಬೇಕೆಂದಿದ್ದ ಸೂಚನೆಯನ್ನು ಐ. ಎನ್. ಟಿ. ಯು. ಸಿ. ಮತ್ತು ಪಶ್ಚಿಮ ಬಂಗಾಳ ಸರ್ಕಾರದ ನಡುವೆ ಆದ ಒಡಂಬಡಿಕೆಯ ಕಾರಣದಿಂದ, ವಾಪಸ್ಸು ತೆಗೆದುಕೊಳ್ಳಲಾಯಿತು

ಬೊಂಬಾಯಿ ಮುಷ್ಕರಕಾರರಿಗೆ ಸಹಾನುಭೂತಿ

ಬೊಂಬಾಯಿ ಮುಷ್ಕರಕಾರರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ನಾಳೆ ಸಂಜೆ ಬೆಂಗಳೂರು ಚಿಕ್ಕಲಾಲ್ ಬಾಗಿನಲ್ಲಿ ಬೆಂಗಳೂರು ನಗರದ ಸೋಷಿಯಲಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಬಹಿರಂಗ ಸಭೆ ಏರ್ಪಡಿಸಿದ್ದಾರೆ.

ಪ್ರಾಮಾಣಿಕತೆಯಿಂದ ದುಡಿದು ಜೀವನ ನಡೆಸಿ

ನಿನ್ನೆ ದೊಡ್ಡಬಳ್ಳಾಪುರದ ಪುರಸಭಿಕರು ಮಾಜೀ ಮೈಸೂರುದಿವಾನರೂ ಮತ್ತು ಜಗತ್ಪ್ರಸಿದ್ಧ ಮೇಧಾವಿಗಳೂ ಆದ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಮಾನಪತ್ರ ಅರ್ಪಿಸಿದ ಸಂದರ್ಭದಲ್ಲಿ, ಅದಕ್ಕೆ ಉತ್ತರ ನೀಡುತ್ತಾ : "ನಾನು ಹುಟ್ಟಿದ ಕಾಲಕ್ಕೆ ಅಂದರೆ ೯೦ ವರ್ಷಗಳ ಹಿಂದೆ ಭಾರತದಲ್ಲಿ ಇದ್ದ ಜನಸಂಖ್ಯೆ ಇಂದು ದ್ವಿಗುಣವಾಗಿದೆ ಮತ್ತು ನಾವು ಬರಬರುತ್ತ ಸೋಮಾರಿಗಳಾಗಿದ್ದೇವೆ ನನ್ನ ಅಜ್ಜಿ ಹೇಳುತ್ತಿದ್ದ ಗಾದೆಯೊಂದು ನೆನಪಾಗುತ್ತದೆ "ನನ್ನ ಹುಡುಗ ಕೆಲಸಮಾಡಲಿ ಮಾಡದಿರಲಿ ನನ್ನ ಕಣ್ಣ ಮುಂದಿದ್ದರೆ ಅದೇ ನನಗೆ ದೊಡ್ಡ ಸಂತೋಷ." ಈ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಗಬೇಕು. ಇಂಗ್ಲೆಂಡಿನಲ್ಲಿ ನೂರಕ್ಕೆ ೫ ಮಂದಿ ವ್ಯವಸಾಯಗಾರರಾಗಿದ್ದಾರೆ. ಭಾರತದಲ್ಲಿ ಶೇಕಡ ೭೦ ಮಂದಿ ವ್ಯವಸಾಯಗಾರರಿದ್ದೇವೆ. ನಮ್ಮಲ್ಲಿ ಕೈಗಾರಿಕೆಗಳು ಬೆಳೆದು ಸಂಪದಭಿವೃದ್ಧಿ ಹೆಚ್ಚಬೇಕು. ಯಾರೂ ದಿನಕ್ಕೆ ೮ ಗಂಟೆಗಳಿಗಿಂತಲೂ ಕಡಿಮೆ ಕೆಲಸ ಮಾಡಕೂಡದು. ಹೆಚ್ಚು ಕೆಲಸ ಮಾಡಿದರೆ ಸಂತೋಷ. ಈ ರೀತಿ ವ್ಯವಸ್ಥೆಯಿಂದ ವಾರದ ಆರು ದಿವಸಗಳು ದುಡಿದು ಸರ್ವರಿಗೂ ಅನುಕೂಲಿಸುವಂತೆ ಭಾನುವಾರ ವಿಶ್ರಾಂತಿ ಹೊಂದುವುದು ಅಗತ್ಯ."

"ನಮ್ಮ ದೇಶದಲ್ಲಿ ಜನ ಸೋಮಾರಿಗಳೇ ಅಲ್ಲದೆ ಅಸೂಯಾಪರರೂ ನೀತಿಬಾಹಿರರೂ ಆಗುತ್ತಿದ್ದಾರೆ. ಕೆಲಸ ಮಾಡದೆ ಹಣವನ್ನು ಹೇಗೋ ಪಡೆಯಬೇಕೆಂಬ ಮನೋವೃತ್ತಿ ಬಹಳವಾಗಿ ಬೆಳೆಯುತ್ತಿದೆ. ಪರದೇಶಗಳಲ್ಲಿ ತಮ್ಮ ಕೂಲಿಗಿಂತ ಹೆಚ್ಚಿನ ಹಣವನ್ನು ಕೊಟ್ಟರೂ ಅಲ್ಲಿಯ ಕಾರ್ಮಿಕರು ಅದನ್ನು ನಿರಾಕರಿಸುತ್ತಾರೆ. ಪ್ರತಿ ಹಳ್ಳಿಗಳಲ್ಲಿಯೂ ಈಗತಾನೆ ಏರ್ಪಟ್ಟಿರುವ ಗ್ರಾಮಾಭಿವೃದ್ಧಿ ಸಮಿತಿಗಳ ಮೂಲಕ ಸುವ್ಯವಸ್ಥೆಯಿಂದ ಕೆಲಸಮಾಡಬೇಕು. ಅಂಕಿಅಂಶಗಳನ್ನು ಗ್ರಹಿಸಬೇಕಲ್ಲದೆ ಪ್ರತಿದಿನವೂ ತಮ್ಮ ಉತ್ಪನ್ನ ಹಾಗೂ ವೆಚ್ಚದ ಲೆಕ್ಕವನ್ನು ಸರ್ವರೂ ಇಡಬೇಕು. ಹೇಗೋ ಜೋಡಿಸಿದರೆ ಸರಿ ಎಂಬ ಕಾಲವು ಇದಲ್ಲ. ಒಂದಕ್ಕೆರಡಾಗಿ ಜನಸಂಖ್ಯೆ ಬೆಳೆದಿದೆ. ಇನ್ನು ಜನಸಂಖ್ಯೆ ಹೆಚ್ಚಿದಂತಾದರೂ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಉತ್ಪತ್ತಿಯು ವ್ಯವಸ್ಥಿತ ರೀತಿಯಿಂದ ಹೆಚ್ಚಲು ಕಾರ್ಯೋನ್ಮುಖರಾಗಬೇಕು. ಹಳ್ಳಿಗಳಲ್ಲಿ ಎರಡು ವರ್ಷಕ್ಕೆ ಸಾಕಾಗುವಷ್ಟು ಧಾನ್ಯವನ್ನು ಸಂಗ್ರಹಿಸಿಡುವಂತಾಗಬೇಕು. ಇದರಿಂದ ನಮ್ಮಲ್ಲಿ ಭರವಸೆ ಮೂಡುವುದು.

ಸ್ವಜನ ಪಕ್ಷಪಾತ, ಅನೀತಿಯುತ ಜೀವನ ಹೋಗಬೇಕು. ಇಂದು ನಮ್ಮದೇ ಆದ ಸರ್ಕಾರಕ್ಕೆ ಈ ಕಷ್ಟ ಕಾಲದಲ್ಲಿ ಸಹಕಾರ ಕೊಡಬೇಕು" ಎಂದು ನುಡಿದರು.

ಮೈಸೂರು ಜಿಲ್ಲೆಯಲ್ಲಿ

ಚುನಾವಣಾ ಕ್ಷೇತ್ರದ ಬಗ್ಗೆ ನಿರ್ಧಾರಗಳು

ಮೈಸೂರು ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆ ನಿನ್ನೆ ಮಧ್ಯಾಹ್ನ ಶ್ರೀ ಎಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು.

ಮೈಸೂರು ಜಿಲ್ಲಾಧಿಕಾರಿಗಳಾದ ಜ|| ಮಹಮ್ಮದ್ ಅಹಮದ್‌ರವರು ಪ್ರಾರಂಭದಲ್ಲಿ ಮಾತನಾಡುತ್ತಾ ಅಸ್ಸಾಂ ನಿಧಿ ಸಂಗ್ರಹಣೆಗೆ ಜಿಲ್ಲೆಯ ಪ್ರತಿಷ್ಠಿತರೂ ಒಂದು ಸಮಿತಿಯನ್ನು ನೇಮಿಸಿ, ಅಸ್ಸಾಂನಲ್ಲಿ ಭೂಕಂಪದಿಂದ ನೊಂದವರಿಗೆ ಸಾಧ್ಯವಾದಷ್ಟು ಸಹಾಯ ನೀಡಬೇಕೆಂದು ತಿಳಿಸಿದರು.

ಇದನ್ನು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಎಚ್. ಎಂ. ಚೆನ್ನಬಸಪ್ಪನವರು ಸಮರ್ಥಿಸಿದರು. ಮೈಸೂರು ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರು, ಜಿಲ್ಲೆಯ ಅಭಿವೃದ್ಧಿ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ನಗರ ಕಾಂಗ್ರೆಸ್ [illegible], ನಗರ ಪೌರಸಭಾಧ್ಯಕ್ಷರನ್ನೊಳಗೊಂಡ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಜಿಲ್ಲೆಯ ನಾನಾ ಪೌರಸಭೆಯ ಅಧ್ಯಕ್ಷರುಗಳು, ಅಮಲ್ದಾರರು ಮತ್ತು ಜಿಲ್ಲಾಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು

ಅನಂತರ ಕವಲಂದೆಯ ಜ|| ಮಹಮದ್ ಸಾಹೇಬರವರ ನಿಧನದ ಬಗ್ಗೆ ಶ್ರೀ ಬಿ ಎಸ್. ಮಾದಪ್ಪನವರು ಒಂದು ಸಂತಾಪ ನಿರ್ಣಯವನ್ನು ಮಂಡಿಸಿದರು. ಸಭೆಯು ನಿರ್ಣಯವನ್ನು ಅಂಗೀಕರಿಸಿ ೨ ನಿಮಿಷಕಾಲ ಮೌನವನ್ನು ಆಚರಿಸಿತು.

ಅಲ್ಲಿಗೆ ಜಿಲ್ಲಾ ಬೋರ್ಡಿನ ಕಾರ್ಯಕಲಾಪಗಳು ಮುಗಿದು, ಮೈಸೂರು ಶಾಸನ ಸಭೆ ಮತ್ತು ಕೇಂದ್ರ ಶಾಸನ ಸಭೆಗೆ ಚುನಾವಣೆ ಕ್ಷೇತ್ರ ವಿಭಜನೆ ವಿಷಯವಾಗಿ ಸೂಕ್ತ ಸಲಹೆಗಳನ್ನು ಕೊಡಲು ಸಭೆಯನ್ನು ವಿಶೇಷ ಸಮಿತಿಯಾಗಿ ಪರಿವರ್ತಿಸಲಾಯಿತು. ಈ ಸಮಿತಿಯ ಕಾರ್ಯಕಲಾಪಗಳಲ್ಲಿ ಜಿಲ್ಲಾ ಬೋರ್ಡು ಸದಸ್ಯರಲ್ಲದೆ ಜಿಲ್ಲೆಯ ನಾನಾ ಭಾಗಗಳಿಂದ ಬಂದಿದ್ದ ಆಹ್ವಾನಿತರು ಭಾಗವಹಿಸಲು ಅವಕಾಶ ಕೊಡಲಾಯಿತು.

ಜಿಲ್ಲೆಯಲ್ಲಿ ಚುನಾವಣಾ ಕ್ಷೇತ್ರ ವಿಷಯವಾಗಿ ತೀವ್ರವಾದ ಚರ್ಚೆಗಳಾದುವು, ಶ್ರೀಗಳಾದ ಮಹಂತ ದೇವರು, ರಂಗರಾಮಯ್ಯ, ಎಂ. ಎಲ್. ಜೋಯಿಸ್, ಹೊನ್ನಪ್ಪ, ದೇವರಾಜ ಅರಸ್, ಶಿವನಂಜಪ್ಪ, ಕೃಷ್ಣಮೂರ್ತಿ, ಹರಿಸರ್ವೋತ್ತಮರಾವ್, ಪುಟ್ಟನಂಜಪ್ಪ, ವೆಂಕಟಸುಬ್ಬಯ್ಯ, ಡಿ ಎಂ. ದೊಡ್ಡಯ್ಯ, ದೇವನಾಥ್ ಮುಂತಾದ ಅನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಕೊನೆಯಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರು ಎಲ್ಲಾ ಸದಸ್ಯರು ಕೊಟ್ಟ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಬಹುಮತ ಅಭಿಪ್ರಾಯವನ್ನು ಸಮಿತಿಯ ಗಮನಕ್ಕೆ ತಂದು ಅವರ ಒಪ್ಪಿಗೆಯನ್ನು ಪಡೆದರು.

(೧) ಏಕ ಸದಸ್ಯ ಚುನಾವಣಾಕ್ಷೇತ್ರ ಏರ್ಪಡಿಸಬೇಕು

(೨) ಚುನಾವಣಾ ಕಾಲದಲ್ಲಿ ಬಣ್ಣದ ಪೆಟ್ಟಿಗೆಗಳನ್ನು ಉಪಯೋಗಿಸುವುದು.

(೩) ಈಗಿನ ರೆವಿನ್ಯೂ ಡಿವಿಜನ್ನುಗಳನ್ನು ವಿಶೇಷವಾಗಿ ಬದಲಾಯಿಸದೆ ಅಕ್ಕಪಕ್ಕದ ಹಳ್ಳಿಗಳನ್ನು ಆವಶ್ಯವಿದ್ದಡೆ ಚುನಾವಣಾಕ್ಷೇತ್ರಕ್ಕೆ ಸೇರಿಸಿಕೊಂಡು ನಿರ್ಧರಿಸುವುದು

(೪) ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ಪ್ರತಿನಿಧಿಯಿರುವುದು,

(೫) ನಿಮ್ನ ವರ್ಗದವರಿಗೆ ಜಿಲ್ಲೆಗೆ ೩ ಸ್ಥಾನಗಳನ್ನು ಮೀಸಲಾಗಿಡುವುದು.

(೬) ಕೇಂದ್ರದಲ್ಲಿ ಮೈಸೂರು ಸೀಮೆಯ ಪ್ರತಿಯೊಂದು ಜಿಲ್ಲೆಗೂ ಒಬ್ಬ ಪ್ರತಿನಿಧಿಯಿರುವಂತೆ ಚುನಾವಣೆ ನಡೆಸುವುದು.

(೭) ಕೇಂದ್ರ ಪಾರ್ಲಿಮೆಂಟಿನಲ್ಲಿರುವ ೨ ನಿಮ್ನ ವರ್ಗದ ಸ್ಥಾನವನ್ನು ಬೆಂಗಳೂರು-ಕೋಲಾರ ಜಿಲ್ಲೆಗಳಿಗೆ ಕೊಡುವುದು

ಈ ಸಮಿತಿಯ ಕಾರ್ಯಕಲಾಪಗಳು ಮುಗಿದೊಡನೆಯೇ ಜಿಲ್ಲಾ ಬೋರ್ಡು ಸಭೆಯು ಪುನಃ ಸೇರಿ ಈ ಅಭಿಪ್ರಾಯಗಳಿಗೆ ತನ್ನ ಒಪ್ಪಿಗೆಯನ್ನು ಕೊಟ್ಟಿತು.

ನಿಷೇಧಾಜ್ಞೆ

ಬೊಂಬಾಯಿನಲ್ಲಿ ೧೬ ವರ್ಷಕ್ಕಿಂತ ಚಿಕ್ಕವರಿಗೆ ಬೀಡಿ, ಸಿಗರೇಟು ಮುಂತಾದುವುಗಳನ್ನು ವ್ಯಾಪಾರಸ್ಥರು ಕೊಡಕೂಡದೆಂದು ಸರ್ಕಾರವು ಆಜ್ಞೆ ಮಾಡಿದೆ.

ಪಾನ ನಿರೋಧ

ಬೊಂಬಾಯಿ ಪ್ರಾಂತ್ಯದಲ್ಲಿ ಪಾನ ನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕಾಗಿ ಅಕ್ಕಪಕ್ಕದ ಪ್ರಾಂತ್ಯಗಳ ನೆರವನ್ನು ಕೋರಲು ಮುಖ್ಯ ಮಂತ್ರಿಗಳ ಸಮ್ಮೇಳನವು ಬೊಂಬಾಯಿನಲ್ಲಿ ಸದ್ಯದಲ್ಲೇ ನಡೆಯುವುದೆಂದು ತಿಳಿದುಬರುತ್ತದೆ.

ಹತ್ತಿ ಬೆಳೆಗೆ ಕಂದಾಯ ಮಾಫಿ

ಹತ್ತಿಯನ್ನು ಬೆಳೆಯಲು ಪ್ರೋತ್ಸಾಹ ಕೊಡುವುದಕ್ಕಾಗಿ ಮದರಾಸು ಸರ್ಕಾರವು ಹತ್ತಿಯನ್ನು ಬೆಳೆಯುವ ಭೂಮಿಗೆ ಕಂದಾಯ ಮಾಫಿ ಮಾಡುವುದಾಗಿ ಆಜ್ಞೆ ಹೊರಡಿಸಿದೆ. ಇತರ ಬೆಳೆಯಾಗುತ್ತಲಿರುವ ನಿರ್ದಿಷ್ಟ ಆಹಾರ ಧಾನ್ಯಗಳಿಗೆ ಬೆಳೆದರೆ ಆ ಭೂಮಿಗೂ ಈ ರಿಯಾಯಿತಿ ಅನ್ವಯಿಸುವುದು.

ಬಾಂಬು ಹಾಕಿದರೂ ಚಿಂತೆಯಿಲ್ಲ

ಯುದ್ಧಕಾಲದಲ್ಲಿ ತಪ್ಪುಗಳಾಗುವುದೇನೂ ವಿಶೇಷವಲ್ಲ ಸಮಿತ್ರ ಸೈನ್ಯದ ಮೇಲೆ ಅಮೇರಿಕನ್ನರು ಧಾಳಿ ನಡೆಸಿದುದಕ್ಕಾಗಿ ಅವರು ಕೂಡಲೇ ತಮ್ಮ ಅನುತಾಪವನ್ನು ವ್ಯಕ್ತಪಡಿಸಿರುವುದರಿಂದ ನೊಂದವರು ಸಂತೋಷಪಡುತ್ತಾರೆಂದು ಬ್ರಿಟೀಷರ ಪ್ರಧಾನಿ ಆಟ್ಲೀಯವರು ಅಮೆರಿಕಾ ಎಂಬಸಿಗೆ ತಿಳಿಸಿರುವರು.

ಕೊರಿಯಾ ರಣರಂಗ

ಅಮೆರಿಕನ್ನರ ಎರಡು ಡಿಸ್ಟ್ರಾಯರುಗಳನ್ನು ಉತ್ತರ ಕೊರಿಯನ್ ಸೈನಿಕರು ‘ ಷೆಲ್ಲಿ ನಿಂದ ನಾಶಪಡಿಸಿದರೆಂದೂ ಮತ್ತು ಸಿಯೋಲ್ ಕದನದಲ್ಲಿ ಉತ್ತರಕೊರಿಯನ್ ಸೈನ್ಯ ಪಡೆಗಳು ಬಹು ಬಿರುಸಿನಿಂದ ಅಮೆರಿಕನ್ ಧಾಳಿಗಾರರನ್ನು ಎದುರಿಸುತ್ತಿವೆಯೆಂದೂ ಉತ್ತರಕೊರಿಯನ್ ಪ್ರಕಟಣೆಯು ತಿಳಿಸುತ್ತದೆ.

ಅಸ್ಸಾಂನಲ್ಲಿ ಪುಂಡರಹಾವಳಿ

ಭೂಕಂಪ ಪ್ರವಾಹ ದುರಂತಗಳನ್ನು ಅನುಭವಿಸುತ್ತಲಿರುವ ಅಸ್ಸಾಂ ಪ್ರಾಂತ್ಯದಲ್ಲಿ ಒಂದು ರಾಜಕೀಯಕ್ಕೆ ಸೇರಿದ ಪುಂಡರು ಬಹು ಸಂಖ್ಯೆಯಲ್ಲಿ ಕಾಂಗ್ರೆಸ್ ಕೆಲಸಗಾರರನ್ನು ಕೊಲೆಮಾಡುತ್ತಾ, ಉದ್ದೇಶಪೂರ್ವಕವಾಗಿ ಬಹಿರಂಗವಾಗಿ ಸರ್ಕಾರವನ್ನು ಎದುರಿಸುತ್ತ ಆಹಾರ ಸಂಗ್ರಹಣೆಗೆ ಅಡ್ಡಿಮಾಡಿ, ಸರ್ಕಾರಿ ದಾಸ್ತಾನ್ನು ಕೋಠಿಗಳನ್ನು ಲೂಟಿಮಾಡುತ್ತಲಿದ್ದಾರೆಂದು ಅಸ್ಸಾಂ ಕಾಂಗ್ರೆಸ್ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ. ಹಲಧರ್ ಭುರ್ಯರವರು ಒಂದು ಹೇಳಿಕೆಯಿತ್ತಿದ್ದಾರೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೭ ಮೀಟರು

ಸೆಪ್ಟೆಂಬರ್ ೨೮ ಗುರುವಾರ

ಬೆಳಿಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಶೆಮ್ಮಂಗುಡಿ ಶ್ರೀನಿವಾಸಯ್ಯರ್ (ರೆ) ೭-೧೫ ಎಸ್. ಮಹದೇವಪ್ಪ (ಪಿಟೀಲು) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಸಿ. ನಾರಾಯಣಶಾಸ್ತ್ರಿ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಕ್ಲಾರಿಯೊನೆಟ್ ೨-೦ ನಿಮ್ಮ ಮೆಚ್ಚಿನ ಕಲಾವಿದರು (ರೆ) ೨-೩೦ ಮುಕ್ತಾಯ

ಸಂಜೆ ೫-೩೦ ಎಸ್. ಮಹದೇವಪ್ಪ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ (ರೆ) ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಕರಿಯನಾಯಕಿ (ರೆ) ೭-೧೫ ಎನ್. ಸಿ. ಬೇಲೂರಯ್ಯ (ನಾದಸ್ವರ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಮಲ್ಲಿಕಾರ್ಜುನಪ್ಪ (ವಚನಗಾನ) ೮-೧೫ ತಾಳವಾದ್ಯ ೮-೩೦ ಸಿ ನಾರಾಯಣಶಾಸ್ತ್ರಿ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ, ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕ್ಲಬ್ ಕಾರ್ಯಕ್ರಮ. ೧೦-೦ ಮುಕ್ತಾಯ.

ಬತ್ತದಬೆಳೆ ಅಭಿವೃದ್ಧಿಗೆ ಸಮಿತಿ

ದಕ್ಷಿಣಭಾರತದಲ್ಲಿ ಅಕ್ಕಿಕೊರತೆಯಿರುವ ಪ್ರದೇಶದಲ್ಲಿ ಬತ್ತದ ಬೆಳೆಯನ್ನು ಹೆಚ್ಚಿಸಲು ‘ ದಕ್ಷಿಣ ಅರ್ಥಿಕ ಬೋರ್ಡು ’ ಒಂದನ್ನು ಕೇಂದ್ರ ಸರ್ಕಾರವು ಸದ್ಯದಲ್ಲೇ ರಚಿಸಲಿದೆ. ಈ ಯೋಜನೆಯಲ್ಲಿ ಮೈಸೂರು, ಮದರಾಸು, ತಿರುವಾಂಕೂರು, ಕೊಚ್ಚಿನ್ ಒಕ್ಕೂಟ ಮತ್ತು ಹೈದರಾಬಾದು ಸಂಸ್ಥಾನಗಳು ಸೇರುವುವು. ಈ ಸಮಿತಿಗೆ ಕೇಂದ್ರ ಆಹಾರ ಶಾಖಾ ಮಂತ್ರಿ ಶ್ರೀ. ಮುನ್ಷಿಯವರು ಅಧ್ಯಕ್ಷರು. ಪ್ರಾಂತ್ಯಗಳ ಆಹಾರಮಂತ್ರಿಗಳು ಸದಸ್ಯರು. ಬತ್ತದ ಬೆಳೆಯನ್ನು ಹೆಚ್ಚಿಸಲು ಸೂಕ್ತ ಗದ್ದೆಗಳನ್ನು ಆರಿಸಲು ಪ್ರಾಂತ್ಯ ಸರ್ಕಾರಗಳನ್ನು ಕೇಂದ್ರವು ಕೇಳಿದೆ. ಈ ಕಾರ್ಯಕ್ರಮಕ್ಕಾಗಿ ೩ ಲಕ್ಷ ಎಕರೆ ಗದ್ದೆಯನ್ನು ಮೈಸೂರು ಸರ್ಕಾರವು ಆರಿಸಲು ನಿಶ್ಚಯಿಸಿದೆ

ರಣಜಿತ್
ತಾ|| ೨೯-೯-೫೦ ರಿಂದ ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಖಿಲಾಡಿ (Khilari)
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು :- ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು; ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೮—೯—೧೯೫೦ ನೇ ಗುರುವಾರ [ಸಂಚಿಕೆ ೩೭

ಸೂರ್ಯ ಚಂದ್ರರ ಬಣ್ಣವೂ - ಬದಲಾವಣೆಯೇ ?

ಪ್ರಪಂಚವು ಕೊನೆಗಾಣುವುದೇ !

ಉತ್ತರ ಬ್ರಿಟನ್ನಿನಲ್ಲಿ ನಿನ್ನೆ ಸೂರ್ಯನು ನೀಲಿಬಣ್ಣಕ್ಕೆ ತಿರುಗಿರುವುದು ಎಲ್ಲರಲ್ಲಿ ಮಹದಾಶ್ಚರ್ಯವನ್ನುಂಟುಮಾಡಿದೆ. ಜನರು ವಿಶ್ವವು ಕೊನೆಗಾಣುವುದೇ ಎಂದು ಭೀತರಾಗಿದ್ದಾರೆ.

ಸ್ಕಾಟ್ಲೆಂಡಿನ ಕೆಲವು ಭಾಗಗಳಲ್ಲಿ ಚಂದ್ರನೂ ಸಹ ನೀಲಿ ಬಣ್ಣದಲ್ಲಿ ಅದೇ ರಾತ್ರಿ ಕಾಣುತ್ತಲಿದ್ದನೆಂದು ವರದಿಯಾಗಿದೆ.

ಜಿಲ್ಲಾಬೋರ್ಡು ಸಭೆ

ಮೈಸೂರು ಸೆ. ೨೮

ಮೈಸೂರು ಜಿಲ್ಲಾ ಬೋರ್ಡಿನ ಸಭೆಯು ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆಯಿತು.

ಮೈಸೂರು ಸಿಟಿ ಲಕ್ಷ್ಮೀಪುರಂ ಮಿಡಲ್ ಸ್ಕೂಲ್ ಕ್ಯಾಂಟೀನಿಗೆ ೧೦೦ರೂ, ಗುಂಡ್ಲುಪೇಟೆ ಬಾಚಹಳ್ಳಿ ಶ್ರೀ ಬಸವೇಶ್ವರ ವಿದ್ಯಾರ್ಥಿನಿಲಯಕ್ಕೆ ೨೫೦ರೂ, ಕಣಗಾಲ್ ಮಿಡಲ್ ಸ್ಕೂಲ್ ಕ್ಯಾಂಟೀನಿಗೆ ೧೦೦ರೂ, ಬೆಟ್ಟದಪುರದ ಹೈಸ್ಕೂಲು ಹಾಸ್ಟಲಿಗೆ ೨೦೦ರೂ, ಸರಗೂರು ಹೈಸ್ಕೂಲು ಹಾಸ್ಟಲಿಗೆ ೨೦೦ರೂ, ಹುಣಸೂರು ಮುನಿಸಿಪಲ್ ಹೈಸ್ಕೂಲ್ ಕ್ಯಾಂಟೀನಿಗೆ ೧೫೦ರೂ, ಕೃಷ್ಣರಾಜನಗರ ಎ. ಕೆ. ಹಾಸ್ಟಲ್ ೧೫೦ರೂ, ಗಳನ್ನು ಕೊಡಬಹುದೆಂದು ತೀರ್ಮಾನವಾಯಿತು.

ಹುಣಸೂರಿನಲ್ಲಿ ಮೆಟರ್ನಿಟಿ ಆಸ್ಪತ್ರೆಯು ಕಟ್ಟಡಕ್ಕೆ ತಗಲಬಹುದಾದ ೩೦೦೦೦ ರೂ.ಗಳಲ್ಲಿ ೧೦,೦೦೦ ರೂಗಳನ್ನು ಜಿಲ್ಲಾಬೋರ್ಡಿನಿಂದ ಕೊಟ್ಟು ಮುನಿಸಿಪಾಲಿಟಿ ೧೦,೦೦೦ರೂ, ಮತ್ತು ಸರಕಾರವು ಉಳಿಕೆ ಮೊಬಲಗನ್ನು ಕೊಟ್ಟಮೇಲೆ ಬೋರ್ಡಿನ ಸಿಬ್ಬಂದಿಯಿಂದ ಕಟ್ಟಡವನ್ನು ಕಟ್ಟಿಸಿಕೊಡಬಹುದೆಂದು ಒಪ್ಪಲಾಯಿತು.

ಮೈಸೂರು ಸಿಟಿಯಲ್ಲಿರುವ ಗಜಶಾಲೆಯನ್ನು ಜಿಲ್ಲಾ ಬೋರ್ಡಿನ ಮುಸಾಫರಖಾನೆಯಾಗಿ ಪರಿವರ್ತಿಸಲು ಈ ಗಜಶಾಲೆಯನ್ನು ಜಿಲ್ಲಾ ಬೋರ್ಡಿನವರು ಕೊಂಡುಕೊಳ್ಳುವ ವಿಷಯವನ್ನು ಅಧ್ಯಕ್ಷರು ಶ್ರೀಮನ್ಮಹಾರಾಜರನ್ನು ಭೇಟಿಮಾಡಿ, ಆವಶ್ಯಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯಿತು.

ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ

ಮೈಸೂರು ಸಾರ್ವಜನಿಕ ವಿದ್ಯಾರ್ಥಿನಿಲಯದ ಕಟ್ಟಡಕ್ಕಾಗಿ ಜಿಲ್ಲಾ ಬೋರ್ಡಿನವರು ೧೦ ಸಾವಿರ ರೂ.ಗಳನ್ನು ಕೊಡಬಹುದೆಂದೂ ತೀರ್ಮಾನವಾಯಿತು.

ಪತ್ರಿಕೋದ್ಯೋಗಿಗಳ ಸಮ್ಮೇಳನಕ್ಕೆ

೫೦೦ ರೂ. ಚಂದಾ

ನಿನ್ನೆ ನಡೆದ ಮೈಸೂರು ಜಿಲ್ಲಾ ಬೋರ್ಡಿನ ಸಭೆಯಲ್ಲಿ ನವಂಬರ್ ೪-೫ ರಲ್ಲಿ ಮೈಸೂರಿನಲ್ಲಿ ನಡೆಯುವ ಮೈಸೂರು ಸಂಸ್ಥಾನಪತ್ರಿಕೋದ್ಯೋಗಿಗಳ ಸಮ್ಮೇಳನಕ್ಕೆ ೫೦೦ ರೂಪಾಯಿ ಚಂದಾ ಕೊಡಬಹುದೆಂದು ಒಮ್ಮತದಿಂದ ತೀರ್ಮಾನ ಮಾಡಿರುವರು.

ಅಸ್ಸಾಂ ಭೂಕಂಪನಿಧಿಗೆ

ಜಿಲ್ಲಾಬೋರ್ಡಿನ ಸಭೆಯು ಅಸ್ಸಾಂ ಭೂಕಂಪ ನಿಧಿಗೆ ೨೦೦೦ ರೂಗಳನ್ನು ಕೊಡಬಹುದೆಂದು ತೀರ್ಮಾನಿಸಲಾಯಿತು.

ಮುಂದಿನ ಸಭೆಯು ಕಾರಾಪುರದಲ್ಲಿ ಡಿಸೆಂಬರ್ [illegible]ರಲ್ಲಿ ನಡೆಯಬಹುದೆಂದು ಗೊತ್ತುಮಾಡಲಾಯಿತು.

ಗಾಂಧಿ ಜಯಂತಿ

ಗಾಂಧಿ ಜಯಂತಿ ಪ್ರಯುಕ್ತ ಅಕ್ಟೋಬರ್ ೨ರಿಂದ ಒಂದುವಾರ ಖಾದಿಕೊಳ್ಳುವವರಿಗೆ ರೂಪಾಯಿಗೆ ಒಂದು ಆಣೆ ರಿಯಾಯಿತಿಯನ್ನು ಮೈಸೂರು ಖದ್ದರ್ ಪರಸ್ಪರ ಸಂಘದಲ್ಲಿ ಕೊಡಲಾಗುವುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಉಮೇದುವಾರಿಕೆ ವಾಪಸ್ಸು

ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷತೆಗೆ ಉಮೇದುವಾರರಾಗಿದ್ದ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿಯವರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ.

ಮಂತ್ರಿ ಮಂಡಲ

ನಿನ್ನೆ ಮಧ್ಯಾಹ್ನ ಮಂತ್ರಿಮಂಡಲ ಸಭೆಯು ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಸ್ಥಾನದ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸದಸ್ಯರ ನೇಮಕದ ಬಗ್ಗೆ ತೀರ್ಮಾನವಾಗಿರುವುದಾಗಿ ತಿಳಿಯಬಂದಿದೆ

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ವಿಮಾನ ಕಾರ್ಖಾನೆ ಪರಿಸ್ಥಿತಿ

ಏನೂ ಬದಲಾವಣೆಯಿಲ್ಲ

ಮುಚ್ಚಿರುವ ಹಿಂದೂಸ್ತಾನ್ ವಿಮಾನಕಾರ್ಖಾನೆ ಪರಿಸ್ಥಿತಿಯಲ್ಲೇನೂ ಬದಲಾವಣೆಯಿಲ್ಲ. ನಿನ್ನೆಯಂತೆ ಅವಶ್ಯ ಸಿಬ್ಬಂದಿ ಮಾತ್ರ ಕೆಲಸಮಾಡುತ್ತಿದೆ.

ಜಾಹಿರಾತು ತೆರಿಗೆ ವಿಧಿಸಕೂಡದು

ಬೆಂಗಳೂರು ಕಾರ್ಪೋರೇಷನ್ ಜಾಹಿರಾತು ತೆರಿಗೆ ವಿಧಿಸಬೇಕೆಂದಿರುವುದನ್ನು ಪ್ರತಿಭಟಿಸಿ ನಿನ್ನೆ ನಡೆದ ಛೇಂಬರ್-ಆಫ್-ಕಾಮರ್ಸ್‌ನ ಕಾರ್ಯನಿರ್ವಾಹಕ ಸಮಿತಿ ನಿರ್ಣಯ ಮಾಡಿದೆ.

ಸೇದುವುದಕ್ಕಿಂತ ಕುಡಿತ ಒಳ್ಳೆಯದು !

ಸೇದುವುದಕ್ಕಿಂತ ಕುಡಿಯುವುದು ಒಳ್ಳೆಯದೆ ? ಈ ಪ್ರಶ್ನೆಯನ್ನು ಶ್ರೀ ಬಿ. ಎನ್. ಕರಂಜಿಯಾರವರು ಮುಂಬೈ ಶಾಸನ ಸಭೆಯಲ್ಲಿ ಈ ದಿನ ಎತ್ತಿದರು.

ಹದಿನಾರು ವರ್ಷಗಳೊಳಗಿನ ಬಾಲಕರುಗಳಿಗೆ ಬೀಡಿ ಸಿಗರೇಟು ಇತ್ಯಾದಿ ಸೇದುವ ವಸ್ತುಗಳನ್ನು ಮಾರುವವರನ್ನು ಶಿಕ್ಷಿಸಲಾಗುವುದೆಂಬ ಸರ್ಕಾರದ ಸಲಹೆಯನ್ನು ಸ್ವಾಗತಿಸುತ್ತ ಶ್ರೀ ಕರಂಜಿಯಾರವರು, “ಪಾನ ನಿರೋಧದ ಅನ್ವಯ ಆಗದಿದ್ದರೆ ಹೋಗಲಿ ಸೇದುವುದನ್ನು ತಪ್ಪಿಸಿ” ಎಂದರು. ತಮ್ಮ ವಾದಸಮರ್ಥನೆಗೆ ಅಮೆರಿಕದ ವೈದ್ಯರೊಬ್ಬರ “ಕುಡಿತ ಸೇದುವುದಕ್ಕಿಂತ ಒಳ್ಳೆಯದು” ಎಂಬ ಅಭಿಪ್ರಾಯವನ್ನು ಸೂಚಿಸಿದರು.

ಆಹಾರೋತ್ಪತ್ತಿ ಯೋಜನೆ

“ಆಹಾರ ಸ್ವಯಂ ಪರಿಪೂರ್ಣತೆಯ ಸಾಧನೆಯ ಪ್ರಯತ್ನ ಜನತಾ ಚಳುವಳಿಯಾಗಿ ನಡೆದಲ್ಲಿ ಮಾತ್ರ ಸಾಧನೆ ಸಾಧ್ಯವಾಗುವುದೇ ವಿನಾ ಅದಿಲ್ಲದೆ ಸರ್ಕಾರ ಏನೇ ಪ್ರಯತ್ನಪಟ್ಟರೂ ಸಾಧ್ಯವಿಲ್ಲ. ಸರ್ಕಾರದ ಪ್ರಯತ್ನದಲ್ಲಿ ರೈತರ ಜನರ ಸಹಕಾರ ಆತ್ಯಗತ್ಯ ಎಂದು ಕೇಂದ್ರ ಸರ್ಕಾರದ ವ್ಯವಸಾಯ ಸಚಿವಶಾಖೆಯ ಸಹಕಾರ್ಯದರ್ಶಿ ಶ್ರೀ ಎಸ್. ವೈ. ಕೃಷ್ಣಸ್ವಾಮಿಯವರು ನಿನ್ನೆ ಸಂಜೆ ರೆಸಿಡೆನ್ಸಿಭವನದಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ತಿಳಿಸಿದರು.

ಮೈಸೂರಿನಲ್ಲಿ ಅಧಿಕ ಆಹಾರ ಉತ್ಪತ್ತಿಯೋಜನೆ ತೃಪ್ತಿಕರವಾಗಿ ಕಾರ್ಯರೂಪಕ್ಕೆ ಬರುತ್ತಿದೆಯೆಂದರು.

ಮಕ್ಕಳ ದಿನಾಚರಣೆ

ಭಾರತಾದ್ಯಂತ ಮುಂದಿನ ತಿಂಗಳು [illegible] ತಾರೀಖು ವಿಶ್ವಸಂಸ್ಥೆಯ ಆಶ್ರಯದಲ್ಲಿ ಮಕ್ಕಳ ದಿನಾಚರಣೆಯು ನಡೆಯಿಸಲೇರ್ಪಾಡಾಗಿದೆ. ಮೈಸೂರು ಸಂಸ್ಥಾನದಲ್ಲಿಯೂ ಅದೇ ದಿನ ಅತಿ ವಿಜೃಂಭಣೆಯಿಂದ ನಡೆಯಬೇಕೆಂದು ಸರ್ಕಾರದವರು ಒಂದು ಮನವಿಹೊರಡಿಸಿದ್ದಾರೆ. ಈ ಕಾರ್ಯಕ್ರಮವನ್ನು ಕೈಕೊಳ್ಳಲು ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಕಮಾಡಿದ್ದಾರೆ. ಅದಿನ ಕಾಲೇಜು ಸ್ಕೂಲುಗಳಿಗೆಲ್ಲಾ ರಜಾ ಕೊಡಲಾಗಿದೆ. ಚಲನಚಿತ್ರ ಮಂದಿರದವರು ಅಂದಿನ ತಮ್ಮ ವಸೂಲಿಯನ್ನು ಈ ದಿನಾಚರಣೆಗೆ ಕೊಡುವವರಿಗೆ ಮನರಂಜನ ತೆರಿಗೆಯನ್ನು ಮನ್ನಾ ಮಾಡಲಾಗುವುದು.

ಪ್ರಧಾನಿ ಪಂಡಿತರ ಉದಾರದಾನ

ಪಂಜಾಬಿನಲ್ಲಿ ಪ್ರವಾಹ ಪೀಡಿತರ ಪರಿಹಾರಕ್ಕಾಗಿ ಪ್ರಧಾನಿ ಪಂಡಿತ ನೆಹರೂರವರು ೧೦,೦೦೦ ರೂಗಳನ್ನು "ಪ್ರಧಾನಿಪರಿಹಾರ ನಿಧಿ''ಗೆ ದಾನವಾಡಿದ್ದಾರೆ.

ಗಂಡನನ್ನು ನೋಡಿದೊಡನೆಯೇ ಬಿಕ್ಕಳಿಕೆ

ತನ್ನ ಗಂಡನನ್ನು ನೋಡಿದೊಡನೆಯೇ ತನಗೆ ಬಿಕ್ಕಳಿಕೆ ಬರುವುದೆಂದು ಅಮೆರಿಕಾದಲ್ಲಿ ಓರ್ವ ಸ್ತ್ರೀಯು ಕೋರ್ಟಿನಲ್ಲಿ ದಾಂಪತ್ಯ ವಿಚ್ಛೇದನವನ್ನು ಪಡೆದಿರುವಳು.

ವಿಶ್ವವಿದ್ಯಾಲಯಕ್ಕೆ ಸ್ವತಂತ್ರ ಸ್ಥಾನಮಾನ

ಮೈಸೂರು ವಿಶ್ವವಿದ್ಯಾಲಯಕ್ಕೆ ಸ್ವತಂತ್ರ ಸ್ಥಾನಮಾನಗಳನ್ನು ಕೊಡಲು ಮೈಸೂರು ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಈಗ ಪ್ರೊ-ಛಾನ್ಸಲರಾಗಿರುವ ಡಾ|| ಸಿ ಆರ್. ರೆಡ್ಡಿಯವರು ಹಿಂದೆ ವಿಶ್ವವಿದ್ಯಾಲಯ ಸುಧಾರಣೆ ಬಗ್ಗೆ ತಮ್ಮ ವರದಿಯಲ್ಲಿ ವಿಶ್ವವಿದ್ಯಾಲಯವು ಸ್ವತಂತ್ರ ಸ್ಥಾನಮಾನಗಳನ್ನು ಪಡೆದಿರಬೇಕೆಂದು ಒತ್ತಿ ಹೇಳಿದ್ದರು. ವಿಶ್ವವಿದ್ಯಾಲಯದ ಸಮಿತಿಯವರೂ ಸಹ ಶಿಫಾರಸು ಮಾಡಿದ್ದರು.

ಖಾಸಿಂ ರಜ್ವಿಗೆ ಫಾಸಿ ಶಿಕ್ಷೆ

ಮೋಬುಲ್ಲಾ ಖಾನ್ ಕೊಲೆ ಮೊಕದ್ದಮೆಯಲ್ಲಿ ಖಾಸಿಂ ರಜ್ವಿಗೆ ಜೀವಾವಧಿ ಶಿಕ್ಷೆ ವಿಧಿಸಿರುವುದನ್ನು ವಿರೋಧಿಸಿ ರಜ್ವಿಯು ಹೈದರಾಬಾದ್ ಹೈಕೋರ್ಟಿನಲ್ಲಿ ಅಪೀಲು ಹೂಡಿದ್ದಾರೆ. ಅಡ್ವೊಕೇಟ್ ಜನರಲ್ಲರಾದ ಶ್ರೀ. ರಾಜಾರಾಮಅಯ್ಯರ್‌ರವರು ಹೈಕೋರ್ಟಿಗೆ ರಿವಿಜನ್ ಅರ್ಜಿಯನ್ನು ಸಲ್ಲಿಸಿ ಅಪರಾಧಿಗಳಿಗೆ ವಿಧಿಸಿರುವ ಜೀವಾವಧಿ ಶಿಕ್ಷೆಯನ್ನು ಮರಣದಂಡನೆಗೆ ಹೆಚ್ಚಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಮಾನಪತ್ರ

ಮೈಸೂರಿನ ಮಾಜಿ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರಿಗೆ ಬೆಂಗಳೂರು ಕಾರ್ಪೊರೇಷನ್ನಿನವರು ಇಂದು ಸಂಜೆ ಒಂದು ಮಾನಪತ್ರವನ್ನರ್ಪಿಸುವರು.

ವರ್ಕಿಂಗ್ ಕಮಿಟಿ

ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನೂತನ ಸದಸ್ಯರ ಪಟ್ಟಿಯು ಮುಂದಿನ ತಿಂಗಳು ೮ನೇ ತಾರೀಖಿನವರೆಗೆ ಹೊರಬೀಳಲಾರದೆಂದು ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರು ಹೇಳಿರುವರು.

ಬಾಂಬು ಹಾಕಿರಬಹುದು

ಅಮೆರಿಕಾ ಸೈನ್ಯವು ಮಂಜೂರಿಯಾದ ಮೇಲೆ ಬಾಂಬುಗಳನ್ನು ಹಾಕಿ ಧಾಳಿಯನ್ನು ನಡೆಸಿದ್ದರೂ ಇರಬಹುದೆಂದು ವಿಶ್ವಸಂಸ್ಥೆಯು ಒಪ್ಪಿಕೊಂಡಿದೆ. ಈ ರೀತಿ ಯಾಗಿದ್ದರೆ ಅಮೇರಿಕಾವು ತನ್ನ ಅನುತಾಪವನ್ನು ಸೂಚಿಸುವುದಲ್ಲದೆ ಚೈನಾಕ್ಕೆ ಆಗಿರುವ ನಷ್ಟಕ್ಕೆ ತಕ್ಕ ಪರಿಹಾರವನ್ನು ಕೊಡುವುದಾಗಿ ಅಮೇರಿಕಾ ಪ್ರತಿನಿಧಿ ತಿಳಿಸಿದರು

ಬಂಗಾಳಿ ಲಿಪಿಯನ್ನು ರದ್ದು ಮಾಡಲಾಗದು

ಪೂರ್ವ ಪಾಕೀಸ್ಥಾನದಲ್ಲಿ (ಪೂರ್ವ ಬಂಗಾಳ) ಉರ್ದು ಲಿಪಿಯನ್ನೇ ಉಪಯೋಗಿಸಬೇಕೆಂಬ ಸರ್ಕಾರಿ ಘೋರಣೆಯನ್ನು ವಿರೋಧಿಸಿ, ಅಲ್ಲಿನ ಭಾಷಾ ಸುಧಾರಣಾ ಸಮಿತಿಯು ಈಗ ಪೂರ್ವ ಪಾಕೀಸ್ಥಾನದ ಜನಸಾಮಾನ್ಯರಲ್ಲಿ ಪ್ರಚಲಿತವಾಗಿರುವ ಬಂಗಾಳಿ ಲಿಪಿಯನ್ನು ರದ್ದುಗೊಳಿಸಕೂಡದೆಂದೂ, ಹಾಗೆಮಾಡಿದಲ್ಲಿ ಪೂರ್ವ ಪಾಕೀಸ್ಥಾನದಲ್ಲಿ ಬಹು ತೊಂದರೆಯುಂಟಾಗುವುದು ಈ ಪ್ರಶ್ನೆಯನ್ನು ಇನ್ನೂ ಹಲವಾರು ವರ್ಷಗಳ ನಂತರ ಪುನರ್ವಿಮರ್ಶಿಸಬೇಕೆಂದು ಸಲಹೆಯಿತ್ತಿದೆ.

ರಾಷ್ಟ್ರಾಧ್ಯಕ್ಷರ ಸಹಾನುಭೂತಿ

ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರರು ಕಾಶ್ಮೀರದಲ್ಲುಂಟಾದ ಪ್ರವಾಹ ದುರಂತಗಳನ್ನು ಕಂಡು ತಮಗುಂಟಾದ ಅನುತಾಪವನ್ನು ಕಾಶ್ಮೀರ ಯುವರಾಜರಿಗೂ ಮತ್ತು ಪ್ರಧಾನಿ ಷೇಕ್ ಮಹಮದ್ ಅಬ್ದುಲ್ಲಾರವರಿಗೂ ತಂತಿಯ ಮೂಲಕ ತಿಳಿಸಿದ್ದಾರೆ.

ಚರಕ, ಖಾದಿ

ಇತ್ತೀಚೆಗೆ ರಾಜಕೀಯವು ಎಲ್ಲೆಲ್ಲಿಯೂ ವಿಶೇಷವಾಗಿ ಹೋಗಿ, ಖಾದಿಯ ಬೆಳವಣಿಗೆಯು ಬಹಳ ಕಡಿಮೆಯಾಗುತ್ತಲಿದೆ. ಚರಕವು ಜನರಿಗೆ ಮರತೇ ಹೋಗಿರುತ್ತದೆ ಎಂದು ಭಾರತ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ನುಡಿದಿರುವರು.

ಕೊರಿಯಾ ಭವಿಷ್ಯ

ಉತ್ತರ, ದಕ್ಷಿಣ ಕೊರಿಯಾವು ಏಕರಾಜ್ಯವಾಗಿ. ಪ್ರಜಾಪ್ರಭುತ್ವ ತತ್ತ್ವಕ್ಕನುಗುಣವಾಗಿ ಒಂದೇ ಸರ್ಕಾರವನು ಚುನಾವಣೆಗಳಾದನಂತರ ಸ್ಥಾಪಿಸಬೇಕೆಂದೂ ಕೊರಿಯಾದಲ್ಲಿ ಪುನರ್ನಿರ್ಮಾಣ ಕಾರ್ಯವನ್ನೆಲ್ಲಾ ವಿಶ್ವಸಂಸ್ಥೆಯೇ ಮಾಡಬೇಕೆಂದು ಕೊರಿಯಾ ಭವಿಷ್ಯ ವಿಚಾರದಲ್ಲಿ ಬ್ರಿಟಿಷ್ ಪ್ರತಿನಿಧಿಯು ವಿಶ್ವಸಂಸ್ಥೆಯ ಪರಿಶೀಲನೆಗೆ ಒಂದು ಮಸೂದೆಯನ್ನು ಮಂಡಿಸಿರುವರು.

ರಚನಾತ್ಮಕ ಕಾರ್ಯಕ್ಕೆ

ನಮ್ಮ ದೇಶದಲ್ಲಿ ತುಂಬಿ ತುಳುಕುತ್ತಿರುವ ಯುವಜನೋತ್ಸಾಹವನ್ನು ರಚನಾತ್ಮಕ ಮಾರ್ಗದಲ್ಲಿ ಹರಿವಂತೆ ಮಾಡುವ ಸಲುವಾಗಿ ಕೇಂದ್ರ ಮತ್ತು ಸಂಸ್ಥಾನಗಳಲ್ಲಿ ಯುವಜನ ಶಾಖೆಗಳನ್ನು ಆರಂಭಿಸಬೇಕು ಎಂಬುದಾಗಿ ಕೇಂದ್ರದ ಆಹಾರ ಶಾಖೆಯ ಉಪ ಸಚಿವ ಶ್ರೀ ತಿರುಮಲರಾವ್ ಇಂದು ಹಿಂದೂಸ್ಥಾನ್ ಸ್ಕೌಟ್ ಸಂಘದ ಅಧಿಕಾರಿ ವರ್ಗದವರನ್ನು ಉದ್ದೇಶಿಸಿ ಮಾತನಾಡುತ್ತಾ ನುಡಿದರು.

ದೌರ್ಜನ್ಯ ಕೃತ್ಯಗಳಿಗೆ ಕಮ್ಯೂನಿಸ್ಟರೇ ಕಾರಣ

ಅಸ್ಸಾಂ ಸಂಸ್ಥಾನದಲ್ಲಿ ನಡೆದ ದೌರ್ಜನ್ಯಕಾರಿ ಕೃತ್ಯಗಳಿಗೆ, ಕಾರಣನಾದ ಪಕ್ಷಗಳ ಪೈಕಿ ಭಾರತದಲ್ಲಿರುವ ಕ್ರಾಂತಿಕಾರೀ ಕಮ್ಯೂನಿಸ್ಟ್ ಪಕ್ಷವೂ ಒಂದು ಎಂಬುದಾಗಿ ಅಸ್ಸಾಂ ಗೌರ್ನರ್ ಶ್ರೀ ಜೈರಾಂದಾಸ್ ದೌಲತ್‌ರಾಂರವರು ತಿಳಿಸಿರುವರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಸೆಪ್ಟೆಂಬರ್ ೨೯ ಶುಕ್ರವಾರ

ಬೆಳಿಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಗೀತ (ರಿ) ೭-೨೫ ಬಿ. ಕೆ. ಪದ್ಮನಾಭರಾವ್ (ದೇವಿ ಭಜನೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಹಿಂದೀ ಶಿಕ್ಷಣ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಟಿ.ಆರ್. ಶ್ರೀನಿವಾಸ್ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಜಲತರಂಗ್ ೨-೦ ಚಲನಚಿತ್ರ ಸಂಗೀತ ೨-೩೦ ಮುಕ್ತಾಯ

ಸಂಜೆ ೫-೩೦ ಟಿ. ಆರ್. ಶ್ರೀನಿವಾಸ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಕಾರ್ಯಕ್ರಮ ೭-೧೫ ಗೀತಾಂಜಲಿ ೭-೩೦ ನಿಮ್ಮ ಪುಸ್ತಕ ಭಂಡಾರ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ನಾದಸುಧಾ (ರಿ) ೮-೧೫ ಬಿ. ಕೆ ಪದ್ಮನಾಭರಾವ್ (ರಾಗ, ತಾನ, ಪಲ್ಲವಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವೃಂದ ಸಂಗೀತ ೧೦-೦ ಮುಕ್ತಾಯ.

ಮರಾಠಿ, ಹಿಂದಿ ಸರ್ಕಾರ ಭಾಷೆ

ಮಧ್ಯ ಪ್ರದೇಶ ಪ್ರಾಂತ್ಯದಲ್ಲಿ ಹಿಂದಿ ಮತ್ತು ಮರಾಠಿ ಎರಡು ಭಾಷೆಗಳೂ ಸರ್ಕಾರ ಭಾಷೆಯಾಗಿರುವಂತೆ ಒಂದು ಮಸೂದೆಯನ್ನು ವಿದ್ಯಾ ಮಂತ್ರಿಗಳು ಶಾಸನ ಸಭೆಯಲ್ಲಿ ಮಂಡಿಸಿರುವರು.

ಪಂಜಾಬಿನಲ್ಲಿ ಪ್ರವಾಹ ಹಾವಳಿ

ರಾವಿನದಿಯು ಉಕ್ಕೇರಿಬರುತ್ತಿರುವ ಪ್ರವಾಹದ ಹಾವಳಿಯಿಂದ ಮಾಂಟ್ಗೋಮೆರಿ ಜಿಲ್ಲೆಯ ಹಳ್ಳಿಗಳೆಲ್ಲ ಮುಳುಗಿ ಹೋಗಿವೆ. ಮುಲ್ತಾನ್ ಜಿಲ್ಲೆಯ ಪರಿಸ್ಥಿತಿ ಬಹು ಕಳವಳದಾಯಕವಾಗಿದೆ. ಲೈಲಾಪುರ ಜಿಲ್ಲೆಯಲ್ಲಿ ನೀರಿಳಿಯುತ್ತಿದ್ದರೂ ಅಪಾಯ ಪರಿಸ್ಥಿತಿ ತಪ್ಪಿಲ್ಲ. ಅನೇಕ ವಾಸ ಗೃಹಗಳು ಕೊಚ್ಚಿಹೋಗಿವೆ. ಇನ್ನೂ ಹೆಚ್ಚಾಗಿ ಮನೆಗಳು ಕುಸಿದು ಬೀಳುತ್ತಿವೆ.

ರಣಜಿತ್
ತಾ|| ೨೨-೯-೫೦ ರಿಂದ ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸುವ
ಕಿಲಾಡಿ (**Khilari**)
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

★ ಸರ್ಕಾರಕ್ಕೆ ಸರ್. ಎಂ. ವಿ.ಯವರ ಸಲಹೆ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೯—೯—೧೯೫೦ ನೇ ಶುಕ್ರವಾರ [ಸಂಚಿಕೆ ೩೮

ಮೈಸೂರಿನ ಮಾಜಿ ದಿವಾನರೂ, ಜಗದ್ವಿಖ್ಯಾತ ಇಂಜನೀಯರೂ ಮತ್ತು ರಾಜಕಾರಣಿಪಟುಗಳೂ ಆದ ಸರ್. ಎಂ. ವಿಶ್ವೇಶ್ವರಯ್ಯನವರು ಅವರ ೯೧ ನೆಯ ಜನ್ಮ ದಿನೋತ್ಸವಾಚರಣೆಯ ಸಂದರ್ಭದಲ್ಲಿ ಬೆಂಗಳೂರು ಕಾರ್ಪೋರೇಷನ್ನವರು ಬಿನ್ನವತ್ತಳೆ ಅರ್ಪಿಸಿದುದಕ್ಕೆ ಉತ್ತರಕೊಡುತ್ತಾ, ಭಾರತ ದೇಶವು ಬಹು ವಿಶಾಲವಾದ ದೇಶವಾದ್ದರಿಂದ ಅನೇಕ ಅವ್ಯಕತೆಗಳು ತಲೆದೋರಿವೆಯೆಂದೂ ಮತ್ತು ಅನೇಕ ತೊಂದರೆಗಳು ಅಪರಿಹಾರ್ಯವಾಗಿ ಉಳಿದಿವೆಯೆಂದು ಅಭಿಪ್ರಾಯಪಟ್ಟರು. ಕೇಂದ್ರ ಸರ್ಕಾರವು ಎಷ್ಟೇ ದಕ್ಷತೆಯಿಂದ ಕೆಲಸಮಾಡಿದರೂ ಮತ್ತು ಶಕ್ತವಾಗಿದ್ದರೂ ಎಲ್ಲವನ್ನೂ ಪರಿಹರಿಸಲು ಸಾಧ್ಯವಿಲ್ಲವೆಂದರು ಮತ್ತು ಸಂಸ್ಥಾನ ವಿಲೀನೀಕರಣದ ಬಗ್ಗೆ ಪ್ರಸ್ತಾಪಿಸಿ, ಬಹು ಹಿಂದುಳಿದ ಸಂಸ್ಥಾನಗಳನ್ನೂ ಮತ್ತು ಮುಂದೊರೆದ ಸಂಸ್ಥಾನಗಳನ್ನೂ ಒಟ್ಟಿಗೇ ಸೇರಿಸಿ ದೇಶಾದ್ಯಂತ ಒಂದೇ ರೀತಿಯಾದ ಆಡಳಿತಕ್ರಮವನ್ನು ಸ್ಥಾಪಿಸುವ ಯೋಜನೆಯು ದಕ್ಷವಾಗಿ ಯಶಸ್ವಿಯಾಗಲಾರದೆಂದೂ, ಇದರಿಂದ ಭಾರತರಾಷ್ಟ್ರವು ಯೂರೋಪಿನ ಎರಡನೇ ದರ್ಜೆಯ ರಾಷ್ಟ್ರಗಳಿಗಿಂತಲೂ ಬಲಹೀನವಾಗಿ ಅನೇಕ ವರ್ಷಗಳವರೆಗೂ ಇರಬೇಕಾಗುವುದೆಂದು ನುಡಿದರು.

ಮೈಸೂರಿನ ವೈಶಿಷ್ಟ್ಯವನ್ನು ಕುರಿತು ಕೇಂದ್ರದಲ್ಲಿ ಆಡಳಿತವೂ ಮತ್ತು ಸೈನ್ಯವೂ ವಿಲೀನೀಕರಣವಾದುದು ಸೂಕ್ತವಾದರೂ, ತಾವು ಹಿಂದೆ ಈ ಮಾದರಿ ಮೈಸೂರಿನ ಆಡಳಿತದಲ್ಲಿದ್ದುದರಿಂದ ತಮಗೆ ಸ್ವಲ್ಪ ಮನನೋವುಂಟಾಯಿತೆಂದು ವ್ಯಕ್ತಪಡಿಸಿದರು.

ತಮ್ಮ ಭಾಷಣದಲ್ಲಿ ಹೇಳಿದ ಅನೇಕ ಕಾರಣಗಳಿಂದ ತಾವು ಎರಡು ಮುಖ್ಯ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಸೂಚಿಸಲು ಇಷ್ಟಪಡುವುದಾಗಿ ತಿಳಿಸಿದರು.

ಮೊದಲನೆಯುದು ಸಂಸ್ಥಾನಕ್ಕೆ ಸಂಬಂಧಿಸಿದುದು. ಕೇಂದ್ರ ಸರ್ಕಾರದ ಪ್ರತಿನಿಧಿಗಳೊಡನೆ ಸಂಸ್ಥಾನದ ಎಲ್ಲ ಸಮಸ್ಯೆಗಳನ್ನು ಚರ್ಚಿಸಿ ಸೂಕ್ತ ನಿರ್ಧಾರಕ್ಕೆ ಬರಲು ಮೂರು ಜನರ ಒಂದು ಸಮಿತಿಯನ್ನು ರಚಿಸಲು ಕೇಂದ್ರವು ಅನುಮತಿ ಕೊಡಬೇಕು.

ಎರಡನೆಯುದು: ಭಾರತದಲ್ಲಿನ ರಾಜಕೀಯಕ್ಕೆ ಸಂಬಂಧಿಸಿದುದು. ಅಮೇರಿಕಾದಲ್ಲಿರುವಂತೆಯೇ ಎರಡು ರಾಜಕೀಯ ಪಕ್ಷಗಳನ್ನೊಳಗೊಂಡ ಸರ್ಕಾರವೇರ್ಪಡಿಸುವುದು. ಕಾಂಗ್ರೆಸ್ ಪಕ್ಷವನ್ನು ಅಮೇರಿಕಾದ ರಿಪಬ್ಲಿಕನ್ ಪಕ್ಷದಂತೆಯೂ, ವಿರೋಧಪಕ್ಷವನ್ನು ಡೆಮೊಕ್ರಾಟಿಕ್ ಪಕ್ಷವೆಂದೂ ಪರಿಗಣಿಸಬಹುದೆಂದೂ, ಈ ರೀತಿಯಾದ ದ್ವಿಪಕ್ಷದ ಏರ್ಪಾಟಿನಿಂದ ದೇಶದಲ್ಲಿನ ಅನೇಕ ಪಕ್ಷಗಳು ಮಾಯವಾಗಿ ಸರ್ಕಾರದ ಆಡಳಿತಕ್ಕೆ ಸಹಾಯಕವಾಗುವುದೆಂದು ನುಡಿದರು.

ಶ್ಯಾನುಭೋಗಿಕೆ ಹಕ್ಕು ರದ್ದು

ಗ್ರಾಮಗಳಲ್ಲಿ ವಂಶಪಾರಂಪರ್ಯವಾಗಿ ನಡೆದು ಬಂದಿರುವ ಗ್ರಾಮ ನೌಕರರ ವರ್ಗಕ್ಕೆ ಸೇರಿದ ಕುಲಕರಣಿಗಳ ಹಕ್ಕು ಬೊಂಬಾಯಿನಲ್ಲಿ ರದ್ದಾಗಲಿದೆ. ಈ ರದ್ದಿಗಾಗಿ ಒಂದು ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಲಾಗಿದೆ.

ಈಸೂರು ಪರಿಹಾರ

೧೯೪೨ರಲ್ಲಿ ನಡೆದ ಈಸೂರು ಹೋರಾಟದಲ್ಲಿ ನೊಂದವರಿಗೆ ಪರಿಹಾರ ಕೊಡಲು ಮೈಸೂರು ಸರ್ಕಾರವು ೨೦,೬೨೫ ರೂಪಾಯಿಗಳನ್ನು ಮಂಜೂರು ಮಾಡಿದೆ.

ಕೊರಿಯಾ ಯುದ್ಧ ರಂಗ

ಕೊರಿಯಾ ಯುದ್ಧವನ್ನು ಕೂಡಲೇ ಕೊನೆಗಾಣಿಸಬೇಕೆಂದು ರಷ್ಯಾ ಪ್ರಯತ್ನಿಸುತ್ತಲಿದೆ ಎಂಬ ಸುದ್ದಿಯು ಹೊರಟಿದೆಯೆಂದು ತಿಳಿಯ ಬರುತ್ತದೆ.

ಸರ್ಕಾರಿ ನೌಕರಿಗೆ 'ಡಿಗ್ರಿ' ಅನಗತ್ಯ

ಸರ್ಕಾರಿ ನೌಕರಿ ಮಾಡಲು ವಿಶ್ವವಿದ್ಯಾನಿಲಯದ ಪದವಿಯೇನೂ ಬೇಕಿಲ್ಲ. ಅದಕ್ಕೆ ಬದಲು ಸರ್ಕಾರದ ನ್ಯಾಯ ಇಲಾಖೆಗೆ ತಕ್ಕ ಪರೀಕ್ಷೆ ವ್ಯವಸ್ಥೆಯಾದರೆ ಸಾಕೆಂದು ವಿಶ್ವವಿದ್ಯಾನಿಲಯ ಸಮಿತಿ ಶಿಫಾರಸ್ಸನ್ನು ಪರಿಶೀಲಿಸಲು ಬೊಂಬಾಯಿ ಸರ್ಕಾರವು ಒಂದು ಸಮಿತಿಯನ್ನು ನೇಮಿಸಿದೆ.

ಅತ್ಯಾಶ್ಚರ್ಯಕರವಾದ ಸಂಗತಿ!

ಮಾದರಿ ಮೈಸೂರಿನಲ್ಲಿ ಸುಮಾರು ಹದಿನೈದು ದಿನಗಳಷ್ಟು ಪೂರ್ವಕಾಲದಲ್ಲಿ ಮೈಸೂರಿನ ಬಡಪಾಯಿ ನಾಗರೀಕರೊಬ್ಬರು ಟಾಂಗಾದಲ್ಲಿ ಹೋಗುತ್ತಿದ್ದಾಗ ತಾವು ಬಹುಕಾಲ ಸಾಕಿಕೊಂಡಿದ್ದ ತಮ್ಮ ಪ್ರಿಯವಾದ-ಇನ್ನೇನೂ ಅಲ್ಲ-ಒಂದು ಛತ್ರಿಯನ್ನು ಮರೆತು ಬಿಟ್ಟು ಕಳೆದುಕೊಂಡಿದ್ದರು. ಅದು ಈದಿನ ಪುನಃ ಅವರ ಕೈಗೆ ವಾಪಸು ಬಂತು. ಅಂದರೆ ಅದೇ ಬರಲಿಲ್ಲ! ನಮ್ಮ ರಾಜಧಾನಿಯ ಪೋಲೀಸ್ ದಳದವರ ಕುಶಾಗ್ರ ಬುದ್ಧಿಯಿಂದಲೂ ಕಾರ್ಯ ದಕ್ಷತೆಯಿಂದಲೂ ಇದು ಸಾಧ್ಯವಾಯಿತು! ಛತ್ರಿ ಟಾಂಗಾದವನಿಂದ ಮೂರುಕ್ಕೆ ದಾಟಿಹೋಗಿತ್ತೆಂದು ನಂಬಲರ್ಹವಾದ ಕಡೆಯಿಂದ ತಿಳಿದು ಬಂದಿದೆ. ಆದ್ದರಿಂದ ಕಳೆದು ಕೊಂಡಿದ್ದವರಿಗೂ ಹುಡುಕಿಕೊಟ್ಟವರಿಗೂ ನಮ್ಮ ಧನ್ಯವಾದಗಳು.

ಪೋಸ್ಟೇಜು ಇಲ್ಲ

ಅಸ್ಸಾಂ ಪರಿಹಾರಕ್ಕಾಗಿ ಯಾರುಬೇಕಾದರೂ ಗೌರ್ನರರ ಅಥವಾ ಅವರಿಂದ ನೇಮಕವಾದವರ ಹೆಸರಿಗೆ ಪಾರ್ಸಲ್ಗಳನ್ನು ಕಳುಹಿಸಿದರೆ ಅವುಗಳಿಗೆ ಪೋಸ್ಟೇಜು ಕೊಡಬೇಕಾಗಿಲ್ಲವೆಂದು ಅಂಚೆ ಇಲಾಖೆಯವರು ಪ್ರಕಟಿಸಿದ್ದಾರೆ.

● ಅಸ್ಸಾಂ ಪರಿಹಾರಕ್ಕಾಗಿ ಮೈಸೂರು ಸರ್ಕಾರದ ಮೆಡಿಕಲ್ ಸ್ಟೋರಿನಿಂದ ೫೦೦೦ ಪಾಯಿಜಾಮ ೫೦೦೦ ಖುರ್ತ ೧೦೦೦ ಹಾರ್ಲಿಕ್ಸ್ ೧೦೦ ಮಾರ್ಮೈಟ್ ಮತ್ತು ೬೦ ಪೌಂಡು ಫರೆಕ್ಸ್ ಕಳುಹಿಸಿದ್ದಾರೆ.

ವಿಶ್ವವಿದ್ಯಾಲಯ ಮಿಳಿತವಿಲ್ಲ

ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳನ್ನು ಒಂದುಗೂಡಿಸುವ ಸಲಹೆಯಿಲ್ಲವೆಂದು ಬೊಂಬಾಯಿ ಮುಖ್ಯ ಮಂತ್ರಿ ಶ್ರೀ ಬಿ. ಜಿ ಖೇರ್‌ರವರು ಹೇಳಿರುವರು.

ಅಸ್ಸಾಂ ಪರಿಹಾರನಿಧಿಗೆ

ಬೆಂಗಳೂರು ಜಿಲ್ಲಾ ಬೋರ್ಡಿನವರು ಅಸ್ಸಾಂ ಪರಿಹಾರನಿಧಿಗೆ ೫೦೦ ರೂ ಕೊಡಬಹುದೆಂದು ತೀರ್ಮಾನಿಸಿದ್ದಾರೆ

ಅಸ್ಸಾಂ ನಿಧಿಗೆ ಲಂಡನ್ನಿನಿಂದ

ಲಂಡನ್ನಿನಲ್ಲಿರುವ ಸೇಂಟ್ ಜಾನ್ ಆರ್ಡರಿನ ಭಂಡಾರಿಯಿಂದ ಅಸ್ಸಾಂ ಪರಿಹಾರನಿಧಿಗೆ ೩೫೦೦ ಪೌಂಡುಗಳು ಬಂದಿರುವುದಾಗಿ ಇಂಡಿಯಾ ರೆಡ್‌ಕ್ರಾಸ್ ಸೊಸೈಟಿಯು ಪ್ರಕಟಿಸಿದೆ.

ಮೈಸೂರು ಸರ್ಕಾರೀ ಅಧಿಕಾರಿಗೆ ಶಿಕ್ಷೆ

ನಂಬಿಕೆ ದ್ರೋಹ ಆಪಾದನೆ ಮೇಲೆ ಮೈಸೂರು ಸರ್ಕಾರದ ಎಲೆಕ್ಟ್ರಿಕಲ್ ಇಲಾಖೆಯ ಆಡಿಟ್ ಶಾಖೆಯ ಅಸಿಸ್ಟೆಂಟ್ ಆಡಿಟರ್ ಜಿ. ಎಚ್. ಜೆ. ಅಬ್ದುಲ್ ಹೈದರ್‌ರವರಿಗೆ ಬೆಂಗಳೂರು ನಗರ ನ್ಯಾಯಾಧೀಶರು ೧೦೦ ರೂ. ಜುಲ್ಮಾನೆ ತಪ್ಪಿದರೆ ಒಂದು ತಿಂಗಳ ಸಾದಾ ಸಜಾ ವಿಧಿಸಿದ್ದಾರೆ.

ಪಾಕಿಸ್ಥಾನ ಪ್ರಧಾನಿಯಿಂದ ಪತ್ರ

ಪಾಕಿಸ್ಥಾನ ಪ್ರಧಾನಿ ಮಿ॥ ಲಿಯಾಕತ್ ಅಲಿಖಾನ್‌ರವರು ಭಾರತಪ್ರಧಾನಿ ಪಂಡಿತನೆಹರೂರವರಿಗೆ ಒಂದು ಪತ್ರವನ್ನು ಕಳುಹಿಸಿರುವುದಾಗಿ ವರದಿಯಾಗಿದೆ. ಪತ್ರದಲ್ಲಿರುವ ವಿಷಯವೇನೆಂಬುದು ಇನ್ನೂ ತಿಳಿದಿಲ್ಲ.

ವಿಮಾನ ಕಾರ್ಖಾನೆಯ ಮುಷ್ಕರ

ಬೆಂಗಳೂರು ವಿಮಾನ ಕಾರ್ಖಾನೆಯ ಮ್ಯಾನೇಜ್‌ಮೆಂಟಿನವರು ಒಂದು ಪ್ರಕಟಣೆ ಹೊರಡಿಸಿ, ಮುಷ್ಕರಗಾರರೆಲ್ಲರೂ ಕೆಲಸಕ್ಕೆ ವಾಪಸ್ಸಾಗಬೇಕೆಂದೂ, ಇಲ್ಲದಿದ್ದಲ್ಲಿ ಅವರನ್ನೆಲ್ಲಾ ಕೆಲಸದಿಂದ ವಜಾ ಮಾಡಲಾಗುವುದೆಂದು ತಿಳಿಸಿದ್ದಾರೆ. ಎಸೆನ್ಷಿಯಲ್ ಸರ್ವೀಸ್ಸಿಗೆ ಸೇರಿದ ೩೦೦ ಜನರ ವಿನಹ ಇತರರು ಕೆಲಸಕ್ಕೆ ಹೋಗಲಿಲ್ಲವೆಂದು ತಿಳಿದುಬರುತ್ತದೆ. ಈ ಮುಷ್ಕರವನ್ನು ಪರಿಹರಿಸಲು ಮೈಸೂರು ಸರ್ಕಾರವು ಪರಿಶೀಲನೆ ನಡೆಸಿ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವುದೆಂದು ತಿಳಿದುಬರುತ್ತದೆ.

ವಿದ್ಯುಚ್ಛಕ್ತಿಯಿಲ್ಲ

ಅಕ್ಟೋಬರ್ ೧ನೇ ತಾರೀಖು ಭಾನುವಾರ ಬೆಳಗ್ಗೆ ೮-೩೦ರಿಂದ ಸಂಜೆ ೪-೩೦ವರೆಗೆ (ಒಟ್ಟು ೮ ಗಂಟೆ ಕಾಲ) ರಾಜಧಾನಿಯಲ್ಲೆಲ್ಲಾ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಲಾಗುವುದೆಂದು ಎಲೆಕ್ಟ್ರಿಕ್ ಶಾಖೆಯ ಅಧಿಕೃತ ಪ್ರಕಟಣೆಯು ತಿಳಿಸುತ್ತದೆ.

ಹೆಚ್ಚಿಗೆ ಸಕ್ಕರೆ

ಭಾರತ ಸರ್ಕಾರವು ಇನ್ನೂ ೨೫,೦೦೦ ಟನ್ನು ಸಕ್ಕರೆಯನ್ನು ಪರದೇಶಗಳಿಂದ ಪಡೆದಿದೆಯೆಂದು ವರದಿಯಾಗಿದೆ.

ಹಿಂದೆ ಮಾಡಿದ ಕೃತ್ಯಕ್ಕೆ ಈಗ ಶಿಕ್ಷೆ

ಮೂವತ್ತು ವರ್ಷಗಳ ಹಿಂದೆ ನಡೆಸಿದ್ದ ಕೊಲೆಗಾಗಿ ರುಮೇನಿಯಾ ಸೈನ್ಯದ ಮಾಜಿ ಸಾರ್ಜೆಂಟ್ ಮೇಜರ್ ಡ್ರಾಗೇಡಿರ್ ಬೋಲಾಯ್ ಎಂಬುವವನಿಗೆ ಈಗ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಮಿ॥ ವಾಲ್ಟರ್‌ಗಿಫರ್ಡ್

ಅಮೆರಿಕಾದ ರಾಯಭಾರಿಯಾಗಿ ಮಿ॥ ವಾಲ್ಟರ್ ಗಿಫರ್ಡ್‌ರವರು ನೇಮಿತರಾಗಿದ್ದಾರೆ. ರಾಜೀನಾಮೆ ಕೊಟ್ಟ ಲೆವಿಸ್ ಡಗ್ಲಾಸ್‌ರ ಸ್ಥಾನದಲ್ಲಿ ಇವರ ನೇಮಕವಾಗಿದೆ.

ಹಿಂದೂಸ್ಥಾನ್ ವಿಮಾನ ಕಾರ್ಖಾನೆ

ಹಿಂದೂಸ್ಥಾನ್ ವಿಮಾನಕಾರ್ಖಾನೆ ಕೆಲಸಗಾರರ ಬೇಡಿಕೆ ವಿವಾದದ ಲೇಬರ್ ಅಂಶಗಳು ಮೈಸೂರು ಸರ್ಕಾರಕ್ಕೆ ಸಂಬಂಧಿಸಿದವು. ಮದರಾಸ್ ರೀಜನಲ್ ಲೇಬರ್ ಕಮೀಷನರಿಗೆ ಅಧಿಕಾರ ವ್ಯಾಪ್ತಿಯೇನೂ ಇಲ್ಲವೆಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುವರು.

ಕೇಂದ್ರದಿಂದ ಹೆಚ್ಚಿಗೆ ಸಕ್ಕರೆ ಬರಬಹುದು

ಭಾರತ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ಹೆಚ್ಚಿಗೆ ಸಕ್ಕರೆ ಕೋಟಾ ಬರುವ ನಿರೀಕ್ಷಣೆಯಿದೆ ಎಂದು ಮುಖ್ಯ ಮಂತ್ರಿಗಳು ತಿಳಿಸಿರುವರು.

ಆರ್ಡಿನೆನ್ಸ್-ಜಾರಿ

ದಾಸ್ತಾನು, ಲಾಭಕೋರತನ, ಬ್ಲಾಕ್‌ಮಾರ್ಕೆಟ್ ಮುಂತಾದುವುಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಗಳು ಹೊರಡಿಸಿರುವ ಆರ್ಡಿನೆನ್ಸನ್ನು ಸಂಸ್ಥಾನದಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು ಎಂದು ಶ್ರೀ ಕೆ. ಸಿ. ರೆಡ್ಡಿಯವರು ಹೇಳಿರುವರು.

ಪತ್ರಿಕಾ ಗೋಷ್ಠಿ

ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಪತ್ರಿಕಾ ಗೋಷ್ಠಿಯೊಂದರಲ್ಲಿ ಮೈಸೂರು ಸೀಮೆಯಲ್ಲಿ ಆಹಾರವು ಇನ್ನು ೨ ತಿಂಗಳಿಗೆ ಮಾತ್ರ ಸಾಕಾಗುವಷ್ಟು ಇದೆಯೆಂದೂ, ಅನಂತರ ೩ ತಿಂಗಳು ಕಷ್ಟವಾಗುವುದೆಂದು ತಿಳಿಸಿ ಮೈಸೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಖಾಸಾಗಿಯಾಗಿ ಆಹಾರಧಾನ್ಯ ಮಾರಾಟ ಮಾಡುವುದನ್ನು ಇತರ ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುವಂತೆ ಮಾಡಬೇಕೆಂಬ ವಿಷಯದಲ್ಲಿ ಕೇಂದ್ರದೊಡನೆ ವ್ಯವಹರಿಸುತ್ತಲಿರುವುದಾಗಿ ತಿಳಿಸಿದರು.

ಪಬ್ಲಿಕ್ ಸರ್ವಿಸ್ ಕಮಿಷನ್ ರಚನೆಯು ಜಾಗ್ರತೆಯಾಗಿ ಆಗುವುದೆಂದೂ ಒಬ್ಬ ಅಧಿಕಾರಿ ಮತ್ತು ಇಬ್ಬರು ಖಾಸಗೀ ಸದಸ್ಯರ ಸಮಿತಿಯನ್ನು ರಚಿಸಲಾಗುವುದೆಂದು ಅವರು ಹೇಳಿದರು. ಮೈಸೂರಿನಲ್ಲಿ ವಿದ್ಯಾಭ್ಯಾಸದ ವಿಷಯದಲ್ಲಿ ಕೋಮುವಾರು ಆಜ್ಞೆ ಇಲ್ಲವೆಂದು ನಾನ್ ಗೆಜೆಟೆಡ್ ನೌಕರಿಯಲ್ಲಿರುವ ಈ ಆಜ್ಞೆಯನ್ನು ಪರಿಶೀಲಿಸಲಾಗುವುದೆಂದು ತಿಳಿಸಿದರು.

ಬಿಕಾನೀರ್ ಮಹಾರಾಜರ ಕಳೇಬರ

ಬಿಕಾನೀರ್ ಮಹಾರಾಜರ ಕಳೇಬರವು ಇಂದು ಸ್ಪೆಷಲ್ ವಿಮಾನದಲ್ಲಿ ಇಂಗ್ಲೆಂಡಿನಿಂದ ಭಾರತಕ್ಕೆ ಹೊರಟಿತು.

ಪತ್ರಿಕೆಗಳ ಮೇಲೆ ಸೇಲ್ಸ್‌ಟ್ಯಾಕ್ಸ್

ಪತ್ರಿಕೆಗಳ ಮೇಲಿನ ಸೇಲ್ಸ್‌ಟ್ಯಾಕ್ಸನ್ನು ವಿಧಿಸದೆ ರಿಯಾಯತಿ ಕೊಡಬೇಕೆಂದು ಪತ್ರಿಕಾ ಮಾಲೀಕರ ಪರವಾಗಿ ನಿಯೋಗವೊಂದು ನಿನ್ನೆ ಅರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರಲ್ಲಿ ಮನವಿಮಾಡಿಕೊಂಡರು. ವಿನಾಯತಿ ಕೊಡುವ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಸಚಿವರು ಭರವಸೆಯಿತ್ತರು.

'ಕಿಡಿ' ಪತ್ರಿಕೆ ಮೇಲಿನ ಮೊಕದ್ದಮೆ ವಾಪಸ್ಸು

'ಕಿಡಿ' ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಶೇಷಪ್ಪನವರ ಮತ್ತು ಮುದ್ರಕ ಶ್ರೀ ಚಿಂತಾಮಣಿಯವರ ಮೇಲೆ ಸರ್ಕಾರದವರು ಹೂಡಿದ್ದ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ

ಪತ್ರಿಕೋದ್ಯೋಮಿ ಸಮ್ಮೇಳನಕ್ಕೆ ಉದಾರ ಸಹಾಯ

ನವಂಬರಿನಲ್ಲಿ ನಡೆಯಲಿರುವ ಪತ್ರಿಕೋದ್ಯೋಮಿ ಸಮ್ಮೇಳನಕ್ಕೆ ದಿವಾನ್ ಬಹದ್ದೂರ್ ಕೆ. ರಾಮಸ್ವಾಮಿಯವರು, ಚಂದ್ರಭವನದ ಮಾಲೀಕರಾದ ಶ್ರೀ ಬದರೀ ಪ್ರಸಾದ್‌ರವರು, ಶ್ರೀ ಕೆ. ಎಸ್. ಸತ್ಯನಾರಾಯಣ ರಾವ್, ರಘುಲಾಲ್ ಅಂಡ್ ಕಂಪೆನಿ, ಶ್ರೀ ಎಂ. ಆರ್. ಸಿ. ಬಸಪ್ಪನವರು ಪ್ರತಿಯೊಬ್ಬರೂ ೧೦೦ ರೂ.ಗಳನ್ನೂ, ಅಮೃತ್ ಲ್ಯಾಬರೇಟರಿಯವರು ೫೧ ರೂ. ಗಳನ್ನು ಕೊಟ್ಟಿರುವರು.

ಜಮೀನ್ದಾರಿ ರದ್ದು

ಮದರಾಸಿನಲ್ಲಿ ಜಮೀನ್ದಾರಿ ರದ್ದುಮಾಡಲು ಒಟ್ಟು ೨೫ಕೋಟಿ ರೂಪಾಯಿಗಳು ವೆಚ್ಚವಾಗುವುದು ಅದರಲ್ಲಿ ೧೮ ಕೋಟಿ ರೂಪಾಯಿಗಳನ್ನು ಪರಿಹಾರಕ್ಕಾಗಿಯೇ ಕೊಡಬೇಕಾಗುವುದು.

ವಿದ್ಯಾ ಮಂತ್ರಿಗಳ ಪ್ರವಾಸ

ಮೈಸೂರು ವಿದ್ಯಾ ಮಂತ್ರಿಗಳಾದ ಶ್ರೀ ಸಿದ್ದಲಿಂಗಯ್ಯನವರು ಅಕ್ಟೋಬರ್ ೧ರಿಂದ ೩ ದಿನಗಳು ಮೈಸೂರು ಜಿಲ್ಲೆಯಲ್ಲಿ ಪ್ರವಾಸಮಾಡುವರು. ಅಕ್ಟೋಬರ್ ೩ರಲ್ಲಿ ಗುಂಡ್ಲುಪೇಟೆಗೆ ಭೇಟಿಕೊಡುವರು. ಮಹಾತ್ಮಾ ಗಾಂಧಿ ಸೇವಾಸಂಘದಲ್ಲಿ ಗಾಂಧಿ ಜಯಂತೀ ಪ್ರಯುಕ್ತ ೨ನೇ ತಾರೀಖು ಭಾಷಣ ಮಾಡುವರು.

● ಭಾರತ ಇತಿಹಾಸ ದಾಖಲೆ ಕಾಗದಪತ್ರ ಸಮಿತಿಯ ಸಂಶೋಧನೆ ಮತ್ತು ಪ್ರಕಟಣಾ ಸಮಿತಿಗೆ ಮೈಸೂರು ಅರ್ಥಿಕಯೋಜನಾಧಿಕಾರಿಗಳಾದ ಜೆ. ಬಿ. ಮಲ್ಲಾರಾಧ್ಯರನ್ನು ಸದಸ್ಯರಾಗಿಯೂ ಮತ್ತು ಮಹಾರಾಜಾ ಕಾಲೇಜಿನ ಇತಿಹಾಸ ಅಧ್ಯಾಪಕರಾದ ಶ್ರೀ ರಾಘವೇಂದ್ರರಾಯರನ್ನು ಅಸೋಸಿಯೇಟೆಡ್ ಸದಸ್ಯರನ್ನಾಗಿ ಭಾರತ ಸರಕಾರವು ನೇಮಿಸಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೬ ಮೀಟರು

ಸೆಪ್ಟೆಂಬರ್ ೩೦ ಶನಿವಾರ

ಬೆಳಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೫ ಚಿತ್ರಜಗತ್ (೧) ೭-೨೫ ಎಸ್. ರಾಮಚಂದ್ರ ರಾವ್ (ದೇವರನಾಮ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೩೦ ಮುಕ್ತಾಯ.

ಮಧ್ಯಾಹ್ನ ೧-೦ ಎ. ವಿ. ನಾರಾಯಣಪ್ಪ (ಸಂಗೀತ) ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಹಿಂದಿಯಲ್ಲಿ ವಾರ್ತೆ. ೧-೫೦ ಪಿಟೀಲು ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಎ ವಿ. ನಾರಾಯಣಪ್ಪ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ತಬಲ ೭-೪೦ ಭಂಡಾರ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಎಸ್. ಟಿ. ಶಾಮಣ್ಣ (ಕಥಾ ಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಇಂಗ್ಲೀಷ್‌ನಲ್ಲಿ ಭಾಷಣ ೯-೪೫ ವಾದ್ಯ ಸಮ್ಮೇಳನ ೧೦-೦ ಮುಕ್ತಾಯ.

ನಿಧನ

ಅರಮನೆ ಕಂಟ್ರಾಕ್ಟರೂ, ಚಾಮುಂಡೇಶ್ವರೀ ಮತ್ತು ಗಣೇಶ, ಚಲನಚಿತ್ರಮಂದಿರಗಳ ಮಾಲೀಕರೂ ಆದ ಶ್ರೀ ಬಾಲಕೃಷ್ಣಾಚಾರ್ಯರವರು ನಿನ್ನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ದಸರಾ ಮೆರವಣಿಗೆ ಇಲ್ಲ

ಈಸಾರಿ ನವರಾತ್ರಿ ಸಂದರ್ಭದಲ್ಲಿ ಜಂಬೂಸವಾರಿ ಉತ್ಸವವು ನಡೆಯುವುದಿಲ್ಲ, ವಸ್ತು ಪ್ರದರ್ಶನ, ಅರಮನೆಯಲ್ಲಿ ದರ್ಬಾರು ಮುಂತಾದುವು ಮಾಮೂಲಿನಂತೆ ನಡೆಯುವುದೆಂದು ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಪೋಲೀಸಿಗಾಗಿ ವೆಚ್ಚ

ಹೈದರಾಬಾದಿನಲ್ಲಿ ಪೋಲೀಸು ಇಲಾಖೆಯ ವೆಚ್ಚವು ವರ್ಷಕ್ಕೆ ೫॥ಕೋಟಿ ರೂಪಾಯಿಗಳು.

ರಣಜಿತ್
ತಾ॥ ೨೨-೯-೫೦ ರಿಂದ ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸುವ
ಕಿಲಾಡಿ (Khilari)
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

RAGHULAL & Co.,
CHEMISTS
Sayyaji Rao Road
MYSORE

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೦—೯—೧೯೫೦ ನೇ ಶನಿವಾರ [ಸಂಚಿಕೆ ೩೯

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

★ ಕೊರಿಯಾದಲ್ಲಿ ವಿಶ್ವಸಂಸ್ಥೆಯ ಪಡೆಗಳಿಗೆ ವಿಜಯ ★

ಮೈಸೂರು ಎ ಐ.ಆರ್.

ಮೈಸೂರು ಎ ಐ ಆರ್. ಕಾರ್ಯಕ್ರಮವು ನಾಳೆಯಿಂದ ಬದಲಾವಣೆಯಾಗಿದೆ. ಬೆಳಗಿನ ಪ್ರಸಾರವು ೭-೧೫ಕ್ಕೆ ಪ್ರಾರಂಭ ೮-೧೫ ಮುಕ್ತಾಯ, ಮಧ್ಯಾಹ್ನ ೧-೩೦ಕ್ಕೆ ಪ್ರಾರಂಭವಾಗಿ ೨-೩೦ಕ್ಕೆ ಮುಕ್ತಾಯವಾಗುವುದು.

ಪುನಃ ಭೂಕಂಪ

ದಿಬ್ರೂಘರಿನಲ್ಲಿ ಪುನಃ ೨೭ನೇ ತಾರೀಖು ಬೆಳಿಗ್ಗೆ ೧೧-೪೫ ಗಂಟೆಗೆ ಭೂಕಂಪವಾಯಿತೆಂದು ವರದಿಯಾಗಿದೆ.

ಗಾಂಧೀ ಜಯಂತ್ಯುತ್ಸವ

ಮೈಸೂರು ನಗರದಲ್ಲಿರುವ ಮಹಾತ್ಮ ಗಾಂಧೀ ಸೇವಾಸಂಘದವರು ೨ನೇ ತಾ|| ಸಂಜೆ ೭ ಗಂಟೆಗೆ ಗಾಂಧೀಜಯಂತ್ಯುತ್ಸವವನ್ನು ನಡೆಸುವರು. ಆರೋಗ್ಯ ಮತ್ತು ವಿದ್ಯಾಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷತೆವಹಿಸುವರು. ಈ ಉತ್ಸವದ ಅಂಗವಾಗಿ ೩ ಮತ್ತು ೪ನೇ ದಿನಗಳಲ್ಲೂ ಸಂಗೀತವನ್ನೇರ್ಪಡಿಸಿರುವರು. ೩ನೇ ತಾ|| ಮಂಗಳವಾರ ಶ್ರೀ ಸ್ವರಮೂರ್ತಿಯವರ ಸಂಗೀತ ಮತ್ತು ೪ನೇ ತಾ|| ಬುಧವಾರ ಶ್ರೀ ಟಿ. ಚೌಡಯ್ಯನವರ ಪಿಟೀಲು ನಡೆಯುವುದು.

ವಿಶ್ವಸಂಸ್ಥೆಗೆ ಇಂಡೋನೇಷಿಯ

ಇಂಡೋನೇಷಿಯಾಕ್ಕೆ ವಿಶ್ವಸಂಸ್ಥೆಯಲ್ಲಿ ೬೦ ನೇ ಸದಸ್ಯಸ್ಥಾನವನ್ನು ಕೊಡಲಾಯಿತೆಂದು ತಿಳಿಯಬರುತ್ತದೆ.

ಕಾಶ್ಮೀರ ಪ್ರಶ್ನೆ

ಪಾಕಿಸ್ತಾನ ಮತ್ತು ಭಾರತವು ಕಾಶ್ಮೀರ ಪ್ರಶ್ನೆಯನ್ನು ತಾವೇ ಇತ್ಯರ್ಥಮಾಡಿಕೊಳ್ಳುವ ಸಂಭವವಿಲ್ಲ ದೆಲ್ಲಿ ಒಪ್ಪಂದವನ್ನು ಪಾಕಿಸ್ತಾನವು ಉತ್ತಮ ರೀತಿಯಲ್ಲಿ ಪಾಲಿಸುತ್ತಲಿದೆ. ಈ ಎರಡು ರಾಜ್ಯಗಳಿಗೂ ಮೈತ್ರಿಯು ಹೆಚ್ಚಬೇಕಾದರೆ ಹಿಂದೆ ತಾವು ಸೂಚಿಸಿ, ಭಾರತ ಪ್ರಧಾನಿ ಒಪ್ಪದಿರುವ 'ಯುದ್ಧವಿಲ್ಲವೆಂದು ಘೋಷಣೆಯೇ' ಅತ್ಯುತ್ತಮ ಮಾರ್ಗವೆಂದು ಪಾಕಿಸ್ತಾನ ಪ್ರಧಾನಿ ಮಿ|| ಲಿಯಾಕತ್ ಅಲಿಖಾನರವರು ಹೇಳಿರುವರು.

ನೀತಿ ಬದಲಾವಣೆಯಿಲ್ಲ

೧೯೫೨ನೇ ಮಾರ್ಚಿಯ ಹೊತ್ತಿಗೆ ಭಾರತದಲ್ಲಿ ಆಹಾರ ಸ್ವಯಂಪರಿಪೂರ್ಣತೆಯ, ನೀತಿಯಲ್ಲಿ ಏನೂ ಬದಲಾವಣೆ ಯಿಲ್ಲವೆಂದು ಕೇಂದ್ರ ಆಹಾರಾ ಶಾಖಾ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ವಿಮಾನ ಕಾರ್ಖಾನೆ

ವಿಮಾನ ಕಾರ್ಖಾನೆ ಕೆಲಸಗಾರರ ಸಂಘದ ಎಗ್ಸಿಕ್ಯುಟೀವ್ ಕಮಿಟಿ ಸಭೆಯು, ಕೆಲಸಗಾರರೆಲ್ಲರೂ ಕೂಡಲೇ ಕೆಲಸಕ್ಕೆ ಹೋಗಬೇಕೆಂದು ಅಭಿಪ್ರಾಯಪಡುವುದಾಗಿ ನಿರ್ಣಯಿಸಿದೆ

ಅಂತರರಾಷ್ಟ್ರೀಯ ಲೇಬರ್ ಸಂಸ್ಥೆ

ಅಂತರರಾಷ್ಟ್ರೀಯ ಲೇಬರ್ ಸಂಸ್ಥೆಯ ಆಗ್ನೇಯ ಏಷ್ಯಾ ರಾಷ್ಟ್ರಗಳ ಪ್ರಾವೇಶಿಕ ಶಿಕ್ಷಣವು ಅಕ್ಟೋಬರ್ ೨ನೇ ತಾ. ಬೆಂಗಳೂರಿನಲ್ಲಿರುವ ಐ. ಎಲ್ ಓ. ಏಷ್ಯ ಫೀಲ್ಡ್ ಆಫೀಸಿನಲ್ಲಿ ಪ್ರಾರಂಭವಾಗುವುದು. ಈ ಶಿಕ್ಷಣವು ೩ ತಿಂಗಳ ಕಾಲ ನಡೆಯುವುದು.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

● ಸರ್ಕಾರಿ ಪ್ಲೀಡರ್ ಶ್ರೀ ಎನ್. ಚಿನ್ನಸ್ವಾಮಿಶೆಟ್ಟಿ, ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಸೂಪರಿಂಟೆಂಡೆಂಟ್ ಶ್ರೀ ಕೆ. ವಿಜಯಂ ಮತ್ತು ಅಸಿಸ್ಟೆಂಟು ಸೂಪರಿಂಟೆಂಡೆಂಟ್ ಶ್ರೀ ಎಂ ವೀರಪ್ಪನವರಿಗೆ ಕೆಲವು ಮಿತ್ರರು ನಾಳೆ ಸಂಜೆ ಬಸ್ ಟರ್ಮಿನಸ್ಸಿನಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿರುವರು ಕೈಗಾರಿಕಾ ಮತ್ತು ವಾಣಿಜ್ಯಶಾಖೆಯ ಅಡಿಷನಲ್ ಡೈರೆಕ್ಟರ್ ಶ್ರೀ ಚಿಕ್ಕನಾರಾಯಣ ಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಚೀಣಾಕ್ಕೆ ಆಹ್ವಾನ

ಭದ್ರತಾ ಸಮಿತಿಯಲ್ಲಿ ನಿನ್ನೆ ನಡೆದ ಸಭೆಯಲ್ಲಿ ಫಾರ್ಮೋಸಾ ಪ್ರಶ್ನೆಯನ್ನು ಚರ್ಚಿಸಲು ರಿಪಬ್ಲಿಕ್ ಚೀಣಾಕ್ಕೆ ಆಹ್ವಾನಕೊಡಬೇಕೆಂದು ೭-೪ ಓಟುಗಳಿಂದ ತೀರ್ಮಾನವಾಯಿತು.

ಜ|| ಮೆಕಾರ್ಥರಿಗೆ ಅಧ್ಯಕ್ಷ ಟ್ರೂಮನ್ನರ ಸಂದೇಶ

ಕೊರಿಯಾದಲ್ಲಿ ನಡೆದ ವಿಜಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಟೋಕಿಯೋಗೆ ಹಿಂತಿರುಗಿದ ಜ|| ಮೇಕಾರ್ಥರಿಗೆ ಅಮೇರಿಕಾ ಅಧ್ಯಕ್ಷ ಟ್ರೂಮನ್ನರು ಕೋರಿಯಾ ಯುದ್ಧದಲ್ಲಿ ಮೆಕಾರ್ಥರು ವಿಜಯ ಪಡೆದುದಕ್ಕಾಗಿ ಒಂದು ಸಂದೇಶ ಕಳುಹಿಸಿ ಅವರನ್ನು ಅಭಿನಂದಿಸಿರುವರು

ಭಾರತ ಪಾರ್ಲಿಮೆಂಟು ಸಭೆ

ಭಾರತ ಪಾರ್ಲಿಮೆಂಟಿನ ಮುಂದಿನ ಸಭೆಯು ನವಂಬರ್ ೧೩ರಿಂದ ನಡೆಯುವುದೆಂದು ತಿಳಿಯಬರುತ್ತದೆ

ಸಮ್ಮೇಳನಕ್ಕೆ ನಗರ ಪೌರ ಸಭೆಯಿಂದ ೨೫೦ ರೂ.

ನಿನ್ನೆ ನಡೆದ ಮೈಸೂರು ಪೌರಸಭೆಯ ಅಧಿವೇಶನದಲ್ಲಿ, ನವೆಂಬರಿನಲ್ಲಿ ನಡೆಯಲಿರುವ ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ೨೫೦ ರೂಪಾಯಿಗಳನ್ನು ಕೊಡಬಹುದೆಂದು ತೀರ್ಮಾನವಾಯಿತು.

LATEST

ಪಂ|| ನೆಹರೂ ಮೈಸೂರಿಗೆ?

ಮೈಸೂರಿನಲ್ಲಿರುವ ಆರೋಗ್ಯ ಸಂಶೋಧನಾ ಕೇಂದ್ರದ ಪ್ರಾರಂಭೋತ್ಸವವನ್ನು ಕೇಂದ್ರದ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮುಂದಿನತಿಂಗಳು ೨ನೇ ತಾರೀಖು ನೆರವೇರಿಸಲಿರುವರು. ಈ ಸಮಾರಂಭಕ್ಕೆ ಪ್ರಧಾನಿ ಪಂ|| ನೆಹರೂರವರು ಬರುವ ನಿರೀಕ್ಷಣೆಯಿದೆ.

ಸರ್ ಎಂ. ವಿ. ಯವರಿಗೆ ಬಿನ್ನವತ್ತಳೆ

ಮೈಸೂರು ಪೌರಸಭೆಯವರು ಸರ್ ಎಂ. ವಿಶ್ವೇಶ್ವರಯ್ಯನವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲು ನಿರ್ಧರಿಸಿದ್ದಾರೆ.

○ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಶ್ರೀಗಳಾದ ರೇವತಿಪ್ರಸಾದ್, ಕೆ. ಸೀತಾರಾಮರಾವ್ ಬೋರಯ್ಯಬಸವಯ್ಯನವರು ಮತ್ತು ಮೆಸರ್ಸ್ ಸಿ. ಪಿ ಸಿ. ಕಂಪೆನಿಯವರು ತಲಾ ೧೦೧ರೂ. ಗಳನ್ನು ಕೊಟ್ಟಿದ್ದಾರೆ.

★ ಸಿರ್ಲೋಜೆಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಸೆಪ್ಟೆಂಬರ್ ೨೫ನೇ ತಾ॥ ಲಂಡನ್ನಿನಲ್ಲಿ ನಡೆದ ಕಾಮನ್‌ವೆಲ್ತ್ ಮಂತ್ರಿಗಳ ಸಮ್ಮೇಳನದಲ್ಲಿ ಬ್ರಿಟನ್ನಿನ ನಾಯಕರಾದ ಹಗ್ ಗೆಯಟ್ಸ್ಕೆಲ್ (ಬ್ರಿಟನ್ನಿನ ಮಿನಿಸ್ಟರ್ ಆಫ್. ಸ್ಟೇಟ್)

ಮುಖ್ಯ ಮಂತ್ರಿಗಳ ಪ್ರವಾಸ

ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಮುಂದಿನ ತಿಂಗಳು ೨-೩ರಲ್ಲಿ ಮೈಸೂರು ಜಿಲ್ಲೆಯಲ್ಲಿ, ೫ ರಿಂದ ೧೦ರವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ೧೧ರಿಂದ ೨೨ರ ವರೆಗೆ ಮೈಸೂರುನಲ್ಲಿರುವರು. ೨೧ನೇ ಅಕ್ಟೋಬರಿನಲ್ಲಿ ಮೈಸೂರು ಆಹಾರ ಪರಿಶೋಧನಾ ಕೇಂದ್ರದ ಪ್ರಾರಂಭೋತ್ಸವವನ್ನು ನಡೆಸುವರು.

ಶಿವಮೊಗ್ಗಾದಿಂದ ಶೃಂಗೇರಿಗೆ.

ಶಿವಮೊಗ್ಗಾಯಿಂದ ಪ್ರತಿನಿತ್ಯವೂ ಬೆಳಿಗ್ಗೆ ೮ ಗಂಟೆಗೆ ಒಂದು ಬಸ್ಸು ಹೊರಟು ಶೃಂಗೇರಿಯನ್ನು ೧೨-೩೦ಕ್ಕೆ ಸೇರಿ, ೨-೧೫ ಅಲ್ಲಿಂದ ಹೊರಟು ಶಿವಮೊಗ್ಗಾಕ್ಕೆ ೫-೩೦ಕ್ಕೆ ಬರುವಂತೆ ಸರ್ಕಾರದವರು ಬಸ್ಸು ಸರ್ವಿಸ್ ಏರ್ಪಡಿಸಿರುವರು.

ಪಾಕಿಸ್ತಾನಕ್ಕೆ ಪರಾರಿ

ತುಂಗಭದ್ರಾ ಪ್ರಾಜೆಕ್ಟಿನ ಚೀಫ್-ಇಂಜನಿಯರಾಗಿದ್ದು ಪೋಲೀಸ್ ಕಾರ್ಯಾಚರಣೆಯಾದನಂತರ ಕೆಲಸದಿಂದ ವಜಾಮಾಡಲ್ಪಟ್ಟ ಮಿ॥ ಕ್ವಾಜಾ ಆಸಿಮುದ್ದೀನ್ ಎಂಬುವವರು ಹೈದರಾಬಾದಿನಿಂದ ಪಾಕಿಸ್ತಾನಕ್ಕೆ ಪರಾರಿಯಾಗಿದ್ದಾರೆಂದೂ ತಿಳಿಯಬಂದಿದೆ ಹೈದರಾಬಾದು ‘ ಸಚಿವರ ಮೊಕದ್ದಮೆ ’ ಯ ಸಂದರ್ಭದಲ್ಲಿ ಇವರನ್ನು ದಸ್ತಗಿರಿಮಾಡಿ ಬೇಲ್‌ಮೇಲೆ ಬಿಡಲಾಗಿತ್ತು. ಇವರು ಮದರಾಸಿಗೆ ಹೋಗಿ ಅಲ್ಲಿಂದ ಕಲ್ಕತ್ತಾ ಮೂಲಕ ಢಕ್ಕಾಕ್ಕೆ ಹೋದರೆಂದು ವರದಿಯಾಗಿದೆ

ಪ್ರಕಟನ ಮಹೋತ್ಸವ

ಸುಪ್ರಸಿದ್ಧ ಕನ್ನಡ ಕವಿಗಳಾದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರೊಫೇಸರಾಗಿರುವ ಶ್ರೀ ಕೆ. ವಿ. ಪುಟ್ಟಪ್ಪನವರು ಬರೆದು, ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ಅಚ್ಚು ಹಾಕಿಸಿರುವ ‘ ಜನಪ್ರಿಯ ’ ವಾಲ್ಮೀಕಿ ರಾಮಾಯಣದ ‘ ಪ್ರಕಟನ ಮಹೋತ್ಸವ ’ ವನ್ನು ಗಾಂಧಿ ಜಯಂತಿ ದಿನ, ಮುಂದಿನ ಮಾಹೆ ೨ನೇ ತಾ॥ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನೆರವೇರಿಸುವರು. ಈ ರಾಮಾಯಣವನ್ನು ಬರೆಯಲು ಧರ್ಮಪ್ರಕಾಶ ಶ್ರೀ ಎಲ್. ಎಸ್. ವೆಂಕೋಜಿರಾಯರು ೫,೦೦೦ ರೂ. ಗಳನ್ನು ಕೊಟ್ಟಿರುವರು.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು ! ಬಹು ಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೀಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ,

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯·೪೬ ಮೀಟರು

ಅಕ್ಟೋಬರ್ ೧ ಭಾನುವಾರ

ಬೆಳಿಗ್ಗೆ ೭-೦ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೫ ಚಿತ್ರಸಂಗೀತ (ರಿ) ೭-೩೫ ಸಿತಾರ್ ಮತ್ತು ದಿಲ್‌ರುಬ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಕ್ಲಾರಿಯೋನೆಟ್ ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಹಾಡುಗಳು ೨-೩೦ ಮುಕ್ತಾಯ

ಸಂಜೆ ೫-೩೦ ರತ್ನಮ್ಮ ಕೃಷ್ಣಮೂರ್ತಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆಗಳು ೬-೪೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಮಿಶ್ರ ಮಾಧುರ್ಯ (ರಿ) ೭-೩೦ ರತ್ನಮ್ಮ ಕೃಷ್ಣಮೂರ್ತಿ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಆರ್. ಅನಂತ ಕೃಷ್ಣ ಶರ್ಮ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕನ್ನಡ ನಾಟಕ: ಬಹಿಷ್ಕಾರ ೧೦-೦ ಮುಕ್ತಾಯ.

ಅಕ್ಟೋಬರ್ ೨ ಸೋಮವಾರ

ಬೆಳಿಗ್ಗೆ ೭-೧೫ ವೈಷ್ಣವಜನತೋ (ರಿ) ೭-೧೮ ಕಾರ್ಯಕ್ರಮ ವಿವರಣೆ ೭-೨೦ ಸರೋಜ ಮತ್ತು ಇಂದಿರ (ಗಾಂಧಿ ಗೀತೆಗಳು) ೭-೩೫ ಪಕ್ಷಿನೋಟ ೭-೪೫- ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಸ್ಮರಣೆ (ರಿ) ೧-೪೫ ಹಿಂದೀ ಶಿಕ್ಷಣ ೨-೦ ಗಾಂಧಿ ಗೀತೆಗಳು ೨-೧೫ ವಾದ್ಯ ಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ಚಿರಂತನಸತ್ಯ (ದೆಹಲಿ ಕಾರ್ಯಕ್ರಮ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೨೦ ಮಹಾತ್ಮರ ಸಂದೇಶ ೬-೩೦ ಸ್ಥಳೀಯ ಪ್ರಕಟಣೆ ೬-೪೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ವಿಶ್ವದೀಪ ಬಾಪು-ಹಿಂದೀ ಭಾಷಣ ೭-೧೫ ಸಿ. ಪಿ ರಂಗಸ್ವಾಮಿಅಯ್ಯಂಗಾರ್ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಬಾಪು-ಕೀ-ಅಮರ್ ಕಹಾನಿ (ರಿ) ೯ ೧೫ ಇಂಗ್ಲೀಷಿನಲ್ಲಿ ಭಾಷಣ ೮-೩೦ ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಸರೋಜಬಾಯಿ (ಸಂಗೀತ)೧೦-೦ ಮುಕ್ತಾಯ.

ರಣಜಿತ್
ತಾ॥ ೩೦-೯-೫೦ ರಿಂದ ೨ನೇ ವಾರ
ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ (Khilari)
(ಹಿಂದಿ)

ಬೆಳಗಿನ ಪ್ರದರ್ಶನ
ನೂರ್ಜಹಾನ್ ನಟಿಸಿರುವ
ಜೀನತ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

★ ಮಹಾತ್ಮರ ಆದರ್ಶಕ್ಕೆ ಆತ್ಮಸಮರ್ಪಣೆಮಾಡಿ

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨—೧೦—೧೯೫೦ ನೇ ಸೋಮವಾರ [ಸಂಚಿಕೆ ೪೦

ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರು ಇಂದು ಇಡೀ ರಾಷ್ಟ್ರಕ್ಕೆ ಒಂದು ಸಂದೇಶವಿತ್ತರು. ಬಾಪೂಜಿಯವರು ದೇಶಕ್ಕೆ ಸಲ್ಲಿಸಿದ ಅತ್ಯಮೋಘ ಸೇವೆಯನ್ನು ಪ್ರಸ್ತಾಪಿಸಿ- ಅವರ ದೃಢತೆ, ಆತ್ಮವಿಶ್ವಾಸ, ಶ್ರದ್ಧೆ, ಶಾಂತಿ, ಅಹಿಂಸೆ, ಮತ್ತು ನಿಸ್ವಾರ್ಥತ್ಯಾಗವನ್ನು ವಿವರಿಸಿ, ಈ ಸದ್ಗುಣ ಶಕ್ತಿಯೇ ಭಾರತನ್ನು ವಿದೇಶಿಯರ ಆಳ್ವಿಕೆಯಿಂದ ಬಂಧವಿಮುಕ್ತ ಮಾಡಿತೆಂದೂ, ಮಹಾತ್ಮ ಗಾಂಧಿಜೀಯವರ ಆದರ್ಶಗಳು ಮಾನವತೆಯನ್ನೇ ಪರಮ ಉನ್ನತ ಸ್ಥಾನಕ್ಕೆ ಒಯ್ಯುವುದಾಗಿರುವುದೆಂದೂ, ಭಾರತೀಯರು ಅವರ ಅಮರ ಆದರ್ಶಗಳಾವಲಂಬಿಗಳಾಗಿ ಭಾರತದೇಶದ ಕೀರ್ತಿ ಬೆಳಗಿಸುವಂತಾಗಬೇಕೆಂದು ನುಡಿದರು

ಮಿ॥ ಲಾಯಕಾಲಿ ಜರ್ಮನಿಗೆ

ಭಾರತದಿಂದ ಪಾಕಿಸ್ತಾನಕ್ಕೆ ಪರಾರಿಯಾದ ಹೈದರಾಬಾದು ಮಾಜಿ ಮುಖ್ಯಮಂತ್ರಿ, ಮಿ॥ ಲಾಯಕಾಲಿಯವರು ಒಂದು ರಹಸ್ಯಕಾರ್ಯಕ್ಕಾಗಿ ಬ್ರಿಟನ್ನಿಗೆ ಹೋಗಿ, ಅಲ್ಲಿಂದ ಜರ್ಮನಿಗೆ ಹೊರಡಲಿರುವರು.ಅವರ ಜೊತೆಯಲ್ಲಿ ಪಾಕಿಸ್ಥಾನದ ಸ್ಟೇಟು ಬ್ಯಾಂಕಿನ ಡೈರೆಕ್ಟರಾದ ಮಿ॥ ಖಾಸಿಂದಾದಾರವರೂ ಹೋಗಿರುವರು.

ಪಾಕಿಸ್ಥಾನ ನೀತಿಬದಲಾವಣೆಯಾಗಬೇಕು

ಕಾಶ್ಮೀರ, ಪ್ರಶ್ನೆಯು ಶಾಂತಿಯುತವಾಗಿಯೂ ಗೌರವಯುತವಾಗಿಯೂ ಪರಿಹಾರವಾಗಬೇಕಾದರೆ ಪಾಕಿಸ್ಥಾನವು ತನ್ನ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕು ಎಂದು ಪಂಡಿತನೆಹರೂರವರು ತಿಳಿಸಿರುವರು.

ಚೈನಾದಲ್ಲಿ ಪ್ರಜಾ ಸರ್ಕಾರದ ದಿನೋತ್ಸವ

ಚೈನಾದಾದ್ಯಂತ ಪ್ರಜಾ ಸರ್ಕಾರ ಸ್ಥಾಪನೆಯಾದ ಮೊದಲನೇ ವರ್ಷದ ದಿನೋತ್ಸವವು ಬಹಳ ವಿಜೃಂಭಣೆಯಿಂದ ನಿನ್ನೆ ನಡೆಯಿತು ಡೆಹಲಿಯಲ್ಲಿ ನವ ಚೈನಾ ಪ್ರತಿನಿಧಿಯು ಈ ದಿನೋತ್ಸವವನ್ನು ನಡೆಸಿದರು. ಭಾರತ ಪ್ರಧಾನಿಯವರೂ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೊರಿಯಾ ಯುದ್ಧರಂಗ

ದಕ್ಷಿಣಕೊರಿಯನ್ನರು ೩೮ನೇ ಅಕ್ಷಾಂಶವನ್ನು ದಾಟಿರುವುದಾಗಿ ವರದಿಯಾಗಿದೆ. ಇದಕ್ಕೆ ವಿಶ್ವಸಂಸ್ಥೆಯ ದಂಡನಾಯಕರ ಅಪ್ಪಣೆಯಾಗಿದೆಯೆಂದು ತಿಳಿಯಬರುತ್ತದೆ. ಜನರಲ್ ಮೆಕಾರ್ಥರವರು ಉತ್ತರ ಕೊರಿಯಾದಲ್ಲೆಲ್ಲಾ ತಮ್ಮ ವಿಜಯವನ್ನು ಸೂಚಿಸುವ ಪ್ರಕಟಣೆಯ ಲಕ್ಷಾಂತರ ಪತ್ರಗಳನ್ನು ವಿಮಾನಗಳಲ್ಲಿ ಹಾಕುತ್ತಾ ಕೂಡಲೇ ಉತ್ತರಕೊರಿಯಾ ಸೈನ್ಯವೆಲ್ಲವೂ ಶರಣಾಗತರಾಗುವುದಲ್ಲದೆ ಕೈಸೆರೆ ಹಿಡಿದಿರುವ ದಕ್ಷಿಣ ಕೊರಿಯ ಮತ್ತು ಸೆರೆಯಲ್ಲಿರುವ ವಿಶ್ವಸಂಸ್ಥೆಯ ಸೈನ್ಯವನ್ನೆಲ್ಲಾ ಕೂಡಲೇ ಬಿಟ್ಟು ಬಿಟ್ಟು ಅವರು ಸಂರಕ್ಷಿತರಾಗಿ ತಮ್ಮ ತಮ್ಮ ಸ್ಥಳಗಳಿಗೆ ಹೋಗಲು ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ತಿಳಿಸಿರುವರು.

ರಾಷ್ಟ್ರಪಿತ ಬಾಪೂಜೀ

ಪುನಃ ಯುದ್ಧಭೀತಿ ?

ಭಾರತ ಸರ್ಕಾರಕ್ಕೆ ನೂತನ ಚೀಣಾ ರಾಜಧಾನಿ ಪೀಕಿಂಗಿನಿಂದ ಬಂದಿರುವ ಸುದ್ದಿಯ ಪ್ರಕಾರ ವಿಶ್ವಸಂಸ್ಥೆ ಸೇನೆಗಳು ೩೮ನೇ ಅಕ್ಷಾಂಶವನ್ನು ದಾಟಿ, ಉತ್ತರ ಕೊರಿಯಾದ ಮೇಲೆ ಆಕ್ರಮಣಕಾರ್ಯ ಕೈಗೊಂಡರೆ ಕಮ್ಯೂನಿಸ್ಟು ಚೀಣಾವು ನೇರವಾಗಿ ಯುದ್ಧರಂಗಕ್ಕೆ ಪ್ರವೇಶಮಾಡುವ ಭೀತಿಯಿದೆಯೆಂದು ನಂಬಲಾಗಿದೆ. ಈ ವಿಚಾರದಲ್ಲಿ ಭಾರತವು ಈಗಾಗಲೇ ಅಮೇರಿಕಾ, ಬ್ರಿಟನ್ನುಗಳಿಗೆ ಸಲಹೆರೂಪ ಎಚ್ಚರಿಕೆಯನ್ನಿತ್ತಿದೆ. ಕೊರಿಯಾ ಭವಿಷ್ಯದ ಬಗೆ ಬ್ರಿಟನ್ನಿಗೆ ಭಾರತವು ಪರಿಶೀಲನೆಗೆ ಕೆಲವು ಸಲಹೆಗಳನ್ನು ಕಳುಹಿಸಿದೆ. ಪಂಡಿತ ನೆಹರೂ ಇವುಗಳನ್ನು ಪರಿಶೀಲಿಸುತ್ತಲಿರುವರು.

ಅಸ್ಸಾಂ ಭೂಕಂಪನಿಧಿಗೆ

ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ವ್ಯಾಪಾರ ಕರಾರು

ಭಾರತ ಪಾಕಿಸ್ಥಾನಗಳ ವ್ಯಾಪಾರ ಕರಾರು ೩೦ನೇ ಸೆಪ್ಟಂಬರಿಗೆ ಮುಗಿದುಹೋಯಿತು. ನಾಣ್ಯಬೆಲೆಯ ಪ್ರಶ್ನೆಯು ಇತ್ಯರ್ಥವಾಗುವವರೆಗೆ ಕರಾರು ಪುನಃ ಆಗುವ ಸಂಭವವಿಲ್ಲ.

LATEST

ಬಹಿರಂಗ ಸಭೆ

ಇಂದು ಸಂಜೆ ೬ ಗಂಟೆಗೆ ಗಾಂಧಿಜಯಂತಿ ಪ್ರಯುಕ್ತ ಪುರಭವನದ ಮೈದಾನದಲ್ಲಿ ಬಹಿರಂಗಸಭೆ ನಡೆಯುವುದು ಸಂಸ್ಥಾನ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಭಾಷಣಮಾಡುವರು.

ಜನಪ್ರಿಯ ರಾಮಾಯಣ ಪ್ರಕಟನೋತ್ಸವ

ವಯಸ್ಕರ ಶಿಕ್ಷಣ ಸಮಿತಿಯಭವನದಲ್ಲಿ ಕನ್ನಡ ಕವಿ ಶ್ರೀ ಕೆ. ವಿ ಪುಟ್ಟಪ್ಪನವರು ಬರೆದು, ಧರ್ಮಪ್ರಕಾಶ ಎಲ್. ಎಸ್. ವೆಂಕೋಜಿರಾಯರ ಉದಾರದಾನ ಸಹಾಯದಿಂದ ವಯಸ್ಕರ ಶಿಕ್ಷಣ ಸಮಿತಿಯವರು ಅಚ್ಚು ಹಾಕಿಸಿರುವ 'ಜನಪ್ರಿಯ ರಾಮಾಯಣ" ದ ಪ್ರಕಟನೋತ್ಸವವನ್ನು ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನೆರವೇರಿಸಿದರು. ಪೌರಸಭಾಧ್ಯಕ್ಷರೂ, ಕಮೀಷನರೂ, ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರೂ, ಶ್ರೀ ವೆಂಕೋಜಿರಾಯರು ಅನೇಕ ಪುರಪ್ರಮುಖರೂ, ಈ ಸಮಾರಂಭಕ್ಕೆ ಆಗಮಿಸಿದ್ದರು. ಶ್ರೀಮತಿ ಸೀತಾದೇವಿಯವರಿಂದ ಪ್ರಾರ್ಥನೆ, ವೈ॥ ವಿದ್ವಾನ್ ಶ್ರೀ ಆರ್. ಎನ್. ದೊರೆಸ್ವಾಮಿಯವರಿಂದ ವೀಣೆ, ವಿದ್ವಾನ್ ಅನಂತ ಕೃಷ್ಣಶರ್ಮರವರಿಂದ ವಾಲ್ಮೀಕಿರಾಮಾಯಣ, ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ಶ್ರೀ ರಾಮಾಯಣ ದರ್ಶನಂ, ಇವುಗಳ ವಾಚನ, ಶ್ರೀ ಜವರೇಗೌಡರಿಂದ 'ಜನಪ್ರಿಯ ರಾಮಾಯಣ' ದ ಪರಿಚಯ, ಶ್ರೀ ಕೆ. ವಿ. ಪುಟ್ಟಪ್ಪನವರಿಂದ ರಾಮಾಯಣದ ಮಹಾತ್ಮೆ ವಿಚಾರದಲ್ಲಿ ಭಾಷಣ ಮತ್ತು ಎಲ್ ಎಸ್. ವೆಂಕೋಜಿರಾಯರಿಂದ ಧರ್ಮ ಕಾರ್ಯಗಳ ವಿಚಾರವಾಗಿ ಭಾಷಣಗಳು ನಡೆಯಿತು.

● ಭಾರತ್ ಸೇವಾಸಮಾಜದ ಒಂದು ಶಾಖೆಯನ್ನು ಬೆಂಗಳೂರಿನ ಮೆಜೆಸ್ಟಿಕ್ ಸಿನಿಮಾಮಂದಿರದ ಎದುರಿನಲ್ಲಿರುವ ಡಿ ವಿ ವಿ. ಗುಜರಾತಿ ಶಾಲೆಯಲ್ಲಿ ತೆರೆಯಲಾಗಿದೆ ಇಲ್ಲಿಯ ಹಿಂದೀ ತರಗತಿಗಳ ಉದ್ಘಾಟನಾ ಮಹೋತ್ಸವವನ್ನು ನಿನ್ನೆ ವಿಜೃಂಭಣೆಯಿಂದ ನೆರವೇರಿಸಲಾಯಿತು. ಈದಿನ ಗಾಂಧೀ ಜಯಂತ್ಯುತ್ಸವವನ್ನು ಪ್ರಾರಂಭಿಸಲಾಯಿತು.

★ ಸಿರ್ಲೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಸಮಾಚಾರ

ಅಕ್ಟೋಬರ್ ೨-೧೦-೫೦ ಸೋಮವಾರ

ಗಾಂಧಿ ಜಯಂತಿ

ಭಾರತ ದೇಶಾದ್ಯಂತ ಮತ್ತು ದೇಶವಿದೇಶಗಳಲ್ಲೆಲ್ಲಾ ಮಹಾತ್ಮಾಜೀಯವರ ಜಯಂತ್ಯುತ್ಸವಗಳು ಬಹು ವಿಜೃಂಭಣೆಯಿಂದ ಜರುಗುತ್ತಲಿವೆ. ಅನೇಕ ಕಡೆಗಳಲ್ಲಿ ಸಪ್ತಾಹಗಳು ಪ್ರಾರಂಭವಾಗಿವೆ. ಕೆಲವೆಡೆ ಹರಿಜನ ಸಪ್ತಾಹಗಳು ನಡೆಯುತ್ತಲಿವೆ. ಈ ಸಪ್ತಾಹಗಳಲ್ಲಿ ಸೂತ್ರ ಯಜ್ಞವು (ಕೈಯಿಂದ ದಾರ ನೂಲುವುದು) ಮುಖ್ಯವಾದ ಕಾರ್ಯಕ್ರಮವಾಗಿದೆ. ಕೆಲವು ಸಂಸ್ಥಾನಗಳಲ್ಲಿ ಆಹಾರ ಉತ್ಪಾದನೆಗಾಗಿ ಮಿಶ್ರಗೊಬ್ಬರ ದಿನಾಚರಣೆ ನಡೆಯುತ್ತಲಿದೆ.

ಇಂದು ಬೆಳಿಗ್ಗೆ ೫ ಗಂಟೆಯಿಂದ ಲಕ್ಷಾಂತರ ಜನರು ದೆಹಲಿ ರಾಜಘಾಟನಲ್ಲಿರುವ ಮಹಾತ್ಮರ ಸಮಾಧಿಗೆ ಭೇಟಿಯಿತ್ತು ಪುಷ್ಪಗಳನ್ನರ್ಪಿಸಿ ಪ್ರತಿಯೊಬ್ಬ ಪ್ರಜೆಯೂ ಮಹಾತ್ಮರಿಗೆ ತನ್ನ ಭಕ್ತಿ ಪ್ರಣಾಮವನ್ನರ್ಪಿಸುತ್ತಲಿರುವನು.

ಭಾರತ ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರು ಭಾರತೀಯರಿಗೆಲ್ಲ ಒಂದು ಸಂದೇಶವಿತ್ತು, ಮಹಾತ್ಮರು ನಮ್ಮ ಮುಂದಿಟ್ಟಿರುವ ಆದರ್ಶಗಳಿಗೆ ಆತ್ಮ ಸಮರ್ಪಣೆ ಮಾಡಬೇಕೆಂದು ಕೋರಿದ್ದಾರೆ, ಅಂತೆಯೇ ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ತಾಂಡನ್ನರವರು, ನಾಸಿಕದಲ್ಲಿನ ತಮ್ಮ ಸಂದೇಶವನ್ನು ಪುನಃ ಒತ್ತಿಹೇಳಿ ಖಾದಿ ಬೆಳವಣಿಗೆಗೆ ಎಲ್ಲರೂ ಶ್ರದ್ಧೆಯಿಂದ ದುಡಿಯಬೇಕೆಂದು ಹೇಳಿರುವರು.

ಈ ಉತ್ಸವದ ಅಂಗವಾಗಿ ಬೊಂಬಾಯಿನಲ್ಲಿ ಹರಿಜನ ದಿನಾಚರಣೆಯು ಅಲ್ಲಿನ ಗೌರ್ನರ್ ರಾಜಾ ಮಹಾರಾಜಾ ಸಿಂಗರವರ ನೇತೃತ್ವದಲ್ಲಿ ನಡೆಯಿತು ಅಸ್ಪೃಶ್ಯತೆಯ ನಿವಾರಣೆಗಾಗಿ ಮಹಾತ್ಮರು ದುಡಿದುದನ್ನು ಸ್ಮರಿಸುತ್ತಾ ಅವರು ನಮ್ಮ ಮುಂದಿಟ್ಟಿರುವ ರಚನಾತ್ಮಕ ಕಾರ್ಯಗಳಲ್ಲಿ ನಾವೆಲ್ಲರೂ ತೊಡಗಬೇಕೆಂದು ತಿಳಿಸಿರುವರು.

ರಾಜಕೋಟೆಯಲ್ಲಿ ಕೇಂದ್ರ ಆರೋಗ್ಯ ಸಚಿವೆ ಶ್ರೀಮತಿ ಅಮೃತಕೌರವರು ಕ್ಷಯರೋಗ ನಿವಾರಣಾ ಪ್ರತಿಜ್ಞೆಯನ್ನು ಕೈಗೊಂಡು ಎಲ್ಲರೂ ಅದನ್ನು ಹೋಗಲಾಡಿಸಲು ದುಡಿಯಬೇಕೆಂದು ತಿಳಿಸಿರುವರು.

ಮೈಸೂರು ಸಂಸ್ಥಾನಾದ್ಯಂತ ಗಾಂಧಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಮಹಾತ್ಮಾಜೀಯವರ ಸತ್ಯ, ಅಹಿಂಸೆ, ನಿಸ್ವಾರ್ಥ ತ್ಯಾಗ ಬಲದಿಂದ ಭಾರತವು ಸ್ವಾತಂತ್ರ್ಯಗಳಿಸಿತು. ನಮ್ಮ ದೇಶದಲ್ಲಿನ ಅನೇಕ ಸಮಸ್ಯೆಗಳು ನಿವಾರಣೆಯಾಗಲು ಮಹಾತ್ಮಾಜೀಯವರು ಅನೇಕ ರಚನಾತ್ಮಕ ಕಾರ್ಯಗಳನ್ನು ಸ್ಥಾಪಿಸಿ ಅವಿಶ್ರಾಂತರಾಗಿ ದುಡಿದು ನಮಗೆ ದಾರಿತೋರಿಕೊಟ್ಟಿದ್ದಾರೆ. ಕಾಂಗ್ರೆಸ್ ನಾಯಕರೂ, ಅಧಿಕಾರಿಗಳೂ, ಕಾಂಗ್ರೆಸ್ಸಿಗರೂ ಮತ್ತು ಸಾರ್ವಜನಿಕರೂ, ಎಲ್ಲರೂ ಅವರು ಹಾಕಿಕೊಟ್ಟ ಮಾರ್ಗಾವಲಂಬಿಗಳಾಗಿ ಶ್ರದ್ಧೆಯಿಂದ ಕಾರ್ಯೋನ್ಮುಖರಾಗಬೇಕು ಅವರ ಆದರ್ಶವನ್ನು ಕಾರ್ಯರೂಪದಲ್ಲಿ ಆಚರಿಸಲು ಸತತ ಪ್ರಯತ್ನಿಸಬೇಕು ಭಾರತೀಯರೆಲ್ಲರೂ ಮಹಾತ್ಮಾಜೀಯವರ ಆದರ್ಶಕ್ಕಾಗಿ ಆತ್ಮ ಸಮರ್ಪಣೆ ಮಾಡುವಂತಾಗಲಿ.

—ಜೈಹಿಂದ್

ಮಹಾ ಚುನಾವಣೆ

ವಯಸ್ಕರ ಪದ್ಧತಿಯ ಮೇಲೆ ಭಾರತದಲ್ಲೆಲ್ಲಾ ಮಹಾ ಚುನಾವಣೆಗಳು ಏಪ್ರಿಲ್ ಅಥವಾ ಮೇ ತಿಂಗಳಲ್ಲಿಯೇ ನಡೆಯಬೇಕೆಂದು ಪ್ರಧಾನಿ ಪಂಡಿತನೆಹರೂರವರ ಕಾರ್ಯಕ್ರಮವನ್ನು ಕೈಗೊಳ್ಳುತ್ತಲಿದ್ದಾರೆಂದು ಬೊಂಬಾಯಿ ಮುಖ್ಯಮಂತ್ರಿ ಶ್ರೀ ಬಿ ಜಿ ಖೇರ್‌ರವರು ತಿಳಿಸಿರುವರು.

ಯುದ್ಧ ಪಾತಕಿಗಳಾರು ?

ಕೊರಿಯಾ ಯುದ್ಧದಲ್ಲಿ ಯುದ್ಧ ಪಾತಕಗಳಾರೆಂದು ಪ್ರಧಾನಿ ನೆಹರೂರವರಲ್ಲಿ ಪತ್ರಿಕೋದ್ಯೋಗಿಗಳು ಕೇಳಿದ್ದಕ್ಕೆ ಉಭಯಪಕ್ಷಗಳಲ್ಲಿಯೂ ಇರುವರೆಂದು ತಿಳಿಸಿದರು.

ದಸ್ತಗಿರಿ

ಸಾರ್ವಜನಿಕ ರಕ್ಷಣಾ ಕಾನೂನಿನಪ್ರಕಾರ ಬೆಂಗಳೂರಿನಲ್ಲಿ 'ಕಿಡಿ' ಪತ್ರಿಕೆಯ ಸಂಪಾದಕರಾದ ಶ್ರೀ ಶೇಷಪ್ಪನವರನ್ನು ದಸ್ತಗಿರಿ ಮಾಡಲಾಗಿದೆ ಇವರ ಜೊತೆಯಲ್ಲಿ ೭ ಜನರನ್ನು ದಸ್ತಗಿರಿ ಮಾಡಲಾಗಿದೆ.

ಅಸಿಸ್ಟೆಂಟ್ ಪ್ರೊಫೆಸರ್ ನೇಮಕ

ವಿಶ್ವವಿದ್ಯಾನಿಲಯದ ಲೆಕ್ಚರರುಗಳಾದ ಶ್ರೀ ಕೃಷ್ಣಮೂರ್ತಿ, ಎನ್ ಕಸ್ತೂರಿ, ಎಸ್ ಗೋಪಾಲಸ್ವಾಮಿ, ಸತ್ಯಗಿರಿನಾಥ್ ಮತ್ತು ತಿರುಮಲಾಚಾರ್ ಇವರನ್ನು ಅಸಿಸ್ಟೆಂಟ್ ಪ್ರೊಫೇಸರುಗಳಾಗಿ ನೇಮಿಸಲಾಗಿದೆ.

ಶ್ರೀ ಆರ್. ರಾಮಕೃಷ್ಣ

ಮೈಸೂರು ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಡೈರೆಕ್ಟರವರಾಗಿದ್ದ ಶ್ರೀ ಆರ್ ರಾಮಕೃಷ್ಣರವರನ್ನು ಕೇಂದ್ರಸರ್ಕಾರಕ್ಕೆ ಎರವುಕೊಡಲಾಗಿದೆ. ಅವರು ಹಿಂದೂಸ್ತಾನ ವಿಮಾನಕಾರ್ಖಾನೆ ಜನರಲ್ ಮ್ಯಾನೇಜರಾಗಿ ನೇಮಿತನಾಗಿದ್ದಾರೆ.

ಅಡಿಷನಲ್ ಡೈರೆಕ್ಟರಾಗಿರುವ ಶ್ರೀ ಚಿಕ್ಕನಾರಾಯಣಸ್ವಾಮಿಯವರು ತಮ್ಮ ಕೆಲಸದ ಜೊತೆಗೆ ಈ ಕೆಲಸವನ್ನು ನೋಡಿಕೊಳ್ಳುವರು

ಕಾಶ್ಮೀರ ಪ್ರಶ್ನೆ ಚರ್ಚೆ

ಕಾಶ್ಮೀರ ಪ್ರಶ್ನೆಯು ಈ ತಿಂಗಳು ೫ರಲ್ಲಿ ನಡೆಯುವ ಪಾಕಿಸ್ಥಾನ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಲಿದೆ.

ಆಹಾರ ಕಣಜಗಳ ಲೂಟಿ

ಹೈದರಾಬಾದ್ ರಾಯಚೂರಿನಲ್ಲಿ ೩,೦೦೦ಕ್ಕಿಂತ ಹೆಚ್ಚಾಗಿ ಜನರು ಸೇರಿ ಎರಡು ಸರ್ಕಾರಿ ಆಹಾರಕಣಜಗಳ ಬೀಗವನ್ನೊಡೆದು ಆಹಾರಧಾನ್ಯಗಳನ್ನು ಲೂಟಿ ಮಾಡುತ್ತಿದ್ದುದನ್ನು ತಡೆಯಲು ಪೋಲೀಸಿನವರು ಗುಂಡು ಹಾರಿಸಿದರು. ಒಬ್ಬನು ಸತ್ತು ೧೨ ಜನರಿಗೆ ಗಾಯಗಳಾಗಿವೆಯೆಂದು ವರದಿಯಾಗಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಅಕ್ಟೋಬರ್ ೩ ಮಂಗಳವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಆರ್. ರಾಮಚಂದ್ರರಾವ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಪಿಟೀಲು ೧-೪೫ ಹಿಂದೀ ಶಿಕ್ಷಣ ೨-೦ ಆರ್. ರಾಮಚಂದ್ರರಾವ್ (ಸಂಗೀತ) ೨-೩೦ ಮುಕ್ತಾಯ

ಸಂಜೆ ೫-೩೦ ಎಂ ಪ್ರಭಾಕರ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಮೈಸೂರು ಅರಮನೆ ಆರ್ಕೆಸ್ಟ್ರಾ ೭-೩೦ ನಮ್ಮ ಪುಸ್ತಕ ಭಂಡಾರ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಎಂ. ಎ ಸೂರ್ಯನಾರಾಯಣ (ಕೊಳಲು) ೮-೩೦ ಎಂ. ಪ್ರಭಾಕರ (ಸಂಗೀತ) ೯-೦ ಇಂಗ್ಲೀಷಿನಲ್ಲಿವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನವೈವಿಧ್ಯ (ರ) ೧೦-೦ ಮುಕ್ತಾಯ

ಪೌರಸಭೆಗೆ ನಾಮಕರಣ

ಶ್ರೀಗಳಾದ ಆರ್. ಅರ್ಜುನ, ಮಾದಶೆಟ್ಟಿ ಮತ್ತು ಎಚ್. ಆರ್. ಸೀತಾರಾಮರವರನ್ನು ಹುಣಸೂರು ಪೌರಸಭೆಗೆ ಸರ್ಕಾರದವರು ಸದಸ್ಯರನ್ನಾಗಿ ನಾಮಕರಣ ಮಾಡಿದ್ದಾರೆ.

ರಣಜಿತ್
ತಾ|| ೩೦-೯-೫೦ ರಿಂದ ೨ನೇ ವಾರ
ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ (Khilari)
(ಹಿಂದಿ)
ಬೆಳಗಿನ ಪ್ರದರ್ಶನ
ನೂರ್ಜಹಾನ್ ನಟಿಸಿರುವ
ಜೀನತ್

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್ ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

"ವಾದಿರಾಜ ಭವನಂ"
ಬ್ರಾಹ್ಮಣರ ಫಲಾಹಾರ ಮಂದಿರ
— ರುಚಿರುಚಿಯಾದ ಫಲಾಹಾರಗಳಿಗೆ
— ಸಂತೇಪೇಟೆಯಲ್ಲಿರುವ ವಾದಿರಾಜಭವನಕ್ಕೇ
ಭೇಟಿಕೊಡಿ.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩—೧೦—೧೯೫೦ ನೇ ಮಂಗಳವಾರ [ಸಂಚಿಕೆ ೪೧

ಸರ್ಕಾರಕ್ಕೆ ಬೆಂಬಲನೀಡಿ

ದೆಹಲಿಯಲ್ಲಿ ಪ್ರಧಾನಿ ನೆಹರೂರವರ ಭಾಷಣ

ಬಾಪೂಜಿಯವರ ಜನ್ಮದಿನದ ಅಂಗವಾಗಿ ನಿನ್ನೆ ದೆಹಲಿಯ ಗಾಂಧಿ ಮೈದಾನದಲ್ಲಿ ಅಖಂಡ ಬಹಿರಂಗ ಸಭೆ ಜರುಗಿತು. ಭಾರತ ಪ್ರಧಾನಿ ಪಂಡಿತ ನೆಹರೂ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ, "ನಾಸಿಕ ಕಾಂಗ್ರೆಸ್ ಅಧಿವೇಶನದಲ್ಲಿ ಜಾತೀಯತೆ, ವಿದೇಶಾಂಗ ನೀತಿ ಮತ್ತು ದೇಶದ ಆರ್ಥಿಕ ವ್ಯವಸ್ಥೆಯ ವಿಷಯವಾಗಿ ಮಾಡಿರುವ ನಿರ್ಣಯಗಳನ್ನು ಅಕ್ಷರಶಃ ಕಾರ್ಯಾಚರಣೆಗೆ ತರುವುದಕ್ಕಾಗಿ ದೇಶದಲ್ಲಿರುವ ಎಲ್ಲಾ ಪ್ರಜೆಗಳೂ ತಮ್ಮ ಬೆಂಬಲ ಮತ್ತು ನೆರವನ್ನು ನೀಡಬೇಕು. ಜನರ ಬೆಂಬಲವಿಲ್ಲದೆ ಸರ್ಕಾರ ಈ ಕಠಿಣ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗಲಾರದು. ದೇಶದಲ್ಲಿ ಆಹಾರ ಉತ್ಪಾದನೆ ಹೆಚ್ಚಿ, ದೇಶದ ಸಂಪತ್ತು ಬೆಳೆಯಬೇಕು ಇವೆಲ್ಲವೂ ಪ್ರಜೆಗಳ ದುಡಿಮೆಯಿಂದ ಮಾತ್ರ ಸಾಧ್ಯ. ಮಹಾತ್ಮ ಗಾಂಧೀಜಿಯವರು ಹಾಕಿರುವ ಮಾರ್ಗ, ತತ್ವಗಳನ್ನು ಜನರು ಮರೆಯುತ್ತ ಬರುತ್ತಲಿರುವುದು ನಮಗೆ ನಾಚಿಕೆಯನ್ನುಂಟುಮಾಡಿದೆ. ಮಹಾತ್ಮರು ನಿಧನರಾದ ಮೇಲೆ ಅವರ ಕೀರ್ತಿಯು ದೇಶವಿದೇಶಗಳಲ್ಲೆಲ್ಲಾ ಶೋಭಾಯಮಾನವಾಗಿ ಬೆಳಗುತ್ತಲಿದೆ. ನಾವು ಮಾತ್ರ ಅವರ ತತ್ವಗಳನ್ನು ಮರೆಯುತ್ತಲಿದ್ದೇವೆ. ಪಾಕಿಸ್ಥಾನ ವಿಷಯ ಪ್ರಸ್ತಾಪಿಸುತ್ತಾ ಪಾಕಿಸ್ಥಾನದ ಮೇಲೆ ಯುದ್ಧ ಹೂಡಲೇಬೇಕೆಂಬ ವಾದವು ಕೆಲವೆಡೆ ನಡೆಯುತ್ತಲಿದೆ. ಇದು ಸಂಪೂರ್ಣವಾಗಿ ಉಭಯರಾಷ್ಟ್ರಗಳಿಗೂ ಹಾನಿಕರವಾದ ಮಾರ್ಗ. ನಮ್ಮಲ್ಲಿರುವ ವಿವಾದಗಳಲ್ಲಾ ಆದಷ್ಟು ಜಾಗ್ರತೆಯಾಗಿ ನಿವಾರಿಸಲು ಎರಡು ರಾಷ್ಟ್ರಗಳ ಇಬ್ಬಿಬ್ಬರು ನ್ಯಾಯಾಧೀಶರಿರುವ ಒಂದು ಮಂಡಲಿಯನ್ನು ರಚಿಸಿ ಅವರ ತೀರ್ಪಿನಮೇಲೆ ನಮ್ಮ ಮುಂದಿನ ಕಾರ್ಯವನ್ನು ನಡೆಸಿದರೆ ದೇಶಕ್ಕೆ ಹಿತ. ಈ ಸಲಹೆ ಪಾಕಿಸ್ಥಾನಕ್ಕೆ ತಿಳಿಸಲಾಗಿದೆ. ಅವರಿಂದ ಉತ್ತರವೇನೂ ಬಂದಿಲ್ಲ, ಎಂದು ತಿಳಿಸಿದರು.

ಕೊರಿಯಾ ಯುದ್ಧದ ವಿಷಯವಾಗಿ ಮಾತನಾಡುತ್ತ ಕೊರಿಯಾ ಯುದ್ಧವು ಶೀಘ್ರವಾಗಿ ಮುಗಿದು ಶಾಂತಿ ನೆಲಗೊಳ್ಳಬೇಕು. ಈಗಾಗಲೇ ಕೊರಿಯಾ ಅರ್ಧಭಾಗವು ಹಾಳಾಗಿಹೋಗಿದೆ. ಇನ್ನೂ ಶಾಂತರೀತಿಯಲ್ಲಿ ಕಾರ್ಯಾಚರಣೆ ನಡೆಸದಿದ್ದಲ್ಲಿ ಕೊರಿಯಾ ರಾಜ್ಯವೆಲ್ಲವೂ ಸಂಪೂರ್ಣವಾಗಿ ನಾಶವಾಗುವುದೆಂದು ತಿಳಿಸಿದರು.

ಪಾಕಿಸ್ಥಾನದ ಸೆರೆಮನೆಯಲ್ಲಿ ನರಳುತ್ತಿರುವ ಗಡಿನಾಡು ಗಾಂಧಿ ಖಾನ್ ಅಬ್ದುಲ್ ಘಫಾರ್ ಖಾನರವರ ವಿಷಯ ಪ್ರಸ್ತಾಪಿಸುತ್ತಾ ಮಹಾತ್ಮರ ಮುಖ್ಯ ಸ್ನೇಹಿತರೂ, ಅನುಯಾಯಿಗಳೂ ಆದ ಗಡಿನಾಡಿನ ಗಾಂಧಿಯವರು ಸೆರೆಮನೆಯಲ್ಲಿ ಸಿಲುಕಿ ನರಳುತ್ತಿರುವುದನ್ನು ನೆನಸಿಕೊಂಡಲ್ಲಿ ನಾನು ಭಾರತ ಪ್ರಧಾನಿಯಾಗಿರುವುದು ವ್ಯರ್ಥವೆನ್ನಿಸುತ್ತದೆ. ಹೇಗಾದರೂಮಾಡಿ ಅವರ ಬಂಧವಿಮೋಚನೆ ಮಾಡಲೇಬೇಕೆಂದು ತಿಳಿಸಿದರು.

ಪ್ರವಾಹದ ಪರಿಣಾಮ

ಕಾಶ್ಮೀರದಲ್ಲಿ ಪ್ರವಾಹದ ಪರಿಣಾಮವಾಗಿ ೧೫,೦೦೦ ಮನೆಗಳು ಹಾಳಾಗಿವೆ. ೧೦೦ ಜನರು ಮಡಿದಿದ್ದಾರೆ. ಜಮ್ಮು ಪ್ರಾಂತದಲ್ಲಿ ಸುಮಾರು ೨೫,೦೦೦ ಮನೆಗಳು ಹಾಳಾಗಿವೆ. ಪ್ರಾಣಹಾನಿಯು ಎಷ್ಟೆಂಬುದು ತಿಳಿಯದಿದ್ದಾಗ್ಯೂ, ಅಧಿಕವಾಗಿದೆಯೆಂದು ತಿಳಿಯಬರುತ್ತದೆ.

ಪಟೇಲರ ಹಿತೋಕ್ತಿ

ಉಪಪ್ರಧಾನಿ ಸರ್ದಾರ್ ಪಟೇಲರು ಇಂದೂರಿನಲ್ಲಿ ಕಾರ್ಮಿಕ ಹಿತಸಾಧನಾ ಕೇಂದ್ರದಲ್ಲಿ ಭಾಷಣಮಾಡುತ್ತಾ, ಕಾರ್ಮಿಕರು, ರೈತರು, ಉತ್ತಮ ಮಾರ್ಗಾವಲಂಬಿಗಳಾಗಿ ದೇಶೋದ್ಧಾರಕ್ಕೆ ದುಡಿಯಬೇಕೆಂದು, ಬೊಂಬಾಯಿ ಕಾರ್ಮಿಕ ಮುಷ್ಕರದ ವಿಚಾರವಾಗಿ ಮಾತನಾಡುತ್ತಾ, ಸರ್ಕಾರಕ್ಕೆ ಸಹಾನುಭೂತಿಯಿದ್ದರೂ, ಕಾಯಿದೆ ಕಟ್ಟಳೆಗಳನ್ನು ಪಾಲಿಸಬೇಕಾಗಿರುವುದರಿಂದ ಈ ವಿಷಯದಲ್ಲಿ ಕೈಹಾಕಲಾರದು. ಮುಷ್ಕರ ಮುಂದುವರಿದಷ್ಟೂ ಕೆಲಸಗಾರರಿಗೇ ತೊಂದರೆ. ಆದುದರಿಂದ ಕೂಡಲೇ ನಿಲ್ಲಿಸಬೇಕು. ಮಧ್ಯಭಾರತ ರಾಜಕೀಯ ಪಂಗಡದಲ್ಲಿರುವ ಜನರ ಪ್ರತಿನಿಧಿಗಳ ಅವ್ಯವಸ್ಥೆಯಿಂದ ತಪ್ಪುಹಾದಿ ಹಿಡಿಯುತ್ತಿರುವುದು ದೇಶಕ್ಕೆ ಹಾನಿಕರ. ಅವರು ಕೂಡಲೇ ಸರಿಪಡಿಸಿಕೊಳ್ಳಬೇಕು. ಇಲ್ಲವಾದಲ್ಲಿ ಆಡಳಿತವನ್ನು ಬೇರೆಯವರು ವಹಿಸಿಕೊಳ್ಳಬೇಕಾಗುವುದು ಎಂದು ಎಚ್ಚರಿಸಿದರು.

ಡಾ॥ ರಾಧಕೃಷ್ಣರು ಭಾರತಕ್ಕೆ

ರಷ್ಯಾದಲ್ಲಿ ಭಾರತರಾಯಭಾರಿಯಾಗಿರುವ ಡಾ॥ ರಾಧಾಕೃಷ್ಣರವರು ಮಾಸ್ಕೋಯಿಂದ ಇದೇ ತಿಂಗಳು ೭ರಲ್ಲಿ ಬ್ರಿಟನ್ನಿಗೆ ಹೋಗಿ ಅಲ್ಲಿಂದ ಭಾರತಕ್ಕೆ ಬರುವರೆಂದು ತಿಳಿಯಬರುತ್ತದೆ.

ಬೌದ್ಧ ಮತ

ಕೇಂದ್ರ ಸರ್ಕಾರದ ಲಾ ಮಂತ್ರಿಗಳಾದ ಡಾ ಅಂಬೇಡ್ಕರ್‌ರವರು ತಮ್ಮ ಜೀವಮಾನವನ್ನೆಲ್ಲಾ ಬೌದ್ಧಮತವನ್ನು ದೇಶದಲ್ಲೆಲ್ಲಾ ಹರಡುವುದಕ್ಕಾಗಿ ಕಳೆಯುವುದಾಗಿ ಹೇಳಿರುವರು.

ಸಾವಿರ ವರ್ಷಗಳ ಹಿಂದೆ ಹಿಂದೂಮತವು ಬೌದ್ಧಮತವೇ ಆಗಿತ್ತು. ಮಹಮ್ಮದೀಯರ ಪ್ರಭಾವವು ಹೆಚ್ಚಿದ ಮೇಲೆ ಹಿಂದೂ ಮತವು ಕೆಟ್ಟಿದೆ. ಭಾರತದಲ್ಲಿರುವ ತೊಂದರೆಗಳೆಲ್ಲವೂ ಹೋಗಬೇಕಾದರೆ ಎಲ್ಲರೂ ಬೌದ್ಧಮತವನ್ನವಲಂಬಿಸಬೇಕೆಂದು ತಿಳಿಸಿರುವರು.

೩೮ನೇ ಅಕ್ಷಾಂಶವನ್ನು ದಾಟಿವೆ

ವಿಶ್ವಸಂಸ್ಥೆಯ ಪಡೆಗಳು ೩೮ನೇ ಅಕ್ಷಾಂಶರೇಖೆಯನ್ನು ದಾಟಿ ೭ ಮೈಲಿಗೆ ಮುಂದೆ ನುಗ್ಗಲು ಸೈನ್ಯಾಧಿಕಾರಿ ಲೆ॥ ಕರ್ನಲ್ ವಾಕರ್‌ರವರು ಆಜ್ಞೆಯಿತ್ತಿರುವುದಾಗಿ ತಿಳಿಯಬರುತ್ತದೆ.

● ಅಖಿಲ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಶ್ರೀ ಪಿ. ಡಿ. ರಾಜಾರಾಂರವರು ಮತ್ತು ಮೆಸರ್ಸ್ ಕೆ. ಪಿ. ಮೋಟಾರು ಕಂಪೆನಿಯವರು, ತಲಾ ೧೦೦ ರೂ. ಗಳನ್ನು ದಾನಮಾಡಿದ್ದಾರೆ.

ಡಾ॥ ಆನಿಬೆಸೆಂಟರ ಜನ್ಮೋತ್ಸವ

ಡಾ॥ ಆನಿಬೆಸೆಂಟರ ಜನ್ಮೋತ್ಸವವು ದೇಶದ ಅನೇಕಭಾಗಗಳಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಕೇಂದ್ರ ಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ಮಾತನಾಡುತ್ತಾ ಡಾ॥ ಆನಿಬೆಸೆಂಟ್, ಮಹಾತ್ಮಗಾಂಧಿ, ರಾಮಕೃಷ್ಣಪರಮಹಂಸ, ಇವರೆಲ್ಲರೂ ಒಂದೇಗುಂಪಿಗೆ ಸೇರಿದವರು ಜಾತ್ಯಾತೀತವಾಗಿ, ದೇವರೊಬ್ಬನೇ ಎಂದು ತಿಳಿದುಕೊಂಡು ದೇಶದ, ಜನರ, ಹಿತಕ್ಕಾಗಿ ದುಡಿದು ತಮ್ಮ ಆತ್ಮಸಂರಕ್ಷಣೆ ಮಾಡಿದವರು ಎಂದು ತಿಳಿಸಿದರು.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ವಿಶ್ವಸಂಸ್ಥೆಯ ಸಹಾಯ

ಅಸ್ಸಾಮಿನಲ್ಲಿ ವಿದ್ಯಾ, ವೈಜ್ಞಾನಿಕ, ಸಂಸ್ಕೃತಿ ಮುಂತಾದುವರ ನಷ್ಟವನ್ನು ವಿಮರ್ಶಿಸಿ ಪುನರುದ್ಧಾರ ಕಾರ್ಯಗಳಲ್ಲಿ ತೊಡಗಲು ಪ್ರಪಂಚಸಂಸ್ಥೆಯ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಶಾಖೆಯು ೨೦,೦೦೦ ಡಾಲರುಗಳನ್ನು ಕೊಡುವುದಾಗಿ ತಿಳಿಯಬರುತ್ತದೆ.

ಮೈಸೂರು ಜನತೆಗೆ ಸಂದೇಶ

ಮೈಸೂರು ಸಂಸ್ಥಾನ ಪ್ರಜೆಗಳಿಗೆ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ರಾತ್ರಿ ಮಹಾತ್ಮಗಾಂಧಿ ಜಯಂತಿಯ ಅಂಗವಾಗಿ ಮೈಸೂರು ಎ. ಐ. ಆರ್. ಕೇಂದ್ರದಿಂದ ಒಂದು ಸಂದೇಶವನ್ನಿತ್ತರು. ಸಂದೇಶದಲ್ಲಿ ಮಹಾತ್ಮ ಗಾಂಧಿಯವರ ತತ್ವಗಳನ್ನು ಅನುಷ್ಠಾನಕ್ಕೆ ತರುವುದರಿಂತ ಭಾರತಕ್ಕೇ ಅಲ್ಲ ಇಡೀ ಪ್ರಪಂಚಕ್ಕೇ ಪ್ರಯೋಜನವಾಗುತ್ತದೆ. ಮಹಾತ್ಮರು ತಮ್ಮ ಜಡಶರೀರವನ್ನು ತ್ಯಜಿಸಿದ್ದರೂ ಅವರು ಸಜೀವಿಗಳು. ಅವರಿಗೆ ಮೈಸೂರು ದೇಶ ಮೈಸೂರು ಪ್ರಜೆಗಳೆಂದರೆ ಬಹಳ ಪ್ರೀತಿಯಿತ್ತು. ನಾವುಗಳು ಪ್ರತಿಯೊಂದು ಕಾರ್ಯದಲ್ಲಿಯೂ ಅವರ ಸಲಹೆಯನ್ನು ಪಡೆಯದೆ ಮುಂದಕ್ಕೆ ಹೋಗುತ್ತಲಿರಲಿಲ್ಲ ಅವರು ನಮಗಿತ್ತಿರುವ ತತ್ವಗಳನ್ನು ನಾವು ಅನುಷ್ಠಾನಕ್ಕೆ ತಂದು ಸೇವಾ ತತ್ಪರರಾಗೋಣವೆಂದು ತಿಳಿಸಿರುವರು.

ಅಂಚೆ ಕಛೇರಿಗಳು

ದೇಶಾದ್ಯಂತ ೪,೫೦೦ ಅಂಚೆ ಕಛೇರಿಗಳನ್ನು ತೆರೆಯಲಿರುವರು.

ಬಹಿರಂಗ ಸಭೆ

ಗಾಂಧಿ ಜಯಂತ್ಯುತ್ಸವದ ಅಂಗವಾಗಿ ನಿನ್ನೆ ಸಂಜೆ ಮೈಸೂರು ಪುರಭವನದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆಯಿತು.

ಶ್ರೀಗಳಾದ ಅಗರಂ ರಂಗಯ್ಯ, ಮಳವಳ್ಳಿ ವೀರಪ್ಪನವರು ಮಹಾತ್ಮರ ತ್ಯಾಗ ಮತ್ತು ದೇಶಕ್ಕೆ ಅವರು ಸ್ವಾತಂತ್ರ್ಯವನ್ನು ಗಳಿಸಿಕೊಟ್ಟುದುದನ್ನು ವಿವರಿಸಿ ಅವರ ರಚನಾತ್ಮಕ ಸಲಹೆಗಳನ್ನು ಕಾರ್ಯರೂಪಕ್ಕೆ ತಂದು ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಎಲ್ಲರೂ ಸತತ ದುಡಿಯಬೇಕೆಂದು ತಿಳಿಸಿದರು.

ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ಮಹಾತ್ಮ ಗಾಂಧಿಯವರು ಅಸಮಾನರಾದ ದೈವಭಕ್ತರು,ಅವರಲ್ಲಿನ ಮುಖ್ಯ ವೈಶಿಷ್ಟ್ಯ ದೈವಭಕ್ತಿ, ಬೆಳಿಗ್ಗೆ ಸಂಜೆ ಅವರು ಪ್ರಾರ್ಥನೆ [illegible] ಶಾಂತಿಯಿರುತ್ತಿರಲಿಲ್ಲ. ರಾಷ್ಟ್ರ ಉದ್ಧಾರವಾಗಬೇಕಾದರೆ ಪ್ರಗತಿಗೆ ಬರಬೇಕಾದರೆ ಪ್ರತಿಯೊಬ್ಬ ಪ್ರಜೆಯೂ, ಯಾವ ಮತಾವಲಂಬಿಯಾದರೂ ತನ್ನ ನಿತ್ಯಕರ್ಮಗಳನ್ನು ಮಾಡುತ್ತಾ ತಮ್ಮ ಜೀವನದಲ್ಲಿ ಮತಧರ್ಮಗಳಲ್ಲಿಯ ತತ್ವಗಳನ್ನು ಆಚರಣೆಗೆ ತಂದರೆ ರಾಷ್ಟ್ರ ಜೀವನ ಉತ್ತಮವಾಗುತ್ತದೆ.

ದೈವ ಭಕ್ತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಮಹಾತ್ಮರು ಜೀವನದ ಎಲ್ಲಾ ಅಂಶಗಳಲ್ಲಿಯೂ ಪ್ರವೇಶಿಸುತ್ತಲಿದ್ದರು. ಮಹಾತ್ಮರ ಮೇಲ್ಪಂಕ್ತಿಯಂತೆ ನಾವು ಯಾವಾಗಲೂ ದುಡಿಯುತ್ತಲಿರಬೇಕು. ರಾಷ್ಟ್ರದ ಜನತೆ ಎಡೆಬಿಡದೆ ಕೆಲಸಮಾಡುತ್ತ ಬಂದರೆ ರಾಷ್ಟ್ರದ ಸಂಪತ್ತು ಹೆಚ್ಚುವುದು. ರೈತರು, ವ್ಯಾಪಾರಸ್ಥರು, ಎಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ದುಡಿಯಬೇಕು ಮಹಾತ್ಮ ಗಾಂಧಿಯವರ ತತ್ವಗಳನ್ನು ಆಚರಣೆಗೆ ತಂದು ರಾಷ್ಟ್ರವನ್ನು ಪುನರುದ್ಧಾರ ಮಾಡುವ ಅಂಶವನ್ನು ಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಮಹಾತ್ಮರಿಗೆ ಅತ್ಯಂತ ಪ್ರಿಯವಾದ ಚರಕಾ, ಖಾದಿಯು ಇತ್ತೀಚೆಗೆ ಜನರಿಗೆ ಮರೆತುಹೋಗುತ್ತಲಿದೆ. ನಾಸಿಕ ಕಾಂಗ್ರೆಸ್ಸಿನಲ್ಲಿ ತಿಳಿಸಿರುವಂತೆ ನಾವುಗಳು ಹಿಂದೆ ಚರಕ ಮತ್ತು ಖಾದಿ ವಿಷಯದಲ್ಲಿ ಎಷ್ಟು ಉತ್ಸಾಹಿಗಳಾಗಿ ಕೆಲಸಮಾಡುತ್ತಲಿದ್ದೆವೋ ಅದಕ್ಕಿಂತಲೂ ಮಿಗಿಲಾಗಿ ಈಗ ಕೆಲಸಮಾಡಿ ಖಾದಿ ಪ್ರಚಾರವನ್ನು ಹೆಚ್ಚಿಸಬೇಕು. ಇದರಿಂದ ಜನರಲ್ಲಿರುವ ಸೋಮಾರಿತನವೂ ಹೋಗುವುದಲ್ಲದೆ ಜನರ ಆರ್ಥಿಕ ಸ್ಥಿತಿಯೂ ಉತ್ತಮಗೊಳ್ಳುವುದು ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು.

ರಜಾ ಹೆಚ್ಚಿತು

ಮೈಸೂರು ಸರ್ಕಾರ ಇನ್ಷೂರೆನ್ಸ್ ಸೆಕ್ರಿಟೆರಿಯವರಾಗಿದ್ದ ಶ್ರೀ ಎಫ್. ತಂಬೂಚೆಟ್ಟಿಯವರಿಗೆ ಅರ್ಧತಲುಬಿನಮೇರ ಮತ್ತೊಂದು ತಿಂಗಳು ರಜವನ್ನು ಕೊಡಲಾಗಿದೆ.

ಬ್ಲಾಕ್ ಮಾರ್ಕೆಟರುಗಳು ಡಿಟೆನ್ಷನ್ನಲ್ಲಿ

ಬಿಹಾರಿನ ಬ್ಲಾಕ್ ಮಾರ್ಕೆಟರುಗಳ ಪಟ್ಟಿಯೊಂದನ್ನು ಸರ್ಕಾರದವರು ಸಿದ್ಧಗೊಳಿಸುತ್ತಲಿದ್ದಾರೆ. ಇಂದಿನ ಆಹಾರದುಸ್ಥಿತಿಯ ದೆಸೆಯಿಂದ ಅವರನ್ನೆಲ್ಲಾ ಪ್ರಿವೆಂಟಿವ್ ಡಿಟೇನ್ಷನ್ನಲ್ಲಿಡಲಾಗುವುದು.

ರಾಜೀನಾಮೆ

ಮಧ್ಯಭಾರತ ಮುಖ್ಯಮಂತ್ರಿ ಶ್ರೀ ಗೋಪಾಲಕೃಷ್ಣ ವಿಜಯ ವರ್ಗೀಯರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯಿತ್ತಿದ್ದಾರೆ. ಇವರ ರಾಜೀನಾಮೆಯು ಅಂಗೀಕರಿಸಲಾಗಿದೆ.

ರಜತಕರಂಡಗಳ ಹರಾಜು

ಪಂಡಿತ ನೆಹರೂರವರಿಗೆ ಅರ್ಪಿಸಿದ್ದ ಮೂರು ರಜತ ಕರಂಡಗಳನ್ನು ಅಸ್ಸಾಂಪರಿಹಾರನಿಧಿಗಾಗಿ, ದೇಹಲಿಯ ಒಂದು ಚಲನಚಿತ್ರಮಂದಿರದಲ್ಲಿ ಹರಾಜು ಮಾಡಲಾಗಿ ೧೪,೦೦೦ ರೂಪಾಯಿಗಳು ಬಂದುವು.

ಡಾಕ್ಟರುಗಳಿಗೆ ಎಚ್ಚರಿಕೆ

ಯಾವ ಡಿಗ್ರಿಯನ್ನೂ ಪಡೆಯದೆ ಅಥವಾ ತಾವು ಪಡೆದಿರುವ ಡಿಗ್ರಿಗಳ ಜೊತೆಗೆ ಬೇರೆಬೇರೆ ಡಿಗ್ರಿಗಳನ್ನು ಹಾಕಿಕೊಳ್ಳುವಂತಹ ವೈದ್ಯರ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ಬೊಂಬಾಯಿ ಸರ್ಕಾರವು ವೈದ್ಯರಿಗೆ ಎಚ್ಚರಿಕೆಯನ್ನಿತ್ತಿದೆ.

● ರಾಜಧಾನಿಯ ಕೃಷ್ಣವಿಲಾಸ ಅಗ್ರಹಾರದಲ್ಲಿರುವ "ಮಾದರಿಶಾಲಾ" ನಿಧಿಗಾಗಿ ಇದೇ ತಿಂಗಳು ೮ನೇ ತಾ॥ ಭಾನುವಾರ ಬೆಳಗ್ಗೆ ೧೦-೩೦ ಗಂಟೆಗೆ ಮೈಸೂರು ಒಲಂಪಿಯಾ ಟಾಕೀಸಿನಲ್ಲಿ ನ್ಯೂಥಿಯೇಟರ್ಸ್‌ರವರ ಅಶೀತ್‌ಬರನ್ ಮತ್ತು ಭಾರವೆ ನಟಿಸಿರುವ "ವಸಿಯತ್ ನಾಮಾ" ಎಂಬ ಚಿತ್ರ ಪ್ರದರ್ಶನವನ್ನು ಏರ್ಪಡಿಸಿರುತ್ತೆಯಾಗಿ ವಿದ್ಯಾಭಿಮಾನಿಗಳೂ, ಸಾರ್ವಜನಿಕರೂ ನೆರವು ನೀಡಬೇಕೆಂದು ಶಾಲಾ ವ್ಯವಸ್ಥಾಪಕರು ಮನವಿಮಾಡಿದ್ದಾರೆ.

● ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಂಘದಾಶ್ರಯದಲ್ಲಿ ನಿನ್ನೆ ಗಾಂಧಿಜಯಂತಿ ಅಂಗವಾಗಿ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಬಿ. ಬಾಲಯ್ಯನವರು ಧ್ವಜಾರೋಹಣ ಸಮಾರಂಭವನ್ನು ನೆರವೇರಿಸಿದರು.

○ ಮಹಾತ್ಮಾಜಿಯವರ ಜನ್ಮದಿನದ ಅಂಗವಾಗಿ ಮೊನ್ನೆ ೪ ಗಂಟೆಯಿಂದ ೨॥ ಗಂಟೆಗಳಕಾಲ ಅಖಂಡ ಸೂತ್ರಯಜ್ಞವು ಮೈಸೂರು ಪುರಭವನದಲ್ಲಿ ನಡೆಯಿತು. ಆದಾದನಂತರ ನಿನ್ನೆ ಸಂಜೆ ನೂಲಿನ ಸ್ಪರ್ಧೆಯು ನಡೆಯಲು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಬಹುಮಾನ ವಿನಿಯೋಗ ಮಾಡಿದರು. ಖದ್ದರ್ ಪರಸ್ಪರಸಹಾಯ ಸಂಘದವರು ಕೊಟ್ಟಿದ್ದ ಮೊದಲನೇ ಬಹುಮಾನವು ಶ್ರೀಮತಿ ಸಾವಿತ್ರಿ, ನಗರ ಕಾಂಗ್ರೆಸ್ ಸಮಿತಿಯು ಕೊಟ್ಟ ಎರಡನೇ ಬಹುಮಾನವು ಶ್ರೀ ಸುಬ್ಬಣ್ಣ ಮತ್ತು ಎ. ಶ್ರೀನಿವಾಸಮೂರ್ತಿಯವರು ಕೊಟ್ಟ ಮೂರನೇ ಬಹುಮಾನವು ಶ್ರೀಮತಿ ಸರೋಜಬಾಯಿಯವರಿಗೆ ದೊರೆಯಿತು

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಅಕ್ಟೋಬರ್ ೪ ಬುಧವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಟಿ. ಆರ್. ವೆಂಕಟೇಶನ್ (ದೇವರನಾಮ) ೭-೩೫ ಚಿತ್ರಸಂಗೀತ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ದಿಲ್‌ರುಬ ೧-೫೦ ಹಿಂದೀ ಶಿಕ್ಷಣ ೨-೦ ವನಿತಾವಿಹಾರ ೨-೩೦ ಮುಕ್ತಾಯ

ಸಂಜೆ ೫-೩೦ ಎಸ್ ಭೀಮರಾವ್ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಕಾರ್ಯಕ್ರಮ ೭-೧೫ ಎಸ್. ಭೀಮರಾವ್ (ಪಿಟೀಲು) ೭-೩೦ ಕನ್ನಡದಲ್ಲಿ ಭಾಷಣ ಜನಗಣತಿ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಟಿ ಆರ್. ವೆಂಕಟೇಶನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು (ರ) ೧೦-೦ ಮುಕ್ತಾಯ.

ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ

ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ನಿನ್ನೆ ಸಂಜೆ ಗಾಂಧಿ ಜಯಂತಿಯು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ವಿದ್ಯಾ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಜಗದಾಂಬ ಶಿಶುವಿಹಾರದ ಮಕ್ಕಳಿಂದ ಕೋಲಾಟವು ಜರುಗಿತು.

ರಣಜಿತ್
ತಾ॥ ೩೦-೯-೫೦ ರಿಂದ ೨ನೇ ವಾರ
ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ (Khilari)
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

"ವಾದಿರಾಜ ಭವನಂ"
ಬ್ರಾಹ್ಮಣರ ಫಲಾಹಾರ ಮಂದಿರ
— ರುಚಿರುಚಿಯಾದ ಫಲಾಹಾರಗಳಿಗೆ
— ಸಂತೇಪೇಟೆಯಲ್ಲಿರುವ ವಾದಿರಾಜಭವನಕ್ಕೇ
ಭೇಟಿಕೊಡಿ.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೧೦—೧೯೪೭ ನೇ ಬುಧವಾರ [ಸಂಚಿಕೆ ೪೨

ಸರ್ದಾರ್ ಪಟೇಲರ ಸ್ಪಷ್ಟೋಕ್ತಿ

ಕಾಂಗ್ರೆಸ್ ಬಲಿಷ್ಟವಾದ ಸಂಸ್ಥೆ. ಅದು ಯಾವಾಗಲೂ ಅಳಿದುಹೋಗಲಾರದು. ಅದರಲ್ಲಿರುವ ನೈಜಿಕಶಕ್ತಿಯು ಅದನ್ನು ಕಾಪಾಡುತ್ತಲಿದೆ. ಮುಖಂಡರಲ್ಲಾಗಲೀ ಒಳಪಂಗಡಗಳಲ್ಲಾಗಲೀ ಯಾವ ಭಿನ್ನತೆಯೂ ಇಲ್ಲ. ರಾಷ್ಟ್ರೀಕರಣಕ್ಕೆ ಸರ್ಕಾರವು ಬೆಂಬಲವಿತ್ತರೂ, ಅತಿ ಮುಖ್ಯವಾದ ಕೈಗಾರಿಕೆಗಳ ರಾಷ್ಟ್ರೀಕರಣ ಮಾತ್ರ ಮಾಡಲಾಗುವುದೇ ವಿನಹಾ ಇನ್ಯಾವಬಾಬಿಗೂ ಸರ್ಕಾರ ಈಗ ಪ್ರವೇಶಿಸುವುದಿಲ್ಲ. ಹತೋಟಿಗಳ ದೆಸೆಯಿಂದ ದುರಾಚಾರ ಅಲ್ಲಲ್ಲಿ ಕಾಣಬರುತ್ತಲಿದ್ದರೂ ಜನರ ಹಿತದೃಷ್ಟಿಯಿಂದ ನಾವು ಈಗ ಹತೋಟಿಗಳನ್ನು ತೆಗೆಯಲಾಗುವುದಿಲ್ಲ. ವಿದ್ಯಾಭ್ಯಾಸದ ಪ್ರಕೃತಕ್ರಮವು ಸಂಪೂರ್ಣವಾಗಿ ಬದಲಾವಣೆಯಾಗಿ ವಿದ್ಯಾವಂತರೆಲ್ಲರೂ ಎಲ್ಲಾ ಕ್ಷೇತ್ರಗಳಲ್ಲಿಯೂ ದೇಶಕ್ಕಾಗಿ ದುಡಿಯುವಂತಾಗಿ ಸ್ವಪ್ರಯೋಜನ ಅಥವಾ ಸರ್ಕಾರಿ ಕೆಲಸದ ಸಂಬಳಕ್ಕಾಗಿ ಉಪಯೋಗಿಸುವುದು ತಪ್ಪಬೇಕು. ಮಹಾತ್ಮರ ಹಿತವಚನಗಳನ್ನು ನಾವು ಅನುಷ್ಠಾನಕ್ಕೆ ತಂದಿದ್ದರೆ ದೇಶದ ಇಂದಿನ ಸ್ವರೂಪವೇ ಬೇರೆಯಾಗಿರುತ್ತಿತ್ತು. ಈಗಲಾದರೂ ಜನರು ಎಚ್ಚೆತ್ತು ಅವರ ಬೋಧನೆಗಳನ್ನು ಅನುಷ್ಠಾನಕ್ಕೆ ತರಬೇಕೆಂದು ಭಾರತ ಉಪಪ್ರಧಾನಿ ಸರದಾರ್ ಪಟೇಲರು ಇಂದೂರಿನಲ್ಲಿ ಮಾತನಾಡುತ್ತಾ ನುಡಿದರು.

ಪ್ರಭುಗಳ ಭೇಟಿ

ಮೈಸೂರು ಅ. ೭.

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಪ್ರಭುಗಳನ್ನು ನಿನ್ನೆ ಭೇಟಿ ಮಾಡಿದರು.

ರಾಜೀನಾಮೆ

ಬೆಂಗಳೂರು ಡೇಲೀ ಹೆರಾಲ್ಡ್ ಪತ್ರಿಕೆಯ ಜನರಲ್ ಮ್ಯಾನೇಜರೂ, ಪ್ರಜಾವಾಣಿಯ ಸಂಪಾದಕರೂ ಆದ ಶ್ರೀ ಸಿ. ಜಿ. ಕೆ. ರೆಡ್ಡಿಯವರು ತಮ್ಮ ಹುದ್ದೆಗಳಿಗೆ ನಿನ್ನೆಯಿಂದ ರಾಜೀನಾಮೆಯಿತ್ತಿದ್ದಾರೆ. ಇವರು ಸಂಸ್ಥಾನದ ಸೋಷಿಯಲಿಸ್ಟ್ ಪಾರ್ಟಿಯ ಅಧ್ಯಕ್ಷರು.

ಸತ್ಯಾಗ್ರಹವೇ?

ವಿಮಾನ ಕಾರ್ಖಾನೆ ಕೆಲಸಗಾರರ ಪತ್ನಿಯರು ಮೈಸೂರು ಗೃಹ ಸಚಿವರಮುಂದೆ ಸತ್ಯಾಗ್ರಹ ಹೂಡಲು ಸಿದ್ಧರಿರುವರೆಂದು ಅವರು ಕಾರ್ಯದರ್ಶಿ ಶ್ರೀ ಎಂ. ಬಿ. ಸಿಂಗರಿಗೆ ಈ ವಿಚಾರ ತಿಳಿಸಿ ಅವರ ಅನುಮತಿ ಕಾಯುತ್ತಲಿರುವರೆಂದು ಹೇಳಲಾಗಿದೆ.

ದೇಶದ ವಿಭಜನೆ ಹೆಡ್ಡತನ

ಲಾರ್ಡ್ ಮೌಂಟ್ ಬೇಟನ್ನರಬಳಿಗೆ ಬಿದ್ದ ನಮ್ಮ ನಾಯಕರು ದೇಶದ ವಿಭಜನೆಗೆ ಒಪ್ಪಿದುದು ಹೆಡ್ಡತನ. ಚರಿತ್ರೆಯನ್ನು ಬದಲಾಯಿಸುವುದು ಸಾಧ್ಯವಿಲ್ಲದಿದ್ದರೂ ಭಾರತ-ಪಾಕಿಸ್ಥಾನಗಳು ಮೈತ್ರಿಯಿಂದಿರಲು ಸಾಧ್ಯವಿದೆ. ದೇಶದಲ್ಲಿ ಮುಸ್ಲಿಮರ ಹಿತರಕ್ಷಣೆಗೆ ನಾವು ಗಮನ ಕೊಡಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರು ಗಾಂಧಿ ಜಯಂತಿ ಸಂದರ್ಭದಲ್ಲಿ ತಿಳಿಸಿರುವರು.

ನೂತನ ಮುಖ್ಯ ಮಂತ್ರಿ

ಮಧ್ಯ ಭಾರತದಲ್ಲಿ ಕಾಂಗ್ರೆಸ್ ಪಕ್ಷದವರು ಶ್ರೀ ತಾಕ್‌ಬತ್‌ಮಲ್ ಜೈನ್‌ರನ್ನು ತಮ್ಮ ನಾಯಕರನ್ನಾಗಿ ಚುನಾಯಿಸಿದ್ದಾರೆ. ಇವರು ಮುಖ್ಯ ಮಂತ್ರಿಗಳಾಗಿ ನೂತನ ಮಂತ್ರಿ ಮಂಡಲವನ್ನು ಮಧ್ಯಭಾರತದಲ್ಲಿ ರಚಿಸುವರು.

ಹಿಂದೂಗಳಲ್ಲದವರಿಗೂ ಅವಕಾಶ ಕೊಡಲಾಗಿದೆ

ಹಿಂದೂ ರಾಷ್ಟ್ರ" ವ್ಯವಸ್ಥೆಯನ್ನು ಅಂಗೀಕರಿಸುವ ಇತರ ಅಲ್ಪಸಂಖ್ಯಾತರಿಗೂ ಕೂಡ ಹಿಂದೂ ಮಹಾಸಭೆಗೆ ಸೇರಲು ಅವಕಾಶ ಕಲ್ಪಿಸಿಕೊಡಲು ಅಖಿಲ ಭಾರತ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿ ನಿರ್ಣಯಿಸಿದೆ.

ಬೆಂಗಳೂರಿನಲ್ಲಿ ೧೪೪ನೇ ಸೆಕ್ಷನ್ ಜಾರಿ

ಬೆಂಗಳೂರಿನ ಜಿಲ್ಲಾ ಮ್ಯಾಜಿಸ್ಟ್ರೇಟರು ನಿನ್ನೆದಿನ ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ನೇ ಸೆಕ್ಷನನ್ನು ಕಾರ್ಪೊರೇಷನ್ ಪ್ರದೇಶದಲ್ಲಿ ಜಾರಿಮಾಡಿರುತ್ತಾರೆ. ಇಲ್ಲಿ ಮೆರವಣಿಗೆಯನ್ನೂ, ೫ ಮತ್ತು ಹೆಚ್ಚಿಗೆ ಜನರು ಸೇರುವುದನ್ನೂ ನಿಷೇಧಿಸಿದ್ದಾರೆ. ಈ ಆಜ್ಞೆಯು ಇಂದಿನಿಂದ ೧೫ ದಿನಗಳು ಜಾರಿಯಲ್ಲಿರುವುದು.

ವಿಮಾನ ಕಾರ್ಖಾನೆಯ ಕೆಲಸಗಾರರು ಮೆರವಣಿಗೆ ಹೊರಡುವ ಉದ್ದೇಶ್ಯದಿಂದ ನಿನ್ನೆ ಬನ್ನಪ್ಪ ಪಾರ್ಕಿನಲ್ಲಿ ಸೇರಿದ್ದರು. ೧೪೪ನೇ ಸೆಕ್ಷನ್ ಜಾರಿಯಲ್ಲಿರುವುದನ್ನು ಪೋಲೀಸ್ ಅಧಿಕಾರಿಗಳು ತಿಳಿಸಿದಮೇಲೆ ಕೆಲಸಗಾರರು ಶಾಂತರೀತಿಯಿಂದ ಚದುರಿದರು.

ಶ್ರೀ ಎಂ. ಎ. ಶ್ರೀನಿವಾಸನ್‌ರವರು ರಿಲೇಷನ್ಸ್ ಸಮ್ಮೇಳನಕ್ಕೆ

ಲಕ್ನೋ ನಗರದಲ್ಲಿ ಈ ತಿಂಗಳು ೩ನೇ ತಾರೀಖಿನಿಂದ ೧೫ರೊಳಗೆ ನಡೆಯಲಿರುವ ಪೆಸಿಫಿಕ್ ರಿಲೇಷನ್ಸ್ ಸಮ್ಮೇಳನದಲ್ಲಿ ಭಾಗವಹಿಸುವ ಭಾರತೀಯ ನಿಯೋಗದ ಸದಸ್ಯರಾಗಿ ಬರಬೇಕೆಂದು ಶ್ರೀ. ಎಂ. ಎ. ಶ್ರೀನಿವಾಸನ್‌ರವರಿಗೆ ಆಹ್ವಾನ ಕೊಡಲಾಗಿದೆ.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ಮಹಾಚುನಾವಣೆ

ಭಾರತಾದ್ಯಂತ ಮಹಾ ಚುನಾವಣೆಯನ್ನು ಮುಂದಿನ ವರ್ಷ ಏಪ್ರಿಲ್-ಮೇ ವೇಳೆಗೆ ಜರುಗಿಸಲು ಚುರುಕಾದ ಕಾರ್ಯಗಳು ನಡೆಯುತ್ತಲಿವೆ. ಏಪ್ರಿಲ್ ವೇಳೆಗೆ ಓಟರ ಪಟ್ಟಿಯು ಪ್ರಕಟಿಸಲು ಕಾರ್ಯಕ್ರಮ ಜರುಗುತ್ತಲಿದೆ. ಆದಷ್ಟು ಜಾಗ್ರತೆ ಈ ಕೆಲಸವನ್ನು ಪೂರ್ತಿಗೊಳಿಸಬೇಕೆಂದು ಕೇಂದ್ರವು ಎಲ್ಲಾ ಪ್ರಾಂತೀಯ ಸರ್ಕಾರಗಳಿಗೆ ಸೂಚನೆಯಿತ್ತಿದೆ.

ಜಾತೀಯತೆಯೊಡನೆ ಯುದ್ಧ

ಪ್ರಧಾನಿಪಂಡಿತನೆಹರೂರವರು ನಿನ್ನೆ ಲಕ್ನೋದಲ್ಲಿ ಮಾತನಾಡುತ್ತಾ ಪಾಕಿಸ್ಥಾನದೊಡನೆ ಯುದ್ಧಹೂಡಬೇಕೆಂದು ಹೇಳುವ ವಾದವು ಹೇಡಿತನ. ನಾವು ಈಗ ಜಾತೀಯತೆಯೊಡನೆ ಯುದ್ಧ ಹೂಡಿ ಅದನ್ನು ಸಂಪೂರ್ಣ ಗೆಲ್ಲುವುದೇ ಅಲ್ಲದೆ ನಿರ್ಮೂಲಮಾಡಬೇಕೆಂದು ತಿಳಿಸಿದರು.

ಕರಣೆ ೧೧ಸಾವಿರ ರೂ. ಗಳಿಗೆ ಹರಾಜಾಯಿತು

ಭಾರತ ಸರ್ಕಾರದ ಉಪಪ್ರಧಾನ ಮಂತ್ರಿ ವಲ್ಲಭಾಯಿ ಪಟೇಲರು ನಿನ್ನೆಯ ಬೆಳಿಗ್ಗೆ ಇಂದೂರಿನಲ್ಲಿ ಕಸ್ತೂರಿಬಾ ಗ್ರಾಮದ ಶಂಕುಸ್ಥಾಪನಾ ಸಮಾರಂಭದಲ್ಲಿ ಉಪಯೋಗಿಸಿದ್ದ ಕರಣೆ, ತಟ್ಟೆಯನ್ನು ಹರಾಜು ಹಾಕಿದಾಗ ಅವಕ್ಕೆ ೧೧ ಸಾವಿರ ರೂ ಗಳು ಬಂದವು ಅದನ್ನು ಕಸ್ತೂರಿ ಬಾ ಗಾಂಧಿ ಸ್ಮಾರಕ ನಿಧಿಗೆ ಸೇರಿಸಿದರು.

ಶಾಂತಿಸಾಗರ ರಾಷ್ಟ್ರಗಳ ಸಮ್ಮೇಳನ

ಲಕ್ನೋದಲ್ಲಿ ಶಾಂತಿಸಾಗರ ರಾಷ್ಟ್ರಗಳ ಸಮ್ಮೇಳನವು ನಿನ್ನೆ ಪ್ರಾರಂಭವಾಯಿತು. ಪ್ರಪಂಚದ ನಾನಾ ಭಾಗಗಳಿಂದ ೧೩ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರಧಾನಿ ಪಂಡಿತ ನೆಹರೂರವರು ಸಮ್ಮೇಳನದ ಉದ್ಘಾಟನವನ್ನು ನಡೆಸಿದರು.

● ಮೈಸೂರು ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನ ಯೂನಿಯನ್ನಿನ ಚುನಾವಣೆಯು ನಿನ್ನೆ ನಡೆದು ಪ್ರೊಫೆಸರ್. ಅನಂತ ಕೃಷ್ಣಮಾಚಾರ್‌ರು ಅಧ್ಯಕ್ಷ, ಶ್ರೀ ಹೆಚ್. ಆರ್. ಕೇಶವಮೂರ್ತಿಯವರು ಉಪಾಧ್ಯಕ್ಷ ಮತ್ತು ಶ್ರೀಗಳಾದ ಎಂ. ಎಸ್. ನಾಗರಾಜ್ ಮತ್ತು ಆರ್. ಎ. ಶ್ರೀನಿವಾಸನ್‌ರವರು ಕಾರ್ಯದರ್ಶಿಗಳಾಗಿ ಚುನಾಯಿತರಾದರು.

● ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಇ. ದೇವರಾಜಾಚಾರ್ಯರನ್ನು ಪೋಲೀಸು ಮುಖ್ಯಾಧಿಕಾರಿಗಳ ಎರಡನೇ ಅಸಿಸ್ಟೆಂಟರಾಗಿ ನೇಮಿಸಲಾಗಿದೆ.

ರೇಡಿಯೋ ಭಾಷಣ

ಇಂದು ರಾತ್ರಿ ೭-೩೦ ಗಂಟೆಗೆ ಮೈಸೂರು ಸ್ಥಳೀಯ ಸಂಸ್ಥೆಯ ಸಚಿವರಾದ ಶ್ರೀ ಚೆನ್ನಿಗರಾಮಯ್ಯನವರು 'ಜನಗಣತಿ' ಯ ಭಾಷಣಮಾಲೆಯ ಉದ್ಘಾಟನೆಯನ್ನು ನಡೆಸುವರು.

ಮೈಸೂರು ೫. ೨.

● ಸರ್ಕಾರಿ ಪ್ಲೀಡರು ಶ್ರೀ ಎಸ್. ಚಿನ್ನಸ್ವಾಮಿಶೆಟ್ಟಿ ಮತ್ತು ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಸೂಪರಿನ್‌ಟೆನ್‌ಡೆಂಟ್ ಶ್ರೀ ವಿಜಯಂ ಮತ್ತು ಅಸಿ॥ ಸೂಪರಿನ್‌ಟೆನ್‌ಡೆಂಟ್ ಶ್ರೀ ವೀರಪ್ಪನವರ ಗೌರವಾರ್ಥವಾಗಿ ಮೈಸೂರು ಓರಿಯಂಟಲ್ ಇಂಡಸ್ಟ್ರೀಸಿನ ಮಾಲೀಕ ಶ್ರೀ ಬಿ. ಎಸ್. ಸುಬ್ಬರಾಯರು ಮತ್ತು ಅವರ ಮಿತ್ರರು ಒಂದು ಸತ್ಕಾರ ಕೂಟವನ್ನು ನೆನ್ನೆ ಸಂಜೆ ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಅಧ್ಯಕ್ಷತೆಯನ್ನು ವಹಿಸಬೇಕೆಂದು ವಾಣಿಜ್ಯ ಇಲಾಖಾ ಡೈರೆಕ್ಟರ್ ಶ್ರೀ ಚಿಕ್ಕನಾರಾಯಣಸ್ವಾಮಿಯವರನ್ನು ಆಹ್ವಾನಿಸಲಾಗಿತ್ತು. ಉಪಹಾರ, ಸಂಗೀತ ನಾದನಂತರ ಶ್ರೀ ಚಿಕ್ಕನಾರಾಯಣಸ್ವಾಮಿಯವರು ಈ ಸತ್ಕಾರಕೂಟ ನಡೆಸಿದುದಕ್ಕಾಗಿ ಶ್ರೀ ಬಿ. ಎಸ್. ಸುಬ್ಬರಾಯರು ಮತ್ತು ಅವರ ಮಿತ್ರರನ್ನು ವಂದಿಸುತ್ತಾ, ಈ ರೀತಿಯಾದ ವಿಜೃಂಭಣೆಯ ಸತ್ಕಾರಕೂಟವೆಂದು— ಸಾರ್ವಜನಿಕ ರೀತಿಯಲ್ಲಿ—ಸರ್ಕಾರೀ ಅಧಿಕಾರಿಗಳಿಗೆ ಮಾಡುವುದಾಗಿ, ಅದಕ್ಕೆ ಸರ್ಕಾರೀ ಅಧಿಕಾರಿಗಳಾದ ತಾವು ಅಧ್ಯಕ್ಷಸ್ಥಾನವಹಿಸಬೇಕೆಂದು ಪೂರ್ವಭಾವಿಯಾಗಿ ತಿಳಿಸಿದ್ದಲ್ಲಿ ತಾವು ಅದಕ್ಕೆ ಸಮ್ಮತಿಸುತ್ತಿರಲಿಲ್ಲವೆಂದೂ ಸಾಮಾನ್ಯವಾಗಿ ಸರ್ಕಾರಿ ಅಧಿಕಾರಿಗಳಿಗೆ ಸತ್ಕಾರಕೂಟ ಏರ್ಪಾಡಾಗಬೇಕಾದರೆ ಸರ್ಕಾರದ ಆಜ್ಞೆ ಅವಶ್ಯಕವೆಂದೂ ತಾವು ಈ ಸತ್ಕಾರಕೂಟದ ಅಧ್ಯಕ್ಷತೆ ವಹಿಸಿಲ್ಲವೆಂದೂ, ಮುಂದೆ ಸರ್ಕಾರದ ಆಜ್ಞೆಪಡೆದು ಈ ರೀತಿಯಾದ ಸತ್ಕಾರಕೂಟವನ್ನು ಶ್ರೀ ಸುಬ್ಬರಾಯರು ಏರ್ಪಡಿಸುವರೆಂದು ನಂಬಿದೆಯೆಂದು ತಿಳಿಸಿದರು. ಕಾರ್ಯಕ್ರಮಪ್ರಕಾರ ಶ್ರೀ ಎಂ. ಎಸ್. ಜೋಯಿಸ್ ಮತ್ತು ಶ್ರೀ ಎಂ. ರಾಮಸ್ವಾಮಿಗಳ ಭಾಷಣವಿತ್ತು. ಅವುಗಳಾವುವೂ ಜರುಗದೆ ರಾಷ್ಟ್ರಗೀತೆಯೊಡನೆ ಸತ್ಕಾರಕೂಟವು ಮುಗಿಯಿತು.

● ವಿಶ್ವಸಂಸ್ಥೆಯ ಫೆಲೋಷಿಪ್ ಮತ್ತು ಸ್ಕಾಲರ್‌ಷಿಪ್‌ಗಳಿಗೆ ಸರ್ಕಾರೀ ಅಧಿಕಾರಿಗಳು ಹಾಕಿಕೊಳ್ಳುವ ಅರ್ಜಿಯ ಕಾಲವನ್ನು ಇದೇ ಮಾಹೆ ೧೨ನೇ ತಾರೀಖಿನ ವರೆಗೆ ಹೆಚ್ಚಿಸಲಾಗಿದೆ.

● ಟೀಚರ್ಸ್ ಕಾಲೇಜಿನ ಆಶ್ರಯದಲ್ಲಿ ನಿನ್ನೆ ಮಧ್ಯಾಹ್ನ ವಿದ್ಯಾಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಗಾಂಧೀಜಯಂತಿಯು ನಡೆಯಿತು. ಕಾಲೇಜು ಪ್ರಿನ್ಸಿಪಾಲ್ ಡಾ॥ ಸಿದ್ಧಲಿಂಗಯ್ಯನವರು ಸ್ವಾಗತಭಾಷಣ ಮಾಡಿದನಂತರ, ಶ್ರೀ ಎಂ. ಎಸ್. ಜೋಯಿಸರು ಗಾಂಧಿ ಶಿಕ್ಷಣತತ್ವ, ಕೇಂದ್ರ ಪಾರ್ಲಿಮೆಂಟಿನ ಸದಸ್ಯ ಶ್ರೀ ಎಂ. ಶಂಕರಯ್ಯನವರು 'ಮಹಾತ್ಮ ಗಾಂಧಿಯವರ ವಿಷಯವಾಗಿ ಭಾಷಣ ಮಾಡಿದರು.

● ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಧರ್ಮರತ್ನಾಕರ ಶ್ರೀ. ನಂದೀಬಸಪ್ಪನವರು ೧೦೦ರೂಪಾಯಿಗಳನ್ನು ಗಣೇಶ ಬೀಡಿ ಫ್ಯಾಕ್ಟರಿಯ. ಶ್ರೀ ರಘುರಾಂ ಪ್ರಭುಗಳವರು ೧೦೦ ರೂ. ಗಳನ್ನು ಕೊಟ್ಟಿದ್ದಾರೆ.

● ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಗಾಂಧಿ ಜಯಂತ್ಯುತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀ ಟಿ. ಎಸ್. ಸುಬ್ಬಣ್ಣನವರು ಧ್ವಜಾರೋಹಣ ಮಾಡಿದನಂತರ ಫಸ್ಟ್‌ಗ್ರೇಡ್ ಕಾಲೇಜು ಅಧ್ಯಾಪಕ ಶ್ರೀ ಕೆ. ಕೃಷ್ಣಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಂಘದ ಉಪಾಧ್ಯಕ್ಷ ಜನಾಬ್ ಮಹಮದ್ ಪಾಷಾರವರು ಸ್ವಾಗತ ಭಾಷಣ ಮಾಡಿದ ನಂತರ ಮರಿಮಲ್ಲಪ್ಪ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಎಸ್ ಕೃಷ್ಣಪ್ಪನವರು ಗಾಂಧೀಜಿಯವರ ಜೀವನ ಪರಿಚಯವನ್ನು ಮಾಡಿಕೊಟ್ಟರು. ಶ್ರೀಗಳಾದ ಕೃಷ್ಣೇಗೌಡ ಮತ್ತು ಬಿ. ಎ. ನಾರಾಯಣಸ್ವಾಮಿಯವರು ಭಾಷಣ ಮಾಡಿದರು.

ವಿಶೇಷ ಸಭೆ

ಇದೇ ಮಾಹೆ ೬ನೇ ತಾರೀಖು ಶುಕ್ರವಾರ ಸಂಜೆ ೪ ಗಂಟೆಗೆ ಕೇಂದ್ರಪಾರ್ಲಿಮೆಂಟಿಗೆ ಮತ್ತು ಶಾಸನಸಭೆಯ ಚುನಾವಣಾ ವಿಷಯದಲ್ಲಿ ತಕ್ಕ ಸಲಹೆಗಳನ್ನು ಕೊಡುವ ವಿಷಯವನ್ನು ಚರ್ಚಿಸಲು ಮೈಸೂರು ನಗರ ಪೌರಸಭೆಯ ವಿಶೇಷ ಅಧಿವೇಶನವು ನಡೆಯುವುದು

ರಣಜಿತ್
ತಾ॥ ೩೦-೯-೫೦ ರಿಂದ ೨ನೇ ವಾರ
ದಿನವಹಿ ೩ ಆಟಗಳು
ಅಶೋಕ ಕುಮಾರ್ ಮತ್ತು ಸುರಯ್ಯ
ಒಟ್ಟಿಗೆ ಮೊದಲನೆ ಸಾರಿ ಪಾತ್ರವಹಿಸಿರುವ
ಕಿಲಾಡಿ (Khilari)
(ಹಿಂದಿ)

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಆಕ್ಟೋಬರ್ ೫ ಗುರುವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಟಿ. ಪಾಪಯ್ಯ (ನಾದಸ್ವರ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಜಲತರಂಗ್ ೧-೪೫ ಹಿಂದೀ ಶಿಕ್ಷಣ ೨-೦ ಚಲನಚಿತ್ರ ಸಂಗೀತ ೨-೩೦ ಮುಕ್ತಾಯ

ಸಂಜೆ ೫-೩೦ ಟಿ ಪಾಪಯ್ಯ (ನಾದಸ್ವರ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಪಾಶ್ಚಿಮಾತ್ಯ ಸಂಗೀತ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಚಿತ್ರಸಂಗೀತ (ರಿ) ಲಲಿತಾದತ್ (ಸಂಗೀತ) ೭-೪೫ ಕನ್ನಡದಲ್ಲಿವಾರ್ತೆ ೮-೦ ಕನ್ನಡ ಪದ್ಯವಾಚನ ೮-೧೫ ವೈಜ್ಞಾನಿಕ ಬೆಳವಣಿಗೆ (ಇಂಗ್ಲೀಷಿನಲ್ಲಿ) ೮-೩೦ ಲಲಿತಾದತ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವಿದ್ಯಾರ್ಥಿಮಂಡಲಿ-ಹೈಸ್ಕೂಲು ವಿದ್ಯಾರ್ಥಿಗಳಿಗೆ ೧೦-೦ ಮುಕ್ತಾಯ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ, ಮೈಸೂರು.

"ವಾದಿರಾಜ ಭವನಂ"
ಬ್ರಾಹ್ಮಣರ ಫಲಾಹಾರ ಮಂದಿರ
— ರುಚಿರುಚಿಯಾದ ಫಲಾಹಾರಗಳಿಗೆ
— ಸಂತೇಪೇಟೆಯಲ್ಲಿರುವ ವಾದಿರಾಜಭವನಕ್ಕೇ
ಭೇಟಿಕೊಡಿ.

MYSORE CITY MUNICIPALITY

NOTICE

Sealed tenders will be received up to 4 p.m on 9th Oct. 5o by the Municipal Engineer for (1) Closing the passage near Dattu Rao's Shop towards Sayyajee Rao Road east wing of Devaraja Market and converting the same into a shop (2) Connection of the right wing of the vegetable market in Nazarbad Mohalla into Mutton market (3) Giving underground connection to the newly constructed bus shelter and directing the existing line in the Bus terminus, Mandi Mohalla (4) Providing masonary chamber for leading rain water into main storm water drain running in the junction of Seebaiah Lane and Kothwalaramaiah Street, Devaraja Mohalla

Each tender must be accomanied with a chellan for having remitted in the Municipal Treasury Rs. 5o/-,75/-,3o/-and 75/- respectively asearnest money, in cash.

For full particulars please see the office notice board.

Sd/. V. K. MUKUNDAN,

Municipal Engineer.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೫—೧೦—೧೯೫೦ ನೇ ಗುರುವಾರ [ಸಂಚಿಕೆ ೪೩

ಕಾಶ್ಮೀರ ವಿಭಜನೆ ಮಹಾಹಾನಿಕರ

—ಶೇಕ್ ಅಬ್ದುಲ್ಲಾರವರ ಸಿಂಹನಾದ

ಗಾಂಧಿ ಜಯಂತ್ಯುತ್ಸವದ ಸಂದರ್ಭದಲ್ಲಿ, ಕಾಶ್ಮೀರ ಪ್ರಧಾನಿ ಶೇಕ್ ಮಹಮದ್ ಅಬ್ದುಲ್ಲಾರವರು ಕಾಶ್ಮೀರ ಮತ್ತು ಜಮ್ಮು ಎರಡುಪ್ರಾಂತಗಳೂ ಒಂದೇ ಎಂದೂ ಮತ್ತು ಅದರ ವಿಭಜನೆಯು ದೇಶಕ್ಕೆ ಮಹಾ ಹಾನಿಕರವೆಂದು ನುಡಿದರು.

ಈಗ್ಗೆ ಮೂರುವರ್ಷಗಳಿಂದಲೂ ಕಾಶ್ಮೀರದಲ್ಲಿ ಬಹು ಕಠಿಣ ಪರಿಸ್ಥಿತಿಯೇರ್ಪಟ್ಟಿತೆಂದೂ ಅವನ್ನೆಲ್ಲಾ ಧೈರ್ಯದಿಂದಲೂ ಶಾಂತಿಯಿಂದಲೂ ಎದುರಿಸಲಾಯಿತೆಂದು, ಹೇಳಿದರು. ಇತ್ತೀಚಿಗೆ ಪ್ರಕೃತಿಯೂ ಸಹ ಉಗ್ರವಾಗಿ ದೇಶದಲ್ಲುಂಟಾದ ಪ್ರವಾಹ ಇತ್ಯಾದಿ ಉತ್ಕಟ ಸ್ಥಿತಿಯೂ ಸಹ ಸ್ವತಂತ್ರ ಕಾಶ್ಮೀರದ ಶೌರ್ಯ ಸಾಹಸಗಳನ್ನು ಪರೀಕ್ಷಿಸಿದಂತಾಯಿತೆಂದು ನುಡಿದರು. ಮತೀಯ ವೈಷಮ್ಯವನ್ನು ಸಂಪೂರ್ಣವಾಗಿ ಹೋಗಲಾಡಿಸಬೇಕೆಂದು, ಈ ವಿಷ ಬೀಜದಿಂದ ಭಾರತವೀಗಾಗಲೇ ಅನೇಕ ಕಷ್ಟನಷ್ಟಗಳಿಗೀಡಾಯಿತೆಂದೂ, ಜಗದ್ವಂದ್ಯರಾದ ಮಹಾತ್ಮರು ಈ ವೈಷಮ್ಯಕ್ಕೆ ಆಹುತಿಯಾಗಿ ಪ್ರಾಣನೀಗಿದರೆಂದೂ, ಈಗ ಎಲ್ಲರೂ ಈ ಮತೀಯ ವೈಷಮ್ಯವನ್ನು ಸಂಪೂರ್ಣವಾಗಿ ಹೋಗಲಾಡಿಸಲು ಸತತ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಕಾಂಗ್ರೆಸಿನಲ್ಲಿ ಭಿನ್ನತೆ

ಉತ್ತರಪ್ರದೇಶ ಪ್ರಾಂತ್ಯದಲ್ಲಿರುವ ಕಾಂಗ್ರೆಸ್ ಭಿನ್ನತೆಯನ್ನು ಕುರಿತು ಪ್ರಧಾನಿ ಪಂಡಿತನೆಹರೂರವರು ಮಾತನಾಡುತ್ತಾ ಜನರಲ್ಲಿರುವ ನಂಬಿಕೆಯನ್ನು ತಮ್ಮ ತಮ್ಮಲ್ಲಿಯೇ ಭಿನ್ನತೆಯನ್ನು ತಂದುಕೊಂಡು, ಕಳೆದುಕೊಳ್ಳುವುದು ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲಸ ಮಾಡುವವರಿಗೆ ಹಿತವಲ್ಲ. ದೇಶೋದ್ಧಾರಕ್ಕಾಗಿ ಭಿನ್ನತೆಗಳನ್ನೆಲ್ಲಾ ತೊರೆದು ಕೆಲಸಮಾಡಬೇಕೆಂದು ಹೇಳಿರುವರು.

ವಾಣಿಜ್ಯ ಒಪ್ಪಂದ

ಭಾರತ ಪಾಕಿಸ್ಥಾನಗಳ ವಾಣಿಜ್ಯ ಒಪ್ಪಂದವು ಸೆಪ್ಟಂಬರ್ ೩೦ಕ್ಕೆ ಮುಗಿದುದನ್ನು ಪುನಃ ಮುಂದುವರಿಸಲು ಉಭಯ ದೇಶಗಳೂ ತ್ವರಿತ ವ್ಯವಹಾರನಡೆಸುತ್ತಲಿರುವರೆಂದು ತಿಳಿಯುಬರುತ್ತದೆ.

೩೮ನೇ ಅಕ್ಷಾಂಶವನ್ನು ದಾಟಲೇ ಬೇಕು

೩೮ನೇ ಅಕ್ಷಾಂಶವನ್ನು ದಾಟಿ ವಿಶ್ವಸಂಸ್ಥೆ ಸೈನ್ಯಗಳು ಉತ್ತರ ಕೊರಿಯಕ್ಕೆ ಪ್ರವೇಶಿಸಕೂಡದೆಂದು ಭಾರತವು ತನ್ನ ನಿರ್ಧಾರವನ್ನು ವಿಶ್ವಸಂಸ್ಥೆಯಲ್ಲಿ ತಿಳಿಸಿದೆ ಪ್ರಧಾನಿ ಪಂಡಿತ ನೆಹರೂ ಸಹ ತಮ್ಮ ಭಾಷಣಗಳಲ್ಲಿ ಇದನ್ನು ಉಲ್ಲೇಖಿಸಿರುವರು.

ಪಾಕಿಸ್ಥಾನದ ವಿದೇಶಾಂಗ ಮಂತ್ರಿ ಮಿ. ಜಫರುಲ್ಲಾಖಾನರವರು ೩೮ನೇ ಅಕ್ಷಾಂಶವು ಒಂದು ಗಡಿಯೆಂದು ನಿರ್ಧಾರವಾಗಿಲ್ಲ. ಆದ್ದರಿಂದ ಉತ್ತರಕೊರಿಯಾಕ್ಕೆ ಸೈನ್ಯಗಳು ಪ್ರವೇಶಿಸಲೇಬೇಕೆಂದು ತಿಳಿಸಿರುವರು.

ಮಂತ್ರಿಮಂಡಲ ಸಭೆ

ನಿನ್ನೆ ಬೆಂಗಳೂರು ಅಠಾರಾಕಚೇರಿಯಲ್ಲಿ ಮಂತ್ರಿಮಂಡಲ ಸಭೆ ಸೇರಿ, ವಿಮಾನಕಾರ್ಖಾನೆಯ ಮುಷ್ಕರ ಪರಿಸ್ಥಿತಿಯನ್ನು ಮೂರುವರೆ ಗಂಟೆಗಳ ಕಾಲ ಸಮಾಲೋಚಿಸಿ, ವಿಮರ್ಶಿಸಿದರೆಂದು ತಿಳಿದುಬರುತ್ತದೆ.

ನರಹರಿರಾಯರ ಗುಡ್ಡದಲ್ಲಿ ಸಭೆ

ಬೆಂಗಳೂರು ನಗರದಾಚೆ ಸರಹದ್ದಿನಲ್ಲಿರುವ ನರಹರಿರಾಯರ ಗುಡ್ಡದ ಪ್ರದೇಶದಲ್ಲಿ ವಿಮಾನಕಾರ್ಖಾನೆಯ ೧,೦೦೦ ಮುಷ್ಕರಕಾರರು ಸಭೆ ಸೇರಿ, ಕೆಲಸಕ್ಕೆ ಯಾರೂ ಹೋಗಕೂಡದೆಂದೂ, ಮುಷ್ಕರವನ್ನು ಮುಂದುವರಿಸಬೇಕೆಂದೂ ಮತ್ತು ಬಡನೌಕರರ ಜೀವನಾಧಾರಕ್ಕಾಗಿ ನಗರದಲ್ಲಿ ಅಲ್ಲಲ್ಲಿ ಚಂದಾ ವಸೂಲಿಮಾಡಬೇಕೆಂದೂ ನಿರ್ಣಯವನ್ನು ಮಾಡಿದರೆಂದು ತಿಳಿಯುಬರುತ್ತದೆ.

ಪಂ॥ ನೆಹರೂರವರು ಮೈಸೂರಿಗೆ

ಅಕ್ಟೋಬರ್ ೨೧ರಲ್ಲಿ ಮೈಸೂರಿನಲ್ಲಿ ಶ್ರೀ ರಾಜಾಜಿಯವರಿಂದ ಪ್ರಾರಂಭಿಸಲ್ಪಡುವ ಆಹಾರ ಟೆಕ್ನಾಲಾಜಿಕಲ್ ಇನ್‌ಸ್ಟಿಟ್ಯೂಟಿನ ಸಮಾರಂಭಕ್ಕೆ ಪಂ॥ ನೆಹರೂರವರು ಬರುವ ಸಂಭವವಿದೆಯೆಂದು ತಿಳಿದುಬರುತ್ತದೆ.

ಅಸ್ಸಾಂ ಭೂಕಂಪನಿಧಿಗೆ
ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಅಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

ವಿಮಾನ ಕಾರ್ಖಾನೆ

ಬೆಂಗಳೂರು ವಿಮಾನ ಕಾರ್ಖಾನೆಯ ಪರಿಸ್ಥಿತಿಯು ಉತ್ತಮಗೊಳ್ಳುತ್ತಲಿದೆಯೆಂದು ತಿಳಿದುಬರುತ್ತದೆ. ಕೆಲಸಕ್ಕೆ ಹಾಜರಾಗುತ್ತಲಿರುವ ಕೆಲಸಗಾರರ ಸಂಖ್ಯೆಯು ದಿನೇದಿನೇ ಏರುತ್ತಲಿದೆ. ಈಗ ಸುಮಾರು ೧೫೦೦ ಮಂದಿ ಕೆಲಸಗಾರರು ಕೆಲಸಮಾಡುತ್ತಲಿರುವುದಾಗಿ ಆಡಳಿತ ತಿಳಿಸುತ್ತದೆ

ಸಂಸ್ಥಾನಾಧೀಶರಿಗೂ ರಿಯಾಯಿತಿಯಿಲ್ಲ

ಪಾನ ನಿರೋಧ ಆಜ್ಞೆಯಲ್ಲಿ ಸಂಸ್ಥಾನಾಧೀಶರಿಗೂ ಬೊಂಬಾಯಿ ಸರ್ಕಾರವು ಕೊಡುತ್ತಲಿದ್ದ ರಿಯಾಯಿತಿಯನ್ನು ಸಹ ಈಗ ರದ್ದುಗೊಳಿಸಲಾಗಿದೆ. ಆರೋಗ್ಯ ನಿಮಿತ್ತ ಪಾನೀಯಕ್ಕೆ ರಹದಾರಿ ಬೇಕಾದಲ್ಲಿ ಅವರೂ ಸಹ ಮೆಡಿಕಲ್ ಬೋರ್ಡಿನಮುಂದೆ ಹಾಜರಾಗಿ ರಹದಾರಿ ಪಡೆಯಬೇಕು.

ಕೋಮುವಾರು ಸಂಸ್ಥೆಗಳ ನಿರ್ಮೂಲ

ರಾಷ್ಟ್ರದ ಹಿತರಕ್ಷಣೆ ದೃಷ್ಟಿಯಿಂದ ನಾವು ಕೋಮುವಾರು ಭಾವನೆಯನ್ನೂ, ಕೋಮುವಾರು ಸಂಸ್ಥೆಗಳನ್ನೂ, ಹಿಂದೂ ಮಹಾಸಭೆಯೇ ಆಗಲಿ, ರಾಷ್ಟ್ರೀಯ ಸ್ವಯಂಸೇವಾ ಸಂಘವೇ ಆಗಲಿ, ಮಟ್ಟಹಾಕುವುದು ಅಗತ್ಯ ಇದು ರಾಷ್ಟ್ರಬೆಳವಣಿಗೆಗೆ ಹಾನಿಕಾರಕವೆಂದು ಪ್ರಧಾನಿ ನೆಹರೂರವರು ಲಕ್ನೋನಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಘೋಷಿಸಿರುವರು.

❁ ಯಾವನೇ ಒಬ್ಬ ವ್ಯಕ್ತಿಯನ್ನು ಸರ್ಕಾರ ಬಂಧಿಸಿದಲ್ಲಿ ಬಂಧನವಾದ ೧೦ ದಿನಗಳೊಳಗೇ ಬಂಧನಕ್ಕೆ ಕಾರಣವನ್ನು ಅವನಿಗೆ ತಿಳಿಸದಿದ್ದಲ್ಲಿ ಆ ದಸ್ತಗಿರಿ ನ್ಯಾಯಬಾಹಿರವೆಂದು ಬೊಂಬಾಯಿ ಹೈಕೋರ್ಟು ತೀರ್ಪಿತ್ತಿದೆ.

ಪ್ರಮುಖ ವರ್ತಕರ ಬಂಧನ

ಅಕ್ಕಿ ಮತ್ತು ಭತ್ತದ ದಾಸ್ತಾನನ್ನು ಅಕ್ಕಿ ಮಿಲ್ಲುಗಳಲ್ಲಿಯೇ ತಡೆದಿಟ್ಟಿರಬೇಕೆಂಬ ಆಜ್ಞೆಯನ್ನುಲ್ಲಂಘಿಸಿ ೪ಸಾವಿರ ಮಣ ಅಕ್ಕಿ ಮತ್ತು ಭತ್ತವನ್ನು ಜಯನಗರದಿಂದ ನೇಪಾಲಕ್ಕೆ ಸಾಗಿಸಿದ ಪ್ರಸಿದ್ಧ ವರ್ತಕರೊಬ್ಬರನ್ನು ದರ್ಭಾಂಗ ಸೆರೆಮನೆಯಲ್ಲಿ ಮೂರನೇವರ್ಗದ ಕೈದಿಯಾಗಿಡಲಾಗಿದೆ.

ಪಾಕಿಸ್ಥಾನ–ಆಫ್ಘನ್ ಸೈನ್ಯಗಳ ಘರ್ಷಣೆ

ಆಫ್ಘನರ ಸೈನ್ಯಗಳ ಒಂದು ತಂಡದ ಮೇಲೆ ಪಾಕಿಸ್ಥಾನದ ಸೈನ್ಯ ಮತ್ತು ಗೃಹರಕ್ಷಣಾ ಸಂಸ್ಥೆಯವರು ವಿಮಾನ ಧಾಳಿ ನಡೆಸಿದರೆಂದು ವರದಿಯಾಗಿದೆ. ಆಫ್ಘನರು ಕೈಬರ್ ರೈಲ್ವೆಮಾರ್ಗವನ್ನು ಸ್ವಾಧೀನಪಡಿಸಲೆತ್ನಿಸಿದ ಫಲವಾಗಿ ಈ ಧಾಳಿ ನಡೆಯಿತೆಂದು ತಿಳಿಯುಬರುತ್ತದೆ.

ಪೋಲೀಸ್ ಅಧಿಕಾರಿಗೆ ಶಿಕ್ಷೆ

ಸೋಷಿಯಲಿಸ್ಟ್ ಪಂಗಡದ ಕೆಲವರನ್ನು ಸ್ವೇಚ್ಛೆಯಾಗಿ ಹೊಡೆದರೆಂಬ ಆಪಾದನೆಮೇಲೆ ಕಲ್ಕತ್ತಾದ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಪೋಲೀಸ್ ಠಾಣಾ ಅಧಿಕಾರಿಗಳಾದ ಶ್ರೀ ಅಶ್ವಿನಿಕುಮಾರದತ್ ಎಂಬುವರಿಗೆ ೩೦೦ ರೂಪಾಯಿ ಜುಲ್ಮಾನೆ ತಪ್ಪಿದರೆ ೨ತಿಂಗಳು ಕಠಿಣಸಜಾ ವಿಧಿಸಿದರು.

● ಮುಂದಿನ ತಿಂಗಳು ಮೈಸೂರಿನಲ್ಲಿ ನಡೆಯಲಿರುವ ಅಖಿಲ ಮೈಸೂರು ಪತ್ರಿಕೋದ್ಯಮಿ ಸಮ್ಮೇಳನದ ಅಧಿವೇಶನಕ್ಕೆ ಶ್ರೀ ಕೆ. ಜೀವಣ್ಣರಾಯರು ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆಂದು ತಿಳಿದು ಬಂದಿದೆ.

○ ಅಖಿಲ ಮೈಸೂರು ಪತ್ರಿಕೋದ್ಯಮಿ ಸಮ್ಮೇಳನಕ್ಕೆ ಶ್ರೀ ಕೃಷ್ಣಭವನಂ ಮಾಲೀಕರೂ ಮತ್ತು ಜಿ. ಕೆ. ಡಿ. ಭೈರಮಯ್ಯನವರು ತಲಾ ೧೦೦ರೂ. ಗಳನ್ನು ದಾನ ಮಾಡಿದ್ದಾರೆ.

ಸಮಾಚಾರ

ಅಕ್ಟೋಬರ್ ೫-೧೦-೫೦ ಗುರುವಾರ

ಖಾದಿ ಪುನರ್ವ್ಯವಸ್ಥೆ

ಪೂಜ್ಯ ಬಾಪೂಜಿಯವರಲ್ಲಿದ್ದ ಮುಖ್ಯವಾದ ಅಸ್ತ್ರಗಳಲ್ಲೊಂದು ಚರಕ. ಅವರ ಜೀವನವನ್ನೆಲ್ಲಾ ರಾಜಕೀಯದಲ್ಲಿ ಕಳೆದು ದೇಶಕ್ಕೆ ಸ್ವಾತಂತ್ರ್ಯವನ್ನು ಶಾಂತರೀತಿಯಿಂದ ಗಳಿಸಿಕೊಟ್ಟ ಈ ಮಹನೀಯರು ಜೀವಂತವಾಗಿರುವವರೆಗೆ ಚರಕ ಮತ್ತು ಚರಕದಿಂದ ನೂತ ದಾರದಿಂದಲೇ ತಯಾರಾದ ಖಾದಿಯನ್ನಲ್ಲದೆ ಮತ್ತೊಂದು ಬಟ್ಟೆಯನ್ನು ಧರಿಸಿದವರಲ್ಲ. ಗ್ರಾಮೋದ್ಧಾರವಾಗಿ ದೇಶದಲ್ಲಿ ಸಂಪತ್ತು ಹೆಚ್ಚಿ ಜನರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಬೇಕಾದರೆ ಪ್ರತಿಯೊಂದು ಮನೆಯಲ್ಲೂ ಒಂದು ಚರಕವಿರಲೇಬೇಕು. ಮಕ್ಕಳು, ಹೆಂಗಸರು, ಮುದುಕರು ಆದಿಯಾಗಿ ಎಲ್ಲರೂ ತಮ್ಮ ವಿರಾಮಕಾಲದಲ್ಲಿ ನೂಲನ್ನು ತೆಗೆದು ದೇಶಕ್ಕೆ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸುವುದಲ್ಲದೆ ತಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಿ ಎಂದು ಮಹಾತ್ಮರು ಸದಾ ಬೋಧಿಸುತ್ತಿದ್ದರಲ್ಲದೆ ಕಾರ್ಯತಃ ತಾವೂ ಮಾಡುತ್ತ ಜನರಿಗೆ ಮೇಲ್ಪಂಕ್ತಿಯಾಗಿದ್ದರು.

ಇತ್ತೀಚೆಗೆ ಜನರು ವಿಶೇಷವಾಗಿ ರಾಜಕೀಯದಲ್ಲಿ ಮಗ್ನರಾಗಿರುವರಲ್ಲದೆ ಮಹಾತ್ಮರ ಹಿತನುಡಿಗಳನ್ನೆಲ್ಲಾ ಮರೆತು ರಾಟೆ, ಖಾದಿಯನ್ನುವುದನ್ನು ನಾವು ನೋಡುವುದೂ ದುರ್ಲಭವಾಗಿರುತ್ತೆ. ಕಾಂಗ್ರೆಸ್ ಸಂಸ್ಥೆಯಲ್ಲಿ ಹತ್ತಾರು ವರ್ಷಗಳಿಂದ ದುಡಿದು ಸರ್ವದಾ ಖಾದಿಯನ್ನು ಧರಿಸುತ್ತಲಿರುವವರನೇಕರು ಇತ್ತೀಚೆಗೆ ಪರದೇಶಿ ಬಟ್ಟೆಗಳನ್ನು ಉಪಯೋಗಿಸುತ್ತಲಿರುವುದನ್ನು ನಾವು ನಿತ್ಯ ನೋಡುತ್ತಲಿದ್ದೇವೆ.

ಪರದೇಶೀಯರು ನಮ್ಮನ್ನಾಳುವಾಗ ಯಾವ ಯಾವ ಸರ್ಕಾರಗಳು ಖಾದಿಗೆ ಪ್ರೋತ್ಸಾಹಕೊಡುತ್ತಲಿದ್ದರೋ ಅವರೆಲ್ಲರೂ ಅತ್ತಕಡೆ ತಮ್ಮ ಗಮನವನ್ನು ಸ್ವಲ್ಪವೂ ಕೊಡದೆ ಅಸಡ್ಡೆಯಿಂದ ಕಾಣುತ್ತಿರುವುದನ್ನು ನಾವು ನೋಡುತ್ತಲಿದ್ದೇವೆ.

ನಾಸಿಕ ಕಾಂಗ್ರೆಸ್ ಅಧಿವೇಶನವು ನಡೆಯಲಾರಂಭವಾಗಿ ಖಾದಿ ಪ್ರೇಮಿಗಳಾದ ನೂತನ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರು ಖಾದಿ ಕೈಗಾರಿಕೆಯ ಕ್ಷೀಣದೆಸೆಗೆ ಬರುತ್ತಲಿರುವುದನ್ನು ದಾಕ್ಷಿಣ್ಯವಿಲ್ಲದ ಉಗ್ರವಾಗಿ ಟೀಕೆಮಾಡುತ್ತಾ ಖಾದಿ ಬೆಳವಣಿಗೆಗೆ ಪುನರ್ವ್ಯವಸ್ಥೆಮಾಡಬೇಕೆಂದು ನಿರ್ಣಯವನ್ನು ಅಧಿವೇಶನದಲ್ಲಿ ಮಂಡಿಸಿದ ಮೇಲೆ ಎಲ್ಲಾ ನಾಯಕರ, ಸರ್ಕಾರಗಳ ಮನಸ್ಸು ಅತ್ತಕಡೆ ಈಗ ತಿರುಗಿದೆ ಈಗ ನಾಯಕರೆಲ್ಲರೂ ಈ ಕೈಗಾರಿಕೆಯಲ್ಲಿ ಪುನಃ ಜೀವ ತುಂಬಬೇಕೆಂದೂ ಹಳ್ಳಿಗಾಡಿನಲ್ಲಿ ಬಡತನವು ತೊಲಗುವುದೆಂದು ಸ್ವಾತಂತ್ರ್ಯಗಳಿಸುವುದಕ್ಕೆ ಮುಂಚೆ ಹೇಳುತ್ತಿದ್ದಂತೆಯೇ ಹೇಳಲು ಹೊರಟಿರುವರು.

ಬರೀ ಹೇಳಿಕೆಯಿಂದ ಪ್ರಯೋಜನವಿಲ್ಲ. ಭಾರತ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳೆಲ್ಲವೂ ಕೂಡಲೇ ಖಾದಿ ಪುನರ್ ಬೆಳವಣಿಗೆಗೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮವನ್ನು ತಯಾರಿಸಿ ಪ್ರತಿಯೊಂದು ಮನೆಯಲ್ಲೂ ಒಂದು ರಾಟೆಯು ಇರಲೇಬೇಕು. ಮತ್ತು ನೂಲನ್ನು ಅವರು ತೆಗೆಯಲೇಬೇಕೆಂದು ಒತ್ತಾಯಮಾಡುವ ಕಾರ್ಯವನ್ನು ಮಾಡಬೇಕು. ಜನರು ಸಹ ಇದು ತಮ್ಮ ನಿತ್ಯ ಕರ್ಮಗಳಲ್ಲಿ ಮುಖ್ಯವಾದುದೆಂದು ತಿಳಿದುಕೊಂಡು ಕಾರ್ಯಗತಮಾಡಿದಲ್ಲಿ ದೇಶದ ಸಂಪತ್ತು ಹೆಚ್ಚುವುದಲ್ಲದೆ ಜನರ ಆರ್ಥಿಕಸ್ಥಿತಿಯು ಉತ್ತಮಗೊಳ್ಳುವುದು.

ಪ್ರತಿ ಸರ್ಕಾರವೂ ಖಾದಿಯ ಬೆಳವಣಿಗೆಗೆ ಪ್ರತ್ಯೇಕ ಒಂದು ಇಲಾಖೆಯನ್ನು ಏರ್ಪಡಿಸಿ ಖಾದಿಗೆ ಪ್ರೋತ್ಸಾಹ ಕೊಡಲು ತಕ್ಕ ರೀತಿಯಲ್ಲಿ ದುಡಿಯಬೇಕು.

ನಮ್ಮ ಮೈಸೂರು ಸಂಸ್ಥಾನದಲ್ಲಿ ಖಾದಿಯು ಹೊಸದೇನೂ ಅಲ್ಲ. ೧೯೨೭ ರಲ್ಲಿಯೇ ಖಾದಿಗೆ ಅಂದಿನ ಸರ್ಕಾರ ಪ್ರೋತ್ಸಾಹ ಕೊಟ್ಟಿತು. ಇಲ್ಲಿಯವರೆಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಖಾದಿ ಬೆಳವಣಿಗೆಗೆ ಬೇಕಾದ ಕೆಲಸಮಾಡಿತು. ಇತ್ತೀಚೆಗೆ ಸ್ವಾತಂತ್ರ್ಯಗಳಿಸಿದ ಮೇಲೆ, ನಮ್ಮ ಪ್ರಜಾ ಸರ್ಕಾರವು ಬಂದ ಮೇಲೆ, ಇದಕ್ಕೆ ದೊರೆಯಬೇಕಾದಷ್ಟು ಪ್ರೋತ್ಸಾಹವು ದೊರೆಯುತ್ತಲಿಲ್ಲ. ಇದಕ್ಕೆ ಕಾರಣಗಳೇನಾದರೂ ಇರಲಿ. ನಮ್ಮ ನಾಯಕರೆಲ್ಲರೂ ಪುನಃ ಖಾದಿಗೆ ತಕ್ಕ ಪ್ರೋತ್ಸಾಹ ಕೊಡಬೇಕೆಂದು ಸಾರಲು ಹೊರಟಿರುವ ಈ ಸಮಯದಲ್ಲಿ, ನಮ್ಮ ಸಂಸ್ಥಾನದಲ್ಲಿಯೂ ಸರ್ಕಾರವು ಖಾದಿ ಬೆಳವಣಿಗೆಗೆ ಪ್ರತ್ಯೇಕ ಒಂದು ಇಲಾಖೆಯನ್ನು ಸ್ಥಾಪಿಸಿ, ಹಿಂದಿನ ಸರ್ಕಾರವು ಎಷ್ಟು ಪ್ರೋತ್ಸಾಹಕೊಡುತ್ತಲಿತ್ತೊ ಅದಕ್ಕಿಂತಲೂ ಇಮ್ಮಡಿಯಾಗಿ ಪ್ರೋತ್ಸಾಹಕೊಟ್ಟು ಈಗ ಆ ಇಲಾಖೆಯಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಲಿರುವವರನ್ನು ಕಡೆಗಣ್ಣಿನಿಂದ ನೋಡದೆ ಇತರ ಇಲಾಖೆಗಳಲ್ಲಿ ಕೆಲಸಮಾಡುತ್ತಲಿರುವರಿಗಿಂತ ಹೆಚ್ಚಾಗಿ ಇವರಿಗೆ ಸಂಬಳಸಾರಿಕೆ ಕೊಟ್ಟು ಖಾದಿ ಪುನರುಜ್ಜೀವನಕಾರ್ಯವು ಯಶಸ್ವಿಯಾಗಿ ನಡೆಸಲು ಅವರೆಲ್ಲರೂ ಶ್ರದ್ಧಾಭಕ್ತಿಯಿಂದ ಕೆಲಸಮಾಡಿ ನಮ್ಮ ದೇಶವು ಉದ್ಧಾರವಾಗಲು ಎಲ್ಲರೂ ನೆರವಾಗಲೆಂದು ಆಶಿಸುತ್ತೇವೆ.

ಜೈ ಹಿಂದ್.

ಪತ್ರವ್ಯವಹಾರ

ಸೌಜನ್ಯಪಾಲನೆಗೆ ಕಾವಲಿಡಬೇಕೆ

ಸ್ವಾಮಿ,—

ಪ್ರಜಾಭಿಮತಕ್ಕೆ ಪೂರ್ಣ ಮನ್ನಣೆಯನ್ನಿತ್ತು, ಜನರ ಆರೋಗ್ಯಸಾಧನೆಯ ದೃಷ್ಟಿಯಿಂದಲೂ ಸರ್ಕಾರದವರು, ಸಿನಿಮಾ ನಾಟಕಇತ್ಯಾದಿ ಮನೋರಂಜಕ ಮಂದಿರಗಳಲ್ಲಿ ಸಿಗರೇಟು ಬೀಡಿ ಮುಂತಾದ ಧೂಮಪಾನೀಯಗಳನ್ನು ನಿಷೇಧಿಸಿದ್ದಾರೆ.

ನಾಲ್ಕಾರು ಜನ ಕೂಡುವ ಪ್ರದೇಶದಲ್ಲಿ ಯಾರಿಗೂ ಮತ್ತೊಬ್ಬರಿಂದ ತೊಂದರೆಯಾಗದಂತೆ ಸೌಜನ್ಯತೆಯನ್ನು ಕಲಿಸಲು ಮಾಡಿರುವ ಈ ಆಜ್ಞೆಯನ್ನು ಸಿನಿಮಾ ಮಂದಿರಗಳಲ್ಲಿ ಜನ ನಿರಾಂತಕವಾಗಿ ಉಲ್ಲಂಘಿಸುತ್ತಿರುವುದು ಅತ್ಯಂತ ವಿಷಾದಕರ. ಪೋಲೀಸಿನವರು ಮಂದಿರದೊಳಕ್ಕೆ ಬಂದು ಧೂಮಪಾನ ಮಾಡುವವರನ್ನು ಹಿಡಿದೆಳೆಯುವವರೆಗೂ ಭಯವಿಲ್ಲವೆಂದು ಜನ ಈರೀತಿ ಕತ್ತಲಲ್ಲಿ ಪಾಪಕೃತ್ಯಮಾಡುತ್ತಿದ್ದರೆ ಅವು ಆತ್ಮವಂಚನೆಯಾದೀತು.

ನಾಗರೀಕತೆಯ ಲಕ್ಷಣ ಕಾನೂನಿಗೆ ಬದ್ಧವಾದ ವರ್ತನೆಯೆಂಬುದನ್ನು ಸೂಚಿಸಿ, ಜನರು ತಮ್ಮ ನಡತೆಯ ಬಗ್ಗೆ ಮತ್ತೊಬ್ಬರು ಕೈತೋರದಂತೆ ನಡೆಯಲೆಂದು ಆಶಿಸುತ್ತೇನೆ.

ಎನ್. ಎಸ್. ಶಾಸ್ತ್ರಿ.

ಮೈಸೂರು ಅ. ೫.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಅಕ್ಟೋಬರ್ ೬ ಶುಕ್ರವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಎಂ. ವಿ. ರಾಘವೇ (ದೇವಭಜನೆ) ೭-೩೫ ಚಿತ್ರಗೀತೆ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾನ್ಹ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಕ್ಲಾರಿಯೋನೆಟ್ ೧-೪೫ ಹಿಂದೀ ಶಿಕ್ಷಣ ೨-೦ ನಿಮ್ಮ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ

ಸಂಜೆ ೫-೩೦ ಎಂ. ವಿ. ರಾಘವೇ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಕಾರ್ಯಕ್ರಮ ೭-೧೫ ಗೀತಾಂಜಲಿ ೭-೩೦ ವಿಶ್ವವಾರ್ತೆ ೭-೪೫ ಕನ್ನಡದಲ್ಲಿವಾರ್ತೆ ೮-೦ ನಾದಶ್ರೀ ೮-೧೫ ಹಿಂದೂಸ್ಥಾನಿ ಸಂಗೀತ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವೃಂದಸಂಗೀತ ೧೦-೦ ಮುಕ್ತಾಯ

ಕೊರಿಯಾ ಯುದ್ಧರಂಗ

ವಿಶ್ವಸಂಸ್ಥೆಯ ಸೈನ್ಯವು ೩೮ನೇ ಅಕ್ಷಾಂಶವನ್ನು ದಾಟಿ ೭೦ ಮೈಲಿ ದೂರ ಹೋಗಿದೆಯೆಂದು ತಿಳಿಯಬರುತ್ತದೆ.

ಗುಂಡು ಹಾರಿಸಿದ್ದುಂಟು

ಚೀಣೀ ಪ್ರದೇಶದ ಅಂಟುಂಗ್ ವಿಮಾನ ನಿಲ್ದಾಣದ ನೈರುತ್ಯ ಭಾಗದಮೇಲೆ ಎರಡು ಅಮೇರಿಕ ಫೈಟರು ಬಾಂಬರುಗಳು ಆಗಸ್ಟ್ ೨೭ರಲ್ಲಿ ತಿಳಿಯದೇ ಹಾರಾಟ ನಡೆಸಿ ಗುಂಡುಹಾರಿಸಿದುಂಟೆಂದು ಅಮೆರಿಕಾವು ಪ್ರಪಂಚ ಸಂಸ್ಥೆಗೆ ತಿಳಿಸಿದೆ.

ಭಾಷಣ ಕೇಳಲುಹೋಗಿ ಮರಣ

೩ನೇ ತಾರೀಖು ಲಕ್ನೋದಲ್ಲಿ ಪ್ರಧಾನಿ ಪಂಡಿತ ನೆಹರೂರವರ ಭಾಷಣವನ್ನು ಕೇಳಲು ಸೇರಿದ್ದ ಸಭೆಯಲ್ಲಿ ನೂಕನುಗ್ಗಲುಂಟಾಗಿ ಅದರಲ್ಲಿ ಸಿಕ್ಕಿಕೊಂಡು ೧೮ವರ್ಷದ ಯುವಕನೊಬ್ಬನು ಸತ್ತನು.

ರಣಜಿತ್
ದಿನವಹಿ ೩ ಆಟಗಳು
6-10-50 ಶುಕ್ರವಾರದಿಂದ
ಆಧಿರಾತ್ Adhi Raat
(ಹಿಂದಿ)
ಪಾತ್ರ: † ಅಶೋಕ ಕುಮಾರ್
† ನರ್ಗಿಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೬—೧೦—೧೯೫೦ ನೇ ಶುಕ್ರವಾರ [ಸಂಚಿಕೆ ೪೪

ಆಫ್ಘನರ ಮೇಲೆ ಪಾಕ್ ಸೈನ್ಯಗಳ ಧಾಳಿ

ಪಾಕಿಸ್ಥಾನ ಮತ್ತು ಅಫ್ಘಾನಿಸ್ಥಾನದ ಗಡಿ ದೇಬಂದಿ ಪ್ರದೇಶದ ಬಳಿ(ಬೆಲೂಚಿಸ್ಥಾನದ ಗಡಿಯು ಚಮನ್‌ಗೆ ೩೦ ಮೈಲಿ ಉತ್ತರ ದಿಕ್ಕಿನಲ್ಲಿ) ಕ್ವೆಟ್ಟಾ-ಚಮನ್ ರೈಲ್ವೆ ಲೈನನ್ನು ಹಿಡಿಯುವ ಸಲುವಾಗಿ ಅಫ್ಘನರ ಶಸ್ತ್ರಸಜ್ಜಿತ ಪಡೆಯೊಂದು ನುಗ್ಗಿಬಂದಿತೆಂದೂ ಅದನ್ನೆದುರಿಸಲು ಪಾಕಿಸ್ಥಾನದ ಭೂಸೈನ್ಯ ಮತ್ತು ವಿಮಾನದಳವು ತೀವ್ರ ಕಾರ್ಯಾಚರಣೆ ಕೈಗೊಂಡು ಧಾಳಿಯನ್ನು ಹಿಮ್ಮೆಟ್ಟಿಸಿತೆಂದೂ ಕರಾಚಿಯ ಸರ್ಕಾರಿ ಪ್ರಕಟಣೆಯು ತಿಳಿಸುತ್ತದೆ.

ಈ ಬಗ್ಗೆ ದೆಹಲಿಯಲ್ಲಿರುವ ಆಫ್ಘನ್ ರಾಯಭಾರಿ ಹೇಳಿಕೆಯೊಂದನ್ನು ಹೊರಡಿಸಿ, ಪಾಕಿಸ್ತಾನವು ಆಫ್ಘನರ ಮೇಲೆ ಅಪಪ್ರಚಾರ ಮಾಡುವ ಸಲುವಾಗಿ ಆಫ್ಘನರ ಶಸ್ತ್ರಸಜ್ಜಿತ ಪಡೆಯೆಂದು ಹೇಳಿದೆಯೆಂದೂ, ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರ ನೇತೃತ್ವದಲ್ಲಿ ಪಠಾನರು ಫಕ್ತೂನಿಸ್ತಾನದ ರಚನೆಗಾಗಿ ಹೋರಾಡುತ್ತಿರುವಲ್ಲಿ, ತಮ್ಮ ಸ್ವಾತಂತ್ರ್ಯಕ್ಕಾಗಿ ಕಾದಾಡುತ್ತಿರುವರೆಂದೂ, ಆಫ್ಘಾನಿಸ್ತಾನದ ಕೈವಾಡ ಇದರಲ್ಲಿ ಎಳ್ಳಷ್ಟೂ ಇಲ್ಲವೆಂದೂ, ಪಾಕಿಸ್ತಾನವು ಅಫ್ಘಾನಿಸ್ತಾನದ ಮೇಲೆ ಸೈನ್ಯ ಕಾರ್ಯಾಚರಣೆ ನಡೆಸಿ ಆಫ್ಘನರನ್ನು ಉದ್ರೇಕಿಸುತ್ತಿದೆಯೆಂದೂ ನುಡಿದಿದ್ದಾರೆ.

ನಗರ ಸಹಕಾರ ಬ್ಯಾಂಕುಗಳ ಸಮ್ಮೇಳನ

ಅಕ್ಟೋಬರ್ ೧೯ನೇ ತಾರೀಖು ಮೈಸೂರು ನಗರದ ಸಹಕಾರ ಭವನದಲ್ಲಿ ಮೈಸೂರು ಸಂಸ್ಥಾನದ ನಗರ ಸಹಕಾರ ಬ್ಯಾಂಕುಗಳ ಸಮ್ಮೇಳನವು ನಡೆಯುವುದು.

ರೇಷನ್ ಇಲ್ಲ

ನವರಾತ್ರಿ, ವಸ್ತು ಪ್ರದರ್ಶನ ಮುಂತಾದುವನ್ನು ನೋಡಲು ಹೊರಗಿನಿಂದ ಬರುವ ಪ್ರೇಕ್ಷಕರಿಗೆ (ಸರಕಾರಿ ಅಥಿತಿಗಳನ್ನು ಬಿಟ್ಟು) ಆಹಾರ ರೇಷನ್ ಕೊಡಲಾಗುವುದಿಲ್ಲವೆಂದು ತಿಳಿಯಬರುತ್ತದೆ

ಆಹಾರ ಧಾನ್ಯ

ಮೈಸೂರು ಸಂಸ್ಥಾನಕ್ಕೆ ಅಕ್ಟೋಬರ್ ತಿಂಗಳಿಗೆ ಕೇಂದ್ರ ಸರ್ಕಾರವು ೭೦೦೦ ಟನ್ ಗೋಧಿ ಮತ್ತು ೫೦೦ ಟನ್ ಮೈಲೋವನ್ನು ಕೊಟ್ಟಿದ್ದಾರೆ. ಮದರಾಸು ಪ್ರಾಂತ್ಯದಿಂದ ೫೦೦ ಟನ್ ಬಿಹಾರದಿಂದ ೧೫೦೦ ಟನ್ ಸಕ್ಕರೆಯನ್ನು ಮೈಸೂರು ಸಂಸ್ಥಾನಕ್ಕೆ ಕೊಡಲಾಗಿದೆ.

ಸಕ್ಕರೆ, ಗೋಧಿಯಿಲ್ಲ

ಮೈಸೂರು ನಗರ ಅನೇಕ ರೇಷನ್ ಡಿಪೋಗಳಲ್ಲಿ ಸಕ್ಕರೆ, ಗೋಧಿಯಿಲ್ಲದೆ ಜನರು ಬಹಳ ತೊಂದರೆ ಪಡುತ್ತಲಿದ್ದಾರೆ. ಅಧಿಕಾರಿಗಳನ್ನು ವಿಚಾರಿಸಿದ್ದರಲ್ಲಿ ಕೆಲವು ಅನಾನುಕೂಲಗಳಿಂದ ಇನ್ನೂ ಇವು ಬಂದಿಲ್ಲವೆಂದೂ, ಒಂದೆರಡು ದಿನಗಳಲ್ಲಿಯೇ ಬರುವ ನಿರೀಕ್ಷಣೆಯಿದೆಯೆಂದು ತಿಳಿಸುತ್ತಾರೆ

ಕೇಂದ್ರ ಆಹಾರ ಸಂಶೋಧನಾಲಯ

ಮೈಸೂರಿನಲ್ಲಿರುವ ಆಹಾರ ಸಂಶೋಧನಾಲಯದ ಪ್ರಾರಂಭ ಸಮಾರಂಭವು ಇದೇ ಮಾಹೆ ೨೧ನೇ ತಾರೀಖು ಸಂಜೆ ೫-೩೦ ಗಂಟೆಗೆ ಚಲುವಾಂಬಾ ಭವನದಲ್ಲಿ ನಡೆಯುವುದು. ಶ್ರೀಮನ್ಮಹಾರಾಜರವರು ಈ ಸಮಾರಂಭದ ಅಧ್ಯಕ್ಷತೆ ವಹಿಸುವರು. ಶ್ರೀ. ಸಿ. ರಾಜಗೋಪಾಲಾಚಾರಿಯವರು ಪ್ರಾರಂಭೋತ್ಸವ ನಡೆಸುವರು ಈ ಸಮಾರಂಭದಲ್ಲಿ ಪ್ರಧಾನಿ ನೆಹರೂ, ಡಾ. ಎಸ್. ಎಸ್. ಭಾಟ್‌ನಗರ್ ಮತ್ತು ಶ್ರೀ ಕೆ. ಸಿ ರೆಡ್ಡಿಯವರು ಭಾಷಣ ಮಾಡುವ ನಿರೀಕ್ಷಣೆಯಿದೆ.

ಶ್ರೀ ಪ್ರಕಾಶಂರವರ ಆಗಮನ

ಮದರಾಸಿನ ಮಾಜೀ ಪ್ರಧಾನಿ ಶ್ರೀ ಪ್ರಕಾಶಂರವರು ನಿನ್ನೆ ಬೆಂಗಳೂರಿಗೆ ಬಂದರು. ರೆಸಿಡೆನ್ಸಿಯಲ್ಲಿ ಬಿಡಾರಮಾಡಿದ್ದಾರೆ. ಎರಡು ದಿನಗಳಿರುವರೆಂದೂ, ಸ್ವಂತ ಕೆಲಸದ ಮೇಲೆ ಬಂದಿರುವರೆಂದೂ ಹೇಳಲಾಗಿದೆ.

ಹೆಚ್ಚು ಬೆಳೆಗೆ

ಮೈಸೂರು ಪ್ರಾಂತ್ಯದಲ್ಲಿ ಆಹಾರದ ಹೆಚ್ಚು ಬೆಳೆಗೆ ಕೇಂದ್ರ ಸರ್ಕಾರವು ೧೯೫೦-೫೧ನೇ ಸಾಲಿಗೆ ೩೩,೩೯,೩೩೮ ರೂ. ಗಳ ಗ್ರಾಂಟನ್ನೂ ೪೦ ಲಕ್ಷ ರೂ. ಗಳ ಸಾಲವನ್ನೂ ಕೊಟ್ಟಿರುವುದಾಗಿ ತಿಳಿಯಬರುತ್ತದೆ. ಇನ್ನು ಮೂರು ವರ್ಷಗಳೊಳಗಾಗಿ ಪ್ರಾಂತ್ಯವು ಆಹಾರದಲ್ಲಿ ಸ್ವಯಂಪೂರ್ಣತೆಯನ್ನು ಪಡೆಯುವಂತೆ ಕಾರ್ಯಕ್ರಮವನ್ನು ನಡೆಸುವುದಾಗಿ ತಿಳಿಯಬರುತ್ತದೆ.

ಶ್ರೀ ಕೆ. ಹನುಮಂತಯ್ಯ

ಅಂತರರಾಷ್ಟ್ರೀಯ ಪಾರ್ಲಿಮೆಂಟರಿ ಸಮ್ಮೇಳನಕ್ಕೆ ಡಬ್ಲಿನ್ನಿಗೆ ತೆರಳಿದ್ದ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷ ಮತ್ತು ಭಾರತ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಕೆ ಹನುಮಂತಯ್ಯನವರು ಈಗ ಪ್ಯಾರಿಸ್ಸಿನಲ್ಲಿರುವರೆಂದು ತಿಳಿಯಬರುತ್ತದೆ. ಈ ತಿಂಗಳ ಮಧ್ಯದಲ್ಲಿ ವಾಪಸ್ಸಾಗುವರೆಂದು ತಿಳಿಯಬರುತ್ತದೆ.

ಗ್ರಾಮಾಭಿವೃದ್ಧಿಸಮಿತಿ ಅಧ್ಯಕ್ಷರ ಸಮ್ಮೇಳನ

ಅಖಿಲ ಮೈಸೂರು ಜಿಲ್ಲಾ ಮತ್ತು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರುಗಳ ಸಮ್ಮೇಳನವು ಅರಸೀಕೆರೆ ತಾಲ್ಲೂಕು ಜಾವಗಲು ಹೋಬಳಿ ಕರುಗುಂದ ಗ್ರಾಮದಲ್ಲಿ ಇದೇ ಮಾಹೆ ೧೦ನೇ ತಾರೀಕು ನಡೆಯುವುದು. ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆ ವಹಿಸುವರು ಹಣಕಾಸಿನ ಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪನವರು ಪ್ರಾರಂಭೋತ್ಸವ ನಡೆಸುವರು.

ಸೇವಾದಳ ಶಿಕ್ಷಣ ಶಿಬಿರ

ಸೇವಾದಳದ ಶಾರೀರಕ, ಮಾನಸಿಕ ಮತ್ತು ನೈತಿಕ ಶಿಕ್ಷಣವನ್ನು ಕೊಡಲು, ಇದೇ ಮಾಹೆ ೧೦ನೇ ತಾರೀಖಿನಿಂದ ಮೈಸೂರು ಮಹಾರಾಜ ಹೈಸ್ಕೂಲಿನಲ್ಲಿ ಸೇವಾದಳದ ಶಿಕ್ಷಣ ಶಿಬಿರವು ಪ್ರಾರಂಭವಾಗುತ್ತದೆ. ೧೫ ದಿವಸ ಶಿಕ್ಷಣ ಕೊಡಲಾಗುವುದು. ಊಟ ವಸತಿ ಉಚಿತ ಏರ್ಪಾಡಾಗುವುದು ಈ ಶಿಬಿರದಲ್ಲಿ ಶಿಕ್ಷಣ ಪಡೆಯಲಿಚ್ಛಿಸುವವರೆಲ್ಲರೂ ಸೇವಾದಳದ ಯೂನಿಫಾರಂನೊಡನೆ ಬಂದು ಶಿಕ್ಷಣಪಡೆಯಬಹುದೆಂದು ಸೇವಾದಳದ ಅಧ್ಯಕ್ಷ ಶ್ರೀ ಟಿ. ಎಸ್ ಸುಬ್ಬಣ್ಣನವರು ತಿಳಿಸುತ್ತಾರೆ

● ದಿವಂಗತ ಪ್ರೊ. ಹಿರಿಯಣ್ಣನವರ ಸ್ಮಾರಕ ಭಾಷಣವನ್ನು ನಾಳೆ ಸಂಜೆ ಸಾರ್ವಜನಿಕ ವಿಚಾರ ಸಂಸ್ಥೆಯವರು ಮಾದರೀ ಶಾಲೆಯಲ್ಲಿ ಏರ್ಪಡಿಸಿರುವರು. ಶ್ರೀ ಎಂ. ವಿ. ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು. ಶ್ರೀಗಳಾದ ಯಾಮುನಾಚಾರ್ ಮತ್ತು ಎ. ಕೃಷ್ಣಶಾಸ್ತ್ರಿಗಳು ಅವರ ಲೇಖನಗಳ ಬಗ್ಗೆ ಭಾಷಣಮಾಡುವರು.

‘ಕಿಡಿ’ ಕೇಸು ವಜಾ

‘ಕಿಡಿ’ ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಶೇಷಪ್ಪನವರು ಮತ್ತು ಪ್ರಕಟನಕಾರರಾದ ಶ್ರೀ ಎಂ. ಎಸ್. ಚಿಂತಾಮಣಿಯವರು ತಮ್ಮನ್ನು ಸೆಕ್ಯೂರಿಟಿ ಕೇಳಿದ್ದ ಸಂಬಂಧದಲ್ಲಿ ತಾವು ಸಲ್ಲಿಸಿರುವ ಅರ್ಜಿಯ ವಿಚಾರಣೆಯು ಈದಿನ ಸಂಜೆ ಹೈಕೋರ್ಟಿನಲ್ಲಿ ಮುಂದುವರಿದಾಗ ಅ|| ಜನರಲ್‌ರವರು ಸರ್ಕಾರ ತಮ್ಮ ಸೆಕ್ಯೂರಿಟಿ ಆಜ್ಞೆಯನ್ನು ವಜಾ ಮಾಡಿರುವುದಾಗಿ ಸೂಚಿಸಲು, ಚೀಫ್ ಜಸ್ಟಿಸರೂ ಜ|| ವೆಂಕಟರಾಮಯ್ಯನವರೂ ಅರ್ಜಿಗಳ ವಿಚಾರಣೆಯನ್ನು ಮುಂದುವರಿಸುವುದು ಅನವಶ್ಯಕವೆಂಬುದಾಗಿ ಸೂಚಿಸಿ ಮೊಕದ್ದಮೆಯನ್ನು ಫೈಲಿನಿಂದ ವಜಾ ಮಾಡಿದರು

ಜನಗಣತಿಗಾಗಿ ಕರ್ಫ್ಯೂ

ಅಕ್ಟೋಬರ್ ೮ನೇ ತಾರೀಖು ಅಜ್ಮೀರದಲ್ಲಿ ಜನಗಣತಿಗಾಗಿ ಬೆಳಿಗ್ಗೆ ೯-೩೦ ಗಂಟೆಯಿಂದ ೮ ಗಂಟೆಗಳ ಕಾಲ ಕರ್ಫ್ಯೂ ವಿಧಿಸಲಾಗಿದೆ ರೇಷನ್ ಕಾರ್ಡುಗಳನ್ನು ಕೊಡುವುದಕ್ಕೂ, ಪೌರಸಭೆಯ ಮತ್ತು ಪಾರ್ಲಿಮೆಂಟಿಗೆ ಓಟರ ಪಟ್ಟಿಯನ್ನು ತಯಾರಿಸುವುದಕ್ಕೂ ೨೦೦೦ ಸರಕಾರಿ, ರೈಲ್ವೆ ನೌಕರರು ಮತ್ತು ಸ್ಕೌಟುಗಳು ಜನಗಣತಿಗಾಗಿ ಹೋಗಬೇಕಾಗಿರುವುದರಿಂದ, ಮನೆಗಳಿಂದ ಯಾರೂ ಹೊರಗೆ ಹೋಗದಿರಲೆಂದು ಈ ಏರ್ಪಾಡು ಮಾಡಲಾಗಿದೆ.

ಜನರಲ್ ಕೌನ್ಸಿಲ್ ಸಭೆ

ವಿಮಾನ ಕಾರ್ಖಾನೆಯ ಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಶ್ರೀ ದಂಡಾಯುಧಪಾಣಿಯವರು ನಾಳೆ ಸಂಜೆ ೫ ಗಂಟೆಗೆ ಕಾರ್ಖಾನೆಯ ಪ್ರದೇಶದಲ್ಲಿ ಸಂಘದ ಕಾರ್ಯನಿರ್ವಾಹಕ ಸಮಿತಿ ಹಾಗೂ ಜನರಲ್ ಕೌನ್ಸಿಲ್ ಸಭೆ ಕೂಡಿಸಲಿರುವರೆಂದೂ ಅದಕ್ಕೆ ಬೇಕಾದ ಅನುಮತಿಪಡೆದಿರುವರೆಂದೂ ಹೇಳಲಾಗಿದೆ.

● ಚಾಮುಂಡಿ ಕಾಫಿ ಕ್ಯೂರಿಂಗ್ ವರ್ಕ್ಸ್ ಕೆಲಸಗಾರರ ಸಂಘದವರು ೯ನೇ ತಾರೀಖು ಕಾರ್ಖಾನೆ ಬಳಿ ಕಾರ್ಯಾಲಯದಲ್ಲಿ ಗಾಂಧಿ ಜಯಂತಿ ಆಚರಿಸುವರು. ಪೌರಸಭಾಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರು ಅಧ್ಯಕ್ಷತೆ ವಹಿಸುವರು.

ಸೋಷಿಯಲಿಸ್ಟ್ ಪಾರ್ಟಿ ಸಭೆ

ಮೈಸೂರು ನಗರದ ಸೋಷಿಯಲಿಸ್ಟ್ ಪಾರ್ಟಿಯವರು ಮೊನ್ನೆದಿನ ಶ್ರೀ ಎಸ್. ನಾಗಭೂಷಣರವರ ಅಧ್ಯಕ್ಷತೆಯಲ್ಲಿ, ಬೆಂಗಳೂರು ವಿಮಾನಕಾರ್ಖಾನೆಯ ಕಾರ್ಯದರ್ಶಿ ಶ್ರೀ ಸಿಂಗರು ಮತ್ತು ಇತರ ೭ ಮಂದಿಯನ್ನು ಬಂಧಿಸಿ, ನಗರದಲ್ಲಿ ೧೪೪ನೇ ಸೆಕ್ಷನ್ ಜಾರಿಗೆ ತಂದಿರುವುದನ್ನು ಖಂಡಿಸಿ ನಿರ್ಣಯ ಮಾಡಿದರು.

ಕಾಂಗ್ರೆಸ್ಸಿಗನು ತಪ್ಪು ಮಾಡಿದರೂ ಶಿಕ್ಷೆಯಿಲ್ಲ

ಬೊಂಬಾಯಿ ಪಾನನಿರೋಧ ಶಾಸನವಿರೋಧವಾಗಿ ನಡೆದುದಕ್ಕೆ ಕಾಂಗ್ರೆಸ್ ಕೆಲಸಗಾರರಾದ ಮಿ|| ಅಬ್ದುಲ್ ಕದಿಂಲುಂಗೆ ಎಂಬುವವರಿಗೆ ಸೋಲಾಪುರದ ಮ್ಯಾಜಿಸ್ಟ್ರೇಟರು ಅಪರಾಧಿಯೆಂದು ತಿಳಿಸುತ್ತಾ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ ಮತ್ತು ಪಾನವಿರೋಧ ಸಮಿತಿಯ ಸದಸ್ಯರಾದ್ದರಿಂದ ಯಾವ ಶಿಕ್ಷೆಯನ್ನು ವಿಧಿಸದೆ ರಿಯಾಯತಿಕೊಡಲಾಗಿದೆಯೆಂದು ತಿಳಿಸಿದರು.

ಪೌರಾಧಿಕಾರಿಯನ್ನು ವಜಾ ಮಾಡಿದಕ್ಕೆ ಪೌರಸಭೆಗೆ ಶಿಕ್ಷೆ

ಸಕಾರಣಗಳಿಲ್ಲದೆ, ದುರುದ್ದೇಶದಿಂದ ದ್ವೇಷಸಾಧಿಸಲೋಸುಗ ಪೌರಸಭೆಯ ಚೀಫ್ ಆಫೀಸರೊಬ್ಬರನ್ನು ಬ್ರೋಚ್‌ಬರ್ರೊ ಮ್ಯುನಿಸಿಪಾಲಿಟಿಯು ವಜಾಮಾಡಿ ಆತನಿಗೆ ಅವಮಾನಪಡಿಸಿದ್ದಾಗಿ ಪೌರಸಭೆಯು ೫,೦೦೦ ರೂ. ಗಳ ದಂಡವನ್ನು ಆತನಿಗೆ ಕೊಡಬೇಕೆಂದು ಕೆಳಗಿನ ಕೋರ್ಟು ತೀರ್ಮಾನಿಸಿರುವುದು ಸರಿಯೆಂದು ಬೊಂಬಾಯಿ ಹೈಕೋರ್ಟು ಅಪೀಲಿನಲ್ಲಿ ತೀರ್ಪನಿತ್ತಿದೆ.

ಭಾರತ ವೈಜ್ಞಾನಿಕ ಕಾಂಗ್ರೆಸ್

ಭಾರತ ವೈಜ್ಞಾನಿಕ ಕಾಂಗ್ರೆಸ್ ಅಧಿವೇಶನವು ಬೆಂಗಳೂರಿನಲ್ಲಿ ಮುಂದಿನ ಜನವರಿ ೩ರಿಂದ ೧೦ರವರೆಗೆ ನಡೆಯುವುದು. ಬೊಂಬಾಯಿನ ಡಾ|| ಹೆಚ್. ಜೆ. ಬಾಬಾರವರು ಅಧ್ಯಕ್ಷತೆ ವಹಿಸುವರು.

ದಸರಾದಲ್ಲಿ ಮೆರವಣಿಗೆಯಿಲ್ಲ

ದಸರಾ ಮಹೋತ್ಸವಕಾಲದಲ್ಲಿ ವಸ್ತುಪ್ರದರ್ಶನವು ಮಿತಿಗೊಳಪಟ್ಟು ನಡೆಯುವುದು. ವಿಜಯದಶಮಿ ದಿವಸ ಮೆರವಣಿಗೆಯಿಲ್ಲವೆಂದು ಸರ್ಕಾರದವರು ಒಂದು ಪತ್ರಿಕಾಪ್ರಕಟನೆ ಹೊರಡಿಸಿದ್ದಾರೆ.

೧೯೫೧ರ ಏಪ್ರಿಲ್‌ನಲ್ಲಿ ಮಹಾ ಚುನಾವಣೆ

೧೯೫೧ನೇ ಏಪ್ರಿಲ್‌ನಲ್ಲಿ ಸ್ವತಂತ್ರ ಭಾರತದ ಪ್ರಥಮ ಮಹಾ ಚುನಾವಣೆಯು ನಡೆಯುವಂತೆ ಎಲ್ಲಾ ಪ್ರಾಂತ್ಯ ಡಿಲಿಮಿಟೇಷನ್ ಕಮಿಟಿಗಳು ತ್ವರಿತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಭಾರತಪ್ರಧಾನಿ ಪಂಡಿತನೆಹರೂರವರು ಡಿಲಿಮಿಟೇಷನ್ ಕಮಿಟಿಗಳನ್ನು ಪ್ರಾರ್ಥಿಸಿದ್ದಾರೆಂದು ತಿಳಿಯಬರುತ್ತದೆ.

ವಿಮಾನ ಕಾರ್ಖಾನೆ

ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ನಿನ್ನೆ ದಿವಸ ೨,೦೦೦ಕ್ಕೆ ಮೇಲ್ಪಟ್ಟ ಜನರು ಕೆಲಸಕ್ಕೆ ಬಂದಿದ್ದರೆಂದು ಮ್ಯಾನೇಜ್‌ಮೆಂಟಿನವರು ತಿಳಿಸಿದ್ದಾರೆ.

ಮುಷ್ಕರ ಪರಿಸ್ಥಿತಿ

ಬೊಂಬಾಯಿ ಗಿರಣಿ ಕಾರ್ಮಿಕರ ಪರಿಸ್ಥಿತಿಯು ಏನೂ ಬದಲಾವಣೆಯಾಗಿಲ್ಲ. ಸುಮಾರು ಶೇಕಡ ೯೦ ರಷ್ಟು ಕಾರ್ಮಿಕರು ಕೆಲಸಕ್ಕೆ ಹಿಂತಿರುಗಿಲ್ಲ. ಅನೇಕರು ಬೊಂಬಾಯಿ ಬಿಟ್ಟು ಹಳ್ಳಿಗಳಿಗೆ ಹೋಗುತ್ತಲಿದ್ದಾರೆಂದು ತಿಳಿಯಬರುತ್ತದೆ.

ಅಖಿಲ ಭಾರತ ವೃತ್ತಪತ್ರಿಕಾ ಸಂಪಾದಕ ಸಮ್ಮೇಳನ

ಅಖಿಲ ಭಾರತ ವೃತ್ತಪತ್ರಿಕಾ ಸಮ್ಮೇಳನವು ಇದೇ ವರ್ಷ ಡಿಸೆಂಬರ್ ೨ ಮತ್ತು ೩ರಲ್ಲಿ ನಡೆಯುವುದೆಂದು ಸಮ್ಮೇಳನದ ಕೇಂದ್ರ ಕಛೇರಿಯು ದೆಹಲಿಯಿಂದ ಪ್ರಕಟಿಸಿದೆ.

● ಬೆಂಗಳೂರಿನ ಲೇಬರ್ ಅಸಿಸ್ಟೆಂಟ್ ಕಮಿಷನರಾದ ಜೀಜಿಯಾ ಮಹಮದ್ ಬೊಖಾರಿಯವರನ್ನು ಹಾಸನದಲ್ಲಿರುವ ಇಂಪ್ಲಿಮೆಂಟು ಫ್ಯಾಕ್ಟರಿ ಲೇಬರ್‌ವೆಲ್‌ಫೇರ್ ಆಫೀಸರಾಗಿ ಅಲ್ಲಿ ಈಗಿರುವ ಶ್ರೀ ವೈ. ನಾಗಪ್ಪನವರನ್ನು ಬೆಂಗಳೂರಿಗೆ ಲೇಬರ್ ಅಸಿಸ್ಟೆಂಟ್ ಕಮಿಷನರಾಗಿ ವರ್ಗಮಾಡಿದ್ದಾರೆ.

ಮಾಯಕೊಂಡ ಸರ್ಕಾರಿ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ವೈ. ಕೆ. ಆನಂದರಾಯರಿಗೆ ದಸರಾ ರಜದ ಜೊತೆಗೆ ೨ ತಿಂಗಳು ೧೩ ದಿನ ರಜಾ ಕೊಡಲಾಗಿದೆ.

ಬೆಂಗಳೂರು ಇಂಜನಿಯರಿಂಗ್ ಕಾಲೇಜು ಕೆಮಿಕಲ್ ಇಂಜನೀಯರಿಂಗ್ ಲೆಕ್ಚರರಾದ ಶ್ರೀ ಆರ್. ಎನ್. ನಂಜುಂಡಪ್ಪನವರನ್ನು ದಾವಣಗೆರೆಯ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟಿನ ಸೂಪರಿನ್‌ಟೆನ್‌ಡೆಂಟರಾಗಿ ನೇಮಿಸಲಾಗಿದೆ

ಸರ್ಕಾರಿ ಟ್ರಾನ್ಸ್‌ಲೇಟರ್ ಆದ ಶ್ರೀ ಸಿ. ಕೆ. ವೆಂಕಟರಾಮಯ್ಯನವರಿಗೆ ಸೆಪ್ಟಂಬರ್ ೨೯ರಿಂದ ಒಂದು ತಿಂಗಳ ರಜಾ ಕೊಡಲಾಗಿದೆ. ಅಸಿಸ್ಟೆಂಟು ಟ್ರಾನ್ಸ್‌ಲೇಟರಾದ ಶ್ರೀ ವಿ. ಎನ್. ರಾಮರಾಯರು ಈ ಕಾಲದಲ್ಲಿ ಟ್ರಾನ್ಸ್‌ಲೇಟರಾಗಿ ನೇಮಿತವಾಗಿದ್ದಾರೆ

● ವೃತ್ತ ಪತ್ರಿಕೆಗಳಿಗೆ ಗೌರವಕ್ಕೆ ಚ್ಯುತಿ ತರುವಂತಹ ಅವಮಾನಕರ ಹಾಗೂ ಇತರ ವಿರೋಧರೀತಿಯ ಜಾಹಿರಾತುಗಳನ್ನು ಭಾರತದಲ್ಲಿರುವ ಯಾವ ಭಾಷಾ ಪತ್ರಿಕೆಯೂ ಪ್ರಕಟಿಸಬಾರದೆಂದು ದೇಹಲಿಯ ಹಿಂದೂಸ್ಥಾನ್ ಟೈಂಸ್ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ಶ್ರೀ ದೇವದಾಸ್ ಗಾಂಧಿಯವರು ತಿಳಿಸಿದ್ದಾರೆ.

● ಮೈಸೂರಿನಲ್ಲಿರುವ ನ್ಯೂ ಇಂಡಿಯನ್ ಗೆಸ್ಟ್ ಕ್ವಾರ್ಟರ್ಸ್ ಇದೇ ತಿಂಗಳು ೧೦ ರಿಂದ ೨೩ರವರೆಗೆ ಸಾರ್ವಜನಿಕರಿಗೆ ಮುಚ್ಚಲಾಗುವುದು.

● ಶ್ರೀ ಬಿ. ಕೆ. ರಂಗಸ್ವಾಮಿಯವರು ಕಡೂರು ಪೌರಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾಗಿರುವುದನ್ನು ಸರ್ಕಾರ ಅಂಗೀಕರಿಸಿದೆ

● ಯಾವವ್ಯಕ್ತಿಯನ್ನು ಸರ್ಕಾರ ಬಂಧಿಸಿದರೂ, ಯಾವ ಆಧಾರದ ಮೇಲೆ ಬಂಧಿಸಲಾಯ್ತೆಂಬುದನ್ನು ಒಂದು ವಾರ ಅಥವಾ ಹತ್ತು ದಿನಗಳೊಳಗಾಗಿ ತಿಳಿಸದಿದ್ದಲ್ಲಿ ಆ ಬಂಧನವು ನಿರರ್ಥಕವೆಂದು ಬೊಂಬಾಯಿ ಶ್ರೇಷ್ಠ ನ್ಯಾಯಾಲಯವು ವ್ಯಕ್ತಪಡಿಸಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೬ ಮೀಟರು

ಅಕ್ಟೋಬರ್ ೭ ಶನಿವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೬-೩೦ ಚಿತ್ರಸಂಗೀತ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ ೧-೪೫ ಕನ್ನಡ ಪದ್ಯವಾಚನ ೨-೦ ಬಾಲಜಗತ್ ೨-೩೦ ಮುಕ್ತಾಯ

ಸಂಜೆ ೫-೩೦ ಜೆ. ಕಲ್ಯಾಣಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಚಲನಚಿತ್ರ ಸಂಗೀತ(ರಿ) ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ತಬಲ ೭-೧೫ ವನಿತಾ ವಿಹಾರ ೭-೪೫ ಕನ್ನಡದಲ್ಲಿವಾರ್ತೆ ೮-೦ ಹೆಚ್. ಆರ್. [illegible] (ಕಥಾ ಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವಾದ್ಯ ಸಮ್ಮೇಳನ ೯-೪೫ ಗಾನವಾರಿಧಿ (ರಿ) ೧೦-೦ ಮುಕ್ತಾಯ.

ಪಾರ್ಲಿಮೆಂಟು ಅಧಿವೇಶನ

ಭಾರತ ಪಾರ್ಲಿಮೆಂಟು ಅಧಿವೇಶನವು ಮುಂದಿನ ತಿಂಗಳು ೧೪ ರಿಂದ ಪ್ರಾರಂಭವಾಗುವುದು.

ಸರದಾರ್ ಪಟೇಲರು

ಸರದಾರ್ ಪಟೇಲರು ನಿನ್ನೆ ಔರಂಗಾಬಾದಿನಿಂದ ಹೈದರಾಬಾದಿಗೆ ಆಗಮಿಸಿದರು. ಹೈದರಾಬಾದಿನ ನೈಜಾಮರು ಅವರನ್ನು ಸ್ವಾಗತಿಸಿದರು.

೧೯೫೨ಕ್ಕೆ ಪುನಃ ಯುದ್ಧವೆ?

೧೯೫೨ನೇ ಅಕ್ಟೋಬರ್ ನವಂಬರ್‌ವೊಳಗೆ ಬಾಲ್ಕನಿಂದ ಪ್ರಾರಂಭವಾಗಿ ಅತ್ಯಂತ ಉಗ್ರವಾದ ೩ನೇ ಯುದ್ಧವು ಆಗುವುದೆಂದು ಬೊಂಬಾಯಿನಲ್ಲಿ ಎಲ್. ಎಸ್. ರಾವ್ ಎಂಬೊಬ್ಬ ಯೋಗಿಯು ಭವಿಷ್ಯ ಹೇಳಿರುವನು.

ಕೊರಿಯಾ ಯುದ್ಧವು ಇನ್ನೊಂದು ತಿಂಗಳೊಳಗಾಗಿ ಮುಕ್ತಾಯವಾಗುವುದೆಂದು ಆತನು ನುಡಿದಿರುವನು.

ರಣಜಿತ್
ದಿನವಹಿ ೩ ಆಟಗಳು
6-10-50 ಶುಕ್ರವಾರದಿಂದ
ಆಧಿರಾತ್ Adhi Raat
(ಹಿಂದಿ)
ಪಾತ್ರ: † ಅಶೋಕ ಕುಮಾರ್
† ನರ್ಗಿಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೭—೧೦—೧೯೫೦ ನೇ ಶನಿವಾರ [ಸಂಚಿಕೆ ೪೫

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಅರ್ಕಾಟ್ ಶ್ರೀನಿವಾಸಾಚಾರ್ ಸ್ಟ್ರೀ.
ಬೆಂಗಳೂರು-2

ಕಾಂಗ್ರೆಸಿಗರಲ್ಲಿ ಐಕಮತ್ಯ ಅಗತ್ಯ

ಆಡಳಿತ ಜವಾಬ್ದಾರಿ ವಹಿಸಲು ಕಾಂಗ್ರೆಸ್ಸಿಗರು ಐಕಮತ್ಯದಿಂದ ವರ್ತಿಸಬೇಕೆಂದು ಉಪಪ್ರಧಾನಿ ಸ॥ ಪಟೇಲರು ನಿನ್ನೆ ಹೈದರಾಬಾದ್ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

ಹೈದರಾಬಾದಿನ ಆಡಳಿತವನ್ನು ಸಂಸ್ಥಾನದ ಜನರಿಗೆ ವಹಿಸಿಕೊಡಲು ಕೇಂದ್ರ ಸರ್ಕಾರ ಆಶಿಸುತ್ತಿದೆ. ಆದರೆ ಸಂಸ್ಥಾನದ ಕಾಂಗ್ರೆಸ್ ಪಕ್ಷದಲ್ಲಿ ಒಗ್ಗಟ್ಟಿದ್ದರೆ ಮಾತ್ರ ಈ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದೆಂದು ಅವರು ಹೇಳಿರುವರು.

ಮೈಸೂರು ಪೌರಸಭೆ

ನಿನ್ನೆ ಸಂಜೆ ಮೈಸೂರು ಪೌರಸಭೆಯು ಚುನಾವಣಾ ಕ್ಷೇತ್ರ ವಿಸ್ತರಣೆಯ ವಿಚಾರ ನಿರ್ಣಯಿಸಲು ಸಭೆಸೇರಿ, (ಡಿಲಿಮಿಟೇಷನ್ ಆಫ್ ಕಾಂಸ್ಟಿಟ್ಯೂಯೆನ್ಸೀಸ್) ಈ ಕೆಳಗೆ ಕಂಡ ನಿರ್ಣಯಗಳನ್ನು ಮಾಡಿತು.

೧ ಭಾರತ ಕೇಂದ್ರ ಪಾರ್ಲಿಮೆಂಟಿಗೂ ಮತ್ತು ಮೈಸೂರು ಶಾಸನ ಸಭೆಗೂ ಮೈಸೂರು ನಗರವನ್ನು ಏಕ ಪ್ರತಿನಿಧಿ ಚುನಾವಣಾ ಕ್ಷೇತ್ರವೆಂದು ಪರಿಗಣಿಸಬೇಕು.

೨ ಓಟರುಗಳು ತಮ್ಮ ಓಟನ್ನು ಕೊಡಲು ಬಣ್ಣದ ಓಟು ಪೆಟ್ಟಿಗೆಗಳನ್ನಿಡಬೇಕು.

೩ ಮೈಸೂರು ನಗರವನ್ನು ಮೈಸೂರು ಡಿಸ್ಟ್ರಿಕ್ಟಿನ ಸೂಕ್ತ ಭಾಗದೊಂದಿಗೆ ಸೇರಿಸಿ ಏಕ ಪ್ರತಿನಿಧಿ ಚುನಾವಣಾ ಕ್ಷೇತ್ರವೆಂದು ಪರಿಗಣಿಸಬೇಕು.

೪. ಚುನಾವಣೆಯು ಆದಷ್ಟು ಜಾಗ್ರತೆಯಾಗಿ ನಡೆಯಬೇಕು.

೫. ಈಗ ರೇಷನ್ ಕಾರ್ಡು ಸಂಖ್ಯೆಗನುಸಾರವಾಗಿ ಮೈಸೂರು ಜನಸಂಖ್ಯೆಯು ೨,೨೦,೦೦೦ ಇರುವುದರಿಂದ, ಮೈಸೂರು ಶಾಸನ ಸಭೆಗೆ ನಗರದಿಂದ ೩ ಪ್ರತಿನಿಧಿಗಳನ್ನು ಚುನಾಯಿಸಲು ಅವಕಾಶ ಕೊಡಬೇಕು

೬. ರೀಜನಲ್ ಚುನಾವಣಾ ಕ್ಷೇತ್ರ ವಿಸ್ತರಣಾ ಸಮಿತಿಯನ್ನು ಪೌರಸಭೆಯವರು ಸಂಧಿಸಿ ಅದರೊಂದಿಗೆ ಚರ್ಚೆನಡೆಸಲು ಅವಕಾಶ ಕೊಡಬೇಕು.

೨ ಮತ್ತು ೩ನೇ ನಿರ್ಣಯಗಳಲ್ಲಿ ಬದಲಾವಣೆಯನ್ನು ಸೂಚಿಸಿ ಶ್ರೀಗಳಾದ ನಿಸಾರ್‌ನೂರ್ ಹುಸೇನ್ ಮತ್ತು ಎ. ವೆಂಕಟೇಶಯ್ಯ ನವರು ತಂದ ಅಮೆಂಡ್‌ಮೆಂಟನ್ನು ಅಧ್ಯಕ್ಷರು ತಳ್ಳಿಹಾಕಿದುದರಿಂದ ಪ್ರಜಾ ಸಂಘದ ಸದಸ್ಯರೆಲ್ಲರೂ ಸಭಾ ಪರಿತ್ಯಾಗ ಮಾಡಿ ತಮ್ಮ ವಿರೋಧವನ್ನು ಸೂಚಿಸಿದರು

ಪೋಸ್ಟಲ್ ಕೆಲಸಗಾರರ ಸಮ್ಮೇಳನ

ಅಖಿಲ ಭಾರತ ಪೋಸ್ಟಲ್ ಕೆಲಸಗಾರರ ಸಮ್ಮೇಳನವು ಇದೇ ಮಾಹೆ ೮ನೇ ತಾರೀಖು ಅಂಬಾಲಾದಲ್ಲಿ ಸೇರುವುದು. ಕೇಂದ್ರ ಮಂತ್ರಿ ಮಿ॥ ರಫಿ ಅಹಮ್ಮದ್ ಕಿದ್ವಾಯ್‌ರವರು ಆರಂಭೋತ್ಸವ ನಡೆಸುವರು.

ವಿಮಾನ ಕಾರ್ಮಿಕರ ಸಭೆ

ನರಹರಿರಾಯರ ಗುಡ್ಡದಲ್ಲಿ ಇಂದು ಮಧ್ಯಾಹ್ನ ೪ ಘಂಟೆಗೆ ವಿಮಾನಕಾರ್ಖಾನೆ ಕೆಲಸಗಾರರ ಸಭೆ ನಡೆಯಲಿದೆ.

ತಾರಾಸಿಂಗರ ವಿಚಾರಣೆಗೆ ತಡೆ

ಮಾಸ್ಟರ್ ತಾರಾಸಿಂಗರ ಮೇಲಿನ ಎರಡು ಮೊಕದ್ದಮೆಗಳ ವಿಚಾರಣೆಯನ್ನು ತಡೆದಿಡಬೇಕೆಂದು ಪಂಜಾಬ್ ಹೈಕೋರ್ಟು ಆಜ್ಞೆಮಾಡಿದೆ

ಅಸ್ಸಾಂ ಭೂಕಂಪನಿಧಿಗೆ

ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ
ಆಸ್ಸಾಂ ಭೂಕಂಪನಿಧಿ ಸಮಿತಿ
ಮುನಿಸಿಪಲ್ ಆಫೀಸ್, ಮೈಸೂರು.

● ಶಿವಮೊಗ್ಗಾ ಸೆಲ್ಸ್‌ಟ್ಯಾಕ್ಸ್ ಆಫೀಸರಾಗಿರುವ ಶ್ರೀ ಎಂ. ವೆಂಕಟಗಿರಿ ಶೆಟ್ಟಿಯವರಿಗೆ ರಿಟೈರಾಗುವ ಮುನ್ನ ೫೦ ಡಿಸೆಂಬರ್ ೧೪ರವರೆಗೆ ರಜಾ ಮಂಜೂರ್ಮಾಡಲಾಗಿದೆ

○ ಭಾರತಾದ್ಯಂತ ಪ್ರತಿಯೊಂದು ರೈಲ್ವೆಯ ಕೇಂದ್ರ ಸ್ಥಳಗಳಲ್ಲಿ ಭಾರತ ರೈಲ್ವೆ ಮಿನಿಸ್ಟ್ರಿಯು ಒಂದೊಂದು ಸಲಹಾ ಸಮಿತಿಯನ್ನು ನೇಮಿಸುವುದೆಂದು ತಿಳಿಯಬರುತ್ತದೆ ರೈಲ್ವೆಯ ಕೆಲಸಕಾರ್ಯಗಳನ್ನು ಉತ್ತಮಗೊಳಿಸಲು ರೈಲ್ವೆ ನೌಕರರಿಂದ ಮತ್ತು ಸಾರ್ವಜನಿಕರಿಂದ ಬರುವ ಸಲಹೆಗಳನ್ನು ಪರಿಶೀಲಿಸುವುದೇ ಈ ಸಮಿತಿಗಳ ರಚನೆಗಳ ಮುಖ್ಯೋದ್ದೇಶ.

● ಕೆಲಸ ಮಾಡಲು ಯೋಗ್ಯವಾದ ಪಶುಗಳನ್ನು ಕೊಂದು, ದೇಶದ ಪಶುಸಂಪತ್ತು ಹಾಳಾಗುತ್ತಲಿರುವುದನ್ನು ತಪ್ಪಿಸಲು ಪಾಕಿಸ್ಥಾನ ಸರ್ಕಾರವು ಹೊಸದಾದ ಒಂದು ಕಾನೂನನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದೆ.

ಸರ್. ಎಂ. ವಿ. ಯವರು ಮೈಸೂರಿಗೆ?

ಮೈಸೂರು ಪೌರಸಭೆಯವರು ಸರ್. ಎಂ. ವಿ. ಯವರಿಗೆ ಮಾನಪತ್ರವನ್ನು ಸಮರ್ಪಿಸಲು ಆಹ್ವಾನಿಸಿದುದಕ್ಕೆ ಈ ತಿಂಗಳಿನಲ್ಲಿ ದೇಹಾಲಸ್ಯ ನಿಮಿತ್ತ ಬರಲು ಸಾಧ್ಯವಾಗುವುದಿಲ್ಲವೆಂದೂ, ಮತ್ತು ಆಹ್ವಾನಿಸಿದುದಕ್ಕೆ ವಂದನೆಯನ್ನು ಸೂಚಿಸಿ ಉತ್ತರ ಬರೆದಿದ್ದಾರೆಂದು ತಿಳಿಯಬರುತ್ತದೆ.

ಕಾರ್ಮಿಕರಿಗೆ ಸಚಿವರ ಭರವಸೆ

ವಿಮಾನ ಕಾರ್ಖಾನೆ ಕೆಲಸಗಾರರು ಕೂಡಲೇ ಕೆಲಸಕ್ಕೆ ಹಿಂತಿರುಗಿದಲ್ಲಿ ಮ್ಯಾನೇಜ್‌ಮೆಂಟಿನವರು ಅವರ ಬಗ್ಗೆ ನ್ಯಾಯವಾಗಿ ಮತ್ತು ಉದಾರ ರೀತಿಯಲ್ಲಿ ವರ್ತಿಸುವರೆಂದು ಆರ್ಥಿಕ ಸಚಿವರೂ ಕಾರ್ಖಾನೆಯ ಉಪಾಧ್ಯಕ್ಷರೂ ಆದ ಶ್ರೀ ಎಚ್. ಸಿ. ದಾಸಪ್ಪನವರು ನಿನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ತಿಳಿಸಿದರು.

ಕಾರ್ಮಿಕರು ಇಷ್ಟುದಿನ ಬಿಟ್ಟಿದ್ದಕ್ಕೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲವೆಂದೂ ಅವರು ತಿಳಿಸಿದರು ಕೆಲಸಗಾರರು ಕೆಲಸಕ್ಕೆ ಹಿಂತಿರುಗಲು ಯಾವ ಷರತ್ತುಗಳನ್ನೂ ಹಾಕುವುದಿಲ್ಲವೆಂದೂ ಶ್ರೀ ದಾಸಪ್ಪನವರು ಹೇಳಿದರು. ಇಂದು ೨,೩೦೦ ಜನ ಕಾರ್ಮಿಕರು ಕೆಲಸಕ್ಕೆ ಬಂದಿದ್ದರೆಂದೂ ತಿಳಿಸಿದರು.

ಮೈಸೂರಿಗೆ ಶ್ರೀ ಮುನ್ಷಿಯವರು

ಈ ತಿಂಗಳು ೩ನೇ ವಾರದಲ್ಲಿ ಮೈಸೂರಿನಲ್ಲಿ ನಡೆಯಲಿರುವ ಆಹಾರ ಸಂಶೋಧನಾ ಸಂಸ್ಥೆಯ ಪ್ರಾರಂಭೋತ್ಸವಕ್ಕೆ ಶ್ರೀ ರಾಜಾಜಿ, ಪಂ॥ ನೆಹರೂರವರೊಡನೆ ಕೈಗಾರಿಕಾ ಸಚಿವ ಶ್ರೀ ಹರೇಕೃಷ್ಣ ಮೆಹತಾಬ್ ಮತ್ತು ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿಯವರೂ ಬರಲಿದ್ದಾರೆ.

ಅಸ್ಸಾಂ ಭೂಕಂಪ ಪರಿಹಾರನಿಧಿ

ಮುಖ್ಯಮಂತ್ರಿಗಳ ಅಸ್ಸಾಂ ಭೂಕಂಪ ಪರಿಹಾರನಿಧಿಗೆ ಇದುವರೆಗೆ ೧,೮೪,೪೫೭ ರೂ ಕೂಡಿವೆಯೆಂದು ಇಂದಿನ ಅಧಿಕೃತ ಪ್ರಕಟಣೆ. ಮೈಸೂರು ಸಕ್ಕರೆ ಕಂಪೆನಿಯ ಕೆಲಸಗಾರರ ಸಂಘದವರು ನಿಧಿಗೆ ೧೦೧ ರೂ. ಗಳನ್ನು ಕೊಟ್ಟಿರುತ್ತಾರೆ.

● ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಶ್ರೀ ಲೋಕಸೇವಾನಿರತ ವಿ. ನಾರಾಯಣರಾವ್ ಮತ್ತು ಮೆಸರ್ಸ್ ಕೆ. ತಮ್ಮಣ್ಣ ಗೌಡ ಅಂಡ್ ಬ್ರದರ್ಸ್ ರವರು ತಲಾ ೧೦೧ರೂ. ಗಳನ್ನು ದಾನಮಾಡಿದ್ದಾರೆ

★ ಸಿರ್ಹೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★

ಅಸ್ಸಾಂನಿಧಿಗೆ ಕಾಣಿಕೆ

ಅಸ್ಸಾಂನಿಧಿಗೆ ಹೈದರಾಬಾದ್ ನಿಜಾಮರು ೫ ಲಕ್ಷ ರೂ. ಗಳನ್ನು ಕೊಟ್ಟಿರುತ್ತಾರೆ

ಕೆಲಸಕ್ಕೆ ಹಿಂದುರಿಗಿ

ಬೆಂಗಳೂರು ವಿಮಾನಕಾರ್ಖಾನೆ ಕೆಲಸಗಾರರಲ್ಲಿ ಶ್ರೀ ತಾಳಕೆರೆ ಸುಬ್ರಹ್ಮಣ್ಯಂರವರು ಒಂದು ಪ್ರಾರ್ಥನೆ ಹೊರಡಿಸಿ ಕೆಲಸಗಾರರೆಲ್ಲರೂ ಕೆಲಸದ ಮೇಲೆ ಹಿಂತಿರುಗಿ ಎಂದು ಕೇಳಿಕೊಂಡಿದ್ದಾರೆ.

ಇಂಜನಿಯರುಗಳ ವರ್ಗ

ಈ ಕೆಳಕಂಡ ಅ|| ಇಂಜನಿಯರುಗಳ ವರ್ಗಾ[illegible] [illegible]ದಲ್ಲಿರುವ ಶ್ರೀ ಎಂ. ಎಸ್. ಬಸವಾರಾಧ್ಯರವರು ಮೈಸೂರು ಬಿಲ್ಡಿಂಗ್ ಡಿವಿಜನ್, ಬಿಲ್ಡಿಂಗ್ ಡಿವಿಜನ್ನಿನಲ್ಲಿರುವ ಶ್ರೀ ಕೆ. ವಿ. ರಾಜರತ್ನಂ ರವರನ್ನು ಹೆಗ್ಗಡದೇವನಕೋಟೆ ಸಬ್‌ಡಿವಿಜನ್, ರಜಾದಮೇಲಿರುವ ಶ್ರೀ ಎ. ಕೆ. ರಾಮಸ್ವಾಮಿಯವರನ್ನು ಶಿವಮೊಗ್ಗಾದಲ್ಲಿರುವ ಲಿಫ್ಟ್ ಇರಿಗೇಶನ್ ಸಬ್ ಡಿವಿಜನ್ನಿಗೆ.

ಮೈಸೂರಿಗೆ ನೂತನಲಾಂಛನ

ಕೇಂದ್ರ ಸರ್ಕಾರದ ಅನುಮತಿಯ ಮೇಲೆ ಮೈಸೂರು ಪ್ರಾಂತ್ಯಕ್ಕೆ ಪ್ರತ್ಯೇಕವಾದ ಲಾಂಛನವನ್ನು ಉಪಯೋಗಿಸಲಾಗಿಸಲಾಗುವುದು. ಈಗಿರುವ ಮೈಸೂರು ಕೋಟ್-ಆಫ್-ಆರಮ್ ಸ್ವಲ್ಪ ಬದಲಾಯಿಸಿ ಅದರಲ್ಲಿ ಅಶೋಕಸ್ತಂಭವೂ ಸೇರುವಂತೆ ಹೊಸಲಾಂಛನವಿರುವದು.

ಕಾಳಸಂತೆಕೋರರಿಗೆ ಜನ ಸಮ್ಮುಖದಲ್ಲಿ ಅಪಮಾನ

ಬಟ್ಟೆ ಮತ್ತು ನೂಲಿನ ಇಬ್ಬರು ಧನಿಕ ವ್ಯಾಪಾರಿಗಳನ್ನು ವಿಶೇಷ ಶಾಸನದ ವಿಧಿಯ ಪ್ರಕಾರ ಬಂಧಿಸಿ, ಕೈಗೆ ಕೋಳಗಳನ್ನು ತೊಡಿಸಿ ಬರಿ ಕಾಲಿನಲ್ಲಿ ದಾರಿಯುದ್ದಕ್ಕೂ ಮೆರವಣಿಗೆ ಮಾಡಿಸಿಕೊಂಡು ನಿನ್ನೆ ಕೋರ್ಟಿಗೆ ವಿಚಾರಣೆಗಾಗಿ ಹಾಜರುಪಡಿಸಲಾಯಿತು. ಪಾಟ್ನಾ ರಸ್ತೆ ಇಕ್ಕೆಲಗಳಲ್ಲಿಯೂ ಸಹಸ್ರಾವಧಿ ಜನರು ಜಾತ್ರೆ ಸೇರಿದ್ದು ಮೆರವಣಿಗೆಯನ್ನು ಕಂಡರು.

ಕೆಲ ದಿನಗಳ ಕೆಳಗೆ, ಅವರ ದಾಸ್ತಾನು ದಾಖಲೆಗಳಲ್ಲಿ ಹೆಚ್ಚು ಕಮ್ಮಿಗಳಿರುವದರ ಸಂಶಯದ ಮೇಲೆ ಪೋಲೀಸರು ಧಾಳಿ ನಡೆಸಿ ಅವರನ್ನು ಬಂಧಿಸಿದ್ದರು

ಇಂಥದೇ ಅಪಾದನೆಯ ಮೇಲೆ ಗಯಾ ನಗರದ ಇಬ್ಬರು ಧನಿಕ ವರ್ತಕರ ಬಂಧನವಾಗಿದೆ.

ಕಮ್ಯೂನಿಸ್ಟ್ ಚೀಣಾಕ್ಕೆ ಸ್ಥಾನ

ಪ್ರಪಂಚ ಸಂಸ್ಥೆಗೆ ಸೇರಲು ಕಮ್ಯೂನಿಸ್ಟ್ ಚೀಣಾ ಹೊಡೆದಾಡಲು ಅವಕಾಶಕೊಡುವುದಕ್ಕೆ ಬದಲು, ತಾವಾಗಿಯೇ ಅದಕ್ಕೆ ಪ್ರಪಂಚಸಂಸ್ಥೆಯಲ್ಲಿ ಸ್ಥಾನಕೊಡುವುದೊಳ್ಳೆಯದೆಂದು, ಬ್ರಿಟಿಷ್ ಲೇಬರ್‌ಪಕ್ಷದ ವಾರ್ಷಿಕಾಧಿವೇಶನದಲ್ಲಿ ಬ್ರಿಟಿಷ್ ವಿದೇಶಾಂಗ ಮಂತ್ರಿ ಮಿ|| ಬೆವಿನ್‌ರು ತಮ್ಮ ಭಾಷಣದಲ್ಲಿ ಹೇಳಿರುವರು.

ನೋಟುಗಳ ಮಾಯ

ಬೊಂಬಾಯಲ್ಲಿ ಎರಡು ಬ್ಯಾಂಕುಗಳಲ್ಲಿ ಈ ವಾರ ೧,೨೦,೦೦೦ ರೂ. ಗಳ ನೋಟುಗಳು ಮಾಯವಾಗಿರುವುದಾಗಿ ಪೋಲೀಸರಿಗೆ ದೂರು ಬಂದಿದೆ.

ಸಕ್ಕರೆ ಬೆಲ್ಲದ ಆಜ್ಞೆ

೧೯೫೦ನೇ ಸಕ್ಕರೆ ಬೆಲ್ಲದ ಹತೋಟಿ ಆಜ್ಞೆಯನ್ನು ಭಾರತ ಸರ್ಕಾರವು ಹೊರಡಿಸಿದೆ. ಭಾರತ ದೇಶದಾದ್ಯಂತ ಈ ಆಜ್ಞೆಯು ಜಾರಿಗೆ ಬಂದಿದೆ. ಸಕ್ಕರೆ, ಬೆಲ್ಲದ ತಯಾರಿಕೆ, ಹಂಚಿಕೆ, ಬೆಲೆ ಇವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕಾಗಿ ಈ ಆಜ್ಞೆ ಹೊರಟಿದೆ.

ಮೆಕಾರ್ಥರ್ ಚೀಣಾಸೈನ್ಯಗಳ ಘರ್ಷಣೆ

ಜನರಲ್ ಮೆಕಾರ್ಥರ ಸೈನ್ಯವು ೩೮ನೇ ಅಕ್ಷಾಂಶವನ್ನು ದಾಟಿದೊಡನೆಯೇ ಚೀಣಾ ಸೈನ್ಯಗಳಿಗೂ ಆ ಸೈನ್ಯಗಳಿಗೂ ಘರ್ಷಣೆ ನಡೆಯುವುದು ಖಂಡಿತವೆಂದು ಪೀಕಿಂಗ್‌ನಲ್ಲಿ ಸುದ್ದಿ ಹರಡಿದೆ ಚೈನಾ ಪ್ರಜಾ ಸರ್ಕಾರವು ಭಾಗವಹಿಸದೆ ವಿಶ್ವಸಂಸ್ಥೆಯಲ್ಲಿ ಯಾವ ನಿರ್ಧಾರವಾದರೂ ಅದಕ್ಕೆ ಚೀಣಾ ಸರ್ಕಾರವು ಅಂಗೀಕರಿಸುವುದಿಲ್ಲವೆಂದು ಹೇಳಲಾಗಿದೆ.

● ಎರಡನೇ ಮಹಾ ಯುದ್ಧದಲ್ಲಿ ಜಪಾನು ಭಾರತದ ಮೇಲಾನಾದರೂ ಆಕ್ರಮಣಮಾಡಿದ್ದರೆ, ಕರಾಚಿ ಮತ್ತು ಬೊಂಬಾಯಿ ಮಾರ್ಗವಾಗಿ ಬ್ರಿಟಿಷರು ಭಾರತವನ್ನು ಬಿಟ್ಟು ಓಡಿಹೋಗಲು ಸಿದ್ಧರಿದ್ದರೆಂದು ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರಿಗೆ ಸಿಮ್ಲಾದಲ್ಲಿರುವ ಇತಿಹಾಸಶಾಸ್ತ್ರಜ್ಞರಾದ ಡಾ|| ಬಿಷಂಭರ್ ಪ್ರಸಾದ್‌ರವರು ತಿಳಿಸಿದರು.

● ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾದ ಶ್ರೀ ಎಂ ಸಚ್ಚಿದಾನಂದಮೂರ್ತಿಯವರಿಗೆ ಉಪಯೋಗಿಸಿಕೊಳ್ಳುವ ದಿನದಿಂದ ಒಂದು ತಿಂಗಳು ರಜಾ ಕೊಡಲಾಗಿದೆ

● ಅಸಿಸ್ಟೆಂಟು ಕಮಿಷನರುಗಳ ವರ್ಗಾವರ್ಗಿ ರಜಾದಲ್ಲಿರುವ ಶ್ರೀ ಸಿ. ಎಸ್. ಶೇಷಾದ್ರಿಯವರು ಶಿವಮೊಗ್ಗಾ ಡೈವಲಪ್‌ಮೆಂಟ್ ಆಫೀಸರು, ಶಿವಮೊಗ್ಗಾ ಜಿಲ್ಲಾಧಿಕಾರಿಗಳ ಪರಸನಲ್ ಅಸಿಸ್ಟೆಂಟರಾಗಿರುವ ಶ್ರೀ ಎಂ. ನರಸಿಂಹಯ್ಯನವರನ್ನು ಶಿವಮೊಗ್ಗಾ ಸೇಲ್ಸ್‌ಟ್ಯಾಕ್ಸ್ ಆಫೀಸರಾಗಿ, ರಜದ ಮೇಲಿರುವ ಎಂ. ಸಿದ್ದಯ್ಯನವರನ್ನು ಮೈಸೂರು ಜಿಲ್ಲಾ ಟ್ರೆಷರಿ ಆಫೀಸರಾಗಿ ವರ್ಗ ಮಾಡಲಾಗಿದೆ.

● ಗೃಹಸಚಿವರ ಅಧ್ಯಕ್ಷತೆಯಲ್ಲಿ, ಆರೋಗ್ಯ, ಆಹಾರ, ವ್ಯವಸಾಯ, ವೈದ್ಯ ಇಲಾಖೆಗಳ ಮುಖ್ಯಾಧಿಕಾರಿಗಳು, ಆಹಾರಪರಿಶೋಧನಾಕೇಂದ್ರದ ಪ್ಲಾನಿಂಗ್ ಆಫೀಸರ್ ಡಾ|| ವಿ. ಸುಬ್ರಹ್ಮಣ್ಯಂ. ಬೆಂಗಳೂರಿನಲ್ಲಿರುವ ರಾಕ್‌ಫೆಲರ್ ಫೌಂಡೇಷನ್ನಿನ ಡಾ|| ಆರ್. ಕೆ. ಅಂಡರ್‌ಸನ್, ಡಾ|| ಕ್ಯಾಪ್ಟನ್, ಎಂ. ಎ. ನರಸಿಂಹಚಾರ್ ಆರೋಗ್ಯ ಇಲಾಖಾ ಡೈರೆಕ್ಟರನ್ನೊಳಗೊಂಡ ಕೇಂದ್ರ ಪುಷ್ಟಿಕರ ಆಹಾರಸಲಹೆ ಸಮಿತಿಯನ್ನು ಮೈಸೂರು ಸರ್ಕಾರವು ನೇಮಿಸಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಅಕ್ಟೋಬರ್ ೮ ಭಾನುವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಚಿತ್ರಸಂಗೀತ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಪಿಟೀಲು ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಗೀತೆಗಳು ೨-೩೦ ಮುಕ್ತಾಯ

ಸಂಜೆ ೫-೩೦ ಎ. ವಿ. ನಾರಾಯಣಪ್ಪ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ರಸನಿಮಿಷ ೭-೩೦ ಎ. ವಿ. ನಾರಾಯಣಪ್ಪ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಆರ್. ವರದರಾಜಯ್ಯಂಗಾರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಕನ್ನಡ ಕಥೆ ೧೦-೦ ಮುಕ್ತಾಯ.

ಅಕ್ಟೋಬರ್ ೯ ಸೋಮವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಗೀತಾಂಜಲಿ (ರಿ) ೭-೩೫ ಪಕ್ಷಿನೋಟ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಗೀತಾರ್ ೧-೪೫ ಹಿಂದೀ ಶಿಕ್ಷಣ ೨-೦ ನಾರಾಯಣ ರಾವ್ ವ್ಯಾಸ್ (ರಿ) ೨-೧೫ ವಾದ್ಯ [illegible] ೨-೩೦ ಮುಕ್ತಾಯ.

ಸಂಜೆ ೫-೩೦ ಡಿ. ರವೀಂದ್ರ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಭಾಷಣ ೭-೧೫ ಡಿ. ರವೀಂದ್ರ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಗಾನಸುಧಾ (ರಿ) ೮-೧೫ ಇಂಗ್ಲೀಷಿನಲ್ಲಿ ಭಾಷಣ ೮-೩೦ ಆರ್. ಕೆ. ಶ್ರೀಕಂಠನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಆರ್. ಕೆ. ಶ್ರೀಕಂಠನ್ (ಸಂಗೀತ) ೧೦-೦ ಮುಕ್ತಾಯ.

ರಣಜಿತ್
ದಿನವಹಿ ೩ ಆಟಗಳು
6-10-50 ಶುಕ್ರವಾರದಿಂದ
ಆಧಿರಾತ್ Adhi Raat
(ಹಿಂದಿ)
ಪಾತ್ರ: † ಅಶೋಕ ಕುಮಾರ್
† ನರ್ಗಿಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಹಿಂದುಗಳಿಗೆ ಪಾಕಿಸ್ಥಾನ ಯೋಗ್ಯ ಸ್ಥಳವಲ್ಲ

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೯—೧೦—೧೯೫೦ ನೇ ಸೋಮವಾರ [ಸಂಚಿಕೆ ೪೬

ಪಾಕಿಸ್ಥಾನದಿಂದ ಹಿಂದುಗಳನ್ನು ಓಡಿಸಬೇಕು ಅಥವಾ ಮತಾಂತರ ಮಾಡಬೇಕೆಂಬುದೇ ಪಾಕಿಸ್ಥಾನದ ಮುಖಂಡರ ಧೋರಣೆ.

ಪಾಕಿಸ್ಥಾನದ ನ್ಯಾಯಾಂಗ ಮತ್ತು ಕಾರ್ಮಿಕ ಸಚಿವ ಶ್ರೀ ಜೋಗೇಂದ್ರನಾಥ್ ಮಂಡಲ ರಾಜೀನಾಮೆ.

ಪಾಕಿಸ್ಥಾನದ ನ್ಯಾಯಾಂಗ ಮತ್ತು ಕಾರ್ಮಿಕ ಸಚಿವರಾದ ಅಲ್ಪಸಂಖ್ಯಾತರ ಗುಂಪಿಗೆಸೇರಿದ ಶ್ರೀ ಜೋಗೇಂದ್ರನಾಥ ಮಂಡಲರವರು ತಮ್ಮ ಹುದ್ದೆಗೆ ರಾಜೀನಾಮೆಯನ್ನಿತ್ತಿದ್ದಾರೆ. ರಾಜಿನಾಮೆ ಪತ್ರವನ್ನು ಪ್ರಧಾನಿ ಲಿಯಾಕತ್ ಅಲಿಖಾನ್‌ರವರಿಗೆ ಕಳುಹಿಸಿ ಅದರಲ್ಲಿ ತಮ್ಮ ರಾಜೀನಾಮೆಗೆ ಕಾರಣಗಳನ್ನು ವಿವರಿಸಿದ್ದಾರೆ.

ಮಿಲಿಟರಿ ಶಿಕ್ಷಣ

ದೇಶದ ಪ್ರಕೃತ ಪರಿಸ್ಥಿತಿಯಲ್ಲಿ ಯುದ್ಧ ಕೈಗಾರಿಕೆಗಳ ಸ್ಥಾಪನೆ ಮತ್ತು ಒಡನೆ ಮಿಲಿಟರಿ ಶಿಕ್ಷಣ ಅಗತ್ಯವೆಂದು ತಾ॥ ೮॥ ಹಿಂದೂ ಮಹಾಸಭೆಯ ಅಧ್ಯಕ್ಷ ಡಾ॥ ಎನ್. ಬಿ. ಖರೆಯವರು ಹೇಳಿರುವರು.

ಹೆಚ್ಚು ಆಹಾರ ಯೋಜನೆ

ಮೈಸೂರು ಸಂಸ್ಥಾನದಲ್ಲಿ ಆಹಾರಧಾನ್ಯಗಳ ಉತ್ಪತ್ತಿ ಹೆಚ್ಚಿಸುವುದಕ್ಕಾಗಿ, ಎರಡು ವರ್ಷ ಅವಧಿಯ ೩ ಕೋಟಿ ರೂಪಾಯಿಗಳ ಒಂದು ನೂತನ ಯೋಜನೆಯು ತಯಾರಾಗಿದೆ, ಮೈಸೂರು ಮಂಡ್ಯ ಜಿಲ್ಲೆಯ ೪ ಲಕ್ಷ ಎಕರೆ ಜಮೀನು ಸಾಗುವಳಿ ಮಾಡಲಾಗುವುದು.

ಲಿಯಾಖತಾಲಿಖಾನರಿಗೆ ಸ॥ ಪಟೇಲರ ಉತ್ತರ

ಪಾಕಿಸ್ಥಾನದವರು ಭಯಪಡಬೇಕಾದ್ದುದು ಭಾರತಕ್ಕೆ ಮಾತ್ರ ಎಂದು ಅಲ್ಲಿನ ಪ್ರಧಾನಿ ಹೇಳುತ್ತಿದ್ದಾರೆ. ಪಾಕಿಸ್ಥಾನದ ಆಶೆ ಆಕಾಂಕ್ಷೆಗಳೇನೆಂಬುದು ಸ್ಪಷ್ಟವಾಗುವವರೆಗೆ, ಭಾರತ ಸರ್ಕಾರ ರಕ್ಷಣೆಗಾಗಿ ಕೋಟಿಗಟ್ಟಲೆ ವೆಚ್ಚಮಾಡಬೇಕಾದದ್ದು ಅನಿವಾರ್ಯ. ಆ ರೀತಿ ನಾವು ಮಾಡದಿದ್ದಲ್ಲಿ ಭಾರತದ ಜನತೆಯ ಎದುರಿನಲ್ಲಿ, ದೇವರೆದುರಿನಲ್ಲಿ ನಾವು ಹೊಣೆಯಾಗಬೇಕಾದೀತು.

ಪಾಕಿಸ್ಥಾನದ ಶತ್ರುಗಳಾಗಿರಲು ನಮಗೇ ಇಷ್ಟವಿಲ್ಲ. ಆದರೆ ಅವರು ನಮ್ಮನ್ನು ಶತ್ರುಗಳೆಂದು ಕರೆಯುವಾಗ ನಾವು ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದಕ್ಕೆ ತಕ್ಕಂತೆ ನಮ್ಮ ನೀತಿಗಳನ್ನು ರೂಪಿಸಿಕೊಂಡು ನಮ್ಮ ಎಚ್ಚರಿಕೆಯಲ್ಲಿ ನಾವಿರಬೇಕಾಗುತ್ತದೆ, ಎಂದು ಉಪಪ್ರಧಾನಿ ಸರ್ದಾರ್ ಪಟೇಲರು ಹೈದರಾಬಾದ್ ಸಾರ್ವಜನಿಕ ಸಭೆಯಲ್ಲಿ ತಿಳಿಸಿದರು

ಬೊಂಬಾಯಿ ಪೌರಸಭೆ ಟ್ರಾಂ, ಬಸ್ ಕಾರ್ಮಿಕರ ಮುಷ್ಕರ

ಮೊನ್ನೆ 'ಮುಷ್ಕರ' ಹೂಡಿದ ೨೦೦೦ ಕೆಲಸಗಾರರಿಗೆ ಸಹಾನುಭೂತಿ ತೋರಿಸಲು ನಿನ್ನೆ ಪೌರಸಭೆಗೆ ಸೇರಿದ ಟ್ರಾಂ ಮತ್ತು ಬಸ್ ಕಾರ್ಮಿಕರು ಮಧ್ಯಾಹ್ನ ೩ ಗಂಟೆವರೆಗೆ ಮುಷ್ಕರ ನಡೆಸಿದರು.

ಮುಷ್ಕರ ಮುಂದುವರಿಯಲು ಕಾಂಗ್ರೆಸ್ಸೇ ಕಾರಣ

"೫೦ನೇ ದಿನಕ್ಕೆ ಕಾಲಿಟ್ಟಿರುವ ಬೊಂಬಾಯಿ ಕಾರ್ಮಿಕರ ಮಹಾಮುಷ್ಕರ ಮುಂದುವರಿಯುತ್ತಿರುವುದಕ್ಕೆ ಕಾಂಗ್ರೆಸ್ ಪಕ್ಷವೇ ಹೊಣೆ. ಸೋಷಿಯಲಿಸ್ಟ್ ತತ್ವದ ರೀತ್ಯಾ ಏರ್ಪಡುವ ಜನತಾ ಕ್ಷೇಮಸಾಧನಾ ರಾಷ್ಟ್ರದಲ್ಲಿ ಮಾತ್ರ ಕೈಗಾರಿಕಾ ಶಾಂತಿ ಇರಲು ಸಾಧ್ಯ. ಕಾಂಗ್ರೆಸ್ಸು ಈ ರೀತಿ ಇರುವವರೆಗೆ ಕಾರ್ಯಗತವಾಗದು.

"ಪಟೇಲರು ಬೇರೆ, ನೆಹರೂ ಬೇರೆ ಎಂದು ಭಾವಿಸುವುದು ತಪ್ಪು; ಅವರಿಬ್ಬರೂ ಸೇರಿ ಕಾಂಗ್ರೆಸ್ ಆಗಿದೆ. ಅದೇ ಇಂದಿನ ಕಾರ್ಮಿಕ ದುಸ್ಥಿತಿಗೆ ಹೊಣೆ. ಅವರೀರ್ವರೂ, ಅವರ ಪಕ್ಷದವರೂ ಈಗಿನ ವಿದ್ಯಮಾನಗಳಿಗೆಲ್ಲಾ ಜವಾಬ್ದಾರರು" ಎಂದು ಸೋಷಲಿಸ್ಟ್ ಪ್ರಮುಖ ಶ್ರೀ ರಾಮಮನೋಹರ ಲೋಹಿಯರವರು ಕಾರ್ಮಿಕರ ಬಹಿರಂಗ ಸಭೆಯಲ್ಲಿ ಹೇಳಿದರು.

ಸಿಡಿಲಿನಿಂದ ಮರಣ

ಚಿತ್ರದುರ್ಗದ ರೈಲ್ವೆ ನಿಲ್ದಾಣಕ್ಕೆ ಹೋಗುವ ದಾರಿಗೆ ಸಮೀಪವಾದ ಒಂದು ಹೊಲದಲ್ಲಿ ಕೆಲಸಮಾಡುತ್ತಿದ್ದ ಒಬ್ಬನು ನಿನ್ನೆ ಸಾಯಂಕಾಲ ಅಕಸ್ಮಾತ್ತಾಗಿ ಉಂಟಾದ ಸಿಡಿಲಿನ ಅಪಘಾತದಿಂದ ದೈವಾಧೀನನಾದನು.

ಎಚ್ಚರಿಕೆ

ಪಟ್ಟಣದ ವ್ಯಾಪಾರಿಗಳು ಹೊರ ಪ್ರದೇಶಗಳಿಂದ ತೂಕದ ಬಟ್ಟೆಗಳನ್ನು ತರಿಸಿ ಸರ್ಕಾರದಲ್ಲಿ ತಯಾರಾದ ಬಟ್ಟೆಗಳಿಗಿಂತ ರಿಯಾಯತಿದರದಲ್ಲಿ ಮಾರುತ್ತಿರುವುದಾಗಿ ತಿಳಿಯಬಂದಿದೆ. ಸರ್ಕಾರದ ಗಂಡಭೇರುಂಡ ಮುದ್ರೆಯಿಲ್ಲದೇ ಇರುವ ಬಟ್ಟೆಗಳನ್ನು ಮಾರುವುದು ಮತ್ತು ಹೊಂದಿರುವುದು ಕಾನೂನಿಗೆ ವಿರೋಧವಾಗಿರುವುದರಿಂದ ಯಾರೂ ಸಹ ಇಂಥಹ ಬಟ್ಟೆಗಳನ್ನು ಕೊಂಡು ಉಪಯೋಗಿಸಬಾರದೆಂದು ತೂಕ ಮತ್ತು ಅಳತೆಯ ಇಲಾಖೆಯು ಒಂದು ಪ್ರಕಟಣೆ ಹೊರಡಿಸಿದೆ.

ಮುಸ್ಲಿಂ ಲೀಗ್ ಅಧ್ಯಕ್ಷರು

ಪಾಕಿಸ್ಥಾನ್ ಮುಸ್ಲಿಂ ಲೀಗಿನ ಅಧ್ಯಕ್ಷರಾಗಿ ಅಲ್ಲಿನ ಪ್ರಧಾನಿ ಜನಾಬ್ ಲಿಯಾಖತ್ ಅಲಿಖಾನ್‌ರವರನ್ನು ಸರ್ವಾನುಮತದಿಂದ ಚುನಾಯಿಸಲಾಗಿದೆ.

ಹಿಂದೂಗಳ ವಿಷಯವಾಗಿ ಪಾಕಿಸ್ಥಾನವು ತೋರಿಸುತ್ತಲಿರುವ ಧೋರಣೆಯನ್ನು ಪ್ರತಿಭಟಿಸಿ ತಮ್ಮ ರಾಜೀನಾಮೆ ಸಲ್ಲಿಸಿರುವುದಾಗಿ ಅವರು ತಿಳಿಸಿರುವರು. ಈ ಧೋರಣೆಯಿಂದ ಪಾಕಿಸ್ಥಾನದಲ್ಲಿ ಹಿಂದೂಗಳ ನಾಶವು ಸಂಪೂರ್ಣವಾಗಿ ಆಗುವುದೆಂಬ ಭೀತಿ ತಮಗಿದೆ. ಇಸ್ಲಾಂ ಮತ ಪ್ರಭುತ್ವ ತತ್ವವು ಮಾನವ ಸಮಾಜಕ್ಕೇ ಹಾನಿಕರವಾದುದು. ಈ ತತ್ವದಂತೆ ಪಾಕಿಸ್ಥಾನದಲ್ಲಿರುವ ಹಿಂದುಗಳು ಕೂಡಲೇ ಮತಾಂತರರಾಗಿ ಮುಸ್ಲೀಮರಾಗಬೇಕು. ಇಲ್ಲವಾದರೆ ಪಾಕಿಸ್ಥಾನ ಬಿಟ್ಟು ಓಡಬೇಕು. ಈ ಧ್ಯೇಯದಿಂದಲೇ ಪಾಕಿಸ್ಥಾನವು ಕೆಲಸಮಾಡುಲಿದೆ. ಆದರಲ್ಲೂ ಪೂರ್ವ ಪಾಕೀಸ್ಥಾನದಲ್ಲಿರುವ ಅಸಂಖ್ಯಾತರಾದ ಹಿಂದೂಗಳ ಸ್ಥಿತಿ ದಿನದಿನವೂ ಅಧೋಗತಿಗಿಳಿಯುತ್ತಲಿದೆ. ಭಾರತ ವಿರುದ್ಧವಾಗಿ ಪಾಕಿಸ್ಥಾನ ಇಂದಿನ ನೀತಿ ಮತ್ತು ಕುತಂತ್ರವನ್ನು ತಾವು ಪ್ರತಿಭಟಿ ರಾಜೀನಾಮೆ ಯಿತ್ತಿರುವುದಾಗಿ ತಿಳಿಸಿರುವರು.

ಕಾಶ್ಮೀರದಲ್ಲಿ ಪ್ಲೆಬಿಸೈಟ್

ಸಾಧ್ಯವಾದಷ್ಟು ಬೇಗ ಕಾಶ್ಮೀರದಲ್ಲಿ ಸ್ವತಂ ಮತ್ತು ನಿಷ್ಪಕ್ಷಪಾತ ಪ್ಲೆಬಿಸೈಟ್ ನಡೆಸಬೇಕೆಂದು ಪಾಕಿಸ್ಥಾನ್ ಮುಸ್ಲಿಂ ಲೀಗ್ ಕಾರ್ಯ ನಿರ್ವಾಹಕ ಸಮಿ ಈ ದಿನ ಸೆಕ್ಯೂರಿಟಿ ಕೌನ್ಸಿಲಿಗೆ ಸೂಚಿಸಿದೆ. ಅಲ್ಲ ಇನ್ನೊಂದು ನಿರ್ಣಯಮಾಡಿ, ಕಾಶ್ಮೀರವನ್ನು ಸ್ವತಂಗೊಳಿಸುವುದಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧರಾರತಕ್ಕದ್ದೆಂದು ಪಾಕಿಸ್ಥಾನಿಗಳಿಗೆ ಕರೆಕೊಟ್ಟಿದೆ. ಸಭೆಯಲ್ಲಿ ಪಾಕಿಸ್ಥಾನದ ಪ್ರಧಾನಿ ಲಿಯಾಖತರು ಭಾಗವಹಿಸಿದ್ದರು.

● ಪೂ॥ ಬಂಗಾಳದ ಗಡಿಹಳ್ಳಿ ಅತುಲಾಪುರಕ್ಕೆ ಆಕ್ಟೋಬರ್ ೫ ರಂದು ಮೂವರು ಪಾಕಿಸ್ಥಾನಿ ಪೋಲೀಸ ಅತಿಕ್ರಮ ಪ್ರವೇಶಮಾಡಿ ಅಲ್ಲಿದ್ದ ಸಣಬಿನ ದಾಸನನ್ನು ಅಪಹರಿಸಿಕೊಂಡು ಹೋದರೆಂದು ಹೇಳಲಾಗಿ

ಅಸ್ಸಾಂ ಪರಿಹಾರನಿಧಿಗೆ

ಮೈಸೂರು ಇಟ್ಟಿಗೆಗೂಡು ಮಹಾಜನರ ಪರವಾ ಶ್ರೀ ಪುರಸಭಾಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವ ಅಸ್ಸಾಂ ಪರಿಹಾರನಿಧಿಯ ಖಜಾಂಚಿಗಳಾದ ಶ್ರೀ ನರಸಿಂಹ ಮೂರ್ತಿಯವರಿಗೆ, ಇದುವರೆಗೆ ವಸೂಲಾ ರೂ. ೧,೧೭೫-೯-೦ ಯನ್ನು ಕೊಟ್ಟರು..

★ ಸಿರ್ಥೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★
೬

ಬೊಂಬಾಯಿ ಮುಷ್ಕರ ಪರಿಸ್ಥಿತಿ

ಬೊಂಬಾಯಿನಲ್ಲಿ ಈಗ ೨೬ ಗಿರಣಿಗಳು ಕೆಲಸಮಾಡುತ್ತಲಿವೆ. ಅವುಗಳಲ್ಲಿ ೧೩ ಪೂರ್ತಿ ಕೆಲಸಮಾಡುತ್ತಲಿವೆ. ಒಟ್ಟು ೨೭,೫೦೦ ಕಾರ್ಮಿಕರು ಕೆಲಸದಲ್ಲಿ ತೊಡಗಿರುವರು.

ರಷ್ಯನರ ಕೈವಾಡವಿಲ್ಲ

ಕೊರಿಯಾ ಯುದ್ಧದಲ್ಲಿ ರಷ್ಯನರು ಪ್ರಮುಖಪಾತ್ರವನ್ನು ವಹಿಸಿರುವುದಕ್ಕೆ ಸಾಕಷ್ಟು ನಿರ್ಧಾರ ದೊರೆತಿಲ್ಲವೆಂದು ಅಮೆರಿಕನ್ ಅಧಿಕಾರಿಗಳು ತಿಳಿಸಿರುತ್ತಾರೆ. ಇಲ್ಲಿಯವರೆಗೆ ಕೈಸೆರೆ ಹಿಡಿದಿರುವ ಕೊರಿಯಾ ಸೈನಿಕರಲ್ಲಿ ಒಬ್ಬ ರಷ್ಯನನೂ ಪತ್ತೆಯಾಗಿಲ್ಲವೆಂದು ವರದಿಯಾಗಿದೆ.

ಸರಿಸಮಾನತೆ

ಭಾರತಕ್ಕೆ ಐಕ್ಯವಾಗಿರುವ ಎಲ್ಲಾ ಸಂಸ್ಥಾನಗಳಲ್ಲೂ, ಅಂಚೆ ಮತ್ತು ತಂತಿ ಇಲಾಖಾ ನೌಕರುಗಳಿಗೆ ಭಾರತದ ಇತರ ಭಾಗಗಳಲ್ಲಿ ಕೊಡುತ್ತಲಿರುವಂತೆಯೇ ಸಮನಾದ ಸಂಬಳಗಳನ್ನು ೧೯೫೧ನೇ ಏಪ್ರೆಲ್‌ನಿಂದ ಕೊಡಲಾಗುವುದೆಂದು ಅಂಚೆ ಮತ್ತು ತಂತಿ ಇಲಾಖಾ ಮಂತ್ರಿ ಮಿ॥ ಕಿದ್ವಾಯಿಯವರು ಹೇಳಿರುವರು.

೩೮ನೇ ಅಕ್ಷಾಂಶ ದಾಟಲು ಆಜ್ಞೆ

ಉತ್ತರಕೊರಿಯಾ ಪಡೆಗಳನ್ನು ಅಟ್ಟಿಕೊಂಡು ಹೋಗಲು ೩೮ನೆಯ ಅಕ್ಷಾಂಶವನ್ನು ‘ ಹಾದು ನುಗ್ಗಲು ’ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು ಜನರಲ್ ಮೆಕಾರ್ಥರಿಗೆ ಆದೇಶವಿತ್ತಿದೆ. ಈಗಾಗಲೇ ಮೆಕಾರ್ಥರ ಸೈನ್ಯಗಳು ಮುನ್ನುಗ್ಗಿ ಹೋಗುತ್ತಲಿವೆ. ಉತ್ತರಕೊರಿಯಾ ಪಡೆಗಳ ಪ್ರತಿಭಟನೆಯೇನೂ ಕಂಡುಬಂದಿಲ್ಲ. ಕೂಡಲೇ ಶರಣಾಗತರಾಗಿ ಎಂದು ಪುನಃ ಮೆಕಾರ್ಥರ್ ಉತ್ತರಕೊರಿಯನ್ನರಿಗೆ ತಿಳಿಸಿದ್ದಾರೆ.

ಕ್ರೂರ ಪ್ರಯೋಗ

ದೇಶದಲ್ಲಿ ಲಾಭಕೋರತನವನ್ನು ನಿರ್ಮೂಲನಮಾಡಲು ರಚಿತವಾಗಿರುವ ಕಾನೂನುಗಳನ್ನು ವಿರೋಧಿಸುವವರೆಲ್ಲರನ್ನು ಬಂಧನದಲ್ಲಿಡುವ ವಿಷಯದಲ್ಲಿ ಕೇಂದ್ರ ಸರ್ಕಾರದ ವಿಶೇಷಾಜ್ಞೆಯನ್ನು ಕ್ರೂರವಾಗಿ ಪ್ರಯೋಗಿಸಲು ಪರ್ಯಾಲೋಚನೆ ನಡೆಯುತ್ತಲಿದೆಯೆಂದು ಮದರಾಸಿನ ಪ್ರಧಾನಿ ಶ್ರೀಕುಮಾರಸ್ವಾಮಿ ರಾಜಾರವರು ಹೇಳಿರುವರು.

ಕಾಂಗ್ರೆಸ್ ಅಧ್ಯಕ್ಷ ಬಾಬು ಟಾಂಡನ್ನರು

ಭಾರತ ಸಂಸ್ಕೃತಿಯು ಅಭಿನ್ನವಾದುದು. ಅದನ್ನು ನಾವು ಕಾಪಾಡಿಕೊಂಡು ಬರಬೇಕು. ಭಾರತದಲ್ಲಿರುವ ಮುಸ್ಲಿಮರು ಭಾರತವು ಅವರ ಮಾತೃಭೂಮಿಯೆಂದು ಪರಿಗಣಿಸಿ ಭಾರತವನ್ನು ಜಾತ್ಯಾತೀತ ರಾಜ್ಯವನ್ನಾಗಿ ಮಾಡಬೇಕು. ಗ್ರಾಮಾಂತರಗಳಲ್ಲಿ ಖಾದಿ ಬೆಳವಣಿಗೆಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡು ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕು. ಜೀವನಾಧಾರ ವಸ್ತುಗಳ ಮೇಲೆ ಮಾತ್ರ ಹತೋಟಿಯನ್ನಿಟ್ಟು ಮತ್ತಿತರ ವಸ್ತುಗಳ ಮೇಲಿನ ಹತೋಟಿಯನ್ನು ತೆಗೆಯಬೇಕು, ಎಂದು ಬಾಬು ಟಾಂಡನ್ನರು ಅಲಹಾಬಾದಿನಲ್ಲಿ ತಿಳಿಸಿರುವರು.

ಪುನಃ ಭೂಕಂಪ

ಡಿಬ್ರೂಘರಿನಲ್ಲಿ ಪುನಃ ನಿನ್ನೆ ಎರಡುಭಾರಿ ಭೂಕಂಪವಾಗಿರುವುದು ವರದಿಯಾಗಿದೆ.

ನಷ್ಟ

ಅಸ್ಸಾಂ ಭೂಕಂಪದಿಂದ ಬರೀ ಟೀ ತೋಟಗಳಿಗೇ ಒಂದುಕೋಟಿ ರೂ. ಗಳಿಗಿಂತ ಹೆಚ್ಚಾಗಿ ನಷ್ಟವಾಗಿದೆ ಎಂತಲೂ ಅಂದಾಜು ಮಾಡಲಾಗಿದೆ.

ಪತ್ರಿಕೋದ್ಯೋಗಿಗಳಿಗೆ ಹಿತೋಕ್ತಿ

ಪತ್ರಿಕೋದ್ಯೋಗಿಗಳು ಪುಡಿಕಾಸು ಲಾಭ ಸಂಪಾದಿಸುವದಕ್ಕೆಂದು ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲು ಹಿಂಜರಿಯಬಾರದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಾಬು ಪುರುಷೋತ್ತಮದಾಸ್ ಟಾಂಡನ್ನರು ತಿಳಿಸಿದ್ದಾರೆ.

● ಡಿ. ಎಸ್. ಪಿ ಗಳಾದ, ಮಿ॥ ಆರ್. ದಿ ಆಂಡರ್ಸನ್‌ರವರನ್ನು ಚಿಕ್ಕಮಗಳೂರಿಗೆ, ಶ್ರೀ ಇ ವಿ ಪಟ್ಟಾಭಿರಾಮಯ್ಯರನ್ನು ಬೆಂಗಳೂರು ಜಿಲ್ಲೆಗೆ (ನಿರಾಶ್ರಿತರ ಸ್ವತ್ತುಗಳ ಮೇಲ್ವಿಚಾರಣೆ ಹುದ್ದೆಗೆ) ವರ್ಗಮಾಡಲಾಗಿದೆ.

● ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿಗಳ ಸಮ್ಮೇಳನ ಅಧ್ಯಕ್ಷ ಮತ್ತು ವಿಶ್ವಕರ್ಣಾಟಕ ಪತ್ರಿಕೆ ಸಂಪಾದಕರಾದ ಶ್ರೀ ಎನ್. ಎಸ್. ವೆಂಕೋಬರಾಯರಿಗೆ ರಾಜಧಾನಿಯ ವರ್ತಕ ಶ್ರೀ ಎಂ ಆರ್. ಸಿ. ಬಸಪ್ಪನವರು ಇಂದು ಸಂಜೆ ಇಂದ್ರಭವನದಲ್ಲಿ ಸತ್ಕಾರಕೂಟ ಏರ್ಪಡಿಸಿರುವರು.

● ಮೈಸೂರಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ವೇದಪ್ಪನವರು ದೀರ್ಘಕಾಲಾವಧಿ ರಜದಮೇಲೆ ಹೋಗುವರೆಂದು ವರದಿಯಾಗಿದೆ.

● ಶ್ರೀಗಳಾದ ಕೆ. ಸಿ. ಲಿಂಗಯ್ಯ ಗೌಡರು, ಮತ್ತು ಬಿ. ಎಸ್. ಪುಟ್ಟಸ್ವಾಮಿಯವರನ್ನು ಪ್ರಥಮ ದರ್ಜೆಯ, ಶ್ರೀಗಳಾದ ಆರ್. ಕನಕರತ್ನರಾಜ್ ಮತ್ತು ಬಿ. ಆರ್. ರಾಮಲಿಂಗಯ್ಯನವರನ್ನು ದ್ವಿತೀಯ ದರ್ಜೆಯ ಜಿಲ್ಲಾ ನ್ಯಾಯಾಧೀಶರನ್ನಾಗಿ ಖಾಯಂ ಮಾಡಲಾಗಿದೆ.

● ಮೈಸೂರು ಮುಖ್ಯ ಮಂತ್ರಿಗಳ ಅಸ್ಸಾಂ ಪರಿಹಾರ ನಿಧಿಗೆ ೧,೦೪,೫೮೭ ರೂ. ಗಳು ಬಂದಿವೆ.

● ಶಾಟ್ಟಿಕಲ್ಲಿನಲ್ಲಿ ಸಕ್ಕರೆ ಅಭಾವ ವಿಪರೀತವಾಗಿ ವೀಸೆಯೊಂದಕ್ಕೆ ೪ ರೂಪಾಯಿನಂತೆ ಮಾರಾಟವಾಗುತ್ತಲಿದೆಯೆಂದು ತಿಳಿಯಬರುತ್ತದೆ.

ಮೈಸೂರು ಅ ೯. ಸ್ವ. ಸು.

● ನಂಜನಗೂಡಿನಿಂದ ಕಡಲೇಕಾಯಿ ತುಂಬಿಕೊಂಡು ಬರುತ್ತಲಿದ್ದ ಹೆಗ್ಗಡಿಹಳ್ಳಿ ಅಕಶೆಟ್ಟಿ ಎಂಬುವನ ಗಾಡಿಗೆ ಮಲ್ಲಯ್ಯನ ಮಗಳು ಚಿಕ್ಕಮಲ್ಲಿ ಎಂಬ ಹುಡುಗಿ ಮೈಸೂರು ದೊಡ್ಡಕೆರೆ ಏರಿಯ ಮೇಲೆ ಗಾಡಿಗೆ ಸಿಕ್ಕಿ ಮೃತಳಾದಳೆಂದು ವರದಿಯಾಗಿದೆ.

● ವಿಶ್ವಕರ್ಣಾಟಕ ಪತ್ರಿಕೆಯ ಸಂಪಾದಕರಾದ ಶ್ರೀ ಎನ್. ಎಸ್. ವೆಂಕೋಬರಾಯರಿಗೆ ಶ್ರೀಮನ್ಮಹಾರಾಜರವರು ಈದಿನ ಬೆಳಗ್ಗೆ ಭೇಟಿ ದಯಪಾಲಿಸಿದರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಆಕ್ಟೋಬರ್ ೧೦ ಮಂಗಳವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೩೦ ಟಿ. ಪಿ. ಕೃಷ್ಣಮೂರ್ತಿ (ಸಂಗೀತ) ೭-೪೫ ಕನ್ನಡದಲ್ಲಿವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಪಿಟೀಲು ೧-೪೫ ಹಿಂದೀ ಶಿಕ್ಷಣ ೨-೦ ಟಿ. ಪಿ. ಕೃಷ್ಣಮೂರ್ತಿ (ಸಂಗೀತ) ೨-೩೦ ಮುಕ್ತಾಯ.

ಸಂಜೆ ೫-೩೦ ವಿ. ದೇಶಿಕಾಚಾರ್ (ಕೊಳಲು) ೬-೦ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಅರಮನೆ ಕರ್ನಾಟಕ ಬ್ಯಾಂಡ್ ೭-೨೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿವಾರ್ತೆ ೮-೦ ವಿ. ದೇಶಿಕಾಚಾರ್ (ಕೊಳಲು) ೮-೩೦ ರತ್ನಮ್ಮ ಕೃಷ್ಣಮೂರ್ತಿ (ಸಂಗೀತ) ೯. ೦ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿವಾರ್ತೆ ೯-೩೦ ಗಾನಸಮ್ಮೇಳನ (ರಿ) ೧೦-೦ ಮುಕ್ತಾಯ.

ಹೆಚ್ಚಿಗೆ ಅಕ್ಕಿ ಬೇಕು

ಸಂಸ್ಥಾನದಲ್ಲಿ ಅಕ್ಕಿ ಪರಿಸ್ಥಿತಿಯು ಉತ್ತಮವಾಗಿಲ್ಲವಾಗಿ ೫೦೦೦ ಟನ್ ಅಕ್ಕಿಯನ್ನು ಕಳುಹಿಸಬೇಕೆಂದು ಮೈಸೂರು ಸರ್ಕಾರವು ಕೇಂದ್ರವನ್ನು ಪ್ರಾರ್ಥಿಸಿದೆ.

ಆರ್ಥಿಕ ಬೋರ್ಡು

ಮೈಸೂರು, ಹೈದರಾಬಾದು ಮತ್ತು ತಿರುವಾಂಕೂರು ಕೊಚ್ಚಿನ್ ಒಕ್ಕೂಟಗಳಲ್ಲಿ ಹೆಚ್ಚು ಭತ್ತವನ್ನು ಬೆಳೆಯಲು ಸಲಹೆ ಕೊಡಲು ದಕ್ಷಿಣ ಭಾರತ ಆರ್ಥಿಕಬೋರ್ಡನ್ನು ರಚಿಸಲು ಇದೇ ಮಾಹೆ ೨೩ನೇ ತಾರೀಖು ಕೇಂದ್ರ ಮಂತ್ರಿ ಶ್ರೀ ಕೆ. ಎಂ ಮುನ್ಷಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಲಿದೆ. ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮತ್ತು ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರು ಈ ಸಭೆಯಲ್ಲಿ ಭಾಗವಹಿಸುವರು.

ರಣಜಿತ್
ದಿನವಹಿ ೩ ಆಟಗಳು
6-10-50 ಶುಕ್ರವಾರದಿಂದ
ಆಧಿರಾತ್ Adhi Raat
(ಹಿಂದಿ)
ಪಾತ್ರ: † ಅಶೋಕ ಕುಮಾರ್
† ನರ್ಗಿಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೨—೧೦—೧೯೫೦ ನೇ ಗುರುವಾರ [ಸಂಚಿಕೆ ೪೭

ಮೈಸೂರಿನಲ್ಲಿ ದಸರಾ ಸಮಾರಂಭ

ಮೈಸೂರು ಅ. ೧೨.

ಈದಿನ ಬೆಳಗ್ಗೆ ೮ ಘಂಟೆಗೆ ಶ್ರೀಮನ್ಮಹಾರಾಜರವರು ಶಾಸ್ತ್ರರೀತಿಯ ಪೂಜೆಗಳೆಲ್ಲ ಮುಗಿಸಿಕೊಂಡು ದರ್ಬಾರ್ ಹಾಲಿಗೆ ೮-೩೦ ಘಂಟೆಗೆ ದಯಮಾಡಿಸಿ ಸಿಂಹಾಸನಾರೋಹಣವನ್ನು ಬೆಳೆಸಿದರು. ಸಂಸ್ಥಾನದ ಎಲ್ಲಾ ಸಚಿವರುಗಳೂ ಶ್ರೇಷ್ಠ ನ್ಯಾಯಾಧೀಶರುಗಳೂ, ಸ್ಪೆಷಲ್ ಕ್ಲಾಸ್ ಸರ್ಕಾರೀ ನೌಕರರೂ ಮತ್ತು ಸರದಾರರುಗಳೂ ರಾಜಪ್ರಮುಖರಿಗೆ ನಜರ್ ಒಪ್ಪಿಸಿದರು.

ದಸರಾ ವಸ್ತುಪ್ರದರ್ಶನ

ದಸರಾ ವಸ್ತುಪ್ರದರ್ಶನಾರಂಭೋತ್ಸವ ಇಂದು ಬೆಳಗ್ಗೆ ೧೧ ಗಂಟೆಗೆ ಸಂಸ್ಥಾನ ಮುಖ್ಯ ಸಚಿವ ಶ್ರೀ ಕೆ. ಸಿ. ರೆಡ್ಡಿಯವರಿಂದ ನಡೆಯಿತು. ಇದರ ಅಂಗವಾಗಿ ೧೦-೪೫ ಕ್ಕೆ ಜೀವಣ್ಣರಾಯನ ಕಟ್ಟೆಯಲ್ಲಿ ಧ್ವಜಾರೋಹಣವು ನಡೆಯಿತು ಎಲ್ಲಾ ಸಚಿವರುಗಳು, ಉಪಾಧ್ಯಕ್ಷ ಶ್ರೀ ಕೆ. ನಾರಾಯಣಸ್ವಾಮಿ, ಸಮಿತಿಯ ಅನೇಕ ಸದಸ್ಯರು ನಗರದ ನಾನಾ ಅಧಿಕಾರಿಗಳು ಮತ್ತು ಪುರಪ್ರಮುಖರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಶ್ರೀ ಕೆ. ಸಿ. ರೆಡ್ಡಿ ಮತ್ತು ಶ್ರೀ ಚೆನ್ನಿಗರಾಮಯ್ಯನವರು ಮೈಸೂರು ಮತ್ತು ಭಾರತ ಧ್ವಜಾರೋಹಣ ನಡೆಸಿದಮೇಲೆ ಸಭೆಯು ಸೇರಿತು. ಆಸ್ಥಾನ ವಿದ್ವಾನ್ ಶ್ರೀ ದೇವೇಂದ್ರಪ್ಪನವರಿಂದ ಸಂಗೀತವಾದ ಮೇಲೆ ದಸರಾ ವಸ್ತು ಪ್ರದರ್ಶನ ಸಮಿತಿಯ ಉಪಾಧ್ಯಕ್ಷರು ಪಂಡಿತ ನೆಹರೂ, ಸರದಾರ್ ಪಟೇಲರು, ಮದರಾಸಿನ ಮುಖ್ಯ ಮಂತ್ರಿಯವರಿಂದ ಬಂದಿದ್ದ ಸಂದೇಶಗಳನ್ನು ಓದಿದರು. ಅನಂತರ ವರದಿಯನ್ನೋದಿ ನಾನಾ ಕೈಗಾರಿಕಾ ಮತ್ತು ಇತರ ಸಂಸ್ಥೆಗಳವರು ಈ ಪ್ರದರ್ಶನದಲ್ಲಿ ಭಾಗವಹಿಸಿರುವುದನ್ನು ವಿವರಿಸಿದರು ಪ್ರತಿ ವರ್ಷವೂ ಬರುತ್ತಲಿರುವ ಪ್ರದರ್ಶನಗಳಲ್ಲದೆ ಈ ವರ್ಷ ಬೆಂಗಳೂರಿನ ಟೆಲಿಫೋನ್ ಫ್ಯಾಕ್ಟರಿ ರೇಡಿಯೋ ಕಂಪೆನಿ ಮುಂತಾದವರೂ ತಮ್ಮ ಕೈಗಾರಿಕೆಗಳನ್ನು ಪ್ರದರ್ಶಿಸಲು ಬಂದಿರುವುದಾಗಿ ತಿಳಿಸಿದರು. ಜಪಾನಿನ ಮಕ್ಕಳಿಗೆ ಪಂಡಿತ ನೆಹರೂರವರು ಕಳುಹಿಸಿದ ಮೈಸೂರು ಆನೆ-ಇಂದಿರಾ-ಇದಕ್ಕೆ ಪ್ರತಿಯಾಗಿ ಅಲ್ಲಿಯ ಮಕ್ಕಳು ಕಳುಹಿಸಿರುವ ಆಟದ ಬೊಂಬೆ ವಾದ್ಯವನ್ನು ಭಾರತ ಸರ್ಕಾರವು ಮೈಸೂರು ವಸ್ತು ಪ್ರದರ್ಶನದಲ್ಲಿಡಲು ಕಳುಹಿಸುವುದನ್ನು ಪ್ರದರ್ಶಿಸಲಾಗುವುದೆಂದು ತಿಳಿಸಿದರು.

ಶ್ರೀ ಕೆ. ಸಿ ರೆಡ್ಡಿಯವರು ಪ್ರಾರಂಭೋತ್ಸವವನ್ನು ನಡೆಸುತ್ತ, ದೇಶದ ಆಹಾರಪರಿಸ್ಥಿತಿಯಿಂದ, ಪ್ರತಿವರ್ಷವೂ ನಡೆಯುವಂತೆ ಈ ವರ್ಷವೂ ಮನರಂಜನೆಯನ್ನು ವಿಶೇಷವಾಗಿ ಸೇರಿಸಿ, ಪ್ರದರ್ಶನವನ್ನು ನಡೆಸಲು ಕಷ್ಟವಾದುದರ ಪ್ರಯುಕ್ತ ಮಿತಿಯಾಗಿ ನಡೆಸಿ ದೇಶದಲ್ಲಿಯ ಕೈಗಾರಿಕೆ, ವ್ಯವಸಾಯ, ಮುಂತಾದ ರಾಷ್ಟ್ರಾಭ್ಯುದಯಕ್ಕೆ ಮತ್ತು ಆರ್ಥಿಕ ಪ್ರಗತಿಗೆ ಸಹಾಯವಾಗುವಂತೆ ಈ ವಸ್ತುಪ್ರದರ್ಶನವೇರ್ಪಡಿಸಿಯೆಂದು ತಿಳಿಸಿದರು.

ಪಾಶ್ಚಿಮಾತ್ಯ ದೇಶದಲ್ಲಿ ಖಾಯಂ ಪ್ರದರ್ಶನಗಳನ್ನು ಏರ್ಪಡಿಸಿ ಪ್ರತಿದಿನವೂ ಜನರು ಅಲ್ಲಿಗೆ ಹೋಗಿ, ಕಲೆ, ಸಾಹಿತ್ಯ ರಾಷ್ಟ್ರಜೀವನದ ಅನೇಕ ಬಾಬುಗಳ ಬೆಳವಣಿಗೆಗೆ ಸಾಧಕವಾಗುವಂತೆ ನಮ್ಮ ದೇಶದಲ್ಲಿಯೂ ಒಂದು ಪ್ರದರ್ಶನವನ್ನು ಏರ್ಪಡಿಸುದು ಒಳ್ಳೆಯದೆಂದೂ ಅದಕ್ಕೆ ಮೈಸೂರು ಕಟ್ಟಡ ಮತ್ತು ಅನೇಕ ಸೌಲಭ್ಯಗಳನ್ನು ಹೊಂದಿರುವುದರಿಂದ ಖಾಯಂ ಆಗಿ ವಸ್ತುಪ್ರದರ್ಶನವನ್ನು ಏರ್ಪಡಿಸಲು ಆಗುವ ವೆಚ್ಚ, ಉತ್ಪತ್ತಿ ಮುಂತಾದ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದಾಗಿ ತಿಳಿಸಿದರು. ಈರೀತಿ ಮಾಡುವುದರಿಂದ ದೇಶಕ್ಕೆ ಒಂದು ಮಾದರಿಯಾಗುವುದೆಂದು ಹೇಳಿದರು. ರಾಷ್ಟ್ರಗೀತೆಯಾದನಂತರ ಸಭೆಯು ಮುಗಿಯಿತು. ಅನಂತರ ಸಚಿವರುಗಳೆಲ್ಲರೂ ವಸ್ತುಪ್ರದರ್ಶನಾಲಕ್ಕೆ ಭೇಟಿಯಿತ್ತರು.

ಕುಶಲಕಲೆಗೆ ಬಹುಮಾನ

ಇಂದು ಪ್ರಾರಂಭವಾದ ಮೈಸೂರು ದಸರಾ ವಸ್ತುಪ್ರದರ್ಶನಾಲಯದಲ್ಲಿ ಕುಶಲ-ಕಲೆಯ ವಿಭಾಗದಲ್ಲಿ ೫೩೫ ವಸ್ತುಗಳನ್ನು ಪ್ರದರ್ಶಿಸಲಾಗಿದೆ ಡೆಹರಾಡೂನ್, ಲಕ್ನೋ. ಕಾಶಿ, ಗ್ವಾಲಿಯರ್, ಬೊಂಬಾಯಿ, ಪೂನಾ, ಮದರಾಸು, ಮುಂತಾದ ಭಾರತದ ಅನೇಕ ಭಾಗಗಳಿಂದ ಮತ್ತು ಸಂಸ್ಥಾನದ ನಾನಾ ಭಾಗಗಳಿಂದ ಕಲಾವಿದರು ವಿವಿಧ ಕಲೆಗೆ ಸಂಬಂಧ ಪಟ್ಟ ವಸ್ತುಗಳನ್ನು ಕಳುಹಿಸಿರುವರು.

ಇವುಗಳಲ್ಲಿ ಶ್ರೀಮನ್ಮಹಾರಾಜರವರ ಪ್ರಥಮ ಬಹುಮಾನವು ಪ್ರಖ್ಯಾತ ಕಲಾವಿದ ಡೆಹರಾಡೂನ್ ಶ್ರೀ ಪಿ. ಆರ್. ರಾಯ್‌ರವರಿಗೆ, ವಸ್ತು ಪ್ರದರ್ಶನ ಸಮಿತಿಯು ಮೈಸೂರು ಕಲಾವಿದರಿಗೆ ಮೀಸಲಾಗಿಟ್ಟಿರುವ ಚಿನ್ನದ ಪದಕವು ಗಂಧದ ಮರದಲ್ಲಿ ಕೆತ್ತಿರುವ ಮಹಾತ್ಮ ಗಾಂಧಿಯವರ ಪ್ರತಿಮೆಯನ್ನು ಕೆತ್ತಿರುವ ಮಲೆನಾಡಿನ ಪ್ರಸಿದ್ಧ ಗುಡಿಗಾರರ ವಂಶಕ್ಕೆ ಸೇರಿದ ಶ್ರೀ ಜೆ ಮಂಜನಾಥನ್‌ನವರಿಗೆ ಕೊಡಲಾಗಿದೆ

ಈ ಬಹುಮಾನಗಳಲ್ಲದೆ ಇತರ ವಿಧದ ನಾನಾ ಬಹುಮಾನಗಳನ್ನು ಇನ್ನೂ ಹಲವಾರು ಕಲಾವಿದರಿಗೆ ಕೊಡಲಾಗಿದೆ.

ದಕ್ಷಿಣ ಭಾರತದಲ್ಲಿ ಪ್ರಸಿದ್ಧ ಕಲಾವಿದರಾದ ಶ್ರೀ ಕೆ ಸಿ ಎಸ್. ಪನ್ನಿಕರ್‌ರವರು ಬರೆದಿರುವ ತೈಲಚಿತ್ರಗಳಲ್ಲಿ ಅತ್ಯಂತ ಉತ್ತಮವಾದ ಮೂರು ಚಿತ್ರಗಳನ್ನು ಪ್ರದರ್ಶಿಸಿರುವರು.

ಕಾನ್ವೊಕೇಷನ್

ಮೈಸೂರು ವಿಶ್ವವಿದ್ಯಾನಿಲಯದ ೧೯೫೦ರ ಕಾನ್ವೋಕೇಷನ್ ನವಂಬರ್ ಮೊದಲನೇ ವಾರದಲ್ಲಿ ನಡೆಯುವುದು.

ಶ್ರೀಮನ್ಮಹಾರಾಜರು ಸಿಂಹಾಸನಾರೋಹಣ ಮಾಡಿದೊಡನೆಯೇ ೨೧ ತುಪಾಕಿ ತೋಪುಗಳು ಹಾರಿದುವು.

ಇಂದು ಸಾಯಂಕಾಲ ೬ ಘಂಟೆಗೆ ಪಟ್ಟದ ಆನೆ, ಕುದುರೆ ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡುವುದು. ೭ ಘಂಟೆಗೆ ದರ್ಬಾರು ನಡೆಯುವುದು. ಇದೇ ರೀತಿ ೨೦ನೇ ತಾರೀಖಿನವರೆಗೂ ಸಂಜೆ ದರ್ಬಾರುಗಳು ನಡೆಯುವುವು. ೧೯ನೇ ತಾರೀಖಿನ ದಿನ ಬೆಳಗ್ಗೆ ೬-೪೪ ಘಂಟೆಗೆ ಪಟ್ಟದ ಆನೆ, ಕುದುರೆ ಇವು ಸೋಮೇಶ್ವರ ದೇವಸ್ಥಾನಕ್ಕೆ ಹೊರಡುವುದು ೭-೪೪ಕ್ಕೆ ಅರಮನೆಗೆ ಬರುವುದು. ಆನಂತರ ಆಯುಧಪೂಜೆ ಮತ್ತು ಆನೆ, ಕುದುರೆಗಳ ಪೂಜೆಯನ್ನು ನಡೆಸುವರು. ಮಾಮೂಲಿನಂತೆ ಸಂಜೆ ೭ ಘಂಟೆಗೆ ದರ್ಬಾರ್ ನಡೆಯುವುದು. ೨೦ನೇ ತಾರೀಖಿನ ದಿನ ಬೆಳಗ್ಗೆ ಪೂಜೆ ನಡೆಯುವುದು ಆನಂತರ ೧೨-೩೪ ಘಂಟೆಗೆ ಆನೆ, ಕುದುರೆ, ಆಯುಧ ಇವು ಬನ್ನೀ ಮಂಟಪಕ್ಕೆ ಬಿಜಯ ಮಾಡುವುವು. ಆನಂತರ ಅರಮನೆಯ ಮುಂದೆ ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಜಟ್ಟಿಕಾಳಗ ನಡೆಯುವುದು.

ಬಾಂಬಿನ ಸಿಡಿತದಿಂದ ೯ ಮಂದಿಗೆ ಗಾಯ

ಆರು ಅಂಗುಲದ ಕ್ರೈಲ್ಸ್ ಮೊಳೆಗಳನ್ನು ತುಂಬಿದ ನಾಡು ಬಾಂಬೊಂದು ಮೊನ್ನೆ ರಾತ್ರಿ ಬಾಂಬೋನಗರದ ಪುರಭವನದಲ್ಲಿ ಸಿಡಿದು ೯ ಮಂದಿಗೆ ಗಾಯವಾಗಿದೆ. ಬಾಂಬು ಸಿಡಿದಾಗ ಆ ಭವನದಲ್ಲಿ ೯೦೦ ಮಂದಿ ಇದ್ದರು.

ಚುನಾವಣಾ ಮುಖ್ಯಾಧಿಕಾರಿಗಳ ಸಮ್ಮೇಳನ

ಬರಲಿರುವ ಸಾರ್ವತ್ರಿಕ ಚುನಾವಣೆಗಳಿಗೆ ಸಂಬಂಧಪಟ್ಟ ಎಲ್ಲಾವಿಷಯಗಳನ್ನೂ ಕುರಿತು ಚರ್ಚಿಸಲು ಎಲ್ಲಾ ಸಂಸ್ಥಾನಗಳ ಚುನಾವಣಾ ಮುಖ್ಯಾಧಿಕಾರಿಗಳ ಸಮ್ಮೇಳನವು ಇದೇ ಮಾಹೆ ೩೦ರಲ್ಲಿ ದೆಹಲಿಯಲ್ಲಿ ಚುನಾವಣಾ ಕಮೀಷನರಿಗೆ ಕಳುಹಿಸಬೇಕೆಂದು ಹೇಳಲಾಗಿದೆ.

● ಮೈಸೂರು ಸಿ ಪಿ. ಸಿ ಮೋಟಾರು ಕಂಪೆನಿಯ ಕೆಲಸಗಾರರ ಸಭೆಯು ೯ನೇ ಸೋಮವಾರ ನಡೆದು, ಕಂಪೆನಿಯವರ ೧೯೪೮, ೧೯೪೯ ಮತ್ತು ೧೯೫೦ರ ಬೋನಸ್ಸು, ಕೆಲಸಗಾರರಿಗೆ ಇನ್‌ಕ್ರಿಮೆಂಟ್ ಮತ್ತು ಹೆಚ್ಚಿಗೆ ಭತ್ಯವನ್ನು ಕೊಡಬೇಕೆಂದೂ, ಅನಾವಶ್ಯಕವಾಗಿ ತೆಗೆದು ಹಾಕುವ ಕೆಲವರನ್ನು ಕೆಲಸಕ್ಕೆ ಪುನಃ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಈ ವಿಷಯಗಳನ್ನು ಮಾಲೀಕರ ಮುಂದಿಟ್ಟು ತೀರ್ಮಾನಕ್ಕೆ ಬರಲು ಸಭೆಯು ಕೆಲವರಿಗೆ ಅಧಿಕಾರಕೊಟ್ಟಿದೆ.

★ ಸಿರೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಟ್ರೂಮನ್-ಮೆಕಾರ್ಥರ್

ಅಮೇರಿಕಾ ಅಧ್ಯಕ್ಷ ಟ್ರೂಮನರು ವಿಶ್ವಸೈನ್ಯದ ಮುಖ್ಯಾಧಿಕಾರಿ ಮೆಕಾರ್ಥರೊಡನೆ ಶಾಂತಿಸಾಗರದಲ್ಲಿ ಮಾತುಕಥೆ ನಡೆಸಲು ಹೊರಟಿರುವರು. ಅವರು ನಾಳೇ ಹವಾಯ್ ದ್ವೀಪಗಳನ್ನು ಸೇರುವರು.

ಶ್ರೀ ವೆಂಕೋಬರಾಯರಿಗೆ ಸತ್ಕಾರ

ಪಾಶ್ಚಿಮಾತ್ಯ ದೇಶಕ್ಕೆ ವ್ಯಾಸಂಗಕ್ಕಾಗಿ, ಸರ್ಕಾರದ ವೇತನವನ್ನು ಪಡೆದು ಹೊರಡಲಿರುವ, ವಿಶ್ವಕರ್ಣಾಟಕ ಸಂಪಾದಕರಾದ ಶ್ರೀ ವೆಂಕೋಬರಾಯರಿಗೆ, ಶ್ರೀ ಎಂ. ಆರ್. ಸಿ. ಬಸಪ್ಪನವರು, ಇಂದ್ರಭವನದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ನಗರದ ಅನೇಕ ಪ್ರಮುಖರು, ಆಗಮಿಸಿದ್ದರು. ಭೋಜನಾನಂತರ ಶ್ರೀಗಳಾದ ಟಿ. ಎನ್. ರಾಜಗೋಪಾಲಯ್ಯಂಗಾರ್, ಪಾಲಹಳ್ಳಿ ಸೀತಾರಾಮಯ್ಯ, ದರ್ಬಾರ್ ಭಕ್ಷಿ ಹೆಚ್. ಎಲ್. ದೇವರಾಜ ಅರಸ್ ಮತ್ತು ಎ. ಕೃಷ್ಣಮೂರ್ತಿ ರಾಯರು [illegible] ವೆಂಕೋಬರಾಯರು ಪತ್ರಿಕಾವೃತ್ತಿಯಲ್ಲಿ ಹೆಚ್ಚಿಗೆ ಶಿಕ್ಷಣಪಡೆದು, ದೇಶಸೇವೆಯನ್ನೂ ಇನ್ನೂ ಇಮ್ಮಡಿಯಾಗಿ ಮಾಡಲೆಂದು ಅವರಿಗೆ ಸುಖಪ್ರಯಾಣವನ್ನು ಕೋರಿದರು. ಶ್ರೀ ವೆಂಕೋಬರಾಯರು ತಮ್ಮನ್ನು ಸತ್ಕರಿಸಿದ್ದಕ್ಕೆ ಶ್ರೀ ಬಸಪ್ಪನವರನ್ನೂ ತಮಗೆ ವಿದೇಶಪ್ರಯಾಣ ಮಾಡುವುದಕ್ಕೆ ಅವಕಾಶಕಲ್ಪಿಸಿ ಸಹಾಯಮಾಡಿರುವುದಕ್ಕಾಗಿ ಸರ್ಕಾರವನ್ನೂ ಅಭಿವಂದಿಸಿದರು.

ಸಾರ್ವಜನಿಕರಲ್ಲಿ ಮನವಿ

ಸಾರ್ವಜನಿಕರಲ್ಲಿ ಮೈಸೂರು ನಗರದಲ್ಲಿರುವ ಹೇರ್ ಡ್ರೆಸಿಂಗ್ ಸೆಲೂನ್ ಮಾಲೀಕರುಗಳು ಪೌರಸಭೆಯವರು ತಮ್ಮಮೇಲೆ ವಿಧಿಸಿರುವ ಲೈಸೆನ್ಸ್ ಫೀಯನ್ನು ಹೆಚ್ಚಿಸಿರುವುದರಿಂದ ಅನೇಕ ರೀತಿಯಾದ ತೊಂದರೆಗಳುಂಟಾಗಿವೆಯಾಗಿ ಅವುಗಳನ್ನು ಹೆಚ್ಚಿಸದಂತೆ ಮಾಡಬೇಕೆಂದು ಒಂದು ಮನವಿಯನ್ನು ಹೊರಡಿಸಿರುವರು.

ತಾವು ಉಪಯೋಗಿಸುತ್ತಿರುವ ಸಲಕರಣೆಗಳ ಬೆಲೆಯು ವಿಶೇಷವಾಗಿ ಏರಿರುವುದೂ, ಜೀವನ ಮಟ್ಟವು ಅಂಗಡಿಗಳ ಬಾಡಿಗೆ ಮುಂತಾದುವೆಲ್ಲವೂ ಏರಿಹೋಗುತ್ತಲಿರುವ ಈ ಸಮಯದಲ್ಲಿ ಲೈಸೆನ್ಸ್ ಫೀಯನ್ನು ಹೆಚ್ಚಿಸಿರುವುದು ಅಷ್ಟು ಉಚಿತವಲ್ಲವೆಂದೂ, ರಾಜಧಾನಿಯಲ್ಲಿ ಕೇವಲ ೧೬೦ ಅಂಗಡಿಗಳಿರುವುದರಿಂದ ಲೈಸೆನ್ಸ್ ಫೀ ಏರಿಸುವುದರಿಂದ ಪೌರಸಭೆ ಆದಾಯ ಹೆಚ್ಚದಿದ್ದರೂ ತಮಗೆ ವಿಶೇಷ ತೊಂದರೆಯುಂಟಾಗುವುದರಿಂದ ಸಾರ್ವಜನಿಕರು ತಮಗೆ ಬೆಂಬಲ ಮತ್ತು ಸಹಕಾರ ನೀಡಬೇಕೆಂದು ಕೋರಿದ್ದಾರೆ.

ಗ್ರಾಮವೇ ಮಾಯವಾಗಿದೆ

ಅಸ್ಸಾಂ ಭೂಕಂಪದ ಮತ್ತು ಪ್ರವಾಹದ ಪರಿಣಾಮವಾಗಿ ಸಡಿಯಾ ಗಡಿಪ್ರದೇಶದ ಆರ್ಡಿಯಾ ಎಂಬ ಗ್ರಾಮ ಸಂಪೂರ್ಣವಾಗಿ ನಿರ್ಮೂಲವಾಗಿದೆ ಮತ್ತು ಮಿಷ್ಮಿ ಬೆಟ್ಟಗಾಡು ಪ್ರದೇಶದಲ್ಲಿ ೬೦೦ ಮಂದಿ ಸತ್ತಿದ್ದಾರೆ. ಇನ್ನೂ ಎತ್ತರದ ಬೆಟ್ಟಪ್ರದೇಶಗಳಲ್ಲಿ ಮರಣ ಸಂಖ್ಯೆ ಹೆಚ್ಚಾಗಿದೆ ಎಂದು ಊಹಿಸಲಾಗಿದೆ. ಆರ್ಡಿಯ ನಗರದಿಂದ ೩ದಿನಗಳ ಪ್ರಯಾಣದೂರವಿರುವ ೫೦೦೦ ಜನ ಸಂಖ್ಯೆಯುಳ್ಳ ಡಾಂಬುಕ್ ಗ್ರಾಮದ ವಿಷಯ ಯಾವ ಸುದ್ದಿಯೂ ಬಂದಿಲ್ಲ. ಹಾನಿಯಾಗಿರುವುದು ಹೇಳಲು ಸಾಧ್ಯವಿಲ್ಲ

ವ್ಯಾಪಾರಿಗಳ ದಸ್ತಗಿರಿ

ಬಿಹಾರಿನಲ್ಲಿ ೭ ಮಂದಿ ವ್ಯಾಪಾರಿಗಳನ್ನು ಹೆಚ್ಚಾಗಿ ಆಹಾರಪದಾರ್ಥಗಳ ದಾಸ್ತಾನು ಹೊಂದಿದ್ದರೆಂದು ದಸ್ತಗಿರಿ ಮಾಡಲಾಗಿದೆ.

೧೦೦ ವೀಳೆದೆಲೆಗೆ ಎಂಟು ರೂಪಾಯಿ

ನಾಗಪುರದಲ್ಲಿ ವೀಳೆದೆಲೆಯ ಮೇಲೆ ಸೇಲ್ಸ್‌ಟ್ಯಾಕ್ಸ್ ವಿಧಿಸಿದುದನ್ನು ಪ್ರತಿಭಟಿಸಿ ವೀಳೆದೆಲೆ ಮಾರುವವರು ಮುಷ್ಕರ ಹೂಡಿದ್ದಾರೆ. ಇದರ ಪರಿಣಾಮವಾಗಿ ೧೦೦ ವೀಳೆದೆಲೆಯ ಬೆಲೆ ೧೦ ಆಣೆ ಇದ್ದುದು ೮ ರೂಪಾಯಿಗೆ ಏರಿದೆ.

ಪಾಕಿಸ್ಥಾನ, ಮುಸ್ಲಿಂಲೀಗ್, ಒಂದೇ.

ಮುಸ್ಲಿಂಲೀಗಿನ ಅಧ್ಯಕ್ಷರಾಗಿ ಚುನಾಯಿತರಾದ ಪಾಕಿಸ್ಥಾನಪ್ರಧಾನಿ ಲಿಯಾಖತ್ ಅಲಿಖಾನರವರು ಅದನ್ನು ವಿರೋಧಿಸಿದ ಅಬ್ದುಲ್ ಬಾರಿಯವರಿಗೆ ಉತ್ತರ ಕೊಡುತ್ತಾ, ಮುಸ್ಲಿಂಲೀಗ್ ಮತ್ತು ಪಾಕಿಸ್ತಾನ ಎರಡು ಒಂದೇ ಎಂದು, ಅವರೆಡೂ ಬೇರೆಬೇರೆಯಲ್ಲವೆಂದು ಘೋಷಿಸಿದರು.

ಉತ್ತರ ಭಾರತೀಯರನ್ನು ಬಹಿಷ್ಕರಿಸಿ

ಉತ್ತರ ಭಾರತದವರೊಂದಿಗೆ ವ್ಯಾಪಾರ ಸಂಬಂಧವನ್ನು ಸಂಪೂರ್ಣವಾಗಿ ತೊಡೆದು ಉತ್ತರಕ್ಕೆ ಹೋಗುತ್ತಲಿರುವ ಹೊನ್ನಿನ ಹೊಳೆಯನ್ನು ನಿಲ್ಲಿಸಿ, ಉತ್ತರ ಭಾರತೀಯರ ಅಂಗಡಿಗಳ ಪಿಕೆಟಿಂಗ್ ನಡೆಸುವುದಲ್ಲದೆ, ಅವರ ಬ್ಯಾಂಕುಗಳು, ವಿಮಾನಸಂಸ್ಥೆ, ಲೇವಾದೇವಿ ಅಂಗಡಿಗಳಲ್ಲಿ ವ್ಯವಹಾರ ತ್ಯಜಿಸಿ, ಅವರ ಹೋಟೇಲುಗಳಲ್ಲಿ ಆಹಾರವನ್ನು ಸಹ ತೆಗೆದುಕೊಳ್ಳಕೂಡದೆಂದು ಮದರಾಸಿನ ದ್ರಾವಿಡಸಂಘದ ಕಾರ್ಯಕಾರಿ ಸಮಿತಿಯು ನಿರ್ಣಯಮಾಡಿದೆ.

ಭಾರತೀಯ ಪ್ರಜಾ ಹಕ್ಕುಬಾಧ್ಯತೆ ಮಸೂದೆ

ಭಾರತೀಯ ಪ್ರಜಾ ಹಕ್ಕುಬಾಧ್ಯತೆಯನ್ನು ಮೂರು ವಿಂಗಡಣೆಯಾಗಿ ವಿಭಾಗಿಸಲು ಭಾರತೀಯ ಪ್ರಜಾಹಕ್ಕುಬಾಧ್ಯತೆ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ವಂಶ ಮತ್ತು ಜನ್ಮ, ಭಾರತವನ್ನೇ ಸ್ವದೇಶವಾಗಿ ಮಾಡಿಕೊಂಡಿರುವುದು ಮತ್ತು ರಿಜಿಸ್ಟ್ರೇಷನ್ ಈ ರೀತಿಯಾಗಿ ವಿಭಾಗ ಮಾಡಲಾಗುವುದು. ಈ ಮಸೂದೆಯನ್ನು ಭಾರತ ಸರ್ಕಾರದವರು ಪರ್ಯಾಲೋಚಿಸುತ್ತಿರುತ್ತಾರೆ.

ಅಶೋಕ ಮೆಹ್ತಾರವರ ಹೇಳಿಕೆ

ಬೊಂಬಾಯಿ ಇಂಡಸ್ಟ್ರಿಯಲ್ ಬೋನಸ್ ಬಗ್ಗೆ ಕೊಟ್ಟಿರುವ ತೀರ್ಪಿನಿಂದ ಬೊಂಬಾಯಿ ಬಟ್ಟೆ ಗಿರಣಿ ಕಾರ್ಮಿಕರಿಗೆ ತೃಪ್ತಿಯಾಗಿಲ್ಲವೆಂದೂ ಎರಡು. ತಿಂಗಳಿಂದ ಮುಷ್ಕರ ನಡೆಸುತ್ತಿರುವ ೩ಲಕ್ಷ ಕಾರ್ಮಿಕರು ಕೆಲಸಕ್ಕೆ ಹಿಂತಿರುಗುವ ಸಂಭವವಿಲ್ಲವೆಂದೂ ಸೋಷಲಿಸ್ಟ್ ನಾಯಕರಾದ ಶ್ರೀ ಅಶೋಕ ಮೆಹ್ತಾರವರು ಹೇಳಿಕೆ ಇತ್ತಿದ್ದಾರೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಅಕ್ಟೋಬರ್ ೧೩ ಶುಕ್ರವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಚಿತ್ರಗಾನ (೦) ೭-೩೫ ನವವರ್ಣ ಕೀರ್ತನೆಗಳು ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಮುಖವೀಣೆ ೧-೪೫ ಹಿಂದೀ ಶಿಕ್ಷಣ ೨-೦ ಗಾನಾಮೃತ ೨-೩೦ ಮುಕ್ತಾಯ.

ಸಂಜೆ ೫-೩೦ ಎ. ಎಂ. ಉಲ್ಲಾಳ್ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೧೫ ಎ. ಎಂ. ಉಲ್ಲಾಳ್ (ಕೊಳಲು) ೭-೩೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಚಿಂತನದಲ್ಲಿ ರಾವ ಚಂದ್ರರಾವ್ (ಪಿಟೀಲು) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವೃಂದ ಸಂಗೀತ ೧೦-೦ ಮುಕ್ತಾಯ

ಗವರ್ನಮೆಂಟ್ ಆಯುರ್ವೇದಿಕ್ ಯುನಾನಿ ಕಾಲೇಜ್ ಯೂನಿಯನ್ನಿನ ಆರಂಭೋತ್ಸವವು ತಾರೀಖು ೧೦-೧೦-೫೦ರಲ್ಲಿ ಸಂಜೆ ಗಂಟೆ ೫-೩೦ಕ್ಕೆ ಡಾ|| ದ್ವಾರಕನಾಥ್ ಎಲ್ ಐ ಎಂ ಜಿಡ್ ಟಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು

ಶ್ರೀಮತಿ ಇಂದಿರಮ್ಮನವರಿಂದ ಪ್ರಾರ್ಥನೆಯಾಯಿತು. ಅನಂತರ ಯೂನಿಯನ್ನಿನ ಉದ್ಘಾಟನೆಯನ್ನು ಗಾಂಧಿಜಿಯವರ ಭಾವಚಿತ್ರ ಅನಾವರಣ [illegible]ವನ್ನು ಪ್ರೊ|| ಎಂ. ವಿ. ಕೃಷ್ಣರಾವ್ ಎಂ.ಎ. ಬಿ.ಟಿ ಇವರು ನೆರವೇರಿಸಿದರು. ಅಧ್ಯಕ್ಷರ ಭಾಷಣಾನಂತರ ಶ್ರೀ ಟಿ ಆರ್. ವಿ. ಶ್ರೀನಿವಾಸನ್ ಮತ್ತು ಪಾರ್ಟಿಯವರಿಂದ ಪರಿಶ್ರಾವ್ಯ ಸಂಗೀತವೂ, ರಾಮನ್ ಮತ್ತು ಇತರ ಗೆಳೆಯರಿಂದ "ರಾಗಣ್ಣನ ರಥ" ಎಂಬ ಪ್ರಹಸನವೂ, ಇತರ ವಿನೋದಾವಳಿಗಳೂ ಅಭಿನಯಿಸಲ್ಪಟ್ಟಿತು. ವಂದನೋಕ್ತಿ ರಾಷ್ಟ್ರಗೀತೆಗಳೊಂದಿಗೆ ಸಭೆಯು ಚದುರಿತು.

ರಣಜಿತ್
ದಿನವಹಿ ೩ ಆಟಗಳು
6-10-50 ಶುಕ್ರವಾರದಿಂದ
ಆಧಿರಾತ್ Adhi Raat
(ಹಿಂದಿ)
ಪಾತ್ರ: ✝ ಅಶೋಕ ಕುಮಾರ್
✝ ನರ್ಗೀಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೩—೧೦—೧೯೫೦ ನೇ ಶುಕ್ರವಾರ [ಸಂಚಿಕೆ ೪೮

ಚೈನಾ ಪ್ರಜಾಸರ್ಕಾರದ ಖಂಡನಾಹೇಳಿಕೆ

ಉಗ್ರ ಪರಿಸ್ಥಿತಿಯಲ್ಲಿ ಸುಮ್ಮನಿರಲು ಸಾಧ್ಯವಿಲ್ಲ. ಶಾಂತಿ ಸಂರಕ್ಷಣೆಗಾಗಿ ಹೋರಾಡಲು ಸಿದ್ಧ.

ಕೊರಿಯಾದಲ್ಲಿ ಅಮೇರಿಕಾ ಕೈಗೊಂಡಿರುವ ದಂಡಯಾತ್ರೆಯಿಂದ ಉದ್ಭವವಾಗಿರುವ ಉಗ್ರ ಪರಿಸ್ಥಿತಿಯನ್ನು ಮೌನದಿಂದ ನೋಡುತ್ತ ಸುಮ್ಮನಿರಲು ಸಾಧ್ಯವಿಲ್ಲವೆಂದು ಚೀಣಾ ಪ್ರಜಾಸರ್ಕಾರ ಸಾರಿದೆ.

ವಿಶ್ವಸಂಸ್ಥೆಯಲ್ಲಿ ರಾಷ್ಟ್ರಗಳು ಮಾಡಿರುವ ನಿಶ್ಚಯವು ಕ್ರಮ ಬಾಹಿರವಾಗಿದೆ. ಜಗತ್ತಿನ ಬಹುಸಂಖ್ಯಾತ ಜನತೆಯ ವಿರುದ್ಧವಾಗಿಯೂ ಇದೆ. ಚೀಣೀಯರಿಗೆ ಶಾಂತಿಯಲ್ಲಿ ಪ್ರೇಮವಿದೆ. ಆದರೆ ಶಾಂತಿಯ ಸಂರಕ್ಷಣೆಗಾಗಿ ಆಕ್ರಮಣ ಷಾಹಿ ಯುದ್ಧವನ್ನು ಎದುರಿಸಲು ಚೀಣರು ಎಂದೂ ಹಿಂತೆಗೆಯುವುದಿಲ್ಲ. ಕೊರಿಯಾದಲ್ಲಿ ೩೮ನೇ ಅಕ್ಷಾಂಶವನ್ನು ದಾಟಿರುವುದು ಅದಕ್ಕೆ ಸಮರ್ಥನೆಮಾಡಿರುವ ವಿಶ್ವಯ ನಿರ್ಣಯವೂ ಕ್ರಮ ಬಾಹಿರ. ಏಕತಂತ್ರ ಕೊರಿಯಾ ಸ್ಥಾಪನೆಗೆ ಚುನಾವಣೆ, ಪ್ರಜಾಸತ್ತೆಯ ವ್ಯವಸ್ಥೆಗೆ ಸಮಿತಿ ನೇಮಕ ಇತ್ಯಾದಿ ಮಾತುಗಳು ರಕ್ಷೆ. ದುರಾಕ್ರಮಣವನ್ನು ಮರೆ ಮಾಚಲು ಹಾಕಿರುವ ಮುಸುಕು. ಈ ಯುದ್ಧ ವಿಸ್ತರಣ ಘೋರಣೆಯಿಂದ ಸಂಭವಿಸುವ ಅನಾಹುತಗಳಿಗೆಲ್ಲ ಅಮೆರಿಕಾವೇ ಹೊಣೆಯಾಗಬೇಕಾಗುವುದು. ಅಷ್ಟ ಶಕ್ತಿ ರಾಷ್ಟ್ರಗಳ ನಿರ್ಣಯಕ್ಕೆ ಬೆಂಬಲವು ಪ್ರಪಂಚದ ಜನ ಸಂಖ್ಯೆಯು $\frac{1}{3}$ ಭಾಗನಾದರೆ ವಿರೋಧವಾಗಿರುವ ಜನಸಂಖ್ಯೆಯು ಜಗತ್ತಿನ $\frac{2}{3}$ ಭಾಗ ಎಂಬುದಾಗಿ ಚೈನಾ ಸರ್ಕಾರವು ಘೋಷಿಸಿದೆ.

ವಂದನೆ

ಕರ್ತವ್ಯದೃಷ್ಟಿ ಮತ್ತು ಸ್ವಾಮಿನಿಷ್ಠೆಯಿಂದ, ತಮ್ಮ ಕಾರ್ಯದಲ್ಲಿ ವಿಮುಖರಾಗದೆ ಕೆಲಸಮಾಡಿದ ಎಲ್ಲಾ ಕೆಲಸಗಾರರಿಗೆ ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಜನರಲ್ ಮ್ಯಾನೇಜರ್ ಶ್ರೀ ಆರ್. ರಾಮಕೃಷ್ಣರವರು ತಮ್ಮ ವಂದನೆಯನ್ನು ವ್ಯಕ್ತಪಡಿಸಿ ಒಂದು ಬುಲೆಟಿನ್ ಹೊರಡಿಸಿರುವರು.

ರಕ್ತದಾನ

ವಿಶ್ವ ಸಂಸ್ಥೆಯ ಸೇನಾಪಡೆಗಳಿಗಾಗಿ ಜಪಾನಿನ ರೆಡ್ ಕ್ರಾಸ್ ಸಂಸ್ಥೆಗೆ ಜಪಾನಿನ ಚಕ್ರವರ್ತಿ ಹಿರೋಹಿಟೋರ ಸಹೋದರ ರಾಜಕುಮಾರ ತಾಕಾಮಾಸುರವರು ತಮ್ಮ ಶರೀರದಿಂದ ೩೩೦ ಚದರಸೆಂಟಿ ಮೀಟರುಗಳಷ್ಟು ರಕ್ತಕಣಗಳನ್ನು ಕೊಟ್ಟಿರುತ್ತಾರೆ. ರಾಜ ಕುಮಾರರನ್ನು ಭಾರತದ ನಿಯೋಗ ನಾಯಕರ ಪತ್ನಿ ಶ್ರೀಮತಿ ಕೆ ಕೆ. ಚೆದ್ದಾರ್‌ರವರು ಶುಶ್ರೂಷೆ ಮಾಡುತ್ತಲಿದ್ದಾರೆ.

ಈಗಾಗಲೇ ಸುಮಾರು ೫೦೦ ಜನರಿಗಿಂತ ಹೆಚ್ಚು ಮಂದಿ ರಕ್ತದಾನ ಮಾಡಿದ್ದಾರೆ ಇವರಲ್ಲಿ ಮೂರನೇ ಎರಡುಭಾಗ ಹುಡುಗಿಯರು.

ಕಾಳಸಂತೆಕೋರರ ಪಟ್ಟಿ

ಕಾಳಸಂತೆ ವಾತ್ತು ಮತ್ತು ಅಧಿಕ ಲಾಭಪಡೆಯುವವರ ಪಟ್ಟಿಯೊಂದನ್ನು ಪಶ್ಚಿಮ ಬಂಗಾಳ ಸಂಸ್ಥಾನದಲ್ಲಿ ಪೋಲೀಸರು ತಯಾರಿಸುತ್ತಲಿದ್ದಾರೆ. ಅವರುಗಳ ಮೇಲೆ ಮುನ್ನೆಚ್ಚರಿಕೆ ಸ್ಥಾನಬದ್ಧತಾ ಶಾಸನದ ರೀತಿ ಕ್ರಮ ಕೈಗೊಳ್ಳಲು ಈ ಪಟ್ಟಿಯನ್ನು ಸರ್ಕಾರಕ್ಕೆ ಒಪ್ಪಿಸಲಾಗುವುದೆಂದು ತಿಳಿಯಬರುತ್ತದೆ.

ನೂತನ ಕಾಂಗ್ರೆಸ್ ಕಾರ್ಯಕಾರಿ ಸಮಿತಿರಚನೆ ಚರ್ಚೆ

ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರು ನೂತನ ಕಾರ್ಯಕಾರಿಸಮಿತಿ ರಚನೆ ವಿಷಯದಲ್ಲಿ ಸರ್ದಾರ್ ಪಟೇಲ್, ಶ್ರೀ ಕೆ. ಎಂ. ಮುನ್ಷಿ, ಶ್ರೀ ಎನ್. ವಿ ಗಾಡ್ಗೀಲ್ ಮುಂತಾದವರನ್ನು ಭೇಟಿಮಾಡಿ ಮಾತುಕತೆ ನಡೆಸುತ್ತಲಿದ್ದಾರೆ. ಇಂದು-ನಾಳೆಯೊಳಗೆ ನೂತನಸಮಿತಿಯ ಬಗ್ಗೆ ಘೋಷಣೆ ಹೊರಬೀಳುವ ನಿರೀಕ್ಷಣೆಯಿದೆ

ಚುನಾವಣೆಕ್ಷೇತ್ರ ನಿರ್ಧಾರ

ಮೈಸೂರು ಅ. ೧೨.

ಮೈಸೂರಿನ ಚುನಾವಣಾ ಕ್ಷೇತ್ರಗಳ ಗಡಿನಾಡಿನ ಪ್ರಾಸ್ತಾವಿಕ ಪಟ್ಟಿ ಮುಗಿದು ಅದನ್ನು ಈ ವಾರಾಂತ್ಯದೊಳಗಾಗಿ ಚುನಾವಣಾ ಮುಖ್ಯಾಧಿಕಾರಿಗಳಿಗೆ ಕಳುಹಿ ಲಾಗುವುದೆಂದು ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ನ್ನೆ ಪತ್ರಿಕಾಕರ್ತರಿಗೆ ತಿಳಿಸಿದರು.

ಕಾಂ. ಕಾರ್ಯಕಾರಿ ಸಮಿತಿ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಕಾರ್ಯಕಾರಿ ಸಮಿತಿ ರಚನೆ ಬಗ್ಗೆ ಹೇಳಿಕೆಯಿತ್ತು ಈ ವಿಷಯ ಸುಮಾರು ಅ. ೧೫ಕ್ಕೆ ಮುಕ್ತ ಹೆಂಗಡಿಸವುದಾಗಿಯೂ ಇನ್ನೂ ಮಾತುಕತೆಗಳು ಮುಂದುವರಿಯುತ್ತಿವೆ

ಪಂ॥ ನೆಹರೂ ಕಾರ್ಯಸಮಿತಿಗೆ ಸೇರುವಂತೆ ಮಾಡಲು ಈವರೆಗೆ ನಡೆದಿರುವ ಯತ್ನವೆಲ್ಲ ವಿಫಲವೆಂದು ಹೇಳಲಾಗಿದೆ.

ಇಂಡೋನೇಷ್ಯಾ

ದಕ್ಷಿಣ ಮಾಲುಕ್ಕಾಸ್ ವಿರುದ್ಧ ಇಂಡೋನೇಷ್ಯಾ ಮಿಲಿಟರಿ ಕಾರ್ಯಾಚರಣೆಯನ್ನು ನಿಲ್ಲಿಸಬೇಕೆಂದು ಪ್ರಪಂಚ ಸಂಸ್ಥೆಯು ತೀರ್ಮಾನಿಸಿ ಒಂದು ನಿಯೋಗವನ್ನು ಕಳುಹಿಸಿದ್ದು ಸಫಲವಾಗದೇ, ಪ್ರಪಂಚ ಸಂಸ್ಥೆಯ ಸೆಕ್ಯೂರಿಟಿ ಕೌನ್ಸಿಲು ಈ ಸಮಸ್ಯೆಯನ್ನು ಬಿಡಿಸಲು ನೇರವಾಗಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ಆ ನಿಯೋಗವು ಪ್ರಾರ್ಥಿಸಿದೆ

ಉ ಕೊರಿಯಾಕ್ಕೆ ಸ್ಟಾಲಿನ್ನರ ಸಂದೇಶ

ಉತ್ತರ ಕೊರಿಯನ್ನರು ತಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಂಪೂರ್ಣ ವಿಜಯ ಗಳಿಸಲಿ, ಎಂದು ಹಾರೈಸಿ ಸೋವಿಯಟ್ ರಷ್ಯಾದ ಮಾರ್ಷಲ್ ಸ್ಟಾಲಿನ್ನರು ಒಂದು ಸಂದೇಶವನ್ನು ಕಳುಹಿಸಿದ್ದಾರೆಂದು ಮಾಸ್ಕೋ ರೇಡಿಯೋ ವರದಿಮಾಡಿದೆ.

ಮಂತ್ರಿಮಂಡಲ ಸಭೆ

ದಸರಾ ಸಂದರ್ಭದಲ್ಲಿ ಸಂಸ್ಥಾನ ನವಮಂತ್ರಿಗಳೂ ರಾಜಧಾನಿಗೆ ಆಗಮಿಸಿ. ಇಲ್ಲಿ ಹತ್ತುದಿನಗಳ ಪರ್ಯಂತ ಇರುವರು ಪ್ರತಿನಿತ್ಯವೂ ಮಂತ್ರಿಮಂಡಲ ಸಭೆ ನಡೆಯಲು ಕಾರ್ಯಕ್ರಮ ಏರ್ಪಡಿಸಲಾಗಿದೆ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲದೆ ಪಬ್ಲಿಕ್-ಸರ್ವಿಸ್-ಕಮಿಷನ್, ಡೆಪ್ಯುಟಿ ಕಮಿಷನರ್ ದರ್ಜೆಯ ಕೆಲವು ಅಧಿಕಾರಿಗಳ ನಿವೃತ್ತಿ, ತತ್ಸಂಬಂಧದಲ್ಲಿ ಕೆಲವರ ವರ್ಗಾವರ್ಗಿ, ಒಟ್ಟು ೬೦ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಬೇಕಾಗಿದೆಯೆಂದೂ, ಈ ಅಪಾರ ಕೆಲಸಕ್ಕಾಗಿಯೇ ಈ ಹತ್ತು ದಿನಗಳೂ ಸಭೆ ಸೇರಲು ನಿರ್ಧರಿಸಿರುವರೆಂದು ತಿಳಿಯಬರುತ್ತದೆ.

ಪಂ॥ ನೆಹರೂರವರಿಗೆ ಕಾಣಿಕೆ

ಪಂ॥ ನೆಹರೂರವರು ಮೊನ್ನೆ ಭಾರತ ವ್ಯವಸಾಯ ಸಂಶೋಧನಾ ಸಂಸ್ಥೆಯಲ್ಲಿ ಹೊಲ ಉಳುವ ಟ್ರಾಕ್ಟರೊಂದನ್ನು ಕಾಣಿಕೆಯಾಗಿ ಸ್ವೀಕರಿಸಿದರು.

ಕಾರ್ಮಿಕರ ಮೇಲೆ ಗೋಳಿಬಾರ್

ಮುಂಬಯಿ ಪೋಲೀಸರು ನಿನ್ನೆ ಹಲವುಬಾರಿ ಅಲ್ಲಿನ ಬಟ್ಟೆ ಗಿರಣಿ ಕಾರ್ಮಿಕರ ಗುಂಪಿನ ಮೇಲೆ ಗುಂಡು ಹಾರಿಸಿದರು ಇಬ್ಬರು ಗುಂಡೇಟಿನಿಂದ ಮೃತರಾದರು. ೧೨ ಮಂದಿ ಪೋಲೀಸರನ್ನೂ ಸೇರಿಸಿಕೊಂಡು ಒಟ್ಟು ೨೦ ಮಂದಿ ನಿನ್ನೆಯ ಘರ್ಷಣೆಯಲ್ಲಿ ಗಾಯಗೊಂಡರು.

ಸೋಷಲಿಸ್ಟ್ ಹತೋಟಿಯಲ್ಲಿರುವ ಮಿಲ್ ಮಜದೂರ್ ಸಭೆಯು ನಿನ್ನೆ ಪ್ರತಿಬಂಧಕಾಜ್ಞೆಯ ವಿರುದ್ಧ ಕಾಮಗಾರ್ ಮೈದಾನದಲ್ಲಿ ಅಪೆಲೇಟ್ ಟ್ರಿಬ್ಯುನಲ್ಲಿನ ತೀರ್ಪಿನ ವಿರುದ್ಧ ಸಭೆ ಸೇರಿಸುವುದಾಗಿ ತಿಳಿಸಿತ್ತು. ಆದರೆ ಸಭೆ ಸೇರುವ ಮೊದಲೇ ಅಲ್ಲಿ ಸೇರಲಿದ್ದ ಕಾರ್ಮಿಕರ ಗುಂಪನ್ನು ಪೋಲೀಸರು ಚೆದರಿಸಿದ್ದರಿಂದ ಕಾರ್ಮಿಕರು ಪಕ್ಕದ ರಸ್ತೆಗಳಿಗೆ ತಿರುಗಿ ಬಸ್ ಮತ್ತು ಟ್ರಾಂಗಳ ಮೇಲೆ ಕಲ್ಲೆಸೆಯತೊಡಗಿದರು. ಪೋಲೀಸರ ಮೇಲೂ ಅವರು ಕಲ್ಲುಗಳನ್ನೆಸೆದಿದ್ದರಿಂದ ಅವರಲ್ಲಿ ಭೀತಿ ಮೂಡಿಸಲು ಪೋಲೀಸರು ಮೊದಲು ೬ ಬಾರಿ ಗಾಳಿಯಲ್ಲಿ ಗುಂಡು ಹಾರಿಸಿದರು. ಈ ಪ್ರಕರಣಕ್ಕೆ ೮ ಜನರನ್ನು ದಸ್ತಗಿರಿ ಮಾಡಲಾಗಿದೆ.

ರಾಷ್ಟ್ರಾಧ್ಯಕ್ಷರ ಪ್ರವಾಸ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಅಸ್ಸಾಮಿನ ಭೂಕಂಪ ಪೀಡಿತ ಪ್ರದೇಶದ ಪ್ರವಾಸ ಮುಗಿಸಿಕೊಂಡು ಅ. ೨೯ ನೇ ತಾ॥ ಕಲ್ಕತ್ತೆಗೆ ಬರುವರೆಂದು ಹೇಳಲಾಗಿದೆ

ದಸರಾ ಚಿತ್ರಕಲಾ ಪ್ರದರ್ಶನ ವೈಶಿಷ್ಟ್ಯ

ಚಿತ್ರಕಲೆಯು ಪೋಷಕರಾಗಿದ್ದ ಬ್ರಿಟಿಷ್ ಅಧಿಕಾರಿಗಳು ಸ್ವಾತಂತ್ರ್ಯದನಂತರ ಭಾರತ ಬಿಟ್ಟನಂತರ ಬಹು ಮಂದಿ ಚಿತ್ರ ಕಲಾವಿದರಿಗೆ ಮಹಾ ತೊಂದರೆಯೇ ಉಂಟಾಯಿತು. ಅಲ್ಲದೆ ಕಲಾವಿದರು ಉಪಯೋಗಿಸುವ ಬಣ್ಣ ಬ್ರಷ್ಷು ಮೊದಲಾದ ಸಾಮಾನುಗಳು ಹೊರದೇಶದಿಂದ ಬರುವಂತಹವುಇದ್ದು ಅವುಗಳ ಬೆಲೆಯೂ ಅತಿಯಾಗಿರುವ ಈ ಕಾಲದಲ್ಲಿ ನಮ್ಮ ರಾಷ್ಟ್ರದ ಚಿತ್ರಕಲಾವಿದರು ಬಹು ಕಷ್ಟದಿಂದ ತಮ್ಮ ಕಲಾಕೃತಿಗಳ ನಿರ್ಮಾಣ ಕಾರ್ಯ ಇಂದಿಗೂ ಮುಂದುವರಿಸುತ್ತಿರುವುದನ್ನು ದಸರಾ ಚಿತ್ರ ಕಲಾ ಪ್ರದರ್ಶನದಿಂದ ಕಾಣಬಹುದಾಗಿದೆ.

ದಸರಾ ಪ್ರ[illegible] ಜರಗುವುದೋ ಇಲ್ಲವೋ ಎಂಬ ಶಂಕೆ ಆವರಿಸಿದ್ದರೂ, ಚಿತ್ರಕಲಾ ಪ್ರದರ್ಶನದ ಕಾರ್ಯಕರ್ತರು ಎದೆಗುಂದದೇ ಅಖಿಲ ಭಾರತದ ಹೆಸರಾದ ಚಿತ್ರಕಲಾವಿದರಿಂದ ಚಿತ್ರಗಳು ಬರುವಂತೆ ಶ್ರಮಿಸಿ, ಈ ಕಾರ್ಯದಲ್ಲಿ ಯಶಸ್ಸನ್ನೂ ಪಡೆದಿರುವರೆಂದು ಧಾರಾಳವಾಗಿ ಹೇಳಬಹುದಾಗಿದೆ.

ನಮ್ಮ ಮುಖ್ಯ ಮಂತ್ರಿಗಳವರು ಮೂರುವರ್ಷಗಳ ಹಿಂದೆಯೇ ಸುಭಾಷ್ ನಗರದ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಮಾತನಾಡುತ್ತಾ, ಬೆಂಗಳೂರಲ್ಲಿ ಚಿತ್ರ ಸಂಗ್ರಹಾಲಯವೊಂದು ತೀರಾ ಅಗತ್ಯವೆಂದು ನುಡಿದರು ಮಾನ್ಯ ಮುಖ್ಯ ಮಂತ್ರಿಗಳ ಸದಾಶಯವು ಕಾರ್ಯಕಾರಿಯಾಗಲು ದಸರಾ ಚಿತ್ರಕಲಾ ಪ್ರದರ್ಶನವು ಅನುಕೂಲ ವಾತಾವರಣ ರಚಿಸಿದೆ ದಸರಾ ಪ್ರದರ್ಶನದ ಪ್ರಾರಂಭೋತ್ಸವ ಜರುಗಿಸುವ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹಿಂದಣ ಅಭಿಪ್ರಾಯವನ್ನೇ ವಿಸ್ತರಿಸಿರುವುದು ತುಂಬಾ ಆಶಾದಾಯಕ ಸಂಗತಿ

ಕಳೆದ ಹಲವು ವರ್ಷಗಳಿಂದ ದಸರಾ ಚಿತ್ರಕಲಾ ಪ್ರದರ್ಶನದ ಬಗ್ಗೆ ದೊಡ್ಡ ಆರೋಪ ಬಂದಿತ್ತು ಚಿತ್ರಕಲೆಯಲ್ಲಿ ಪರಿಣಿತರಲ್ಲದವರು ಬಹುಮಾನ ತೀರ್ಪಿನ ಸಮಿತಿಯಲ್ಲಿ ಇದ್ದದ್ದೇ ಈ ಮುಖ್ಯವಾದ ನ್ಯೂನತೆ. ಈ ಬಾರಿ ಪ್ರದರ್ಶನದ ಅಧಿಕಾರವರ್ಗದವರು ಈ ನ್ಯೂನತೆ ಬಗೆಹರಿಸಿದುದಕ್ಕಾಗಿ ಅವರು ಅಭಿನಂದನಾರ್ಹರು ಇಷ್ಟೇ ಅಲ್ಲದೇ ಬಹುಮಾನ ತೀರ್ಪಿನ ಸಮಿತಿಗೆ ಮದರಾಸಿನ ಸುಪ್ರಸಿದ್ಧ ಚಿತ್ರಕಲಾವಿದರಾದ ಶ್ರೀ ಕೆ ಸಿ ಎಸ್ ಪಾಣಿಕರ್‌ರವರನ್ನೂ ಆಹ್ವಾನಿಸಿ, ಮದ್ರಾಸ್ ಮತ್ತು ಮೈಸೂರಿನ ಕಲಾವಿದರ ಸಖ್ಯವು ಹೆಚ್ಚು ಬೆಳೆಯಲು ಅವಕಾಶ ಕಲ್ಪಿಸಿದುದು ತುಂಬಾ ನೆಮ್ಮದಿಯ ಸಂಗತಿ.

ಚಿತ್ರ ಪ್ರದರ್ಶನದಲ್ಲಿ ಪಾಶ್ಚಾತ್ಯ ಹಾಗೂ ಪೌರಾತ್ಯ ಸಂಪ್ರದಾಯಗಳ ಉತ್ತಮ ಚಿತ್ರಗಳು ಪ್ರದರ್ಶಿಸಲ್ಪಟ್ಟಿವೆ ಪ್ರಕೃತಿ ಚಿತ್ರಗಳೇ ಹೆಚ್ಚಿನವಿದ್ದು ಅತ್ಯಂತ ಆಕರ್ಷಿತವಾಗಿವೆ. ಶ್ರೀಮನ್ಮಹಾರಾಜರವರ ಕೃಪೆಯಿಂದ ಜಗನ್ಮೋಹನ ಚಿತ್ರ ಸಂಗ್ರಹಾಲಯದಿಂದ ಅತ್ಯುತ್ತಮ ಹಲವು ಚಿತ್ರಗಳನ್ನು ತಂದು ಪ್ರದರ್ಶಿಸಲಾಗಿದೆ ಈ ಚಿತ್ರಗಳೂ ಶ್ರೀ ಕೆ ಸಿ ಪಾಣಿಕರ್‌ರವರ ದೊಡ್ಡ ಮೂರು ಚಿತ್ರಗಳು ಕಲಾಪ್ರದರ್ಶನವು ಅತ್ಯಂತ ಆಕರ್ಷಣೀಯವಾಗಲು ಕಾರಣವಾಗಿದೆ

ಕಲೆಯಲ್ಲಿ ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳ ಚಿತ್ರಗಳೂ ಪ್ರತ್ಯೇಕವಾಗಿ ಪ್ರದರ್ಶಿಸಲ್ಪಟ್ಟಿವೆ ಅನೇಕ ಛಾಯಾ ಚಿತ್ರಗಳು (ಫೋಟೋಗ್ರಫಿ) ವ್ಯವಸ್ಥೆಗೊಳಿಸಲ್ಪಟ್ಟಿವೆ

ಶಿಲ್ಪಿ ಸಿದ್ಧಾಂತಿ ಶ್ರೀ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳ ನಾಟ್ಯ ಸರಸ್ವತಿ ಸುಂದರಮೂರ್ತಿಯೂ ಶ್ರೀ ಮಂಜುನಾಥಪ್ಪನವರಿಂದ ಗಂಧದಮರದಿಂದ ರಚಿಸಲಾಗಿರುವ ಮಹಾತ್ಮ ಗಾಂಧಿಯವರ ಮೂರ್ತಿಯೂ ಸರ್ವರಲ್ಲಿಯೂ ಕನ್ನಡನಾಡಿನ ಶಿಲ್ಪಿಗಳ ಕಲಾಕೌಶಲ್ಯದ ಹಿರಿಮೆಯ ಸ್ಮರಣೆ ಮಾಡಿಕೊಡುತ್ತಿವೆ

ಕೊರಿಯಾ ಸಮಿತಿ

ವಿಶ್ವಸಂಸ್ಥೆಯ ಹಂಗಾಮಿ ಕೊರಿಯಾ ಸಮಿತಿಯ ಅಧ್ಯಕ್ಷತೆಗೆ ಫಿಲಿಪೈನ್ಸಿನ ಜನರಲ್ ಕಾರೂಸ್‌ಪಿರೋಮು ಅಧ್ಯಕ್ಷರಾಗಿ ಚುನಾಯಿತರಾದರು.

ಬ್ರಿಟಿಷ್ ಸೈನ್ಯ ಕೋರಿಯಾಕ್ಕೆ

ಇನ್ನೊಂದು ಬ್ರಿಟಿಷ್ ಸೈನ್ಯ ಸೌತಾಂಪ್ಟನ್‌ನಿಂದ ನೌಕೆಯಲ್ಲಿ ಕೋರಿಯಾಕ್ಕೆ ೩ ಸಾವಿರ ಮಂದಿ ಬ್ರಿಟಿಷ್ ಸೈನಿಕರು ಹೊರಟಿರುತ್ತಾರೆ. ಇವರಿಗೆ ವಿಶೇಷ ಶಿಕ್ಷಣ ಕೊಡಲಾಗಿದೆ.

ಭಾರತಕ್ಕೆ ಅಮೆರಿಕಾದಿಂದ ಧಾನ್ಯ

ಅಮೇರಿಕಾದಲ್ಲಿ ಹೆಚ್ಚುವರಿಯಾದ ಮಿಲೆಟ್ಸ್ ಧಾನ್ಯದಲ್ಲಿ ೪,೨೭,೦೦೦ ಟನ್‌ಗಳನ್ನು ಭಾರತವು ಕೊಂಡುಕೊಳ್ಳುವುದು ಇದಕ್ಕೆ ಸಂಯುಕ್ತಸಂಸ್ಥಾನ ಸರ್ಕಾರವು ಹಣ ಸಹಾಯಮಾಡುವುದೆಂದು ತಿಳಿದುಬಂದಿದೆ

ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನ

ನವದೆಹಲಿಯಲ್ಲಿ ಡಿಸೆಂಬರ್ ೨ ಮತ್ತು ೩ರಲ್ಲಿ ನಡೆಯಲಿರುವ ಅಖಿಲಭಾರತ ವೃತ್ತಪತ್ರಿಕಾ ಸಂಪಾದಕರ ಸಮ್ಮೇಳನದ ಆರಂಭೋತ್ಸವವನ್ನು ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದ್‌ರವರು ನೆರವೇರಿಸುವರು.

ಮಾಳಿಗೆ ಕುಸಿದುಬಿದ್ದು ಮರಣ

ತುರುವೇಕೆರೆ ತಾ॥ ಕುಣಿಕೇನಹಳ್ಳಿ ಗ್ರಾಮದಲ್ಲಿ ರಂಗಪ್ಪ ಮತ್ತು ಗೋಪಮ್ಮ ಎಂಬುವರು ಮಲಗಿದ್ದಾಗ್ಗೆ ರಾತ್ರಿ ಮಾಳಿಗೆಮನೆ ಕುಸಿದುಬಿದ್ದು ಅವರಿಬ್ಬರೂ ಕೂಡಲೇ ಮೃತಪಟ್ಟರೆಂದು ಪೋಲೀಸರಿಗೆ ಸುದ್ದಿ ಬಂದಿದೆ.

ಬೊಂಬಾಯಿ ಗಿರಣಿಗಳ ಪ್ರಾರಂಭ

ಬೊಂಬಾಯಿ ಹತ್ತಿಗಿರಣಿ ಕಾರ್ಮಿಕರಲ್ಲಿ ಶೇಕಡ ೮೦ರಷ್ಟು ಮಂದಿ ನಿನ್ನೆಯಿಂದ ಹಾಜರಾಗಿದ್ದಾರೆ. ಮೊದಲನೆಯ ಷಿಫ್ಟಿನಲ್ಲಿ ನಗರದ ೬೨ ಗಿರಣಿಗಳಲ್ಲಿ ೫೦ ಕೆಲಸ ಮಾಡುತ್ತಿದ್ದವು ಸುಮಾರು ೬೧,೦೩೦ ಜನ ಕೆಲಸಗಾರರು ಹಾಜರಿದ್ದರು.

ಅಕ್ಷರಾಭ್ಯಾಸ

ಕೊಲ್ಲಾಪುರದ ವಿಶ್ವವಿದ್ಯಾನಿಲಯದ ಜವಾನರುಗಳಿಗೆ ಮೊದಲು ಅಕ್ಷರಾಭ್ಯಾಸವನ್ನು ಕೊಡಲು ಅಲ್ಲಿಯ ಪ್ರೊಫೇಸರ್‌ಗಳು ನಿಶ್ಚಯಿಸಿದ್ದಾರೆ ಈ ಪ್ರೊಫೇಸರ್‌ಗಳು ಸಾಮಾಜಿಕ ವಿದ್ಯಾಭ್ಯಾಸದ ಚಳುವಳಿಯನ್ನು ಕೈಗೊಂಡಿರುತ್ತಾರೆ. ಇವರಧ್ಯೇಯ ಆ ವಿಶ್ವವಿದ್ಯಾನಿಲಯದ ಜವಾನರುಗಳನ್ನು ಮೊದಲು ಅಕ್ಷರಸ್ಥರನ್ನಾಗಿ ಮಾಡುವುದೆಂದು ತಿಳಿದುಬಂದಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಅಕ್ಟೋಬರ್ ೧೧ ಶನಿವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಚಿತ್ರಲೋಕ (ರಿ) ೭-೩೫ ನವವರ್ಣ ಕೀರ್ತನೆಗಳು ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ದಿಲ್ರುಬ ೧-೪೫ ಕನ್ನಡಗೀತೆ ೨-೦ ಬಾಲಜಗತ್ ೨-೩೦ ಮುಕ್ತಾಯ

ಸಂಜೆ ೬-೧೦ ರಿಂದ ೬-೩೦ ಎಂ ಎಸ್ ಸದಾಶಿವಯ್ಯ (ಹಾಡುಗಾರಿಕೆ) ೭-೫ ತಬಲ ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಹರಿಹರಾನಂದ ಭಾರತಿ-ಕಥಾಕಾಲಕ್ಷೇಪವು ೯-೦ ಇಂಗ್ಲೀಷಿನಲ್ಲಿವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ವಾದ್ಯಸಮ್ಮೇಳನ ೯-೪೫ ಮುಸರಿ ಸುಬ್ರಮಣ್ಯ ಅಯ್ಯರ್ ರಿಕಾರ್ಡುಗಳು ೧೦-೦ ಮುಕ್ತಾಯ.

● ಎ ಎನ್.ಎ. ರಾಮರಾವ್‌ರವರು ಮೊನ್ನೆ ದಿನ ನಮ್ಮ ನಗರಕ್ಕೆ ಆಗಮಿಸಿರುತ್ತಾರೆ. ಇವರು ಐ.ಎನ್.ಎ. ನಲ್ಲಿ ತಮ್ಮ ಅಮೋಘ ಸೇವೆಯನ್ನು ಸಲ್ಲಿಸಿರುತ್ತಾರೆ. ಈಗ ಇವರು ಮೈಸೂರು ಸಂಸ್ಥಾನದ ಭಾರತ ಸೇವಾದಳದ ಜಿ.ಓ.ಸಿ ಗಳಾಗಿ ನಮ್ಮ ನಾಡಿಗೆ ಸೇವೆ ಸಲ್ಲಿಸುತ್ತಿರುತ್ತಾರೆ ಇವರ ಐ. ಎನ್. ಎ. ಕಾರ್ಯಕಲಾಪಗಳಲ್ಲಿ ತೊಡಗಿದ್ದಾಗ ಅವರು ಸಿಕ್ಕಿ ಇವರ ಅದ್ಭುತ ಕೆಲಸಗಳನ್ನು ನೋಡಿ ಆಶ್ಚರ್ಯಪಟ್ಟು ಇವರಮೇಲಿನ ವಿಶ್ವಾಸದಿಂದ ಇವರ ಎಡಗೈ ಹೆಬ್ಬೆರಳನ್ನು ಕತ್ತರಿಸಿರುತ್ತಾರೆ. ಇವರು ನಮ್ಮ ನಗರದಲ್ಲಿ ನಡೆಯುತ್ತಿರುವ ಭಾರತಸೇವಾದಳದ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ಕೊಡುತ್ತಿರುತ್ತಾರೆ.

● ಸೇವಾಸದನದ ಅನಾಥಮಕ್ಕಳಿಂದ ಬಣ್ಣದ ರಂಗೋಲೆಯಿಂದ ಮಾಡಿರುವ, ಬಾಪೂ ಮತ್ತು ನೆಹರೂ ಅಲ್ಲದೆ ಸರ್ವೋದಯವನ್ನು ತಪ್ಪದೆ ನೋಡಿ ತನ್ಮೂಲಕ ಸಹಾಯ ಮಾಡಬೇಕೆಂದು ಕೋರಿದೆ.

ರಣಜಿತ್
13-10-50 ಶುಕ್ರವಾರದಿಂದ
ಯಶಸ್ವಿಯಾದ 2ನೇ ವಾರ
ದಿನವಹಿ 3 ಪ್ರದರ್ಶನಗಳು
ಆಧಿರಾತ್ ★ (Adhi Raat)
(ಹಿಂದಿ)
ಪಾತ್ರ. † ಅಶೋಕ ಕುಮಾರ್
† ನರ್ಗಿಸ್
ಬೆಳಗಿನ ಪ್ರದರ್ಶನ
13-10-50 ರಿಂದ 3 ದಿನಗಳು ಮಾತ್ರ
ಲ್ಯೂರ್ ಆಫ್ ಸಿಟಿ (ಹಿಂದಿ)
ಮುಂದಿನ ಬದಲಾವಣೆ. ಹಸ್ತೇ-ಅನ್-ಸು

- ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರ ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

ಬಿಡಿಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೪—೧೦—೧೯೫೦ ನೇ ಶನಿವಾರ [ಸಂಚಿಕೆ ೪೯.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

★ ಲಕ್ಷಾಧೀಶ ಬಟ್ಟೆ ವರ್ತಕರ ದಸ್ತಗಿರಿ ★

—ಭಾರಿ ಕಾಳಸಂತೆಕೋರರ ಮೇಲೆ ತೀವ್ರ ಕಾರ್ಯಕ್ರಮ

ಪೌರಸಭೆಗಳಲ್ಲಿ ಕೋಮುವಾರು ಸ್ಥಾನ ರದ್ದು

ಮದರಾಸು ಪ್ರಾಂತ್ಯದ ಪೌರಸಭೆಗಳಲ್ಲಿ ಕೋಮುವಾರು ಆಧಾರದ ಮೇಲೆ ಸ್ಥಾನಗಳನ್ನು ಮೀಸಲು ಇಡುವ ಪದ್ಧತಿಯನ್ನು ರದ್ದುಮಾಡಲು ಬಂದಿದ್ದ ಮಸೂದೆಯನ್ನು ಮದರಾಸು ಶಾಸನಸಭೆಯು ಅಂಗೀಕರಿಸಿದೆ. ಆದರೆ ನಿಮ್ನ ವರ್ಗ ಮತ್ತು ಆಂಗ್ಲೋ-ಇಂಡಿಯನ್ನರಿಗೆ ಮಾತ್ರ ಸ್ಥಾನಮಾನ ಮೀಸಲಾಗಿಡಲಾಗುವುದು.

ಹುಬ್ಬಳ್ಳಿಗೆ ಮೈಸೂರಿನಿಂದ ವಿದ್ಯುಚ್ಛಕ್ತಿ

ಮೈಸೂರು ಸರ್ಕಾರವು ಜೋಗ್ ಕೇಂದ್ರದಿಂದ ಹುಬ್ಬಳ್ಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದು. ಜೋಗ್‌ನಿಂದ ಹುಬ್ಬಳ್ಳಿ ೧೦೦ ಮೈಲಿ ದೂರವಿದೆ.

ಅಧ್ಯಕ್ಷ ಟ್ರೂಮನ್ನರು ಪಂ॥ ನೆಹರೂರನ್ನು ಸಂದರ್ಶಿಸಲಿ

ಏಷ್ಯಾದ ಸಮಸ್ಯೆಗಳನ್ನು ಪರಿಶೀಲಿಸಿ ತೀರ್ಮಾನಿಸುವಲ್ಲಿ ಏಷ್ಯಾದ ಜನಾಂಗಗಳಿಗೆ ಪ್ರಮುಖಸ್ಥಾನವನ್ನು ಕೊಡುವುದು ನ್ಯಾಯವೆಂದೂ, ಆ ವಿಚಾರದಲ್ಲಿ ಅಮೆರಿಕಾ ಪೂರ್ಣ ಸಹಾನುಭೂತಿ ತೋರುವ ಸಲುವಾಗಿ, ಯೂರೋಪಿನ ರಾಷ್ಟ್ರಗಳಿಗೆ ತೋರುತ್ತಿರುವಂತೆಯೇ ಏಷ್ಯಾದ ರಾಷ್ಟ್ರಗಳಿಗೂ ಮನ್ನಣೆಯನ್ನು ಕೊಡುವುದು ಅಗತ್ಯವೆಂದೂ, ಆ ಬಗ್ಗೆ ಅಧ್ಯಕ್ಷ ಟ್ರೂಮನ್ನರು ಭಾರತದ ಪ್ರಧಾನಿ ಪಂ॥ ನೆಹರೂರವರನ್ನು ಭಾರತದಲ್ಲಿಯೇ ಭೇಟಿ ಮಾಡುವುದು ಯುಕ್ತವೆಂದೂ, ಹಾಪ್ಕಿನ್ಸ್ ಇನ್ಸ್ಟಿಟ್ಯೂಟಿನ ಡೈರೆಕ್ಟರಾದ ಓವೆನ್ ಲ್ಯಾಟಿಮೂರರು ತಿಳಿಸಿದ್ದಾರೆ.

ಬಾಲ್ಯವಿವಾಹ ವಿರುದ್ಧ ಚಳುವಳಿ

ಭಾರತದ ಜನಸಂಖ್ಯೆ ಮಿತಿಮೀರಿ ಬೆಳೆಯುತ್ತಿರುವುದಕ್ಕೆ ಬಾಲ್ಯವಿವಾಹವೇ ಮೂಲಕಾರಣ ಆದ್ದರಿಂದ ತರುಣರು ಭಾರತಾದ್ಯಂತ ಬಾಲ್ಯವಿವಾಹ ವಿರುದ್ಧ ಚಳುವಳಿ ನಡೆಸಬೇಕೆಂದು ಕೇಂದ್ರದ ಆರೋಗ್ಯಮಂತ್ರಿ ರಾಜಕುಮಾರಿ ಅಮೃತ್‌ಕೌರ್‌ರು 'ಸಂತಾನ ನಿರೋಧ' ಬಗ್ಗೆ ಏರ್ಪಡಿಸಿದ್ದ ಚರ್ಚೆಯಲ್ಲಿ ತಿಳಿಸಿರುವರು

ಸರ್. ಆರ್ಕಾಟರಿಗೆ

ಕೊರಿಯಾ ಪುನರ್ವ್ಯವಸ್ಥೆಯ ಅಧಿಕಾರ ಸ್ಥಾನವೆ?

ವಿಶ್ವಸಂಸ್ಥೆಯ ಕೊರಿಯಾ ಪರಿಹಾರ ಮತ್ತು ಪುನರ್ವ್ಯವಸ್ಥೆಯ ಯೋಜನಾಧಿಕಾರಿಗಳ ಸ್ಥಾನಕ್ಕೆ ಸರ್. ಆರ್ಕಾಟರೇ ಅತ್ಯರ್ಹರೆಂದು ಲೇಕ್‌ಸಕ್ಸೆಸ್ಸಿನಲ್ಲಿ ಮತ್ತು ಸಾಮಾಜಿಕ ಸಂಸ್ಥೆಗಳ ವಲಯಗಳಲ್ಲಿ ಪ್ರಸ್ತಾಪಿಸಲಾಗುತ್ತಲಿದೆ.

ಕೊರಿಯಾ ವಿಚಾರದಲ್ಲಿ ಭಾರತದ ಘೋಷಣೆಯಿಂದ ಭಾರತವು ಈ ಆಡಳಿತ ಜವಾಬ್ದಾರಿಯನ್ನು ವಹಿಸಲು ಸಾಧ್ಯವೇ ಎನ್ನುವುದು ವಾದಿಸಲಾಗಿದೆ

ಮೊದಲು ಮಾತನಾಡಿದರು

ಇಂಡೋನೇಷ್ಯಾದ ಅಧ್ಯಕ್ಷರಾದ ಡಾ॥ ಸೋಕರ್ನೋರವರು ರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರ ಪ್ರಸಾದರೊಂದಿಗೆ ಭಾರತ-ಇಂಡೋನೇಷ್ಯಾಕ್ಕೆ ನೇರವಾಗಿ ಏರ್ಪಡಿಸಿದ ಟೆಲಿಫೋನ್ ಮೂಲಕ ಪ್ರಥಮವಾಗಿ ಮಾತನಾಡಿದರು

ಮಧ್ಯಭಾರತದಲ್ಲಿ ನೂತನ ಮಂತ್ರಿ ಮಂಡಲ

ಮಧ್ಯಭಾರತದಲ್ಲಿ ಹೊಸ ಮಂತ್ರಿಮಂಡಲದ ಮುಖ್ಯಮಂತ್ರಿ ಶ್ರೀ ತಖತ್‌ಮಲ್ ಜೈನ್ ಮತ್ತು ಇವರ ಸಚಿವರು ಪ್ರಮಾಣ ಸ್ವೀಕಾರ ಮಾಡಿದೊಡನೆಯೇ ಸಭೆ ಸೇರಿದ ಮಂತ್ರಿ ಮಂಡಲವು ಗ್ವಾಲಿಯರಿನಲ್ಲಿ ವಿದ್ಯಾರ್ಥಿ ಚಳುವಳಿ ಸಂದರ್ಭದಲ್ಲಿ ದಸ್ತಗಿರಿಯಾಗಿದ್ದ ಎಲ್ಲಾ ವಿದ್ಯಾರ್ಥಿಗಳನ್ನೂ ಕೂಡಲೇ ಬಿಡುಗಡೆ ಮಾಡಲು ನ್ಯಾಯಾಲಯಗಳಲ್ಲಿ ಹೂಡಲಾಗಿದ್ದ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ನಿರ್ಧರಿಸಿತು.

ಉತ್ತರ ಕೊರಿಯನ್ನರ ನಿರಾಕರಣೆ

ಜನರಲ್ ಮೆಕಾರ್ಥರ್‌ರವರು ಉತ್ತರ ಕೊರಿಯನ್ನರು ಶರಣಾಗತರಾಗಬೇಕೆಂದು ಹೊರಡಿಸಿದ್ದ ಪ್ರಕಟಣೆಗೆ ವಿರುದ್ಧವಾಗಿ ಉತ್ತರ ಕೊರಿಯಾದ ಅಧ್ಯಕ್ಷರು ಉತ್ತರವೀಯುತ್ತಾ ಅಂತ್ಯದವರೆಗೂ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಬೇಕೆಂದೂ, ಈಗ ಬಂದೊದಗಿರುವ ಉತ್ಕಟ ಪರಿಸ್ಥಿತಿಯನ್ನು ಧೈರ್ಯದಿಂದಲೂ ಮತ್ತು ಕೆಚ್ಚಿನಿಂದಲೂ ಎದುರಿಸಿ ಉತ್ತರ ಕೊರಿಯನ್ನರು ವಿಜಯಗಳಿಸುವುದು ಖಂಡಿತವೆಂದೂ ಪಿಯೋಂಗ್ಯಾಂಗ್ ರೇಡಿಯೋ ಮೂಲಕ ಪ್ರಸಾರ ಮಾಡಿದ್ದಾರೆ.

ಮೂವರು ಪ್ರಮುಖ ಬಟ್ಟೆವರ್ತಕರ ಮೇಲೆ ದಸ್ತಗಿರಿ ವಾರಂಟು ಹೊರಟೊಡನೆಯೇ ಆ ವರ್ತಕರು ತಾವಾಗಿಯೇ ಸಬ್ ಡಿವಿಜನಲ್ ನ್ಯಾಯಾಲಯಕ್ಕೆ ಮುಜಾಫರ್ ಪುರದಲ್ಲಿ ಹಾಜರಾದರು. ಅವರಲ್ಲಿಬ್ಬರು ಲಕ್ಷಾಧೀಶರರು. ಇವರನ್ನು ಜಾಮೀನಿನಮೇಲೆ ಬಿಡಲು ನಿರಾಕರಿಸಿ ಜೈಲಿಗೆ ರಿಮಾಂಡ್ ಮಾಡಲಾಗಿದೆ.

ಇನ್ನು ೧೩ ಜನ ಬಟ್ಟೆ ವರ್ತಕರು ತಲೆಮರಿಸಿಕೊಂಡಿದ್ದಾರೆ. ಅವರ ಮೇಲೂ ದಸ್ತಗಿರಿ ವಾರಂಟು ಹೊರಟಿದೆ ಕಾಳಸಂತೆ ನಿರ್ಮೂಲಮಾಡಲು ಭಾರತಾದ್ಯಂತ ತೀವ್ರ ಕಾರ್ಯಕ್ರಮಗಳು ಜರುಗುತ್ತಲಿವೆ

ಅಕ್ರಮ ದಾಸ್ತಾನು

ಅಕ್ರಮ ದಾಸ್ತಾನನ್ನು ಪತ್ತೆಹಚ್ಚಲು ಪೋಲೀಸರು ಪಾಟ್ನಾ ಜಿಲ್ಲೆಯಲ್ಲಿ ಶೋಧನೆ ನಡೆಸಿ ೫,೦೦೦ ಮಣ ಧಾನ್ಯವನ್ನು ಮತ್ತು ಮಿನುಪ್ಪರದಲ್ಲಿ ೩೦೦ ಮಣದಷ್ಟು ಕಂಡು ಹಿಡಿದಿದ್ದಾರೆ

ಪಂ॥ ನೆಹರೂರವರ ನಿರಾಕರಣೆ

ಪ್ರಧಾನಿ ಪಂಡಿತ ನೆಹರೂರವರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಂಡನ್ನರವರಿಗೆ ಪತ್ರ ಬರೆದು, ತಾವು ಕಾರ್ಯಕಾರಿ ಸಮಿತಿಗೆ ಸೇರಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ

● ಮೈಸೂರು ನಗರದಲ್ಲಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ದಸರಾ ಕಾಲದಲ್ಲಿ ಚಂದಾ ವಸೂಲಿಗೆ ಎಲ್ಲಾ ಕಡೆಗಳಲ್ಲೂ ಸಂಚಾರ ಹೊರಡುತ್ತಾರೆ. ಮಹಾಜನರೆಲ್ಲರೂ ಇವರಿಗೆ ಸಹಾಯ ನೀಡಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಬೇಕೆಂದೂ ನಿಲಯದ ಕಾರ್ಯದರ್ಶಿ ಶ್ರೀ ಟಿ ಎಸ್. ಸುಬ್ಬಣ್ಣನವರು ಮನವಿ ಮಾಡಿಕೊಂಡಿದ್ದಾರೆ.

● ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ರಾಜಧಾನಿಯ ಒಲಿಂಪಿಯಾ, ಚಾಮುಂಡೇಶ್ವರಿ ಮತ್ತು ರಾಜಕಮಲ್ ಟಾಕೀಸಿನ ಮಾಲೀಕರುಗಳು ತಲಾ ೧೦೧ ರೂಪಾಯಿಗಳನ್ನು ದಾನಮಾಡಿದ್ದಾರೆ.

● ದಸರ ರಜದ ಪ್ರಯುಕ್ತ ಹೈಕೋರ್ಟು ಮತ್ತಿತರ ಕೋರ್ಟುಗಳನ್ನು ಅಕ್ಟೋಬರ್ ೧ನೇ ತಾರೀಖಿನಿಂದ ಅ. ೨೮ನೇ ತಾ॥ ವರೆಗೆ ಮುಚ್ಚಲಾಗಿದೆ.

● ಅಸ್ಸಾಂ ಗೌರ್ನರ್ ಪರಿಹಾರ ನಿಧಿಗೆ ೧,೩೧,೦೦೦ರೂ.ಗಳು ಶೇಖರವಾಗಿದೆಯೆಂದು ತಿಳಿದುಬರುತ್ತದೆ.

ಪಾಕ್ ಭಾರತ ಶಾಂತಿ ಒಪ್ಪಂದ

ಪಾಕಿಸ್ತಾನ ಪ್ರಧಾನಿ ಲಿಯಾಖತ್ ಅಲಿ ಖಾನರು, ಭಾರತ ಪ್ರಧಾನಿ ಪಂಡಿತ ನೆಹರೂರವರಿಗೆ "ಯುದ್ಧ ಮಾಡುವುದಿಲ್ಲ"ವೆಂಬ ಶಾಂತಿ ಒಪ್ಪಂದದ ಬಗ್ಗೆ ಬರೆದಿರುವ ಪತ್ರಕ್ಕೆ ಕೇವಲ ಒಪ್ಪಂದಮಾಡಿಕೊಂಡು ಒಂದೇ ಒಂದು ಮಾರ್ಗಾವಲಂಬಿಯಾಗಿ ವರ್ತಿಸುವುದು ಯುಕ್ತವಲ್ಲವೆಂದೂ, ಯುದ್ಧ ಮಾಡದೆ ಶಾಂತರೀತಿಯಿಂದ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸಲು ಉಭಯರಾಷ್ಟ್ರಗಳೂ, ಸಂಕಲ್ಪಿಸಿದಲ್ಲಿ ಪ್ರತ್ಯೇಕ ಸಮಸ್ಯೆಗಳನ್ನು ಹಿತವಾದ ಶಾಂತವಾದ ವಾತಾವರಣದಲ್ಲಿ ಬಿಡಿಸಲು ಸಾಧ್ಯವೆಂದೂ ನಿರ್ದೇಶಿಸಿ ಉತ್ತರವಾಗಿ ಬರೆಯಲಾಗಿದೆಯೆಂದು ತಿಳಿದು ಬರುತ್ತದೆ.

ಅಂತರರಾಷ್ಟ್ರೀಯ ಪತ್ರಿಕಾ ಸಂಸ್ಥೆ

ಅಂತರರಾಷ್ಟ್ರೀಯ ಪತ್ರಿಕಾ ಸಂಸ್ಥೆಯ ಸ್ಥಾಪನೆಗೆ ವ್ಯವಸ್ಥೆಯನ್ನು ನ್ಯೂಯಾರ್ಕ್‌ನಲ್ಲಿ ೧೪ ರಾಷ್ಟ್ರಗಳಿಂದ ಬಂದಿರುವ ಪತ್ರಿಕಾ ಸಂಪಾದಕರುಗಳ ಸಮ್ಮೇಳನದಲ್ಲಿ ಮಾಡಲಾಗಿದೆ, ಬ್ರಿಟನ್, ಆಸ್ಟ್ರೇಲಿಯಾ ಮತ್ತು ಭಾರತ ಪ್ರತಿನಿಧಿಗಳೂ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.

ಅಮೆರಿಕಾ ಧಾನ್ಯ ಭಾರತಕ್ಕೆ

ಭಾರತ ಆಹಾರ ಪರಿಸ್ಥಿತಿಯನ್ನು ಸರಿತೂಗಿಸಲು ತ್ವರಿತವಾಗಿ ಅಮೆರಿಕಾದಿಂದ ೭,೨೭,೦೦೦ ಟನ್ ಆಹಾರ ಧಾನ್ಯವನ್ನು ಭಾರತವು ಕೊಳ್ಳಲಿದೆಯೆಂದ ಆರ್ಥಿಕ ಸಹಕಾರಾಡಳಿತ ಶಾಖೆಯ ಪ್ರಕಟಣೆಯು ತಿಳಿಸುತ್ತದೆ. ಈ ಧಾನ್ಯದ ಬೆಲೆಯ ಪೈಕಿ ಭಾರತವು ೧,೩೪,೦೪,೨೩೭ ಡಾಲರುಗಳನ್ನು ಕೊಡುವುದು. ಆರ್ಥಿಕ ಸಹಕಾರಾಡಳಿತ ಸಂಸ್ಥೆಯು ೪೬,೦೦,೦೦೦ ಡಾಲರುಗಳ ಗ್ರಾಂಟನ್ನು ಕೊಡುವುದು.

ಸಹಕಾರ ಭವನಗಳು

ಮೈಸೂರು ಪ್ರಾವಿನ್ಷಿಯಲ್ ಕೋ ಆಪರೇಟಿವ್ ಇನ್ಸ್ಟಿಟ್ಯೂಟಿನ ಆಶ್ರಯದಲ್ಲಿ ಸಂಸ್ಥಾನದ ಮಲ್ಟಿ ಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳ ಸಮ್ಮೇಳನವು ಅಕ್ಟೋಬರ್ ೧೮ನೇ ತಾ ಬೆಳಿಗ್ಗೆ ೮-೩೦ ಘಂಟೆಗೆ ಮೈಸೂರು ಸಹಕಾರ ಭವನದಲ್ಲಿ ಹೊಂ. ಮಂತ್ರಿ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ೧೯ನೇ ತಾರೀಖು ಬೆಳಿಗ್ಗೆ ೮-೩೦ ಗಂಟೆಗೆ ಶ್ರೀ ಇ. ವಿ. ಗಣಪತಿ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಪಟ್ಟಣಗಳ ಕೋ ಆಪರೇಟಿವ್ ಬ್ಯಾಂಕುಗಳ ಸಮ್ಮೇಳನ ನಡೆಯುವುದು.

ಯುದ್ಧ ರಹಿತ ಘೋಷಣೆ

ಯುದ್ಧ ಬೇಡವೆಂದು ಘೋಷಣೆಯಾಗಲೆಂದು ಸಲಹೆಮಾಡಿ, ಸೆಪ್ಟಂಬರಿನಲ್ಲಿ ಪ್ರಧಾನಿ ನೆಹರೂರವರಿಗೆ ಬರೆದು ಪತ್ರಕ್ಕೆ ಉತ್ತರ ಬಂದಿದೆಯೆಂದು ಪ್ರಧಾನಿ ಲಿಯಾಕತ್ ಆಲಿಖಾನರು ತಿಳಿಸಿರುವರು. ಪತ್ರದಲ್ಲೇನಿದೆಯೆಂಬುದನ್ನು ಹೊರಗೆಡಹಿಲ್ಲ.

ಐಶ್ವರ್ಯವಂತರಿಗೆ ಎಚ್ಚರಿಕೆ

ಭಾರತದಲ್ಲಿ ಶ್ರೀಮಂತ ಜನರು ಬಡವರಿಗೆ ಕಷ್ಟಕಾಲದಲ್ಲಿ ಸಹಾಯಮಾಡದಿದ್ದಲ್ಲಿ, ಬಡವರು ದಂಗೆ ಏಳುವರು, ಕೊನೆಗೆ ಐಶ್ವರ್ಯವಂತರನ್ನೆಲ್ಲಾ ಸದೆಬಡಿಯುವರು ಎಂದು ಭಾರತದ ಲೇಬರ್ ಮಂತ್ರಿ ಶ್ರೀ ಜಗಜೀವನರಾಂರವರು ಎಚ್ಚರಿಸಿದ್ದಾರೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಅಕ್ಟೋಬರ್ ೧೫ ಭಾನುವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ತಾರಾವಾಹಿನಿ ೭-೩೫ ನವೀನಕೀರ್ತನೆ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಕೊಳಲು ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಹಾಡುಗಳು ೨-೩೦ ಮುಕ್ತಾಯ.

ಸಂಜೆ ೫-೩೦ ನಾಗಮ್ಮ (ಹಾಡುಗಾರಿಕೆ) ೬-೦ ಇಂಗ್ಲೀಷಿನಲ್ಲಿವಾರ್ತೆ. ೬-೧೦ ವಾದ್ಯಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ ೮-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ರಸನಿಮಿಷ ೭-೩೦ ನಾಗಮ್ಮ (ಹಾಡುಗಾರಿಕೆ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕೃಷ್ಣಯ್ಯಂಗಾರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ರತ್ನಸಿಂಹಾಸನ ನಾಟಕ ೧೦.೦ ಮುಕ್ತಾಯ

ಅಕ್ಟೋಬರ್ ೧೬ ಸೋಮವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ನವೀನ ಕೀರ್ತನ ೭-೩೫ ಪಕ್ಷಿನೋಟ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಗಿತಾರ್ ೧-೪೫ ಹಿಂದೀ ಶಿಕ್ಷಣ ೨-೦ ಜನರಂಜನಿ ೨-೧೫ ವಾದ್ಯಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ಕುಮಾರ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೧೫ ಕುಮಾರ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದಸುಧಾ ೮-೧೫ ಇಂಗ್ಲೀಷ್ ಡಾಕ್ಟರವರಿಂದ ಭಾಷಣ ೮-೩೦ ನೀಲಮ್ಮ ಕಡಾಂಬಿ (೦) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ನೀಲಮ್ಮ ಕಡಾಂಬಿ (೦) ೧೦-೦ ಮುಕ್ತಾಯ.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು ! ಬಹು ಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೇಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು.

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾ ವು.

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ,
ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ;

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ರಣಜಿತ್
13-10-50 ಶುಕ್ರವಾರದಿಂದ
ಯಶಸ್ವಿಯಾದ 2ನೇ ವಾರ
ದಿನವಹಿ 3 ಪ್ರದರ್ಶನಗಳು
ಆಧಿರಾತ್ ★ (Adhi Raat)
(ಹಿಂದಿ)
ಪಾತ್ರ: † ಅಶೋಕ ಕುಮಾರ್
† ನರ್ಗಿಸ್

ಬೆಳಗಿನ ಪ್ರದರ್ಶನ
13-10-50 ರಿಂದ 3 ದಿನಗಳು ಮಾತ್ರ
ಬ್ಯೂರ್ ಆಫ್ ಸಿಟಿ (ಹಿಂದಿ)
ಮುಂದಿನ ಬದಲಾವಣೆ: ಹಸ್ತೇ-ಆನ್-ಸು

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬—೧೦—೧೯೫೦ನೇ ಸೋಮವಾರ [ಸಂಚಿಕೆ ೫೦

ಸರ್ಕಾರದ ದಿನಚರಿಯ ಕಾರ್ಯದಲ್ಲಿ ಕಾಂಗ್ರೆಸ್ ಅಧ್ಯಕ್ಷರು ಬಾಯಿ ಹಾಕಲಾಗದು

ಕಾಂಗ್ರೆಸ್ ಅಧ್ಯಕ್ಷನಾದವನು ಸರ್ಕಾರದ ಅಥವಾ ಮುಖ್ಯಮಂತ್ರಿಯ ಯಾವುದೇ ಕೆಲಸಕಾರ್ಯದಲ್ಲಿ ಬಾಯಿಹಾಕುವುದಕ್ಕೆ ಆಗುವುದಿಲ್ಲ. ಅದು ವ್ಯವಹಾರಿಕವೂ ಅಲ್ಲ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಸೇರಿರುವ ಮುಖ್ಯಮಂತ್ರಿಯಾದವರು ಕಾಂಗ್ರೆಸ್ಸಿನ ಆಣತಿಯನ್ನೂ ಕಾಂಗ್ರೆಸ್ಸಿನ ಧೋರಣೆಯನ್ನೂ ಕಾರ್ಯಗತಮಾಡುವುದು ಅಗತ್ಯ ಎಂಬುದೂ ನಿರ್ವಿವಾದ ಎಂದು ಶ್ರೀ ತಾಂಡನ್ನರವರು ತಮಗಿತ್ತ ಸತ್ಕಾರ ಕೂಟವೊಂದರಲ್ಲಿ ತಿಳಿಸಿದರು

ಶ್ರೀ ಹರೇಕೃಷ್ಣ ಮೆಹತಾಬ್‌ರವರ ಹೇಳಿಕೆ

ಖಾಸಗೀ ಕೈಗಾರಿಕೆಗಳಿಗೆ ಸರ್ವತೋಮುಖ ಉತ್ತೇಜನ ಕೊಡುವುದಾಗಿ ಭರವಸೆಯಿತ್ತು ಭಾರತದ ಕೈಗಾರಿಕೆ ಹಾಗೂ ಸರಬರಾಜು ಸಚಿವ ಶ್ರೀ ಹರೇ ಕೃಷ್ಣ ಮೆಹತಾಬ್‌ರವರು ಒರಿಸ್ಸಾ ವಾಣಿಜ್ಯ ಸಂಘದಲ್ಲಿ ಭಾಷಣ ಮಾಡಿದರು. ಅಲ್ಲದೆ ಇನ್ನು ಮುಂದೆ ರಾಷ್ಟ್ರೀಕರಣದ ಪೊಳ್ಳುಮಾತಿಗೆ ಬೆಲೆಕೊಡಬೇಡಿ, ಎಂದು ಭಾಷಣ ಮಾಡಿದರು

ಡಾ|| ಹಾರ್ಡೀಕರ್‌ರವರ ಆಗಮನ

ಡಾ|| ನಾ. ಸು. ಹಾರ್ಡೀಕರ್‌ರವರು ಇಂದು ಮೈಸೂರಿಗೆ ಆಗಮಿಸುವರೆಂದು ತಿಳಿದು ಬಂದಿದೆ. ಇವರು ಭಾರತ ಸೇವಾದಳದ ಸ್ಥಾಪಕರು ಇವರು ನಗರ ಆಸ್ಪತ್ರೆಗಳಿಗೆ ಭೇಟಿಕೊಡಲಿರುತ್ತಾರೆ ಅಲ್ಲದೆ ಇವರು ವಿದ್ಯಾಸಂಸ್ಥೆಗಳನ್ನೂ ಸಹಾ ಭೇಟಿಕೊಡಲಿದ್ದಾರೆ.

ಕಲ್ಲು ಹೊಡೆದು ಕೊಂದರು

ಟ್ರಾನ್ಸ್‌ವಾಲಿನ ೨೪ ಮೈಲಿ ದೂರದಲ್ಲಿರುವ ಕ್ರಾಲ್ ಗ್ರಾಮದಲ್ಲಿ ಆಫ್ರಿಕಾದ ಮುಖಂಡನೊಬ್ಬನನ್ನು ಎದುರುಪಕ್ಷದ ಮತ್ತೊಂದು ಆಫ್ರಿಕನ್ ಗುಂಪಿನವರು ಕಲ್ಲುಹೊಡೆದು ಕೊಂದುಹಾಕಿದ್ದಾರೆ. ಈ ಸಂದರ್ಭದಲ್ಲಿ ೫೦ ಜನರನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ.

ಬ್ರಿಟನ್ ಮತ್ತು ಫ್ರಾನ್ಸ್‌ಗಳ ಮೇಲೆ ಆಪಾದನೆ.

ಸಂಯುಕ್ತ ಲಿಬಿಯಾಸ್ಥಾಪನೆಗಾಗಿ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಒಂದು ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂದು ಇರಾಕಿನ ಡಾ|| ಫಾಡಿಲ್ ಜಮಾಲಿಯವರು ಲಿಬಿಯಾದ ಸಮಸ್ಯೆ ಪರಿಶೀಲನೆಗಾಗಿ ಏರ್ಪಟ್ಟಿರುವ ರಾಜಕೀಯ ಸಮಿತಿಯಲ್ಲಿ ಈ ದಿನ ಆಪಾದನೆ ಮಾಡಿದರು. ಲಿಬಿಯಾದ ಆಡಳಿತ ಈಗ ಬ್ರಿಟನ್ ಮತ್ತು ಫ್ರಾಂನ್ಸ್‌ಗಳ ಕೈಲಿದೆ.

ಸಕ್ಕರೆಯ ಬೆಲೆ ಏರಿದೆ

ಸಕ್ಕರೆಯ ಬೆಲೆಯು ಅಕ್ಟೋಬರ್ ೧೬ ರಿಂದ ಜಾಸ್ತಿ ಮಾಡಲಾಗಿದೆ. ಸೇಲ್ಸ್‌ಟ್ಯಾಕ್ಸನ್ನು ಬಿಟ್ಟು ಒಂದು ವೀಸೆಗೆ ರೂ. ೧-೬-೬ ನಂತೆ ಬೆಲೆ ನಿಗದಿಯಾಗಿದೆಯೆಂದು ತಿಳಿದುಬಂದಿದೆ.

ಪತ್ರಿಕಾಸಮ್ಮೇಳನ

ಕೋರಿಯಾ ಬಗ್ಗೆ ಭಾರತದ ನೀತಿಯನ್ನು ವಿವರಿಸಲು, ಈ ದಿನ ಬೆಳಗ್ಗೆ ೧೦ ಘಂಟೆಗೆ ಪ್ರಧಾನಮಂತ್ರಿ ಪಂಡಿತ ನೆಹ್ರೂರವರು ಪತ್ರಿಕಾಸಮ್ಮೇಳನವನ್ನು ಕರೆದಿದ್ದಾರೆ.

ಕಾಂಗ್ರೆಸ್ ಕೆಲಸಗಾರರ ಸಭೆ

ನಗರ ಕಾಂಗ್ರೆಸ್ ಸಮಿತಿಯು ಮೈಸೂರಿನ ಕಾಂಗ್ರೆಸ್ ಕೆಲಸಗಾರರ ಸಭೆಯನ್ನು ಇದೇ ತಿಂಗಳು ೧೮ನೇ ತಾ ಸಾಯಂಕಾಲ ೬-೩೦ಕ್ಕೆ ಕಾಂಗ್ರೆಸ್ ಕಛೇರಿಯಲ್ಲಿ ಏರ್ಪಡಿಸಿದ್ದಾರೆ. ಇದೇ ಮಾಹೆ ೨೮ ಮತ್ತು ೨೯ನೇ ತಾ|| ನಲ್ಲಿ ನಡೆಯಲಿರುವ ಎಂ. ಪಿ ಸಿ ಸಿ ಸಭೆಯ ಏರ್ಪಾಟಿನ ವಿಚಾರದಲ್ಲಿ ಚರ್ಚಿಸುವರು.

ಅಟಂಸಿಡಿತಕ್ಕೆ ಉಪ್ಪುನೀರು

ವಾಷಿಂಗ್‌ಟನ್ನಿನ ಸಂಶೋಧನಾಲಯದಲ್ಲಿ ಅಟಂಬಾಂಬಿಗೆ ಉಪ್ಪುನೀರನ್ನು ಉಪಯೋಗಿಸಬಹುದೆಂದು ಅಲ್ಲಿಯ ವೈಜ್ಞಾನಿಕರು ಸಂಶೋಧನೆ ನಡೆಸಿ ತಿಳಿಸಿರುತ್ತಾರೆ. ಈ ಅಟಂಬಾಂಬಿನ ಸಿಡಿತಕ್ಕೆ ಒಂದು ಲೋಟ ಉಪ್ಪುನೀರನ್ನು ಬೆರಸಿದ್ದಲ್ಲಿ ಅದರ ಸಿಡಿಯುತಕ್ಕ ಶಕ್ತಿ ಜಾಸ್ತಿಯಾಗುವುದೆಂದು ತಿಳಿಸಿದ್ದಾರೆ.

ಹಳೇ ವಿದ್ಯಾರ್ಥಿ ಸಂಘ

ನಗರದ ಶಾರದಾವಿಲಾಸ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘ ನಿನ್ನೆದಿನ ಸ್ಥಾಪಿತವಾಯಿತು ಶ್ರೀ ಎಂ. ಎಸ್. ರಾಮಸ್ವಾಮಿ (ಅಧ್ಯಕ್ಷರು) ಆರ್. ದೊರಸ್ವಾಮಿ (ಉಪಾಧ್ಯಕ್ಷರು) ಕೃಷ್ಣರಾವ್ ಮತ್ತು ಟಿ.ಎಸ್. ಗೋವಿಂದರಾವ್ (ಕಾರ್ಯದರ್ಶಿಗಳು), ಕೃಷ್ಣರಾವ್, ಶ್ರೀನಿವಾಸನ್, ಕೆ. ಸುಬ್ಬಣ್ಣ, ಶೇಷಾದ್ರಿ, ರಾಮಣ್ಣ, ಶಂಕರ್, ಇವರು ಕಾರ್ಯಕಾರಿ ಸಮಿತಿಯ ಸದಸ್ಯರುಗಳು.

ಚರ್ಚಾಸ್ಪರ್ಧೆ

ಅಖಿಲಭಾರತ ರೇಡಿಯೋ ಕೇಂದ್ರದ ಮೈಸೂರು ಶಾಖೆಯಲ್ಲಿ ೨೬ ನೇ ತಾ. ಗುರುವಾರ ರಾತ್ರಿ ೯-೩೦ ಘಂಟೆಗೆ ಇಂಗ್ಲೀಷ್‌ನಲ್ಲಿ ಅಂತರ ಕಾಲೇಜ್ ಚರ್ಚಾಸ್ಪರ್ಧೆಯನ್ನು ಏರ್ಪಡಿಸಿದ್ದಾರೆ.

ಮೈಸೂರಿನ ರಾಜಪ್ರಮುಖರು

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಏಳನೆಯ ಅಧಿವೇಶನದ ಉದ್ಘಾಟನಾ ಸಮಾರಂಭವನ್ನು ಮೈಸೂರಿನ ರಾಜಪ್ರಮುಖರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ ಜಿ. ಬಿ. ಇ ಯವರು ನವೆಂಬರ್ ೪ನೇ ತಾರೀಖು ನಡೆಯಿಸಲಿರುವರು

ಶ್ರೀ. ಟಿ. ಸಿದ್ದಲಿಂಗಯ್ಯನವರು

ಮೈಸೂರು ಅ ೧೬

ನಿನ್ನೆ ಸಂಜೆ ವಿದ್ಯಾಸಚಿವರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಸರ್ಕಾರದಿಂದ ೨೨ ಸಾವಿರ ರೂಪಾಯಿಗಳ ಖರ್ಚಿನಿಂದ ಕಟ್ಟಿರುವ ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದ ಪ್ರಾಥಮಿಕ ಪಾಠಶಾಲೆಯ ಆರಂಭೋತ್ಸವವನ್ನು ನೆರವೇರಿಸಿದರು

ಸಚಿವರು ಮಾತನಾಡುತ್ತಾ ಈಗಿನ ವಿದ್ಯಾಭ್ಯಾಸ ಪದ್ಧತಿಯನ್ನು ನಾವು ಬದಲಾಯಿಸಿ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳ್ಳುವ ಮತ್ತು ದೇಶದ ಐಶ್ವರ್ಯವನ್ನು ಹೆಚ್ಚಿಸುವ ವಿದ್ಯಾಭ್ಯಾಸವನ್ನು ಕೊಡಬೇಕಾಗಿದೆಯೆಂದು ತಿಳಿಸಿದರು. ಹಳ್ಳಿಗಳಲ್ಲಿರುವ ಧನಿಕರೂ ಮತ್ತು ಸಾಧಾರಣ ಜನರೂ ತಮ್ಮ ಆಸ್ತಿಪಾಸ್ತಿಯನ್ನು ಕಳೆದುಕೊಂಡು ಪ್ರೌಢ ವಿದ್ಯಾಭ್ಯಾಸಕ್ಕೆ ತಮ್ಮ ಮಕ್ಕಳನ್ನು ಕಳುಹಿಸುತ್ತಾ ಅನೇಕ ರೀತಿ ತೊಂದರೆಗೀಡಾಗಿದ್ದಾರೆ. ಆ ರೀತಿ ವಿದ್ಯಾಭ್ಯಾಸವು ನಮಗೆ ಬೇಡ ಎಂದು ನುಡಿದರು. ಅಲ್ಲಿಂದ ಕೃಷ್ಣರಾಜನಗರ ತಾಲ್ಲೂಕು ಚೌಕಹಳ್ಳಿ ಗ್ರಾಮವನ್ನು ಬದಲಾಯಿಸುವ ನಿವೇಶನ ಮುಂತಾದುವನ್ನು ಪರಿಶೀಲಿಸಿ ಮೈಸೂರಿಗೆ ಹಿಂತಿರುಗಿದರು.

ಬೆಂಗಳೂರು ಬಾಲಿಕೆ ಲಂಡನ್ನಿನಲ್ಲಿ

ಬೆಂಗಳೂರಿನ ೧೯ ವರ್ಷದ ಶಕುಂತಲ ಲಂಡನ್ನಿನ ಬಿ ಬಿ ಸಿ ಯಲ್ಲಿಯೂ ಮತ್ತು ವೃತ್ತಪತ್ರಿಕಾ ಪ್ರತಿನಿಧಿಗಳ ಮುಂದೆಯೂ ತನ್ನ ಅತ್ಯದ್ಭುತ ಗಣಿತ ಶಕ್ತಿಯನ್ನು ಪ್ರದರ್ಶಿಸಿ ಅಲ್ಲಿನವರನ್ನೆಲ್ಲಾ ಬೆರಗುಗೊಳಿಸಿದಳು. ಈ ಸಂದರ್ಭವನ್ನು ಚಿತ್ರಿಸುವ ಚಲಚಿತ್ರವನ್ನು ತಯಾರಿಸಿದ್ದಾರೆ.

RARE OPPORTUNITY! *DON'T MISS TO SEE!*

Under Ground Well of Death

ON AN ORDINARY BICYCLE

In DASARA EXHIBITION

Jeevanarayana Katte

By

Prof. TILAKRAJ NAYAR

NEW INVENTION ! DARE DEVIL SHOW !

ವರ್ಕಿಂಗ್ ಕಮಿಟಿಗೆ ಶ್ರೀ ಕೆ. ಹನುಮಂತಯ್ಯನವರು

ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕರ್ಣಾಟಕದ ಪರವಾಗಿ ಶ್ರೀ ಕೆ. ಹನುಮಂತಯ್ಯನವರನ್ನು ಅಧ್ಯಕ್ಷ ಬಾಬು ಟಾಂಡನ್ನರವರು ಆರಿಸಿಕೊಳ್ಳಲಿದ್ದಾರೆಂದು ತಿಳಿದುಬರುತ್ತದೆ.

ಕೈದಿಗಳ ಸಹಾಯಾರ್ಥ ನಾಟಕ

ಅಸ್ಸಾಂ ಪರಿಹಾರನಿಧಿಯ ಸಹಾಯಾರ್ಥವಾಗಿ ಬರ್ರೈಲಿ ಜೈಲಿನ ಕೈದಿಗಳು ಒಂದು ನಾಟಕವನ್ನು ಪ್ರದರ್ಶಿಸಿದರು. ನಾಟಕವೂ, ದೃಶ್ಯಾವಳಿಗಳೂ ಎಲ್ಲವೂ ಕೈದಿಗಳಿಂದಲೇ ರಚಿತವಾಗಿದುದ್ದಲ್ಲದೇ, ಅಭಿನಯ, ದಿಗ್ದರ್ಶನ ಸಂಗೀತವೆಲ್ಲವೂ ಕೈದಿಗಳಿಂದಲೇ ನಡೆಯಿತು.

ದೆಹಲಿ ಒಪ್ಪಂದ, ಹಗಲುಗನಸು

ಹಿಂದೂ ಮಹಾಸಭೆಯ ಅಧ್ಯಕ್ಷರಾದ ಡಾ॥ ಖಾರೆಯವರು, ಪಾಕಿಸ್ತಾನದ ಮಂತ್ರಿಯಾಗಿದ್ದ ಶ್ರೀ ಜೋಗೇಂದ್ರನಾಥ ಮಂಡಲರ ರಾಜಿನಾಮೆ ಹೇಳಿಕೆಯ ವಿಚಾರದಲ್ಲಿ, ತಮ್ಮ ಹೇಳಿಕೆಯಿತ್ತು, ದೆಹಲಿ ಒಪ್ಪಂದದಿಂದ ಮಹತ್ಸಾಧನೆಯಾಗುವುದೆಂದು ಬಯಸುವುದು ಒಂದು ಹಗಲುಗನಸು ಎಂದು ತಿಳಿಸಿದ್ದಾರೆ.

ಬೊಂಬಾಯಿ ಮುಷ್ಕರ ಮುಕ್ತಾಯ

ಯಾವ ಷರತ್ತೂ ಇಲ್ಲದೆ ಮುಂಬೈ ಬಟ್ಟೆಗಿರಣಿಯ ಮುಷ್ಕರವನ್ನು ಕೊನೆಗಾಣಿಸಲು ಸೋಷಲಿಸ್ಟ್, ಮಿಲ್ ಮಜದೂರ್ ಸಭಾದವರು ನಿರ್ಧರಿಸಿದ್ದಾರೆ.

ಮೊನ್ನೆರಾತ್ರಿ ಮಿಲ್ ಮಜದೂರ್ ಸಭಾದ ಮುಷ್ಕರ ಸಮಿತಿಯು ಈ ನಿರ್ಧಾರ ಕೈಗೊಂಡಿತು. ನೆನ್ನೆ ಸಂಜೆ ಬಟ್ಟೆಗಿರಣಿ ಕೆಲಸಗಾರರು ಬಹಿರಂಗ ಸಭೆಯಲ್ಲಿ ಈ ನಿರ್ಧಾರಕ್ಕೆ ಅಂಗೀಕಾರದ ಮುದ್ರೆ ಪಡೆಯಲಾಗುವುದು.

ಟ್ರೂಮನ್ ಮತ್ತು ಮೆಕಾರ್ಥರ್ ಚರ್ಚೆ

ಕೊರಿಯಾದ ಸಂಬಂಧವಾಗಿ ಅಮೆರಿಕಾವು ಪ್ರಪಂಚ ಸಂಸ್ಥೆಗೆ ಸಲ್ಲಿಸಿರುವ ಯೋಜನೆಯನ್ನು ಟ್ರೂಮನ್ ಮತ್ತು ಮೆಕಾರ್ಥರ್‌ರವರು ಲೇಕ್‌ಸಕ್ಸೆಸ್ಸಿನಲ್ಲಿ ನಡೆಯಲಿದೆ.

ಯಾವರೀತಿಯ ಆಡಳಿತರಚನೆಯು ಉತ್ತರ ಕೊರಿಯಾಕ್ಕೆ ಅನ್ವಯಿಸುವುದೋ ಅಥವಾ ಅದನ್ನು ಹ್ಯಾಗೇ ಉಳಿಸುವುದೋ ಎಂಬ ಬಗ್ಗೆ ಚರ್ಚೆ ನಡೆಯಲಿದೆ.

ವರ್ಕಿಂಗ್ ಕಮಿಟಿಗೆ ಪಂ॥ ನೆಹರೂರವರು

ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರವರು ರಚಿಸಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಪ್ರಧಾನಿ ಪಂ॥ ನೆಹರೂರವರು ಸೇರಲು ನಿರಾಕರಿಸಿದರೆಂದು ಸುದ್ದಿ ಹರಡಿದುದು, ನಿಜವಲ್ಲ. ಪ್ರಧಾನಿ ಪಂ॥ ನೆಹರೂರವರೂ ಮತ್ತು ಅಬ್ದುಲ್‌ಕಲಾಮ್ ಅಜಾದರೂ ವರ್ಕಿಂಗ್ ಕಮಿಟಿಗೆ ಸೇರಲು ಅಂಗೀಕರಿಸಿದ್ದಾರೆಂದು ದೆಹಲಿಯಿಂದ ಅಧಿಕೃತಸುದ್ದಿಯು ತಿಳಿಸುತ್ತದೆ.

ಫ್ರೆಂಚರಿಗೆ ಅಮೆರಿಕಾ ಸಹಾಯ

ಇಂಡೋಚೀಣಾದಲ್ಲಿ ಹೊಡೆದಾಡುತ್ತಿರುವ ಫ್ರೆಂಚ್ ಸೈನ್ಯಗಳಿಗೆ ಮಿಲಿಟರಿ ಸಹಾಯವನ್ನು ತಕ್ಷಣದಲ್ಲಿಯೇ ಅಮೆರಿಕಾ ಕಳುಹಿಸುವುದೆಂದು ಅಮೆರಿಕಾ ಸರ್ಕಾರ ತಂತಿ ಕಳುಹಿಸಿದೆ.

ಬಟ್ಟೆ ಅಂಗಡಿಗಳ ಶೋಧನೆ

ಕಲ್ಕತ್ತೆಗೆ ೨೦ ಮೈಲಿ ದೂರದಲ್ಲಿರುವ ದೊಡ್ಡ ದೊಡ್ಡ ಜವಳಿ ಅಂಗಡಿಗಳನ್ನು ಪೋಲೀಸಿನವರು ಹಠಾತ್ತನೆ ಶೋಧನೆ, ನಡೆಸಿ ೧೦ ಜನಗಳನ್ನು ಬ್ಲಾಕ್ ಮಾರ್ಕೆಟ್ ನಿರೋಧಕಾನೂನು ಪ್ರಕಾರ ದಸ್ತಗಿರಿ ಮಾಡಲಾಗಿದೆ.

ನೇತಾಜಿ ಸುಭಾಷರು ಬದುಕಿದ್ದಾರೆ !

ಸೇಠ್ ರಾಮಕೃಷ್ಣದಾಲ್ಮಿಯಾರವರು ಕಲ್ಕತ್ತಾದಲ್ಲಿ ಹೇಳಿಕೆಕೊಡುತ್ತಾ, ನೇತಾಜಿ ಸುಭಾಷ್‌ಚಂದ್ರಬೋಸರು ಬದುಕಿರುವರೆಂದು ತಮಗೆ ಖಚಿತವಾಗಿ ತಿಳಿದುಬಂದಿದೆಯೆಂದೂ, ಕೆಲವು ಕಾರಣಾಂತರಗಳಿಂದ ತಮಗದು ಯಾವರೀತಿ ತಿಳಿದುಬಂದಿತೆಂಬುದನ್ನು ಹೇಳಲಾಗುವುದಿಲ್ಲವೆಂದೂ, ಈಗಿನ ದುಃಸ್ಥಿತಿಯಿಂದ ಪಾರುಮಾಡಲು ಅವರು ಖಂಡಿತವಾಗಿ ತಮ್ಮ ಸಿಂಹನಾದವನ್ನು ಸಧ್ಯದಲ್ಲಿಯೇ ಮಾಡಲಿರುವರೆಂದೂ ತಿಳಿಸಿದ್ದಾರೆ.

ಕಳ್ಳ ಓಟಿಂಗ್ ತಡೆಗಟ್ಟಲಾಗುವುದು

ಭಾರತಾದ್ಯಂತ ನಡೆಯಲಿರುವ ಮಹಾ ಚುನಾವಣೆಯಲ್ಲಿ ಭಾಗವಹಿಸುವ ೧೭ ಕೋಟಿ ಜನರು ಓಟಿಂಗ್ ಕಾಲದಲ್ಲಿ ಕಳ್ಳತನದಿಂದ ಎರಡುಬಾರಿ ಓಟುಮಾಡುವುದನ್ನು ತಪ್ಪಿಸಲು ಒಂದು ವಿಶೇಷ ತರಹದ ಶಾಯಿಯನ್ನು ಕಂಡು ಹಿಡಿದಿದ್ದಾರೆ. ಈ ಶಾಯಿಯಿಂದ ಕೈಬೆರಳಿನ ಗುರುತು ಮಾಡುವುದಲ್ಲದೆ, ಆ ಶಾಯಿಯು ಅಂಟಿದ ಕೈಬೆರಳನ್ನು ತೊಳೆದುಕೊಂಡರೂ ಹೋಗುವಂತಿಲ್ಲ. ಇದಕ್ಕಾಗಿ ಶ್ರಮವಹಿಸಿ ಸಂಶೋಧನೆ ನಡೆಸಿದ್ದಾರೆ.

ರಾಷ್ಟ್ರಪತಿಗೆ ಮೂವರು ವೈದ್ಯರು

ರಾಷ್ಟ್ರಪತಿ ರಾಜೇಂದ್ರಬಾಬುವಿನ ವೈದ್ಯ ಸಿಬ್ಬಂದಿಗೆ ಮೂರು ಬಗೆಯ ವೈದ್ಯ ಪದ್ಧತಿಗಳ ಪ್ರತಿನಿಧಿಗಳನ್ನು ನೇಮಿಸಲಾಗಿದೆ. ಕಾಶಿಯ ಆಯುರ್ವೇದ ವೈದ್ಯರಾದ ಪಂಡಿತ ಸತ್ಯನಾರಾಯಣಶಾಸ್ತ್ರಿಗಳು, ಹೈದರಾಬಾದಿನ ಹಕೀಂ ಮಹಮೂದಾಲಿಯವರು ಮತ್ತು ದೆಹಲಿಯ ಹೋಮಿಯೋಪಥಿಕ್ ಡಾಕ್ಟರ್ ಕೆ. ಜಿ ಸಕ್ಸೇನಾರವರು ಈ ರೀತಿ ನೇಮಿತರಾಗಿದ್ದಾರೆ. ಹೀಗೆ ವೈದ್ಯರನ್ನು ನೇಮಿಸುತ್ತಿರುವುದು ಇದೇ ಮೊದಲು.

ರಾಷ್ಟ್ರಪತಿಯವರ ಭೇಟಿ

ಬಾಪೂಜೀಯವರು ೧೯೩೦ ರಲ್ಲಿ ವಾಸಿಸುತ್ತಿದ್ದ ಸಬರ್ಮತಿ ಆಶ್ರಮಕ್ಕೆ ರಾಷ್ಟ್ರಪತಿ ನೆನ್ನೆ ದಿನ ಭೇಟಿ ಕೊಟ್ಟಾಗ ಅವರಿಗೆ ತಡೆಯಲಾರದ ಅಳು ಬಂದಿತು. ೧೫ ನಿಮಿಷಗಳ ಕಾಲ ದುಃಖ ತಡೆಯಲಾಗಲಿಲ್ಲ. ಶ್ರೀ ಖೇರ್ ಮತ್ತು ಪತ್ರಿಕೋದ್ಯೋಗಿಗಳಿಗೂ ಕೂಡ ಕಣ್ಣಿನಲ್ಲಿ ನೀರು ತುಂಬಿ ಹರಿಯಿತು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೭ ಮೀಟರು

ಅಕ್ಟೋಬರ್ ೧೭ ಮಂಗಳವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ವೇದವಮ್ಮ ಸಿಂಗ್ರಾಚಾರ್ ಹಾಡುಗಾರಿಕೆ ೭-೩೫ ನವೀನ ಕೀರ್ತನೆ ೭-೪೫ ಕನ್ನಡದಲ್ಲಿ ಸುದ್ದಿ ೮-೦ ಇಂಗ್ಲೀಷಿನಲ್ಲಿ ಸುದ್ದಿ ೮-೧೫ ಮುಕ್ತಾಯ.

ಮಧ್ಯಾಹ್ನ ೧–೩೦ ಇಂಗ್ಲೀಷಿನಲ್ಲಿ ಸುದ್ದಿ. ೧-೪೦ ಮುಖವೀಣಾ ೧-೪೫ ಹಿಂದೀಶಿಕ್ಷಣ, ೨-೦ ವೇದವಮ್ಮ ಸಿಂಗ್ರಾಚಾರ್ ಹಾಡುಗಾರಿಕೆ ೨-೩೦ ಮುಕ್ತಾಯ.

ಸಂಜೆ ೫-೩೦ ಹಾಡುಗಾರಿಕೆ. ೬-೦ ಇಂಗ್ಲೀಷಿನಲ್ಲಿ ಸುದ್ದಿ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ. ೭-೦ ಸ್ಥಾನೀಯ ಸೂಚನಾಯೆ. ೭-೫ ಹಾಡುಗಾರಿಕೆ ೭-೩೦ ಕನ್ನಡದಲ್ಲಿ ವಾರ್ತೆ ೭-೪೫ ಕನ್ನಡದಲ್ಲಿ ಸುದ್ದಿ- ೮-೦ ದೊರಸ್ವಾಮಿ ಅಯ್ಯಂಗಾರ್ (ವೀಣಾ) ೯-೦ ಇಂಗ್ಲೀಷಿನಲ್ಲಿ ಸುದ್ದಿ ೯-೧೦ ಹಿಂದಿಯಲ್ಲಿ ಸುದ್ದಿ ೯-೩೦ ಗಾನವೀಕ್ಷಣ ೧೦-೦ ಮುಕ್ತಾಯ

ಬದರೀನಾಥ ದೇವಾಲಯದ ಮೇಲೆ ೨ ಅಂಗುಲ ಮಂಜು

ಬದರೀನಾಥ ದೇವಾಲಯದ ಮೇಲೆ ಮೊನ್ನೆ ಮೊಟ್ಟಮೊದಲನೆಯ ಬಾರಿ ಮಂಜುಬಿದ್ದಿದೆ ಎರಡು ಅಂಗುಲಗಳಷ್ಟು ಮಂಜುಬಿದ್ದಿರುವುದಾಗಿ ಗೊತ್ತಾಗಿದೆ.

● ಶ್ರೀ॥ ರಾಜಪ್ರಮುಖರವರಿಂದ ಕೊಟ್ಟ ಪ್ರಥಮ ಬಹುಮಾನ (ಬೆಳ್ಳಿ ಕಪ್ಪು) ನ್ನು ಟಿ. ಆರ್. ರಾಯ್ ರವರಿಗೆ ಕೊಡಲಾಯಿತು.

● ಗಂಧಧಮರದಿಂದ ಕೊರೆದಿರುವ ಗಾಂಧೀಜೀಯವರ ಸ್ತೂಪವನ್ನು ತಯಾರಿಸಿದ ಶ್ರೀ॥ ಮಂಜುನಾಥಪ್ಪನವರಿಗೆ ವಸ್ತು ಪ್ರದರ್ಶನದ ಕಮಿಟಿಯಿಂದ ಚಿನ್ನದ ಪದಕವನ್ನು ದ್ವಿತೀಯ ಬಹುಮಾನವಾಗಿ ಕೊಡಲಾಗಿದೆ.

ರಣಜಿತ್

13-10-50 ಶುಕ್ರವಾರದಿಂದ

ಯಶಸ್ವಿಯಾದ 2ನೇ ವಾರ

ದಿನವಹಿ 3 ಪ್ರದರ್ಶನಗಳು

ಆಧಿರಾತ್ ★ (Adhi Raat)

(ಹಿಂದಿ)

ಪಾತ್ರ : † ಅಶೋಕ ಕುಮಾರ್

† ನರ್ಗಿಸ್

ಬೆಳಗಿನ ಪ್ರದರ್ಶನ

13-10-50 ರಿಂದ 3 ದಿನಗಳು ಮಾತ್ರ

ಬ್ಲ್ಯೂರ್ ಆಫ್ ಸಿಟಿ (ಹಿಂದಿ)

ಮುಂದಿನ ಬದಲಾವಣೆ : **ಹಸ್ತೇ–ಆನ್–ಸು**

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೭—೧೦—೧೯೫೦ನೇ ಮಂಗಳವಾರ [ಸಂಚಿಕೆ ೫೧

ಕಾಂಗ್ರೆಸ್ ವರ್ಕಿಂಗ್ ಕಮಿಟಿ ರಚಿಸಲಾಯಿತು

ರಾಷ್ಟ್ರಪತಿಬಾಬು ಪುರುಷೋತ್ತಮದಾಸ್ ತಾಂಡನ್ನರವರು ನಿನ್ನೆ ತಾವು ರಚಿಸಿದ ನೂತನಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರ ಪಟ್ಟಿಯನ್ನು ಹೊರಗೆಡಹಿದರು. ಪ್ರಧಾನಿ ಪಂಡಿತನೆಹರೂರವರೂ ಜನಾಬ್ ಅಬ್ದುಲ್‌ಕಲಾಮ್ ಅಜಾದರೂ ಮತ್ತು ಶ್ರೀ ಸಿ. ರಾಜಗೋಪಾಲಚಾರಿಯವರೂ ಈ ಸಮಿತಿಯ ಸದಸ್ಯರಾಗಿದ್ದಾರೆ. ಈ ನೂತನ ಸಮಿತಿಯಲ್ಲಿ ಮಹಿಳಾ ಸದಸ್ಯರೊಬ್ಬರೇ ಒಬ್ಬರಿರುವರು; ಜುನಘಡದ ಮಾಜಿ ವಿದ್ಯಾಮಂತ್ರಿಗಳಾದ ಶ್ರೀಮತಿ ಪುಷ್ಪ ಮೆಹತಾರವರು.

ಈ ಸಮಿತಿಯ ಸದಸ್ಯರ ಪಟ್ಟಿ ಈ ರೀತಿ ಇದೆ. ಶ್ರೀಗಳಾದ :

ಪುರುಷೋತ್ತಮದಾಸ್ ತಾಂಡನ್ (ಅಧ್ಯಕ್ಷರು) ಸರದಾರ್ ವಲ್ಲಭಭಾಯಿ ಪಟೇಲ್ (ಖಜಾಂಚಿ) ಪಂ|| ಜವಹರ್‌ಲಾಲ್‌ನೆಹರೂ, ಮೌಲಾನಾ ಅಬ್ದುಲ್‌ಕಲಾಂ ಅಜಾದ್, ಸಿ. ರಾಜಗೋಪಾಲಚಾರಿಯವರು, ಜಗಜೀವನರಾಂರವರು, ಪಂ|| ಗೋವಿಂದ ವಲ್ಲಭಪಂತ್, ಎಸ್. ಕೆ. ಪಾಟೀಲರವರು, ಕಾಮರಾಜನಾಡರ್‌ರವರು ಸರದಾರ್ ಪ್ರತಾಪಸಿಂಗ್ ಕೈರಾನ್, ಎನ್. ಜಿ. ರಂಗರವರು, ಅತುಲ್ಯ ಘೋಷ್‌ರವರು, ಸಿದ್ಧೇಶ್ವರಶರ್ಮರವರು, ಲಕ್ಷ್ಮೀನಾರಾಯಣಸುಧನ್ವರವರು, ಬಿ. ಎಸ್. ಹಿರೇರವರು, ಸೇಠ್ ಗೋವಿಂದದಾಸ್‌ರವರು, ಗೋಕುಲಲಾಲ್ ಅಸವರವರು, ಶ್ರೀಮತಿ ಪುಷ್ಪಾಮೆಹತಾರವರು ಕಾಳವೆಂಕಟರಾವ್‌ರವರು, ಮತ್ತು ಮೋಹನಲಾಲ್ ಗೌತಮರವರು (ಪ್ರಧಾನ ಕಾರ್ಯದರ್ಶಿಗಳು).

ಈ ಸಮಿತಿಯಲ್ಲಿ ಒಟ್ಟು ೨೦ ಸದಸ್ಯರಿರುವರು. ಪಂ|| ನೆಹರೂರವರು ಸಮಿತಿಗೆ ಸೇರಲು ಮೌಲಾನಾ ಅಜಾದರ ಪ್ರೇರೇಪಣೆಯೇ ಕಾರಣವೆಂದು ಶ್ರೀ ತಾಂಡನ್ನರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಆಟಂ ಶಕ್ತಿಯಿಂದ ವಿಮಾನಗಳ ಹಾರಾಟ

ಎಣಿಕೆ ಇಲ್ಲದಷ್ಟು ವ್ಯಾಪ್ತಿಯ ಮಹಾ ವೇಗದಲ್ಲಿ ವಿಮಾನಗಳು ಹಾರಾಡುವಂತೆ ಆಟಂ ಶಕ್ತಿಯನ್ನು ಅವುಗಳಿಗೆ ಅಳವಡಿಸಬಹುದೆಂದು ಅಂತರರಾಷ್ಟ್ರೀಯ ವಿಮಾನ ಟ್ರಾನ್ಸ್‌ಪೋರ್ಟ್ ಸಂಘದ ಡೈರೆಕ್ಟರ್‌ರವರು ತಿಳಿಸಿರುತ್ತಾರೆ.

ನೆಹ್ರೂರವರ ನಿರಾಕರಣೆ

ಪಂಡಿತ ನೆಹ್ರೂರವರು ಕಾರ್ಯಕಾರಿಸಮಿತಿಯಲ್ಲಿ ಪಾ ಸ್ಥಾನದ ಬಗ್ಗೆ ನಿರಾಕರಣೆಯನ್ನು ಸೂಚಿಸುತ್ತಾ ಕಾ ೀರದ ಬಗ್ಗೆ ಯುದ್ಧ ಕಾರ್ಯಕ್ರಮ ಕೈಗೊಳ್ಳುವುದಿಲ್ಲ ವರಿ ಭಾರತದ ಮೇಲೆ ಧಾಳಿ, ನಡೆಸಿದ ಪಕ್ಷದಲ್ಲಿ ನು ಭಾರತದ ಪರವಾಗಿ ಯುದ್ಧ ಘೋಷಿಸಲು ಸಿದ್ಧಗಿದ್ದೇನೆ ಎಂದು ನುಡಿದರು.

ಮುಸ್ಲಿಂ ಲೀಗ್ ಅಧ್ಯಕ್ಷರಿಗೆ ಕಪ್ಪು ಬಾವುಟ

ರತ ಯೂನಿಯನ್ ಮುಸ್ಲಿಂಲೀಗ್ ಅಧ್ಯಕ್ಷರೂ ಸ್ ಶಾಸನ ಸಭಾ ವಿರೋಧಪಕ್ಷದ ನಾಯಕರೂ ಜನಾಬ್ ಮಹಮ್ಮದ್ ಇಸ್ಮಾಯಿಲ್‌ರವರು ಕಲ್ಲಿ ಟೆಗೆ ಭೇಟಿಯಿತ್ತಾಗ ಅಲ್ಲಿನ ೧೦೦ ಮಂದಿ ರಾಷ್ಟ್ರೀ ಮುಸ್ಲಿಮರು ಕಪ್ಪು ಬಾವುಟ ಪ್ರದರ್ಶಿಸಿದರು.

ಸ್ಯಾನಿಟರಿ ಇನ್ಸ್‌ಪೆಕ್ಟರ ವರಮಾನ ೬೯೦ ರೂ. ಗಳು

ಲಾಹೋರಿನಲ್ಲಿ ಸ್ಯಾನಿಟರಿ ಇನ್ಸ್‌ಪೆಕ್ಟರನ ವರಮಾನ ೬೯೦ ರೂ. ಗಳು ಅವರ ಸಂಬಳ ಕೇವಲ ೯೦ ರೂಪಾಯಿಗಳು ಮಾತ್ರ. ಜಾಡಮಾಲಿಗಳ ಲೆಕ್ಕವಿಡುವಲ್ಲಿ ಸುಳ್ಳು ಲೆಕ್ಕ ಬರೆದು ಈ ರೀತಿಯಾದ ಅಕ್ರಮ ವರಮಾನ ಪಡೆಯುತ್ತಿದ್ದಾರೆಂದೂ, ಈ ರೀತಿಯಾದ ಲಂಚ ನಿರ್ಮೂಲನಮಾಡಿ, ಅಂಥವರನ್ನು ಶಿಕ್ಷಿಸಲು ಸಾಕಷ್ಟು ಲಿಖಿತ ಸಾಕ್ಷಿಯಿಲ್ಲವೆಂದೂ ಲಾಹೋರಿನ ಮೇಯರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ರಕ್ಷಣೆಗೆ ಕಾರ್ಯಕ್ರಮ

ಆಗ್ರಾದ ತಾಜಮಹಲ್, ಬಿಜಾಪುರದ ಗೋಳಗುಮ್ಮಟ, ಎಲಿಫೆಂಟಾ ಮತ್ತು ಕನ್ಹೇರಿ ಗುಹೆಗಳು, ತಂಜಾವೂರಿನ ಭಾರಿ ಈಶ್ವರ ದೇವಾಲಯದಲ್ಲಿನ ಚಿತ್ರಗಳು ಕೊಣಾರಕದ ದೇವಾಲಯಗಳು ಮತ್ತು ಮಹಾಬಲಿಪುರದ ಶಿಲಾ ರೂಪಿತ ದೇವಾಲಯಗಳು ಮುಂತಾದ ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವ ಸಲುವಾಗಿ ಭಾರತ ಸರ್ಕಾರದ ಪ್ರಾಚೀನ ವಸ್ತು ಸಂಶೋಧನಾ ಶಾಖೆಯು ಕಾರ್ಯಕ್ರಮ ಕೈಕೊಂಡು ೧೪ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಿದೆ.

ಚರ್ಚಿಲ್-ಕೊರಿಯಾ

ಬ್ರಿಟನ್ನಿನ ಯುದ್ಧಕಾಲದ ಮುಖ್ಯಮಂತ್ರಿ ವಿನ್‌ಸ್ಟನ್ ಚರ್ಚಿಲ್ಲರು ಬ್ಲ್ಯಾಕ್‌ಪೂಲಿನಲ್ಲಿ ಭಾಷಣಮಾಡುತ್ತಾ ಕೊರಿಯಾ ವಿಜಯದಿಂದ ಬ್ರಿಟಿಷರು ಮತ್ತರಾಗಬಾರದೆಂದೂ, ಬ್ರಿಟನ್, ಕೆನಡಾ, ಮತ್ತು ಅಮೆರಿಕಾ ಬೆಂಬಲದಿಂದ ಸುಶಕ್ತರವಾದ ಐರೋಪ್ಯ ಸೇನೆಯನ್ನು ರಚಿಸಬೇಕಾದ ಕಾಲ ಬರಬಹುದೆಂದು ನುಡಿದರು.

ಟ್ರೂಮನ್ ಮೆಕಾರ್ಥರ್ ಸಮಾಲೋಚನೆ ಮುಕ್ತಾಯ

ನಿನ್ನೆ ದಿನ ನಡೆದ ಎರಡು ಗಂಟೆಗಳ ಕಾಲ ಕೊರಿಯಾ ಬಗ್ಗೆ ಮಾತುಕತೆಗಳನ್ನು ನಡೆಸಿ ಸ್ವಸ್ಥಾನಗಳಿಗೆ ಹಿಂತಿರುಗುತ್ತಾ ಸಂಭಾಷಣೆಯು ತೃಪ್ತಿಕರವಾಗಿದೆಯೆಂದು ಟ್ರೂಮನ್ ಹೊರಡುವ ಮುನ್ನ ನುಡಿದರು. ಮುಖ್ಯವಾಗಿ ಕೊರಿಯಾ ವಿಷಯವನ್ನು ಚರ್ಚಿಸಿದರಾದರೂ ಜಪಾನಿನ ಶಾಂತಿ ಒಪ್ಪಂದವನ್ನು ಪೆಸಿಫಿಕ್ ಸಾಗರ ಪ್ರದೇಶದಲ್ಲಿ ಶಾಂತಿರಕ್ಷಣೆ ಬಗ್ಗೆ ಅಮೇರಿಕಾದ ನೀತಿಯನ್ನು ಪ್ರಸ್ತಾಪಿಸಲಾಯಿತೆಂದು ಹೇಳಲಾಗಿದೆ.

ಭಾರಿ ದರೋಡೆ

ಕಾಶಿಯ ಬಲಿಯಾ ಜಿಲ್ಲೆಯ ಹಳ್ಳಿಯೊಂದರಲ್ಲಿ ಜಮೀನುದಾರರ ಮನೆಗೆ ೫೦ ಮಂದಿ ಕಳ್ಳರು ಶಸ್ತ್ರಸಜ್ಜಿತರಾಗಿ ನುಗ್ಗಿ ೬೦ ಸಾವಿರ ರೂಪಾಯಿ ಬೆಲೆಬಾಳುವ ಆಭರಣಗಳನ್ನು ದೋಚಿಕೊಂಡು ಹೋಗಿರುತ್ತಾರೆ. ಗ್ರಾಮಸ್ಥರು ಅವರನ್ನು ಹಿಮ್ಮೆಟ್ಟಿಸಿಕೊಂಡು ಹೋದಾಗ ಘರ್ಷಣೆಯಾಗಿ ೬ ಮಂದಿ ಗಾಯಗೊಂಡರು. ಒಬ್ಬ ಡಕಾಯಿತ ಸಿಕ್ಕಿಬಿದ್ದಿದ್ದಾನೆ

ಕೊರಿಯಾದಲ್ಲಿ ಪ|| ಸಂಸ್ಥೆಗಳ ಸೈನ್ಯ ಮನ್ನಣೆ

ಉತ್ತರ ಕೊರಿಯಾದ ⅓ ಭಾಗವು ಈಗಾಗಲೇ ತಮ್ಮ ವಶದಲ್ಲಿ ಇರುವುದಾಗಿ ಜನರಲ್ ಮೆಕಾರ್ಥರವರು ವೇಕ್‌ದ್ವೀಪದಲ್ಲಿ ಅಧ್ಯಕ್ಷ ಟ್ರೂಮನ್ನರೊಡನೆ ಮಾತುಕತೆ ನಡೆಸಿಕೊಂಡು ಬಂದವರೇ ತಿಳಿಸಿದರು. ಕುಮ್‌ಚಾನ್ ಪ್ರದೇಶದಲ್ಲಿ ಉತ್ತರಕೊರಿಯನ್ನರ ಪ್ರತಿಭಟನೆಯೇ ಇಲ್ಲ. ಪ್ರಪಂಚ ಸಂಸ್ಥೆ ಸೈನ್ಯಗಳು ಮುನ್ನಡೆಯುತ್ತಿವೆಯೆಂದು ಉತ್ತರಕೊರಿಯನ್ ರೇಡಿಯೋ ಒಪ್ಪಿಕೊಂಡು ಪ್ರಸಾರಮಾಡುತ್ತಿದೆ.

ಬೆಳಕಿನ ವೇಗವೆಷ್ಟು?

ಬೆಳಕಿನ ವೇಗವು ಸೆಕೆಂಡಿಗೆ ೧೮೬,೨೭೧ ಮೈಲಿಯೆಂದು ಇದುವರೆಗೆ ಸಿದ್ಧಾಂತವಾಗಿರುವುದು ಕರಾರುವಾಕ್ಕಾದ ಅಂಕೆಯಲ್ಲವೆಂದು ಬ್ರಿಟಿಷ್ ಫಿಸಿಕಲ್ ಲ್ಯಾಬೋರೇಟರಿಯವರು ಪ್ರಕಟಿಸಿದ್ದಾರೆ. ಆದರೆ ಈ ಸಂಶೋಧನೆಯ ಪ್ರಕಾರ ಬೆಳಕಿನವೇಗ ಸೆಕೆಂಡಿಗೆ ೧೮೬,೨೮೨ ಮೈಲಿಗಳೆಂದು ತಿಳಿದುಬಂದಿದೆ. ೧೧ ಮೈಲಿ ವೇಗ ಜಾಸ್ತಿಯಾಗಿದೆ.

ಪಾಟ್ನಾ ಹೈಕೋರ್ಟಿನ ತೀರ್ಪು

ಪಾಟ್ನಾದ ಯಾವ ಮುದ್ರಣಾಲಯದಿಂದಾಗಲೀ ಹಿಂಸಾ ಪ್ರಚೋದನಾತ್ಮಕ ಪತ್ರಿಕೆಗಳನ್ನು ಅಚ್ಚು ಹಾಕಿತೆಂಬ ಕಾರಣದ ಮೇಲೆ ಭಾರತೀಯ ಪ್ರೆಸ್ ಆಕ್ಟ್ ಪ್ರಕಾರ ಸೆಕ್ಯೂರಿಟೀ ದಾವಾ ಕೊಡಲಿಲ್ಲವೆಂದು ಹೂಡಿ, ಮುದ್ರಣಾಲಯವನ್ನು ಮುಟ್ಟುಗೋಲು ಹಾಕಲು ಪ್ರಾಂತೀಯ ಸರ್ಕಾರಗಳಿಗೆ ಅಧಿಕಾರವಿಲ್ಲ. ಆ ರೀತಿ ಅಧಿಕಾರ ಕೊಡುವುದಾಗಲೀ, ಅಧಿಕಾರ ಚಲಾಯಿಸುವುದಾಗಲೀ ನ್ಯಾಯರೀತ್ಯಾ ನಿಲ್ಲತಕ್ಕದ್ದಲ್ಲ ಎಂದು ಪಾಟ್ನಾ ಹೈಕೋರ್ಟು ತೀರ್ಪು ಕೊಟ್ಟಿದೆ.

ಭಾರತ ಸೇವಾದಳ

ಭಾರತಸೇವಾದಳದ ಶಿಬಿರವು ಮೈಸೂರು ನಗರದಲ್ಲಿ ಮಹಾರಾಣಿ ಹೈಸ್ಕೂಲಿನಲ್ಲಿ ೧೦-೧೦-೫೦ ನೇ ಮಂಗಳವಾರದಿಂದ ಪ್ರಾರಂಭವಾಗಿರುತ್ತದೆ ಈ ಶಿಬಿರಕ್ಕೆ ಈಗ ೮೫ ಮಂದಿ ವಿದ್ಯಾರ್ಥಿಗಳು ಕನ್ನಡನಾಡಿನ ನಾನಾಭಾಗಗಳಿಂದ ಬಂದಿರುತ್ತಾರೆ. ಇವರಿಗೆ ಬಿ ಎಸ್.ಎ. ಯ ಪ್ರಮುಖರಾದ ಶ್ರೀ. ರಾಮರಾವ್‌ರವರು ಶಿಕ್ಷಣವನ್ನು ಕೊಡುತ್ತಿರುತ್ತಾರೆ. ಈ ಸ್ವಯಂಸೇವಕರು ದಸರಾ ವಸ್ತುಪ್ರದರ್ಶನದಲ್ಲಿ ಕೆಲಸಮಾಡುತ್ತಿರುತ್ತಾರೆ. ನಿನ್ನೆಯದಿನ ಡಾ|| ನಾ. ಸು. ಹರ್ಡೀಕರ್‌ರವರು ಬಂದಿರುತ್ತಾರೆ. ಸೇವಾದಳದ ಅಧ್ಯಕ್ಷರಾದ ಶ್ರೀ ಟಿ. ಎಸ್. ಸುಬ್ಬಣ್ಣನವರು ಶಿಬಿರದ ವ್ಯವಸ್ಥೆಯನ್ನು ಮಾಡುತ್ತಿರುತ್ತಾರೆ. ಈ ಶಿಕ್ಷಣ ಶಿಬಿರಕ್ಕೆ ನಾಡಿನ ಯುವಕರೆಲ್ಲರ ಸಹಾನುಭೂತಿಯು ಅತ್ಯವಶ್ಯಕವಾಗಿರುತ್ತದೆ.

ಆಯುರ್ವೇದ ಯುನಾನಿ ಕಾಲೇಜಿನ ದಿನಾಚರಣೆ

ಸರ್ಕಾರದ ಆಯುರ್ವೇದ ಮತ್ತು ಯುನಾನೀ ಕಾಲೇಜಿ ದಿನಾಚರಣೆಯು ನಿನ್ನೆ ಮಧ್ಯಾಹ್ನ ವಿದ್ಯಾ ಸಚಿವ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಮತ್ತು ಸ್ವಾಗತ ಭಾಷಣವಾದ ನಂತರ ಅಧ್ಯರಾದ ಶ್ರೀ ಜಿ. ಶ್ರೀನಿವಾಸ ಮೂರ್ತಿಗಳು ಭಾಷಣಮಾಡುತ್ತಾ ಸ್ಮಾರಕ ಭಾಷಣಮಾಡಿ ಕಲ್ಕತ್ತೆಯ ವೈದಿಕೀಯ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡುತ್ತಿದ್ದ ಕರ್ನಲ್ ನೋಲೆಸ್‌ರವರು ಹಿಂದೆ ಹೇಳಿದ್ದ ಹಲವು ವಾಕ್ಯಗಳನ್ನು ಅವರು ತಿಳಿಸಿದರು. ಪುರಾತನ ಆಯುರ್ವೇದ ಪುನರುಜ್ಜೀವಿತವಾದರೆ, ಅದು ಭಾರತದ ರಾಷ್ಟ್ರೀಯ ವೈದ್ಯಪದ್ಧತಿಯು ಮಾತ್ರವಲ್ಲದೆ ಅಂತರರಾಷ್ಟ್ರೀಯ ಉಚ್ಛ್ರಾಯಕ್ಕೆ ಸಹಾಯಕವಾಗಬಲ್ಲದೆಂಬುದನ್ನು ತಿಳಿಸಿದರು. ಈಚೆಗೆ ದೆಹಲಿಯಲ್ಲಿ ಸೇರಿರುವ ನಾನಾ ಸಂಸ್ಥೆಗಳ ಆರೋಗ್ಯ ಮಂತ್ರಿಗಳ ಸಮ್ಮೇಳನದಲ್ಲಿ ಭಾರತೀಯ ಮತ್ತು ಆಧುನಿಕ ವೈದ್ಯಶಾಸ್ತ್ರಗಳನ್ನು ಒಟ್ಟಿಗೆ ಹೇಳಿಕೊಡುವ ಒಂದೊಂದು ಕಾಲೇಜನ್ನು ಪ್ರತಿಯೊಂದು ಸಂಸ್ಥಾನಗಳಲ್ಲೂ ಸ್ಥಾಪಿಸಬೇಕೆಂದು ನುಡಿದರು. ನಮ್ಮ ದೇಶದಲ್ಲಿ ವೈದ್ಯ ಸಹಾಯ ಮತ್ತು ವಿದ್ಯಾಭ್ಯಾಸವನ್ನು ಭಾರತೀಯ ಮತ್ತು ಪಾಶ್ಚಿಮಾತ್ಯ ವೈದ್ಯಪದ್ಧತಿಗಳ ಸಮ್ಮೇಳನದ ಮೂಲಕ ಏರ್ಪಡಿಸುವುದು ವೈಜ್ಞಾನಿಕ ದೃಷ್ಟಿಗಳಿಂದ ಯುಕ್ತವೆಂದು ತಿಳಿಸಿದರು. ದೇಶದ ಜನರಿಗೆ ಎರಡು ಪದ್ಧತಿಗಳೂ ಉಪಯುಕ್ತವಾಗಿರುವುದರಿಂದ ಆವೆರಡರಲ್ಲಿಯೂ ಸರಿಯಾದ ಶಿಕ್ಷಣಪಡೆದಿರುವ ವೈದ್ಯರನ್ನು ತಯಾರಿಸುವುದು ಉತ್ತಮಮಾರ್ಗವೆಂದೂ ಎರಡು ಪದ್ಧತಿಗಳೂ ಪ್ರತ್ಯೇಕವಾಗಿದ್ದು ಪರಸ್ಪರ ಘರ್ಷಣೆಗೆ ಅವಕಾಶವಾಗುವುದನ್ನು ತಪ್ಪಿಸಬೇಕೆಂದೂ ಅವರು ಅಭಿಪ್ರಾಯಪಟ್ಟರು. ಇದಲ್ಲದೆ ಈಗ ಇರುವ ಪಾಶ್ಚಾತ್ಯ ವೈದ್ಯಪದ್ಧತಿಯನ್ನು ಹೇಳಿಕೊಡುವ ಮೆಡಿಕಲ್ ಮತ್ತು ಭಾರತೀಯ ಪದ್ಧತಿಗಳನ್ನು ಕಲಿಸುವ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಆಯುರ್ವೇದ ಮತ್ತು ಪಾಶ್ಚಾತ್ಯ ವಿದ್ಯೆಗಳ ಜ್ಞಾನವುಂಟಾಗಲು ತಕ್ಕ ಬೋಧನಾಕ್ರಮವು ಇರಬೇಕಾದುದು ಅವಶ್ಯಕವೆಂದು ಅವರು ಸೂಚಿಸಿದರು. ಆಯುರ್ವೇದ ಕಾಲೇಜು ಮತ್ತು ಶಾಲೆಗಳ ದರ್ಜೆಯಲ್ಲಿ ಹೆಚ್ಚಿಸುವುದರ ಆವಶ್ಯಕತೆಯನ್ನು ಪ್ರಸ್ತಾಪಿಸಿ ಅಲಿಯೋಪತಿಯ ಕಡೆ ನಮ್ಮ ತರುಣತರುಣಿಯರಿಗೆ ಮನವು ಹೋಗುತ್ತಿರುವುದಕ್ಕೆ ಆ ಪದ್ಧತಿಗೆ ದೊರೆಯುತ್ತಿರುವ ಪುರಸ್ಕಾರವೇ ಕಾರಣವೆಂದು ನುಡಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಯುರ್ವೇದದ ಶಿಕ್ಷಣವನ್ನು ಏರ್ಪಡಿಸಿರುವುದರ ಬಗ್ಗೆ ಅವರು ಒತ್ತಿ ಹೇಳಿ ಈಗಿನ ಆಯುರ್ವೇದ ಕಾಲೇಜನ್ನು ಅದಕ್ಕೆ ಸೇರಿಸಬೇಕೆಂದು ಸೂಚಿಸಿದರು. ಆಯುರ್ವೇದ ವೈದ್ಯಪದ್ಧತಿಯಲ್ಲಿ ಸಂಶೋಧನಾ ಕೆಲಸದ ಅಗತ್ಯವನ್ನು ಅವರು ವಿವರಿಸಿ, ವೈದ್ಯವಿದ್ಯೆ ಮತ್ತು ಸಂಶೋಧನೆಗಳು ಅನ್ಯೋನ್ಯ ಅಂಗಗಳಾಗಬೇಕೆಂದು ಹೇಳಿದರು. ಭಾರತದ ಆಯುರ್ವೇದ ಶಾಸ್ತ್ರವು ಮಾನವೀಯ ಕಡೆಗೆ ಹೆಚ್ಚಾಗಿ ವಾಲುತ್ತಿರುವುದೆಂದೂ ಈ ದೇಶದ ಜನಜೀವನಕ್ಕೆ ಅದು ಚೆನ್ನಾಗಿ ಅಂಟಿರುವುದೆಂದೂ ಅವರು ಹೇಳಿದರು. ಆಯುರ್ವೇದವು ಎಲ್ಲರ ಸ್ನೇಹಿತ ಮತ್ತು ಮಾರ್ಗದರ್ಶಕನಾಗಬಲ್ಲನೆಂದು ಅವರು ತಿಳಿಸಿದರು. ಈ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳಿಗೂ ಶಕ್ತಿಯುಂಟಾಗಲೆಂದು ಹಾರೈಸಿದರು.

ಉತ್ತರ ಕೋರಿಯನ್ನರ ಧೈರ್ಯ

ಉತ್ತರ ಕೋರಿಯನ್ನರು ತಮ್ಮ ದೇಹದಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ವಿಜಯಗಳಿಸಲು ಹೋರಾಡುತ್ತಾರೆ ಎಂಬುದಾಗಿ ಉತ್ತರ ಕೋರಿಯನ್ನರು ಜೆಕೋಸ್ಲೊವಾಕ್ ಶಾಂತಿ ಚಳುವಳಿಗೆ ತಿಳಿಸಿದ್ದಾರೆ.

ಭಾರತ ಮುಖಂಡ ದಸ್ತಗಿರಿ

ಬಿಹಾರ್ ಕಾಂಗ್ರೆಸ್ ಮುಖಂಡರಾದ ಸ್ವಾಮಿಜ್ಞಾನಾನಂದರು ಢಾಕ್ಕಾ ಕಾಂಗ್ರೆಸ್ ಸಮಿತಿಯ ಆಹ್ವಾನದಂತೆ ಅಲ್ಲಿ ಭಾಷಣಕ್ಕೆ ತೆರಳಿದ್ದಾಗ ಪಾಕೀಸ್ಥಾನ ಸರ್ಕಾರವು ಅವರನ್ನು ದಸ್ತಗಿರಿ ಮಾಡಿದೆ

ಧಾನ್ಯವ್ಯಾಪಾರಿಗಳ ದಸ್ತಗಿರಿ

ಬಿಹಾರ್ ಪ್ರಾಂತ್ಯದ ಹಕೋಟಿಯ ಆಜ್ಞೆಯನ್ನು ಉಲ್ಲಂಘಿಸಿದವರೆಂದು ಅಪಾದಿಸಿ ದಸ್ತಗಿರಿ ಮಾಡಲ್ಪಟ್ಟಿದ್ದ ೮ ಜನ ವ್ಯಾಪಾರಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ನಿರಾಕರಿಸಿದೆ.

ಅಸ್ಸಾಂ ನಿಧಿಗೆ ಸಹಾಯ

ಅಸ್ಸಾಂ ಭೂಕಂಪನಿಧಿಗೆ ಪೌರಸಭಾಸದಸ್ಯರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರೂ ಕೃಷ್ಣರಾಜ ಮೊಹಲ್ಲಾ ಮಹಾಜನಗಳಿಂದಲೂ ೨೪೧-೦-೦ ರೂ. ವಸೂಲ್ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ಇದರಲ್ಲಿ ಶ್ರೀ ಚಿಟ್ಟಪ್ಪನವರು ೧೦೧ ರೂ. ಕೊಟ್ಟಿದ್ದಾರೆ.

ಕಾಳಸಂತೆಕೋರರ ಸ್ವತಃ ಶರಣಾಗತಿ

ಮುಜಾಫರ್‌ನಲ್ಲಿ ಪೋಲೀಸರು ಹುಡುಕುತ್ತಿದ್ದ ಇಬ್ಬರು ಲಕ್ಷಾಧೀಶ್ವರರೂ ಸೇರಿ ೮ ಮಂದಿ ಬಟ್ಟೆ ವ್ಯಾಪಾರಿಗಳು ತಾವಾಗಿಯೇ ಕೋರ್ಟಿನಲ್ಲಿ ಬಂದು ಶರಣಾಗತರಾದರು. ಅವರನ್ನು ಜಾಮೀನಿನ ಮೇಲೆ ಬಿಡಲಾಗಿದ್ದರೂ ಅದನ್ನು ತಿರಸ್ಕರಿಸಿ ಸ್ಥಳೀಯ ಪೋಲೀಸರು ಅವರನ್ನು ಬಂಧಿಸಿದ್ದಾರೆ. ಬಟ್ಟೆಗಳನ್ನು ನಿಗದಿಯ ಬೆಲೆಯಲ್ಲಿ ಮಾರಲು ಸರ್ಕಾರ ಸರಿಯಾದ ವ್ಯವಸ್ಥೆ ಮಾಡುತ್ತಿದೆ.

ಪತ್ರಿಕಾ ಸಮ್ಮೇಳನದಲ್ಲಿ ಪಂ॥ ನೆಹ್ರೂರವರ ಘೋಷಣೆ

ದೆಹಲಿಯಲ್ಲಿ ನಡೆದ ಪತ್ರಿಕಾಸಮ್ಮೇಳನದಲ್ಲಿ ಘೋಷಿಸುತ್ತಾ ಕೋರಿಯಾದಲ್ಲಿ ಪ್ರಪಂಚ ಸಂಸ್ಥೆ ಸೈನ್ಯಗಳು ೩೮ ನೇ ಅಕ್ಷಾಂಶವನ್ನು ದಾಟಕೊಂಡು ಉತ್ತರ ಕೋರಿಯಾಕ್ಕೆ ನುಗ್ಗಿದುದಷ್ಟೇ ಅಲ್ಲ ಪ್ರಪಂಚ ಸಂಸ್ಥೆಯ ಪರವಾಗಿ ಪ್ರತಿಯೊಂದು ರಾಷ್ಟ್ರದಲ್ಲೂ ಪ್ರತ್ಯೇಕ ಸೈನ್ಯದಳಗಳನ್ನು ವ್ಯವಸ್ಥೆಮಾಡುವುದನ್ನೂ ಕೂಡ ಭಾರತವು ವಿರೋಧಿಸುವುದೆಂದು ಪ್ರಧಾನಿ ಪಂಡಿತ ನೆಹ್ರೂರವರು ಘೋಷಿಸಿದರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯-೪೬ ಮೀಟರು

ಅಕ್ಟೋಬರ್ ೧೮ ಬುಧವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೩೦ ಹಾಡುಗಾರಿಕೆ ಶ್ರೀ. ಸರೋಜಮ್ಮ ೭-೪೫ ನವೀನ ಕೀರ್ತನ. ೭-೫೫ ಕನ್ನಡದಲ್ಲಿ ಸುದ್ದಿ ೮-೦ ಇಂಗ್ಲೀಷಿನಲ್ಲಿ ಸುದ್ದಿ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ಸುದ್ದಿ. ೧-೪೦ ದಿಲ್‌ರೂಬಾ ೧-೫೫ ಹಿಂದೀ ಶಿಕ್ಷಣ, ೨-೦ ವನಿತವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಸರೋಜಮ್ಮ ಹಾಡುಗಾರಿಕೆ. ೬-೦ ಇಂಗ್ಲೀಷಿನಲ್ಲಿ ಸುದ್ದಿ ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ. ೭-೦ ಸ್ಥಾನೀಯ ಸೂಚನಾಯೆ. ೭-೫ ಹಿಂದಿಯ ಕಥೆಯ ರಿವ್ಯೂ ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡ ಸುದ್ದಿ- ೮-೦ ನಾರಾಯಣಸ್ವಾಮಿ ಹಾಡುಗಾರಿಕೆ. ೯-೦ ಇಂಗ್ಲೀಷಿನಲ್ಲಿ ಸುದ್ದಿ ೯-೧೫ ಹಿಂದಿಯಲ್ಲಿ ಸುದ್ದಿ. ೯-೩೦ ಮೆಚ್ಚಿನ ಹಾಡು- ೧೦-೦ ಮುಕ್ತಾಯ

ಜನರು ಹುಲ್ಲು ತಿನ್ನುವರೆ !

ಜೋಧ್‌ಪುರದ ಸಣ್ಣ ಮುಳ್ಳಿರುವ "ಭಾರತ್" ಎಂಬ ಹುಲ್ಲನ್ನು ರಾಜಾಸ್ಥಾನದ ಜೈಸಾಲ್ಮೀರ್ ಜಿಲ್ಲೆಯ ಮರಭೂಮಿ ಪ್ರದೇಶದ ಬಡ ಜನರು ತಿನ್ನುತ್ತಿದ್ದಾರೆ. ಇವರಿಗೆ "ಭೂರತ್" ಎಂದು ಹೆಸರು ಬಂದಿದೆ. ಈಗಲಂತೂ ಈ ಪ್ರದೇಶದಲ್ಲಿ ಮಿಡತೆಗಳ ಹಾವಳಿಯಿಂದ ಧಾನ್ಯವೆಲ್ಲಾ ಸಂಪೂರ್ಣವಾಗಿ ನಷ್ಟವಾಗಿದೆ.

ರಣಜಿತ್
13-10-50 ಶುಕ್ರವಾರದಿಂದ
ಯಶಸ್ವಿಯಾದ 2ನೇ ವಾರ
ದಿನವಹಿ 3 ಪ್ರದರ್ಶನಗಳು
ಆಧಿರಾತ್ ★ (Adhi Raat)
(ಹಿಂದಿ)
ಪಾತ್ರ : † ಅಶೋಕ ಕುಮಾರ್
† ನರ್ಗೀಸ್

ಸಂಪಾದಕರು ಮತ್ತು ಪ್ರಕಾಶಕರು :- ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

RARE OPPORTUNITY ! DON'T MISS TO SEE !
Under Ground Well of Death
ON AN ORDINARY BICYCLE
In DASARA EXHIBITION
Jeevanarayana Katte
By
Prof. TILAKRAJ NAYAR
NEW INVENTION ! DARE DEVIL SHOW !

RAGHULAL & Co.,
CHEMISTS
Sayyaji Rao Road,
MYSORE

RAGHULAL & Co., (Bangalore)
CHEMISTS
70, Arcot Srinivasa Char Street
BANGALORE 2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೧೦—೧೯೫೦ನೇ ಸೋಮವಾರ [ಸಂಚಿಕೆ ೫೨

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ದಸರಾ ಮೆರವಣಿಗೆ ನಡೆಯಬೇಕಾಗಿತ್ತು

ಮೈಸೂರು ಅ ೨೩

ಕೇಂದ್ರ ಸಚಿವ ಶ್ರೀ ರಾಜಗೋಪಾಲಾಚಾರ್ಯರಿಗೆ ಮೈಸೂರು ಮುಖ್ಯಮಂತ್ರಿಗಳು ನಿನ್ನೆ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಶ್ರೀ ರಾಜಾಜಿಯವರು ಮಾತನಾಡುತ್ತಾ, ಭಾರತದ ಸಂಸ್ಕೃತಿಯನ್ನು ಮೈಸೂರು ದೇಶವು ಕಾಪಾಡಿಕೊಂಡು ಬಂದಿದೆ. ಆದುದರಿಂದಲೇ ಭಾರತದ ಕೇಂದ್ರ ಸಂಸ್ಥೆಗಳು ವಿಜ್ಞಾನ ಸಂಸ್ಥೆಗಳ ಶಾಖೆಗಳಲ್ಲಿ ಕೆಲವನ್ನು ಮೈಸೂರಿನಲ್ಲಿ ಸ್ಥಾಪಿಸಲಾಗಿವೆ. ಶಾಸ್ತ್ರೀಯವಾಗಿ ಅನಾದಿಯಿಂದ ಬಂದಿರುವ ಜಗತ್ಪ್ರಸಿದ್ಧರಾದ ದಸರಾ ಜಂಬೂಸವಾರಿಯನ್ನು ಈ ವರ್ಷ ನಡಿಸದೆ ಇದ್ದುದಕ್ಕೆ ಅವರು ವಿಷಾದ ಸೂಚಿಸಿ ಮುಂದಿನ ವರ್ಷದಿಂದಲಾದರೂ ಈ ಉತ್ಸವವನ್ನು ನಿಲ್ಲಿಸದೆ ನಡೆಯಿಸುವರೆಂದು ತಾವು ಆಶಿಸುವುದಾಗಿ ತಿಳಿಸಿದರು

ಶ್ರೀ ರಾಜಾಜಿಯವರ ಭಾಷಣ

ಶ್ರೀ ರಾಜಾಜಿಯವರು ಭಾಷಣಮಾಡಿ ಅನ್ನದಾನಕ್ಕಿಂತಲೂ ಉತ್ತಮವಾದ ದಾನವು ಬೇರೊಂದಿಲ್ಲ. ದೇಶದ ಜನರು ರೇಷನಿಂಗ್ ವ್ಯವಸ್ಥೆಯಿಂದ ಪಡೆಯುತ್ತಿರುವ ಅನುಭವಗಳಿಂದ ಆಹಾರಸಮಸ್ಯೆ ಕಠಿಣವೆಂದು ಎಲ್ಲರಿಗೂ ಅರಿವಾಗುವುದು. ವಿದೇಶಗಳಿಂದ ಆಹಾರವನ್ನು ಆಮದು ಮಾಡಿಕೊಳ್ಳಲು ಇನ್ನು ಹಣ ವೆಚ್ಚ ಮಾಡುವುದು ಸಾಧ್ಯವಿಲ್ಲ. ಜನರು ಇಂದಿನವರೆಗೆ ತಿನ್ನುತ್ತಲಿದ್ದ ಆಹಾರಪದಾರ್ಥಗಳ ಜೊತೆಗೆ ಇತರ ಪುಷ್ಟಿಕರವಾದ ಆಹಾರಗಳನ್ನು ಸೇವಿಸಬೇಕು. ಹೆಚ್ಚು ನೀರನ್ನು ಅಪೇಕ್ಷಿಸದೆಯೇ ಇರುವ ರೀತಿಯ ಭತ್ತವನ್ನು ಬೆಳೆಯಬೇಕು. ದೇಶದ ಆಹಾರ ಸಮಸ್ಯೆಯನ್ನು ನಿವಾರಿಸಲು ಈ ಸಂಸ್ಥೆಯು ಪೂರ್ಣವಾಗಿ ನೆರವಾಗಲಿ ಎಂದು ಹೇಳಿದರು

ಭಾರತ ಸರ್ಕಾರದ ಆಹಾರ ಉಪಮಂತ್ರಿ ಶ್ರೀ ತಿರುಮಲರಾವ್, ಸುಪ್ರಸಿದ್ಧ ವೈಜ್ಞಾನಿಕ ಡಾ ಸಿ ವಿ. ರಾಮನ್, ಶ್ರೀ ಎನ್ ವಿ ರಾಮಮೂರ್ತಿ, ಡಾ॥ ಬಿ. ಎಲ್. ಮಂಜುನಾಥ್ ಮುಂತಾದವರು ಭಾಷಣಮಾಡಿ ಇಂದಿನ ಆಹಾರಪರಿಸ್ಥಿತಿಯನ್ನು ವಿವರಿಸಿ, ಅದನ್ನು ಬಗೆಹರಿಸಲು ವಿಜ್ಞಾನಸಂಶೋಧನೆಯು ಎಷ್ಟು ಅತ್ಯಗತ್ಯವೆಂಬುದನ್ನು ವಿವರಿಸಿದರು.

ಸಂಸ್ಥೆಯ ಡೈರೆಕ್ಟರಾಗಿ ನೇಮಿತರಾಗಿರುವ ಡಾ॥ ಸುಬ್ರಹ್ಮಣ್ಯಂರವರು ಧನ್ಯವಾದಗಳನ್ನು ಸಲ್ಲಿಸಿದರು. ಮುಖ್ಯ ಅತಿಥಿಗಳನ್ನು ಚಲುವಾಂಬಾ ಭವನಕ್ಕೆ ಕರೆದುಕೊಂಡು ಹೋಗಿ ಅಲ್ಲಿನ ವಿವಿಧಶಾಖೆಗಳಲ್ಲಿಯ ಕಾರ್ಯಕಲಾಪಗಳನ್ನು ತಿಳಿಯಪಡಿಸಿದರು. ಅತಿಥಿಗಳೆಲ್ಲರೂ ಇವುಗಳನ್ನು ನೋಡಿ ಸಂಶೋಧನಾಲಯವು ಮಾಡುತ್ತಲಿರುವ ಕೆಲಸಗಳಿಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ನಿಲಯದ ಆರಂಭೋತ್ಸವ

ವಿದ್ಯಾರ್ಥಿಗಳು ಶೀಲ ವಿನಯ ಸಂಪನ್ನರಾಗಬೇಕು

ಮೈಸೂರು ಅ ೨೩

ಭಾರತ ಸರ್ಕಾರ ಸಚಿವರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಯಾದವಗಿರಿಯಲ್ಲಿ ಕಟ್ಟಲಾಗಿರುವ ಶ್ರೀರಾಮಕೃಷ್ಣಾಶ್ರಮದ ವಿದ್ಯಾರ್ಥಿನಿಲಯದ ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀಮನ್ಮಹಾರಾಜರವರು ಅಗ್ರಾಸನವನ್ನು ವಹಿಸಿದ್ದರು.

ಆಸ್ಥಾನವಿದ್ವಾನ್ ಶ್ರೀ ಬಿ ದೇವೇಂದ್ರಪ್ಪನವರಿಂದ ದೇವತಾಪ್ರಾರ್ಥನೆಯಾದನಂತರ ಮೈಸೂರು ಹಣಕಾಸಿನ ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ವಿದ್ಯಾರ್ಥಿನಿಲಯದ ವರದಿಯನ್ನು ಓದಿ, ಇಲ್ಲಿಯವರೆಗೆ ಈ ನಿಲಯದ ಕಾರ್ಯಕಲಾಪ ಮತ್ತು ಈ ಕಟ್ಟಡಕಟ್ಟಲು ಸಾರ್ವಜನಿಕರು ಮತ್ತು ಅನೇಕ ಸಜ್ಜನರು ಇತ್ತಿರುವ ಸಹಾಯವನ್ನು ತಿಳಿಸಿದರು.

ಶ್ರೀಮನ್ಮಹಾರಾಜರವರು ಭಾಷಣಮಾಡುತ್ತ ಸ್ವಾಮಿ ವಿವೇಕಾನಂದರ ಉಪದೇಶದಿಂದ ಮೈಸೂರಿನ ರಾಜಮನೆತನದವರಿಗೆ ಉಂಟಾಗಿರುವ ಶ್ರೇಯಸ್ಸಿಗಾಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ತಮ್ಮ ತಾತನವರಾದ ದಿವಂಗತ ಶ್ರೀ ಚಾಮರಾಜ ಒಡೆಯರ ಕಾಲದಲ್ಲಿ ಶ್ರೀ ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿಯಿತ್ತು ಅವರ ಸಹಾಯದಿಂದ ಪ್ರಪಂಚ ಪರ್ಯಟನ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ಭಾರತಕ್ಕೆ ಬಂದು ಕೀರ್ತಿಯನ್ನು ತಂದಿದ್ದನ್ನು ವಿವರಿಸಿದರು. ತಾವೂ ತಮ್ಮ ಹಿರಿಯರ ಮೇಲ್ಪಂಕ್ತಿಯಂತೆ ಶ್ರೀರಾಮಕೃಷ್ಣ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗಿಗಳಾಗಿರುವುದಾಗಿ ಹೇಳಿದರು. ಈ ನಿಲಯದಲ್ಲಿ ತರಬೇತಾಗಿ ಕೀರ್ತಿಗಳಿಸಿರುವಂತೆ ಮುಂದೆಯೂ ಅನೇಕ ವಿದ್ಯಾರ್ಥಿಗಳು ವ್ಯಾಸಂಗಮಾಡಿ ಶೀಲವಂತರಾಗಿ ಭಾರತ ಮತ್ತು ಮೈಸೂರಿಗೆ ಕೀರ್ತಿಯನ್ನು ತರಲೆಂದು ಹಾರೈಸಿದರು

ಶ್ರೀ ರಾಜಾಜಿಯವರು

ಅನಂತರ ಶ್ರೀ ರಾಜಾಜಿಯವರು ಭಾಷಣಮಾಡುತ್ತ ನಾನು ಮೈಸೂರಿಗೆ ಅನೇಕ ಉಪಕಾರಗಳನ್ನು ಮಾಡಿರುವುದಾಗಿ ಹೊಗಳಿದ್ದಾರೆ. ಹಾಗೇನಾದರೂ ನಾನು ಮಾಡಿದ್ದರೆ ನಾನು ಮೈಸೂರಿನಲ್ಲಿ ನಡೆದ ವಿದ್ಯಾಭ್ಯಾಸದ ಒಂದು ಸಾಲದ ಭಾಗವನ್ನು ತೀರಿಸಲು ಮಾತ್ರ ಮಾಡಿರುವೆನು. ಮಹಾರಾಜರು ನನ್ನನ್ನು ತಮ್ಮ ಸ್ನೇಹಿತ, ತತ್ವಬೋಧಕರೆಂದು ತಿಳಿಸಿದ್ದಾರೆ. ಅವರಂತಹ ಹಲವು ಶಿಷ್ಯರು ನನಗೆ ದೊರಕಿದರೆ ನಾನು ಮಾಡಿರುವ ಕಾರ್ಯಕ್ಕೆ ಭಾರಿ ಬಹುಮಾನ ಸಿಕ್ಕಿದಂತೆಯೇ ಸರಿ. ನಾನು ಈಗಾಗಲೇ ಅನೇಕಕಡೆ ಶಂಕುಸ್ಥಾಪನೆ ಮಾಡಿರುತ್ತೇನೆ. ಅವುಗಳಿಗೆ ಅಸ್ತಿಭಾರ ಹಾಕಿರುವುದು ಹಾಗೆಯೇ ಉಳಿದಿವೆ. ಕಟ್ಟಡಗಳು ಆಗಿಲ್ಲ. ಪೂರ್ಣವಾದ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸಲು ಅತ್ಯಂತ ಸಂತೋಷಪಡುತ್ತೇನೆ. ಭಾರತಾದ್ಯಂತ ಶ್ರೀ ರಾಮಕೃಷ್ಣಾಶ್ರಮಗಳು ಅನೇಕ ಉಪಕಾರ ಕಾರ್ಯಗಳನ್ನು ಮಾಡುತ್ತಲಿವೆ. ನಮ್ಮ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಶೀಲವಂತರಾಗಬೇಕು. ಇತ್ತೀಚೆಗೆ ಹುಡುಗರಿಗೆ ಒಳ್ಳೆಯ ನಡವಳಿಕೆ ಆಸಕ್ತಿ ಕಡಿಮೆಯಾಗುತಲಿದೆ. ಹಾಗೆ ಆಗಬಾರದು. ಮಂಗಗಳೂ ತಮಾಷೆ ಮಾಡಬಲ್ಲವು. ನಾವೂ ಮಾಡುವೆವು. ಅವುಗಳಿಗೂ ನಮಗೂ ಏನು ವ್ಯತ್ಯಾಸ? ಆದರೆ ದೇವರ ದೃಷ್ಟಿಯಲ್ಲಿ ವ್ಯತ್ಯಾಸಗಳು ಇರುತ್ತವೆ. ಮಂಗಗಳ ಚೇಷ್ಟೆ, ಅನುಕರಿಸದೆ, ನಮ್ಮ ವಿದ್ಯಾರ್ಥಿಗಳು ಶೀಲ, ವಿನಯಸಂಪನ್ನರಾಗಿ ದೇಶದ ಸತ್ಪ್ರಜೆಗಳಾಗಬೇಕು. ಒಳ್ಳೆಯತನ ಕಲಿಯುವುದು ಕಷ್ಟವೆಂದು ಭಾವಿಸಲಾಗದು. ನಾವು ಮನಸ್ಸು ಮಾಡಿದರೆ ಒಳ್ಳೆಯವರಾಗಬಲ್ಲೆವು. ನಮ್ಮ ಹಿರಿಯರಲ್ಲಿ ಒಳ್ಳೆಯ ಮತ್ತು ಕೆಟ್ಟ ಗುಣಗಳು ಬೆರೆತಿವೆ. ಬೆಳ್ಳಿಯಿಂದ ಕಲ್ಮಷವನ್ನು ತಪ್ಪಿಸುವಂತೆ ನಾವು ಉತ್ತಮಗುಣಗಳನ್ನು ಸಂಗ್ರಹಿಸಬೇಕು. ಶ್ರೀ ರಾಮಕೃಷ್ಣಾಶ್ರಮಗಳು ಮತಭೇದವಿಲ್ಲದೆ ಉತ್ತಮ ಧಾರ್ಮಿಕ ಶಿಕ್ಷಣ ಕೊಡುತ್ತಲಿರುವುದರಿಂದ ನಮ್ಮ ವಿದ್ಯಾರ್ಥಿಗಳು ಶೀಲವಂತರಾಗುವುದರಲ್ಲಿ ಸಂದೇಹವಿಲ್ಲ

ಸ್ವಾತಂತ್ರ್ಯ ಬಂದಿರುವ ವಿಷಯವಾಗಿ ಅನೇಕರು ಹೇಳಿಕೆ ತಾವು ಮೇಲವಲ್ಲಿ ಕಾಣುತ್ತಿರುವ ತೊಂದರೆಗಳು ಸ್ವಾತಂತ್ರ್ಯದಿಂದಲೇ ಎಂದು ಹಳಿಯುತ್ತಲಿರುವರು. ರಾಜ್ಯದ ಪದ್ಧತಿಯು ಬದಲಾವಣೆಯಾಗಿ, ಹೊಸದಾಗಿ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಾಗಬೇಕಾದರೆ ಈ ಸಂದಿಗ್ಧ ಸಮಯದಲ್ಲಿ ತೊಂದರೆಗಳು ಬರುವುದು ಸಹಜ. ಅವುಗಳನ್ನು ನಾವು ಜಯಿಸಿ, ಸ್ವಾತಂತ್ರ್ಯ ಸವಿಯನ್ನು ಅನುಭವಿಸಬೇಕಾಗಿದೆ. ಪ್ರಸವಕಾಲದಲ್ಲಿ ಸ್ತ್ರೀಯು ನೋವನ್ನು ತಡೆಯಲಾರದೆ ತನಗೆ ಮಗುವೇ ಬೇಡವೆಂದು ಹೇಳುತ್ತಾಳೆ. ಜನನವಾದೊಡನೆಯೇ ತನ್ನ ವೇದನೆಯನ್ನು ಮರೆತು ಮಗುವನ್ನು ಪಾಲಿಸುವಂತೆ ನಾವು ಸಹಿಸಿ, ಈಗಿನ ತೊಂದರೆಗಳನ್ನು ಪರಿಹರಿಸಲು ಎಲ್ಲರೂ ಏಕಮನಸ್ಸಿನಿಂದ ದುಡಿಯಬೇಕು. ಈ ತೊಂದರೆಗಳನ್ನು ಎದುರಿಸಿ, ಸವಿ ಸವಿಗಳನ್ನು ಅನುಭವಿಸಬೇಕಾದವರು ಇಂದಿನ ವಿದ್ಯಾರ್ಥಿಗಳು. ಇಂದಿನ ಯುವಕರು. ಆದ್ದರಿಂದ ಅವರು ಉತ್ತಮ ಶಿಕ್ಷಣ ಪಡೆದು ಶೀಲವನ್ನು ಬೆಳೆಸಿಕೊಂಡು ಬಾಳುವುದಕ್ಕಾಗಿ ಅವರು ದುಡಿಯಬೇಕು ಎಂದು ನುಡಿದರು.

ನಂತರ ಶ್ರೀ ಸೋಮನಾಥಾನಂದಜೀಯವರು ವಂದನಾರ್ಪಣೆಯನ್ನು ಮಾಡಿ ಅತಿಥಿಗಳನ್ನು ನಿಲಯದ ಎಲ್ಲಾ ಭಾಗಗಳನ್ನೂ ಪರಿಶೀಲಿಸಲು ಕರೆದೊಯ್ದು ಅನಂತರ ಎಲ್ಲರನ್ನೂ ಬೀಳ್ಕೊಟ್ಟರು

★ ಸಿರ್ಲೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಪೆಟ್ರೋಲ್ ರೇಷನ್ ವಜಾ

ನಿನ್ನೆಯಿಂದ ಭಾರತಾದ್ಯಂತ (ಉತ್ತರ ಪ್ರದೇಶ ವಿನಹ) ಪೆಟ್ರೋಲ್ ರೇಷನ್ ವಜಾ ಮಾಡಲಾಗಿದೆಯೆಂದು ಕೇಂದ್ರ ಸರ್ಕಾರವು ಪ್ರಕಟಿಸಿದೆ.

ಸಚಿವರು ಹಿಂತಿರುಗಿದರು

ದಸರಾ ಮಹೋತ್ಸವಕ್ಕೆ ಆಗಮಿಸಿದ್ದ ಎಲ್ಲಾ ಮಂತ್ರಿಗಳೂ ಬೆಂಗಳೂರಿಗೆ ಹಿಂತಿರುಗಿದರು.

ಶ್ರೀ ರಾಜಾಜಿಯವರು ಬೆಂಗಳೂರಿಗೆ

ನಿನ್ನೆ ಮಧ್ಯಾಹ್ನ ಶ್ರೀ ರಾಜಗೋಪಾಲಾಚಾರಿಯವರು ಬೆಂಗಳೂರಿಗೆ ದಯಮಾಡಿಸಿದರು ಅವರೊಡನೆ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೂ ತೆರಳಿದರು.

ಅನ್ನ ಕ್ಷಾಮ

ಬಿಹಾರಿನಲ್ಲಿ ಆರುವಾರಗಳಿಂದ ಮಳೆ ಬೀಳದೆ ಅನ್ನಕ್ಷಾಮ ತಲೆದೋರುವ ಸೂಚನೆ ಕಾಣುತ್ತಲಿದೆ ಬಹಳ ಘೋರ ಪರಿಸ್ಥಿತಿಯುಂಟಾಗಬಹುದು. ಈಗಾಗಲೇ ಹಸಿವಿಗೆ ತುತ್ತಾಗಿ ೬ ಮಂದಿ ಮಡಿದಿದ್ದಾರೆ ಎಂದು ಅಧಿಕೃತ ಸರ್ಕಾರ ಪ್ರಕಟಣೆ ತಿಳಿಸಿದೆ

ಪ್ರತಿಬಂಧಕಾಜ್ಞೆ

ಬೆಂಗಳೂರುಜಿಲ್ಲಾ ಮ್ಯಾಜಿಸ್ಟ್ರೇಟರು ಬೆಂಗಳೂರು ಕಾರ್ಪೊರೇಷನ್ ಸರಹದ್ದಿನೊಳಗೆ ಮತ್ತು ಅದರ ೫ ಮೈಲಿ ಸುತ್ತಳತೆಯೊಳಗೆ ಮತ್ತು ಹಿಂದೂಸ್ತಾನ್ ಏರ್ ಕ್ರಾಫ್ಟ್ ಸ್ಯಾನಿಟರಿ ಬೋರ್ಡ್ ಪ್ರದೇಶದಲ್ಲಿ ಒಂದು ವಾರ ಸಾರ್ವಜನಿಕ ಸಭೆ ಮೆರವಣಿಗೆ ಮಾಡಕೂಡದೆಂಬ ನಿಷೇಧಾಜ್ಞೆಯನ್ನು ಹೊರಡಿಸಿರುವರು.

ಶ್ರೀಮನ್ಮಹಾರಾಜರ ಭಾಷಣ

ಶ್ರೀಮನ್ಮಹಾರಾಜರವರು, ಮೈಸೂರಿನಲ್ಲಿ ಆಹಾರ ಸಂಶೋಧನಾ ಸಂಸ್ಥೆಯನ್ನು ಸ್ಥಾಪನೆ ಮಾಡಿದುದಕ್ಕೆ ಸಂತೋಷವನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸುತ್ತ ದೇಶಸೇವೆಯನ್ನು ಮಾಡಲು ಮೈಸೂರು ಸಹ ಸೂಕ್ತವಾದ ಪಾತ್ರವನ್ನು ವಹಿಸಲು ಇದರಿಂದ ಅವಕಾಶ ದೊರಕಿದೆಯೆಂದು ಹೇಳಿ, ಈ ಸಂಸ್ಥೆಯು ದೇಶದ ಹಿತಕ್ಕೆ ದುಡಿದು ಜನರ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲೆಂದು ಹಾರೈಸಿದರು.

ವಿಶ್ವವಿದ್ಯಾನಿಲಯ ಸುಧಾರಣೆ

ವಿಶ್ವವಿದ್ಯಾನಿಲಯವನ್ನು ಪುನರ್ವ್ಯವಸ್ಥೆಗೊಳಿಸಬೇಕೆಂಬ ದೃಷ್ಟಿಯಿಂದ ಡಾ|| ಸಿ ಆರ್. ರೆಡ್ಡಿಯವರು ಮೈಸೂರು ಸರ್ಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಸರ್ಕಾರವು ಪ್ರವೇಶಿಸಕೂಡದೆಂದೂ ಅದಕ್ಕೆ ಸ್ವಯಮಧಿಕಾರ ಕೊಡಬೇಕೆಂದು ಅವರು ಮಾಡಿದ್ದ ಸಲಹೆಯನ್ನು ಸರ್ಕಾರವು ಒಪ್ಪಿರುವುದಾಗಿ ತಿಳಿಯುಬರುತ್ತದೆ.

ಪ್ರೋಛಾನ್ಸಿಲರ ಹುದ್ದೆ ಅನಗತ್ಯ, ಪ್ರಾಧ್ಯಾಪಕರುಗಳಿಲ್ಲದ ಯೂನಿವರ್ಸಿಟಿ ಕೌನ್ಸಿಲ್ ತನ್ನ ಕೆಲಸ ನಿರ್ವಹಿಸುವುದು ಕಷ್ಟ, ಇಂಟರ್‌ಮೀಡಿಯಟ್ಟನ್ನು ವಿಶ್ವವಿದ್ಯಾನಿಲಯದ ಕೈ ತಪ್ಪಿಸುವುದು ಸರಿಯಲ್ಲವೆಂದು ಇತ್ತೀಚೆಗೆ ನಡೆದ ವಿಶ್ವವಿದ್ಯಾನಿಲಯದ ಕೌನ್ಸಿಲ್ಲಿನ ಅಭಿಪ್ರಾಯವೆಂದು ಹೇಳಲಾಗಿದೆ.

ಕೇಂ. ಆಹಾರಸಂಶೋಧನಾಲಯ ಆರಂಭೋತ್ಸವ

ಮೈಸೂರು ಅ. ೨೨

ಭಾರತ ಸರ್ಕಾರದವರು ಸ್ಥಾಪಿಸಿರುವ ಕೇಂದ್ರ ಆಹಾರಸಂಶೋಧನಾಲಯದ ಆರಂಭೋತ್ಸವವನ್ನು ನಿನ್ನೆ ಭಾರತಸಚಿವ ಶ್ರೀ ಸಿ ರಾಜಗೋಪಾಲಾಚಾರಿಯವರು ನೆರವೇರಿಸಿದರು. ಶ್ರೀಮನ್ಮಹಾರಾಜರವರು ಅಧ್ಯಕ್ಷತೆ ವಹಿಸಿದ್ದರು.

ಭಾರತ ಸಂಶೋಧನಾಲಯಗಳ ಡೈರೆಕ್ಟರಾದ ಡಾ|| ಎಸ್. ಎಸ್. ಭಾಟ್ನಗರ್‌ರವರು ಪ್ರಾರಂಭ ಭಾಷಣ ಮಾಡುತ್ತ ಭರತದಲ್ಲಿ ವಿಜ್ಞಾನಿಗಳು ತಮ್ಮ ಸರ್ವಶಕ್ತಿಯನ್ನು ಉಪಯೋಗಿಸಿ ರಾಷ್ಟ್ರದ ಸಂಪತ್ತನ್ನು ವೃದ್ಧಿಗೊಳಿಸಲೋಸುಗ ಈ ಸಂಶೋಧನಾಲಯಗಳು ಕಾರ್ಯಕ್ರಮ ಜರುಗಿಸುತ್ತಲಿವೆ. ಪಾಂಡವರ ವನವಾಸಕಾಲದಲ್ಲಿ ಶ್ರೀ ಕೃಷ್ಣನು ದ್ರೌಪದಿಗೆ ಅಕ್ಷಯಪಾತ್ರೆಯನ್ನು ಕರುಣಿಸಿದಂತೆ ಈಗ ಮೈಸೂರಿನಲ್ಲಿ ಪ್ರಾರಂಭವಾಗುವ ಆಹಾರಸಂಶೋಧನಾಲಯವು ಹಿಂದಿನ ಆಹಾರ ಅಭಾವವನ್ನು ನೀಗಲು ಬಂದು ವರಪ್ರಸಾದವಾಗಿ ಪರಿಣಮಿಸಲೆಂದು ಹಾರೈಸಿದರು.

ಶ್ರೀ ಕೆ ಸಿ. ರೆಡ್ಡಿಯವರು ಭಾರತ ಪ್ರಧಾನಿ ಪಂಡಿತ ನೆಹರೂರವರು ಕಾರ್ಯಕಲಾಪಗಳು ಯಶಸ್ವಿಯಾಗಿ ನಡೆದು ಈ ಕೇಂದ್ರವು ಈಗಿನ ಆಹಾರ ಅಭಾವವನ್ನು ನೀಗಲು ಸಹಕಾರಿಯಾಗಲೆಂದು ಹಾರೈಸಿ ಕಳುಹಿಸಿದ್ದ ಸಂದೇಶವನ್ನು ಓದಿದರು. ಸಮಾರಂಭಕ್ಕೆ ಬಂದವರನ್ನು ಸರ್ಕಾರದ ಪರವಾಗಿ ಆಹ್ವಾನಿಸಿದರು.

ವಸ್ತುಪ್ರದರ್ಶನಾಲಯಕ್ಕೆ ಶ್ರೀ ರಾಜಾಜಿಯವರ ಭೇಟಿ

ನಿನ್ನೆ ಶ್ರೀರಾಮಕೃಷ್ಣಾಶ್ರಮ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸಿದನಂತರ ಶ್ರೀ ರಾಜಗೋಪಾಲಾಚಾರಿಯವರು ವಸ್ತುಪ್ರದರ್ಶನಾಲಯಕ್ಕೆ ಭೇಟಿಯಿತ್ತರು. ರಾಮಕೃಷ್ಣಾಶ್ರಮದವರು ಶ್ರೀಮನ್ಮಹಾರಾಜರೊಡನೆ ವಸ್ತುಪ್ರದರ್ಶನಾಲಯಕ್ಕೆ ಆಗಮಿಸಿದರು. ಪ್ರದರ್ಶನಾಲಯದ ಬಳಿ ಪ್ರದರ್ಶನದ ಕಮಿಟಿ ಅಧ್ಯಕ್ಷರು, ಉಪಾಧ್ಯಕ್ಷರು ಮಂತ್ರಿಗಳೆಲ್ಲರೂ ಶ್ರೀಮನ್ಮಹಾರಾಜರನ್ನು ಮತ್ತು ರಾಜಾಜಿಯವರನ್ನು ಸ್ವಾಗತಿಸಿ ಪುಷ್ಪಮಾಲೆಗಳನ್ನರ್ಪಿಸಿದರು. ಶ್ರೀಮನ್ಮಹಾರಾಜರು ಶ್ರೀ ರಾಜಾಜಿಯವರಿಗೆ ಭೇಟಿಕೊಟ್ಟು ತಾವು ಹೊರಟುಹೋದರು. ಅನಂತರ ಶ್ರೀ ರಾಜಾಜಿಯವರು ಮೊದಲು ಕುಶಲಕಲೆಯ ವಿಭಾಗಕ್ಕೆ ಭೇಟಿಯಿತ್ತು ಅಲ್ಲಿಯ ಸುಂದರ ಚಿತ್ರಪಟಗಳ ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಅನಂತರ ಮಹಿಳಾ ವಿಭಾಗ, ಜಪಾನಿನಿಂದ ಬಂದಿರುವ ವಾದ್ಯಗೋಷ್ಠಿಯನ್ನು ಪರಿಶೀಲಿಸಿ ಗ್ರಾಮಕೈಗಾರಿಕಾ ವಿಭಾಗಕ್ಕೆ ಭೇಟಿಯಿತ್ತರು. ಅಲ್ಲಿ ನಾನಾ ಕೈಕಾರಿಕಾ ಪ್ರದರ್ಶನಗಳನ್ನು ಪರೀಕ್ಷಿಸಿದರು. ಪ್ರದರ್ಶನಸಮಿತಿಯ ಉಪಾಧ್ಯಕ್ಷ ಶ್ರೀ ನಾರಾಯಣಸ್ವಾಮಿಯವರು ಎಲ್ಲವನ್ನು ಶ್ರೀ ರಾಜಾಜಿಯವರಿಗೆ ವಿಷದಪಡಿಸಿದರು ಅನೇಕ ವಸ್ತುಪ್ರದರ್ಶನಕಾರರು ಶ್ರೀ ರಾಜಾಜಿಯವರಿಗೆ ಪುಷ್ಪಹಾರ, ಖಾದಿಹಾರ ಮುಂತಾದುವನ್ನು ಅರ್ಪಿಸಿದರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಅಕ್ಟೋಬರ್ ೨೪ ಮಂಗಳವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ಕೊಳಲು. ೭-೪೫ ಕನ್ನಡದಲ್ಲಿ ಸುದ್ದಿ. ೮-೦ ಇಂಗ್ಲೀಷಿನಲ್ಲಿ ಸುದ್ದಿ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ಸುದ್ದಿ. ೧-೪೦ ಪಿಟೀಲು ೧-೪೫ ಹಿಂದೀ ಶಿಕ್ಷಣ. ೨-೦ ಹಿಂದುಸ್ಥಾನಿ ಹಾಡು. (ರೆ) ೨-೩೦ ಮುಕ್ತಾಯ.

ಸಂಜೆ ೫-೩೦ ಕೊಳಲು. ೬-೦ ಇಂಗ್ಲೀಷಿನಲ್ಲಿ ಸುದ್ದಿ. ೬-೧೦ ಗಾನವಿಹಾರ. ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ಕಾರ್ಯಕ್ರಮ. ೭-೦ ಸ್ಥಾನೀಯ ಸೂಚನೆಯು. ೭-೫ ಹಿಂದೂಸ್ತಾನಿ ಹಾಡುಗಾರಿಕೆ. ೭-೩೦ ಕನ್ನಡದಲ್ಲಿ ಯು ಎಸ್. ಎ ಭಾಷಣ ೭-೪೫ ಕನ್ನಡದಲ್ಲಿ ಸುದ್ದಿ. ೮-೦ ಹಾಡುಗಾರಿಕೆ. ೮-೩೦ ವಿಶ್ವನಾಥಶಾಸ್ತ್ರಿ ಹಾಡುಗಾರಿಕೆ- ೯-೦ ಇಂಗ್ಲೀಷಿನಲ್ಲಿ ಸುದ್ದಿ. ೯-೧೫ ಹಿಂದಿಯಲ್ಲಿ ಸುದ್ದಿ. ೯-೩೦ ಗಾನವಿಂತಿ. ೧೦-೦ ಮುಕ್ತಾಯ.

● ೧೯೫೧ನೇ ಇಸವಿ ಜನವರಿ ೨ನೇ ತಾ|| ಬೆಂಗಳೂರಿನಲ್ಲಿ ನಡೆಯಲಿರುವ ೩೮ನೇ ಇಂಡಿಯನ್ ಸೈನ್ಸ್‌ಕಾಂಗ್ರೆಸ್ ಅಧಿವೇಶನಕ್ಕೆ ಪ್ರಧಾನಿ ಪಂಡಿತ ಜವಹರ್‌ಲಾಲ್ ನೆಹರೂರವರು ಬರಲು ಒಪ್ಪಿದ್ದಾರೆಂದು ತಿಳಿಯುಬರುತ್ತದೆ.

● ನಾಳೆ ಸಂಜೆ ೫-೩೦ ಕ್ಕೆ ಮೈಸೂರು ಪುರಭವನದಲ್ಲಿ ವಿಶ್ವಸಂಸ್ಥೆಯ ದಿನಾಚರಣೆಯು ನಡೆಯುವುದು. ಆಹಾರ ಸಂಶೋಧನಾ ಕೇಂದ್ರದ ಡೈರೆಕ್ಟರಾದ ಡಾ|| ಬಿ. ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸುವರು.

ರಣಜಿತ್
20-10-50 ಶುಕ್ರವಾರದಿಂದ
ಕೆ ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ: **ಮಧುಬಾಲ † ಮೋತಿಲಾಲ್**
ಮನೋರಮಾ† ಗೋಪ್

ಬೆಳಗಿನ ಪ್ರದರ್ಶನ
27-10-50 ರಿಂದ 3 ದಿನಗಳು ಮಾತ್ರ
ತಕದೀರ್
ಪಾತ್ರ : **ಮೋತಿಲಾಲ್—ಚಾರ್ಲಿ—ನರ್ಗಿಸ್.**

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

. SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೪—೧೦—೧೯೫೦ನೇ ಮಂಗಳವಾರ [ಸಂಚಿಕೆ ೫೩

ಮೂಲಭೂತ ತತ್ವಗಳನ್ನು ಗೌರವಿಸಿ

ಮೂಲಭೂತ ತತ್ವಗಳಿಗೆ ಗೌರವ ತೋರಬೇಕು, ಮೂಲಭೂತವಲ್ಲದಂತಹ ತತ್ವಗಳನ್ನು ವಿವೇಕವಾಗಿ ದೂರೀಕರಿಸಬೇಕು. ಮಹಾತ್ಮ ಗಾಂಧಿಯವರ ತತ್ವ ಮಾರ್ಗವನ್ನು ಎಲ್ಲರೂ ಅನುಸರಿಸಬೇಕು. ಮಹಾತ್ಮರು ವಿವೇಚನಾ ಬುದ್ಧಿಯಲ್ಲಿಯೂ ಸೌಹಾರ್ದತೆಯಲ್ಲಿಯೂ ಮತ್ತು ದಯಾಪರತೆಯಲ್ಲಿ ಅತ್ಯಂತ ಶ್ರೇಷ್ಠ ಮಾದರಿಯಾಗಿದ್ದರು ಎಂದು ಕೇಂದ್ರ ಮಂತ್ರಿ ಶ್ರೀ. ಸಿ. ರಾಜಗೋಪಾಲಚಾರಿಯವರು ನಿನ್ನೆ ಸಂಜೆ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಮಹಾತ್ಮ ಗಾಂಧಿಯವರ ಭಾವ ಚಿತ್ರ ಅನಾವರಣೋತ್ಸವಮಾಡುತ್ತಾ ನುಡಿದರು. ಬೊಂಬಾಯಿಯ ಮೈಸೂರು ಸಹಾಯ ಸಮಿತಿಯವರು ಮೈಸೂರು ಲೆಜಿಸ್ಲೆಟಿವ್ ಅಸೆಂಬ್ಲಿಯ ಭವನದಲ್ಲಿಡಲು ಈ ಭಾವ ಚಿತ್ರವನ್ನು ದಾನಮಾಡಿದ್ದರು.

ಶ್ರೀ ರಾಜಾಜಿಯವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಬಡವರ ಮತ್ತು ದೀನದಲಿತರ ಬಗ್ಗೆ ದಯಾಪರ ಮನೋಭಾವ ತೋರಿಸಲು, ಶೀಲಶಕ್ತಿ ಬೆಳೆಸಲು, ಶ್ರದ್ಧೆ ಮತ್ತು ಕಾರ್ಯ ತತ್ಪರತೆಯನ್ನು ಹೊಂದಲು ಈ ಭಾವ ಚಿತ್ರವು ನಿಮಗೆಲ್ಲರಿಗೂ ಸ್ಫೂರ್ತಿ ತೋರುತ್ತಿರಲಿ ಎಂದು ತಿಳಿಸಿದರು.

೫ ಮಹಾರಾಷ್ಟ್ರಗಳ ಸಮ್ಮೇಳನ

ಅಂತರ ರಾಷ್ಟ್ರೀಯ ಶಾಂತಿ ಭಂಗವನ್ನುಂಟುಮಾಡುವಂತಹ ಸಮಸ್ಯೆಗಳನ್ನು ನಿವಾರಿಸಲು ೫ ಮಹಾರಾಷ್ಟ್ರಗಳ ಮಾತುಕತೆ ಪುನಃ ನಡೆಯಬೇಕೆಂದು ಪ್ರಪಂಚ ಸಂಸ್ಥೆಯ ರಾಜಕೀಯ ಪಕ್ಷದ ಸಮಿತಿಯು ಪ್ರಾರ್ಥಿಸಿ ನಿರ್ಣಯ ಮಾಡಿದೆ ಈ ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತೆಂದು ತಿಳಿದುಬಂದಿದೆ

ನೀರಿನೊಳಗೆ ಚಲನ ಚಿತ್ರ ಹಿಡಿಯುವ ಕ್ಯಾಮರಾ

ನೀರಿನೊಳಗೇ ಇದ್ದುಕೊಂಡು ಹೊರಗಿನ ಯಾವ ಸಹಾಯವೂ ಇಲ್ಲದೆಯೇ ಚಲನ ಚಿತ್ರ ತೆಗೆದುಕೊಳ್ಳುವಂತಹ ಕ್ಯಾಮರವನ್ನು ಅಮೇರಿಕಾದ ನೌಕಾಪಡೆಯು ಈಗ ಸಿದ್ಧಗೊಳಿಸಿದೆ ನೀರಿನೊಳಗೆ ೨೦೦ ಅಡಿಗಳಷ್ಟು ಆಳಕ್ಕೆ ಹೋಗಿ ಈ ಕ್ಯಾಮರದಿಂದ ಚಿತ್ರಗಳನ್ನು ಹಿಡಿಯಬಹುದು.

ಕೊರಿಯಾದಲ್ಲಿ ೭ ಸಾವಿರ ಯುದ್ಧ ಕೈದಿಗಳ ಬಂಧನ

ಕೊರಿಯಾದಲ್ಲಿ ೭ ಸಾವಿರಕ್ಕೂ ಹೆಚ್ಚಾದ ಯುದ್ಧ ಕೈದಿಗಳನ್ನು ಹಿಡಿಯಲಾಯಿತು. ಅದರಲ್ಲಿ ೫,೬೦೦ ಕ್ಕು ಹೆಚ್ಚುಮಂದಿ ಅಮೇರಿಕನ್ ಸೈನ್ಯಗಳೇ ಹಿಡಿದಿವೆ.

ಜ|| ಮೆಕಾರ್ಥರಿಗೆ ಪ್ರಶಸ್ತಿ

ಯುದ್ಧ ಕ್ಷೇತ್ರದಲ್ಲಿ ನಿರಾಯುಧರಾಗಿ ಹೋಗಿ ವಿಮಾನದಲ್ಲಿ ಹಾರಾಟ ನಡೆಸಿ ಬಂದುದಕ್ಕಾಗಿ ಜ|| ಮೆಕಾರ್ಥರಿಗೆ ಪ್ರಶಸ್ತಿಯನ್ನು ಕೊಡಲಾಗಿದೆ

ಮಗುವಿನ ಮರಣ

ನಿನ್ನೆ ದಿನ ಮಧ್ಯಾಹ್ನ ೧೨-೩೦ ಸಮಯದಲ್ಲಿ ವಿ. ಆರ್. ಬಸ್ ಸರ್ವೀಸ್‌ಗೆ ದೊಡ್ಡಕೆರೆಯ ಏರಿಯ ಮೇಲೆ ೮ ವರ್ಷದ ಮಗುವು ಸಿಕ್ಕಿ ಸ್ಥಳದಲ್ಲಿಯೇ ಮೃತಪಟ್ಟಿತು.

ಭಾರತ-ಬ್ರಿಟಿಷ್ ಮೈತ್ರಿತ್ವ

ಭಾರತ-ಬ್ರಿಟನ್ನಿನ ಈಗಿನ ಮೈತ್ರಿತ್ವವು ಹಿಂದಿಗಿಂತಲೂ ಉತ್ತಮವಾಗಿದೆ. ಎಂದು ಭಾರತ ರಾಯಭಾರಿ ಶ್ರೀ ವಿ. ಕೆ. ಕೃಷ್ಣಮೆನನ್‌ರು ಬ್ರಿಟನ್ನಿನಲ್ಲಿ ರೋಟರಿ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿದರು.

ಮೈಸೂರಿಗೆ ಆಹಾರ

ಮೈಸೂರಿನಲ್ಲುಂಟಾಗಿರುವ ಉತ್ಕಟ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ಕೇಂದ್ರ ಸರ್ಕಾರವು ೩ ಸಾವಿರ ಟನ್ ಅಕ್ಕಿ ೪ ಸಾವಿರ ಟನ್ ಗೋಧಿ ಮತ್ತು ೩ ಸಾವಿರ ಟನ್ ಮೈಲೋವನ್ನು ಕಳುಹಿಸಲಿದೆ.

ಆಂಧ್ರಪ್ರಾಂತ್ಯ ರಚನೆ

ಆಂಧ್ರಪ್ರಾಂತ್ಯ ರಚನೆಯ ಪ್ರಶ್ನೆಯು ಮುಂದಿನ ಮಹಾ ಚುನಾವಣೆಯನಂತರ ಸೇರುವ ಕೇಂದ್ರ ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಬೇಕು ಅಲ್ಲಿಯವರೆಗೆ ಅದರ ಪ್ರಸ್ತಾಪಮಾಡುವಹಾಗಿಲ್ಲವೆಂದು ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಕಾಳ ವೆಂಕಟರಾಯರು ತಿಳಿಸಿರುವರು.

ವಿದ್ಯಾ ಮಂತ್ರಿಗಳ ಸಭೆ

ಮದರಾಸು, ಮೈಸೂರು, ಹೈದರಾಬಾದು ಮತ್ತು ತಿರುವಾಂಕೂರು-ಕೊಚ್ಚಿನ್, ಪ್ರಾಂತ್ಯಗಳಿಂದ ಸಚಿವರೆಲ್ಲರೂ ಇಂದು ಮದರಾಸಿನಲ್ಲಿ ಸೇರಲಿರುವರು. ವಿಶ್ವವಿದ್ಯಾನಿಲಯ ಸುಧಾರಣಾ ಸಮಿತಿಯವರ ವರದಿಯನ್ನು ಪರಿಶೀಲಿಸುವುದೇ ಈ ಸಭೆಯು ಮುಖ್ಯೋದ್ದೇಶ ಈ ಪ್ರಾಂತ್ಯಗಳ ವಿಶ್ವವಿದ್ಯಾನಿಲಯಗಳ ಉಪಸ್ಥಾನಪತಿಗಳೂ ಈ ಸಭೆಯ ಭಾಗವಹಿಸುವರು.

ರಾಷ್ಟ್ರಪತಿಗಳ ಬ್ರಾಡ್‌ಕ್ಯಾಸ್ಟ್

ಪ್ರಪಂಚಸಂಸ್ಥೆ ದಿನದ ಸಂಬಂಧವಾಗಿ ಇಂದು ರಾತ್ರಿ ೮-೩೦ ಗಂಟೆಗೆ ರಾಷ್ಟ್ರಪತಿ ಡಾ|| ರಾಜೇಂದ್ರಪ್ರಸಾದರವರು ಹಿಂದಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ದೆಹಲಿ ಕೇಂದ್ರದಿಂದ ಭಾಷಣಮಾಡುವರು. ಎ.ಐ.ಆರ್‌ನ ಎಲ್ಲಾ ಪ್ರಾದೇಶಿಕ ಕೇಂದ್ರಗಳಿಂದ ಇವರ ಭಾಷಣ ಪ್ರಸಾರ ಮಾಡಲಾಗುವುದು.

ಪ್ರಧಾನಿ ಪಂಡಿತನೆಹರೂರವರು ಇಂದು ಸಂಜೆ ದೆಹಲಿಯಲ್ಲಿ ಬಹಿರಂಗ ಸಭೆಯಲ್ಲಿ ಪ್ರಪಂಚಸಂಸ್ಥೆಯ ದಿನಾಚರಣೆಯ ವಿಷಯವಾಗಿ ಭಾಷಣಮಾಡುವರು. ದೆಹಲಿ ರೇಡಿಯೋ ಕೇಂದ್ರದಿಂದ ಇದೇ ರಾತ್ರಿ ೧೦ ಗಂಟೆಗೆ ಇವರ ಭಾಷಣವನ್ನು ಪುನಃ ಪ್ರಸಾರ ಮಾಡಲಾಗುವುದು.

ಅಸ್ಸಾಂ ಗೌರ್ನರಿಗೆ ಅಪಾಯ

ಭೂಕಂಪ ಪೀಡಿತ ಪ್ರದೇಶಗಳ ಪರಿಶೀಲನೆಗೆ ಪ್ರವಾಸ ಕೈಗೊಂಡಿದ್ದ ಅಸ್ಸಾಮಿನ ಗೌರ್ನರ್ ಶ್ರೀ ಜಯರಾಂ ದೌಲತ್‌ರಾಂರವರು ಮತ್ತು ಅವರ ಪರಿವಾರದವರು ದಿಬಾಂಗ್ ನದಿಯನ್ನು ದಾಟುತ್ತಿದ್ದಾಗ ಅವರು ಕೊಚ್ಚಿಕೊಂಡು ಹೋಗುತ್ತಲಿದ್ದರು. ಆದರೆ ಗುಡ್ಡಗಾಡಿನ ನಿವಾಸಿಗಳು ಅವರನ್ನು ರಕ್ಷಿಸಿದರು. ಅವರು ದಾಟ ಹೋಗುತ್ತಲಿದ್ದ ಮೋಟಾರುಗಳಲ್ಲಿ ಒಂದು ವಿನಹ ಮಿಕ್ಕವೆಲ್ಲವೂ ನೀರುಪಾಲಾದುವು.

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿ ಸಭೆ

ಇದೇ ಮಾಹೆ ೨೮ ಮತ್ತು ೨೯ನೇ ತಾರೀಖಿನಲ್ಲಿ ಮೈಸೂರು ನಗರದಲ್ಲಿ ಶ್ರೀ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆ ನಡೆಯಲು ಸ್ವಾಗತಸಮಿತಿಯನ್ನು ರಚಿಸಲಾಗಿದೆ ಈ ಸ್ವಾಗತ ಸಮಿತಿಯ ಕಛೇರಿಯು ಮೈಸೂರು ನಗರ ಕಾಂಗ್ರೆಸ್ ಕಛೇರಿಯಲ್ಲಿ ಬೆಳಗ್ಗೆ ೧೦ರಿಂದ ೧೨ರವರೆಗೆ, ಸಂಜೆ ೬ರಿಂದ ೮ರವರೆಗೆ ತೆರೆದಿರುತ್ತದೆಂದು, ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ನೆಹರೂರವರ ಸಂದೇಶ

ದೆಹಲಿ ಪ್ರಾಂತೀಯಕಾಂಗ್ರೆಸ್ ಸಮಿತಿ ವ್ಯವಸ್ಥೆಮಾಡಿದ್ದ ವಿಶ್ವಸಂಸ್ಥೆ ದಿನಾಚರಣೆ ಸಂದರ್ಭಕ್ಕೆ ಪ್ರಧಾನಿ ಪಂಡಿತ ನೆಹರೂರವರು ಸಂದೇಶಕಳುಹಿಸುತ್ತಾ ಇಂದಿನ ವಿಷಮ ಪರಿಸ್ಥಿತಿಯನ್ನೆದುರಿಸಲು ಎಲ್ಲರೂ ಶ್ರಮಿಸಬೇಕೆಂದೂ, ಪ್ರಪಂಚವು ಯುದ್ಧದ ಕಡೆಗೆ ಚಲಿಸುವುದನ್ನು ತಡೆಗಟ್ಟಬೇಕೆಂದೂ, ವಿಶ್ವಸಂಸ್ಥೆಯ ಪ್ರಣಾಳಿಕೆಯನ್ನು ಪ್ರಮುಖರಾಷ್ಟ್ರಗಳೇ ಅನುಸರಿಸದಿದ್ದಲ್ಲಿ ಆ ಧ್ಯೇಯ ಸಾಧನೆಯಾಗುವುದಿಲ್ಲವೆಂದೂ ಮತ್ತು ಶಾಂತಿಯನ್ನು ಸ್ಥಾಪಿಸುವುದರಲ್ಲಿ ಸಂಪೂರ್ಣ ಶ್ರದ್ಧೆಯಿರುವುದಾಗಿಯೂ ಮತ್ತು ಶಾಂತಿಸ್ಥಾಪನಾಕಾರ್ಯದಲ್ಲಿ ವಿಶ್ವಸಂಸ್ಥೆಗೆ ಭಾರತವು ಸಂಪೂರ್ಣ ಬೆಂಬಲನೀಡುವುದಾಗಿಯೂ ತಿಳಿಸಿದ್ದಾರೆ.

● ಮೈಸೂರು ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಶ್ರೀ ಎಂ. ಗೋಪಾಲಸ್ವಾಮಿ ಅಯ್ಯಂಗಾರ್ರನ್ನು ಖಾಯಂ ಕಾರ್ಯದರ್ಶಿಗಳನ್ನಾಗಿ ನೇಮಿಸಿದ್ದಾರೆಂದು ಪ್ರಧಾನ ಕಾರ್ಯದರ್ಶಿ ಶ್ರೀ ಎ. ಜಿ. ರಾಮಚಂದ್ರರಾಯರು ತಿಳಿಸಿರುತ್ತಾರೆ.

ಸಮಾಚಾರ

ಅಕ್ಟೋಬರ್ ೨೪-೧೦-೫೦ ಮಂಗಳವಾರ

ವಸ್ತು ಪ್ರದರ್ಶನದಲ್ಲಿ ಈ ಪದ್ಧತಿ ಮಾರ್ಪಾಡಾಗಬೇಕು

ಮೈಸೂರು ದಸರಾ ವಸ್ತುಪ್ರದರ್ಶನಕ್ಕೆ ಮಾಮೂಲಿನಂತೆ ಇಂದು ರಾಜಮನೆತನದವರು ಭೇಟಿಯಿತ್ತನಂತರ ಸಂಜೆ ೫ ಗಂಟೆಯವರೆಗೆ ಅರಸುಮಹಿಳೆಯರಿಗಾಗಿ ತೆರೆದಿದ್ದು ಅನಂತರ ಸಾರ್ವಜನಿಕರಿಗಾಗಿ ತೆರೆಯಲಾಗಿದೆ. ಪುನಃ ೨೬ನೇ ತಾ|| ಮಧ್ಯಾಹ್ನವೆಲ್ಲಾ ಸಾರ್ವಜನಿಕ ಸ್ತ್ರೀಯರಿಗೆ ಮಾತ್ರ ತೆರೆಯಲಾಗುವುದು.

ಹಿಂದಿನಿಂದಲೂ ಯಾವುದೋ ಕಾರಣಾಂತರದಿಂದ ಈ ಪದ್ಧತಿಯು ಜಾರಿಗೆ ಬಂದಿದೆ. ರಾಜಮನೆತನದವರು ಭೇಟಿಯಿತ್ತನಂತರ ಅರಸುಮಹಿಳೆಯರಿಗೆ ಪ್ರತ್ಯೇಕವಾಗಿ ವಸ್ತುಪ್ರದರ್ಶನವನ್ನು ತೆರೆದಿರುವುದು ಪುನಃ ಮತ್ತೊಂದು ದಿನವನ್ನು ಸ್ತ್ರೀಯರಿಗೆ ಮೀಸಲಾಗಿಡುವುದು ಪ್ರದರ್ಶನಕಾರರಿಗೆ ನಷ್ಟವನ್ನು ತೊಂದರೆಯನ್ನು ಉಂಟುಮಾಡುತ್ತಾ ಇದೆ. ರಾಜಮನೆತನದವರ ಭೇಟಿಯಾದ ನಂತರ ಎಲ್ಲಾ ಮಹಿಳೆಯರಿಗೆ ಪ್ರವೇಶ ಏರ್ಪಟ್ಟು, ಈ ದಿನವನ್ನೆಲ್ಲಾ ಅವರಿಗೆ ಮೀಸಲಾಗಿಡುವುದು ಉಚಿತವಾಗಿ ಕಾಣುತ್ತದೆ. ಇದರಿಂದ ಮತ್ತೊಂದು ದಿನವನ್ನು ಪ್ರತ್ಯೇಕವಾಗಿ ಸ್ತ್ರೀಯರಿಗಾಗಿ ಏರ್ಪಡಿಸಿ, ಅದರಿಂದಾಗುವ ತೊಂದರೆಗಳನ್ನು ತಪ್ಪಿಸಲು ಸಾಧ್ಯ. ಅರಸು ಮಹಿಳೆಯರಿಗೇ ಪ್ರತ್ಯೇಕವಾಗಿ ಇಡುವ ಅವಶ್ಯಕತೆಯೇನೂ ಕಾಣಬರುವುದಿಲ್ಲ. ಪ್ರದರ್ಶನಕ್ಕೆ ಭೇಟಿಯೀಯುವ ಹತ್ತಾರು ಅರಸು ಮಹಿಳೆಯರಿಗಾಗಿ ನೂರಾರು ಪ್ರದರ್ಶನಕಾರರು ತೊಂದರೆಪಟ್ಟು ನಷ್ಟಪಟ್ಟುಕೊಳ್ಳುವುದು ಸಾಧುವಲ್ಲ. ಸಾರ್ವಜನಿಕವಾಗಿ ಮಹಿಳೆಯರಿಗೆ ಯಾವಾಗ ಪ್ರತ್ಯೇಕವಾಗಿ ಏರ್ಪಾಡು ಮಾಡಲಾಗುವುದೋ ಅಂದೇ ಅರಸುಮಹಿಳೆಯರೂ ಪ್ರದರ್ಶನವನ್ನು ನೋಡಬಹುದು.

ಇದಲ್ಲದೆ ರಾಜಮನೆತನದವರು ಬರುವ ವೇಳೆಯಲ್ಲಿ ಸಾಮಾನ್ಯವಾಗಿ ಸಾಧ್ಯವಾದ ಸ್ಟಾಲುಗಳ ಮಹಿಳೆಯರು ಇರಲು ಅವಕಾಶವಿರುತ್ತಲಿತ್ತು. ಈ ವಿಚಾರವು ಪೂರ್ವಭಾವಿಯಾಗಿ ಪ್ರದರ್ಶನಗಾರರಿಗೆ ತಿಳಿಸಲಾಗುತ್ತಲಿತ್ತು. ಈ ಬಾರಿ ಈ ವಿಷಯದಲ್ಲಿ ಸರಿಯಾದ ತಿಳುವಳಿಕೆ ಕೊಡುವವರೇ ಇಲ್ಲದಾಗಿದೆ. ಉಪಾಧ್ಯಕ್ಷರನ್ನು ಕೇಳಿದರೆ ಹಿಂದಿನ ಮಾಮೂಲಿನಂತೆ ನಡೆಯುವುದೆಂದರು ಕಾರ್ಯದರ್ಶಿಗಳನ್ನು ಕೇಳದರೆ ನಾನು ಹೊಸಬನೆಂದು ಹೇಳುತ್ತ ಆಫೀಸಿನವರನ್ನು ಕೇಳಿದರು. ಆಫೀಸಿನವರು ಅರಮನೆ ಹುಜೂರು ಸೆಕ್ರೆಟರಿಯವರು ಅಪ್ಪಣೆಯಿತ್ತಲ್ಲಿ ಸ್ತ್ರೀಯರಿರಬಹುದು. ಅದರಿಂದ ಮಹಿಳೆಯರು ಸ್ಟಾಲಿನಲ್ಲಿರಲು ಏರ್ಪಡಿಸುವವರು ಮಹಿಳೆಯರನ್ನು ಕರೆದುಕೊಂಡು ಬಂದಿದ್ದು ಅರಮನೆಯವರು ಅಪ್ಪಣೆಯಿತ್ತಲ್ಲಿ ಬಿಟ್ಟುಹೋಗಲಿ ಇಲ್ಲದಿದ್ದರೆ ವಾಪಸ್ಸು ಕರೆದೊಯ್ಯಲಿ ಎಂದು ತಿಳಿಸಿದರು. ಈ ವಿಷಯದಲ್ಲಿ ಸುವ್ಯವಸ್ಥಿತ ರೀತಿಯಲ್ಲಿ ಪೂರ್ವಭಾವಿ ಯೋಚಿಸಿ ತಕ್ಕ ತಿಳುವಳಿಕೆಯನ್ನು ಎಲ್ಲರಿಗೂ ಕೊಡತಕ್ಕ ಕರ್ತವ್ಯವು ವಸ್ತುಪ್ರದರ್ಶನಾಧಿಕಾರಿಗಳಿಗೆ ಸೇರಿದ್ದು. ಇನ್ನು ಮುಂದಾದರೂ ಯಾರಿಗೂ ತೊಂದರೆಯಾಗದೆ ವ್ಯವಸ್ಥೆಯನ್ನು ಪೂರ್ವಭಾವಿಯಾಗಿ ಏರ್ಪಡಿಸಲಿ. ಹಿಂದಯೇ ಹೇಳಿದಂತೆ, ಅರಮನೆಯವರಿಗೆ, ಅರಸು ಮಹಿಳೆಯರಿಗೆ ಸಾರ್ವಜನಿಕವಾಗಿ ಮಹಿಳೆಯರಿಗೆ ಬೇರೆಬೇರೆ ದಿನ ಏರ್ಪಡಿಸದೆ ಒಂದೇ ದಿನದಲ್ಲಿ ಎಲ್ಲವೂ ಜರುಗಿಯುವಂತೆ ಏರ್ಪಡಿಸಿ ಪ್ರದರ್ಶನಗಾರರಿಗೆ ಆಗುತ್ತಲಿರುವ ನಷ್ಟ, ತೊಂದರೆ ಮುಂದೆ ಆಗದಂತೆ ಮುಂದಾದರೂ ನೋಡಿಕೊಳ್ಳಲಿ.

ರಾಜಾಜಿನಗರದಲ್ಲಿ

ಬೆಂಗಳೂರು ನಗರದ ರಾಜಾಜಿನಗರದಲ್ಲಿ ಕೇಂದ್ರ ಸಚಿವ ಶ್ರೀ. ಸಿ. ರಾಜಗೋಪಾಲಾಚಾರಿಯವರು ನಿನ್ನೆ ಮೈಸೂರು ಎಲೆಕ್ಟ್ರೊ ಕೆಮಿಕಲ್ ವರ್ಕ್ಸ್ ಲಿಮಿಟೆಡ್‌ನ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಫ್ಯಾಕ್ಟರಿ ಚೇರ್ಮನ್ರಾದ ಶ್ರೀ ನವರತ್ನ ರಾಮರಾಯರು ಸ್ವಾಗತ ಭಾಷಣ ಮಾಡಿದರು.

ಶ್ರೀ. ರಾಜಾಜಿಯವರು ಭಾಷಣ ಮಾಡುತ್ತಾ ನನ್ನ ಬಾಲ್ಯ ಸ್ನೇಹಿತರಾದ ಶ್ರೀ ನವರತ್ನ ರಾಮರಾಯರು ನನ್ನ ಕೊರಳಿಗೆ ಹಾರ ಹಾಕುವುದು ನನಗೆ ಬಹಳ ಹಾಸ್ಯಾಸ್ಪದವಾಗಿ ಕಾಣುತ್ತದೆ. ಈ ಇಂಡಸ್ಟ್ರಿಯಲ್ ಸಬರ್ಬ್‌ಗೆ ನನ್ನ ನಾಮಾಂಕಿತ ಇಟ್ಟಿರುವುದರಲ್ಲಿ ಯಾವ ಐತಿಹಾಸಿಕ ಸಂಬಂಧ ಅಥವಾ ಯಾವ ಅರ್ಥವಾಗಲೀ ಇಲ್ಲ. ಈ ಕೈಗಾರಿಕಾ ಬಡಾವಣೆಗೆ ನಾನು ಯಾವ ರೀತಿಯಲ್ಲಿಯೂ ಕೆಲಸ ಮಾಡಿಲ್ಲ. ಬೆಂಗಳೂರು ನಗರದಲ್ಲಿ ಬಹಳ ಕಡಿಮೆ ಬೆಲೆಯಲ್ಲಿ ವಸತಿಗಳನ್ನು ಕಟ್ಟುವುದು ಮಾದರಿಯಾಗಿದೆ. ದೇಶದಿಂದ ಹೊರಕ್ಕೆ ಹೋಗುತ್ತಲಿರುವ ಕಚ್ಚಾ ಮಾಲುಗಳನ್ನು ನಮ್ಮ ದೇಶದಲ್ಲಿಯೇ ಉಪಯೋಗಿಸಿ ನಿತ್ಯ ಜೀವನಕ್ಕೆ ಬೇಕಾದ ಪದಾರ್ಥಗಳನ್ನು ನಾವೇ ತಯಾರುಮಾಡಿಕೊಳ್ಳಲು ಕಾರ್ಖಾನೆಗಳನ್ನು ಸ್ಥಾಪಿಸುವುದು ಅತ್ಯವಶ್ಯಕ ಹೀಗೆ ಮಾಡುವುದರಿಂದ ನಮ್ಮ ರಾಷ್ಟ್ರದ ಸಂಪತ್ತು ಇಲ್ಲೇ ಉಳಿದು ದೇಶ ಮುಂದುವರಿಯಲು ಸಾಧ್ಯವಾಗುತ್ತದೆ. ವ್ಯಾಪಾರ ಮತ್ತು ಕೈಗಾರಿಕೋದ್ಯಮಿಗಳು ಸರ್ಕಾರಕ್ಕೆ ತಮ್ಮ ಉತ್ಪತ್ತಿಯಲ್ಲಿ ಶೇಕಡ ೯೦ ರಷ್ಟು ಭಾಗವನ್ನು ತೆರಿಗೆ ರೂಪದಲ್ಲಿ ಕೊಟ್ಟು ದೇಶಪ್ರೇಮವನ್ನು ವ್ಯಕ್ತಪಡಿಸುವುದು ಸೂಕ್ತ. ಈ ರೀತಿ ಕೊಟ್ಟ ಹಣವು ಜನತೆಯ ಮೇಲ್ಮೆಗಾಗಿಯೇ ವಿನಿಯೋಗಿಸಲಾಗುತ್ತದೆ ಎಂದು ಹೇಳಿದರು

ನಾಮಕರಣ

ರಾಜಕುಮಾರಿ ಎಲಿಜಬೆತ್‌ರ ಹೆಣ್ಣು ಮಗುವಿಗೆ ಬಕಿಂಗ್‌ಹ್ಯಾಂ ಅರಮನೆಯಲ್ಲಿ ನಾಮಕರಣೋತ್ಸವ ನಡೆಯಿತು. ಮಗುವಿಗೆ ಆನ್‌ಎಲಿಜಬತ್ ಆಲಿಸ್ ಲೂಯಿಸ್ ಎಂದು ನಾಲ್ಕು ಹೆಸರನ್ನಿಡಲಾಯಿತು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೬ ಮೀಟರು

ಅಕ್ಟೋಬರ್ ೨೫ ಬುಧವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಪಿಟೀಲು. ೭-೩೫ ಚಿತ್ರಗೀತೆ. ೭-೪೫ ಕನ್ನಡದಲ್ಲಿ ಸುದ್ದಿ. ೮-೦ ಇಂಗ್ಲೀಷಿನಲ್ಲಿ ಸುದ್ದಿ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ಸುದ್ದಿ. ೧-೪೧ ಕ್ಲಾರಿಯೊನೇಟ್ ೧-೪೫ ಹಿಂದೀ ಶಿಕ್ಷಣ. ೨-೦ ವನಿತಾ ವಿಹಾರ. ೨-೩೦ ಮುಕ್ತಾಯ

ಸಂಜೆ ೫-೩೦ ಪಿಟೀಲು. ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದಿಯಲ್ಲಿ ಚರ್ಚೆ. ೭-೧೫ ಗೀತಾಂಜಲಿ. ೭-೩೦ ಪುರಕುಟುಂಬ (ಭಾಷಣ) ೮-೦ ಹಾಡುಗಾರಿಕೆ. ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ನಿಮ್ಮ ಮೆಚ್ಚಿನ ಗೀತೆಗಳು. ೧೦-೦ ಮುಕ್ತಾಯ.

ರಣಜಿತ್
20-10-50 ಶುಕ್ರವಾರದಿಂದ
ಕೆ. ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ: **ಮಧುಬಾಲ † ಮೋತಿಲಾಲ್**
ಮನೋರಮ† ಗೋಪ್

ಬೆಳಗಿನ ಪ್ರದರ್ಶನ
27-10-50 ರಿಂದ 3 ದಿನಗಳು ಮಾತ್ರ
ತಕದೀರ್
ಪಾತ್ರ: **ಮೋತಿಲಾಲ್-ಚಾರ್ಲಿ-ನರ್ಗೀಸ್.**

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

MYSORE CITY MUNICIPALITY

NOTICE

Sealed tenders will be received up to 4 P.M. on 30-10-50 by the Municipal Engineer for (1) giving underground pipe connection from rear bath room attached to Women's Hospital to main storm water drain in K.R. Vanam (2) Constructing slab box drain in continuation in Kantharaja Urs Road in K.G. Koppal, Chamaraja Mohalla, (3) Providing tonga stand at the junction of Prince of Wales Road and Kantharaja Urs Road, Chamaraja Mohalla.

Each tender must be accompanied with a challan for having remitted to Municipal Treasury the sum of Rs. 45/-, 330/- and Rs. 35/- respectively as earnest money for the above works. For full particulars please see the detailed notification on the office notice board.

(Sd) V.K. Mukundan.
Municipal Engineer.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೫—೧೦—೧೯೫೦ ನೇ ಬುಧವಾರ [ಸಂಚಿಕೆ ೫೪

ದಸರ ವಸ್ತುಪ್ರದರ್ಶನವನ್ನು ಇನ್ನು ಎರಡು ದಿನ ಮುಂದುವರಿಸಬೇಕು

ವಸ್ತುಪ್ರದರ್ಶನಗಾರರ ಸಭೆಯಲ್ಲಿ ನಿರ್ಣಯ

ಮೈಸೂರು ಅ. ೨೫

ಅಖಿಲಭಾರತ ವಸ್ತುಪ್ರದರ್ಶನಗಾರರ ಸಂಘದ ವಿಶೇಷ ಅಧಿವೇಶನವು ಇಂದು ಬೆಳಗ್ಗೆ ದಸರಾ ವಸ್ತುಪ್ರದರ್ಶನಾಲಯದಲ್ಲಿ ಶ್ರೀ ಯು ಎಲ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಸದಸ್ಯರುಗಳು ವಸ್ತುಪ್ರದರ್ಶನದಲ್ಲಿ ತಮಗಾಗುತ್ತಲಿರುವ, ತೊಂದರೆಗಳನ್ನು ತಿಳಿಸಿ ಅವುಗಳ ನಿವಾರಣೆಗೆ ತಕ್ಕ ಏರ್ಪಾಡುಗಳನ್ನು ಕೂಡಲೇ ವಸ್ತುಪ್ರದರ್ಶನದ ಅಧಿಕಾರಿಗಳು ಮಾಡಬೇಕೆಂದೂ ಮುಂದೆ ಈರೀತಿಯಾದ ತೊಂದರೆಗಳಾವುವೂ ಆಗದಂತೆ ವಸ್ತುಪ್ರದರ್ಶನಗಾರರ ಸಂಘದ ಸಂಪೂರ್ಣ ಸಹಕಾರವನ್ನು ಪಡೆದು ಅನೇಕ ಭಾಗಗಳಿಂದ ಬರುವ ಪ್ರದರ್ಶನಗಾರರಿಗೆ ಸೌಲಭ್ಯಗಳನ್ನುಂಟುಮಾಡಬೇಕೆಂದೂ, ಈಗ ಸೌಕರ್ಯಗಳು ಸ್ವಲ್ಪವೂ ಸಮರ್ಪಕವಾಗಿಲ್ಲವೆಂದು ಅಭಿಪ್ರಾಯಪಟ್ಟರು. ಅನಂತರ ಈ ಕೆಳಗೆ ಕಂಡ ವಿಷಯಗಳಲ್ಲಿ ದೀರ್ಘ ಚರ್ಚೆನಡೆದು, ನಿರ್ಣಯಗಳನ್ನು ಮಾಡಲಾಯಿತು.

೧. ಈಗಿನ ವಸ್ತುಪ್ರದರ್ಶನಾಧಿವೇಶನವನ್ನು ಮತ್ತೆರಡು ದಿನ ಮುಂದುವರಿಸಬೇಕು.

೨. ಸ್ಟಾಲುಗಳ ಬಾಡಿಗೆ ವಿಶೇಷವಾಗಿ ಏರಿಸಿರುವುದು ಪ್ರದರ್ಶನಗಾರರಿಗೆ ವಿಶೇಷ ತೊಂದರೆಯನ್ನುಂಟುಮಾಡಿರುವುದರಿಂದ ಹಿಂದೆ ಇದ್ದಂತೆಯೇ ಬಾಡಿಗೆ ಇರುವಂತೆ ಸಂಬಂಧಪಟ್ಟ ಸಮಿತಿಯವರು ಏರ್ಪಾಡು ಮಾಡುವುದು.

೩. ಜೀವಣ್ಣರಾಯನಕಟ್ಟೆಯಲ್ಲಿ ಪ್ರದರ್ಶನವನ್ನು ತಪ್ಪಿಸಿ ಎಲ್ಲವೂ ಒಂದೇ ಕಟ್ಟಡದಲ್ಲಿ ನಡೆಯುವಂತೆ, ಈಗಿನ ಕಟ್ಟಡದಲ್ಲಿ ತಕ್ಕ ಬದಲಾವಣೆಗಳನ್ನು ಮಾಡುವುದು.

೪. ವಸ್ತುಪ್ರದರ್ಶನ ಆವರಣದಲ್ಲಿ ಒಂದು ರೈಲ್ವೆ ಬುಕಿಂಗ್ ಆಫೀಸು ತೆರೆಯುವುದು.

೫. ಅರಮನೆ, ಅರಸು ಮಹಿಳೆಯರು ಮತ್ತು ಇತರ ಮಹಿಳೆಯರು ವಸ್ತು ಪ್ರದರ್ಶನವನ್ನು ನೋಡಲು ಬೇರೆಬೇರೆ ದಿನಗಳನ್ನು ಏರ್ಪಡಿಸದೆ, ಒಂದೇ ದಿನದಲ್ಲಿ ಇವರೆಲ್ಲರೂ ಪ್ರದರ್ಶನಕ್ಕೆ ಭೇಟಿಯೀಯುವಂತೇರ್ಪಡಿಸಿ ಈಗಿನ ಪದ್ಧತಿಯಿಂದ ಎರಡು ದಿನದ ವ್ಯರ್ಥ ಮತ್ತು ಜನರ ತೊಂದರೆಯನ್ನು ತಪ್ಪಿಸುವುದು.

೬. ವಸ್ತುಪ್ರದರ್ಶನಾಲಯವು ಖಾಯಂ ಆಗಿ ಪ್ರತಿವರ್ಷವೂ ನಡೆಯುತ್ತಲಿರುವುದರಿಂದ ಒಳಭಾಗದಲ್ಲಿರುವ ರಸ್ತೆಗಳಿಗೆಲ್ಲಾ ಸೀಮೆಂಟು ಕಾಂಕ್ರೀಟು ಹಾಕಿಸಿ, ಜನರ ಓಡಾಟದಿಂದೇಳುವ ಧೂಳು ಮುಂತಾದುವು ತಪ್ಪುವಂತೆ ಮಾಡುವುದು.

ಸ್ಟಾಲುಗಳನ್ನು ಹಂಚುವಾಗ ಅದರ ಉಪಸಮಿತಿಯಲ್ಲಿ ವಸ್ತು ಪ್ರದರ್ಶನಗಾರರ ಸಂಘದ ಇಬ್ಬರು ಪ್ರತಿ

ಗಳನ್ನು ಅಲಾಟ್‌ಮಾಡುವಾಗಲೇ ಸ್ಟಾಲುಗಳನ್ನಿಡುವವರಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುವುದು.

ಈ ವಿಷಯಗಳಲ್ಲದೆ ಇನ್ನೂ ಅನೇಕ ಸಲಹೆಗಳನ್ನು ಸದಸ್ಯರು ಯಿತ್ತರು. ಅವುಗಳನ್ನೆಲ್ಲಾ ಮ್ಯಾನೇಜಿಂಗ್ ಕಮಿಟಿಯವರು ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿ ತೀರ್ಮಾನವಾಯಿತು.

ಹೈದರಾಬಾದ್‌ನಲ್ಲಿ ಗೋಲೀಬಾರ್

ಸಿಂಧ್ ಪ್ರಾಂತ್ಯದ ಹೈದರಾಬಾದಿನಲ್ಲಿ ಮೊನ್ನೆ ರಾತ್ರಿ ಉದ್ರಿಕ್ತ ಜನರ ಗುಂಪೊಂದರ ಮೇಲೆ ಪೋಲೀಸರು ಗುಂಡು ಹಾರಿಸಿದ್ದರಿಂದ ೧೦ ಜನ ಮೃತರಾದರು. ೪೨ ಜನರು ಗಾಯಗೊಂಡರು.

ವಿಶ್ವವಿದ್ಯಾನಿಲಯ ಕೌನ್ಸಿಲ್‌ಗೆ ನಾಮಕರಣ

ಮೈಸೂರು ಸೆಂಟ್‌ಫಿಲೋಮಿನ ಕಾಲೇಜಿನ ಪ್ರಿನ್ಸಿಪಾಲರಾದ ರೆವೆರೆಂಡ್ ಫಾದರ್‌ವಾರ್ಕೆಯವರನ್ನು ವಿಶ್ವವಿದ್ಯಾನಿಲಯದ ಕೌನ್ಸಿಲ್ ಸದಸ್ಯರನ್ನಾಗಿ ನಾಮಕರಣ ಮಾಡಲಾಗಿದೆ. (ರಾಜೀನಾಮೆಯಿತ್ತ ರೆವೆರೆಂಡ್ ಫಾದರ್ ಟ್ರ್ಯಾಸ್‌ರವರ ಸ್ಥಾನದಲ್ಲಿ)

ಬಾಲಿಕೆಗೆ ಬರೆ

ಕಾಶಿಯಲ್ಲಿ ಅನಾಥಬಾಲಿಕೆಯೊಬ್ಬಳ ಸೋದರತ್ತೆ ಆ ಬಾಲಿಕೆಯು ಆಟದಲ್ಲಿ ಮಗ್ನಳಾಗಿದ್ದುದರಿಂದ ಅವಳು ಕಾಯುತಿದ್ದ ಎಮ್ಮೆಯು ದೊಡ್ಡಿ ಸೇರಿತೆಂಬ ಕಾರಣದ ಮೇಲೆ ಕೋಪಗೊಂಡು ಬರೆಗುಳವನ್ನು ಕಾಯಿಸಿ ೧೪ ಬರೆಗಳನ್ನು ಹಾಕಿದಳು. ಮಗುವಿನ ಕಿರುಚಾಟ ಕೇಳಿದ ನೆರೆಹೊರೆಯವರು ಬಂದು ಬಿಡಿಸಿ ಬಾಲಿಕೆಯನ್ನು ಆಸ್ಪತ್ರೆಗೆ ಸೇರಿಸಿದರು.

ಪಂ॥ ನೆಹರೂರವರನ್ನು ಅನುಕರಿಸಿ

ಭಾರತಕೇಂದ್ರ ಸಚಿವರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಮದರಾಸಿನ ವೈ.ಎಂ.ಸಿ.ಎ. ಬಾಯ್ಸ್ ಟೌನ್‌ನಲ್ಲಿ ಪ್ರಧಾನಿ ಪಂಡಿತ ನೆಹರೂರವರ ಭಾವಚಿತ್ರ ಅನಾವರಣಮಾಡುತ್ತಾ, ಪಂ॥ ನೆಹರೂರವರು ಬಹು ದಕ್ಷರಾದ ನಾಯಕರು ಅವರ ಸದ್ಗುಣಗಳನ್ನು ಬಾಲಕರು ಅನುಕರಿಸಬೇಕೆಂದು ಹಿತೋಪದೇಶ ಮಾಡಿದರು.

● ಪ್ರಧಾನಿ ನೆಹರೂರವರು ನವೆಂಬರ್ ೭ರಿಂದ ಪುಣೆಯ ಬಳಿ ಭಾರತ ಗ್ಲೈಡಿಂಗ್ ಸಂಸ್ಥೆಯ ಗ್ಲೈಡರ್ ರೂಮಿನ ಪ್ರಾರಂಭೋತ್ಸವವನ್ನು ನೆರವೇರಿಸುವರು.

● ನಿನ್ನೆ ಮದ್ರಾಸಿನಲ್ಲಿ ಬಾಯ್ಸ್‌ಟೌನಿನಲ್ಲಿ ರಾಜಾಜಿ ಭಾಷಣಮಾಡುತ್ತಿದ್ದಾಗ ಕಪ್ಪುಬಾವುಟ ಪ್ರದರ್ಶಿಸಲು ಯತ್ನಿಸಿದ ದ್ರಾವಿಡ ಫೆಡರೇಷನ್ನಿನ ೫೦ ಜನ ಸದಸ್ಯರನ್ನು ಬಂಧಿಸಲಾಗಿದೆ.

● ಕೈಗಾರಿಕೆ ಸಂಸ್ಥೆಗಳಲ್ಲಿ ರಿಟ್ರೆಂಚ್‌ಮೆಂಟನ್ನು ಹತೋಟಿಯಲ್ಲಿಡಲು ಕೇಂದ್ರ ಸರ್ಕಾರ ಶಾಸನ ಜಾರಿಗೆ ತರುವ ವಿಷಯವನ್ನು ಪರಿಶೀಲಿಸುತ್ತಿದೆಯೆಂದು ತಿಳಿದು

ಅಮಾನುಷ ಕೊಲೆ

ಈ ತಾಲ್ಲೋಕು ನಂದೀಹಳ್ಳಿ ವಾಸಿ ಹಾಲುಮತದ ರಂಗಪ್ಪನ ಹೆಂಡತಿ ಸುಮಾರು ೨೮ ವರ್ಷದ ರಂಗಮ್ಮ ಎಂಬುವಳು ಚಿಕ್ಕನಾಯ್ಕನ ಹಳ್ಳಿಯಿಂದ ಊರಿಗೆ ಹೋಗುತ್ತಿದ್ದಾಗ ೧೪-೧೦-೫೦ನೇ ಶನಿವಾರ ಅಲ್ಲೇ ಸಮೀಪದ ಕಾಡಿನಲ್ಲಿ ಕೊಲೆಯಾಗಿದ್ದಾಳೆಂದು ತಿಳಿದುಬರುತ್ತೆ. ಮತ್ತು ಈ ಬಗ್ಗೆ ತಾಲ್ಲೋಕು, ಪೋಲೀಸ್ ಖಾತೆಯವರು ೧೬-೧೦-೫೦ನೇ ಸೋಮವಾರ ಸ್ಥಳ ಪರಿಶೀಲಿಸಬಾಗಿ ನಾಯಿಗಳು ಶವವನ್ನು ತಿಂದು ಮಿಕ್ಕ ಮೂಳೆ ಸೀರೆಬಟ್ಟೆ ಸಿಕ್ಕಿದವೆಂದೂ ಮುಂದಿನ ತನಿಖೆಕ್ರಮವನ್ನು ಜರುಗಿಸುತ್ತಿದ್ದಾರೆಂದೂ ತಿಳಿದು ಬಂದಿದೆ. ಗುಮಾನಿಯ ಮೇಲೆ ಇಬ್ಬರನ್ನು ದಸ್ತಗಿರಿ ಮಾಡಿರುವುದಾಗಿ ತಿಳಿದುಬರುತ್ತೆ. ನಿಷ್ಪಕ್ಷಪಾತ ವಿಚಾರಣೆ ನಡೆಯಲೆಂದು ಜನತೆ ನಿರೀಕ್ಷಿಸುತ್ತಿದ್ದಾರೆ.

ಬೆಂಕಿ ಅನಾಹುತ

ಜಾವಗಲ್ ಗ್ರಾಮಕ್ಕೆ ೫ ಮೈಲಿ ಫಾಸಲೆ ಇರುವ ಬಿದರೆ ಎಂಬ ಗ್ರಾಮದಲ್ಲಿ ೨೨-೧೦-೫೦ ನೇ ಶನಿವಾರ ಮಧ್ಯಾಹ್ನ ಅಕಸ್ಮಾತ್ ಎರಡು ಮನೆಗೆ ಬೆಂಕಿಬಿದ್ದು ಭಸ್ಮವಾಗಿಹೋದುವು. ಇದರಲ್ಲಿ ಆಹಾರ ಸಾಮಗ್ರಿಗಳು ಮತ್ತು ಇತರ ಸಾಮಾನುಗಳು ಲುಕ್ಸಾನಾಗಿರುತ್ತೆ. ಇವರಿಗೆ ಜೀವನೋಪಾಯಕ್ಕೆ ಬಹಳ ತೊಂದರೆಯಾಗಿದೆ.

● ಪಾಕ್‌ಪ್ರಧಾನಿ ಲಿಯಾಖತ್ ಅಲ್ಲಿಯವರು ನಿನ್ನೆ ಲಾಹೋರಿನಲ್ಲಿ ಮಾತನಾಡುತ್ತಾ ಪಾಕಿಸ್ತಾನ ಮುಸ್ಲಿಂ ಲೀಗಿನ ಶಿಶು; ಆದ್ದರಿಂದ ಅದು ಪ್ರವರ್ಧಮಾನಕ್ಕೆ ಬರುವವರೆಗೆ ಲೀಗೇ ಅದನ್ನು ನೋಡಿಕೊಳ್ಳಬೇಕು, ಎಂದು ತಿಳಿಸಿದರು. ಲೀಗೇ ಪಾಕಿಸ್ಥಾನ ಎಂಬ ಅರ್ಥವನ್ನು ಅವರು ಪ್ರತಿಪಾದಿಸಿದರು.

● ನಾಸಿಕ್ ಜೈಲಿನಲ್ಲಿ ಸಾರ್ವಜನಿಕ ರಕ್ಷಣಾ ಶಾಸನರೀತ್ಯಾ ಬಂಧಿತರಾಗಿದ್ದ ಕಮ್ಯೂನಿಸ್ಟ್ ಪಂಡಿ ಪಿ. ಜೆ. ನಾಯಕಾರವನ್ನು ಬಿಡುಗಡೆ ಮಾಡಬೇಕೆಂದು ಮುಂಬಯಿ ಹೈಕೋರ್ಟ್ ಆಜ್ಞೆ ಮಾಡಿದೆ.

ಶ್ರೀ ರಾಜಾಜಿ ಮದರಾಸಿಗೆ

ಕೇಂದ್ರ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ನಿನ್ನೆ ಬೆಳಗ್ಗೆ ವಿಮಾನದಲ್ಲಿ ಮದರಾಸಿಗೆ ತೆರಳಿದರು.

ಅಕೆಡೆಮಿಕ್ ಕೌನ್ಸಿಲ್ ಸಭೆ

ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ ಸಭೆಯು ಇದೇ ೨೬ನೇ ತಾ. ಮಧ್ಯಾಹ್ನ ೧೨ ಗಂಟೆಗೆ ಮೈಸೂರಿನಲ್ಲಿ ಸೇರುವುದು.

ದಸರಾ ವಸ್ತುಪ್ರದರ್ಶನ ಮುಕ್ತಾಯ

ದಸರಾ ವಸ್ತುಪ್ರದರ್ಶನವು ೨೬ನೇ ತಾ. ಮುಕ್ತಾಯವಾಗುವಾಗ ಬಹುಮಾನವಿನಿಯೋಗವನ್ನು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಮಾಡುವರು.

ಅಪಘಾತ

ನಿನ್ನೆಯ ದಿನ ಸಾಯಂಕಾಲ ನಗರದ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಸಂಜೆ ಸುಮಾರು ೫-೩೦ ಗಂಟೆಗೆ ಒಬ್ಬ ಹೆಂಗಸಿನ ಮೇಲೆ ಕಾರು ಹರಿದು ಆಕೆಯ ಸ್ಥಿತಿ ಚಿಂತಾಜನಕವಾಗಿ ಆಕೆಯನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದು ತಿಳಿದುಬರುತ್ತದೆ.

೬೦ ಲಕ್ಷ ರೂ. ಗಳ ಪರಿಹಾರ

ಭಾರತ ಸರ್ಕಾರದವರು ಪ್ರವಾಹಗಳಿಂದ ತೊಂದರೆಗೀಡಾದವರ ಪರಿಹಾರಕ್ಕಾಗಿ ಪಂಜಾಬ್, ಪಾಟಿಯಾಲಗಳಿಗೆ ಒಟ್ಟು ೬೦ ಲಕ್ಷ ರೂ. ಗಳನ್ನು ಮಂಜೂರು ಮಾಡಿದ್ದಾರೆ.

ವ್ಯಾಪಾರಿ ತೆರಿಗೆ ವಜಾ

ಪತ್ರಿಕೆಗಳ ಮೇಲೆ ವ್ಯಾಪಾರತೆರಿಗೆಯನ್ನು ವಜಾ ಮಾಡಲು, ಮದರಾಸ್ ವ್ಯಾಪಾರತೆರಿಗೆ ಕಾನೂನನ್ನು ತಿದ್ದುಪಡಿಮಾಡಲು ಮಸೂದೆಯೊಂದನ್ನು ನವೆಂಬರಿನಲ್ಲಿ ಮದರಾಸ್ ಅಸೆಂಬ್ಲಿಯ ಮುಂದೆ ಸರ್ಕಾರವು ತರಲಿದೆ.

ಕನ್ನಡಸಾಹಿತ್ಯ ಸಮ್ಮೇಳನ

೩೮ನೇ ಕನ್ನಡ ಸಾಹಿತ್ಯ ಸಮ್ಮೇಳನವು ಇದೇ ಡಿಸೆಂಬರ್ ೨೪-೨೫-೨೬ರಲ್ಲಿ ಬೊಂಬಾಯಿಯಲ್ಲಿ ಜರುಗುವುದು. ಇದಕ್ಕಾಗಿ ಈಗಾಗಲೇ ೨೫ ಸಾವಿರ ರೂ. ಸಂಗ್ರಹವಾಗಿದೆ. ಸ್ವಾಗತಸಮಿತಿಯೊಂದು ಶ್ರೀ ಕೆ. ಹೆಚ್. ಕಬ್ಬೂರವರ ಅಧ್ಯಕ್ಷತೆಯಲ್ಲಿ ರಚನೆಯಾಗಿದೆ.

ಪೋಲೀಸು ಅಧಿಕಾರಿಗಳ ವರ್ಗ

ಡಿ. ಎಸ್. ಪಿ. ಗಳಾದ ಶ್ರೀ ಇ. ವಿ. ಪಟ್ಟಾಭಿರಾಮಯ್ಯನವರನ್ನು ಶಿವಮೊಗ್ಗಾ ಜಿಲ್ಲೆಗೆ, ಶ್ರೀ ಆಲ್ಬರ್ಟ್ ಮನೋರಾಜ್‌ರವರನ್ನು ಚಿಕ್ಕಮಗಳೂರಿಗೆ ವರ್ಗಾಯಿಸಲಾದೆ. ಶ್ರೀ ಆಂಡರ್ಸನ್‌ರವರನ್ನು ಚಿಕ್ಕಮಗಳೂರಿಗೆ ವರ್ಗಾಯಿಸಿರುವುದನ್ನು ರದ್ದುಗೊಳಿಸಲಾಗಿದೆ.

ಸನ್ಮಾನ

ದಸರಾ ವಸ್ತುಪ್ರದರ್ಶನದಲ್ಲಿ ನಗರದ ಗರಡಿಯವರೆಲ್ಲಾ ಸೇರಿ ೧೦-೧೨ ದಿನಗಳಿಂದ ಅನೇಕ ಕುಸ್ತಿಗಳನ್ನು ಮಾಡಿಸಿ, ಅದರ ಮೇಲ್ವಿಚಾರಣೆ ನೋಡಿಕೊಂಡುದು ದಕ್ಷ ಮತ್ತು ನಿಷ್ಪಕ್ಷಪಾತವಾಗಿ ನ್ಯಾಯವನ್ನು ದೊರಕಿಸಿ ಕೀರ್ತಿಯನ್ನಿತ್ತ ಹಾಜಿ ಅಮೀರುದ್ದೀನ್ ಖುರೈಷಿಯವರಿಗೆ ಗರಡಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಚಿನ್ನದ ಪದಕವನ್ನು ಕೊಡಲಾಯಿತು.

ರಷ್ಯಾದ ಅಟಾಮಿಕ್ ಸಂಶೋಧನೆ

ರಷ್ಯಾದ ಅಟಾಮಿಕ್ ಹತೋಟಿ ಯೋಜನೆಯನ್ನು ಅಂಗೀಕರಿಸುವುದೇ ಆದಲ್ಲಿ ರಷ್ಯಾದಲ್ಲಿ ಅಟಾಮಿಕ್ ಸಂಶೋಧನೆಯ ಬಗ್ಗೆ ಇರುವ ರಹಸ್ಯವನ್ನೆಲ್ಲಾ ತೆಗೆಯಲಾಗುವುದು. ಯಾರುಬೇಕಾದರೂ ಬಂದು ಪರೀಕ್ಷಿಸಲು ಅವಕಾಶಕೊಡಲಾಗುವುದೆಂದು ರಷ್ಯಾದ ವಿದೇಶಾಂಗ ಮಂತ್ರಿ ಎಂ. ಆಂಡ್ರೆ ವಿಷನ್ಸ್ಕಿಯವರು ಪ್ರಪಂಚಸಂಸ್ಥೆ ರಾಜಕೀಯ ಸಮಿತಿಯಲ್ಲಿ ಘೋಷಿಸಿರುವರು.

ಸೈನ್ಯ ಪ್ರಯೋಗಿಸಬೇಕು

ಪ್ರಪಂಚ ಶಾಂತಿಯ ಸುರಕ್ಷತೆಗೆ ಪ್ರಪಂಚ ಸಂಸ್ಥೆಯು ಸಂಧಾನಯುಕ್ತ ಮತ್ತು ಸೈನ್ಯ ಪ್ರಯೋಗ ಎರಡನ್ನೂ ನಡೆಸಬೇಕು. ಆಕ್ರಮಣ ತಡೆಗಟ್ಟಬೇಕು ಮತ್ತು ಇನ್ನೊಂದು ಅಂತರ ರಾಷ್ಟ್ರೀಯ ಯುದ್ಧವಾಗದಂತೆ ತಡೆಗಟ್ಟಬೇಕು ಎಂದು ಅಧ್ಯಕ್ಷ ಟ್ರೂಮನ್ನರು ಪ್ರಪಂಚ ಸಂಸ್ಥೆ ಜನರಲ್ ಅಸೆಂಬ್ಲಿಯಲ್ಲಿ ಭಾಷಣ ಮಾಡುತ್ತ ಹೇಳಿರುವರು.

ಮಂತ್ರಿಮಂಡಲ

ಬೆಂಗಳೂರು ಅಠಾರಾ ಕಚೇರಿಯಲ್ಲಿ ಇಂದು ಮೈಸೂರು ಮಂತ್ರಿಮಂಡಲ ಸಭೆ ಸೇರುವುದು.

ಕಾಳಸಂತೆಕೋರರ ಬಂಧನ

ಮಂಡ್ಯದಲ್ಲಿ ನಾಲ್ವರು ಕಾಳಸಂತೆಕೋರರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಲಾಗಿದೆಯೆಂದೂ ಅವರಮೇಲೆ ಕಾರ್ಯಕ್ರಮ ಕೈಗೊಳ್ಳುವ ತೀರ್ಮಾನಕ್ಕೆ ಬರುವತನಕ ಅವರ ಹೆಸರು ಮತ್ತು ಅವರ ಕೃತ್ಯವಾವುದೆಂಬುದನ್ನು ಸರ್ಕಾರ ಹೊರಗೆಡುಹಲು ತಯಾರಾಗಿಲ್ಲವೆಂದೂ ತಿಳಿದುಬರುತ್ತದೆ.

ಸಿಮೆಂಟು ಕಂಟ್ರೋಲ್ ರಿಯಾಯಿತಿ

ಮೈಸೂರು, ಬೆಂಗಳೂರುಗಳಲ್ಲಿ ಸಿಮೆಂಟು ದಾಸ್ತಾನು ಹೆಚ್ಚಾಗಿರುವುದರಿಂದ ಈ ಊರುಗಳಲ್ಲಿ ಒಂದು ಮಾಹೆಗೆ ೧ ಟನ್ ಸಿಮೆಂಟಿನವರಿಗೆ ಯಾರು ಬೇಕಾದರೂ ಸಿಮೆಂಟು ವ್ಯಾಪಾರಗಾರರಿಂದ ಪರ್ಮಿಟ್ಟಿಲ್ಲದೆ ಪಡೆಯಬಹುದೆಂದು ಸಿವಿಲ್ ಸಪ್ಲೈ ಕಂಟ್ರೋಲರು ಒಂದು ಪತ್ರಿಕಾಪ್ರಕಟಣೆ ಹೊರಡಿಸಿರುವರು. ಈ ರಿಯಾಯಿತಿಯು ಎಂದು ತಿಂಗಳುಕಾಲ ಜಾರಿಯಲ್ಲಿರುವುದು. ಒಂದು ಟನ್ನಿಗಿಂತ ಹೆಚ್ಚಿಗೆ ಸಿಮೆಂಟು ಬೇಕಾದ್ದಲ್ಲಿ [illegible] ಅನುಸರಿಸಬೇಕಾಗಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಅಕ್ಟೋಬರ್ ೨೬ ಗುರುವಾರ

ಬೆಳಗ್ಗೆ ೬-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೬-೨೦ ನಾಗಸ್ವರ (ಹನುಮಂತಪ್ಪ). ೭-೪೫ ಕನ್ನಡದಲ್ಲಿ ಸುದ್ದಿ. ೮-೦ ಇಂಗ್ಲೀಷಿನಲ್ಲಿ ಸುದ್ದಿ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ಸುದ್ದಿ. ೧-೪೦ ಓಟೇಲು ೧-೪೫ ಹಿಂದೀ ಶಿಕ್ಷಣ. ೨-೦ ತಾರಾವಾಹಿನಿ (ರಿ). ೨-೩೦ ಮುಕ್ತಾಯ.

ಸಂಜೆ ೫-೩೦ ನಾಗಸ್ವರ (ಹನುಮಂತಪ್ಪ). ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ (ರಿ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ರಸನಿಮಿಷ (ರಿ) ೭-೧೫ ಹಾಡುಗಾರಿಕೆ (ಆರ್. ಪದ್ಮ). ೭-೪೫ ಕನ್ನಡದಲ್ಲಿ ಸುದ್ದಿ. ೮-೦ ವಚನಗಾನ (ಮಲ್ಲಿಕಾರ್ಜುನಪ್ಪ) ೮-೧೫ ಇಂಗ್ಲೀಷಿನಲ್ಲಿ ಭಾಷಣ: ಉಡ್ ಪ್ರಾಡಕ್ಟ್ಸ್. ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಇಂಗ್ಲೀಷಿನಲ್ಲಿ ಅಂತರಕಾಲೇಜು ಚರ್ಚಾಸ್ಪರ್ಧೆ. ೧೧-೦ ಮುಕ್ತಾಯ.

● ರಾಜಧಾನಿಯಲ್ಲಿ ರಾಜಪ್ರಮುಖರ ಕುಮಾರ್ತಿಯವರಾದ ರಾಜಕುಮಾರಿ ಶ್ರೀ ಗಾಯಿತ್ರಿದೇವಿಯವರ ೫ ನೇ ವರ್ಷದ ವರ್ಧಂತಿ ಮಹೋತ್ಸವವು ಅರಮನೆಯಲ್ಲಿ ವೈಭವದಿಂದ ನಡೆಯಿತು.

● ಘಜ್ನಿ ಮಹಮ್ಮದನು ದಂಡೆತ್ತಿ ಹಾಳುಮಾಡಿದ ಸೋಮೇಶ್ವರ ದೇವಸ್ಥಾನದಲ್ಲಿ ಬರುವ ಶಿವರಾತ್ರಿ ದಿವಸ ಸೋಮೇಶ್ವರಲಿಂಗ ಪ್ರತಿಷ್ಠಾಪನೆಯನ್ನು ಸರ್ದಾರ್ ಪಟೇಲರು ನಡೆಸುತ್ತಾರೆ.

ರಣಜಿತ್
20-10-50 ಶುಕ್ರವಾರದಿಂದ
ಕೆ. ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ: ಮಧುಬಾಲ * ಮೋತಿಲಾಲ್
ಮನೋರಮ * ಗೋಪ್

ಬೆಳಗಿನ ಪ್ರದರ್ಶನ
27-10-50 ರಿಂದ 3 ದಿನಗಳು ಮಾತ್ರ
ತಕದೀರ್
ಪಾತ್ರ: ಮೋತಿಲಾಲ್ - ಚಾರ್ಲಿ - ನರ್ಗಿಸ್.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೬—೧೦—೧೯೫೦ ನೇ ಗುರುವಾರ [ಸಂಚಿಕೆ ೫೫

ಸಾರ್ವತ್ರಿಕ ಚುನಾವಣೆಗೆ ಸರ್ಕಾರದ ಪ್ರವೇಶಕೂಡದು

ಶ್ರೀ ಜಯಪ್ರಕಾಶ್

ಸಾರ್ವತ್ರಿಕ ಚುನಾವಣೆಗಳ ಏರ್ಪಾಟಿಗಾಗಿ ಸರ್ಕಾರದ ಕೈವಾಡಕ್ಕೆ ಆವಕಾಶವಿರದಂತಹ ಸ್ವತಂತ್ರ ವ್ಯವಸ್ಥೆಯೊಂದನ್ನು ರಾಜ್ಯಾಂಗದ ರೀತ್ಯ ಮಾಡಬೇಕೆಂಬುದಾಗಿ ಶ್ರೀ ಜಯಪ್ರಕಾಶ್ ನಾರಾಯಣರು ಪತ್ರಿಕಾಗೋಷ್ಠಿಯಲ್ಲಿ ನುಡಿದರು. "ಚುನಾವಣೆಗಳಿಗೆ ಅವಧಿ ಕೇವಲ ೫|| ತಿಂಗಳ ಮಾತ್ರವಿದೆ. ಮುಖ್ಯ ಚುನಾವಣಾಧಿಕಾರಿಗಳೇ ಪರಿಣಾಮಕಾರಿಯಾದಂತಹ ಸ್ವತಂತ್ರ ವ್ಯವಸ್ಥೆಯಾಗಲಾರರು" ಎಂದರು.

ಡಿಲಿಮಿಟೇಷನ್ ಬಗ್ಗೆ ಸಲಹಾ ಸಮಿತಿ

ಎಂ ಪಿ ಸಿ ಸಿ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ನಿನ್ನೆ ಸಂಜೆ ರೆಸಿಡೆನ್ಸಿಯಲ್ಲಿ ಪತ್ರಿಕಾಗೋಷ್ಠಿಯೊಂದನ್ನು ಕರೆದು ಚುನಾವಣಾಕ್ಷೇತ್ರ ನಿರ್ದೇಶನ (ಡಿಲಿಮಿಟೇಷನ್)ದ ಬಗ್ಗೆ ಪ್ರಸ್ತಾಪಿಸಿ ವಿವರಣೆಯಿತ್ತರು ಈ ಸಂಬಂಧದಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿ ನೇಮಿಸಿದ್ದ ಉಪಸಮಿತಿಯ ವರದಿ ಸರ್ಕಾರಕ್ಕೆ ತಲುಪಿ ಅದರ ಮೂಲಕ ತಮಗೇ (ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ರಾಷ್ಟ್ರಾಧ್ಯಕ್ಷರಿಂದ ನೇಮಿತವಾಗಿರುವ ಡಿಲಿಮಿಟೇಷನ್ ಸಲಹಾ ಸಮಿತಿಗೆ) ಬಂದಿದೆಯೆಂದೂ ಸಲಹಾ ಸಮಿತಿ ಅದನ್ನು ಪರಿಶೀಲಿಸಬೇಕೆಂದೂ ಅವರು ತಿಳಿಸಿದರು. ಡಿಲಿಮಿಟೇಷನ್ ಸಲಹಾ ಸಮಿತಿಯು ಅಕ್ಟೋಬರ್ ೩೧ ರಿಂದ ನವೆಂಬರ್ ೪ನೇ ತಾ ವರೆಗೆ ಸಂಸ್ಥಾನದ ಎಲ್ಲಾ ಜಿಲ್ಲೆಗಳಿಂದ ಸರ್ವ ಪಕ್ಷಗಳ ಪ್ರತಿನಿಧಿಗಳಿಂದ ಡಿಲಿಮಿಟೇಷನ್ ಬಗ್ಗೆ ಅವರ ಅಭಿಪ್ರಾಯವನ್ನರಿಯಲಿದೆಯೆಂದೂ ಅವರು ಹೇಳಿದರು. ಸಲಹಾ ಸಮಿತಿ ಈ ಹಿಂದೆ ಈ ಬಗ್ಗೆ ಸಂಸ್ಥಾನಾದ್ಯಂತ ಪ್ರವಾಸ ಮಾಡಬೇಕೆಂದಿದ್ದ ಕಾರ್ಯಕ್ರಮವನ್ನು ಈಗ ರದ್ದುಗೊಳಿಸಲಾಗಿದೆ ಎಂದು, ಬೆಂಗಳೂರಿನಲ್ಲೇ ವಿವಿಧ ಜಿಲ್ಲೆಗಳ ಪ್ರತಿನಿಧಿಗಳ ಅಭಿಪ್ರಾಯವನ್ನು ಅರಿಯಲಾಗುವುದೆಂದೂ ಅವರು ತಿಳಿಸಿದರು. ಲೆಜಿಸ್ಲೆಟಿವ್ ಅಸೆಂಬ್ಲಿ ಉಪಸಮಿತಿವರದಿಯನ್ನು ಪರಿಶೀಲಿಸಿ ಸಲಹಾ ಸಮಿತಿಯ ಅಂತಿಮ ವರದಿಯನ್ನು ಸಿದ್ಧಪಡಿಸಿ ಭಾರತ ಪಾರ್ಲಿಮೆಂಟಿನ ಮುಂದಿನ ಅಧಿವೇಶನ ಸೇರುವ ಮೊದಲೇ ಮುಖ್ಯ ಚುನಾವಣಾ ಕಮೀಷನರಿಗೆ ಅದನ್ನು ಕಳುಹಿಸಲಿರುವುದಾಗಿ ಶ್ರೀ ಹನುಮಂತಯ್ಯನವರು ಹೇಳಿದರು.

ಡಿಲಿಮಿಟೇಷನ್ ಸಲಹಾ ಸಮಿತಿ ಕೆಳಗೆ ಕಂಡ ತಾರೀಖುಗಳಲ್ಲಿ ವಿವಿಧ ಜಿಲ್ಲೆಗಳ ಪ್ರತಿನಿಧಿಗಳ ಅಭಿಪ್ರಾಯವನ್ನು ಸ್ವೀಕರಿಸುವುದು. ಅಕ್ಟೋಬರ್ ೩೧ ಬೆಳಗ್ಗೆ ೯-೧೨, ಬೆಂಗಳೂರು ನಗರ, ಮಧ್ಯಾಹ್ನ ೨-೫ ಬೆಂಗಳೂರು ಜಿಲ್ಲೆ. ನವಂಬರ್ ೧ ಬೆಳಗ್ಗೆ ೯-೧೨, ಕೋಲಾರ ಜಿಲ್ಲೆ, ಮಧ್ಯಾಹ್ನ ೨-೫. ತುಮಕೂರು ಜಿಲ್ಲೆ ನ. ೨ ಬೆಳಗ್ಗೆ ೯-೧೨, ಮಂಡ್ಯ ಜಿಲ್ಲೆ, ಮಧ್ಯಾಹ್ನ ೨-೫, ಮೈಸೂರು ಜಿಲ್ಲೆ. ನ. ೩, ಬೆಳಗ್ಗೆ ೯-೧೨ ಹಾಸನ ಜಿಲ್ಲೆ, ಮಧ್ಯಾಹ್ನ ೨-೫, ಚಿಕ್ಕಮಗಳೂರು ಜಿಲ್ಲೆ, ನ. ೪, ಬೆಳಗ್ಗೆ ೯-೧೨, ಚಿತ್ರದುರ್ಗ ಮಧ್ಯಾಹ್ನ ೨-೫ ಶಿವಮೊಗ್ಗ ಜಿಲ್ಲೆ

● ಬೊಂಬಾಯಿನಲ್ಲಿ ಇದೇ ಮಾಹೆ ಅಂತ್ಯದಲ್ಲಿ ಅಖಿಲಭಾರತ ಶಾಂತಿ ಕನ್ವೆನ್ಷನ್‌ಗೆ ಮೈಸೂರಿನ ಸುಪ್ರಸಿದ್ಧ ಬರೆಹಗಾರರೂ ಮತ್ತು ಸಾಹಿತಿಗಳಾದ ಶ್ರೀ ತಾ. ರಾ. ಸುಬ್ಬರಾಯರು ನಿನ್ನೆ ಮಧ್ಯಾಹ್ನ ಪ್ರಯಾಣ ಬೆಳೆಸಿದರೆಂದು ತಿಳಿಯಬರುತ್ತದೆ.

ಮೈಸೂರು ದಸರಾ ವಸ್ತು ಪ್ರದರ್ಶನಾಧಿಕಾರಿಗಳು ಇದನ್ನು ಗಮನಿಸುವರೇ ?

ಈಗಾಗಲೇ ವಸ್ತುಪ್ರದರ್ಶನವು ಮುಗಿಯುತ್ತ ಬರುತ್ತಲಿದೆ ಪ್ರದರ್ಶನವು ಮುಗಿದೊಡನೆಯೇ ಪ್ರದರ್ಶನಗಾರರೆಲ್ಲರೂ ಬಹಳ ಜಾಗ್ರತೆಯಾಗಿ ಪ್ರದರ್ಶನಾಲಯದಿಂದ ಹೊರಡಲು ಇಚ್ಛಿಸುವರು ಆದಕ್ಕೆ ವಸ್ತು ಪ್ರದರ್ಶನಾಧಿಕಾರಿಗಳು ತಕ್ಕ ಏರ್ಪಾಡುಮಾಡಬೇಕಾಗಿರುತ್ತದೆ ಪ್ರದರ್ಶನಗಾರರಿಗೆ ವಸ್ತು ಪ್ರದರ್ಶನಾಧಿಕಾರಿಗಳು ಸಾಮಾನುಗಳನ್ನು ಹೊರಕ್ಕೆ ತೆಗೆದುಕೊಂಡು ಹೋಗಲು ರಹದಾರಿಯನ್ನು ಕೊಟ್ಟ ಹೊರತು ಹೊರಗೆ ತೆಗೆದುಕೊಂಡು ಹೋಗಲಾಗುವುದಿಲ್ಲ. ಕೂಡಲೇ ಪ್ರದರ್ಶನದ ಕಛೇರಿಯಿಂದ ಸ್ಟಾಲುಗಳ ಬಳಿಗೆ ತಮ್ಮ ಸಿಬ್ಬಂದಿಯವರನ್ನು ಕಳುಹಿಸಿ, ಪ್ರದರ್ಶನಕಾರರಿಂದ ಯಾವ ಬಾಬಿನಲ್ಲಿ ಹಣವು ಬರಬೇಕಾಗಿದೆಯೋ ಅವುಗಳನ್ನು ವಸೂಲ್ಮಾಡಿಕೊಂಡು ಅವರಿಗೆ ರಹದಾರಿಯನ್ನು ಒಂದು ದಿನ ಮುಂಚಿತವಾಗಿಯೇ ಕೊಡುವ ಏರ್ಪಾಡನ್ನು ಮಾಡಿದರೆ ಪ್ರದರ್ಶನಗಾರರೆಲ್ಲರೂ ಕಛೇರಿಯ ಬಾಗಿಲು ಕಾಯುತ್ತಾ ಮಾಮೂಲಿನಂತೆ ಗಂಟೆಕಟ್ಟಲೆ ನಿಲ್ಲುವುದು ತಪ್ಪುವುದು ಆಫೀಸಿನ ಬಳಿ ಬರುವುದನ್ನು ತಪ್ಪಿಸಿ ಸ್ಟಾಲುಗಳಲ್ಲಿಯೇ ಬಾಕಿ ಹಣವನ್ನು ವಸೂಲ್ಮಾಡಿ ಪ್ರದರ್ಶನಗಾರರು ಯಾವ ತೊಂದರೆಯು ಇಲ್ಲದೆ ಪ್ರದರ್ಶನಾಲಯದಿಂದ ಹೊರಹೊರಡಲು ಇನ್ನು ಯಾವ ಯಾವ ವ್ಯವಸ್ಥೆಯನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಯಿಸಬೇಕೊ ಅದಕ್ಕಾಗಿ ಈಗಿನಿಂದಲೂ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಿ

ಪೌರಸಭೆಯ ಅಕ್ಸಾಯಿ. ಇಲಾಖೆಯವರೂ ಸಹ ತಮಗೆ ಬರಬೇಕಾದ ಅಕ್ಸಾಯಿ ಹಣವನ್ನು ಈಗಿನಿಂದಲೂ ವಸೂಲ್ಮಾಡುತ್ತ ಬಂದು ಪ್ರದರ್ಶನಗಾರರಿಗೆ ಅವರು ಹೊರಡುವ ಸಮಯದಲ್ಲಿ ಯಾವ ತೊಂದರೆಯು ಆಗದಂತೆ ಅವರು ನೋಡಿಕೊಳ್ಳಲಿ.

ನಿರಾಶ್ರಿತರ ಪುನರ್ವ್ಯವಸ್ಥೆಗೆ ೧೦೦ ಕೋಟಿ ರೂ. ಅಗತ್ಯ

ನಿರಾಶ್ರಿತರ ಪುನರ್ವ್ಯವಸ್ಥೆಗೆ ತುರ್ತಾಗಿ ಸಹಾಯ ಮಾಡಲು ಭಾರತ ಸರ್ಕಾರ ಕನಿಷ್ಟಪಕ್ಷ ೧೦೦ ಕೋಟಿ ರೂ. ಗಳನ್ನೊದಗಿಸಬೇಕೆಂದು ಭಾರತನಿರಾಶ್ರಿತ ಸಂಸ್ಥೆ ಅಧ್ಯಕ್ಷರಾದ ಡಾ|| ಚೊಯಿತ್‌ರಾಮ್ ಗಿದ್ವಾನಿಯವರು ನಿನ್ನೆ ತಿಳಿಸಿದರು.

ನಿರಾಶ್ರಿತರ ಸಮಸ್ಯೆ ಇದೀಗ ಅತಿಕ್ಲಿಷ್ಟವಾಗುತ್ತಿದೆ ಕೂಡಲೆ ಅದನ್ನು ಪರಿಹರಿಸಲು ಮುಖ್ಯ ಪರಿಹಾರ ಮಾರ್ಗ ಕೈಗೊಳ್ಳದಿದ್ದರೆ ಅದು ಅಪಾಯಕಾರಿಯಾಗುವುದೆಂದೂ ಅವರು ಹೇಳಿದರು.

ಕೇಂಬ್ರಿಡ್ಜ್ ವಿಶ್ವವಿದ್ಯಾಲಯ ಸ್ಥಾನಪತಿ ಪದವಿಗೆ ಸ್ಪರ್ಧೆ ?

ನೆಹರೂ ಅನುಮತಿ ಇತ್ತರೆ ಮುಂದಿನ ಶನಿವಾರ ಪಂಡಿತ ನೆಹರೂರವರ ಹೆಸರನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಸ್ಥಾನಪತಿ ಪದವಿಗೆ ಸೂಚಿಸಲಾಗುವುದು.

ಲಾರ್ಡ್ ಟೆಡ್ಡರ್‌ರವರ ಹೆಸರನ್ನೂ ಸೂಚಿಸಲಾಗುವುದು.

ಪಂಡಿತ ನೆಹರೂರವರು ಒಪ್ಪಿಗೆ ಇತ್ತು, ಲಾರ್ಡ್ ಟೆಡ್ಡರರ ಹೆಸರೂ ಸೂಚಿತವಾದರೆ, ೧೮೪೭ ರಿಂದ ಮೊದಲನೆಬಾರಿ ಸ್ಥಾನಪತಿ ಸ್ಥಾನಕ್ಕೆ ಸ್ಪರ್ಧೆ ಸಂಭವಿಸುವುದು.

೧೮೪೭ ರಲ್ಲಿ ವಿಕ್ಟೋರಿಯಾ ರಾಣಿಯ ಪತಿ ಪ್ರಿನ್ಸ್ ಕಾನ್ಸಾರ್ಟ್ ಸ್ಥಾನಕ್ಕೆ ಆಯ್ಕೆಯಾದರು. ಪರಾಜಿತರಾದ ಹೆಸರು, ಲಾಡ್ ಪೊವಿಸ್

ಭಾರತಕ್ಕೆ ಅಮೆರಿಕದ ಆರ್ಥಿಕ ಸಹಾಯ

ಭಾರತದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಅಮೇರಿಕ ರಾಯಭಾರಿ ಲಾಯ್ ಹೆಂಡರ್ಸನ್ ಇಂದು ಭರವಸೆಯಿತ್ತರು.

ದೇಶದಲ್ಲಿ ಕೈಗಾರಿಕೆಗಳ ಪ್ರಗತಿಗೆ ಅಮೆರಿಕದ ಆರ್ಥಿಕ ಸಹಾಯಬೇಕೆಂದು ಭಾರತ ಅಪೇಕ್ಷೆ ವ್ಯಕ್ತಪಡಿಸಿದ ಕೂಡಲೆ ಆ ಸಹಾಯ ಸಿಗುವುದೆಂದು ಅವರು ತಿಳಿಸಿದರು.

ಮಹಾಚುನಾವಣೆ ಕಾರ್ಯಕ್ರಮ

ಮಹಾಚುನಾವಣೆಗಳಿಗೆ ಸಂಬಂಧಿಸಿದಂತೆ ಬರುವ ವರ್ಷ ಏಪ್ರಿಲ್ ೧೪ ರಿಂದ ಏ. ೧೮ ರ ವರೆಗೆ 'ಪೋಲಿಂಗ್' (ಮತತೆಗೆದುಕೊಳ್ಳುವುದು) ನಡೆಯುವುದೆಂದೂ ಮೇ ೬ ರಿಂದ ಮೇ ೧೮ ರ ನಡುವೆ ವೋಟುಗಳ ಎಣಿಕೆ ನಡೆಯಲಿದೆಯೆಂದೂ, ವಿವಿಧಪ್ರಾಂತ ಸರ್ಕಾರಗಳೂ ಚುನಾವಣಾ ಕಾರ್ಯಕ್ರಮವನ್ನು ಈ ತಾರೀಖುಗಳೊಳಗೆ ನಡೆಸಬೇಕೆಂದೂ ಮುಖ್ಯ ಚುನಾವಣಾ ಕಮಿಷನರು ಪ್ರಾಂತ ಸರ್ಕಾರಗಳಿಗೆ ಸೂಚಿಸಿದ್ದಾರೆ.

● ಟಿಬೆಟ್ಟಿಗೆ ಪಶ್ಚಿಮದಲ್ಲಿ ಪಶ್ಚಿಮ ಸೀಕಾಂಗ್ ಪ್ರಾಂತ ಪ್ರದೇಶದಲ್ಲಿ ಚೀಣಿ ಸೇನೆಗಳ ಚಲನವಲನ ನಡೆದಿರುವುದಾಗಿ ಗುಪ್ತವರ್ತಮಾನ ಬಂದಿದೆ.

ಟಿಬೆಟ್ಟಿನ ಈ ಆಕ್ರಮಣದ ಸುದ್ದಿಯನ್ನು ವಿದೇಶಾಂಗ ಶಾಖೆಯವರು ಆಧಾರಯುತವೆಂದು ನಂಬುತ್ತಿಲ್ಲ. ಕೆಲವು ದಿನಗಳಿಂದ ಟಿಬೆಟ್ ಪ್ರದೇಶದಲ್ಲಿ ಚೀಣಿ ಕಮ್ಯೂನಿಸ್ಟರು ಧಾಳಿ ನಡೆಸಿರುವರೆಂಬ ವರದಿ ಹಬ್ಬಿದೆ.

ಕಾಶ್ಮೀರ ಪ್ರಶ್ನೆ

ಕಾಶ್ಮೀರ ಸಂಬಂಧವಾಗಿ ಸರ್ ಓವೆನ್ ಡಿಕ್ಸನ್‌ರು ಮಾಡಿರುವ ವರದಿಯನ್ನು ಸೆಕ್ಯೂರಿಟಿ ಕೌನ್ಸಿಲ್ ಶುಕ್ರವಾರ ಚರ್ಚಿಸಲಿದೆ

ಜೀವದಾನ

ಡಿಸೆಂಬರ್ ೩೧ ಕ್ಕೆ ಮುಕ್ತಾಯವಾಗಬೇಕಾಗಿದ್ದ ದಾವಣಗೆರೆ ನಗರ ಪೌರಸಭೆಯ ಅವಧಿಯನ್ನು ಸರ್ಕಾರದವರು ಇನ್ನೂ ಒಂದು ವರ್ಷಕಾಲ ಹೆಚ್ಚಿಸಿದ್ದಾರೆ

ಕಾಳಸಂತೆಕೋರರ ದಸ್ತಗಿರಿ

ಮಂಡ್ಯದಲ್ಲಿ ನಾಲ್ಕುಜನ ಭಾರಿ ಕಾಳಸಂತೆಕೋರರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಅವರ ಹೆಸರುಗಳನ್ನು ಗೋಪ್ಯವಾಗಿಡಲಾಗಿದೆಯೆಂದೂ ತಿಳಿಯುಬರುತ್ತದೆ.

ಕಳ್ಳಸಂತೆ ಕೋರರ ಬಂಧನ

ಕಳ್ಳಸಂತೆಕೋರರನ್ನು ೩ ತಿಂಗಳು ಬಂಧನದಲ್ಲಿಡಲು ಪಂಜಾಬು ಸರ್ಕಾರವು ನಿಷ್ಕರ್ಷಿಸಿದೆ ಈಗಾಗಲೇ ೭೫ ಜನರ ದಸ್ತಗಿರಿಯಾಗಿದೆ. ಇನ್ನೂ ೪೨ ಮಂದಿ ಪಟ್ಟಿಯಲ್ಲಿದ್ದಾರೆ

ದೀಪೋತ್ಸವ

ಇದೇ ೨೯ನೇ ತಾ. ಭಾನುವಾರ ಸಂಜೆ ತಲಕಾಡಿನಲ್ಲಿ ವಿದ್ಯುದ್ದೀಪೋತ್ಸವ ಆರಂಭವನ್ನು ಶ್ರೀ ಕೆ. ಟಿ ಭಾಷ್ಯಂರವರು ನೆರವೇರಿಸುವರು. ಶ್ರೀ ಟಿ ಮರಿಯಪ್ಪನವರು ಅಧ್ಯಕ್ಷತೆ ವಹಿಸುವರು.

ಬೈಸಿಕಲ್ ಮೇಲೆ ಪ್ರಪಂಚ ಪರ್ಯಟನ

ಪ್ರಪಂಚವನ್ನೆಲ್ಲಾ ೬ ವರ್ಷಗಳೊಳಗಾಗಿ ಬೈಸಿಕಲಿನ ಮೇಲೆ ಸುತ್ತಿ ಬರುವುದಕ್ಕಾಗಿ ಹೈದರಾಬಾದಿನ ಮೂವರು ಯುವಕರು ಶ್ರೀ ಎಂ. ನರಸಿಂಹ್, ಶ್ರೀ. ಜಿ. ತ್ರಿವೇದಿ ಮತ್ತು ಶ್ರೀ ರೋಮೇರವರು ಹೊರಡಲಿರುವರು

ಬೆಲ್ಲದ ಹತೋಟಿ

ಬೆಲ್ಲದಮೇಲೆ ಬೆಲೆಯ ಹತೋಟಿಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ. ಮೈಸೂರು, ತಿರುವಾಂಕೂರು ಕೊಚ್ಚಿನ್‌ಗಳಲ್ಲಿ ಮಣ ಒಂದಕ್ಕೆ ೨೧ ರೂಪಾಯಿಗಳು ಒರಿಸ್ಸಾ, ಪಂಜಾಬು, ಡೆಲ್ಲಿ ಮುಂತಾದೆಡೆ ಮಣಕ್ಕೆ ೨೦ ರೂ. ನಂತೆ ನಿಷ್ಕರ್ಷಿಸಿದೆ.

ವರ್ಗಾವರ್ಗಿ ಇಲ್ಲ

ಜಿಲ್ಲಾಧಿಕಾರಿಗಳ ದರ್ಜೆಯ ಕೈಗಾರಿಕಾ ಮತ್ತು ವಾಣಿಜ್ಯಶಾಖೆಯ ಅಧಿಕಾರಿಗಳ ವರ್ಗಾವರ್ಗಿಯಾಗಿದೆಯೆಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಿರುವುದಕ್ಕೆ ಯಾವ ಆಧಾರವೂ ಇಲ್ಲವೆಂದು ಸರ್ಕಾರವು ಒಂದು ಪ್ರಕಟಣೆ ಹೊರಡಿಸಿದೆ.

ಲಾಯಕಾಲಿ ಲೇಕ್‌ಸಕ್ಸೆಸ್ಸಿನಲ್ಲಿ

ಹೈದರಾಬಾದಿನ ಮಾಜಿ ಮುಖ್ಯಮಂತ್ರಿ ಮಿರ್ ಲಾಯಕ್ ಅಲಿಯವರು ಅನಿರೀಕ್ಷಿತವಾಗಿ ಲೇಕ್‌ಸಕ್ಸೆಸ್ಸಿಗೆ ಹೋಗಿದ್ದಾರೆ. ಅವರ ಭೇಟಿಗೆ ಕಾರಣ ಗೊತ್ತಿಲ್ಲವಾಗಿ ಭೇಟಿಯು ಕುತೂಹಲವನ್ನು ಕೆರಳಿಸಿದೆ.

ಮಂತ್ರಿಗಳ ಸಭೆ

ಪಾನ ನಿರೋಧಕ್ರಮವನ್ನು ಚರ್ಚಿಸಲು ಬೊಂಬಾಯಿನ ಮುಖ್ಯಮಂತ್ರಿ ಶ್ರೀ. ಬಿ. ಜಿ. ಖೇರ್‌ರವರು ಮುಂದಿನ ಮಾಹೆ ೧೪ನೇ ತಾರೀಖು ನೆರೆಯ ಪ್ರಾಂತ್ಯಗಳ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನೊಂದನ್ನು ಕರೆಯಲಿರುವರು.

ಬಸ್ ಕಾರ್ಮಿಕರ ಪ್ರದರ್ಶನ

ಬೆಂಗಳೂರು ಅ. ೨೫

ನಿನ್ನೆ ಬೆಳಗ್ಗೆ ಬೆಂಗಳೂರು ನಗರದಲ್ಲಿ ಬಸ್ ಸಂಚಾರವೇ ನಿಂತುಹೋಗಿತ್ತು. ಮೊನ್ನೆ ಕೆಲವು ಕಾರ್ಮಿಕರ ಮೇಲೆ ನಗರ ಬಸ್ ಕಂಪೆನಿಯವರು ಶಿಸ್ತಿನಕ್ರಮ ತೆಗೆದುಕೊಂಡ ಫಲವಾಗಿ ಹಠಾತ್ತಾಗಿ ನಿನ್ನೆ ಬೆಳಗ್ಗೆ ಕಾರ್ಮಿಕ ಸಂಘದ ಹಲವರು ಬಸ್ಸುಗಳನ್ನಿಟ್ಟದ್ದ ಕಾಂಪೌಂಡು ಮುಂಭಾಗದಲ್ಲಿ ಪಿಕಟಿಂಗ್ ನಡೆಸಿದರು. ಪೋಲೀಸಿನವರು ಬಂದಮೇಲೆ ಅವರು ಚದುರಿದರು ಸಂಜೆ ಹೊತ್ತಿಗೆ ಬಸ್ಸುಗಳು ಚಲಿಸಲಾರಂಭಿಸಿದುವು.

ಸೆಕ್ರೆಟರಿ ಜನರಲ್ ಪದವಿ

ಪ್ರಪಂಚಸಂಸ್ಥೆ ಸೆಕ್ರೆಟರಿ ಜನರಲ್‌ಪದವಿಗೆ ರಷ್ಯಾದ ಪ್ರತಿನಿಧಿ ಎಂ. ಜೇಕಬ್‌ಮಾಲಿಕ್‌ರವರು ಭಾರತದ ಶ್ರೀ ಬಿ. ಎನ್. ರಾವ್ ಮತ್ತು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರನ್ನು ಸೂಚಿಸಿದ್ದಾರೆ. ಆದರೆ ಇವರಿಬ್ಬರಲ್ಲಿ ಯಾರೇ ಆಗಲೀ ಅನುಮೋದಿತರಾಗುವುದು ಅಸಂಭವವೆಂದು ಹೇಳಲಾಗುತ್ತಲಿದೆ ಶ್ರೀ ಬಿ. ಎನ್. ರಾವ್‌ರವರು ತಮ್ಮ ವೈಯಕ್ತಿಕ ಕಾರಣಗಳ ಸಲುವಾಗಿ ಈ ಪದವಿಯನ್ನು ನಿರಾಕರಿಸುವರು. ಸರ್ ಮೊದಲಿಯಾರ್‌ರವರಿಗೆ ಬೆಂಬಲಸಿಗುವ ಸಂಭವವಿಲ್ಲವೆಂದು ತಿಳಿಯಬರುತ್ತದೆ.

ವಿಶ್ವಸಂಸ್ಥೆ ದಿನಾಚರಣೆ

ಮೈಸೂರು ಅ. ೨೪

ವಿಶ್ವಸಂಸ್ಥೆಯ ದಿನಾಚರಣೆಯು ನಿನ್ನೆ ಸಂಜೆ ಪುರಭವನದಲ್ಲಿ ಆಹಾರ ಸಂಶೋಧನಾಕೇಂದ್ರದ ಡೈರೆಕ್ಟರಾದ ಡಾ|| ವಿ. ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪುರಸಭಾ ಕಮಿಷನರ್ ಶ್ರೀ ಸಿ. ನರಸಿಂಹಮೂರ್ತಿಯವರು ಸ್ವಾಗತ ಭಾಷಣಮಾಡಿದನಂತರ ಕಾರ್ಯದರ್ಶಿ ಶ್ರೀ ಟಿ. ಎಲ್. ಶಾಂತಂರವರು ವರದಿಯನ್ನೋದಿದರು. ಶ್ರೀ ಸುಬ್ರಹ್ಮಣ್ಯನ್‌ರವರು ಮಾತನಾಡುತ್ತಾ ಸಂಸ್ಥೆಯು ಮಾಡುತ್ತಿರುವ ಕಾರ್ಯಗಳನ್ನು ವಿವರಿಸಿ ವಿಜ್ಞಾನ ಬೆಳೆಯಲು ವಿಶ್ವಸಂಸ್ಥೆಯು ದುಡಿಯುತ್ತಲಿದೆಯೆಂದು ಹೇಳಿದರು.

ಪ್ರಥಮ ನಿರಾವರಿ ಇಂಜಿನೀಯರ್

ದೆಹಲಿಯಲ್ಲಿ ಇಂಜಿನೀಯರುಗಳ ಸಮ್ಮೇಳನದ ಮುಂದೆ ಉಪ-ಪ್ರಧಾನಿ ಸರ್ದಾರ್ ಪಟೇಲರು ಭಾಷಣ ಮಾಡುತ್ತಾ, ಭಗೀರಥನ ತಪಸ್ಸು ಮತ್ತು ಗಂಗೆಯನ್ನು ದೇವಲೋಕದಿಂದ ಭೂಲೋಕಕ್ಕೆ ಇಳಿಸಿದತಂದ ಕಥೆಯನ್ನು ಹೇಳಿ, ಆತನೇ ಪ್ರಥಮ ನೀರಾವರಿ ಇಂಜಿನೀಯರೆಂದು ಹೇಳಿದರು.

ರೇಡಿಯೋ

ಎ. ಐ. ಆರ್. ಮೈಸೂರು,

೩೧೦ ಮೀಟರು ೪೯·೪೬ ಮೀಟರು

ಅಕ್ಟೋಬರ್ ೨೭ ಶುಕ್ರವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೨೦ ಹಾಡುಗಾರಿಕೆ (ಬಿ. ಎಸ್. ನಾರಾಯಣಯ್ಯಂಗಾರ್) ೭-೩೫ ಚಿತ್ರಲೋಕ. ೭-೪೫ ಕನ್ನಡದಲ್ಲಿ ಸುದ್ದಿ. ೮-೦ ಇಂಗ್ಲೀಷಿನಲ್ಲಿ ಸುದ್ದಿ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಗಿಟಾರ್ ೧-೪೫ ಹಿಂದೀ ಶಿಕ್ಷಣ ೨-೦ ನಿಮ್ಮ ಮೆಚ್ಚಿನ ಕಲಾವಿದರು (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಹಾಡುಗಾರಿಕೆ (ಬಿ ಎಸ್. ನಾರಾಯಣಯ್ಯಂಗಾರ್) ೬-೦ ಇಂಗ್ಲೀಷಿನಲ್ಲಿ ಸುದ್ದಿ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೧೫ ಹಾಡುಗಾರಿಕೆ (ವಿ. ರಾಮರತ್ನಂ) ೭-೩೦ ಸಂಸ್ಥಾನದ ಅಭಿವೃದ್ಧಿ (ಕನ್ನಡದಲ್ಲಿ ಭಾಷಣ) ೮-೪೫ ಕನ್ನಡದಲ್ಲಿ ವಾರ್ತೆ ೮-೦ ಟಿ. ಚೌಡಯ್ಯ (ರಿ) ೮-೧೫ ವಿ. ರಾಮರತ್ನಂ (ರಾಗ, ತಾನ ಮಟ್ಟು, ಪಲ್ಲವಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಮೈಸೂರು ಅರಮನೆ ಬ್ಯಾಂಡ್ ೧೦-೦ ಮುಕ್ತಾಯ.

● ರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರಪ್ರಸಾದರು ವಿಶ್ವಸಂಸ್ಥೆಯ ದಿನಾಚರಣೆಗೆ ತಮ್ಮ ಸಂದೇಶವನ್ನು ಕಳುಹಿಸಿ,ಭಾರತವು ವಿಶ್ವಸಂಸ್ಥೆಗೆ ಮೊದಲಿನಿಂದಲೂ ಬೆಂಬಲ ನೀಡುತ್ತಿದೆಯೆಂದೂ, ಮುಂದೆಯೂ ನೀಡುವುದೆಂದು ತಿಳಿಸಿದರು. ಮಾನವರಲ್ಲಿನ ಭೇದ ಭಾವವನ್ನು ಹೋಗಲಾಡಿಸಿ ವಿಶ್ವಶಾಂತಿ ಏರ್ಪಡುವುದರಲ್ಲಿ ತಮಗೆ ಸಂಪೂರ್ಣ ನಂಬುಗೆಯಿದೆಯೆಂದೂ ನುಡಿದರು.

ರಣಜಿತ್
20-10-50 ಶುಕ್ರವಾರದಿಂದ
ಕೆ. ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ: ಮಧುಬಾಲ † ಮೋತಿಲಾಲ್
ಮನೋರಮಾ† ಗೋಪ್
ಬೆಳಗಿನ ಪ್ರದರ್ಶನ
27-10-50 ರಿಂದ 3 ದಿನಗಳು ಮಾತ್ರ
ತಕದೀರ್
ಪಾತ್ರ: ಮೋತಿಲಾಲ್–ಚಾರ್ಲಿ–ನರ್ಗಿಸ್.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭—೧೦—೧೯೫೦ ನೇ ಶುಕ್ರವಾರ [ಸಂಚಿಕೆ ೫೭

ಸಂಸ್ಥಾನದ ಆಹಾರಪರಿಸ್ಥಿತಿ: ಕಳವಳಕ್ಕೆ ಕಾರಣವಿಲ್ಲ

★ ಮುಖ್ಯಮಂತ್ರಿ ಶ್ರೀ. ಕೆ. ಸಿ. ರೆಡ್ಡಿ

ಬೆಂಗಳೂರು ೨೬

ಈ ದಿನ ಮುಖ್ಯ ಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರು ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ, ಪತ್ರಿಕಾ ಪ್ರತಿನಿಧಿಗಳನ್ನು ಬರಮಾಡಿಕೊಂಡು, ಒಂದು ಗಂಟೆಯ ಕಾಲ ಮಾತನಾಡಿ, ಆಹಾರಪರಿಸ್ಥಿತಿ, ಚುನಾವಣೆಗಳು, ಪಬ್ಲಿಕ್ ಸರ್ವಿಸ್ ಕಮಿಷನ್ ಲೆಜಿಸ್ಲೆಟಿವ್ ಅಸೆಂಬ್ಲಿಯ ಮುಂದಿನ ಅಧಿವೇಶನ, ಪ್ರೆಸ್ ಅಡ್ವೈಜರಿ ಸಮಿತಿ, ದಸರಾ, ನಿರಾಶ್ರಿತರ ವ್ಯವಸ್ಥೆ, ಪ್ಲಾನಿಂಗ್ ಯೋಜನೆ, ಅಡ್ಮಿಸ್ಟ್ರೆಟಿವ್ ಸರ್ವಿಸ್ ಯೋಜನೆ ಮುಂತಾದುವುಗಳನ್ನು ಪ್ರಸ್ತಾಪಿಸಿದರು.

ಆಹಾರ ವಿಷಯದಲ್ಲಿ, ಕೇಂದ್ರ ಸರ್ಕಾರವು ಸಂಸ್ಥಾನಕ್ಕೆ ೧೪,೦೦೦ ಟನ್ ಧಾನ್ಯ ಕೊಡಲೊಪ್ಪಿದೆಯೆಂದೂ, ಸಂಸ್ಥಾನದ ಧಾನ್ಯ ಸಂಗ್ರಹಣ ಕಾರ್ಯಕ್ರಮ ಮುಗಿಯುತ್ತ ಬಂದಿದೆಯೆಂದೂ, ಸುಗ್ಗಿಯಹೊತ್ತಿಗೆ ಪರಿಸ್ಥಿತಿಯು ಪೂರ್ಣಹತೋಟಿಗೆ ಬರುವುದೆಂದೂ, ಕಳವಳಕ್ಕೆ ಯಾವ ಕಾರಣವೂ ಇಲ್ಲವೆಂದು ನುಡಿದರು. ಅಂತೆಯೇ ದಸರಾ ಮೆರವಣಿಗೆಯ ವಿಷಯ ಪ್ರಸ್ತಾಪಿಸಿ, ದೇಶದ ಇಂದಿನ ಆಹಾರ ಪರಿಸ್ಥಿತಿ ಮತ್ತ ಆಸ್ಸಾಮಿನ ಪರಿಸ್ಥಿತಿಯನ್ನು ಮನಗಂಡು ರಾಜಪ್ರಮುಖರು ಮೆರವಣಿಗೆಯನ್ನು ಬೇಡವೆಂದರೇ ವಿನಾ ಮತ್ತಾವ ರಾಜಕೀಯ ಕಾರಣಗಳಿಂದ ಅಲ್ಲವೆಂದು ಸ್ಪಷ್ಟೀಕರಿಸಿದರು. ಪತ್ರಿಕೆಗಳಲ್ಲಿ ಬಂದ ವರದಿಗಳು ನಿರಾಧಾರವಾದುವೆಂದು ಹೇಳಿದರು.

ವಿದ್ಯುಚ್ಛಕ್ತಿ ಯೋಜನೆ

ಭಾರತಾದ್ಯಂತ ೧೫ ವರ್ಷಗಳ ೧೨೬ ವಿದ್ಯುಚ್ಛಕ್ತಿ ಯೋಜನೆಗಳನ್ನು ರಾಷ್ಟ್ರೀಯ ಯೋಜನಾಮಂಡಲಿಯವರು ತಯಾರಿಸಿರುವರು. ಅವುಗಳಿಗೆ ಕೇಂದ್ರ ಮತ್ತು ಮತ್ತು ಪ್ರಾಂತೀಯ ಸರ್ಕಾರಗಳು ವರ್ಷಕ್ಕೆ ೧೦೦ ಕೋಟಿ ರೂಪಾಯಿಗಳು ವೆಚ್ಚಮಾಡಬೇಕಾಗಿದೆ.

ನರಭಕ್ಷಕ ತೋಳಗಳು

ಲಕ್ನೋನಗರ ನೆರೆಹೊರೆಯಲ್ಲಿ ಅನೇಕ ಬಾಲಕರನ್ನು ತಿಂದು ತುಂಬ ಹಾವಳಿ ನಡೆಸಿದುದರ ಪರಿಣಾಮವಾಗಿ ಶಸ್ತ್ರಸಜ್ಜಿತ ಪೋಲೀಸರು ಅಪರಾಧಿಗಳನ್ನು ಹಿಡಿಯಲು ತೀವ್ರ ಕಾರ್ಯಕ್ರಮ ಕೈಗೊಂಡುದುದರ ಪರಿಣಾಮವಾಗಿ ಖಲಾಸಿಪುರದ ಬಳಿ ೧೮ ನರಭಕ್ಷಕ ತೋಳಗಳನ್ನು ಪತ್ತೆಮಾಡಿ ಗುಂಡಿಟ್ಟು ಕೊಲ್ಲಲಾಯಿತು.

ಮಾಸ್ಕೋದಲ್ಲಿ ವಿಶ್ವಸಂಸ್ಥೆ ದಿನಾಚರಣೆ

ಯುರೋಪಾದ್ಯಂತ ವಿಶ್ವಸಂಸ್ಥೆಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸೋವಿಯೆಟ್ ರಷ್ಯಾದ ರಾಜಧಾನಿಯಾದ ಮಾಸ್ಕೋದಲ್ಲಿ ವಿಶ್ವಸಂಸ್ಥೆಯ ಧ್ವಜವು ಮೊದಲನೆಯ ಬಾರಿ ವಿಶ್ವಸಂಸ್ಥೆಯ ಕಚೇರಿಯ ಮೇಲೆ ಹಾರಿಸಲಾಯಿತು. ಮಾಸ್ಕೋ ಪ್ರತಿ ಶಾಲೆಯಲ್ಲಿಯೂ, ಸಂಘಗಳಲ್ಲಿಯೂ ಭಾಷಣಗಳನ್ನು ಏರ್ಪಡಿಸಿದ್ದರು. ಸೋವಿಯೆಟ್ ರಷ್ಯಾದ ಇತರ ನಗರಗಳಲೆಲ್ಲಾ ವಿಶ್ವ ಸಂಸ್ಥೆಯ ಛಾಯಾಚಿತ್ರಗಳನ್ನೂ ಮತ್ತು ಚಲನಚಿತ್ರಗಳನ್ನೂ ಪ್ರದರ್ಶಿಸಲಾಯಿತು. ವಿಶ್ವ ಸಂಸ್ಥೆಯ ಮುಂದೆ ಈಗಿರುವ ಮುಖ್ಯ ಪ್ರಶ್ನೆ ಶಾಂತಿ ಅಥವಾ ಯುದ್ಧವೆಂದೂ, ರಷ್ಯಾ ಶಾಂತಿಗೇ ಬೆಂಬಲ ನೀಡುವುದೆಂದೂ ಪ್ರಚಾರಮಾಡಲಾಯಿತು.

ಮೈ. ಪುರಸಭೆಯ ವಿಶೇಷಾಧಿವೇಶನ

ಪುರಸಭೆ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು ಒಬ್ಬರೇಯಿರಬೇಕು

ಮೈಸೂರು ಅ. ೨೬

ನಿನ್ನೆ ಮಧ್ಯಾಹ್ನ ಮೈಸೂರು ಪುರಸಭೆಯ ವಿಶೇಷ ಅಧಿವೇಶನವು ಕಳೆದ ವರ್ಷದ ಆಡಳಿತ ವರದಿಯನ್ನು ಪರಿಶೀಲಿಸಲು ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಪುರಸಭೆ ಮತ್ತು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಒಬ್ಬರೇ ಇದ್ದಲ್ಲಿ ನಗರ ನಿವಾಸಿಗಳಿಗೆ ಹೆಚ್ಚಿಗೆ ಸೇವೆ ಸಲ್ಲಿಸಬಹುದು. ಈಗ ಇವೆರಡೂ ಬೇರ್ಪಟ್ಟಿರುವುದರಿಂದ ಕೆಲಸಕಾರ್ಯ ಮಾತ್ರ ಗೊತ್ತುಪಡಿಸಿಲ್ಲ. ಇದರಿಂದ ಅನಾನುಕೂಲವಾಗಿರುವುದು ಟ್ರಸ್ಟ್‌ಬೋರ್ಡು ೬ ಲಕ್ಷ ರೂಪಾಯಿಗಳನ್ನಿಟ್ಟುಕೊಂಡೂ ಮಾಡಬೇಕಾದ ಕೆಲಸವನ್ನು ಮಾಡದಿರುವುದರಿಂದ ೪॥ ಲಕ್ಷ ರೂ. ಖೋತಾ ಬಿದ್ದಿರುವ ಪುರಸಭೆಯು ಎಲ್ಲರ ನಿಂದೆಗೆ ಒಳಪಡಬೇಕಾಗಿದೆ. ಸರ್ಕಾರವು ಈಗಲಾದರೂ ಆವೆರಡನ್ನೂ ಒಂದುಗೂಡಿಸಲೆಂದು ಅಧ್ಯಕ್ಷರು ಹೇಳಿದರು.

ಕಮಿಷನರಾದ ಶ್ರೀ ಸಿ. ನರಸಿಂಹ ಮೂರ್ತಿಯವರು ವರದಿಯನ್ನು ಸಭೆಯಲ್ಲಿ ಮಂಡಿಸಿದರು.

ವ್ಯಭಿಚಾರ ಪದ್ಧತಿನಿಲ್ಲಿಸಿ

ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮಾತನಾಡುತ್ತಾ ಮೈಸೂರು ರಸ್ತೆಗಳು ಚೆನ್ನಾಗಿಲ್ಲ ಮತ್ತು ನೀರಿನ ಹಂಚಿಕೆ ಸಮರ್ಪಕವಾಗಿಲ್ಲವೆಂದೂ, ಖರ್ಚು ಮೊದಲಿಗಿಂತ ದ್ವಿಗುಣ-ತ್ರಿಗುಣವಾಗಿ ಆದಾಯವು ಹೆಚ್ಚದಿದ್ದುರಿಂದ ಹೀಗಾಗಿದೆಯೆಂದೂ ಹೇಳಿದರು. ಮದರಾಸಿನಲ್ಲಿ ವೇಶ್ಯಾವೃತ್ತಿನಿರೋಧಶಾಸನ ಜಾರಿಯಾದ ಮೇಲೆ ಅಲ್ಲಿನ ವೇಶ್ಯೆಯರು ಮೈಸೂರಿಗೆ ಬಂದು ಸೇರಿಕೊಂಡಿದಾರೆಂದೂ ಅಂತಹವರಿಗೆ ಒಂದು ರಕ್ಷಣಾಗೃಹವನ್ನೇರ್ಪಡಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದರು.

ಸತ್ಕಾರದಲ್ಲಿ ತಿಂಡಿಬೇಡ

ಮಹಾವ್ಯಕ್ತಿಗಳು ಬಂದಾಗ ಅವರಿಗೆ ಸತ್ಕಾರನೀಡುವಾಗ ತಿಂಡಿತೀರ್ಥಗಳ ಖರ್ಚು ಅನಗತ್ಯ ಮತ್ತು ನಗರದ ಪ್ರಮುಖನಿವಾಸಿಗಳನ್ನು ಆದಷ್ಟು ಕಡಮೆಯಲ್ಲಿ ಆಹ್ವಾನಿಸಬೇಕು ಎಂದು ಡಾ॥ ಮೀರ್‌ನೂರ್ ಹುಸೇನ್‌ರು ಹೇಳಿದರು.

ಪುರಸಭೆಯ ವಸತಿನಿರ್ಮಾಣ

ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಮಾತನಾಡುತ್ತಾ ಪ್ರಮುಖ ವ್ಯಕ್ತಿಗಳನ್ನು ಪುರಸಭೆಗೆ ಬರಮಾಡಿಕೊಂಡರೆ ಸಾರ್ವಜನಿಕ ಸಭೆಯನ್ನೇರ್ಪಡಿಸಬೇಕು. ಪುರಸಭೆಯು ವಸತಿ ಸಮಸ್ಯಾನಿವಾರಣೆಗೋಸ್ಕರ ಪ್ರತಿ ವರ್ಷ [illegible] ಲಕ್ಷ ರೂ. ಗಳನ್ನು ಉಪಯೋಗಿಸಿ ಮನೆಕಟ್ಟಿ ಅವುಗಳನ್ನು ಕೊಡುವವರಿಗೆ ೧೦ ವರ್ಷಗಳತನಕ ಅವರೇ ಅದನ್ನನುಭವಿಸಬೇಕೆಂದು ಕರಾರಿನಿಂದ ಮಾಡಬೇಕೆಂದರು. ಅಲ್ಲದೆ ಪುರಸಭೆಯು ಹಾಕುವ ಸುಂಕದ ಜೊತೆಗೆ ಮಾರಾಟತೆರಿಗೆ ವಿಧಿಸಿರುವುದು ನ್ಯಾಯವಲ್ಲವೆಂದು ಸುಂಕದ ಪದ್ಧತಿಯನ್ನು ತಪ್ಪಿಸಿ ಸರ್ಕಾರದವರು ನಿಗದಿಯಾದಷ್ಟು ಹಣವನ್ನು ಪುರಸಭೆಗೆ ಕೊಡುವಂತೆ ಒತ್ತಾಯಪಡಿಸಬೇಕೆಂದು ಹೇಳಿದರು. ಶ್ರೀ ರಾಜಯ್ಯನವರು ಜಲಪುರಿಯಲ್ಲಿರುವ ಕೊಳಗಳಲ್ಲಿ ಆತ್ಮಹತ್ಯೆಗಳು ವಿಶೇಷವಾಗಿ ಆಗುತ್ತಲಿರುವುದರಿಂದ ಅದನ್ನು ಮುಚ್ಚಿಸಬೇಕೆಂದು ಹೇಳಿದರು.

ಅಧ್ಯಕ್ಷರ ಭಾಷಣ

ಅಧ್ಯಕ್ಷರು ಉತ್ತರಕೊಡುತ್ತಾ ಕೈಗಾರಿಕಾ ಮತ್ತು ನಿವಾಸಸ್ಥಾನಗಳು ಒಂದೆಡೆಯಿರಬಾರದು. ಇವುಗಳನ್ನು ಬೇರ್ಪಡಿಸಲು ಪುರಸಭೆ ಸುಧಾರಣೆಮಾಡುತ್ತಲಿದೆ. ಸಧ್ಯದಲ್ಲಿ ಪೌರಸಭೆ ೧॥ ಲಕ್ಷ ರೂ. ಗಳ ಒಳಚರಂಡಿ ವ್ಯವಸ್ಥೆಯನ್ನು ಕೈಗೊಳ್ಳಲಿದೆ ನಗರದಲ್ಲಿ ೨೦ ಸಾವಿರ ರೂ. ಗಳ ಖರ್ಚಿನಲ್ಲಿ ಕೆಲವು ಭಾವಿಗಳನ್ನು ತೋಡಿಸಲಾಗಿದೆ. ಜಲಪುರಿಯ ಕೊಳಗಳು ಟ್ರಸ್ಟ್‌ಬೋರ್ಡಿಗೆ ಸೇರಿರುವುದರಿಂದ ಪೌರಸಭೆಯು ಮುಚ್ಚಿಸಲಾಗುವುದಿಲ್ಲ.

ಈ ಪೌರಸಭೆಯು ಒಂದು ಮಾದರಿ ಪ್ರಜಾಸತ್ತಾತ್ಮಕ ಸಂಸ್ಥೆಯಾಗಿ ಕೆಲಸಮಾಡುತ್ತಲಿದೆ. ಪೌರಸಭೆಯು ೨೦೦ ಬಡ ಜನರಿಗೆ ಪ್ರತಿದಿನ ಆಹಾರಕೊಡುತ್ತಲಿದೆ. ೧೦೦ ಜನ ವಿದ್ಯಾರ್ಥಿಗಳಿಗೆ, ಕೋಮುವಾರು ಭೇದವಿಲ್ಲದೆ ಊಟಕ್ಕೇರ್ಪಾಡುಮಾಡಿದೆ. ರಾಜಧಾನಿಯ ಆಸ್ಪತ್ರೆಗಳಿಗೆ ಪ್ರತಿವರ್ಷವೂ ೨೦ ಸಾವಿರ ರೂ. ಗಳನ್ನು ಕೊಡುತ್ತಲಿದೆ. ಭಿಕ್ಷುಕರ ವಸತಿಗೆ ಸಹಾಯ ನೀಡುತ್ತಲಿದೆ. ಅಲ್ಲದೆ ನಗರದಲ್ಲಿ ಆರೋಗ್ಯ ಕಾಪಾಡಲು ಕಾರ್ಯಕ್ರಮವನ್ನು ಕೈಗೊಳ್ಳುತ್ತಲಿದೆ ಎಂದು ತಿಳಿಸಿದರು.

ವರದಿಯು ಸರ್ವಾನುಮತದಿಂದ ಅಂಗೀಕೃತವಾಯಿತು.

ಬೂಟಾಟಿಕೆ

ಜನರಲ್ ಅಸೆಂಬ್ಲಿಯಲ್ಲಿ ಟ್ರೂಮನ್ನರ ಭಾಷಣದ ಬಗ್ಗೆ ಲಂಡನ್ನಿನ ಕೆಲವು ಪತ್ರಿಕೆಗಳು ಟೀಕಿಸುತ್ತ ಟ್ರೂಮನ್ನರ ಶಾಂತಿ ಘೋಷಣೆ ಶುದ್ಧ ಭೂಟಾಟಿಕೆ ಎಂದು ಹೇಳಿವೆ.

ದಸರಾ ವಸ್ತುಪ್ರದರ್ಶನ

ಇಂದು ಮುಕ್ತಾಯವಾಗಬೇಕಾಗಿದ್ದ ದಸರಾ ವಸ್ತುಪ್ರದರ್ಶನವನ್ನು ಇನ್ನೂ ಎರಡುದಿನ ಮುಂದುವರಿಸಲಾಗಿದೆ. ೨೮, ೨೯ನೇ ತಾ. ಗಳಲ್ಲೂ ಪ್ರದರ್ಶನವಿರುವುದು.

ಟಿಬೆಟ್‌ಮೇಲೆ ಆಕ್ರಮಣ

ಟಿಬೆಟ್ಟಿನಮೇಲೆ ಆಕ್ರಮಣಕಾರ್ಯ ಕೈಗೊಂಡಿರುವುದಾಗಿ ಕಮ್ಯೂನಿಸ್ಟ್ ಚೀಣಾ ಸರ್ಕಾರವು ಪ್ರಕಟಿಸಿದೆ

ಬೀಹಾರ ಆಹಾರ ಪರಿಸ್ಥಿತಿ

ಬೀಹಾರದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲು ರಾಷ್ಟ್ರಾಧ್ಯಕ್ಷ ಬಾಬುರಾಜೇಂದ್ರ ಪ್ರಸಾದ್‌ರವರು ಪಾಟ್ನಾಕ್ಕೆ ನವಂಬರ್ ೩ರಲ್ಲಿ ಭೇಟಿ ಈಯುವರು.

ಮಲೆನಾಡು ಅಭಿವೃದ್ಧಿ ಸಮಿತಿ

ಬೆಂಗಳೂರು ಅ. ೨೬

ಕೇಂದ್ರ ಸರ್ಕಾರವು ರಚಿಸಿರುವ ಮಲೆನಾಡು ಅಭಿವೃದ್ಧಿ ಸಮಿತಿಯು ಸಭೆಯು ಇಂದು ಬೆಂಗಳೂರಿನಲ್ಲಿ ಮಾಜಿ ಮೈಸೂರು ಮಂತ್ರಿ ಶ್ರೀ ಎ. ವಿ. ರಾಮನಾಥನ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಮೈಸೂರು, ಕೊಡಗು, ಮದರಾಸು, ಬೊಂಬಾಯಿ ಸರ್ಕಾರಗಳೊಡನೆ, ಮಲೆನಾಡು ಅಭಿವೃದ್ಧಿಯ ವಿಷಯವಾಗಿ ಪತ್ರವ್ಯವಹಾರ ನಡೆಸಿ, ಮಲೆನಾಡು ಪ್ರಾಂತ್ರಗಳಿಗೆ ಹೆಚ್ಚು ಗಮನವನ್ನೀಯುವಂತೆ ಕೋರಬೇಕೆಂದು ತೀರ್ಮಾನವಾಯಿತು. ಡಿಸೆಂಬರ್ ೫ ವೇಳೆಗೆ ಸಮಿತಿಯು ಮತ್ತು ತಾತ್ಕಾಲಿಕ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಲಿದೆ. ದೀರ್ಘ ವರದಿಯನ್ನು ಒಪ್ಪಿಸಲು ಒಂದೆರಡು ತಿಂಗಳಾಗಬಹುದು

ಆಹಾರಬೆಲೆ ನಿಗದಿ

ದೇಶದಲ್ಲಿ ಆಹಾರ ಬೆಲೆಯನ್ನು ಚರ್ಚಿಸಿ ನಿಗದಿ ಮಾಡಲು ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ಚಿಂತಾಮಣಿ ದೇಶಮುಖ್‌ರವರು ಪಂಜಾಬ್, ಮಧ್ಯ ಪ್ರದೇಶ, ಉತ್ತರ ಪ್ರದೇಶ ಮತ್ತು ಬೊಂಬಾಯಿಗಳ ಮುಖ್ಯ ಮಂತ್ರಿಗಳ ಸಭೆಯೊಂದನ್ನು ಕರೆದಿರುವರು ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಭಾಗವಹಿಸುವರು

ಭಾರತಕ್ಕೆ ಅಕ್ಕಿ

ಬರ್ಮಾದಿಂದ ಭಾರತಕ್ಕೆ ೧ ಲಕ್ಷ ೭೫ ಸಾವಿರ ಟನ್ ಈಜಿಪ್ಟಿನಿಂದ ೪೦ ಸಾವಿರ ಟನ್ನು ಅಕ್ಕಿಯನ್ನು ತರಿಸಿಕೊಳ್ಳಲು ಭಾರತ ಸರ್ಕಾರವು ತಕ್ಕ ವ್ಯವಸ್ಥೆಮಾಡುತ್ತಲಿದೆಯೆಂದು ಕೇಂದ್ರ ಉಪಮಂತ್ರಿ ಶ್ರೀ ತಿರುಮಲರಾಯರು ಹೇಳಿರುವರು. ಥೈಲಾಂಡಿನಿಂದಲೂ ಅಕ್ಕಿಯನ್ನು ತರಿಸಲು ಏರ್ಪಾಡಾಗುತ್ತಲಿದೆ.

ನಿರಾಶ್ರಿತರಿಗೆ ಸಹಾಯನೀಡಿ

ಪೂರ್ವಬಂಗಾಳದ ಮುಖ್ಯಮಂತ್ರಿ ಡಾ॥ ಬಿ. ಸಿ. ರಾಯ್‌ರವರು ಬೆಂಗಳೂರಿನಲ್ಲಿ ಮಾತನಾಡುತ್ತ ಪೂರ್ವಬಂಗಾಳದಿಂದ ಬರುವ ನಿರಾಶ್ರಿತರಿಗೆ ಮೈಸೂರು ಪ್ರಜೆಗಳು ಸಹಾಯನೀಡಬೇಕೆಂದೂ, ಅವರಿಂದ ರಾಜ್ಯಕ್ಕೆ ಒಳ್ಳೆಯದಾಗುವುದೆಂದೂ ಮನವಿಮಾಡಿಕೊಂಡಿರುವರು.

ಕೊರಿಯಾ ಯುದ್ಧರಂಗ

ಅಮೇರಿಕಾ ಸೈನ್ಯಗಳು ಮಂಚೂರಿಯ ಗಡಿಯವರೆಗೆ ಹೋಗುವುದಿಲ್ಲವೆಂದೂ ಅಧ್ಯಕ್ಷ ಟ್ರೂಮನ್ನರು ಹೇಳಿರುವರು ಆದರೆ ದಕ್ಷಿಣಕೊರಿಯಾ ಸೈನ್ಯಗಳು ಮಾತ್ರ ಹೋಗುವುವೆಂದೂ, ಈಗಾಗಲೇ ಗಡಿಯನ್ನು ಸಮೀಪಿಸಿದೆಯೆಂದೂ ತಿಳಿಯಬರುತ್ತದೆ.

ಉಗ್ರಶಿಕ್ಷೆ

ಬೊಂಬಾಯಿನ ಆರೋಗ್ಯ ಸಚಿವರಾದ ಡಾ॥ ಎಂ. ಡಿ. ಡಿ. ಗಿಲ್ಡರ್‌ರವರು, ಬೊಂಬಾಯಿ ಪ್ರಾಂತ್ಯದ ಆಹಾರ ಪದಾರ್ಥ ಬೆರಕೆ ನಿರೋಧ ಕಾನೂನಿಗೆ ತಿದ್ದುಪಡಿಯನ್ನು ಶಾಸನ ಸಭೆಯ ಮುಂದೆ ಮಂಡಿಸಿದರು ಇದರ ಪ್ರಕಾರ ಆಹಾರ ಪದಾರ್ಥಗಳ ಬೆರಕೆ ಕೆಲಸದಲ್ಲಿ ತೊಡಗುವ ವ್ಯಾಪಾರಸ್ಥರು ಉಗ್ರ ಶಿಕ್ಷೆಗೆ ಗುರಿಯಾಗಬೇಕಾ[illegible] ಈ ತಿದ್ದುಪಡಿ ಮಸೂದೆ ಪ್ರಕಾರ ಮೊದಲನೆಬಾರಿ ಅಪರಾಧಿಯಾದರೆ ಒಂದು ವರ್ಷದವರೆಗೆ ಸಜಾ ಮತ್ತು ೨ ಸಾವಿರ ರೂಪಾಯಿವರೆಗೆ ಜುಲ್ಮಾನೆ ವಿಧಿಸಲಾಗುವುದು.

ಇದೇ ಅಪರಾಧಿ ಎರಡನೇ ಬಾರಿ ತಪ್ಪುಮಾಡಿದ್ದಲ್ಲಿ ೨ ವರ್ಷದವರೆಗೆ ಸಜಾ ೨ ಸಾವಿರಕ್ಕೆ ಕಮ್ಮಿಯಿಲ್ಲದೆ ಜುಲ್ಮಾನೆ, ಆ ಬಳಿಕಾದರೆ ೩ ವರ್ಷದವರೆಗೆ ಸಜಾ ಮತ್ತು ೩ ಸಾವಿರಕ್ಕೆ ಕಡಮೆಯಿಲ್ಲದೆ ಜುಲ್ಮಾನೆ ಈ ರೀತಿ ಶಿಕ್ಷೆ ವಿಧಿಸಲಾಗುವುದು.

ದಾಂಪತ್ಯ ವಿಚ್ಛೇದನ

ಬೊಂಬಾಯಿನ ದಾಂಪತ್ಯ ವಿಚ್ಛೇದನ ಕಾನೂನು ರೀತ್ಯ ಕಳೆದ ೩ ವರ್ಷಗಳಲ್ಲಿ ೪೯೦೪ ಹಿಂದೂ ಮಹಿಳೆಯರು ದಾಂಪತ್ಯ ವಿಚ್ಛೇದನಕ್ಕಾಗಿ ಕೋರ್ಟಿನಲ್ಲಿ ಅರ್ಜಿ ದಾಖಲ್ಮಾಡಿದ್ದಾರೆ. ೨೪೫೨ ಗಂಡಂದಿರು ಈ ಕಾನೂನು ರೀತ್ಯ ದಾಂಪತ್ಯ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಅಖಿಲ ಭಾರತ ಮಹಿಳಾ ಸಮ್ಮೇಳನ

೨೨ ನೇ ಅಖಿಲಭಾರತ ಮಹಿಳಾ ಸಮ್ಮೇಳನವು ಬೆಂಗಳೂರಿನಲ್ಲಿ ಮುಂದಿನ ಜನವರಿ ೨೨ ರಿಂದ ನಡೆಯುವುದು ಇದಕ್ಕಾಗಿ ಶ್ರೀಮತಿ ಕೆ ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತಸಮಿತಿ ರಚಿತವಾಗಿದೆ.

ಮಂತ್ರಿ ಪದವಿ ಬೇಡ

ಪ್ರಾಂತದಲ್ಲುಂಟಾಗಿರುವ ಆಹಾರ ಅಭಾವವನ್ನು ನೀಗಲು ಹೆಚ್ಚು ಆಹಾರ ಬೆಳೆಯುವ ಇಲಾಖೆ ಮತ್ತು ಆಹಾರಕ್ಕೆ ಸಂಬಂಧಪಟ್ಟ ಇಲಾಖೆಗಳು ನನ್ನೊಡನೆ ಸಹಕರಿಸದಿದ್ದಲ್ಲಿ ನಾನು ಕೂಡಲೇ ಮಂತ್ರಿಪದವಿಗೆ ರಾಜೀನಾಮೆಯನ್ನೀಯುವೆನು. ಪ್ರಜಾಕರ್ತವ್ಯವನ್ನು ನಿರ್ವಹಿಸಲಾರದವನು ಮಂತ್ರಿಯಾಗಿದ್ದು ಪ್ರಯೋಜನವೇನು ? ಎಂದು ಬೀಹಾರಿನ ಆಹಾರ ಮಂತ್ರಿ ಶ್ರೀ. ಅನುಗ್ರಹ ನಾರಾಯಣಸಿನ್ಹರವರು ಹೇಳಿರುವರು.

ಆಹಾರ ಆಮದು

ಪ್ರಪಂಚದ ಯಾವ ಭಾಗದಲ್ಲಿಯಾದರೂ ಅಕ್ಕಿ ದೊರೆಯುವುದೆಂದು ತಿಳಿದರೆ ಕೂಡಲೇ ಭಾರತಕ್ಕೆ ತರಿಸಿಕೊಳ್ಳಲು ಭಾರತ ಸರ್ಕಾರವು ಎಲ್ಲಾ ಕಾರ್ಯಕ್ರಮವನ್ನು ಕೈಗೊಳುವುದು. ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳುವುದನ್ನು ಕೇಂದ್ರ ಸರ್ಕಾರವು ನಿರೋಧಿಸುತ್ತದೆನ್ನುವುದು ಸರಿಯಲ್ಲವೆಂದು ಆಹಾರ ಉಪ ಮಂತ್ರಿ ಶ್ರೀ ಎಂ ತಿರುಮಲರಾಯರು ಹೇಳಿರುವರು.

ಮರಣದಂಡನೆ

ಕಮ್ಯೂನಿಸ್ಟರೊಡನೆ ಸಹಕರಿಸಿದರೆಂಬ ಅಪಾದನೆ ಮೇಲೆ ೬೨ ಜನ ದಕ್ಷಿಣಕೊರಿಯನ್ನರಿಗೆ ಕೊರಿಯಾ ರಿಪಬ್ಲಿಕ್ ಕೋರ್ಟುಗಳು ಮರಣದಂಡನೆ ವಿಧಿಸಿವೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೬ ಮೀಟರು

ಅಕ್ಟೋಬರ್ ೨೮ ಶನಿವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೨೦ ಚಿತ್ರಜಗತ್ ೭-೪೫ ಕನ್ನಡದಲ್ಲಿ ಸುದ್ದಿ. ೮-೦ ಇಂಗ್ಲೀಷಿನಲ್ಲಿ ಸುದ್ದಿ. ೮-೧೫ ಮುಕ್ತಾಯ.

ಮಧ್ಯಾನ್ಹ ೧–೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ. ೧-೪೫ ಕನ್ನಡ ಗೀತೆಗಳು (ಎಚ್. ಎಸ್ ರಾಮಚಂದ್ರರಾವ್)· ೨-೦ ಬಾಲ ಜಗತ್. ೨-೩೦ ಮುಕ್ತಾಯ.

ಸಂಜೆ ೫-೩೦ ಹಾಡುಗಾರಿಕೆ (ನಾಗರತ್ನಮ್ಮ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಚಿತ್ರಸಂಗೀತ (ರ) ೬-೩೦ ಸ್ಥಳೀಯ ಪ್ರಕಟಣೆ ೬-೩೫ ಹಳ್ಳಿಯವರಿಗಾಗಿ ಕಾರ್ಯಕ್ರಮ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ತಬಲ ೭-೧೫ ವನಿತಾ ವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕಥಾಕಾಲಕ್ಷೇಪ (ಸೋಸಲೆ ನಾರಾಯಣದಾಸ್) ೯-೦ ಇಂಗ್ಲೀಷಿನಲ್ಲಿ ಸುದ್ದಿ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಾದ್ಯ ಸಮ್ಮೇಳನ. ೯-೪೫ ಗಾನವಾರಿಧಿ (ರ) ೧೦-೦ ಮುಕ್ತಾಯ.

ಮೈಸೂರು ಅಸೆಂಬ್ಲಿ ಅಧಿವೇಶನ

ಮೈಸೂರು ಲೆಜಿಸ್ಲೆಟಿವ್ ಅಸೆಂಬ್ಲಿಯ ಅಧಿವೇಶನವು ಡಿಸೆಂಬರ್ ೧೧ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಗಿ ೨ ವಾರಕಾಲ ನಡೆಯುವುದು.

ಬೋನಸ್

ಬೊಂಬಾಯಿನ ಮಿಲ್‌ಗಳವರೆಲ್ಲರೂ ನವಂಬರ್ ೧ರಲ್ಲಿ ಕೆಲಸಗಾರರಿಗೆ ಬೋನಸ್ ಕೊಡಬೇಕೆಂದು ಮಿಲ್ ಮಾಲೀಕರುಗಳ ಸಂಘವು ಸೂಚನೆಯಿತ್ತಿದೆ ಇಂಡಸ್ಟ್ರಿಯಲ್ ಕೋರ್ಟಿನ ತೀರ್ಪಿನಪ್ರಕಾರ ಬೊಂಬಾಯಿನ ೨,೨೫,೦೦೦ ಜನ ಮಿಲ್ ಕೆಲಸಗಾರರು ತಲಾ ಎರಡು ತಿಂಗಳ ಸಂಬಳವನ್ನು ಪಡೆಯಬೇಕಾಗಿದೆ.

ರಣಜಿತ್
20-10-50 ಶುಕ್ರವಾರದಿಂದ
ಕೆ. ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ . **ಮಧುಬಾಲ * ಮೋತಿಲಾಲ್**
ಮನೋರಮ * ಗೋಪ್

ಬೆಳಗಿನ ಪ್ರದರ್ಶನ
27-10-50 ರಿಂದ 3 ದಿನಗಳು ಮಾತ್ರ
ತಕದೀರ್
ಪಾತ್ರ . **ಮೋತಿಲಾಲ್ - ಚಾರ್ಲಿ - ನರ್ಗಿಸ್.**

ಸಂಪಾದಕರು ಮತ್ತು ಪ್ರಕಾಶಕರು . ಜಿ ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಅರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೮—೧೦—೧೯೫೦ ನೇ ಶನಿವಾರ [ಸಂಚಿಕೆ ೫೭

RAGHULAL & Co.,
CHEMISTS
Sayyaji Rao Road
MYSORE.

RAGHULAL & Co., (Bangalore)
CHEMISTS
70, Arcot Srinivasa Char Street
BANGALORE—2

ರೇಷನ್ ಹೆಚ್ಚುವುದು

ರೇಷನ್ ೧೦ ಔನ್ಸಾದರೂ ಮಾಡಲಾಗುವುದು : ಬೆಳೆಗಳ ಮೇಲೆ ಇದು ಅವಲಂಬಿಸಿದೆ.

ಸರ್ ಮಿರ್ಜಾ ಮತ್ತು ಶ್ರೀ. ಕೆ. ಟಿ. ಭಾಷ್ಯಂ

ಕೃಷ್ಣರಾಜಸಾಗರಕ್ಕೆ ಭೇಟಿ

ಹಿಂದೂ ಫಲಹಾರಮಂದಿರವನ್ನು ಸರ್ಕಾರದವರೇ ನಡೆಯಿಸಲಿ.—

ಮೈ. ಅ. ೨೮

ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂ ಮತ್ತು ನಿವೃತ್ತ ದಿವಾನರಾದ ಸರ್ ಮಿರ್ಜಾ ಎಂ ಇಸ್ಮೈಲ್ ರವರು ನಿನ್ನೆ ಬೆಳಗ್ಗೆ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಿದರು. ದಾರಿಯಲ್ಲಿ ರೇಡಿಯೋ ಅಂಡ್ ಕೆಮಿಕಲ್ ಕಂಪನಿಗೂ, ಶ್ರೀರಂಗಪಟ್ಟಣ ಬಳಿ ಗಂಜಾಂನಲ್ಲಿರುವ ಅಂಜೂರ ಫಾರಂಗೂ ಭೇಟಿಯಿತ್ತರು.

ನಿನ್ನೆ ಸಂಜೆ ಶ್ರೀ ಭಾಷ್ಯಂ ಮತ್ತು ಸರ್ ಮಿರ್ಜಾರವರೂ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತರು. ಅಲ್ಲಿ ಬೃಂದಾವನ ಸರ್ಕಾರದವರು ನಡೆಸುತ್ತಲಿರುವ ಕೃಷ್ಣರಾಜಸಾಗರ ಹೋಟೇಲು ಮತ್ತು ಹಿಂದೂ ಫಲಹಾರಮಂದಿರ ಮುಂತಾದುವುಗಳಿಗೆ ಭೇಟಿಯಿತ್ತು, ಪರಿಶೀಲಿಸಿ, ಅವುಗಳನ್ನು ಇನ್ನು ಉತ್ತಮಗೊಳಿಸಿ, ಹೆಚ್ಚು ಆಕರ್ಷಣೀಯವಾಗಿ ಮಾಡಲು ಸಲಹೆಗಳನ್ನಿತ್ತರು. ಬೃಂದಾವನದಲ್ಲಿ ದೀಪಗಳ ವ್ಯವಸ್ಥೆಯನ್ನು ಇನ್ನೂ ಹೆಚ್ಚಾಗಿ ಮಾಡಬೇಕೆಂದೂ, ಕೃಷ್ಣರಾಜಸಾಗರ ಹೋಟೇಲನ್ನು ಸರ್ಕಾರದವರು ಎಷ್ಟು ಶ್ರಮವಹಿಸಿ ಉತ್ತಮ ದರ್ಜೆಯಲ್ಲಿ ನಡೆಸುತ್ತಲಿರುವರೋ ಅದರಂತೆಯೇ ಹಿಂದೂ ಫಲಹಾರಮಂದಿರವನ್ನು ಖಾಸಗಿಯವರಿಗೆ ಕೊಡದೆ ಸರ್ಕಾರದವರೇ ಅದನ್ನು ನಡೆಯಿಸಿಕೊಂಡು ಬಂದು ಅನೇಕ ಜನರಿಗೀಗ ಆಗುತ್ತಲಿರುವ ತೊಂದರೆಯನ್ನು ನಿವಾರಿಸಲು ತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಿ, ಕೃಷ್ಣರಾಜಸಾಗರದ ಘನತೆ ಗೌರವವನ್ನು ಕಾಪಾಡಬೇಕೆಂದೂ ಸಲಹೆಯಿತ್ತರೆಂದೂ ತಿಳಿಯಬರುತ್ತದೆ.

ರಾಜ್ಯಾಂಗ ರಚನಾಸಭೆ

ಕಾಶ್ಮೀರವು ತನ್ನ ಭವಿಷ್ಯವನ್ನು ನಿಷ್ಕರ್ಷಿಸಿಕೊಳ್ಳಲು ಒಂದು ರಾಜ್ಯಾಂಗ ರಚನಾ ಸಭೆಯನ್ನು ರಚಿಸಿಕೊಳ್ಳಬೇಕೆಂದು ಕಾಶ್ಮೀರ ರಾಷ್ಟ್ರೀಯ ಸಮ್ಮೇಳನದ ಮಹಾಸಮಿತಿಯು ನಿರ್ಣಯಮಾಡಿದೆ.

ಮುಖ್ಯಮಂತ್ರಿಗಳ ಪತ್ರಿಕಾ ಗೋಷ್ಠಿ

ಆಹಾರ ಪರಿಸ್ಥಿತಿ

ಬೆಂಗಳೂರು ಅ. ೨೭

ಮುಖ್ಯಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರು ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ಕೇಂದ್ರ ಸರ್ಕಾರವು ಈಗ ೧೩,೦೦೦ ಟನ್ ಧಾನ್ಯವನ್ನು ಕೊಡುವುದೆಂದು ಸಮ್ಮತಿಸಿರುವ ದಾಸ್ತಾನು ಕೇಂದ್ರದಿಂದ ಬರುವ ಕೋಟಾ ಎಲ್ಲವೂ ಸೇರಿ ೪೭೪೮೦ ಟನ್ ಆಗುವದೆಂದೂ, ಸುಗ್ಗಿಯವರೆಗೆ ೩೦,೦೦೦ ಟನ್ ಖೋತಾ ಬೀಳುವುದೆಂದೂ ಈ ಕೊರತೆಯನ್ನು ಕೇಂದ್ರದ ಸಹಾಯದಿಂದ ನಿವಾರಿಸಿಕೊಳ್ಳಬೇಕೆಂದೂ ತಿಳಿಸಿದರು.

ಚುನಾವಣಾಪಟ್ಟಿ

ಚುನಾವಣೆಗಳ ಮತದಾರರ ಪಟ್ಟಿ ತಯಾರಿಕೆ ತ್ವರಿತದಿಂದ ನಡೆಯುತ್ತಲಿದೆಯೆಂದು ನವಂಬರ್ ೧೫ ಕ್ಕೆ ಸಿದ್ಧವಾಗುವುದೆಂದು ಹೇಳಿದರು

ಬಿರುದುಬಾವಲಿ

ಬಿರುದು ಬಾವಲಿಗಳ ವಿಷಯದಲ್ಲಿ ಬಿರುದುಬಾವಲಿಗಳನ್ನು ಕೊಡುವುದು ರಾಜ್ಯಾಂಗ ನಿಷೇಧಿಸಿದೆ ರಾಜ್ಯಾಂಗ ಬರುವುದಕ್ಕೆ ಮುಂಚೆ ಮಹಾರಾಜರು ಕೊಟ್ಟಿರುವ ಬಿರುದುಗಳನ್ನು ರಾಜ್ಯಾಂಗ ಬಂದನಂತರ ಉಪಯೋಗಿಸಲು ನಿಷೇಧವೇ ಎಂಬ ಅಂಶವನ್ನು ಸ್ಪಷ್ಟಪಡಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿರುವುದಾಗಿ ನುಡಿದರು

ಪಬ್ಲಿಕ್ ಸರ್ವಿಸ್ ಕಮಿಷನ್

ನವೆಂಬರ್ ೧೭, ೧೮ ಕ್ಕೆ ತಾವು ದೆಹಲಿಗೆ ಹೋಗಿ ಆಡಳಿತಕ್ಕೆ ಸಂಬಂಧಪಟ್ಟ ಕೆಲವು ಮುಖ್ಯ ವಿಷಯಗಳನ್ನು ಕೇಂದ್ರದೊಡನೆ ಚರ್ಚಿಸುವುದಾಗಿಯೂ ಪಬ್ಲಿಕ್ ಸರ್ವಿಸ್ ಕಮಿಷನ್ ವಿಷಯವೂ ಅದರಲ್ಲೊಂದೆಂದು ತಿಳಿಸಿದರು.

ಪ್ರೆಸ್ ಅಡ್ವೈಸರಿ ಕಮಿಟಿ

ಪ್ರೆಸ್ ಅಡ್ವೈಸರಿ ಕಮಿಟಿಯನ್ನು ಪುನರ್ರಚಿಸಲಾಗಿದೆಯೆಂದೂ ಇನ್ನು ಮುಂದೆ ಕಮಿಟಿಯ ಸಭೆಗಳಿಗೆ ತಾವೇ ಅಧ್ಯಕ್ಷತೆ ವಹಿಸುವುದಾಗಿ ಹೇಳಿದರು.

ಬೆಳೆಗಳ ಸ್ಥಿತಿ ಉತ್ತಮಗೊಳ್ಳುವ ಸಂಭವವಿರುವುದರಿಂದಲೂ ಭಾರತ ಸರ್ಕಾರದ ಅಧಿಕ ಸಹಾಯದಿಂದಲೂ ಬರುವ ವರ್ಷ ಸಂಸ್ಥಾನದಲ್ಲಿ ರೇಷನಿಂಗ್ ಪ್ರಮಾಣವನ್ನು ಹೆಚ್ಚಿಸುವ ಆಶಾಕಿರಣ ಕಾಣುತ್ತಲಿದೆ.

ಅಕ್ಕಿಯು ಎ ಕ್ಲಾಸ್ ರೇಷನ್” ಕಾರ್ಡುದಾರರಿಗೆ ಮುಖ್ಯಾಹಾರ. ಈಗ ಕೇವಲ ೫ ಔನ್ಸನ್ನು ಕೊಡಲಾಗುತ್ತಲಿದೆ. ರೇಷನ್ ಕೊನೆಯ ಪಕ್ಷ ೧೨ ಔನ್ಸಿಗಳಿಗಾದರೂ ಹೆಚ್ಚಿಸಬೇಕೆಂದು ಸರ್ಕಾರದ ಆಶಯ. ಹೊಸ ಬೆಳೆ ಬಂದು ಹಂಚಿಕೆ ಪ್ರಾರಂಭವಾದ ತಕ್ಷಣ ರೇಷನನ್ನು ೧೦ ಔನ್ಸ್‌ಗಳಿಗಾದರೂ ಹೆಚ್ಚಿಸಲು ಸಾಧ್ಯವಾಗಬಹುದೆಂದು ನಾವು ನಂಬುತ್ತೇವೆ.

ಈ ಸಾರಿ ಭತ್ತ, ರಾಗಿ, ಬೆಳೆ ಉತ್ತಮ ಸ್ಥಿತಿಯಲ್ಲಿದೆ ಈಗ ಮತ್ತು ನವಂಬರ್ ೧೫ ರೊಳಗೆ ಎರಡು ಹದ ಮಳೆಬಂದರೆ ಸ್ಥಿತಿ ಉತ್ತಮಗೊಳ್ಳುವುದು. ಈಸಲ ಸುಗ್ಗಿಯು ೧೯೫೧ ನೇ ಜನವರಿ ಮೊದಲನೇ ವಾರದಲ್ಲಿ ಪ್ರಾರಂಭವಾಗುವುದೆಂದೂ ಆಹಾರ ಮಂತ್ರಿ ಶ್ರೀ ಟಿ, ಮರಿಯಪ್ಪನವರು ತಿಳಿಸಿರುವರು.

ಈ ವರ್ಷ ಸುಮಾರು ೭॥ ಲಕ್ಷ ಎಕರೆ ಗದ್ದೆಯಲ್ಲಿ ಭತ್ತದ ಪೈರು, ೨೦ ಲಕ್ಷ ಎಕರೆಗಳಲ್ಲಿ ರಾಗಿ ಬೆಳೆಯು ಆಗುತ್ತಲಿದೆಯೆಂದೂ ಕಳೆದ ವರ್ಷಕ್ಕಿಂತ ಇದು ಹೆಚ್ಚೆಂದೂ ಅವರು ತಿಳಿಸಿದರು. ಕಳೆದ ವರ್ಷ ೧,೧೬,೦೦೦ ಟನ್ನು ಭತ್ತ ಮತ್ತು ೪೦,೦೦೦ ಟನ್ ರಾಗಿ ಸಂಗ್ರಹಿಸಲಾಯಿತೆಂದೂ ತಿಳಿಸಿದರು.

ಭಾರತ ಸ್ಕೌಟು ಮತ್ತು ಗಾರ್ಡುಗಳು

ಭಾರತದಲ್ಲಿರುವ ಬಾಯ್ ಸ್ಕೌಟುಗಳ ಎರಡು ಮುಖ್ಯ ಸಂಸ್ಥೆಗಳೂ ಒಟ್ಟುಗೂಡಿಸಿ ಒಂದೇ ಸಂಸ್ಥೆಯಾಗಬೇಕೆಂದು ನಿಶ್ಚಯಮಾಡಲಾಗಿದೆ.

ಪಾಕಿಸ್ತಾನಕ್ಕೆ ಸಾಲ

ಪಾಕಿಸ್ತಾನವು ಅಮೇರಿಕಾ ಸರ್ಕಾರವನ್ನು ೪೫ ಕೋಟಿ ಡಾಲರುಗಳ ಸಾಲವನ್ನು ಕೊಡುವಂತೆ ಒತ್ತಾಯಪಡಿಸುವುದಾಗಿ ಪಾಕಿಸ್ತಾನ ಅರ್ಥಿಕಮಂತ್ರಿ ಮಿ॥ ಗುಲಾಮ್‌ಮಹಮ್ಮದ್‌ರವರು ಲಂಡನ್ನಿನಲ್ಲಿ ತಿಳಿಸಿರುವರು.

★ ಸಿರ್ಲೋಜೈಮ್ ★ಮಕ್ಕಳ ಲಿವರ್ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಭೆ

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿ ಸಭೆಯು ಇದೇ ಮಾಹೆ ೨೮ನೇ ತಾ. ಶನಿವಾರ ಮಧ್ಯಾಹ್ನ ೪ ಗಂಟೆಗೆ ಮೈಸೂರು ಧರ್ಮಪ್ರಕಾಶ ಸಾಹುಕಾರ ಡಿ. ಬನುಮಯ್ಯನವರ ಶಾಲಾ ಮಂದಿರದಲ್ಲಿ ಆರಂಭವಾಗುವುದು. ಭಾನುವಾರವೂ ಸಭೆ ನಡೆಯುವುದು. ಸಮಿತಿ ಸದಸ್ಯರುಗಳಿಗೂ ಪತ್ರಿಕಾ ಪ್ರತಿನಿಧಿಗಳಿಗೂ ಊಟ ವಸತಿ ಏರ್ಪಾಡು ಮಾಡಿದೆ. ಪತ್ರಿಕಾ ಪ್ರತಿನಿಧಿಗಳು ಸ್ವಾಗತ ಸಮಿತಿ ಕಾರ್ಯದರ್ಶಿಯವರಿಂದ ಅಗತ್ಯವಾದ ಪ್ರವೇಶ ಪತ್ರ ಮುಂತಾದುವನ್ನು ಪಡೆಯಬೇಕಾಗಿ ಕೋರಲಾಗಿದೆ.

ಭಾನುವಾರ ಬೆಳಗ್ಗೆ ೯ ಗಂಟೆಗೆ ಅಧ್ಯಕ್ಷರಿಂದ ಧ್ವಜಾರೋಹಣವಾದನಂತರ ಸಭೆ ಜರುಗುವುದು.

ಸ್ವಾಗತ ಸಮಿತಿ ಸದಸ್ಯರು

ನಗರ ಪಂಚಾಯಿತಿ ಸದಸ್ಯರೆಲ್ಲರನ್ನು ಸ್ವಾಗತಸಮಿತಿ ಸದಸ್ಯರಾಗಿ ಆರಿಸಲಾಗಿದೆ. ಅವರೆಲ್ಲರೂ ನಗರ ಕಾಂಗ್ರೆಸ್ ಕಛೇರಿಯಲ್ಲಿ ತಮ್ಮ ಬಾಡ್ಜ್ ಪಡೆಯಬಹುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪತ್ರಿಕೋದ್ಯೋಗಿಗಳ ಸಮ್ಮೇಳನ

ನವಂಬರ್ ೪ ಮತ್ತು ೫ನೇ ತಾ. ಗಳಲ್ಲಿ ನಡೆಯಲಿರುವ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದ ವ್ಯವಸ್ಥೆಗಳು ಬಹುಮಟ್ಟಿಗೆ ಮುಗಿದಿವೆ. ಪ್ರತಿನಿಧಿಗಳಿಗೆ ಹಾಗೂ ಇತರ ಆಹ್ವಾನಿತರಿಗೆ ಈಗಾಗಲೇ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಟ್ಟಿವೆ. ಪ್ರತಿನಿಧಿಗಳ ಬಿಡಾರ ಮತ್ತು ಊಟ ವಸತಿಗಾಗಿ ನಂಜರಾಜಬಹದ್ದೂರ್ ಛತ್ರದಲ್ಲಿ ಏರ್ಪಡಿಸಲಾಗಿದೆ ಎಂದು ತಿಳಿಯಬರುತ್ತದೆ.

ಪತ್ರಿಕಾಸಲಹಾ ಸಮಿತಿ ಪುನರ್ವ್ಯವಸ್ಥೆ

ಪತ್ರಿಕಾ ಸಲಹಾಸಮಿತಿಯನ್ನು ಪುನರ್ವ್ಯವಸ್ಥೆ ಮಾಡಲಾಗಿದೆ. ಇನ್ನು ಮುಂದೆ ಸಮಿತಿ ಸಭೆಗಳಿಗೆ ಶ್ರೀ ಕೆ. ಸಿ. ರೆಡ್ಡಿಯವರೇ ಅಧ್ಯಕ್ಷತೆವಹಿಸುತ್ತಾರೆ. ಸಮಿತಿ ಸದಸ್ಯರುಗಳಿವರು, ಶ್ರೀಗಳಾದ ಪೊಥಾನ್ ಜೋಸೆಫ್, ಪಿ. ಆರ್. ರಾಮಯ್ಯ, ಎಂ. ಎಸ್. ಗುರುಪಾದಸ್ವಾಮಿ, ಗೌಸ್ ಮೊಹಿಯುದ್ದಿನ್, ಕೆ. ಜೀವಣ್ಣರಾವ್, ಟಿ. ನಾರಾಯಣ, ಹೆಚ್. ಕೆ. ಕುಮಾರಸ್ವಾಮಿ, ಎಂ. ಎಸ್. ಭಾರದ್ವಾಜ್, ಶ್ರೀ|| ಎಂ. ಆರ್. ಲಕ್ಷ್ಮಮ್ಮ. ಸಭೆಗಳಲ್ಲಿ ಮೇಲ್ಕಂಡ ಸದಸ್ಯರಲ್ಲದೆ ಪ್ರಿನ್ಸಿಪಲ್ ಇನ್‌ಫರ್ಮೇಷನ್ ಆಫೀಸರ್, ಅಥವಾ ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿ ಅಥವಾ ಆವಶ್ಯಕವಿದ್ದಲ್ಲಿ ಇಬ್ಬರೂ ಭಾಗವಹಿಸುವರು.

ಅಸ್ಸಾಂ ಪರಿಹಾರ ನಿಧಿಗೆ

ಅಸ್ಸಾಂ ಪರಿಹಾರನಿಧಿಗೆ ಭೂಪಾಲ ನವಾಬರು ೫೦ ಸಾವಿರ ರೂ. ಗಳನ್ನು ಕೊಟ್ಟಿರುವರು.

● ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯುವುದು. ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಭಾಷಣಮಾಡುತ್ತಾರೆ.

● ಚಾಮುಂಡೀಪುರಂನಲ್ಲಿರುವ ಯುವಕರ ಸಂಘದ ದ್ವಿತೀಯ ವಾರ್ಷಿಕೋತ್ಸವವು ಶ್ರೀ ಕೆ. ಟಿ. ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಇಂದು ಸಂಜೆ ೬|| ಗಂಟೆಗೆ ನಡೆಯುವುದು.

ಅಕೆಡಮಿಕ್ ಕೌನ್ಸಿಲ್ ಸಭೆ

ಮೈಸೂರು ಅ. ೨೭

ವಿಶ್ವವಿದ್ಯಾಲಯದ ಅಕೆಡಮಿಕ್ ಕೌನ್ಸಿಲ್ ಸಭೆಯು ಈದಿನ ಮಧ್ಯಾಹ್ನ ಉಪಸ್ಥಾನಪತಿಗಳಾದ ಡಾ|| ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಮಾಜಿ ಸಂಸ್ಕೃತ ಪ್ರೊಫೆಸರ್ ಆಗಿದ್ದ ಶ್ರೀ ಹಿರಣಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಸಭೆಯಲ್ಲಿ ಅಂಗೀಕಾರವಾಯಿತು.

ಕೆಲಸದಿಂದ ಡಿಸ್‌ಮಿಸ್

ಗುಬ್ಬೀ ತಾಲ್ಲೂಕು ಕಡಬಾ ಹೋಬಳಿ ಸ್ಪೆಷಲ್ ರೆವೆನ್ಯು ಇನ್ಸ್‌ಪೆಕ್ಟರಾಗಿದ್ದ ಶ್ರೀ. ಟಿ. ಹುಚ್ಚಪ್ಪನವರನ್ನು ಆಹಾರ ಶೇಖರಣೆ ಕ್ರಮದಲ್ಲಿ ಅವರ ವರ್ತನೆ ಸಮರ್ಪಕವಾಗಿರಲಿಲ್ಲವಾಗಿ, ಕೆಲಸದಿಂದ ಸರ್ಕಾರದವರು ವಜಾ ಮಾಡಿದ್ದಾರೆ. ಯಾವ ಇಲಾಖೆಯಲ್ಲಿಯೂ ಅವರು ಕೆಲಸಕ್ಕೆ ಅನರ್ಹರು.

ಸರ್ಕಾರದ ಆಜ್ಞೆ

ಶ್ರೀ. ಗಳಾದ ಜೆ. ಎಂ. ಪ್ರೇಮಸಿಂಗ್, ಎಸ್. ನರಸಿಂಗರಾವ್ ಮತ್ತು ಕೆ. ವಿ. ವೆಂಕಟಗೌಡರವರನ್ನು ೧೯೫೦ ನೇ ಏಪ್ರಿಲ್ ೧ ರಿಂದ ಸರ್ಕಾರಿ ಉದ್ಯಾನವನಗಳ ಅಸಿಸ್ಟೆಂಟು ಸೂಪರಿಂಟೆಂಡೆಂಟರಾಗಿ ಸರ್ಕಾರದವರು ನೇಮಿಸಿದ್ದಾರೆ.

ನ್ಯೂಸ್‌ಪ್ರಿಂಟ್

ಹಿಮಾಲಯ ಪ್ರದೇಶದ ಅರಣ್ಯ ಸಂಪತ್ತನ್ನುಪಯೋಗಿಸಿಕೊಂಡು ಭಾರತದಲ್ಲಿಯೇ ಅಧಿಕಪ್ರಮಾಣದಲ್ಲಿ ನ್ಯೂಸ್‌ಪ್ರಿಂಟ್ ಕಾಗದವನ್ನು ತಯಾರಿಸಲು ಕೇಂದ್ರ ಸರ್ಕಾರವು ಸಂಶೋಧನೆ ನಡೆಸುತ್ತಲಿರುವರೆಂದು ವರದಿಯಾಗಿದೆ.

ಮಹಾ ಚುನಾವಣೆ

ಭಾರತದ ಮಹಾ ಚುನಾವಣೆಯು ಮುಂದಿನ ಏಪ್ರಿಲ್ ೧೪ರಿಂದ ೧೭ರವರೆಗೆ ನಡೆಯುವುದೆಂದು ಹೇಳಲಾಗಿದೆ

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು ! ಬಹು ಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೇಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು.

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೩ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ,

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ರಣಜಿತ್
20-10-50 ಶುಕ್ರವಾರದಿಂದ
ಕೆ. ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ : ಮಧುಬಾಲ † ಮೋತಿಲಾಲ್
ಮನೋರಮ † ಗೋಪ್

ಬೆಳಗಿನ ಪ್ರದರ್ಶನ
27-10-50 ರಿಂದ 3 ದಿನಗಳು ಮಾತ್ರ
ತಕದೀರ್
ಪಾತ್ರ : ಮೋತಿಲಾಲ್ - ಚಾರ್ಲಿ - ನರ್ಗಿಸ್.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು, ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ., ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೦—೧೦—೧೯೫೦ನೇ ಸೋಮವಾರ [ಸಂಚಿಕೆ ೫೮

ಅಸ್ಸಾಮಿನಲ್ಲಿ ಪುನಃ ಭೂಕಂಪ

ಅಸ್ಸಾಂಮಿನ ದಿಬ್ರೂಘರಿನಲ್ಲಿ ನಿನ್ನೆ ಮಧ್ಯಾಹ್ನ ೧೨ ಗಂಟೆವೇಳೆಗೆ ೨ ನಿಮಿಷಕಾಲ, ೧೫ ನಿಮಿಷನಂತರ ಪುನಃ ಎರಡುಬಾರಿ ಭೂಕಂಪವಾಯಿತೆಂದು ವರದಿಯಾಗಿದೆ, ಕೆಲವು ಮನೆಗಳಿಗೆ ಅಪಾಯವಾಗಿವೆ. ಪ್ರಾಣಹಾನಿಯೇನೂ ಆಗಿಲ್ಲ.

ಸತ್ಕಾರ

ಮೈಸೂರು ಅ. ೨೯

ವಸ್ತುಪ್ರದರ್ಶನಾಲಯದಲ್ಲಿ ಇಂದು ಬೆಳಗ್ಗೆ ಅಖಿಲ ಭಾರತ ವಸ್ತುಪ್ರದರ್ಶನಗಾರರ ಸಂಘದ ಆಶ್ರಯದಲ್ಲಿ ದಸರಾ ವಸ್ತುಪ್ರದರ್ಶನಕ್ಕೆ ಬಂದಿದ್ದ ಎಲ್ಲಾ ಪ್ರದರ್ಶನಗಾರರಿಗೆ ಸತ್ಕಾರಕೂಟವು ನಡೆಯಿತು. ಪ್ರದರ್ಶನ ಸಮಿತಿಯ ಅಧ್ಯಕ್ಷರಾದ ಶ್ರೀ ಆರ್. ಚೆನ್ನಿಗರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯ, ರೆವಿನ್ಯೂ ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಮುಂತಾದ ಅನೇಕ ಅತಿಥಿಗಳು ಆಗಮಿಸಿದರು.

ಉಪಹಾರವಾದನಂತರ ಸಂಘದ ಅಧ್ಯಕ್ಷ ಶ್ರೀ ಯಂ. ಎಲ್. ರಾಮಚಂದ್ರರಾಯರು ಪ್ರದರ್ಶನಗಾರರ ಹಲವಾರು ಕುಂದುಕೊರತೆಗಳನ್ನು ಅಧ್ಯಕ್ಷರ ಗಮನಕ್ಕೆ ತಂದು, ಪ್ರದರ್ಶನಗಾರರಿಗೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಕೋರಿದರು

ಶ್ರೀ ಆರ್. ಚನ್ನಿಗರಾಮಯ್ಯನವರು ಅಧ್ಯಕ್ಷಭಾಷಣದಲ್ಲಿ ಪ್ರದರ್ಶನಗಾರರೂ ಸ್ಟಾಲು ಅಲಾಟ್‌ಮೆಂಟ್ ಕಮಿಟಿಯಲ್ಲಿ ಮತ್ತೊಂದು ಜಾಗವನ್ನು ಅವರಿಗಾಗಿ ಮೀಸಲಾಗಿಡುವೆವು. ಬಾಡಿಗೆಗಳನ್ನು ಹೆಚ್ಚಿಸಿರುವ ವಿಚಾರವನ್ನು ಪ್ರಸ್ತಾಪಿಸಿ, ಅವುಗಳನ್ನು ಕಡಮೆಮಾಡಬೇಕೆಂದು ನೀವು ಕೋರಿರುವುದು ಸಮಂಜಸ. ಆದರೆ ವಸ್ತುಪ್ರದರ್ಶನದ ಆರ್ಥಿಕಸ್ಥಿತಿಯನ್ನು ನಾವು ಗಮನಿಸಬೇಕಾಗಿದೆ. ಇನ್ನೂ ಹೆಚ್ಚಿಗೆ ಸೌಲಭ್ಯಗಳನ್ನು ಕಲ್ಪಿಸಲು ಹಣವು ಬೇಕಾಗಿದೆ. ಆದಾಗ್ಯೂ ಬಾಡಿಗೆಗಳನ್ನು ಕಡಮೆಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುವೆಂದರು.

ಶ್ರೀ ಮಹದೇವಸ್ವಾಮಿಯವರು ವಂದನಾಸಮರ್ಪಣೆಯನ್ನು ಮಾಡುತ್ತಾ ಈ ಸಂಘಕ್ಕೆ ಸಮಿತಿಯವರು ವರ್ಷಕ್ಕೆರೂ ೧೦೦ ಗ್ರಾಂಟುಕೊಡುತ್ತಲಿರುವುದು ಬಹಳ ಕಡಮೆಯೆಂದು ಅದನ್ನು ಹೆಚ್ಚಿಸಬೇಕೆಂದು ಕೋರಿದರು. ಅಧ್ಯಕ್ಷರು ಈ ಗ್ರಾಂಟನ್ನು ಮುಂದಿನ ಸಾಲಿನಿಂದ ೨೦೦ ರೂ. ಗಳಿಗೆ ಹೆಚ್ಚಿಸಿರುವುದಾಗಿ ಉತ್ತರವಿತ್ತರು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಶ್ರೀ. ಪ್ರಕಾಶಂ ಮೇಲೆ ಶಿಸ್ತಿನಕ್ರಮ

ಮದರಾಸಿನ ಮಾಜಿ ಮುಖ್ಯಮಂತ್ರಿಗಳಾಗಿದ್ದು ಆಂಧ್ರಕೇಸರಿಯೆನಿಸಿದ ಶ್ರೀ ಟಿ. ಪ್ರಕಾಶಂರವರ ಮೇಲೆ ಶಿಸ್ತಿನಕ್ರಮ ತೆಗೆದುಕೊಳ್ಳುವುದು ಅಗತ್ಯವೆಂದು ಆಂಧ್ರ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನದಲ್ಲಿ ಮೊನ್ನೆ ನಿರ್ಧರಿಸಲಾಯಿತು. ಮದರಾಸಿನ ಕೆಲವು ಮಂತ್ರಿಗಳ ಮೇಲೆ ಅವರು ಹೊರಿಸಿರುವ ಆಪಾದನೆ ನಿರಾಧಾರವಾದುದೆಂದು

ಭಾರಿ ಬೆಂಕಿ ಅನಾಹುತ

ಮೊನ್ನೆ ರಾತ್ರಿ ಬೆಂಗಳೂರಿನ ಕೃಷ್ಣರಾಜೇಂದ್ರ ಮಾರ್ಕೆಟ್ ಒಳಭಾಗದಲ್ಲಿರುವ ಜವಳಿ ಅಂಗಡಿಗಳಿಗೆ ಬೆಂಕಿಬಿದ್ದು ತೀವ್ರನಷ್ಟವಾಗಿದೆ. ನಡುರಾತ್ರಿ ಸುಮಾರು ೧-೩೦ರ ಹೊತ್ತಿಗೆ ೧೦ ಅಂಗಡಿಗಳು ಭಸ್ಮವಾಗಿದ್ದವು. ಸುದ್ದಿ ತಿಳಿದ ತಕ್ಷಣವೇ ಅಗ್ನಿಶಾಮಕ ದಳದವರೂ, ಎ.ಎಸ್.ಪಿ. ಯವರೂ, ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ಆರಿಸುವ ಕಾರ್ಯದಲ್ಲಿ ನಿರತರಾದರು. ಆದರೂ ೨ಗಂಟೆಯ ಹೊತ್ತಿಗೆ ಸುಮಾರು ೨೪ ಅಂಗಡಿಗಳು ಸಂಪೂರ್ಣವಾಗಿ ಭಸ್ಮವಾಗಿದ್ದವು. ಬೆಂಕಿಯನ್ನು ಹತೋಟಿಗೆ ತರಲು ಬಹಳ ಕಷ್ಟವುಂಟಾಗುತಿತ್ತು. ಈಗ ಪರಿಸ್ಥಿತಿ ಶಾಂತವಾಗಿದೆ.

ಕಳ್ಳರೇಷನ್ ಕಾರ್ಡು ಹೋಲ್ಡರಿಗೆ ಶಿಕ್ಷೆ

ಮೈಸೂರು ನಜರ್‌ಬಾದ್ ಮೊಹಲ್ಲಾ ರಾಮಕೃಷ್ಣ ಎಂಬುವರು ಸುಳ್ಳು ಡಿಕ್ಲರೇಷನ್ ಕೊಟ್ಟು ಎರಡು ರೇಷನ್‌ಕಾರ್ಡು ಹೊಂದಿದ್ದರೆಂಬ ಆಪಾದನೆ ರುಜುವಾತಾಗಿ, ಆಪಾದಿತರಿಗೆ ೫ ದಿನ ಸಾದಾ ಸಜ ಮತ್ತು ೧೧೦ ರೂ. ಜುಲ್ಮಾನೆ ವಿಧಿಸಲಾಯಿತು. ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ೧೫ ದಿನಗಳ ಸಾದಾ ಸಜಾ ವಿಧಿಸಿದ್ದಾರೆ.

ಪತ್ರಿಕೋದ್ಯೋಗಿ ಸಮ್ಮೇಳನ

ನವಂಬರ್ ೪ ಮತ್ತು ೫ ನೇ ತಾರೀಖುಗಳಲ್ಲಿ ನಡೆಯಲಿರುವ ಈ ಸಮ್ಮೇಳನಕ್ಕೆ ಸಿದ್ಧತೆಗಳು ಬಿರುಸಾಗಿ ಸಾಗುತ್ತಿವೆ.

ಅಧಿವೇಶನದ ಪ್ರಾರಂಭೋತ್ಸವವನ್ನು ನವಂಬರ್ ೪ ನೇ ತಾರೀಖು ಶನಿವಾರ ಬೆಳಗ್ಗೆ ೧೦-೪೫ ಜಗನ್ಮೋಹನ ಭವನದಲ್ಲಿ ಶ್ರೀಮನ್ಮಹಾರಾಜರವರು ನೆರವೇರಿಸುವರು. ಪ್ರತಿನಿಧಿಗಳಿಗೆ ಊಟವಸತಿಗಳನ್ನು ನಂಜರಾಜ ಬಹದ್ದೂರ್ ಛತ್ರದಲ್ಲಿ ಏರ್ಪಡಿಸಲಾಗಿದೆ. ಅಧಿವೇಶನದ ಇತರ ಕಾರ್ಯಕಲಾಪಗಳು ಅಲ್ಲಿಯೇ ನಡೆಯುವುವು.

ದಿಬ್ರೂಘರಿಗೆ ಬಾಬುರಾಜೇಂದ್ರರು

ರಾಷ್ಟ್ರಪತಿ ರಾಜೇಂದ್ರಪ್ರಸಾದರು ದಿಬ್ರೂಘರಿಗೆ ವಿಮಾನದಲ್ಲಿ ಪ್ರಯಾಣಬೆಳೆಸಿ, ಭೂಕಂಪಪೀಡಿತ ಪ್ರದೇಶಗಳನ್ನು ಪರಿಶೀಲಿಸಿದರು. ನಿನ್ನೆ ಕಲ್ಕತೆಗೆ ವಾಪಸ್ಸಾಗಿ ಅಲ್ಲಿನ ನಿರಾಶ್ರಿತ ಶಿಬಿರಗಳಿಗೆ ಭೇಟಿಯಿತ್ತರು

ಬೊಂಬಾಯಿನಲ್ಲಿ ರೇಷನ್ ಹೆಚ್ಚಿತು

ಬೊಂಬಾಯಿ ಪ್ರಾಂತದಲ್ಲಿ ನವೆಂಬರ್ ತಿಂಗಳಿನ ಸಕ್ಕರೆ ರೇಷನ್ ಮೂರರಲ್ಲೊಂದುಪಾಲು ಹೆಚ್ಚಿಸಲಾಗಿದೆ.

ಅಸ್ಸಾಂ ಪರಿಹಾರನಿಧಿಗೆ

ತುಮಕೂರು ಪುರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಪುರಜನರ ಸಭೆ ಸೇರಿ, ತುಮಕೂರಿನಲ್ಲಿರುವ ೭,೦೦೦ ಮನೆಗಳಿಂದ ೭,೦೦೦ ರೂಪಾಯಿಗಳನ್ನಾದರೂ ಸಂಗ್ರಹಿಸಬೇಕೆಂದು ತೀರ್ಮಾನಿಸಿದ್ದಾರೆ. ಸ್ಥಳೀಯ ಜಮೀನು ಅಡಮಾನದ ಸಂಘದವರು ಈ ನಿಧಿಗೆ ೨೫ ರೂ. ದಾನಮಾಡಿದ್ದಾರೆ.

ಬೆಂಗಳೂರು ಮೇಯರ್ ಲಂಡನ್ನಿಗೆ

ಬೆಂಗಳೂರು ಮೇಯರ್ ಶ್ರೀ ಎನ್. ಕೇಶವಯ್ಯಂಗಾರ್‌ರವರನ್ನು ಇಂಗ್ಲೆಂಡಿನ ಆರೋಗ್ಯಸಚಿವರು ನವೆಂಬರ್ ೧೮ ಮತ್ತು ೧೯ರಲ್ಲಿ ನಡೆಯುವ ಪಬ್ಲಿಕ್ ಸರ್ವೀಸಸ್ ಮತ್ತು ಮುನಿಸಿಪಲ್ ಸರ್ವಿಸಸ್ ಕಾಂಗ್ರೆಸ್ಸಿನಲ್ಲಿ ಭಾಗವಹಿಸಲು ಆಹ್ವಾನಿಸಿದ್ದಾರೆ.

ಮೈಸೂರಿಗೆ ಹೆಚ್ಚಿಗೆ ಗೋಧಿ ಸರಬರಾಜು

ಮದರಾಸಿಗೆ ಫೈಲ್‌ಬ್ಯಾಂಕ್ ಜಹಜಿನಲ್ಲಿ ಬಂದಿರುವ ಏಳುಸಾವಿರ ಟನ್ ಗೋಧಿಯಲ್ಲಿ ಮೈಸೂರು ಸಂಸ್ಥಾನಕ್ಕಾಗಿ ಒಂದು ಸಾವಿರ ಟನ್ ಗೋಧಿಯನ್ನು ಸರಬರಾಜು ಮಾಡಲಾಗಿದೆಯೆಂದು ಗೊತ್ತಾಗಿದೆ.

ಹೆಚ್ಚು ಸಕ್ಕರೆ

ದೀಪಾವಳಿ ಹಬ್ಬದ ಸಲುವಾಗಿ ಸಾರ್ವಜನಿಕರ ಪ್ರಾರ್ಥನೆಯಂತೆ ನವೆಂಬರ್ ತಿಂಗಳಲ್ಲಿ ಸಂಸ್ಥಾನದ ಎಲ್ಲಾ ರೇಷನ್‌ಕಾರ್ಡ್ ಹೋಲ್ಡರುಗಳಿಗೂ ಹೆಚ್ಚು ಸಕ್ಕರೆ ಕೊಡಲು ಸರ್ಕಾರ ಆಜ್ಞೆಮಾಡಿದೆ. ೫ ಮಂದಿಯ ಕಾರ್ಡಿಗೆ ಒಂದು ಪೌಂಡ್ ಐದಕ್ಕಿಂತ ಕಡಿಮೆ ಇರುವವರಿಗೆ ಅರ್ಧ ಪೌಂಡ್ ಸಕ್ಕರೆ ಕೊಡಲಾಗುವುದು.

ಅಸ್ಸಾಂ ಪರಿಹಾರನಿಧಿ ಸಂಗ್ರಹಣ

ಸಂಸ್ಥಾನದಲ್ಲಿ ಇದುವರೆಗೆ ಮುಖ್ಯ ಮಂತ್ರಿಗಳ ಅಸ್ಸಾಂ ಪರಿಹಾರನಿಧಿಗೆ ಒಟ್ಟು ೧,೧೬.೩೭೩-೯-೦ ಶೇಖರಿಸಲಾಗಿದೆಯೆಂದು ಮೊನ್ನೆ ದಿನ ಅಧಿಕೃತವಾಗಿ ಗೊತ್ತಾಗಿದೆ.

ಮಲೇರಿಯಾ ಸಂಶೋಧನಾ ಕೇಂದ್ರ

ಹಾಸನಜಿಲ್ಲಾ ಸಕಲೇಶಪುರದಲ್ಲಿ ಒಂದು ಮಲೇರಿಯಾ ಕೇಂದ್ರವನ್ನು ಮೈಸೂರು ಸರ್ಕಾರವು ಸ್ಥಾಪಿಸಿದೆ.

ಪರೀಕ್ಷಾ ಫಲಿತಾಂಶ

ಮೈಸೂರು ವಿಶ್ವವಿದ್ಯಾನಿಲಯದ ೧೯೫೦ರ ಸೆಪ್ಟಂಬರ್ ಪರೀಕ್ಷೆಯ ಫಲಿತಾಂಶಗಳು ನವಂಬರ್ ೨ರಂದು ಬೆಳಗ್ಗೆ ೯ ಗಂಟೆಗೆ ಪ್ರಕಟಿಸಲಾಗುವುವು.

ಮೈಸೂರು ಪ್ರಾಂತೀಯ ಕಾಂ॥ ಸಮಿತಿ ಅಧಿವೇಶನ

ಅಂಗರಚನೆಯ ಪರಿಶೀಲನೆ

ಮೈಸೂರು ೨೯

ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧಿವೇಶನವು ನೆನ್ನೆ ಸಂಜೆ ಶ್ರೀ. ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಡಿ ಬನುಮಯ್ಯನವರ ಶಾಲೆಯಲ್ಲಿ ನಡೆಯಿತು. ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ಸದಸ್ಯರು ಬಂದಿದ್ದರು.

ಪ್ರಾರ್ಥನೆ, ಭಾರತ ವಾಚನ ಮತ್ತು ಲಾವಣಿಗಳಾದ ನಂತರ ಸ್ವಾಗತಾಧ್ಯಕ್ಷರಾದ ಶ್ರೀ. ಎಸ್. ಚನ್ನಯ್ಯನವರು ಭಾಷಣ ಮಾಡಿ ಸದಸ್ಯರಿಗೆ ಸುಖಾಗಮನವನ್ನು ಬಯಸಿದರು. [illegible] ಮೈಸೂರು ಪ್ರಾಂತೀಯ ಕಾಂಗ್ರೆಸ್ಸಿನ ಮೇಲೆ ಈಗ ಬಲವಾದ ಹೊರೆ ಬಿದ್ದಿದೆ ನಮ್ಮ ಸ್ವಾತಂತ್ರ್ಯದ ತಾರುಣ್ಯದಲ್ಲಿ ಸ್ವಾಭಾವಿಕವಾದ, ಅಸ್ವಾಭಾವಿಕವಾದ ಸಮಸ್ಯೆಗಳು ಹುಟ್ಟಿಕೊಳ್ಳುವುದು ಸ್ವಾಭಾವಿಕ. ತಾನು ಕಷ್ಟಪಟ್ಟು ಬೆವರು ಸುರಿಸಿ ಬೇಸಾಯ ಮಾಡಿದ ಭೂಮಿಯಲ್ಲಿ ಹುಟ್ಟಿಕೊಂಡ ಕಳೆಯನ್ನೆಲ್ಲ ಕಿತ್ತು ಒಳ್ಳೆಯ ಬೆಳೆಗೆ ಅವಕಾಶ ಮಾಡಿಕೊಡುವ ರೈತನಗಿರುವಂತಹ ಜವಾಬ್ದಾರಿ ಇಂದು ಈ ಕಾಂಗ್ರೆಸ್ ಸಮಿತಿಯ ಮೇಲಿದೆ.

ಗಾಂಧೀಜಿ ಈ ಪುಣ್ಯಭೂಮಿಯಲ್ಲಿ ರಾಮರಾಜ್ಯ ಸ್ಥಾಪಿಸಲು ಹಾತೊರೆಯುತ್ತಿದ್ದರು. ಅವರು ನಮಗೆಲ್ಲ ಆ ಮಂತ್ರವನ್ನು ಉಪದೇಶಿಸಿ ಹೋಗಿದ್ದಾರೆ. ರಾಮರಾಜ್ಯದ ಸಾಧನೆಗೆ ದಾರಿ ತೋರಿಹೋಗಿದ್ದಾರೆ. ನಮಗೆ ಆ ಸಾಧನೆಯಲ್ಲಿ ಸಂಭವಿಸುವ ಕತ್ತಲೆಯ ಪರಿಹಾರಕ್ಕೆ ನಂದಾದೀವಿಗೆ ಹಚ್ಚಿಹೋಗಿದ್ದಾರೆ. ಕಣ್ಣುಮುಚ್ಚಿದವರಿಗೆ ಇದೆಲ್ಲ ಕಾಣುವುದಿಲ್ಲ. ಬರೀ ಸ್ವಾರ್ಥಪರರಿಗೆ ಇದೆಲ್ಲ ಗೊತ್ತಾಗುವುದಿಲ್ಲ. ಬರೀ ಹಕ್ಕಿಗಾಗಿ ಹೊಡೆದಾಡುವವರಿಗೆ ಇದರ ಅರ್ಥವಾಗುವುದಿಲ್ಲ.

ಶ್ರದ್ಧಾವಂತರಿಗೆ ತ್ಯಾಗ ಬುದ್ಧಿ ಇರುವವರಿಗೆ, ಕರ್ತವ್ಯಪರರಿಗೆ ಆ ಮಹಾಮಹಿಮ ತೋರಿಕೊಟ್ಟ ದಾರಿ ಸ್ಪಷ್ಟವಾಗಿ ಕಾಣುತ್ತದೆ. ಆ ಸತ್ಯಪಥದಲ್ಲಿ ನಾವು ತಮ್ಮ ಕೈಲಾದಷ್ಟು ದೂರ ನಡೆದರೆ ಆಗ ರಾಮರಾಜ್ಯ ಸಾಧನೆಯ ಸೇತು ಬಂಧನಕ್ಕೆ ಕೈಲಾದ ನೆರವು ನೀಡಿದ ಕೃತಾರ್ಥತೆಯನ್ನು ಪಡೆಯುತ್ತೇವೆ. ಆಗ ನಮ್ಮ ನಾಡಿನಲ್ಲಿ ಸರ್ವಸಂಪತ್ತು ನೆಲೆಸುತ್ತದೆ. ಮೇಲುಕೀಳುಭಾವನೆ ಅಳಿಯುತ್ತದೆ. ಬಡವ ಬಲ್ಲಿದ ಭೇದ ಮಾಯವಾಗುತ್ತದೆ. ಸೋಮಾರಿತನ ಇಲ್ಲವಾಗುತ್ತದೆ. ಎಲ್ಲರೂ ಶ್ರದ್ಧಾಸಕ್ತಿಯಿಂದ ದುಡಿಯುವಂತಾಗುತ್ತದೆ. ಅನಾಚಾರ ನಿಲ್ಲುತ್ತದೆ. ಜನ ನೆಮ್ಮದಿಯಿಂದ ಬಾಳುವಂತಾಗುತ್ತದೆ. ಧರ್ಮ ನಾಲ್ಕು ಹೆಜ್ಜೆಯೂರಿ ನಿಲ್ಲುತ್ತದೆ.

ಈ ರಾಮರಾಜ್ಯ ಸ್ಥಾಪನೆಯ ಜವಾಬ್ದಾರಿ ಈ ಸಮಿತಿಯ ಮೇಲಿದೆ. ಈ ಸಮಿತಿಯ ಸದಸ್ಯರು ಮಹಾತ್ಮಾ ಗಾಂಧೀಜಿ ಹಚ್ಚಿಸಿಹೋದ ನಂದಾ ದೀವಿಗೆಯಿಂದ ಪಡೆದ ಜ್ಯೋತಿಗಳನ್ನು ಹಿಡಿದು ಈ ನಾಡನ್ನು ಬೆಳಗುವಂತಾಗಲಿ. ನಮ್ಮ ಸತ್ಕಾರ್ಯದಿಂದ ದೇಶದಲ್ಲಿ ಸುಭಿಕ್ಷ ಉಂಟಾಗುವಂತಾಗಲಿ. ಜನರು ಕರ್ತವ್ಯಪರರಾಗಿ ಧರ್ಮಾತ್ಮರಾಗಿ ನಡೆಯುವಂತಾಗಲಿ. ಆಡಳಿತ ವರ್ಗ ಸತ್ಯವಾಗಿ, ನಿರ್ಭಯವಾಗಿ, ಕರ್ತವ್ಯಪರವಾಗಿ ಕೆಲಸ ಮಾಡುವಂತಾಗಲಿ.

ತಮಿಳುನಾಡು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕಾಮರಾಜ ನಾಡರ್‌ರವರಿಂದಲೂ ಶ್ರೀ. ಕೆ. ಪಟ್ಟಾಭಿರಾಮರವರಿಂದಲೂ ಬಂದಿದ್ದ ಶುಭ ಸಂದೇಶಗಳನ್ನು ಓದಲಾಯಿತು.

ಅಧ್ಯಕ್ಷರು ಭಾಷಣ ಮಾಡಿ ಕಾಂ॥ ಸಂಸ್ಥೆಗೆ ಹೊಸ ಉತ್ಸಾಹವುಬಂದು ಅದರ ಕಾರ್ಯಕ್ಷೇತ್ರವು ವಿಸ್ತಾರವಾಗಬೇಕೆಂದು ತಿಳಿಸಿದರು ಭಾ॥ ರಾಜ್ಯಾಂಗಕ್ಕೂ ಬ್ರಿ॥ ರಾಜ್ಯಾಂಗಕ್ಕೂ ವಿಶೇಷ ಹೋಲಿಕೆಯಿರುವುದರಿಂದ ಅದರ ಮಾದರಿಯಲ್ಲಿಯೇ ನಮ್ಮ ದೇಶದಲ್ಲೂ ಸುಧಾರಣೆಗಳಾಬೇಕೆಂದು ಸೂಚಿಸಿದರು. ಸರ್ವರೂ ಕಾಂಗ್ರೆಸ್ ಸಂಸ್ಥೆಗೆ ನೆರವು ನೀಡಿ ಅದರ ಕಾರ್ಯಕಲಾಪಗಳು ಯಶಸ್ವಿಯಾಗಲು ಸಹಾಯವಾಗಬೇಕೆಂದು ಕೋರಿದರು.

ತರುವಾಯ ಶ್ರೀ. ಎ. ಜಿ. ರಾಮಚಂದ್ರರಾಯರು ಕಾಂಗ್ರೆಸ್ ಸಮಿತಿ ಅಂಗರಚನೆಯನ್ನು ಮಂಡಿಸಿದರು. ರಾತ್ರಿ ೮ ಗಂಟೆವರೆವಿಗೆ ಇವುಗಳ ಮೇಲೆ ಚರ್ಚೆ ನಡೆದು ಈ ದಿನಕ್ಕೆ ಮುಂದುವರಿದುವು.

ಚುನಾವಣೆ ಮತ್ತು ನಾಮಕರಣದ ಏರ್ಪಾಡಿಗೆ ಒಪ್ಪಿಗೆ

ಮೊನ್ನೆ ಮತ್ತು ನಿನ್ನೆ ಬೆಳಗ್ಗೆ ಮೈಸೂರು ಪ್ರಾಂತೀಯ ಕಾಂಗ್ರೆಸ್ಸಿನ ಅಂಗರಚನೆಯ ನಿಬಂಧನೆಗಳನ್ನು ಕ್ರಮ ಪ್ರಕಾರವಾಗಿ ತೆಗೆದುಕೊಂಡು ಅಂಗೀಕರಿಸಲಾಯಿತು. ಕಾಂಗ್ರೆಸ್ ಪಂಚಾಯಿತಿ, ತಾಲ್ಲೂಕು, ಜಿಲ್ಲಾ ಸಮಿತಿಗಳಿರಬೇಕೆಂದು ಗೊತ್ತುಮಾಡಲ್ಪಟ್ಟಿತು. ವಿವಿಧ ಸಮಿತಿಗಳಿಗೆ ಚುನಾವಣೆಗೆ ನಿಲ್ಲುವ ಉಮೇದುವಾರರ ಅರ್ಹತೆಯನ್ನು ತೀರ್ಮಾನ ಮಾಡುವ ಪ್ರಾಂತೀಯ ಕ್ರೆಡೆಷಿಯಲ್ ಸಮಿತಿ ಮತ್ತು ಚುನಾವಣೆಗಳ ನ್ಯಾಯಾನ್ಯಾಯಗಳನ್ನು ಇತ್ಯರ್ಥ ಮಾಡುವ ಟ್ರಿಬ್ಯೂನಲ್ಲುಗಳ ಸ್ಥಾಪನೆಯನ್ನು ಒಪ್ಪಲಾಯಿತು

ಮೈಸೂರು ಪ್ರಾಂತಿಯ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಲಿಗೆ ಒಬ್ಬ ಅಧ್ಯಕ್ಷರು, ೫ ಜನ ಅಧ್ಯಕ್ಷರಿಂದ ನಾಮಕರಣವಾದ ಅಧಿಕಾರಿ ವರ್ಗದ ಸದಸ್ಯರು ಮತ್ತು ೧೧ ಜನ ಸದಸ್ಯರಿರಬೇಕೆಂಬ ನಿಬಂಧನೆಯನ್ನು ಮಾಡಲಾಯಿತು. ಈ ಹನ್ನೊಂದು ಜನ ಸದಸ್ಯರನ್ನು ಚುನಾಯಿತರಾಗಿದ್ದ ಸಮಿತಿಯು ಇಚ್ಛೆ ಪಟ್ಟರೆ ಅಧ್ಯಕ್ಷರಿಂದಲೇ ನಾಮಕರಣವಾಗತಕ್ಕದ್ದೆಂಬುದಾಗಿ ಬಂದಿದ್ದ ನಿರ್ಣಯದ ಬಗ್ಗೆ ವಿಪುಲ ಚರ್ಚೆಯಾಗಿ ನಿರ್ಣಯವು ಅಂಗೀಕೃತವಾಯಿತು.

ಮೈಸೂರು ಪ್ರಾಂತೀಯ ಕಾಂಗ್ರೆಸ್ಸಿನಲ್ಲಿ ೧೧ ಜಿಲ್ಲಾ ಸಮಿತಿಗಳಿರಬೇಕೆಂಬ ಮತ್ತೊಂದು ನಿಬಂಧನೆಯನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಯಿತು. ದಂಡಿನ ಪ್ರದೇಶದವರಿಗೆ ಪ್ರತ್ಯೇಕ ಜಿಲ್ಲಾ ಸಮಿತಿ ಸ್ಥಾನವನ್ನು ಕೋರಿ ಬರೆದಿದ್ದ ಪತ್ರವನ್ನು ಪರಿಶೀಲಿಸಿ ಅವರು ಕೇಳುವ ಹಕ್ಕನ್ನು ಕೊಡಲು ಸಭೆಯ ಅನುಮತಿ ಕೊಡಲಿಲ್ಲ.

ತಾಲ್ಲೂಕುಗಳಿಂದ ಜಿಲ್ಲಾ ಸಮಿತಿಗಳಿಗೆ ಇಬ್ಬಿಬ್ಬರಂತೆ ಸದಸ್ಯರನ್ನು ತೆಗೆದುಕೊಳ್ಳುವ ಬಗ್ಗೆ ಒಪ್ಪಿ, ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಮೂರು ಜನರನ್ನು ತೆಗೆದುಕೊಳ್ಳಬಹುದೆಂದು ವಿನಾಯಿತಿ ಕೊಡಲಾಯಿತು.

ಬಹುಮಾನ ವಿನಿಯೋಗ

ಮೈಸೂರು ಅ. ೨೮

ಮೈಸೂರು ದಸರಾ ವಸ್ತುಪ್ರದರ್ಶನದ ಬಹುಮಾನ ಸಮಾರಂಭವು ನಿನ್ನೆ ಸಂಜೆ ನಡೆಯಿತು. ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಬಹುಮಾನವಿನಿಯೋಗ ಮಾಡಿದರು.

ಶ್ರೀಮತಿ ಚೊಕ್ಕಮ್ಮನವರಿಂದ ಸುಶ್ರಾವ್ಯವಾದ ಸಂಗೀತವಾದನಂತರ ಉಪಾಧ್ಯಕ್ಷ ಶ್ರೀ ಕೆ. ನಾರಾಯಣಸ್ವಾಮಿಯವರು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಆರ್ಥಿಕಮಂತ್ರಿ ಶ್ರೀ ಹೆಚ್. ಸಿ. ದಾಸಪ್ಪ ಕಾರ್ಮಿಕಮಂತ್ರಿ ಶ್ರೀ ಕೆ. ಟಿ. ಭಾಷ್ಯಂ ಮತ್ತು ಗೃಹಮಂತ್ರಿ ಶ್ರೀ ಟಿ. ಮರಿಯಪ್ಪನವರಿಂದ ಬಂದಿದ್ದ ಸಂದೇಶಗಳನ್ನು ಓದಿದನಂತರ ತಮ್ಮ ವರದಿಯನ್ನು ಓದಿದರು. ಕೇಂದ್ರ ಸರ್ಕಾರದ ಪ್ರದರ್ಶನಕ್ಕಾಗಿ ಕಳುಹಿಸಿದ್ದ ಜಪಾನಿನ ವಾದ್ಯಗೋಷ್ಠಿಯ ಸೆಟ್ಟು, ವೆಲ್‌ಆಫ್‌ಡೆತ್ ಸೈಕಲ್ಲು ನಡೆಸುವ ಚಾತುರ್ಯ, ಮುಂತಾದುವೆಲ್ಲವೂ ಆಕರ್ಷಣೀಯವಾಗಿತ್ತೆಂದೂ ಈಸಲ ಸುಮಾರು ೩ ಲಕ್ಷ ಪ್ರೇಕ್ಷಕರು ವಸ್ತುಪ್ರದರ್ಶನಾಲಯಕ್ಕೆ ಭೇಟಿಯಿತ್ತಿರುವುದಾಗಿ ತಿಳಿಸಿದರು.

ಅನಂತರ ಶ್ರೀ ಕೆ. ಹನುಮಂತಯ್ಯನವರು ಬಹುಮಾನವಿನಿಯೋಗ ಮಾಡಿದರು. ಪ್ರದರ್ಶನ ಸಮಿತಿಯ ಕಾರ್ಯದರ್ಶಿ ಶ್ರೀ. ಕೆ. ವಿಜಯಂರವರು ಚಿನ್ನದ ಪದಕ ಸರ್ಟಿಫಿಕೇಟನ್ನು ಪಡೆದಿರುವವರ ಹೆಸರನ್ನು ಓದಿದರು. ಪ್ರದರ್ಶನಾಲಯದಲ್ಲಿಟ್ಟಿರುವ ಕೆಲ್‌ಕಂಹೊಟೇಲಿನವರು ಅಂಬಾಳ್‌ನಶ್ಯ, ವೆಸ್ಲಿಪ್ರೆಸ್, ಪೇಪರ್‌ಮಿಲ್ಸ್, ವಿವಿಧ ಕೈಗಾರಿಕಾ ಸಂಸ್ಥೆ ಮುಂತಾದ ಅನೇಕ ಸರ್ಕಾರಿ, ಖಾಸಗೀ ಮುಂತಾದ ಪ್ರದರ್ಶನಕಾರರಿಗೆ ಚಿನ್ನದ ಪದಕ ಸರ್ಟಿಫಿಕೇಟನ್ನು ಕೊಡಲಾಯಿತು.

ಅನಂತರ ಕೆ. ಹನುಮಂತಯ್ಯನವರು ಮಾತನಾಡುತ್ತ, ವಸ್ತುಪ್ರದರ್ಶನವು ಬರೀ ಮನರಂಜನೆಗಲ್ಲದೆ ಜ್ಞಾನ ವಿದ್ಯಾರ್ಜನೆಗೆ ಸಹಾಯವಾಗುವಂತೇರ್ಪಡಿಸುವುದೇ ಪ್ರದರ್ಶನದ ಮುಖ್ಯಧ್ಯೇಯವಿರಬೇಕೆಂದೂ, ಈ ಧ್ಯೇಯದಿಂದಲೇ ಮೈಸೂರು ವಸ್ತುಪ್ರದರ್ಶನವು ನಡೆಯುತ್ತ ಕೀರ್ತಿಗಳಿಸಿದೆಯೆಂದು ತಿಳಿಸಿ, ಜ್ಞಾನಾರ್ಜನೆಗೆ ಉಪಯುಕ್ತವಾಗುವಂತಹ ಪ್ರದರ್ಶನವನ್ನು ಪ್ರತ್ಯೇಕವಾಗಿ ಒಂದೆಡೆ, ಏರ್ಪಡಿಸಿದಲ್ಲಿ ಜನರಿಗೆ ವಿಶೇಷ ಪ್ರಯೋಜನವಾಗುವುದೆಂದು ಹೇಳಿದರು. ಅಲ್ಲದೆ ಇನ್ನು ಮುಂದೆ ಪ್ರದರ್ಶನವನ್ನು—ಮನರಂಜನೆ ವ್ಯಾಪಾರ ಮತ್ತು ಜ್ಞಾನಾರ್ಜನೆಗೆ ಸಾಧನವಾದುದು ಎಂಬ ಮೂರು ಭಾಗಗಳಾಗಿ ವಿಭಾಗಿಸಿ ನಡೆಸಬೇಕೆಂದು ಸೂಚಿಸಿದರು.

ಮಕ್ಕಳ ಸಂಗೀತ ಮತ್ತು ವಿವಿಧವಿನೋದಾವಳಿಯೊಡನೆ ಸಭೆಯು ಮುಕ್ತಾಯವಾಯಿತು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು
ಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSO I

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೧—೧೦—೧೯೫೦ನೇ ಮಂಗಳವಾರ [ಸಂಚಿಕೆ ೨೯೮

ಟಿಬೆಟ್‌ನಲ್ಲಿ ಬಿರುಸಾದ ಕದನ

ನಿಜವಾದ ಉದ್ದೇಶ ತಿಳಿಯದು

ರಷ್ಯಾ ಪ್ರೇರೇಪಣೆಯಿಂದ ಚೀಣಾ ಆಕ್ರಮಣವಿರಬಹುದು

ಭಾರತ ಪ್ರಧಾನಿ ಪಂಡಿತ ನೆಹರೂರವರು ಕಾಶ್ಮೀರದಲ್ಲಿ ಮಾತನಾಡುತ್ತಾ, ಚೀಣಾವು ಟಿಬೆಟ್ಟಿನ ಮೇಲೆ ಮಾಡಿರುವ ಆಕ್ರಮಣಕ್ಕೆ ಸರಿಯಾದ ಕಾರಣ, ಉದ್ದೇಶಗಳು ತಮಗೆ ತಿಳಿದಿಲ್ಲ ಆದರೆ ಟಿಬೆಟ್ಟಿನಲ್ಲಿ ಕೆಲವೆಡೆ ಚೀಣಾಸೈನ್ಯಗಳನ್ನಿಡಲು ಅಧಿಕಾರ ಹಿಂದೆಯೆ ಕೊಡಲಾಗಿದೆ. ಅಮೇರಿಕಾ ನೀತಿಯು ಚೀಣಾದ ಮೇಲೆ ಈ ಪರಿಣಾಮವನ್ನುಂಟುಮಾಡಿದೆ ಮಿ॥ ಚಿಯಾಂಗ್ ಶೇಕ್‌ರಿಗೆ ಅಮೆರಿಕಾ ನೀಡುತ್ತಲಿರುವ ಸಹಾಯವು ಈ ಆಕ್ರಮಣಕ್ಕೆ ಒಂದು ಕಾರಣವಿರಬಹುದು. ರಷ್ಯಾ ಪ್ರೇರೇಪಣೆಯಿಂದ ಈ ಆಕ್ರಮಣವಿದ್ದರೂ ಇರಬಹುದು. ಟಿಬೆಟ್ ಸ್ವಾತಂತ್ರ್ಯಾಧಿಕಾರ ಪಡೆದಿದೆ ಈ ಆಕ್ರಮಣದಿಂದ ಟಿಬೆಟ್ಟಿನ ಲಡಕ್ಕಾನ ಮೇಲೆ ಯಾವ ಪರಿಣಾಮವೂ ಇಲ್ಲ. ಟಿಬೆಟ್ಟು ಭಾರತವನ್ನು ಮಧ್ಯಸ್ಥಿಕೆಗಾಗಿ ಪುನಃ ಕೇಳಿದೆ. ಸೈನ್ಯ ಸಹಾಯವನ್ನೇನೂ ಕೇಳಿಲ್ಲ. ಭಾರತವು ಪೀಕಿಂಗ್‌ಗೆ ಬರೆದಿರುವ ಪತ್ರಕ್ಕೆ ಇನ್ನೂ ಉತ್ತರ ಬಂದಿಲ್ಲ ಟಿಬೆಟ್ಟಿನ ಪೀಕಿಂಗ್‌ನಲ್ಲಿ ಕದನ ನಡೆಯುತ್ತಲಿದೆಯೆಂದೂ, ಚಾಂಡೋದಲ್ಲಿ ಚೀಣಾವು ೫೦,೦೦೦ ಮಂದಿ ಸೈನ್ಯ ಬಲವನ್ನಿಟ್ಟಿದೆಯೆಂದೂ, ಟಿಬೆಟ್ಟಿನ ಗಡಿಯ ಬಳಿ ಬಿರುಸಾಗಿ ಕದನ ನಡೆಯುತ್ತಲಿದೆಯೆಂಬ ವರದಿಗಳು ಬಂದಿವೆಯೆಂದು ತಿಳಿಸಿದರು.

ವಿಶ್ವಶಾಂತಿ ಮನವಿ-ಮೈಸೂರಿನಲ್ಲಿ

ಇಡೀ ಮಾನವಕೋಟಿ ವಿನಾಶಕಾರಿಯಾದ ಅಣು ಶಸ್ತ್ರಾಸ್ತ್ರವನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದೂ, ಅಣು ಶಕ್ತಿಯನ್ನು ಕಠಿಣ ಅಂತರರಾಷ್ಟ್ರೀಯ ಹತೋಟಿಯಲ್ಲಿಡಬೇಕೆಂದೂ, ಅಣು ಬಾಂಬನ್ನು ಯುದ್ಧದಲ್ಲಿ ಮೊದಲು ಯಾರು ಪ್ರಯೋಗಿಸುವರೋ ಅವರನ್ನು ಯುದ್ಧ ಪಾತಕಿಯೆಂದು ಪರಿಗಣಿಸಬೇಕೆಂದೂ ತಿಳಿಸಿ, ಈ ಶಾಂತಿಮನವಿಗೆ ವಿಶ್ವದ ಸಜ್ಜನರೆಲ್ಲರೂ ಸಹಿ ಹಾಕಬೇಕೆಂದು ಕೋರಿರುವ ವಿಶ್ವ ಶಾಂತಿಸಮ್ಮೇಳನದ ಸ್ಟಾಕ್‌ಹೋಂ ಶಾಂತಿಮನವಿಗೆ ಮೈಸೂರಿನಲ್ಲಿ ಶ್ರೀಗಳಾದ ಕೆ. ಹನುಮಂತಯ್ಯನವರು, ಸಾಹುಕಾರ್ ಎಸ್. ಚೆನ್ನಯ್ಯನವರು, ಜಸ್ಟಿಸ್ ವೆಂಕಟರಾಮಯ್ಯನವರು, ಲೇಡಿ ಲೋಕಸುಂದರಿ ರಾಮನ್, ಜನಾಬ್ ಮಿರ್ಜಾನೂರ್ ಹುಸೇನ್ ಆದಿಯಾಗಿ ಕಾಲೇಜು ಪ್ರೊಫೆಸರುಗಳೂ, ಡಾಕ್ಟರುಗಳೂ, ಉಪಾಧ್ಯಾಯರೂ, ವರ್ತಕರೂ ವಿದ್ಯಾರ್ಥಿಗಳೂ ಒಟ್ಟಿನಲ್ಲಿ ೩,೫೦೦ ಜನರು (ಮೈಸೂರು ನಗರ ಮಾತ್ರ) ಸಹಿ ಹಾಕಿದ್ದಾರೆಂದು ಮೈಸೂರು ಶಾಂತಿ ಸಮಿತಿಯ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಅಸ್ಸಾಂ ಪರಿಹಾರನಿಧಿಗೆ

ಅಸ್ಸಾಂ ಪರಿಹಾರನಿಧಿಗೆ ಪೂರ್ವ ಆಫ್ರಿಕದಲ್ಲಿರುವ ಭಾರತೀಯರು ೩೦,೦೦೦ ರೂ. ಗಳ ಸಹಾಯ ನೀಡಿರುವರು.

ಮೈಸೂರು ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಕೆಲಸಗಾರರು ೧೦೦೧ ರೂ. ಗಳನ್ನೂ, ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಅಂಜುಮಾನ್ ಸಂಘದವರು ೧೦೦ ರೂ. ಗಳನ್ನೂ, ಪೌರ ಸಭಾ ಸದಸ್ಯರಾದ ಶ್ರೀ ಸೀತಾರಾಮಯ್ಯನವರು ೨೮೨ ರೂ. ಗಳನ್ನು ಮೇಲ್ಕಂಡ ನಿಧಿಗೆ ಸಾರ್ವಜನಿಕರಿಂದ ವಸೂಲುಮಾಡಿ ಕಳುಹಿಸಿರುತ್ತಾರೆ

ತಿರಸ್ಕಾರ

ಅಣುಬಾಂಬು ನಿಷೇಧ ಮತ್ತು ಮಹಾರಾಷ್ಟ್ರಗಳು ತಮ್ಮ ಸೈನ್ಯವನ್ನು ⅓ ಭಾಗ ಕಡಿಮೆ ಮಾಡಿಕೊಳ್ಳಬೇಕೆಂದು, ವಿಶ್ವಸಂಸ್ಥೆಯಲ್ಲಿ ರಷ್ಯಾವು ಮಂಡಿಸಿದ್ದ ಶಾಂತಿ ಯೋಜನೆಯು ರಾಜಕೀಯ ಸಮಿತಿಯಲ್ಲಿ ತಿರಸ್ಕೃತವಾಯಿತು.

ಕೊರಿಯಾದಲ್ಲಿ ಚೀಣಾ ಸೈನ್ಯ

ಉತ್ತರ ಕೊರಿಯಾದಲ್ಲಿ ಚೀಣಾದ ಒಂದು ರೆಜಿಮೆಂಟು ಇದೆಯೆಂದು ಅಮೇರಿಕನ್ ಸೈನ್ಯಗಳು ತಿಳಿಸಿವೆ.

ಕಾಶ್ಮೀರ ರಾಜ್ಯಾಂಗ ಸಭೆ

ಕಾಶ್ಮೀರ ತನ್ನ ರಾಜ್ಯಾಂಗ, ರಾಜಕೀಯ ಭವಿಷ್ಯ ಮತ್ತು ಯಾವ ದೇಶದೊಡನೆ ಐಕ್ಯವಾಗಬೇಕೆಂಬುದನ್ನು ನಿರ್ಧರಿಸಲು ಹಿಂದೆಯೇ ರಾಜ್ಯಾಂಗ ಸಭೆಯನ್ನು ರಚಿಸಿಕೊಳ್ಳಲು ನಿರ್ಧರಿಸಿತ್ತು. ಕಿಲ್ಲಯ ಕದನಗಳಿಂದ ಈ ಯೋಜನೆಗಳನ್ನು ತಾತ್ಕಾಲಿಕವಾಗಿ ಬಿಡಲಾಯಿತು ವಿಶ್ವಸಂಸ್ಥೆಯ, ಇನ್ನೂ ಯಾವ ಪರಿಹಾರವನ್ನು ಕಂಡು ಹಿಡಿಯದಿರುವುದು ಎಲ್ಲರಲ್ಲಿಯೂ ಅಸಮಾಧಾನವನ್ನುಂಟುಮಾಡಿದೆ ಈ ಸಭೆಯನ್ನು ರಚಿಸಿಕೊಳ್ಳುವುದು ಶಾಂತಿಯುತ ಒಪ್ಪಂದಕ್ಕೆ ಮಾರ್ಗವಾಗುವುದು ಎಂದು ಪಂ॥ ನೆಹರೂರವರು ಕಾಶ್ಮೀರದಲ್ಲಿ ಮಾತನಾಡುತ್ತಾ ತಿಳಿಸಿದರು.

ಮುನ್ಸೀಫರಾಗಿ ನೇಮಕ

ರಾಮನಗರದ ಅಡ್ವೋಕೇಟ್ ಶ್ರೀ. ಎಲ್. ಲಿಂಗೇಗೌಡ ಮತ್ತು ಮೈಸೂರಿನ ಪ್ಲೀಡರ್ ಶ್ರೀ ಎಂ. ಎಲ್ ರಾಮಸ್ವಾಮಿಯವರನ್ನು ಮುನ್ಸೀಫರಾಗಿ ನೇಮಿಸಿ, ಶ್ರೀ. ಲಿಂಗೇಗೌಡರನ್ನು ತರೀಕೆರೆಗೆ, ಶ್ರೀ ರಾಮಸ್ವಾಮಿಯವರನ್ನು ನರಸಿಂಹರಾಜಪುರಕ್ಕೆ ಪೋಸ್ಟ್ ಮಾಡಲಾಗಿದೆ

ಹೈದರಾಬಾದಿನಿಂದ ಸರ್ದಾರ್ ಪಟೇಲರಿಗೆ

ಹೈದರಾಬಾದ್ ಸಂಸ್ಥಾನದ ಕಾಂಗ್ರೆಸ್ ಸಂಸ್ಥೆಯು 'ಸರ್ದಾರ್' ಪಟೇಲರ ೭೫ ಜನ್ಮೋತ್ಸವ ದಿನ. ಅವರು ಹೈದರಾಬಾದಿಗೆ ಭೇಟಿಕೊಟ್ಟ ಛಾಯಾ ಚಿತ್ರಗಳನ್ನೂ ಮತ್ತು ಅವರು ಹೈದರಾಬಾದಿನ ಬಗ್ಗೆ ಮಾಡಿದ ಭಾಷಣಗಳನ್ನೊಳಗೊಂಡ ಆಕರ್ಷಣೀಯವಾದ "ಸವಿನೇರ್‌ನ್ನು ಇಂದು ಅಹಮದಾಬಾದಿನಲ್ಲಿ ಸಮರ್ಪಿಸಲಿರುವರು.

ಮನ್ನಣೆಯಿಲ್ಲ

ವಿಶ್ವಸಂಸ್ಥೆಗೆ ಸಕ್ರೆಟರಿ ಜನರಲ್‌ರನ್ನು ಚುನಾಯಿಸುವ ವಿಷಯವಾಗಿ ಚರ್ಚೆ ನಡೆಸಲು ಗುಪ್ತ ಅಧಿವೇಶನವು ಸೇರಿತ್ತು. ಪುನಃ ಮಿ॥ ಟ್ರಿಗ್ವೆಲಿಯವರನ್ನೇ ಚುನಾಯಿಸಿದಲ್ಲಿ ತಾವು ಮನ್ನಣೆಯೂ ಮಾಡುವುದಿಲ್ಲವೆಂದು ರಷ್ಯಾ ಪ್ರತಿನಿಧಿ ಮಿ॥ ಮಾಲಿಕ್‌ರವರು ತಿಳಿಸಿರುವರು.

ಕಾರ್ಪೊರೇಷನ್ ಚುನಾವಣೆ

ಬೆಂಗಳೂರುನಗರ ಕಾರ್ಪೊರೇಷನ್ ಚುನಾವಣೆ ಡಿಸೆಂಬರ್ ತಿಂಗಳ ಮೂರನೇವಾರದಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಮದರಾಸು ನಗರದಲ್ಲಿ ಪ್ರತಿಬಂಧಕಾಜ್ಞೆ

ಮದರಾಸು ನಗರದಲ್ಲಿ ಡಿಸೆಂಬರ್ ೩೧ರವರೆಗೆ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ರಹದಾರಿಯಿಲ್ಲದೆ ನಡೆಸಕೂಡದೆಂದು ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಿದ್ದಾರೆ

ಬ್ರಿಟನ್-ನೇಪಾಲಕ್ಕೆ ಒಪ್ಪಂದ

ಬ್ರಿಟನ್ ಮತ್ತು ನೇಪಾಲಕ್ಕೆ ರಾಜಕೀಯ ಒಪ್ಪಂದವಾಗಿದೆ ಈ ಒಪ್ಪಂದದಪ್ರಕಾರ ಒಂದು ದೇಶದವರು ಮತ್ತೊಂದು ದೇಶಕ್ಕೆ ಸುಲಭವಾಗಿ ಹೋಗಬಹುದು. ಈ ಒಪ್ಪಂದದ ಅವಧಿಯು ಅನಿರ್ದಿಷ್ಟವಾಗಿದೆ.

ಥೈಲ್ಯಾಂಡಿಗೆ ಸಾಲ

ವಿಶ್ವಬ್ಯಾಂಕು ಥೈಲ್ಯಾಂಡಿಗೆ ೨೫ ಮಿಲಿಯನ್ ಡಾಲರುಗಳ ಸಾಲವನ್ನು ಕೊಟ್ಟಿದೆ.

ಬೆಲ್ಲದ ಬೆಲೆ

ಬೆಂಗಳೂರು ೬. ೭

೩ ಪೌಂಡಿನ ವೀಸೆಗೆ ರೂ. ೦-೧೨-೩ ಗೆ ಹೆಚ್ಚಿನ ಬೆಲೆಗೆ ಸಂಸ್ಥಾನದಲ್ಲಿ ಬೆಲ್ಲವನ್ನು ಚಿಲ್ಲರೆಯಾಗಿ ಆಗಲಿ, ಒಟ್ಟಾಗಿಯಾಗಲೀ ಮಾರಕೂಡದೆಂದೂ ಅಥವಾ ಕೊಂಡುಕೊಳ್ಳಕೂಡದೆಂದೂ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿರುವರು. ಈ ಪರಮಾವಧಿ ಬೆಲೆಗೆ ಹೆಚ್ಚಾಗಿ ಕೊಳ್ಳುವುದು ಅಥವಾ ಮಾರುವುದು ಕಾನೂನುಬಾಹಿರವೆಂದೂ, ಅಂತಹ ಕೃತ್ಯ ನಡೆಸುವವರನ್ನು ಶಿಕ್ಷೆ, ಜುಲ್ಮಾನೆ ಅಥವಾ ಎರಡಕ್ಕೂ ಗುರಿಪಡಿಸಲಾಗುವುದೆಂದೂ ಎಚ್ಚರಿಸಲಾಗಿದೆ

★ ಸಿರ್ಲೋಜೈಮ್ ★ಮಕ್ಕಳ ಲಿವರ್ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★

ನಗರ ಪೌರಸಭೆ ಅಧಿವೇಶನ

ಪ್ರಜಾಪಕ್ಷದ ಸದಸ್ಯರ ಸಭಾಪರಿತ್ಯಾಗ: ಶುಭಾಶಯ

ಮೈಸೂರು ನಗರ ಪೌರಸಭೆಯ ಮಾಹೆಯಾನಾ ಅಧಿವೇಶನವು ನಿನ್ನೆ ಶ್ರೀ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ, ಕೇಂದ್ರ ಉಪಪ್ರಧಾನಿ ಸರದಾರ್ ವಲ್ಲಭಾಯಿ ಪಟೇಲರ ೭೫ ವರ್ಷ ವರ್ಧಂತಿಯಾದುದಕ್ಕೆ ಶುಭಾಶಯಗಳನ್ನು ಕೋರಿ ನಿರ್ಣಯವನ್ನು ಮಾಡಿದರು.

ಬಡ ವಿದ್ಯಾರ್ಥಿಗಳಿಗೆ ಸಹಾಯ

ಅನಂತರ ಇತರ ವಿಷಯಗಳ ಚರ್ಚೆ ನಡೆದುವು. ಮೈಸೂರು ನಗರದ ಬಡ ವಿದ್ಯಾರ್ಥಿಗಳ ಊಟದ ಏರ್ಪಾಡಿಗಾಗಿ ಪ್ರತಿ ವರ್ಷವೂ ೫,೦೦೦ ರೂ.ಗಳ ಗ್ರಾಂಟನ್ನು ಕೊಡಬೇಕೆಂದು ಪೌರಸಭೆಯವರು ಸರ್ಕಾರಕ್ಕೆ ಮಾಡಿದ್ದ ವಿಷಯದಲ್ಲಿ, ಸರ್ಕಾರದಿಂದ ಛತ್ರದ ಉಳಿತಾಯ ಹಣದಿಂದ ಇದನ್ನು ಕೊಡಲು, ಈಗಿನ ಹಣದ ಸ್ಥಿತಿಯಿಂದ ಸಾಧ್ಯವಿಲ್ಲವೆಂದು ಬಂದಿದ್ದ ಕಾಗದವನ್ನು ಓದಿ ಈ ಹಣವನ್ನು ಜನರಲ್ ಫಂಡಿನಿಂದ ಕೊಡುವಂತೆ ಪುನಃ ಪರಿಶೀಲಿಸಬೇಕೆಂದು ಸರ್ಕಾರವನ್ನು ಕೋರತಕ್ಕದೆಂದು ತೀರ್ಮಾನವಾಯಿತು.

ನಗರದಲ್ಲಿ ಅನೇಕ ರಸ್ತೆಗಳಲ್ಲಿ ಅಪಾಯ ಸಂಭವಿಸುವುದನ್ನು ತಪ್ಪಿಸಲು ಎಲ್ಲಾ ಸರ್ಕಲುಗಳಲ್ಲಿ ಸಿಮೆಂಟಿನಿಂದ ಮಾಡಿದ ಅಂದವಾದ ಛತ್ರಗಳನ್ನು ಕಟ್ಟಿಸಬೇಕೆಂದು ರಿ|| ಫಾದರ್ ಓಡಿಯೋರವರು ತಂದಿದ್ದ ನಿರ್ಣಯವು ಅಂಗೀಕಾರವಾಯಿತು.

ಪಡುವಾರಳ್ಳಿಗ್ರಾಮ ಬದಲಾವಣೆ

ದೇವರಾಜ ಮೊಹಲ್ಲಾ ಪಡುವಾರಳ್ಳಿ ಹಳ್ಳಿಯ ಕೆಳಭಾಗದಗ್ರಾಮ ತುಂಬಾ ಇಕ್ಕಟ್ಟಾದ ಗ್ರಾಮವಾದ ಕಾರಣ ಅಲ್ಲಿಯ ನಿವಾಸಿಗಳಿಗೆ ವಸತಿಯ ಸೌಕರ್ಯಕ್ಕೆ ಬೇರೆ ಸ್ಥಳವನ್ನು ಕೊಟ್ಟು ಅಲ್ಲಿರತಕ್ಕ ಮನೆಗಳನ್ನು ಅಕ್ವೈರ್ ಮಾಡಿಕೊಂಡು ಸದರಿ ಗ್ರಾಮವನ್ನು ಉತ್ತಮಸ್ಥಿತಿಗೆ ತರಬೇಕೆಂದೂ, ಮೈಸೂರು ಸಿಟಿಯಲ್ಲಿರುವ ಸಿಟಿ ಬಸ್ ಸರ್ವೀಸ್ ನಗರದ ಎಲ್ಲಾ ಮೊಹಲ್ಲಾಗಳಲ್ಲೂ ಓಡಾಡುವಂತೇರ್ಪಡಿಸಬೇಕೆಂದೂ ಶ್ರೀ ಚೌಡಯ್ಯನವರು ತಂದಿದ್ದ ನಿರ್ಣಯವು ಅಂಗೀಕಾರವಾಯಿತು.

ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ಪ್ರತಿನಿಧಿ ಚುನಾವಣೆ

ದೇಹಲಿಯಲ್ಲಿ ನಡೆಯಲಿರುವ ಅಖಿಲಭಾರತ ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಿಸುವ ವಿಷಯವು ಚರ್ಚೆಗೆ ಬಂದಾಗ ಶ್ರೀಗಳಾದ ಟಿ. ಎನ್. ನರಸಿಂಹಯ್ಯಂಗಾರ್, ವಿ. ಕೃಷ್ಣಮೂರ್ತಿರಾವ್, ಎನ್ ರಾಚಯ್ಯ, ಸಯ್ಯದ್ ಅಬ್ದುಲ್‌ರಹಿಮಾನ್, ಬಿ ಎಲ್. ರಾಮಸ್ವಾಮಿಶೆಟ್ಟಿಯವರನ್ನು ಆರಿಸಲಾಯಿತು ಶ್ರೀ ಪುತ ವೆಂಕಟೇಶಯ್ಯನವರು ಈ ಪ್ರತಿನಿಧಿಗಳ ಚುನಾವಣಾಕ್ರಮವು ಸರಿಯಾಗಿಲ್ಲವಾಗಿ ತಾವು ಇದರಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಸಿ ಸಭಾ ಪರಿತ್ಯಾಗಮಾಡಿದರು. ಹಾಜರಿದ್ದ ಪ್ರಜಾಪಕ್ಷದ ಇತರ ಸದಸ್ಯರೂ ಇದರಲ್ಲಿ ಭಾಗವಹಿಸದೆ ಸಭಾ ತ್ಯಾಗಮಾಡಿದರು.-

● ನಿನ್ನೆ ಬೆಳ್ಳಿಕಟ್ಟೆಗೆ ವಿಮಾಸಲ್‌ನಲ್ಲಿ ನಿಂಗಮ್ಮ ಎಂಬುವವಳು ಗಂಡ-ಹೆಂಡರಿಗೆ ಮಾತುಕತೆ ನಡೆದು ನೇಣು ಹಾಕಿಕೊಂಡು ಸತ್ತಳೆಂದು ವರದಿಯಾಗಿದೆ.

ರಾಜ್ಯಾಂಗ ರಚನಾಸಭೆ

ಕಾಶ್ಮೀರದಲ್ಲಿ ನೂತನವಾಗಿ ರಚಿತವಾಗಲಿರುವ ರಾಜ್ಯಾಂಗ ರಚನಾಸಭೆಗೆ ಚುನಾವಣೆಯನ್ನು ನಡೆಯಿಸಲು ಸರ್ಕಾರ ಕಾರ್ಯಕ್ರಮವನ್ನು ತ್ವರಿತವಾಗಿ ಕೈಗೊಳ್ಳುತಲಿದೆ. ಮುಂದಿನ ಬೇಸಿಗೆಯಲ್ಲಿ ಚುನಾವಣೆ ನಡೆಯುವುದು.

ಪಾಕಿಸ್ಥಾನ ನೀತಿ

ಹಿಂದೂ ಅಲ್ಪ ಸಂಖ್ಯಾತರ ಮತ್ತು ಭಾರತದ ಬಗ್ಗೆ ಪಾಕಿಸ್ಥಾನ ನೀತಿಯೇನೆಂಬುದನ್ನು ಹೊರಗೆಡಹಲು ಒಂದು ಗಮನಾರ್ಹ ಪತ್ರವನ್ನು ಪಾಕಿಸ್ಥಾನ ಮಾಜಿ ಮಂತ್ರಿ ಶ್ರೀ ಜೆ ಎನ್. ಮಂಡಲ್‌ರವರು ಪ್ರಕಟಿಸುವರೆಂದು ತಿಳಿಯುಬರುತ್ತದೆ.

ದಾಸ್ತಾನುಗಾರರಿಗೆ ಎಚ್ಚರಿಕೆ

ದಾಸ್ತಾನು ಮಾಡಿರುವ ಪದಾರ್ಥಗಳನ್ನು ಪರಿಶೀಲಿಸಲು, ಮುಟ್ಟುಗೋಲು ಹಾಕಲು ಮತ್ತು ದಾಸ್ತಾನುಗಾರರ ಮೇಲೆ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಲು ಬೊಂಬಾಯಿ ಸರ್ಕಾರವು ಪೋಲೀಸ್ ಇನ್ಸ್‌ಪೆಕ್ಟರ್ ದರ್ಜೆಯ ಮೇಲ್ಪಟ್ಟ ಅಧಿಕಾರಿಗಳಿಗೆ ಅನುಜ್ಞೆಯನ್ನಿತ್ತಿರುವರು.

ಪಂಡಿತ ನೆಹರೂ

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಸ್ಥಾನಪತಿ ಪದವಿಗೆ

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಸ್ಥಾನಪತಿಪದವಿಗೆ ಪಂ|| ನೆಹರೂರವರ ಹೆಸರನ್ನು ಸೂಚಿಸಲಾಗಿದೆ. ಮತ್ತೊಬ್ಬ ಉಮೇದುವಾರರು, ರಾಯಲ್ ಏರ್‌ಫೋರ್ಸಿನ ಮಾರ್ಷಲ್‌ರಾದ ಲಾರ್ಡ್ ಟೆಡ್ಡರ್‌ರವರು. ಉಮೇದುವಾರಿಕೆಯನ್ನು ಯಾರೂ ಹಿಂದಕ್ಕೆ ತೆಗೆದುಕೊಳ್ಳದಿದ್ದಲ್ಲಿ ನವಂಬರ್ ೧೮ರಲ್ಲಿ ಚುನಾವಣೆ ನಡೆಯುವುದು.

ಆರ್.ಎಸ್.ಎಸ್. ಚುನಾವಣೆಗಳಲ್ಲಿ ಭಾಗವಹಿಸುವುದಿಲ್ಲ

ಆರ್ ಎಸ್. ಎಸ್. ನವರು ಚುನಾವಣೆಗಳಲ್ಲಿ ಭಾಗ ವಹಿಸುವುದಿಲ್ಲ ಈ ಸಂಸ್ಥೆಗೆ ರಾಜಕೀಯ ಆಕಾಂಕ್ಷೆಯಿಲ್ಲವೆಂದು ಸಂಘದ ಅಧ್ಯಕ್ಷ ಶ್ರೀ ಗೋಳ್ವಾಲ್ಕರ್‌ರವರು ಹೇಳಿರುವರು.

ವ್ಯವಸಾಯ ಕಾಲೇಜು ಪ್ರಿನ್ಸಿಪಾಲ್

ವ್ಯವಸಾಯ ಕಾಲೇಜು ಪ್ರಿನ್ಸಿಪಾಲ್ ಮತ್ತು ಹೆಬ್ಬಾಳ್ ವ್ಯವಸಾಯ ಸಂಶೋಧನಾ ಸಂಸ್ಥೆಯ ಡೈರೆಕ್ಟರಾಗಿ ಶ್ರೀ ಎಂ. ಮಲ್ಲರಾಜೇ ಅರಸರು ನೇಮಕವಾಗಿದ್ದಾರೆ

ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ

ಭಾರತದ ಕಾರ್ಯನಿರತ ಪತ್ರಿಕೋದ್ಯೋಗಿಗಳು ದೆಹಲಿಯಲ್ಲಿ । ಶ್ರೀ ಎಂ. ಚಲ್ಲಪತಿರಾಯರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಅಖಿಲಭಾರತ ಪ್ರಾತಿನಿಧ್ಯದಿಂದ ಕೂಡಿದ ಭಾರತೀಯ ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘವನ್ನು ಸ್ಥಾಪಿಸಿದರು. ಈ ಸಮ್ಮೇಳನದಲ್ಲಿ ೨೩ ಪ್ರಾಂತ ಮತ್ತು ಜಿಲ್ಲಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಮಹಾರಾಜರ ಭೇಟಿ

ಮೈ. ಅ. ೩೦

ಚಿತ್ರದುರ್ಗದ ಶ್ರೀ ಭೀಮಪ್ಪನಾಯಕರು ನಿನ್ನೆ ಮಹಾರಾಜರನ್ನು ಭೇಟಿಮಾಡಿದ್ದರು.

ಮುಖ್ಯಮಂತ್ರಿ ಶ್ರೀ. ಕೆ. ಸಿ. ರೆಡ್ಡಿ, ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ ಶ್ರೀ. ಟಿ. ಮಾದಯ್ಯಗೌಡ ಮತ್ತು ಸಂಸ್ಥಾನದ ಪೋಲಿಸ್ ಮುಖ್ಯಾಧಿಕಾರಿ ಶ್ರೀ ಜಿ. ಎನ್ ನಾಗರಾಜಯ್ಯರಿಗೆ ಮಹಾರಾಜರು ಇಂದು ಭೇಟಿ ದಯಪಾಲಿಸಿದ್ದರು.

ಆಹಾರ ಪರಿಸ್ಥಿತಿ ಪರಿಶೀಲನೆ

ಮೈ. ಅ. ೨೮

ಮಹಾರಾಜರು ನವಂಬರ್ ಕೊನೆಯ ವಾರದಲ್ಲಿ ಚಿತ್ರದುರ್ಗ ಜಿಲ್ಲಾಮೊಳೆ ಪ್ರವಾಸ ಕೈಗೊಂಡು ಆಹಾರ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸುವರೆಂದು ತಿಳಿದು ಬಂದಿದೆ-

ಪಾಕಿಸ್ಥಾನ ಮಾರ್ಗ ಅನರ್ಥಕಾರಿ

ಕಾಶ್ಮೀರದ ಪ್ರಜೆಗಳಲ್ಲಿ ಅನೈಕಮತ್ಯ, ಅರಾಜಕತೆ ಮತ್ತು ಭಿನ್ನತೆಗಳನ್ನುಂಟುಮಾಡುವುದೇ ಪಾಕಿಸ್ಥಾನದ ಮುಖ್ಯ ಉದ್ದಿಶ್ಯ. ಪಾಕಿಸ್ಥಾನದ ಮಾರ್ಗ ತಪ್ಪು ಅವರು ಈ ಮಾರ್ಗವನ್ನು ಬದಲಾಯಿಸದಿದ್ದರೆ ಮುಂದೆ ತೊಂದರೆಗೀಡಾಗಿ ಪರಿತಪಿಸುವರು. ಅವರ ನೀತಿಯು ಕೊನೆಯವರೆಗೂ ಹೀಗೆಯೆಯಿದ್ದಲ್ಲಿ ಅದರಿಂದ ಅವರಿಗೆ ಸರ್ವನಾಶವಾಗುವುದೆಂದು ಪಂಡಿತ ನೆಹರೂ ಶ್ರೀ ನಗರದಲ್ಲಿ ಮಹಿಳಾ ಕಾಲೇಜು ವಿದ್ಯಾರ್ಥಿನಿಯರ ಸಭೆಯಲ್ಲಿ ಮಾತನಾಡುತ್ತ ತಿಳಿಸಿದರು.

ಮೈ ಅ. ೩೧

● ಮೊನ್ನೆ ಸಂಜೆ ಮಂಡಿಮೊಹಲ್ಲಾದಲ್ಲಿ ೧೪ ವರ್ಷ ವಯಸ್ಸಿನ ಜಾನಕಮ್ಮ ಎಂಬ ಹುಡುಗಿಯು ಒಲೆಯನ್ನು ಹಚ್ಚಿಸುತ್ತಿರುವಾಗ ಬಟ್ಟೆಗೆ ಬೆಂಕಿ ತಗುಲಿ ಮೈಸುಟ್ಟು ಆಸ್ಪತ್ರೆಗೆ ದಾಖಲಾಗಿ ನಿನ್ನೆ ಬೆಳಗ್ಗೆ ಮೃತಪಟ್ಟಳು.

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟಿಫಿಕೇಷನ್ ನಂಬರು R 8.

DM1/50 ತಾ|| 25-10-50

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :— ಸಿಟಿ ಮಜಕೂರು ದೇವರಾಜಮಾರ್ಕೆಟ್ಟಿನ ದಕ್ಷಿಣಭಾಗದ ಮಹಡಿಯ ಮೇಲೆ ಹೊಸದಾಗಿ ಕಟ್ಟಿರುವ ೪ ರೂಮುಗಳನ್ನು ಮಾಹೆಯಾನಾ ಬಾಡಿಗೆಗೆ ಪಡೆಯುವ ಹಕ್ಕನ್ನು 1950ನೇ ಇಸವಿ ನವೆಂಬರ್ ಮಾಹೆ ತಾ|| 13ನೇ ಸೋಮವಾರ ದಿವಿ 10 ಗಂಟೆಗೆ ಮೇಲ್ಕಂಡ ರೂಮುಗಳ ಬಳಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ರೂಮುಗಳನ್ನು ಬಾಡಿಗೆಗೆ ಪಡೆಯಲು ಇಷ್ಟವುಳ್ಳವರು ಹರಾಜುಕಾಲಕ್ಕೆ ಹಾಜರಾಗಿ ಭಡಕವಾಲು ಮೂಲ್ಯ ಪಡೆಯಬಹುದು. ಹೆಚ್ಚಿಗೆ ವಿಚಾರಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ನಡೆಯುವ ಕಾಲದಲ್ಲಿ ತಿಳಿಯಬಹುದು.

(*Sd*) **T. Rama Rao,**
For Municipal Commissioner.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧—೧೧—೧೯೫೦ನೇ ಬುಧವಾರ [ಸಂಚಿಕೆ ೬೦

ಭಾರತದನೀತಿ ಬದಲಾವಣೆಯಾಗಬೇಕು

ಮುಸ್ಲಿಂ ಲೀಗ್ ಭಾರತದಲ್ಲಿ ಚಟುವಟಿಕೆ ನಡೆಸಲು ಅವಕಾಶ ಕೊಡಕೂಡದು ಪಾಕಿಸ್ಥಾನದ ಬಗ್ಗೆ ಭಾರತ ಸರ್ಕಾರದ ಈಗಿನ ಧೋರಣೆ ಬದಲಾವಣೆಯಾಗಬೇಕು. ಶಕ್ತಿಯುತ, ಶ್ರೇಷ್ಠ ಮತ್ತು ಧೈರ್ಯವುಳ್ಳ ರಾಷ್ಟ್ರವು ಹೇಗೆ ವರ್ತಿಸುವುದೋ ಹಾಗೆ ಭಾರತವು ಪಾಕಿಸ್ಥಾನದ ಬಗ್ಗೆ ವರ್ತಿಸಬೇಕು.

ಪಾಕಿಸ್ಥಾನದಲ್ಲಿ ಇದ್ದ ಸುಮಾರು ೬೦ ಲಕ್ಷ ಜನರ ಪೈಕಿ ಉಳಿದಿರುವವರು ಕೇವಲ ೫೦,೦೦೦ ಜನ ಮಾತ್ರ.

ಮೊದಲಿನಿಂದಲೂ ಭಾರತ ಸರ್ಕಾರವು ಸಡಿಲಪಟ್ಟ ನೀತಿ ಅನುಸರಿಸುತ್ತ ಬಂದಿದ್ದು ಭಾರತದ ಕೋಟ್ಯಾಂತರ ರೂಪಾಯಿ ಪಾಕಿಸ್ಥಾನಕ್ಕೆ ಹರಿದುಹೋಯಿತು. ಭಾರತದಲ್ಲಿ ಹಣಗಳಿಸಿ, ಪಾಕಿಸ್ಥಾನಕ್ಕೆ ಕಳಿಸಿ, ಆ ಹಣವನ್ನೇ ಕಾಶ್ಮೀರದಲ್ಲಿ ಪಾಕಿಸ್ಥಾನದ ಸರ್ಕಾರದಿಂದ ವೆಚ್ಚಮಾಡಿಸಿ ಭಾರತೀಯರನ್ನು ಮಟ್ಟಹಾಕುತ್ತಲಿರುವುದು ಸತ್ಯಾಂಶ.

ನಿರಾಶ್ರಿತರಿಗಾಗಿ ಮೈಸೂರು ಸಂಸ್ಥಾನಕ್ಕೆ ಕೇಂದ್ರ ಸರ್ಕಾರವು ಒದಗಿಸಿರುವ ೪,೮೦,೦೦೦ ರೂ. ಗಳನ್ನು ಸಾಲಕೊಡಲು ೩ ಲಕ್ಷ ರೂ. ಗಳನ್ನು ಒದಗಿಸಿದ್ದರೂ ಅದರ ವಿನಿಯೋಗವು ಸರಿಯಾಗಿ ಆಗ ನಿರಾಶ್ರಿತರಿಗೆ ಸೌಲಭ್ಯ ಒದಗದೆ ಕೆಲಸಕಾರ್ಯಗಳು ತಡವಾಗುತ್ತಲಿವೆ. ಎಂದು. ಭಾರತ ನಿರಾಶ್ರಿತರ ಸಂಘದ ಅಧ್ಯಕ್ಷ ಡಾ|| ಚೋಯಿತ್‌ರಾಂ ಗಿದ್ವಾಣಿಯವರು ಬೆಂಗಳೂರಿನಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು.

ರಜಾ

ಪೋಲೀಸ್ ಡೆಪ್ಯುಟೀ ಇನ್ಸ್‌ಪೆಕ್ಟರ್ ಜನರಲ್ (ರೈಲ್ವೆಯವರಾದ ಶ್ರೀ ಮುಕ್ತೋಜಿರಾವ್ ಸಿಂಧ್ಯಾಯವರಿಗೆ ಅಕ್ಟೋಬರ್ ೨೩ರಿಂದ ೨೦ ದಿನ ರಜಾ ಕೊಡಲಾಗಿದೆ. ಸೀನಿಯರ್ ಪೋಲೀಸು ಸೂಪರಿಂಡೆಂಟರಾದ ಶ್ರೀ ಬಿ. ತಿಮ್ಮರಾಜೇ ಅರಸುರವರು ರಜಾ ಕಾಲದಲ್ಲಿ ಇವರ ಕೆಲಸಕ್ಕೆ ನೇಮಕವಾಗಿದ್ದಾರೆ.

ಮಳೆಗಾಗಿ ಸಮೂಹಿಕಪ್ರಾರ್ಥನೆ

ಮಳೆ ಅಭಾವದಿಂದೊದಗಿರುವ ಕ್ಷಾಮನಿವಾರಣೆಗಾಗಿ ೩,೦೦೦ಕ್ಕೆ ಮೇಲ್ಪಟ್ಟ ಮುಸಲ್ಮಾನರು ಪಾಟ್ನಾ ಗಾಂಧಿಮೈದಾನದಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಅರೇಬಿಯಾದಲ್ಲಿ ಕ್ಷಾಮ ತಲೆದೋರಿದಾಗ ಮುಸ್ಲಿಂ ಮತಸ್ಥಾಪಕ ಮಹಮ್ಮದ್‌ರವರು ಈರೀತಿ ಪ್ರಾರ್ಥನೆ ಸಲ್ಲಿಸಿದರೆಂಬ ಪ್ರತೀತಿಯಿದೆ.

ಕೇಂದ್ರ ನೀರಾವರಿ ಬೋರ್ಡು

ಕೇಂದ್ರ ನೀರಾವರಿ ಬೋರ್ಡಿಗೆ ಮೈಸೂರಿನ ವಿದ್ಯುಚ್ಛಕ್ತಿಯ ಚೀಫ್ ಇಂಜನಿಯರ್ ಜನಾಬ್ ಹಯಾತ್‌ರವರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಕೇಂದ್ರ ಸರ್ಕಾರದ ಇಂಜನಿಯರ್ ಸಲಹೆಗಾರರಾದ ಶ್ರೀ ಎ ಎನ್. ಕೋಸಲರವರು ಈ ಬೋರ್ಡಿನ ಅಧ್ಯಕ್ಷರು.

ಸ್ವೀಡನ್ನಿನ ನೂತನದೊರೆ

೪೩ ವರ್ಷ ರಾಜ್ಯವಾಳಿ ಮಡಿದ ೯೨ ವರ್ಷ ವಯಸ್ಸಿನ ಸ್ವೀಡನ್ನಿನ ದೊರೆ ಗುಸ್ಟೋವಿನ ಮಗ ೬೮ ವರ್ಷ ವಯಸ್ಸಿನ ಅಡಾಲ್ಫ್ ಸ್ವೀಡನ್ನಿನ ನೂತನ ದೊರೆಯಾಗಿ ಪ್ರತಿಜ್ಞೆಯನ್ನು ಸ್ವೀಕರಿಸಿರುವನು. ಈತನ ಪತ್ನಿಯು ಲಾರ್ಡ್‌ಮೌಂಟ್‌ಬೇಟನ್ನಿನ ಸಹೋದರಿಯಾದ ಲೂಯಿ ಮೌಂಟ್‌ಬೇಟನ್.

ಅಭಿವೃದ್ಧಿ ಸಮಿತಿಗಳು

ಸ್ಥಳೀಯ ಸಂಸ್ಥೆಗಳ ಮತ್ತು ಗ್ರಾಮಭಿವೃದ್ಧಿ ಸಮಿತಿಗಳ ಗ್ರಾಮಾಭಿವೃದ್ಧಿ ಕಾರ್ಯವನ್ನು ಒಟ್ಟುಗೂಡಿಸುವ ಬಗ್ಗೆ ಸಲಹೆಗಳನ್ನು ಸೂಚಿಸಲು ಸರ್ಕಾರದಿಂದ ನೇಮಕವಾಗಿರುವ ಸಮಿತಿಯ ಶಿಫಾರಸುಗಳು ಬಂದು ತೀರ್ಮಾನವಾಗುವರೆಗೆ ಈಗ ಇರುವ ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳು ಈಗಿರುವಂತೆಯೇ ಮುಂದುವರಿಯಬೇಕೆಂದು ಸರ್ಕಾರವು ಮಂಜೂರಾತಿ ಕೊಟ್ಟಿದೆ.

ವೋಟರಪಟ್ಟಿ

ಬೊಂಬಾಯಿನಲ್ಲಿ ಇಂದು ವೋಟರಪಟ್ಟಿ ಪ್ರಥಮತಃ ಪ್ರಕಟವಾಗಲಿದೆ. ಹೆಸರುಗಳನ್ನು ಸೇರಿಸಲು ತಪ್ಪುಗಳನ್ನು ತಿದ್ದಿಪಡಿಸಲೂ ಪ್ರಕಟಣೆಯಾದ ೨೧ ದಿನಗಳಕಾಲ ಅವಕಾಶಕೊಡಲಾವುದು.

ಮಿ|| ಟ್ರಿಗ್ವಿಲೈ

ಪ್ರಪಂಚ ಸಂಸ್ಥೆ ಸೆಕ್ರಿಟರಿ ಜನರಲರಾಗಿ ಮಿ|| ಟ್ರಿಗ್ವಿಲೈಯವರು ಪುನಃ ನೇಮಿತವಾದಲ್ಲಿ ಅವರನ್ನು ರಷ್ಯಾ ಮನ್ನಿಸುವುದಿಲ್ಲ ಮತ್ತು ಅವರೊಡನೆ ಯಾವ ವ್ಯವಹಾರವನ್ನೂ ನಡೆಸುವುದಿಲ್ಲವೆಂದು ರಷ್ಯಾದ ವಿದೇಶಾಂಗ ಮಂತ್ರಿ ಎಂ. ಆಂಡ್ರಿ, ವಿಷಿನ್ಸ್ಕಿಯವರು ತಿಳಿಸಿರುವರು.

ಸರದಾರರ ಜನ್ಮದಿನ

ಸರದಾರ್ ಪಟೇಲರ ಜನ್ಮದಿನವನ್ನು ಗುಜರಾತಿನಲ್ಲೆಲ್ಲಾ ಅತ್ಯಂತ ವೈಭವದಿಂದ ನಡೆಸಿದರು. ಅಹಮದಾಬಾದಿನಲ್ಲಿ ಪಟೇಲರಿಗೆ ೧೫ ಲಕ್ಷ ರೂಪಾಯಿಗಳ ನಿಧಿಯನ್ನರ್ಪಿಸಿದರು. ಈ ಹಣವನ್ನೆಲ್ಲಾ ತಾವು ದೇಶದ ಹಿತಕ್ಕಾಗಿ ವೆಚ್ಚಮಾಡುವುದಲ್ಲದೆ, ತಮ್ಮ ಜೀವಮಾನವನ್ನೆಲ್ಲಾ ಪ್ರಜಾಸೇವೆಯಲ್ಲೇ ಕಳೆಯುವುದಾಗಿ ತಿಳಿಸಿದರು. ಪ್ರಜೆಗಳೂ ರಾಷ್ಟ್ರೀಯ ಸರ್ಕಾರವನ್ನು ಪ್ರತಿಭಟಿಸದೆ ಸರ್ಕಾರವು ತಪ್ಪುಮಾಡಿದಲ್ಲಿ ತಪ್ಪುಗಳನ್ನು ತಿದ್ದಬೇಕೆಂದು ಹೇಳಿದರು.

● ಸಾರ್ವಜನಿಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಮತ್ತು ಸೇವಾದಳ ಸ್ವಯಂ ಸೇವಕರು ಸೇರಿ ಭಾರತದ ಉಪ ಪ್ರಧಾನರಾದ ವಲ್ಲಭಭಾಯ್ ಪಟೇಲರ ಜನ್ಮದಿನೋತ್ಸವವನ್ನು ಶ್ರೀ ಮಹಮುದ್ ಪಾಷಾರವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ. ಎಂ. ಚಿಕ್ಕಮಾದಯ್ಯನವರು ಸ್ವಾಗತ ಭಾಷಣಮಾಡಿದರು. ಮೈಸೂರು ಶಾಸನಾಸಭಾ ಸದಸ್ಯರಾದ ಶ್ರೀ ಡಿ ಎಂ. ಸಿದ್ದಯ್ಯನವರು ಎಂ. ಎ ಇವರ ಪರಿಚಯವನ್ನು ಶ್ರೀ ಟಿ. ಎಸ್. ಸುಬ್ಬಣ್ಣನವರು ಸಭಿಕರಿಗೆ ಮಾಡಿದರು. ಅನಂತರ ಶ್ರೀ ಡಿ ಎಂ. ಸಿದ್ದಯ್ಯನವರು ಮಾತನಾಡಿ ಭಾರತಕ್ಕೆ ಪಟೇಲರ ನೇತೃತ್ವದಲ್ಲಿ ನಡೆದಿರುವ ಕೆಲಸಗಳು ಮತ್ತು ಅವರ ಜೀವನಚರಿತ್ರೆ ಮುಂತಾದುವುಗಳನ್ನು ಕುರಿತು ಭಾಷಣಮಾಡಿದರು. ಅಧ್ಯಕ್ಷರ ಭಾಷಣ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ವಿದ್ಯಾರ್ಥಿನಿಲಯ ಮಾಲೀಕರಾದ ಶ್ರೀ ರಾಮಕೃಷ್ಣರಾಯರಿಂದ ಸಿಹಿ ತಿಂಡಿಯು ಹಂಚಲಾಯಿತು. ಅನಂತರ ಸರ್ದಾರ್ ಪಟೇಲರಿಗೆ ಶುಭ ಸಂದೇಶ ಕಳುಹಿಸಲಾಯಿತು

ಭಾರತಕ್ಕೆ ಚೀಣಾ ಉತ್ತರ

ಟಿಬೆಟ್ಟಿನ ಮೇಲೆ ಆಕ್ರಮಣ ನಡೆಸಿದ ಬಗ್ಗೆ ಭಾರತ ಸರ್ಕಾರವು ಪ್ರತಿಭಟಿಸಿ ಸೂಚಿಸಿ ಚೀಣಾ ಸರ್ಕಾರಕ್ಕೆ ಬರೆದಿದ್ದ ಪತ್ರಕ್ಕೆ ಉತ್ತರ ಬಂದಿದೆ. ಈ ಉತ್ತರವನ್ನು ಭಾರತ ಸರ್ಕಾರ ಪರಿಶೀಲಿಸುತ್ತಲಿದೆಯೆಂದೂ ಭಾರತದ ಅಭಿಪ್ರಾಯವು ಸದ್ಯದಲ್ಲೇ ಹೊರಬೀಳಲಿದೆಯೆಂದೂ ತಿಳಿಯಬರುತ್ತಿದೆ.

ಭಾರತ ಪಾಕ್‌ವಿವಾದ

ಭಾರತ ಪಾಕೀಸ್ಥಾನಗಳ ನಡುವೆ ನಾಣ್ಯವಿನಿಮಯ ಕಷ್ಟ ಸರಿಯಾದ ವಿಧಾನವೇರ್ಪಡುವವರೆಗೂ ಉಭಯ ರಾಷ್ಟ್ರಗಳ ನಡುವೆ ಮತ್ತೆ ವ್ಯಾಪಾರ ಪ್ರಾರಂಭಿಸಲು ಸಾಧ್ಯವಿಲ್ಲವೆಂದು ಭಾರತವಾಣಿಜ್ಯ ಸಚಿವ ಶ್ರೀ ಪ್ರಕಾಶರವರು ತಿಳಿಸಿರುವರು.

ಸಕ್ಕರೆ ವ್ಯಾಪಾರಿಗಳ ದಸ್ತಗಿರಿ

೪೦ಕ್ಕಿಂತ ಹೆಚ್ಚಾಗಿ ಸಕ್ಕರೆ ವ್ಯಾಪಾರಿಗಳನ್ನು ಮೀರತ್‌ಜಿಲ್ಲೆಯಲ್ಲಿ ದಸ್ತಗಿರಿಯಾಗಿದ್ದಾರೆ.

ಮುಖ್ಯ ಮಂತ್ರಿಗಳಲ್ಲಿ ಕಂಟ್ರಾಕ್ಟರುಗಳ ನಿಯೋಗ

ಮೈಸೂರು ಸಂಸ್ಥಾನ ಪಬ್ಲಿಕ್‌ವರ್ಕ್ಸ್ ಕಂಟ್ರಾಕ್ಟರುಗಳ ಸಂಘದ ಸದಸ್ಯರುಗಳು ಮುಖ್ಯ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರ ನಿಯೋಗ ಹೋಗಿ ತಮ್ಮ ಕೆಲಸದ ಬಿಲ್ಲುಗಳ ಮೇಲೆ ಸೇಲ್ಸ್‌ಟ್ಯಾಕ್ಸ್ ಹಾಕುತ್ತಲಿರುವುದನ್ನು ತಪ್ಪಿಸಬೇಕೆಂದು ಕೋರಿದರು. ವಿಷಯವನ್ನು ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ಭರವಸೆಯಿತ್ತರು.

ಭಾರತಕ್ಕೆ ಚೈನಾ ಉತ್ತರ

ಟಿಬೆಟ್ ಚೈನಾದ ಒಂದುಭಾಗವಾಗಿರುವುದರಿಂದ ಟಿಬೆಟ್ಟಿನ ಕಾರ್ಯಾಚರಣೆಯನ್ನು ಪರರಾಷ್ಟ್ರಗಳಾವುವೂ ಕೇಳಲು ಅವುಗಳಿಗೆ ಯಾವ ಸಂಬಂಧವೂ ಇಲ್ಲವೆಂದು ಭಾರತ ಸರ್ಕಾರವು ಚೈನಾ ಸರ್ಕಾರಕ್ಕೆ ಬರೆದ ಪತ್ರಕ್ಕೆ ಜವಾಬುಯಿತ್ತಿರುವುದಾಗಿ ಊಹಿಸಲಾಗಿದೆ.

ಕೊರಿಯಾ ಯುದ್ಧದಲ್ಲಿ ಚೈನಾಮಾತ್ರವೇ?

ಕೊರಿಯಾ ಯುದ್ಧರಂಗದಲ್ಲಿ ಅಮೇರಿಕಾ ಸೈನ್ಯಗಳು ೧೦ ಜನ ಚೈನಾ ಸೈನಿಕರನ್ನು ಕೈಸೆರೆ ಹಿಡಿದಿರುವುದಾಗಿ ವರದಿಯಾಗಿದೆ.

ಮಹಾ ಚುನಾವಣೆ

೪೧ ಮುಖ್ಯ ಚುನಾವಣಾಧಿಕಾರಿಗಳು, ೨೬ ಪ್ರಾಂತ್ಯಗಳ ಇತರ ಚುನಾವಣಾಧಿಕಾರಿಗಳು ದೆಹಲಿಯಲ್ಲಿ ಸೇರಿ, ಏಪ್ರೈಲ್-ಮೇ ತಿಂಗಳುಗಳಲ್ಲಿ ಭಾರತಾದ್ಯಂತ ಚುನಾವಣೆಗಳನ್ನು ನಡೆಯಿಸಲು ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಲು ಚರ್ಚೆಗಳನ್ನು ನಡೆಯಿಸುತ್ತಲಿರುವರು.

ಮುಖ್ಯ ಚುನಾವಣಾ ಕಮಿಷನರಾದ ಶ್ರೀ ಸುಕುಮಾರಸೇನ್‌ರವರು ಏಪ್ರೈಲ್-ಮೇ ತಿಂಗಳುಗಳಲ್ಲಿ ಚುನಾವಣೆಗಳನ್ನು ನಡೆಯಿಸಬೇಕೆಂದು ಕೇಂದ್ರ ಸರ್ಕಾರವು ತಮಗೆ ಆಜ್ಞೆಯಿತ್ತಿದೆಯೆಂದೂ ಸಕಾಲದಲ್ಲಿ ಚುನಾವಣೆಗಳು ನಡೆಯಿಸಲು ಚುನಾವಣಾಧಿಕಾರಿಗಳು ತಕ್ಕ ಕಾರ್ಯಕ್ರಮವನ್ನು [illegible]ದರು.

ಪ್ರಾರಂಭದಲ್ಲಿ ನವಂಬರ್ ತಿಂಗಳಿನಲ್ಲಿಯೇ ಮತದಾರರ ಪಟ್ಟಿಗಳನ್ನು ಪ್ರಕಟಿಸಬೇಕೆಂದೂ, ವಿವಾದಗಳೇನಾದರೂ ಬಂದಲ್ಲಿ ತ್ವರಿತವಾಗಿ ತೀರ್ಮಾನಿಸಿ, ಜನವರಿ ತಿಂಗಳಿನಲ್ಲಿ ಕೊನೆಯದಾಗಿ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕೆಂದೂ, ಫೆಬ್ರವರಿ ತಿಂಗಳಲ್ಲಿ ಉಮೇದುವಾರರ ಪಟ್ಟಿ, ಉಮೇದುವಾರಿಕೆ ವಾಪಸ್ಸು ತೆಗೆದುಕೊಂಡವರ ಪಟ್ಟಿಯನ್ನು ಪ್ರಕಟಿಸಿ ಏಪ್ರೈಲ್‌ನಲ್ಲಿ ಮತಕೊಡುವಂತೇರ್ಪಡಿಸಬೇಕೆಂದು ತಿಳಿಸಿದರು.

ಪ್ರಧಾನಿ ಪಂ|| ನೆಹರೂರವರು ಈ ಚುನಾವಣಾಧಿಕಾರಿಗಳನ್ನುದ್ದೇಶಿಸಿ ಮಾತನಾಡುತ್ತ ದೇಶದಾದ್ಯಂತ ಅನಿರ್ಭಂಧಿತವಾಗಿ, ನ್ಯಾಯವಾಗಿ ಚುನಾವಣೆಗಳಾಗಬೇಕೆಂದೂ, ದೇಶದಲ್ಲಿ ಬಹಳಕಾಲ ತಾತ್ಕಾಲಿಕ ಸರ್ಕಾರವಿರುವುದು ದೇಶದ ಹಿತದ ದೃಷ್ಟಿಯಿಂದ ಸಮಂಜಸವಲ್ಲವೆಂದೂ, ಭಾರತಾದ್ಯಂತ ಒಟ್ಟು ೧೮ ಕೋಟಿ ಪ್ರಜೆಗಳು ಈಗ ಮತ ಕೊಡುವರು ಇದರಿಂದ ಭಾರತದ ಘನತೆಯು ಹೆಚ್ಚುವುದೆಂದು ತಿಳಿಸಿದರು.

ಕಾಗದಪತ್ರ ಬಟವಾಡೆಯಿಲ್ಲ

ಚೈನಾ ಪ್ರಜಾ ಸರ್ಕಾರದ ಮನ್ನಣೆಯನ್ನು ಪಡೆಯದಿರುವ ಪರರಾಷ್ಟ್ರಗಳ ಕಛೇರಿಗಳು ಕೆಲವು ಹಾಂಗ್ಕೈನಲ್ಲಿವೆ. ನವಂಬರ್ ೧ರಿಂದ ಈ ಕಛೇರಿಗಳಿಗೆ ಬರುವ ಕಾಗದಪತ್ರಗಳನ್ನು ಹಾಂಗ್ಕೈ ಅಂಚೇ ಇಲಾಖೆಯು ಬಟವಾಡೆ ಮಾಡದೇ, ಬಟವಾಡೆಯಾಗದ ಕಾಗದಗಳ ಜೊತೆಗೆ ಅವುಗಳನ್ನು ಸೇರಿಸಲಾಗುವುದೆಂದು ವರದಿಯಾಗಿದೆ.

ಚೈನಾದಲ್ಲಿ ಪ್ರಜಾ ಸರ್ಕಾರದ ಮನ್ನಣೆಯನ್ನು ಪಡೆಯದಿರುವವರ ರಾಷ್ಟ್ರಗಳ ಮೇಲೆ ಇದೇ ಮೊದಲನೇ ಪ್ರಹಾರ.

ಏಕಕಾಲದಲ್ಲಿ ಮೂರು ಶಿಶುಗಳ ಜನನ

ಡಾಡೋಹೂರ್ ಎಂಬ ಗ್ರಾಮದಲ್ಲಿ ರೈತ ಹೆಂಗಸೊಬ್ಬಳು ಏಕಕಾಲದಲ್ಲಿ ಮೂರು ಮಕ್ಕಳಿಗೆ ಜನ್ಮವಿತ್ತಿರುವಳು. ತಾಯಿ ಮಕ್ಕಳು ಆರೋಗ್ಯದಿಂದಿರುವರು

ವಸ್ತುಪ್ರದರ್ಶನದಿಂದ ಉತ್ಪತ್ತಿ

ಮೈಸೂರು ದಸರಾ ವಸ್ತುಪ್ರದರ್ಶನದಿಂದ ಒಟ್ಟು ೪೬,೪೭೦ ರೂ. ಗಳು ವಸೂಲಾಗಿದೆಯೆಂದು ತಿಳಿಯಬರುತ್ತದೆ. ಕಳೆದ ವರ್ಷ ಪ್ರವೇಶದಿಂದ ೭೦,೩೭೦ ರೂ. ಗಳು ವಸೂಲಾಗಿತ್ತು.

ಭಾರಿ ಕಳವು

ಬೆಂಗಳೂರು ಅ. ೩೧

ನಿನ್ನೆ ಮೈಸೂರು ಬ್ಯಾಂಕಿನ ಕಛೇರಿಯಲ್ಲಿ ಹಣ ಪಾವತಿಮಾಡಲು ೭,೦೦೦ ರೂ. ಗಳನ್ನು ಒಬ್ಬ ಖಾಸಗೀ ಮಹನೀಯರು ನೋಟುಗಳ ಕಂತೆಯನ್ನು ಪಕ್ಕದಲ್ಲಿಟ್ಟುಕೊಂಡು ಕೌಂಟರಿನಲ್ಲಿ ಅಧಿಕಾರಿಗಳೊಡನೆ ಮಾತನಾಡುತ್ತಲಿದ್ದಾಗ, ಸಮೀಪದಲ್ಲಿಯೇ ಕೆಲಸಮಾಡುತ್ತಲಿದ್ದ ಆರ್ಮುಗಂ ಎಂಬುವವನು ಆ ಕಂತೆಯನ್ನು ಎತ್ತಿಕೊಂಡು ಓಡಲೆತ್ನಿಸಿದನು. ಅವನನ್ನು ಅಟ್ಟಿಸಿಕೊಂಡು ಹೋಗಿ ಬ್ಯಾಂಕಿನ ಆವರಣದಲ್ಲಿಯೇ ಹಿಡಿಯಲಾಯಿತು. ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಪಿ. ಡಬ್ಲ್ಯು. ಡಿ.
ಪ್ರೊಬೇಷನರ ಆಯ್ಕೆ

ಬೆಂಗಳೂರು ಅ. ೩೧

ಮೈಸೂರು ಇಂಜನಿಯರಿಂಗ್ ಇಲಾಖೆಯಲ್ಲಿ ಪ್ರೊಬೇಷನರುಗಳ ಹುದ್ದೆಗಳಿಗೆ ನೇಮಕಮಾಡಿಕೊಳ್ಳಲು, ನಿನ್ನೆ ಮತ್ತು ಇಂದು, ಇದಕ್ಕೆ ಸಂಬಂಧಪಟ್ಟ ಸಮಿತಿಯವರು ಹಲವು ಅರ್ಜಿದಾರರಿಗೆ ಭೇಟಿಕೊಟ್ಟರು. ತಾವು ಆರಿಸಿದ ಉಮೇದುವಾರರ ಪಟ್ಟಿಯನ್ನು ಈ ಸಮಿತಿಯವರು ಸರ್ಕಾರಕ್ಕೆ ಕಳುಹಿಸುವರು. ಸರ್ಕಾರದವರು ಈ ಪೈಕಿ ಪ್ರೊಬೇಷನರುಗಳನ್ನು ಚುನಾಯಿಸುವರೆಂದು ತಿಳಿಯಬಂದಿದೆ

ಮಹಾರಾಜರ ಪ್ರವಾಸ
ಶಿವಮೊಗ್ಗ ಜಿಲ್ಲೆಯಲ್ಲಿ

ಶ್ರೀಮನ್ಮಹಾರಾಜರವರು ನವೆಂಬರ್ ತಿಂಗಳ ಮೂರನೇ ವಾರದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ಈ ಸಂದರ್ಭದಲ್ಲಿ ಆನಂದಪುರದ ಆಸ್ಪತ್ರೆ ಪ್ರಾರಂಭೋತ್ಸವ, ಶಿವಮೊಗ್ಗ ಪೌರಸಭೆಯ ಮಳಿಗೆಗಳ ಶಂಕುಸ್ಥಾಪನೆ ಮುಂತಾದ ಸಮಾರಂಭಗಳಲ್ಲಿ ಭಾಗವಹಿಸುವರೆಂದು ತಿಳಿಯಬಂದಿದೆ

ಬೆಲ್ಲದ ದಾಸ್ತಾನು ವಶ

ಬೊಂಬಾಯಿನಲ್ಲಿ ಎಲ್ಲಾ ಹೋಲ್‌ಸೇಲ್ ವ್ಯಾಪಾರಿಗಳ ಅಂಗಡಿಗಳಲ್ಲಿ ಬೆಲ್ಲದ ದಾಸ್ತಾನನ್ನು ವಶಪಡಿಸಿಕೊಳ್ಳಲಾಗಿದೆ. ಇದೇ ರೀತಿ ಕ್ರಮಕೈಗೊಳ್ಳಲು ಪ್ರಾಂತದ ಎಲ್ಲಾ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸೂಚಿಸಲಾಗಿದೆ. ಈ ದಾಸ್ತಾನನ್ನು ಸರ್ಕಾರಿ ಡಿಪೋಗಳು ಅಥವಾ ಸೊಸೈಟಿಗಳ ಮೂಲಕ ಹಂಚಿಕೆ ಮಾಡಲಾಗುವುದು.

● ನಿನ್ನೆಯದಿನ ಸಂಜೆ ಎನ್ ಐ.ಇ. ಯೂನಿಯನ್ನಿನ ಆಶ್ರಯದಲ್ಲಿ ಶ್ರೀ ಪಟೇಲರಜಯಂತೋತ್ಸವವನ್ನು ಶ್ರೀ ಎಚ್.ಆರ್. ಕೇಶವಮೂರ್ತಿರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಮಾರಂಭಕ್ಕೆ ಶ್ರೀ ಎಂ. ವಿ. ಕೃಷ್ಣರಾವ್‌ರವರು ಅತಿಥಿಗಳಾಗಿ ಆಗಮಿಸಿದ್ದರು. ಪ್ರಾರ್ಥನೆ, ಸ್ವಾಗತ ಭಾಷಣ, ನವೀನ ಹಾಡುಗಳು, ಇವುಗಳು ಆದನಂತರ ಶ್ರೀ ಎಂ. ವಿ. ಕೃಷ್ಣರಾವ್‌ರವರು ಭಾಷಣ ಮಾಡಿ ನಮ್ಮ ನಾಡಿನ ಹಿಂದಿನ ಚರಿತ್ರೆಯನ್ನು ವಿವರಿಸಿದುದಲ್ಲದೆ ಈಗಿನ ನಮ್ಮ ಉಪಪ್ರಧಾನರಾದ ಶ್ರೀ ವಲ್ಲಭಾಯ್‌ಪಟೇಲ್‌ರ ವಿಷಯವನ್ನು ಪ್ರಶಂಸನೀಯವಾಗಿ ತಿಳಿಸಿದರು. ನಂತರ ಅಧ್ಯಕ್ಷರ ಭಾಷಣವಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ನವಂಬರ್ ೨ ಗುರುವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೨೦ ಎಲ್. ಶ್ರೀನಿವಾಸನ್ (ನಾಗಸ್ವರ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ. ೧-೪೫ ಹಿಂದೀ ಶಿಕ್ಷಣ. ೨-೦ ತಾರಾವಾಹಿನಿ ೨-೩೦ ಮುಕ್ತಾಯ.

ಸಂಜೆ ೫-೩೦ ಎಲ್. ಶ್ರೀನಿವಾಸನ್ (ನಾಗಸ್ವರ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ ೬-೩೦ ಸ್ಥಳೀಯ ಪ್ರಕಟಣೆಗಳು. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ರಸನಿಮಿಷ (೮) ೭-೧೫ ಟಿ. ಆರ್. ಶ್ರೀನಿವಾಸನ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಕನ್ನಡ ಪದ್ಯಗಳು ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಟಿ. ಆರ್. ಶ್ರೀನಿವಾಸನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಿದ್ಯಾರ್ಥಿಮಂಡಲಿ ೧೦-೦ ಮುಕ್ತಾಯ.

ರಷ್ಯಾ ತನ್ನ ಸೈನ್ಯದ ಅಂಕಿ ಅಂಶಗಳನ್ನು ಕೊಡಲು ಸಿದ್ಧ

ಮಹಾರಾಷ್ಟ್ರಗಳು ತಮ್ಮ ಸೈನ್ಯಬಲವನ್ನು $\frac{1}{3}$ ಭಾಗದಷ್ಟು ಕಡಮೆಮಾಡಿಕೊಳ್ಳಲು ನಿರ್ಧರಿಸಿದ ಪಕ್ಷದಲ್ಲಿ ರಷ್ಯಾವು ತನ್ನ ಶಸ್ತ್ರಸೈನ್ಯಬಲದ ಅಂಕಿ ಅಂಶಗಳನ್ನೆಲ್ಲಾ ವಿಶದಪಡಿಸಿ ಅವುಗಳನ್ನು ಪರೀಕ್ಷಿಸಲು ಸಹ ತಕ್ಕ ಸೌಕರ್ಯಗಳನ್ನು ಕಲ್ಪಿಸಲು ಸಿದ್ಧವಿದೆಯೆಂದು ರಷ್ಯಾ ವಿದೇಶಾಂಗ ಮಂತ್ರಿ ವಿ|| ವಿಷಿನ್ಸ್ಕಿಯವರು ಭದ್ರತಾಸಮಿತಿಯಲ್ಲಿ ತಿಳಿಸಿರುವರು.

ರಣಜಿತ್
27-10-50 ಶುಕ್ರವಾರದಿಂದ
ಅಮೋಘ ೨ ನೇ ವಾರ
ಕೆ. ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ: ಮಧುಬಾಲ ✦ ಮೋತಿಲಾಲ್
ಮನೋರಮಾ ✦ ಗೋಪ್
ಬೆಳಗಿನ ಪ್ರದರ್ಶನ
3-11-50 ರಿಂದ 3 ದಿನಗಳು ಮಾತ್ರ
ಪಿಯಾ ಘರ್ ಆಜಾ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨—೧೧—೧೯೫೦ನೇ ಗುರುವಾರ [ಸಂಚಿಕೆ ೬೧

ಪ್ರೆಸಿಡೆಂಟ್ ಟ್ರೂಮನ್ನರ ಕೊಲೆಯತ್ನ?

ಕೊಲೆಪಾತಕರ ಮೇಲೆ ಗುಂಡು ಹಾರಿಸಲಾಯಿತು

ಅಮೆರಿಕಾ ಅಧ್ಯಕ್ಷ ಮಿ॥ ಟ್ರೂಮನ್ನರನ್ನು ಕೊಲೆಮಾಡಲೆತ್ನಿಸಿದ ಮೂವರ ಮೇಲೆ ಗುಪ್ತ ಸೈನಿಕರು ಟ್ರೂಮನ್ನರ ನಿವಾಸ ಬ್ಲೇರ್‌ಹೌಸ್ ಬಳಿ ಗುಂಡು ಹಾರಿಸಿದರು. ಒಬ್ಬನಿಗೆ ಎದೆಯಮೇಲೆ ಗುಂಡೇಟುಬಿದ್ದು ಬ್ಲೇರ್‌ಹೌಸ್ ಮೆಟ್ಟಿಲಿನಮೇಲೆ ಬಿದ್ದನು. ನ್ಯಾಷನಲಿಷ್ಟರು ಟ್ರೂಮನ್ನರನ್ನು ಕೊಲೆಮಾಡಲು ಒಳಸಂಚು ಹೂಡಿದ್ದರೆಂದು ವರದಿಯಾಗಿದೆ

ವಾಚಕರಲ್ಲಿ ವಿನಂತಿ

ಪತ್ರಿಕೋದ್ಯೋಗಿ ಸಮ್ಮೇಳನದ ಪ್ರಯುಕ್ತ ನಾಳೆ ೩-೧೧-೫೦ ಮತ್ತು ೪-೧೧-೫೦ ಪತ್ರಿಕೆಗೆ ರಜಾ ಕೊಡಲಾಗಿದೆ.

ಬೆಲ್ಲದ ದಾಸ್ತಾನು

ಬರುವ ದೀಪಾವಳಿ ಹಬ್ಬಕ್ಕೆ ಬೆಲ್ಲವನ್ನು ಜನರಿಗೆ ದೊರೆಯುವಂತೆ ಮಾಡಲು ಮದರಾಸು ಸರ್ಕಾರವು ಪ್ರಾಂತ್ಯಾದ್ಯಂತ ಬೆಲ್ಲದ ದಾಸ್ತಾನನ್ನು ವಶಪಡಿಸಿಕೊಳ್ಳುವುದಾಗಿ ಪ್ರಕಟಿಸಿದೆ.

ಕೊರಿಯಾದಲ್ಲಿ

ಅಮೆರಿಕಾ ಸೈನ್ಯಪಡೆಯು ಮಂಚೂರಿಯಾಗಡಿಗೆ ೩೦ ಮೈಲಿ ದೂರದಲ್ಲಿ ಎರಡು ಪಟ್ಟಣಗಳನ್ನು ವಶಪಡಿಸಿಕೊಂಡಿದೆ. ಈಗ ಗಡಿಗೆ ೧೫ ಮೈಲಿ ದೂರದಲ್ಲಿದೆಯೆಂದು ತಿಳಿಯಬರುತ್ತದೆ.

ಮಿ॥ ಟ್ರಿಗ್ವಿಲೈ ಪುನಃ ಸೆಕ್ರೆಟರಿ ಜನರಲ್

ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್‌ರಾದ ಮಿ॥ ಟ್ರಿಗ್ವೆಲೈ ರವರು ಇನ್ನೂ ಮೂರು ವರ್ಷಕಾಲ ಆ ಪದವಿಗೆ ೪೬-೫ ಓಟುಗಳಿಂದ ಚುನಾಯಿತರಾಗಿದ್ದಾರೆ. ರಷ್ಯಾವು ಈ ಚುನಾವಣೆಗೆ ವಿರೋಧಿಸಿತು. ಅಲ್ಲದೆ ಇದನ್ನು ಅಂಗೀಕರಿಸುವುದಿಲ್ಲವೆಂದೂ ತಿಳಿಸಿದೆ

ಬಟ್ಟೆ ಬೆಲೆ ಏರುವುದು

ಅತ್ಯುತ್ತಮ ದರ್ಜೆಯ ಬಟ್ಟೆಬೆಲೆ ಏರಿಸಲಾಗಿದೆಯೆಂದು ದೆಹಲಿಯಿಂದ ಸುದ್ದಿ ಹೊರಬಿದ್ದಿದೆ. ಯಾವ ಪ್ರಮಾಣದಲ್ಲಿ ಎಂಬುವುದು ಇನ್ನೂ ತಿಳಿಯಬಂದಿಲ್ಲ. ಬೊಂಬಾಯಿನಲ್ಲಿರುವ ಟೆಕ್ಸ್‌ಟೈಲ್ ಕಮಿಷನರವರು ಇದನ್ನು ನಿರ್ಧರಿಸಿ ಪ್ರಕಟಿಸುವರು.

ಕಾಣಿಕೆ

ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆಯ ಕೆಲಸ ಕಾರ್ಯಗಳನ್ನು ಸಂಗ್ರಹಿಸಿ ಹೊರಡಿಸಿರುವ ಪ್ರಸಿದ್ಧ ಪತ್ರಿಕೆಯನ್ನು ಸುವರ್ಣಾಕ್ಷರಗಳಿಂದ ಕೂಡಿದ ರಟ್ಟೆಯಿಂದ ಬೈಂಡ್ ಮಾಡಿದ ಒಂದು ಪುಸ್ತಕವನ್ನು ಸಂಸ್ಥಾನ ಶಾಖೆಯವರು ಸರದಾರ್ ವಲ್ಲಭಾಯಿ ಪಟೇಲರಿಗೆ ಅವರ ವರ್ಷ ವರ್ಧಂತಿಯ ಸಮಾರಂಭದಲ್ಲಿ ಕಾಣಿಕೆಯಾಗಿ ಕೊಟ್ಟರು.

ನೀರಿನ ಕ್ಷಾಮ

ಬಿಹಾರಿನಲ್ಲಿ ನೀರಿನ ಕ್ಷಾಮವುಂಟಾಗಿದೆಯೆಂದೂ ಇದನ್ನು ತಪ್ಪಿಸಲು ಕೇಂದ್ರ ಸರ್ಕಾರವು ನೆರವು ನೀಡಬೇಕೆಂದೂ ಅಲ್ಲಿಯ ಸಚಿವ ಶ್ರೀ ಅನುಗ್ರಹ ನಾರಾಯಣ ಸಿನ್ಹರವರು ಹೇಳಿರುವರು.

ಚೀಣಾ ಆಕ್ರಮಣಕ್ಕೆ ಕಾರಣ

ಟಿಬೆಟ್ಟಿನಲ್ಲಿ ಕೆಲವು ವಿದೇಶಿ ಶಕ್ತಿಗಳ ಜನಹಿತ ವಿರುದ್ಧ ಕಾರ್ಯಕ್ರಮಗಳ ಫಲವಾಗಿ ಚೀಣೀ ಸೈನ್ಯಗಳ ಚಲನವಲನ ಅವಶ್ಯಕವಾಯಿತೆಂದು ಚೀಣಾ ಭಾರತಕ್ಕೆ ತಿಳಿಸಿರುವುದಾಗಿ ವರದಿಯಾಗಿದೆ.

ವೈದ್ಯ ಸಮ್ಮೇಳನ

ಅಖಿಲ ಮೈಸೂರು ೧೮ ನೇ ವೈದ್ಯ ಸಮ್ಮೇಳನವು ಮುಂದಿನ ಜನವರಿಯಲ್ಲಿ ಹಾಸನದಲ್ಲಿ ನಡೆಯುವುದೆಂದು ತೀರ್ಮಾನವಾಗಿದೆ.

ಶ್ರೇಷ್ಠ ನ್ಯಾಯಾಧೀಶರ ನಿವೃತ್ತಿ ಸುದ್ದಿ ಆಧಾರವಿಲ್ಲದ್ದು

ಶ್ರೀಮನ್ಮಹಾರಾಜರವರು ಶ್ರೇಷ್ಠ ನ್ಯಾಯಾಧೀಶರಿಗೆ ಭೇಟಿ ನಿರಾಕರಿಸಿದರೆಂದೂ, ಅವರ ನಿವೃತ್ತಿ ? ಮುಂತಾದ ಸುದ್ದಿಗಳು ಪ್ರಕಟಣೆಯಾಗಿದ್ದುದು ಸಂಪೂರ್ಣ ಬುಡವಿಲ್ಲದ್ದು ಮತ್ತು ಬೇಜವಾಬ್ದಾರಿಯುತವಾದುದೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಬೆಂಗಳೂರಿಗೆ ಶ್ರೀ ಗುರುಸ್ವಾಮಿ

ಬೆಂಗಳೂರು ನ. ೧

ಅಖಿಲಭಾರತ ರೈಲ್ವೆ ಕೆಲಸಗಾರರ ಸಂಘದ ಜನರಲ್ ಸೆಕ್ರೆಟರಿ ಶ್ರೀ ಎಸ್. ಗುರುಸ್ವಾಮಿಯವರು ಇಂದು ಬೆಳಗ್ಗೆ ಮದರಾಸಿನಿಂದ ಬೆಂಗಳೂರಿಗೆ ಆಗಮಿಸಿದರು. ಅವರು ಗೃಹಸಚಿವರನ್ನು ಭೇಟಿಮಾಡಿ ವಜಾ ಮಾಡಲ್ಪಟ್ಟಿರುವ ಮೈಸೂರು ರೈಲ್ವೆ ಕೆಲಸಗಾರರನ್ನು ಕೆಲಸಕ್ಕೆ ಪುನಃ ಸೇರಿಸಿಕೊಳ್ಳುವ ಬಗ್ಗೆ ಸೂಕ್ತ ಶಿಫಾರಸ್ಸು ಮಾಡಬೇಕೆಂಬ ಅಂಶವನ್ನು ಒತ್ತಾಯಪಡಿಸುವರೆಂದು ತಿಳಿಯಬರುತ್ತದೆ.

ಬಟ್ಟೆಬರೆಗಳ ಅಪಹಾರ

ಜಾಲಹಳ್ಳಿಯ ಐ. ಎ. ಎಫ್‌ಗೆ ಸೇರಿದ ಶ್ರೀ. ಟಿ. ಎ. ಭಾರ್ಗವ ಎಂಬುವರು ಉಡುಪಿ ಹೋಟೆಲಿನಲ್ಲಿ ಒಂದು ಕೊರಡಿಯಲ್ಲಿದ್ದ ಅವರ ಸ್ನೇಹಿತ ದೆಹಲಿಯ ರಾಜಕುಮಾರ್ ಖನ್ನಾ ಚಂದ್ರಪ್ರಕಾಶ್‌ಕೋರಿ ಎಂಬುವರು ಶ್ರೀ ಭಾರ್ಗವರವರ ೧೪,೦೦೦ ರೂ. ಬೆಲೆ ಬಾಳುವ ಬಟ್ಟೆಬರೆಗಳನ್ನು ಅಪಹರಿಸಿ ಪರಾರಿಯಾಗಿದ್ದಾನೆಂದು ಪೋಲೀಸರಿಗೆ ದೂರುಹೋಗಿದೆ.

LATEST

ಬರ್ನಾರ್ಡ್‌ಷಾ ನಿಧನರಾದರು

೯೪ ವರ್ಷ ವಯಸ್ಸಿನ ಪ್ರಪಂಚ ಸುಪ್ರಸಿದ್ಧ ಸಾಹಿತಿ, ನಾಟಕ ಕರ್ತರೂ ಆದ ಮಿ॥ ಜಾರ್ಜ್ ಬರ್ನಾರ್ಡ್ ಷಾರವರು ನಿನ್ನೆ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ವಿಶೇಷ ಮಳೆ

ಬೆಂಗಳೂರು ನ. ೧

ಬೆಂಗಳೂರಿನಲ್ಲಿ ನಿನ್ನೆ ಬೆಳಗ್ಗೆಯಿಂದ ೧೨ ಗಂಟೆಯವರೆಗೆ ಭಾರಿ ಮಳೆಯಾಗಿ ಅನೇಕಕಡೆ ರಸ್ತೆಗಳಲ್ಲಿ ನೀರು ನಿಂತು ಓಡಾಟಕ್ಕೆ ಅಡಚಣೆಯುಂಟಾಗಿತ್ತು.

ಮಗ್ರೂರ್

ಮೈಸೂರಿನ ನಾಗರಿಕರ ನೆಚ್ಚಿದ ಚಲನಚಿತ್ರ ಮಂದಿರವಾದ ಒಲಂಪಿಯಾದಲ್ಲಿ

ವಿಶ್ವವಿದ್ಯಾನಿಲಯದ ಪದವೀಧರನಾಗಿ ಪಟ್ಟಣದ ಸೊಬಗಿಗೆ ಬೆರಗಾಗದೆ, ತನ್ನ ಅನ್ನ ಕೊಡುವಂತಹ ಭೂಮಿ ತನ್ನ ಪ್ರೇಯಸಿಗಿಂತ ಅಧಿಕವೆಂಬ ದಾಟಿಯಿಟ್ಟುಕೊಂಡು, ಹಳ್ಳಿಯೇ ದಿಲ್ಲಿಯೆಂಬ ಮನೋಭಾವನೆಯಿಂದ ಜೀವನ ಸಾಗಿಸುತ್ತಿದ್ದ ತರುಣನೋರ್ವನ ಕಥೆ.

ವಾಡಿಯಾ ಫಿಲಂ ಸಂಸ್ಥೆಯವರು ಮೀನಕುಮಾರಿ ಎಂಬ ಅದ್ಭುತ ಕಲಾರಮಣಿಯೊಬ್ಬಳನ್ನು ನೂತನವಾಗಿ ಸೃಷ್ಟಿಸಿ ಇತರ ತಾರೆಯವರು ಇವಳ ನಟನೆಯಿಂದ ಚಕಿತರಾಗುವಂತೆ ಮಾಡಿದ್ದಾರೆ. ದುರ್ಗಾಕೋಟೆಯವರ ಪಾತ್ರ ಪ್ರೇಕ್ಷಕರ ಮನಸ್ಸನ್ನು ಸೂರೆಗೊಳ್ಳುವಂತಿದೆ, ಅನವಶ್ಯಕವಾದ ಹಲವು ಪ್ರಸಂಗಗಳ ಜೋಡಣೆಯಾಗಿದ್ದರೂ ಚಿತ್ರಕ್ಕೆ ಅವು ಕುಂದು ತರುವಂತಿಲ್ಲ. ದಿಗ್ದರ್ಶನ, ಸಂಭಾಷಣೆ, ದೃಶ್ಯಜೋಡಣೆ, ಕಾಲಾನುಗುಣಕ್ಕೆ ತಕ್ಕ ಹಾಗೆ ಜೋಡಿಸಲ್ಪಟ್ಟು ಚಿತ್ರಕ್ಕೆ ಮೆರಗುಕೊಟ್ಟಿದೆ. ಉತ್ತಮ ಬೋಧಕಚಿತ್ರ.

● ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ೪ನೇ ತಾ॥ ಮೈಸೂರಿಗೆ ಬರುವರು.

● ನೆಲ್ಲೂರಿನ ಶ್ರೀ ವೆಂಕಟರಮಣಯೆಂಬುವವರು ಜಾತಿ ಆಧಾರದ ಮೇಲೆ ತಮ್ಮನ್ನು ಜಿಲ್ಲಾ ಮುನ್ಸೀಫರಾಗಿ ತೆಗೆದುಕೊಳ್ಳಲಿಲ್ಲವೆಂದೂ ಇದು ಭಾರತ ರಾಜ್ಯಾಂಗ ಪ್ರಕಾರ ಪ್ರಜೆಗಳ ಹಕ್ಕುಬಾಧ್ಯತೆಯ ಕಾನೂನಿಗೆ ವಿರುದ್ಧವೆಂದು ಮದರಾಸ್ ಸರ್ಕಾರದ ಮೇಲೆ ಭಾರತ ಸುಪ್ರೀಂಕೋರ್ಟಿನಲ್ಲಿ ದಾವಾ ಹೂಡಿದ್ದಾರೆ.

● ಶಾರದಾ ಯೂನಿಯನ್ನಿಗಾಗಿ ನವೆಂಬರ್ ೫ ನೇ ತಾರೀಖು ಭಾನುವಾರ ಬೆಳಗ್ಗೆ ಲಕ್ಷ್ಮೀಥಿಯೇಟರಿನಲ್ಲಿ ಏರ್ಪಡಿಸಿದ್ದ ಸಹಾಯ ಚಿತ್ರಪ್ರದರ್ಶನವನ್ನು ಇದೇ ಮಾಹೆ ೯ ನೇ ತಾರೀಖು ಗುರುವಾರ ಬೆಳಗ್ಗೆ ೧೦-೩೦ ಘಂಟೆಗೆ ಮುಂದುವರಿಸಿದೆ ಎಂದು ಸೆಕ್ರೆಟರಿಗಳು ತಿಳಿಸುತ್ತಾರೆ.

● ವಿಶ್ವಶಾಂತಿ ಮನವಿಗೆ ಶ್ರೀ. ಕೆ. ಹನುಮಂತಯ್ಯನವರು ಸಹಿ ಹಾಕಿಲ್ಲವೆಂದು ತಿಳಿಯಬರುತ್ತದೆ.

ಮೈಸೂರು ಕಾಂಗ್ರೆಸ್ ಮುಖಂಡರುಗಳಲ್ಲಿ ಇವರುಗಳು ಸಹಿಮಾಡಿದ್ದಾರೆ. ಶ್ರೀಗಳಾದ ಟಿ. ಸುಬ್ರಹ್ಮಣ್ಯಂ ಹೆಚ್. ಕೆ. ವೀರಣ್ಣಗೌಡ, ಸುಬ್ಬಣ್ಣ (ಮಾ ಜಿ. ಬೆಂಗಳೂರು ಮೇಯರ್) ಆರ್. ಎಸ್. ಆರಾಧ್ಯ, ಹುಚ್ಚುಮಾಸ್ತಿಗೌಡ, ಶಿವಮೊಗ್ಗ ಡಿ॥ ಬೋರ್ಡ್ ಪ್ರೆಸಿಡೆಂಟ್ ಬದರಿನಾರಾಯಣ.

ಸೆನ್ಸಸ್ ತೆಗೆದುಕೊಳ್ಳುವುದೇಕೆ ?

ಶ್ರೀ ಮಾಸ್ತಿಯವರ ಭಾಷಣ

‘ಸೆನ್ಸಸ್ ತೆಗೆದುಕೊಳ್ಳುವುದೇಕೆ’ ಎಂಬ ವಿಷಯವಾಗಿ ಮೈಸೂರು ಆಲ್-ಇಂಡಿಯಾ ರೇಡಿಯೋ ಕೇಂದ್ರದ ಮೂಲಕ ೧೯೩೧ನೇ ಇಸವಿಯ ಸೆನ್‌ಸಸ್ ಸೂಪರಿನ್‌ಟೆನ್‌ಡೆಂಟರಾಗಿದ್ದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್‌ರವರು ನಿನ್ನೆ ಭಾಷಣಮಾಡಿದರು.

ತಮ್ಮ ಭಾಷಣದಲ್ಲಿ ಶ್ರೀ ಮಾಸ್ತಿಯವರು ಹಿಂದಿನ ಕಾಲದಲ್ಲಿ ಜನಗಣತಿಯನ್ನು ಯಾವ ರೀತಿ ತೆಗೆದುಕೊಳ್ಳುತ್ತಿದ್ದರು. ಈಗ ಯಾವ ರೀತಿ ತೆಗೆದುಕೊಳ್ಳುತ್ತಲಿದ್ದಾರೆ. ಸ್ವಾತಂತ್ರಬಂದ ಮೇಲೆ ತೆಗೆದುಕೊಳ್ಳುವ ಈ ಜನಗಣತಿಯ ಕ್ರಮವೇ ಬದಲಾಯಿಸಬೇಕಾದ ಅವಶ್ಯಕತೆಯೇನು ಎಂಬೆಲ್ಲ ವಿಷಯಗಳನ್ನು ಎಲ್ಲರಿಗೂ ತಿಳಿಯುವಂತೆ ಹೇಳಿದರು.

ಈಗ ನಡೆಯುವ ಸೆನ್‌ಸಸ್ ಜನರ ಬಾಳುವೆಯ ಪರಿಸ್ಥಿತಿಯನ್ನು [illegible] ಉದ್ದೇಶದಿಂದ ಪ್ರವೃತ್ತವಾಗಿದೆ. ಆಡಳಿತಗಳು ಮೂಲದಲ್ಲಿ ಇಂಥ ಲೆಕ್ಕಗಳನ್ನು ಮಾಡಿದ್ದು ಎಷ್ಟು ತೆರಿಗೆ ಹಾಕುವುದನ್ನು ತಿಳಿಯುವುದಕ್ಕಾಗಿ, ಈ ಜನಗಣತಿಯು ಜನಸಂಖ್ಯೆಯಷ್ಟೇ ಮುಖ್ಯವಾಗಿ ಜನರ ವಯಸ್ಸಿನ ಲೆಕ್ಕವೂ ಸಮಾಜದ ಆರೋಗ್ಯಸ್ಥಿತಿಯೂ ಸೂಚಿಸುತ್ತದೆ. ನಮ್ಮ ಜನಾಂಗ ಒಟ್ಟಿನಲ್ಲಿ ಕ್ಷೇಮವಾಗಿ ಬಾಳ ಬರುತ್ತಿರುವುದಾದರೆ ಈ ಬಾಳನ್ನು ಬರುವಕಾಲದಲ್ಲಿ ಯಾವರೀತಿ ಮತ್ತಷ್ಟು ಚೆನ್ನಮಾಡಬಹುದು. ನಮ್ಮ ಜನತೆ ತನ್ನ ಇಂದಿನ ಶುಭವನ್ನು ಕಾಯ್ದುಕೊಂಡು ಹೆಚ್ಚಿನ ಶುಭವನ್ನು ಸಾಗಿಸಲು ತೊಡಗಬೇಕಾಗಿದೆ. ಈ ಬಗ್ಗೆ ಅದು ಯಾವ ಯಾವ ದಿಕ್ಕಿನಲ್ಲಿ ಎಷ್ಟೆಷ್ಟು ಪ್ರಯತ್ನಮಾಡಬೇಕು ಎನ್ನುವುದನ್ನು ನಮ್ಮ ಸೆನ್‌ಸಸ್ಸಿನ ಅಂಕೆ-ಸಂಖ್ಯೆಗಳು ತೋರಿಸಿಕೊಡುತ್ತವೆ. ಜನಾಂಗಕ್ಕೆ ಮುಂಬರಿವಿನ ದಾರಿಯನ್ನು ತೋರಿಸುವ ಬೆಳಕನ್ನೂ, ಅದರಲ್ಲಿ ನಡೆಯುವ ಪ್ರವೃತ್ತಿಯನ್ನು ಹುಟ್ಟಿಸುವ ಶಕ್ತಿಯನ್ನೂ, ಒದಗಿಸುವುದೇ ಈ ಅಂಕೆಸಂಖ್ಯೆಗಳ ಉದ್ದೇಶ ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು.

ಪತ್ರಿಕೆಗಳಿಗೆ ರಜಾ

ಇದೇ ೪ ಮತ್ತು ೫ನೇ ತಾ. ಗಳಲ್ಲಿ ಮೈಸೂರಿನಲ್ಲಿ ನಡೆಯಲಿರುವ ಅಖಿಲ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಸಂಸ್ಥಾನಗಳ ಎಲ್ಲಾ ವೃತ್ತಪತ್ರಿಕೆಗಳು ೪-೫ ತಾ ಗಳಲ್ಲಿ ರಜಾ ಕೊಟ್ಟು ಸಹಕರಿಸಬೇಕೆಂದು ಸ್ವಾಗತಸಮಿತಿ ಪ್ರಾರ್ಥಿಸಿದೆ.

ಜಿನ್ನಾ ಮುಸ್ಲಿಂಲೀಗ್

ಪಾಕಿಸ್ಥಾನದಲ್ಲಿ ಮುಸ್ಲಿಂಲೀಗಿನ ಮುಖಂಡರಾಗಿದ್ದ ಸಂಸ್ಥೆಯ ಚಟುವಟಿಕೆಗಳು ತಮಗೆ ತೃಪ್ತಿಕರವಾಗಿಲ್ಲವೆಂದು ರಾಜೀನಾಮೆಯಿತ್ತ ಖಾನ್ ಇಫ್ತಿಕರ್ ಹುಸೇನ್ ಖಾನ್ ಮಮ್ದೋತ್‌ರವರು ಪಾಕಿಸ್ಥಾನದಲ್ಲೇ ‘ಜಿನ್ನಾ ಮುಸ್ಲಿಂಲೀಗ್’ ಎಂಬ ನೂತನ ಸಂಸ್ಥೆಯೊಂದನ್ನು ಸ್ಥಾಪಿಸುವರು.

ಮಿ॥ ಟ್ರಿಗ್ವೆಲೈ ಕೃತ್ರಿಮಿ

ಮಿ॥ ಟ್ರಿಗ್ವೆಲೈಯವರು ಒಬ್ಬ ಕೃತ್ರಿಮಿಯೆಂದು ರಷ್ಯಾ ವಿದೇಶಾಂಗ ಮಂತ್ರಿ ಮಿ॥ ವಿಷಿನ್ಸ್ಕಿಯವರು ಆರೋಪಿಸಿದ್ದಾರೆ.

ಸಂಸ್ಥಾನ ಪತ್ರಿಕೋದ್ಯೋಗಿಗಳ ಸಮ್ಮೇಳನ

ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಕೆ. ಜೀವಣ್ಣರಾವ್‌ರವರು ೩-೧೧-೫೦ನೇ ಶುಕ್ರವಾರ ಮಧ್ಯಾಹ್ನ ಬೆಂಗಳೂರಿನಿಂದ ಹೊರಟು ಮೈಸೂರಿಗೆ ಸಂಜೆ ೫-೧೫ಕ್ಕೆ ರೈಲಿನಲ್ಲಿ ಆಗಮಿಸುವರು. ಅವರನ್ನು ಸ್ವಾಗತಿಸಲು ಸ್ವಾಗತಸಮಿತಿ ಸದಸ್ಯರೆಲ್ಲರೂ ರೈಲ್ವೆ ನಿಲ್ದಾಣಕ್ಕೆ ಬರಬೇಕಾಗಿ ಸ್ವಾಗತ ಸಮಿತಿ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಭಾರತದಲ್ಲಿ ಮಹಾಚುನಾವಣೆ

ಮೇ ತಿಂಗಳಿನಲ್ಲಿ ನಡೆಯುವುದು ಶತಸ್ಸಿದ್ಧ.

ಏನೇ ಆಗಲಿ ಭಾರತದ ಮಹಾ ಚುನಾವಣೆಗಳು ೧೯೫೧ ನೇ ಮೇ ತಿಂಗಳ ಅಂತ್ಯದೊಳಗಾಗಿ ಮುಗಿಯಲೇಬೇಕು. ಹವಾಮಾನ ಮತ್ತು ವೈವಿಧ್ಯತೆ, ಕಾಲದೋಷಗಳು ಮಹಾಚುನಾವಣೆಗಳಿಗೆ ಅಡ್ಡಿಯಾಗಕೂಡದು.

ಸಧ್ಯದ ಸರ್ಕಾರಗಳು ಉಸ್ತುವಾರಿ ಸರ್ಕಾರಗಳಾಗಿ ದೀರ್ಘಕಾಲ ಮುಂದುವರಿಯುವುದು ಸಾಧ್ಯವಿಲ್ಲ. ಇಂದು ಉದ್ಭವಿಸಿರುವ ಅನಿರ್ದಿಷ್ಟತೆ ಮತ್ತು ಸಂದೇಹಗಳ ಮೂಲೋತ್ಪಾಟನ ದೃಷ್ಟಿಯಿಂದ ಮಹಾಚುನಾವಣೆ ಶೀಘ್ರವಾಗಿ ನಡೆಯುವುದು ಅತ್ಯಗತ್ಯ.

ಚುನಾವಣೆಗಳ ಬಗ್ಗೆ ಯಾರಿಂದಲೂ ಯಾವ ರೀತಿಯಾದ ಆಕ್ಷೇಪಣೆಯಾಗಲೀ ದೂರಾದಗಲೀ ಬರಹ ರೀತಿಯಲ್ಲಿ ಚುನಾವಣೆಗಳು ನಡೆಯಬೇಕೆಂಬುದನ್ನು ಎಲ್ಲರೂ ಪೂರ್ಣ ಗಮನದಲ್ಲಿಟ್ಟುಕೊಂಡಿರಬೇಕು. ಚುನಾವಣೆಗಳು ಸ್ವತಂತ್ರವಾಗಿಲ್ಲದೇ ಹೋದರೆ ನಮ್ಮ ರಾಜ್ಯಾಂಗದ ಅಸ್ಥಿತ್ವತೇ ಬಲಗುಂದುವುದು ಎಂಬುದಾಗಿ ಪಂಡಿತ ನೆಹರೂ ಸಂಸ್ಥಾನಗಳ ಮುಖ್ಯ ಚುನಾವಣಾಧಿಕಾರಿಗಳನ್ನುದ್ದೇಶಿಸಿ ದೆಹಲಿಯಲ್ಲಿ ತಿಳಿಸಿದರು.

ಮಗ್‌ರೂರ್
ಚಿತ್ರರತ್ನದ ಪ್ರದರ್ಶನವನ್ನು
ನಿರೀಕ್ಷಿಸಿರಿ !
— ಒಲಂಪಿಯಾ —
ದಲ್ಲಿ
ಮೇಲಾ ಮತ್ತು ಬಾಲಮ್
ನಿರ್ಮಾಪಕರಿಂದಲೇ ತಯಾರಿಸಲ್ಪಟ್ಟಿದೆ
ಬೆಳಗಿನ ತಂಗಾಳಿಯಷ್ಟು ಹರ್ಷದಾಯಕವಾಗಿರುವುದು !
ಪರ್ವತ ಚಿಲುಮೆಗಳಂತೆ ಥಳಥಳ ರಂಜಿಸುತ್ತಿರುವುದು!!
ಕಾಮನಬಿಲ್ಲಿನಂತೆ ವಿಸ್ಮಯಗೊಳಿಸುತ್ತಿರುವುದು !!!
ಪಾತ್ರವರ್ಗದಲ್ಲಿ :—
ನಿಗಾರ್ ಸುಲ್ತಾನಾ, ರೆಹಮಾನ್, ಜೈರಾಜ್,
ಮೀನಕುಮಾರಿ, ಮಿರ್ಜಾ ಮುಸ್ಸರಾಫ್,
ದುರ್ಗಾ ಖೋಟೆ

ಟಿಬೆಟ್ ಆಕ್ರಮಣ

ಚೈನಾವು ಮೂರು ವಾರಗಳಿಂದ ಟಿಬೆಟ್ಟಿನಲ್ಲಿ ಕಾರ್ಯಾಚರಣೆಯನ್ನು ನಡೆಸುತ್ತಲಿದೆ. ಈಗಾಗಲೇ ೪೦೦೦ ಟಿಬೆಟ್ ಸೈನಿಕರು ಈ ಕಾರ್ಯಾಚರಣೆಯಲ್ಲಿ ಮಡಿದಿದ್ದಾರೆ ಅಥವಾ ಕೈಸೆರೆಯಾಗಿದ್ದಾರೆಂದು ಪೀಕಿಂಗ್ ರೇಡಿಯೋ ತಿಳಿಸಿರುವುದಾಗಿ ವರದಿಯಾಗಿದೆ.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೭ ಮೀಟರು
ನವಂಬರ್ ೩ ಶುಕ್ರವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೨೦ ಬಿ. ಶ್ರೀನಿವಾಸಯ್ಯಂಗಾರ್ (ಸಂಗಿತ) ೭-೩೫ ಚಿತ್ರಲೋಕ (ರಿ) ೭-೪೫ ಕನ್ನಡದ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪ ಕೊಳಲು ೧-೪೫ ಹಿಂದೀ ಶಿಕ್ಷಣ. ೨-೦ ನಿಮ್ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ.

ಸಂಜೆ ೫-೩೦ ಆರ್. ವಾಸುದೇವಮೂರ್ತಿ (ಸಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾ ವಿಹಾರ ೬-೩೦ ಸ್ಥಳೀಯ ಪ್ರಕಟಣೆಗಳು ೬-೩ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಹಿಂದಿ ಭಜನೆ ೭-೧೫ ಆರ್. ವಾಸುದೇವಮೂರ್ತಿ (ಸಂಗೀತ) ೭-೩೦ ವಿಶ್ವವಾಣಿ. ೭-೪೫ ಕನ್ನಡದ ವಾರ್ತೆ. ೮-೦ ಕುಂಭಕೋಣಂ ರಾಜಮಾಣಿಕ್ಯಂಪಿಳ್ಳೆ (ಪಿಟೀಲು–ರಿ) ೮-೧೫ ಬಿ. ಶ್ರೀನಿವಾಸಯ್ಯಂಗಾರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಅರಮನೆ ಆರ್ಕೆಸ್ಟ್ರ ೧೦-೦ ಮುಕ್ತಾಯ.

ಟಿಬೆಟ್ ಸಮಸ್ಯೆ ಪರಿಹರಿಸಲು ಭಾರತಕ್ಕೆ ಸಾಧ್ಯವಿಲ್ಲ

ಉಪಪ್ರಧಾನಿ ಸರದಾರ್ ಪಟೇಲರವರು ಅಹಮದಾಬಾದಿನಲ್ಲಿ ಮಾತನಾಡುತ್ತ ವಿಶ್ವಸಂಸ್ಥೆಯು ಇನ್ನೂ ಮಹಾತ್ಮರ ಸಿದ್ಧಾಂತವನ್ನು ಪಾಲಿಸಲು [illegible] ವುದು ವಿಷಾದಕರ. ಚೀಣಾ ಸರ್ಕಾರವು ಟಿಬೆಟ್ ಆಕ್ರಮಣವು ತಮಗೆ ಸೇರಿರುವುದು ಇತರರ ಪ್ರವೇಶಕ್ಕೆ ಅವಕಾಶವಿಲ್ಲವೆಂದು ತಿಳಿಸಿರುವುದು. ಟಿಬೆಟ್ ಸಮಸ್ಯೆಯನ್ನು ಪರಿಹರಿಸಲು ಭಾರತಕ್ಕೆ ಸಾಧ್ಯವಿಲ್ಲ ಶಾಂತಿಯುತವಾಗಿ ಈ ಸಮಸ್ಯೆ ಬಗೆಹರಿಯಬೇಕೆಂಬುದೇ ಭಾರತದ ಆಶಯವೆಂದು ತಿಳಿಸಿದರು.

ರಣಜಿತ್
27-10-50 ಶುಕ್ರವಾರದಿಂದ
ಅಮೋಘ ೨ ನೇ ವಾರ
ಕೆ. ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ: ಮಧುಬಾಲ + ಮೋತಿಲಾಲ್
ಮನೋರಮ+. ಗೋಪ್
ಬೆಳಗಿನ ಪ್ರದರ್ಶನ
3-11-50 ರಿಂದ ೨ ದಿನಗಳು ಮಾತ್ರ
ಪಿಯಾ ಘರ್ ಆಜಾ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೭—೧೧—೧೯೫೦ನೇ ಮಂಗಳವಾರ [ಸಂಚಿಕೆ ೬೨

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಪತ್ರಿಕೆಗಳ ಪ್ರಭಾವ ಮಹತ್ತರವಾದುದು ಜವಾಬ್ದಾರಿ ಗುರುತರವಾದುದು

★ ನಿಮಗಿರತಕ್ಕ ಶಕ್ತಿ ಸಾಮರ್ಥ್ಯಗಳನ್ನು ದೇಶದ ಪ್ರಗತಿ ಸಾಧನೆಗಾಗಿ ಉಪಯೋಗಿಸಿ ★

ಎಲ್ಲ ಹತೋಟಿಗಳ ಪೈಕಿ ತನ್ನ ಮೇಲೆ ತಾನು ಇಟ್ಟುಕೊಳ್ಳುವ ಹತೋಟಿ ಅತ್ಯಂತ ಪರಿಣಾಮಕಾರಿಯಾದುದು. ಪತ್ರಿಕಾವೃತ್ತಿಯು ನಮ್ಮ ದೇಶದಲ್ಲಿ ಅಂಥಾ ಸಾಧನಾಯಕವಾದುದಲ್ಲ. ಎಲ್ಲ ಲಲಿತಕಲೆಗಳಂತೆಯೇ ಇದು ವಿಶೇಷ ಸುಲಭವಾದುದೂ ಅಲ್ಲ. ಪತ್ರಿಕಾವೃತ್ತಿಯನ್ನು ಅನುಸರಿಸುವವರು ಕೇವಲ ಅದರಲ್ಲಿ ತಮಗಿರತಕ್ಕ ಪ್ರೇಮದಿಂದ ಉದ್ಯುಕ್ತರಾಗಿರುತ್ತಾರೆ ಎಂದು ಶ್ರೀಮನ್ಮಹಾರಾಜರವರು ಸಂಸ್ಥಾನ ಪತ್ರಿಕೋದ್ಯೋಗಿಸಮ್ಮೇಳನ ಆರಂಭೋತ್ಸವವನ್ನು ನೆರವೇರಿಸುತ್ತ ತಿಳಿಸಿದರು.

ಸಮಾರಂಭವು ಜಗನ್ಮೋಹನ ಬಂಗ್ಲೆಯಲ್ಲಿ ಸಮಾವೇಶಗೊಂಡಿತು. ಸಂಸ್ಥಾನದ ನಾನಾ ಭಾಗಗಳಿಂದ ೦೦ಕ್ಕೆ ಮೇಲ್ಪಟ್ಟು ಪ್ರತಿನಿಧಿಗಳು ಆಗಮಿಸಿದ್ದರು. ಶ್ರೀ ಅಚ್ಯುತರಾವ್‌ರ ಪ್ರಾರ್ಥನೆ, ಶ್ರೀಮತಿ ಶಮಂತಕಮಣಿಯವರ ಸ್ವಾಗತಗೀತೆಯಾದನಂತರ ಸ್ವಾಗತಸಮಿತಿ ಅಧ್ಯಕ್ಷ ಶ್ರೀ ಕುಮಾರಸ್ವಾಮಿಯವರು ಸ್ವಾಗತ ಭಾಷಣ ಮಾಡಿದನಂತರ ಮಹಾರಾಜರು ಆರಂಭ ಭಾಷಣ ಮಾಡಿದರು.

ಶ್ರೀಮನ್ಮಹಾರಾಜರ ಭಾಷಣ

ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದ ಏಳನೆಯ ವಾರ್ಷಿಕಾಧಿವೇಶನವನ್ನು ಸಮಾರಂಭಗೊಳಿಸುವುದಕ್ಕಾಗಿ ಈ ದಿನ ಇಲ್ಲಿಗೆ ಬಂದಿರುವುದು ನನಗೆ ತುಂಬ ಸಂತೋಷವನ್ನುಂಟುಮಾಡಿದೆ.

ಪತ್ರಿಕೆಗಳ ಶಕ್ತಿಪ್ರಭಾವಗಳು ಮಹತ್ತರವಾದುವೆಂಬುದು ಸರ್ವಕಾಲದಲ್ಲಿಯೂ ಸರ್ವರಿಂದಲೂ ಅಂಗೀಕರಿಸಲ್ಪಟ್ಟಿರತಕ್ಕ ವಿಷಯ, ಈಗಲಂತು, ನಮ್ಮ ದೇಶಕ್ಕೆ ಸ್ವಾತಂತ್ರ್ಯವು ಲಭಿಸಿ ಪ್ರಜಾಸತ್ತಾತ್ಮಕ ಆಡಳಿತವು ಏರ್ಪಟ್ಟಿರತಕ್ಕ ಈ ಸನ್ನಿವೇಶದಲ್ಲಿ ಪತ್ರಿಕೆಗಳ ಪ್ರಭಾವವು ಅತ್ಯಂತ ಶ್ರೇಷ್ಠವಾಗಿದೆಯೆಂದು ಹೇಳಬಹುದಾಗಿದೆ. ಇದಕ್ಕಾಗಿ ನೀವು ಹೆಮ್ಮೆಪಟ್ಟು ಮನಸ್ಸಿನಲ್ಲಿ ನಲಿಯಬಹುದಾಗಿದೆ.

ಆದರೆ ಈ ಸಂತೋಷದ ಜೊತೆಗೆ ಅದಕ್ಕೆ ತಕ್ಕ ಜವಾಬ್ದಾರಿಯೂ ಇದೆ. ಶಕ್ತಿಯು ಅಧಿಕವಾದಷ್ಟೂ ಅದನ್ನು ಚಲಾಯಿಸುವುದರಲ್ಲಿ ವಿಶೇಷ ಜಾಗರೂಕರಾಗಿರಬೇಕಾದ ಅವಶ್ಯಕತೆಯೂ ಹೆಚ್ಚಾಗಿರುತ್ತದೆ. ಪತ್ರಿಕೋದ್ಯೋಗಿಗಳು ನಿಮಗಿರತಕ್ಕ ಶಕ್ತಿ ಸಾಮರ್ಥ್ಯಗಳನ್ನು ದೇಶದ ಪ್ರಗತಿ ಸಾಧನೆಗಾಗಿಯೂ ಮತ್ತು ಸಂಸ್ಥಾನದ ಜನಜೀವನದಲ್ಲಿ ಸಾಮರಸ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿಯೂ ನೀವು ವಿನಿಯೋಗಿಸಬೇಕೆಂದು ನಾವು ಬಯಸುತ್ತೇವೆ. ಒಂದು ಪತ್ರಿಕೆಯ ಇತ್ತೀಚಿನ ಒಂದು ಸಂಚಿಕೆಯಲ್ಲಿ ಪ್ರಕಟವಾಗಿದ್ದ ಒಂದು ಲೇಖನದಲ್ಲಿ ಆ ಲೇಖಕರು ಒಂದು ಮಾತನ್ನು ಹೇಳಿದ್ದಾರೆ. ಯಾವುದನ್ನಾದರೂ ಕುರಿತು ಮಾಡಲ್ಪಡತಕ್ಕ ಟೀಕೆಯು, ಸಹಾಯಕವಾಗಿಯೂ, ಪ್ರಾಮಾಣಿಕವಾಗಿಯೂ, ಗಂಭೀರವಾಗಿಯೂ ಮತ್ತು ಸಾಧ್ಯವಾದಮಟ್ಟಿಗೂ ವ್ಯಕ್ತಿ ವಿಷಯವಾಗಿಲ್ಲದೆಯೂ ಇರಬೇಕು. ಹೀಗೆಂಬುದೇ ಆ ಲೇಖಕರು ಹೇಳಿರತಕ್ಕ ಮಾತು. ಪ್ರತಿಯೊಂದು ದೇಶಕ್ಕೂ ಅಲ್ಲಿನ ಜನಗಳ ಮನೋಭಾವದ ಮಟ್ಟಕ್ಕೆ ತಕ್ಕಂಥ ಸರ್ಕಾರವೇ ದೊರೆಯುತ್ತದೆ ಎಂಬುದಾಗಿ ಒಂದು ಹಳೆಯ ನಾಣ್ಣುಡಿಯಿದೆ. ಪತ್ರಿಕೆಗಳ ವಿಷಯದಲ್ಲಿಯೂ ಅದೇ ರೀತಿಯಲ್ಲಿ ಹೇಳಬಹುದು. ಪ್ರತಿಯೊಂದು ದೇಶದಲ್ಲಿಯೂ ಆ ದೇಶದ ಜನರ ಮನೋಭಾವದ ಮಟ್ಟಕ್ಕೆ ತಕ್ಕಮಟ್ಟದಲ್ಲಿನ ಪತ್ರಿಕೆಗಳೇ ಇರುತ್ತವೆ. ಜನಗಳು ಮನಸ್ಸನ್ನು ಉದ್ರೇಕಗೊಳಿಸತಕ್ಕಂಥ ಪತ್ರಿಕೆಗಳನ್ನು ಓದಿ ಪ್ರೋತ್ಸಾಹಗೊಳಿಸುವುದರಲ್ಲಿ ಆಸಕ್ತರಾಗಿ ಸಂತೋಷಪಡುತ್ತಾ ಬಂದರೆ, ಸರಿಯಾದ ರೀತಿಯ ಮತ್ತು ಸೌಮ್ಯವಾದ ಬರವಣಿಗೆಗಳನ್ನೊಳಗೊಂಡ ಪತ್ರಿಕೆಗಳು ಪ್ರಕಟವಾಗುವುದಕ್ಕೆ ಉತ್ತೇಜನವೇ ಇರುವುದಿಲ್ಲ. ಘನತೆ ಗಾಂಭೀರ್ಯಗಳಿಲ್ಲದೆ ಇರತಕ್ಕ ಬರವಣಿಗೆಗಳನ್ನೊಳಗೊಂಡ ಪತ್ರಿಕೆಗಳನ್ನು ಜನಗಳು ನಿರಾಕರಿಸಿ ಕೇವಲ ಉತ್ತಮ ದರ್ಜೆಯ ಪತ್ರಿಕೆಗಳಿಗೇ ಪ್ರೋತ್ಸಾಹಕೊಡುತ್ತಾ ಬಂದಲ್ಲಿ ಪತ್ರಿಕೆಗಳ ವಿಷಯದಲ್ಲಿ ಯಾವ ದೂರಿಗೂ ಅವಕಾಶವಿರುವುದಿಲ್ಲ. ಆದುದರಿಂದ ಯಾವ ದೇಶದಲ್ಲಿಯೇ ಆಗಲಿ ಪತ್ರಿಕೆಗಳು ಉನ್ನತಮಟ್ಟದಲ್ಲಿರುವಂತೆ ಮಾಡುವುದು ಬಹುಮಟ್ಟಿಗೆ ಜನಗಳ ಕೈಯಲ್ಲಿಯೇ ಇರುತ್ತದೆ. ನಮ್ಮ ಸಂಸ್ಥಾನದಲ್ಲಿ ಸಾಮಾನ್ಯವಾಗಿ ಪತ್ರಿಕೆಗಳ ರೀತಿನೀತಿಗಳು ಉನ್ನತಮಟ್ಟದಲ್ಲಿವೆಯೆಂದು ತಿಳಿಸಲು ನಾವು ಹರ್ಷಿಸುತ್ತೇವೆ. ಆದಾಗ್ಯೂ, ಕೆಲವು ಪತ್ರಿಕೆಗಳ ವಿಚಾರದಲ್ಲಿ ಅವುಗಳಲ್ಲಿ ಪ್ರಕಟವಾಗತಕ್ಕ ವಿಷಯಗಳ ಸಂಬಂಧದಲ್ಲಿಯೂ ಮತ್ತು ಆ ವಿಷಯಗಳು ಪ್ರಕಟಿಸಲ್ಪಡತಕ್ಕ ರೀತಿನೀತಿಗಳ ಸಂಬಂಧದಲ್ಲಿಯೂ ಸ್ವಲ್ಪ ಸುಧಾರಣೆಯು ನಡೆಯಬೇಕಾದುದು ಅವಶ್ಯಕವೆಂಬುದನ್ನು ತಿಳಿಸದೆ ಮರೆಮಾಚಲು ಸಾಧ್ಯವಿಲ್ಲ.

ಇಂಥ ಕೆಲವು ಪತ್ರಿಕೆಗಳೇ ಕೆಲವು ವೇಳೆ ಸ್ವಾತಂತ್ರ್ಯಪ್ರಿಯ ಉತ್ಸಾಹವನ್ನು ಸಹ ಕುಗ್ಗಿಸಿಬಿಡುತ್ತವೆ, ಮತ್ತು ಪತ್ರಿಕೆಗಳ ಮೇಲೆ ಯಾವುದಾದರೂ ಒಂದು ಬಗೆಯ ಹತೋಟಿಯನ್ನು ವಿಧಿಸುವುದು ನ್ಯಾಯವೆಂಬ ಭಾವನೆಗೆ ಅವಕಾಶ ಕೊಡುತ್ತವೆ. ಪತ್ರಿಕಾಸ್ವಾತಂತ್ರ್ಯವನ್ನು ದುರುಪಯೋಗಪಡಿಸುವುದಕ್ಕೆ ನಿಮ್ಮಲ್ಲಿ ಯಾರೂ ಪ್ರೋತ್ಸಾಹ ಕೊಡುವವರಾಗಿಲ್ಲವೆಂದು ನಾವು ಭಾವಿಸುತ್ತೇವೆ. ಕೆಲವು ಸಂದರ್ಭಗಳಲ್ಲಿ ಪತ್ರಿಕಾಸ್ವಾತಂತ್ರ್ಯವು ಸರಿಯಾಗಿ ಉಪಯೋಗಿಸಲ್ಪಟ್ಟಿದೆಯೆ ಅಥವಾ ಇಲ್ಲವೆ ಎಂಬುದನ್ನು ಗೊತ್ತುಮಾಡುವುದು ಕಷ್ಟವೆಂಬುದು ನಿಜ. ಅಂಥ ಸಂದರ್ಭಗಳಲ್ಲಿ ನೀವು ವ್ಯಕ್ತಿಯ ವಿಚಾರವನ್ನು ಬಿಟ್ಟು ಕೇವಲ ವಿಷಯದ ದೃಷ್ಟಿಯಿಂದ ಚೆನ್ನಾಗಿ ವಿಚಾರಮಾಡಿ ತೀರ್ಮಾನಕ್ಕೆ ಬರಬೇಕು. ಎಲ್ಲ ಹತೋಟಿಗಳ ಪೈಕಿ ತನ್ನ ಮೇಲೆ ತಾನು ಇಟ್ಟುಕೊಳ್ಳುವ ಹತೋಟಿಯು ಎಂದರೆ ಆತ್ಮಸಂಯಮವು ಅತ್ಯಂತ ಪರಿಣಾಮಕಾರಿಯಾದುದು ಮತ್ತು ಅದು ಅತ್ಯಂತ ಗೌರವಯುತವಾದುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದಕ್ಕಾಗಿಯೇ ಪತ್ರಿಕಾ ಸಲಹೆ ಸಮಿತಿಯು ("ಪ್ರೆಸ್ ಅಡ್ವೈಜರಿ ಕಮಿಟಿಯು) ಏರ್ಪಟ್ಟಿರುವುದು. ತಪ್ಪುಮಾಡತಕ್ಕ ಪತ್ರಿಕೆಗಳ ಲೋಪದೋಷಗಳು ಈ ಸಮಿತಿಯಲ್ಲಿ ಚರ್ಚೆಗೆ ಬರುತ್ತವೆ. ಅವುಗಳ ಸಂಬಂಧದಲ್ಲಿ, ಸಮಿತಿಯವರು ಸಂಸ್ಥಾನದಲ್ಲಿ ಸಾಮಾನ್ಯವಾಗಿ ಈಗ ನಡೆದುಬರುತ್ತಿರುವ ಉತ್ತಮ ದರ್ಜೆಯ ಪತ್ರಿಕಾಧ್ಯೇಯಕ್ಕನುಗುಣವಾಗಿ ತೀರ್ಮಾನ ಕೊಡುವರೆಂದು ನಾವು ನಂಬಿದ್ದೇವೆ. ಅಲ್ಲದೆ, ಪತ್ರಿಕೋದ್ಯೋಗಿಗಳ ಜೀವನದ ಮತ್ತು ಕೆಲ

(೨ನೇ ಪುಟ ನೋಡಿ)

★ ಸಿರ್ಗೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಸದ ಸ್ಥಿತಿಗತಿಗಳನ್ನು ಉತ್ತಮಪಡಿಸಲು ತಕ್ಕ ಸಾಧ್ಯ ಸೋಪಾಯಗಳನ್ನು ಸೂಚಿಸುವರೆಂದೂ ಸಹ ನಿರೀಕ್ಷಿಸಿದ್ದೇವೆ.

ಪತ್ರಿಕಾವೃತ್ತಿಯು ಲಾಭದಾಯಕವಾದ ವೃತ್ತಿಯೆಂದೇನಾದರೂ ಕರೆಯಬಹುದಾಗಿದ್ದರೆ, ನಮ್ಮ ದೇಶದಲ್ಲಿ ಈ ವೃತ್ತಿಯು ಇನ್ನೂ ಅಂಥ ಲಾಭದಾಯಕವಾದ ವೃತ್ತಿಯಾಗಿ ಪರಿಣಮಿಸಿಲ್ಲ. ನಿಜವಾಗಿ ನೋಡಿದರೆ, ಅದು ಲಲಿತಕಲೆಗಳ ಪೈಕಿ ಒಂದೆಂದು ಹೇಳಬಹುದು. ಇತರ ಎಲ್ಲ ಲಲಿತಕಲೆಗಳಂತೆಯೇ ಅದು ವಿಶೇಷ ಸುಲಭಸಾಧ್ಯವಾದುದೂ ಅಲ್ಲ. ಅದರಿಂದ ಹೆಚ್ಚಿನ ಲಾಭವೂ ದೊರೆಯುವಂತಿಲ್ಲ. ಪತ್ರಿಕಾವೃತ್ತಿಯನ್ನು ಅನುಸರಿಸಿರುವವರು ಕೇವಲ ಅದರಲ್ಲಿ ತಮಗಿರತಕ್ಕ ಪ್ರೇಮದಿಂದ ಉದ್ಯುಕ್ತರಾಗಿರುತ್ತಾರೆ. ಅವರು ಕೊರತೆಯಿಲ್ಲದಂತೆ ತಮ್ಮ ಜೀವನವನ್ನು [illegible]ಷ್ಟು ಮಾತ್ರವೇ ಅಲ್ಲದೆ, ತಕ್ಕಮಟ್ಟಿಗೆ ನೆಮ್ಮದಿಯಿಂದಲೂ ಸುಖದಿಂದಲೂ ಜೀವನವನ್ನು ಸಾಗಿಸಲು ಅನುಕೂಲವಾಗುವಂತೆ ಅವರಿಗೆ ಪ್ರೋತ್ಸಾಹಕೊಡುವುದು ಆವಶ್ಯಕವಾಗಿದೆ. ಆ ರೀತಿಯಾದ ಪ್ರೋತ್ಸಾಹವು ಅವರಿಗೆ ದೊರೆಯುವಂತೆ ಮಾಡಲು ನೀವು ಪ್ರಯತ್ನಿಸುವಿರೆಂದು ನಂಬಿದ್ದೇವೆ.

ನಿಮ್ಮ ವೃತ್ತಿಯು ಬಹಳ ಘನತರವಾದ ವೃತ್ತಿ. ಜನಾಭಿಪ್ರಾಯವನ್ನು ನೀವು ಪ್ರತಿಬಿಂಬಿಸುವುದು ಮಾತ್ರವೇ ಅಲ್ಲದೆ, ಜನಗಳ ತಿಳಿವಳಿಕೆಯನ್ನು ಹೆಚ್ಚಿಸುವುದಕ್ಕೂ ನೀವು ಸಾಧಕರಾಗಿರುತ್ತೀರಿ. ಅನೇಕ ವೇಳೆ ನೀವು ವ್ಯಕ್ತಪಡಿಸುವ ಅಭಿಪ್ರಾಯಗಳನ್ನು ಸಾರ್ವಜನಿಕರು ತಮ್ಮ ಸ್ವಂತ ಅಭಿಪ್ರಾಯಗಳಂತೆಯೇ ಅಂಗೀಕರಿಸುತ್ತಾರೆ. ನಿಮ್ಮ ಅಭಿಪ್ರಾಯಗಳೇನಾದರೂ ಸಾಧುವಾಗಿಲ್ಲದೆ ಹೋದರೆ, ಒಟ್ಟು ದೇಶಕ್ಕೇ ಅದರಿಂದ ತೊಂದರೆ. ಆದುದರಿಂದ ನಿಮ್ಮ ಜವಾಬ್ದಾರಿಯು ಬಹಳ ಗುರುತರವಾದುದಾಗಿದೆ. ಮುಂದಾಲೋಚನೆಯಿಂದಲೂ ಮತ್ತು ವಿವೇಚನೆಯಿಂದಲೂ ನೀವು ವರ್ತಿಸಬೇಕಾದುದು ಆವಶ್ಯಕ. ನೀವು ವ್ಯಕ್ತಪಡಿಸುವ ಅಭಿಪ್ರಾಯಗಳೂ ಮತ್ತು ನೀವು ಉಪಯೋಗಿಸುವ ಭಾಷೆಯೂ ಸೌಮ್ಯಸ್ವಭಾವದಿಂದ ಕೂಡಿದ್ದರೆ ಅದರಿಂದ ವಿಶೇಷ ಲಾಭವುಂಟು. ಸೌಮ್ಯವಾದ ಅಭಿಪ್ರಾಯಗಳಿಂದಲೂ ಮತ್ತು ಸೌಮ್ಯವಾದ ಭಾಷೆಯಿಂದಲೂ ನಿಮ್ಮ ವಿಷಯದಲ್ಲಿ ಜನಗಳಿಗಿರತಕ್ಕ ಅನುರಾಗವು ಹೆಚ್ಚುತ್ತದೆ; ಮತ್ತು ಪರಿಣಾಮದಲ್ಲಿ ಜನಗಳ ಸುಖಸಂತೋಷಗಳೂ ಹೆಚ್ಚುತ್ತವೆ.

ನಮ್ಮ ಭಾರತ ದೇಶದಲ್ಲಿ ಪೂರ್ಣಾಧಿಕಾರಸಂಪನ್ನ ಪ್ರಜಾಸತ್ತಾತ್ಮಕ ಜನರಾಷ್ಟ್ರವನ್ನು ಸ್ಥಾಪಿಸುವ ಒಂದು ಸಾಹಸದ ಕಾರ್ಯವನ್ನು ನಾವು ಕೈಕೊಂಡಿದ್ದೇವೆ. ಅದು ಯಶಸ್ವಿಯಾಗಿ ನೆರವೇರುವಂತಾಗಲು ದೇಶದಲ್ಲಿ ಪ್ರತಿಯೊಂದು ವರ್ಗದ ಜನಗಳ ಸಹಕಾರವೂ ಅತ್ಯಾವಶ್ಯಕ. ನಮಗೆ ಸ್ವಾತಂತ್ರ್ಯವು ಲಭಿಸಿದಿಂದೀಚೆಗೆ ಕಳೆದಿರತಕ್ಕ ಮೂರು ವರ್ಷಗಳ ಅವಧಿಯಲ್ಲಿ ನಾವು ಅನೇಕ ಗಂಡಾಂತರಗಳನ್ನು ಎದುರಿಸಿದ್ದೇವೆ. ಇನ್ನೂ ಅನೇಕ ಗಂಡಾಂತರಗಳನ್ನು ಎದುರಿಸುತ್ತಿದ್ದೇವೆ. ಅವುಗಳಲ್ಲಿ ಮುಖ್ಯವಾದುದೆಂದರೆ ಆಹಾರದ ಅಭಾವಕ್ಕೆ ಸಂಬಂಧಪಟ್ಟುದು. ಈ ಬಗೆಯ ಸನ್ನಿವೇಶದಲ್ಲಿ ನಂಬಿಕೆಯಿಂದಲೂ ಮತ್ತು ಧೈರ್ಯದಿಂದಲೂ ಎದೆಗೊಟ್ಟು ನಿಲ್ಲುವಂತೆ ಜನಗಳಿಗೆ ತಿಳಿವಳಿಕೆ ಕೊಡಬೇಕು. ಮತ್ತು ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಿಯೂ ಮತ್ತು ಸಮಾಜಘಾತಕವಾದ ಕಾರ್ಯಕಲಾಪಗಳನ್ನು ಅಡಗಿಸುವುದಕ್ಕಾಗಿಯೂ ಸರಕಾರದವರು ನಡೆಯಿಸುತ್ತಿರುವ ಪ್ರಯತ್ನಗಳಿಗೆ ಒತ್ತಾಸೆಯನ್ನು ಕೊಡಬೇಕು. ಆ ರೀತಿ ಮಾಡುವುದರಲ್ಲಿ ನೀವು ಹೃತ್ಪೂರ್ವಕವಾಗಿ ಸಹಕರಿಸುವಿರೆಂದು ನಾವು ಭಾವಿಸುತ್ತೇವೆ.

ಈಗ ದೇಶದಲ್ಲಿ ನಾವು ಮಹತ್ತರವಾದ ಅನೇಕ ಸತ್ಕಾರ್ಯಗಳನ್ನು ನೆರವೇರಿಸಬೇಕಾಗಿದೆ. ದಾರಿದ್ರ್ಯ ಅಜ್ಞಾನ ಮತ್ತು ರೋಗ ಇವುಗಳನ್ನು ನಿರ್ಮೂಲಗೊಳಿಸಬೇಕು. ಜನಜೀವನಕ್ಕೆ ಸಂಬಂಧಪಟ್ಟಂತೆ ಜನಗಳಲ್ಲಿ ತಿಳಿವಳಿಕೆಯನ್ನು ಹರಡಲು ನಿಮಗೆ ಅವಕಾಶವಿಲ್ಲದೆ ಇರತಕ್ಕಂಥ ವಿಚಾರವೇ ಇಲ್ಲ. ದೇಶಸೇವೆಯನ್ನು ಮಾಡಬೇಕೆಂದು ಬಯಸತಕ್ಕ ಪ್ರತಿಯೊಬ್ಬ ದೇಶಾಭಿಮಾನಿಗೂ ನಿಮ್ಮಿಂದ ದೊರೆಯತಕ್ಕ ಸಹಾಯವು ಅಮೂಲ್ಯವಾಗಿದೆ. ಇಷ್ಟು ಮಾತ್ರವೇ ಅಲ್ಲ ಆಡಳಿತವರ್ಗಕ್ಕೂ ಮತ್ತು ಅನೇಕ ಸ್ಥಳೀಯ ಸಂಸ್ಥೆಗಳಿಗೂ ಮತ್ತು ಜನಗಳ ಹಿತಸಾಧನೆಗಾಗಿ ಕೆಲಸಮಾಡತಕ್ಕ ಸಾರ್ವಜನಿಕ ಸಂಸ್ಥೆಗಳಿಗೂ ನಿಮ್ಮಿಂದ ದೊರೆಯತಕ್ಕ ಸಹಾಯವು ಅಮೂಲ್ಯವಾಗಿದೆ

ನೀವು ಉತ್ತಮ ರೀತಿಯ ಒಂದು ಸತ್ಸಂಪ್ರದಾಯವನ್ನು ಬೆಳೆಯಿಸಿಕೊಂಡು ಬಂದಿರುತ್ತೀರಿ ನಿಮ್ಮಲ್ಲಿ ಪ್ರತಿಯೊಬ್ಬರೂ ಮತ್ತು ಸಮಷ್ಟಿಯಾಗಿ ನೀವೆಲ್ಲರೂ ಆ ಸತ್ಸಂಪ್ರದಾಯವನ್ನು ಕಾಪಾಡಿಕೊಂಡು ಬರುವಿರೆಂದೂ ಮತ್ತು ಅದರ ಘನತೆಯನ್ನು ಹೆಚ್ಚಿಸುವಿರೆಂದೂ ನಾವು ಭಾವಿಸಿದ್ದೇವೆ ನಿಮಗೆ ಸಂಬಂಧಪಟ್ಟ ವಿವಿಧವಾದ ಅನೇಕ ಸಮಸ್ಯೆಗಳು ಈ ಸಮ್ಮೇಳನದಲ್ಲಿ ನಿಮ್ಮ ಮುಂದೆ ಚರ್ಚೆಗೆ ಬರುತ್ತವೆ. ಅವುಗಳನ್ನು ನೀವು ವಿವೇಕದಿಂದಲೂ ಮತ್ತು ಹಿಡಿತದಿಂದಲೂ ಸರಾಲೋಚಿಸುವಿರೆಂದು ನಾವು ನಂಬಿದ್ದೇವೆ.

ಇನ್ನು ನಿಮ್ಮ ಸಮ್ಮೇಳನದ ಈ ಅಧಿವೇಶನವನ್ನು ಸಮಾರಂಭಗೊಳಿಸಲು ನಮಗೆ ವಿಶೇಷ ಸಂತೋಷವುಂಟಾಗಿದೆ. ಈ ಅಧಿವೇಶನವು ನಿಮಗೆ ಹಿತವನ್ನುಂಟುಮಾಡಲೆಂದೂ ಪ್ರಯೋಜನಕರವಾಗಿ ಪರಿಣಮಿಸಲೆಂದೂ ಹಾರೈಸುತ್ತೇವೆ.

ನಿಮ್ಮ ಕಾರ್ಯಕಲಾಪಗಳು ಸರ್ವರೀತಿಯಿಂದಲೂ ಯಶಸ್ವಿಯಾಗಿ ನೆರವೇರಲೆಂಬುದೇ ನಮ್ಮ ಹೃತ್ಪೂರ್ವಕವಾದ ಹಾರೈಕೆಯಾಗಿದೆ.

● ೧೯೪೦ನೇ ಪತ್ರಿಕಾ ಶಾಸನವನ್ನು ಮೈಸೂರು ಸರ್ಕಾರವು ರದ್ದುಗೊಳಿಸಿ ಆಜ್ಞೆ ಹೊರಡಿಸಿದೆ.

● ಮೈಸೂರಿಗೆ ಕೊಡಗಿನಿಂದ ೮ಸಾವಿರ ಟನ್ ಅಕ್ಕಿಯನ್ನು ತರಿಸಿಕೊಳ್ಳಲಾಗುವುದೆಂದು ಹೇಳಲಾಗಿದೆ.

● ಅಸ್ಸಾಂ ಪರಿಹಾರ ನಿಧಿಗೆ ಮೈಸೂರು ನಗರದಿಂದ ೧೨೯೩೦-೯-೦ ಗಳು ವಸೂಲಾಗಿದೆ.

ರಣಜಿತ್
3-11-50 ಶುಕ್ರವಾರದಿಂದ
ಅಮೋಘ ೩ ನೇ ವಾರ
ಜೆ ಬಿ. ಲಾಲ್‌ರವರ ಹಾಸ್ಯಮಯ ಚಿತ್ರ
ದಿನವಹಿ 3 ಪ್ರದರ್ಶನಗಳು
ಹಸ್ತೇ—ಆನ್ಸು
(ಹಿಂದಿ)
ಪಾತ್ರ: ಮಧುಬಾಲ * ಮೋತಿಲಾಲ್
ಮನೋರಮ * ಗೋಪ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು! ಬಹುಕಾಲ ಬಾಳಿಕೆ ಬರುವುವು!!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು!!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೇಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು.

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು.

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಬುಗ್ಗೆಗಳೂ, ಮಹಡಿ ಜಂತಗಳು, ಕಿಟಕಿಗಳೂ ಇತ್ಯಾದಿ;

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

★ ನೇಪಾಳದ ಮಹಾರಾಜರ ದೇಶತ್ಯಾಗ

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೧೧—೧೯೫೦ನೇ ಬುಧವಾರ [ಸಂಚಿಕೆ ೬೩

ರಾಜತ್ವದ ಹಕ್ಕನ್ನು ಕಳೆದುಕೊಂಡರು

ಸ್ವಾತಂತ್ರ ಚಳುವಳಿಗೆ ಬೆಂಬಲವೀಯುವರೆಂಬುದೇ ಇದರ ಹಿನ್ನೆಲೆ

ನೇಪಾಳದ ಮಹಾರಾಜರು ಸೋಮವಾರ ಬೆಳಗಿನಜಾವದಲ್ಲಿ ತಮ್ಮ ಪುತ್ರ ಮತ್ತು ಮೊಮ್ಮಗರೊಡನೆ ಅರಮನೆಯನ್ನು ಬಿಟ್ಟು ಭಾರತ ರಾಯಭಾರಿ ಕಛೇರಿಯಲ್ಲಿ ಆಶ್ರಯವನ್ನು ಪಡೆದಿರುವರು. ತಮ್ಮ ದೇಹ ಚಿಕಿತ್ಸೆಗಾಗಿ ಅವರು ಭಾರತಕ್ಕೆ ಬರಲು, ನೇಪಾಳದ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಅನುಮತಿಯೀಯದಿರಲು ಈ ಕಾರ್ಯವನ್ನು ಅವರು ಕೈಗೊಂಡರೆಂದು ಹೇಳಲಾಗಿದೆ.

ಮುಖ್ಯ ಮಂತ್ರಿಗಳು ಅವರನ್ನು ಭೇಟಿಮಾಡಲು ಪ್ರಯತ್ನಿಸಿ ವಿಫಲರಾದರು. ಕೂಡಲೇ ಶಾಸನ ಸಭೆಯು ಜರೂರು ಅಧಿವೇಶನವನ್ನು ಕರೆದು ಈ ವಿಷಯವನ್ನು ಚರ್ಚೆಮಾಡಿ ರಾಜರು ಈ ರೀತಿ ಸರ್ಕಾರಕ್ಕೆ ತಿಳಿಸದೆ ಹೋಗಿರುವ ಕಾರಣ ಅವರು ತಮ್ಮ ರಾಜತ್ವದ ಹಕ್ಕುಗಳನ್ನು ಕಳೆದುಕೊಂಡಿರುವರು, ರಾಜಕುಮಾರರು ಹಿಂತಿರುಗಲು ಅಪ್ಪಣೆಯೀಯಬಹುದೆಂದು ತೀರ್ಮಾನಿಸಲಾಯಿತು. ರಾಜಕುಮಾರರೂ ಅವರ ಮಗನು ಹಿಂತಿರುಗಲು ಒಪ್ಪದಿರಲು ಅವರ ಎರಡನೇ ೩ ವರ್ಷದ ಮಗುವನ್ನು 'ಜ್ಞಾನೇಂದ್ರ ಬೀರ್ ಬಿಕ್ರಮಷಾ ದೇವ' ಎಂಬ ನೂತನ ನಾಮಧೇಯದಿಂದ ರಾಜರನ್ನಾಗಿ ಮಾಡಿ ಪಟ್ಟಕಟ್ಟಲಾಗಿದೆ

ರಾಜರು ದೇಶದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯ ಚಳುವಳಿಗೆ ಬೆಂಬಲವೀಯುವರಾದ ಕಾರಣ ಪರರಾಷ್ಟ್ರಗಳಿಗೆ ಪ್ರವಾಸ ಕೈಗೊಳ್ಳುವುದು ಸೂಕ್ತವಲ್ಲವೆಂದು ಅವರ ಭಾರತ ಪ್ರವಾಸಕ್ಕೆ ಅವರ ಸರ್ಕಾರವು ಒಪ್ಪಿಗೆಯೀಯಲಿಲ್ಲವೆಂದು ಹೇಳಲಾಗಿದೆ.

ನೇಪಾಳದ ಮುಖ್ಯ ಮಂತ್ರಿಗಳು ಭಾರತಕ್ಕೆ ಬಂದಾಗ್ಗೆ ನೇಪಾಳದಲ್ಲಿ ಪ್ರಜಾಸರ್ಕಾರವು ಸ್ಥಾಪನೆಯಾಗಬೇಕೆಂದು ಭಾರತವು ಸಲಹೆಯನ್ನು ಮಾಡಿತ್ತು.

ಜಾರ್ಜ್ ಬರ್ನಾರ್ಡ್ ಷಾ ದಿನಾಚರಣೆ

ಮೈಸೂರು ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ, ಮಾದರೀಶಾಲೆಯ ಹಾಲಿನಲ್ಲಿ, ಗುರುವಾರ ಸಂಜೆ ೬ ಘಂಟೆಗೆ, ಬರ್ನಾರ್ಡ್ ಷಾ ದಿನಾಚರಣೆ ಆಚರಿಸಲ್ಪಡುವುದು. ಶ್ರೀಯುತರಾದ ಸಿ ಡಿ. ನರಸಿಂಹಯ್ಯ, ಎಲ್. ಶ್ರೀಕಂಠಯ್ಯ, ಕೆ ಕೃಷ್ಣಯ್ಯಂಗಾರ್, ಎಸ್. ಅನಂತ ನಾರಾಯಣ, ಆರ್. ಕೆ. ನಾರಾಯಣ ಅವರು ಭಾಷಣ ಮಾಡುವರು.

ಪ್ರತಿಸ್ಪರ್ಧಿಗಳು

ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿಬೋರ್ಡಿನಾದರೂ ಕಾಂಗ್ರೆಸ್ ತತ್ವಕ್ಕೆ ಕಟ್ಟುಬೀಳದ ವ್ಯಕ್ತಿಗಳನ್ನು ನಿಲ್ಲಿಸುವ ಪಕ್ಷದಲ್ಲಿ ಅವರವಿರುದ್ಧ ತಾವು ಪ್ರತಿಸ್ಪರ್ಧಿಸುವುದು ನಿಸ್ಸಂಶಯವೆಂದು ಆಚಾರ್ಯ ಕೃಪಲಾನಿಯವರು ಹೇಳಿರುವರು

ಬೀಡಿ ಕೆಲಸಗಾರರ ಪ್ರದರ್ಶನ

ಮೈಸೂರು ನಗರದ ಕೆಲವು ಬೀಡೀ ಕೆಲಸಗಾರರು ರಷ್ಯಾದ ಕ್ರಾಂತಿ ದಿನಾಚರಣೆಯ ಪ್ರಯುಕ್ತ, ಶಾಂತಿ ಬೇಕು, ಯುದ್ಧ ಬೇಡ, ಅಟಂಬಾಂಬು ಬಹಿಷ್ಕರಿಸಿ ಎಂಬ ಘೋಷಣೆಗಳಿಂದ ನಿನ್ನೆ ನಗರದ ಕೆಲವು ಭಾಗಗಳಲ್ಲಿ ಬೈಸಿಕಲ್‌ಗಳ ಮೇಲೆ ಹೊರಟು ಪ್ರದರ್ಶನ ನಡೆಸಿದರು.

ಮೈಸೂರು ಪ್ರಾಂತೀಯ ಕಾಂಗ್ರೆಸ್ ನಾಮಕರಣ

ಬೆಂಗಳೂರು ನ. ೬

ಮೈಸೂರು ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರು ಕಾರ್ಯಸಮಿತಿಗೆ ಇವರನ್ನು ನಾಮಕರಣ ಮಾಡಿದ್ದಾರೆ.

ಶ್ರೀ ಕೆ. ಲಕ್ಕಪ್ಪ (ಹಾಸನ) ಜಂಟಿ ಕಾರ್ಯದರ್ಶಿ, ಶ್ರೀ ಎಸ್. ರಂಗರಾಮಯ್ಯ (ಮೈಸೂರು), ಶ್ರೀ ಚನ್ನಯ್ಯ ಒಡೆಯರ್ (ಚಿತ್ರದುರ್ಗ) ಶ್ರೀ ಹೆಚ್. ಸಿ. ಲಿಂಗಾರೆಡ್ಡಿ (ಕೋಲಾರ) ಮತ್ತು ಚೆನ್ನಿಗರಾಮಯ್ಯ (ತುಮಕೂರು.)

ಕಾರ್ಯಕಾರಿ ಸಮಿತಿಯಲ್ಲಿ ಮಹಿಳೆ ಮತ್ತು ಹರಿಜನ ಪ್ರತಿನಿಧಿಗಳಿಗೆ ಅವಕಾಶಕೊಡುವ ಬಗ್ಗೆ ತಾವು ಯೋಚಿಸುತ್ತಲಿರುವುದಾಗಿ ಅಧ್ಯಕ್ಷರು ಹೇಳಿಕೆಯಿತ್ತಿರುವರು.

ಕಾರ್ಯಕಾರಿಸಮಿತಿಯ ಸಭೆ ನಾಳೆ ಮಧ್ಯಾಹ್ನ ೪ ಗಂಟೆಗೆ ಬೆಂಗಳೂರು ಅರಳೇಪೇಟೆ ಕಾಂಗ್ರೆಸ್ ಕಛೇರಿಯಲ್ಲಿ ಸೇರುತ್ತದೆ.

ಕೊರಿಯಾದಲ್ಲಿ ಚೈನಾ ಸೈನ್ಯ

ಕೊರಿಯಾ ರಣರಂಗದಲ್ಲಿ ಈಗ ೨೫೦೦೦ ಚೀಣಿ ಸೈನ್ಯವು ಕಾರ್ಯಾಚರಣೆ ನಡೆಸುತ್ತಲಿದೆ ಅಮೇರಿಕಾ ಸೈನ್ಯಕ್ಕೂ ಚೀಣಾ ಸೈನ್ಯಕ್ಕೂ ಘರ್ಷಣೆಯುಂಟಾಗಿದೆ ಅಮೇರಿಕನ್ನರು ತಮ್ಮ ಸೈನ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವರು.

ಮತದಾರರು

ಹೈದರಾಬಾದಿನಲ್ಲಿ ಮತದಾರರ ಪಟ್ಟಿಯು ಬರುವ ಸೋಮವಾರ ಪ್ರಕಟವಾಗುವುದೆಂದು ತಿಳಿಯಬರುತ್ತದೆ. ಈ ಪ್ರಾಂತ್ಯದಲ್ಲಿ ೯೦ ಲಕ್ಷ ಮತದಾರರಿರುವರು.

ಸೂಚನೆ

ದೀಪಾವಳಿ ಹಬ್ಬದ ಪ್ರಯುಕ್ತ ನಾಳೆ ಪತ್ರಿಕೆ ಹೊರಡುವುದಿಲ್ಲ.

—ಸಂಪಾದಕ

ಪೋಲೀಸ್ ಅಧಿಕಾರಿಗಳ ವರ್ಗ

ಬೆಂ. ನ. ೭

ಕೋಲಾರದಲ್ಲಿ ಡಿ. ಎಸ್. ಪಿ. ಯವರಾಗಿದ್ದ ಶ್ರೀ ಎಸ್. ಸಿ ಮಲ್ಲಪ್ಪನವರನ್ನು ತುಮಕೂರಿಗೂ, ಅಲ್ಲಿ ಡಿ ಎಸ್. ಪಿ. ಯವರಾಗಿದ್ದ ಶ್ರೀ ಎಂ. ಜಿ ಪೆಟ್ಲೇಕರ್‌ರವರನ್ನು ಕೋಲಾರಕ್ಕೂ ವರ್ಗಮಾಡಲಾಗಿದೆ.

ಪೌರ ಕಮೀಷನರಿಗೆ ಕಾರು

ಬೆಂ ನ. ೭

ಬೆಂಗಳೂರಿನ ಕಾರ್ಪೊರೇಷನ್ ಕಮೀಷನರ ಉಪಯೋಗಕ್ಕೆ ೧೮ ಸಾವಿರ ರೂಪಾಯಿಗಳ ಒಂದು ಕಾರನ್ನು ಕೊಳ್ಳಬಹುದೆಂದು ಕಾರ್ಪೊರೇಷನ್ ನಿರ್ಣಯಿಸಿದೆ.

ವಿನಾಯಿತಿ

ಹಿಂದುಳಿದ ಪಂಗಡದವರಿಗೆ ವಿದ್ಯಾ ಇಲಾಖಾ ಪರೀಕ್ಷೆಗಳಿಗೆ ಪ್ರವೇಶಧನವನ್ನು ವಿನಾಯಿತಿಮಾಡಿರುವುದನ್ನು ೧೯೫೧ನೇ ಪರೀಕ್ಷೆಯಿಂದ ಇನ್ನೂ ಮೂರು ವರ್ಷ ಮುಂದುವರಿಸಲಾಗಿದೆ.

ಮೈಸೂರು ನ. ೭

● ನಿನ್ನೆ ಸಂಜೆ ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನ ಯೂನಿಯನ್ನಿನ ಪ್ರಾರಂಭೋತ್ಸವವು ಶ್ರೀ ವಿ. ಜಗನ್ನಾಥರವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಹಾರ ಶಾಖಾ ಉಪ ಮುಖ್ಯಾಧಿಕಾರಿ ಶ್ರೀ ಆರ್. ಎ. ಮಿರ್ಜಾರವರು ಪ್ರಾರಂಭ ಭಾಷಣಮಾಡಿದರು.

ಪರ್ವತಾರೋಹಿ ಮರಣ

ಆಲ್ಪ್ಸ್ ಪರ್ವತದ ಅತ್ಯುನ್ನತ ಶಿಖರವಾದ ಮಾಂಬ್ಲಾದಲ್ಲಿ ಶುಕ್ರವಾರ ದುರಂತಕ್ಕೀಡಾದ ಭಾರತೀಯ ವಿಮಾನದಲ್ಲಿದ್ದ ಪ್ರಯಾಣಿಕರನ್ನು ಪತ್ತೆಹಚ್ಚಲು ಹೋದ ಫ್ರೆಂಚ್ ಪರ್ವತಾರೋಹಿ ಗುಂಪಿನಲ್ಲಿ ಮಿ|| ರೇನೆ ಪೇಯಾಟ್ ಎಂಬ ೪೦ ವರ್ಷ ವಯಸ್ಸಿನ ಮಾರ್ಗದರ್ಶಕರು ಮಂಜು ನದಿಯ ಪ್ರವಾಹದಲ್ಲಿ ಕೊಚ್ಚಿಹೋಗಿ ಮೃತರಾದರು. ಒಂದೂವರೆಗಂಟೆಕಾಲ ಅವರ ಅನುಯಾಯಿಗಳು ಪ್ರಯತ್ನಪಟ್ಟನಂತರ ಅವರ ಕಳೇಬರವು ಪತ್ತೆಯಾಯಿತು.

ಈ ವಿಮಾನ ಅಪಘಾತದಲ್ಲಿ ಬದುಕಿರುವವರಾರೂ ಇರಲು ಸಂಭವವಿಲ್ಲವಾದ್ದರಿಂದ ತಲಾಷೆಯ ಮುಂದಿನ ಪ್ರಯತ್ನಗಳನ್ನೆಲ್ಲಾ ನಿಲ್ಲಿಸಲಾಗಿದೆ.

ಶಾಸನ ಸಭೆ

ಕೇಂದ್ರ ಶಾಸನ ಸಭೆಯು ಇದೇ ಮಾಹೆ ೧೪ನೇ ತಾರೀಖಿನಿಂದ ದೆಹಲಿಯಲ್ಲಿ ಪ್ರಾರಂಭವಾಗಿ ಒಂದು ವಾರ ನಡೆಯುವುದು. ರಾಷ್ಟ್ರಪತಿಗಳು ಉದ್ಘಾಟನೆ ಮಾಡುವರು.

ಸಮಾಚಾರ

ನವಂಬರ್ ೮-೧೧-೫೦ ಬುಧವಾರ

ಘನತೆಗಾಂಭೀರ್ಯಗಳ ಅವಶ್ಯಕತೆ

ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗೋಷ್ಠಿಗಳೂ, ಸಮ್ಮೇಳನಗಳೂ, ಕೂಟಗಳೂ ನಡೆಯುತ್ತ ಜಗತ್ಪ್ರಸಿದ್ಧನಾದ ಈ ನಮ್ಮ ನಗರದಲ್ಲಿ ಈಗ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ನಡೆಯಿತೆಂದು ಅತಿಶಯ ಸಂತೋಷದಿಂದ ಹೇಳಬೇಕಾಗಿದೆ.

ಈ ಸಮ್ಮೇಳನವು ಯಶಸ್ವಿಯಾಗಿ ನಡೆಯಲು ಮೈಸೂರು ನಗರದ ಸಾರ್ವಜನಿಕ ಗಣ್ಯವ್ಯಕ್ತಿಗಳ, ಸರ್ಕಾರೀ ಅಧಿಕಾರಿಗಳು, ವಿವಿಧಸಂಸ್ಥೆಗಳು ಮತ್ತು ಮುಖ್ಯವಾಗಿ ಪತ್ರಿಕೋದ್ಯೋಗಿಗಳು ಇತ್ತ ಬೆಂಬಲ ನೆರವುಗಳೇ ಮುಖ್ಯಕಾರಣ. ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಯಾವ ರೀತಿಯಾದ ಸಹಾಯ ನೀಡಿದರೋ ಅದಕ್ಕಿಂತಲೂ ಮಿಗಿಲಾಗಿ, ನಗರದ ಧವಳಕೀರ್ತಿಯನ್ನು ಎತ್ತಿಹಿಡಿಯಲು ಎಲ್ಲರೂ ಶ್ರಮಿಸಿ, ನಮ್ಮಲ್ಲಿ ಭೇದಭಾವವಿಲ್ಲ ಹೊರಪ್ರದೇಶದವರಾಗಲಿ ನಮ್ಮವರಾಗಲಿ ಯಾರು ಯಾವರೀತಿಯಾದ ಸತ್ಕಾರ್ಯಗಳನ್ನು ನಮ್ಮ ನಗರದಲ್ಲಿ ನಡೆಸಿದರೂ ಅನೇಕ ರೀತಿಯ ಸಹಾಯಮಾಡುವೆವೆಂಬುದನ್ನು ಕಾರ್ಯತಃ ತೋರ್ಪಡಿಸಿಕೊಂಡಿರುವರು.

ಮೈಸೂರು ದೇಶದ ನಾನಾಕಡೆಗಳಿಂದ ನೂರಾರು ಪ್ರತಿನಿಧಿಗಳು ಬಂದು ಈ ಸಮ್ಮೇಳನದಲ್ಲಿ ಭಾಗವಹಿಸಿ, ಪತ್ರಿಕಾವೃತ್ತಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾಡಿದುದಲ್ಲದೆ, ಅನೇಕ ಪ್ರೇಕ್ಷಣೀಯ ಸ್ಥಳ ಮುಂತಾದುವಕ್ಕೆ ಭೇಟಿಯಿತ್ತು ಎರಡು ದಿನಗಳನ್ನು ತಮ್ಮ ಕೆಲಸಕಾರ್ಯಗಳು ಮಿಗಲಾಗಿದ್ದರೂ ಅತಿಸಂತೋಷದಿಂದ ಕಳೆದು ಮುಂದೆ ಎಲ್ಲಿ ಸಮ್ಮೇಳನ ನಡೆದರೂ ಮೈಸೂರಿನ ಮಾದರಿಯನ್ನೇ ಅನುಸರಿಸಬೇಕು. ಹೀಗೆಯೇ ಉತ್ತಮರೀತಿಯ ಏರ್ಪಾಡುಗಳನ್ನು ಮಾಡಬೇಕೆಂಬ ಸದಭಿಪ್ರಾಯದಿಂದ ಎಲ್ಲರೂ ತಮ್ಮ ತಮ್ಮ ಕ್ಷೇತ್ರಗಳಿಗೆ ಹಿಂತಿರುಗಿರುವರು.

ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ನಾವು ಬರೆಯಬೇಕಾಗಿದೆ.

ಸಮ್ಮೇಳನ ಪ್ರಾರಂಭೋತ್ಸವಸಮಯದಲ್ಲಿ ನಮ್ಮ ಮಿತ್ರರನೇಕರಿಗೆ ಅರಮನೆಯ ಅಧಿಕಾರಿಗಳು ಮಾಡಿದ್ದ ಏರ್ಪಾಡುಗಳು ಅಸಮರ್ಪಕವಾಗಿ ಕಂಡುಬಂದು, ಅಧಿಕಾರಿಗಳ ಮುಂಜಾಗ್ರತೆಯಿಂದ ವಾತಾವರಣವು ಕಲಕದಂತಾಗಿ ಕೆಲಸಕಾರ್ಯಗಳು ಸುಸೂತ್ರವಾಗಿ ನಡೆದುವು. ನಮ್ಮ ಮಹಾರಾಜರು, ನಮಗೆ ಸ್ವಾತಂತ್ರಲಭಿಸಿದ ಮೇಲೆ ನಮ್ಮ ಪ್ರಜಾವರ್ಗದವರಲ್ಲಿ ಒಬ್ಬರಾಗಿದ್ದುಕೊಂಡು ದೇಶದ ಜನತೆಯ ಘನತೆಗೆ ಕುಂದುಬರದಂತೆ ಎಲ್ಲರಲ್ಲಿಯೂ ಸರ್ವಸಮಾನತೆ ತೋರ್ಪಡಿಸುತ್ತಲಿರುವರು. ಅರಮನೆಯ ಅಧಿಕಾರಿಗಳೂ ಸಹ ಇದನ್ನರಿತು ಸಮ್ಮೇಳನಾಧ್ಯಕ್ಷರ ಘನತೆಗೌರವಗಳಿಗೆ ಕುಂದುತರದಂತೆ, ಮೊದಲೇ ತಕ್ಕ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದರೆ ವಾತಾವರಣವು ಸ್ವಲ್ಪವೂ ಕದಲುತ್ತಿರಲಿಲ್ಲ. ಆದಾಗ್ಯೂ ಅವರ ವಿವೇಚನೆಯಿಂದ ಯಾವ ಘಟನೆಗಳೂ ನಡೆಯಲಿಲ್ಲ. ಹೊರಗಿನವರಿಗೆ ಯಾವ ರೀತಿ ಗೌರವವನ್ನು ಸಲ್ಲಿಸುವರೋ, ಅದೇ ರೀತಿ ನಮ್ಮವರಿಗೂ ಗೌರವವು ಸಲ್ಲಿಸುವಂತೆ ಮುಂದಾದರೂ ಎಚ್ಚರದಿಂದ ನಡೆಯಲಿ.

ನಮ್ಮ ಸಹೋದ್ಯೋಗಿಗಳಿಗೊಂದು ಮಾತು. ನಾವು ನಮ್ಮ ವೃತ್ತಿಯಲ್ಲಿ ಅನೇಕ ಸಭೆ, ಸಮ್ಮೇಳನ ಮುಂತಾದುವುಗಳಲ್ಲಿ ಭಾಗವಹಿಸುತ್ತೇವೆ ಅಲ್ಲಿಯ ಕಾರ್ಯಕಲಾಪಗಳು ನಡೆಯುವಾಗ ಶಿಸ್ತು ತಪ್ಪಿದಲ್ಲಿ ಅತಿ ಕಟ[illegible] ಟೀಕಿಸುತ್ತೇವೆ. ನಾವುಗಳೇ ಕಲೆತು ನಮ್ಮ ನಮ್ಮ ಕಾರ್ಯಕಲಾಪಗಳನ್ನು ನಡೆಸುವಾಗಲೂ ಶಿಸ್ತಿನಿಂದಲೇ ನಡೆಯೋಣ. ಈ ಶಿಸ್ತನ್ನು ಕಾಪಾಡಲು ಅಧ್ಯಕ್ಷರು ಸಮಯೋಚಿತ ಸಾಮರ್ಥ್ಯ ಮತ್ತು ದಕ್ಷತೆಯನ್ನು ಪ್ರದರ್ಶಿಸಲೇಬೇಕು. ಸಮ್ಮೇಳನದ ಅಧಿವೇಶನ ನಡೆದಾಗ ಕ್ರಮ, ಶಿಸ್ತು ಕಾಣಬರಲಿಲ್ಲವಾಗಿ ನಾವು ಅತಿ ಖಿನ್ನ ಮನಸ್ಸಿನಿಂದ ಇದನ್ನು ಬರೆಯಬೇಕಾಗಿದೆ.

ಸತ್ಕಾರಕೂಟ

ಮೈಸೂರು ನ. ೭

ಮೈಸೂರು ಜ್ಯುಬಿಲಿಸ್ಟೋರ್ಸ್‌ನ ಮಾಲೀಕರಾದ ಶ್ರೀ ಎಂ ಆರ್. ಸಿ. ಬಸಪ್ಪನವರು ಇಂದು ಅಖಿಲ ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷ ಶ್ರೀ ಜೀವಣ್ಣರಾಯರಿಗೆ ಇಂದ್ರ ಭವನದಲ್ಲಿ ಒಂದು ಭೋಜನಕೂಟವನ್ನೇರ್ಪಡಿಸಿದ್ದರು. ಪೌರಸಭಾಧ್ಯಕ್ಷರು, ಜಿಲ್ಲಾಧಿಕಾರಿಗಳು, ಮುನಿಸಿಪಲ್ ಕಮಿಷನರ್ ಪತ್ರಿಕೋದ್ಯೋಗಿಗಳು ಮುಂತಾದ ಅನೇಕ ಗಣ್ಯವ್ಯಕ್ತಿಗಳು ಈ ಸಮಾರಂಭಕ್ಕೆ ಆಗಮಿಸಿದ್ದರು.

ಭೋಜನಾನಂತರ 'ರ್‍ಯಾಷನಲಿಸ್ಟ್' ಪತ್ರಿಕೆ ಸಂಪಾದಕರಾದ ಶ್ರೀ ಜಿ. ಆರ್. ಜೋಸ್ಯರವರ ಅಧ್ಯತೆಯಲ್ಲಿ ಸಭೆ ಸೇರಿತು.

ಮೈಸೂರು ಪತ್ರಿಕೆ ಸಂಪಾದಕರಾದ ಶ್ರೀ ಟಿ. ನಾರಾಯಣರವರು ಶ್ರೀ ಕೆ. ಜೀವಣ್ಣರಾಯರನ್ನು ಪರಿಚಯ ಮಾಡಿಕೊಡುತ್ತಾ ರಾಜಕೀಯ ಮತ್ತು ಪತ್ರಿಕಾವೃತ್ತಿಯಲ್ಲಿ ಅವರು ಮಾಡಿರುವ ಸೇವೆಯನ್ನು ವಿವರಿಸಿದರು. ಪೌರಸಭಾಧ್ಯಕ್ಷ ಶ್ರೀ ಲಿಂಗಣ್ಣನವರು ಮತ್ತು ಶ್ರೀ ಜೋಸ್ಯರವರೂ ಅವರು ಮಾಡಿರುವ ಕೆಲಸಕಾರ್ಯಗಳನ್ನು ಪ್ರಶಂಸಿಸಿ ಜನತೆಗೆ ಇನ್ನೂ ಹೆಚ್ಚಿಗೆ ಸೇವೆಯನ್ನು ಸಲ್ಲಿಸಲೆಂದು ಹಾರೈಸಿದರು.

ಪೌರಸಭಾ ಉಪಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ವಂದನೆಯನ್ನು ಸಲ್ಲಿಸಿದರು.

ರಣಜಿತ್
8-11-50 ಬುಧವಾರದಿಂದ
ದಿನವಹಿ 3 ಪ್ರದರ್ಶನಗಳು
† ಅಶೋಕ್‌ಕುಮಾರ್ † ಮಧುಬಾಲ
ಪಾತ್ರವಹಿಸಿರುವ
ನಿಶಾನಾ
(ಹಿಂದಿ)
ಬೆಳಗಿನ ಪ್ರದರ್ಶನ 10-11-50 ರಿಂದ
3 ದಿನಗಳು ಮಾತ್ರ
ಶ್ರವಣಕುಮಾರ್
ಮುಮ್ತಾಜ್ ಶಾಂತಿ, ಚಂದ್ರಮೋಹನ್

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯-೪೬ ಮೀಟರು

ನವಂಬರ್ ೮ ಗುರುವಾರ

ಬೆಳಿಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೩೦ ಮುನಿವೆಂಕಟಪ್ಪ (ನಾಗಸ್ವರ)೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾನ್ಹ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ ೧-೪೫ ಹಿಂದೀ ಶಿಕ್ಷಣ. ೨-೦ ಚಿತ್ರಗೀತ (ರಿ) ೨-೩೯ ಮುಕ್ತಾಯ.

ಸಂಜೆ ೫-೩೦ ಜಯ ಮತ್ತು ಭಾಗ್ಯ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ (ರಿ) ೬-೩೦ ಸ್ಥಳೀಯ ಪ್ರಕಟಣೆಗಳು, ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಹಿಂದಿ ಭಾಷಣ ೭-೧೫ ಮುನಿವೆಂಕಟಪ್ಪ (ನಾಗಸ್ವರ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಆರ್. ಚಂದ್ರ (ಕನ್ನಡ ಪದ್ಯಪಠನ) ೮-೧೫ ಕ್ರೀಡಾ ವಿಮರ್ಶೆ ೮-೩೦ ಜಯ ಮತ್ತು ಭಾಗ್ಯ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕನ್ನಡ ವಿಶೇಷ ಕಾರ್ಯಕ್ರಮ ೧೦-೦ ಮುಕ್ತಾಯ.

ಗ್ರಾಮೈಕ್ಯಗಾರಿಕಾ ಯೋಜನೆ

ಬೆಂಗಳೂರು ನ. ೩

ಗ್ರಾಮೈಕ್ಯಗಾರಿಕಾ ಯೋಜನೆಯನ್ನು ಪರಿಶೀಲಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಸರ್. ಎಂ. ವಿಶ್ವೇಶ್ವರಯ್ಯನವರು, ಎಲಾ ಸಚಿವರು, ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಹಾಜರಿದ್ದರು. ಇಲ್ಲಿಯವರೆಗೆ ನಡೆದ ಕೆಲಸಕಾರ್ಯಗಳನ್ನು ವಿಮರ್ಶಿಸಲಾಯಿತು. ಈ ಯೋಜನೆಯನ್ನು ಕಾರ್ಯಗತ ಮಾಡುವಾಗ ಗಮನಿಸಬೇಕಾದ ಅಂಶಗಳ ವಿಷಯದಲ್ಲಿ ಸರ್ ಎಂ. ವಿ. ಯವರು ಸಲಹೆಯನಿತ್ತರು.

— ಒಲಂಪಿಯಾ —
9-11-50 ರಿಂದ
ಜನಭರಿತವಾದ 2ನೇ ವಾರ
ನಿಗಾರ್, ● ರೆಹಮಾನ್, ● ಜೈರಾಜ್,
ಪಾತ್ರವಹಿಸಿರುವ
ಮಗ್ರೂರ್
ಬೆಳಗಿನ ಪ್ರದರ್ಶನ 8-11-50 ರಿಂದ
5 ದಿನಗಳು ಮಾತ್ರ
ಬಜಾರ್
ಪಾತ್ರ : ನಿಗಾರ್, ಶ್ಯಾಮ್, ಗೋಪ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street
BANGALORE—2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೧—೧೧—೧೯೫೦ನೇ ಶನಿವಾರ [ಸಂಚಿಕೆ ೬೪

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

★ ಮೂರನೇ ಮಹಾಯುದ್ಧದ ಭೀತಿ ★

ನೇಪಾಳದ ಪರಿಸ್ಥಿತಿ

ನೇಪಾಳದ ದೊರೆಯಾದ ಮಹಾರಾಜಾಧಿರಾಜ ತ್ರಿಭುವನ ಬೀರಬಿಕ್ರಮಜಂಗ್ ಬಹದ್ದೂರ್ ಶಂಷೇರ್ ಜಂಗ್‌ರವರು ತಮ್ಮ ಪುತ್ರ ಮತ್ತು ಪರಿವಾರದೊಂದಿಗೆ ಸೋಮವಾರ ಕಾಟ್ಮಂಡುವಿನಲ್ಲಿರುವ ಭಾರತರಾಯಭಾರ ಕಛೇರಿಯಲ್ಲಿ ಆಶ್ರಯಪಡೆದರು. ದೇಹಾಲಸ್ಯನಿಮಿತ್ತ ಅವರು ಭಾರತಕ್ಕೆ ಬರಬೇಕೆಂದಿದ್ದರು. ಅವಕ್ಕೆ ಅಲ್ಲಿಯ ಪ್ರಧಾನಮಂತ್ರಿ ಮತ್ತು ಸರ್ಕಾರವು ಸಮ್ಮತಿಸಲಿಲ್ಲ. ದೇಶದಲ್ಲೆಲ್ಲಾ ಪ್ರಜಾಸರ್ಕಾರ ಸ್ಥಾಪನೆಗಾಗಿ ಆಂದೋಳನ ಪ್ರಾರಂಭವಾಗಿದೆ. ಅಲ್ಲಿಯ ಪ್ರಧಾನ ಮಂತ್ರಿ ಮತ್ತು ದಂಡನಾಯಕರು ಒಬ್ಬರೇ ಆಗಿ ದೇಶಾಡಳಿತವೆಲ್ಲವೂ ಅವರ ಕೈಯಲ್ಲಿದೆ. ಸಂಸ್ಥಾನದ ದಿವಾನಗಿರಿಯು ಒಂದು ಮನೆತನದ ಹಕ್ಕಾಗಿ, ಸರ್ವಾಧಿಕಾರತ್ವದಿಂದ ನಡೆದಿರುವುದು ಮಹಾರಾಜರ ಆದಿಯಾಗಿ ಎಲ್ಲರಿಗೂ ಜಿಗುಪ್ಸೆಯನ್ನುಂಟುಮಾಡಿದೆ. ಪ್ರಜಾ ಸರ್ಕಾರ ಸ್ಥಾಪನೆಗೆ ಮಹಾರಾಜರ ಬೆಂಬಲವಿರುವುದರಿಂದ ಪರರಾಷ್ಟ್ರಗಳ ಪ್ರವಾಸ ಕೈಗೊಂಡರೆ ತೊಂದರೆಯಾದೀತೆಂಬ ಭೀತಿಯಿಂದ ಅವರಿಗೆ ಭಾರತಕ್ಕೆ ಬರಲು ಪರವಾನಿಗೆ ದೊರೆಯಲಿಲ್ಲ. ಭಾರತ ಸರ್ಕಾರವು ಭಾರತಕ್ಕೆ ಅವರು ಬರಲು ತಕ್ಕವ್ಯವಸ್ಥೆ ಮಾಡಿದೆ. ನೇಪಾಳದಲ್ಲಿ ರಾಜಕೀಯ ಸುಧಾರಣೆಗಳು ಬೇಗ ಆಗಬೇಕೆಂಬ ಮಹಾರಾಜರ ಅಭಿಪ್ರಾಯವಿದ್ದಿತು. ಮಹಾರಾಜರು ಬೇಸತ್ತು ಈಗ ಹೊರಹೊರಟಿರುವರೆಂದು ತಿಳಿಯಬರುತ್ತದೆ. ಭಾರತಕ್ಕೆ ನೇಪಾಳ ಮುಖ್ಯಮಂತ್ರಿ ಬಂದಿದ್ದಾಗ್ಗೆ ರಾಜಕೀಯ ಸುಧಾರಣೆಗಳನ್ನು ಕೂಡಲೇ ಮಾಡಿ ಪ್ರಜಾ ಸರ್ಕಾರ ಸ್ಥಾಪನೆಯಾಗಬೇಕೆಂದು ಭಾರತ ಸರ್ಕಾರವು ತಿಳಿಸಿತ್ತು.

ಈಗಾಗಲೇ ನೇಪಾಳಕ್ಕೆ ಹೊರಗಡೆಯಿಂದ ಹೋಗಲು ಸೌಕರ್ಯಗಳೆಲ್ಲವೂ ಕಡಿಮೆಯಾಗುತ್ತಲಿವೆ. ಈಗ್ಗೆ ೫ ವಾರಗಳ ಹಿಂದೆ ಪ್ರಾರಂಭವಾದ ವಿಮಾನಸಂಚಾರ ಸೌಲಭ್ಯವು ನಿಲ್ಲಿಸಲ್ಪಟ್ಟಿದೆ. ನೇಪಾಳಕ್ಕೆ ಹೋಗಲು ಕೊಡುತ್ತಲಿದ್ದ ಪರವಾನಿಗೆ ಈಗ ಅಲ್ಲಿಯ ಮುಖ್ಯಮಂತ್ರಿಗಳ ಅನುಮತಿಯಿಲ್ಲದೆ ಕೊಡುವುದನ್ನು ನಿಲ್ಲಿಸಿರುವರು.

೩ ವರ್ಷದ ಮಹಾರಾಜರ ಮೊಮ್ಮಗನಿಗೆ ಪಟ್ಟ ಕಟ್ಟಿರುವುದನ್ನು ಅಂಗೀಕರಿಸುವ ವಿಷಯದಲ್ಲಿ ಭಾರತವು ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ. ಈಗಿನ ರಾಜಕೀಯ ಬದಲಾವಣೆಯನ್ನು ಭಾರತವು ಒಪ್ಪುವುದಿಲ್ಲವೆಂದು ರಾಜಕೀಯ ವೃತ್ತಗಳಲ್ಲಿ ಹೇಳಲಾಗುತ್ತಲಿದೆ. ಮುಖ್ಯಮಂತ್ರಿಯು ಈರೀತಿ ಹೊಸದಾಗಿ ಪಟ್ಟ ಕಟ್ಟಿರುವುದು ನ್ಯಾಯಸಮ್ಮತವೇ ಎಂದು ಭಾರತವು ಪರೀಕ್ಷಿಸುತ್ತಲಿದೆ.

ನೇಪಾಳದ ಮಹಾರಾಜರನ್ನು ಕರೆದೊಯ್ಯಲು ಭಾರತ ಸರ್ಕಾರವು ಎರಡು ಡಕೋಟಾ ವಿಮಾನಗಳನ್ನು ಕಾಟ್ಮಂಡುವಿಗೆ ಕಳುಹಿಸಿದೆ. ಇಂದು ಅವರು ತಮ್ಮ ಪರಿವಾರದೊಡನೆ ದೆಹಲಿಗೆ ಬಂದು, ಭಾರತ ಸರ್ಕಾರದ ಅತಿಥಿಗಳಾಗಿರುತ್ತಾರೆ. ಅವರೊಡನೆ ಅವರ ಇಬ್ಬರು ಪತ್ನಿಯರು ಪುತ್ರ ಮತ್ತು ಮೊಮ್ಮಗ ಆದಿಯಾಗಿ ಇಪ್ಪತ್ತು ಜನರು ಬರುವರು.

ಸಾಹುಕಾರರು ಸೆರೆಮನೆಗೆ

ಪಾಂಡವಪುರದ ರೈಸ್‌ಮಿಲ್ ಮಾಲೀಕರಾದ ಜನಾಬ್ ಅಬ್ದುಲ್ ಷಕೂರ್, ಮಂಡ್ಯದ ಬಟ್ಟೆವ್ಯಾಪಾರಿ ಶ್ರೀ ಕೆ. ಸಿ. ಕೃಷ್ಣಸ್ವಾಮಿ, ಪಾಂಡವಪುರದ ತಾಲ್ಲೂಕು ಕ್ಯಾತನಹಳ್ಳಿ ಶ್ರೀ ಹೆಚ್. ಸ್ವಾಮಿಗೌಡ ಉರುಫ್ ಪುಟ್ಟಸ್ವಾಮಿ ಇವರುಗಳನ್ನು ೧೯೫೦ನೇ ಪ್ರಿವೆಂಟಿವ್ ಡಿಟೆನ್ಷನ್ ಕಾನೂನಿನ ಪ್ರಕಾರ ದಸ್ತಗಿರಿ ಮಾಡಿ ಕಾರಾಗೃಹ ಬಂಧನದಲ್ಲಿಡಲಾಗಿದೆಯೆಂದು ತಿಳಿಯಬಂದಿದೆ.

ಬಿರುಗಾಳಿಯ ಅನಾಹುತ

ನ್ಯೂ ಸೌತ್ ವೇಲ್ಸ್‌ಗೆ ೧೫೦ ಮೈಲಿ ದೂರದಲ್ಲಿರುವ ಡಾರ್ಲಿಂಗ್ ನದಿಯ ತೀರದಲ್ಲಿ ವಿಲ್‌ಕ್ಯಾನಿಯಾ ಎಂಬ ಹಳ್ಳಿಯು ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ನುಚ್ಚುನೂರಾಗಿದೆ. ಈ ಹಳ್ಳಿಯ ೮೦೦ ಜನರು ಮನೆಮಠಗಳನ್ನು ಕಳೆದುಕೊಂಡಿರುವರು. ಪ್ರತಿ ಮನೆಯೂ ಅಪಾಯ ಸ್ಥಿತಿಯಲ್ಲಿರುವುದಲ್ಲದೆ ಇಬ್ಬರು ಅಪಾಯಕ್ಕೀಡಾಗಿರುವರು.

ಬಿರುಗಾಳಿಯು ನಿಂತಮೇಲೆ ಮಳೆಬೀಳಲು ಆರಂಭವಾಗಿ ಕ್ರಿಕೆಟ್ ಚಂಡಿನ ಗಾತ್ರದ ಆನೆಕಲ್ಲುಗಳೂ ಸಹ ಬಿದ್ದವೆಂದು ಹೇಳಲಾಗಿದೆ.

● ಮಳವಳ್ಳಿ ರೈಸ್‌ಮಿಲ್ ಮಾಲೀಕರಾದ ಶ್ರೀ ವೆಂಕಟಪ್ಪ ಉರುಫ್ ಕಣ್ಣಪ್ಪನವರನ್ನು ದಸ್ತಗಿರಿ ಮಾಡಿ ಬಂಧನದಲ್ಲಿಟ್ಟು ೩ನೇ ತಾರೀಖು ಬಂಧನದಿಂದ ಬಿಡುಗಡೆ ಮಾಡಿದರೆಂದು ವರದಿಯಾಗಿದೆ.

ಮೂರನೇ ಮಹಾಯುದ್ಧವು ಸಂಭವಿಸುವುದೆಂದು ಪ್ರಪಂಚದಲ್ಲೆಲ್ಲಾ ಭೀತಿಯು ಎಲ್ಲೆಲ್ಲೂ ಕಾಣಬರುತ್ತಲಿದೆ. ಈಗಾಗಲೇ ಪ್ರಪಂಚದ, ಎರಡು ಮಹಾರಾಷ್ಟ್ರಗಳಿಗೆ ಯುದ್ಧವು ಕೊರಿಯಾದಲ್ಲಿ ಪ್ರಾರಂಭವಾಗಿದೆ. ಚೈನಾವು ಈಗಾಗಲೇ ಟಿಬೆಟ್ಟಿನಮೇಲೆ ಆಕ್ರಮಣ ನಡೆಸುತ್ತಲಿದೆ. ಭಾರತದ ನೆರೆರಾಜ್ಯವಾದ ನೇಪಾಳದ ಪರಿಸ್ಥಿತಿಯು ದಿನದಿನವೂ ವಿಷಮಿಸಿಕೊಳ್ಳುತ್ತಲಿದೆ. ಆದುದರಿಂದ ಭಾರತ ಪ್ರಜೆಗಳೆಲ್ಲರೂ ಈಗಲೇ ಎಚ್ಚತ್ತುಕೊಂಡು ಎಂತಹ ತೊಂದರೆಗಳು ಬಂದರೂ ಎದುರಿಸಲು ಸಿದ್ಧರಾಗಬೇಕೆಂದು ಉಪ ಪ್ರಧಾನಿ ಸರದಾರ ಪಟೇಲರು ಹೇಳಿರುವರು.

ಲಂಡನ್ನಿಗೊಂದು ಗೀತಾಮಂದಿರ

ಯೂರೋಪಿನಲ್ಲಿರುವ ಹಿಂದೂ ಅಸೋಸಿಯೇಷನ್ನಿನ ಸಹಾಯದಿಂದ ಲಂಡನ್ನಿನಲ್ಲಿ ಗೀತಾಮಂದಿರವನ್ನು ಸ್ಥಾಪಿಸಲು ಯೋಜನೆಯೊಂದು ಸಿದ್ಧವಾಗಿದೆಯೆಂದು ಸ್ವಾಮಿ ಸದ್ಯಾನಂದಜೀ ಮಹಾರಾಜರು ತಿಳಿಸಿರುತ್ತಾರೆ. ಸ್ವಾಮಿ ಸದ್ಯಾನಂದರು ಯೂರೋಪಿನಲ್ಲಿ ೩ ತಿಂಗಳಕಾಲ ಪ್ರವಾಸ ಮುಗಿಸಿಕೊಂಡು ಈಗತಾನೆ ಭಾರತಕ್ಕೆ ಹಿಂತಿರುಗಿರುವರು.

ಪಟಾಕಿ ಸಿಡಿತದಿಂದ ನೂರು ಜನರಿಗೆ ಗಾಯ

ದೀಪಾವಳಿ ಪ್ರಯುಕ್ತ ಹಚ್ಚಿದ ಪಟಾಕಿಗಳಿಂದ ಸುಮಾರು ನೂರುಜನರು ಕಲ್ಕತ್ತಾದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದರೆಂದೂ ಅದರಲ್ಲಿ ೬೦ ಜನರ ಇಲಾಜು ಪಡೆದು ತೆರಳಿದರೆಂದು ಗೊತ್ತಾಗಿದೆ. ಕಲ್ಕತ್ತಾದ ಅಗ್ನಿಶಾಮಕ ದಳದವರು ೫೦ ಕಡೆಗಳಲ್ಲಿ ಉಂಟಾದ ಬೆಂಕಿಯ ಅನಾಹುತವನ್ನು ಶಮನಮಾಡಿದರು.

ನಿರ್ಬಂಧ ವಜಾ

ಕಡಲೆಕಾಯನ್ನು ಸಂಸ್ಥಾನದಿಂದ ಹೊರಕ್ಕೆ ಕಳುಹಿಸಕೂಡದೆಂದಿದ್ದ ಆಜ್ಞೆಯನ್ನು ಸರ್ಕಾರದವರು ತೆಗೆದುಹಾಕಿದ್ದಾರೆ.

● ಸಂಸ್ಥಾನದ ಜಿಲ್ಲಾ ಬೋರ್ಡುಗಳು, ಪೌರಸಭೆ ಮುಂತಾದ ಸ್ಥಳೀಯ ಸಂಸ್ಥೆಗಳ ಲೆಕ್ಕಗಳ ಆಡಿಟ್ ಮಾಡಲು ಡೆಪ್ಯುಟಿಕಮಿಷನರ ದರ್ಜೆಯ ಒಂದು ಹುದ್ದೆಯನ್ನು ಸರ್ಕಾರವು ಮಂಜೂರ್ಮಾಡಿದೆ.

★ ಸಿರ್ರೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಮತದಾರರ ಪಟ್ಟಿ

ಮೈಸೂರು ಪ್ರಾಂತ್ಯದಲ್ಲಿ ಮತದಾರರ ಪಟ್ಟಿಯನ್ನು ತ್ವರಿತವಾಗಿ ಅಚ್ಚು ಹಾಕಿಸಲಾಗುತ್ತಿದೆ. ಇದೇ ಮಾಹೆ ೧೫ನೇ ತಾರೀಖಿನೊಳಗೆ ಈ ಪಟ್ಟಿಯನ್ನು ಪ್ರಕಟಿಸಬೇಕೆಂದು ಸರ್ಕಾರವು ಆತುರಪಡುತ್ತಲಿದೆ. ಮೈಸೂರು ನಗರದಲ್ಲಿ ಇನ್ನು ನೂರಾರು ಪುಟಗಳಷ್ಟು ಮತದಾರರ ಪಟ್ಟಿಯು ಅಚ್ಚಿಗೆ ಹೋಗದೆ ನಿಂತಿದೆಯೆಂದು ತಿಳಿಯಬರುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ೧೫ನೇ ತಾರೀಖು ಪಟ್ಟಿಯು ಹೊರಬೀಳುವುದು ಅನುಮಾನವಾಗಿದೆಯೆಂದು ಹೇಳಲಾಗಿದೆ.

ಕೃತಜ್ಞತಾ ಸೂಚನೆ

ಅಖಿಲ ಮೈಸೂರು ಪತ್ರಿಕೋದ್ಯಮಿಗಳ ಏಳನೇ ಸಮ್ಮೇಳನವನ್ನು [illegible] ನಡೆಸಲು ಸ್ವಾಗತ ಸಮಿತಿಯವರು ಏರ್ಪಡಿಸಿದ ಎಲ್ಲ ಕೆಲಸಕಾರ್ಯಗಳಿಗೂ ನೆರವು ನೀಡಿದ ಖಾಸಗಿ ಮಹನೀಯರಿಗೂ ಅರಮನೆಯ ಮತ್ತು ಸರ್ಕಾರದ ಇಲಾಖೆಗಳಿಗೂ, ಅಧಿಕಾರಿಗಳಿಗೂ ಸ್ಥಳೀಯ ಸಂಸ್ಥೆಗಳಿಗೂ ಸ್ವಾಗತಸಮಿತಿ ಈ ಮೂಲಕ ತನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸೂಚಿಸುತ್ತದೆ.

ಈ ಸಮ್ಮೇಳನದ ಕಾರ್ಯಕ್ರಮ ಯಶಸ್ವಿಯಾಗಲು ನಗರದ ಅನೇಕಮಂದಿ ದ್ರವ್ಯಸಹಾಯನೀಡಿದ್ದಾರೆ, ಬಸ್ ಮಾಲೀಕರು ನೆರವು ನೀಡಿದ್ದಾರೆ ಅರಮನೆಯ ಮತ್ತು ಸರ್ಕಾರದ ಇಲಾಖೆಯ ಅಧಿಕಾರಿಗಳು ನಿಸ್ಸಂಕೋಚವಾಗಿ ಎಲ್ಲ ಕ್ಷಣದಲ್ಲಿಯೂ ಸಹಾಯನೀಡಿದ್ದಾರೆ. ಮೈಸೂರಿನ ಸುಪ್ರಸಿದ್ಧ ಸಂಗೀತ ಮತ್ತು ನೃತ್ಯ ಕಲಾವಿದರು ಮನರಂಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂತೋಷಗೊಳಿಸಿದ್ದಾರೆ. ಸಾರ್ವಜನಿಕ ವಿದ್ಯಾರ್ಥಿ ನಿಲಯದ ಸ್ವಯಂಸೇವಕದಳದವರು ಸೇವೆಸಲ್ಲಿಸಿದ್ದಾರೆ. ಊಟದ ವ್ಯವಸ್ಥೆಗೆ ಕೆಲವು ಹೋಟೆಲು ಮಾಲೀಕರು ಸಹಾಯನೀಡಿದ್ದಾರೆ. ಸಮ್ಮೇಳನ ಯಶಸ್ವಿಯಾಗಲು ಇನ್ನೂ ಅನೇಕಮಂದಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸಹಾಯನೀಡಿದ್ದಾರೆ. ಈ ಎಲ್ಲ ಮಹನೀಯರಿಗೂ ಸಮ್ಮೇಳನದ ಪರವಾಗಿ ಸ್ವಾಗತಸಮಿತಿ ಚಿರಋಣಿಯಾಗಿರುತ್ತದೆ.

೧೯೪೮ನೇ ಪತ್ರಿಕಾ ಶಾಸನ ರದ್ದು

೧೯೪೮ನೇ ಮೈಸೂರು ಪತ್ರಿಕಾಶಾಸನ ರದ್ದುಗೊಳಿಸುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿದೆ. ಪತ್ರಿಕೆಗಳ ಹಿತದೃಷ್ಟಿಯಿಂದ ಸೂಕ್ತ ನಿಯಮಾವಳಿಯನ್ನು ರಚಿಸಲು ಒಂದು ಸಮಿತಿಯನ್ನು ಗೊತ್ತುಮಾಡುವುದಾಗಿ ತಿಳಿಯಬಂದಿದೆ.

ವಿಶ್ವಸಂಸ್ಥೆಗೆ ಚೈನಾಕರೆ

ಕೊರಿಯಾ ಯುದ್ಧದಲ್ಲಿ ಚೈನಾ ಪ್ರವೇಶಿಸಿರುವುದನ್ನು ಚರ್ಚಿಸಲು ವಿಶ್ವಸಂಸ್ಥೆಯು ಚೈನಾಪ್ರಜಾ ಸರ್ಕಾರವನ್ನು ಆಹ್ವಾನಿಸಿದೆ. ಈ ಆಹ್ವಾನವನ್ನು ಮನ್ನಿಸಿ ೯ ಜನರನ್ನೊಳಗೊಂಡ ಒಂದು ನಿಯೋಗವು ಅಮೆರಿಕಾಕ್ಕೆ ಹೊರಟಿದೆ.

ಚೀಣೀ ಸೈನ್ಯ ಕೊರಿಯಾದಲ್ಲಿ

ಕೊರಿಯಾದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿ ಕೆಂಪು ಚೀಣೀ ಸೈನಿಕರು ಯುದ್ಧದಲ್ಲಿ ಭಾಗವಹಿಸುತ್ತಲಿರುವರೆಂದು ಹೇಳಲಾಗಿದೆ.

ಕಾಮನ್‌ವೆಲ್ತ್ ಪಂದ್ಯ

ಬೊಂಬಾಯಿನಲ್ಲಿ ಡಿಸೆಂಬರ್ ೧ರಿಂದ ಭಾರತ–ಕಾಮನ್‌ವೆಲ್ತ್ ಎರಡನೇ ಟೆಸ್ಟ್ ಪಂದ್ಯ ನಡೆಯುವುದು.

ಭಾರತ ಟೀಂನಲ್ಲಿ ವಿಜಯ ಮರ್ಚೆಂಟ್ (ಕ್ಯಾಪ್ಟನ್) ವಿಜಯ ಹಜಾರೆ (ವೈಸ್ ಕ್ಯಾಪ್ಟನ್) ಮುಷ್ತಕ್‌ಅಲಿ, ವಿನೂ ಮಂಕಡ್, ಶಿಂಧೆ, ಫಡ್ಕರ್, ಅಧಿಕಾರಿ, ಉಮ್ರಿಗರ್, ಅಳ್ವಾ, ರಾಜೇಂದ್ರನಾಥ್ (ವಿಕೆಟ್ ಕೀಪರ್) ಮಂಜೇಕರ್ ರು ಇರುವರು.

ತುಮಕೂರು ಜಿಲ್ಲಾಧಿಕಾರಿಗಳು

ಸಕಲೇಶಪುರ ಸಬ್ ಡಿವಿಜನ್ ಆಫೀಸರಾಗಿರುವ ಜನಾಬ್ ಬಿ. ಎಂ. ಅಬುಬೇಕರ್‌ರವರನ್ನು ಡೆಪ್ಯುಟಿ ಕಮಿಷನರಾಗಿ ನೇಮಿಸಿ, ತುಮಕೂರು ಜಿಲ್ಲೆಗೆ ವರ್ಗಾಯಿಸಲಾಗಿದೆ ಅಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಜನಾಬ್ ಸೈಯದ್ ಅಬ್ದುಲ್ ಅಲೀಂರವರಿಗೆ ನಿವೃತ್ತರಾಗುವ ಮುನ್ನ ೧೯೫೧ನೇ ಮೇ ೩ರವರೆಗೆ ರಜಾಕೊಡಲಾಗಿದೆ.

ವಿಶ್ವಸಂಸ್ಥೆಗೆ ಟಿಬೆಟ್ ಮೊರೆ

ಚೀಣಾ ಸೈನ್ಯಗಳು ಟಿಬೆಟ್ ಆಕ್ರಮಣ ಮಾಡಿರುವುದರಿಂದ ಉಂಟಾಗಿರುವ ಪರಿಸ್ಥಿತಿಯಲ್ಲಿ ವಿಶ್ವಸಂಸ್ಥೆ ಪ್ರವೇಶಿಸಬೇಕೆಂದು ಟಿಬೆಟ್ ಸರ್ಕಾರವು ವಿಶ್ವಸಂಸ್ಥೆಗೆ ಮನವಿಯನ್ನು ಸಲ್ಲಿಸಿದೆಯೆಂದು ತಿಳಿಯಬರುತ್ತದೆ

ದೀಪೋತ್ಸವ

ಅಮೃತೂರು ಗ್ರಾಮದಲ್ಲಿ ವಿದ್ಯುಚ್ಛಕ್ತಿ ದೀಪೋತ್ಸವ ಆರಂಭವನ್ನು ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ೧೦ನೇ ತಾರೀಖು ನಡೆಸಿದರು.

ಈ ಸಂದರ್ಭದಲ್ಲಿ ವಿದ್ಯುಚ್ಛಕ್ತಿಯಿಂದ ಉಂಟಾಗುತ್ತಲಿರುವ ಉಪಯೋಗಗಳನ್ನು ವಿವರಿಸುತ್ತಾ ಇನ್ನೆರಡು ವರ್ಷಗಳೊಳಗಾಗಿ ಸಂಸ್ಥಾನಾದ್ಯಂತ ಎಲ್ಲಾ ತಾಲ್ಲೂಕು ಹೆಡ್‌ಕ್ವಾರ್ಟರ್, ಮುಖ್ಯವಾದ ಪಟ್ಟಣ ಮತ್ತು ಹಳ್ಳಿಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದಾಗಿ ತಿಳಿಸಿದರು.

ರಣಜಿತ್
8-11-50 ಬುಧವಾರದಿಂದ
ದಿನವಹಿ 3 ಪ್ರದರ್ಶನಗಳು
† ಅಶೋಕ್‌ಕುಮಾರ್ † ಮಧುಬಾಲ
ಪಾತ್ರವಹಿಸಿರುವ
ನಿಶಾನಾ
(ಹಿಂದಿ)
ಬೆಳಗಿನ ಪ್ರದರ್ಶನ 10-11-50 ರಿಂದ
3 ದಿನಗಳು ಮಾತ್ರ
ಶ್ರವಣಕುಮಾರ್
ಮುಮ್ತಾಜ್ ಶಾಂತಿ, ಚಂದ್ರಮೋಹನ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ನವಂಬರ್ ೧೨ ಭಾನುವಾರ

ಬೆಳಗ್ಗೆ ೭-೧೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ. ೭-೩೦ ಮಿಶ್ರಮಾಧುರ್ಯ (ರೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಜಲತರಂಗ್ ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮಮೆಚ್ಚಿನ ಗೀತೆಗಳು ೨-೩೦ ಮುಕ್ತಾಯ.

ಸಂಜೆ ೫-೩೦ ಸಿ. ಎಸ್. ಸರೋಜ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆಗಳು. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಚಿತ್ರಲೋಕ ೭-೩೦ ಸಿ. ಎಸ್. ಸರೋಜ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಎಸ್. ಸುಬ್ಬಕೃಷ್ಣಯ್ಯ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕಿರು ತಾರೆಗಳು ೧೦-೦ ಮುಕ್ತಾಯ.

ನವಂಬರ್ ೧೩ ಸೋಮವಾರ

ಬೆಳಗ್ಗೆ ೭-೪೫ ಉದಯಗಾನ ಮತ್ತು ಕಾರ್ಯಕ್ರಮ ವಿವರಣೆ ೭-೨೦ ಚಿತ್ರಸಂಗೀತ ೭-೩೫ ಪಕ್ಷಿನೋಟ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಗಿತಾರ್ ೧-೪೫ ಹಿಂದೀ ಶಿಕ್ಷಣ. ೨-೦ ಜನರಂಜನಿ (ರೆ) ೨-೧೫ ವಾದ್ಯಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ಪದ್ಮಶಿವರಾಮನ್ (ವೀಣಾವಾದನ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದಿ ಭಾಷಣ ೭-೧೫ ಪದ್ಮಶಿವರಾಮನ್ (ವೀಣಾವಾದನ) ೭-೪೫ ಕನ್ನಡದಲ್ಲಿ ವಾರ್ತೆ ೮-೧ ನಾದಸುಧಾ (ರೆ) ೮-೧೫ ಇಂಗ್ಲೀಷಿನಲ್ಲಿ ವಾರ್ತೆ ೮-೩೦ ಹೆಚ್. ಆರ್. ಸೀತಾರಾಮಶಾಸ್ತ್ರಿ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಹೆಚ್. ಆರ್. ಸೀತಾರಾಮಶಾಸ್ತ್ರಿ (ಸಂಗೀತ) ೧೦-೦ ಮುಕ್ತಾಯ.

— ಒಲಂಪಿಯಾ —
9-11-50 ರಿಂದ
ಜನಭರಿತವಾದ 2ನೇ ವಾರ
ನಿಗಾರ್, ● ರೆಹಮಾನ್, ● ಜೈರಾಜ್,
ಪಾತ್ರವಹಿಸಿರುವ
ಮಗ್ರೂರ್
ಬೆಳಗಿನ ಪ್ರದರ್ಶನ 8-11-50 ರಿಂದ
5 ದಿನಗಳು ಮಾತ್ರ
ಬಜಾರ್
ಪಾತ್ರ: ನಿಗಾರ್, ಶ್ಯಾಮ್, ಗೋಪ್

ಬಿಡಿಪ್ರತಿ ೨ ಪೈ ದಿನಪತ್ರಿಕೆ Phone: 374

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ
ಸಂಪುಟ ೧] ೧೬—೧೧—೧೯೫೦ನೇ ಗುರುವಾರ [ಸಂಚಿಕೆ ೬೫

ಪ್ರತಿಬಂಧಕಾಜ್ಞೆ ವಜಾ

ಭಾರತ ಸರ್ಕಾರದ ತೀರ್ಮಾನ

ಹತ್ತಿ, ಸೌದೆ, ಹಾಲು, ಟೀ, ಕಾಳುಗಳು ಮುಂತಾದ ಅವಶ್ಯಕವಾದ ಪದಾರ್ಥಗಳನ್ನು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಒಯ್ಯಲು ಇರುವ ಪ್ರತಿಬಂಧಕವನ್ನು ದೇಶದಾದ್ಯಂತ ತೆಗೆದುಹಾಕಲು ಭಾರತ ಸರ್ಕಾರವು ನಿರ್ಧರಿಸಿ, ಕೂಡಲೇ ಈ ನಿರ್ಬಂಧಾಜ್ಞೆಯನ್ನು ತೆಗೆದುಹಾಕಬೇಕೆಂದು ಎಲ್ಲಾ ಪ್ರಾಂತೀಯ ಸರ್ಕಾರಗಳಿಗೆ ತಿಳುವಳಿಕೆಕೊಡಬೇಕೆಂದು ತೀರ್ಮಾನಿಸಿರುವುದಾಗಿ ತಿಳಿಯಬಂದಿದೆ.

ಪ್ರಾಂತೀಯ ಸರ್ಕಾರಗಳು ಪ್ರತಿಬಂಧಕ ತೆಗೆದುಹಾಕುವುದನ್ನು ನಿಧಾನ ಮಾಡಿದಲ್ಲಿ ರಾಜ್ಯಾಂಗ ಶಾಸನದ ೩೦೫ನೇ ನಿಬಂಧನೆಯ ಪ್ರಕಾರ ಕೇಂದ್ರ ಸರ್ಕಾರವೇ ವಿಶೇಷಾಜ್ಞೆ ಹೊರಡಿಸುವುದೆಂದು ತಿಳಿಯಬರುತ್ತದೆ.

ಕೊರಿಯಾಕ್ಕೆ ಚೈನಾ ಸಹಾಯ

ಅಮೆರಿಕಾ ಆಕ್ರಮಣವನ್ನು ತಡೆಗಟ್ಟಲು ಕೊರಿಯಾಕ್ಕೆ ತನ್ನ ಸಹಾಯವನ್ನು ನೀಡಲು ಚೈನಾ ಪ್ರಜಾ ಸರ್ಕಾರವು ಸದಾ ಸಿದ್ಧವಾಗಿದೆ ಎಂದೂ ಚೈನಾ ಸರ್ಕಾರವು ಘೋಷಿಸಿರುವುದಾಗಿ ತಿಳಿಯಬಂದಿದೆ.

ಟಿಬೆಟ್ಟಿನ ದೂರು

ಟಿಬೆಟ್ಟಿನಮೇಲೆ ಚೀಣಾ ಸೈನ್ಯಗಳು ಆಕ್ರಮಣ ನಡೆಸಿವೆಯೆಂದು ಟಿಬೆಟ್ ಸರ್ಕಾರವು ಪ್ರಪಂಚ ಸಂಸ್ಥೆಗೆ ಮಾಡಿರುವ ದೂರನ್ನು ಸೆಕ್ರೆಟರಿ ಜನರಲ್ ಮಿ॥ ಟ್ರಿಗ್ವೆಲೈರವರು ಸ್ವೀಕರಿಸಿರುವರು. ದೂರನ್ನು ಕೌನ್ಸಿಲ್ಲಿನ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.

ವಿಮಾನ ಅಪಘಾತ

ರೋಂನಿಂದ ಪ್ಯಾರಿಸ್ಸಿಗೆ ೫೮ ಜನರನ್ನೊಳಗೊಂಡು ರುತ್ತಿದ್ದ ವಿಮಾನವು ಪೂರ್ವಫ್ರಾನ್ಸಿನ ಬಭ್ಯೂ ಪರ್ವತ ಸಾಲಿನಲ್ಲಿ ನೆಲಕ್ಕುರುಳಿತು ಈ ಅಪಘಾತದಲ್ಲಿ ಎಲ್ಲರೂ ಮಡಿದಿರುವರೆಂದು ವರದಿಯಾಗಿದೆ.

ನೇಪಾಳ ಮುಖ್ಯ ಮಂತ್ರಿ ಭಾರತಕ್ಕೆ

ನೇಪಾಳದ ಮುಖ್ಯ ಮಂತ್ರಿ ಅಥವಾ ವಿದೇಶಾಂಗ ಮಂತ್ರಿ ದೆಹಲಿಗೆ ಈ ವಾರ ಬಂದು ಭಾರತ ಸರ್ಕಾರದೊಡನೆ ನೇಪಾಳ ಪರಿಸ್ಥಿತಿ ವಿಷಯವಾಗಿ ಚರ್ಚೆ ನಡೆಸುವರೆಂದು ಹೇಳಲಾಗಿದೆ.

ಸಹಾನುಭೂತಿ

ನೇಪಾಳದ ಜನರ ಚಳುವಳಿಗೆ ಯಶಸ್ಸು ಕೋರಲು ಭಾರತ ಸೋಷಯಲಿಸ್ಟ್ ಪಕ್ಷವು ಸಭೆ ಮೆರವಣಿಗೆ ಮತ್ತು ರ್‍ಯಾಲಿ ಮುಂತಾದುವನ್ನು ಬರುವ ಭಾನುವಾರ ನಡೆಸಬೇಕೆಂದು ಸೋಷಯಲಿಸ್ಟ್ ಪ್ರಧಾನಕಾರ್ಯದರ್ಶಿ ಶ್ರೀ ಅಶೋಕಾಮೆಹ್ತಾ ಅವರು ತಿಳಿಸಿರುವರು.

ರಾಜೀ ಇಲ್ಲ

ರಾಣಾಗಳೊಡನೆ ನೇಪಾಳ ಕಾಂಗ್ರೆಸ್ ಯಾವ ರಾಜಿಗೂ ಯತ್ನಿಸುವುದಿಲ್ಲ. ಕೊನೆಯವರೆಗೂ ಹೋರಾಟ ನಡೆಸಿ ಮಹಾರಾಜರ ನೇತೃತ್ವದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪಿಸಲಾಗುವುದೆಂದು ನೇಪಾಳ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೊಯ್‌ರಾಲಾ ಹೇಳಿರುವರು.

ದೆಹಲಿಗೆ ಮುಖ್ಯಮಂತ್ರಿಗಳು

ಬೆಂಗಳೂರು ನ. ೧೫

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಬೆಳಗ್ಗೆ ದೆಹಲಿಗೆ ಪ್ರಯಾಣ ಮಾಡಿದರು. ನವೆಂಬರ್ ೧೯ಕ್ಕೆ ಹಿಂತಿರುವರು.

ಎಸ್. ಎಸ್ ಎಲ್. ಪರೀಕ್ಷೆ ಫಲಿತಾಂಶ

ಎಸ್. ಎಸ್. ಎಲ್.ಸಿ. ಸಪ್ಲಿಮೆಂಟರಿ ಪರೀಕ್ಷೆ ಫಲಿತಾಂಶಗಳು ಈ ತಿಂಗಳು ಕೊನೆವಾರದಲ್ಲಿ ಹೊರಬೀಳುವುದೆಂದು ತಿಳಿಯಬರುತ್ತದೆ.

ನೇಪಾಳದ ಕಾದಾಟ ಪ್ರಬಲವಾಗಿದೆ

ನೇಪಾಳ ಕಾಂಗ್ರೆಸ್ ಸೈನ್ಯಗಳ ಪ್ರತಿಭಟನೆಯು ಬಲವಾಗುತ್ತಲಿದೆಯೆಂದು ತಿಳಿಯಬರುತ್ತದೆ.

ಖಟ್ಮಂಡೂವಿಗೆ ೧೪೦ ಮೈಲಿ ಆಗ್ನೇಯದಲ್ಲಿ ನೇಪಾಳದ ಮುಖ್ಯ ನಗರವಾದ ವಿರಾಟನಗರದಲ್ಲಿ ಕಾಂಗ್ರೆಸು ಮತ್ತು ಸರ್ಕಾರಿ ಸೇನೆಗಳಿಗೆ ಕದನ ನಡೆಯುತ್ತಲಿದೆ ಇದರ ದಕ್ಷಿಣದಲ್ಲಿರುವ ೪೦ ಗ್ರಾಮಗಳು ಕಾಂಗ್ರೆಸ್ಸಿನ ವಶದಲ್ಲಿದೆ.

ವಿರಾಟನಗರಕ್ಕೆ ಸಮೀಪದಲ್ಲಿ ಕಾಂಗ್ರೆಸ್ಸಿನವರು ಹಿಡಿದಿರುವ ಪ್ರದೇಶದಲ್ಲಿ ಒಂದು ತಾತ್ಕಾಲಿಕ ಸರ್ಕಾರವನ್ನು ಕಾಂಗ್ರೆಸ್ಸಿನವರು ಸ್ಥಾಪಿಸಿದ್ದಾರೆ. ನೇಪಾಳದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಮಾತೃಕಪ್ರಸಾದ ಕೊಯಿರಾಲಾರವರ ಸಹೋದರ ಶ್ರೀ ಕೇಶವ್‌ಕೊಯಿರಾಲಾರವರು ಆಕ್ರಮಿತ ಪ್ರದೇಶಗಳಿಗೆ ಆಡಳಿತಗಾರರಾಗಿ ನೇಮಕವಾಗಿದ್ದಾರೆ. ಇವರ ಸಹಾಯಕ್ಕೆ ೭ ಜನರ ಸಲಹಾ ಸಮಿತಿಯನ್ನು ರಚಿಸಲಾಗಿದೆ. ಈ ನೂತನ ಸರ್ಕಾರಕ್ಕೆ ಜನತೆಯ ಸಹಕಾರವನ್ನು ಕಾಂಗ್ರೆಸ್ಸು ಕೋರುತ್ತಲಿದೆ.

ಬೀಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಗಡಿಗಳಲ್ಲಿ, ಭಾರತ ಸರ್ಕಾರವು ರಕ್ಷಣಾಕಾರ್ಯವನ್ನು ಮುಂದುವರಿಸುತ್ತಲಿದೆ. ನೇಪಾಳದ ಕಡೆಯಿಂದ ಸೈನ್ಯ ವಿಮಾನವಾವುದೂ ಭಾರತದ ಗಡಿದಾಯ್ತು ಬರದಂತೆ ಭಾರತಸೈನ್ಯವು ನೋಡಿಕೊಳ್ಳುವಂತೆ ಎಚ್ಚರಿಕೆ[illegible]ತ್ತಿದೆ. ಗಡಿಯಲ್ಲಿ ಯಾವ ಘರ್ಷಣೆಗಳು ಉಂಟಾಗಿಲ್ಲ. ಭಾರತ ಸರ್ಕಾರವು ನೇಪಾಳ ಕಾಂಗ್ರೆಸ್ ಸಂಸ್ಥೆಗೆ ಸೈನ್ಯ ನೆರವನ್ನು ನೀಡಿಲ್ಲ.

ನೇಪಾಳ ರಾಜಧಾನಿ ಖಟ್ಮಂಡುವಿನಲ್ಲಿ ಸರ್ಕಾರಿ ಸೈನಿಕರು ದಂಗೆಯೆದ್ದಿದ್ದಾರೆಂದು ಸುದ್ದಿ ಹೊರಟಿದೆ. ಕಾಂಗ್ರೆಸ್ ವಶದಲ್ಲಿರುವ ಬೀರ್‌ಗಂಜನ್ನು ಸರ್ಕಾರ ಸೈನ್ಯಗಳು ಹಿಡಿಯಲು ಪ್ರಯತ್ನಿಸುತ್ತಿವೆ

ಚೀಣಾದಮೇಲೆ ಆಟಂ ಬಾಂಬು

ಪರಿಸ್ಥಿತಿಯೇನಾದರೂ ಉತ್ತಮಗೊಳ್ಳದಿದ್ದಲ್ಲಿ ಕಮ್ಯೂನಿಸ್ಟ್ ಚೀಣಾದ ಕೆಲವು ನಗರಗಳ ಮೇಲೆ ಆಟಂ ಬಾಂಬನ್ನು ಹಾಕಬೇಕಾಗಬಹುದೆಂದು ಜಾರ್ಜಿಯಾದ ಡೆಮಾಕ್ರಾಟಿಕ್ ಸೆನೇಟರ್ ಮಿ॥ ರಿಚರ್ಡ್‌ರಸೆಲ್ ಹೇಳಿರುವರು.

ಚೀಣಾ-ಟಿಬೆಟ್ ಒಪ್ಪಂದ

ಚೀಣಾ-ಟಿಬೆಟ್ಟಿಗೆ ಒಪ್ಪಂದವಾಗಿದೆಯೆಂಬ ಸುದ್ದಿಗೆ ಆಧಾರವಿಲ್ಲವೆಂದು ದೆಹಲಿ ವಾರ್ತೆಗಳಿಂದ ತಿಳಿಯಬರುತ್ತದೆ.

ಹೈದರಾಬಾದಿಗೆ ಗೃಹ ಸಚಿವರು

ಬೆಂಗಳೂರು ನ ೧೫

ಮೈಸೂರಿನ ಗೃಹಸಚಿವರಾದ ಶ್ರೀ ಟಿ. ಮರಿಯಪ್ಪನವರು ಇಂದು ಬೆಳಗ್ಗೆ ಶ್ರೀ ಎಸ್. ಚನ್ನಯ್ಯನವರೊಡನೆ ಹೈದರಾಬಾದಿಗೆ ತೆರಳಿದರು. ೧೯ನೇ ತಾರೀಖು ಅಲ್ಲಿಂದ ಹಿಂತಿರುಗುವರು.

ಅಕ್ಕಿ ರೇಷನ್ ಹೆಚ್ಚಿತು

ಕಳೆದ ಒಂದು ವಾರದಿಂದ ಮಚ್ಚಲೀ ಪಟ್ಟಣದಲ್ಲಿ ೮ ಔನ್ಸ್ ಅಕ್ಕಿ ಪಡಿತರ ಕೊಡಲಾಗುತ್ತಲಿದೆ.

ಕುಂಭಕೋಣದಲ್ಲಿ ಅಕ್ಕಿ ಪಡಿತರವನ್ನು ೮ ಔನ್ಸುಗಳಿಂದ ೧೦ ಔನ್ಸುಗಳಿಗೆ ಹೆಚ್ಚಿಸಲಾಗಿದೆ

ಭಾರತದ ಮಧ್ಯಸ್ತಿಕೆಯೆ ?

ಭಾರತವು ಇಂದಿನ ನೇಪಾಳದ ಉತ್ಕಟ ಪರಿಸ್ಥಿತಿಯನ್ನು ತಡೆಗಟ್ಟಿ ಸರ್ಕಾರ ಮತ್ತು ಕಾಂಗ್ರೆಸ್ಸಿಗೆ ರಾಜಿಯನ್ನುಂಟುಮಾಡಲು ಮಧ್ಯಸ್ಥಿಕೆ ನಡೆಸಬೇಕೆಂದು ನೇಪಾಳ ಮುಖ್ಯಮಂತ್ರಿಯು ಭಾರತ ಸರ್ಕಾರವನ್ನು ಕೇಳಿರುವುದಾಗಿ ವರದಿಯಾಗಿದೆ.

ಭೂಕಂಪನಿಧಿಗೆ ಒಂದು ಲಕ್ಷ ರೂ.

ಅಸ್ಸಾಂ ಭೂಕಂಪನಿಧಿಗೆ ಭಾರತ ಸೈನ್ಯವು ಒಂದು ಲಕ್ಷ ರೂಪಾಯಿಗಳನ್ನು ಭಾರತ ಪ್ರಧಾನ ದಂಡನಾಯಕ ಜ॥ ಕಾರಿಯಪ್ಪನವರ ಮೂಲಕ ಪಂಡಿತ ನೆಹರೂರವರಿಗೆ ಒಪ್ಪಿಸಿತು.

ನೆಹರೂ ವರ್ಧಂತಿ

ಮೈಸೂರು ನ. ೧೫

ಪಂಡಿತ ನೆಹರೂರವರ ೬೧ ನೇ ವರ್ಧಂತಿಯ ಅಂಗವಾಗಿ ನಿನ್ನೆ ಸಂಜೆ ಮೈಸೂರು ಪುರಭವನದಲ್ಲಿ ಪೌರಸಭಾಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಸುಬ್ಬರಾವ್, ರಂಗರಾಮಯ್ಯ ಮುಂತಾದವರು ನೆಹರೂರವರ ದೇಶಸೇವೆಯ ವಿಷಯವಾಗಿ ಮಾತನಾಡಿದರು.

ಪಂಡಿತ ನೆಹರೂರವರಿಗೆ ದೀರ್ಘಾಯುಸ್ಸನ್ನು ಕೋರಿ ನಿರ್ಣಯವನ್ನು ಮಾಡಲಾಯಿತು.

ಆಸ್ಟ್ರೇಲಿಯಾ ಗೋಧಿ ಭಾರತಕ್ಕೆ

ಆಸ್ಟ್ರೇಲಿಯಾದಿಂದ ತಾನು ತರಿಸಿಕೊಳ್ಳುತ್ತಿರುವ ೪೨,೦೦೦ ಟನ್ನು ಗೋಧಿಯನ್ನು ಬ್ರಿಟನ್ನು ಭಾರತಕ್ಕೆ ಕೊಡಲಿದೆ.

● ರಾಜಧಾನಿ ಸೊಪ್ಪಿನಕೊಳದ ಬೀದಿಯಲ್ಲಿರುವ ಫ್ರೆಂಡ್ಸ್ ಅಸೋಷಿಯೇಷನ್ನಿನ ಆಶ್ರಯದಲ್ಲಿ ನಿನ್ನೆ ಸಂಜೆ ೬-೩೦ಕ್ಕೆ ನೆಹರುರವರ ಜಯಂತಿ ಉತ್ಸವವು ಸಂಘದ ಅಧ್ಯಕ್ಷರಾದ ಶ್ರೀ ಎಂ. ಎಸ್. ನರಸಿಂಹನ್ ಎಂ.ಎ ರವರ ನೇತೃತ್ವದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು.

● ರಕ್ಸಾಲ್ ಗಡಿಯಲ್ಲಿ ಅಡಗಿಕೊಂಡಿದ್ದ ಕೆಲವು ನೇಪಾಳಿಗಳನ್ನು ಬಿಹಾರ ಪೋಲೀಸಿನವರು ಮುತ್ತಿ, ಕೆಲವು ಯುದ್ಧ ಸಾಮಗ್ರಿ ಮತ್ತು ದ್ರವ್ಯವನ್ನು ವಶಪಡಿಸಿಕೊಂಡಿರುವುದಾಗಿ ವರದಿಯಾಗಿದೆ.

ರಾಜೀನಾಮೆ

ಮೈಸೂರು ನಗರ ಪೌರಸಭೆಯಲ್ಲಿರುವ ಪ್ರಜಾಸಂಘ ಕೆಲವು ಸದಸ್ಯರುಗಳು ಪೌರಸಭೆಯ ಕೆಲವು ಉಪ ಮಿತಿಗಳಿಗೆ ರಾಜೀನಾಮೆಯನ್ನಿತ್ತಿದ್ದಾರೆ ದೆಹಲಿ ಯಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಸಮ್ಮೇಳ ಕ್ಕೆ ತಮ್ಮ ಪಕ್ಷದವರನ್ನು ಚುನಾಯಿಸಿಕೊಳ್ಳಲಿಲ್ಲವೆಂ ಬುದನ್ನು ಪ್ರತಿಭಟಿಸಲು ಈ ರೀತಿ ಮಾಡಿರುವುದಾಗಿ ಹೇಳಲಾಗಿದೆ. ಆದರೆ ಇನ್ನು ಕೆಲವು ಉಪಸಮಿತಿಗಳಲ್ಲಿ ಈ ಪಕ್ಷದ ಸದಸ್ಯರು ರಾಜೀನಾಮೆಯಿತ್ತಿಲ್ಲ.

ಮಿ|| ಈಗಲ್‌ಟನ್‌ರು ಯುನೆಸ್ಕೋವಿಗೆ

ಮೈಸೂರು ಮಹಾರಾಜಾ ಕಾಲೇಜಿನ ಇಂಗ್ಲೀಷು ಪ್ರೊಫೆಸರಾಗಿದ್ದು ರಜದಲ್ಲಿರುವ ಮಿ|| ಈಗಲ್‌ಟನ್‌ರು ಯುನೆಸ್ಕೋ ಸಂಸ್ಥೆಯಲ್ಲಿ ಒಂದು ವರ್ಷಕಾಲ ವಿಶೇಷ ಲಸದ ಮೇಲ ನೇಮಿತರಾಗಿದ್ದಾರೆ.

ಮೈಸೂರಲ್ಲಿ ಮತದಾರರ ಪಟ್ಟಿ

ಮೈಸೂರು ಪ್ರಾಂತ್ಯದಲ್ಲಿ ಮತದಾರರ ಪಟ್ಟಿಯು ನ್ನೆ ಪ್ರಕಟವಾಗಬೇಕಾದ್ದುದು ಮುಂದೆ ಹಾಕಲಾಗಿದೆ ಯಾವಾಗ ಪ್ರಕಟವಾಗುವುದೆಂಬುದು ಇನ್ನೂ ತಿಳಿಯ ಬಂದಿಲ್ಲ. ಸಂಸ್ಥಾನದ ಅನೇಕ ಭಾಗಗಳಲ್ಲಿ ಮತದಾರರ ಪಟ್ಟಿಯು ಇನ್ನೂ ಪೂರ್ತಿಯಾಗಿ ಅಚ್ಚು ಆಗಿಲ್ಲವೆಂದು ತಿಳಿಯಬರುತ್ತದೆ.

ಮದುವೆಯಾದುದು ಸುಳ್ಳು

೩ ವರ್ಷ ಹೊಸದೊರೆ ಜ್ಞಾನೇಂದ್ರರಿಗೆ ಮದುವೆಯಾದುದೆಂಬ ಸುದ್ದಿ ಆಧಾರವಿಲ್ಲದ್ದೆಂದು ದೆಹಲಿಯಲ್ಲಿ ರುವ ನೇಪಾಳ ರಾಯಭಾರಿ ಒಂದು ಹೇಳಿಕೆಯಿತ್ತಿದ್ದಾರೆ.

ಇಂದಿನ ಆಹಾರಪರಿಸ್ಥಿತಿಗೆ ಸರ್ಕಾರವೇ ಕಾರಣ

ಪೋಲೀಸ್ ರಾಜ್ಯವನ್ನು ಆಳಲು ಸಮರ್ಥರಾದಂಥವ ಗೆ ಆಹಾರ ಸಮಸ್ಯೆ ಬಗೆಹರಿಸುವ ಕೆಲಸವನ್ನು ವಹಿ ದುದರ ಫಲವಾಗಿ ಈಗ ದೇಶದಲ್ಲೆಲ್ಲಾ ಆಹಾರಪರಿಸ್ಥಿತಿಯು ಉತ್ಕಟಸ್ಥಿತಿಗೆ ಬಂದಿದೆ. ೪ ಅಂಕಿಗಳ ಸಂಬಳವನ್ನು ತೆಗೆದುಕೊಳ್ಳುವಂಥಾ ಅಧಿಕಾರಿಗಳು ರೈತ ರ ಬಡತನ, ಅನಕ್ಷರಸ್ಥತೆ ಮತ್ತು ಅನಾರೋಗ್ಯವನ್ನು ವಾರಿಸಲು ಯೋಗ್ಯರಲ್ಲ. ಆಹಾರ ಉತ್ಪತ್ತಿಯನ್ನು ಹೆಚ್ಚಿಸಲು ಯೋಜನೆಗಳನೇಕವನ್ನು ತಯಾರಿಸಿ ನಿಷ್ಫಲ ರಾಗಿರುವರು. ಈ ಯೋಜನೆಗಳನ್ನು ಕಾರ್ಯಗತಮಾ ಡಲು ಅಸಮರ್ಥರಾದ ಅಧಿಕಾರಿಗಳಿಗೆ ವಹಿಸಿರುವುದೇ ಮುಖ್ಯ ಕಾರಣವಾಗಿದೆ. ಅಲ್ಲದೆ ವ್ಯವಸಾಯದಲ್ಲಿ ನೂತನಕ್ರಮಗಳನ್ನು ಕಂಡು ಹಿಡಿದು ಜಾರಿಗೆ ತರದೆ ಹಿಂದಿನ ಕ್ರಮಗಳನ್ನೇ ಅನುಸರಿಸುತ್ತಲಿರುವುದೂ ಇದಕ್ಕೊಂದು ಕಾರಣ.

ಅಸಮರ್ಥರಾಗಿರುವವರಿಗೆ ಈ ಕೆಲಸವನ್ನು ವಹಿಸದೆ ಉತ್ತಮ ರೀತಿಯಲ್ಲಿ ಆಹಾರ ಪರಿಸ್ಥಿತಿಯನ್ನು ಎದುರಿಸಿದಲ್ಲಿ ದೇಶಕ್ಕೆ ಹಿತವಾಗುವುದು.

ದೇಶದಲ್ಲಿ ಆಹಾರ ಅಭಾವಕ್ಕೆ ಹವಮಾನವನ್ನು ದೂರುವುದು ಶುದ್ಧ ತಪ್ಪು ಎಂಬುದಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಎಕನಾಮಿಕ್ ರಿವ್ಯೂ ಪತ್ರಿಕೆಯು ಒಂದು ಲೇಖನದಲ್ಲಿ ಹೇಳುತ್ತದೆ.

ಸರ್ಕಾರಿ ಸೈನ್ಯಗಳು ಕಾಂಗ್ರೆಸ್ಸಿಗೆ

ಬಿರಟ್‌ಗಂಜಿಗೆ ೨೬ ಮೈಲಿಯಲ್ಲಿ ಕಾಂಗ್ರೆಸ್ ಸೈನ್ಯದ ಮೇಲೆ ಯುದ್ಧ ಮಾಡಲು ಹೋಗಿದ್ದ ೧೫೦೦, ನೇಪಾಳ ಸರ್ಕಾರ ಸೈನಿಕರಲ್ಲಿ ೭೦೦ ಜನರು ಕಾಂಗ್ರೆಸ್ ಸೈನ್ಯವನ್ನು ಸೇರಿದರೆಂದು ವರದಿಯಾಗಿದೆ.

ಮತದಾರರ ಪಟ್ಟಿ ಪ್ರಕಟನೆ

೯೦ ಲಕ್ಷಕ್ಕೆ ಸ್ವಲ್ಪ ಮೇಲ್ಪಟ್ಟು ಇರುವ ಮತದಾರರ ಪಟ್ಟಿಯನ್ನು ಹೈದರಾಬಾದಿನಲ್ಲಿ ಮಂಗಳವಾರ ಪ್ರಕಟಿಸಲಾಯಿತು. ಹೆಸರುಗಳನ್ನು ಇಂಗ್ಲೀಷು, ಉರ್ದು, ತೆಲಗು, ಮರಾಠಿ ಮತ್ತು ಕನ್ನಡ ಭಾಷೆಗಳಲ್ಲಿ ಅಚ್ಚು ಹಾಕಲಾಗಿದೆ.

MYSORE CITY MUNICIPALITY

NOTICE

Sealed tenders will be received up to 4 P.M. on 20-11-50 by the Municipal Engineer for (1) Collection of depot materials for road in Lashkar Mohalla (2) Metalling the cross road in front of Electric pole No.2071 in Seenerkatte block, K-R. Mohalla (3) Metalling Urs Road from Sawday road up to Rampart wall Road in Mandi Mohalla (4) Providing B. S. Slab paving in place of existing Kadapah slab flooring in the Green stall in Devaraja Market (5) Providing slab drain in the cross street running by the side of Electric pole 462 in Eranagere, (6) Urgent repairs in the burning ghat in Fort Mohalla(7 Constructing an outpatient waiting verandah at the Municipal Indegeneous Hospital KR. Mohalla, (8) Paving with Dod ballapur slabs the flooring in Devaraja Market between Vegetable stalls.

Each tender must be accompanied with a chellan for having remitted to Municipal Trassury the sum of Rs. 103/-, Rs- 100/- Rs. 140/, Rs. 175/., Rs. 27/-, Rs. 150/- Rs. 50/- and Rs. 115/- respectively as earnest money for the above works. For full particulars please see the notification in the office notice board.

(Sd) V.K. Mukundan.
Municipal Engineer.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್ಸಿ. ಮೈಸೂರು

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ನವಂಬರ್ ೧೭ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಪಾಲಘಾಟು ಸುಬ್ರಹ್ಮಣ್ಯ ಅಯ್ಯರ್ (ಸಂಗೀತ ೭-೩೫ ಚಿತ್ರಲೋಕ (ರಿ) ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಕ್ಲಾರಿಯೊನೆಲ್ ೧-೪೫ ಹಿಂದೀಶಿಕ್ಷಣ ೨-೦ ನಿಮ್ಮ ಮೆಚ್ಚಿನ ಕಲಾವಿದರು (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಟಿ ಆರ್. ಗೋಪಾಲ್ (ಸಂಗೀತ) ೬.೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭.೫ ತುಳಸೀರಾಮಾಯಣ (ಹಿಂದಿ) ೭-೧೫ ಟಿ. ಆರ್ ಗೋಪಾಲ್ (ಸಂಗೀತ) ೭-೦೦ ವಿಶ್ವವಾರ್ತೆ ೭-೪೫ ಕನ್ನಡದಲ್ಲಿ ವಾರ್ತೆ ೮-೦ ತಿರುವೆಂಗಡಂ ಸುಬ್ರಹ್ಮಣ್ಯಂಪಿಳ್ಳೆ (ರಿ) ೮-೧೫ ಪಾಲಘಾಟು ಸುಬ್ರಹ್ಮಣ್ಯ ಅಯ್ಯರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಅರಮನೆ ಬ್ಯಾಂಡು ೧೦-೦ ಮುಕ್ತಾಯ.

ರಣಜಿತ್
15-11-50 ರಿಂದ ೨ನೇವಾರ
ದಿನವಹಿ 3 ಪ್ರದರ್ಶನಗಳು
† ಅಶೋಕ್‌ಕುಮಾರ್ † ಮಧುಬಾಲ
ಪಾತ್ರವಹಿಸಿರುವ
ನಿಶಾನಾ
(ಹಿಂದಿ)
ಬೆಳಗಿನ ಪ್ರದರ್ಶನ 17-11-50 ರಿಂದ
3 ದಿನಗಳು ಮಾತ್ರ
ಚಂದಾ ಕಿ ಚಾಂದಿನಿ

ಒಲಂಪಿಯಾ
16-11-50 ರಿಂದ
ಬೇಗಂ ಪ್ಯಾರ, ಅಜೀಜ್,
ಯಾಕೂಬ್ ಮತ್ತು ಗೋಪ್
ಪಾತ್ರವಹಿಸಿರುವ
ಮೆಹರ್ಬಾನಿ
(ಹಿಂದಿ)

ಸಹಕಾರ ನೀತಿಯಲ್ಲಿ ಸರ್ಕಾರದ ಮನೋಭಾವ

ಮೈಸೂರು ನ. ೧೬

ಮೈಸೂರು ಜಿಲ್ಲಾ ಕೋ-ಆಪರೇಟಿವ್ ಇನ್ಸ್ಟಿಟ್ಯೂಟಿನ ಆಶ್ರಯದಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಸಹಕಾರ ವಿಷಯದಲ್ಲಿ ಶಿಕ್ಷಣವನ್ನು ೩ ತಿಂಗಳುಕಾಲ ಕೊಟ್ಟು ಇಂದು ಆ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ನಡೆಯಿತು. ಬೆಂಗಳೂರು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಶ್ರೀ. ಎಸ್. ಶ್ರೀನಿವಾಸ್‌ರವರು ಬೀಳ್ಕೊಡುವ ಭಾಷಣವನ್ನು ಮಾಡಿದರು.

ವಿದ್ಯಾರ್ಥಿಗಳು ಈ ಮೂರು ತಿಂಗಳು ಕಾಲ ಶಿಕ್ಷಣದಿಂದ ಪಡೆದಿರುವ ಅನುಭವವನ್ನು ದೇಶೋದ್ಧಾರಕ್ಕಾಗಿ ಉಪಯೋಗಿಸಬೇಕೆಂದೂ ಈ ಜನಸೇವೆಯಲ್ಲಿ ಪ್ರತಿಫಲವು ಕಡಮೆಯಾಗಿದ್ದರೂ ಜನಸೇವಾ ದೃಷ್ಟಿಯಿಂದ ಸೇವಾತತ್ಪರರಾಗಬೇಕೆಂದು ತಿಳಿಸಿದರು.

ಇತ್ತೀಚೆಗೆ ಮೈಸೂರು ಸರ್ಕಾರದವರು ಮಾಹೆಯಾನಾ ೬೦೦ ರೂ. ಗಳ ಸಂಬಳದ ಮೇಲೆ ಅಧಿಕಾರಿಯನ್ನು ನೇಮಿಸಿ, ಸ್ಥಾಪಿಸಿರುವ ಟ್ರೇನಿಂಗ್ ಸಂಸ್ಥೆಯ ವಿಷಯವಾಗಿ ಪ್ರಸ್ತಾಪಿಸುತ್ತ ನಾವುಗಳು ಖಾಸಗಿಯಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಕೆಲವಾರು ವರ್ಷಗಳಿಂದ ಅನೇಕರನ್ನು ತರಬಿಯತ್ತು ಮಾಡುತ್ತಲಿರುವ ಸಮಯದಲ್ಲಿ ಸರ್ಕಾರದವರು ಪ್ರತ್ಯೇಕವಾಗಿ ಒಂದು ಶಾಲೆಯನ್ನು ಸ್ಥಾಪಿಸಿರುವುದು ಸಾಧುವಲ್ಲವೆಂದೂ ಈಗ ನಾವು ನಡೆಸುತ್ತಲಿರುವ ಶಾಲೆಗೇ ಮತ್ತೂ ಸಹಾಯ ನೀಡಿ ಇದನ್ನೇ ಉತ್ತಮಗೊಳಿಸಬೇಕಾಗಿತ್ತೆಂದೂ ಹೀಗೆ ಹೊಸದಾಗಿ ಸ್ಥಾಪಿಸಿರುವ ಉದ್ದೇಶವೇನೋ ತಿಳಿಯದಾಗಿದೆ ಎಂದು ಹೇಳಿದರು. ಬೆಂಗಳೂರಿನಲ್ಲಿರುವ ಅಪೆಕ್ಸ್ ಬ್ಯಾಂಕಿನ ವಿಚಾರ ಮಾತನಾಡುತ್ತ ಸರ್ಕಾರದವರು ಅಪೆಕ್ಸ್ ಬ್ಯಾಂಕ್ ಆಡಳಿತದಲ್ಲಿ ಸರ್ಕಾರದ ಕೈವಾಡ ಹೆಚ್ಚಾಗಿರುವಂತೆ ಮಾಡಲು ಕೆಲವು ಸುಧಾರಣೆಗಳನ್ನು ಮಾಡಬೇಕೆಂದು ಹೊರಟಿರುವರು. ಅಧ್ಯಕ್ಷ, ಕಾರ್ಯದರ್ಶಿ, ಬಹುಮತ ಸದಸ್ಯರೆಲ್ಲರೂ ಸರ್ಕಾರದ ಪರವಾಗಿರುವವರನ್ನೇ ನಾಮಕರಣ ಮಾಡಬೇಕೆಂದಿರುವರು. ಇದು ಪ್ರಜಾಸತ್ತಾತ್ಮಕ ನೀತಿಗೆ ವಿರುದ್ಧವಾಗಿರುವುದರಿಂದ ಈ ರೀತಿಯಾದ ಸುಧಾರಣೆಗಳಿಗೆ ನಾವು ಪ್ರತಿಭಟಿಸಬೇಕೆಂದು ಹೇಳಿದರು.

ಪ್ರಾರಂಭದಲ್ಲಿ ಉಪಹಾರವಾದ ನಂತರ ಶ್ರೀ. ಎಂ. ಎಸ್. ರಾಮಸ್ವಾಮಿಗಳು ಸಂಸ್ಥೆಯ ವರದಿಯನ್ನು ಓದಿದರು. ಸಂಸ್ಥೆಯ ಅಧ್ಯಕ್ಷರಾದ ಶ್ರೀ. ಟಿ ಎಸ್. ರಾಜಗೋಪಾಲಯ್ಯಂಗಾರ್‌ರವರು ಸಂಸ್ಥೆಯ ಕಾರ್ಯಕಲಾಪಗಳನ್ನು ವಿವರಿಸಿದರು.

ಕಾರ್ಯದರ್ಶಿಗಳಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿಯವರಿಂದ ವಂದನಾ ಸಮರ್ಪಣೆಯಾದನಂತರ ಸಮಾರಂಭವು ಮುಕ್ತಾಯವಾಯಿತು.

○ ಈ ವರ್ಷದಲ್ಲೆಲ್ಲಾ ಭಾರತದಲ್ಲಿ ೫೫ ಭಾರಿ ವಿಮಾನ ಅಪಘಾತಗಳು ೨೩ ಸಾಮಾನ್ಯ ಅಪಘಾತಗಳು ಉಂಟಾಗಿವೆಯೆಂದು ಪಾರ್ಲಿಮೆಂಟಿನಲ್ಲಿ ಉಪಮಂತ್ರಿ ಶ್ರೀ ಖುರ್ಷಿದ್‌ಲಾಲ್‌ರವರು ಹೇಳಿರುವರು.

ಅಧಿಕಾರಲಾಲಸೆಗಾಗಿ ಆಂದೋಳನ

ಅಧಿಕಾರಲಾಲಸೆಯಿಂದ ಕೆಲವು ದೇಶದ್ರೋಹಿಗಳು ನೇಪಾಳದಲ್ಲಿ ಜನರನ್ನು ಉದ್ರೇಕಿಸಿ, ರಾಜ್ಯದಲ್ಲಿ ಆಂದೋಳನವನ್ನುಂಟುಮಾಡುತ್ತಿರುವರು. ಸರ್ಕಾರಿ ಟ್ರೆಷರಿ, ಬ್ಯಾಂಕು, ಜಮೀನ್ದಾರರ ಆಸ್ತಿಪಾಸ್ತಿ ಮುಂತಾದುವನ್ನು ಲೂಟಿಮಾಡುತ್ತಲಿರುವರು. ಸರ್ಕಾರಿ ಸೈನ್ಯಗಳು ಸಹಾಯದಿಂದ ಈ ದೇಶದ್ರೋಹಿಗಳನ್ನು ನಿರ್ಮೂಲಮಾಡಲು ಸರ್ವಪ್ರಯತ್ನಗಳನ್ನು ಮಾಡಲು ನಾವು ಸಿದ್ಧರಿದ್ದೇವೆ. ತಾವು ಎಸಗಿದ ಕಾರ್ಯವು ತಪ್ಪೆಂದು ಈ ದ್ರೋಹಿಗಳಿಗೆ ಸ್ವಲ್ಪಕಾಲದಲ್ಲಿಯೇ ಅರಿತುಕೊಳ್ಳುವರು ಎಂದು ನೇಪಾಳ ವಿದೇಶಾಂಗಮಂತ್ರಿ ಶ್ರೀ ವಿಜಯ ಷಂಶೇರ್‌ಜಂಗ್‌ಬಹದೂರ್ ರಾಣಾರವರು ಹೇಳಿರುವರು. ಇವರು ಮುಖ್ಯಮಂತ್ರಿ ಮೋಹನಷಂಶೇರ್ ಜಂಗ್ ಬಹದ್ದೂರ್‌ರವರ ಎರಡನೇ ಮಗ.

ಬಹಿಷ್ಕಾರ ರದ್ದು

ಮದರಾಸು ಪ್ರಾಂತ್ಯದ ಕಮ್ಯೂನಿಸ್ಟ್‌ಪಕ್ಷ, ಅದರ ಶಾಖೆಗಳು ಮತ್ತು ಬೇರೆ ಹಲವು ಸಂಸ್ಥೆಗಳನ್ನು ಭಾರತ ಕ್ರಿಮಿನಲ್‌ಲಾ ತಿದ್ದುಪಡಿ ಅನುಸಾರವಾಗಿ ಅಕ್ರಮ ಸಂಸ್ಥೆಗಳೆಂದು ಅವುಗಳ ಮೇಲೆ ಹಾಕಿದ್ದ ಬಹಿಷ್ಕಾರ ರದ್ದುಗೊಳಿಸಲಾಗಿದೆ.

ಬೀರ್‌ಗಂಜಿನ ಬಳಿ ಕದನ

ಬೀರಜ್‌ಗಂಜಿಗೆ ೬ ಮೈಲಿ ಉತ್ತರದಲ್ಲಿ ಪರ್ಸಾನಿಪುರದ ಬಳಿ ನೇಪಾಳ ಸರ್ಕಾರಿ ಸೈನ್ಯಗಳಿಗೂ ಕಾಂಗ್ರೆಸ್ ಸೈನ್ಯಗಳಿಗೂ ಭಾರಿಕದನ ಪ್ರಾರಂಭವಾಗಿದೆಯೆಂದು ವರದಿಯಾಗಿದೆ.

● ಎಚ್. ಎಚ್. ಎಂ. ಒ. ಐ ಯಿಂದ ಮೈಸೂರು ಬ್ಯಾಂಕಿಗೆ ೧೯೫ ರೂ. ಗಳನ್ನು ಕಟ್ಟುವಾಗ ಅದನ್ನು ಅಪಹರಿಸಿಕೊಂಡು ಹೋಗಲೆಸಗಿದ ಮದನಶಂಕರ್ ಆಲಿಸ್ ಮೋಹನಶಂಕರ್ ಅಲಿಸ್ ಬಾಬು ಎಂಬುವವನಿಗೆ ೨ ವರ್ಷ ಕಠಿಣ ಸಜಾವನ್ನು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಶಂಕರರಾಯರು ವಿಧಿಸಿದರು.

● ಮುಂದಿನ ವರ್ಷ ಫೆಬ್ರವರಿ ೧೬ ರಿಂದ ೧೮ ರವರೆಗೆ ಲೂಧಿಯಾನಾದಲ್ಲಿ ನಡೆಯಲಿರುವ ಬ್ಯಾಸ್ಕೆಟ್ ಬಾಲ್ ಪಂದ್ಯದಲ್ಲಿ ಮೈಸೂರು ಭಾಗವಹಿಸುವುದೆಂದು ತಿಳಿಯಬರುತ್ತದೆ.

● ಮೈಸೂರು ಮಹಾರಾಜಾ ಕಾಲೇಜಿನ ಪೊಲಿಟಿಕಲ್ ಸೈನ್ಸ್ ಅಸೋಸಿಯೇಷನ್ನಿನ ಪ್ರಾರಂಭೋತ್ಸವ ಭಾಷಣವನ್ನು ಡೆಕ್ಕನ್‌ಹೆರಾಲ್ಡ್ ಸಂಪಾದಕರಾದ ಮಿ|| ಪೋತನ್ ಜೋಸೆಫ್‌ರವರು ನಾಳೆ ಸಂಜೆ ೫ ಗಂಟೆಗೆ ಕಾಲೇಜಿನ ಜೂನಿಯರ್ ಬಿ.ಎ. ಹಾಲಿನಲ್ಲಿ ನಡೆಸುವರು. ಪ್ರೊ|| ವಿ ಎಲ್. ಡಿಸೌಜಾರವರು ಅಧ್ಯಕ್ಷತೆ ವಹಿಸುವರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯-೪೬ ಮೀಟರು

ನವಂಬರ್ ೧೮ ಶನಿವಾರ

ಬೆಳಗ್ಗೆ ೬-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೬-೨೦ ಚಿತ್ರ ಜಗತ್ (ರ) ೬-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಪಿಟೀಲು ೧-೫೫ ಸರೋಜನಾರಾಯಣರಾವ್ (ಕನ್ನಡ ಗೀತೆಗಳು) ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಎಂ. ಕೆ. ಶರ್ಮ (ಸಂಗೀತ) ೬.೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಅನಂತಲಕ್ಷ್ಮಿಕಡಗೋಪರ್ (ರ) ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ತಾಳವಾದ್ಯ ೭-೧೫ ವನಿತಾ ವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಹೆಚ್.ಎಸ್. ಶಿವಲಿಂಗಸ್ವಾಮಿ (ಹರಿಕಥಾ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಗಾನವಾರಿಧಿ (ರ) ೧೦-೦ ಮುಕ್ತಾಯ.

ಉಪಾಧ್ಯಕ್ಷರು

ಹಾಸನ ಪೌರಸಭೆಗೆ ಶ್ರೀ ಬಿ. ಚಕ್ರಪಾಣಿ ಅಯ್ಯಂಗಾರ್ ಉಪಾಧ್ಯಕ್ಷರಾಗಿ ಚುನಾಯಿತರಾಗಿರುವುದನ್ನು ಸರ್ಕಾರದವರು ಅಂಗೀಕರಿಸಿರುವರು.

ಮದರಾಸು ಗೌರ್ನರು

ಮದರಾಸು ಗೌರ್ನರ್ ಭಾವನಗರದ ಮಹಾರಾಜರು ಇಂದು ಬೆಳಗ್ಗೆ ರಾಜಧಾನಿಗೆ ಆಗಮಿಸಿ, ಲಲಿತಮಹಲಿನಲ್ಲಿ ವಿಶ್ರಾಂತಿಪಡೆದು ಮಧ್ಯಾಹ್ನ ೨ ಗಂಟೆಯಲ್ಲಿ ಊಟಿಗೆ ತೆರಳಿದರು.

ರಣಜಿತ್
15-11-50 ರಿಂದ 2ನೇವಾರ
ದಿನವಹಿ 3 ಪ್ರದರ್ಶನಗಳು
† ಅಶೋಕ್‌ಕುಮಾರ್ † ಮಧುಬಾಲ
ಪಾತ್ರವಹಿಸಿರುವ
ನಿಶಾನಾ
(ಹಿಂದಿ)
ಬೆಳಗಿನ ಪ್ರದರ್ಶನ 17-11-50 ರಿಂದ
3 ದಿನಗಳು ಮಾತ್ರ
ಚಂದಾ ಕಿ ಚಾಂದಿನಿ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬—೧೧—೧೯೫೧ನೇ ಶುಕ್ರವಾರ [ಸಂಚಿಕೆ ೬೬

ಕಾಂಗ್ರೆಸ್ಸನ್ನು ಶುದ್ಧೀಕರಿಸಿ ಅಥವಾ ವಿಸರ್ಜಿಸಿ

ಕೇಂದ್ರ ಸರ್ಕಾರದ ಸಚಿವ ಮಿ|| ರಫಿ ಅಹಮದ್ ಕಿದ್ವಾಯಿಯವರ ಹೇಳಿಕೆ

ಭಾರತ ಕಾಂಗ್ರೆಸ್ಸಿನ ಇಂದಿನ ವ್ಯವಹಾರಗಳನ್ನು ತಿದ್ದಲು ಆಗದಿದ್ದಲ್ಲಿ ಕೂಡಲೇ ಕಾಂಗ್ರೆಸ್ ಸಂಸ್ಥೆಯನ್ನು ವಿಲೀನ ಮಾಡಿ, ಪ್ರತ್ಯೇಕವಾಗಿ ರಾಜಕೀಯ ಸಂಸ್ಥೆಗಳನ್ನು ನಮ್ಮ ಇಷ್ಟಾನುಸಾರ ಸ್ಥಾಪಿಸಿಕೊಳ್ಳುವುದು ಉತ್ತಮ. ಕಾಂಗ್ರೆಸ್ ಹಿಂದೆ ಗಳಿಸಿರುವ ಕೀರ್ತಿಯನ್ನು ಉಳಿಸಿಕೊಂಡು ಬರಬೇಕೆಂದು ಆಶಿಸುವ ನಿಜವಾದ ಕಾಂಗ್ರೆಸ್ಸಿಗರಿಗೆ ಹರಿಜನ ಪತ್ರಿಕೆಯಲ್ಲಿ ಮಿ|| ಮಷೂರ್‌ವಾಲಾರವರು ಬರೆದಿರುವ ಲೇಖನವು ಕಣ್ತೆರೆಯುವಂತೆ ಮಾಡುತ್ತದೆ. ಎಂದು ಕೇಂದ್ರ ಮಂತ್ರಿ ಮಿ|| ರಫಿ ಅಹಮ್ಮದ್ ಕಿದ್ವಾಯಿಯವರು ಇಂದೋರಿನಲ್ಲಿ ಮಾತನಾಡುತ್ತಾ ಹೇಳಿದರು

ಡಾ|| ಪ್ರಪುಲ್ಲ ಚಂದ್ರಘೋಷ್‌ರವರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಟ್ಟಿರುವ ವಿಷಯವಾಗಿ ಪ್ರಸ್ತಾಪಿಸುತ್ತ ನಿಜವಾದ ಕಾಂಗ್ರೆಸ್ಸಿನವರು ಕಾಂಗ್ರೆಸ್ಸನ್ನು ಶುದ್ಧಿಕರಿಸಲು ಸರ್ವಪ್ರಯತ್ನಗಳನ್ನು ಮಾಡಲೇಬೇಕು ಎಂದು ಹೇಳಿದರು. ತಾವು ಕಾಂಗ್ರೆಸ್ ಸಂಸ್ಥೆಯಲ್ಲಿಯೇ ಇದ್ದುಕೊಂಡು ಕಾಂಗ್ರೆಸ್ಸಿನ ಸ್ಥಿತಿಯನ್ನು ಉತ್ತಮಗೊಳಿಸಲು ಶ್ರಮಿಸುವುದಾಗಿ ತಿಳಿಸಿದರು.

ಶ್ರೀ ರೆಡ್ಡಿಯವರು ದೆಹಲಿಗೆ

ಬೆಂಗಳೂರು ನ. ೧೬

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ತೆರಳಿದರು ಅವರೊಡನೆ ವಿಶೇಷಾಧಿಕಾರಿಗಳಾದ ಶ್ರೀ ಇ. ವಿ. ಗಣಪತಿ ಅಯ್ಯಂಗಾರ್‌ರವರೂ ಹೊರಟರು.

ದೆಹಲಿಯಲ್ಲಿ ಮುಖ್ಯಮಂತ್ರಿಗಳು ಭಾರತಸೈನ್ಯದೊಡನೆ ಮಿಳಿತವಾಗಿರುವ ಮೈಸೂರು ಸೈನ್ಯದ ವಿಷಯವಾಗಿ ಮಾತುಕಥೆ ನಡೆಸುವರೆಂದು ತಿಳಿದುಬಂದಿದೆ. ಹಿಂದೆ ಸೈನ್ಯದಲ್ಲಿದ್ದವರನ್ನು ಕೇಂದ್ರ ಸರ್ಕಾರವು ಕೆಲಸದಿಂದ ತೆಗೆದುಹಾಕಲಿರುವ ಪ್ರಶ್ನೆಯನ್ನು ಅವರು ಚರ್ಚಿಸುವರೆಂದು ಹೇಳಲಾಗಿದೆ

ಸಂಸ್ಥಾನದ ವಿದ್ಯುಚ್ಛಕ್ತಿ ಮತ್ತು ಕೈಗಾರಿಕಾ ಅಭಿವೃದ್ಧಿಕಾರ್ಯಗಳಿಗಾಗಿ ಒಂದುಕೋಟಿ ರೂಪಾಯಿಗಳ ಸಾಲವನ್ನು ಕೇಂದ್ರದಿಂದ ಪಡೆಯುವ ಮತ್ತು ಸಂಸ್ಥಾನಕ್ಕೆ ಬೇಕಾಗಿರುವ ಹೆಚ್ಚಿಗೆ ಗೋಧಿ ಮತ್ತು ಸಕ್ಕರೆ ವಿಷಯಗಳಲ್ಲೂ ಅಲ್ಲಿ ಚರ್ಚಿಸುವರೆಂದು ತಿಳಿಯಬಂದಿದೆ.

ಅಂಚೆ ಇಲಾಖಾ ದಕ್ಷತೆಯೆ ?

ಇದೇ ಮಾಹೆ ೪, ೫ನೇ ತಾ|| ಗಳಲ್ಲಿ ಮೈಸೂರಿನಲ್ಲಿ ನಡೆದ ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಮೈಸೂರಿನ ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ ದಾಸಪ್ಪನವರು ಒಂದು ಸಂದೇಶವನ್ನು ೨ನೇ ತಾ|| ಬೆಂಗಳೂರಿನಲ್ಲಿ ಅಂಚೆಗೆ ಹಾಕಿದ್ದು ಮೈಸೂರಿಗೆ ೩ನೇ ತಾ|| ಬಂದು, ಅದರಲ್ಲಿ ಸರಿಯಾದ ವಿಳಾಸವಿದ್ದು, ಅಂಚೆ ಕಛೇರಿಗೆ ಸಮ್ಮೇಳನದ ಕಛೇರಿಯೆಲ್ಲಿದೆ ಎಂದೂ ತಿಳಿದಿದ್ದಾಗ್ಯೂ ಕಾಗದವು ಬಟವಾಡೆಯಾಗದೆ ಮಂತ್ರಿಗಳಿಗೆ ಕಾಗದ ಹಿಂತಿರುಗಿ ಹೋಗಿದ್ದು, ಅದು ಪುನಃ ನಿನ್ನೆ ಸ್ವಾಗತಸಮಿತಿಯ ಅಧ್ಯಕ್ಷರಿಗೆ ಬಂದಿದೆ.

ದೇಶದ ನಾನಾಭಾಗಗಳಿಂದ ಬಂದ ಅನೇಕ ಕಾಗದಗಳನ್ನು ಬಟವಾಡೆಮಾಡಿದ ಅಂಚೆ ಇಲಾಖೆಯವರು ಬೆಂಗಳೂರಿನಿಂದ ಬಂದ ಈ ಕಾಗದವನ್ನು ಬಟವಾಡೆ ಮಾಡದೆ ಹಿಂದಕ್ಕೆ ಕಳುಹಿಸಿದುದು ಅಂಚೆ ಇಲಾಖೆಯ ದಕ್ಷತೆಯನ್ನು ತಿಳಿಸುವುದಲ್ಲವೇ ?—ಸಂ

ಕಾಂಗ್ರೆಸ್ಸಿಗೆ ಶರಣಾಗತರಾಗಿ

ನೇಪಾಳದಲ್ಲಿ ಸರ್ಕಾರ ಸೈನ್ಯವು ರಾಣಾ ಸರ್ಕಾರಕ್ಕೆ ಬೆಂಬಲನೀಯುತ್ತ ಪ್ರಜಾ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲಿರುವ ಕಾಂಗ್ರೆಸ್ ಸೈನ್ಯವನ್ನು ಎದುರಿಸುವುದು ದೇಶದ್ರೋಹವೆಂದೂ ಕೂಡಲೇ ಸರ್ಕಾರ ಸೈನ್ಯವೆಲ್ಲವೂ ಕಾಂಗ್ರೆಸ್ ಸೈನ್ಯವನ್ನೇ ಸೇರಬೇಕೆಂದೂ ಇಲ್ಲದಿದ್ದಲ್ಲಿ ಬಾಂಬುಗಳನ್ನು ಹಾಕಿ ಸರ್ಕಾರಿ ಸೈನ್ಯವನ್ನೆಲ್ಲಾ ನಾಶಪಡಿಸುವುದಾಗಿ ಎಚ್ಚರಿಸಿ ಹಸ್ತಪತ್ರಿಕೆಗಳನ್ನು ವಿಮಾನಗಳ ಮೂಲಕ ಕಾಂಗ್ರೆಸ್ಸಿಗರು ಹಂಚುತ್ತಲಿರುವರು.

ಮದರಾಸಿನಲ್ಲಿ ಹೊಸಪಕ್ಷದ ಶಾಖೆ

ಅಖಿಲಭಾರತ ಕಾಂಗ್ರೆಸ್ಸಿನ ಆಶ್ರಯದಲ್ಲಿ ಆಚಾರ್ಯ ಕೃಪಲಾನಿಯವರಿಂದ ಸ್ಥಾಪಿತವಾಗಿರುವ ಡೆಮೊಕ್ರಾಟಿಕ್ ಪಾರ್ಟಿಯ ಮದರಾಸು ಶಾಖೆಯನ್ನು ಶ್ರೀ ಟಿ. ಪ್ರಕಾಶಂರವರು ಕಟ್ಟಿರುವರೆಂದು ತಿಳಿಯಬರುತ್ತದೆ.

ಮಾದರಿಶಾಲಾ ಹಿಂದೀ ತರಗತಿಗಳು

ಈಸಾರೆ ನಡೆದ ಹಿಂದೀ ಪರೀಕ್ಷೆಗಳಲ್ಲಿ ಮಧ್ಯಮದಲ್ಲಿ ಎಲ್ಲರೂ ಮತ್ತು ಪ್ರಾಥಮದಲ್ಲಿ ಶೇಕಡ ೮೫ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮುಂದೆ ಬರಲಿರುವ ಫೆಬ್ರುವರಿ ಪರೀಕ್ಷೆಗೆ ಪ್ರಾಥಮಾ, ಮಧ್ಯಮಾ ಮತ್ತು ರಾಷ್ಟ್ರಭಾಷಾ ತರಗತಿಗಳು ಇನ್ನೂ ಹುರುಪಿನಿಂದ ಪ್ರತಿದಿನ ಸಂಜೆ ನಡೆಯುತ್ತವೆ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ಸೇವಾಸಂಘದ ಕಾರ್ಯದರ್ಶಿಗಳು ಕೋರುತ್ತಾರೆ.

ಸಕ್ಕರೆ ಪರಿಸ್ಥಿತಿ ತೃಪ್ತಿಕರ

ಈಗಿರುವ ಸಕ್ಕರೆ ಸಂಗ್ರಹ ಮತ್ತು ಹೊರಗಡೆಯಿಂದ ಬರುವ ನಿರೀಕ್ಷಣೆಯಿರುವ ಸಕ್ಕರೆಯಿಂದ ದೇಶದಲ್ಲಿ ಸಕ್ಕರೆ ಪರಿಸ್ಥಿತಿ ತೃಪ್ತಿಕರವಾಗಿದ್ದು ರೇಷನ್ ಪ್ರಮಾಣವನ್ನು ಈಗಿನ ದರದಲ್ಲಿಯೇ ಕೊಡಲು ಸಾಧ್ಯವಾಗ್ಗುವುದೆಂದು ಆಹಾರ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಜಪಾನಿನಲ್ಲಿ ಬೈಸಿಕಲ್ ತಯಾರಿಕೆ

ಜಪಾನಿನಲ್ಲಿ ಬೈಸಿಕಲ್ ಸಲಕರಣಗಳನ್ನು ತಯಾರಿಸಲು ೧೦೦೦ ಕಾರ್ಖಾನೆಗಳಿವೆ. ಪ್ರತಿ ತಿಂಗಳೂ ೩ ೫೦,೦೦೦ ಬೈಸಿಕಲ್ಲುಗಳನ್ನು ಜಪಾನು ತಯಾರಿಸುತ್ತಲಿದೆಯೆಂದು ತಿಳಿಯಬರುತ್ತದೆ.

ಕೊರಿಯಾದಲ್ಲಿ ಚೀಣಿಯರು

ಕೊರಿಯಾದಲ್ಲಿ ಒಂದು ಲಕ್ಷ ಚೀಣಾ ಸೈನಿಕರಿದ್ದು ಬಲವಾದ ರಕ್ಷಣಾ ಸ್ಥಾನಗಳನ್ನು ನಿರ್ಮಿಸಿಕೊಳ್ಳುತ್ತಲಿದ್ದಾರೆಂಬ ವರದಿ ಬಂದಿದೆ.

ಕೃಷಕ್ ಪ್ರಜಾ ಪಾರ್ಟಿ

ಹೊಸದಾಗಿ ರಚಿತವಾಗಿರುವ ಕೃಷಕ್ ಪ್ರಜಾ ಮಜದೂರ್ ಪಾರ್ಟಿಯ ಮುಖ್ಯೋದ್ದೇಶಗಳು: ಜಮೀನ್ದಾರಿ ವ್ಯವಸ್ಥೆ ರದ್ದುಗೊಳಿಸುವುದು, ಮುಖ್ಯ ಕೈಗಾರಿಕೆಗಳ ರಾಷ್ಟ್ರೀಕರಣ, ಬ್ಯಾಂಕು ಮತ್ತು ವಿಮಾನ ಕಂಪೆನಿಗಳ ರಾಷ್ಟ್ರೀಕರಣ, ದೇಶದ ಆಮದು ವ್ಯಾಪಾರವನ್ನು ದೇಶವೇ ವಹಿಸಿಕೊಳ್ಳುವುದು ಈ ಕಾರ್ಯಕ್ರಮವನ್ನು ಈ ಸಂಸ್ಥೆಯು ಹೊಂದಿರುವುದು.

ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳ ವರ್ಗ

ತುಮಕೂರಿನ ಸೇಲ್ಸ್‌ಟ್ಯಾಕ್ಸ್ ಆಫೀಸರಾದ ಶ್ರೀ ವಿ. ಎಸ್. ಜಯಾಚಾರ್ಯರನ್ನು ಮೈಸೂರು ಸಿಟಿಗೆ ಮೈಸೂರು ಸಿಟಿಯಲ್ಲಿದ್ದ ಜ|| ಸಯದ್ ಮುರಷೀದ್ ಪೀರ್‌ರನ್ನು ಮೈಸೂರು ಸರ್ಕಲ್ಲಿಗೆ, ಮೈಸೂರು ಸರ್ಕಲ್ಲಿನಲ್ಲಿದ್ದ ಶ್ರೀ ಜಿ. ಎನ್. ಪುಟ್ಟಣ್ಣನವರನ್ನು ಬೆಂಗಳೂರು ೨ ನೇ ಸರ್ಕಲ್ಲಿಗೆ ಬೆಂಗಳೂರು ೨ ನೇ ಸರ್ಕಲ್ಲಿನಲ್ಲಿದ್ದ ಶ್ರೀ. ವೈ ಸಿ. ಹೊಂಬಾಳಯ್ಯನವರನ್ನು ತುಮಕೂರಿಗೆ ವರ್ಗಾಯಿಸಲಾಗಿದೆ.

ಮಂತ್ರಿಗಳ ಪ್ರವಾಸ

ರೆವೆನ್ಯೂ ಮತ್ತು ಎಕ್ಸೈಜ್ ಮಂತ್ರಿಗಳಾದ ಶ್ರೀ. ಹೆಚ್. ಸಿದ್ದಯ್ಯನವರು ೧೬ ರಿಂದ ೧೮ ತಾರೀಖಿನವರೆಗೆ ಹಾಸನ ಜಿಲ್ಲಾ ಪ್ರವಾಸವನ್ನು, ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ೧೮-೧೯ ತಾರೀಖುಗಳಲ್ಲಿ ತುಮಕೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿರುವರು.

ವಿದೇಶೀ ಸೈನ್ಯಗಳಲ್ಲಿ ನೇಪಾಳಿಗಳು

ವಿದೇಶೀ ಸರಕಾರಗಳು ನೇಪಾಳ ಸೈನಿಕರನ್ನು ಕೂಲಿಸಿಪಾಯಿಗಳನ್ನಾಗಿ ಉಪಯೋಗಿಸಿಕೊಳ್ಳುವುದನ್ನು ನೇಪಾಳ ಕಾಂಗ್ರೆಸ್ ವಿರೋಧಿಸುತ್ತದೆ ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಮಾತೃಕ ಪ್ರಸಾದ ಕೊಯಿರಾಲಾರವರು ಹೇಳಿರುವರು. ಭಾರತ ರಕ್ಷಣೆಯು ನಮ್ಮ ರಕ್ಷಣೆಯಾದುದರಿಂದ ಭಾರತ ರಕ್ಷಣಾ ಉದ್ದೇಶ್ಯಗಳಿಗೆ ನೇಪಾಳಿ ಸೈನಿಕರನ್ನು ಉಪಯೋಗಿಸಿಕೊಳ್ಳಲು ನಮ್ಮ ಆಕ್ಷೇಪಣೆಯಿಲ್ಲವೆಂದೂ ತಿಳಿಸಿರುವರು.

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮—೧೧—೧೯೫೦ನೇ ಶನಿವಾರ [ಸಂಚಿಕೆ ೬೭

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE—2

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸುಧಾರಣೆಗಳೇ?

ಪ್ರೊ ಛಾನ್ಸಲರ್ ಡಾ|| ಸಿ. ಆರ್. ರೆಡ್ಡಿಯವರಿಗೆ ಈ ವಿಷಯವೇ ತಿಳಿಯದು

ಮೈಸೂರು ನವೆಂಬರ್ ೧೮

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಾಠ ಪ್ರವಚನ ಕ್ರಮದಲ್ಲಿ ಬದಲಾವಣೆಗಳನ್ನು ಮಾಡಲು ಒಂದು ಪ್ರವೀಣರ ಸಮಿತಿಯು ರಚಿತವಾಗಿದೆಯೆಂದು ತಿಳಿಯಬರುತ್ತದೆ. ಈ ಸಮಿತಿಯಲ್ಲಿ ಸುಮಾರು ೨೦ ಜನ ಸದಸ್ಯರಿದ್ದು ವಿಶ್ವವಿದ್ಯಾನಿಲಯದ ಸೈನ್ಸ್ ಮತ್ತು ಆರ್ಟ್ಸ್ ಫ್ಯಾಕಲ್ಟಿಯವರೇ ಹೆಚ್ಚಿಗೆ ಸಂಖ್ಯೆಯಲ್ಲಿರುವುದಾಗಿ ಗೊತ್ತಾಗಿದೆ.

ಈ ಸಮಿತಿಯು ಜರೂರಾಗಿ ತನ್ನ ಕಾರ್ಯಕ್ರಮವನ್ನು ಪೂರೈಸುವುದಲ್ಲದೆ ಅದನ್ನು ಮುಂದಿನ ಸಾಲಿಗೇ ಜಾರಿಗೆ ತರಲೇಬೇಕೆಂಬ ದೃಢ ನಿಶ್ಚಯದಿಂದ ಕೆಲಸದಲ್ಲಿ ತೊಡಗಿದೆಯೆಂದೂ ತಿಳಿಯಬರುತ್ತದೆ.

ಪ್ರಕೃತದಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಪ್ರತ್ಯೇಕವಾಗಿ ಐಚ್ಛಿಕ ಪಾಠಗಳ ಶಿಕ್ಷಣವಿರುವುದನ್ನು ತಪ್ಪಿಸಿ, ಮೂರು ವರ್ಷಕಾಲವೂ ಸಾಮಾನ್ಯ ಶಿಕ್ಷಣವನ್ನೇ (General Education) ಕೊಡುವುದಲ್ಲದೆ, ಇಂಟರ್ ಮೀಡಿಯೇಟ್ ಕೋರ್ಸನ್ನು ೩ ವರ್ಷಕಾಲ ಮಾಡಿ, ಅಲ್ಲಿಯ ಮೊದಲನೆಯ ಎರಡು ವರ್ಷ ಸಾಮಾನ್ಯ ಶಿಕ್ಷಣವನ್ನೇ ಕೊಟ್ಟು, ಅಲ್ಲಿ ತೇರ್ಗಡೆಯಾದನಂತರ ಮೂರನೇ ವರ್ಷದಲ್ಲಿ ಐಚ್ಛಿಕ ಪಾಠ ಪ್ರವಚನಕ್ಕೆ ಅವಕಾಶವಿರುವಂತಿರಬೇಕೆಂದೂ ಮತ್ತು ಆನರ್ಸ್ ಕೋರ್ಸನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದೂ ಈ ನೂತನ ಯೋಜನೆಯಲ್ಲಿ ಸಲಹೆಯಿರುವುದಾಗಿ ಗೊತ್ತಾಗಿದೆ.

ಭಾರತಾದ್ಯಂತ ವಿಶ್ವವಿದ್ಯಾನಿಲಯಗಳ ಸುಧಾರಣೆಗಳ ವಿಷಯದಲ್ಲಿ ಡಾ|| ರಾಧಾಕೃಷ್ಣನ್‌ರವರು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸುಧಾರಣೆಯ ವಿಷಯದಲ್ಲಿ ಡಾ|| ಸಿ. ಆರ್. ರೆಡ್ಡಿಯವರು ಇತ್ತಿರುವ ವರದಿಗಳನ್ನು ಈಗ ಸುಧಾರಣೆಗಳು ಮಾಡಬೇಕೆಂದು ನಿಯಮಿತವಾಗಿರುವ ಹೊಸ ಸಮಿತಿಯು ಗಣನೆಗೆ ತೆಗೆದುಕೊಳ್ಳದೆ ತನ್ನದೇ ಒಂದು ಬೇರೆ ಮಾರ್ಗವನ್ನು ಅನುಸರಿಸುತ್ತಲಿರುವಂತೆ ಕಾಣುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರೊ ಛಾನ್ಸಲರಾದ ಡಾ|| ಸಿ. ಆರ್. ರೆಡ್ಡಿಯವರನ್ನು ಈ ವಿಷಯದಲ್ಲಿ ಪ್ರಸ್ತಾಪಿಸಲಾಗಿ ಅವರು ಈ ವಿಷಯವು ತಮಗೆ ತಿಳಿಯದೆಂದು ಹೇಳಿ ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು.

ಭಾರತದ ಬೆಂಬಲ

ವಿಶ್ವ ಸಂಸ್ಥೆಯಲ್ಲಿ ಟಿಬೆಟ್ ಚೈನಾ ಮೇಲೆ ಮಾಡಿರುವ ದೂರಿಗೆ ಭಾರತವು ಬೆಂಬಲವು ನೀಡುವುದಾಗಿ ಕೇಂದ್ರ ಸಚಿವ ಶ್ರೀ. ಗೋಪಾಲಸ್ವಾಮಿಯ್ಯಂಗಾರ್ ರವರು ನಿನ್ನೆ ಹೇಳಿರುವರು. ಭಾರತ ಬರೆದ ಪತ್ರಕ್ಕೆ ಚೈನಾ ಅಗೌರವ ಸೂಚಕ ರೀತಿಯಲ್ಲಿ ಜವಾಬು ಕೊಟ್ಟಿರುವುದು ಶೋಚನೀಯವೆಂದೂ ಆದರೆ ಭಾರತವು ಚೀಣಾಕ್ಕೆ ಕೊಟ್ಟಿರುವ ಮನ್ನಣೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಯಾರೂ ಸೂಚಿಸಕೂಡದೆಂದೂ ಅವರು ತಿಳಿಸಿದರು ಚೀಣಾ ನೀತಿಯು ಸರಿಯಾಗಿಲ್ಲ ಅದು ಬದಲಾಯಿಸಿ ಟಿಬೆಟ್ಟಿನ ಮೇಲೆ ಆಕ್ರಮಣ ನಿಲ್ಲಿಸಬೇಕೆಂದೂ ಅವರು ಹೇಳಿದರು.

ಜನಗಣತಿಗೆ ರಜಾ

೩ ೩-೧೯೫೧ನೇ ದಿನ ಜನಗಣತಿಯನ್ನು ಆಖೈರಾಗಿ ಮಾಡಲು ೧-೩-೫೧ರಲ್ಲಿ ಸಂಸ್ಥಾನದಲ್ಲಿರುವ ಎಲ್ಲಾ ಕಛೇರಿ, ಕೋರ್ಟು ಶಾಲೆಗಳಿಗೆ ರಜಾ ಕೊಡಲಾಗಿದೆ.

ಜನಗಣತಿ ಕೆಲಸಕ್ಕಾಗಿ ಹೋಗಲಿರುವ ಸರ್ಕಾರಿ ನೌಕರರು ೯-೨-೫೧ರಿಂದ ೩-೩-೫೧ರವರೆಗೆ ತಮ್ಮ ತಮ್ಮ ಕಛೇರಿಗಳಿಗೆ ಮಧ್ಯಾಹ್ನ ೧ ಗಂಟೆಗೆ ಹಾಜರಾಗಲು ಇಲಾಖಾ ಅಧಿಕಾರಿಗಳು ಅಪ್ಪಣೆಕೊಡಬಹುದೆಂದು ಸರ್ಕಾರಿ ಆಜ್ಞೆ ತಿಳಿಸುತ್ತದೆ

ಭದ್ರಾವತಿ ಬಳಿ ವಸತಿ

ಪೂರ್ವ ಬಂಗಾಳದಿಂದ ಬಂದಿರುವ ಸ್ಥಳಾಂತರಾದವರಿಗೆ ಮೈಸೂರು ಸಂಸ್ಥಾನದಲ್ಲಿ ಭದ್ರಾವತಿ ಬಳಿ ಸ್ಥಳವನ್ನೊದಗಿಸಲಾಗುವುದೆಂದೂ ಅಲ್ಲಿ ಅವರೆಲ್ಲರಿಗೂ ಉದ್ಯೋಗವನ್ನು ಮೈಸೂರು ಸರ್ಕಾರವು ಕಲ್ಪಿಸುವುದೆಂದು ಬಂಗಾಳ ಮುಖ್ಯಮಂತ್ರಿ ಶ್ರೀ. ಬಿ. ಸಿ. ರಾಯ್ ರವರು ಹೇಳಿರುವರು.

ಕತ್ತೆಗಳೂ ಸರ್ಕಾರಕ್ಕೆ

೨೭-೮-೫೦ ರಲ್ಲಿ ತ್ಯಾಮಗೊಂಡ್ಲುವಿನಿಂದ ಗೌರಿಬಿದನೂರು ಕಡೆಗೆ ೧೮ ಕತ್ತೆಗಳ ಮೇಲೆ [illegible] ಸೇರು ರಾಗಿಯನ್ನು ರಹದಾರಿಯಿಲ್ಲದೆ ಸಾಗಿಸುತ್ತಲಿದ್ದುದನ್ನು ಪೋಲೀಸಿನವರು ಕಂಡು ಹಿಡಿದು ಬೈರಪ್ಪ ಮತ್ತು ಇತರರ ಮೇಲೆ ಮೊಕದ್ದಮೆ ಹೂಡಿದ್ದರು. ಅಪಾದಿತರಿಗೆ ತಲಾ ಮೂರು ತಿಂಗಳ ಕಠಿಣಸಜವನ್ನು ಮ್ಯಾಜಿಸ್ಟ್ರೇಟರಾದ ಶ್ರೀ ಎ. ಎಸ್. ರಾಮಚಂದ್ರರಾಯರು ವಿಧಿಸುದುದಲ್ಲದೆ ರಾಗಿಯನ್ನೂ, ಕತ್ತೆಗಳನ್ನೂ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕೆಂದೂ ಆಜ್ಞೆಯಿತ್ತರು.

★ ಸಿರ್ಹೋಜೈಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ ಲಿವರ್ ಹೌಸ್ ಮೈಸೂರು ★

ಸಮಾಚಾರ

ನವಂಬರ್ ೧೮-೧೧-೫೦ ಶನಿವಾರ

ರಾಜೀನಾಮೆಯೇಕೆ?

ಪ್ರಜಾಸಂಘಕ್ಕೆ ಸೇರಿದ ಕೆಲವು ಸದಸ್ಯರು ಮೈಸೂರು ಪೌರಸಭೆಯ ಕೆಲವು ಉಪಸಮಿತಿಗಳಿಗೆ ರಾಜೀನಾಮೆಯನ್ನಿತ್ತಿದ್ದಾರೆಂದು ತಿಳಿಯಬರುತ್ತದೆ. ಕೆಲವು ದಿವಸಗಳ ಹಿಂದೆ ಪೌರಸಭೆಯ ಅಧಿವೇಶನವು ನಡೆದು ದೆಹಲಿಯಲ್ಲಿ ನಡೆಯಲಿರುವ ಅಖಿಲಭಾರತ ಸ್ಥಳೀಯ ಸಂಸ್ಥೆಗಳ ಅಧಿವೇಶನಕ್ಕೆ ಮೈಸೂರಿನಿಂದ ಪ್ರತಿನಿಧಿಗಳನ್ನು ಚುನಾಯಿಸಲಾಯಿತು. ಎಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರೇ ಚುನಾಯಿತರಾದರು. ಚುನಾವಣಾಕಾಲದಲ್ಲಿ ಪ್ರಜಾಸಂಘದವರು [illegible] ಸರಿಯಾಗಿಲ್ಲವೆಂದೂ ತಾವು ಇದರಲ್ಲಿ ಭಾಗವಹಿಸುವುದಿಲ್ಲವೆಂದೂ ಹೇಳಿ ಸಭಾ ತ್ಯಾಗಮಾಡಿದರು. ಈ ಪ್ರಕರಣವಾದ ಮೇಲೆ ಈ ಉಪಸಮಿತಿಗಳಿಗೆ ಈ ಪಕ್ಷದ ಕೆಲವು ಸದಸ್ಯರು ರಾಜೀನಾಮೆಯನ್ನಿತ್ತಿದ್ದಾರೆ. ಅಂದರೆ ಈ ಪ್ರಕರಣಕ್ಕೂ ಇವರ ರಾಜೀನಾಮೆಗೂ ಸಂಬಂಧವಿರುವಂತೆ ಭಾಸವಾಗುತ್ತದೆ. ಉಪಸಮಿತಿಗಳ ಚುನಾವಣೆಯು ಇದೇ ಜುಲೈ ಮಾಹೆಯಲ್ಲಿ ನಡೆಯಿತು. ಆಡಿಟ್, ಹೆಲ್ತ್ ಮುಂತಾದ ಉಪಸಮಿತಿಗಳಿಗೆ ಈ ಪಕ್ಷದ ಸದಸ್ಯರು ಚುನಾಯಿತರಾದರು. ಇಲ್ಲಿವರೆವಿಗೂ ಈ ಉಪಸಮಿತಿಗಳಲ್ಲಿ ಭಾಗವಹಿಸಿ ಹಠಾತ್ತಾಗಿ ರಾಜೀನಾಮೆಯಿತ್ತಿರುವುದರಿಂದ, ಈ ಪ್ರತಿನಿಧಿ ಚುನಾವಣೆಯನ್ನು ಪ್ರತಿಭಟಿಸಿ ರಾಜೀನಾಮೆಯಿತ್ತಿರುವಂತೆಯೇ ಹೇಳಬಹುದಾಗಿದೆ. ಇಲ್ಲಿಯವರೆಗೆ ಇದನ್ನು ಪ್ರಜೆಗಳ ಗಮನಕ್ಕೆ ಸಕಾರಣವಿಂದ ತರದೆಯಿರುವುದು ಅನೇಕ ಊಹಾಪೋಹಗಳಿಗೆ ಮಾರ್ಗವಾಗಿರುತ್ತದೆ.

ಪೌರಸಭೆಯ ಸದಸ್ಯರ ಚುನಾವಣೆಯು ನಡೆದು ಈಗಾಗಲೇ ಒಂದು ವರ್ಷವಾಗುತ್ತ ಬಂದಿದೆ. ಈ ಚುನಾವಣಾ ಕಾಲದಲ್ಲಿ ಈ 'ಪ್ರಜಾಸಂಘ' ನೂತನ ಪಕ್ಷವು ಸ್ಥಾಪಿತವಾಗಿ ಚುನಾವಣೆಗಳಲ್ಲಿ ಭಾಗವಹಿಸಿ ಕಾಂಗ್ರೆಸ್ಸಿಗೆ ವಿರೋಧಪಕ್ಷವಾಗಿ ಪೌರಸಭೆಯಲ್ಲಿ ಕೆಲವು ಸ್ಥಾನಗಳನ್ನು ಗಳಿಸಿತು. ಚುನಾವಣಾ ಕಾಲದಲ್ಲಿ, ಸಾಮಾನ್ಯವಾಗಿ ಎಲ್ಲಾ ವಿರೋಧಪಕ್ಷಗಳೂ ಮಾಡುವಂತೆ ಎದುರುಪಕ್ಷದ ಮೇಲೆ ದೋಷಾರೋಪಣಮಾಡುತ್ತ ತಮ್ಮ ಪಕ್ಷವು ಅಧಿಕಾರಕ್ಕೆ ಬಂದಲ್ಲಿ ಎಲ್ಲೆಲ್ಲೂ ಸ್ವರ್ಗಸೌಖ್ಯವನ್ನು ಕಲ್ಪಿಸುವುದಾಗಿ ಹೇಳುತ್ತಾ, ಆ ಹೇಳಿಕೆಗೆ ಜನರು ಮರುಳಾಗಿ ಅವರನ್ನು ಸ್ಥಾನಕ್ಕೇರಿಸಲಾಯಿತು. ಇದಾದಮೇಲೆ ಈ ಪಕ್ಷದವರು ಮಾಡುತ್ತಲಿರುವ ಜನಸೇವೆಯೇನು? ಪಕ್ಷದ ಚಟುವಟಿಕೆಗಳೇ ಮಾಯವಾಗಿವೆ. ಇಲ್ಲಿಯವರೆಗೆ ಒಂದು ಬಹಿರಂಗ ಸಭೆಯನ್ನು ನಡೆಸಿ ತಾವು ಮಾಡಿರುವ, ಮಾಡಬೇಕೆಂದಿರುವ ಕೆಲಸಕಾರ್ಯಗಳನ್ನು ಜನತೆಯ ಗಮನಕ್ಕೆ ತಂದಿರುವರೆ? ತಮ್ಮನ್ನು ಚುನಾಯಿಸಿದವರಾರೆಂಬ ಅರಿವೇನಾದರೂ ಅವರಿಗಿದೆಯೇ? ನಗರದ ನಾನಾಭಾಗಗಳಲ್ಲಿ ಓಡಾಡಿ ಪೌರರ ಕುಂದುಕೊರತೆಗಳೇನೆಂಬುದನ್ನು ವಿಚಾರಿಸಿ ಅವುಗಳ ನಿವಾರಣೋಪಾಯಗಳನ್ನು ಮಾಡುತ್ತಲಿರುವರೇ? ತಾವು ಜನತಾಸೇವೆಯನ್ನೆಸಗುವಾಗ ಎದುರುಪಕ್ಷದವರೇನಾದರೂ ಅಡಚಣೆಯನ್ನುಂಟುಮಾಡುತ್ತಲಿದ್ದರೆ, ಜನತೆಗೆ ಇದನ್ನು ತಿಳಿಸಿ ಪೌರಸಭೆಗೇ ರಾಜೀನಾಮೆಯನ್ನಿತ್ತು, ಪುನಃ ಚುನಾವಣೆಗೆ ನಿಂತು ಜನರ ಬೆಂಬಲ ತಮಗಿದೆಯೆಂಬುದನ್ನು ತೋರ್ಪಡಿಸಿದಲ್ಲಿ ಅದು ಗಮನಾರ್ಹವಾದುದು. ಅದನ್ನು ಬಿಟ್ಟು ಯಾವುದೋ ಉಪಸಮಿತಿಗಳಿಗೆ ಪೌರರ ತಿಳುವಳಿಕೆಗೂ ತರದೆ ರಾಜೀನಾಮೆಯನ್ನಿತ್ತರೆ ಆಗುವ ಪುರುಷಾರ್ಥವಾದರೂ ಏನು?

ಕಾಂಗ್ರೆಸ್ ಸದಸ್ಯರೂ, ಈ ಪ್ರಜಾಸಂಘದ ಸದಸ್ಯರೂ, ಪೌರಸಭೆಯಲ್ಲಿ ರಾಜಕೀಯ ಮನೋಭಾವವನ್ನು ಬಿಟ್ಟು ಜನತಾ ಸೇವಾದೃಷ್ಟಿಯಿಂದ ತಮ್ಮ ಪಕ್ಷವನ್ನು ಮರೆತು ತಮ್ಮ ಕೈಲಾದಷ್ಟು ಸೇವೆಯನ್ನು ಜನರಿಗೆ ಮಾಡಿ ನಗರಕ್ಕೆ ಕೀರ್ತಿಯನ್ನು ತರಬೇಕೇ ಹೊರತು ಪಕ್ಷದೃಷ್ಟಿಯಿಂದ ಕೆಲಸ ಮಾಡುತ್ತ ಬಂದಲ್ಲಿ ಜನರಿಗೆ ಸ್ವಲ್ಪವೂ ಪ್ರಯೋಜನವಿಲ್ಲ. ಇದು ಜನಸೇವೆಯೂ ಇಲ್ಲ.

ಈಗಲಾದರೂ ಪ್ರಜಾಸಂಘದ ಸದಸ್ಯರು ತಾವಿತ್ತಿರುವ ರಾಜೀನಾಮೆಗೆ ಬಹಿರಂಗವಾಗಿ ಕಾರಣವನ್ನು ತಿಳಿಸಿ, ತಾವು ಪ್ರಜಾದೃಷ್ಟಿಯಿಂದ ಕೆಲಸ ಮಾಡುತ್ತಲಿದ್ದರೆ ಜನರ ಬೆಂಬಲವನ್ನು ಹೆಚ್ಚಾಗಿ ಪಡೆಯಲು ಶ್ರಮಿಸಲಿ

ಜೈ ಹಿಂದ್.

ಲೈಸನ್ಸ್ ರದ್ದು

ಮಂಡ್ಯ ಜಿಲ್ಲೆಯಲ್ಲಿ ಮಿಲ್ಲಿಗೆ ಅಕ್ಕಿಮಾಡಲು ಕೊಟ್ಟಿದ್ದ ಲೈಸನ್ಸನ್ನು ಮಂಡ್ಯ ಜಿಲ್ಲಾಧಿಕಾರಿಗಳು ರದ್ದುಮಾಡಿದ್ದಾರೆ. ಸಾರ್ವಜನಿಕರ ಭತ್ತವನ್ನು ಅಕ್ಕಿಮಾಡುವುದನ್ನು ನಿಲ್ಲಿಸಲಾಗುವುದು. ಈ ಆಜ್ಞೆಯು ಡಿಸೆಂಬರ್ ತಿಂಗಳಿನಿಂದ ಜಾರಿಗೆ ಬರುವುದು.

ನೇಪಾಳ ಕದನ

ಬೀರ್‌ಗಂಜಿಗೆ ೬ ಮೈಲಿಯಲ್ಲಿ ನೇಪಾಳ ಸರ್ಕಾರ ಸೈನ್ಯಗಳಿಗೂ, ಕಾಂಗ್ರೆಸ್ ಸೈನ್ಯಗಳಿಗೂ ಕದನ ನಡೆಯುತ್ತಲಿದೆ. ಇಲ್ಲಿಗೆ ೧೫೦ ಮೈಲಿ ದೂರದಲ್ಲಿರುವ ಜಲೇಶ್ವರದ ಮೇಲೂ ಕಾಂಗ್ರೆಸ್ ಸೈನ್ಯಗಳು ಧಾಳಿ ನಡೆಸುತ್ತಲಿವೆಯೆಂದು ವರದಿಯಾಗಿದೆ.

ಒಲಂಪಿಯಾ
16-11-50 ರಿಂದ
ಬೇಗಂ ಪ್ಯಾರ, ಅಜೀತ್,
ಕೊಟ್ ಮತ್ತು ಗೋಪ್
ಪಾತ್ರವಹಿಸಿರುವ
ಮೆಹರ್‌ಬಾನಿ
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ನವಂಬರ್ ೧೯ ಭಾನುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಮಿಶ್ರ ಮಾಧುರ್ಯ. ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಜಲತರಂಗ್ ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಗೀತೆಗಳು ೨-೩೦ ಮುಕ್ತಾಯ.

ಸಂಜೆ ೫-೩೦ ರತ್ನಮ್ಮ ಕೃಷ್ಣಮೂರ್ತಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆಗಳು (ಹಿಂದಿ) ೭-೫ ಚಿತ್ರಲೋಕ (ರ) ೭-೩೦ ರತ್ನಮ್ಮ ಕೃಷ್ಣಮೂರ್ತಿ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕೆ.ಎಸ್. ನಾರಾಯಣಯ್ಯಂಗಾರ್ (ಕೊಳಲ ವಾದ್ಯ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಕನ್ನಡ ನಾಟಕ ೧೦-೦ ಮುಕ್ತಾಯ.

ನವಂಬರ್ ೨೦ ಸೋಮವಾರ

ಬೆಳಗ್ಗೆ ೭-೧೫ ಸುಪ್ರಭಾತ ಕಾರ್ಯಕ್ರಮ ವಿವರಣೆ. ೭-೨೦ ಚಿತ್ರ ಸಂಗೀತ ೭-೩೫ ಪಕ್ಷಿನೋಟ ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಸಿತಾರ್ ೧-೫೦ ಹಿಂದೀ ಶಿಕ್ಷಣ. ೨-೦ ಜನರಂಜಿನಿ (ರ) ೨-೧೫ ವಾದ್ಯ ಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ತಂಗಮ್ಮ ಶಾಮರಾವ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ, ೬-೧೦ ಗಾನವಿಹಾರ. ೬-೩೦ ಸ್ಥಳೀಯ ಪ್ರಕಟಣೆಗಳು. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಕಥೆ ೭-೧೫ ತಂಗಮ್ಮ ಶಾಮರಾವ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ನಾದಸುಧಾ (ರ) ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಚೆನ್ನಮ್ಮ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಚೆನ್ನಮ್ಮ (ಸಂಗೀತ) ೧೦-೦ ಮುಕ್ತಾಯ.

ರಣಜಿತ್
15-11-50 ರಿಂದ 2ನೇವಾರ
ದಿನವಹಿ 3 ಪ್ರದರ್ಶನಗಳು
† ಅಶೋಕ್‌ಕುಮಾರ್ † ಮಧುಬಾಲ
ಪಾತ್ರವಹಿಸಿರುವ
ನಿಶಾನಾ
(ಹಿಂದಿ)
ಬೆಳಗಿನ ಪ್ರದರ್ಶನ 17-11-50 ರಿಂದ
3 ದಿನಗಳು ಮಾತ್ರ
ಚಂದಾ ಕಿ ಚಾಂದಿನಿ

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೦—೧೧—೧೯೫೦ನೇ ಸೋಮವಾರ [ಸಂಚಿಕೆ ೬೮

ಆಸ್ಪತ್ರೆಗಳ ಪ್ರಾರಂಭೋತ್ಸವ

ಸಚಿವ ಶ್ರೀ ಕೆ ಟಿ ಭಾಷ್ಯಂರವರಿಂದ

ಮೈಸೂರು ನ ೨೦

ಕೃಷ್ಣರಾಜನಗರ ತಾಲ್ಲೂಕು ಹೊಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕು ಕಿತ್ತೂರು ಗ್ರಾಮಗಳಲ್ಲಿ ಹೊಸ ಮಾದರಿಯ ಆಸ್ಪತ್ರೆಗಳ ಪ್ರಾರಂಭೋತ್ಸವವನ್ನು ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ನಿನ್ನೆ ನೆರವೇರಿಸಿದರು ಜಿಲ್ಲಾಧಿಕಾರಿಗಳು, ಜಿಲ್ಲಾ ಬೋರ್ಡು ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಮತ್ತು ಅನೇಕರು ಹಾಜರಿದ್ದರು ಕಿತ್ತೂರು ಆಸ್ಪತ್ರೆಗೆ ಅಲ್ಲಿಯ ಗಣ್ಯವ್ಯಕ್ತಿಗಳಾದ ಶ್ರೀ ಚನ್ನೇಗೌಡರು ೬ ಸಾವಿರ ರೂಪಾಯಿಗಳನ್ನು ಕೊಟ್ಟು ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿರುವುದಲ್ಲದೆ ಡಾಕ್ಟರ ವಾಸಕ್ಕೆ ಸಹ ೨೦೦೦ ರೂ ಗಳ ವೆಚ್ಚದಿಂದ ವಾಸದ ಮನೆಯನ್ನು ಕಟ್ಟಿಸಿಕೊಟ್ಟಿರುವರು ಹೊಸೂರು ಗ್ರಾಮದಲ್ಲಿ ಶ್ರೀ ತಿಮ್ಮಶೆಟ್ಟಿಯವರು ಈ ಆಸ್ಪತ್ರೆ ಕಟ್ಟಡಕ್ಕೆ ೫೦೦೦ ರೂ ಗಳ ದಾನ ಮಾಡಿರುವರು

ಈ ಎರಡು ಆಸ್ಪತ್ರೆಗಳನ್ನೂ ಅಲೋಪತಿ ಆಸ್ಪತ್ರೆಗಳ ಮಾದರಿಯಲ್ಲಿಯೇ ನಡೆಯಿಸಲು ಜಿಲ್ಲಾ ಬೋರ್ಡು ಏರ್ಪಾಡು ಮಾಡಿರುವುದು ಡಾಕ್ಟರರು ಆಯುರ್ವೇದ ಮತ್ತು ಅಲೋಪಥಿಗಳ ವೈದ್ಯಶಾಸ್ತ್ರಗಳಲ್ಲಿ ಪರೀಕ್ಷೆಯಾಗುವವರನ್ನೇ ನೇಮಿಸಿ ಆಯುರ್ವೇದ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹಕೊಡುವ ಧ್ಯೇಯದಿಂದ ಈ ಆಸ್ಪತ್ರೆಗಳನ್ನು ನಡೆಯಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಲಾಗಿದೆ ಮೈಸೂರು ಜಿಲ್ಲೆಯಲ್ಲಿ ಇದೇ ರೀತಿಯಾದ ೧೬ ಆಸ್ಪತ್ರೆಗಳನ್ನು ತೆಗೆಯಲಾಗುವುದೆಂದು ಜಿಲ್ಲಾ ಬೋರ್ಡು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿದರು

ಮಂತ್ರಿಗಳು ಪ್ರಾರಂಭೋತ್ಸವಮಾಡುತ್ತ ಆಯಾ ಪ್ರಾಂತ್ಯದ ಜನರು ಮುಂದೆ ಒಂದು ಉದಾರದಾನ ಮಾಡಿ ಈ ರೀತಿಯಾದ ಆಸ್ಪತ್ರೆಗಳ ಸ್ಥಾಪನೆಗೆ ನೆರವಾಗಬೇಕೆಂದೂ ಸರಕಾರವು ತನ್ನ ಕೈಲಾದಷ್ಟು ಸಹಾಯ ನೀಡುವುದೆಂದೂ ತಿಳಿಸಿದರು

ಇದಕ್ಕೆ ಮುಂಚೆ ಸಚಿವರು ರಾವಂದೂರು ಗ್ರಾಮಕ್ಕೆ ಭೇಟಿಯಿತ್ತರು ಶ್ರೀ ಸಣ್ಣಪ್ಪ ಪಿಲ್ಲೇದಾರ್‌ರವರು ಗ್ರಾಮದ ಪರವಾಗಿ ಮಂತ್ರಿಗಳಿಗೆ ಬಿನ್ನವತ್ತಳೆಯನ್ನರ್ಪಿಸಿದರು. ರಾವಂದೂರು ಹೊಗೆಸೊಪ್ಪಿನ ಮುಖ್ಯವಾದ ಕೇಂದ್ರವಾಗಿ ದೊಡ್ಡ ವ್ಯಾಪಾರ ಸ್ಥಳವಾಗಿರುವುದಾಗಿ ತಿಳಿಸಿ ಯುದ್ಧಕಾಲದಲ್ಲಿ ವಿಧಿಸಿರುವ ಎಕ್ಸೈಜು ಸುಂಕವನ್ನು ಮನ್ನಾಮಾಡಿಸಿಕೊಡಬೇಕೆಂದು ಕೋರಿದರು

ಶಿಕ್ಷಣ ಮಾಧ್ಯಮ

ವಿಶ್ವವಿದ್ಯಾನಿಲಯಗಳಿಗೆ ಸೂಕ್ತ ಶಿಕ್ಷಣ ಮಾಧ್ಯಮವನ್ನಾರಿಸಿಕೊಳ್ಳುವ ಸ್ವಾತಂತ್ರ್ಯವಿರಬೇಕೆಂದೂ ಇಂಗ್ಲೀಷ್ ಶಿಕ್ಷಣ ಮಾಧ್ಯಮವನ್ನಾಗಿಟ್ಟುಕೊಳ್ಳುವ ಹಕ್ಕಿರಬೇಕೆಂದು ಮದರಾಸು ವಿಶ್ವವಿದ್ಯಾನಿಲಯದ ಸೆನೆಟ್ ನಿರ್ಧಸಿದೆ.

ಕೊಲೆಯತ್ನ

ಮಂತ್ರಿಗಳಿಂದ ಪ್ರಾಣ ಉಳಿಯಿತು

ಮೈಸೂರು ನ ೧೯

ನಿನ್ನೆ ಸಂಜೆ ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಹಿಂತಿರುಗುತ್ತಿದ್ದಾಗ ಕೂಪ್ಪವೆಂಬ ಗ್ರಾಮದ ಬಳಿ ' ಅಯ್ಯೋ ಅಯ್ಯೋ ಎಂಬ ಆರ್ತನಾದವು ಕೇಳಿ ಬಂದಾಗ ಮೋಟಾರನ್ನು ನಿಲ್ಲಿಸಿದರು ಯಾರೊ ಇಬ್ಬರು ಗಾಬರಿಯಿಂದ ಗಾಡಿಯ ಹತ್ತಿರ ಬಂದು ಕೊಲೆ ಎಂದು ಹೇಳುತ್ತಲಿರುವಾಗ ಯಾರೋ ದುರಾತ್ಮರು ಒಬ್ಬನನ್ನು ಎತ್ತಿಕೊಂಡು ಹೋಗುತ್ತಲಿದ್ದವರು ಅಲ್ಲಿಯೇ ಎತ್ತಿಹಾಕಿ ಕಾಡಿನೊಳಗೆ ಓಡಿಹೋದರು ಹೋಗಿ ನೋಡಲಾಗಿ ಅಲ್ಲಿ ಬಿದ್ದಿದ್ದವನಿಗೆ ತಲೆ, ಬೆನ್ನ ಮೇಲೆಲ್ಲಾ ವಿಶೇಷ ಗಾಯವಾಗಿ ಹಲ್ಲುಗಳೆಲ್ಲಾ ಮುರಿದುಹೋಗಿ ರಕ್ತಬರುತ್ತಲಿದ್ದುದನ್ನು ನೋಡಿ ಕೂಡಲೇ ಪಿರಿಯಾಪಟ್ಟಣದ ಆಸ್ಪತ್ರೆಗೆ ಬೇರೇ ಮೋಟಾರಿನಲ್ಲಿ ಕಳುಹಿಸಲಾಯಿತು. ವಿಚಾರಿಸಲಾಗಿ ಏಟು ತಿಂದವನು ಬೇಗ್ಪಾಳ್ಯದ ಸುಬ್ಬಶೆಟ್ಟಿಯೆಂದೂ ಅವನನ್ನು ಹೊಡೆದ ಕೊಲೆ ಮಾಡಲೆತ್ನಿಸಿದವರು ಅದೇ ಊರಿನ ನಂಜ, ಮುಂತಾದ ೫ ಜನರೆಂದೂ ಅವರಿಗೆ ವೈಮನಸ್ಯವಿತ್ತೆಂದೂ ತಿಳಿಯಬರುತ್ತದೆ ಪೋಲೀಸಿನವರು ಮುಂದಿನ ತನಿಖೆ ನಡೆಸುತ್ತಲಿರುವರು ಸಚಿವರ ಗಾಡಿ ಸಮಯಕ್ಕೆ ಬಾರದಿದ್ದರೆ ಅವನನ್ನು ಹೊಡೆದು ಕೊಂದು ಯಾವುದೋ ಕಮರಿಯಲ್ಲಿ ಹಾಕುತ್ತಲಿದ್ದರಲ್ಲದೆ ಗಾಡಿಯ ಹತ್ತಿ' ಓಡಿಬಂದ ಅವನ ಸ್ನೇಹಿತರ ಕೊಲೆಯೂ ಆಗುವುದರಲ್ಲಿತ್ತೆಂದು ಊಹಿಸಲಾಗಿದೆ

ಗ್ರಾಮಾಧಿಕಾರಿಗಳ ಸಮ್ಮೇಳನ

ಬೆಂಗಳೂರು ನ ೨೦

ಅಖಿಲ ಮೈಸೂರು ಗ್ರಾಮಾಧಿಕಾರಿಗಳ ಸಮ್ಮೇಳನವು ಬೆಂಗಳೂರಿನಲ್ಲಿ ಸರ್ ಪುಟ್ಟಣ್ಣಶೆಟ್ಟರ ಪುರಭವನದಲ್ಲಿ ಇಂದು ಪ್ರಾರಂಭವಾಯಿತು ರೆವಿನ್ಯು ಮಂತ್ರಿ ಶ್ರೀ ಹೆಚ್ ಸೀತಾರಾಮ ರೆಡ್ಡಿಯವರು ಸಮ್ಮೇಳನ ಉದ್ಘಾಟನೆ ನಡೆಸಿದರು ಶ್ರೀ ಟಿ ಸುಬ್ರಹ್ಮಣ್ಯರವರು ಅಧ್ಯಕ್ಷತೆ ವಹಿಸಿದ್ದರು

ಮಂತ್ರಿಗಳಮೇಲೆ ಅಪಾದನೆ

ಮದರಾಸು ಮಂತ್ರಿಗಳ ಮೇಲೆ ಅಪಾದನೆ ವಿಚಾರಣೆಯ ನಿರ್ಣಯವನ್ನು ಶ್ರೀ ಪ್ರಕಾಶಂರವರು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸಿರುವುದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕಾಂಗ್ರೆಸು ಪಕ್ಷವು ಶ್ರೀ ಪ್ರಕಾಶಂರವರಿಗೆ ತಿಳಿಸಿದೆ

● ೧೬ ವರ್ಷದ ದಲಾಯಿಲಾಮಾರವರು ಟಿಬೆಟ್ಟಿನ ಪೂರ್ಣಾಧಿಕಾರವನ್ನು ವಹಿಸಿಕೊಂಡಿರುವರು

ಕಾಂಗ್ರೆಸ್ಸಿನಿಂದ ಆಚಾರ್ಯ ಕೃಪಲಾನಿಯವರ ಉಚ್ಚಾಟನೆಯೇ?

ಆಚಾರ್ಯ ಕೃಪಲಾನಿಯವರು ಮತ್ತು ಮಿ|| ರಫಿ ಅಹಮದ್ ಕಿದ್ವಾಯಿಯವರು ಡೆಮಾಕ್ರಾಟಿಕ್ ಫ್ರಂಟ್ ಎಂಬ ನೂತನ ಸಂಸ್ಥೆಯನ್ನು ಸ್ಥಾಪಿಸಿ, ಈಗಿನ ಕಾಂಗ್ರೆಸ್ ನೀತಿಯನ್ನು ಖಂಡಿಸುತ್ತಲಿರುವುದರಿಂದ ಅವರ ಮೇಲೆ ಕ್ರಮ ಜರುಗಿಸುವ ವಿಷಯವು ನವಂಬರು ೨೩ ರಲ್ಲಿ ನಡೆಯುವ ಅಖಿಲಭಾರತ ಕಾರ್ಯಕಾರಿ ಸಮಿತಿಯಲ್ಲಿ ಚರ್ಚೆಗೆ ಬರಲಿರುವುದೆಂದು ತಿಳಿಯಬರುತ್ತದೆ

ಮಿ|| ರಫಿ ಅಹಮ್ಮದ್ ಕಿದ್ವಾಯಿಯವರು ಈ ನೂತನ ಸಂಸ್ಥೆಗೆ ಹಣವನ್ನು ಮತ್ತು ಸದಸ್ಯರನ್ನು ಸಂಗ್ರಹಿಸುತ್ತಲಿರುವರೆಂದೂ ತಿಳಿಯಬರುತ್ತದೆ ಇವರನ್ನು ಕಾಂಗ್ರೆಸ್ಸಿನಿಂದ ತೆಗೆದುಹಾಕಬೇಕೆಂದು ಅನೇಕ ಕಾರ್ಯಕಾರಿ ಸಮಿತಿ ಸದಸ್ಯರು ಅಭಿಪ್ರಾಯಪಡುತ್ತಲಿರುವುದಾಗಿ ಹೇಳಲಾಗಿದೆ

ಮಿ|| ರಫಿ ಅಹಮದ್ ಕಿದ್ವಾಯಿಯವರು ಈಗ ಕೇಂದ್ರದಲ್ಲಿ ಮಂತ್ರಿಗಳಾಗಿರುವರು

● ತಾ|| ೧೭-೧೧-೫೦ನೇ ಶುಕ್ರವಾರ ಸಂಜೆ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಶ್ರೀ ಸಿ ಜೆ. ದೇವಸಂಘರವರ ಅಧ್ಯಕ್ಷತೆಯಲ್ಲಿ ಸೇರಿ ಈ ನಿರ್ಣಯಗಳನ್ನು ಮಾಡಿತು.

ಕೆಲಸದಿಂದ ನಿಷ್ಕಾರಣವಾಗಿ ವಜಾಮಾಡಲ್ಪಟ್ಟ ಎಲ್ಲಾ ಕಂಪೆನಿಯ ಕೆಲಸಗಾರರ ಕೂಲೀಕರುಗಳಿಗೂ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಪ್ರಕಾರವಾಗಿ ನೋಟೀಸ್ ಆಫ್ ಛೇಂಜ್ ಕೊಡತಕ್ಕದೆಂದು ತೀರ್ಮಾನಿಸಲಾಯಿತು

ಕೆಲಸಗಾರರನ್ನು ವಿನಾಕಾರಣ ಕೆಲಸದಿಂದ ತೆಗೆಯುತ್ತಾ ಇರುವುದು ಈಗ್ಗೆ ಅಧಿಕವಾಗಿರುವುದರಿಂದ ಕೆಲಸಗಾರರ ಈ ವಿಷಯವನ್ನು ಪರಿಶೀಲಿಸಿ ತೀರ್ಮಾನಿಸಲು ಒಂದು ವರ್ಕ್ಸ್ ಕಮಿಟಿಯನ್ನು ನೇಮಿಸಬೇಕೆಂದು ಸರ್ಕಾರವನ್ನು ಈ ಸಂಘವು ಪ್ರಾರ್ಥಿಸುತ್ತದೆ

ಎಲ್ಲಾ ಮೋಟಾರು ಕೆಲಸಗಾರರೂ ಸಂಘದ ಚಂದಾ ಹಣವನ್ನು ಸಕಾಲಕ್ಕೆ ಸರಿಯಾಗಿ ಸಂಘದ ಆಫೀಸಿಗೆ ಒಂದು ಪಾವತಿಮಾಡಿ ರಶೀದಿಪಡೆಯತಕ್ಕದ್ದೆಂದು ತೀರ್ಮಾನಿಸಲಾಯಿತು.

ತಾ|| ೧೯-೧೧-೫೦ ರಲ್ಲಿ ಮೋಟಾರು ಕೆಲಸಗಾರರ ಸಂಘದ ೪ನೇ ವಾರ್ಷಿಕೋತ್ಸವವನ್ನು ಆಚರಿಸುವ ಪ್ರಯುಕ್ತ ಮಾಲೀಕರುಗಳು ತಮ್ಮ ಎಲ್ಲಾ ಕೆಲಸಗಾರರಿಗೂ ಆದಿವಸ ಪೂರ್ತಾ ರಜವನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು ಹಾಗೂ ಸರ್ಕಾರದವರೂ ಸಹ ರಜವನ್ನು ಕೊಡಿಸಬೇಕೆಂದು ಕೇಳಿಕೊಳ್ಳಲಾಯಿತು

ವಾರ್ಷಿಕೋತ್ಸವವನ್ನು ನಡೆಸಲು ಒಂದು ಸ್ವಾಗತ ಸಮಿತಿಯನ್ನು ರಚಿಸಲಾಯಿತು

ಸಮಾಚಾರ

ನವಂಬರ್ ೨೦-೧೧-೫೦ ಸೋಮವಾರ

ವಿಶ್ವವಿದ್ಯಾನಿಲಯದಲ್ಲಿ ಸುಧಾರಣೆಗಳು

ಭಾರತಾದ್ಯಂತ ವಿಶ್ವವಿದ್ಯಾನಿಲಯಗಳಲ್ಲಿ ಸುಧಾರಣೆಗಳ ಅಗತ್ಯವೆಂದು ಕಂಡುಬಂದುದರಿಂದ ಭಾರತ ಸರ್ಕಾರವು ಡಾ|| ರಾಧಾಕೃಷ್ಣನ್‌ರವರ ನೇತೃತ್ವದಲ್ಲಿ ಒಂದು ಕಮಿಷನ್ ನೇಮಿಸಿ, ಕಮಿಷನ್‌ನವರು ದೇಶದಲ್ಲೆಲ್ಲಾ ಪ್ರವಾಸ ಕೈಗೊಂಡು ಅಂಕಿ ಅಂಶಗಳನ್ನು ಸಂಗ್ರಹಿಸಿ ವರದಿಯನ್ನೊಪ್ಪಿಸಿರುವರು. ವರದಿಯು ಈಗ ಇಂಟರ್ ಯೂನಿವರ್ಸಿಟಿ ಬೋರ್ಡಿನ ಪರಿಶೀಲನೆಯಲ್ಲಿದೆ. ಈ ಕಮಿಷನ್ನಿನವರು ಸಲಹೆಯಿತ್ತಿ[illegible] ಮುಖ್ಯವಾದುವು-ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಶಿಕ್ಷಣಕ್ರಮವು ಮಾರ್ಪಟ್ಟು ದೇಶಾಭಿವೃದ್ಧಿಗೆ ಉಪಯುಕ್ತವಾದಂಥ ವೃತ್ತಿಶಿಕ್ಷಣಗಳಿಗೆ ಹೆಚ್ಚು ಗಮನವನ್ನೀಯುವುದು ಮತ್ತು ಶಿಕ್ಷಣಮಟ್ಟವು ಉತ್ತಮಗೊಳ್ಳಬೇಕೆಂಬುದು.

ಇದೇರೀತಿಯಾಗಿ ಮೈಸೂರು ಸರ್ಕಾರವು ಈಗ ವಿಶ್ವವಿದ್ಯಾನಿಲಯದ ಪ್ರೊ ಛಾನ್ಸಲರಾದ ಡಾ|| ಸಿ. ಆರ್. ರೆಡ್ಡಿಯವರನ್ನು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗಬೇಕಾಗಿರುವ ಸುಧಾರಣೆಗಳನ್ನು ತಿಳಿಸಲು ನೇಮಿಸಿ, ಅವರಿಂದ ಒಂದು ವರದಿಯನ್ನು ತರಿಸಿಕೊಂಡು ಅದರ ಪರಿಶೀಲನೆಯಲ್ಲಿರುವರು.

ಇಂಟರ್ ಯೂನಿವರ್ಸಿಟಿ ಬೋರ್ಡಿನವರೂ ಡಾ|| ರಾಧಾಕೃಷ್ಣನ್‌ರವರ ವರದಿಯ ಮೇಲೆ ಎಲ್ಲಾ ವಿಶ್ವವಿದ್ಯಾನಿಲಯಗಳೂ ತಮ್ಮ ಅಭಿಪ್ರಾಯವನ್ನು ಕೊಡಬೇಕೆಂದು ಕೇಳಿರುವರು. ಅನೇಕ ವಿಶ್ವವಿದ್ಯಾನಿಲಯಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು.

ಮೈಸೂರು ವಿಶ್ವವಿದ್ಯಾನಿಲಯದವರು ತಮ್ಮ ಅಭಿಪ್ರಾಯವನ್ನು ಇನ್ನೂ ವ್ಯಕ್ತಪಡಿಸಿಲ್ಲವೆಂದು ತಿಳಿಯಬರುತ್ತದೆ. ಅಲ್ಲದೆ, ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದವರು, ಈ ಎರಡು ವರದಿಗಳನ್ನು ಬದಿಗಿಟ್ಟು, ಮತ್ತೊಂದು ಸಮಿತಿಯನ್ನು ನೇಮಿಸಿಕೊಂಡು ತ್ವರಿತವಾಗಿ ಶಿಕ್ಷಣಕ್ರಮದಲ್ಲಿ ಸುಧಾರಣೆಗಳನ್ನು ಮಾಡಬೇಕೆಂದು ಉದ್ಯುಕ್ತರಾಗಿರುವಂತೆ ವರದಿಯಾಗಿದೆ. ಈಗಾಗಲೇ ಭಾರತಾದ್ಯಂತ ಇರುವ ವಿದ್ಯಾಪ್ರವೀಣರ ಸಹಕಾರದಿಂದ ಎರಡು ವರದಿಗಳು ಸಿದ್ಧವಾಗಿವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗಬೇಕಾದ ಸುಧಾರಣೆಗಳು ಡಾ|| ಸಿ ಆರ್ ರೆಡ್ಡಿಯವರ ವರದಿಯಲ್ಲಿವೆ. ಭಾರತಾದ್ಯಂತ ವಿಶ್ವವಿದ್ಯಾನಿಲಯಗಳಲ್ಲಿ ಆಗಬೇಕಾದ ಸುಧಾರಣೆಗಳು ಡಾ|| ರಾಧಾಕೃಷ್ಣನ್‌ರವರ ವರದಿಯಲ್ಲಿವೆ. ಈ ಎರಡು ವರದಿಗಳನ್ನು ಮುಂದಿಟ್ಟುಕೊಂಡು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಕ್ರಮದ ಸುಧಾರಣೆಗಳೇನೆಂಬುದನ್ನು ನಿರ್ಧರಿಸದೆ ಪ್ರತ್ಯೇಕವಾಗಿ ಬೇರೇ ಸಮಿತಿಯನ್ನು ನೇಮಿಸಿ ಅದು ತನ್ನದೇ ಬೇರೇ ನೀತಿಯನ್ನು ಅನುಸರಿಸುವ ಅವಶ್ಯಕತೆಯಾದರೂ ಯೇನು ? ನಮಗೆ ಸ್ವಾತಂತ್ರ್ಯ ಬಂದ ಮೇಲೆ ಭಾರತವೆಲ್ಲಾ ಏಕಚಕ್ರಾಧಿಪತ್ಯವಾಗಿ ಜನರಿಗೆ ಎಲ್ಲೆಡೆಯಲ್ಲಿಯೂ ಸಮಾನತ್ವವಿರಬೇಕೆಂದು ಶಾಸನಗಳಾಗುತ್ತಲಿರುವ ಈ ವೇಳೆಯಲ್ಲಿ ಮೈಸೂರು ತನ್ನದೇ ಬೇರೆ ಮಾರ್ಗವನ್ನನುಸರಿಸುತ್ತ ಹೋದರೆ ಮೈಸೂರಿನ ಪ್ರಜೆಗಳನ್ನು ಇತರರಿಂದ ಪ್ರತ್ಯೇಕಿಸಿದಂತಾಗುವುದಿಲ್ಲವೇ? ಇತರ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣಕ್ರಮಕ್ಕೂ ನಮ್ಮ ವಿಶ್ವವಿದ್ಯಾನಿಲಯದ ಶಿಕ್ಷಣಕ್ರಮಕ್ಕೂ ವಿಶೇಷ ಅಂತರವಿದ್ದಲ್ಲಿ ನಮ್ಮ ಪದವೀಧರರಿಗೆ ಹೊರಗೆ, ಈಗ ದೊರೆಯುತ್ತಲಿರುವಂತೆ ಮನ್ನಣೆ ದೊರೆಯುವುದೇ ? ನಮ್ಮ ದೇಶಕ್ಕೆ ಈಗ ಬೇಕಾಗಿರುವುದು ಸಾಮಾನ್ಯಶಿಕ್ಷಣದ ಜೊತೆಗೆ ವೃತ್ತಿಶಿಕ್ಷಣ. ಪ್ರಾಥಮಿಕ, ಮಾಧ್ಯಮ, ಸೆಕೆಂಡರಿ, ಕಾಲೇಜು ಶಿಕ್ಷಣದ ಯಾವ ದರ್ಜೆಯಲ್ಲಿ ಉತ್ತೀರ್ಣವಾದೊಡನೆಯೇ ನಮ್ಮ ಪ್ರಾಂತ್ಯದಲ್ಲಿಯೋ ಹೊರಪ್ರಾಂತ್ಯದಲ್ಲಿಯೋ ತನ್ನ ಜೀವನವನ್ನು ನಡೆಯಿಸಲು, ತತ್ಪರಿಣಾಮವಾಗಿ ದೇಶಕ್ಕೆ ಯಾವರೀತಿಯಾಗಿಯಾದರೂ ಸೇವೆಗೈಯಲು ತಕ್ಕ ಶಿಕ್ಷಣವನ್ನು ಕೊಡಬೇಕು. ನಮ್ಮ ಈ ಶಿಕ್ಷಣಕ್ರಮಕ್ಕೆ ಮಿಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಮನ್ನಣೆ ದೊರೆಯಬೇಕು. ಇವುಗಳೆಲ್ಲವೂ ಈಗ ನಮಗೆ ಬಂದಿರುವ ವರದಿಗಳಲ್ಲಿ ಅಡಕವಾಗಿವೆ.

ಹೀಗಿರುವಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತ್ವರಿತವಾಗಿ ಮಾಡಬೇಕೆಂದು ಈಗ ಹೊರಟಿರುವ ಸುದ್ದಿ ನಿಜವಾದರೆ ಈ ಸಮಿತಿಯನ್ನು ಸರ್ಕಾರದ ಒಪ್ಪಿಗೆಯ ಮೇಲೆ ರಚಿಸಲಾಗಿದೆಯೆ ? ಈಗಿರುವ ವರದಿಗಳನ್ನು ಮುಂದಿಟ್ಟುಕೊಂಡು, ಸಂಸ್ಥಾನದಲ್ಲಿರುವ ವಿದ್ಯಾಪ್ರವೀಣರ ಸಲಹೆಯನ್ನು ಪಡೆದು, ವಿಶ್ವವಿದ್ಯಾನಿಲಯದಲ್ಲಿಯೇ ಇರುವ ಪ್ರೊ|| ಛಾನ್ಸಿಲರ್ ಡಾ|| ಸಿ ಆರ್. ರೆಡ್ಡಿಯವರ ನೇತೃತ್ವದಲ್ಲಿ ಸುಧಾರಣೆಗಳನ್ನು ನಡೆಸುವುದು ಸೂಕ್ತವೇ ಹೊರತು ಕೆಲವು ಮಂದಿ ಸದಸ್ಯರು ಅದರಲ್ಲೂ ಬರೀ ಕಾಲೇಜು ಅಧ್ಯಾಪಕರು ಸೇರಿ ಪ್ರೊ ಛಾನ್ಸಿಲರಾಗಿರುವ ಡಾ|| ರೆಡ್ಡಿಯವರ ಗಮನಕ್ಕೆ ತರದೆಯೇ ಸುಧಾರಣೆಗಳನ್ನು ತರಲು ಕಾರ್ಯಕ್ರಮಕ್ಕೆಗೊಳ್ಳುವುದು ಅಷ್ಟು ಸೂಕ್ತವಲ್ಲ

ಚಂಡಮಾರುತ

ಈಗೆರಡುದಿನಗಳಿಂದ ಕಲ್ಕತ್ತಾದಲ್ಲಿ ಚಂಡಮಾರುತವು ಪ್ರಾರಂಭವಾಗಿ ಮಳೆಯುಂಟಾಗಿ ವಿಶೇಷ ಹಾವಳಿ ಮಾಡುತ್ತಲಿದೆ.

ಮನೆಗಳು ಬಿದ್ದು ಜನರ ಪ್ರಾಣಹಾನಿಯಾಗಿರುವುದಲ್ಲದೆ, ವಿಮಾನಸಂಚಾರಕ್ಕೂ ಅಡಚಣೆಯುಂಟಾಗಿದೆಯೆಂದು ವರದಿಯಾಗಿದೆ.

ಮಂತ್ರಿಗಳ ರಾಜಿನಾಮೆ

ನೇಪಾಳದಲ್ಲಿ ಕಾಂಗ್ರೆಸ್ ಮತ್ತು ಸರ್ಕಾರಿ ಸೈನ್ಯಗಳಿಗೆ ಕದನವು ಇನ್ನೂ ನಡೆಯುತ್ತಲೇ ಇದೆ. ಸರ್ಕಾರದ ನೀತಿಯು ಸರಿಬೀಳದೆ ಅಲ್ಲಿಯ ಆಹಾರಮಂತ್ರಿ ರಾಜೀನಾಮೆಯನ್ನಿತ್ತಿರುವರೆಂದು ತಿಳಿಯಬಂದಿದೆ.

ಭತ್ಯ ಹೆಚ್ಚಿತು

ಮೈಸೂರು ಮಂತ್ರಿಗಳಿಗೆ ಅವರ ಸಂಚಾರಕಾಲದಲ್ಲಿ ಕೊಡುತಲಿದ್ದ ಭತ್ಯವನ್ನು ದಿನ ಒಂದಕ್ಕೆ ೧೦ ರೂ. ಯಿಂದ ೧೫ ರೂ. ಗೆ ಹೆಚ್ಚಿಸಿರುವುದಾಗಿ ತಿಳಿಯಬಂದಿದೆ

ಪುರಿ ಬೆಲೆ

ಬೆಂಗಳೂರಿನಲ್ಲಿ ಪುರಿಯನ್ನು ರೂ. ಗೆ ೧೧ ಸೇರಿನಂತೆಯೂ, ಚಿಲ್ಲರೆಯಾಗಿ ರೂ. ಗೆ ೧೦ ಸೇರಿನಂತೆ ಮಾರಬೇಕೆಂದು ಜಿಲ್ಲಾಧಿಕಾರಿಗಳು ಸೂಚನೆಯಿತ್ತಿದ್ದಾರೆ.

ಅಮಲ್ದಾರರ ವರ್ಗ

ಮೈಸೂರು ತಾ|| ಅಮಲ್ದಾರರಾದ ಶ್ರೀ ನರಸಿಂಗರಾಯರನ್ನು ಬೆಂಗಳೂರು ಉತ್ತರ ತಾಲ್ಲೂಕಿಗೆ, ಶ್ರೀ ಎಂ. ಲಕ್ಷ್ಮೀಪತಯ್ಯನವರನ್ನು ಮೈಸೂರು ತಾ|| ಗೆ, ಶ್ರೀ ವಿ. ರೇವಣ್ಣನವರನ್ನು ಕೃಷ್ಣರಾಜನಗರದಿಂದ ಚಳ್ಳಕೆರೆಗೆ, ಅಲ್ಲಿಗೆ ಶ್ರೀ ಜಿ. ಎಸ್ ನಾಗಪ್ಪನವರನ್ನು ವರ್ಗಾಯಿಸಲಾಗಿದೆ

ಶಾಂತಿ ಮನವಿ

ಆಟಂಬಾಂಬಿನ ಉಪಯೋಗವನ್ನು ವಿರೋಧಿಸಿ ರಷ್ಯಾವು ವಿಶ್ವಸಂಸ್ಥೆಯಲ್ಲಿ ತಂದಿದ್ದ ಸ್ಟಾಕೋಂ ಶಾಂತಿ ಮನವಿಯ ನಿರ್ಣಯವು ವಿಶ್ವಸಂಸ್ಥೆಯಲ್ಲಿ ಬಿದ್ದುಹೋಯಿತು.

ಗಡಿನಾಡು ಗಾಂಧಿ

ಗಡಿನಾಡು ಗಾಂಧಿ ಅಬ್ದುಲ್ ಘಫಾರ್‌ಖಾನರವರು ತೀವ್ರಖಾಯಿಲೆಯಿಂದ ನರಳುತ್ತಿದ್ದಾರೆಂದೂ ಅವರನ್ನು ಲಾಹೋರಿನ ಮೇಯೋ ಆಸ್ಪತ್ರೆಗೆ ಕರೆತರಲಾಗುವುದೆಂದು ತಿಳಿಯಬರುತ್ತದೆ

ಆಹಾರ ಮಂತ್ರಿ ಶ್ರೀ ಮುನ್ಷಿಯವರ ರಾಜೀನಾಮೆ ?

ಪಾರ್ಲಿಮೆಂಟಿನಲ್ಲಿ ನಡೆದ ಆಹಾರ ಚರ್ಚೆಯಲ್ಲಿ ಕೆಲವು ಸದಸ್ಯರು ಉಗ್ರಟೀಕೆ ಮಾಡಿದುದರ ಪರಿಣಾಮವಾಗಿ ಕೇಂದ್ರ ಆಹಾರ ಸಚಿವ ಶ್ರೀ. ಕೆ. ಎಂ. ಮುನ್ಷಿಯವರು ರಾಜೀನಾಮೆ ಕೊಡುವ ಅಭಿಪ್ರಾಯ ಸೂಚಿಸಿದ್ದಾರೆಂದು ಹೇಳಲಾಗಿದೆ.

ರೇಷನ್ ವಜಾ

ಆಹಾರ ಪರಿಸ್ಥಿತಿ ಉತ್ತಮವಾಗಿರುವುದರಿಂದ ಪೂರ್ವ ಬಂಗಾಳದಲ್ಲಿ ರೇಷನ್ ಪದ್ಧತಿ ವಜಾಮಾಡುವುದಾಗಿ ಅಲ್ಲಿಯ ಆಹಾರ ಮಂತ್ರಿ ಮಿ|| ಮಹಮ್ಮದ್ ಅಸ್‌ರವರು ಹೇಳಿರುವರು.

ರಣಜಿತ್
15-11-50 ರಿಂದ 2ನೇವಾರ
ದಿನವಹಿ 3 ಪ್ರದರ್ಶನಗಳು
ಅಶೋಕ್‌ಕುಮಾರ್ ಮಧುಬಾಲ
ಪಾತ್ರವಹಿಸಿರುವ
ನಿಶಾನಾ
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಪಿ. ಎಲ್. ಸ್ವಾಮಿ

ಸಂಪುಟ ೧] ೨೧—೧೧—೧೯೫೦ನೇ ಮಂಗಳವಾರ [ಸಂಚಿಕೆ ೬೯

ಪ್ರಧಾನಿ ನೆಹರೂರವರಿಗೆ ಶ್ರೀ ಮುನ್ಷಿಯವರ ಪ್ರತಿಭಟನಾ ಪತ್ರ

ಚುನಾವಣೆಗೆ ವೆಚ್ಚ

ಮುಂದೆ ಬರಲಿರುವ ಮಹಾಚುನಾವಣೆಗಳಿಗೆ ೧೦ ಕೋಟಿ ರೂಪಾಯಿಗಳ ವೆಚ್ಚವಾಗಬಹುದೆಂದೂ ೧೭॥ ಕೋಟಿ ಜನರು ಮತವೀಯುವರೆಂದೂ ನಿರೀಕ್ಷಿಸಲಾಗಿದೆ.

ಬೀರ್‌ಗಂಜ್

ನೇಪಾಳ ಸರ್ಕಾರಿ ಸೈನ್ಯಗಳು ಬೀರ್‌ಗಂಜ್ ಪಟ್ಟಣವನ್ನು ಕಾಂಗ್ರೆಸ್ ಸೈನ್ಯಗಳಿಂದ ಹಿಂದಕ್ಕೆ ಪಡೆದುವು ವರದಿಯಾಗಿದೆ ಕಾಂಗ್ರೆಸ್ ಸೈನ್ಯವೆಲ್ಲವೂ ಈ ಪಟ್ಟಣವನ್ನು ಬಿಟ್ಟು ಹೋಗಿವೆ.

ಮೈಸೂರು ನ ೨೦

ನ್ಯಾಯಾಂಗ ಸಚಿವ ಶ್ರೀ ಕೆ ಟಿ. ಭಾಷ್ಯಂರವರು ಇಂದು ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಪ್ರವಾಸ ಮುಗಿಸಿಕೊಂಡು, ಸಂಜೆ ಮೈಸೂರು ಜಿಲ್ಲಾ ಬೋರ್ಡಿನ ಭವನದಲ್ಲಿ ಸದಸ್ಯರನ್ನು ಭೇಟಿ ಮಾಡಿ ರಾತ್ರಿ ಬೆಂಗಳೂರಿಗೆ ಹಿಂತಿರುಗಿದರು.

ವನಸ್ಪತಿ ನಿಷೇಧಿಸು

ವನಸ್ಪತಿ ನಿಷೇಧಿಸಬೇಕೆಂದು ಪಂಜಾಬು ಮಧ್ಯಭಾರತ, ಅಸ್ಸಾಂ ಶಾಸನಸಭೆಗಳ ಕೆಲವು ಸದಸ್ಯರು ಸಹಿ ಮಾಡಿದ ಮನವಿಗಳನ್ನು ಪಾರ್ಲಿಮೆಂಟಿನಲ್ಲಿ ಒಪ್ಪಿಸಲಾಗಿದೆ

ಗ್ರಾಮಾಧಿಕಾರಿಗಳ ಸಮ್ಮೇಳನ

ಬೆಂಗಳೂರು ನ. ೨೦

ಗ್ರಾಮಾಧಿಕಾರವು ದಕ್ಷಿಣಭಾರತದಲ್ಲಿ ಬಹಳ ದಿನಗಳಿಂದ ಜಾರಿಯಲ್ಲಿದೆ. ಮೈಸೂರಿನಲ್ಲಿ ವಂಶಪಾರಂಪರ್ಯವಾಗಿ ನಡೆದುಬಂದಿದೆ ಅವರಿಗೆ ಬರುವ ಸಂಭಾವನೆಗಿಂತಲೂ ಗೌರವವೇ ಮುಖ್ಯವಾದುದು- ವಂಶಪಾರಂಪರ್ಯದ ಹಕ್ಕು ಹೋದರೆ ನಷ್ಟವಿಲ್ಲ. ಕಾಲಕ್ಕೆ ಅನುವಾಗಿ ನಡೆದುಕೊಳ್ಳಬೇಕು ಎಂದು ಗ್ರಾಮಾಧಿಕಾರಿಗಳ ಸಮ್ಮೇಳನ ಉದ್ಘಾಟನೆ ಮಾಡುತ್ತಾ ಮದರಾಸಿನ ರೆವಿನ್ಯೂ ಮಂತ್ರಿ ಶ್ರೀ ಸೀತಾರಾಮರೆಡ್ಡಿಯವರು ಬೆಂಗಳೂರಿನಲ್ಲಿ ಹೇಳಿದರು.

ಅಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯಂರವರು ಮಾತನಾಡುತ್ತ ಹಳ್ಳಿದಾರಿಪದ್ಧತಿಯನ್ನು ಕೊನೆಗಾಣಿಸಬೇಕೆಂದೂ ಹೇಳುವುದು ಬಹುಭಾಗ ಸತ್ಯಾಂಶಕ್ಕೆ ದೂರವಾದುದೆಂದು ಹಾಗೆ ಅದಲ್ಲಿ ಅವರಿಗೆ ಪರಿಹಾರ ವಿಶೇಷವಾಗಿ ಕೊಡಬೇಕಾದುದರಿಂದ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯಿಂದ ಸಾಧ್ಯವೇ ಎಂಬುದನ್ನು ಗಮನಿಸಬೇಕಾಗಿದೆ ಎಂದು ಹೇಳಿದರು

ವಿದ್ಯಾಸಮ್ಮೇಳನ

ಮಂಡ್ಯದಲ್ಲಿ ಈ ತಿಂಗಳು ೨೬ನೇ ತಾರೀಖು ನಡೆಯಬೇಕಾಗಿದ್ದ ಸಂಸ್ಥಾನ ವಿದ್ಯಾಸಮ್ಮೇಳನವು ಶ್ರೀಮನ್ಮಹಾರಾಜರವರ ಅಸ್ವಸ್ಥತೆಯನಿಮಿತ್ತ ಜನವರಿ ತಿಂಗಳಿಗೆ ಮುಂದಕ್ಕೆ ಹಾಕಲಾಗಿದೆ.

ಸಹಕಾರ ಸಂಘಗಳ ಆಡಿಟ್

ಸಂಸ್ಥಾನದಲ್ಲಿರುವ ಸರ್ಕಲ್ ಮತ್ತು ವಿವಿಧೋದ್ದೇಶ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಲು ಪೂರ್ತಾ ಕಾಲದ ಆಡಿಟ್ ಮತ್ತು ಸಿಬ್ಬಂದಿಯನ್ನು ಪ್ರತ್ಯೇಕವಾಗಿ ನೇಮಿಸಿಕೊಳ್ಳುವ ಸಲಹೆಯು ಸರ್ಕಾರದ ಮಂಜೂರಾತಿ ಪಡೆದಿದೆ ಸಂಸ್ಥಾನಗಳಲ್ಲಿ ೪೯ ಸರ್ಕಲ್ ಮತ್ತು ೨೨ ವಿವಿಧೋದ್ದೇಶ ಸಹಕಾರ ಸಂಘಗಳಿವೆ ಪ್ರತಿ ತಾ॥ ಸಹಕಾರಸಂಘದಿಂದ ೧೨೦ ರೂ ಸರ್ಕಲ್ ಸಹಕಾರಸಂಘದಿಂದ ೬೦ ರೂ ಗಳನ್ನು ಆಡಿಟ್ ಫೀ ವಸೂಲ್ಮಾಡಬಹುದೆಂದು ಆಜ್ಞೆಯಾಗಿರುವುದರಿಂದ ಈ ಯೋಜನೆಯು ಸ್ವಪರಿಪೂರ್ಣತೆಯಿಂದ ಕೂಡಿರುವುದು

ಪೌರಸಭೆಯಲ್ಲಿ ಹಣವಿಲ್ಲ

ಹಾಸನ ಪೌರಸಭೆಯು ಕಂಟ್ರಾಕ್ಟರುಗಳಿಗೆ ಕೊಟ್ಟಿರುವ ೩ ಚೆಕ್ಕುಗಳು ಟ್ರಜರಿಯಲ್ಲಿ ಹಣವಿಲ್ಲವೆಂದು ತಿರಸ್ಕೃತವಾಗಿವೆಯೆಂದು ವರದಿಯಾಗಿದೆ ಕೇವಲ ೨೪ ರೂಪಾಯಿನ ಚೆಕ್ಕು ಸಹ ತಿರಸ್ಕೃತವಾಗಿದೆ.

ಟೌನ್ ಪೌರಸಭೆಯ ಆಡಳಿತದಲ್ಲಿ ಈ ರೀತಿಯಾಗುವುದು ಅತ್ಯಂತ ಶೋಚನೀಯ ತಮ್ಮ ಲೆಕ್ಕದಲ್ಲಿ ಹಣವಿದೆಯೋ ಇಲ್ಲವೋ ಗಮನಿಸಿ ಚೆಕ್ಕುಗಳನ್ನು ಕೊಡಬೇಕಾಗಿತ್ತು ಚೆಕ್ಕುಗಳನ್ನು ಕೊಟ್ಟದ್ದಲ್ಲಿ ಅದು ತಿರಸ್ಕೃತವಾಗದಂತೆ ನೋಡಿಕೊಳ್ಳಬೇಕಾದುದು ಪೌರ ಸಭೆಯ ಕರ್ತವ್ಯ. ಸರ್ಕಾರದವರು ಈ ವಿಷಯವನ್ನು ಕೂಡಲೇ ವಿಮರ್ಶಿಸಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಕ. ಸಂಪಾದಕ.

ನೈಜಾಮರ ಅರಮನೆ ಮಾರಾಟ

ದೆಹಲಿಯಲ್ಲಿರುವ ನೈಜಾಮರ ಅರಮನೆಯನ್ನು ಮಾರಬೇಕೆಂದು ಹೈದರಾಬಾದು ಸರ್ಕಾರವು ನಿಶ್ಚಯಿಸಿರುವುದಾಗಿ ತಿಳಿದುಬಂದಿದೆ ಈಗ ವರ್ಷಯಾನಾ ಅದಕ್ಕಾಗಿ ಸರ್ಕಾರದಿಂದ ಒಂದು ಲಕ್ಷ ರೂಪಾಯಿಗಳು ವೆಚ್ಚವಾಗುತ್ತಲಿದೆ. ಈ ಅರಮನೆಯನ್ನು ಮಾರಿ ಬಂದ ಹಣವನ್ನು ಅಭಿವೃದ್ಧಿಕಾರ್ಯಗಳಿಗಾಗಿ ಉಪಯೋಗಿಸಲಾಗುವುದೆಂದು ಹೇಳಲಾಗಿದೆ.

ಪಾಕಿಸ್ಥಾನದ ಬೆಂಬಲವಿಲ್ಲ

ವಿಶ್ವಸಂಸ್ಥೆಗೆ ಟಿಬೆಟ್ ಮಾಡಿರುವ ದೂರಿಗೆ ಪಾಕಿಸ್ಥಾನವು, ಬೆಂಬಲವೀಯದೆ ತಟಸ್ಥವಾಗಿರುವುದೆಂದು ತಿಳಿಯಬರುತ್ತದೆ.

ಸಕ್ಕರೆ ವ್ಯವಹಾರದಲ್ಲಿ ಅವ್ಯವಸ್ಥೆಯುಂಟಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ಮಿ॥ ತ್ಯಾಗಿಯವರು ಮಾಡಿದ ಆರೋಪಣೆ ವಿಷಯದಲ್ಲಿ ವಿಚಾರಣೆ ನಡೆಸಲಾಗುವುದೆಂದು ಪ್ರಧಾನಿ ನೆಹರೂರವರು ಹೇಳಿರುವುದನ್ನು ಪ್ರತಿಭಟಿಸಿ ಆಹಾರ ಮಂತ್ರಿ ಮಿ॥ ಮುನ್ಷಿಯವರು ನೆಹರೂರವರಿಗೆ ಒಂದು ಪತ್ರವನ್ನು ಬರೆದಿರುವುದಾಗಿ ತಿಳಿಯಬಂದಿದೆ

ಸಕ್ಕರೆ ವ್ಯವಹಾರದಿಂದ ಭಾರತಕ್ಕೆ ಒಂದು ಕೋಟಿ ರೂಪಾಯಿಗಳ ನಷ್ಟವುಂಟಾಗಿದೆಯೆಂದು ಮಿ॥ ತ್ಯಾಗಿಯವರು ಆರೋಪಿಸಿರುವರು-

ಈ ವಿಷಯವನ್ನು ಪರಿಶೀಲಿಸುವುದಾಗಿ ನೆಹರೂರವರು ತಿಳಿಸಿರುವುದರಿಂದ, ಆಹಾರ ಮಂತ್ರಿಗಳಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಹೇಳಿದ ಹಾಗಾಗಿದೆ ಎಂದು ಶ್ರೀ ಮುನ್ಷಿಯವರು ತಮ್ಮ ಪತ್ರದಲ್ಲಿ ಬರೆದಿರುವುದಾಗಿ ತಿಳಿಯಬರುತ್ತದೆ.

ವಿಜ್ಞಾನಶಾಸ್ತ್ರ ಬೆಳವಣಿಗೆಗೆ ಪ್ರೋತ್ಸಾಹ ಕಡಮೆ

ಭಾರತದ ವಿಜ್ಞಾನಿಗಳಿಗೆ ಹೊರದೇಶದಲ್ಲಿ ದೊರೆಯುವಷ್ಟು ಪ್ರೋತ್ಸಾಹ ಸೌಕರ್ಯಗಳು ನಮ್ಮ ದೇಶದಲ್ಲಿ ದೊರೆಯದಿರುವುದು ವಿಷಾದಕರ. ಉದಾಹರಣೆಗೆ ಡಾ॥ ಹರೀಶ್‌ಚಂದ್ರ ಮತ್ತು ಡಾ॥ ಚಂದ್ರಶೇಖರ್‌ಗಳು ಅಮೆರಿಕಾ ಸರ್ಕಾರದಿಂದ ಪ್ರೋತ್ಸಾಹ,ನೆರವು ಪಡೆದು ಅಲ್ಲಿಯೇ ವಿಜ್ಞಾನ ಸಂಶೋಧನೆಗಳನ್ನು ಮಾಡುತ್ತಲಿರುವರು ಎಂದು ಆಗ್ರಾದಲ್ಲಿ ಮಾತನಾಡುತ್ತ ಡಾ॥ ಸಿ. ವಿ. ರಾಮನ್‌ರವರು ಹೇಳಿದರು

ಪ್ರಾಚೀನ ಸಾಹಿತ್ಯ ಮತ್ತು ಸಂಸ್ಕೃತಿಗೆ ನೆಲೆವೀಡಾದ ಚೈನಾಮೇಲೆ ಬಲಾತ್ಕಾರವನ್ನು ಉಪಯೋಗಿಸುವ ಮಾತನ್ನು ಕೇಳಿ ನನಗೆ ಅತ್ಯಂತ ದುಃಖವಾಗುತ್ತದೆ ಎಂದು ಅವರು ಹೇಳಿದರು.

● ವಾರ್ಸಾದಲ್ಲಿ ವಿಶ್ವಶಾಂತಿ ಕಾಂಗ್ರೆಸ್ ಅಧಿವೇಶನವು ಪ್ರಾರಂಭವಾಯಿತು ಚೈನಾದ ಉಪಪ್ರಧಾನಿ ಕುಮಾಜೋರವರು ಅಧ್ಯಕ್ಷತೆವಹಿಸಿದ್ದರು. ಭಾರತ ಪ್ರತಿನಿಧಿ ಡಾ॥ ಮದನ್ ಅತಾಲ್‌ರವರ ಮಾತನಾಡುತ್ತ ಅಮೆರಿಕಾ ಮತ್ತು ಬ್ರಿಟನ್ನು ಪ್ರಪಂಚದಲ್ಲೆಲ್ಲಾ ತಮ್ಮ ಸ್ವಾಮ್ಯವನ್ನು ಸಾಧಿಸಲೆತ್ನಿಸುತ್ತಲಿದೆಯೆಂದು ಹೇಳಿದರು.

● ಟಿ ನರಸೀಪುರದ ಹೈಸ್ಕೂಲಿನ ಕಟ್ಟಡ ಪ್ರಾರಂಭೋತ್ಸವವನ್ನು ಡಿಸೆಂಬರ್ ಮಾಹೆಯಲ್ಲಿ ಚುಂಚನಕಟ್ಟೆಯ ಬಳಿ ಕಾವೇರಿನದಿಗೆ ೩ ಲಕ್ಷ ರೂ. ಗಳ ವೆಚ್ಚದಿಂದ ಕಟ್ಟಲಾಗುವ ಸೇತುವೆಯ ಅಸ್ತಿಭಾರ ಮಹೋತ್ಸವವನ್ನು ಜನವರೀ ಎರಡನೇ ವಾರದಲ್ಲಿ ಶ್ರೀಮನ್ಮಹಾರಾಜರವರು ನೆರವೇರಿಸುವರು.

ಜಿಲ್ಲಾ ಬೋರ್ಡು ಕಛೇರಿಗೆ ಸಚಿವರ ಭೇಟಿ

ಮೈಸೂರು ನ. ೨೧

ಈಗಿನ ಪ್ರವಾಸದಿಂದ ನನಗೆ ಅಮಿತಾನಂದವುಂಟಾಗಿದೆ ಎಲ್ಲೆಡೆಯಲ್ಲಿಯೂ ಸೇವಾ ತತ್ಪರರಾಗಿರುವ, ತಮ್ಮ ಗ್ರಾಮಗಳನ್ನು ಉತ್ತಮ ರೀತಿಯಲ್ಲಿಟ್ಟುಕೊಂಡಿರಬೇಕೆಂಬ ಉತ್ಸಾಹ ಭರಿತರಾಗಿರುವ ಜನರನ್ನೇ ಈ ಜಿಲ್ಲೆಯಲ್ಲೆಲ್ಲಾ ನಾನು ನೋಡಿದೆ. ಆರೋಗ್ಯ, ವಿದ್ಯಾಭ್ಯಾಸ, ಸಂಚಾರ ಸೌಕರ್ಯಗಳು ನಮ್ಮ ದೇಶಾದ್ಯಂತ ಹೆಚ್ಚಾಗಿ, ಜನರಜೀವನ ಮಟ್ಟವು ಹೆಚ್ಚಿ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಬೇಕಾಗಿದೆ. ಜನರೆಲ್ಲರೂ ಸೇವಾತತ್ಪರರಾಗಿ ಹೊಸ ಹುರುಪಿನಿಂದ ಕೆಲಸಮಾಡಿದರೆ ಮಾತ್ರ ಇದು ಸಾಧ್ಯ ಇವೆಲ್ಲವೂ ಈ ಜಿಲ್ಲೆ ಜನರಲ್ಲಿ ಕಾಣಬರುತ್ತಲಿದೆ. ಎಂದು ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ನಿನ್ನೆ ಜಿಲ್ಲಾ ಬೋರ್ಡು ಭವನದಲ್ಲಿ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಸಚಿವರು ಭಾಷಣವನ್ನು ಮುಂದುವರಿಸುತ್ತ ಇನ್ನು ನಾವು ಮಾಡಬೇಕಾಗಿರುವ ಕೆಲಸಗಳು ನಮ್ಮ ಮುಂದೆ ಅಪಾರವಾಗಿವೆ ನೂರಾರು ವರ್ಷಗಳಿಂದ ಉಪೇಕ್ಷೆಯಿಂದ ರಾಜ್ಯಭಾರ ನಡೆದು ಹಳ್ಳಿಗಳಲ್ಲಿ ಜನರ ಜೀವನ ಮಟ್ಟವು ಬಹಳ ಕಡಮೆಯಲ್ಲಿದೆ. ಜನರಲ್ಲಿ ಧರ್ಮಬುದ್ಧಿಯನ್ನು ಹುಟ್ಟಿಸಿ ಹಣವನ್ನು ಸಂಗ್ರಹಿಸಿ ಜಿಲ್ಲೆಯಲ್ಲಿ ನಾನಾ ರೀತಿಯಲ್ಲಿ ಸೌಕರ್ಯಗಳನ್ನು ಕಲ್ಪಿಸುತ್ತಲಿರುವ ಜಿಲ್ಲಾ ಬೋರ್ಡು ಅದರ ಅಧ್ಯಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ವಿಶೇಷ ಅಭಿನಂದನಾರ್ಹರು ಅವರ ಆತುರತೆ ವಿವೇಚನಾಶಕ್ತಿ ಶ್ಲಾಘ್ಯನೀಯವಾಗಿವೆ ದಾಸ್ಯತ್ವದಿಂದ ನಾವು ಎಲ್ಲವನ್ನು ಮರೆತು, ಎಲ್ಲದರಲ್ಲಿಯೂ ಅಲಕ್ಷ್ಯದಿಂದ ಇದ್ದೆವು ನಮ್ಮ ಸಂಸ್ಕೃತಿಯು ಈಗ ಬೆಳೆಯಬೇಕಾಗಿದೆ ಈಗ ಜನರಲ್ಲಿ ತಮ್ಮ ಪ್ರಗತಿ ಮಾರ್ಗಕ್ಕಾಗಿ ಹೊಸ ಹುರುಪು ಹುಟ್ಟಿರುವುದು ನಮ್ಮ ದೇಶೋದ್ಧಾರಕ್ಕಾಗಿಯೇ ಈಗ ನಾವು ಹೋದೆಡೆಗಳಲ್ಲೆಲ್ಲಾ ಜನರು ನಾನಾ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಳ್ಳುತ್ತ ಸ್ವಾವಲಂಬಿಗಳಾಗಿರುವುದು ಕಂಡುಬರುತ್ತದೆ.

ಗ್ರಾಮಗಳಲ್ಲಿ ನೀರಿನ ಸರಬರಾಯಿಯ ಕಡೆ ಎಲ್ಲರೂ ಗಮನವೀಯಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೆರಡು ಭಾವಿಯನ್ನು ತೋಡಿಸಿ, ಒಂದು ಓವರ್ ಹೆಡ್‌ಟ್ಯಾಂಕ್ ಇಟ್ಟು ಅದರಿಂದ ನಲ್ಲಿಗಳ ಮೂಲಕ ನೀರು ಸರಬರಾಯಿಯಾಗುವಂತೆ ಮಾಡಬೇಕು. ಇದಕ್ಕೆ ೭॥ ಯಿಂದ ೧೦ ಸಾವಿರ ರೂ. ಗಳ ವರೆಗೆ ಖರ್ಚಾಗುವುದು ಈ ರೀತಿಯಾದ ಸಣ್ಣ ಯೋಜನೆಗಳು ಹಸ್ತಗತವಾಗುವಂತೆ ಭಾರಿ ಯೋಜನೆಗಳು ಹಸ್ತಗತವಾಗುವುದು ಕಷ್ಟವೆಂದು ನುಡಿದರು.

ಪ್ರಾರಂಭದಲ್ಲಿ ಉಪಹಾರವಾದನಂತರ ಶ್ರೀ ಎಸ್. ಸಿ. ದೇವರಾಜೇ ಅರಸರು ಶ್ರೀ ವೆಂಕಟಸುಬ್ಬಯ್ಯನವರು ಸಚಿವರು ಜಿಲ್ಲಾ ಭವನಕ್ಕೆ ಬಂದಿದ್ದಕ್ಕೆ ಅವರನ್ನು ವಂದಿಸಿ, ಸ್ವಾಗತ ಭಾಷಣಮಾಡಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಚನ್ನಬಸಪ್ಪನವರು, ಈಗ್ಗೆ ೩॥ ವರ್ಷಗಳಿಂದ ಜಿಲ್ಲಾಬೋರ್ಡು ಮಾಡಿರುವ ಕಾರ್ಯಕ್ರಮವನ್ನೆಲ್ಲಾ ವಿವರಿಸಿ ಮುಂದೆ ಏನೇನು ಮಾಡಬೇಕೆಂದಿರುವ ಅಂಶಗಳನ್ನು ಸಚಿವರ ಗಮನಕ್ಕೆ ತಂದು ಸರ್ಕಾರದ ಸಹಕಾರವನ್ನು ಕೋರಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮೈಸೂರು ಜಿಲ್ಲೆಯಲ್ಲಿ ಸರ್ಕಾರದ ಮತ್ತು ಹೆಚ್ಚಾಗಿ ಪ್ರಜೆಗಳ ಸಹಕಾರದಿಂದ ಆರೋಗ್ಯ, ವಿದ್ಯಾಭ್ಯಾಸ ಮತ್ತು ಸಂಚಾರ ಸೌಕರ್ಯ ಅಂದರೆ ರಸ್ತೆಗಳ ನಿರ್ಮಾಣಗಳಲ್ಲಿ ಯಾವರೀತಿಯಾಗಿ ಪ್ರಗತಿ ಸಾಧಿಸಲಾಗಿದೆಯೆಂಬುದನ್ನು ವಿವರಿಸುತ್ತ, ಈಗಾಗಲೇ ಗ್ರಾಮಾಂತರಗಳಲ್ಲಿ [illegible] ಮೈಲಿ ರಸ್ತೆ ಮಾಡಿಸಿರುವುದು, ೯ ಹೈಸ್ಕೂಲುಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸ ಸೌಕರ್ಯಗಳನ್ನು ಕಲ್ಪಿಸಿರುವುದು, ನೂತನ ರೀತಿಯ ಆಸ್ಪತ್ರೆಗಳನ್ನು ಸ್ಥಾಪಿಸಿರುವುದು. ಸ್ಕೂಲು, ಆಸ್ಪತ್ರೆ ಮುಂತಾದುವುಗಳಿಗೆ ದಾನಿಗಳ ಸಹಾಯದಿಂದ ಕಟ್ಟಡಗಳನ್ನು ಕಟ್ಟಿಸಿರುವುದನ್ನು ತಿಳಿಸಿದರು.

ಜಿಲ್ಲೆಯಲ್ಲೆಲ್ಲಾ ಸ್ಕೂಲು, ಆಸ್ಪತ್ರೆ ಮುಂತಾದುವುಗಳಿಗೆಲ್ಲಾ ಕಟ್ಟಡಕಟ್ಟಲು, ಸಾರ್ವಜನಿಕರು ದ್ರವ್ಯಸಹಾಯಮಾಡಲು ಮುಂದೆ ಬರುತ್ತಲಿರುವುದರಿಂದ ಹತ್ತಾರು ವರ್ಷಗಳಲ್ಲಿ ಮಾಡುವ ಕೆಲಸಗಳನ್ನು ಒಂದೆರಡು ವರ್ಷಗಳಲ್ಲಿಯೇ ಮಾಡಲು ಸಾಧ್ಯವಾಗುತ್ತದೆ. ಸರ್ಕಾರದವರು ಈ ಕಾರ್ಯಗಳಿಗೆ ಪ್ರತಿವರ್ಷವೂ ಹಣವನ್ನು ಕೊಡುತ್ತಲಿರುವುದಕ್ಕೆ ಬದಲಾಗಿ ಏಕಕಾಲದಲ್ಲಿಯೇ ೨೦-೩೦ ಲಕ್ಷ ರೂ. ಗಳನ್ನು ಸಾಲದ ರೂಪವಾಗಿ ಸರ್ಕಾರದ ಮೂಲಕವೋ ಅಥವಾ ನೇರವಾಗಿಯೋ ಜಿಲ್ಲಾ ಬೋರ್ಡು ಪಡೆದು ಒಂದೆರಡು ವರ್ಷಗಳಲ್ಲಿಯೇ ಈ ಕಾರ್ಯಗಳನ್ನೆಲ್ಲಾ ಮಾಡಲು ಸರ್ಕಾರವು ಅನುಮತಿಯೀಯಬೇಕೆಂದೂ ಈ ಹಣವನ್ನು ತೀರಿಸಲು, ಸರ್ಕಾರವು ಪ್ರತಿವರ್ಷವೂ ಕೊಡುವ ಗ್ರಾಂಟನ್ನು ಸಾಲಕ್ಕೆ ಕಟ್ಟಬಹುದೆಂದು ತಿಳಿಸಿದರು ಇದೇ ರೀತಿ ಯಾವ ಗ್ರಾಮಗಳು ವಿದ್ಯುಚ್ಛಕ್ತಿಬೇಕೆಂದು ಕೇಳಿ, ಖರ್ಚಿನಲ್ಲಿ ಅರ್ಧವನ್ನು ಕೊಡಲು ಸಿದ್ಧವಿದೆಯೋ ಆ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬಹುದೆಂದು ತಿಳಿಸಿದರು

ತಮ್ಮ ಸಹೋದ್ಯೋಗಿಗಳಲ್ಲಿ ಆಲೋಚನೆಮಾಡಿ ಈ ಸಲಹೆಗಳನ್ನು ಕಾರ್ಯಗತಮಾಡಲು ತಾವು ನೆರವಾಗುವುದಾಗಿ ಸಚಿವರು ತಮ್ಮ ಭಾಷಣದಲ್ಲಿ ನುಡಿದರು.

ವಿರಾಮ ವೇತನ

ಭಾರತದ ಕೊನೆಯ ಗೌರ್ನರ್ ಜನರಲ್‌ರವರಿಗೆ ಮತ್ತು ಮುಂದೆ ನಿವೃತ್ತರಾಗುವ ರಾಷ್ಟ್ರಾಧ್ಯಕ್ಷರಿಗೆ ವರ್ಷವೊಂದಕ್ಕೆ ೧೫೧೦೦ ರೂ. ಗಳ ವಿರಾಮ ವೇತನವನ್ನು ಮಂಜೂರ್ಮಾಡುವ ಮಸೂದೆಯು ನಿನ್ನೆ ಪಾರ್ಲಿಮೆಂಟಿನಲ್ಲಿ ಮಂಡಿಸಲಾಯಿತು. ತಾವು ಮಂತ್ರಿ ಪದವಿಯಲ್ಲಿರುವವರೆಗೆ ಈ ವಿರಾಮ ವೇತನವನ್ನು ತಾವು ತೆಗೆದುಕೊಳ್ಳುವುದಿಲ್ಲವೆಂದು ಶ್ರೀ ಸಿ. ರಾಜಗೋಪಾಲಾಚಾರಿಯವರು ತಿಳಿಸಿದರು.

ರಾಜಘಾಟಿಗೆ ಭೇಟಿ

ನೇಪಾಳ ಮಹಾರಾಜರು ತಮ್ಮ ಪತ್ನಿ ಪುತ್ರ, ಪರಿವಾರದೊಡನೆ ನಿನ್ನೆ ರಾಜಘಾಟಿಗೆ ಭೇಟಿಯಿತ್ತು ಮಹಾತ್ಮರ ಸಮಾಧಿಗೆ ಪುಷ್ಪಗಳನ್ನರ್ಪಿಸಿದರು.

ಪ್ರತಿಘಟನೆ ನಿಂತಿತು

ಬೀರ್‌ಗಂಜಿನಲ್ಲಿ ನೇಪಾಳಿ ಕಾಂಗ್ರೆಸ್ ಸೈನ್ಯಗಳು ತಮ್ಮ ಪ್ರತಿಭಟನೆಯನ್ನು ನಿಲ್ಲಿಸಿವೆ. ಸರ್ಕಾರಿ ಸೈನ್ಯಗಳು ನಗರವನ್ನೆಲ್ಲಾ ವಶಪಡಿಸಿಕೊಂಡಿವೆ ಕಾಂಗ್ರೆಸ್ ಸೈನ್ಯದಲ್ಲಿ ಶಸ್ತ್ರಾಸ್ತ್ರಗಳ ಅಭಾವವೇ ಇದಕ್ಕೆ ಮುಖ್ಯ ಕಾರಣವೆಂದು ಹೇಳಲಾಗಿದೆ. ೯ ದಿನಗಳ ಹಿಂದೆ ಬೀರ್‌ಗಂಜಿನಲ್ಲಿ ಸ್ಥಾಪಿತವಾದ ಹಂಗಾಮಿ ಸರ್ಕಾರವು ಕೊನೆಗೊಂಡಿತು

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾಗರಿಯಾದ ಗುಣವುಳ್ಳವು ! ಬಹುಕಾಲ ಬಾಳಿಕೆ ಬರುವುವು !!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೇಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು.

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಂಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ,

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೨—೧೧—೧೯೫೦ನೇ ಬುಧವಾರ [ಸಂಚಿಕೆ ೭೦

ಆಹಾರ ಚರ್ಚೆಯಲ್ಲಿ ಕಾಂಗ್ರೆಸ್ ಸದಸ್ಯರ ಪಾತ್ರ

ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಜರೂರು ಸಭೆ

ಟೀಕೆಮಾಡುವುದು ಪಕ್ಷದ ಶಿಸ್ತಿಗೆ ವಿರೋಧ

ಈಗಿನ ಸರ್ಕಾರದ ಆಹಾರ ನೀತಿಗೆ ಪಾರ್ಲಿಮೆಂಟಿನ ಪೂರ್ಣ ಒಪ್ಪಿಗೆಯನ್ನು ಪಡೆಯಲೋಸುಗ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಪಕ್ಷದ ಜರೂರು ಸಭೆಯನ್ನು ಪ್ರಧಾನಿ ನೆಹರೂರವರು ಭಾನುವಾರ ನಡೆಯಲು ಕರೆದಿರುವರು.

ಶುಕ್ರವಾರ ಆಹಾರ ವಿಷಯದಲ್ಲಿ ವಿವಾದ ನಡೆದಿದುದರ ಫಲವಾಗಿ ಆಹಾರ ಮಂತ್ರಿ ಶ್ರೀ. ಕೆ.ಎಂ. ಮುನ್ಷಿಯವರಿಗೂ ಪ್ರಧಾನಿಯವರಿಗೂ ಪತ್ರವ್ಯವಹಾರ ನಡೆಯಿತು. ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯ ಪರಿಣಾಮವಾಗಿ ಶ್ರೀ ಮುನ್ಷಿಯವರು ಪ್ರಧಾನಿಯವರಿಗೆ ಬರೆದ ಕಾಗದದಲ್ಲಿ ತಮ್ಮ ಇಲಾಖೆಯ ಮತ್ತು ತಮ್ಮ ಕಾರ್ಯಗಳಲ್ಲಿ ತಮ್ಮ ಪಕ್ಷದ ಒಪ್ಪಿಗೆಯಿದೆಯೇ ಇಲ್ಲವೇ ಎಂಬುದು ಧೃಢಪಡಿಸಬೇಕಾದ ಅವಶ್ಯಕ ಕಂಡು ಬಂದಿರುವುದರಿಂದ ಪಕ್ಷದ ಸಭೆಯನ್ನು ತ್ವರಿತವಾಗಿ ಕರೆಯಬೇಕೆಂದು ಸೂಚಿಸಿದ್ದರು.

ಸಕ್ಕರೆ ವ್ಯವಹಾರದಲ್ಲಿ ಮಿ|| ತ್ಯಾಗಿಯವರು ಮಾಡಿದ ಅಪಾದನೆ ವಿಷಯವಾಗಿ ಅವರಿಗೂ ಪತ್ರವನ್ನು ಬರೆದು ಅವರು ಮಾಡಿರುವ ಅಪಾದನೆಗಳನ್ನು ಧೃಢಪಡಿಸಬೇಕೆಂದು ಕೋರಿರುವುದಾಗಿ ತಿಳಿಯಬರುತ್ತದೆ.

ಜನರಿಗೆ ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳುವಂತೆ ಮಾಡಬೇಕಾದರೆ ಅವರ ಆರೋಪಣೆಗಳಿಗೆ ಸರಿಯಾದ ಸಾಕ್ಷಿಗಳನ್ನು ಕೊಡಬೇಕೆಂದು ಕೇಳುವುದೇ ಉತ್ತಮ ಮಾರ್ಗವೆಂದು ಪ್ರಧಾನಿ ಹೇಳಿರುವುದಾಗಿ ತಿಳಿಯಬರುತ್ತದೆ. ಅಲ್ಲದೆ ಪಕ್ಷದ ನೀತಿಯನ್ನು ಪಕ್ಷದ ಸದಸ್ಯರು ಟೀಕಿಸಿದರೆ ಅವರು ಪಕ್ಷದ ಶಿಸ್ತಿಗೆ ವಿರೋಧವಾಗಿ ನಡೆದಂತಾಗುವುದರಿಂದ ಶಿಸ್ತನ್ನು ಅವರಿಗೆ ಮನವರಿಕೆ ಮಾಡಬೇಕಾಗಿದೆಯೆಂಬ ಉದ್ದೇಶದಿಂದ ಈ ಜರೂರು ಸಭೆ ಕರೆಯಲಾಗಿದೆ.

ನೇಪಾಳ ನೂತನರಾಜನಿಗೆ ಮನ್ನಣೆಯೆ ?

ನೇಪಾಳದಲ್ಲಿ ರಾಣಾ ಸರ್ಕಾರದವರು ಸಿಂಹಾಸನದ ಮೇಲೆ ಕೂರಿಸಿರುವ ೩ ವರ್ಷದ ಮಗುವನ್ನು ನೇಪಾಳದ ರಾಜನನ್ನಾಗಿ ಬ್ರಿಟಿಷ್ ಮನ್ನಣೆಯೀಯುವುದಕ್ಕೆ ವಿದೇಶಾಂಗ ಕಾರ್ಯದರ್ಶಿ ಮಿ|| ಬೆವಿನ್ನರು ಸಮ್ಮತಿ ತೋರಿಸಿರುವರೆಂದು ವರದಿಯಾಗಿದೆ.

ವಂಶಪಾರಂಪರ್ಯವಾಗಿ ಪ್ರಧಾನಿಪಟ್ಟದ ಹಕ್ಕು ರಾಣಾ ಕುಟುಂಬದವರದೇ ಆಗಿ, ಈಗ ಇನ್ನೂ ಅವರು ಅಧಿಕಾರದಲ್ಲಿರುವುದರಿಂದ, ಅವರ ಸರ್ಕಾರದ ಕಾರ್ಯಕಲಾಪಗಳು ನ್ಯಾಯಬದ್ಧವಾಗಿದೆಯೆಂದು ಈ ಮನ್ನಣೆ ದೊರೆಯುವುದೆಂದು ಹೇಳಲಾಗಿದೆ.

ಸಕ್ಕರೆ ಮತ್ತು ಗೋಧಿ ಪರಿಸ್ಥಿತಿ

ಸಕ್ಕರೆ ಮತ್ತು ಗೋಧಿ ದಾಸ್ತಾನಿನ ಪರಿಸ್ಥಿತಿ ಕಳವಳವನ್ನುಂಟುಮಾಡಿದೆ. ಮದರಾಸಿನಿಂದ ಈ ತಕ್ಷಣ ೩ ಸಾವಿರ ಟನ್ ಗೋಧಿ ಕೊಡಿಸಲು, ತಿಂಗಳಿಗೆ ೭೫೦ ಟನ್ ನಂತೆ ಸಕ್ಕರೆಯನ್ನು ಕೊಡಲು ಕೇಂದ್ರ ಸರ್ಕಾರವು ತಿಳಿಸಿದೆಯೆಂದು ಮೈಸೂರಿನ ಆಹಾರಮಂತ್ರಿ ಶ್ರೀ ಟಿ. ಮರಿಯಪ್ಪನವರು ಹೇಳಿರುವುದಾಗಿ ತಿಳಿಯಬಂದಿದೆ.

ಗೆರಿಲ್ಲಾ ಕಾರ್ಯಾಚರಣೆ

ಬೀರ್‌ಗಂಜ ನೇಪಾಳ ಸರ್ಕಾರದ ಕೈವಶವಾಗಿದೆ ಕಾಂಗ್ರೆಸ್ ಸೈನ್ಯವೆಲ್ಲವೂ ಈ ಪಟ್ಟಣವನ್ನು ಬಿಟ್ಟು ಹೊರಟುಹೋಗಿದೆ. ಇನ್ನು ಕಾಂಗ್ರೆಸ್ ಸೈನ್ಯಗಳು ಗೆರಿಲ್ಲಾ ಕಾರ್ಯಾಚರಣೆ ನಡೆಸುವುದಾಗಿ ನಿರೀಕ್ಷಿಸಲಾಗಿದೆ.

ಗ್ರಾಮಾಧಿಕಾರಿ ಸಮ್ಮೇಳನ

ಬೆಂಗಳೂರಿನಲ್ಲಿ ನಡೆದ ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ ವಂಶಪಾರಂಪರ್ಯವಾಗಿ ಬಂದಿರುವ ತಮ್ಮ ಹಕ್ಕನ್ನು ಮುಂದುವರಿಬೇಕೆಂದೂ ಹಾಗೇನಾದರೂ ಅದನ್ನು ಬದಲಾಯಿಸಿದಲ್ಲಿ ವಾರ್ಷಿಕ ಪೋಟಿಗೆಯ ಕನಿಷ್ಠಪಕ್ಷ ೩೦ ರಷ್ಟು ಮೊಬಲಗನ್ನು ಪ್ರತಿಫಲವಾಗಿ ಕೊಡಬೇಕಾದದ್ದು ನ್ಯಾಯಬದ್ಧವೆಂದೂ ನಿರ್ಣಯ ಮಾಡಿದೆ.

ಈ ವಿಷಯವನ್ನು ವಿಮರ್ಶಿಸಲು ಭೂಸುಧಾರಣಾ ಸಮಿತಿಯಲ್ಲಿ ತಮ್ಮ ಸಂಘದ ಪ್ರಾತಿನಿಧ್ಯವಿಲ್ಲದಿರುವುದರಿಂದ ಅವರ ಸಲಹೆಯನ್ನು ಒಪ್ಪಕೂಡದೆಂದೂ ನಿರ್ಣಯ ಮಾಡಿದೆ

ರೈಲ್ವೆ ಅಪಘಾತಗಳು

೧೯೫೦ನೇ ಜೂನ್ ತಿಂಗಳಿಂದ ಸೆಪ್ಟಂಬರ್‌ವರೆಗೆ ಭಾರತದಲ್ಲಿ ೬೫೩ ರೈಲು ಅಪಘಾತಗಳು ನಡೆದಿವೆಯೆಂದು ರೈಲ್ವೆ ಮಂತ್ರಿ ಶ್ರೀ ಕೆ. ಸಂತಾನಂರವರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ರಥೋತ್ಸವ

ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ರಥೋತ್ಸವವು ಇದೇ ಮಾಹೆ ೨೫ ನೇ ತಾರೀಖು ಶನಿವಾರ ಬೆಳಗ್ಗೆ ೮-೧೫ ಕ್ಕೆ ನಡೆಯುವುದು.

ಪೌರಸಭೆಯ ಅಧಿವೇಶನ

ಮೈಸೂರು ಪೌರಸಭೆಯ ಮಾಹೆಯಾನಾ ಅಧಿವೇಶನವು ಇದೇ ಮಾಹೆ ೩೦ ನೇ ತಾರೀಖು ಸಂಜೆ [illegible] ಗಂಟೆಗೆ ನಡೆಯುವುದು.

ಮೂಲ ಶಿಕ್ಷಣ ಸಲಹಾ ಸಮಿತಿ

ಸಂಸ್ಥಾನದಲ್ಲಿ ಮೂಲ ಶಿಕ್ಷಣ ಜಾರಿಗೆ ತರುವ ನಿಮಿತ್ತ ಸಲಹೆ ಕೊಡಲು ಮೈಸೂರು ಸರ್ಕಾರದವರು ವಿದ್ಯಾ ಇಲಾಖಾ ಡೈರೆಕ್ಟರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿರುವರು. ಸಮಿತಿಯಲ್ಲಿ ಶ್ರೀಗಳಾದ ಕೆ. ಸಂಪದ್ಗಿರಿರಾವ್, ಹೆಚ್. ಎಸ್. ದೊರೆಸ್ವಾಮಿ, ಎಸ್. ಕರಿಯಪ್ಪ, ಎ. ಸಿ. ದೇವೇಗೌಡ, ಕೃಷ್ಣಶರ್ಮ, ಶ್ರೀಮತಿ ಯಶೋಧರದಾಸಪ್ಪ ಮುಂತಾದವರಿರುವರು.

ಮಂತ್ರಿಮಂಡಲ ಸಭೆ

ಇಂದು ಮತ್ತು ನಾಳೆ ಮೈಸೂರು ಮಂತ್ರಿಮಂಡಲ ಸಭೆಯು ನಡೆಯಲಿದೆ. ಆಡಳಿತದ ಮುಖ್ಯ ವಿಷಯಗಳು ಮತ್ತು ಕೆಲವು ಉನ್ನತಾಧಿಕಾರಿಗಳ ವರ್ಗ ಮತ್ತು ನಿವೃತ್ತಿಯ ವಿಷಯಗಳು ಚರ್ಚಿಸಲಾಗುವುದೆಂದು ತಿಳಿಯಬರುತ್ತದೆ.

ಉಪನ್ಯಾಸಮಾಲೆ

ಭಾರತ ಸಂಸ್ಕೃತಿಯ ವಿಷಯದಲ್ಲಿ ಮೈಸೂರು ಸಾರ್ವಜನಿಕ ವಿಚಾರಸಂಸ್ಥೆಯ ಆಶ್ರಯದಲ್ಲಿ ಇಂದಿನಿಂದ ೬ ದಿನಗಳು ಪ್ರತಿದಿನ ಸಂಜೆ ೬ ಗಂಟೆಗೆ ಡಿ ಬನುಮಯ್ಯನವರ ಸ್ಕೂಲಿನಲ್ಲಿ ಮದ್ರಾಸಿನ ಎಸ್. ಆರ್. ದೊರೆಸ್ವಾಮಿ ಶಾಸ್ತ್ರಿಗಳು ಭಾಷಣ ಮಾಡುವರು.

● ಮೈಸೂರು ಪ್ರಾಂತ್ಯ ಕಾಂಗ್ರೆಸ್ ಕಾರ್ಯಸಮಿತಿಯು ೨೭ನೇ ತಾ|| ಸೇರಿ, ಸಚಿವ ಸಿದ್ದಲಿಂಗಯ್ಯನವರು ಇತ್ತಿರುವ ರಾಜೀನಾಮೆಯನ್ನು ಪರಿಶೀಲಿಸುವುದಾಗಿ ತಿಳಿಯಬಂದಿದೆ.

● ದೆಹಲಿ ಪ್ರಯಾಣಮಾಡಿದ್ದ ಶ್ರೀ ಕೆ.ಸಿ. ರೆಡ್ಡಿಯವರು ನಿನ್ನೆ ಮಧ್ಯಾಹ್ನ ಬೆಂಗಳೂರಿಗೆ ಹಿಂತಿರುಗಿದರು. ಇಂದು ಅವರು ಪತ್ರಿಕಾಗೋಷ್ಠಿ ಕರೆದಿರುವರು.

● ಮದರಾಸಿನ ಷೆರೀಫ್‌ರಾದ ಶ್ರೀ ಆರ್ ರಾಮನಾಥಚೆಟ್ಟಿಯಾರ್‌ರವರು ಮದರಾಸು ಕಾರ್ಪೋರೇಷನ್ನಿನ ಮುಂದಿನವರ್ಷದ ಮೇಯರಾಗಿ ಚುನಾಯಿತರಾಗಿದ್ದಾರೆ.

● ಹೈದರಾಬಾದಿಗೆ ಮೈಸೂರಿನಿಂದ ಕಳುಹಿಸಿದ್ದ ೧೦೦೦ ಪೋಲೀಸಿನವರನ್ನು ಹೈದರಾಬಾದು ತನ್ನ ಪೋಲೀಸುಶಾಖೆಗೆ ಸೇರಿಸಿಕೊಳ್ಳುವುದಾಗಿ ತಿಳಿಯಬರುತ್ತದೆ.

● ನೇಪಾಳದಲ್ಲಿ ದೊರೆ [illegible] ೩ ವರ್ಷದ ಮಗುವನ್ನು ಪಟ್ಟ ಕಟ್ಟಿರುವುದಕ್ಕೆ ಭಾರತ ಸರ್ಕಾರವು ಮನ್ನಣೆನ್ನೀಯುವುದಿಲ್ಲವೆಂದು ತಿಳಿಯಬರುತ್ತದೆ.

● ೧೦ ಕೋಟಿ ೨೫ ಲಕ್ಷ ರೂಪಾಯಿಗಳ ಆದಾಯ ತೆರಿಗೆಯನ್ನು ಕೊಡದೆ ಇದ್ದುದನ್ನು ಆದಾಯ ತೆರಿಗೆ ವಿಚಾರಣಾ ಸಮಿತಿಯು ಕಂಡು ಹಿಡಿದಿದೆ. ಅದರ ಪೈಕಿ ೭ ಕೋಟಿ ರೂ. ಗಳನ್ನು ಕೊಡಬೇಕಾದುದರಲ್ಲಿ ೪ ಕೋಟಿ ರೂ. ಗಳನ್ನು ವಸೂಲ್ಮಾಡಲು ನಿರ್ಧರಿಸಲಾಗಿದೆ. ಈಗ ವಸೂಲಾಗದ ೩ ಕೋಟಿ ರೂ. ಗಳನ್ನು ಇಲಾಖೆಯವರು ವಸೂಲ್ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಿರುವರು.

ಸಮಾಚಾರ

ನವಂಬರ್ ೨೨ ೧೧-೫೦ ಬುಧವಾರ

ಮೈಸೂರು ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳು

ಸಚಿವ ಶ್ರೀ. ಕೆ. ಟಿ. ಭಾಷ್ಯಂರವರು ಮೈಸೂರು ಜಿಲ್ಲಾ ಬೋರ್ಡ್ ಕಛೇರಿಗೆ ಭೇಟಿಯಿತ್ತು ಅಲ್ಲಿಯ ಕಾರ್ಯಕಲಾಪಗಳನ್ನು ಪರಿಶೀಲಿಸಿದಾಗ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಸಗಿರುವ ಕಾರ್ಯಗಳನ್ನೆಲ್ಲಾ ಸಚಿವರ ಅವಗಾಹನೆಗೆ ತಂದುದಲ್ಲದೆ ಒಂದು ಹೊಸ ಯೋಜನೆಯನ್ನು ಅವರ ಗಮನಕ್ಕೆ ತಂದು ಸರ್ಕಾರದವರು ಅದನ್ನು ಜಾಗ್ರತೆಯಾಗಿ ಪರಿಶೀಲಿಸಿ ಕಾರ್ಯಗತ ಮಾಡಬೇಕೆಂದು ಕೋರಿದರು.

ಜಿಲ್ಲೆಯಲ್ಲೆಲ್ಲಾ ರಸ್ತೆಗಳ ರಿಪೇರಿ, ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲುಗಳ, ಆಸ್ಪತ್ರೆಗಳ ಕಟ್ಟಡಗಳ ನಿರ್ಮಾಣ ಇವುಗಳು ಮುಖ್ಯವಾಗಿ ಆಗಬೇಕಾಗಿರುವ ತ್ವರಿತ ಕಾರ್ಯಗಳು. ಈ ಬಾಬುಗಳಿಗಾಗಿ ಸರ್ಕಾರದವರು ಪ್ರತಿವರ್ಷವೂ ನಿಗದಿಯಾದ ಮೊಬಲಗಿನ ಸಹಾಯವನ್ನು ಮಾಡುತ್ತಲಿರುವರು. ಈ ಹಣವು ಕೆಲವು ಇಲಾಖೆಗಳ ಮೂಲವೂ ವ್ಯಯವಾಗುತ್ತಲಿದೆ ಎರಡು ಮೂರು ವರ್ಷಗಳಿಂದ ಜಿಲ್ಲೆಯಲ್ಲಿ ಆಗಿರುವ ಪ್ರಗತಿಯನ್ನು ಪ್ರಜೆಗಳು ಗಮನಿಸಿ ತಮ್ಮ ತಮ್ಮ ಗ್ರಾಮಗಳ ಪ್ರಗತಿಗಾಗಿ ಹಣ ಸಹಾಯಮಾಡಲು ಸಿದ್ಧರಿರುವರು. ಜಿಲ್ಲಾ ಬೋರ್ಡಿನವರು ಪ್ರಜೆಗಳಿಂದ ಹಣವನ್ನು ಸ್ವೀಕರಿಸಿ ಅವರಿಗೆ ಸೌಕರ್ಯಗಳನ್ನು ಮಾಡಲು ಸಿದ್ಧರಾಗಿಲ್ಲದೆ ಪ್ರಜೆಗಳು ಖಿನ್ನಮನಸ್ಕರಾಗಿ ತಾವು ತಂದಿರುವ ಹಣವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವ ಪ್ರಮೇಯಗಳು ನಡೆಯಲಾರಂಭವಾಗಿವೆಯೆಂದು ಜಿಲ್ಲಾ ಬೋರ್ಡು ಅಧ್ಯಕ್ಷರು ಸಚಿವರ ಗಮನಕ್ಕೆ ತಂದರು.

ಜಿಲ್ಲಾ ಬೋರ್ಡ್ ಅಧ್ಯಕ್ಷರು ನೂತನ ಯೋಜನೆಯಲ್ಲಿ ಜಿಲ್ಲೆಯಲ್ಲೆಲ್ಲಾ ಆಗಬೇಕಾಗಿರುವ ಕೆಲಸ ಕಾರ್ಯಗಳಾವುವೆಂಬುದನ್ನು ಪಟ್ಟಿಹಾಕಿ ಅವುಗಳಿಗೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಅರಿತುಕೊಂಡು ತಕ್ಕ ಸಿಬ್ಬಂದಿಯೊಡನೆ ಒಂದೆರಡು ವರ್ಷಗಳಲ್ಲಿಯೇ ಈ ಕೆಲಸಗಳನ್ನೆಲ್ಲಾ ಪೂರೈಸಿ, ಪ್ರತಿ ವರ್ಷವೂ ಸ್ವಲ್ಪಸ್ವಲ್ಪ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಬದುಲು ಏಕಕಾಲದಲ್ಲಿಯೇ ಮಾಡಲು ಉದ್ಯುಕ್ತರಾಗಬೇಕೆಂದು ಅವರು ಹೇಳಿರುವರು.

ಗ್ರಾಮಾಂತರ ಜನರು ಈ ಅಭಿವೃದ್ಧಿ ಕಾರ್ಯಗಳಿಗೆ ಎಷ್ಟು ಹಣವನ್ನು ಕೊಡಲಿರುವರೋ ಅವುಗಳನ್ನು ತೆಗೆದುಕೊಂಡು — ಉಳಿಕೆ ಹಣವನ್ನು ಯಾವುದಾದರೂ ಸಂಸ್ಥೆಯಿಂದ, ಸರ್ಕಾರದ ಸಹಾಯದಿಂದ, ಸಾಲವಾಗಿ ಪಡೆದು ಎಲ್ಲ ಕಾರ್ಯಗಳನ್ನು ಮಾಡಬೇಕೆಂಬುದಾಗಿ ಅವರು ಅಭಿಪ್ರಾಯಪಡುತ್ತಾರೆ ಸರ್ಕಾರವೇ ತಾನ ಪ್ರತಿ ವರ್ಷವೂ ಈ ಅಭಿವೃದ್ಧಿ ಕಾರ್ಯಗಳಿಗೆ ಕೊಡುವ ಹಣವನ್ನು ಈ ಸಾಲಕ್ಕೆ ಕೊಡುತ್ತ ಬಂದಲ್ಲಿ ಹತ್ತಾರು ವರ್ಷಗಳಲ್ಲಿ ಸಾಲವೆಲ್ಲವೂ ತೀರಿಹೋಗುವುದು

ಈ ನೂತನ ಯೋಜನೆಯಪ್ರಕಾರ ಸರ್ಕಾರಕ್ಕೆ ಯಾವರೀತಿಯಾದ ಹೆಚ್ಚಿಗೆ ಭಾರವು ಬೀಳುವುದಿಲ್ಲ. ಅದು ಪ್ರತಿ ವರ್ಷವೂ ಕೊಡುವ ಹಣವನ್ನು ಸಾಲಕ್ಕೆ ಕಟ್ಟಬಹುದು. ಅಧ್ಯಕ್ಷರು ಹೇಳಿರುವಂತೆ ಸುಮಾರು ೨೦-೩೦ ಲಕ್ಷ ರೂಪಾಯಿಗಳ ಸಾಲವನ್ನು ಸರ್ಕಾರವು ಕೊಡಬೇಕಾಗುವುದು ಅಥವಾ ವಿಮಾಕಂಪೆನಿ ಮುಂತಾದುವುಗಳಿಂದ ನೇರವಾಗಿ ಜಿಲ್ಲಾ ಬೋರ್ಡು ಸಾಲ ಪಡೆಯಲು ಸರ್ಕಾರ ಅನುಮತಿಯೀಯಬೇಕು. ಇದರಿಂದ ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳು ತ್ವರಿತವಾಗಿ ನಡೆಯುವುವು. ಈ ಯೋಜನೆಯನ್ನು ಸರ್ಕಾರದವರು ಪರಿಶೀಲಿಸಿ ಅದನ್ನು ಜಾಗ್ರತೆಯಾಗಿ ಕಾರ್ಯಗತಮಾಡಲು ಜಿಲ್ಲಾ ಬೋರ್ಡಿಗೆ ತನ್ನ ನೇರವನ್ನು ನೀಡುವುದು ಅದರ ಕರ್ತವ್ಯವಾಗಿರುತ್ತದೆ.

ಜಿಲ್ಲಾ ಬೋರ್ಡು ಅಧ್ಯಕ್ಷರು ಹೇಳಿರುವಂತೆ ಈ ನೂತನ ಯೋಜನೆಯನ್ನು ಒಂದು ಜಿಲ್ಲೆಯಲ್ಲಿ ಕಾರ್ಯಗತಮಾಡಿ, ಅದರಿಂದ ಜನರಿಗೆ ಅನೇಕ ಸೌಕರ್ಯಗಳಾಗುತ್ತವೆಂಬುದು ತಿಳಿದುಬಂದಲ್ಲಿ ಇದೇ ರೀತಿಯಾಗಿ ಇತರ ಜಿಲ್ಲೆಗಳಲ್ಲೂ ಈ ಯೋಜನೆಯನ್ನು ಜಾರಿಗೆ ತರಬಹುದು.

ಪತ್ರವ್ಯವಹಾರ

ಸ್ವಾಮಿ,—

ಮೈಸೂರು ಟ್ರಸ್ಟ್‌ಬೋರ್ಡಿನವರು ಆಕಾಶವಾಣಿಯ (ಎ ಐ ಆರ್.) ಬಳಿ ಕಟ್ಟಿಸಿ ಎಂಟು ಮನೆಗಳನ್ನು ಹತ್ತು ತಿಂಗಳ ಹಿಂದೆ ಹರಾಜು ಮೂಲಕ ಮಾರಾಟ ಮಾಡಿದರಷ್ಟೆ. ಆಗ ಟ್ರಸ್ಟ್‌ಬೋರ್ಡಿನ ಛೇರ್ಮನ್ನರು ಮನೆಗಳಿಗೆ ತಕ್ಷಣ ಎಲ್ಲ ಅನುಕೂಲಗಳನ್ನು ಕೊಡಿಸಲಾಗುವುದೆಂದು ತಿಳಿಸಿದರು ಇದುವರೆಗೂ ಆ ಮನೆಗಳಿಗೆ ನೀರನ್ನಾಗಲಿ ಇತರ ವ್ಯವಸ್ಥೆಗಳನ್ನಾಗಲಿ ಮಾಡಿಲ್ಲ. ಮನೆಗಳೆಲ್ಲ ಪಾಳುಬಿದ್ದಿವೆ. ಕಳ್ಳಕಾಕರರು ಸಾಮಾನುಗಳನ್ನೆಲ್ಲಾ ಅಪಹರಿಸುತ್ತ ಹಾಳುಮಾಡುತ್ತಿದ್ದಾರೆ ಇದರಿಂದ ಕೊಂಡವರಿಗೆ ಆಗುತ್ತಿರುವ ಕಷ್ಟನಷ್ಟಗಳನ್ನು ವರ್ಣಿಸುವಂತಿಲ್ಲ.

ಮುನಿಸಿಪಾಲಿಟಿಯವರನ್ನು ಕೇಳಿದರೆ "ಆ ಮನೆಗಳನ್ನು ಕಟ್ಟಿ ನಿಯಮಾನುಸಾರವಾಗಿ ಲೇಔಟುಗಳನ್ನು ಟ್ರಸ್ಟ್‌ಬೋರ್ಡಿನವರು ಹಾಕಿಲ್ಲ- ಆದರಿಂದ ಅದನ್ನು ನಾವು ಮುನಿಸಿಪಲ್ ಆಡಳಿತಕ್ಕೆ ತೆಗೆದುಕೊಳ್ಳುವುದಕ್ಕಾಗಲಿ, ತೆರಿಗೆ ಹಾಕಿ ಅನುಕೂಲಗಳನ್ನು ಕಲ್ಪಿಸಿಕೊಡುವುದಾಗಲಿ ಸಾಧ್ಯವಿಲ್ಲ" ಎಂದು ತಿಳಿಸುತ್ತಾರೆ. ಟ್ರಸ್ ಬೋರ್ಡಿನವರನ್ನು ಕೇಳಿದರೆ 'ನಮ್ಮ ಕೆಲಸ ಎಲ್ಲ ಮುಗಿಯಿತು. ಮನೆ ಮಾರಿದಾಗಲೆ ನಮ್ಮ ಜವಾಬ್ದಾರಿ ಮುಗಿಯಿತು. ಇತರರನ್ನ ನೋಡಿ ಅನುಕೂಲಮಾಡಿಸಿಕೊಳ್ಳಿ' ಎಂದು ತಿಳಿಸುತ್ತಾರೆ. ಆದರೆ ಅರ್ಜಿಗಳನ್ನು ಆ ಬಗ್ಗೆ ಹಾಕಿಕೊಂಡರೆ ಎಂಡಾರ್ಸ್‌ಮೆಂಟುಗಳನ್ನು ಕೊಡುವುದಿಲ್ಲ ಅನುಕೂಲಗಳನ್ನೂ ಮಾಡಿ ಕೊಡುವುದಿಲ್ಲ ಇನ್ನು ನಾವು ಯಾರನ್ನು ಕೇಳುವುದು? ಆಡಳಿತ ಸಂಸ್ಥೆಗಳೇ ಹೀಗೆ ಮಾಡಿದರೆ ಟಾಕ್ಸ್‌ಪೇಯರುಗಳು ಬದುಕುವುದು ಹೇಗೆ? ಇದುವರೆವಿಗೆ ಮನೆ ಕೊಂಡಿರುವವರಿಗೆ ಆಗಿರುವ ನಷ್ಟವನ್ನೂ ಕಷ್ಟವನ್ನೂ ಗಮನಿಸಿ, ಕೂಡಲೇ ಸರ್ಕಾರದವರು ಈ ವಿಷಯದಲ್ಲಿ ಕೈಹಾಕಿ ಸರಿಪಡಿಸುವರೆಂದು ನಂಬಿದೆ.

ಪಿ ಆರ್. ನಾಗೇಶರಾವ್.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯-೪೬ ಮೀಟರು
ನವಂಬರ್ ೨೩ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಬಿ. ನಾಗೇಂದ್ರಪ್ಪ (ಕ್ಲಾರಿಯೊನೆಟ್) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಕೊಳಲು ೧-೪೫ ಹಿಂದೀ ಶಿಕ್ಷಣ ೭-೦ ಚಿತ್ರ, ಸಂಗೀತ ೨-೩೦ ಮುಕ್ತಾಯ.

ಸಂಜೆ ೫-೩೦ ಹೆಚ್.ವಿ. ವೆಂಕಟೇಶಯ್ಯ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ. ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆಗಳು (ಹಿಂದಿ) ೭-೫ ತಲಕ್ ಮಹಮದ್ (ರಿ) ೭-೧೫ ಬಿ. ನಾಗೇಂದ್ರಪ್ಪ (ಕ್ಲಾರಿಯೊನೆಟ್) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಮಲ್ಲಿಕಾರ್ಜುನಪ್ಪ (ವಚನಗಾನ) ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಹೆಚ್ ವಿ. ವೆಂಕಟೇಶಯ್ಯ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕ್ಲಬ್‌ಪ್ರೋಗ್ರಾಂ ೧೦-೦ ಮುಕ್ತಾಯ.

ಹೊಸ ಕೈಗಾರಿಕೆ

ಭಾರತದಲ್ಲಿ ಪ್ರಥಮವಾಗಿ, ಕಚ್ಚಾಫಿಲಂ ತಯಾರಿಕೆಯು ಮೈಸೂರಿನಲ್ಲಿ ಪ್ರಾರಂಭವಾಗುವುದು. ಈ ಕೈಗಾರಿಕೆಗೆ ೨ ಕೋಟಿ ರೂ ಗಳ ಯೋಜನೆಯನ್ನು ಕೈಗಾರಿಕಾ ಸಚಿವ ಶ್ರೀ ಹೆಚ್.ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಕಚ್ಚಾಫಿಲಂ ಸಲಹಸಮಿತಿ ಸಭೆ ಪರಿಶೀಲಿಸಿತು. ಈ ಕೈಗಾರಿಕಾ ಕೇಂದ್ರವನ್ನು ಕೃಷ್ಣರಾಜಸಾಗರದ ಬಳಿ ಸ್ಥಾಪಿಸಲಾಗುವುದು.

ರಣಜಿತ್
23-11-50 ರಿಂದ 8 ದಿನ ಮಾತ್ರ
ದಿನವಹಿ 3 ಪ್ರದರ್ಶನಗಳು
† ಸುರೇಶ್ † ಮಧುಬಾಲ
ಪಾತ್ರವಹಿಸಿರುವ
ಕರ್‌ದಾರ್‌ರವರ :
ದುಲಾರಿ
DULARI
ಬೆಳಗಿನ ಪ್ರದರ್ಶನ 24-11-50 ರಿಂದ
3 ದಿನಗಳು ಮಾತ್ರ
ಯಾಕೂಬ್‌ರವರ
ಆಯಿಯೇ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್ ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ದಿನಪತ್ರಿಕೆ ೨ ಪೈ ದಿನಪತ್ರಿಕೆ Phone: 514

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೧೧—೧೯೫೦ನೇ ಗುರುವಾರ [ಸಂಚಿಕೆ ೭೧

ಸಂಸ್ಥಾನ ಮಂತ್ರಿಗಳಿಗೆ ಪ್ರಧಾನಿಯವರ ಸೂಚನೆ

ಸರ್ಕಾರದ ಸಾರ್ವಜನಿಕ ನೀತಿಯ ವಿಷಯ ಮಾತನಾಡುವುದನ್ನು ಕಡಮೆ ಮಾಡಿ

ರೆಗ್ಯುಲೇಟೆಡ್ ಮಾರ್ಕೆಟ್

ಮೈಸೂರು ನ ೨೩

ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ತಾವು ಭಾಗವಹಿಸುವುದಿಲ್ಲವೆಂದು ಕಾಗದ ಬರೆದಿದ್ದ ಮೈಸೂರು ನಗರದ ಗ್ರೇನ್ ಮರ್ಚೆಂಟ್ಸ್ ಅಸೋಸಿಯೇಷನ್ನವರನ್ನು ನಿನ್ನೆ ಸಂಜೆ ಮೈಸೂರು ಜಿಲ್ಲಾಧಿಕಾರಿಗಳು ಬರಮಾಡಿಕೊಂಡು ಮಾತುಕಥೆ ನಡೆಸಿದರು. ಸಂಸ್ಥಾನ ಚೀಫ್ ಮಾರ್ಕೆಟಿಂಗ್ ಆಫೀಸರ್ ಶ್ರೀ ಎಸ್. ಎಸ್. ಹಿರಿಯಣ್ಣಯ್ಯ. ಅಸಿಸ್ಟೆಂಟ್ ಮಾರ್ಕೆಟಿಂಗ್ ಆಫೀಸರು ಶ್ರೀ ಕೆ. ಎಲ್. ನಂಜಪ್ಪ ಮುಂತಾದವರೆಲ್ಲರೂ ಆಗಮಿಸಿದ್ದರು. ಜಿಲ್ಲಾಧಿಕಾರಿಗಳು ಎಲ್ಲರನ್ನೂ ಸ್ವಾಗತಿಸುತ್ತಾ ಯಾವ ಕಾರಣಗಳನ್ನೂ ಸೂಚಿಸದೆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ತಾವು ಭಾಗವಹಿಸುವುದಿಲ್ಲವೆಂದು ಬರೆದಿರುವುದು ಅರ್ಥವಿಲ್ಲವೆಂದೂ, ಹಾಗೇನಾದರೂ ತೊಂದರೆಗಳಿದ್ದಲ್ಲಿ ವಿಶದೀಕರಿಸಿದರೆ ಅವುಗಳನ್ನು ಪರಿಶೀಲಿಸಬಹುದಾಗಿ ತಿಳಿಸಿದರು.

ಚೀಫ್ ಮಾರ್ಕೆಟಿಂಗ್ ಆಫೀಸರವರು ವರ್ತಕರಿಗಿರುವ ತೊಂದರೆಗಳನ್ನು ತಿಳಿಸಬೇಕಾಗಿ ಕೋರಿದರು. ತಮಗೆ ನಿಲ್ಲಲೂ ಸಹ ಸ್ಥಳವಿಲ್ಲದೆ ಹತ್ತಾರು ಗಂಟೆಗಳ ಮಾರ್ಕೆಟ್ಟಿನಲ್ಲಿರುವುದು ಬಹಳ ಕಷ್ಟವೆಂದೂ ತಮಗೆ ಸೌಕರ್ಯಗಳನ್ನು ಕಲ್ಪಿಸಬೇಕೆಂದು ವರ್ತಕರು ಕೋರಿದರು. ರೈತರಿಂದಲ್ಲದೆ ಬೇರೆಕಡೆಯಿಂದ ವರ್ತಕರಿಂದ ತರಿಸಿಕೊಳ್ಳುವ ಸಾಮಾನಿಗೆ ಸೆಸ್ಸ್ ವಸೂಲ್ಮಾಡುತ್ತಲಿರುವುದು ನ್ಯಾಯವಲ್ಲವೆಂದು ಹೇಳಿದರು. ಸರ್ಕಾರದವರು ಈ ಮಾರ್ಕೆಟ್ಟಿನಲ್ಲಿ ಸೌಕರ್ಯಗಳನ್ನು ಕಲ್ಪಿಸಲು ೨೫,೦೦೦ ರೂ. ಮಂಜೂರ್ಮಾಡಿರುವರೆಂದೂ ಸಾಧ್ಯವಾದಷ್ಟುಬೇಗ ಸೌಕರ್ಯಗಳನ್ನು ಕಲ್ಪಿಸುವುದಾಗಿಯೂ ಸಂಸ್ಥಾನದ ಹೊರಗಿನಿಂದ ತರಿಸಿಕೊಳ್ಳುವ ಸಾಮಾನುಗಳ ಮೇಲೆ ಇನ್ನು ಮುಂದೆ ಸೆಸ್ಸ್ ವಿಧಿಸುವುದಿಲ್ಲವೆಂದು ಚೀಫ್ ಮಾರ್ಕೆಟಿಂಗ್ ಆಫೀಸರು ತಿಳಿಸಿ, ಈ ಹೊಸ ಉದ್ಯಮದಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೋರಿದರು.

ಮೈಸೂರಿಗೆ ಬರ್ಮಾ ಅಕ್ಕಿ

ಮದರಾಸು ಬಂದರಿಗೆ ಬಂದಿರುವ ೩೨೫೦ ಟನ್ ಬರ್ಮಾ ಅಕ್ಕಿ ಪೈಕಿ ಮೈಸೂರಿಗೆ ೧೫೦೦ ಟನ್ನುಗಳು ಬರಲಿವೆ.

● ಮೈಸೂರು ತಾಲ್ಲೂಕು ಕುಪ್ಪೆಗಾಲ ಗ್ರಾಮದಲ್ಲಿ ಸಹಕಾರ ಸಂಘದ ಪ್ರಾರಂಭೋತ್ಸವವು ನಿನ್ನೆ ತಾಲ್ಲೂಕು ಸಮಗ್ರ ಗ್ರಾಮ ಸೇವಾ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ. ಹೆಚ್. ಕೆ ಕುಮಾರಸ್ವಾಮಿಯವರಿಂದ ನೆರವೇರಿಸಲ್ಪಟ್ಟಿತು. ಪ್ರಾರ್ಥನೆಯಾದನಂತರ ಶ್ರೀ. ವಿ. ಚಿನ್ನಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ನಂತರ, ಶ್ರೀ. ಯಾಲಕ್ಕಿಗೌಡ. ಶ್ರೀ ಕೆಂಪೀರೇಗೌಡ ಮತ್ತು ಗ್ರಾಮದ ಛೇರ್ಮ ಶ್ರೀ. ಕೆ. ಕೆಂಪೇಗೌಡರು ಭಾಷಣಮಾಡಿ, ಸಹಕಾರ ಸಂಘದ ಸ್ಥಾಪನೆಗೆ ನೆರವಾದವರನ್ನೆಲ್ಲಾ ವಂದಿಸಿದರು.

ಕೃಪಲಾನಿ–ಜೈಪ್ರಕಾಶ್ ಭೇಟಿ

ಸಮಾಜವಾದಿಪಕ್ಷದ ನಾಯಕ ಶ್ರೀ ಜಯಪ್ರಕಾಶ ನಾರಾಯಣರವರಿಗೆ ಕಾಂಗ್ರೆಸ್ ಡೆಮಾಕ್ರಾಟಿಕ್ ಫ್ರಂಟ್ ಮುಖಂಡ ಆಚಾರ್ಯ ಕೃಪಲಾನಿಯವರಿಗೆ ದೆಹಲಿಯಲ್ಲಿ ಭೇಟಿ ನಡೆದು ಉಭಯಪಕ್ಷದವರೂ ಸೇರಿ ದೇಶದಲ್ಲಿರುವ ಲಂಚಕೋರತನ, ಕಾಳಸಂತೆ ಮುಂತಾದುವನ್ನು ನಿರ್ಮೂಲಮಾಡಲು ಕಾರ್ಯಕ್ರಮವನ್ನು ತೆಗೆದುಕೊಳ್ಳುವ ವಿಷಯದಲ್ಲಿ ಚರ್ಚಿಸಿದರೆಂದು ತಿಳಿಯಬರುತ್ತದೆ.

ಈ ಭೇಟಿಗೆ ಮುಂಚೆ ಶ್ರೀ ಜಯಪ್ರಕಾಶ ನಾರಾಯಣರವರು ಮಿ॥ ರಫಿ ಅಹಮ್ಮದ್ ಕಿದ್ವಾಯಿಯವರನ್ನು ಭೇಟಿಮಾಡಿದರೆಂದು ವರದಿಯಾಗಿದೆ

ಮಕ್ಕಳ ಮಾರಾಟ

ಮದರಾಸಿಗೆ ೧೫ ಮೈಲಿಯಲ್ಲಿರುವ ತಾಂಬರಂ ಮತ್ತು ಸುತ್ತಮುತ್ತಲಿನ ಗ್ರಾಮದಲ್ಲಿ ಆಹಾರಪರಿಸ್ಥಿತಿಯು ಉತ್ಕಟಾವಸ್ಥೆಯಲ್ಲಿರುವುದಾಗಿ ವರದಿಯಾಗಿದೆ. ದಿನ ಒಂದಕ್ಕೆ ಒಂದು ಔನ್ಸ್ ರೇಷನ್ನು ದೊರೆಯುವುದೂ ಕಷ್ಟವಾಗಿದೆ. ಆಹಾರ ಅಭಾವದಿಂದ ಮಕ್ಕಳ ಮಾರಾಟ ಪ್ರಾರಂಭವಾಗಿದೆ. ಮದರಾಸಿನ ಆಹಾರ ಸಚಿವರಾದ ಮಿ॥ ರೋಚೆವಿಕ್ಟೋರಿಯಾರವರನ್ನು ತಾಂಬರಂನ ಗರ್ಭಿಣಿ ಮತ್ತು ಶಿಶು ಸಂರಕ್ಷಣಾಕೇಂದ್ರದ ಸಮಿತಿ ಮತ್ತು ರೋಗಿಗಳ ಪರವಾಗಿ ಕೆಲವು ಹೆಂಗಸರು ಭೇಟಿ ಮಾಡಿದ್ದರು. ಎರಡು ವಾರಗಳ ಹಿಂದೆ ಒಬ್ಬ ಹೆಂಗಸು ಈ ಕೇಂದ್ರಕ್ಕೆ ಬಂದು ಮಗುವನ್ನು ಒಂದು ಸೀರೆ ಅಥವಾ ಹಣಕ್ಕಾಗಿ ಮಾರಲು ಕೊಂಡೊಯ್ದಿದ್ದಳು. ಮಕ್ಕಳನ್ನು ಮಾರುವುದು ಸಾಧಾರಣವಾಗಿ ಹೋಗಿದೆಯೆಂದು ಮಂತ್ರಿಗಳಲ್ಲಿ ಅವರು ಬಿನ್ನವಿಸಿಕೊಂಡಿರುವುದಲ್ಲದೆ ಆಹಾರವಿಲ್ಲದೆ ಮಕ್ಕಳ ಸ್ಥಿತಿ ಹೇಗಾಗಿದೆಯೆಂಬುದನ್ನು ತೋರಿಸಲು ಮಕ್ಕಳನ್ನು ಪ್ರದರ್ಶಿಸಿದರು. ಖುದ್ದಾಗಿ ತಾವೇ ಹೋಗಿ ಆ ಪ್ರಾಂತ್ಯಗಳನ್ನು ಭೇಟಿಮಾಡುವುದಾಗಿ ಮಂತ್ರಿಗಳು ಹೇಳಿದುದಾಗಿ ವರದಿಯಾಗಿದೆ.

● ಮೈಸೂರು ತಾಲ್ಲೂಕು ವರುಣದ ಹೋಬಳಿ ಕುಪ್ಪೇಗಾಲ ಗ್ರಾಮದಲ್ಲಿ ನಿನ್ನೆ ಹರಿಜನರ ಸಮ್ಮೇಳನವು ತಾಲ್ಲೂಕು ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ. ಹೆಚ್. ಕೆ. ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀಗಳಾದ ಕೆ. ಕೆಂಪೆಗೌಡ, ವಿ. ಚಿನ್ನಸ್ವಾಮಿ, ಎಸ್ ಸುಬ್ರಹ್ಮಣ್ಯಂರವರು ಭಾಷಣ ಮಾಡಿದರು. ಅನೇಕ ವಿಷಯಗಳ ಪರಿಶೀಲನೆ ಸಾಗಿತು. ಶ್ರೀ. ಆರ್. ಸಿದ್ದಯ್ಯನವರಿಂದ ವಂದನಾರ್ಪಣೆ ನಡೆಯಿತು.

ಪ್ರಾದೇಶ ಕಾಂಗ್ರೆಸ್ ಸಮಿತಿ

ಪ್ರಾಂತೀಯ ಕಾಂಗ್ರೆಸ್ ಸಮಿತಿಗಳನ್ನು ಇನ್ನು ಮುಂದೆ ಪ್ರಾದೇಶ ಕಾಂಗ್ರೆಸು ಸಮಿತಿಯೆಂದು ಕರೆಯಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ.

ಪ್ರಧಾನಿ ಪಂಡಿತ ನೆಹರೂರವರು ಪ್ರಾಂತೀಯ ಮಂತ್ರಿಗಳಿಗೆ ಸೂಚನೆ ಕಳುಹಿಸುತ್ತಾ ಮಂತ್ರಿಗಳು ಸಾರ್ವಜನಿಕ ಭಾಷಣಗಳನ್ನು ಮಾಡುವಾಗ ಯಾವ ಯಾವ ಅಂಶಗಳಿಂದ ಕೂಡಿರಬೇಕೆಂದು ತಿಳಿಸಿದ್ದಾರೆ. ಅವರ ಭಾಷಣದಲ್ಲಿ ಆದಷ್ಟು ತಮ್ಮ ಇಲಾಖೆಗೆ ಸಂಬಂಧಿಸಿದಂತೆಯೇ ಮಾತನಾಡಬೇಕೆಂದೂ ಮತ್ತು ಇತರ ಇಲಾಖೆಗಳ ವಿಷಯ ಮಾತನಾಡಬಾರದೆಂದೂ, ಸರ್ಕಾರದ ಸಾರ್ವಜನಿಕ ನೀತಿ ಬಗ್ಗೆ ಆದಷ್ಟು ಕಡಿಮೆ ಪ್ರಸ್ತಾಪಿಸಬೇಕೆಂದು ಹೇಳಿದ್ದಾರೆ. ಅಲ್ಲದೆ ಪ್ರಕೃತ ನಡೆಯುತ್ತಿರುವ ಕಾರ್ಯ ಚಟುವಟಿಕೆಗಳನ್ನು ತಿಳಿಸಬಹುದೇ ಹೊರತು ಮುಂದೆ ತಾವು ಮಾಡಬೇಕೆಂದಿರುವದನ್ನು ಭಾಷಣದಲ್ಲಿ ವಿವರಿಸಬಾರದೆಂದೂ ತಿಳಿಸಿದ್ದಾರೆ

ಅಡ್ಮಿನಿಸ್ಟ್ರೇಟಿವ್ ಸರ್ವಿಸ್

ಮೈಸೂರು ಸರ್ಕಾರದಿಂದ ಕೇಂದ್ರ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ಸಿಗೆ ಅಧಿಕಾರಿಗಳನ್ನು ಚುನಾಯಿಸಿಕೊಳ್ಳಲು ಸಲಹಾ ಸಮಿತಿಸದಸ್ಯರು ಮುಂದಿನ ವರ್ಷ ಜನವರಿ ೩ರಲ್ಲಿ ಬರಲಿರುವರು.

ಪಂಡಿತ ನೆಹರೂ ಲಂಡನ್ನಿಗೆ

ಜನವರಿ ೪ರಲ್ಲಿ ಲಂಡನ್ನಿನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಧಾನಿ ಪಂಡಿತನೆಹರೂರವರು ಹೋಗುವರು. ಆದರಿಂದ ಅವರು ಬೆಂಗಳೂರಿನಲ್ಲಿ ನಡೆಯಲಿರುವ ಅಖಿಲಭಾರತ ವಿಜ್ಞಾನ ಸಮ್ಮೇಳನಕ್ಕೆ ಬರಲಾರರೆಂದು ತಿಳಿಯಬರುತ್ತದೆ.

● ೧೯೪೦ರ ಮೈಸೂರು ಪತ್ರಿಕಾಶಾಸನವನ್ನು ತಿದ್ದುಪಡಿಮಾಡುವುದನ್ನು ಪರಿಶೀಲಿಸಲು ಮೈಸೂರು ಸರ್ಕಾರವು ಒಂದು ಸಲಹಾಸಮಿತಿಯನ್ನು ರಚಿಸಲಿದೆಯೆಂದು ತಿಳಿಯಬರುತ್ತದೆ

● ಸಮಾಜವಾದಿ ಪಕ್ಷದ ಮುಖಂಡ ಶ್ರೀ ಜಯಪ್ರಕಾಶ ನಾರಾಯಣರವರು ನಾಗಪುರದಲ್ಲಿ ಮಾತನಾಡುತ್ತ ಖಾನ್ ಅಬ್ದುಲ್‌ಗಫಾರ್‌ಖಾನರವರು ಪಾಕಿಸ್ಥಾನ ಪ್ರಜೆಯಾಗಿದ್ದಾಗ್ಯೂ ರಾಷ್ಟ್ರೀಯ ಸ್ವಾತಂತ್ರ್ಯದಲ್ಲಿ ಅವರು ಮಾಡಿರುವ ಸೇವೆಯನ್ನು ಪ್ರತಿಯೊಬ್ಬ ಭಾರತೀಯನೂ ನೆನಪಿಗೆ ತಂದುಕೊಳ್ಳಬೇಕೆಂದು ಹೇಳಿರುವರು.

ಕಾಶ್ಮೀರ ವಿಷಯವಾಗಿ ಮಾತನಾಡುತ್ತ ಅಲ್ಲಿಯ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರು ಹೇಳಿರುವಂತೆ ಕಾಶ್ಮೀರದಲ್ಲಿ ರಾಜ್ಯಾಂಗ ರಚನಾಸಭೆಯನ್ನು ರಚಿಸಬೇಕೆಂದೂ ಈ ಸಭೆಯಲ್ಲಿ ಮಾಡುವ ನಿಷ್ಕರ್ಷೆಗೆ ಭಾರತ ಮತ್ತು ವಿಶ್ವಸಂಸ್ಥೆಯು ಬದ್ಧರಾಗಿರಬೇಕೆಂದು ಹೇಳಿರುವರು

○ ಸರದಾರ್ ಪಟೇಲಿಗೆ ದೇಹಾಲಸ್ಯವಾಗಿ ಡಾ॥ ಎಸ್. ಡಿ. ಪಟೇಲರು. ಚಿಕಿತ್ಸೆಮಾಡುತ್ತಲಿದ್ದಾರೆಂದೂ ಈಗ ಗುಣಮುಖವಾಗುತ್ತಲಿರುವರೆಂದು ತಿಳಿಯಬಂದಿದೆ.

ರಜಾ

ಮಂಡ್ಯ ಜಿಲ್ಲಾಧಿಕಾರಿಗಳಾಗಿರುವ ಶ್ರೀ ಕೆ. ಪಿ ರಾಮನಾಥಯ್ಯನವರಿಗೆ ಇದೇ ಮಾಹೆ ೨೯ರಿಂದ ೨೦ ದಿನ ರಜಾ ಮಂಜೂರಾಗಿದೆ ಪಾಂಡವಪುರದ ಸಬ್‌ಡಿವಿಜನ್ ಆಫೀಸರಾದ ಶ್ರೀ ಬಿ. ಎಸ್. ಹನುಮಾರ್ರವರು ಜಿಲ್ಲಾಧಿಕಾರಿಗಳ ಕೆಲಸ ನೋಡಿಕೊಳ್ಳುವರು.

ಕಾಂಗ್ರೆಸ್ ಸದಸ್ಯ ಶುಲ್ಕ

ಅಖಿಲಭಾರತ ಕಾಂಗ್ರೆಸ್ ಸದಸ್ಯ ಶುಲ್ಕವನ್ನು ನಾಲ್ಕಾಣೆಯಿಂದ ಒಂದು ರೂಪಾಯಿಗೆ ಹೆಚ್ಚಿಸಲಾಗಿದೆ.

ರಾಷ್ಟ್ರೀಕರಣವಿಲ್ಲ

ಭಾರತದಲ್ಲಿರುವ ಇಂಪೀರಿಯಲ್ ಬ್ಯಾಂಕನ್ನು ರಾಷ್ಟ್ರೀಕರಣಮಾಡಿಕೊಳ್ಳುವುದಿಲ್ಲವೆಂದು ಹಣಕಾಸಿನ ಸಚಿವ ಶ್ರೀ ಚಿಂತಾಮಣಿ ದೇಶ್[illegible] ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಭಾರತಕ್ಕೆ ಗೋಧಿ

ಕೆನಡಾದಿಂದ ಭಾರತಕ್ಕೆ ಒಂದು ಲಕ್ಷ ಟನ್ ಗೋಧಿ ಬರಲಿದೆ.

ಸಮ್ಮೇಳನ

ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳ ಸಮ್ಮೇಳನವು ಲಂಡನ್ನಿನಲ್ಲಿ ಬರುವ ವರ್ಷ ಜನವರಿಯಲ್ಲಿ ನಡೆಯುವುದು. ಭಾರತ, ಪಾಕಿಸ್ಥಾನ, ಸಿಂಹಳ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಮುಂತಾದ ರಾಷ್ಟ್ರಗಳು ಈ ಸಮ್ಮೇಳನದಲ್ಲಿ ಭಾಗವಹಿಸುವುವು. ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ವಿಮರ್ಶಿಸುವುದೇ ಈ ಸಮ್ಮೇಳನದ ಮುಖ್ಯೋದ್ದೇಶವೆಂದು ಹೇಳಲಾಗಿದೆ

ಕಾಂಗ್ರೆಸು ಸೈನ್ಯಗಳು

ಬೀರ್‌ಗಂಜಿಗೆ ೯೫ ಮೈಲಿ ಪಶ್ಚಿಮದಲ್ಲಿ ಪರಾಸಿ ಎಂಬಲ್ಲಿ ನೇಪಾಳ ಕಾಂಗ್ರೆಸ್ ಸೈನ್ಯಗಳು ಕದನಕ್ಕೆ ಸಿದ್ಧವಾಗುತ್ತಲಿದೆಯೆಂದು ತಿಳಿಯಬರುತ್ತದೆ.

ಇಂಡೋನೇಷಿಯಾ ಇಸ್ಲಾಂ ರಾಜ್ಯವಲ್ಲ

ಪಾಕಿಸ್ಥಾನವು ಎಷ್ಟು ಪ್ರಚಾರಮಾಡಿದಾಗ್ಯೂ ಇಂಡೊನೇಷಿಯಾವನ್ನು ಇಸ್ಲಾಂರಾಜ್ಯವೆಂದು ಪರಿಗಣಿಸುವುದಿಲ್ಲ. ಇಸ್ಲಾಂ ಉದ್ಧಾರಕ್ಕಾಗಿ ಮತಾಂತರ ವಿಷಯದಲ್ಲಿ ಸರ್ಕಾರವು ಪ್ರವೇಶಿಸುವುದಿಲ್ಲವೆಂದು ಇಂಡೋನೇಷಿಯಾ ಮುಖ್ಯಮಂತ್ರಿ ಡಾ|| ನಟ್ಸಿರ್‌ರವರು ಹೇಳಿರುವರು.

ಬೀರ್‌ಗಂಜಿನಲ್ಲಿ ಮಿಲಿಟರಿ ಸರ್ಕಾರ

ನೇಪಾಳ ಸರ್ಕಾರ ಸೈನ್ಯಗಳ ಬೀರ್‌ಗಂಜಿನಲ್ಲಿ ಮಿಲಿಟರಿ ಸರ್ಕಾರವನ್ನು ಸ್ಥಾಪಿಸಿದೆ.

ಚಲನಚಿತ್ರ ನೋಡಲು ಹೋಗಬೇಡಿ

ದೇಶದಲ್ಲಿ ತಯಾರಾಗುತ್ತಲಿರುವ ಚಲನಚಿತ್ರಗಳು ಮಕ್ಕಳಲ್ಲಿ ದುರಭ್ಯಾಸವನ್ನು ಉಂಟುಮಾಡುವುದೇ ವಿನಹ ಜ್ಞಾನಾರ್ಜನೆಯಾಗುವುದಿಲ್ಲ. ಆದ್ದರಿಂದ ಚಲನಚಿತ್ರಗಳಿಗೆ ಬಾಲಕ-ಬಾಲಕಿಯರು ಹೋಗುವುದನ್ನು ಸಾಧ್ಯವಾದಷ್ಟು ಕಡಮೆಮಾಡಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಬಾಬುಪುರುಷೋತ್ತಮಟಾಂಡನ್‌ರವರು ದೆಹಲಿಯಲ್ಲಿ ಮಾತನಾಡುತ್ತ ಹೇಳಿರುವರು.

ಪ್ರಪಂಚ ಪರ್ಯಟನ

ಶ್ರೀಗಳಾದ ನರಸಿಂಹನ್, ಆರ್. ಎನ್. ದತ್ ಮತ್ತು ಬಿ. ಜಿ. ತ್ರಿವೇದಿ ಯೆಂಬುವವರು ಬೈಸಿಕಲ್ಲುಗಳ ಮೇಲೆ ಪ್ರಪಂಚದಲ್ಲೆಲ್ಲಾ ಸುತ್ತಿಬರಲು ೨೧ನೇ ತಾ|| ಸಿಕಂದರಾಬಾದಿನಿಂದ ಹೊರಟರು. ಈ ಪರ್ಯಟನವು ೬ ವರ್ಷ ಹಿಡಿಯುವುದೆಂದು ಹೇಳಲಾಗಿದೆ

ಎ. ಆರ್. ಪಿ. ಕಾರ್ಯಾಚರಣೆ

ಪೂರ್ವ ಬಂಗಾಳದಲ್ಲಿ ಪಾಕಿಸ್ಥಾನ ಸರ್ಕಾರವು ಎಲ್ಲಾ ಮುಖ್ಯ ಪಟ್ಟಣಗಳಲ್ಲೂ ಎ. ಆರ್ ಪಿ. ಕಾರ್ಯಗಳನ್ನು ತ್ವರಿತವಾಗಿ ಮಾಡುತ್ತಲಿರುವುದೆಂದು ತಿಳಿಯಬರುತ್ತದೆ

ಮೈಸೂರಿಗೆ ಅನ್ವಯಿಸುವುದಿಲ್ಲ

ರಾಜ್ಯಾಂಗ ರೀತ್ಯಾ ಬಿ-ವಿಭಾಗದ ಸಂಸ್ಥಾನಗಳ ಮೇಲೆ ಕೇಂದ್ರ ಸರ್ಕಾರದ ಹತೋಟಿ ನಿಯಮಗಳು ಮೈಸೂರಿಗೆ ಅನ್ವಯಿಸದಂತೆ ಒಂದು ಆಜ್ಞೆಯನ್ನು ರಾಷ್ಟ್ರಪತಿಗಳು ಹೊರಡಿಸುವರೆಂದು ಮುಖ್ಯ ಮಂತ್ರಿ ಶ್ರೀ. ಕೆ. ಸಿ ರೆಡ್ಡಿಯವರು ತಿಳಿಸಿರುವರು.

ರೇಷನ್ ಹೆಚ್ಚುವುದೇ ?

ಮೈಸೂರು ಸಂಸ್ಥಾನಕ್ಕೆ ಮುಂದಿನವರ್ಷ ೧೩೮೦೦೦ ಟನ್ ಆಹಾರ ಧಾನ್ಯಬೇಕೆಂದು ಸರ್ಕಾರವು ಕೇಂದ್ರ ಸರ್ಕಾರಕ್ಕೆ ತನ್ನ ಮನವಿಯನ್ನು ಸಲ್ಲಿಸಿದೆ. ಸಂಸ್ಥಾನದಲ್ಲಿ ರೇಷನ್ ಪ್ರಮಾಣ ಹೆಚ್ಚಿಸಲು ಸರ್ಕಾರ ಪ್ರಯತ್ನಿಸುತ್ತಲಿದೆಯೆಂದು ಶ್ರೀ. ಕೆ ಸಿ. ರೆಡ್ಡಿಯವರು ತಿಳಿಸಿರುವರು.

ಗಡಿನಾಡು ಗಾಂಧಿ

• ಅಸ್ವಸ್ಥತೆ ಸುಳ್ಳು

ಮಾಂಟಿಗೋಮರಿ ಜೈಲಿನಲ್ಲಿರುವ ಖಾನ್ ಅಬ್ದುಲ್ ಗಫಾರ್‌ಖಾನರವರ ಆರೋಗ್ಯವು ತೀರ ಕೆಟ್ಟಿದೆಯೆಂದು ಭಾರತ ಪತ್ರಿಕೆಗಳಲ್ಲಿ ಬಂದಿರುವ ವರದಿ ಸುಳ್ಳೆಂದೂ ಅವರು ಪೂರ್ಣ ಆರೋಗ್ಯವಾಗಿರುವರೆಂದೂ ಅವರನ್ನು ಕಾಣಲು ಅವರ ಪುತ್ರರಿಗೆ ಅವಕಾಶ ಕೊಡಲಾಗಿದೆಯೆಂದೂ ಪಾಕಿಸ್ಥಾನ ಸರ್ಕಾರವು ಪ್ರಕಟಣೆ ಹೊರಡಿಸಿದೆ.

ನ್ಯಾಯಾಂಗ ಕಾರ್ಯದರ್ಶಿ

ಮೈಸೂರು ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿ ಶ್ರೀ. ಬಿ ಎಸ್. ಪುಟ್ಟಸ್ವಾಮಿಯವರು ರಾಜೀನಾಮೆಯಿತ್ತಿರುವದನ್ನು ಸರ್ಕಾರವು ಪರಿಶೀಲಿಸುತ್ತಲಿದೆ. ಈಗ್ಗೆ ಸುಮಾರು ೮ ವರ್ಷಗಳ ಹಿಂದೆ ಇವರು ರಾಜಕೀಯವನ್ನು ಬಿಟ್ಟು ಸರ್ಕಾರ ಕೆಲಸಕ್ಕೆ ಸೇರಿಕೊಂಡರು ಪುನಃ ರಾಜಕೀಯರಂಗವನ್ನು ಪ್ರವೇಶಿಸಲು ಅವರು ಅನುವಾಗುತ್ತಲಿರುವರೆಂದು ತಿಳಿಯಬಂದಿದೆ.

ಕೇಂದ್ರದ ಒಪ್ಪಿಗೆ

ಮೈಸೂರು ಸರ್ಕಾರದ ೪½ ಕೋಟಿ ರೂಪಾಯಿಗಳ ಕ್ಯಾಪ್ಟೆಲ್ ಕೆಲಸಗಳ ಯೋಜನೆಯನ್ನು ಕೇಂದ್ರ ಸರ್ಕಾರವು ಒಪ್ಪಿದೆಯೆಂದು ತಿಳಿಯಬರುತ್ತದೆ.

● ಅಗರ ಮಾಂಬಳ್ಳಿ ಪೌರಸಭೆಗೆ ಶ್ರೀ ಎ. ವಿ. ರಾಮಚಂದ್ರಯ್ಯನವರು ಉಪಾಧ್ಯಕ್ಷರಾಗಿ ಚುನಾಯಿತರಾಗಿರುವುದನ್ನು ಸರ್ಕಾರವು ಅಂಗೀಕರಿಸಿದೆ.

● ಸೆಲ್ಸ್‌ಟ್ಯಾಕ್ಸ್ ಕಮಿಷನರ್ ಆಫೀಸಿನ ಕೆಲಸದಲ್ಲಿದ್ದ ಶ್ರೀ. ಕೆ. ಶಂಕರಪ್ಪನವರು ಸರ್ಕಾರಿ ನೌಕರಿಗೆ ಅನರ್ಹರೆಂದು ಸರ್ಕಾರವು ಆಜ್ಞೆಯಿತ್ತಿದೆ

ರಾಷ್ಟ್ರಾಧ್ಯಕ್ಷರು ಮೈಸೂರಿಗೆ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ಮುಂದಿನ ಫೆಬ್ರವರಿಯಲ್ಲಿ ದಕ್ಷಿಣ ಭಾರತ ಪ್ರವಾಸವನ್ನು ಕೈಗೊಂಡಾಗ ಮೈಸೂರಿಗೂ ಭೇಟಿಯೀಯುವರೆಂದು ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರು ತಿಳಿಸಿದರು.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೬ ಮೀಟರು
ನವಂಬರ್ ೨೪ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಎಸ್. ರಾಮಚಂದ್ರರಾವ್ (ಸಂಗೀತ) ೭-೩೫ ಎಮ್. ಎಸ್. ಸುಬ್ಬಲಕ್ಷ್ಮಿ (ರೆ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ದಿಲ್‌ರುಬ ೧-೫೫ ಹಿಂದೀ ಶಿಕ್ಷಣ ೨-೦ ನಿಮ್ಮ ನೆಚ್ಚಿನ ಕಲಾವಿದರು (ರೆ) ೨-೩೦ ಮುಕ್ತಾಯ.

ಸಂಜೆ ೫-೩೦ ಪಾಪಚೂಡಾಮಣಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ (ಸಂಗೀತ ಪಾಠ). ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆಗಳು (ಹಿಂದಿ) ೭-೫ ಎಸ್. ಪಾಟಂಕರ್ (ಹಿಂದಿಯಲ್ಲಿ ಭಜನೆ) ೭-೧೫ ಪಾಪಚೂಡಾಮಣಿ (ಸಂಗೀತ) ೭-೩೦ ಸಂಸ್ಥಾನದ ಅಭಿವೃದ್ಧಿ ಯೋಜನೆಗಳು (ಶ್ರೀ. ಹೆಚ್. ಸಿ. ದಾಸಪ್ಪ, ಕೈಗಾರಿಕಾಮಂತ್ರಿ ಇವರಿಂದ ಭಾಷಣ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ನಾದ ಶ್ರೀ (ರೆ) ೮-೧೫ ಆರ್. ಕೆ. ಶ್ರೀಕಂಠನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಅರಮನೆಯವರಿಂದ ವಾದ್ಯಸಮ್ಮೇಳನ ೧೦-೦ ಮುಕ್ತಾಯ

ರಣಜಿತ್
23-11-50 ರಿಂದ 8 ದಿನ ಮಾತ್ರ
ದಿನವಹಿ 3 ಪ್ರದರ್ಶನಗಳು
† ಸುರೇಶ್ † ಮಧುಬಾಲ
ಪಾತ್ರವಹಿಸಿರುವ
ಕರ್‌ದಾರ್‌ರವರ :
ದುಲಾರಿ
DULARI
ಬೆಳಗಿನ ಪ್ರದರ್ಶನ 24-11-50 ರಿಂದ
3 ದಿನಗಳು ಮಾತ್ರ
ಯಾಕೂಬ್‌ರವರ
ಆಯಿಯೇ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

RAGHULAL & Co.,
CHEMISTS
Sayyaji Rao Road,
MYSORE.

RAGHULAL & Co., (Bangalore)
CHEMISTS
70, Arcot Srinivasa Char Street,
BANGALORE 2

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೫—೧೧—೧೯೫೦ನೇ ಶನಿವಾರ [ಸಂಚಿಕೆ ೭೩

ರಘುಲಾಲ್ ಅಂಡ್ ಕಂಪೆನಿ
ಔಷಧಿ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ,
ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧಿ ವ್ಯಾಪಾರಿಗಳು
೭೦, ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆ
ಬೆಂಗಳೂರು-2

ಅಮೆರಿಕಾದಲ್ಲಿ ಯುದ್ಧ ಭೀತಿ— ಮುಂಜಾಗ್ರತೆ ಕಾರ್ಯಕ್ರಮ

ಮೈಸೂರು ಚಾಮರಾಜೇಂದ್ರ ಔದ್ಯೋಗಿಕ ಶಾಲೆಯಲ್ಲಿ ಮಂತ್ರಿ ಶ್ರೀ ದಾಸಪ್ಪನವರು

ಮೈಸೂರು ನ. ೨೫

ನಿನ್ನೆ ಚಾಮರಾಜೇಂದ್ರ ಔದ್ಯೋಗಿಕ ಶಾಲೆಯ ಸಲಹಾಸಮಿತಿಯ ಸಭೆಯು ಶ್ರೀ ಕೈಗಾರಿಕಾ ಮಂತ್ರಿ ಶ್ರೀ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲೆಯವರಿಂದ ದೇವತಾಪ್ರಾರ್ಥನೆಯಾದ ಮೇಲೆ ಶ್ರೀ ವಿಜಯಂರವರು ಸ್ವಾಗತ ಭಾಷಣ ಮಾಡಿದರು. ಈ ಶಾಲೆಯು ಪ್ರಪಂಚದಲ್ಲೆಲ್ಲಾ ಒಂದು ಮುಖ್ಯ ಔದ್ಯೋಗಿಕಶಾಲೆಯಾಗಿದೆ. ಇನ್ನೂ ಹೆಚ್ಚು ಹುಡುಗರು ಇಲ್ಲಿ ಸೇರಿ ಈ ಶಾಲೆಯು ಪ್ರವರ್ಧಮಾನಕ್ಕೆ ಬರಲೆಂದು ನನ್ನ ಹಾರೈಕೆ. ಇಲ್ಲಿ ತಯಾರಾದ ಪದಾರ್ಥಗಳು ಹೆಚ್ಚು ಹೆಚ್ಚಾಗಿ ವಿದೇಶಗಳಿಗೆ ಕಳುಹಿಸುವಂತೆ ಮಾಡಬೇಕು ಎಂದು ಮಂತ್ರಿಗಳು ಹೇಳಿದರು. ಕೆಲಸಗಾರರ ಕುಂದುಕೊರತೆಗಳನ್ನು ಒಬ್ಬ ಪ್ರತಿನಿಧಿಯ ಮೂಲಕ ಸಲಹಾಸಮಿತಿಗೆ ತಿಳಿಸಿ ಅದನ್ನು ಸರಿಪಡಿಸಿಕೊಳ್ಳಬೇಕೆಂದರು. ಕೈಗಾರಿಕಾ ಡೈರೆಕ್ಟರ್ ಶ್ರೀ ಚಿಕ್ಕನಾರಾಯಣಸ್ವಾಮಿ, ಶಾಲೆಯ ರಿಟೈರ್ಡ್ ಸೂಪರಿನ್‌ಟೆನ್‌ಡೆಂಟ್ ಶ್ರೀ ರಾಮಸ್ವಾಮಿ, ಪೌರಸಭಾಧ್ಯಕ್ಷ ಶ್ರೀ ಲಿಂಗಣ್ಣ ಮುಂತಾದವರು ಹಾಜರಿದ್ದರು.

ಶ್ರೀ ನಾರಾಯಣಯ್ಯಂಗಾರ್ರವರು ವಂದನೆ ಸಲ್ಲಿಸಿದರು. ರಾಷ್ಟ್ರಗೀತೆಯಾದನಂತರ ಸಭೆಯು ಮುಕ್ತಾಯವಾಯಿತು.

ಸಾಕ್ಸೇನಾರವರಿಗೆ ಗುಂಡಿನೇಟು

ಕೇಂದ್ರ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಸ್. ಸಾಕ್ಸೇನಾರವರು ಮಿಯೋಧಿಕಾರದಲ್ಲಿನ ಕಾಂಗ್ರೆಸ್ ಸೇನಾಪಡೆಗಳ ಶಿಬಿರಕ್ಕೆ ತೆರಳುತ್ತಿದ್ದಾಗ ನೇಪಾಳ ಸರ್ಕಾರದ ಸೇನೆಯ ಗುಂಡಿನೇಟಿಗೆ ಸಿಕ್ಕಿ ಗಾಯಗೊಂಡರು. ಅವರನ್ನು ನೌಟನ್ವಾದ ಆಸ್ಪತ್ರೆಯಲ್ಲಿ ಸೇರಿಸಲಾಗಿದೆ.

ಕೆನಡಾದಿಂದ ಗೋಧಿ

ಕೆನಡಾದಿಂದ ಇಂಡಿಯಾ ಸರ್ಕಾರವು ೩,೦೦,೦೦೦ ಟನ್ ಗೋಧಿಯನ್ನು ಕೊಂಡಿದೆ. ಮುಂದಿನ ಜುಲೈ ಹೊತ್ತಿಗೆ ೧,೦೦,೦೦೦ ಟನ್ ಇಂಡಿಯಾಕ್ಕೆ ಬರುವುದೆಂದು ಹೇಳಲಾಗಿದೆ.

ಪತ್ರಿಕಾ ಸಂಪಾದಕರ ಸಮ್ಮೇಳನ

ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನವು ಒಂಭತ್ತನೆಯ ಅಧಿವೇಶನವು ದೆಹಲಿಯಲ್ಲಿ ಡಿಸೆಂಬರ್ ೨ ಮತ್ತು ೩ರಲ್ಲಿ ನಡೆಯುವುದು. ರಾಷ್ಟ್ರಪತಿ ಡಾ॥ ರಾಜೇಂದ್ರಪ್ರಸಾದರು ಉದ್ಘಾಟನೆ ನಡೆಸುವರು. ಪಂಡಿತ ನೆಹರೂರವರೂ ಭಾಷಣಮಾಡುವರು.

ಎ. ಐ. ಸಿ. ಸಿ. ಸಭೆ

ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಎ. ಐ. ಸಿ. ಸಿ ಸಭೆಯನ್ನು ಜನವರಿ ೨೯, ೩೦ ೩೧ರಲ್ಲಿ ಅಹಮದಾಬಾದಿನಲ್ಲಿ ನಡೆಸಲು ತೀರ್ಮಾನಿಸಿದೆ.

ಸ್ಥಳೀಯಸಂಸ್ಥೆಯ ಆಡಿಟ್ ವ್ಯವಸ್ಥೆ

ಸ್ಥಳೀಯ ಸಂಸ್ಥೆಗಳ ಆಡಿಟಿಗಾಗಿ ನೇಮಿಸಿರುವ ಅಧಿಕಾರಿಯು ಅಕೌಂಟ್ಸ್ ಮತ್ತು ಲೋಕಲ್ ಫಂಡ್ ಆಡಿಟ್ ಶಾಖೆ ನಿರ್ಮಿಸಲು ಸರ್ಕಾರಕ್ಕೆ ಸಲಹೆಕೊಡಬೇಕೆಂದು ಕೇಳಲಾಗಿದೆ. ಎಲ್ಲಾ ಸ್ಥಳೀಯ ಸಂಸ್ಥೆ ಮತ್ತು ಮುನಿಸಿಪಾಲಿಟಿಗಳ ಲೆಕ್ಕಗಳ ಆಡಿಟ್ ವ್ಯವಸ್ಥೆಯು ಲೋಕಲ್ ಫಂಡ್ ಅಕೌಂಟ್ಸ್ ಇವರ ಹತೋಟಿಯಲ್ಲಿರುವುದು.

ಅಮೆರಿಕನ್ ಸೈನ್ಯದ ಬಿಡುಗಡೆ

ಚೈನಾದವರ ಸೆರೆಯಾಳುಗಳಾಗಿದ್ದ ಅಮೇರಿಕನ್ನರು ಬಿಡುಗಡೆಯಾಗುತ್ತಲಿದೆಯೆಂದು ವರದಿಯಾಗಿದೆ.

ಪಾನನಿರೋಧಕ್ಕಿಂತಲೂ ಮುಖ್ಯವಾದುದು ಸಂತಾನನಿರೋಧ ಎಂದು ಹೇಳಿದ್ದಕ್ಕೆ ಶಿಕ್ಷೆ

ಪಾನನಿರೋಧಕ್ಕಿಂತಲೂ ಸಂತಾನ ನಿರೋಧ ಮುಖ್ಯವಾದುದೆಂದು ಬೊಂಬಾಯಿನ ಒಬ್ಬ ವೈದ್ಯನು, ಅಲ್ಲಿಯ ಮಂತ್ರಿಗಳು ಅಧ್ಯಕ್ಷತೆ ವಹಿಸಿದ್ದ ಒಂದು ಸಭೆಯಲ್ಲಿ ಹೇಳಿದುದು ಮಂತ್ರಿಗೆ ಅವಮಾನ ಮಾಡಿದಂತಾಗಿದೆಯೆಂದೂ ಕೂಡಲೇ ಕ್ಷಮಾಪಣೆ ಕೇಳಬೇಕೆಂದು ಆ ವೈದ್ಯನಿಗೆ ತಿಳಿಸಲಾಗಿತ್ತು. ವೈದ್ಯನಾಗಿ ತನ್ನ ಅಭಿಮತ ಹೇಳುವುದಕ್ಕೂ ಸ್ವಾತಂತ್ರ್ಯವಿಲ್ಲದಮೇಲೆ ತನಗೆ ಆ ಕೆಲಸವೇ ಬೇಡವೆಂದು ವೈದ್ಯನು ರಾಜೀನಾಮೆಯಿತ್ತಿದ್ದಾನೆ.

ವಿಮಾನದಾಳಿ ಅಪಾಯದಿಂದ ಜನರನ್ನು ರಕ್ಷಿಸುವುದಕ್ಕಾಗಿ ನ್ಯೂಯಾರ್ಕ್ ನಗರದಲ್ಲಿ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಲಿದೆ. ಈಗಾಗಲೇ ಸೈರನ್ ಯಂತ್ರಗಳನ್ನು ಪರೀಕ್ಷಿಸಲಾಗುತ್ತಲಿದೆ. ರಕ್ಷಣಾ ಪ್ರದೇಶಗಳನ್ನು ತೋರಿಸುವ ವ್ಯವಸ್ಥೆ ಮಾಡಲಾಗುತ್ತಲಿದೆ. ಕಛೇರಿಗಳಲ್ಲಿ ನೌಕರರ ಸಂಖ್ಯೆಯು ಎಣಿಕೆಯಾಗುತ್ತಿದೆ

ಮೂರನೇ ಯುದ್ಧವು ಪ್ರಾರಂಭವಾಗಿದೆ. ಎಚ್ಚರಿಕೆ ಎಂದು ರೇಡಿಯೋ ಸಾರುತ್ತಲಿದೆ. ಸೈನ್ಯಕ್ಕೆ ಸೇರಿ ಎಂದು ಯುವಕರನ್ನು ಪ್ರೋತ್ಸಾಹಿಸಲು ಸಹಸ್ರಾರು ಪ್ರತಿಗಳನ್ನು ವಿಮಾನಗಳು ನಗರದ ಮೇಲೆ ಹಾಕುತ್ತಿವೆ.

ಪ್ರಖ್ಯಾತ ವೈಜ್ಞಾನಿಕನ ಮರಣ

ಪ್ರಖ್ಯಾತ ವೈಜ್ಞಾನಿಕರಾದ ಪ್ರೊಫೆಸರ್ ಜೇಸ್ ಹಯಸಿಂಥೆ ವಿನ್‌ಸೆಂಟ್‌ರವರು ಮೊನ್ನೆ ವಾಲ್ ಡಿಗ್ರೇಸ್ ಆಸ್ಪತ್ರೆಯಲ್ಲಿ ಮರಣಹೊಂದಿದರು. ಇವರು ಮೊದಲನೇ ಮಹಾ ಯುದ್ಧದಲ್ಲಿ ಟೈಫಾಯಿಡ್ ಬಾಯಿಲಿಯಿಂದ ನರಳುತ್ತಿದ್ದ ಅನೇಕ ಸೈನಿಕರನ್ನು ರಕ್ಷಿಸಿದ್ದರು

ರೈಲ್ವೆ ಅಪಘಾತ

ಈ ತಿಂಗಳು ೨೨ನೇ ತಾ॥ನಲ್ಲಿ ನ್ಯೂಯಾರ್ಕಿನಲ್ಲಿ ನಡೆದ ರೈಲು ಅಪಘಾತದಲ್ಲಿ ಇದುವರೆಗೂ ೭೮ ಜನ ಸತ್ತು ೩೬೩ ಜನ ಗಾಯಗೊಂಡಿರುವರು. ಇನ್ನಿಬ್ಬರು ಅಸ್ವಾವಸ್ಥೆಯಲ್ಲಿದ್ದಾರೆ.

ವಿದ್ಯಾ ಅರ್ಹತೆ ಬೇಕಿಲ್ಲ

ಪಾರ್ಲಿಮೆಂಟ್ ಮತ್ತು ಸಂಸ್ಥಾನ ಶಾಸನ ಸಭೆಗಳ ಸದಸ್ಯರಿಗೆ ವಿದ್ಯಾರ್ಹತೆಯಿರಬೇಕೆಂದು ಪ್ರೊ ಕೆ ಟಿ. ಷಾರವರು ಕೇಂದ್ರ ಪಾರ್ಲಿಮೆಂಟಿನಲ್ಲಿ ತಂದ ನಿರ್ಣಯವು ಬಿದ್ದುಹೋಯಿತು.

ರಜಾ

ದಾವಣಗೆರೆ ಪೌರಸಭೆಯ ಕಮಿಷನರಾದ ಶ್ರೀ ಕೆ. ರಂಗಪ್ಪನವರಿಗೆ ನಿವೃತ್ತರಾಗುವ ಮುನ್ನ ಡಿಸೆಂಬರ್ ೧ನೇ ತಾರೀಖಿನಿಂದ ೬ ತಿಂಗಳು ರಜಾ ಮಂಜೂರಾಗಿದೆ

★ ಸಿರ್ಹೋಜೆಮ್ ★ ಮಕ್ಕಳ ಲಿವರ್ ಕಾಯಿಲೆಗೆ ★ಲಿವರ್ ಹೌಸ್ ಮೈಸೂರು★

ಖನಿಜ ಸಂಪತ್ತು

ಮೈಸೂರು ಸಂಸ್ಥಾನದಲ್ಲಿ 'ಖನಿಜಸಂಪತ್ತಿ' ನ ವಿಷಯದಲ್ಲಿ ನಿನ್ನೆ ರಾತ್ರಿ ಎ. ಐ. ಆರ್. ರೇಡಿಯೋ ಕೇಂದ್ರದಿಂದ ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಭಾಷಣ ಮಾಡಿದರು

ನಮ್ಮ ಸಂಸ್ಥಾನದಲ್ಲಿ ಮುಖ್ಯವಾದ ಅನೇಕ ಖನಿಜಗಳು ದೊರೆಯುವುವು. ನಮ್ಮ ಸಂಸ್ಥಾನವು ಖನಿಜಗಳ ಭಂಡಾರವಾಗಿದೆ ಕೋಲಾರದ ಚಿನ್ನದಗಣಿಯಲ್ಲಿ ಚಿನ್ನವು ದೊರೆಯುವುದಲ್ಲದೆ ಸಂಸ್ಥಾನದ ನಾನಾ ಭಾಗಗಳಲ್ಲಿ ಚಿನ್ನವು ದೊರೆಯುತ್ತದೆ. ಚಿನ್ನವು ನಮ್ಮ ದೇಶದಲ್ಲಿ ಅನೇಕಕಡೆ ಸಿಕ್ಕುವುದು ಎಂಬುವುದನ್ನು ಊರುಗಳಿಗೆ, ನದಿಗಳಿಗೆ ಕೊಟ್ಟಿರುವ ಅನೇಕ ಹೆಸರುಗಳೇ ಸೂಚಿಸುತ್ತವೆ. ಚಿನ್ನವನ್ನು ತೆಗೆಯಲು ಪ್ರಯತ್ನಿಸಿ ಅರ್ಧ ಕೆಲಸಗ [illegible] ಗಣಿಗಳು [illegible]ತವಿವೆ. ಅವುಗಳ ಪೈಕಿ ಬೆಳ್ಳಾರದಲ್ಲಿ ಈಗ್ಗೆ ೫ ವರ್ಷಗಳಿಂದ ಚಿನ್ನವನ್ನು ತೆಗೆಯಲು ಕೆಲಸ ನಡೆಯುತ್ತಲಿದೆ. ಇಲ್ಲಿಯವರೆಗೆ ಸುಮಾರು ೩½ ಲಕ್ಷ ರೂಪಾಯಿಗಳ ಚಿನ್ನವನ್ನು ಅಲ್ಲಿ ತೆಗೆಯಲಾಗಿದೆ. ಕೋಲಾರ ಚಿನ್ನದಗಣಿಯಲ್ಲಿ ಪ್ರತಿವರ್ಷವೂ ೪ ಕೋಟಿ ರೂಪಾಯಿಗಳ ಚಿನ್ನವು ಉತ್ಪತ್ತಿಯಾಗುತ್ತದೆ

ಈ ಬೆಲೆಬಾಳುವ ಲೋಹವಲ್ಲದೆ ಬಾಬಬುಡನ್‌ಗಿರಿಯ ಹತ್ತಿರ ಭದ್ರಾವತಿ ಕಬ್ಬಿಣದಕಾರ್ಖಾನೆಗೆ ಬೇಕಾಗುವ ಕಬ್ಬಿಣವು ವಿಶೇಷವಾಗಿ ದೊರೆಯುತ್ತದೆ

ಅಲ್ಲದೆ ಶಸ್ತ್ರಾಸ್ತ್ರಗಳಿಗೆ ಬೇಕಾಗುವ ಮ್ಯಾಗನೀಸ್ ಇತರ ಉಪಯುಕ್ತವಾದ ತಾಮ್ರ, ಸೀಸ, ತವರ ಮತ್ತು ಲೋಹ ಸಂಬಂಧವಲ್ಲದ ಅನೇಕ ಖನಿಜಗಳು ನಮ್ಮ ದೇಶದಲ್ಲಿವೆ. ಕ್ರೊಮೈಟು, ಬೆಣಚುಕಲ್ಲು, ಬಿಳಿಮಣ್ಣು, ಅಲಂಕಾರಕ್ಕೆ ಉಪಯೋಗಿಸಬಹುದಾದ ವಿಧವಿಧ ಬಣ್ಣದ ಶಿಲೆಗಳು, ಕಾಗೆಬಂಗಾರ, ಮುಂತಾದ ಅನೇಕ ವಸ್ತುಗಳು ಸಿಕ್ಕುತ್ತವೆ.

ಈ ಖನಿಜಗಳನ್ನು ನಾವು ಸರಿಯಾಗಿ ತೆಗೆದು ಉಪಯೋಗಿಸಿದಲ್ಲಿ ದೇಶದ ಸಂಪತ್ತು ಹೆಚ್ಚುವುದಲ್ಲದೆ ವಿವಿಧ ಕೈಗಾರಿಕೆಗಳ ಬೆಳವಣಿಗೆಗೆ ಸಾಧಕವಾಗುವುದೆಂದು ಹೇಳಿದರು.

ಅಮೇರಿಕನ್ನರ ನಷ್ಟ

ಕೊರಿಯಾ ಯುದ್ಧದಲ್ಲಿ ಅಮೆರಿಕನ್ ಸೈನ್ಯಕ್ಕೆ ೩೦,೦೦೦, ಜನರ ನಷ್ಟವಾಗಿದೆ ಆದರಲ್ಲಿ ಸತ್ತವರು ೫,೦೦೦ ಗಾಯಗೊಂಡವರು ೨೧,೦೦೦, ಪತ್ತೆಯಿಲ್ಲದವರು ೪,೦೦೦.

ಪ್ರಪಂಚದಲ್ಲೆಲ್ಲಾ ದೊಡ್ಡ ಜಾತ್ರೆ

ಕಾರ್ತಿಕ ಪೂರ್ಣಮ ಪ್ರಯುಕ್ತ ನಿನ್ನೆ ಗಂಗಾ ಮತ್ತು ಗಂಡಕೀ ನದಿಗಳ ಸಂಗಮದ ಸೋನೇಪುರದ ಬಳಿ ನದಿಯಲ್ಲಿ ೫ ಲಕ್ಷ ಜನಕ್ಕಿಂತಲೂ ಹೆಚ್ಚಾಗಿ ಸ್ನಾನ ಮಾಡಿದರು. ಇಲ್ಲಿ ಪ್ರಪಂಚದಲ್ಲೆಲ್ಲಾ ಅತಿ ದೊಡ್ಡದಾದ ಜಾತ್ರೆಯು ಈ ಕಾಲದಲ್ಲಿ ನಡೆಯುವುದು. ವ್ಯಾಪಾರಕ್ಕಾಗಿ ೧,೦೦೦ ಆನೆಗಳು, ೧೬,೦೦೦ ಜಾನುವಾರುಗಳು, ೨,೦೦೦ ಕುದುರೆಗಳು, ಇನ್ನೂ ಅನೇಕ ರೀತಿಯ ಪಶುಪಕ್ಷಿಗಳು ಸೇರಿವೆ. ಈ ಜಾತ್ರೆಯು ೧೫ ಚದುರ ಮೈಲಿ ವಿಸ್ತೀರ್ಣದ ಭಾಗವನ್ನು ಆಕ್ರಮಿಸಿಕೊಂಡಿದೆ. ಇದೇ ಮಾಹೆ ೩೦ನೇ ತಾ॥ ವರೆಗೂ ಜಾತ್ರೆಯು ನಡೆಯುವುದು.

ಕದನ ಬಿರುಸಾಗಿದೆ

ನೇಪಾಳದ ಅನೇಕ ಭಾಗಗಳಲ್ಲಿ ಸರ್ಕಾರಿ ಮತ್ತು ಕಾಂಗ್ರೆಸ್ ಸೈನ್ಯಗಳಿಗೆ ಕದನವು ಬಿರುಸಾಗಿ ನಡೆಯುತ್ತಲಿದೆ.

ಆಹಾರದ ಮೇಲೆ ಜನತೆಯ ಪರಿಣಾಮ

ಪ್ರಪಂಚದ ಜನಸಂಖ್ಯೆ ೨೫,೦೦೦ ಲಕ್ಷ, ವಿಭಾಗವಾಗುವ ಮುನ್ನ ಭಾರತ ಜನಸಂಖ್ಯೆ ೪,೦೦೦ ಲಕ್ಷ ಅಂದರೆ ಪ್ರಪಂಚದಲ್ಲಿರುವ ಜನತೆಯಲ್ಲಿ ⅙ ಭಾಗ ವಿಭಾಗವನ್ನು ಭಾರತದಲ್ಲಿ ಆಹಾರ ಧಾನ್ಯಗಳ ಉತ್ಪತ್ತಿ ೬೫೦ ಲಕ್ಷ ಟನ್ನುಗಳು. ಈಗ ಭಾರತದ ಜನಸಂಖ್ಯೆ ಹಿಂದಿನ ಸಂಖ್ಯೆಯಲ್ಲಿ [illegible] ಭಾಗ ಆದರೆ ಆಹಾರ ಧಾನ್ಯಗಳ ಬೆಳೆ ಮಾತ್ರ ೪೦೦ ಲಕ್ಷ ಟನ್ನುಗಳು ಪ್ರಜಾಸಂಖ್ಯೆಯು ಪ್ರತಿವರ್ಷವೂ ೫೦-೬೦ ಲಕ್ಷದಷ್ಟು ಹೆಚ್ಚುತ್ತಲಿದೆ ವರ್ಷಂಪ್ರತಿ ನಮಗೆ ೫ಲಕ್ಷ ಟನ್ನುಗಳಷ್ಟು ಹೆಚ್ಚಿಗೆ ಆಹಾರ ಬೇಕಾಗಿದೆ

೧೯೫೨ ರೊಳಗೆ ದೇಶದಲ್ಲಿ ಆಹಾರದ ಸ್ವಯಂಪರಿಪೂರ್ಣತೆಯಾಗಲು ನಿಷ್ಪ್ರಯತ್ನ ನಡೆಯುತ್ತಲಿದೆ. ಈ ಯೋಜನೆಯು ಪರಿಪೂರ್ಣವಾಗುವುದಕ್ಕೆ ತೊಂದರೆಗಳು ವಿಶೇಷವಿವೆ ಕಾಲಕ್ಕೆ ಮಳೆಬರದೆಯಿದ್ದರೆ ೧೯೪೬ರಗಿಂತ ತೊಂದರೆ ಹೆಚ್ಚಾಗಬಹುದು ನಾವು ಯಾವಾಗಲೂ ಎಷ್ಟೇ ತೊಂದರೆ ಬಂದರೂ ಅನುಭವಿಸಲು ಸಿದ್ಧರಾಗಿರಬೇಕು

ಈಗಿನ ನಮ್ಮ ಪ್ರಯತ್ನಗಳಿಂದ ಆಹಾರ ಧಾನ್ಯಗಳ ಬೆಳೆಯಲ್ಲಿ ವಿಶೇಷವಾಗಿ ಹೆಚ್ಚಿಸಲು ಕಷ್ಟ. ಆದ್ದರಿಂದ ಈ ಧಾನ್ಯದ ಬೆಳೆಗಿಂತಲೂ ಹೆಚ್ಚಾಗಿ ಉತ್ಪತ್ತಿಯಾಗುವ ಬೇರೇ ಹೊಸಬೆಳೆಯನ್ನು ನಾವು ಬೆಳೆಯಲು ಸಂಶೋಧನೆ ನಡೆಸಬೇಕು. ತಿರುವಾಂಕೂರಿನಲ್ಲಿ ಬೆಳೆಯುವ ಟೋಪಿಯೋಕಾ ಎಂಬ ಮರಗೆಣಸು ನಾವು ಬೆಳೆದಲ್ಲಿ ಆಹಾರಧಾನ್ಯಗಳಿಗಿಂತ ೩ರಷ್ಟು ಅಧಿಕವಾಗಿ ಬೆಳೆಯಬಹುದು. ಅದು ಹೊಸದಾಗಿ ಕಂಡುಬಂದರೂ ಈಗ ನಾವಾಗಲೇ ಟೋಪಿಯೋಕಾವನ್ನು ಪರಿಶುದ್ಧ ರೀತಿಯಲ್ಲಿ ಉಪಯೋಗಿಸುತ್ತಲಿದ್ದೇವೆ. ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ದೇಶದಲ್ಲಿ ಒಂದುಲಕ್ಷ ಎಕರೆಗಳಲ್ಲಾದರೂ ಈ ಟೋಪಿಯೋಕಾವನ್ನು ಬೆಳೆಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದು ಕೇಂದ್ರ ಆಹಾರ ಪರಿಶೋಧನಾಲಯದ ಡೈರೆಕ್ಟರ್ ಡಾ॥ ವಿ. ಸುಬ್ರಹ್ಮಣ್ಯಂರವರು ಮೈಸೂರು ವಿಶ್ವವಿದ್ಯಾನಿಲಯದ ಒಂದು ಸಂಘದಲ್ಲಿ ಮಾತನಾಡುತ್ತಾ ಹೇಳಿರುವರು.

ಗುರುನಾನಕ್ ಜಯಂತ್ಯುತ್ಸವ

ಉತ್ತರ ಇಂಡಿಯಾದಲ್ಲೆಲ್ಲಾ ಗುರುನಾನಕ್‌ರವರ ಜಯಂತ್ಯುತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಆತನ ಬೋಧನೆಗಳಲ್ಲಿ ಮುಖ್ಯವಾದುದು ಮಾನವ ಸಮನ್ವತೆ, ಈಗ ಮತೀಯತೆಯು ವಿಶೇಷವಾಗಿ ತಲೆದೋರುತ್ತಲಿದೆ. ಆದ್ದರಿಂದ ಅವರ ಜಯಂತ್ಯುತ್ಸವವನ್ನು ವಿಶೇಷ ರೀತಿಯಿಂದ ನಡೆಸಿ ಅವರ ಬೋಧನೆಗಳನ್ನು ನಾವು ಚೆನ್ನಾಗಿ ಅರಿತುಕೊಳ್ಳಬೇಕೆಂದು ಅನೇಕ ಗಣ್ಯ ಮಹಮ್ಮದೀಯರು ಭಾಷಣಮಾಡಿದ ಸಭೆಯಲ್ಲಿ ಅನೇಕ ಸಿಕ್ಕರು, ಮಹಮ್ಮದೀಯರು ಮತ್ತು ಹಿಂದುಗಳು ಸೇರಿ ಭಾಗವಹಿಸಿದ್ದರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ನವೆಂಬರ್ ೨೫ ಶನಿವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಮಿಶ್ರಮಾಧುರ್ಯ (ರಿ) ೭-೫೫ ಕನ್ನಡದಲ್ಲಿವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಜಲತರಂಗ್ ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಹಾಡುಗಳು (ರಿ) ೨-೩೦ ಮುಕ್ತಾಯ.

ಸಂಜೆ ೫-೦೦ ಸರೋಜವಿಜಯರಾಘವನ್ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಚಿತ್ರಲೋಕ (ರಿ) ೭-೩೦ ಸರೋಜ ವಿಜಯರಾಘವನ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಎಮ್. ಎಸ್. ಶೆಲ್ವ ಪಿಳ್ಳೆಐಂಗಾರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ "ಕೀಚಕ" ಎಂಬ ನಾಟಕ ೧೦-೦ ಮುಕ್ತಾಯ.

ನವೆಂಬರ್ ೨೭ ಸೋಮವಾರ

ಬೆಳಗ್ಗೆ ೬-೪೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಚಿತ್ರಸಂಗೀತ (ರಿ) ೭-೩೫ ಪಕ್ಷಿನೋಟ (ವಾರದ ಕಾರ್ಯಕ್ರಮ ವಿವರಣೆ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಗಿಟಾರ್ ೧-೪೫ ಹಿಂದೀ ಶಿಕ್ಷಣ ೨-೦ ಜನರಂಜನಿ (ರಿ) ೨-೧೫ ವಾದ್ಯಸಮ್ಮೇಳನ ೨-೩೦ ಮುಕ್ತಾಯ.

ಸಂಜೆ ೫-೩೦ ಆರ್. ವಿಶ್ವೇಶ್ವರನ್ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ (ಸಂಗೀತ ಪಾಠ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆಗಳು (ಹಿಂದಿ) ೭-೫ "ನಾಸಿ ಟೆರ್ ಕಾಲೇಜ್ ಲಡ್ಕಿ" (ಹಿಂದಿಯಲ್ಲಿ ಸಂಭಾಷಣೆ ೭-೧೫ ಆರ್. ವಿಶ್ವೇಶ್ವರನ್ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ನಾದ ಸುಧ (ರಿ) ೮-೧೫ "ಹೊಯ್ಸಳರ ಕಾಲ "(ಇಂಗ್ಲೀಷಿನಲ್ಲಿ ಭಾಷಣ) ೮-೩೦ ಎನ್. ಎಸ್. ರಾಮಯ್ಯಂಗಾರ್(ಸಂಗೀತ)೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಎನ್. ಎಸ್. ರಾಮಯ್ಯಂಗಾರ್ (ಸಂಗೀತ) ೧೦-೦ ಮುಕ್ತಾಯ

ರಣಜಿತ್
23-11-50 ರಿಂದ 8 ದಿನ ಮಾತ್ರ
ದಿನವಹಿ 3 ಪ್ರದರ್ಶನಗಳು
† ಸುರೇಶ್ † ಮಧುಬಾಲ
ಪಾತ್ರವಹಿಸಿರುವ
ಕರ್‌ದಾರ್‌ರವರ:
ದುಲಾರಿ
DULARI
ಬೆಳಗಿನ ಪ್ರದರ್ಶನ 24-11-50 ರಿಂದ
3 ದಿನಗಳು ಮಾತ್ರ
ಯಾಕೂಬ್‌ರವರ
ಆಯಿಯೇ

ಬಿಡಿಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭—೧೧—೧೯೫೦ನೇ ಸೋಮವಾರ [ಸಂಚಿಕೆ ೭೪

ಕನ್ನಡಭಾಷಾ ಪ್ರಾಧಾನ್ಯತೆಗೆ ವಿದ್ಯಾರ್ಥಿಗಳ ಚಳುವಳಿ

ಕ್ರಿಯಾ ಸಮಿತಿ ನೇಮಕ

ಮೈಸೂರ. ವಿಶ್ವವಿದ್ಯಾನಿಲಯದಲ್ಲಿ ಕನ್ನಡವು ಪ್ರಥಮ ಭಾಷೆ ಮತ್ತು ಶಿಕ್ಷಣ ಮಾಧ್ಯಮ ಭಾಷೆಯಾಗಬೇಕೆಂಬ ಚಳುವಳಿಯನ್ನು ವಿದ್ಯಾರ್ಥಿಗಳು ಪ್ರಾರಂಭಿಸಿದ್ದಾರೆ. ಇದರ ಸಂಬಂಧವಾಗಿ ಶ್ರೀ ಬಿ. ಶ್ರೀಕಂಠಪ್ಪನವರ ಸಂಚಾಲಕತ್ವದಲ್ಲಿ ೮ ಮಂದಿ ಸದಸ್ಯರಿಂದಕೂಡಿದ ಒಂದು ಕ್ರಿಯಾಸಮಿತಿಯನ್ನು ನೇಮಿಸಲಾಗಿದೆ.

ಸಂಸ್ಥಾನದಲ್ಲಿ ಮತದಾರರು

ಬೆಂಗಳೂರು ನ ೨೫

ಈಗ ಹೊಸದಾಗಿ ತಯಾರಾಗಿರುವ ಮತದಾರರ ಪಟ್ಟಿಯ ಪ್ರಕಾರ ಸಂಸ್ಥಾನದಲ್ಲಿ ೪೦ ಲಕ್ಷ ಓಟರ ಗಳಿರುವರು. ಈ ಓಟುದಾರರ ಪಟ್ಟಿಯು ೬೦ ಸಾವಿರ ಪುಟಗಳಾಗಿವೆಯೆಂದು ಇದಕ್ಕೆ ೫ ಲಕ್ಷ ರೂಪಾಯಿಗಳು ಖರ್ಚಾಗಿವೆಯೆಂದು ಪತ್ರಿಕಾ ಸಮ್ಮೇಳನದಲ್ಲಿ ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯರವರು ತಿಳಿಸಿದರು.

ಸಂಸ್ಥಾನದಲ್ಲೆಲ್ಲಾ ಈ ಪಟ್ಟಿಯು ನವಂಬರ್ ೩೦ ರೊಳಗೆ ಸಾರ್ವಜನಿಕರ ಪರಿಶೀಲನೆಗಾಗಿ ಪ್ರಕಟಿಸಲಾಗುವುದು. ಪ್ರಕಟವಾದ ೨೧ ದಿನಗಳೊಳಗಾಗಿ, ಅವುಗಳಲ್ಲಿ ತಪ್ಪುಗಳು ಅಥವಾ ಹೆಸರುಗಳು ಬಿಟ್ಟುಹೋಗಿದ್ದರೆ ತಿಳಿಸಬೇಕಾಗಿದೆ ಎಂದು ಅವರು ಹೇಳಿದರು.

ಸಮ್ಮೇಳನಗಳು

ಅಖಿಲ ಮೈಸೂರು ಪಬ್ಲಿಕ್ ವರ್ಕ್ಸ್ ಕಂಟ್ರಾಕ್ಟರುಗಳ ಮೂರನೇ ಸಮ್ಮೇಳನವು ಮುಂದಿನ ಜನವರಿ ೮ನೇ ತಾ|| ಬೆಂಗಳೂರಿನಲ್ಲಿ ನಡೆಯುವುದು. ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ಅಧ್ಯಕ್ಷತೆ ವಹಿಸುವರು.

ಮೈಸೂರು ಪ್ರಾಂತೀಯ ಸಹಕಾರ ಸಮ್ಮೇಳನವು ಡಿಸೆಂಬರ್ ೩೦ ಮತ್ತು ೩೧ರಲ್ಲಿ ಮೈಸೂರು ಚಾಮರಾಜರಸ್ತೆಯಲ್ಲಿರುವ ಸಹಕಾರಭವನದಲ್ಲಿ ನಡೆಯುವುದು. ಗೃಹಸಚಿವ ಶ್ರೀ ಟಿ ಮರಿಯಪ್ಪನವರು ಅಧ್ಯಕ್ಷತೆವಹಿಸುವರು. ಭಾರತ ಸರ್ಕಾರದ ವ್ಯವಸಾಯ ಇಲಾಖಾ ಕಾರ್ಯದರ್ಶಿ ಶ್ರೀ ಕೆ. ಎಲ್. ಪಂಜಾಬಿಯವರು ಪ್ರಾರಂಭೋತ್ಸವ ನಡೆಸುವರು.

ಬಾಲ ರಾಜನ ಅಂಗೀಕಾರವಿಲ್ಲ

ನೇಪಾಳದಲ್ಲಿ ೩ ವರ್ಷ ಬಾಲಕನನ್ನು ರಾಜನನ್ನಾಗಿ ಮಾಡಿರುವುದನ್ನು ಇಂಡಿಯಾ ಸರ್ಕಾರವು ಅಂಗೀಕರಿಸಲಾಗುವುದಿಲ್ಲವೆಂದು ಪಂಡಿತ ನೆಹರೂರವರು ನಿನ್ನೆ ಜಮ್‌ಷೆಡ್‌ಪುರದಲ್ಲಿ ಮಾತನಾಡುತ್ತಾ ಹೇಳಿರುವರು.

ಭಾರತದ ನೀತಿ

ಭಾರತಕ್ಕೂ ನೇಪಾಳಕ್ಕೂ ನಿಕಟ ಸಂಬಂಧವಿದೆ. ನೇಪಾಳವು ಸ್ವತಂತ್ರರಾಷ್ಟ್ರ, ಈಗಿನ ಇಂದಿನ ಪರಿಸ್ಥಿತಿಯಲ್ಲಿ ಭಾರತವು ಮೂಕಪ್ರೇಕ್ಷಕರಾಗಿ ಕುಳಿತಿರುವುದಕ್ಕಾಗುವುದಿಲ್ಲ. ಆದರೆ ಭಾರತವು ಏನು ಕ್ರಮವನ್ನನುಸರಿಸುವುದೆಂದು ಈಗಲೇ ಹೇಳಲಾಗುವುದಿಲ್ಲ.

ನೇಪಾಳದಲ್ಲಿ ಪ್ರಜಾ ಸರ್ಕಾರ ಸ್ಥಾಪನೆಯಾಗಲೇಬೇಕೆಂದು ಪ್ರಧಾನಿ ನೆಹರೂರವರು ಹೇಳಿರುವರು.

ಕಾನೂನುಭಂಗ ಚಳುವಳಿ

ನೇಪಾಳದಾದ್ಯಂತ ಶಾಂತಿಯುತ ಅಹಿಂಸಾರೀತಿ ಸಾಮೂಹಿಕ ಕಾನೂನು ಭಂಗಚಳುವಳಿಯನ್ನು ಹೂಡಬೇಕೆಂದು ಅಲ್ಲಿಯ ಕಾಂಗ್ರೆಸ್ ನಿರ್ಧರಿಸಿರುವುದಾಗಿ ಕಾಂಗ್ರೆಸ್ ಅಧ್ಯಕ್ಷರುತಿಳಿಸಿರುವರು.

ಟಪಾಲುದರ ಹೆಚ್ಚಿತು

ವಿದೇಶಗಳಿಗೆ ಕಳುಹಿಸುವ ಟಪಾಲುಗಳ ಪೋಸ್ಟೇಜು ದರವನ್ನು ಡಿಸೆಂಬರ್ ಒಂದರಿಂದ ಹೆಚ್ಚಿಸಲಾಗಿದೆ.

ಒಂದು ಔನ್ಸು ತೂಕದವರೆಗೆ ಕಾಗದಗಳಿಗೆ ೪ ಆಣೆ ಮತ್ತು ಹೆಚ್ಚಾದ ತೂಕಕ್ಕೆ ಔನ್ಸ್ ಒಂದಕ್ಕೆ ೨|| ಆಣೆ. ಪೋಸ್ಟ್‌ಕಾರ್ಡು ಒಂದಕ್ಕೆ ೨|| ಆ.

ಸಿಂಹಳ, ನೇಪಾಳ, ಪಾಕಿಸ್ತಾನ, ಬರ್ಮ, ಪೋರ್ಚುಗೀಸ್ ಇಂಡಿಯಾಕ್ಕೆ ಇದು ಅನ್ವಯಿಸುವುದಿಲ್ಲ.

ರಾಜೀನಾಮೆ

ಹಲವಾರು ವರ್ಷಗಳಿಂದ ವಿಶ್ವಕರ್ಣಾಟಕ ದಿನ ಪತ್ರಿಕೆಯಲ್ಲಿ ಭಾಗೀದಾರರಾಗಿ ದುಡಿದ ಅನೇಕ ಕಷ್ಟ ಪರಂಪರೆಗಳನ್ನು ಅನುಭವಿಸಿ ಪತ್ರಿಕೆಯ ಅಭಿವೃದ್ಧಿಗೆ ಕಾರಣರಾದ ಶ್ರೀ ಕೆ. ಅನಂತ ಸುಬ್ಬರಾಯರಿಗೆ ಮತ್ತು ಪತ್ರಿಕೆಯ ಕೆಲಸಗಾರರಿಗೆಲ್ಲರಿಗೂ ಪತ್ರಿಕೆಯ ಮಾಲೀಕರು ಶೇ. ೫೦ ರಷ್ಟು ಸಂಬಳವನ್ನು ಕಡಿಮೆಮಾಡಿದ ದರ ಫಲವಾಗಿ ಶ್ರೀ ಕೆ ಅನಂತಸುಬ್ಬರಾಯರು ತಮ್ಮ ಕೆಲಸಕ್ಕೆ ರಾಜೀನಾಮೆಯಿತ್ತಿರುವರೆಂದು ತಿಳಿಯಬರುತ್ತದೆ.

ಜನಜೀವನಮಟ್ಟವು ವಿಶೇಷವಾಗಿ ಏರಿಹೋಗಿರುವ ಈಗಿನ ಪರಿಸ್ಥಿತಿಯಲ್ಲಿ ಪ್ರತಿಯೊಂದು ಸಂಸ್ಥೆಯಲ್ಲಿಯೂ ಸಂಬಳಸಾರಿಕೆಗಳನ್ನು ಹೆಚ್ಚುಮಾಡುತ್ತಲಿರುವ ಸಮಯದಲ್ಲಿ ಇದ್ದಕ್ಕಿದ್ದ ಹಾಗೆಯೇ ಸಂಬಳಗಳನ್ನು ಶೇ. ೫೦ ರಷ್ಟು ಖೋತಾ ಮಾಡಿರುವುದು ಅತ್ಯಂತ ಶೋಚನೀಯ.

ಸಂ.

ಲೋಹ ಸಂಶೋಧನಾಲಯ

ಜಮ್‌ಷೆಡ್‌ಪುರದಲ್ಲಿ ನಿನ್ನೆ ಭಾರತ ಪ್ರಧಾನಿ ಪಂಡಿತ ನೆಹರೂರವರು ರಾಷ್ಟ್ರೀಯ ಲೋಹಸಂಶೋಧನಾಲಯದ ಪ್ರಾರಂಭೋತ್ಸವವನ್ನು ನಡೆಸಿದರು. ದೇಶದ ಪ್ರಗತಿಗಾಗಿ ವೈಜ್ಞಾನಿಕ ಸಂಶೋಧನಾಲಯಗಳನ್ನು ಹೆಚ್ಚುಹೆಚ್ಚಾಗಿ ನಾವು ಸ್ಥಾಪಿಸಿ, ಆಹಾರ, ಜೀವನ ಸಮಸ್ಯೆ ಪರಿಹಾರಗಳಿಗಾಗಿ ವೈಜ್ಞಾನಿಕರ ಸಲಹೆಯನ್ನು ನಾವು ಪಡೆಯಬೇಕು. ದ್ರವ್ಯಾನುಕೂಲವು ಹೆಚ್ಚಾಗಿಲ್ಲದಿದ್ದರೂ ವೈಜ್ಞಾನಿಕ ಸಂಶೋಧನೆಗಳಲ್ಲಿ ಭಾರತವು ಮುನ್ನಡೆಯುತ್ತಲಿದೆ ಎಂದು ನೆಹರೂರವರು ಹೇಳಿದರು.

ಕೋಟ್ಯಾಂತರ ಹಣ ದುರ್ವ್ಯಯ

ಸಣ್ಣ ಪುಟ್ಟ ನೀರಾವರಿ ಕೆಲಸಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ದುರ್ವ್ಯಯ ಮಾಡಲಾಗಿದೆ ಎಂದು ಬೀಹಾರದ ಹಣಕಾಸಿನ ಸಚಿವ ಶ್ರೀ ಎ ಎನ್. ಸಿನ್ಹರವರು ಕಾಂಗ್ರೆಸ್ ಕೆಲಸಗಾರರನ್ನುದ್ದೇಶಿಸಿ ಗಯಾದ ರಾಜೇಂದ್ರ ಆಶ್ರಮದಲ್ಲಿ ಮಾತನಾಡುತ್ತಾ ಹೇಳಿರುವರು.

ಅನೇಕ ಸಣ್ಣ ನೀರಾವರೀಯೋಜನೆಗಳೆಲ್ಲವೂ ಹಾಸ್ಯಾಸ್ಪದವಾದುವು, ಒಂದು ಇಲಾಖೆಗೂ ಮತ್ತೊಂದು ಇಲಾಖೆಗೂ ಹೊಂದಾವಣಿಕೆಯೇ ಇಲ್ಲ. ಸರಿಯಾದ ನೀರಾವರಿ ಸೌಕರ್ಯಗಳಿದ್ದಲ್ಲಿ ಕ್ಷಾಮ ಪರಿಸ್ಥಿತಿಯೇ ಉಂಟಾಗುತ್ತಲಿರಲಿಲ್ಲವೆಂದೂ ತಿಳಿಸಿರುವರು.

ಖಾನ್ ಸಹೋದರರು

ಖಾನ್ ಸಹೋದರರನ್ನು ಬಿಡುಗಡೆ ಮಾಡದಿರುವುದನ್ನು ಪ್ರತಿಭಟಿಸಿ, ಭಾರತದ ಅನೇಕ ಪಟ್ಟಣಗಳಲ್ಲಿ ಸಭೆಗಳಾಗುತ್ತಲಿವೆ. ದೇಶದ ಸ್ವಾತಂತ್ರ್ಯಸಮರದಲ್ಲಿ ಅಮೋಘವಾದ ಸೇವೆ ಸಲ್ಲಿಸಿದ ಈ ವೀರರನ್ನು ಬಿಡುಗಡೆ ಮಾಡದಿರುವುದು ವಿಷಾದಕರವೆಂದು ಪಂಡಿತ ನೆಹರೂರವರು ಹೇಳಿರುವರು.

ಶ್ರೀ ಜಯಪ್ರಕಾಶ ನಾರಾಯಣರವರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಪಾಕೀಸ್ತಾನದ ಧೋರಣೆಯ ವಿಷಯದಲ್ಲಿ ನಮ್ಮ ಆಕ್ರೋಶವನ್ನು ವ್ಯಕ್ತಪಡಿಸಬಹುದು. ನಾವು ಸಭೆಗಳನ್ನು ನಡೆಸಿ ಪ್ರತಿಭಟನೆ ತೋರ್ಪಡಿಸಿದರೆ ಪ್ರಪಂಚದ ಗಮನವು ಇತ್ತಕಡೆ ಸೆಳೆದಂತಾಗುವುದೆಂದೂ ಹೇಳಿರುವರು.

ನೇಪಾಳ ಪರಿಸ್ಥಿತಿ

ನೇಪಾಳದ ಮಾಜಿ ಮುಖ್ಯಮಂತ್ರಿ ಮಹಾರಾಜ ಪದ್ಮ ಸಂಶೇರ್ ಜಂಗ್ ಬಹದ್ದೂರ್‌ರವರು ನೇಪಾಳದಲ್ಲಿ ಉಂಟಾಗಿರುವ ವಿವಾದವನ್ನು ಪರಿಹರಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿಯಬರುತ್ತದೆ. ಇವರು ತಮ್ಮ ರಾಜ್ಯದ ಸುಧಾರಣೆಗಳ ವಿಷಯದಲ್ಲಿ ೧೯೪೮ ತಮ್ಮ ಹುದ್ದೆಗೆ ರಾಜೀನಾಮೆಯನ್ನಿತ್ತು, ಈಗ ಭಾರತದಲ್ಲಿರುವರು

ಭಾರತ ಸರ್ಕಾರವೇನಾದರೂ ಶಾಂತಿಯುತ ರೀತಿಯಲ್ಲಿ ವಿವಾದವನ್ನು ಮುಕ್ತಾಯಮಾಡಲು ಕರೆದಲ್ಲಿ ತಾವು ಸಹಕರಿಸುವುದಾಗಿ ಕಾಂಗ್ರೆಸ್ ಅಧ್ಯಕ್ಷರು ಈಗಾಗಲೇ ತಿಳಿಸಿರುವರು.

ನೇಪಾಳದ ಇಂದಿನ ಪರಿಸ್ಥಿತಿಯನ್ನು ವಿಶದವಾಗಿ ಚರ್ಚಿಸಲು ನೇಪಾಳದ ಮುಖ್ಯ ಮಂತ್ರಿಯವರ ಪ್ರತಿನಿಧಿಗಳಾಗಿ ಅಲ್ಲಿಯ ಇಬ್ಬರು ಮಂತ್ರಿಗಳು ಸದ್ಯದಲ್ಲೇ ಭಾರತಕ್ಕೆ ಬಂದು ಪ್ರಧಾನಿ ಪಂಡಿತನೆಹರೂರವರೊಡನೆ ಚರ್ಚೆ ನಡೆಸುವರೆಂದು ತಿಳಿಯಬರುತ್ತದೆ.

ವಿಮಾನವನ್ನು ಕದ್ದ ಕಳ್ಳ

ಬ್ರಾಂಡ್ಲೆ ಪ್ರಸೆಲ್ ಎಂಬ ೧೯ ವರ್ಷ ಬಾಲಕನು ಬ್ರಿಟಿಷ್ ಆಸ್ಟರ್ ವಿಮಾನವನ್ನು ಕದ್ದು ಸ್ಯಾಪಟ್ ವಿಮಾನನಿಲ್ದಾಣದಿಂದ ಪೋರ್ಟ್‌ಸವ್‌ಗೆ ಹೋಗುತ್ತಲಿದ್ದುದನ್ನು ಪೋಲೀಸಿನವರು ಕಂಡು ಹಿಡಿದು ಆ ಬಾಲಕನನ್ನು ಅಲ್ಲಿಯನ್ಸ್ ಹತ್ತಿರ ದಸ್ತಗಿರಿ ಮಾಡಿದ್ದಾರೆ.

ರಾಷ್ಟ್ರೀಯ ವಿದ್ಯಾರ್ಥಿ ಸಂಘ

ಅಖಿಲ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಸಂಘದ ಮೈಸೂರು ಪ್ರಾಂತ ಶಾಖೆಯು ಸ್ಥಾಪಿಸಲ್ಪಟ್ಟಿದೆ ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿಯು ಮಹೋತ್ತರವಾಗಿಯೂ ಮತ್ತು ಅತ್ಯಧಿಕವಾಗಿಯೂ ಇದೆ ಮುಂದೆ ರಾಜ್ಯಸೂತ್ರಗಳನ್ನು ವಹಿಸಬೇಕಾದ ವಿದ್ಯಾರ್ಥಿಗಳಲ್ಲಿ ಸಂಘಟನೆ, ಶಿಸ್ತು, ಮತ್ತು ಜ್ಞಾನಾರ್ಜನೆಯ ಮನೋಭಾವ ಬೆಳೆಯಬೇಕು ಇಂತಹ ಉದಾತ್ತ ಭಾವನೆಗಳನ್ನೊಳಗೊಂಡು ಭವ್ಯ ಭಾರತದ ನಿರ್ಮಾಣದಲ್ಲಿ ವಿದ್ಯಾರ್ಥಿಗಳು ಪ್ರಥಮಸ್ಥಾನ ಗಳಿಸುವಂತೆ ಚೇತನವುಂಟು ಮಾಡುವ ಉದ್ದೇಶದಿಂದ ಪಕ್ಷಾತೀತವಾದ ರಾಷ್ಟ್ರೀಯ ವಿದ್ಯಾರ್ಥಿ ಸಂಘ ಸ್ಥಾಪಿಸಲ್ಪಟ್ಟಿದೆ

ರಾಷ್ಟ್ರೀಯ ವಿದ್ಯಾ [illegible] ತ್ತರ ಉದಾತ್ತ ಶಕ್ತಿಯಾಗಿ ರೂಪುಗೊಳ್ಳಬೇಕಾದರೆ ವಿದ್ಯಾರ್ಥಿಗಳ, ವಿದ್ಯಾಸಂಸ್ಥೆಗಳ ಮತ್ತು ಸಾರ್ವಜನಿಕ ಬೆಂಬಲ ಅತ್ಯಗತ್ಯ ಆದ್ದರಿಂದ ವಿದ್ಯಾರ್ಥಿ ಸಂಘಗಳು ಮುಂದೆ ಬಂದು ರಾಷ್ಟ್ರೀಯ ವಿದ್ಯಾರ್ಥಿ ಸಂಘದ ಧ್ವಜದಡಿಯಲ್ಲಿ ಸಂಘಟಿತರಾಗಿ ವಿದ್ಯಾರ್ಥಿಗಳ ಪ್ರಗೋಭಿವೃದ್ಧಿಯನ್ನೂ ಮತ್ತು ರಾಷ್ಟ್ರದ ಏಳಿಗೆಯನ್ನೂ ಕಾರ್ಯಗತ ಮಾಡುವುದರಲ್ಲಿ ಹೃತ್ಪೂರ್ವಕವಾದ ಬೆಂಬಲ ನೀಡಬೇಕೆಂದು ಕಾರ್ಯದರ್ಶಿ ಶ್ರೀ ಬಿ ಎಸ್ ರಾಮಣ್ಣನವರು ಕೋರುತ್ತಾರೆ

ಮಹಿಳಾ ಪೋಲೀಸು

ಅರ್ಹರಾದಂಥ ಮಹಿಳೆಯರು ಬಂದರೆ ಪೋಲೀಸು ಖಾತೆಗೆ ಸೇರಿಸಿಕೊಳ್ಳಲಾಗುವುದೆಂದು ಮದರಾಸಿನ ಅಸೆಂಬ್ಲಿಯಲ್ಲಿ ಸಚಿವ ಶ್ರೀ ಬಿ ಗೋಪಾಲರೆಡ್ಡಿಯವರು ತಿಳಿಸಿರುವರು.

● ಹುಣಸೂರು ಕಾಫಿ ವರ್ಕ್ಸ್‌ನಲ್ಲಿ ಕಬ್ಬಿಣಪೆಟ್ಟಿಗೆಯಲ್ಲಿಟ್ಟಿದ್ದ ಸುಮಾರು ೧೫೦೦ ರೂಗಳ ಕಳುವಾಗಿದೆ. ಪೋಲೀಸಿನವರು ತನಿಖೆ ನಡೆಸುತ್ತಲಿರುವರು

ಜಿಲ್ಲಾ ಕಾಂಗ್ರೆಸ್‌ಸಮಿತಿ ಮೈಸೂರು

ತಾ|| ಕಾಂಗ್ರೆಸ್ ಸಮಿತಿಗಳಿಗೆ ಚುನಾವಣೆ ನಡೆಸಲು ಮುಂದೆ ಕಂಡಂತೆ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ ಶ್ರೀಗಳಾದ ಎಸ್ ಕೆ ಲಕ್ಷ್ಮೀನರಸಿಂಹಯ್ಯ ಮೈಸೂರು ತಾ|| ವೈ ಎನ್. ನಂಜುಂಡಪ್ಪ ಕೃಷ್ಣರಾಜನಗರ ತಾಲ್ಲೂಕು, ಜಿ. ಕೃಷ್ಣಮೂರ್ತಿ ಪಿರಿಯಾಪಟ್ಟಣವೂ ಸೇರಿ ಹುಣಸೂರು ತಾಲ್ಲೂಕು, ಹೆಚ್. ವಿ ದಾಸರಾಜು, ಹೆಗ್ಗಡದೇವನಕೋಟೆ ತಾಲ್ಲೂಕು, ಎಸ್ ನಾರಾಯಣರಾವ್ ಗುಂಡ್ಲುಪೇಟೆ ತಾಲ್ಲೂಕು, ಪಿ ಮಹದೇವಯ್ಯ. ನಂಜನಗೂಡು ತಾಲ್ಲೂಕು. ಡಿ ಸೂರ್ಯನಾರಾಯಣ ಯಳಂದೂರು ತಾಲ್ಲೂಕು ಮತ್ತು ಮಲಯೂರು ಬಸಪ್ಪ ಚಾಮರಾಜನಗರ ತಾಲ್ಲೂಕು ೧-೧೨-೫೦ರ ಬೆಳಗ್ಗೆ ೧೦ರಿಂದ ಮಧ್ಯಾಹ್ನ ೧ರವರೆಗೆ ಉಮೇದುವಾರಿಕೆ ಅರ್ಜಿ ಸ್ವೀಕರಿಸುವುದು ೩-೧೨-೫೦ ಮಧ್ಯಾಹ್ನ ೧೨ ರಿಂದ ೩ರವರೆವಿಗೆ ಚುನಾವಣೆ ನಡೆಯುವುದು ಸಕ್ರಿಯ ಸದಸ್ಯರು ಉಮೇದುವಾರರಾಗಲು ಅರ್ಹತೆ ಪಡೆದಿರುತ್ತಾರೆ

ಜಿಲ್ಲಾ ಕಾಂಗ್ರೆಸ್ ಸಮಿತಿ ಚುನಾವಣಾಧಿಕಾರಿಗಳನ್ನಾಗಿ ಶ್ರೀ ಕೆ ಎಸ್. ಸೂರ್ಯನಾರಾಯಣರಾಯರನ್ನು ನೇಮಿಸಲಾಗಿದೆ ಅರ್ಜಿ ಸ್ವೀಕರಿಸಲು ೬ ೧೨ ೫೦ರ ಬೆಳಗ್ಗೆ ೧೦ರಿಂದ ಮಧ್ಯಾಹ್ನ ೧ರವರೆವಿಗೆ ಚುನಾವಣೆ ೯ ೧೨- ೫೦ ಮಧ್ಯಾಹ್ನ ೧೨ರಿಂದ ೩ರವರೆವಿಗೆ ನಡೆಸಲಾಗುವುದು ಎಂಬುದಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹೆಚ್ ಕೆ. ಕುಮಾರಸ್ವಾಮಿಯವರು ಪ್ರಕಟಿಸಿದ್ದಾರೆ

ಕಾಂಗ್ರೆಸ್ ಸೈನ್ಯ

ಬೀರ್‌ಗಂಜಿಗೆ ೩೦ ಮೈಲಿ ಈಶಾನ್ಯದಲ್ಲಿ ಗಂಡಕ್ ನದಿ ದಡದಲ್ಲಿರುವ ತ್ರಿವೇಣಿ ಎಂಬ ಗ್ರಾಮವು ನೇಪಾಳಿ ಸ್ವಯಂ ಸೇವಕರ ಅಧೀನದಲ್ಲಿದೆ. ಅಲ್ಲದೆ ಅದರ ಸುತ್ತ ಇರುವ ಎಲ್ಲಾ ಪ್ರಾಂತ್ಯವೂ ಅವರ ಅಧೀನದಲ್ಲಿದೆ

ಬ್ರಿಟನ್ನಿನ ಉತ್ತರಾಧಿಕಾರಿ ಶಿವರ್ಷದ ಪ್ರಿನ್ಸ್ ಛಾರ್ಲ್ಸ್ ಮತ್ತು ಆತನ ಸಹೋದರಿ ಪ್ರಿನ್ಸೆಸ್ ಆನಿ ತಮ್ಮ ತಾಯಿ ಪ್ರಿನ್‌ಸೆಸ್ ಎಲಿಜಬೆತ್‌ರೊಡನೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ನವೆಂಬರ್ ೨೮ ಮಂಗಳವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭.೨೦ ಬಿ ದೇವೇಂದ್ರಪ್ಪ (ಕ್ಲಾರಿಯೋನೆಟ್) ೭.೪೫ ಕನ್ನಡದಲ್ಲಿ ವಾರ್ತೆ. ೮.೦ ಇಂಗ್ಲೀಷಿನಲ್ಲಿ ವಾರ್ತೆ ೮.೧೫ ಮುಕ್ತಾಯ

ಮಧ್ಯಾನ್ಹ ೧-೩೦ ಇಂಗ್ಲೀಷಿನಲ್ಲಿ ವಾರ್ತೆ ೧-೪೦ ಪಿಟೀಲು ೧-೪೫ ಹಿಂದಿಶಿಕ್ಷಣ ೨-೦ ಹಿಂದೂಸ್ಥಾನಿ ಸಂಗೀತ ೨-೩೦ ಮುಕ್ತಾಯ.

ಸಂಜೆ ೫ ೩೦ ಎಂ ಎಸ್. ಸುಶೀಲ (ಪಿಟೀಲು) ೬.೦ ಇಂಗ್ಲೀಷಿನಲ್ಲಿ ವಾರ್ತೆ. ೬.೧೦ ಗಾನವಿಹಾರ ೬.೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭.೦ ಸ್ಥಳೀಯ ಪ್ರಕಟಣೆ (ಹಿಂದಿ) ೭.೫ ಹಿಂದೂಸ್ಥಾನಿ ಸಂಗೀತ ೭.೩೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ ೮.೦ ಎಂ. ಎಸ್. ಸುಶೀಲ (ಪಿಟೀಲು) ೮.೩೦ ವೃಂದ ಸಂಗೀತ ೯.೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನಾಮೃತ (ರಿ) ೧೦.೦ ಮುಕ್ತಾಯ

● ಮಂಡ್ಯಾಜಿಲ್ಲೆಯ ರೈತರ ಸಂಘದ ಕಾರ್ಯದರ್ಶಿಯವರಾದ ಶ್ರೀ ಸಿ ಜೆ ದೇವನಾಥ್‌ರವರು ಇದೇ ೨೩ನೇ ತಾ|| ಬನ್ನೂರಿಗೆ ಭೇಟಿಕೊಟ್ಟು ರೈತರ ಮುಖಂಡರ ಮತ್ತು ವ್ಯವಸಾಯಗಾರರ ಪ್ರತಿನಿಧಿಗಳನ್ನು ಭೇಟಿ ಮಾಡಿ ಇತ್ತೀಚಿನ ಪರಿಸ್ಥಿತಿಯನ್ನು ಚರ್ಚಿಸಿದರು ರೈತರು ಈಗಿನ ಸಮಸ್ಯೆಯಲ್ಲಿ ವಿಷಯಗಳನ್ನು ವಿವರಿಸಿದರೆಂದೂ ಸರ್ಕಾರದವರು ಇನ್ನೂ ಬೆಲ್ಲ ಮಾಡಲು ಲೈಸನ್ಸನ್ನು ಕೊಡದೇ ಇರುವುದಕ್ಕೆ ವ್ಯಸನಪಟ್ಟರೆಂದೂ ಅಧಿಕಾರವರ್ಗದವರು ಕೂಡಲೇ ಲೈಸೆನ್ಸ್‌ಗಳನ್ನು ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ವ್ಯಕ್ತಪಡಿಸಿದರು.

ರಣಜಿತ್
-11-50 ರಿಂದ 8 ದಿನ ಮಾತ್ರ
ದಿನವಹಿ 3 ಪ್ರದರ್ಶನಗಳು
† ಸುರೇಶ್ † ಮಧುಬಾಲ
ಪಾತ್ರವಹಿಸಿರುವ
ಕರ್‌ದಾರ್‌ರವರ
ದುಲಾರಿ
DULARI
ಬೆಳಗಿನ ಪ್ರದರ್ಶನ 24-11-50 ರಿಂದ
3 ದಿನಗಳು ಮಾತ್ರ
ಯಾಕೂಬ್‌ರವರ
ಆಯಿಯೇ

ಸಂಪಾದಕರು ಮತ್ತು ಪ್ರಕಾಶಕರು. ಜಿ. ಎಲ್. ಸ್ವಾಮಿ. ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೮—೧೧—೧೯೫೦ನೇ ಮಂಗಳವಾರ [ಸಂಚಿಕೆ ೭೫

ಆಹಾರ ಉತ್ಕಟ ಪರಿಸ್ಥಿತಿ

ಪಡಿತರ ವ್ಯವಸ್ಥೆ ಮುರಿದು ಬೀಳುವ ಸಂಭವ

ಆಹಾರ ಪರಿಸ್ಥಿತಿಯು ಬೊಂಬಾಯಿನಲ್ಲಿ ಉತ್ಕಟವಾಗಿದೆಯೆಂದೂ ಆಹಾರ ಪಡಿತರ ವ್ಯವಸ್ಥೆಯು ಮುರಿದುಬೀಳುವ ಘಟ್ಟಕ್ಕೆ ಬಂದಿರುವುದಾಗಿ ಬೊಂಬಾಯಿ ಆಹಾರ ಮಂತ್ರಿ ಶ್ರೀ. ದಿನಕರರಾವ್ ದೇಸಾಯಿಯವರು ಪತ್ರಿಕಾ ಸಮ್ಮೇಳನದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ನೆಹರೂ ಹಿಂತಿರುಗಿದರು

ಪ್ರಧಾನಿ ಪಂ. ನೆಹರೂರವರು ಸಚಿವ ಗೋಪಾಲಸ್ವಾಮಿ ಐಯಂಗಾರ್ಯರೊಡನೆ ಜಮ್‌ಷೆಡ್‌ಪುರದ ತಮ್ಮ ೩ ದಿನಗಳ ಕೆಲಸಕಾರ್ಯಗಳನ್ನು ಮುಗಿಸಿಕೊಂಡು ನೆನ್ನೆ ದೆಹಲಿಗೆ ಹಿಂತಿರುಗಿದರು.

ಗೌರವ ಪ್ರಶಸ್ತಿ

ಅಧ್ಯಕ್ಷ ರಾಜೇಂದ್ರಪ್ರಸಾದ್‌ರವರಿಗೆ ಮುಂದಿನ ಜನವರಿಯಲ್ಲಿ ನಡೆಯುವ ಪಂಜಾಬು ವಿಶ್ವವಿದ್ಯಾನಿಲಯವು ಡಾಕ್ಟರ್ ರೇಟ್ ಗೌರವ ಪ್ರಶಸ್ತಿಕೊಡಬೇಕೆಂದು ಪಂಜಾಬು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯು ತೀರ್ಮಾನಿಸಿದೆ ಹಾಗೆಯೇ ಪಂಜಾಬಿನ ಮುಖ್ಯ ಮಂತ್ರಿ ಶ್ರೀ ಗೋಪೀಚಂದ್ ಭಾರ್ಗವ, ಪಾಟಿಯಾಲಾ ಮತ್ತು ಪೂರ್ವ ಪಂಜಾಬಿನ ರಾಜಪ್ರಮುಖರಿಗೂ ಗೌರವ ಪ್ರಶಸ್ತಿಯನ್ನು ಕೊಡಲು ತೀರ್ಮಾನಿಸಿದೆ.

ಉಚಿತ ಪೆನಿಸಿಲಿನ್

ಬೊಂಬಾಯಿ ಪ್ರಾಂತ್ಯದ ಎಲ್ಲಾ ಸರ್ಕಾರಿ ಮತ್ತು ಸರ್ಕಾರ ಸಹಾಯ ಪಡೆಯುವ ಎಲ್ಲಾ ಆಸ್ಪತ್ರೆಗಳಲ್ಲೂ ಬಡವರ ಚಿಕಿತ್ಸೆಗಾಗಿ ಉಚಿತವಾಗಿ ಪೆನಿಸಿಲಿನ್ ಸರಬರಾಜು ಮಾಡಲು ಸರ್ಕಾರ ನಿರ್ಧರಿಸಿದೆ.

ಕೋಮುವಾರು ಜಿ. ಓ.

ಮದ್ರಾಸಿನ ಕೋಮುವಾರು ಜಿ. ಓ. ವಿಷಯದಲ್ಲಿ ಕೇಂದ್ರ ಸರ್ಕಾರವು ವಿವರಗಳನ್ನು ಕೇಳಿರುವುದಾಗಿ ಸರ್ದಾರ್ ಪಟೇಲರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಅಣು ವಿಜ್ಞಾನಿಗಳ ಸಮ್ಮೇಳನ

ಅಂತರ ರಾಷ್ಟ್ರೀಯ ಅಣು ವಿಜ್ಞಾನಿಗಳ ಸಮ್ಮೇಳನವು ಡಿ ೧೪ ರಲ್ಲಿ ಬೊಂಬಾಯಿಯಲ್ಲಿ ಸೇರಲಿದೆ.

ಪ್ರಚಂಡ ಬಿರುಗಾಳಿ

ಅಮೆರಿಕಾ ಸಂಯುಕ್ತ ಸಂಸ್ಥಾನದ ಪೂರ್ವ ತೀರದ ಮೇಲೆ ೨೫ನೇ ತಾ|| ಪ್ರಚಂಡ ಬಿರುಗಾಳಿ ಎದ್ದು ನೂರುಮಂದಿಗಿಂತ ಹೆಚ್ಚು ಜನರು ಮಡಿದಿರುವರು.

ಕಾರ್ಯಕಾರಿಸಮಿತಿ

ನಿನ್ನೆ ರಾತ್ರಿ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸೇರಿ, ಬೆಂಗಳೂರು ಕಾರ್ಪೊರೇಷನ್ನಿನ ಚುನಾವಣೆಗೆ ಉಮೇದುವಾರರ ಆಯ್ಕೆ ಸಂಬಂಧದಲ್ಲಿ ಅಪೀಲುಗಳನ್ನು ಪರಿಶೀಲಿಸಿತು.

● ತಾ|| ೨೭-೧೧-೫೦ ರಲ್ಲಿ ನೇತಾಜಿ ಬ್ಯಾಸ್ಕೆಟ್ ಬಾಲ್ ಪಂದ್ಯದಲ್ಲಿ ಮೈಸೂರು ಯಂಗಸ್ಟರ್ಸ್ ಎ ಟೀಮಿಗೂ ಮಹಾರಾಜಾಕಾಲೇಜ್ ಬಿ ಟೀಮಿಗೂ ಪಂದ್ಯ ನಡೆದು ಯಂಗಸ್ಟರ್ಸ್ ಎ ಟೀಮಿನವರು ೭ ಪಾಯಿಂಟು ಗಳಿಂದ ಜಯಶೀಲರಾದರು.

೯ ಕೋಟಿ ಪೌಂಡುಗಳ ದಾವಾ

ಟ್ರಾಕ್ಟರ್ ಡಿಸೈನರಾದ ಮಿ|| ಫರ್ಗ್ಯುಸನ್‌ರವರು ಫೋರ್ಡ್ ಮೋಟಾರು ಕಂಪೆನಿಯ ಮೇಲೆ ೯ ಕೋಟಿ ಪೌಂಡುಗಳ ದಾವಾವನ್ನು ಹೂಡಬಯಸಿದ್ದಾರೆ ತಮ್ಮ ಟ್ರಾಕ್ಟರ್ ಡಿಸೈನನ್ನು ಕಂಪೆನಿಯವರು ದುರುಪಯೋಗಪಡಿಸಿಕೊಂಡಿರುವುದಕ್ಕಾಗಿ ಈ ದಾವಾ ಹೂಡುವರು.

ಹಿಂದೂಮಹಾಸಭಾ ಸಮ್ಮೇಳನದ ನಿರ್ಣಯ

ಭಾರತದ ಮುಖ್ಯ ಮಂತ್ರಿಗಳು ಈ ಹಿಂದೆ ಇತ್ತಿದ್ದ ಭರವಸೆ ವಾಗ್ದಾನಗಳಿಗೆ ವ್ಯತಿರಿಕ್ತವಾಗಿ ಮಹಾಚುನಾವಣೆಗಳನ್ನು ಮುಂದುವರಿಸಿರುವುದು ಖಂಡನೀಯವೆಂದು ಹಿಂದೂಮಹಾಸಭಾ ಸಮ್ಮೇಳನ ನಿರ್ಣಯವೊಂದನ್ನು ಮಾಡಿದೆ.

ಚುನಾವಣೆಗಳನ್ನು ಮತ್ತೆ ಮುಂದೆಹಾಕಲು ಯತ್ನಿಸಿದರೆ ಅದು ಜನತೆಯ ಅಭಿಪ್ರಾಯವನ್ನು ತಡೆದಿಡಲು ಮಾಡಿದ ಹಂಚಿಕೆಯೆಂದು ಜನ ಅರ್ಥಮಾಡಿಕೊಳ್ಳುವರೆಂದೂ, ಈಗ ಎಲ್ಲೆಲ್ಲೂ ವ್ಯಕ್ತಪಡುತ್ತಿರುವ ಲಂಚ-ರುಷುವತ್ತುಗಳು, ಆಡಳಿತ ಅಸಾಮರ್ಥ್ಯ ಇವುಗಳನ್ನು ಮುಂದುವರಿಸಲು ಮಾಡಿದ ಯತ್ನವೆಂದು ಭಾವಿಸಲಾಗುವುದೆಂದೂ ನಿರ್ಣಯದಲ್ಲಿ ತಿಳಿಸಲಾಗಿದೆ.

ನೆಹರೂ ಲಿಯಾಖತ್ ಒಪ್ಪಂದ ಪೂರ್ವ ಬಂಗಾಳದ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡಿಸುವುದರಲ್ಲಿ ಯಶಸ್ವಿಯಾಗಿಲ್ಲವೆಂದು ಇನ್ನೊಂದು ನಿರ್ಣಯ ಅಂಗೀಕೃತವಾಯಿತು.

ಆಹಾರ ಪದಾರ್ಥಗಳು ಮತ್ತಿತರ ಅಗತ್ಯ ವಸ್ತುಗಳ ಮೇಲಿನ ಹತೋಟಿಗಳನ್ನು ರದ್ದುಗೊಳಿಸಬೇಕೆಂದು ಸಮ್ಮೇಳನ ನಿರ್ಣಯಿಸಿತು.

ದೇಶದ ಗಡಿ ಪರಿಸ್ಥಿತಿ ವಿಷಮಿಸಿರುವುದರಿಂದ ರಕ್ಷಣಾ ಬಲ ಹೆಚ್ಚಿಸಬೇಕು ಮತ್ತು ಯುವಕರಿಗೆ ಒತ್ತಾಯ ಮಿಲಿಟರಿ ಶಿಕ್ಷಣ ಕೊಡಿಸಬೇಕೆಂದೂ ನಿರ್ಣಯ ಮಾಡಲಾಯಿತು.

ಪ್ರಾಮಾಣಿಕತೆ ಅತ್ಯವಶ್ಯಕ

ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಜೀವನದ ಹೋರಾಟವನ್ನು ಪ್ರವೇಶಿಸುವಾಗ ಕೆಲವರು ವಿಜಯಿಗಳಾಗುವರು. ಕೆಲವರು ಅನೇಕ ಕಷ್ಟಪರಂಪರೆಗಳನ್ನು ಅನುಭವಿಸಬೇಕಾಗುವುದು. ಆದರೆ ತೊಂದರೆಗಳನ್ನು ಎದುರಿಸಬೇಕಾದರೆ ಅವರಲ್ಲಿ ಪ್ರಾಮಾಣಿಕತೆ ಮತ್ತು ಉತ್ತಮನಡತೆ ಅತ್ಯವಶ್ಯಕ ಎಂದು ವಿದ್ಯಾಸಚಿವ ಶ್ರೀ ಮಾಧವ ಮೆನನ್‌ರವರು ಅಣ್ಣಾಮಲೆ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭಾಷಣದಲ್ಲಿ ಹೇಳಿರುವರು.

● ೧೯೫೧ನೇ ಜೂನ್ ಆಖೈರಿನವರಿಗೆ ಈಗಿರುವ ಶಿರಾಳಕೊಪ್ಪ ಪೌರಸಭೆಯ ಅವಧಿಯನ್ನು ಹೆಚ್ಚಿಸಲಾಗಿದೆ.

ನೆಹರೂ-ಲಿಯಾಖತ್ ಒಪ್ಪಂದ

ನೆಹರೂ-ಲಿಯಾಖತ್ ಒಪ್ಪಂದವನ್ನು ಪಾಕಿಸ್ತಾನ ಉಲ್ಲಂಘಿಸಿದೆ. ಆದ್ದರಿಂದ ನಾವು ಅದನ್ನು ಕ್ರಮಬದ್ಧವಲ್ಲವೆಂದು ಸಾರಬೇಕು ಎಂದು ಅ||ಭಾ|| ಹಿಂದೂಮಹಾಸಭಾಧ್ಯಕ್ಷ ಡಾ|| ಎನ್.ಬಿ. ಖರೆ ತಿಳಿಸಿದರು.

ಜನತಾಸೇನೆ ವಶದಲ್ಲಿರುವ ಪ್ರದೇಶದಲ್ಲಿ ಭೂಸುಧಾರಣೆ

ನೇಪಾಳದಲ್ಲಿ ಜನತಾ ಸೇನೆಯ ವಶದಲ್ಲಿರುವ ಪ್ರದೇಶದಲ್ಲೆಲ್ಲಾ ಜಮೀನನ್ನು ರೈತರಿಗೆ ಹಂಚಲಾಗಿದೆಯೆಂದೂ ಅನೇಕ ಸ್ಥಳಗಳಲ್ಲಿ ಭೂ ಸುಧಾರಣೆ ಕೈಗೊಳ್ಳಲಾಗಿದೆಯೆಂದೂ ನೇಪಾಳಿ ಕಾಂಗ್ರೆಸ್ ನಾಯಕ ಶ್ರೀ. ಬಿ. ಪಿ. ಕೊಯಿರಾಲಾ ತಿಳಿಸಿದ್ದಾರೆ.

ಅಸ್ಸಾಂ ಭೂಕಂಪನಿಧಿ

ಗೌರ್ನರ್ ಅಸ್ಸಾಂ ಭೂಕಂಪನಿಧಿಗೆ ನವಂಬರ್ ೨೨ನೇ ತಾ|| ವರೆಗೆ ೩೩,೭೦,೮೯೦ ರೂಪಾಯಿಗಳು ವಸೂಲಾಗಿವೆ.

● ಹರಿಜನರ ವಿದ್ಯಾಭಿವೃದ್ಧಿ, ನೈತಿಕ ಮತ್ತು ಸಾಮಾಜಿಕ ಏಳಿಗೆಗಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಸರ್ಕಾರವು ನಿರ್ಧರಿಸಿದೆ. ಹಿಂದೂ ಜನಾಂಗವು ಸರ್ಕಾರದೊಡನೆ ಸಹಕರಿಸಬೇಕು ಎಂದು ಮದರಾಸ್ ಗೌರ್ನರ್ ಭಾವಾನಗರ ಮಹಾರಾಜರು ಮದರಾಸಿನಲ್ಲಿ ಹೇಳಿರುವರು.

● ಮೈಸೂರು ನಗರದ ರೆಗ್ಯುಲೇಟೆಡ್ ಮಾರ್ಕೆಟ್ಟಿನ ವಿಷಯವಾಗಿ ಅಧಿಕಾರಯುತವಾಗಿ ಕೆಲವು ಅಂಶಗಳನ್ನು ಪತ್ರಿಕೆಯವರಿಗೆ ತಿಳಿಸಲೋಸುವ ಮೈಸೂರು ನಗರ ಗ್ರೇನ್ ಮರ್ಚೆಂಟ್ಸ್ ಅಸೋಸಿಯೇಷನ್ನಿನವರು ನಗರದ ಪತ್ರಿಕಾಕರ್ತರನ್ನು ನಾಳೆ ಸಂಜೆ ತಮ್ಮ ಸಂಘಕ್ಕೆ ಆಹ್ವಾನಿಸಿದ್ದಾರೆ.

● ನಿನ್ನೆ ನಡೆದ ವಾಲೀಬಾಲು ಪಂದ್ಯದಲ್ಲಿ ಮಹಾರಾಜ ಕಾಲೇಜು ಮತ್ತು ನುಗ್ಗೆಹಳ್ಳಿ ವಾಲೀಬಾಲು ಟೀಮುಗಳಿಗೆ ಪಂದ್ಯ ನಡೆದು ಮಹಾರಾಜಕಾಲೇಜಿನವರು ಜಯಶೀಲರಾದರು.

● ನ್ಯಾಯವಿಧಾಯಕ ಸಭೆಯ ಅಧಿವೇಶನವು ಮುಂದುವರಿದುದರಿಂದ ವಿಶ್ವವಿದ್ಯಾನಿಲಯದ ಪ್ರೊ ಛಾನ್ಸಿಲರ್ ಶ್ರೀ ಸಿ. ಆರ್. ರೆಡ್ಡಿಯವರು ತಮ್ಮ ಬೆಂಗಳೂರು ಪ್ರವಾಸವನ್ನು ನಿಲ್ಲಿಸಿದ್ದಾರೆ

○ ಮದರಾಸು ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಅಧ್ಯಕ್ಷರಾದ ಶ್ರೀ ರಾಮಕೃಷ್ಣರಾಜುರವರು ಸದ್ಯದಲ್ಲೇ ಮೈಸೂರಿಗೆ ಭೇಟಿ ಕೊಡಲಿರುವರೆಂದು ತಿಳಿಯಬರುತ್ತದೆ.

ಸಿದ್ಧವಾಗಿದೆ
ಶ್ರೀ ಎಚ್. ಎಂ. ಶಂಕರನಾರಾಯಣರಾಯರ
ಹರಿಶ್ಚಂದ್ರಕಾವ್ಯ ಸಂಗ್ರಹದ ಕೈಗನ್ನಡಿ
ರಾಮಚಂದ್ರ ಬುಕ್‌ಡಿಪೊ ಮೈಸೂರು

ಪತ್ರವ್ಯವಹಾರ

ರಾಗಿಯಮೆದೆಗೂ ಹುಳು ಬೀಳುತ್ತಿದೆ

ಈಗ್ಗೆ ಸುಮಾರು ೨ ತಿಂಗಳ ಹಿಂದೆ ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಮತ್ತು ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ಕಾರುರಾಗಿಯ ಮೆದೆಗಳಿಗೆ ಹುಳುವು ಬಿದ್ದು, ಕೆಲವು ಕಡೆಗಳಲ್ಲಿ ರಾಗಿಯ ಪಸಲು ಹಾಳಾಯಿತು. ಇದು ವ್ಯವಸಾಯದ ಇಲಾಖೆಯವರಿಗೆ ಗೊತ್ತಾಗಿ, ಅವರು ಹುಳುಗಳು ಹರಡದಂತೆ ಕೂಡಲೇ ಸೂಕ್ತ ಏರ್ಪಾಡುಗಳನ್ನು ಮಾಡಿದರು. ಇದರಿಂದ ರೈತರಿಗೆ ಹೆಚ್ಚು ನಷ್ಟವಾಗುವುದು ತಪ್ಪಿತು.

ಈಗ ಈ ಹುಳುಗಳ ಕಾಟ ಮೈಸೂರು ತಾಲ್ಲೂಕಿನ ಹೈನುರಾಗಿಯ ಮೆದೆಗಳ. [illegible] ನದಲ್ಲಿಯೂ ಅಲ್ಲಲ್ಲೇ ಈ ಉಪದ್ರವ ತಲೆದೋರುತ್ತಿರುವುದಾಗಿ ವರ್ತಮಾನ. ಇದು ಕ್ರಮೇಣ ಇತರ ಕಡೆಗಳಿಗೂ ಹರಡುವ ಸಂಭವವುಂಟು. ಈ ಹುಳುಗಳು ಮೊದಲು ಓಟೆ ಹುಳುವಿಗಿಂತಲೂ ಚಿಕ್ಕದಾಗಿದ್ದು; ಚಿಟ್ಟೆ ಹುಳುವಿನಂತೆ ಸಿಡಿಯುತ್ತಾ, ಅನಂತರ ಕಂಬಳಿ ಹುಳುವಿನಂತೆ ಕಪ್ಪಗೆ ಉದ್ದವಾಗಿರುತ್ತವೆ. ಆದರೆ ಕಂಬಳಿ ಹುಳುವಿನಂತೆ ಇವುಗಳ ಮೈಮೇಲೆ ಕೂದಲಿರುವುದಿಲ್ಲ. ಇವು ಮೆದೆಯ ಒಳಗಡೆಯೇ ವೃದ್ಧಿಯಾಗುವುದರಿಂದ ಮೆದೆಯನ್ನು ಪದೇಪದೇ ಪರೀಕ್ಷಿಸುತ್ತಲೇ ಇರಬೇಕಾಗುತ್ತದೆ. ಆದ್ದರಿಂದ ನಮ್ಮ ಸಂಸ್ಥಾನದಲ್ಲಿ ರಾಗಿಯನ್ನು ಬೆಳೆದು ಮೆದೆ ಹಾಕಿರುವ ರೈತರುಗಳೆಲ್ಲರೂ ಒಕ್ಕಣೆಯನ್ನು ಸಂಕ್ರಾಂತಿ ಅಥವಾ ಶಿವರಾತ್ರಿಯವರೆಗೆ ಮುಂದುವರಿಸದೆ, ಎಚ್ಚರಿಕೆಯಿಂದಿದ್ದು ಹುಳುಗಳು ಮುತ್ತುವುದಕ್ಕೆ ಮುಂಚೆಯೇ ಒಕ್ಕಣೆಯನ್ನು ಮಾಡಬೇಕು. ಇಲ್ಲವಾದರೆ, ಈಗಿನ ಆಹಾರ ಅಭಾವಗಲ್ಲಿ, ‘ಕೈಗೆಬಂದ ತುತ್ತು ಬಾಯಿಗೆ ಬರದೆ ರೈತರು ಬಹಳ ಕಷ್ಟಕ್ಕೆ ಸಿಕ್ಕಬೇಕಾಗುತ್ತದೆ. ಈ ವಿಷಯದಲ್ಲಿ ಸರ್ಕಾರದ ಮೇಲೆ ಬಿದ್ದ ಜವಾಬ್ದಾರಿಯೂ ಬಹಳವಾಗಿದೆ. ವ್ಯವಸಾಯದ ಇಲಾಖೆಯವರು ಈ ವಿಷಯದಲ್ಲಿ ಕೂಡಲೇ ರೈತರಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ರಾಗಿಯಫಸಲು ಹಾಳಾಗದಂತೆ ವ್ಯವಸ್ಥೆಮಾಡಬೇಕು. ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ತಾ|| ಅಮಲ್ದಾರರುಗಳು ಸಹ ಮುತುವರ್ಜಿವಹಿಸಿ, ರಾಗಿಯ ಒಕ್ಕಣೆಯನ್ನು ಮಾಡಲು ರೈತರಿಗೆ ಯಾವ ಅಡಚಣೆಯೂ ಆಗದಂತೆಯೂ, ಆಗಿರುವ ಫಸಲು ಹುಳುಗಳ ಪಾಲಾಗದಂತೆಯೂ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿ ಕೋರುತ್ತೇನೆ.

ಇವಿಷ್ಟೂ ಮನುಷ್ಯ ಪ್ರಯತ್ನದಿಂದ ಮಾಡಬಹುದಾದ ಕೆಲಸಗಳು. ಆದರೆ ಇದರಿಂದ ನಾವು ಅರಿಯಬೇಕಾದ ಮಹತ್ವದ ವಿಚಾರ ಮತ್ತೊಂದಿದೆ. ಅದೇನೆಂದರೆ, ದವಸಗಳಿಗೆ ಹುಳುವು ಬಿದ್ದು ಹಾಳಾಗುವುದು ಹೊಸದಲ್ಲ. ಆದರೆ ರಾಗಿಗೆ ಹುಳು ಬೀಳುವುದೆಂದರೆ ಹಿಂದೆ ಎಂದೂ ನಡೆಯದ ಮತ್ತು ಯಾರೂ ಕೇಳದೇ ಇದ್ದ ವಿಚಿತ್ರ. ೭೦-೮೦ ವರ್ಷದ ವೃದ್ಧ ರೈತರುಗಳು ಇಂತಹ ವೈಪರೀತ್ಯವನ್ನು ತಾವೆಂದೂ ಕಂಡು ಕೇಳಿರಲಿಲ್ಲವೆಂದೂ, ಇದೆಲ್ಲಾ ಕಾಲಮಹಿಮೆಯೆಂದೂ ಹೇಳುತ್ತಾರೆ.

ಧಾನ್ಯಗಳನ್ನು ಬೆಳೆದು ಎಲ್ಲರಿಗೂ ಆಹಾರವನ್ನು ಒದಗಿಸುವವರು ರೈತರು ಅವರೇ ನಿಜವಾದ ಕರ್ಮಯೋಗಿಗಳು ಆದರೆ ಅವರಿಗೀಗ ನವನಾಗರೀಕತೆಯ ಹುಚ್ಚುಹಿಡಿದಿದೆ. ಇದೇ ಇಂದಿನ ನಮ್ಮ ಎಲ್ಲ ಕಷ್ಟನಷ್ಟಗಳಿಗೂ ಕಾರಣ. ಇದರಿಂದ ರೈತರು ಮಾತ್ರವಲ್ಲ. ಸರ್ವರೂ ಹಾಳಾಗುತ್ತಾರೆ, ನೈತಿಕ ಬಲವಿಲ್ಲದ ಕಾನೂನುಗಳಿಂದ ಈ ವೈಪರೀತ್ಯವನ್ನು ನಿವಾರಿಸಲು ಎಂದಿಗೂ ಸಾಧ್ಯವಿಲ್ಲ. ಇದಕ್ಕೆ ರೈತರ ವರ್ತಕರ ಜನಸಾಮಾನ್ಯರ ಹಾಗೂ ಅಧಿಕಾರಿಗಳ ನೈತಿಕ ಮಟ್ಟವು ಉತ್ತಮಗೊಳ್ಳುವುದೊಂದೇ ಪರಿಹಾರವಾಗಿದೆ. ಇಲ್ಲವಾದರೆ ಇದಕ್ಕಿಂತಲೂ ಹೆಚ್ಚು ಭಯಂಕರವಾದ ಕಷ್ಟಗಳು ನಮಗೆ ಪ್ರಾಪ್ತವಾಗಬಹುದೆಂಬುದನ್ನು ಯಾರೂ ಮರೆಯಬಾರದು

ಎಂ. ಆರ್. ಸಿ. ಬಸಪ್ಪ.

ರಾಷ್ಟ್ರೀಕರಣವೆ ?

ಡೆಕ್ಕನ್‌ಏರ್‌ವೇಸ್, ಏರ್ ಸರ್ವಿಸಸ್.ಆಫ್-ಇಂಡಿಯಾ ಮತ್ತು ಹಿಮಾಲಯ ಏರಿಯೇಷನ್ನಿನ ಏರ್ ಮೇಲ್ ಸರ್ವಿಸುಗಳನ್ನು ಭಾರತ ಸರ್ಕಾರವು ವಹಿಸಿಕೊಳ್ಳುವ ವಿಷಯವನ್ನು ಪರಿಶೀಲಿಸುತ್ತಲಿರುವುದಾಗಿ ತಿಳಿಯಬಂದಿದೆ. ಡೆಕ್ಕನ್‌ಏರ್‌ವೇಸ್‌ನಲ್ಲಿ ಶೇಕಡ ೭೦ ರಷ್ಟು ಷೇರುಗಳು ಹೈದರಾಬಾದ್ ಸರ್ಕಾರಕ್ಕೆ ಸೇರಿವೆ.

ವಿಶ್ವಸಂಸ್ಥೆಗೆ ಪ್ರತ್ಯೇಕ ಅಂಚೆ ವ್ಯವಸ್ಥೆ

ಹೊಸ ವರ್ಷದಿಂದ ವಿಶ್ವಸಂಸ್ಥೆಯು ತನ್ನದೇ ಬೇರೆ ಅಂಚೆ ವ್ಯವಸ್ಥೆಯನ್ನು ಏರ್ಪಡಿಸಿಕೊಂಡು ನ್ಯೂಯಾರ್ಕಿನಲ್ಲಿರುವ ತನ್ನ ಕೇಂದ್ರಕಛೇರಿಯಿಂದ ಪ್ರಪಂಚದ ಎಲ್ಲಾ ಭಾಗಕ್ಕೂ ತನ್ನದೇ ಪ್ರತ್ಯೇಕವಾದ ಪೋಸ್ಟೇಜು ಸ್ಟಾಂಪುಗಳನ್ನುಪಯೋಗಿಸಿ ಕಾಗದಪತ್ರಗಳನ್ನು ರವಾನೆ ಮಾಡುವುದೆಂದು ತಿಳಿಯಬರುತ್ತದೆ.

ಸರ್ವೋದಯಪಕ್ಷ

ಸರ್ವೋದಯ ಸಮಾಜದ ಕಾರ್ಯಕರ್ತರ ಸಭೆಯು ಮೊನ್ನೆ ನಡೆದು ಜನವರಿ ೩೦ನೇ ತಾ|| ಪಶ್ಚಿಮವಾಹಿನಿಯಲ್ಲಿ ಸರ್ವೋದಯದಿನವನ್ನು ಆಚರಿಸಬೇಕೆಂದು ತೀರ್ಮಾನಿಸಿದರು.

ಜನವರಿ ತಾ|| ೩೦ ರಿಂದ ಪಶ್ಚಿಮವಾಹಿನಿಯಲ್ಲಿ ಫೆಬ್ರವರಿ ೧೨ರವರೆಗೆ ಸರ್ವೋದಯ ಪಕ್ಷವನ್ನು ಈ ಪಕ್ಷದಲ್ಲಿ ವ್ಯಾಸಂಗಗೋಷ್ಠಿ, ವಸ್ತ್ರಸ್ವಾವಲಂಬನ ಶಿಕ್ಷಣ, ಸರ್ವೋದಯಪ್ರದರ್ಶನ ಇವೇ ಮುಂತಾದುವನ್ನು ನಡೆಸಿ ಫೆಬ್ರವರಿ ೧೨ರಲ್ಲಿ ಸರ್ವೋದಯಮೇಳವನ್ನು ನಡೆಸಬೇಕೆಂದೂ ತೀರ್ಮಾನವಾಯಿತು. ಈ ಪಕ್ಷದ ವ್ಯವಸ್ಥೆಗಾಗಿ ಶ್ರೀಗಳಾದ ನ. ಭದ್ರಯ್ಯ, ಎಸ್. ವಿ. ಮಂಜುನಾಥ್ ಮತ್ತು ಎಸ್. ಎಸ್. ಶಾಸ್ತ್ರಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು.

ಸರ್ಕಾರದ ಪರಿಶೀಲನೆಯಲ್ಲಿದೆ

ನೇಪಾಳದ ೩ ವರ್ಷದ ದೊರೆಯನ್ನು ಭಾರತವು ಅಂಗೀಕರಿಸುವ ವಿಷಯವು ಇನ್ನು ಸರ್ಕಾರದ ಪರಿಶೀಲನೆಯಲ್ಲಿದೆ. ಭಾರತ ಸರ್ಕಾರವು ಅಂಗೀಕರಿಸುವುದಿಲ್ಲವೆಂಬ ಸುದ್ದಿ ನಿಜವಲ್ಲವೆಂದು ಪಂಡಿತ ನೆಹರು ನಿನ್ನೆ ಪಾರ್ಲಿಮೆಂಟಿನಲ್ಲಿ ಹೇಳಿರುವರು.

ನಿರಾಶ್ರಿತರಿಗೆ ಉದ್ಯೋಗ

ಕಲ್ಕತ್ತದಿಂದ ಮದರಾಸಿಗೆ ಆಗಮಿಸಿರುವ ೬೦೦ ಜನ ಪೂರ್ವ ಪಾಕಿಸ್ತಾನದ ನಿರಾಶ್ರಿತರಿಗೆ ಎಂ. ಎಸ್. ಎಂ. ಮತ್ತು ಎಸ್. ಐ. ರೈಲ್ವೆಯಲ್ಲಿ ಉದ್ಯೋಗ ದೊರಕಿದೆ. ಈ ನಿರಾಶ್ರಿತರೆಲ್ಲರು ತಿರುಚನಾಪಳ್ಳಿಗೆ ತೆರಳಿ ಅಲ್ಲಿ ತಮ್ಮ ತಮ್ಮ ಉದ್ಯೋಗಗಳಿಗೆ ಹೋಗುವರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೯೬೮.೪೭ ಮೀಟರು

ನವೆಂಬರ್ ೨೯ ಬುಧವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ರಂಗಪ್ಪ (ಕೊಳಲು) ೭-೩೫ ಚಿತ್ರಗೀತ (೧) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ದಿಲ್‌ರುಬ ೧-೪೫ ಹಿಂದಿಶಿಕ್ಷಣ ೨-೦ ವನಿತಾವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ರಂಗಪ್ಪ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಪ್ರಪಂಚ ವಾರ್ತೆ. ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಬಿ. ಕೆ. ಪದ್ಮನಾಭರಾವ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಮ್ಮ ಮೆಚ್ಚಿನ ಗೀತಗಳು ೧೦.೦ ಮುಕ್ತಾಯ.

ಶಿರಾಳಕೊಪ್ಪ ಪೌರಸಭೆ

೧೯೫೧ನೇ ಜುಲೈ ಒಂದರಿಂದ ಶಿರಾಳಕೊಪ್ಪ ಮೈನರ್ ಪೌರಸಭೆಯು ಟೌನ್ ಪೌರಸಭೆಯಗಿ ಪರಿವರ್ತಿಸಲಾಗಿದೆ.

ನೇಪಾಳದ ಪ್ರತಿನಿಧಿಗಳು

ನೇಪಾಳ ಸರ್ಕಾರದ ಮುಖ್ಯಮಂತ್ರಿಗಳ ಇಬ್ಬರು ಪ್ರತಿನಿಧಿಗಳು, ಭಾರತ ಸರ್ಕಾರದೊಡನೆ ಸಂಧಾನನಡೆಸಲೋಸುಗ ನಿನ್ನೆ ದೆಹಲಿಗೆ ಆಗಮಿಸಿದರು. ಅವರು ಪಂಡಿತ ನೆಹರೂರವರನ್ನು ನೋಡಿ ಮಾತುಕಥೆ ನಡೆಸುದಲ್ಲದೆ ನೇಪಾಳದ ಅರಸರು ಇಚ್ಛೆಪಟ್ಟಲ್ಲಿ ಅವರನ್ನು ಭೇಟಿ ಮಾಡುವರು.

ರಣಜಿತ್
23-11-50 ರಿಂದ 8 ದಿನ ಮಾತ್ರ
ದಿನವಹಿ 3 ಪ್ರದರ್ಶನಗಳು
† ಸುರೇಶ್ † ಮಧುಬಾಲ
ಪಾತ್ರವಹಿಸಿರುವ
ಕರ್ದಾರ್‌ರವರ :
ದುಲಾರಿ
DULARI

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೯—೧೧—೧೯೫೦ನೇ ಬುಧವಾರ [ಸಂಚಿಕೆ ೭೩

ವಿದ್ಯಾಸಚಿವ ಶ್ರೀ ಸಿದ್ದಲಿಂಗಯ್ಯನವರ ರಾಜೀನಾಮೆ ಪ್ರಕರಣ

ಮಂತ್ರಿಮಂಡಲಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳಬೇಕು

ವಿದ್ಯಾಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಮಂತ್ರಿಮಂಡಲಕ್ಕೆ ರಾಜೀನಾಮೆಕೊಡಲು ಇಚ್ಛಿಸಿ ಕಾಂಗ್ರೆಸ್ ಅಧ್ಯಕ್ಷರಿಗೆ ಪತ್ರ ಬರೆದಿದ್ದ ವಿಚಾರ, ನಿನ್ನೆ ನಡೆದ ಎಂ. ಪಿ. ಸಿ. ಸಿ. ಕಾರ್ಯಕಾರೀ ಸಮಿತಿಯ ಮುಂದೆ ಚರ್ಚೆಗೆ ಬಂದಿತ್ತು- ರಾಜೀನಾಮೆ ಪ್ರಕರಣದ ವಿಚಾರ ಬರುವ ಮುನ್ನವೆ ಇಂತಹ ಪರಿಸ್ಥಿತಿ ಒದಗಬಹುದೆಂಬ ವಿಚಾರದಲ್ಲಿ ಕಾಂಗ್ರೆಸ್ ಪ್ರಮುಖರಲ್ಲಿ ಪ್ರಸ್ತಾಪಮಾಡಲಾಗಿತ್ತೆಂದೂ, ಈಗಲೂ ರಾಜೀನಾಮೆ ಪ್ರಕರಣವನ್ನು ಪ್ರತ್ಯೇಕವಾಗಿ ನೋಡದೆ ಇದರ ಹಿನ್ನೆಲೆಯಲ್ಲಿರುವ ಮಂತ್ರಿಮಂಡಲದ ಲೋಪದೋಷಗಳನ್ನು ಸರಿಪಡಿಸುವ ವಿಚಾರ ಪ್ರಸ್ತಾಪಿಸುವುದು ಮೇಲೆಂದೂ ಹಲವು ಸದಸ್ಯರು ಅಭಿಪ್ರಾಯಪಟ್ಟರೆಂದು ಹೇಳಲಾಗಿದೆ. ಮಂತ್ರಿಮಂಡಲ ಒಡೆದುಕೊಂಡು ಹೋಗುವುದು ಸರಿಯಲ್ಲ. ಇದಕ್ಕಾಗಿ ಕೂಲಂಕಷವಾದ ವಿಮರ್ಶೆ ಅಗತ್ಯ ಎಂದು ಸಕಲ ಸದಸ್ಯರೂ ಭಾವಿಸಿದರೆಂದು ಹೇಳಲಾಗಿದೆ

ಕನ್ನಡ ಶಿಕ್ಷಣ-ಮಾಧ್ಯಮ ಚಳುವಳಿ ಕ್ರಿಯಾಸಮಿತಿಯವರ ಮನವಿ

ಈಗ ಅಧಿಕಾರದ ವ್ಯವಹಾರಭಾಷೆಯಾಗಿರುವ ಇಂಗ್ಲೀಷ್ ಭಾಷೆಯು ಇನ್ನು ಹದಿನೈದು ವರ್ಷಗಳ ಅಂತ್ಯದಲ್ಲಿ ಕೊನೆಗೊಳ್ಳಬೇಕೆಂದು ಭಾರತ ರಾಜ್ಯಾಂಗವು ಘೋಷಿಸಿದೆಯಷ್ಟೆ. ಅದರ ಪ್ರಕಾರ ಕೆಲವು ನೆರೆಯ ಪ್ರಾಂತಗಳಲ್ಲಿ ಈಗಾಗಲೇ ಸಂಯುಕ್ತ ಭಾಷೆಯನ್ನೂ, ದೇಶಭಾಷೆಯನ್ನೂ ಅಧಿಕೃತ ವ್ಯವಹಾರಭಾಷೆಗಳೆಂದು ಘೋಷಿಸಿವೆ. ವಿಶ್ವವಿದ್ಯಾನಿಲಯಗಳಲ್ಲಿ ಕೂಡ ಪ್ರಾದೇಶಿಕಭಾಷೆಯು ಪ್ರಥಮ ಭಾಷೆ ಹಾಗೂ ಶಿಕ್ಷಣ-ಮಾಧ್ಯಮವಾಗಬೇಕೆಂಬ ತತ್ವವನ್ನು ಉತ್ತರಭಾರತದ ವಿಶ್ವವಿದ್ಯಾನಿಲಯಗಳ ಅಧಿಕಾರ ವರ್ಗವು ಅಂಗೀಕರಿಸಿವೆ. ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ವರ್ಗವು ಈ ಪ್ರಮುಖ ವಿಷಯದ ಬಗ್ಗೆ ಅಸಡ್ಡೆ ಧೋರಣೆ ತಾಳಿರುವುದು ವಿಷಾದಕರ. ಆಡಳಿತ ವರ್ಗದ ಈ ಆಲಸ್ಯನೀತಿಯನ್ನು ಕೊನೆಗಾಣಿಸಿ, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರಲು ಒತ್ತಾಯಪಡಿಸುವುದಕ್ಕೋಸ್ಕರ ಚಳುವಳಿಯನ್ನು ಪ್ರಾರಂಭಿಸಲಾಗಿದೆ. ಈ ಉದ್ದಿಶ್ಯದಿಂದ ವಿದ್ಯಾರ್ಥಿಗಳಿಂದಲೂ, ಸಾರ್ವಜನಿಕರಿಂದಲೂ ಸಹಿಯನ್ನು ಶೇಖರಿಸಲು ಪ್ರಾರಂಭಿಸಿದ್ದಾರೆ.

ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಪ್ರಥಮಭಾಷೆಯೆಂದು ಈ ಕೂಡಲೆ ಘೋಷಿಸಬೇಕು.

ವಿಶ್ವವಿದ್ಯಾನಿಲಯದಲ್ಲಿ ಕನ್ನಡವು ಶಿಕ್ಷಣ ಮಾಧ್ಯಮವಾಗಬೇಕು.

ಹೈಸ್ಕೂಲುಗಳಲ್ಲಿ ಈಗಿರುವ ಕನ್ನಡ ಮಾಧ್ಯಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು.

ಈ ಬಗ್ಗೆ ಆಗಬೇಕಾದ ಪೂರ್ವಸಿದ್ಧತೆಗಳನ್ನು ಮಾಡಲು ಆಡಳಿತ ವರ್ಗವು ಈ ತಕ್ಷಣ ಕಾರ್ಯೋನ್ಮುಖವಾಗಬೇಕು.

ಈ ಬದಲಾವಣೆಗಳನ್ನು ಕಾರ್ಯಗತಮಾಡಲನುಕೂಲವಾಗುವಂತೆ ವಿಶ್ವವಿದ್ಯಾನಿಲಯದ ಕೌನ್ಸಿಲ್, ಸೆನೆಟ್, ಅಕೆಡಮಿಕ್ ಕೌನ್ಸಿಲ್‌ಗಳ ಹಾಗೂ ಮೈಸೂರು ಶಾಸನಸಭೆಯ ಸದಸ್ಯರುಗಳು ನಿಷ್ಠೆಯಿಂದ ಆಸಕ್ತಿ ವಹಿಸಿ, ವಿಶ್ವವಿದ್ಯಾನಿಲಯದ ರಚನಾವಳಿಯಲ್ಲಿ ಅಗತ್ಯವಾದ ತಿದ್ದುಪಡಿಮಾಡಬೇಕು.

ಮೇಲ್ಕಂಡ ಧ್ಯೇಯಗಳಿಗೆ ನಿಮ್ಮ ಸಮ್ಮತಿಯನ್ನು ವ್ಯಕ್ತಪಡಿಸುವ ಸಲುವಾಗಿ ನಿಮ್ಮ ಸಹಿಯನ್ನು ಹಾಕಿ, ಈ ಉನ್ನತ ಉದ್ಯಮವನ್ನು ಯಶಸ್ವಿಯನ್ನಾಗಿ ಮಾಡಬೇಕೆಂದು ಪ್ರಾರ್ಥಿಸುತ್ತಾರೆ.

ದಕ್ಷಿಣಭಾರತ ಪ್ರವಾಸವಿಲ್ಲ

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರವರು ಮುಂದಿನ ಫೆಬ್ರವರಿಯಲ್ಲಿ ದಕ್ಷಿಣ ಭಾರತ ಪ್ರವಾಸವನ್ನು ಕೈಗೊಳ್ಳುವ ಸಂಭವವಿಲ್ಲವೆಂದು ಪತ್ರಿಕಾ ಪ್ರಕಟಣೆ ಹೊರಬಿದ್ದಿದೆ.

ಇಂದಿನಹತೋಟಿ ನೀತಿಯಲ್ಲಿ ಬದಲಾವಣೆ ಪಂಡಿತ ಭಾರ್ಗವ ಸಮಿತಿ ವರದಿ

ಪಂಡಿತ ಠಾಕೂರ್‌ದಾಸ್ ಭಾರ್ಗವರವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಹತೋಟಿ ವಿಚಾರಣಾ ಸಮಿತಿಯು ತನ್ನ ವರದಿಯನ್ನು ಈಗ ಒಪ್ಪಿಸಿದೆ.

ಆದಷ್ಟು ಜಾಗ್ರತೆಯಾಗಿ ಹತೋಟಿಗಳನ್ನು ತೆಗೆಯಲು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹನ್ನೆರಡು ಅಂಶಗಳಿಂದ ಕೂಡಿದ ಸಲಹೆಗಳು ಈ ವರದಿಯಲ್ಲಿದೆ.

(೧) ರೇಷನ್ ಜಾರಿಯಲ್ಲಿರುವ ಪ್ರದೇಶ ಮತ್ತು ರೇಷನ್ ಪಡೆಯುವ ಜನರ ಸಂಖ್ಯೆಯು ಕ್ರಮವಾಗಿ ಕಡಮೆಯಾಗಿ ಸರ್ಕಾರದ ಜವಾಬ್ದಾರಿಯು ಇಳಿಯಬೇಕು.

(೨) ಆಹಾರ ಕಡಮೆಯಿರುವ ಪ್ರದೇಶಗಳಲ್ಲಿ ಮಾತ್ರ ರೇಷನ್‌ಪದ್ಧತಿಯಿರಬೇಕು ಕೈಗಾರಿಕಾ ಕ್ಷೇತ್ರ ಮತ್ತು ಒಂದು ಲಕ್ಷಕ್ಕಿಂತ ಹೆಚ್ಚಾಗಿ ಜನಸಂಖ್ಯೆಯುಳ್ಳ ಪ್ರದೇಶಗಳಲ್ಲಿ ತಿಂಗಳಿಗೆ ೧೫೦ ರೂ. ಅಥವಾ ಕಡಮೆ ವರಮಾನವಿರುವವರ ಉಪಯೋಗಕ್ಕಾಗಿ ಸರ್ಕಾರದವರೇ ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯಬೇಕು.

(೩) ಪ್ರತಿ ಪ್ರದೇಶದ ಆಮದುರಫ್ತು ನಿಗದಿಮಾಡಿ ಕೇಂದ್ರದ ಜವಾಬ್ದಾರಿಯಲ್ಲಿ ಗೊತ್ತುಮಾಡಿ ಹೆಚ್ಚಿಗೆ ಬದಲಾವಣೆಗಳನ್ನು ಮಾಡುವ ವಿಷಯವನ್ನು ಪ್ರಾಂತಕ್ಕೆ ಬಿಟ್ಟುಬಿಡಬೇಕು.

(೪) ಆಹಾರ ಶೇಖರಿಸುವ ಕಾರ್ಯವು ಮುಂದುವರಿದು, ನಿಗದಿಯಾದ ಆಹಾರವು ವಸೂಲಾದ ಮೇಲೆ ಉಳಿಕೆ ಆಹಾರವನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯಲು ಅಡ್ಡಿಯಿರಬಾರದು.

(೫) ರೇಷನ್ ಪಡೆಯುವವರು ತಮಗೆ ಸಾಲದೇ ಬರುವ ಧಾನ್ಯವನ್ನು ಬಹಿರಂಗವಾಗಿ ಕೊಳ್ಳಲು ಅವಕಾಶವಿರಬೇಕು.

(೬) ರೇಷನ್ ಕೊಡುವಾಗ ಉತ್ತಮವಾದ ಪದಾರ್ಥಗಳೊಡನೆ ಸಾಮಾನ್ಯ ಪದಾರ್ಥಗಳನ್ನು ಕೊಡುವ ವ್ಯವಸ್ಥೆಯಿರಬೇಕು.

(೭) ೧೯೫೧ನೇ ಮಾರ್ಚಿಯ ವೇಳೆಗೆ ೨೦ ಲಕ್ಷ ಟನ್ ಆಹಾರವನ್ನು ತರಿಸಿ, ೩೦ ಲಕ್ಷ ಟನ್ ಆಹಾರವು ವಿಶೇಷ ಪರಿಸ್ಥಿತಿಯಲ್ಲಿ ಉಪಯೋಗಿಸಲು ರಿಸರ್ವಿನಲ್ಲಿಟ್ಟಿರಬೇಕು.

ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಕೆಲವು ಮಾರ್ಪಾಟುಗಳನ್ನು ಸೂಚಿಸಿರುವರು.

ಅಲ್ಲದೆ, ತರಕಾರಿ ಹೆಚ್ಚಾಗಿ ಬೆಳೆಯಲು ಪ್ರೋತ್ಸಾಹವಿತ್ತು ಪೌರಸಭೆ ಮುಂತಾದ ಅನೇಕ ಸಂಸ್ಥೆಗಳ ಅಧೀನದಲ್ಲಿರುವ ಪ್ರದೇಶಗಳಲ್ಲೆಲ್ಲಾ ವಿಶೇಷವಾಗಿ ತರಕಾರಿ ಬೆಳೆಯುವಂತೆ ಮಾಡಬೇಕು.

ಹೆಚ್ಚಿಗೆ ಹಾಲು ಉತ್ಪತ್ತಿಯಾಗುವಂತೆ ದನಕರುಗಳನ್ನು ಉತ್ತಮರೀತಿಯಲ್ಲಿ ಸಾಕಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಮುಖ್ಯವಾಗಿ ಎಲ್ಲಾ ವಿಧವಾದ ಪದಾರ್ಥಗಳ ಮೇಲೂ ಹತೋಟಿಯನ್ನಿಟ್ಟುಕೊಳ್ಳಲು ಆಜ್ಞೆಗಳನ್ನು ಪದೇಪದೇ ಹೊರಡಿಸುವುದನ್ನು ನಿಲ್ಲಿಸಬೇಕು.

ಪ್ರಪಂಚದಲ್ಲೆಲ್ಲಾ ಸಾಮಾನುಗಳ ಬೆಲೆಯು ಏರಿ ಹೋಗುತ್ತಲಿರುವ ಕಾಲದಲ್ಲಿ ಅದನ್ನು ಕಡಮೆಮಾಡುತ್ತೇವೆಂದು ಹತೋಟಾಜ್ಞೆಗಳನ್ನು ಹೊರಡಿಸುತ್ತ ಬಂದರೆ ಅವು ಜನರಲ್ಲಿ ಅತೃಪ್ತಿಯನ್ನುಂಟುಮಾಡುವುದಲ್ಲದೆ, ಕೆಟ್ಟ ಪರಿಣಾಮವನ್ನುಂಟುಮಾಡುವುದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ

ಬೆಲ್ಲದ ಮಾರಾಟ

ಬೆಲ್ಲವನ್ನು ಬಹಿರಂಗವಾಗಿ ಮಾರಲು ಯಾವ ಊರಿನಿಂದ ಯಾವ ಊರಿಗೆ ಬೇಕಾದರೂ ತೆಗೆದುಕೊಂಡು ಹೋಗಲು ಯಾವ ಅಡ್ಡಿಯು ಇಲ್ಲ ಆದರೆ ನಿಗದಿಯಾದ ಬೆಲೆಗೆ ಮಾತ್ರ ಮಾರಬೇಕು. ಇರುವ ದಾಸ್ತಾನನ್ನು ಪರಸ್ಪರ ಸಹಾಯ ಸಂಘಗಳ ಮೂಲಕ ಮಾರಲು ತಕ್ಕ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳಿಗೆ ಮೊದಲು ತಿಳುವಳಿಕೆ ಕೊಡಲಾಗಿದೆ ಎಂದು ಸರ್ಕಾರವು ಒಂದು ಪ್ರಕಟಣೆ ಹೊರಡಿಸಿದೆ.

ವ್ಯವಸಾಯ ಇಲಾಖೆಯಲ್ಲಿ ವರ್ಗಾ

ತುಮಕೂರಿನಲ್ಲಿರುವ ಅಸಿಸ್ಟೆಂಟು ಡೈರೆಕ್ಟರಾದ ಶ್ರೀ ಹೆಚ್.ಸಿ. ಸಂಜೀವಯ್ಯನವರನ್ನು ಕೋಲಾರಕ್ಕೂ, ಮೈಸೂರಿನಲ್ಲಿರುವ ಶ್ರೀ ಕೆ. ಬಸವರಾಜೇ ಅರಸುರವರನ್ನು ತುಮಕೂರಿಗೆ ವರ್ಗಾಯಿಸಲಾಗಿದೆ.

ರಸ್ತೆ ಪ್ರಾರಂಭೋತ್ಸವ

ಮೈಸೂರು ನ. ೨೮

ಚಾಮರಾಜನಗರ ತಾಲ್ಲೂಕು ಮೂಡ್ಲಕೂಡು ಗ್ರಾಮದಿಂದ ಮಲೆಯೂರು ಗ್ರಾಮಕ್ಕೆ ಹೊಸದಾಗಿ ಮಾಡಲ್ಪಟ್ಟ ರಸ್ತೆಯ ಪ್ರಾರಂಭೋತ್ಸವವನ್ನು ನಿನ್ನೆ ಮೈಸೂರು ಜಿಲ್ಲಾಧಿಕಾರಿಗಳಾದ ಜನಾಬ್ ಮಹಮ್ಮದ್ ಅಹಮದ್‌ರವರು ನೆರವೇರಿಸಿದರು.

ಬನ್ನೂರು ಹೋಬಳಿ ಕಬ್ಬಿನ ವ್ಯವಸಾಯಗಾರರ ಗೋಳು

ಮೈಸೂರು ಜಿಲ್ಲೆಯ ರೈತರ ಸಂಘದ ಕಾರ್ಯದರ್ಶಿಗಳಾದ ಶ್ರೀ. ಸಿ. ಜೆ. ದೇವನಾಥ್ ರವರು ಈ ಹೇಳಿಕೆಯನ್ನಿತ್ತಿದ್ದಾರೆ

ಇತ್ತೀಚೆಗೆ ಸರ್ಕಾರದವರು ಕಬ್ಬು ಸಕ್ಕರೆ ಬೆಲ್ಲ ತಯಾರಿಕೆಗಳ ಮತ್ತು ಇವುಗಳ ಬೆಲೆಗಳ ಸಂಬಂಧವಾಗಿ ಹತೋಟಿ ಕಾನೂನುಗಳನ್ನು ಆಜ್ಞೆಗಳನ್ನು ಹೊರಡಿಸಿದುದರ ಫಲವಾಗಿ ಉಂಟಾಗಿರುವ ಪರಿಸ್ಥಿತಿಯೂ ಮತ್ತು ಪರಿಣಾಮಗಳೂ ಸರ್ವರಿಗೂ ವೇದ್ಯವಾಗಿದೆ. ರೈತರು ವರ್ಷ ಕಾಲ ಅಗಾಧಶ್ರಮದಿಂದ ಬೆಳೆಯನ್ನು ತೆಗೆಯಲು ಹೇರಳವಾಗಿ ಹಣವನ್ನು ಖರ್ಚುಮಾಡಿ ಫಸಲನ್ನು ಕಟಾವು ಮಾಡುವ [illegible] ಸರ್ಕಾರದವರು ಹಠಾತ್ತನೆ ಈ ಕಾನೂನುಗಳನ್ನು ತಂದಿರುವುದು, ರೈತರಿಗೆ ಬಹಳ ಜಿಗುಪ್ಸೆಯುಂಟಾಗುವುದರಲ್ಲಿದೆ. ಕೈಗೆಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗಾದೆಯಂತಾಗಿದೆ. ಈಗ ಸರ್ಕಾರದವರು, ರೈತರು ಕಬ್ಬು ತಯಾರಿಸಿ ಆಲೆ ಮಾಡಿಸಿ ಬೆಲ್ಲ ಮಾಡಬೇಕಾದರೆ ಲೈಸೆನ್ಸ್ ಪಡೆಯಬೇಕೆಂದು ಆಜ್ಞೆಪಡಿಸಿದ್ದಾರೆ. ಲೈಸೆನ್ಸು ಕೇಳಲು ಹೋದ ವ್ಯವಸಾಯಗಾರರು ಪೆಚ್ಚುಮುಖವನ್ನು ಹಾಕಿಕೊಂಡು ಹಿಂತಿರುಗಿಸಲ್ಪಟ್ಟರು. ಆಹಾರ ಇಲಾಖೆಯವರು ಸಕ್ಕರೆ ಕಂಪೆನಿಯವರು ಶಿಫಾರಸು ಮಾಡಿದರೆ ಲೈಸೆನ್ಸುಕೊಡುವುದಾಗಿ ಹೇಳಿ ನಿರಾಕರಿಸುತ್ತಿದ್ದಾರೆ. ಸಕ್ಕರೆ ಕಂಪೆನಿಯವರು ನಮಗೋಸ್ಕರ ಸಕ್ಕರೆ ತಯಾರಿಕೆಯಿಂದ ಲಾಭ ಸಂಪಾದಿಸಲು ಇಷ್ಟವಿಲ್ಲ. ಸರ್ಕಾರದವರು ಕಾನೂನುಗಳನ್ನು ತಂದಿರುವುದು ಅವರು ಕಬ್ಬು ಸರಬರಾಜು ಮಾಡುವುದಕ್ಕೆ ಸರಬರಾಜು ಮಾಡಿದರೆ. ಸಕ್ಕರೆ ತಯಾರಿಸುತ್ತೇವೆ ಎಂದು ಹೇಳುತ್ತಾರೆ. ಸರ್ಕಾರದವರು ಲೈಸೆನ್ಸ್‌ಕೊಡುವ ವಿಷಯದಲ್ಲಿ ನಮಗೇನೂ ಸಂಬಂಧವಿಲ್ಲ. ಆಹಾರ ಇಲಾಖಾ ಡೈರೆಕ್ಟರು ಲೈಸೆನ್ಸು ಕೊಡುವವರು ಎಂದು ತಿಳಿಸುತ್ತಿದ್ದಾರೆ. ಈ ತ್ರಿಕೋಣ ಚದುರಂಗ ಆಟದಲ್ಲಿ ರೈತರು ಕಂಬಕಂಬಕ್ಕೂ ಅಲೆದು ಯಾರಿಂದಲೂ ಸಹಾಯಸಿಗದೆ ಮುಂದೇನು ಮಾಡಬೇಕೆಂದು ದಿಕ್ಕುಕಾಣದೆ ಪೇಚಾಡುತ್ತಿದ್ದಾರೆ. ಈಗ ಅವರಿಗಿರುವುದು ಎರಡೇ ಮಾರ್ಗ ಸರ್ಕಾರದವರು ನಿಗದಿ ಮಾಡಿರುವದರಲ್ಲಿ ಸಕ್ಕರೆ ಕಂಪೆನಿಗೆ ಕಬ್ಬು ಸರಬರಾಜು ಮಾಡಬೇಕು. ಇಲ್ಲವೇ ತಾವು ಬೆವರು ಸುರಿಸಿ ಬೆಳೆದ ಫಸಲನ್ನು ದಿನೇದಿನೇ ಒಣಗುವುದನ್ನು ನೋಡಬೇಕು. ಈಗಿನ ಕಬ್ಬಿನ ಹತೋಟಿಯಪ್ರಕಾರ ನಿಗದಿಮಾಡಿರುವ, ದರ ಬಹಳ ಕಡಿಮೆಯೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ವ್ಯವಸಾಯಗಾರರು ಈ ಬೆಳೆಯನ್ನು ತೆಗೆಯಲು ಹೊಂದಿರುವ ಖರ್ಚಿಗೂ ಈಗಿನ, ದರಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಸಂದರ್ಭದಲ್ಲಿ ರೈತರು ಅತಿ ಜಿಗುಪ್ಸೆಯಿಂದ ಕಬ್ಬು ಒಣಗಿದರೂ ಚಿಂತೆಯಿಲ್ಲ. ಕಂಪೆನಿಯವರು ಕೊಡುವದರ ಬೇಕಿಲ್ಲವೆಂಬ ಮನೋಭಾವನೆ ದೃಢವಾಗಿ ವ್ಯಕ್ತಪಡಿಸುತ್ತಿದ್ದಾರೆ. ಈಗಾಗಲೇ ಹಲವರು ಆಲೆಯಾಡಿ ತಮ್ಮ ಪ್ರತಿಫಲವನ್ನು ಸಂಪಾದನೆಮಾಡಿಕೊಂಡಿರುವುದು ಉಳಿದವರ ಮನಸ್ಸಿನಲ್ಲಿ ಬೇಧವನ್ನುಂಟುಮಾಡಿದೆ.

ಮತ್ತೊಂದು ವಿಷಯ ಸಕ್ಕರೆ ಕಂಪೆನಿಯವರು ಕಳೆದ ವರ್ಷಗಳಲ್ಲಿ ಬನ್ನೂರು ಹೋಬಳಿ ರೈತರ ಕಬ್ಬನ್ನು ನಿರಾಕರಿಸಿದುದೂ ಬನ್ನೂರು ಪ್ರಜೆಗಳು ಬನ್ನೂರಿನಲ್ಲಿ ಸಕ್ಕರೆ ಕಂಪೆನಿಯು ಶಾಖೆಯನ್ನಿಡಬೇಕೆಂಬ ಪ್ರಾರ್ಥನೆಗೆ ಕಂಪೆನಿಯವರಿಂದಾಗಲೀ ಅಥವಾ ಸರ್ಕಾರದವರಿಂದಾಗಲೀ ಯಾವ ಮನ್ನಣೆಯೂ ಸಿಗದೆ ಇರುವುದು ಎಲ್ಲರಿಗೂ ತಿಳಿದ ವಿಷಯ. ಮುಂದಿನ ವರ್ಷಗಳಲ್ಲಾಗಲೀ ಬನ್ನೂರು ಹೋಬಳಿಯ ಕಬ್ಬನ್ನು ಸಕ್ಕರೆ ಕಂಪೆನಿಯವರು ತೆಗೆದುಕೊಳ್ಳುವರೆಂಬ ಭರವಸೆಯಾಗಲೀ, ಎಳ್ಳಷ್ಟು ಆಶಾದಾಯಕಸೂಚನೆಯಾಗಲೀ ಇಲ್ಲಿಯವರೆವಿಗೂ ಕಾಣಬರಲಿಲ್ಲ. ಈ ಪರಿಸ್ಥಿತಿಯಲ್ಲಿ ಸಕ್ಕರೆ ಕಂಪೆನಿಯವರು ಯಾವ ಧರ್ಮದಮೇಲೆ ಬನ್ನೂರು ಕಬ್ಬನ್ನು ಈಗ ನಿಗದಿಯಾಗಿರುವ ದರದಲ್ಲಿ ಅಪೇಕ್ಷಿಸಿರುವುದು ಯಾರಿಗೂ ಅರ್ಥವಾಗುವಂತಿಲ್ಲ ಈ ಚಿಂತಾಜನಕ ಪರಿಸ್ಥಿತಿಗೆ ಯಾರೆ ಕಾರಣರಾಗಲೀ ಅವರಿಗಿದು ಧರ್ಮವಲ್ಲ. ರೈತರು ದೇಶಪ್ರೇಮದಲ್ಲಿಯಾಗಲೀ, ರಾಷ್ಟ್ರಗೀತಸಾಧನೆಯಾಗಲೀ ಯಾರಿಗೂ ಹಿಂದುಳಿದವರಲ್ಲ. ಈ ವಿಷಯಗಳಲ್ಲಿ ಅವರಿಗೆ ಯಾರೂ ಬೆರಳುತೋರುವಂತಿಲ್ಲ. ದಿನೇದಿನೇ ಕಬ್ಬು ಒಣಗಲು ಪ್ರಾರಂಭವಾಗಿದೆ. ಹಾಗೆಯೇ ಇನ್ನೂ ಕೆಲವು ದಿನಗಳು ಒಣಗಿದರೆ ಸಕ್ಕರೆ ತಯಾರಿಕೆಗಾಗಲೀ ಅಥವಾ ಬೆಲ್ಲದ ತಯಾರಿಕೆಗಾಗಲೀ ನಿಷ್ಪ್ರಯೋಜನವಾಗುವುದಲ್ಲದೆ, ರೈತರಿಗೆ ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗಿ ಅನೇಕ ಮನೆಮಠಗಳು ಹಾಳಾಗುವುದರಲ್ಲಿ ಸಂಶಯವಿಲ್ಲ. ಮಾಮೂಲಿನಂತೆ ಬೆಲ್ಲದ ತಯಾರಿಕೆಗೆ ಆಸ್ಪದವಿಲ್ಲದಿರುವುದರಿಂದ ನೂರಾರು ಜನಗಳಿಗೆ ಕೂಲಿ ಸಂಬಳವಿಲ್ಲದೆ ಜೀವನೋಪಾಯವಿಲ್ಲದಂತಾಗಿದೆ ಸರ್ಕಾರದವರು ರೈತರ ತಾಳ್ಮೆಯ ಪರೀಕ್ಷೆಯನ್ನು ಮುಂದುವರಿಸಿದರೆ ದೊಡ್ಡ ಅನಾಹುತವೇ ಆಗುವುದರಲ್ಲಿ ಅನುಮಾನವಿಲ್ಲ. ತಕ್ಷಣವೇ ಸರಕಾರದವರು ಈ ಪರಿಸ್ಥಿತಿಯನ್ನು ವಿಮರ್ಶಿಸಿ ರೈತರಿಗೆ ಕಬ್ಬು ಕತರಾಯಿಸುವುದಕ್ಕೆ ಅನುಮತಿಕೊಡಬೇಕು. ಮುಂದಿನ ಫಸಲಿನನಾಟಿಗೂ ಕಬ್ಬು ಕತರಾಯಿಸುವಂತಿಲ್ಲ. ಈಗಾಗಲೇ ತಡವಾಗುತ್ತಿರುವುದು ಎಲ್ಲರ ಗಮನಕ್ಕೆ ಬಂದಿವೆ. ರೈತರ ಈ ಸಂಕಟವನ್ನು ನಿವಾರಿಸಲು ಅಧಿಕಾರವರ್ಗದವರು ಕೂಡಲೇ ನಿರ್ಧರಿಸಿ ಎಲ್ಲಾ ವ್ಯವಸಾಯಗಾರರಿಗೂ ಆಲೆಯಾಡಿಸಲು ಅನುಮತಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಮೈಸೂರು ಸಿಟಿ ಮುನಿಸಿಪಾಲಿಟಿ

ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನಗಳಗೂ ತಿಳಿಯಪಡಿಸುವುದೇನಂದರೆ—

ಸಿಟಿ ಮಜಕೂರು ದೇವರಾಜ ಮಾರ್ಕೆಟ್ ದಕ್ಷಿಣ ಭಾಗದ ಮಹಡಿಯಮೇಲೆ ಹೊಸದಾಗಿ ಕಟ್ಟಿರುವ ೪ ರೂಮುಗಳನ್ನು ಮಾಹೆಯಾನಾ ಬಾಡಿಗೆಗೆ ಪಡೆಯುವ ಹಕ್ಕನ್ನು ೧೯೫೦ ನೇ ಡಿಸೆಂಬರ್ ಮಾಹೆ ತಾ॥ ೧೧ನೇ ಸೋಮವಾರ ದಿವಿ ೧೦ ಘಂಟೆಗೆ ಮೇಲ್ಕಂಡ ರೂಮುಗಳ ಬಳಿ ಬಹಿರಂಗವಾಗಿ ಹರಾಜುಮಾಡಿಸಲಾಗುತ್ತೆ. ರೂಮುಗಳನ್ನು ಬಾಡಿಗೆಗೆ ಪಡೆಯಲು ಇಷ್ಟವುಳ್ಳವರು ಹರಾಜುಕಾಲಕ್ಕೆ ಹಾಜರಾಗಿ ಛಡಸವಾಲು ಮೂಲಕ ಪಡೆಯಬಹುದು. ಹೆಚ್ಚಿಗೆ ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ನಡೆಯುವ ಕಾಲದಲ್ಲಿ ತಿಳಿಯಬಹುದು.

(Sd.) T. RamaRao
For Municipal Commissioner

ಮಧುರ ಸ್ನೇಹಕ್ಕೆ ಧಕ್ಕೆ

ಭಾರತದಲ್ಲಿರುವ ಮುಸ್ಲಿಮರ ಹಿತವನ್ನು ಕಾಯವುದು ಭಾರತ ಸರ್ಕಾರದ ಕರ್ತವ್ಯ. ಹೊರಗಿನವ ಪ್ರವೇಶವನ್ನು ಭಾರತವು ತಡೆಯಲಾರದು. ಪ್ರಧಾನೆಹರೂರವರು ಎಷ್ಟು ಪ್ರಯತ್ನಪಟ್ಟಾಗ್ಯೂ ಪಾಕಿಸ್ಥಾ ಅಧಿಕಾರಿಗಳ ಮತ್ತು ಪತ್ರಿಕೆಗಳ ಮಾತುಗಳು! ಮಧುರ ಸ್ನೇಹಕ್ಕೆ ತೊಡಕನ್ನುಂಟುಮಾಡುತ್ತಲಿವೆ. ಎಂದು ರಣಾ ಮಂತ್ರಿ ಸರ್ದಾರ್ ಬಲದೇವ್‌ಸಿಂಗ್‌ರವರು ಅಮೃ ಸರದಲ್ಲಿ ಹೇಳಿರುವರು.

ಕನ್ನಡ ಮಾಧ್ಯಮ ಚಳುವಳಿ ಸಭೆ

ಕನ್ನಡ ಮಾಧ್ಯಮ ಚಳುವಳಿ ಸಭೆಯು ನಿನ ಸಂಜೆ ೫ ಗಂಟೆಯಲ್ಲಿ ಮಹಾರಾಜಾ ಕಾಲೇಜಿನ ಯೂ ಯನ್ ಹಾಲಿನಲ್ಲಿ ಸಂಚಾಲಕರಾದ ಬಿ. ಶ್ರೀಕಂಠಪ್ಪ ವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಶಾಸನಸಭೆ ಸದಸ್ಯರು ಪತ್ರಿಕೋದ್ಯೋಗಿಗಳು ಸೆನೆಟ್ ಸಮಿತಿ ಸದಸ್ಯರು ಆಹ್ ನಿಸಲ್ಪಟ್ಟಿದ್ದರು. ಶ್ರೀಗಳಾದ ಟಿ.ಎಸ್. ರಾಜಗೋಪಾ ಐಯಂಗಾರ್, ಕೆ. ಪುಟ್ಟಸ್ವಾಮಿ, ಹಾಲಪ್ಪ, ಮುಂತಾ ವರು ಮಾತನಾಡಿ ಕನ್ನಡವನ್ನು ಶಿಕ್ಷಣ ಮಾಧ್ಯಮ ಮತ್ತು ಪ್ರಥಮ ಭಾಷೆಯನ್ನಾಗಿ ಮಾಡುವುದರಿಂ ಎಷ್ಟು ಪ್ರಯೋಜನ ಹೊಂದಬಹುದೆಂಬುದನ್ನು ವಿ ರಿಸಿದರು. ಶ್ರೀ. ಎ. ರಾಮಣ್ಣನವರು ಮಾತನಾಡಿ ಚಳುವಳಿಯ ಅಗತ್ಯವಿಲ್ಲ. ನಿಯೋಗ ಒಂದನ್ನು ಮುಖ್ಯ ಮಂತ್ರಿಗಳ ಮತ್ತು ವಿದ್ಯಾಮಂತ್ರಿಗಳ ಹತ್ತಿರಕ್ಕೆ ಇದರ ಬಗ್ಗೆ ಚರ್ಚಿಸಲು ಕಳುಹಿಸುವುದ ಸೂಕ್ತವೆಂದು ನುಡಿದರು. ಶ್ರೀಗಳಾದ ವೇದಾಂ ಮತ್ತು ಹೆಚ್. ಗಂಗಾಧರ್‌ರವರು ಮಾತನಾಡಿ ನಿಯೋ ಗಗಳ ಪ್ರತಿಫಲ ಎಷ್ಟೆಂಬುದು ದಿನಚರಿ ಅನುಭವದಿಂ ನಮಗೆ ಗೊತ್ತಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಚಳವಳಿಯಿಂದಲೇ ತಮ್ಮ ಧ್ಯೇಯ ಧೋರಣೆಗಳನ್ನು ಸಾಧಿಸಿಕೊಳ್ಳಬೇಕೆಂದು ನುಡಿದರು. ಕ್ರಿಯಾ ಸಮಿತಿ ಸದಸ್ಯರಾದ ಶ್ರೀ. ಎನ್. ಸಿ. ಚಿಕ್ಕಣ್ಣನವರಿಂದ ವಂದನಾರ್ಪಣೆಯಾದ ನಂತರ ಸಭೆ ಮುಕ್ತಾಯವಾಯಿತು.

ರಣಜಿತ್

23-11-50 ರಿಂದ 8 ದಿನ ಮಾತ್ರ

ದಿನವಹಿ 3 ಪ್ರದರ್ಶನಗಳು

† ಸುರೇಶ್ † ಮಧುಬಾಲ

ಪಾತ್ರವಹಿಸಿರುವ

ಕರ್‌ದಾರ್‌ರವರ :

ದುಲಾರಿ

DULARI

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೦—೧೧—೧೯೫೦ನೇ ಗುರುವಾರ [ಸಂಚಿಕೆ ೭೭

ಮಂತ್ರಿ ಮರಿಯಪ್ಪನವರ ಭರವಸೆ

ಅಸಹಕಾರವೇ ವಿನಹ ಮುಷ್ಕರವಲ್ಲ

ಅಳತೆಯವರಿಗೆ ನೋಟೀಸು

ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಮೈಸೂರು ವರ್ತಕರು ಅಸಹಕಾರವನ್ನು ತೋರ್ಪಡಿಸುತ್ತಲಿರುವ ವಿಷಯದಲ್ಲಿ ವಿವರಗಳನ್ನು ತಿಳಿಸಲೋಸುಗ ನಿನ್ನೆ ಮೈಸೂರುನಗರ ಗ್ರೇನ್ ಮರ್ಚೆಂಟ್ಸ್ ಅಸೋಸಿಯೇಷನ್ನಿನವರು ಪತ್ರಿಕಾಗೋಷ್ಠಿಯನ್ನು ಕರೆದಿದ್ದರು.

ಶ್ರೀ ಮುನ್ಷಿಯವರಲ್ಲಿ ನಿಯೋಗ

ದಕ್ಷಿಣಭಾರತದ ಕಬ್ಬು ಬೆಳೆಯುವವರ ಪ್ರತಿನಿಧಿಗಳಲ್ಲಿ ಕೆಲವರು ಕೇಂದ್ರ ಆಹಾರ ಮಂತ್ರಿ ಶ್ರೀ ಮುನ್ಷಿಯವರನ್ನು ಭೇಟಿಮಾಡಿ, ಕೂಡಲೇ ಬೆಲ್ಲದ ಮೇಲಿನ ಹತೋಟಿ ಆಜ್ಞೆಯನ್ನು ರದ್ದುಮಾಡಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ

ಕೈಗಾರಿಕಾ ಇಲಾಖಾ ಡೈರೆಕ್ಟರು

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ಡೈರೆಕ್ಟರಾಗಿ ಶ್ರೀ. ಆರ್. ರಾಮಕೃಷ್ಣರವರು ಹಿಂದೂಸ್ಥಾನ ವಿಮಾನ ಕಾರ್ಖಾನೆಯ ಜನರಲ್ ಮ್ಯಾನೇಜರ್ ಹುದ್ದೆಯಿಂದ ಹಿಂತಿರುಗಿದ್ದಾರೆ.

ರಜಾದಮೇಲಿದ್ದ ಶ್ರೀ ಎಂ ಕೆ. ನೇರ್‌ರವರು ಹಿಂದೂಸ್ಥಾನ ವಿಮಾನ ಕಾರ್ಖಾನೆ ಜನರಲ್ ಮ್ಯಾನೇಜರ್ ಹುದ್ದೆಯನ್ನು ವಹಿಸಿಕೊಂಡಿರುತ್ತಾರೆ.

ಸ್ವಾತಂತ್ರ ಚಳುವಳಿ

ಸ್ವಾತಂತ್ರ ಚಳುವಳಿಗೆ ನೇಪಾಳ ಮಹಾರಾಜರು ಮುಖಂಡತ್ವವನ್ನು ವಹಿಸಿಕೊಳ್ಳಬೇಕು. ಈಗಿನ ರಾಣಾ ಸರ್ಕಾರವನ್ನು ಮಹಾರಾಜರು ರದ್ದುಗೊಳಿಸಬೇಕು. ಅಲ್ಲದೆ ಈ ಸ್ವಾತಂತ್ರ ಚಳವಳಿಗೆ ಭಾರತ ಸರ್ಕಾರವು ತನ್ನ ನೆರವು ನೀಡಬೇಕೆಂದು ನೇಪಾಳದ ಜನರು, ತಮ್ಮ ಸಭೆಯೊಂದರಲ್ಲಿ ನಿರ್ಣಯಗಳನ್ನು ಮಾಡಿದ್ದಾರೆ

ವಾರ್ಷಿಕೋತ್ಸವ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ [illegible]ನೇ ವಾರ್ಷಿಕೋತ್ಸವವು ೧-೧೨-೫೦ನೇ ಶುಕ್ರವಾರ ಸಂಜೆ ೪ ಗಂಟೆಗೆ ಮೈಸೂರು ಪುರಭವನದಲ್ಲಿ ನಡೆಯುವುದು. ಮದರಾಸಿನ ಹಣಕಾಸು ಮಂತ್ರಿ ಶ್ರೀ ಗೋಪಾಲರೆಡ್ಡಿಯವರು ಪ್ರಾರಂಭೋತ್ಸವ ನಡೆಸುವರು. ಮೈಸೂರು ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸುವರು.

ಪೌರಸಭೆಯ ಉಪಾಧ್ಯಕ್ಷರುಗಳು

ಬನ್ನೂರು ಮೈನರ್ ಪೌರಸಭೆಯ ಉಪಾಧ್ಯಕ್ಷರಾಗಿ ಶ್ರೀ ಟಿ. ರಾಮಯ್ಯನವರು, ಕೊರಟಗೆರೆ ಮೈನರ್ ಪೌರಸಭೆಗೆ ಶ್ರೀ. ಕೆ. ಆರ್. ಚನ್ನಮಲ್ಲಯ್ಯನವರು, ತೀರ್ಥಹಳ್ಳಿ ಮೈನರ್ ಪೌರಸಭೆಗೆ ಶ್ರೀ ಬಿ. ಎಸ್. ರಂಗಪ್ಪನವರು, ಹಿರಿಯೂರು ಪೌರಸಭೆಗೆ ಅಧ್ಯಕ್ಷರಾಗಿ ಶ್ರೀ ಎನ್. ವೈ. ರುದ್ರಣ್ಣನವರು ಚುನಾಯಿತರಾಗಿರುವುದನ್ನು ಸರ್ಕಾರದವರು ಅಂಗೀಕಾರ ಮಾಡಿದ್ದಾರೆ.

ಪುನಃ ಚಳುವಳಿ

ಈಗತಾನೇ ಬಿಡುಗಡೆಯಾದ ಅಕಾಲಿನಾಯಕ ಮಾಸ್ಟರ್ ತಾರಾಸಿಂಗ್‌ರವರು ಭಾರತದಲ್ಲಿ ಸಾರ್ವಜನಿಕ ಸ್ವಾತಂತ್ರ್ಯವು ಕಡಮೆಯಾಗುತ್ತಲಿರುವುದನ್ನು ಪ್ರತಿಭಟಿಸಿ ಚಳುವಳಿ ನಡೆಸುತ್ತೇನೆಂದು ಹೇಳಿರುವರು.

ಕೋರ್ಟು ವಜಾ

ರಾಮನಗರಂನಲ್ಲಿ ಹಂಗಾಮಿಯಾಗಿ ಸ್ಥಾಪಿಸಲಾಗಿದ್ದ ಅಡಿಷನಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ೧೯೫೦ನೇ ಡಿಸೆಂಬರ್ ೧ನೇ ತಾರೀಖಿನಿಂದ ವಜಾ ಮಾಡಲಾಗಿದೆ.

ಡಿಸೆಂಬರ್ ೧ರಿಂದ ಮಾರ್ಚಿ ೩೧ರವರೆಗೆ ಹಾಸನದಲ್ಲಿ ಒಂದು ಅಡಿಷನಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ತೆರೆಯಲಾಗುವುದು.

ಚರ್ಚೆಯಲ್ಲಿ ಭಾಗ ವಹಿಸುವುದಿಲ್ಲ

ಕಮ್ಯೂನಿಸ್ಟ್ ಚೀನಾವು ಸೆಕ್ಯೂರಿಟಿ ಕೌನ್ಸಿಲ್ಲಿನಲ್ಲಿ ಕೊರಿಯಾ ವಿಷಯವಾಗಿ ನಡೆಯುವ ಚರ್ಚೆಯಲ್ಲಿ ಭಾಗ ವಹಿಸುವುದಿಲ್ಲವೆಂದು ಚೀನಾದ ನಿಯೋಗ ನಾಯಕರು ತಿಳಿಸಿದರು

ಅಸಹಕಾರ ಮುಕ್ತಾಯ

ಮೈಸೂರು ನ. ೩೦

ಗೃಹಸಚಿವ ಶ್ರೀ ಟಿ ಮರಿಯಪ್ಪನವರು ಇತ್ತ ಭರವಸೆಯ ಮೇಲೆ ಮೈಸೂರು ವರ್ತಕರು ರೆಗ್ಯುಲೇಟೆಡ್ ಮಾರ್ಕೆಟ್ಟಿನೊಡನೆ ಇಂದಿನಿಂದ ಸಹಕರಿಸಲು ಈರೀತಿ ತೀರ್ಮಾನ ಮಾಡಿರುತ್ತಾರೆ

ತಾ ೨೮-೧೧-೫೦ರಲ್ಲು ಮಾನ್ಯ ಗೃಹಸಚಿವರಾದ ಶ್ರೀಮಾನ್ ಟಿ ಮರಿಯಪ್ಪನವರು ಮೈಸೂರು ಗ್ರೇನ್ ಮರ್ಚೆಂಟ್ಸ್ ಅಸೋಸಿಯೇಷನ್ ಪರವಾಗಿ ಸಂಘದ ಸದಸ್ಯರಾದ ಶ್ರೀಮಾನ್ ಚೌಡಯ್ಯನವರೊಡನೆ ಮಾತನಾಡಿದವೇಳೆಯಲ್ಲಿ ತಾವು ೧೩-೧೨-೫೦ರಲ್ಲು ಮೈಸೂರಿಗೆ ಬಂದು ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ಸಂಬಂಧವಾಗಿ ವರ್ತಕರುಮುಂಡಿಸಿರುವ ಅರಿಕೆಗಳಿಗೆ ತಕ್ಕ ಪರಿಹಾರಗಳನ್ನು ಕಲ್ಪಿಸಿಕೊಡುವುದಾಗಿಯೂ, ಅಲ್ಲಿಯವರೆವಿಗೆ ಎಲ್ಲಾ ವರ್ತಕರು ರೆಗ್ಯುಲೇಟೆಡ್ ಮಾರ್ಕೆಟ್ಟಿನ ಕಾರ್ಯಗಳಲ್ಲಿ ಸಹಕರಿಸಬೇಕೆಂತಲೂ ಅಪ್ಪಣೆ ಕೊಟ್ಟಿರುತ್ತಾರೆ.

ಈ ಅಂಶಗಳಲ್ಲಿ ವರ್ತಕಸಂಘದವರು ಪರಿಶೀಲಿಸಿ ೨೮-೧೧-೫೦ರಲ್ಲು ಮಾನ್ಯಸಚಿವರಿತ್ತಿರುವ ಭರವಸೆಯ ಪ್ರಕಾರ ಎಲ್ಲಾ ಪುರವರ್ತಕರೂ, ದಳ್ಳಾಳಿವ್ಯಾಪಾರಸ್ಥರೂ ಸಹ ಈದಿವಸದ ಲಾಗಾಯ್ತು ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ಟಿನ ಕಾರ್ಯಕಲಾಪಗಳಲ್ಲಿ ಸಹಕರಿಸತಕ್ಕದೆಂದೂ ತಾ॥ ೨೮-೧೧-೫೦ ರಲ್ಲು ಮಾನ್ಯಸಚಿವರಿತ್ತಿರುವ ಭರವಸೆಯಂತೆ ಜಾಗ್ರತೆಯಾಗಿ ರೆಗ್ಯುಲೇಟೆಡ್ ಮಾರ್ಕೆಟ್ಟಿನ ನ್ಯೂನಾತಿರಿಕ್ತಗಳನ್ನು ಪರಿಹರಿಸಿಕೊಡಬೇಕೆಂತ ಪುನಃ ಮಾನ್ಯಸಚಿವರಲ್ಲಿ ಪ್ರಾರ್ಥಿಸಿಕೊಳ್ಳಬೇಕೆಂತಲೂ ತೀರ್ಮಾನಮಾಡಿರುತ್ತಾರೆ.

● ನೇತಾಜಿ ಮೆಮೋರಿಯಲ್ ಬ್ಯಾಸ್ಕೆಟ್‌ಬಾಲ್ ಟೋರ್ನಮೆಂಟಿನ ಪಂದ್ಯವು ಯಂಗ್‌ಸ್ಟರ್ಸ್ ಬಿ ಗೂ ಮಹಾರಾಜಾ ಕಾಲೇಜು ಎ ಗೂ ನಡೆದು ೧೩ ಪಾಯಿಂಟುಗಳಿಂದ ಯಂಗ್‌ಸ್ಟರ್ಸ್ ಟೀಮಿನವರು ಜಯಶೀಲರಾದರು.

ರೆಗ್ಯುಲೇಟೆಡ್ ಮಾರ್ಕೆಟ್ಟು ಪ್ರಾರಂಭವಾದಾಗಿನಿಂದ ವರ್ತಕರಿಗೆ ಆಗುತ್ತಲಿರುವ ತೊಂದರೆಗಳನ್ನು ಅಧ್ಯಕ್ಷರು ವಿವರಿಸಿದರು. ತಾವು ಈ ತೊಂದರೆಗಳನ್ನು ಇನ್ನು ಮುಂದೆ ಅನುಭವಿಸಲಾಗುವುದಿಲ್ಲವಾಗಿ ತಾವೆಲ್ಲರೂ ಇನ್ನು ಮುಂದೆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಸಹಕರಿಸುವುದಿಲ್ಲವೆಂದು ತೀರ್ಮಾನಿಸಿ ೨೩ನೇ ತಾ॥ ನಿಂದ ಅದರಲ್ಲಿ ಭಾಗವಹಿಸುತ್ತಲಿಲ್ಲವೆಂದು ತಿಳಿಸಿದರು.

ಮುಖ್ಯವಾದ ತೊಂದರೆಗಳೇನೆಂದರೆ ರೈತರಾಗಲೀ ವರ್ತಕರಾಗಲೀ ನಿಲ್ಲಲು ಅಲ್ಲಿ ಸ್ಥಳವಿಲ್ಲದೆ ಮಳೆಬಿಸಿಲುಗಳಿಗೆ ಸಿಕ್ಕಿ ತೊಂದರೆಪಡಬೇಕಾಗುತ್ತಲಿದೆ. ಬೆಳಗಿನಿಂದ ಹಿಡಿದು ಮಧ್ಯರಾತ್ರಿಯವರೆಗೂ ಹರಾಜು ನಡೆಯುತ್ತಲಿರುವುದರಿಂದ ವ್ಯಾಪಾರಸ್ಥರು ಅನ್ನ ನೀರಿಲ್ಲದೆ ತೊಂದರೆ ಪಡಬೇಕಾಗಿದೆ ಕಡಲೆಕಾಯಿ, ಎಳ್ಳು, ಹುಣಸೇಹಣ್ಣು ಮುಂತಾದ ಸಾಮಾನುಗಳ ಹರಾಜನ್ನು ಮಾತ್ರ ಈಗಿರುವ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ನಡೆಸಿ ಇತರ ಸಣ್ಣ-ಪುಟ್ಟ ದಿನಸಿಗಳ ಹರಾಜು ಬಿಕರಿ ಮುಂತಾದುವು ನೈಲ್ಸಾ ಹಳೇ ಸಂತೇಪೇಟೆಯಲ್ಲಿಯೇ ಅಧಿಕಾರಿಗಳ ನೇತೃತ್ವದಲ್ಲಿ ನಡೆಯಲೇರ್ಪಟ್ಟರೆ ಈಗಿನ ತೊಂದರೆಗಳಲ್ಲಿ ಅನೇಕವು ಕಡಮೆಯಾಗುವುದೆಂದೂ ತಿಳಿಸಿದರು.

ಪ್ರಸ್ತುತ ಸುಮಾರು ೧೫೦ ಜನ ವರ್ತಕರು ಲೈಸನ್ಸ್ ಪಡೆದು ವ್ಯಾಪಾರದಲ್ಲಿ ಭಾಗ ವಹಿಸುತ್ತಲಿರುವರು. ನಾವು ಅಸಹಕಾರವನ್ನು ಸೂಚಿಸಿರುವ ದಿನದಿಂದ ೩ ವರ್ತಕರು ಮಾತ್ರ ಸ್ವಾರ್ಥಿಗಳಾಗಿ ರೆಗ್ಯುಲೇಟೆಡ್ ಮಾರ್ಕೆಟ್ಟಿನ ವ್ಯಾಪಾರದಲ್ಲಿ ಭಾಗ ವಹಿಸುತ್ತಲಿರುವುದು ಖಂಡನೀಯ. ಅವರ ಮೇಲೆ ಶಿಸ್ತಿನಕ್ರಮವನ್ನು ತೆಗೆದುಕೊಳ್ಳುವ ಯೋಚನೆಯಿದೆ ಅಲ್ಲದೆ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಸಮಿತಿಯಲ್ಲಿ ಲೈಸೆನ್ಸ್‌ಪಡೆದ ವರ್ತಕರ ಪ್ರಾತಿನಿಧ್ಯವು ಸರಿಯಾಗಿಲ್ಲವಾಗಿ ಈ ಸಮಿತಿಯನ್ನು ಪುನರ್ರಚಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಾಗಿ ತಿಳಿಸಿದರು

ಇತ್ತೀಚೆಗೆ ನಮ್ಮ ಕುಂದುಕೊರತೆಗಳನ್ನೆಲ್ಲಾ ಗೃಹಮಂತ್ರಿ ಶ್ರೀ ಮರಿಯಪ್ಪನವರ ಅವಗಾಹನೆಗೆ ತಂದೆವು. ತಾವು ೧೨-೧೩ನೇ ತಾ॥ ಮೈಸೂರಿಗೆ ಬಂದಾಗ ವಿಷಯಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಸುವ್ಯವಸ್ಥಿತ ರೀತಿಯಲ್ಲಿ ಮಾರ್ಕೆಟ್ಟಿನ ಕೆಲಸಗಳು ನಡೆಯುವಂತೆ ಏರ್ಪಡಿಸುವುದಲ್ಲದೆ ವರ್ತಕರಿಗಿರುವ ತೊಂದರೆಗಳನ್ನೆಲ್ಲ ನಿವಾರಿಸಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿಯೂ, ವರ್ತಕರು ತಮ್ಮ ಅಸಹಕಾರವನ್ನು ನಿಲ್ಲಿಸಿ ಮಾರ್ಕೆಟ್ಟಿನ ಕೆಲಸಗಳಲ್ಲಿ ಭಾಗವಹಿಸಬೇಕೆಂದು ಕೋರಿ ವರ್ತಕರಿಗೆ ಭರವಸೆಯನ್ನಿತ್ತಿರುವುದರಿಂದ ತಾವು ಸಹಕರಿಸುವ ವಿಷಯವನ್ನು ಪರ್ಯಾಲೋಚಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಅಳತೆ ಮಾಡುವವರು ಇನ್ನೆರಡು ದಿವಸಗಳಲ್ಲಿ ಮಾರ್ಕೆಟ್ಟಿನ ವ್ಯವಹಾರಗಳಲ್ಲಿ ಸಹಕರಿಸದಿದ್ದರೆ ಅವರ ಲೈಸನ್ಸ್ ರದ್ದುಗೊಳಿಸುವುದಾಗಿ ನೋಟೀಸ ಕೊಟ್ಟಿರುವುದಾಗಿ ತಿಳಿಯಪಡಿಸಿದರು.

ಸೆನೆಟ್‌ನಲ್ಲಿ ಕೋಮುವಾರು ಆಜ್ಞೆ ಬಗ್ಗೆ ಚರ್ಚೆ

ನಿನ್ನೆ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ಸೆನೆಟ್ ಸಭೆಯಲ್ಲಿ ಶ್ರೀ. ಟಿ. ಎಸ್. ರಾಜಗೋಪಾಲಐಂಗಾರ್ಯರು ಮೈಸೂರಿನಲ್ಲಿ ಕೋಮುವಾರು ಆಜ್ಞೆ ಜಾರಿಯಲ್ಲಿದೆಯೆ ಎಂದು ವೈಸ್ ಛಾನ್ಸಲರನ್ನು ಕೇಳಿದರು. ಅದಕ್ಕೆ ವೈಸ್ ಛಾನ್ಸಲರ್ ಉತ್ತರಕೊಡುತ್ತಾ ಈ ಆಜ್ಞೆಯು ಜಾರಿಯಲ್ಲಿಲ್ಲವೆಂದೂ, ಸರ್ಕಾರದವರು ಗೊತ್ತುಪಡಿಸಿರುವ ಪ್ರಕಾರ ಸೆಂಟ್ರಲ್ ಕಾಲೇಜಿನ ೧೩೫ ಸ್ಥಾನಗಳ ಪೈಕಿ ಶೇ. ೨೫ ರಷ್ಟು ಬ್ರಾಹ್ಮಣರಿಗೆ ಸ್ಥಾನವನ್ನು ಕೊಡಲಾಗಿದೆಯೆಂದು ತಿಳಿಸಿದರು. ಈ ರೀತಿಯ ವರ್ತನೆಯಿಂದ ಭಾರತದ ರಾಜ್ಯಾಂಗದ ಮೂಲಭೂತ ಹಕ್ಕಿಗೆ ಧಕ್ಕೆ ಬರುವುದಿಲ್ಲವೆ ಎಂದು ಕೇಳಿದಾಗ ಅದಕ್ಕೆ ವೈಸ್ ಛಾನ್ಸಲರ್ ಪರವಾಗಿ ಖಾಸಗಿ ಸದಸ್ಯ ಶ್ರೀ ಬಿ ಎನ್. ಗುಪ್ತರವರು ಉತ್ತರ ನಿತ್ತಲು ಈ ರೀತಿ ಖಾಸಗಿಯವರು ಉತ್ತರಕೊಡಬಹುದೇ ಎಂದು ಕೇಳಲಾಗಿ ವೈಸ್ ಛಾನ್ಸಲರ್ ವಿಶ್ವವಿದ್ಯಾಲಯದ ಆರ್ಡಿನೆನ್ಸ್ ವಿಧಿಯಂತೆ ಅವರು ತನ್ನ ಪರವಾಗಿ ಉತ್ತರ ಕೊಡುವುದನ್ನು ಕೌನ್ಸಿಲ್ ಸದಸ್ಯರಿಗೆ ವಹಿಸಿಕೊಡಬಹುದೆಂದು ತಿಳಿಸಿದರು. ಶ್ರೀರಂಗರಾವ ಯ್ಯನವರು ಈ ಪ್ರಸಂಗವು ವಿಶ್ವವಿದ್ಯಾಲಯದ ಚರಿತ್ರೆಯಲ್ಲೇ ನಡೆಯದೆ ಈಗ ನಡೆದಿದೆಯೆಂದು ಆಶ್ಚರ್ಯವನ್ನು ವ್ಯಕ್ತಪಡಿಸಿದರು.

ಸತ್ಯಾಗ್ರಹ

ಬೆಲ್ಲದ ತಯಾರಿಕೆಗೆ ಲೈಸನ್ಸ್ ಪಡೆಯಬೇಕೆಂದು ಇತ್ತೀಚೆಗೆಯಿತ್ತಿರುವ ಸರ್ಕಾರಿ ಆಜ್ಞೆಯನ್ನು ಪ್ರತಿಭಟಿಸಿ, ಲಕ್ನೋದಲ್ಲಿ ಬಾಬು ರಾಘವದಾಸ್ ಎಂಬುವವರು ಡಿಸೆಂಬರ್ ೩ ರಿಂದ ಸತ್ಯಾಗ್ರಹ ಹೂಡಲಿದ್ದಾರೆ ಷಹಜಹಾನ್‌ಪುರದಲ್ಲಿ ರೈತರ ಸಭೆಯೊಂದು ಸೇರಿದ ಮೇಲೆ ಅವರು ಈ ಆಜ್ಞೆಯನ್ನು ಉಲ್ಲಂಘಿಸಿ ಲೈಸನ್ಸಿಲ್ಲದೆ ಬೆಲ್ಲವನ್ನು ತಯಾರು ಮಾಡಲು ಪ್ರಾರಂಭಿಸುವರು.

ಇದು ಕೋಮುವಾರು ಜಿ. ಓ. ಅಲ್ಲ ಬರೀ ಸೂಚನೆ.

ಮೆಡಿಕಲ್ ಸ್ಕೂಲಿನಲ್ಲಿ ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ಶೇ. ೬೦ ರಷ್ಟು ಮೀಸಲು ಸ್ಥಾನಗಳಿದ್ದುದನ್ನು ೧೯೪೪ ರಿಂದ ಶೇ. ೭೫ಕ್ಕೆ ಏರಿಸಬೇಕೆಂದು ೧೯೪೩ರ ಏಪ್ರಿಲ್ ೬ನೇ ತಾ|| ಸರ್ಕಾರದಿಂದ ಬಂದಿದ್ದ ಸೂಚನೆ. ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಶೇ. ೭೫ರಷ್ಟು ಸ್ಥಾನಗಳನ್ನು ಬ್ರಾಹ್ಮಣೇತರ ವಿದ್ಯಾರ್ಥಿಗಳಿಗೆ ಮೀಸಲಾಗಿಡಬೇಕೆಂದು ೧೯೪೭ರ ಜೂನ್ ೧೪ರಲ್ಲಿ ಸೂಚನೆ ಬಂದಿದೆಯೆಂದೂ ನಿನ್ನೆ ನಡೆದ ಸೆನೆಟ್ ಸಭೆಯಲ್ಲಿ ವೈಸ್ ಛಾನ್ಸಲರು ಹೇಳುತ್ತಾ ಇವು ಕೋಮುವಾರು ಜಿ. ಓ ಅಲ್ಲವೆಂದು ಹೇಳಿದರು

ಕನ್ನಡ ಚಳುವಳಿ ಸಭೆ

ಮಹಾರಾಜಾ ಕಾಲೇಜಿನಲ್ಲಿ ನಿನ್ನೆ ಶ್ರೀ. ಎಸ್ ವಿ ಶ್ರೀನಿವಾಸ್‌ರಾವ್‌ರವರ ಅಧ್ಯಕ್ಷತೆಯಲ್ಲಿ ಕನ್ನಡ ಚಳುವಳಿಯ ಅಂಗವಾಗಿ ಒಂದು ಬಹಿರಂಗ ಸಭೆ ನಡೆಯಿತು ಶ್ರೀ ನ ಭದ್ರಯ್ಯನವರು ಮಾತನಾಡಿದರು.

ಭಾರತದ ನೀತಿ

ಭಾರತ ಪಾಕಿಸ್ಥಾನದೊಡನೆ ಯುದ್ಧ ಹೂಡುವುದಿಲ್ಲವೆಂದು ಪಾಕಿಸ್ಥಾನಪ್ರಧಾನಿಗೆ ಪಂಡಿತನೆಹರೂರವರು ಭರವಸೆಯನ್ನು ಕೊಟ್ಟಿರುವರು.

ಪಾಕಿಸ್ಥಾನವು ಯಾವರೀತಿ ಶಾಂತಿಯನ್ನು ಅಪೇಕ್ಷಿಸುತ್ತದೆಯೋ ಅದೇ ರೀತಿ ಭಾರತವೂ ಶಾಂತಿಯನ್ನು ಕೋರುತ್ತದೆ ನಮ್ಮ ನೆರೆ ರಾಜ್ಯದೊಡನೆ ಶಾಂತಿಗಾಗಿಯೇ ದುಡಿಯುತ್ತೇವೆ ಎಂದು ಭಾರತಪ್ರಧಾನಿ ಪಂಡಿತ ನೆಹರೂರವರು ಹೇಳಿರುವರು.

ಪಾಕಿಸ್ಥಾನಪ್ರಧಾನಿ ತಮ್ಮನ್ನು ಕರಾಚಿಗೆ ಬರಲು ಪುನಃ ಆಹ್ವಾನಕಳುಹಿಸಿರುವುದಾಗಿಯೂ ಅದನ್ನು ಅವಶ್ಯಬೇಗ ಉಪಯೋಗಿಸಿಕೊಳ್ಳುವುದಾಗಿ ಪ್ರಧಾನಿ ನೆಹರೂರವರು ತಿಳಿಸಿರುವರು.

ಎಲೆಕ್ಟೋರಲ್ ರೋಲ್ (ಚುನಾವಣೆದಾರರ ಪಟ್ಟಿಯು)

ಪ್ರಕಟನೆ

ನೋಟಿಫಿಕೇಷನ್ R/C 23/49 ತಾ|| ೨೮-೧೧-೧೯೫೦

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ನಗರಕ್ಕೆ ಸಂಬಂಧಪಟ್ಟ ಪ್ರಜೆಗಳ ಪ್ರಾತಿನಿಧ್ಯದ (ಚುನಾವಣೆ ದಾರರುಗಳ) ಪಟ್ಟಿಯನ್ನು 1950 ನೇ ಡಿಸೆಂಬರ್ ಮಾಹೆ 1 ನೇ ತಾರೀಖು (ಶುಕ್ರವಾರ) ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಲ್ಲೂ ಇತರ ಮುಖ್ಯ ಸ್ಥಳಗಳಲ್ಲೂ ಪ್ರಚುರಪಡಿಸಲಾಗುತ್ತೆ. ಸದರಿ ಪಟ್ಟಿಯನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಚುರಪಡಿಸಲಾಗಿದೆ. ಎಂಬ ವಿವರವನ್ನು ಮುನಿಸಿಪಲ್ ಆಫೀಸಿನಲ್ಲಿ ತಿಳಿಯಬಹುದು.

(2) ಚುನಾವಣೆದಾರರುಗಳ ಪಟ್ಟಿಯನ್ನು ಮುನಿಸಿಪಲ್ ರೆವಿನ್ಯೂ ಆಫೀಸರವರ ಆಫೀಸಿನಲ್ಲಿ ಪೇಜು ಒಂದಕ್ಕೆ ಮೂರುಕಾಸಿನ ದರದಂತೆ ಮಾರಾಟ ಮಾಡಲಾಗುತ್ತೆ.

(3) ಚುನಾವಣೆದಾರರುಗಳ ಪಟ್ಟಿಯಲ್ಲಿ ನಮೂದಿಸಿರುವ ಮನೆಗಳ ನಂಬರ್ ಈಚೆಗೆ ಸೆಸೆಸ್ ಬಗ್ಗೆ ಕೊಟ್ಟಿರುವ ಮನೆ ನಂಬರುಗಳಿಗೆ ಅನುಸಾರವಾಗಿ ಇವೆ. ಚುನಾವಣೆದಾರರ ಪಟ್ಟಿ ವಿಚಾರದಲ್ಲಿ ತಕರಾರು ಅರ್ಜಿಗಳನ್ನು ಕೊಡತಕ್ಕವರು ತಮ್ಮ ಮನೆಯ ಸೆಸೆಸ್ ನಂಬರನ್ನು ಅರ್ಜಿಯಲ್ಲಿ ನಮೂದಿಸತಕ್ಕದ್ದು.

ಕೆ. ನರಸಿಂಹಮೂರ್ತಿ,
ಮುನಿಸಿಪಲ್ ಕಮಿಷನರ್ ಮತ್ತು ರಿಜಿಸ್ಟ್ರೇಷನ್ ಆಫೀಸರ್.

ಆಹಾರ ಪರಿಸ್ಥಿತಿ

ಬೆಂಗಳೂರು ನ. ೨೯

ಸಂಸ್ಥಾನದ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲು ನಿನ್ನೆ ಆಹಾರ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಜಿಲ್ಲಾಧಿಕಾರಿಗಳ ಸಭೆ ಸೇರಿತ್ತು ಧಾನ್ಯ ಶೇಖರಣೆ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಅನುಸರಿಸಬೇಕಾದ ನಿಯಮ, ಈಗಿನ ಆಹಾರ ಪರಿಸ್ಥಿತಿ ಮುಂತಾದ ವಿಚಾರಗಳಲ್ಲಿ ಚರ್ಚೆ ನಡೆಯಿತೆಂದು ತಿಳಿಯಬರುತ್ತದೆ

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯·೪೭ ಮೀಟರು
ಡಿಸೆಂಬರ್ ೧ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಬಿ ವರದರಾಜಯ್ಯಂಗಾರ್ (ದೇವಿ ಭಜನೆ) ೭-೩೫ ಚಿತ್ರಲೋಕ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ವೀಣೆ ೧-೪೫ ಹಿಂದಿ ಶಿಕ್ಷಣ ೨-೦ ನಿಮ್ಮ ಮೆಚ್ಚಿನ ಕಲಾವಿದರು ೨-೩೦ ಮುಕ್ತಾಯ.

ಸಂಜೆ ೫-೩೦ ಬಿ ಆರ್. ಶಾಮರಾವ್ (ಕೊಳಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದಿ ಕಾರ್ಯಕ್ರಮ ೭-೧೫ ಬಿ.ಆರ್. ಶಾಮರಾವ್ (ಕೊಳಲು) ೭-೩೦ ವಿಶ್ವವಾರ್ತೆ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ನಾದಶ್ರೀ (ರಿ) ೮-೧೫ ಬಿ ವರದರಾಜಯ್ಯಂಗಾರ್ (ರಾಗ, ತಾನ, ಪಲ್ಲವಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಅರಮನೆ ಬ್ಯಾಂಡು ೧೦.೦ ಮುಕ್ತಾಯ.

ಒಲಿಂಪಿಯಾ
30-11-50 ರಿಂದ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀಕೃಷ್ಣ
ಬೆಳಗಿನ ಪ್ರದರ್ಶನ 1-12-50 ರಿಂದ
4 ದಿನಗಳು ಮಾತ್ರ
ಡೇರ್ ಡೆವಿಲ್ಸ್ ಆಫ್ ಓವೆಸ್ಟ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧—೧೨—೧೯೫೦ನೇ ಶುಕ್ರವಾರ [ಸಂಚಿಕೆ ೭೮

ಕೊರಿಯ ಪರಿಸ್ಥಿತಿ ವಿಷಮಿಸಿಕೊಂಡಿದೆ

ಪ್ರಧಾನಿ ಆಟ್ಲಿ-ಅಧ್ಯಕ್ಷ ಟ್ರೂಮನ್ ಭೇಟಿ

ಕೊರಿಯಾ ಯುದ್ಧದಲ್ಲಿ ಅಮೇರಿಕಾ ಸೈನ್ಯಗಳಿಗೆ ವಿಶೇಷವಾಗಿ ಪರಾಭವವಾಗುತ್ತ ಪರಿಸ್ಥಿತಿಯು ವಿಷಮಿಸಿಕೊಳ್ಳುತ್ತಲಿರುವುದರಿಂದ ಇಂದಿನ ಪ್ರಪಂಚ ಪರಿಸ್ಥಿತಿಯನ್ನು ಚರ್ಚಿಸಲು ಬ್ರಿಟಿಷ್ ಪ್ರಧಾನಿ ಮಿ|| ಆಟ್ಲಿಯವರು ಇಂದೋ ನಾಳೆಯೋ ಅಧ್ಯಕ್ಷ ಟ್ರೂಮನ್ನರ ಭೇಟಿಗಾಗಿ ಅಮೇರಿಕಾಕ್ಕೆ ಹೊರಡಲಿರುವರು.

ಭೇಟಿ

ಭಾರತ ವಿದೇಶಾಂಗ ಶಾಖೆಯ ಸೆಕ್ರೆಟರಿ ಜನರಲ್ ಸರ್ ಗಿರಿಜಾ ಶಂಕರಬಾಜಪೈಯವರಿಗೂ ನೇಪಾಳಿ ಪ್ರತಿನಿಧಿಗಳಿಗೂ ಭೇಟಿ ನಡೆದು ನೇಪಾಳ ವಿಷಯವಾಗಿ ಚರ್ಚೆಯು ಪ್ರಾರಂಭವಾಯಿತೆಂದು ತಿಳಿಯಬರುತ್ತದೆ.

ರಾಷ್ಟ್ರೀಕರಣ ನಿಲ್ಲಿಸಿದೆ

ಹಣದ ಅಭಾವದಿಂದ ಮದರಾಸು ಸರ್ಕಾರವು ಬಸ್ಸುಗಳ ರಾಷ್ಟ್ರೀಕರಣವನ್ನು ಮುಂದಕ್ಕೆ ಹಾಕಬೇಕಾಯಿತೆಂದು ಕೈಗಾರಿಕಾಮಂತ್ರಿ ಶ್ರೀ ಪೆರುಮಾಳ್‌ಸ್ವಾಮಿ ರೆಡ್ಡಿಯಾರ್‌ರವರು ಹೇಳಿರುವರು.

ಹೈಡ್ರೋಜನ್ ಬಾಂಬು

ಅಮೇರಿಕಾದಲ್ಲಿ ಹೈಡ್ರೋಜನ್ ಬಾಂಬನ್ನು ತಯಾರಿಸಲು ೧೨೫ ಕೋಟಿ ಡಾಲರುಗಳ ವೆಚ್ಚದ ಯೋಜನೆಯು ತಯಾರಾಗಿ ಕಾರ್ಯರೂಪಕ್ಕೆ ಪ್ರಾರಂಭವಾಗಿದೆ." ಈ ತಯಾರಿಕೆಗಾಗಿ ೨೫,೦೦೦ ಎಕರೆ ಪ್ರದೇಶವನ್ನು ಆರಿಸಲಾಗಿದೆ.

ಧ್ವಜದಿನಾಚರಣೆ

ಡಿಸೆಂಬರ್ ೭ನೇ ತಾ|| ಭಾರತಾದ್ಯಂತ ನಿಧಿ ಶೇಖರಣೆಗಾಗಿ ಧ್ವಜದಿನಾಚರಣೆಯನ್ನಾಚರಿಸಲಿರುವರು. ನಿಧಿ ಶೇಖರಣೆಗಾಗಿ ಧ್ವಜಗಳನ್ನು ಮಾರಲಾಗುವುದು. ಇದರಲ್ಲಿ ಉತ್ಪತ್ತಿಯಾಗುವ ಹಣವನ್ನು ಸೈನ್ಯದಿಂದ ನಿವೃತ್ತರಾಗಿರುವವರಿಗೂ ಮತ್ತು ಅವರ ಸಂಸಾರಗಳಿಗೂ ಉಪಯೋಗಿಸಲಾಗುವುದು.

ಸ್ವಾಗತ

ಭಾರತ ಪಾಕಿಸ್ಥಾನಗಳ ನಡುವಿನ ಎಲ್ಲಾ ಸಮಸ್ಯೆಗಳು ಶಾಂತಿರೀತಿಯಿಂದ ಬಗೆಹರಿಯಬೇಕೇ ವಿನಹ ಯುದ್ಧದಿಂದಲ್ಲವೆಂಬ ಸಲಹೆಯನ್ನು ಪಾಕಿಸ್ಥಾನ ಸ್ವಾಗತಿಸುವುದಾಗಿ ಲಿಯಾಕತ್ ಅಲೀಖಾನ್‌ರವರು ಪಾಕ್ ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಆಹ್ವಾನ ಬೇಡ

ಗುಟ್ಟು ರಟ್ಟಾಗುವುದು

ಪತ್ರಿಕೆಯವರನ್ನು ಪೌರಸಭೆಯ ಅಧಿವೇಶನಗಳಿಗೆ ಆಹ್ವಾನಿಸಿದರೆ ಕೆಲವು ವಿಷಯಗಳನ್ನು ಚರ್ಚಿಸುವ ವಿಷಯದಲ್ಲಿ ಎಷ್ಟೋ ಗುಟ್ಟು ಬಯಲಾಗುವುದು. ಆದ್ದರಿಂದ ಇನ್ನು ಮುಂದೆ ಪತ್ರಿಕೆಯವರನ್ನು ಈ ಸಭೆಗಳಿಗೆ ಕರೆಯದಿರುವುದು ಒಳ್ಳೆಯದೆಂದು ಕೋಲಾರ ಪೌರಸಭೆಯು ತೀರ್ಮಾನಿಸಿರುವುದಾಗಿ ತಿಳಿಯಬರುತ್ತದೆ.

ರೆಗ್ಯುಲೇಟೆಡ್ ಮಾರ್ಕೆಟ್

ನಿನ್ನೆಯಿಂದ ಮೈಸೂರು ನಗರ ವರ್ತಕರೆಲ್ಲರೂ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಭಾಗ ವಹಿಸುತ್ತಲಿರುವರು. ನಿನ್ನೆ ಧಾನ್ಯಗಳ ಬೆಲೆಗಳೆಲ್ಲವೂ ಸ್ವಲ್ಪ ಏರಿವೆ.

ಭಾರತಕ್ಕೆ ಟೆಕ್ನಿಕಲ್ ಸಹಾಯ

ವಿಶ್ವಸಂಸ್ಥೆಯು ಭಾರತಕ್ಕೆ ೩೦ ಲಕ್ಷ ೨೮ ಸಾವಿರ ಡಾಲರುಗಳ ಸಹಾಯ ನೀಡುವುದಲ್ಲದೆ ೨೮ ಜನ ಪ್ರವೀಣರ ಸಹಾಯವನ್ನು ನೀಡಬೇಕೆಂದು, ೧೯ ಭಾರತೀಯರಿಗೆ ವಿಶೇಷ ಶಿಕ್ಷಣವನ್ನು ಕೊಡಿಸಬೇಕೆಂದು ಭಾರತವು ಕೇಳಿದೆ.

ನೇಪಾಳದಲ್ಲಿ ಮಿಶ್ರ ಸರ್ಕಾರವೇ ?

ನೇಪಾಳದಲ್ಲಿ ಉಂಟಾಗಿರುವ ಇಂದಿನ ಬಿಕ್ಕಟ್ಟನ್ನು ತಾತ್ಕಾಲಿಕವಾಗಿ ಪರಿಹರಿಸಿ ಮುಂದೆ ಸುಧಾರಣೆಗಳನ್ನು ಮಾಡುವವರೆಗೆ ಪ್ರಜಾಮುಖಂಡರಲ್ಲಿ ಕೆಲವರೂ ರಾಣಾ ಸರ್ಕಾರದ ಕೆಲವು ಮಂತ್ರಿಗಳು ಸೇರಿದ ಒಂದು ತಾತ್ಕಾಲಿಕ ಮಿಶ್ರ ಸರ್ಕಾರವನ್ನು ಕೂಡಲೇ ಸ್ಥಾಪಿಸಬೇಕೆಂದು ಕೆಲವೆಡೆ ಮಾತುಕತೆ ನಡೆಯುತ್ತಿರುವುದಾಗಿ ತಿಳಿಯಬರುತ್ತದೆ.

ಈಗಿರುವ ರಾಣಾಸರ್ಕಾರವು ಭಾರತಕ್ಕೆ ಬಂದಿರುವ ನೇಪಾಳದ ದೊರೆಯನ್ನು ಪುನಃ ನೇಪಾಳಕ್ಕೆ ಕರೆದೊಯ್ದು ಅವರನ್ನೇ ಆಸ್ಥಾನದಲ್ಲಿ ಉಳಿಸಿಕೊಳ್ಳುವುದಕ್ಕೆ ಇಷ್ಟಪಡುತ್ತಿಲ್ಲವೆಂದು ತಿಳಿಯಬರುತ್ತದೆ.

ಜರೂರು ಮಂತ್ರಿಮಂಡಲ ಸಭೆ

ಕೊರಿಯಾ ಯುದ್ಧ ಪರಿಸ್ಥಿತಿಯು ದಿನದಿನಕ್ಕೂ ವಿಷಮಿಸಿಕೊಳ್ಳುತ್ತಿರುವುದನ್ನು ಚರ್ಚಿಸಲು ಬ್ರಿಟಿಷ್ ಮಂತ್ರಿಮಂಡಲವು ನಿತ್ಯವೂ ಸೇರಿ ಚರ್ಚೆ ನಡೆಸುತ್ತಲಿದೆ.

ದಾವಾ

ಹೈದರಾಬಾದ್ ಸರ್ಕಾರಕ್ಕೆ ಸೇರಿ ಈಗ ಲಂಡನ್ನಿನಲ್ಲಿರುವ ಪಾಕೀಸ್ತಾನ ಹೈಕಮಿಷನರ ಹೆಸರಿನಲ್ಲಿರುವ ೧೦ ಲಕ್ಷ ಪೌಂಡುಗಳ ಹಣವನ್ನು ಪಡೆಯಲು ಭಾರತ ಸರ್ಕಾರವು ದಾವಾ ಮಾಡುವುದಾಗಿ ತಿಳಿಯಬರುತ್ತದೆ.

ಭೇಟಿ

ನೇಪಾಳದ ಪ್ರತಿನಿಧಿಗಳು ನಿನ್ನೆ ಭಾರತ ಪ್ರಧಾನಿ ಪಂಡಿತ ನೆಹರೂರವರನ್ನು ರಾಷ್ಟ್ರಾಧ್ಯಕ್ಷ ಡಾ|| ರಾಜೇಂಪ್ರಸಾದರನ್ನು ಭೇಟಿ ಮಾಡಿ ನೇಪಾಳದ ವಿಷಯವಾಗಿ ಚರ್ಚಿಸಿದರೆಂದು ತಿಳಿಯಬರುತ್ತದೆ

ಶರಣಾಗತರಾಗಿ

ಅಮೇರಿಕಾ ಸೈನ್ಯಗಳು ಕೂಡಲೇ ಶರಣಾಗತರಾಗಿ ಎಂದು ಪ್ರಪಂಚಸಂಸ್ಥೆ ಸೈನ್ಯಗಳ ಮೇಲೆ ಚೈನಾ ವಿಮಾನಗಳು, ಹಸ್ತ ಪತ್ರಿಕೆಗಳನ್ನು ಹಾಕುತ್ತಲಿವೆ.

ಡಾ|| ರಾಧಾಕೃಷ್ಣನ್ ಭಾರತಕ್ಕೆ

ಭಾರತದ ರಷ್ಯಾ ರಾಯಭಾರಿ ಡಾ|| ರಾಧಾಕೃಷ್ಣನ್‌ರವರು ತಮ್ಮ ಸರ್ಕಾರದೊಡನೆ ಸಮಾಲೋಚನೆ ನಡೆಸಲು ಸದ್ಯದಲ್ಲಿಯೇ ಭಾರತಕ್ಕೆ ಬರಲಿರುವರು.

ಅಣುಬಾಂಬು ಪ್ರಯೋಗ

ಕೊರಿಯಾ ಯುದ್ಧದಲ್ಲಿ ಅಣುಬಾಂಬನ್ನು ಪ್ರಯೋಗಿಸುವ ವಿಷಯವು ಉನ್ನತಾಧಿಕಾರಿಗಳಲ್ಲಿ ಚರ್ಚೆಯಾಗುತ್ತಲಿದೆ.

ಅಮೇರಿಕಾಕ್ಕೆ ಅಣುಬಾಂಬನ್ನು ಪ್ರಯೋಗಿಸುವ ಇಷ್ಟವಿಲ್ಲ. ಆ ಪ್ರಸಂಗವು ಬರದಿರಲಿ. ಅಣುಬಾಂಬನ್ನು ಉಪಯೋಗಿಸುವುದಕ್ಕೆ ವಿಶ್ವಸಂಸ್ಥೆಯ ಅಪ್ಪಣೆಬೇಕಿಲ್ಲ. ಆದರೂ ಸಾಧ್ಯಾಸಾಧ್ಯತೆಗಳನ್ನು ವಿಮರ್ಶಿಸುತ್ತಲಿದ್ದೇವೆಂದು ಅಧ್ಯಕ್ಷ ಟ್ರೂಮನ್ನರು ಹೇಳಿರುವರು.

ಕನ್ನಡ ನಾಡಹಬ್ಬ

ನಾಡಹಬ್ಬ ನಡೆಯುವುದು ಬರಿ ಮನರಂಜನೆಗಲ್ಲ. ಈಗ ಇಲ್ಲಿ ನೆರೆದಿರುವುದು ಸಂಸ್ಕೃತಿ, ಸಾಹಿತ್ಯ ಇವುಗಳ ವಿಷಯವಾಗಿ ಚರ್ಚಿಸಲು ಇದು ಅಖಂಡ ಕರ್ಣಾಟಕಕ್ಕೆ ಸಂಬಂಧಪಟ್ಟ ವಿಷಯ. ಎಲ್ಲಿಯವರೆಗೆ ಒಬ್ಬನಿಗೆ ಕನ್ನಡದ ವಿಷಯದಲ್ಲಿ ಪ್ರಾಮುಖ್ಯತೆ ಇರುತ್ತದೆಯೋ ಅಲ್ಲಿಯವರೆಗೆ ಅವನು ಕನ್ನಡಿಗ. ವಿದ್ಯಾರ್ಥಿಗಳು ಕನ್ನಡವನ್ನು ಸರಿಯಾಗಿ ಅಭ್ಯಾಸಿಸಬೇಕು. ಇಂಗ್ಲೀಷನ್ನು ಕಲಿಯುವುದಕ್ಕೆ ಈಗ ಎಷ್ಟು ಕಷ್ಟ ಪಡುತ್ತಿದ್ದೀರೋ ಕನ್ನಡವನ್ನು ಕಲಿಯುವುದಕ್ಕೆ ಅದರ ನೂರರಲ್ಲಿ ಒಂದು ಭಾಗ ಕಷ್ಟಪಟ್ಟರೆ ಸಾಕು. ನಮಗೆ ಯಾವ ವಿಷಯವು ಸುಲಭವಾಗಿ ತಿಳಿಯಬೇಕಾದರೂ ಅದು ನಮ್ಮ ದೇಶಭಾಷೆಯಲ್ಲಿ. ಇಂಗ್ಲೀಷು ಬೇಕು. ಆವರೆ ಅದು ಓದಿ ತಿಳಿಯುವಷ್ಟಿದ್ದರೆ ಸಾಕು. ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಿದರೆ ಅವರು ಇಂಗ್ಲೀಷಿಗಿಂತ ಬೇಗ ಅದನ್ನು ಗ್ರಹಿಸುತ್ತಾರೆ ಏಕೆಂದರೆ ಅದು ತಮ್ಮ ದಿನಚರಿಯಲ್ಲಾಡುವ ಭಾಷೆ. ಪಠ್ಯ ಪುಸ್ತಕಗಳಿಗಾಗಿ ಬೇರೆ ದೇಶಗಳಿಗೆ ಕೊಡುತ್ತಿರುವ ಎಷ್ಟೋ ಹಣವನ್ನು ಉಳಿಸಿ ನಾವು ನಮ್ಮ ಕನ್ನಡಪುಸ್ತಕಗಳನ್ನೇ ತಯಾರಿಸಬಹುದು. ನಾವು ಸುಮ್ಮನಿದ್ದರೆ ಕನ್ನಡವು ವಿಶ್ವವಿದ್ಯಾಲಯದಲ್ಲಿ ಮಾಧ್ಯಮವಾಗುವುದಿಲ್ಲ. ಈಗಲೇ ಕಷ್ಟಪಟ್ಟು ಕನ್ನಡವು ವಿಶ್ವವಿದ್ಯಾನಿಲಯದಲ್ಲಿ ಮಾಧ್ಯಮವಾಗುವಂತೆ ಮಾಡೋಣ. ಸ್ವಾತಂತ್ರ್ಯನೀತಿ ಬೆಳವಣಿಗೆ ಇವುಗಳಿಗೆ ಕನ್ನಡ ಮಾಧ್ಯಮವು ಅತ್ಯಗತ್ಯ. ಹೀಗೆ ಮಾಡುವುದರಿಂದ ಉಪಾಧ್ಯಾಯರೂ ಇನ್ನೂ ವಿಶದವಾಗಿ ವಿದ್ಯಾರ್ಥಿಗಳಿಗೆ ವಿಷಯಗಳನ್ನು ತಿಳಿಸಬಹುದು. ವಿದ್ಯಾರ್ಥಿಗಳು ಅದನ್ನು ಚೆನ್ನಾಗಿ ಗ್ರಹಿಸುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಎಲ್ಲರೂ ಸೇರಿ ಕನ್ನಡ ಮಾಧ್ಯಮವಾಗುವಂತೆ ಮಾಡೋಣ. ಎಂದು ನಿನ್ನೆ ಮೈಸೂರು ಫಸ್ಟ್‌ಗ್ರೇಡ್ ಕಾಲೇಜಿನಲ್ಲಿ ನಡೆದ ನಾಡಹಬ್ಬದ ದಿನಾಚರಣೆ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಕನ್ನಡ ಪ್ರೊಫೆಸರ್ ಶ್ರೀ ಕೆ. ವಿ. ಪುಟ್ಟಪ್ಪನವರು ತಿಳಿಸಿದರು.

ಶ್ರೀ ಕೆ. ವಿ. ರಾಘವಚಾರ್‌ರವರು ಕನ್ನಡದ ಆಗುಹೋಗುಗಳ ವಿಷಯವಾಗಿ ಭಾಷಣಮಾಡಿದರು.

ಕೊರಿಯಾದಲ್ಲಿ ಚೈನಾ ಸೈನ್ಯ

ಕೊರಿಯಾ ಕದನದಲ್ಲಿ ೮೦,೦೦೦ಕ್ಕಿಂತ ಹೆಚ್ಚಾಗಿ ಚೀಣೀಯರು ಭಾಗವಹಿಸುತ್ತಿದ್ದಾರೆ ಎಂದು ತಿಳಿಯಬರುತ್ತದೆ. ವಿಶ್ವಸಂಸ್ಥೆಯ ಸೈನ್ಯಗಳು ಅನೇಕ ಕಡೆ ಹಿಮ್ಮೆಟ್ಟುತ್ತಿವೆ. ಚೀಣಾ ಸೈನ್ಯವು ಸಹ ಕೆಲವೆಡೆ ಹಿಂದಕ್ಕೆ ಹೋಗುತ್ತಿವೆ. ಕಾರಣವು ತಿಳಿಯದಾಗಿದೆ. ಬೇರೆ ರೀತಿಯಾದ ವ್ಯೂಹವನ್ನು ಹೂಡಬೇಕೆಂದೋ ಅಥವಾ ತನ್ನ ಕೆಲಸವು ಮುಗಿಯಿತೆಂದು ಹಿಂದೆ ಹೋಗುತ್ತಿದೆಯೋ ತಿಳಿಯದು.

ವಾಷಿಂಗ್‌ಟನ್‌ನಲ್ಲಿ ಅಮೇರಿಕಾ ಸೈನ್ಯದ ಉನ್ನತಾಧಿಕಾರಿಗಳು ಕೊರಿಯಾ ಕದನವು ಪ್ರಬಲವಾಗುತ್ತಿರುವ ವಿಷಯದಲ್ಲಿ ಚರ್ಚೆ ನಡೆಸುತ್ತಿದ್ದಾರೆ.

ಮೂರನೆ ಮಹಾಯುದ್ಧ

ಮೂರನೇ ಮಹಾಯುದ್ಧವು ನಡೆಯುವುದಿಲ್ಲವೆಂದು ಈಗಿನ ಪ್ರಪಂಚ ಪರಿಸ್ಥಿತಿಯಲ್ಲಿ ಹೇಳಲಾಗುವುದಿಲ್ಲ. ಪರಿಸ್ಥಿತಿಯು ನಿತ್ಯವು ಉಗ್ರವಾಗುತ್ತಿದೆ. ಮಿತ್ರರಾಷ್ಟ್ರಗಳೆಲ್ಲವೂ ತಮ್ಮ ಸೈನ್ಯಬಲವನ್ನು ಈಗಿನಿಂದಲೇ ಬಲಪಡಿಸಿಕೊಳ್ಳುವುದು ಉತ್ತಮ. ಇಂದಿನ ಪರಿಸ್ಥಿತಿಯಲ್ಲಿ ನಾಳೆ ಏನಾಗುವುದೆಂಬುದನ್ನು ಹೇಳಲಾಗುವುದಿಲ್ಲ ಎಂದು ಅಮೇರಿಕಾ ಸೆಕ್ರೆಟರಿ ಆಫ್‌ಸ್ಟೇಟ್ ಮಿ|| ಡೀನ್ ಅಚಿಸನ್‌ರವರು ಹೇಳಿರುವರು.

ಆಹಾರ ಮಂತ್ರಿಗಳ ಸಭೆ

ಇದೇ ಮಾಹೆ ೧೧ನೇ ತಾ|| ಎಲ್ಲಾ ಪ್ರಾಂತ್ಯ ಆಹಾರಮಂತ್ರಿಗಳ ಸಭೆಯು ಬೊಂಬಾಯಿನಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ನೈಜಾಮರ ಟ್ರಸ್ಟ್

ಹೈದರಾಬಾದ್ ನೈಜಾಮರು ತಮ್ಮ ಗಂಡುಮಕ್ಕಳೂ ಹೆಣ್ಣುಮಕ್ಕಳೂ ಸಂಬಂಧಿಕರೂ ಇವರುಗಳ ಉಪಯೋಗಕ್ಕಾಗಿ ತಮ್ಮ ಸ್ವಂತ ಆಸ್ತಿಯಿಂದ ೧೬ ಕೋಟಿ ರೂ.ಗಳ ಒಂದು ಟ್ರಸ್ಟನ್ನು ಮಾಡಿದ್ದಾರೆ. ಇದಕ್ಕೆ ಭಾರತಸರ್ಕಾರದ ಒಪ್ಪಿಗೆ ದೊರೆತಿದೆ.

ನಿಧನ

ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥೆಯ ಇನ್‌ಛಾರ್ಜ್ ಡೈರೆಕ್ಟರಾಗಿದ್ದ ಸರ್ ಗುರುನಾಥಬೇವೂರ್‌ರವರು ಹೃದಯಸ್ತಂಭನದಿಂದ ಸ್ವರ್ಗಸ್ಥರಾದರು.

ದಸ್ತಗಿರಿ

ಬೆಂಗಳೂರು ಹಿಂದೂಸ್ಥಾನ ವಿಮಾನಕಾರ್ಖಾನೆಯ ಕಾರ್ಮಿಕನಾಯಕ ಶ್ರೀ ಎಂ. ಬಿ. ಸಿಂಗ್ ಮತ್ತಿತರ ೯ ಜನರನ್ನು ಸಾರ್ವಜನಿಕ ರಕ್ಷಣಾ ಶಾಸನರೀತ್ಯ ದಸ್ತಗಿರಿ ಮಾಡಿ ಬಂಧನದಲ್ಲಿಟ್ಟಿದಾರೆ.

ಆಕ್ರಮಣಕ್ಕೆ ಸಿದ್ಧರಾಗಿರಬೇಕು

ನೆರೆ ರಾಷ್ಟ್ರಗಳಲ್ಲಿ ಉಂಟಾಗುತ್ತಲಿರುವ ಘಟನೆಗಳ ಕಾರಣದಿಂದ ವಿದೇಶಗಳ ಆಕ್ರಮಣವನ್ನೆದುರಿಸಲು ರಕ್ಷಣಾವ್ಯವಸ್ಥೆ ಬಲಪಡಿಸಬೇಕು ಎಂದು ವಿಂಧ್ಯಪ್ರದೇಶದ ಗೃಹಸಚಿವ ಪಂಡಿತ ಡಿ. ಪಿ. ಮಿಶ್ರಾರವರು ಹೇಳಿರುವರು.

ಒಲಂಪಿಯಾ
30-11-50 ರಿಂದ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀ ಕೃಷ್ಣ

ಬೆಳಗಿನ ಪ್ರದರ್ಶನ 1-12-50 ರಿಂದ
4 ದಿನಗಳು ಮಾತ್ರ
ಡೇರ್ ಡೆವಿಲ್ಸ್ ಆಫ್ ದಿವೆಸ್ಟ್

ಸಿಟಿ ಮುನಿಸಿಪಲ್ ಆಫೀಸ್, ಮೈಸೂರು ತಾ|| ೧-೧೨-೫೦

ಎಲೆಕ್ಟೋರಲ್ ರೋಲ್ (ಚುನಾವಣೆದಾರರ ಪಟ್ಟಿಯು)

ಪ್ರಕಟನೆ

ಮೈಸೂರು ನಗರದ ಎಲೆಕ್ಟೋರಲ್‌ರೋಲ್ (ಚುನಾವಣೆದಾರರ ಪಟ್ಟಿ) ಈ ದಿವಸ (1-12-1950) ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಲ್ಲೂ ಮತ್ತು ಇತರ ಮುಖ್ಯ ಸ್ಥಳಗಳಲ್ಲೂ ಪ್ರಚುರಪಡಿಸಲಾಗಿದೆ ಈ ಪಟ್ಟಿಗೆ ಸಂಬಂಧಪಟ್ಟಂತೆ ಹಕ್ಕು ಸಾಧನೆ ಪತ್ರಗಳನ್ನೂ ಮತ್ತು ತಕರಾರು ಪತ್ರಗಳನ್ನೂ (claims and objections) ಮೈಸೂರು ನಗರ ಎಲೆಕ್ಟೋರಲ್ ರೋಲಿನ ರಿವೈಸಿಂಗ್ ಅಥಾರಿಟಿಯಾಗಿ ನೇಮಿಸಲ್ಪಟ್ಟಿರುವ ಮೊದಲನೆಯ ಮುನ್ಸೀಫ್‌ರವರಿಗಾಗಲೀ ಅಥವಾ ರಿಜಿಸ್ಟ್ರೇಷನ್ ಆಫೀಸರಾಗಿ ನೇಮಿಸಲ್ಪಟ್ಟಿರುವ ಮುನಿಸಿಪಲ್ ಕಮೀಷನರಿಗಾಗಲೀ ಖುದ್ದಾಗಿಯಾಗಲೀ, ಟಪಾಲ್‌ಮೂಲಕವಾಗಿಯಾಗಲಿ 1950 ನೇ ಡಿಸೆಂಬರ್ 22 ನೇ ತಾರೀಖಿನ ದಿನಕ್ಕೆ ಮೀರದಂತೆ ತಲಪುವಹಾಗೆ ಕಳುಹಿಸಿಕೊಡತಕ್ಕದ್ದೆಂದು ಸಾರ್ವಜನಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಸಿ. ನರಸಿಂಹಮೂರ್ತಿ,
ಮುನಿಸಿಪಲ್ ಕಮೀಷನರ್ ಮತ್ತು
ಎಲೆಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರ್

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೨ ಶನಿವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಚಿತ್ರಜಗತ್ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಮುಖವೀಣೆ. ೧-೪೫ ಸರೋಜ (ಕನ್ನಡ ಗೀತೆಗಳು) ೨-೦ ಬಾಲಜಗತ್ (ಮಕ್ಕಳಿಗಾಗಿ) ೨-೩೦ ಮುಕ್ತಾಯ.

ಸಂಜೆ ೫-೩೦ ಎಮ್. ಎಸ್. ಜಯಮ್ಮ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಎ. ಸಿ. ವಸಂತಕೋಕಿಲಂ (ರಿ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ತಾಳ ವಾದ್ಯ. ೭-೧೫ ವನಿತಾವಿಹಾರ (ಹೆಂಗಸರಿಗಾಗಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಎಲ್. ಲಕ್ಷ್ಮೀಪತಿ (ಕಥಾ ಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಾದ್ಯಸಮ್ಮೇಳನ ೯-೪೫ ಗಾನವಾರಿಧಿ (ರಿ) ೧೦-೦ ಮುಕ್ತಾಯ.

ಬೆಲ್ಲದ ಹತೋಟಿ ಬೇಡ

ಬೆಲ್ಲದ ತಯಾರಿಕೆಯು ಒಂದು ಗೃಹಕೈಗಾರಿಕೆಯಾದ್ದರಿಂದ ಅದರ ಹತೋಟಿಯನ್ನು ಕೂಡಲೇ ತೆಗೆದುಹಾಕಬೇಕೆಂದು ಕೆಲವು ಸದಸ್ಯರು ನವ ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯ ಸಭೆಯಲ್ಲಿ ತಿಳಿಸಿರುವುದಾಗಿ ವರದಿಯಾಗಿದೆ.

ಮುಂದುವರಿಸಲಾಗಿದೆ

ನೇಪಾಳದ ೩ ವರ್ಷದ ದೊರೆಯನ್ನು ಅಂಗೀಕಾರ ಮಾಡುವ ವಿಷಯವನ್ನು ಬ್ರಿಟನ್ನು ಮುಂದುಹಾಕಿದೆ ಎಂದು ತಿಳಿಯಬಂದಿದೆ

ರಣಜಿತ್
1-12-50 ರಿಂದ
ದಿನವಹಿ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಭಾಯಿ ಬಹೆನ್
(ಸಹೋದರ ಸಹೋದರಿ)
ಪಾತ್ರವಹಿಸಿರುವ
ಗೀತಾಬಾಲಿ, ಪ್ರೇಮ್ ಆದೀಬ್, ನಿರೂಪ ರಾಯ್, ಕಕ್ಕೊ, ಗೋಪ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ.ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨--೧೨—೧೯೫೦ನೇ ಶನಿವಾರ [ಸಂಚಿಕೆ ೭೯

ಮೂರನೇ ಮಹಾಯುದ್ಧ ಸನ್ನಿಹಿತವಾಗಿದೆ?

ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರು ಅಮೇರಿಕಾಕ್ಕೆ ಭೇಟಿಯಿತ್ತು ಅಧ್ಯಕ್ಷ ಟ್ರೂಮನ್ನರೊಡನೆ ಮಾತುಕಥೆ ನಡೆಸಲು ನಿರ್ಧರಿಸಿರುವುದು ಇಂದಿನ ವಿಶ್ವಸಂದಿಗ್ಧ ಪರಿಸ್ಥಿತಿಯ ತೀವ್ರತೆಯನ್ನು ಸೂಚಿಸುತ್ತದೆ. ಮೂರನೇ ಮಹಾಯುದ್ಧವು ಸನ್ನಿಹಿತವಾಗಿದೆಯೆಂಬ ಶಂಕೆಯು ಪ್ರಪಂಚದಲ್ಲೆಲ್ಲಾ ಮೂಡುತ್ತಿದೆ.

ಸರ್ಕಾರಿ ಆಜ್ಞೆ

ಅ|| ಕಮಿಷನರ್ ಜ ಮಹಮ್ಮದ್ ವಸೀರ್ ಅಹಮ್ಮದ್‌ರವರು ದಾವಣಗೆರೆ ನಗರ ಪೌರಸಭೆಯ ಕಮಿಷನರಾಗಿ ನೇಮಕರಾಗಿದ್ದಾರೆ

ಅ|| ಕಮಿಷನರ್ ಶ್ರೀ. ಸಿ. ಎಸ್. ಶೇಷಾದ್ರಿಯವರನ್ನು ನವೆಂಬರ್ ೧೫ ರಿಂದ ಪೂರ್ವಬಂಗಾಳದಿಂದ ಬರುವ ನಿರಾಶ್ರಿತರ ಪುನರ್ವಸತಿಗೆ ಸಂಬಂಧಪಟ್ಟಂತೆ ವಿಶೇಷಾಧಿಕಾರಿಗಳಾಗಿ ನೇಮಕವಾಗಿದ್ದಾರೆ.

ಮಹಾರಾಣಿ ಟ್ರೇಯರ ಟ್ರೇನಿಂಗ್ ಕಾಲೇಜಿನ ಸೂಪರಿಂಟೆಂಡೆಂಟ್ ಶ್ರೀಮತಿ ಬಿ ಇಂದಿರಮ್ಮ ಮತ್ತು, ತುಮಕೂರು ಜಿಲ್ಲಾ ವಿದ್ಯಾಧಿಕಾರಿ ಜನಾಬ್ ಅಬ್ದುಲ್ ಅಜೀಜ್ ಖಾನ್‌ರವರನ್ನು ವಿದ್ಯಾ ಇಲಾಖಾ ಡೆಪ್ಯುಟಿ ಡೈರೆಕ್ಟರಾಗಿ ನೇಮಕಮಾಡಲಾಗಿದೆ.

ಶ್ರೀ. ಎಂ. ಜಿ. ರಾಚಣ್ಣನವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್‌ಮೆಡಿಕಲ್ ಆಫೀಸರಾಗಿ ವರ್ಗಾಯಿಸಲಾಗಿದೆ.

ಚಿಕ್ಕಮಗಳೂರು ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರಾದ ಶ್ರೀ ಎನ್. ಶಿವು ಅಯ್ಯರ್ ವರನ್ನು ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾಗಿ, ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿ ಶ್ರೀ ಆರ್. ಆನಂದ ಕೃಷ್ಣರವರನ್ನು ಎಕನಾಮಿಕ್ ಕಾನ್ಫರೆನ್ಸ್ ಅಸಿಸ್ಟೆಂಟು ಸೆಕ್ರೆಟರಿಗಳಾಗಿ, ಬೆಂಗಳೂರು ಸೆಂಟ್ರಲ್ ಜೈಲು ಸೂಪರಿಂಟೆಂಡೆಂಟ್ ಶ್ರೀ. ಆರ್ ರಂಗಯ್ಯನವರನ್ನು ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿ ವರ್ಗಾಯಿಸಲಾಗಿದೆ.

ಭೀಕರ ಹೋರಾಟ

ಕೊರಿಯಾ ವಾಯುವ್ಯಭಾಗದಲ್ಲಿ ಚೈನಾ, ಉತ್ತರ ಕೊರಿಯಾ ಸೈನ್ಯಗಳಿಗೂ ವಿಶ್ವ ಸೈನ್ಯಗಳಿಗೂ ಭೀಕರ ಹೋರಾಟವಾಗುತ್ತಲಿದೆಯೆಂದು ತಿಳಿಯಬರುತ್ತದೆ. ಅಮೆರಿಕಾ ಸೈನ್ಯಗಳೂ ಭೀಕರ ವಿಮಾನಧಾಳಿ ನಡೆಸುತ್ತಲಿವೆ. ಚೈನಾಸೈನ್ಯವು ಸವ್ಯವಸ್ಥೆ ಧಾಳಿ ನಡೆಸುತ್ತಲಿವೆ

ಉಭಯ ಪಕ್ಷಗಳಲ್ಲಿಯೂ ಶಸ್ತ್ರಸೈನ್ಯದ ಪುನರ್ವವಸ್ಥೆ ಮತ್ತು ಮದ್ದುಗುಂಡುಗಳ ಶೇಖರಣೆ ನಡೆಯುತ್ತಲಿದೆಯೆಂಬ ವಾರ್ತೆ ಬಂದಿದೆ.

ವೋಟರ ಪಟ್ಟಿ

ಮೈಸೂರು ನಗರದಲ್ಲಿ ನಿನ್ನೆ ವೋಟರಪಟ್ಟಿಯು ಪ್ರಕಟವಾಗಿದೆ. ನಗರದಲ್ಲಿ ಒಟ್ಟು ೮೭,೬೦೬ ಮತದಾರರಿದ್ದಾರೆ.

ಶ್ರೀ ಕೆ. ಟಿ. ಭಾಷ್ಯಂರವರು

ಮೈಸೂರು ಪುರಭವನದಲ್ಲಿ ಇಂದು ನಡೆಯುವ ಸಂಸ್ಕೃತ ಸಾಹಿತ್ಯೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಲು ಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಆಗಮಿಸಿರುವರು. ಸಮಾರಂಭವಾದನಂತರ ಬೆಂಗಳೂರಿಗೆ ಹಿಂತಿರುಗುವರು.

ಆಹಾರ ಧಾನ್ಯಗಳ ಬೆಲೆ

೧೯೪೯-೫೦ ರಲ್ಲಿದ್ದ ಆಹಾರ ಪದಾರ್ಥಗಳ ಶೇಖರಣೆ ಬೆಲೆಯು ದರವೇ ೧೯೫೦-೫೧ ರಲ್ಲಿಯೂ ಇರುವುದೆಂದು ಸರ್ಕಾರದವರು ಪ್ರಕಟಣೆ ಹೊರಡಿಸಿರುವರು. ಒಂದನೆ ದರ್ಜೆ ಭತ್ತ ಪಲ್ಲ ೨೧ ರೂ. ಎರಡನೇ ದರ್ಜೆ ೧೯ ರೂ ರಾಗಿ ೨೦ ರೂ. ಜೋಳ ೨೦ ರೂ. ಸಾವೆ ೧೮ ರೂ ನವಣೆ ೧೯ ರೂ. ಗೋ[illegible] ೧೮ ರೂ.

ವಾರ್ಷಿಕೋತ್ಸವ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ೪ನೇ ವಾರ್ಷಿಕೋತ್ಸವದ ಪ್ರಾರಂಭೋತ್ಸವವನ್ನು ನಿನ್ನೆ ಮೈಸೂರು ನಗರ ರಂಗಾಚಾರ್ಲು ಪುರಭವನದಲ್ಲಿ ಮದರಾಸಿನ ಹಣಕಾಸು ಮತ್ತು ಟ್ರಾನ್ಸ್‌ಪೋರ್ಟ್ ಸಚಿವರಾದ ಶ್ರೀ ಬಿ ಗೋಪಾಲರೆಡ್ಡಿಯವರು ನೆರವೇರಿಸಿದರು. ಮೈಸೂರಿನ ಹಣಕಾಸಿನ ಸಚಿವ ಶ್ರೀ ಹೆಚ್. ಸಿ ದಾಸಪ್ಪನವರು ಅಧ್ಯಕ್ಷತೆವಹಿಸಿದ್ದರು.

ಶ್ರೀ ಬಿ ಗೋಪಾಲರೆಡ್ಡಿಯವರು ಪ್ರಾರಂಭೋತ್ಸವವನ್ನು ನಡೆಸುತ್ತ ಮೋಟಾರು ಕೆಲಸಗಾರರೆಲ್ಲರೂ ಯಾವ ಬೇಡಿಕೆಗಳನ್ನು ಈ ವಾರ್ಷಿಕೋತ್ಸವ ಸಮಯದಲ್ಲಿ ಸರ್ಕಾರದ ಮುಂದಿಡದೆ ಈ ಸಮಾರಂಭವನ್ನು ಮಾಡುತ್ತಲಿರುವುದು ಆಶ್ಚರ್ಯವಾಗಿದೆ. ಆದರೂ ತಮ್ಮ ಬೇಡಿಕೆಗಳನ್ನು ತಮ್ಮ ಮುಖಂಡರ ಮೂಲಕ ಸರ್ಕಾರದ ಗಮನಕ್ಕೆ ತಂದಲ್ಲಿ ಅವುಗಳು ಸುಲಭವಾಗಿ ಈಡೇರುವುವೆಂಬ ಭರವಸೆಯಿಂದ ಈರೀತಿ ಮಾಡಿರುವುದಾಗಿ ಹೇಳಬಹುದು ಇದು ಅತ್ಯುತ್ತಮವಾದ ರೀತಿ ಈಗ ಪ್ರಜೆಗಳು ಬೇರೆಯಲ್ಲ, ಸಚಿವರು ಬೇರೆಯಲ್ಲ ಎಲ್ಲರೂ ದೇಶದ ಹಿತಕ್ಕಾಗಿಯೆ ದುಡಿಯುತ್ತಲಿರುವುದು. ಇದರಲ್ಲಿ ಕಾರ್ಮಿಕರ ಮೇಲೆ ವಿಶೇಷ ಭಾರ ಬಿದ್ದಿದೆ. ಎಲ್ಲರೂ ತಮ್ಮ ತಮ್ಮ ಜವಾಬಾರಿಯನ್ನರಿತುಕೊಂಡು ಲಂಚ ರುಷುವತ್ತು ಮೋಸ ಮುಂತಾದುವುಗಳಿಗೆ ಒಳಗಾಗದೆ ಕೆಲಸಮಾಡದರಲ್ಲಿ ಹಿತವಾಗುತ್ತದೆ. ಮಾಲೀಕರು ಸಹ ತಮ್ಮ ಕೆಲಸಗಾರರಲ್ಲಿ ಅತ್ಯಂತ ಪ್ರೀತಿ ವಿಶ್ವಾಸಗಳನ್ನು ತೋರ್ಪಡಿಸಿ ಕೆಲಸವನ್ನು ಮಾಡಿಸಿಕೊಳ್ಳಬೇಕು. ಕೆಲಸಗಾರರು ಸಹ ತಮ್ಮ ಮಾಲೀಕರಲ್ಲಿ ಅತ್ಯಂತ ವಿಶ್ವಾಸದಿಂದ ಕೆಲಸಮಾಡಿ ಪ್ರಗತಿಸಾಧನೆಗಾಗಿ ದುಡಿಯಬೇಕೆಂದು ಹೇಳಿದರು.

ಸೈನ್ಯ ಜಮಾವಣೆ

ಇಂದಿನ ಪ್ರಪಂಚದಲ್ಲಿರುವ ಯುದ್ಧ ಭೀತಿಗಾಗಿ ಎಲ್ಲಾ ರಾಷ್ಟ್ರಗಳವರೂ ಸೇನಾ ಬಲವನ್ನು ಹೆಚ್ಚಿಸಿಕೊಳ್ಳಬೇಕೆಂದು ಟ್ರೂಮನ್ನರು ಹೇಳಿರುವರು.

ಅಮೆರಿಕಾ ಸೈನ್ಯವನ್ನು ಬಲಪಡಿಸುವುದಕ್ಕಾಗಿ ಮತ್ತು ಅಣು ಶಕ್ತಿಯನ್ನು ಅಧಿಕಗೊಳಿಸುವುದಕ್ಕಾಗಿ ಅಧ್ಯಕ್ಷ ಟ್ರೂಮನ್ನರು ಕಾಂಗ್ರೆಸ್ಸನ್ನು ಅಧಿಕ ಹಣವನ್ನು ಕೇಳಲಿರುವರು.

ಅಟ್ಲಿ ಅಮೆರಿಕಾಕ್ಕೆ

ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರು ನಾಳೆ ಲಂಡನ್ನಿನಿಂದ ಅಮೆರಿಕಾಕ್ಕೆ ಪ್ರಯಾಣಮಾಡುವರು. ಮಂಗಳವಾರ ಅವರು ಅಧ್ಯಕ್ಷ ಟ್ರೂಮನ್ನರನ್ನು ಭೇಟಿಮಾಡಿ ಮಾತುಕಥೆ ಪ್ರಾರಂಭಿಸುವರು. ಅಮೆರಿಕಾದಲ್ಲಿ ಅವರು ಒಂದು ವಾರವಿರುವ ನಿರೀಕ್ಷೆಯಿದೆ. ಬ್ರಿಟನ್ನಿನ ಕೆಲವು ಉನ್ನತ ಮಿಲಿಟರಿ ಅಧಿಕಾರಿಗಳೂ ಅವರೊಡನೆ ಹೊರಡುವರು.

ಸಿಂಹಾಸನ ತ್ಯಾಗ

ಈಗ ದೆಹಲಿಯಲ್ಲಿ ಭಾರತದ ಆಶ್ರಯದಲ್ಲಿರುವ ನೇಪಾಳದ ದೊರೆಯು ತನ್ನ ಮಗ (೩ ವರ್ಷದ ಜ್ಞಾನೇಂದ್ರನ ತಂದೆ) ನ ಪರವಾಗಿ ಸಿಂಹಾಸನ ತ್ಯಾಗಮಾಡಬಹುದೆಂದೂ, ನೇಪಾಳ ಭಾರತ ಸರ್ಕಾರಗಳ ಮಾತುಕತೆಗಳಿಂದ ಈ ಸೂಚನೆ ಮಾಡಲಾಗಿದೆಯೆಂದೂ ಇದರಂತೆ ಒಪ್ಪಂದವಾಗವ ಸಂಭವ ಕಾಣಬರುತ್ತಲಿದೆಯೆಂದೂ ವರದಿಯಾಗಿದೆ

ಶಾಂತಿ ಸಂಧಾನ ಸೂಚನೆಯಿಲ್ಲ

ಅಮೇರಿಕಾಕ್ಕೆ ಹೋಗಿರುವ ಚೈನಾ ಪ್ರತಿನಿಧಿಗಳ ಮಾತುಗಳಿಂದ ಶಾಂತಿಸಂಧಾನ ಸೂಚನೆಗಳೇನೂ ಕಾಣಬರುತ್ತಿಲ್ಲವೆಂದು ಅಧಿಕಾರಯುತವಾಗಿ ಹೇಳಲಾಗಿದೆ.

ಬ್ರಿಟನ್–ರಷ್ಯಾ ಒಪ್ಪಂದ

ಬ್ರಿಟನ್ ರಷ್ಯಾದೊಡನೆ ಶಾಂತಿಯುತ ಸ್ನೇಹ ಒಪ್ಪಂದ ಮಾಡಿಕೊಳ್ಳಲು ಸದಾ ಸಿದ್ಧವಿದೆಯೆಂದು ಬ್ರಿಟನ್ ಪ್ರಧಾನಿ ಅಟ್ಲಿಯವರು ಹೇಳಿರುವರು.

ಜಿಲ್ಲೆಯಲ್ಲಿ ಮತದಾರರ ಪಟ್ಟಿ

ಮೈಸೂರು ಜಿಲ್ಲೆಯಲ್ಲಿ ಮತದಾರರಪಟ್ಟಿಯು ಈ ಮಾಹೆ ೧೫ನೇ ತಾ|| ನೊಳಗಾಗಿ ಜಿಲ್ಲೆಯಲ್ಲೆಲ್ಲಾ ಪ್ರಕಟವಾಗುವುದೆಂದೂ, ನಿಶ್ಚಯವಾದ ದಿನವು ಇನ್ನೂ ಗೊತ್ತಾಗಿಲ್ಲವೆಂದು ತಿಳಿಯುತ್ತದೆ.

ನಗರ ಆಸ್ಪತ್ರೆಗಳಲ್ಲಿ ಉಚಿತ ಔಷಧ

ಮೈಸೂರು ನಗರದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲೂ ರೋಗಿಗಳಿಂದ ಔಷಧಿಗಳಿಗಾಗಿ ತೆಗೆದುಕೊಳ್ಳುತ್ತಲಿರುವ ಶುಲ್ಕವನ್ನು ನಿಲ್ಲಿಸಲು ಸರ್ಕಾರವನ್ನು ಕೋರತಕ್ಕದ್ದೆಂದು ಮೊನ್ನೆ ನಡೆದ ಪೌರಸಭೆಯ ಅಧಿವೇಶನದಲ್ಲಿ ನಿರ್ಣಯವಾಯಿತು.

ರಾಜೀನಾಮೆ ಅಂಗೀಕಾರ

ನಗರ ಪೌರಸಭೆಯ ಕೆಲವು ಉಪಸಮಿತಿಗಳಿಗೆ ಪ್ರಜಾಸಂಘದ ಸದಸ್ಯರಿತ್ತಿದ್ದ ರಾಜೀನಾಮೆಯನ್ನು ಅಂಗೀಕರಿಸಿ ಆ ಸ್ಥಾನಗಳಿಗೆ ಕಾಂಗ್ರೆಸ್ ಸದಸ್ಯರನ್ನೇ ಚುನಾಯಿಸಿಕೊಳ್ಳಲಾಗಿದೆ

ಭೇಟಿ

ಭಾರತ ಪ್ರತಿನಿಧಿ ಶ್ರೀ. ಬಿ. ಎನ್. ರಾವ್‌ರವರಿಗೂ ಚೈನಾಪ್ರತಿನಿಧಿ ಮಿ|| ವೂಸಿಯೂ-ಚುವಾನರವರಿಗೂ ನಿನ್ನೆ ಭೇಟಿಯಾಯಿತು.

ಪೌರಸಭೆಯ ಅಧಿವೇಶನದಲ್ಲಿ

ನರಸಿಂಹರಾಜಮೊಹಲ್ಲಾ (ರಾಜಪುತ್ರ ಬ್ಲಾಕಿನಲ್ಲಿ ಒಂದು ಮಾರ್ಕೆಟ್ಟನ್ನು ಕಟ್ಟಿಸಬೇಕೆಂದು ಪೌರಸಭೆಯ ಮೊನ್ನೆಯ ಅಧಿವೇಶನದಲ್ಲಿ ಶ್ರೀ ಎಂ ಆರ್ ಶ್ರೀನಿವಾಸಯ್ಯಂಗಾರ್ ತಂದಿದ್ದ ನಿರ್ಣಯದಲ್ಲಿ ದೀರ್ಘಚರ್ಚೆ ನಡೆಯಿತು. ಜನರಿಗೆ ಬೇಕಾಗಿರುವ ಈ ಸೌಕರ್ಯಗಳನ್ನು ನಗರಾಭಿವೃದ್ಧಿ ಸಮಿತಿಯವರು ಮಾಡಬೇಕಾದ ಕರ್ತವ್ಯವೆಂದೂ ಈ ವಿಷಯವನ್ನು ನಗರಾಭಿವೃದ್ಧಿ ಸಮಿತಿಗೆ ತಿಳಿಸಬೇಕೆಂದೂ ಮಾಡಿದ ನಿರ್ಣಯವನ್ನು ಶ್ರೀ ಶ್ರೀನಿವಾಸಯ್ಯಂಗಾರ್‌ರವರು ತೀವ್ರವಾಗಿ ಖಂಡಿಸಿ ಪೌರರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಪೌರಸಭೆಯ ಕರ್ತವ್ಯವೆಂದು ನಗರಾಭಿವೃದ್ಧಿ ಸಮಿತಿಯವರು ಮಾಡಬೇಕೆಂದು ಹೇಳುತ್ತಾ ಜನರಿಗೆ ತೊಂದರೆಯನ್ನುಂಟು ಮಾಡುವುದು ಸಾಧುವಲ್ಲವೆಂದೂ [illegible]ದಲ್ಲಿ ಕೂಸು ಬಡವಾಯಿತೆಂಬಂತೆ ಜನರ ಸ್ಥಿತಿಯಾಗಿದೆಯೆಂದು ಹೇಳಿದರು

ಸರ್ಕಾರಿ ಕಟ್ಟಡಗಳ ಮೇಲೆ ತೆರಿಗೆ

ದೆಹಲಿಯಲ್ಲಿ ಸರ್ಕಾರಿ ಕಟ್ಟಡಗಳ ಬಾಡಿಗೆದರವನ್ನು ಈಗಿನ ಆರ್ಥಿಕಸ್ಥಿತಿಗೆ ತಕ್ಕಂತೆ ಗೊತ್ತುಮಾಡಿ, ಹತ್ತಾರು ವರ್ಷಗಳ ಹಿಂದೆ ವಿಧಿಸಿರುವ ತೆರಿಗೆಯನ್ನು ಕೂಡಲೇ ಹೆಚ್ಚಿಸಬೇಕೆಂದೂ ಇದರಿಂದ ದೆಹಲಿ ಪೌರಸಭೆಗೆ ಲಕ್ಷಾಂತರ ರೂಪಾಯಿಗಳ ವರಮಾನವು ಬರುವುದೆಂದೂ ಅಲ್ಲಿಯ ಪೌರಸಭೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದಿರುವುದಾಗಿ ತಿಳಿಯಬಂದಿದೆ. ಖಾಸಗೀ ಮನೆಗಳಿಗೆ ಬಾಡಿಗೆದರವನ್ನು ಪ್ರತಿವರ್ಷವೂ ವಿಮರ್ಶೆಮಾಡುತ್ತ ಮನೆಗಂದಾಯವನ್ನು ಹೆಚ್ಚಿಸುತ್ತ ಬಂದಿದ್ದರೂ ಸರ್ಕಾರಿ ಕಟ್ಟಡಗಳಿಗೆ ಅನೇಕ ವರ್ಷಗಳ ಹಿಂದೆ ವಿಧಿಸಿದ್ದ ತೆರಿಗೆಯನ್ನು ವಸೂಲ್ಮಾಡುತ್ತಾ, ಸರ್ಕಾರಕ್ಕೆ ತೋರಿಸುತ್ತಲಿರುವ ರಿಯಾಯತಿಯನ್ನು ಪೌರಸಭೆಯು ಇಂದಿನ ಆರ್ಥಿಕಸ್ಥಿತಿಯಲ್ಲಿ ಮುಂದುವರಿಸಲು ಸಾಧ್ಯವಿಲ್ಲವೆಂದು ಈ ಹೊಸಯೋಚನೆಯನ್ನು ಮಾಡಿದೆ

ವಿಶ್ವಸಂಸ್ಥೆಗೆ ದೂರು

ಅಮೇರಿಕಾ ಮತ್ತು ದಕ್ಷಿಣಕೊರಿಯಾ ಸೈನ್ಯದವರು ೭,೦೮೦ ಕ್ಕಿಂತ ಜನರಿಗೆ ಅನೇಕ ಚಿತ್ರಹಿಂಸೆಗಳನ್ನು ಕೊಟ್ಟುಕೊಂಡಿರುವುದಾಗಿ ಪ್ರತಿಭಟಿಸಿ, ಉತ್ತರಕೊರಿಯಾ ವಿದೇಶಾಂಗಮಂತ್ರಿ ಮಿ॥ ಪಾಕ್‌ಹೆನ್ ಎನ್‌ರವರು ವಿಶ್ವಸಂಸ್ಥೆಗೆ ದೂರುಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಸುಯಾನ್·ಪಟ್ಟಣದಿಂದ ಪಾಶ್‌ಛಾನ್ ಪಟ್ಟಣದವರೆಗೆ ಅನೇಕ ಅತ್ಯಾಚಾರಗಳನ್ನು ಮಾಡಿರುವುದಾಗಿ ಆ ದೂರಿನಲ್ಲಿದೆಯೆಂದು ಹೇಳಲಾಗಿದೆ.

ಚೈನಾ ಪ್ರತಿನಿಧಿಗಳು ರಹಸ್ಯದಲ್ಲಿರುವರು

ಅಮೆರಿಕಾಕ್ಕೆ ಚೈನಾ ಪ್ರತಿನಿಧಿಗಳು ಹೋದಾಗಿನಿಂದ ರಹಸ್ಯದಲ್ಲಿರುವುದಾಗಿ ತಿಳಿಯಬಂದಿದೆ. ತಾವು ಇಳಿದುಕೊಂಡಿರುವ ವಾಲ್ಡಾರ್ಫ್ ಅಸ್ಟೋರಿಯಾ ಹೊಟೇಲಿನಲ್ಲಿ ಊಟವನ್ನೂ ಸಹ ತಮ್ಮ ಕೊಠಡಿಯಲ್ಲಿಯೇ ಮಾಡುವರು. ಹೊಟೇಲಿನಲ್ಲಿ ಒಂದು ಲಿಪ್ಟನ್ನು ತಮ್ಮ ಸ್ವಂತಕ್ಕಾಗಿ ಮೀಸಲಾಗಿಟ್ಟುಕೊಂಡಿರುವರು ತಮ್ಮ ಮಾತುಕಥೆಗಳು ಯಾರಿಗೂ ತಿಳಿಯದಿರಲೆಂದು ತಾವು ಇಳಿದುಕೊಂಡಿರುವ ಕೊಠಡಿಗಳ ಪಕ್ಕದ ಕೊಠಡಿಗಳನ್ನು ಖಾಲಿಯಾಗಿಟ್ಟುಕೊಂಡಿರುವರು.

ಸ್ಟೇಟು ಕೌನ್ಸಿಲ್ ಮೀಟಿಂಗ್

ಮೈಸೂರು ಸಿಟಿ ಸ್ಟೇಟ್ ಕೌನ್ಸಿಲ್ಲಿನ ಸಭೆಯು ಇದೇ ಮಾಹೆ ೫ ನೇ ತಾರೀಖು ಮಂಗಳವಾರ ಸಂಜೆ ೫-೩೦ ಗಂಟೆಗೆ ಪುರಸಭೆಯ ಕೌನ್ಸಿಲ್ ಹಾಲಿನಲ್ಲಿ ನಡೆಯುವುದು.

ಅಣುಬಾಂಬನ್ನು ಹಾಕಲು ಅಧ್ಯಕ್ಷ ಟ್ರೂಮನ್ನರ ಆಜ್ಞೆಬೇಕು

ಅಣುಬಾಂಬನ್ನು ಉಪಯೋಗಿಸಲು ಜನರಲ್ ಮೆಕಾರ್ಥರು ಆಜ್ಞೆಯೀಯಲಾಗುವುದಿಲ್ಲ. ಅಣುಬಾಂಬುಗಳು ಆಟಾಮಿಕ್ ಎನರ್ಜಿಯ ಕಮಿಷನ್ನಿನ ಅಧೀನದಲ್ಲಿದೆ ಅದನ್ನು ಉಪಯೋಗಿಸಲು ಅಧ್ಯಕ್ಷಟ್ರೂಮನ್ನರ ಆಜ್ಞೆಬೇಕೆಂದು ಅಮೆರಿಕಾ ವೈಟ್‌ಹೌಸ್ ತಿಳಿಸಿದೆ

ಆಟಂಬಾಂಬು ಉಪಯೋಗಿಸಿದರೆ ಬ್ರಿಟಿಷ್ ಸೈನ್ಯ ವಾಪಸ್ಸು

ಆಟಂಬಾಂಬುಹಾಕುವ ಅಧಿಕಾರವನ್ನೇನಾದರೂ ಜ॥ ಮೆಕಾರ್ಥರಿಗೆ ವಹಿಸಿಕೊಟ್ಟರೆ, ಕೊರಿಯಾದಿಂದ ಬ್ರಿಟಿಷ್ ಸೇನೆಗಳನ್ನು ವಾಪಸ್ಸು ಕರೆಸಿಕೊಳ್ಳಬೇಕೆಂದು ಕೋರಿ ನೂರು ಜನ ಪಾರ್ಲಿಮೆಂಟು ಸದಸ್ಯರು ಸಹಿಹಾಕಿದ ಒಂದು ಪತ್ರವನ್ನು ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲಿಯವರಿಗೆ ಕೊಡಲಾಗಿದೆ.

ಒಲಿಂಪಿಯಾ
30-11-50 ರಿಂದ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀಕೃಷ್ಣ
ಬೆಳಗಿನ ಪ್ರದರ್ಶನ 1-12-50 ರಿಂದ
4 ದಿನಗಳು ಮಾತ್ರ
ಡೇರ್ ಡೆವಿಲ್ಸ್ ಆಫ್ ದಿವೆಸ್ಟ್

ರಣಜಿತ್
1-12-50 ರಿಂದ
ದಿನವಹಿ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಭಾಯಿ ಬಹೆನ್
(ಸಹೋದರ ಸಹೋದರಿ)
ಪಾತ್ರ :
ಗೀತಾಬಾಲಿ, ಪ್ರೇಮ್ ಆದೀಬ್, ನಿರೂಪ ರಾಯ್, ಕಕ್ಕೂ, ಗೋಪ್

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೩ ಭಾನುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಮಿಶ್ರಮಾಧುರ್ಯ (ರ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ಜಲತರಂಗ್ ೧-೫೦ ನಾವು ಮತ್ತು ನಮ್ಮವರು. ೨-೦ ನಿಮ್ಮ ಮೆಚ್ಚಿನ ಗೀತಗಳು ೨-೩೦ ಮುಕ್ತಾಯ.

ಸಂಜೆ ೫-೩೦ ಕೆ. ಲಕ್ಷ್ಮಿ ಮತ್ತು ಸರಸ್ವತಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಚಿತ್ರಲೋಕ (ರ) ೭-೩೦ ಕೆ. ಲಕ್ಷ್ಮಿ ಮತ್ತು ಸರಸ್ವತಿ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಆರ್. ನಾರಾಯಣಸ್ವಾಮಿ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕನ್ನಡದಲ್ಲಿ ನಾಟಕ ೧೦-೦ ಮುಕ್ತಾಯ.

ಡಿಸೆಂಬರ್ ೪ ಸೋಮವಾರ

ಬೆಳಗ್ಗೆ ೭-೧೫ ಸುಪ್ರಭಾತ ಕಾರ್ಯಕ್ರಮ ವಿವರಣೆ. ೭-೨೦ ಟಿ ಚೌಡಯ್ಯ (ರ) ೭-೩೫ ಪಕ್ಷಿನೋಟ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಸಿತಾರ್ ೧-೪೫ ಹಿಂದೀ ಶಿಕ್ಷಣ. ೨-೦ ಜನರಂಜನಿ (ರ) ೨-೧೫ ವಾದ್ಯ ಸಮ್ಮೇಳನ ೨-೩೫ ಮುಕ್ತಾಯ.

ಸಂಜೆ ೫-೩೦ ಎಂ. ಜೆ ಶ್ರೀನಿವಾಸಯ್ಯಂಗಾರ್ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಭಾಷಣ ೭-೧೫ ಎಂ ಜೆ. ಶ್ರೀನಿವಾಸಯ್ಯಂಗಾರ್ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಅಬ್ದುಲ್ ಕರೀಂ ಖಾನ್ (ರ) ೮-೧೫ ಇಂಗ್ಲೀಷಿನಲ್ಲಿ ಭಾಷಣ ೮-೩೦ ಎಲ್. ಎಸ್. ರಾಮಯ್ಯಂಗಾರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಎಲ್. ಎಸ್. ರಾಮಯ್ಯಂಗಾರ್ (ಸಂಗೀತ) ೧೦-೦ ಮುಕ್ತಾಯ.

FOR SALE :
One Oliver No 9 Brief size
Pica types Typewriter
in Excellent condition
THE TOURIST BUREAU,
Lansdowne Buildings, Mysore.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೫—೧೨—೧೯೫೦ನೇ ಮಂಗಳವಾರ [ಸಂಚಿಕೆ ೮೦

ಚೈನಾ ಶಾಂತಿಸಂಧಾನಕ್ಕೆ ಸಿದ್ಧವೇ?

ಚೈನಾಕ್ಕೆ ಯುದ್ಧಮಾಡುವ ಹಂಬಲಿಲ್ಲ. ಕೊರಿಯಾದಲ್ಲಿ ಉಂಟಾಗಿರುವ ಇಂದಿನ ಬಿಕ್ಕಟ್ಟನ್ನು ಪರಿಹಾರಮಾಡಲು ಚೀಣಾಜನತಾ ಸರ್ಕಾರದ ನಿಯೋಗವು ಕೆಲವು ಷರತ್ತುಗಳನ್ನು ತಯಾರಿಸಿದೆಯೆಂದು ತಿಳಿಯಬರುತ್ತದೆ.

(೧) ೩೮ ನೇ ಅಕ್ಷಾಂಶ ರೇಖೆಯ ಮೇಲೆ ಒಂದು ತಟಸ್ಥ ರೇಖೆಯನ್ನು ಸ್ಥಾಪಿಸುವುದು.

(೨) ಉತ್ತರ ಕೊರಿಯಾ ಸರ್ಕಾರದ ಪುನರ್ ಸ್ಥಾಪನೆ ಮತ್ತು ಅಖಿಲ ಕೊರಿಯಾ ಚುನಾವಣೆಗಳನ್ನು ಬೇಗ್ ಮಾಡುವುದು.

(೩) ಫಾರ್ಮೋಸಾದಿಂದ ಅಮೆರಿಕಾ ಸೈನ್ಯಗಳ ನಿರ್ಗಮನ ಮತ್ತು ಚಿಯಾಂಗ್ ಕೈಷೇಕ್‌ಗೆ ಅಮೆರಿಕಾ ಸಹಾಯವನ್ನು ನಿಲ್ಲಿಸುವುದು.

(೪) ಕೂಡಲೇ ಚೀಣಾ ಜನತಾಸರ್ಕಾರ ಪ್ರತಿನಿಧಿಗೆ ವಿಶ್ವಸಂಸ್ಥೆಯಲ್ಲಿ ಸ್ಥಾನಕೊಡುವುದು.

ಬ್ರಿಟಿಷ್ ವಿದೇಶಾಂಗ ಮಂತ್ರಿ ಮಿ|| ಬೆವಿನ್‌ರವರು ಚೀಣಾ ಪ್ರಜಾ ಸರ್ಕಾರ ಪ್ರತಿನಿಧಿಗೆ ವಿಶ್ವಸಂಸ್ಥೆಯಲ್ಲಿ ಸ್ಥಾನವನ್ನು ಕೊಟ್ಟಿದ್ದರೆ ಪರಿಸ್ಥಿತಿಯು ವಿಷಮಿಸಿಕೊಳ್ಳುತ್ತಿರಲಿಲ್ಲವೆಂದು ಈಗಾಗಲೇ ಹೇಳಿರುವರು.

ಟೆಕ್ನಿಕಲ್ ವಿದ್ಯೆಗೂ ಕನ್ನಡ ಮಾಧ್ಯಮ

ಟೆಕ್ನಿಕಲ್ ವಿದ್ಯೆಯನ್ನು ಬೋಧಿಸುವಾಗಲೂ ಕನ್ನಡವನ್ನೇ ಮಾಧ್ಯಮವನ್ನಾಗಿ ಮಾಡಿಕೊಂಡರೆ ವಿದ್ಯಾರ್ಥಿಗಳು ಈ ವಿದ್ಯೆಯನ್ನು ಚೆನ್ನಾಗಿ ಗ್ರಹಿಸಲವಕಾಶವಾಗುವುದು. ಕೆಲವು ಇಂಗ್ಲೀಷ್ ಪದಗಳಿಗೆ ಸಮಾನವಾದ ಕನ್ನಡ ಪದಗಳು ದೊರೆಯದಿದ್ದಲ್ಲಿ ಆ ಇಂಗ್ಲೀಷ್ ಪದಗಳನ್ನು ಉಪಯೋಗಿಸಿ ಕನ್ನಡದಲ್ಲಿ ಬೋಧಿಸಿದರೆ ತಪ್ಪಾಗಲಾರದು. ಸುಲಭವಾದ ಗ್ರಹಣಶಕ್ತಿಯು ನಮಗೆ ಮುಖ್ಯವೇ ಹೊರತು ಭಾಷೆಯಲ್ಲ. ಟೆಕ್ನಿಕಲ್ ಕಾಲೇಜುಗಳಲ್ಲಿ ಕರ್ನಾಟಕ ಸಂಘವನ್ನು ಸ್ಥಾಪಿಸಿರುವುದು ಇದೇ ಮೊದಲನೆಯದು ಎಂದು ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರವರು ಮೈಸೂರ ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನ ಕರ್ನಾಟಕ ಸಂಘದ ಪ್ರಾರಂಭೋತ್ಸವ ಸಮಾರಂಭದಲ್ಲಿ ತಿಳಿಸಿದರು.

ಯೋಜನಾ ಸಮಿತಿ

ಬೆಂಗಳೂರು ನ. ೪

ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ. ಕೆ. ಶ್ರೀನಿವಾಸನ್ ನ್ಯಾಯಾಂಗ ಕಾರ್ಯದರ್ಶಿ ಶ್ರೀ. ಕೆ ಪುಟ್ಟಸ್ವಾಮಿ ಮತ್ತು ವಿಶೇಷ ಕಮಿಷನರ್ ಶ್ರೀ. ಇ. ವಿ. ಗಣಪತಿಯ್ಯರ್‌ರವರನ್ನೊಳಗೊಂಡ ಅಂತರ ಇಲಾಖಾ ಯೋಜನಾಸಮಿತಿಯನ್ನು ಸರ್ಕಾರದವರು ನೇಮಿಸಿದ್ದಾರೆ. ಸರ್ಕಾರದ ಎಲ್ಲಾ ಇಲಾಖಾಗಳ ಅಭಿವೃದ್ಧಿ ಯೋಜನೆಗಳನ್ನು ಸಮನ್ವಯ ಮಾಡುವುದೇ ಈ ಸಮಿತಿಯ ಮುಖ್ಯ ಕೆಲಸವಾಗಿದೆ.

ಸದಸ್ಯರ ಪ್ರವಾಸ

ಕನ್ನಡ ಶಿಕ್ಷಣ ಮಾಧ್ಯಮ ಸಂಬಂಧವಾಗಿ ಏರ್ಪಟ್ಟಿರುವ ಕ್ರಿಯಾಸಮಿತಿಯ ಸದಸ್ಯರುಗಳಾದ ಶ್ರೀಗಳಾದ ಪಿ. ಶಾಂತಮೂರ್ತಿ, ಅಂಜನಪ್ಪ, ಟಿ. ವಿ. ಶ್ರೀನಿವಾಸರಾವ್ ಮುಂತಾದವರು ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಶಾಲೆಗಳಲ್ಲಿ ಕನ್ನಡ ಶಿಕ್ಷಣ ಚಳುವಳಿ ಅಂಗವಾಗಿ ಪ್ರಚಾರ ಭಾಷಣಮಾಡಲು ಇಂದಿನಿಂದ ೫ ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಸಾಮೂಹಿಕ ಸಹಿ

ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂದು ಒಂದು ಮನವಿಗೆ ಸುಮಾರು ನೂರುಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಹಿಹಾಕಿದ್ದಾರೆ ಕನ್ನಡ ಶಿಕ್ಷಣ ಚಳುವಳಿಯ ಕ್ರಿಯಾಸಮಿತಿಯವರು ಈ ಸಹಿಯನ್ನು ಶೇಖರಿಸುತ್ತಲಿರುವರು-

ಪರೀಕ್ಷೆ ಫಲಿತಾಂಶ

ಎಸ್ ಎಸ್. ಎಲ್ ಸಿ. ಸೆಪ್ಟಂಬರ್ ಪರೀಕ್ಷೆಯ ಫಲಿತಾಂಶವು ನಿನ್ನೆ ಸಂಜೆ ಹೊರಬಿದ್ದಿತು. ಈ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ೧೧೯ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ

ಅಸ್ಸಾಂ ಪರಿಹಾರನಿಧಿಗೆ

ಅಸ್ಸಾಂ ಪರಿಹಾರ ನಿಧಿಗೆ ಮೈಸೂರು ದೇಶದಲ್ಲಿ ಇದುವರೆಗೆ ೨,೮೫,೧೧೯ ರೂ. ಗಳು ವಸೂಲಾಗಿರುತ್ತದೆ.

ನಾಳೆ ಚರ್ಚೆ

ಮದರಾಸಿನ ಶಾಸನ ಸಭೆಯಲ್ಲಿ ಮಂತ್ರಿಗಳ ಆಪಾದನೆ ವಿಷಯವಾಗಿ ಶ್ರೀ ಟಿ. ಪ್ರಕಾಶಂರವರು ಮಂಡಿಸಿರುವ ವಿಷಯವು ನಾಳೆ ಚರ್ಚೆಗೆ ಬರಲಿದೆ.

ಪ್ರಥಮಭೇಟಿ

ಅಧ್ಯಕ್ಷ ಟ್ರೂಮನ್ ಮತ್ತು ಪ್ರಧಾನಿ ಆಟ್ಲೀಯವರಿಗೆ ೨ ಗಂಟೆಕಾಲ ಭೇಟಿ ನಡೆದು ಪ್ರಪಂಚ ಇಂದಿನ ಪರಿಸ್ಥಿತಿಯ ವಿಷಯವಾಗಿ ಮಾತುಕಥೆ ಪ್ರಾರಂಭವಾಗಿವೆ.

ಕಾಂಗ್ರೆಸಿಗೆ ವಿರೋಧ

ಕಾಂಗ್ರೆಸ್ಸಿಗರ ಮೇಲಾಗಲೀ ಕಾಂಗ್ರೆಸ್ ಸಂಸ್ಥೆಗಳ ಮೇಲಾಗಲಿ ಯಾವ ಕಾಂಗ್ರೆಸು ಸದಸ್ಯನೂ ಕೋರ್ಟುಗಳಲ್ಲಿ ವ್ಯವಹಾರವನ್ನು ಹೂಡಕೂಡದೆಂದೂ ಹಾಗೇನಾದರೂ ವ್ಯವಹಾರ ಹೂಡಿದಲ್ಲಿ ಆತನನ್ನು ಕಾಂಗ್ರೆಸ್ಸಿನಿಂದ ಹೊರದೂಡಲಾಗುವುದೆಂದು ನಿನ್ನೆ ಅಖಿಲಭಾರತ ವರ್ಕಿಂಗ್ ಕಮಿಟಿಯು ತೀರ್ಮಾನಿಸಿದೆ.

ಶ್ರೀ ಅರವಿಂದ ಘೋಷರ ನಿಧನ

ಯೋಗಿ ಶ್ರೀ ಅರವಿಂದ ಘೋಷ್‌ರವರು ನಿನ್ನೆ ರಾತ್ರಿ ೧-೩೦ ಗಂಟೆಯಲ್ಲಿ ಪಾಂಡುಚೆರಿಯ ತಮ್ಮ ಆಶ್ರಮದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೭೮ ವರ್ಷವಯಸ್ಸಾಗಿತ್ತು. ಈಗ್ಗೆ ಒಂದು ಪಕ್ಷದಿಂದ ಅಸ್ವಸ್ಥರಾಗಿದ್ದರು.

ಶ್ರೀ ಪ್ರಕಾಶಂರವರಿಗೆ ನೋಟೀಸ್

ದೆಹಲಿಯಲ್ಲಿ ನಿನ್ನೆ ನಡೆದ ಅಖಿಲಭಾರತ ಕಾಂಗ್ರೆಸ್ ಕಾರ್ಯಾಕಾರಿಸಮಿತಿಯಲ್ಲಿ ಮದರಾಸಿನ ಮಂತ್ರಿಗಳ ಮೇಲೆ ಶ್ರೀ ಟಿ. ಪ್ರಕಾಶಂರವರು ಮದರಾಸಿನ ಶಾಸನ ಸಭೆಯಲ್ಲಿ ಮಂಡಿಸಿರುವ ದೂರಿನ ವಿಷಯವು ಚರ್ಚೆಗೆ ಬಂದು, ಕಾಂಗ್ರೆಸ್ ಅಂಗರಚನೆಗೆ ವಿರುದ್ಧವಾಗಿ ಅವರು ವರ್ತಿಸುತ್ತಲಿರುವರೆಂದು ಅವರ ವಿವರಣೆಯನ್ನು ಕೇಳಬೇಕೆಂದು ಸಮಿತಿಯು ತೀರ್ಮಾನಿಸಿದೆ.

LATEST

ವಿದ್ಯಾಸಚಿವ ಶ್ರೀ. ಟಿ. ಸಿದ್ದಲಿಂಗಯ್ಯನವರ ರಾಜೀನಾಮೆ ಅಂಗೀಕಾರ?

ನಾಳೆ ಅಧಿಕೃತ ಪ್ರಕಟಣೆ ಹೊರಬೀಳಲಿದೆ

ಮೈಸೂರು ಡಿ. ೫

ಮುಖ್ಯಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರು ನಿನ್ನೆ ಮೈಸೂರಿಗೆ ಆಗಮಿಸಿ, ಇಂದು ಬೆಳಗ್ಗೆ ಶ್ರೀಮನ್ಮಹಾರಾಜರನ್ನು ಭೇಟಿಮಾಡಿ ವಿದ್ಯಾಸಚಿವ ಶ್ರೀ. ಟಿ. ಸಿದ್ದಲಿಂಗಯ್ಯನವರಿತ್ತ ರಾಜೀನಾಮೆ ವಿಚಾರದಲ್ಲಿ ಮಾತುಕಥೆ ನಡೆಸಿದರೆಂದು ತಿಳಿಯಬರುತ್ತದೆ. ಶ್ರೀ. ಕೆ. ಸಿ. ರೆಡ್ಡಿಯವರನ್ನು ಭೇಟಿಮಾಡಿದಾಗ ಇಂದು ತಾವು ಬೆಂಗಳೂರಿಗೆ ಹೋಗುವುದಾಗಿಯೂ ನಾಳೆ ಅಧಿಕೃತ ಪ್ರಕಟಣೆ ಹೊರಬೀಳುವುದಾಗಿ ತಿಳಿಸಿದರು.

ಶ್ರೀ. ಟಿ. ಸಿದ್ದಲಿಂಗಯ್ಯನವರು ರಾಜೀನಾಮೆ ಹಿಂದಕ್ಕೆ ತೆಗೆದುಕೊಂಡಿದ್ದರೆ ಅಧಿಕೃತ ಪ್ರಕಟಣೆಯ ಅವಶ್ಯಕವಿರಲಿಲ್ಲವಾಗಿ, ಮುಖ್ಯಮಂತ್ರಿಗಳು ಅಧಿಕೃತ ಪ್ರಕಟಣೆ ಹೊರಬೀಳುವುದಾಗಿ ಹೇಳಿರುವುದರಿಂದ ರಾಜೀನಾಮೆಯನ್ನು ಮಹಾರಾಜರು ಅಂಗೀಕರಿಸಿರುವುದಾಗಿ ಹೇಳಲಾಗಿದೆ.

ನ್ಯೂ ಅಪೆರಾ
ತಾ|| ೧-೧೨-೫೦ ರಿಂದ ೨ನೇ ವಾರ
ದಿನವಹಿ ೩ ಆಟಗಳು
ಟಿ. ಎಸ್. ಟಿ ಯವರ ಮನಮೋಹಕ ಚಿತ್ರ
ಅದೃಷ್ಟ ದೀಪುಡು
ತೆಲುಗು
ಸೂರ್ಯಕುಮಾರಿ, ಪದ್ಮ, ಸೀತಾರಾಮಶರ್ಮ, ಲಲಿತ-ಪದ್ಮಿನಿ

ಜುಲ್ಮಾನೆ

ನೀರು ಬೆರಸಿದ ಹಾಲು ಮಾರಿದ್ದಕ್ಕೆ

ನೀರು ಬೆರಸಿದ ಹಾಲು ಮಾರಿದ್ದಕ್ಕೆ ನಗರ ಪೌರಸಭೆಯ ಆರೋಗ್ಯಶಾಖೆಯವರು ಹೂಡಿದ್ದ ಕೇಸುಗಳಲ್ಲಿ ನವಂಬರ್ ಮಾಹೆಯಲ್ಲಿ ಈ ಕೆಳಗೆ ಕಂಡವರಿಗೆ ಜುಲ್ಮಾನೆಯಾಗಿದೆ. ೪೦ ರೂ. ಈಡಿಗದ ಅಂಕಯ್ಯ, ೨೦ ರೂ. ಚಾಮರಾಜಮೊಹಲ್ಲಾ ಬೋರಲಿಂಗ, ೨೫ ರೂ. ಆನಂದೂರು ಸಿದ್ದಮ್ಮ ೩೦ ರೂ. ಬಂಡೀಕೇರಿ ಮಾದಪ್ಪ ೧೦ ರೂ. ಮಂಡಿಮೊಹಲ್ಲಾ ರಾಮಯ್ಯ, ಶ್ರೀರಾಮಪೇಟೆ ಕರಿಯ, ಮಾದಯ್ಯ, ಕುರುಬಗೇರಿ ಸಿದ್ದಯ್ಯ, ಕನ್ನೇಗೌಡನಕೊಪ್ಪಲು ಬೆಟ್ಟೆಗೌಡ, ಆನಂದೂರು ಜವರಮ್ಮ, ಬ್ಯಾಡರಹಳ್ಳಿ ಲಕ್ಷ್ಮೀಬಾಯಮ್ಮ, ದೇವರಾಜಮೊಹಲ್ಲಾ ತಿಮ್ಮಮ್ಮ.

ಇದಲ್ಲದೆ ಪೌರಸಭೆ [illegible] ೨೦ ರೂಪಾಯಿಗಳವರೆಗೆ ಜುಲ್ಮಾನೆಕೊಟ್ಟು ಸುಮಾರು ೧೨ ಜನರು ಕ್ಷಮಾಪಣೆ ಬೇಡಿರುವರು.

ಸಾಲ

ಆಹಾರ ಉತ್ಪತ್ತಿ ಯೋಜನೆಗಾಗಿ ಮೈಸೂರು ಸರ್ಕಾರವು ಕೇಂದ್ರವನ್ನು ೧೩೯ ಕೋಟಿ ರೂಪಾಯಿಗಳ ಸಾಲವನ್ನು ಕೇಳಿರುವರೆಂದು ತಿಳಿಯಬರುತ್ತದೆ.

FOR SALE :

One Oliver No. 9 Brief size

Pica types Typewriter
in Excellent condition

THE TOURIST BUREAU,

Lansdowne Buildings, Mysore

ವಿಶ್ವಸಂಸ್ಥೆಯಲ್ಲಿ ಸ್ಥಾನ

ರಾಜಕೀಯ, ಸಾಮಾಜಿಕ ಪದ್ಧತಿಗಳು ಗಮನಿಸದೆ ಪ್ರಪಂಚದಲ್ಲಿರುವ ಎಲ್ಲಾ ರಾಷ್ಟ್ರಗಳಿಗೂ ವಿಶ್ವಸಂಸ್ಥೆಯಲ್ಲಿ ಸ್ಥಾನವಿದ್ದೇಯಿರಬೇಕು. ಶಾಂತರೀತಿಯಲ್ಲಿ ಭಿನ್ನಾಭಿಪ್ರಾಯಗಳನ್ನು ವಿಶ್ವಸಂಸ್ಥೆಯು ಬಗೆಹರಿಸಹರಿಸಬೇಕಾದರೆ ಇದೇ ಮುಖ್ಯಮಾರ್ಗವೆಂದು ಫ್ರಾನ್ಸಿನಲ್ಲಿ ಭಾರತದ ರಾಯಭಾರಿಯಾಗಿರುವ ಸರ್ದಾರ್ ಹೆಚ್. ಎಸ್. ಮಲ್ಲಿಕ್‌ರವರು ಪ್ಯಾರಿಸಿನ ಅಮೆರಿಕಾ ಕ್ಲಬ್ಬಿನಲ್ಲಿ ಮಾತನಾಡುತ್ತ ಹೇಳಿರುವರು.

ಮೈಸೂರಿನವರಿಗೆ ಸನ್ಮಾನ

ಮೈಸೂರಿನ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದು ಈಗ ಉಡುಪಿ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಶ್ರೀಕೌಲಗಿಶೇಷಾಚಾರ್ಯರು ಉತ್ತರ ಇಂಡಿಯಾದ ಮಥುರಾ (ಬೃಂದಾವನ) ದಲ್ಲಿರುವ ವೈಷ್ಣವಮತ ಧರ್ಮಶಾಸ್ತ್ರವಿಶ್ವವಿದ್ಯಾನಿಲಯ(Vaishnava Theological University) ದ ಸೆನೇಟಿನ ಸದಸ್ಯರಾಗಿ ನೇಮಕರಾಗಿದ್ದಾರೆ.

ರಣಜಿತ್

1-12-50 ರಿಂದ

ದಿನಷಹಿ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ

ಭಾಯಿ ಬಹೆನ್

(ಸಹೋದರ ಸಹೋದರಿ)

ಪಾತ್ರ :

ಗೀತಾಬಾಲಿ, ಪ್ರೇಮ್ ಆದೀಬ್, ನಿರೂಪರಾಯ್, ಕಕ್ಕೂ, ಗೋಪ್

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೬ ಬುಧವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಬಿ. ಎಂ. ಶಿವಪ್ಪ (ಸಂಗೀತ) ೭-೩೫ ಚಿತ್ರಗೀತೆ (ರೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ವೀಣೆ. ೧-೪೫ ಹಿಂದೀ ಶಿಕ್ಷಣ ೨-೦ ವನಿತಾವಿಹಾರ ೨-೩ ಮುಕ್ತಾಯ.

ಸಂಜೆ ೫-೩೦ ಬಿ. ಎಂ. ಶಿವಪ್ಪ ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಬಾಲಜಗತ್. ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಭಾಷಣ. ೭-೧೫ ಗೀತಾಂಜಲಿ. ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ರಂಗಪ್ಪ (ಕೊಳಲು) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು (ರೆ) ೧೦-೦ ಮುಕ್ತಾಯ.

ವಿಚಿತ್ರ ಪ್ರಪಂಚ

ಪಾಂಡಿಚೇರಿಯಲ್ಲಿರುವ ಫ್ರೆಂಚ್ ಇಂಡಿಯಾ ಫುಟ್ ಬಾಲ್ ಪಂದ್ಯದಲ್ಲಿ ಭಾಗವಹಿಸಲಿರುವ ಎಲ್ಲಾ ಫುಟ್ ಬಾಲ್ ಟೀಮುಗಳವರೂ ಆಟವಾಡುವಾಗ ಬರೀ ಕಾಲಿನಲ್ಲಿ ಆಡಿದರೆ ಮಾತ್ರ ಆಟೀಮುಗಳಿಗೆ ಆಟಕ್ಕೆ ಪ್ರವೇಶ.

ದಾಂಪತ್ಯವಿಚ್ಛೇದನ

ಪ್ರತಿದಿನವೂ ತನ್ನ ಗಂಡನು ಆರು ಅರ್ಧ ಸುಟ್ಟ ಮೊಟ್ಟೆಗಳನ್ನು ಹಾಗೆಯೇ ನುಂಗುವುದನ್ನು ಎಷ್ಟು ಹೇಳಿದರೂ ನಿಲ್ಲಿಸದಿರುವುದರಿಂದ ಆತನೊಡನೆ ತಾನು ಸಂಸಾರ ಮಾಡಿಕೊಂಡಿರಲು ಇಷ್ಟವಿಲ್ಲದೆ ದಾಂಪತ್ಯವಿಚ್ಛೇದನಕ್ಕೆ ಕೋರ್ಟಿನಲ್ಲಿ ಪ್ಯಾರಿಸಿನಲ್ಲಿ ಒಬ್ಬಾಕೆ ಅರ್ಜಿ ಸಲ್ಲಿಸಿದ್ದಾಳೆ.

ಸಿಟಿ ಮುನಿಸಿಪಲ್ ಆಫೀಸ್, ಮೈಸೂರು ತಾ॥ ೪-೧೨-೫೦

ಪ್ರಕಟನೆ

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಲ್ಲೂ ಮತ್ತು ಇತರ ಮುಖ್ಯ ಸ್ಥಳಗಳಲ್ಲೂ ಪ್ರಚುರಪಡಿಸಿರುವ ಮೈಸೂರು ನಗರದ ಎಲೆಕ್ಟೋರಲ್ (ಚುನಾವಣೆದಾರರ) ಪಟ್ಟಿಯ ವಿಷಯದಲ್ಲಿ ಹಕ್ಕು ಸಾಧನೆ ಮತ್ತು ತಕರಾರು ಬಗ್ಗೆ ಹಾಜರ್ಮಾಡಲು ವಿಧಾಯಕವಾದ ಅರ್ಜಿ ಫಾರಂಗಳನ್ನು (ಹಕ್ಕು ಸಾಧನೆ ಬಗ್ಗೆ (Claims) VI ನಂಬರ್ ಫಾರಂ ಮತ್ತು ತಕರಾರು ಬಗ್ಗೆ VIII ನಂಬರ್ ಫಾರಂ) ಮೈಸೂರ. ಸಿಟಿ ಮುನಿಸಿಪಲ್ ಕಮಿಷನರ್ ಮತ್ತು ರಿಜಿಸ್ಟ್ರೇಷನ್ ಆಫೀಸರವರ ಆಫೀಸಿನಲ್ಲಿ ಅಪ್ಲಿಕೇಷನ್ ಕೊಟ್ಟು ಮುಫತ್ತಾಗಿ ಆಫೀಸಿನ ಕಾಲದಲ್ಲಿ ಪಡೆಯಬಹುದು.

ಸಿ. ನರಸಿಂಹಮೂರ್ತಿ,
ಮುನಿಸಿಪಲ್ ಕಮಿಷನರ್ ಮತ್ತು
ಎಲೆಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರ್ ಮೈಸೂರು.

ಒಲಿಂಪಿಯಾ

30-11-50 ರಿಂದ

ಪ್ರತಿ ದಿನ 3 ಆಟಗಳು

ಸಾಹುಮೋದಕ್, ಸುಲೋಚನ ಚಟರ್ಜಿ

ಪಾತ್ರವಹಿಸಿರುವ

ಭಗವಾನ್

ಶ್ರೀಕೃಷ್ಣ

ಬೆಳಗಿನ ಪ್ರದರ್ಶನ 1-12-50 ರಿಂದ

4 ದಿನಗಳು ಮಾತ್ರ

ಡೇರ್ ಡೆವಿಲ್ಸ್ ಆಫ್ ದಿವೆಸ್ಟ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೬—೧೨—೧೯೫೦ ನೇ, ಬುಧವಾರ [ಸಂಚಿಕೆ ೮೧

ಆಟಂಬಾಂಬಿನ ಉಪಯೋಗಕ್ಕೆ ಭಾರತದ ಸಮರ್ಥನೆಯಿಲ್ಲ

ಪ್ರಪಂಚದಲ್ಲಿ ಇಂದಿನ ಪರಿಸ್ಥಿತಿಯು ವಿಷಮಿಸಿಕೊಳ್ಳುತ್ತಲಿದೆ. ಕೊರಿಯಾ ಸ್ಥಿತಿಯನ್ನು ಶಾಂತರೀತಿಯಲ್ಲಿಯೇ ಕೊನೆಗಾಣಿಸಬೇಕು. ಅಟಂಬಾಂಬನ್ನು ಉಪಯೋಗಿಸುವುದನ್ನು ಭಾರತೀಯರಾರೂ ಸಮರ್ಥಿಸುವುದಿಲ್ಲ ಎಂದು ಭಾರತ ಪ್ರಧಾನಿ ನೆಹರೂರವರು ಹೇಳಿರುವರು.

ಜೀವನ ಪರಿಚಯ

ಶ್ರೀ ಅರವಿಂದ ಘೋಷ್‌ರವರು ೧೮೭೨ ನೇ ಆಗಸ್ಟ್ ೧೫ ರಲ್ಲಿ ಕಲ್ಕತ್ತೆಯಲ್ಲಿ ಜನಿಸಿದರು. ಇವರ ತಂದೆ ಡಾ|| ಕೃಷ್ಣಧನ ಘೋಷ್‌ರವರು ಅರವಿಂದರವರಿಗೆ ೫ ವರ್ಷವಾಗುತ್ತಲೇ ಡಾರ್ಜಿಲಿಂಗಿನ ಒಂದು ಶಾಲೆಯಲ್ಲಿ ವಿದ್ಯಾಭ್ಯಾಸಕ್ಕಾಗಿ ಸೇರಿದರು. ಎರಡು ವರ್ಷಗಳ ನಂತರ ತಮ್ಮ ಇಬ್ಬರು ಅಣ್ಣಂದಿರೊಡನೆ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ತೆರಳಿ ೧೪ ವರ್ಷಕಾಲ ವಿದೇಶದಲ್ಲಿ ವಾಸವಾಗಿದ್ದರು. ಕೇಂಬ್ರಿಡ್ಜಿನ ಸೇಂಟ್ ಪಾಲ್ಸ್ ಮತ್ತು ಕಿಂಗ್ಸ್ ಕಾಲೇಜುಗಳಲ್ಲಿ ಉಚ್ಚ ಶಿಕ್ಷಣ ಪಡೆದು ೧೮೯೦ ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಕುದುರೆ ಸವಾರಿಯನ್ನು ಮಾತ್ರ ನಿರ್ಲಕ್ಷಿಸಿದುದರಿಂದ ಅವರು ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ. ೧೮೯೩ ರಲ್ಲಿ ಶ್ರೀ ಅರವಿಂದಘೋಷರು ಭಾರತಕ್ಕೆ ಹಿಂತಿರುಗಿ ಬರೋಡ ಸಂಸ್ಥಾನದಲ್ಲಿ ೧೩ ವರ್ಷಕಾಲ ಸರ್ಕಾರಿ ಕೆಲಸದಲ್ಲಿದ್ದು ಅಲ್ಲಿನ ಕಾಲೇಜಿನ ಪ್ರೊಫೆಸರ್ ಮತ್ತು ವೈಸ್ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರು. ಕಲ್ಕತ್ತಾ ವಿಭಜನ ವಿರೋಧ ಚಳುವಳಿಯಲ್ಲಿ ಮುಖ್ಯ ಪಾತ್ರವಹಿಸಿ ಭಾರತ ರಾಷ್ಟ್ರೀಯ ಆಂದೋಳನದಲ್ಲಿ ಕೀರ್ತಿ ಎತ್ತಿದರು. 'ವಂದೇ ಮಾತರಂ' ಎಂಬ ಪತ್ರಿಕೆಯ ಪ್ರಥಮ ಸಂಪಾದಕರಾಗಿದ್ದರು.

ಅಲಿಪುರ ಬಾಂಬು ಮೊಕದ್ದಮೆಯ ಸಂದರ್ಭದಲ್ಲಿ ಸರ್ಕಾರವು ಶ್ರೀ ಅರವಿಂದರವರನ್ನು ದಸ್ತಗಿರಿ ಮಾಡಿತು. ಜೈಲಿನಲ್ಲಿಯೇ ಭಗವದ್ಗೀತೆ, ಉಪನಿಷತ್ತು ಮುಂತಾದ ಆಧ್ಯಾತ್ಮಿಕ ಗ್ರಂಥಗಳ ವ್ಯಾಸಂಗ ಮಾಡುತ್ತಾ ಯೋಗಾಭ್ಯಾಸ, ತಪಸ್ಸುಗಳಲ್ಲಿ ಕಾಲಕಳೆದರು.

ಕಾಂಗ್ರೆಸ್ ಅಧ್ಯಕ್ಷರು ವಂಗ ರಾಷ್ಟ್ರೀಯ ನಾಯಕರೂ ಸುಪ್ರಸಿದ್ಧ ವಕೀಲರೂ ಆದ ಶ್ರೀ ದೇಶಬಂಧು ಚಿತ್ತರಂಜನ ದಾಸರು ಇವರ ಪರ ವಾದಿಸಿ ಖುಲಾಸೆ ಮಾಡಿಸಿದರು. ೧೯೧೦ ರಲ್ಲಿ ರಾಜದ್ರೋಹ ಅಪಾದನೆ ಮೇಲೆ ದಸ್ತಗಿರಿಗಾಗಿ ವಾರಂಟು ಹೊರಟಾಗ ಅವರು ನೆರೆಪ್ರಾಂತ್ಯ ಫ್ರೆಂಚ್ ಸ್ವಾಸ್ಥ್ಯವಾದ ಚಂದ್ರನಗರಕ್ಕೆ ತಪ್ಪಿಸಿಕೊಂಡು ಹೋಗಿದ್ದು ಅಲ್ಲಿಂದ ೧೯೧೦ ನೇ ಏಪ್ರಿಲ್ ೪ ಕ್ಕೆ ಪುದುಚೇರಿಗೆ ತಲುಪಿದರು. ಅವರ ಪತ್ನಿ ಶ್ರೀಮತಿ ಮೃಣಾಲಿನಿದೇವಿಯವರು ೧೯೧೮ ರಲ್ಲಿ ನಿಧನರಾದರು. ಅರವಿಂದರವರು ಪುದುಚೇರಿಯಲ್ಲಿಯೇ ನೆಲಸಿ ಆಶ್ರಮವನ್ನು ಸ್ಥಾಪಿಸಿದರು. ಕಳೆದ ೪೦ ವರ್ಷಗಳಿಂದ ಅವರು ರಾಜಕೀಯವನ್ನು ಸಂಪೂರ್ಣವಾಗಿ ಬಿಟ್ಟು ಮೌನವನ್ನೂ ಏಕಾಂತವನ್ನೂ ಆಚರಿಸಿ ಸರ್ವಸಂಗ ಪರಿತ್ಯಾಗ ಮಾಡಿದರು. ಅವರು ಸ್ಥಾಪಿಸಿರುವ ಆಶ್ರಮದಲ್ಲಿ ೭೦೦ ಕ್ಕೆ ಮೇಲ್ಪಟ್ಟು ಜನರು ಅವರ ಶಿಷ್ಯವರ್ಗದಲ್ಲಿದ್ದಾರೆ. ಅವರ ಮುಖ್ಯ ಶಿಷ್ಯೆ ಮಾತಾಜಿಯವರು. ಇವರೇ ಆಶ್ರಮದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರು. ಭಾರತಾದ್ಯಂತ ಮಹರ್ಷಿಗಳ ಶಿಷ್ಯವರ್ಗಕ್ಕೆ ಸೇರಿದವರು ಸಾವಿರಾರು ಜನರಿರುವರು. ಇವರ ಬಂಧುಗಳಲ್ಲಿ ಈಗ ಜೀವಂತರಾಗಿರುವವರು. ಇವರ ಸಹೋದರ ಶ್ರೀ ಬರೀಂದ್ರ ಕುಮಾರಘೋಷ್‌ರವರು ಕ್ರಾಂತಿಕಾರಕ ಚಳುವಳಿಯಲ್ಲಿ ನಾಯಕರಾಗಿದ್ದು ಈಗ 'ಬಸುಮತಿ' ಎಂಬ ಬಂಗಾಳಿ ಪತ್ರಿಕೆಯ ಸಂಪಾದಕರಾಗಿರುತ್ತಾರೆ.

ಯೋಗಿ ಅರವಿಂದರು

ನಿನ್ನೆ ನಿಧನರಾದ ಯೋಗಿ ಅರವಿಂದರ ಕಳೇಬರವನ್ನು ೬೦ ಸಾವಿರಕ್ಕೆ ಮೇಲ್ಪಟ್ಟ ಭಕ್ತಾದಿಗಳ ಅಂತ್ಯದರ್ಶನಕ್ಕಾಗಿ ಅವರ ಆಶ್ರಮಕ್ಕೆ ಹೋಗಿ ಬಂದಿರುವರು. ಅವರ ಕಳೇಬರವು ಇಂದು ೫ ಗಂಟೆಗೆ ಆಶ್ರಮದಲ್ಲಿಯೇ ಸಮಾಧಿ ಮಾಡಲಾಗುವುದು.

ಭಾರತದ ನಾನಾಭಾಗಗಳಿಂದ ಯೋಗಿ ಅರವಿಂದರ ಗುಣಗಾನಮಾಡಿ ವಿಶೇಷ ಸಭೆಗಳು ನಡೆಯುತ್ತಲಿವೆ. ಈ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರು ಶ್ರೀ ಅರವಿಂದರು ಮಹಾವ್ಯಕ್ತಿಯೇ ಅಲ್ಲ ಒಂದು ಸಂಸ್ಥೆಯನ್ನು ಬೆಳಸಿದ್ದಾರೆ ಎಂದೂ ಯೋಗಿ ಅರವಿಂದರು ಮಹರ್ಷಿಗಳೇ ಅಲ್ಲದೆ ತತ್ವಜ್ಞಾನಿಗಳೆಂದು ಸರ್ದಾರ್ ಪಟೇಲರೂ ಹೇಳಿರುವರು

ಭಾರತದ ಅನೇಕ ಭಾಗಗಳಲ್ಲಿ ಅವರ ಗೌರವಾರ್ಥವಾಗಿ ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟಿದ್ದುವು. ಕಲ್ಕತ್ತಾದಲ್ಲಿ ಸರ್ಕಾರಿ ಕಛೇರಿಗಳು, ಶಾಲಾ ಕಾಲೇಜುಗಳು ಮುಚ್ಚಿದ್ದುವಲ್ಲದೆ ಸರ್ಕಾರಿ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧಮಟ್ಟಕ್ಕೆ ಹಾರಿಸಲಾಗಿತ್ತು.

ನೇಪಾಳ ವಿಷಯವಾಗಿ ಮಾತನಾಡುತ್ತಾ ಈಗ ದೆಹಲಿಗೆ ಬಂದಿರುವ ದೊರೆಯನ್ನು ಭಾರತವು ಹಿಂದೆಯೇ ಅಂಗೀಕರಿಸಿರುವುದರಿಂದ ಬೇರೆ ದೊರೆಯನ್ನು ಅಂಗೀಕರಿಸುವ ಪ್ರಶ್ನೆಯೇ ಇಲ್ಲ. ನೇಪಾಳದ ವಿಷಯದಲ್ಲಿ ಯಾವ ಪರರಾಜ್ಯವೂ ಪ್ರವೇಶಿಸಬಾರದು. ನೇಪಾಳ ಭವಿಷ್ಯವನ್ನು ಅಲ್ಲಿಯ ಸರ್ಕಾರ ಮತ್ತು ಜನರೇ ತೀರ್ಮಾನಿಸಿಕೊಳ್ಳಬೇಕು. ನೇಪಾಳದಲ್ಲಿ ರಾಜಕೀಯ ಸುಧಾರಣೆಗಳು ಅತ್ಯವಶ್ಯಕವೆಂದು ಹೇಳಿರುವರು.

ಹೊಡೆದಾಟ

ನಿನ್ನೆ ಸಂಜೆ ೭ ಗಂಟೆ ವೇಳೆಯಲ್ಲಿ ಸೆಂಟ್ ಫಿಲೋಮಿನಾ ಚರ್ಚ್ ಬಳಿ ಮೈಸೂರು ಕಟುಕ ಸಂಘಕ್ಕೆ ಸೇರಿದ ಮಹಮ್ಮದ್ ಇಲಿಯಾ ಮಹಮ್ಮದ್ ಸಾದಿಕ್ ಮುಂತಾದ ಜನರ ಮೇಲೆ ಅಬ್ದುಲ್ ರಜ್, ಒತಾಹುಸೇನ್ ಮುಂತಾದ ೭ ಜನರು ದನ ಕುಯ್ಯುವ ಕತ್ತಿ, ದೊಣ್ಣೆ, ಕ್ಷೌರದ ಕತ್ತಿ ಮುಂತಾದ ಆಯುಧಗಳಿಂದ ಅವರ ಮೇಲೆ ಬಿದ್ದು ಸಾದಿಕ್ ಮತ್ತು ಇಲಿಯಾರವರನ್ನು ಇರಿದ ಪರಿಣಾಮವಾಗಿ ಅವರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲಾಗಿ [illegible] ಪೋಲೀಸಿನವರು ಇಬ್ಬರನ್ನು ದಸ್ತಗಿರಿ ಮಾಡಿದ್ದಾರೆಂದು ತಿಳಿಯಬರುತ್ತದೆ.

ಆಕ್ರಮವಾಗಿ ದನಗಳನ್ನು ವಧೆಮಾಡುತ್ತಲಿದ್ದುದನ್ನು ಪೋಲೀಸಿನವರು ಕಂಡು ಹಿಡಿಯಲು ಕಟುಕ ಸಂಘದವರು ಸಹಾಯ ಮಾಡಿದರೆಂದು ಈ ರೀತಿ ಸಂಘದವರ ಮೇಲೆ ಅತ್ಯಾಚಾರ ನಡೆಯಿತೆಂದು ಹೇಳಲಾಗಿದೆ.

ಮೈಸೂರು ಶಾಸನಸಭೆ

[illegible] ನೇ ತಾ|| ನಿಂದ ೧೫ ದಿನಗಳವರೆಗೆ ಮೈಸೂರು ಶಾಸನಸಭೆಯು ಮೈಸೂರಿನಲ್ಲಿ ನಡೆಯುವುದು.

ಡೆಪ್ಯುಟಿ ಜನರಲ್ ಮ್ಯಾನೇಜರ್

ಮೈಸೂರು ಸ್ಟೇಟ್ ರೈಲ್ವೆ ಡಿಸ್ಟ್ರಿಕ್ಟ್ ಲೋಕೋ ಸೂಪರಿಂಟೆಂಡೆಂಟರಾದ ಶ್ರೀ ಸಿ. ರಾಮಸ್ವಾಮಿಯವರು ಡೆಪ್ಯುಟಿ ಜನರಲ್ ಮ್ಯಾನೇಜರಾಗಿ ನೇಮಕವಾಗಿದ್ದಾರೆ.

ಧನ್ವಂತರಿ ಜಯಂತಿ

ಧನ್ವಂತರೀ ಜಯಂತಿಯು ಗುರುವಾರ ಸಂಜೆ ೫ ಗಂಟೆಗೆ ನಂಜನಗೂಡಿನಲ್ಲಿ ಶ್ರೀ ಬಿ. ವಿ. ಪಂಡಿತರ ಸ್ವಗೃಹದಲ್ಲಿ ನಡೆಯುವುದು.

LATEST

ರಾಜೀನಾಮೆ ಅಂಗೀಕಾರವಾಯಿತು

ಬೆಂಗಳೂರು ಡಿ. ೬

ವಿದ್ಯಾ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಇತ್ತ ರಾಜೀನಾಮೆಯನ್ನು ಮುಖ್ಯ ಮಂತ್ರಿಗಳ ಶಿಫಾರಸ್ ಮೇಲೆ ಶ್ರೀಮನ್ಮಹಾರಾಜರು ಅಂಗೀಕರಿಸಿದ್ದಾರೆಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ನ್ಯೂ ಅಪೆರಾ

ತಾ|| ೧-೧೨-೫೦ ರಿಂದ ೨ನೇ ವಾರ

ದಿನವ ೩ ಆಟಗಳು

ಟಿ. ಎನ್. ಟಿ ಯವರ ಮನಮೋಹಕ ಚಿತ್ರ

ಅದೃಷ್ಟ ದೀಪುಡು

ತೆಲುಗು

ಸೂರ್ಯಕುಮಾರಿ, ಪದ್ಮ, ಸೀತಾರಾಮಶರ್ಮ, ಲಲಿತ-ಪದ್ಮಿನಿ

ಮೈಸೂರು ಜಿಲ್ಲಾ ಕಾಂಗ್ರೆಸ್ ಚುನಾವಣೆಗಳು

ತಾಲ್ಲೂಕು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗಳಿಗೆ ಈ ಮುಂದೆ ಕಂಡ ಮಹನೀಯರುಗಳು ಚುನಾಯಿತರಾಗಿರುತ್ತಾರೆ.

ಮೈಸೂರು ತಾಲ್ಲೂಕು

ಶ್ರೀಗಳಾದ—ಕೆ. ಕೆಂಪೇಗೌಡ, ಟಿ. ಎಂ. ರೇಣುಕಾರಾಧ್ಯ ಎಂ. ಸುಂದರರಾವ್ ವಿ ಚಿನ್ನಸ್ವಾಮಿ ಎಸ್. ಚನ್ನಪ್ಪಯ್ಯ ಎಸ್. ಸುಬ್ರಹ್ಮಣ್ಯಂ ಎ ಎಸ್. ಶಿವಣ್ಣ.

ಹುಣಸೂರು ತಾಲ್ಲೂಕು

ಶ್ರೀಗಳಾದ—ಎಂ ಎ. ಶ್ರೀನಿವಾಸಯ್ಯಂಗಾರ್ ಸಿ. ಎಸ್. ನಾರಾಯಣಸ್ವಾಮಿ ಹೆಚ್. ಆರ್ ಸೀತಾರಾಮಯ್ಯ ಟಿ. ಎಸ್ ಸುಬ್ಬರಾ [illegible] [illegible] ಚಂದ್ರಶೆಟ್ಟಿ ಹೆಚ್. ಎಸ್ ನಾರಾಯಣಶೆಟ್ಟಿ

ಹೆಗ್ಗಡದೇವನಕೋಟೆ ತಾಲ್ಲೂಕು

ಶ್ರೀಗಳಾದ—ಹೆಚ್ ಕೆ ಶಿವಮ್ಮಯ್ಯ ಎಂ ಡಿ ಶಿವಪ್ಪ ಎಂ. ಎಸ್. ವೆಂಕಟಸುಬ್ಬರಾವ್ ಹೆಚ್ ಬಿ ಲಿಂಗಣ್ಣಯ್ಯ ಕೆ. ಎಂ. ಶಿವಲಿಂಗಯ್ಯ.

ಗುಂಡ್ಲುಪೇಟೆ ತಾಲ್ಲೂಕು

ಶ್ರೀಗಳಾದ—ಕೆ ಸಿದ್ದನಾಯ್ಕ ಎಸ್ ಎಂ ವೀರಭದ್ರಯ್ಯ ವೈ. ಜಿ ಶ್ರೀಕಂಠಾಚಾರ್ ಜಿ ಬಿ ಚಿಕ್ಕಣ್ಣ ಜಿ. ಡಿ. ಮಹದೇವಶೆಟ್ಟಿ

ಯಳಂದೂರು ತಾಲ್ಲೂಕು

ಶ್ರೀಗಳಾದ—ವೈ. ಎಸ್ ಸೋಮಾರಾಧ್ಯ ಕೆ. ಎಸ್. ಕುಮಾರಸ್ವಾಮಿ ಸಿ ನಂಜಪ್ಪ ಜಿ. ವೈ. ಹರಿಸರ್ವೋತ್ತಮರಾವ್ ಎ ವಿ ರಾಮಚಂದ್ರಯ್ಯ ಎಂ. ವಿ. ವೆಂಕಟಪ್ಪ ಎಂ. ಎಸ್. ಮಾದಪ್ಪ.

ಚಾಮರಾಜನಗರ ತಾಲ್ಲೂಕು

ಶ್ರೀಗಳಾದ—ಸಿ ಎಸ್. ಲಕ್ಷ್ಮೀನಾರಾಯಣ್ ಕೆ. ವಿ. ಕೃಷ್ಣಮೂರ್ತಿ ಎಸ್. ನಾಗರಾಜ್ ಎಂ ರಾಮೇಗೌಡ ವಿ ವೆಂಕಟಶೆಟ್ಟಿ ಟಿ. ವೆಂಕಟಸುಬ್ಬಶೆಟ್ಟಿ.

ನಂಜನಗೂಡು ತಾಲ್ಲೂಕು

ಶ್ರೀಗಳಾದ—ರಾಚಯ್ಯ ಎಂ. ಲಿಂಗಣ್ಣ ಎಂ ಬಿ. ವೀರಭದ್ರಪ್ಪ ಡಿ. ಎಂ. ಸಿದ್ದಯ್ಯ ಎಂ. ಮಾದಯ್ಯ ಟಿ ಎಂ. ಪುಟ್ಟಸ್ವಾಮಿ ಕೆ. ಶಿವನಂಜಪ್ಪ ಡಿ ಶಂಕರನಾರಾಯಣಯ್ಯರ್ ಸಿ ಚಾಮಯ್ಯ ಕೆ. ನರಸೇಗೌಡ ಕಾಳಮಾದಪ್ಪ ಡಿ ಪಿ ಪುಟ್ಟಸ್ವಾಮಿ.

ರಷ್ಯಾ ಮತ್ತು ಚೈನಾಮೇಲೆ ಅಟಂಬಾಂಬು

“ಕೊರಿಯಾದಿಂದ ಹೊರ ಹೊರಡಿ” ಎಂದು ಅಲ್ಟಿಮೇಟಂನ್ನು ರಷ್ಯಾ ಮತ್ತು ಕೊರಿಯಾಕ್ಕೆ ಕೊಡುವುದಲ್ಲದೆ ಎರಡು ರಾಷ್ಟ್ರಗಳ ಮೇಲೂ ಆಟಂಬಾಂಬನ್ನು ಪ್ರಯೋಗಿಸಬೇಕೆಂದು ಅಮೆರಿಕಾ ಡೆಮೋಕ್ರಾಟಿಕ್ ಮತ್ತು ರಿಪಬ್ಲಿಕನ್ ಗುಂಪಿಗೆ ಸೇರಿದ ಕೆಲವು ಸೆನೆಟರುಗಳು ತಮ್ಮ ಅಭಿಪ್ರಾಯಗಳನ್ನು ರೇಡಿಯೋ ಮೂಲಕ ಭಾಷಣದಲ್ಲಿ ಹೇಳಿರುವರು

ಪಾಕಿಸ್ಥಾನ ವಿದೇಶಾಂಗ ಮಂತ್ರಿ

ಆಟಂಬಾಂಬನ್ನು ಉಪಯೋಗಿಸಿದರೆ ಪರಿಣಾಮವು ಅತ್ಯಂತ ಭೀಕರವಾಗುವುದು ರಾಜಕೀಯ, ಮಾನವೀಯತೆ ದೃಷ್ಟಿಯಿಂದ ಇದರ ಉಪಯೋಗವನ್ನು ನಿಲ್ಲಿಸಬೇಕೆಂದು ಪಾಕಿಸ್ಥಾನ ವಿದೇಶಾಂಗಮಂತ್ರಿ ಮಿ॥ ಜಫರುಲ್ಲಾ ಖಾನರವರು ಕೊರಿಯಾದಲ್ಲಿ ಆಟಂಬಾಂಬನ್ನು ಉಪಯೋಗಿಸುವ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೭ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ. ಕಾರ್ಯಕ್ರಮ ವಿವರಣೆ, ೭-೨೦ ಬಿ ಪಾಪಯ್ಯ (ನಾಗಸ್ವರ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ. ೮-೧೫ ಮುಕ್ತಾಯ

ಮಧ್ಯಾನ್ಹ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೮ ಚಿತ್ರಸಂಗೀತ. ೧-೪೦ ದುಲ್‌ರಬ. ೧-೪೫ ಹಿಂದೀ ಶಿಕ್ಷಣ ೨-೦ ಚಿತ್ರಸಂಗೀತ ೨-೩೦ ಮುಕ್ತಾಯ.

ಸಂಜೆ ೫ ೩೦ ಬಿ. ಪಾಪಯ್ಯ (ನಾಗಸ್ವರ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ (ರ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯಪ್ರಕಟಣೆ (ಹಿಂದಿ). ೭-೫ ಹೇಮಂತ ಕುಮಾರ್ (ರ) ೭-೧೫ ಕೆ.ಎಸ್. ಚಂದ್ರಶೇಖರಯ್ಯ (ಸಂಗೀತ). ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಮಾಯಗೌಡ (ಭಾರತವಚನ) ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಕೆ. ಎಸ್. ಚಂದ್ರಶೇಖರಯ್ಯ (ಸಂಗಿತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ರಾಗಲೋಕ. ೧೦-೦ ಮುಕ್ತಾಯ.

ಅಟಂಬಾಂಬು ಉಪಯೋಗಿಸಬಾರದು

ಆಟಂಬಾಂಬನ್ನು ಕೊರಿಯಾದಲ್ಲಿ ಉಪಯೋಗಿಸುವ ವಿಷಯದಲ್ಲಿ ಕೆನಡಾ ವಿದೇಶಾಂಗಮಂತ್ರಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಏಷ್ಯಾದ ಮೇಲೆ ಎರಡನೇಬಾರಿ ಆಟಂಬಾಂಬನ್ನು ಉಪಯೋಗಿಸಿದರೆ ಏಷ್ಯಾದ ಜನತೆಯ ಮೇಲೆ ವಿಶೇಷ ಪ್ರತಿಕೂಲವನ್ನುಂಟುಮಾಡುವುದು. ಇತರ ಎಲ್ಲಾ ವಿಧಾನಗಳನ್ನು ಉಪಯೋಗಿಸಿ ಯುದ್ಧವು ಹರಡದಂತೆ ಮಾಡಬೇಕೇ ವಿನಹ ಆಟಂಬಾಂಬನ್ನು ಉಪಯೋಗಿಸಿ ಏಷ್ಯಾಕ್ಕೂ ಇತರ ಪಾಶ್ಚಿಮಾತ್ಯ ರಾಷ್ಟ್ರಗಳಿಗೂ ಇರುವ ಮೈತ್ರಿಯನ್ನು ಕೆಡಿಸಬಾರದೆಂದು ಹೇಳಿರುವರು.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು! ಬಹುಕಾಲ ಬಾಳಿಕೆ ಬರುವುವು!!

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು!!!

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಾಳೆಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೀಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಮೈಸೂರು ಬೀಡು ಕಬ್ಬಿಣ (Charcoal Pig Iron)

ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು.

ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)

೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.

ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)

ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ, ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ;

ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)

ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.

ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯವಿಟ್ಟು ಬರೆಯಿರಿ.

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

FOR SALE :

One Oliver No. 9 Brief size

Pica types Typewriter
in Excellent condition

THE TOURIST BUREAU,

Lansdowne Buildings, Mysore

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೭—೧೨—೧೯೫೦ ನೇ ಗುರುವಾರ [ಸಂಚಿಕೆ ೮೨

ಚೀಣಾ ಸರ್ಕಾರದ ಸಹಕಾರ

ಶಾಂತಿಸ್ಥಾಪನೆಯೇ ಮುಖ್ಯಮಾರ್ಗ

ಕೊರಿಯಾದಲ್ಲಿ ಉಂಟಾಗಿರುವ ಇಂದಿನ ದಾರುಣ ಪರಿಸ್ಥಿತಿಯನ್ನು ನಾವು ಎದುರಿಸಿ ಶಾಂತಿಯನ್ನು ಸ್ಥಾಪಿಸಬೇಕಾದರೆ ವಿಶ್ವಸಂಸ್ಥೆಯಲ್ಲಿ ಸಮಸ್ತ ವಿಷಯಗಳನ್ನೂ ಚರ್ಚಿಸುತ್ತ ಒಬ್ಬರನ್ನೊಬ್ಬರು ಟೀಕಿಸುತ್ತ ಕುಳಿತುಕೊಳ್ಳುವುದರಿಂದ ಪ್ರಯೋಜನವಿಲ್ಲ. ಚೀಣಾ ಸರ್ಕಾರದ ಸಹಕಾರವನ್ನು ನಾವು ಪಡೆದು ಶಾಂತಿಸ್ಥಾಪನೆಗಾಗಿ ತ್ವರಿತವಾಗಿ ಒಂದು ಮಾರ್ಗವನ್ನು ಕಂಡು ಹಿಡಿಯಬೇಕೆಂದೂ ಅಣುಬಾಂಬು ದುಷ್ಟತನದ ಚಿನ್ಹೆ, ಅದರ ಉಪಯೋಗದಿಂದ ದುಷ್ಟತನವು ಹೆಚ್ಚುವುದೇ ವಿನಹ ಮುಕ್ತಿ ದೊರೆಯಲ್ಲ ಅದರ ಉಪಯೋಗವನ್ನು ಯಾರೂ ಸಮರ್ಥಿಸ ವುದಿಲ್ಲವೆಂದು ಪಂಡಿತ ನೆಹರೂರವರು ನಿನ್ನೆ ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಮಂತ್ರಿಮಂಡಲದ ಮೇಲೆ ಅಪಾದನೆ

ಬೆಂಗಳೂರು ಡಿ ೬

ಮೈಸೂರು ಲೆಜಿಸ್ಲೆಟಿವ್ ಅಸೆಂಬ್ಲಿ ಕಾಂಗ್ರೆಸ್‌ಪಕ್ಷದ ನಾಯಕರೂ ಮುಖ್ಯಮಂತ್ರಿಗಳೂ ಆದ ಶ್ರೀ ಕೆ ಸಿ. ರೆಡ್ಡಿಯವರ ಮೇಲೆ ಅವಿಶ್ವಾಸ ನಿರ್ಣಯವನ್ನು ತರಬೇಕೆಂದು ೩೫ ಮಂದಿ ರುಜು ಹಾಕಿರುವ ನಿರ್ಣಯದ ಓಡಾಟವು ನಿನ್ನೆಯಿಂದ ಹೆಚ್ಚಾಗಿದೆ. ಮಂತ್ರಿಮಂಡಲದಲ್ಲಿ ಬದಲಾವಣೆಗಳಾಗಲೇಬೇಕೆಂದು ಕೆಲವರು ಪಣ ತೊಟ್ಟಿರುವಂತೆ ಹೇಳಲಾಗಿದೆ ಪ್ರತಿಯೊಬ್ಬರೂ ಸಾಧಕ ಬಾಧಕಗಳನ್ನು ಏರ್ಪಡಿಸಿ ಸಹಿ ಹಾಕಿರುವರು. ಇದನ್ನು ಹಿಂದಕ್ಕೆ ತೆಗೆದುಕೊಳ್ಳುವ ಮಾತೇಯಿಲ್ಲ ಎಂದು ಹೇಳಲಾಗಿದೆ.

ಶ್ರೀ ರೆಡ್ಡಿಯವರ ಮೇಲೆ ಅವಿಶ್ವಾಸನಿರ್ಣಯವನ್ನು ತರಲು ನಾನಾ ಕಾರಣಗಳನ್ನು ಹೇಳಲಾಗುತ್ತಿದೆ

ಮುಖ್ಯವಾದ ವಿಷಯಗಳು—

(೧) ಮಂತ್ರಿಮಂಡಲದಲ್ಲಿ ಆಡಳಿತ ಸೂತ್ರ ಬಿಗಿಯಿಲ್ಲ.

(೨) ಆಡಳಿತ ವಿಚಾರ ನಿರ್ಧಾರಗಳು ತಡವಾಗಿ ನಡೆಯುತ್ತಿವೆ.

(೩) ಮಂತ್ರಿಗಳೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸದೆ ಆಜ್ಞೆಮಾಡುತ್ತಿದ್ದಾರೆ

(೪) ಉದ್ಯೋಗ ನೇಮಕಗಳಲ್ಲಿ ಕೋಮುವಾರು ಭೇದಭಾವ ವಿಶೇಷವಾಗಿ ನಡೆಯುತ್ತಿದೆ

(೫) ಮಂತ್ರಿಗಳ ಕೆಲವು ಮಿತ್ರರು ಅವರ ಹಿಂಬಾಲಕರಾಗಿ ಅಧಿಕಾರ ಸೂತ್ರ ನಡೆಯಿಸುತ್ತಲಿರುವರು

(೬) ಕೇಂದ್ರಕ್ಕೆ ವಿಶೇಷ ಅಧಿಕಾರವನ್ನು ಬಿಟ್ಟುಕೊಟ್ಟು ಸಂಸ್ಥಾನವನ್ನು ಜಿಲ್ಲಾಬೋರ್ಡು ಮತ್ತು ಮುನಿಸಿಪಾಲಿಟಿಯ ದರ್ಜೆಗೆ ತಂದಿದ್ದಾರೆ

(೭) ಲಂಚ ರುಷುವತ್ತುಗಳು ಹೆಚ್ಚುತ್ತಲಿವೆ.

(೮) ಎಷ್ಟು ಅವಕಾಶಕೊಟ್ಟರೂ ಮಂತ್ರಿಮಂಡಲದವರು ತಮ್ಮ ನೀತಿ ಬದಲಾಯಿಸಿಕೊಂಡಿಲ್ಲ. ಇತ್ಯಾದಿ.

ಪಕ್ಷ ಸಭೆ

ಕಾಂಗ್ರೆಸ್ ಪಕ್ಷದ ಸಭೆಯು ಇದೇ ಮಾಹೆ ೨೦ ನೇ ತಾರೀಖಿನೊಳಗೆ ಸೇರಿ ಅವಿಶ್ವಾಸ ವಿಷಯವನ್ನು ಇತ್ಯರ್ಥಪಡಿಸಲಾಗುವುದೆಂದು ಹೇಳಲಾಗಿದೆ.

ವಿಶ್ವಸಂಸ್ಥೆ ಸೈನ್ಯಗಳು ಕೊರಿಯದಿಂದ ಹಿಂದಕ್ಕೆ

ವಿಶ್ವಸಂಸ್ಥೆ ಸೈನ್ಯಗಳಿಗೆ ಕೊರಿಯದಲ್ಲಿ ಆಗುತ್ತಲಿರುವ ನಷ್ಟವನ್ನು ಪರಿಗಣಿಸಿದರೆ ಕೂಡಲೇ ಸೈನ್ಯವನ್ನೆಲ್ಲಾ ಕೊರಿಯದಿಂದ ಹಿಂದಕ್ಕೆ ಬರಮಾಡಿಕೊಳ್ಳುವುದೇ ಉತ್ತಮವೆಂದು ಅಮೆರಿಕಾದಲ್ಲಿ ಅನೇಕರು ಅಭಿಪ್ರಾಯಪಡುತ್ತಲಿದ್ದಾರೆಂದು ವರದಿಯಾಗಿದೆ.

ಸರ್ಕಾರಿ ಆಜ್ಞೆ

ಶ್ರೀ ಎಫ್. ತಂಬೂಚೆಟ್ಟಿರಿಗೆ ಡಿಸೆಂಬರ್ ೧ ರಿಂದ ಇನ್ನೂ ಒಂದು ತಿಂಗಳು ರಜಾ ಕೊಡಲಾಗಿದೆಯೆಂದು ತಿಳಿದುಬಂದಿದೆ.

ಅಸಿಸ್ಟೆಂಟು ಇಂಜನಿಯರ್ ಶ್ರೀ ಎಂ. ವಿಜಯ ಧ್ವಜ ರಾಯರನ್ನು ಎಗ್ಸಿಕ್ಯೂಟಿವ್ ಇಂಜನಿಯರಾಗಿ ನೇಮಕ ಮಾಡಿ ಮಂಡ್ಯ ಡಿವಿಜನ್ನಿಗೆ ವರ್ಗಾಯಿಸಲಾಗಿದೆ

ವಿದ್ಯುಚ್ಛಕ್ತಿ ಸರ್ವಿಸ್‌ನಲ್ಲಿದ್ದ ಅಸಿಸ್ಟೆಂಟು ಇಂಜನಿಯರ್ ಶ್ರೀ ಬಿ ಷಡಾಕ್ಷರಯ್ಯನವರನ್ನು ಕೋಲಾರ ಎಲೆಕ್ಟ್ರಿಕಲ್ ಡಿವಿಜನ್ನಿಗೆ, ರಜಾದಮೇಲಿರುವ ಶ್ರೀ ಆರ್. ಎಲ್. ಸಬ್ಬರಾಯಶೆಟ್ಟಿಯವರನ್ನು ಎಲೆಕ್ಟ್ರಿಕಲ್ ಸರ್ಕಲ್ಲಿಗೆ ವರ್ಗಾಯಿಸಲಾಗಿದೆ.

ಸರ್ದಾರ್ ಪಟೇಲರ ದೇಹಾಲಸ್ಯ

ಸರ್ದಾರ್ ಪಟೇಲರು ೩ ವಾರಗಳಿಂದ ಉದರಬಾಧೆಯಿಂದ ನರಳುತ್ತಲಿದ್ದಾರೆ. ಚಿಕಿತ್ಸೆಯಿಂದ ಅವರು ಗುಣಮುಖರಾಗುತ್ತಲಿದ್ದರೂ ಸ್ವಲ್ಪಮಟ್ಟಿಗೆ ನಿಶ್ಶಕ್ತರಾಗಿರುವುದಲ್ಲದೆ ಅವರ ಹೃದಯಕ್ಕೂ ಬಾಧೆಯಾಗಿದೆ. ರೋಗಬಾಧೆಯನ್ನು ತಡೆದುಕೊಂಡು ತಮ್ಮ ಶಕ್ತಿಯು ಕುಂದದಂತೆ ಸರ್ದಾರರು ಇರುವರೆಂದು ವೈದ್ಯರ ಪ್ರಕಟಣೆ ಹೊರಬಿದ್ದಿದೆ

ಸಂಸ್ಥಾನದಲ್ಲಿ ಹೆಚ್ಚು ವಿದ್ಯುಚ್ಛಕ್ತಿ

ಶಿರಾಳಕೊಪ್ಪ, ಶಿಕಾರಿಪುರ, ಆನವಟ್ಟಿ ಮತ್ತು ಸೊರಬಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ಮೈಸೂರು ಸರ್ಕಾರವು ೮ ೬೫ ಲಕ್ಷ ರೂ ಗಳನ್ನು ಮಂಜೂರು ಮಾಡಿದೆ ಚಿಂಚಲಗೂಡು, ಯಳಂದೂರು, ಮೂಡಿಗೆರೆ ಮತ್ತು ನಾಗಮಂಗಲಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ೨೫ ಲಕ್ಷ ರೂ ಗಳನ್ನು ಮಂಜೂರು ಮಾಡಿದೆ. ಈ ಸ್ಥಳಗಳಿಗೆ ೧೯೫೧ನೇ ಏಪ್ರಿಲ್‌ನೊಳಗೇ ವಿದ್ಯುಚ್ಛಕ್ತಿಯನ್ನೊದಗಿಸಲಾಗುವುದು

ಶ್ರೀ. ಸಿದ್ದಲಿಂಗಯ್ಯನವರ ರಾಜೀನಾಮೆ

ವಿದ್ಯಾ ಮತ್ತು ಆರೋಗ್ಯ ಮಂತ್ರಿ ಶ್ರೀ ಟಿ. ಸಿದ್ಧಲಿಂಗಯ್ಯನವರ ರಾಜೀನಾಮೆಯನ್ನು ಮಹಾರಾಜರು ಅಂಗೀಕಾರ ಮಾಡಿರುವುದರಿಂದ ಅವರಿಗೆ ಸೇರಿದ್ದ ಎಲ್ಲಾ ಇಲಾಖಾ ಕೆಲಸಗಳನ್ನು ತಾತ್ಕಾಲಿಕವಾಗಿ ಮುಖ್ಯಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರೇ ನೋಡಿಕೊಳ್ಳುವರು.

"ರಾಜರ ಸಂಘ" ಸ್ಥಾಪನೆ

ಕೆಲವು ಸಂಸ್ಥಾನಗಳ ರಾಜರೆಲ್ಲಾ ಸೇರಿ ತಮ್ಮದೇ ಆದ 'ರಾಜರ ಸಂಘ'ವೊಂದನ್ನು ಸ್ಥಾಪಿಸಿದ್ದಾರೆಂದೂ ಅದರಲ್ಲಿ ೧೭ ಜನ ಸದಸ್ಯರಿರುವರೆಂದೂ ಸ|| ಪಟೇಲರು ತಿಳಿಸಿರುವರು. ಇತರ ರಾಜರೂ ಅದಕ್ಕೆ ಸೇರಲವಕಾಶವಿದೆಯೆಂದೂ ಅದಕ್ಕೆ ಸರ್ಕಾರ ಮನ್ನಣೆ ಕೊಡುವ ಪ್ರಶ್ನೆ ಎದ್ದಿಲ್ಲವೆಂದೂ ಅವರು ತಿಳಿಸಿದರು.

ಹೆಚ್ಚು ಆಹಾರ ಬೆಳೆಯಲು ವಿದ್ಯುಚ್ಛಕ್ತಿ ಸಹಾಯ

ನೀರಾವರಿ ಕೆಲಸಗಳಿಗೆ ವಿದ್ಯುಚ್ಛಕ್ತಿ ಉಪಯೋಗವಾಗುವಂತೆ ಸಂಸ್ಥಾನದ ವಿವಿಧ ಕಡೆಗಳಲ್ಲಿ ವಿದ್ಯುಚ್ಛಕ್ತಿಯ ಫೀಡರ್ ಲೈನ್‌ಗಳನ್ನು ಹಾಕಲು ೧೯೫೧ ನೇ ಏಪ್ರಿಲ್ ಅಂತ್ಯದವರೆಗಿನ ಕಾರ್ಯಕ್ಕಾಗಿ ೫೦ ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರಕ್ಕೆ ಭಾರತ ಸರ್ಕಾರ ನಿಗದಿ ಮಾಡಿದೆ.

೩೮ ನೇ ಅಕ್ಷಾಂಶ ದಾಟಬೇಡಿ

ಚೀಣಾ ಮತ್ತು ಉತ್ತರ ಕೋರಿಯ ಸೈನ್ಯಗಳು ೩೮ ನೇ ಅಕ್ಷಾಂಶವನ್ನು ದಾಟುವುದಿಲ್ಲವೆಂದು ಘೋಷಿಸಬೇಕೆಂದು ಭಾರತ ಪಾಕಿಸ್ಥಾನ ಮುಂತಾದ ಮಧ್ಯಪ್ರಾಚ್ಯದ ಮತ್ತು ಏಷ್ಯದ ೧೩ ರಾಷ್ಟ್ರಗಳು ಒಂದು ಸಹಿಮಾಡಿದ ಮನವಿಯನ್ನು ಹೊರಡಿಸಿವೆ. ಈ ಮನವಿಯನ್ನು ಉತ್ತರಕೋರಿಯ ಮತ್ತು ಚೀಣಾ ಸರ್ಕಾರಗಳಿಗೆ ಕಳುಹಿಸಲಾಗಿವೆ. ಯಾರಿಂದಲೂ ಏನೂ ಉತ್ತರ ಬಂದಿಲ್ಲ.

೪೮ ಕೋಟಿ ರೂಪಾಯಿ ನಷ್ಟ

ಸೆಣಬಿನ ವಿಷಯದಲ್ಲಿ ಭಾರತ ಸರ್ಕಾರದ ಇಂದಿನ ನೀತಿಯಿಂದ ಮತ್ತು ಸೆಣಬನ್ನು ರಫ್ತುಮಾಡುವಾಗ ನಡೆದ ಕಾಳಸಂತೆಯಿಂದ ೪೮ ಕೋಟಿ ರೂಪಾಯಿಗಳು ನಷ್ಟವಾಗಿದೆಯೆಂದು ಶ್ರೀ ಆರ್. ಎನ್. ಗೋಯಂಕಾರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ನೆಹರೂ ಲಂಡನ್ನಿಗೆ

ಭಾರತ ಪ್ರಧಾನಿ ಪಂಡಿತ ನೆಹರೂರವರು ಮುಂದಿನ ತಿಂಗಳು ೨ ನೇ ತಾರೀಖು ಲಂಡನ್ನಿನಲ್ಲಿ ನಡೆಯುವ ಕಾಮನ್ ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸಲು ಹೋಗುವರು. ಅಲ್ಲಿ ಒಂದು ಭಾಷಣ ಮಾಡುವ ಸಂಭವವಿದೆ.

ದಸ್ತಗಿರಿ

ಅಶ್ಲೀಲ ಲೇಖನಗಳ ಪತ್ರಿಕೆ ಮಾರಿದ್ದಕ್ಕೆ

ಅಶ್ಲೀಲವಾದ ಲೇಖನಗಳನ್ನೊಳಗೊಂಡ ಪತ್ರಿಕೆಗಳನ್ನು ಮಾರುತ್ತಲಿದ್ದರೆಂಬ ಅಪಾದನೆಮೇಲೆ ೬ ಜನರನ್ನು ತಿರುಚೂರು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ.

ಕೃತಜ್ಞತಾ ಸೂಚನೆ

ವಿದ್ಯಾ ಮತ್ತು ಆರೋಗ್ಯ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರ ರಾಜೀನಾಮೆಯನ್ನು ಶ್ರೀಮನ್ಮಹಾರಾಜರು ಅಂಗೀಕಾರ ಮಾಡುತ್ತಾ, ಮಂತ್ರಿಗಳಾಗಿ ಅವರು ಇಲ್ಲಿಯವರೆಗೆ ಸಲ್ಲಿಸಿರುವ ಸೇವೆಗೆ ಕೃತಜ್ಞತೆ ಸೂಚಿಸಿರುವ ಪ್ರಕಟಣೆಯು ಹೊರಬಿದ್ದಿದೆ.

ಅಧ್ಯಕ್ಷ ಟ್ರೂಮನ್

ಚೈನಾವು ಕೊರಿಯಾ ಯುದ್ಧರಂಗದಲ್ಲಿ ಪ್ರವೇಶಿಸಿರುವುದರಿಂದ ಸಾರ್ವತ್ರಿಕ ಯುದ್ಧಭೀತಿಯು ಪ್ರಪಂಚದಲ್ಲೆಲ್ಲಾ ಉದ್ಭವಿಸಿದೆ. ಪ್ರಪಂಚದಲ್ಲಿ ಶಾಂತಿ ಕಾಪಾಡುವುದೇ ಅಮೆರಿಕಾಧ್ಯೇಯವಾದುದರಿಂದ ಈಗಲೂ ಅಮೆರಿಕಾದ ಮೂಲೋದ್ದೇಶದಲ್ಲಿ ಬದಲಾವಣೆಯೇನೂ ಇಲ್ಲವೆಂದು ಅಧ್ಯಕ್ಷ ಟ್ರೂಮನ್ನರು ಹೇಳಿರುವರು.

ಪುನಃ ಭೇಟಿ

ಅಧ್ಯಕ್ಷ ಟ್ರೂಮನ್ನರಿಗೂ ಪ್ರಧಾನಿ ಅಟ್ಲೀಯವರಿಗೂ ಉಪಹಾರವಾದ ನಂತರ ಅಧ್ಯಕ್ಷರ ಹಡಗಿನ ಮೇಲೆ ಎರಡನೇ ಭೇಟಿಯು ನಡೆಯಿತು. ಏಷಿಯಾ ಪರಿಸ್ಥಿತಿಯ ವಿಷಯವಾಗಿ ಮಾತುಕತೆಗಳು ಒಮ್ಮತದಿಂದ ನಡೆದವೆಂದು ಹೇಳಲಾಗಿದೆ

ಪುನಃ ೩ನೇ ಭೇಟಿಯು ವೈಟ್ ಹೌಸಿನಲ್ಲಿ ನಡೆಯುವುದು

ಕೇಂದ್ರಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು

ಭಾರತ ಕಾಂಗ್ರೆಸ್ ಕೇಂದ್ರ ಪಾರ್ಲಿಮೆಂಟರಿ ಬೋರ್ಡನ್ನು ಪುನರ್ರಚಿಸಿದೆ.

ಕಾಂಗ್ರೆಸ್ ಅಧ್ಯಕ್ಷರು, ಪಂಡಿತನೆಹರೂ, ಸರ್ದಾರ್ ಪಟೇಲ್, ಮೌಲಾನಾ ಆಜಾದ್, ಶ್ರೀಗಳಾದ ರಾಜಗೋಪಾಲಾಚಾರಿ ಮತ್ತು ಜಗಜೀವನರಾಮ್‌ರವರು ಸದಸ್ಯರಾಗಿರುವರು

ಕೃಷ್ಣರಾಜಸಾಗರದ ಸಮಿತಿ ವರದಿ

ಸರ್ಕಾರದಿಂದ ನೇಮಕವಾಗಿದ್ದ ಕೃಷ್ಣರಾಜಸಾಗರ ಸಮಿತಿಯು ತನ್ನ ವರದಿಯನ್ನು ನಿನ್ನೆ ಸರ್ಕಾರಕ್ಕೆ ಸಲ್ಲಿಸಿದೆಯೆಂದು ಗೊತ್ತಾಗಿದೆ.

ಚುನಾವಣೆ

ಇದೇ ಮಾಹೆ ೯ನೇ ತಾ ಶನಿವಾರ ಮಧ್ಯಾಹ್ನ ೧೨ ಗಂಟೆಯಿಂದ ೩ ಗಂಟೆವರೆಗೆ ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ನಗರ ಕಾಂಗ್ರೆಸ್ ಕಛೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಚುನಾವಣೆ ಜರುಗುವುದು ಈ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಚುನಾಯಿತರಾಗಿರುವವರೆಲ್ಲಾ ಚುನಾವಣೆಯಲ್ಲಿ ಭಾಗವಹಿಸಬೇಕಾಗಿ ಜಿಲ್ಲಾ ಕಾಂಗ್ರೆಸ್ ಚುನಾವಣಾಧಿಕಾರಿ ಶ್ರೀ ಕೆ. ಎಸ್. ಸತ್ಯನಾರಾಯಣರಾವ್‌ರವರು ಕೋರುತ್ತಾರೆ.

ಶ್ರೀ. ಕೆ. ಹನುಮಂತಯ್ಯನವರು

ದೆಹಲಿಗೆ ತೆರಳಿರುವ ಶ್ರೀ ಕೆ. ಹನುಮಂತಯ್ಯನವರು ೭ ಅಥವಾ ೮ನೇ ತಾರೀಖಿನ ವೇಳೆಗೆ ಬೆಂಗಳೂರಿಗೆ ಹಿಂತಿರುಗುವರು.

ಅಂತರಾಷ್ಟ್ರೀಯ ಎಂಜನಿಯರಿಂಗ್ ಸಮ್ಮೇಳನ

ದೆಹಲಿ ಮತ್ತು ಮುಂಬಯಿ ನಗರಗಳಲ್ಲಿ ಬರುವ ಜನವರಿಯಲ್ಲಿ ಸೇರಲಿರುವ ಅಂತರಾಷ್ಟ್ರೀಯ ಎಂಜನಿಯರಿಂಗ್ ಸಮ್ಮೇಳನಗಳಲ್ಲಿ ೩೦ ರಾಷ್ಟ್ರಗಳಿಂದ ೨೭೫ ಜನ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆಯೆಂದು ವರ್ಕ್ಸ್ ಸಚಿವ ಶ್ರೀ ಗಾಡ್ಗಿಲ್‌ರವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿರುವರು.

ಸುಮಾರು ೨೦೦ ಜನ ಭಾರತೀಯ ಪ್ರತಿನಿಧಿಗಳು ಅದರಲ್ಲಿ ಭಾಗವಹಿಸುವರು.

ಒಲಂಪಿಯಾ
30-11-50 ರಿಂದ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀ ಕೃಷ್ಣ

ರಣಜಿತ್
1-12-50 ರಿಂದ
ದಿನವಹಿ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಭಾಯಿ ಬಹೆನ್
(ಸಹೋದರ ಸಹೋದರಿ)
ಪಾತ್ರ :
ಗೀತಾಬಾಲಿ, ಪ್ರೇಮ್ ಆದೀಬ್, ನಿರೂಪ
ರಾಯ್, ಕಕ್ಕ್ಯೂ, ಗೋಪ್

ನ್ಯೂ ಅಪೆರಾ
ತಾ|| ೧-೧೨-೫೦ ರಿಂದ ೨ನೇ ವಾರ
ದಿನವಹಿ ೩ ಆಟಗಳು
ಟಿ. ಎನ್. ಟಿ ಯವರ ಮನಮೋಹಕ ಚಿತ್ರ
ಅದೃಷ್ಟ ದೀಪುಡು
ತೆಲುಗು
ಸೂರ್ಯಕುಮಾರಿ, ಪದ್ಮ, ಸೀತಾರಾಮಶರ್ಮ, ಲಲಿತ ಪದ್ಮಿನಿ

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಡಿಸೆಂಬರ್ ೮ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಎಸ್. ಬಿ ಕೇಶವಮೂರ್ತಿ (ದೇವೀಭಜನೆ) ೭-೩೫ ವಿಜಯದೇಸಾಯಿ (ರೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ಕ್ಲಾರಿಯೋನೆಟ್. ೧-೪೫ ಹಿಂದೀ ಶಿಕ್ಷಣ. ೨-೦ ನಿಮ್ಮ ಮೆಚ್ಚಿನ ಕಲಾವಿದರು (ರೆ) ೨-೩೦ ಮುಕ್ತಾಯ.

ಸಂಜೆ ೫-೩೦ ಕೆ. ಜಾನಕಿ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ (ಸಂಗೀತ ಶಿಕ್ಷಣ) ೬ ೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭.೦ ಸ್ಥಳೀಯಪ್ರಕಟಣೆ (ಹಿಂದಿ) ೭-೫ ಹಿಂದಿ ಭಜನೆ ೭-೧೫ ಕೆ ಜಾನಕಿ (ವೀಣೆ) ೭-೩೦ ಕಲಾವಿದ ([illegible]ದೇವಿಯವರ ಸಣ್ಣ ಕಥೆ) ೭ ೪೫ ಕನ್ನಡದಲ್ಲಿ ವಾರ್ತೆ ೮.೦ ನಾದ ಶ್ರೀ. (ರೆ) ೮-೧೫ ಎಮ್. ಎಸ್ ರಲ್ಪಪುಕ್ಕೈಐಂಗಾರ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಮೈಸೂರು ಅರಮನೆ ಬ್ಯಾಂಡ್ ೧೦ ೦ ಮುಕ್ತಾಯ.

ಪ್ರಕಾಶಂರ ಅಪಾದನೆ

ಮದರಾಸು ಶಾಸನ ಸಭೆಯಲ್ಲಿ ಶ್ರೀ ಟಿ. ಪ್ರಕಾಶಂರವರ ಐವರು ಮದರಾಸಿನ ಮಂತ್ರಿಗಳ ಮೇಲಿನ ಅಪಾದನೆ ವಿಷಯವು ನಿನ್ನೆ ಚರ್ಚೆಗೆ ಪ್ರಾರಂಭವಾಯಿತು. ಸಭೆಯ ಸ್ಪೀಕರು ಹಿಂದೆ ಇದೇ ವಿಷಯದಲ್ಲಿ ವಿಚಾರಣಾಸಮಿತಿಯು ಮಾಡಿರುವ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಬಾರದೆಂದೂ ಅದು ಅನಧಿಕೃತವಾದ ವರದಿಯೆಂದು ತಿಳಿಸಿದರು. ಶ್ರೀ. ಟಿ ಪ್ರಕಾಶಂರವರು ೯೦ ನಿಮಿಷ ಮಾತನಾಡಿ ಅಪಾದನೆಗಳನ್ನೆಲ್ಲಾ ವಿಷದೀಕರಿಸಿದರು.

ಮಾಜಿ ಮಂತ್ರಿ ಶ್ರೀ ಕೆ.ಆರ್. ಕಾರಂತರವರು ಈ ಅಪಾದನೆಗಳನ್ನು ಸಮರ್ಥಿಸಿ ಮಾತನಾಡಿದರು. ಚರ್ಚೆ ಪ್ರಾರಂಭವಾಗಿದೆ.

FOR SALE :
One Oliver No. 9 Brief size
Pica types Typewriter
in Excellent condition

THE TOURIST BUREAU,
Lansdowne Buildings, Mysore

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್. ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ., ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ   ದಿನಪತ್ರಿಕೆ   Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೮—೧೨—೧೯೫೦ ಶುಕ್ರವಾರ [ಸಂಚಿಕೆ ೮೩

ಶ್ರೀ ಕೆ. ಸಿ. ರೆಡ್ಡಿಯವರಿಗೆ ವಿರೋಧಪಕ್ಷದವರ ಸೂಚನೆ

ನೀವಾಗಿ ಅಧಿಕಾರ ಬಿಟ್ಟುಕೊಡಿ

ಶ್ರೀ ಕೆ. ಸಿ. ರೆಡ್ಡಿಯವರ ನಾಯಕತ್ವದಲ್ಲಿ ತಮಗೆ ನಂಬಿಕೆಯಿಲ್ಲ. ಈ ಸ್ಥಾನವನ್ನು ಬಿಟ್ಟುಕೊಟ್ಟು ಬೇರೆನಾಯಕರನ್ನು ಆರಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿ ಎಂಬ ಅಭಿಪ್ರಾಯದ ಒಂದು ಪತ್ರವು ನಿನ್ನೆ ಶ್ರೀ ಕೆ. ಸಿ. ರೆಡ್ಡಿಯವರಿಗೆ ಅವರ ವಿರೋಧಪಕ್ಷದವರು ಒಪ್ಪಿಸಿದ್ದಾರೆ.

ಶಾಲಾಪ್ರಾರಂಭೋತ್ಸವ

ಮೈಸೂರು ಡಿ. ೮

ಮೈಸೂರು ಜಿಲ್ಲಾಧಿಕಾರಿಗಳಾದ ಜನಾಬ್ ಎಂ. ಎ. ಕ್ಮುದ್ ಅಹಮ್ಮದ್‌ರವರು ಗುಂಡುಪೇಟೆ ತಾ|| ಹೊಂಗಹಳ್ಳಿ ಗ್ರಾಮದಲ್ಲಿ, ಶ್ರೀ ಸಿದ್ದಲಿಂಗಪ್ಪ ಮತ್ತು ಸೋದರರು ಕಟ್ಟಿಸಿರುವ ನೂತನ ಪಾಠಶಾಲಾ ಪ್ರಾರಂಭೋತ್ಸವನ್ನು ನಿನ್ನೆ ನಡೆಸಿದರು.

ವಿದೇಶೀ ಸ್ವಾಮ್ಯ

ಭಾರತದಲ್ಲಿ ವಿದೇಶೀಯರ ಯಾವ ಸ್ವಾಮ್ಯವೂ ಇರುವುದನ್ನು ಭಾರತೀಯರು ಸಹಿಸಲಾರರು ಎಂದು ಪ್ರಧಾನಿ ನೆಹರೂ ಹೇಳಿರುವರು.

ನೇಪಾಳ ಪರಿಸ್ಥಿತಿ

ನೇಪಾಳ ಕಾಂಗ್ರೆಸ್ ಪಡೆಗಳು ಪೂರ್ವ ನೇಪಾಳದ ಪಶುಪತಿನಗರವೆಂಬಲ್ಲಿ ಸರ್ಕಾರಿ ಸೈನ್ಯಗಳೊಡನೆ ಘರ್ಷಣೆ ನಡೆಸಿ ಅರಣ್ಯಕ್ಕೆ ಹಿಂತಿರುಗಿದರೆಂದು ವರದಿ ಬಂದಿದೆ.

ಫಲಕಾರಿಯಾಗಿಲ್ಲ

ಭಾರತನೇಪಾಳ ಪ್ರತಿನಿಧಿಗಳಲ್ಲಿ ಇಲ್ಲಿಯವರೆಗೆ ನಡೆದ ಮಾತುಕಥೆಗಳು ಫಲದಾಯಕವಾಗಿಲ್ಲ. ಹಿಂದಿನ ಪದ್ಧತಿಯು ಏರ್ಪಾಟಾಗಬೇಕಾದುದು ಅತ್ಯವಶ್ಯಕ. ಈಗ ಹೊಸದಾದ ಮಧ್ಯಮಾರ್ಗವನ್ನೊಂದು ಹುಡುಕಬೇಕಾಗಿದೆ. ನೇಪಾಳವು ಬಲಿಷ್ಠವಾದ ಸ್ವಾತಂತ್ರ್ಯರಾಜ್ಯವಾಗಿರಬೇಕೆಂಬುದೇ ಭಾರತದ ಆಶಯ. ದೆಹಲಿಯಲ್ಲಿರುವ ವೀರವಿಕ್ರಮರವರಿಗೆ ಹಿಂದೆಯೇ ಮಹಾರಾಜರೆಂದು ಭಾರತ ಸರ್ಕಾರವು ಮನ್ನಣೆಯನ್ನಿತ್ತಿದೆ. ಪುನಃ ಮನ್ನಣೆಯನ್ನೀಯುವ ಪ್ರಶ್ನೆಯೇ ಈಗ ಇಲ್ಲ ಎಂದು ಭಾರತಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಭಾರತ ಬೆಂಬಲ ಅಗತ್ಯ

೪,೦೦೦ ಲಕ್ಷ ಪ್ರಜೆಗಳಿರುವ ಚೈನಾದೇಶದಿಂದ ಬೇರೆಯಾಗಿರಲು ಸಾಧ್ಯವಿಲ್ಲ. ಯಾವುದಾದರೂ ಒಂದು ಸಂಧಾನಮಾರ್ಗದಿಂದ ಪ್ರಪಂಚದಲ್ಲಿ ಶಾಂತಿಸ್ಥಾಪನೆಯನ್ನು ಮಾಡಲೇಬೇಕು. ಇದಕ್ಕೆ ಭಾರತದ ಬೆಂಬಲವೂ ಅತ್ಯಗತ್ಯವೆಂದು ಬ್ರಿಟಿಷ್ ಪ್ರಧಾನಿ ಅಟ್ಲಿಯವರು ಅಮೆರಿಕಾದಲ್ಲಿ ಹೇಳಿರುವರು.

ಕೊರಿಯ ಪುನರ್ರಚನೆ

ಕೊರಿಯದಲ್ಲಿ ಪ್ರಪಂಚ ಸಂಸ್ಥೆಯ ಪರಿಹಾರ ಮತ್ತು ಪುನರ್ರಚನಾ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಜನರಲ್ ಅಸೆಂಬ್ಲಿಯು ನೇಮಿಸಿರುವ ಸಂಧಾನ ಸಮಿತಿಯ ಅಧ್ಯಕ್ಷರಾಗಿ ನವನಗರದ ಜಾಂಸಾಹೇಬರು ಚುನಾಯಿತರಾಗಿದ್ದಾರೆ.

ಜ್ವಾಲಾಮುಖಿ

ಎಟ್ನಾ ಜ್ವಾಲಾಮುಖಿಯಿಂದ ೩೦ ಅಡಿ ಎತ್ತರದ ಗೋಡೆಯಂತೆ ಶಿಲಾರಸವು ಉಕ್ಕಿಬರುತ್ತ ೩ ಗ್ರಾಮಗಳಕ್ಕೆ ಒಯ್ದುಹೋಗುತ್ತಿದೆ. ಈ ಗ್ರಾಮಗಳೆಲ್ಲಾ ಸದ್ಯದಲ್ಲೇ ಅದೃಶವಾಗಿಬಿಡುವುವು ಎಂದು ಹೇಳಲಾಗಿದೆ.

ಅರವಿಂದರ ದೇಹ

ಶ್ರೀ ಅರವಿಂದರ ದೇಹವನ್ನು ಗಾಳಿ ಹೋಗದಂತಹ ಕಟ್ಟಾಡ ಗಾಜಿನ ಪೆಟ್ಟಿಗೆಯಲ್ಲಿ ಇಟ್ಟು ಸದಾ ಕಾಲಕ್ಕೂ ಉಳಿಯುವಂತೆ ಮಾಡಬೇಕೆಂದು ಒಂದು ಸೂಚನೆಯು ಶ್ರೀ ಅರವಿಂದರ ಆಶ್ರಮದ ವೃತ್ತಗಳಲ್ಲಿ ಬಲವಾದ ವದಂತಿ ಹಬ್ಬಿದೆ. ಗೋವಾದಲ್ಲಿ ಅಸಿಸ್ಸಿಯ ಸೆಯಿಂಟ್ ಫ್ರಾನ್ಸಿಸುರವರ ದೇಹವನ್ನು ಇದೇ ರೀತಿ ಕಾಪಾಡಿಡಲಾಗಿದೆ.

ಚೀಣಾ ಸಮಾಧಾನಪಡಿಸಲಾಗದು

ಅಧ್ಯಕ್ಷ ಟ್ರೂಮನ್ ಮತ್ತು ಪ್ರಧಾನಿ ಅಟ್ಲಿಯವರ ಭೇಟಿಗಳು ಮುಂದುವರಿಯುತ್ತಲಿವೆ. ಈಗಾಗಲೇ ಕೆಲವು ವಿಷಯಗಳಲ್ಲಿ ಈ ನಾಯಕರಿಬ್ಬರಿಗೂ ಐಕ್ಯಮತದಿಂದ ಕೆಲವು ನಿರ್ಧಾರಗಳಾಗಿವೆಯೆಂದು ತಿಳಿಯಬರುತ್ತದೆ. ಏನೇ ಆಗಲೀ ಕೊರಿಯಾದಿಂದ ವಿಶ್ವಸಂಸ್ಥೆಯ ಸೈನ್ಯವನ್ನು ಹಿಂದಕ್ಕೆ ಕರೆಸಬಾರದು ಮತ್ತು ಚೀಣಾವನ್ನು ಸಮಾಧಾನಪಡಿಸಲೆತ್ನಿಸಲಾಗದು ಎಂದು ತೀರ್ಮಾನಕ್ಕೆ ಬಂದಿರುವಂತಿದೆ

ಸೈನ್ಯವನ್ನು ಹಿಂದಕ್ಕೆ ಕರೆಸಿ

ಅಮೆರಿಕಾವು ಪ್ರಪಂಚ ಸಂಸ್ಥೆಯ ಸದಸ್ಯತ್ವವನ್ನು ಬಿಟ್ಟು ಬರಬೇಕು, ಅಮೆರಿಕದ ಹಿತಕ್ಕೆ ಮೊದಲು ಪ್ರಾಧಾನ್ಯತೆಕೊಡಬೇಕು, ಕೊರಿಯಾದಿಂದ ಅಮೆರಿಕನ್ ಸೇನೆಗಳನ್ನು ಹೊರಕ್ಕೆ ಕರೆತರಬೇಕೆಂದು ಅಮೆರಿಕಾದ ಕೆಲವು ಪತ್ರಿಕೆಗಳು ಅಗ್ರಲೇಖನಗಳನ್ನು ಬರೆದಿವೆ

ಸ್ಮಾರಕ

ಕರ್ನಲ್ ಉನ್ನಿನಾಯರ ಜ್ಞಾಪಕಾರ್ಥವಾಗಿ ಕೊರಿಯಾದಲ್ಲಿ ಒಂದು ಸ್ಮಾರಕವನ್ನು ನಿರ್ಮಾಣಮಾಡಬೇಕೆಂದು ಅಲ್ಲಿಯ ಸರ್ಕಾರವು ನಿರ್ಧರಿಸಿದೆ

ಶ್ರೀ ಪ್ರಕಾಶಂರ ನಿರ್ಣಯ

ಶ್ರೀ ಪ್ರಕಾಶಂರವರು ಮದರಾಸು ಮಂತ್ರಿಗಳ ಮೇಲೆ ಮಾಡಿರುವ ಆಕ್ಷೇಪಣೆಗಳು ನಿಜವಲ್ಲವೆಂದು ಆರೋಪಿತ ಮಂತ್ರಿಗಳಾದ ಶ್ರೀಗಳಾದ ಗೋಪಾಲರೆಡ್ಡಿ, ಸೀತಾರಾಂ ರೆಡ್ಡಿ, ಚಂದ್ರಮೌಳಿ, ಎ. ಬಿ. ಶೆಟ್ಟಿ ಮತ್ತು ಕುರುಮಯ್ಯನವರು ಹೇಳಿರುವರು. ಚರ್ಚೆ ಇನ್ನೂ ನಡೆಯುತ್ತಲಿದೆ.

ಕಾಂಗ್ರೆಸ್ ಅಸೆಂಬ್ಲಿಪಕ್ಷದ ೬೫ ಸದಸ್ಯರ ಪೈಕಿ ೩೫ ಜನ ಸದಸ್ಯರು ಅವಿಶ್ವಾಸವನ್ನು ವ್ಯಕ್ತಪಡಿಸಿರುವುದರಿಂದ ಶ್ರೀ ರೆಡ್ಡಿಯವರು ತಾವಾಗಿಯೇ ಅವಿಶ್ವಾಸನಿರ್ಣಯವಾಗುವುದಕ್ಕಿಂತ ಮುಂಚಿತವಾಗಿಯೇ ಗೌರವಯುತವಾಗಿ ಸ್ಥಾನವನ್ನು ಬಿಟ್ಟುಕೊಡುವುದು ಉಚಿತವೆಂದು ಕೆಲವರು ಸ್ಪಷ್ಟಪಡಿಸಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ಹೇಳಿರುವುದಾಗಿ ತಿಳಿಯಬರುತ್ತದೆ. ಕಾಂಗ್ರೆಸ್ ಸಂಸ್ಥೆಯ ಹಿತದೃಷ್ಟಿ ಮತ್ತು ದೇಶದ ಹಿತದೃಷ್ಟಿಯಿಂದ ಇದು ಸರ್ವೋತ್ಕೃಷ್ಟಮಾರ್ಗವೆಂದು ಹೇಳಲಾಗಿದೆ

ಶ್ರೀ ರೆಡ್ಡಿಯವರು ಇನ್ನೂ ಯಾವ ತೀರ್ಮಾನಕ್ಕೂ ಬಂದಿರುವುದಿಲ್ಲ.

ನಿನ್ನೆ ಮಂತ್ರಿಮಂಡಲದ ಸಭೆ ನಡೆಯಬೇಕಾಗಿದ್ದುದು ನಡೆಯಲಿಲ್ಲ. ಮುಖ್ಯಮಂತ್ರಿಗಳು ತಮ್ಮ ಕಛೇರಿಗೂ ಬರಲಿಲ್ಲವೆಂದು ತಿಳಿಯಬರುತ್ತದೆ.

ಸಭಾತ್ಯಾಗ

ವಿಶ್ವಸಂಸ್ಥೆರಾಜಕೀಯ ಸಮಿತಿಯ ಸಭೆಯಲ್ಲಿ ಕೊರಿಯಾದಲ್ಲಿ ಚೀಣಾ ಆಕ್ರಮಣವಿಷಯವಾಗಿ ಚರ್ಚೆ ತೆಗೆದುಕೊಳ್ಳಬೇಕೆಂದು ನಿರ್ಧಾರವಾಯಿತು. ಈ ಚರ್ಚೆಯಲ್ಲಿ ಭಾಗವಹಿಸಲು ದಕ್ಷಿಣಕೊರಿಯಾ ಪ್ರತಿನಿಧಿಗೆ ಆಹ್ವಾನಕೊಡಬೇಕೆಂದು ಸಭೆ ತೀರ್ಮಾನಿಸಿದುದನ್ನು ವಿರೋಧಿಸಿ ಪೀಕಿಂಗ್ ಪ್ರತಿನಿಧಿಗಳು ಸಭಾತ್ಯಾಗಮಾಡಿದರು

ಮುಷ್ಕರವೆ ?

ಸಿಲೋನಿನಲ್ಲಿ ಕೆಲಸಮಾಡುತ್ತಲಿರುವ [illegible] ಲಕ್ಷ ಭಾರತೀಯರು, ತಮಗೆ ದಿನಕ್ಕೆ ೧ ರೂ. ೩೫ ಸೆಂಟು ಕನಿಷ್ಠ ಸಂಬಳ ಕೊಡಬೇಕು. ಕೆಲಸದಿಂದ ಯಾರನ್ನೂ ವಜಾ ಮಾಡಲಾಗದು, ವಿವಾದಗಳನ್ನು ಸಂಧಾನ ಮೂಲಕ ಬಗೆಹರಿಸಬೇಕೆಂಬ ೧೩ ಬೇಡಿಕೆಗಳನ್ನು ಪರಿಶೀಲಿಸದಿದ್ದರೆ ಮುಷ್ಕರ ಹೂಡುವುದಾಗಿ ತೀರ್ಮಾನಿಸಿರುವಾಗಿ [illegible] ಹಿಂತಿರುಗಿರುವ ಮಾಜಿ ಹೈಕಮಿಷನರ್ ಶ್ರೀ ಗಿರಿಯವರು ಹೇಳಿರುವರು

ಮಾರ್ಷಲ್ ಲಾ

ದಕ್ಷಿಣಕೊರಿಯಾವು ತನ್ನ ದೇಶವನ್ನೆಲ್ಲಾ ಮಾರ್ಷಲ್ ಲಾವನ್ನು ಜಾರಿಮಾಡಿರುತ್ತದೆ.

ಕೃಷ್ಣರಾಜಸಾಗರ ಸಮಿತಿ

ಕೃಷ್ಣರಾಜಸಾಗರದಲ್ಲಿ ನೀರು ಬತ್ತಿಹೋದ ವಿಷಯವನ್ನು ಪರಿಶೀಲಿಸಲು ಮೈಸೂರು ಸರ್ಕಾರವು ನೇಮಿಸಿದ್ದ ಸಮಿತಿಯು ಒಪ್ಪಿಸಿರುವ ವರದಿಯಲ್ಲಿ ಕಾವೇರಿ ನದಿಯ ನೀರಿನ ನಿರ್ವಹಣ ಬಗ್ಗೆ ೧೯೨೪ ರಲ್ಲಿ ಮದರಾಸು ಮತ್ತು ಮೈಸೂರು ಸರ್ಕಾರಗಳಿಗೆ ಆಗಿರುವ ಒಪ್ಪಂದವನ್ನು ಪುನಃ ವಿಮರ್ಶಿಸಬೇಕೆಂದು ಹೇಳಿರುವುದಾಗಿ ವರದಿಯಾಗಿದೆ.

ಮೈಸೂರು ಡಿ ೬

◉ ಈ ದಿವಸ ಸಾಯಂಕಾಲ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಮಹರ್ಷಿ ಶ್ರೀ. ಅರವಿಂದ ಘೋಷ್‌ರವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು ಶ್ರೀ ಮಹಮದ್ ಪಾಷಾರವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ಶ್ರೀಗಳಾದ ಆರ್. ಷೇಕ್ ದಸ್ತಗೀರ್, ಟಿ. ಪಿ. ನರಸಿಂಹಮೂರ್ತಿ, ಕೃಷ್ಣೇಗೌಡ ಮತ್ತು ಬಿ ಎ. ನಾರಾಯಣಸ್ವಾಮಿ, ಇವರುಗಳು ಅರವಿಂದಮಹರ್ಷಿಗಳ ಜೀವನದ ವಿಷಯವಾಗಿ ತಿಳಿಸಿದರು. ಅಧ್ಯಕ್ಷರ ಭಾಷಣವಾದನಂತರ ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಕೆಲವು ನಿಮಿಷ ಮೌನವ್ರತವನ್ನಾಚರಿಸಲಾಯಿತು

ಸ್ಟರ್ಲಿಂಗ್

೬೧ ಕೋಟಿ ೯೦ ಲಕ್ಷ ಪೌಂಡುಗಳ ಸ್ಟರ್ಲಿಂಗ್ ಬಾಕಿಯು ಇನ್ನು ಉಳಿದಿದೆಯೆಂದೂ ಅದರ ಪೈಕಿ ಪ್ರತಿ ವರ್ಷವೂ ೩ ಕೋಟಿ ೫೦ ಲಕ್ಷ ಪೌಂಡುಗಳಂತೆ ೬ ವರ್ಷಗಳಲ್ಲಿ ೨೧ ಕೋಟಿ ಪೌಂಡುಗಳನ್ನು ವಾಪಸ್ಸು ಪಡೆಯಲು ಭಾರತಕ್ಕೂ ಬ್ರಿಟನ್ನಿಗೂ ಒಪ್ಪಂದವಾಗಿದೆಯೆಂದು ಭಾರತದ ಸರ್ಕಾರದ ಹಣಕಾಸಿನ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಇದೇ ವಿಷಯದಲ್ಲಿ ಬ್ರಿಟನ್ನಿನ ಪಾರ್ಲಿಮೆಂಟಿನಲ್ಲೂ ಛಾನ್ಸಿಲರ್ ಆಫ್ ಎಕ್ಸ್‌ಚೆಕರ್‌ರವರು ಒಂದು ಹೇಳಿಕೆಯನ್ನಿತ್ತಿರುವರು: ಭಾರತದ ರಕ್ಷಣೆಗಾಗಿ ಮಾಡಿದ ಈ ಹಣವನ್ನು ನಾವು ವಾಪಸ್ಸು ಕೊಡಬೇಕಾಗಿಲ್ಲವೆಂದು ವಿರೋಧ ಪಕ್ಷದ ನಾಯಕ ಮಿ|| ಚರ್ಚಿಲ್ಲರು ವಾದಿಸಿದರು. ಈ ವಾದವನ್ನು ಯಾರೂ ಪುಷ್ಟೀಕರಿಸಲಿಲ್ಲ.

FOR SALE :

One Oliver No. 9 Brief size
Pica types Typewriter
in Excellent condition

THE TOURIST BUREAU,
Lansdowne Buildings, Mysore

ಶ್ರೀಮತಿ ವಿಜಯಲಕ್ಷ್ಮಿ

ಭಾರತದ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿಯವರಿಗೂ ಪ್ರಧಾನಿ ಅಟ್ಲಿಯವರಿಗೂ ಅನಧಿಕೃತ ಭೇಟಿ ನಡೆದು ಇಂದಿನ ಪ್ರಪಂಚಪರಿಸ್ಥಿತಿಯ ವಿಷಯವಾಗಿ ಮಾತುಕಥೆ ನಡೆದುವೆಂದು ತಿಳಿಯಬಂದಿದೆ.

ಸರದಾರರ ದೇಹಸ್ಥಿತಿ

ಸರದಾರ್ ಪಟೇಲರ ದೇಹಸ್ಥಿತಿಯು ಉತ್ತಮಗೊಂಡಿದೆಯೆಂದು ವೈದ್ಯರ ಪ್ರಕಟಣೆ ಹೊರಬಿದ್ದಿದೆ.

ಆಸ್ಟ್ರೇಲಿಯಾ ಪ್ರಧಾನಿ

ಆಸ್ಟ್ರೇಲಿಯ ಪ್ರಧಾನಿ ಮಿ ಮೆನ್ಸಿರವರು ಲಂಡನ್ನಿನ ಕಾಮನ್ವೆಲ್ತ್ ಸಮ್ಮೇಳನಕ್ಕೆ ಭಾಗವಹಿಸಲು ಹೋಗುವ ಮಾರ್ಗದಲ್ಲಿ ದೆಹಲಿಗೆ ಇದೇ ಮಾಹೆ ೩೧ನೇ ತಾರೀಖು ದೆಹಲಿಗೆ ಬಂದು ಎರಡು ದಿನವಿರುವರು

ಶ್ರೀ ವಿ. ಪಿ. ಮೆನನ್

ಭಾರತ ಸರ್ಕಾರದ ಸಂಸ್ಥಾನಗಳ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್‌ರವರು ೧೦ನೇ ತಾ|| ಬೆಂಗಳೂರಿಗೆ ಬರಲಿರುವರು

ಸರ್ ಸ್ಟ್ಯಾವರ್ಡ್‌ಕ್ರಿಪ್ಸ್

ಸರ್ ಸ್ಟಾವರ್ಡ್ ಕ್ರಿಪ್ಸ್‌ರವರ ದೇಹಾರೋಗ್ಯವು ಇನ್ನೂ ಸರಿಯಾಗದೆ, ೬ ತಿಂಗಳಕಾಲ ಹಾಸಿಗೆಯಲ್ಲಿಯೇ ಇರಬೇಕಾಗುತ್ತದೆಂದು ಲೇಡಿ ಕ್ರಿಪ್ಸ್ ಹೇಳಿರುವರು

○ ಚಿತ್ರದುರ್ಗ ಜಿಲ್ಲೆಯಲ್ಲಿ ರಸ್ತೆ ನಿರ್ಮಾಣಕಾರ್ಯಕ್ಕೆಂದು ಸರ್ಕಾರವು ೧ ಲಕ್ಷ ರೂ. ಗಳನ್ನು ಮಂಜೂರು ಮಾಡಿದೆ ಅದರಲ್ಲಿ ೫೦ ಸಾವಿರ ರೂ. ಗಳನ್ನು ಚಿತ್ರದುರ್ಗ ಜಿಲ್ಲೆಗೂ ಉಳಿದ ದುಡ್ಡಿನಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಬೌರಿಂಗ್‌ಪೇಟೆ ತಾಲ್ಲೂಕುಗಳಲ್ಲಿ ರಸ್ತೆ ನಿರ್ಮಾಣಕ್ಕೂ ಉಪಯೋಗಿಸಲಾಗುವುದು.

◉ ಮಾಯಕೊಂಡ ಮೈನರ್ ಮುನಿಸಿಪಲ್ ಕೌನ್ಸಿಲ್ ಚಿತ್ರದುರ್ಗ ಟೌನ್ ಕೌನ್ಸಿಲ್ ಮತ್ತು ಕೃಷ್ಣರಾಜನಗರ ಮುನಿಸಿಪಲ್ ಕೌನ್ಸಿಲ್‌ಗಳ ಅಧಿಕಾರಾವಧಿಯನ್ನು ೧೯೫೧ ರ ಅಂತ್ಯದವರೆಗೆ ಹೆಚ್ಚಿಸಲಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್ ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ನ್ಯೂ ಅಪೆರಾ
ತಾ|| ೧-೧೨-೫೦ ರಿಂದ ೨ನೇ ವಾರ
ದಿನವಹಿ ೩ ಆಟಗಳು
ಪಿ. ಎನ್. ಟಿ ಯವರ ಮನಮೋಹಕ ಚಿತ್ರ
ಅದೃಷ್ಟ ದೀಪುಡು
ತೆಲುಗು
ಸೂರ್ಯಕುಮಾರಿ, ಪದ್ಮ, ಸೀತಾರಾಮಶರ್ಮ, ಲಲಿತ-ಪದ್ಮಿನಿ

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯·೪೬ ಮೀಟರು
ಡಿಸೆಂಬರ್ ೯ ಶನಿವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ, ೭-೨೦ ಚಿತ್ರಜಗತ್ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ. ೧-೪೫ ಎಸ್. ಶಾರದ (ಕನ್ನಡ ಗೀತೆ) ೨-೦ ಬಾಲಜಗತ್ (ಮಕ್ಕಳಿಗಾಗಿ) ೨-೩೦ ಮುಕ್ತಾಯ.

ಸಂಜೆ ೫-೩೦ ಪಿ.ಆರ್. ಕೇಶವಮೂರ್ತಿ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಹಿಂದಿಗೀತೆ. ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ತಬಲ ೭-೧೫ ವನಿತಾ ವಿಹಾರ (ಹೆಂಗಸರಿಗಾಗಿ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಎಮ್. ಎಸ್. ಮೂರ್ತಿ (ಕಥಾಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಾದ್ಯ ಸಮ್ಮೇಳನ ೯-೪೫ ಗೀತವಿನ್ಯಾಸ ೧೦-೦ ಮುಕ್ತಾಯ.

ರಣಜಿತ್
8-12-50 ರಿಂದ ಅಮೋಘ ೨ ನೇ ವಾರ
ದಿನವಹಿ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಭಾಯಿ ಬಹೆನ್
(ಸಹೋದರ ಸಹೋದರಿ)
ಪಾತ್ರ :
ಗೀತಾಬಾಲಿ, ಪ್ರೇಮ್ ಅದೀಬ್, ನಿರೂಪರಾಯ್, ಕಕ್ಕೂ, ಗೋಪ್
ಬೆಳಗಿನ ಪ್ರದರ್ಶನ 8-12-50 ರಿಂದ
3 ದಿನ ಮಾತ್ರ
ಝೂಲ
ಪಾತ್ರ :-ಅಶೋಕ್‌ಕುಮಾರ್ ಲೀಲಾಚಿಟ್ನೀಸ್

ಒಲಂಪಿಯಾ
7-12-50 ರಿಂದ ಅಮೋಘ 2 ನೇವಾರ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀಕೃಷ್ಣ
ಪಾತ್ರ-ಸಾಹುಮೋದಕ್ ಸುಲೋಚನ ಚಟರ್ಜಿ
ಬೆಳಗಿನ ಪ್ರದರ್ಶನ 8-12-50 ರಿಂದ
ಶಾಮ್ ಸವೇರಾ
ಪಾತ್ರ:—ವಾಸ್ತಿ; ಸ್ವರ್ಣಲತಾ

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೯—೧೨—೧೯೫೦ ನೇ ಶನಿವಾರ [ಸಂಚಿಕೆ ೮೪

ಮೈಸೂರಿನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸಲು ಶ್ರೀ. ವಿ. ಪಿ. ಮೆನನ್ನರ ಆಗಮನ

ಅಪಾದನೆ

ಅಮೇರಿಕಾ ಮತ್ತು ಫ್ರೆಂಚ್ ಸೈನ್ಯಗಳು ಚೈನಾದ ಮೇಲೆ ಅನೇಕ ಬಾರಿ ಧಾಳಿ ನಡೆಸಿವೆಯೆಂದು ಚೈನಾ ಪ್ರತಿನಿಧಿಗಳು ವಿಶ್ವಸಂಸ್ಥೆಯಲ್ಲಿ ಆಪಾದಿಸಿರುವರು.

ಸ್ಥಿತಿಯು ಅಪಾಯಕರವಾಗಿದೆ

ಕೊರಿಯಾದಲ್ಲಿ ಸ್ಥಿತಿಯು ಅತ್ಯಂತ ಅಪಾಯಕರವಾಗಿದೆಯೆಂದು ಕೊರಿಯಾಕ್ಕೆ ಪ್ರಯಾಣಮಾಡಿರುವ ಅಮೆರಿಕಾದ ಜನರಲ್ ಕಾಲಿನ್ಸ್‌ರವರು ಹೇಳಿದ್ದಾರೆ.

ಕುಮಾರಿ-ಶ್ರೀಮತಿ

ವಿವಾಹವಿಲ್ಲದವರಿಗೆ ಕುಮಾರಿ ಮತ್ತು ವಿವಾಹವಾದ ಮಹಿಳೆಯರಿಗೆ ಶ್ರೀಮತಿಯೆಂದು ಸರ್ಕಾರೀ ಕಾಗದ ಪತ್ರಗಳಲ್ಲಿ ಉಪಯೋಗಿಸಬೇಕೆಂದು ಮದರಾಸು ಸರ್ಕಾರವು ಆಜ್ಞೆಮಾಡಿದೆ.

ಗುಂಡು ಹಾರಿಸುವುದನ್ನು ನಿಲ್ಲಿಸಿ

ಕೊರಿಯಾ ಪರಿಸ್ಥಿತಿ ಉಲ್ಬಣವಾಗುತ್ತಲಿರುವುದರಿಂದ ವಿಶ್ವಸಂಸ್ಥೆಯು ಸೀಸ್‌ಫೈರ್ ಆಜ್ಞೆಯನ್ನು ಕೂಡಲೇ ಮಾಡಬೇಕೆಂದು ಭಾರತದ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಹೇಳಿರುವುದಾಗಿ ವರದಿಯಾಗಿದೆ.

ಮಿ॥ ಅಟ್ಲೀ ಹಿಂತಿರುಗಿದರು

ಅಧ್ಯಕ್ಷ ಟ್ರೂಮನ್ನರೊಡನೆ ತನ್ನ ಮಾತುಕಥೆಗಳು ಮುಗಿದುದರ ಪರಿಣಾಮವಾಗಿ ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲೀಯವರು ಬ್ರಿಟನ್ನಿಗೆ ಹಿಂತಿರುಗಿರುವರು. ನಿನ್ನೆ ಅವರು ವಾಷಿಂಗ್ಟನ್ನಿಂದ ನ್ಯೂಯಾರ್ಕಿಗೆ ಪ್ರಯಾಣ ಬೆಳಸಿದರು. ಲೇಕ್‌ಸಕ್‌ಸೆಸ್ಸಿಗೆ ಪ್ರಯಾಣಮಾಡಿ ವಿಶ್ವಸಂಸ್ಥೆಯ ಅಧಿವೇಶನವನ್ನು ವೀಕ್ಷಿಸಿ ಅಲ್ಲಿಂದ ಕೆನಡಾ ಮಂತ್ರಿಗಳನ್ನು ನೋಡಲು ಅಟ್ವಾವಿಗೆ ಭೇಟಿ ಈಯುವರು.

ಅಂಗಡಿಗೆ ಬೆಂಕಿ

ಹಳ್ಳದಕೇರಿಯಲ್ಲಿರುವ ಶ್ರೀ ಚಿನ್ನಪ್ಪ ಎಂಬುವವರ ಸೈಕಲ್‌ಷಾಪಿಗೆ ನಿನ್ನೆ ರಾತ್ರಿ ಬೆಂಕಿಬಿದ್ದು ಒಳಗಿದ್ದ ಸೈಕಲ್ ಸಾಮಾನುಗಳೆಲ್ಲವೂ ನಾಶವಾದವು. ಫೈರು ಇಂಜನ್ನು ಬಂದು ಬೆಂಕಿಯನ್ನು ಆರಿಸಲಾಯಿತು. ಶುಕ್ರವಾರ ಪೂಜೆಮಾಡಿ ಎಣ್ಣೆ ದೀಪವನ್ನು ಹಾಗೆಯೇ ಬಿಟ್ಟುಹೋಗಿದ್ದು, ಹತ್ತಿರವಿದ್ದ ಕೆಲವು ಕಾಗದಗಳಿಗೆ ಬೆಂಕಿತಗುಲಿ ಅದರಿಂದ ಬೆಂಕಿ ಹರಡಿತೆಂದು ತಿಳಿಯಲಾಗಿದೆ.

ಅಂತ್ಯ ಸಂಸ್ಕಾರ

ಮಹರ್ಷಿ ಅರವಿಂದೋರವರ ಅಂತ್ಯಕ್ರಿಯೆಯು ಇಂದು ಸಂಜೆ ೫ ಗಂಟೆಗೆ ನಡೆಯುವುದು.

ನಿಧನ

ಮೈಸೂರು ಡಿವಿಜನ್ನಿನ ಪೋಸ್ಟಲ್ ಸೂಪರಿಂಟೆಂಡೆಂಟ್ ಶ್ರೀ ಎಸ್. ರಾಘವನ್‌ರವರ ಪತ್ನಿ ಶ್ರೀಮತಿ ರಂಗನಾಯಕಿಯವರು ನಿನ್ನೆ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೩೮ ವರ್ಷ ವಯಸ್ಸಾಗಿ ಕೆಲವು ತಿಂಗಳಿಂದ ಖಾಯಿಲೆಯಿದ್ದರೆಂದು ತಿಳಿಯಬರುತ್ತದೆ.

ಪ್ರಸಿದ್ಧ ವಿಜ್ಞಾನಿ ಡಾ॥ ವಿಲಿಯಮ್ಸ್

ಪ್ರಸಿದ್ಧ ವಿಜ್ಞಾನಿ ಡಾ॥ ವಿಲಿಯಮ್ಸ್‌ರವರು ನಿನ್ನೆ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿಯಿತ್ತು ಅಲ್ಲಿಯ ಕೆಲಸಕಾರ್ಯಗಳನ್ನು ನೋಡಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಸಂಶೋಧನಾಲಯದ ಮುಖ್ಯಾಧಿಕಾರಿ ಡಾ॥ ವಿ. ಸುಬ್ರಹ್ಮಣ್ಯಂರವರು ಆಹಾರ ವಿಷಯದಲ್ಲಿ ಸಂಶೋಧನಾಲಯ ಮಾಡಿರುವ ಕೆಲಸಕಾರ್ಯಗಳನ್ನು ಡಾ॥ ವಿಲಿಯಮ್ಸ್‌ರವರಿಗೆ ತೋರ್ಪಡಿಸಿದರು. ಡಾ॥ ವಿಲಿಯಮ್ಸ್‌ರವರು ತಾವು ಸಂಶೋಧನೆ ನಡೆಸಿರುವ ವಿಟಮಿನ್ ಬಿ (1) ವಿಷಯವಾಗಿ ಮಾತನಾಡುತ್ತ ದೇಹದ ಬೆಳವಣಿಗೆಗೆ ಇದು ಅತ್ಯುತ್ತಮವಾದುದೆಂದೂ ಅದರಲ್ಲೂ ಮಕ್ಕಳಿಗೆ ಇದರ ಸೇವನೆಯಿಂದ ಪುಷ್ಟಿಯುಂಟಾಗುವುದೆಂದೂ ಹೇಳಿದರು. ಅಕ್ಕಿಯನ್ನು ತಿನ್ನುವ ಪ್ರಾಂತ್ಯಗಳಲ್ಲಿ ವಿಶೇಷವಾಗಿ ಬೆರಿಬೆರಿ ಎಂಬ ರೋಗವು ಹರಡುತ್ತಿದೆಯೆಂದೂ ಅದರ ನಿವಾರಣೆಗೆ ಈ ಬಿ (1) ವಿಟಮಿನ್ ಉಪಯೋಗ ಮಾಡುವುದು ಉತ್ತಮವೆಂದೂ ತಿಳಿಸಿದರು. ಇಂದಿನ ಸ್ಥಿತಿಯಲ್ಲಿ ಈ ವಿಟಮಿನ್ನನ್ನು ಭಾರತದಲ್ಲಿ ತಯಾರಿಸಲು ವಿಶೇಷ ದ್ರವ್ಯವೆಚ್ಚವಾಗುವುದರಿಂದ ಸಾಧ್ಯವಿಲ್ಲವೆಂದೂ ಹೇಳಿದರು. ಡಾ॥ ಸುಬ್ರಹ್ಮಣ್ಯಂರವರು ಮಾತನಾಡುತ್ತ ಹಣವು ಎಷ್ಟು ವೆಚ್ಚವಾದರೂ ಈ ವಿಟಮಿನ್ನನ್ನು ನಾವು ತಯಾರಿಸಲು ಈಗ ಪ್ರಯತ್ನಪಟ್ಟಲ್ಲಿ ಮುಂದೆ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಿ ವೆಚ್ಚವು ಕಡಮೆಯಾಗುವಂತೆ ಮಾಡಬಹುದೆಂದು ಅಭಿಪ್ರಾಯಪಟ್ಟರು.

ಮಾನವನ ಹಕ್ಕುಗಳ ದಿನಾಚರಣೆ

ಮೈಸೂರು ಡಿ ೯

ಮಾನವನ ಹಕ್ಕುಗಳ ದಿನಾಚರಣೆ (Human Rights Day) ಯು ಇದೇ ತಿಂಗಳು ೧೦ನೇ ತಾ॥ ಭಾನುವಾರ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಆಚರಿಸಲ್ಪಡುವುದು. ಶ್ರೀಗಳಾದ ಎಂ. ಎ. ದೊರೆಸ್ವಾಮಯ್ಯಂಗಾರ್, ಸಿ. ಡಿ. ನರಸಿಂಹಯ್ಯ, ರೇ ಫಾದರ್ ಕ್ರಂಪ್‌ರವರು ಭಾಷಣಮಾಡುವರು.

ಮಹಾರಾಜಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮತಿ ಸುಂದರಿಕೃಷ್ಣಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಸನ್ಮಾನ

'ಗಾನವಾಹಿನಿ' ಮಾಸಪತ್ರಿಕೆಯ ಸಂಪಾದಕರೂ, ಮೈಸೂರು ಸಂಸ್ಥಾನ ಸಂಗೀತ ಪರಿಷತ್ತಿನ ಕಾರ್ಯದರ್ಶಿಗಳೂ ಆದ ವಿದ್ವಾನ್ ಕೆ. ಎಸ್. ಚಂದ್ರಶೇಖರಯ್ಯನವರಿಗೆ ದ್ವಾರಕಾ ಮಠಾಧಿಪತಿಗಳಾದ ಜಗದ್ಗುರು ಶಂಕರಾಚಾರ್ಯರವರು 'ಗಾನಕಲಾ ಸೇವಾಸಕ್ತ' ಎಂಬ ಬಿರುದು ಪಾಲಿಸಿ ಸನ್ಮಾನಿಸಿರುತ್ತಾರೆ.

ಮಂತ್ರಿಮಂಡಲ ಬದಲಾವಣೆಗೆ ಇದು ಶುಭಸೂಚನೆಯೆ ?

ಶ್ರೀ. ಕೆ. ಸಿ. ರೆಡ್ಡಿಯವರ ಮಂತ್ರಿಮಂಡಲದ ಮೇಲೆ ಅವಿಶ್ವಾಸವನ್ನು ಸೂಚಿಸಿ, ಹೊಸ ನಾಯಕರನ್ನು ಚುನಾಯಿಸಿಕೊಂಡು ಬೇರೆ ಮಂತ್ರಿಮಂಡಲವನ್ನೇರ್ಪಡಿಸಲು ನಡೆಯುತ್ತಲಿರುವ ವಿಷಯದ ಸಂಬಂಧವಾಗಿ ಶ್ರೀ. ಕೆ. ಸಿ. ರೆಡ್ಡಿಯವರು ತಮ್ಮ ಪಕ್ಷದ ಕೆಲವು ಸದಸ್ಯರೊಡನೆ ಇನ್ನೂ ಸಮಾಲೋಚನೆ ನಡೆಸುತ್ತಲಿರುವರೆಂದೂ ತಮ್ಮ ವಿರೋಧಪಕ್ಷದವರಿಗೆ ಯಾವ ರೀತಿಯಾದ ಉತ್ತರವನ್ನು ಕೊಟ್ಟಿಲ್ಲವೆಂದೂ ತಿಳಿಯಬರುತ್ತದೆ. ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಹನುಮಂತಯ್ಯನವರು ಬೆಂಗಳೂರಿಗೆ ಹಿಂತಿರುಗಿ ಮೈಸೂರಿನ ಬಿಕ್ಕಟ್ಟನ್ನು ಬಗೆಹರಿಸಲು ಯತ್ನಿಸುವುದಾಗಿ ಹೇಳಿರುವರು. ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟು ಮತ್ತು ಸಮರಸತೆ ಮುಖ್ಯ ಮುಖ್ಯಮಂತ್ರಿ ಯಾರೆಂಬುದು ಎರಡನೇ ಪ್ರಶ್ನೆ ಎಂದು ಹೇಳಿರುವ ವಿಷಯದಲ್ಲಿ, ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟನ್ನುಂಟುಮಾಡಲು ಈಗಿನ ಮಂತ್ರಿಮಂಡಲವನ್ನು ಬದಲಾಯಿಸುವುದೇ ಮೊದಲನೆಯ ಮಾರ್ಗವೆಂದೂ ಅದೇ ಧ್ಯೇಯದಿಂದ ಶ್ರೀ ಹನುಮಂತಯ್ಯನವರು ಕೆಲಸಮಾಡುವರೆಂದೂ ಕಾಂಗ್ರೆಸ್ ಮುಂದಾಳುಗಳು ಅಭಿಪ್ರಾಯಪಡುತ್ತಲಿದ್ದಾರೆ.

ಸಂಸ್ಥಾನ ರಾಜಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್ನರು ಸಹ ಇಂದಿನ ಬಿಕ್ಕಟ್ಟನ್ನು ಪರಿಹಾರಮಾಡುವುದಕ್ಕಾಗಿಯೇ ಬರುವರೆಂದೂ ಅವರ ಬರುವಿಕೆಯಿಂದ ಸುಸೂತ್ರವಾಗಿ ಕಾರ್ಯಗಳು ನಡೆದು ಈಗಿನ ಕಾಂಗ್ರೆಸ್ ಮಂತ್ರಿಮಂಡಲವನ್ನು ಬದಲಾಯಿಸಲು ಸಹಕಾರಿಯಾಗುವುದೆಂದೂ ಅನೇಕ ಕಾಂಗ್ರೆಸ್ಸಿಗರು ಅಭಿಪ್ರಾಯಪಡುತ್ತಲಿದ್ದಾರೆ.

ಏನಾಗಲೂ ಮಾಡಿ ಈ ಪತ್ರವನ್ನು ವಿರೋಧ ಪಕ್ಷದವರು ಹಿಂದಕ್ಕೆ ತೆಗೆದುಕೊಳ್ಳಲೆಂದು ಶ್ರೀ. ರೆಡ್ಡಿಯವರು ಶ್ರಮಿಸುತ್ತಲಿರುವರೆಂದೂ ಅದು ಅಸಾಧ್ಯ ವಿಷಯವೆಂದೂ ಈಗಿನ ಮಂತ್ರಿಮಂಡಲ ಬದಲಾವಣೆಯಾಗಲೇಬೇಕೆಂದು ಬಹುಮತ ಕಾಂಗ್ರೆಸ್ಸಿಗರ ಮತ್ತು ಜನತೆಯ ಅಭಿಪ್ರಾಯವಿರುವುದರಿಂದ ಬೇರೆಯವರ ನಾಯಕತ್ವದಲ್ಲಿ ಹೊಸ ಮಂತ್ರಿಮಂಡಲವು ಸ್ಥಾಪನೆಯಾಗುವುದು ಖಂಡಿತವೆಂದು ಹೇಳಲಾಗುತ್ತಲಿದೆ.

ಮಂತ್ರಿಮಂಡಲ ಬದಲಾವಣೆಯನ್ನು ಜನರ ಸ್ಥಿತಿಗತಿಗಳಲ್ಲಿ ಮಾರ್ಪಾಟಾಗಬಹುದೆಂದು ಕೆಲವು ಜನರು ಮಂತ್ರಿಮಂಡಲ ಬದಲಾವಣೆಯಾದ ಮಾತ್ರಕ್ಕೆ ಅನ್ನ, ಬಟ್ಟೆ, ಜೀವನ ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲವಾದ್ದರಿಂದ ಯಾರು ಮಂತ್ರಿಗಳಾದರೆ ನಮಗೇನು ಎಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಲಿದ್ದಾರೆ.

ಚೈನಾ ಪ್ರತಿನಿಧಿಯೊಡನೆ ಭೇಟಿ

ಚೈನಾ ಪ್ರತಿನಿಧಿಗಳನ್ನು ಭಾರತ ರಾಯಭಾರಿಣಿ ಶ್ರೀಮತಿ ವಿಜಯಲಕ್ಷ್ಮಿಯವರು ಭೇಟಿ ಮಾಡಿದ್ದರು

ದೊರೆಗಳೊಡನೆ ಮಂತ್ರಿಗಳ ಭೇಟಿ

ನೇಪಾಳದ ದೊರೆಗಳನ್ನು ನಿನ್ನೆ ಭಾರತಕ್ಕೆ ನೇಪಾಳ ಪ್ರತಿನಿಧಿಗಳಾಗಿ ಬಂದಿರುವ ನೇಪಾಳ ಸರ್ಕಾರದ ವಿದೇಶಾಂಗ ಮಂತ್ರಿ ಮತ್ತು ವಾರ್ತಾ ಶಾಖಾ ಸೆಕ್ರಿಟರಿ ಜನರಲ್‌ರವರು ಭೇಟಿಮಾಡಿದ್ದರು.

ರಣಜಿತ್
8-12-50 ರಿಂದ ಅನೋಖ ೨ ನೇ ವಾರ
ದಿನವಹಿ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಭಾಯಿ ಬಹೆನ್
(ಸಹೋದರ ಸಹೋದರಿ)
ಪಾತ್ರ .
ಗೀತಾಬಾಲಿ, ಪ್ರೇಮ್ ಆದೀಬ್, ನಿರೂಪ
ರಾಯ್, ಕಕ್ಕೂ, ಗೋಪ್
ಬೆಳಗಿನ ಪ್ರದರ್ಶನ 8-12-50 ರಿಂದ
3 ದಿನ ಮಾತ್ರ
ಝೂಲ
ಪಾತ್ರ .-ಅಶೋಕ್ ಕುಮಾರ್ ಲೀಲಾಚಿಟ್ನೀಸ್

ಒಲಂಪಿಯಾ
7-12-50 ರಿಂದ ಅನೋಖ 2 ನೇವಾರ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀ ಕೃಷ್ಣ
ಪಾತ್ರ-ಸಾಹುಮೋದಕ್ ಸುಲೋಚನ ಚಟರ್ಜಿ
ಬೆಳಗಿನ ಪ್ರದರ್ಶನ 8-12-50 ರಿಂದ
ಶಾಮ್ ಸವೇರಾ
ಪಾತ್ರ:—ವಾಸ್ತಿ, ಸ್ವರ್ಣಲತಾ

ಉತ್ತರವಿಲ್ಲ

೩೮ನೇ ಅಕ್ಷಾಂಶವನ್ನು ಚೈನಾಪಡೆಗಳು ದಾಟಬಾರದೆಂದು ೧೩ ರಾಷ್ಟ್ರಗಳು ಸಹಿಮಾಡಿ ಕಳುಹಿಸಿದ್ದ ಮನವಿಗೆ ಚೈನಾವು ಇನ್ನೂ ಏನೂ ಉತ್ತರಕೊಟ್ಟಿಲ್ಲ. ಉತ್ತರಬಾರದಿರುವುದು ಚಿಂತೆಯನ್ನುಂಟುಮಾಡಿದೆ. ಅಲ್ಲದೆ ಉತ್ತರ ಬರುವ ನಿರೀಕ್ಷಣೆಯೂ ಕಾಣಬರುತ್ತಿಲ್ಲವೆಂದು ಹೇಳಲಾಗಿದೆ.

ಅಟ್ಲೀ-ಟ್ರೂಮನ್ ಮಾತುಕಥೆ ಮುಕ್ತಾಯ

ಅಧ್ಯಕ್ಷ ಟ್ರೂಮನ್ ಮತ್ತು ಅಟ್ಲೀಯವರ ಮಾತುಕಥೆಗಳೆಲ್ಲವೂ ಮುಗಿದು ಸಂಯುಕ್ತ ಪ್ರಕಟಣೆಯು ವಾಷಿಂಗ್‌ಟನ್ನಿನಲ್ಲಿ ಹೊರಬಿದ್ದಿದೆ.

ಪ್ರಪಂಚದಲ್ಲಿ ಶಾಂತಿಸ್ಥಾಪನೆಗಾಗಿ ಉಭಯರಾಷ್ಟ್ರಗಳೂ ಇತರ ಸಕಲ ರಾಷ್ಟ್ರಗಳ ಸಹಾಯದಿಂದ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು. ಫಾರ್ಮೋಸಾ ವಿಷಯವನ್ನು ಶಾಂತರೀತಿಯಲ್ಲಿ ತೀರ್ಮಾನಿಸಬೇಕು ಉಭಯ ರಾಷ್ಟ್ರಗಳೂ ತಮ್ಮ ಸೇನಾಬಲವನ್ನು ಹೆಚ್ಚಿಸಿಕೊಳ್ಳಬೇಕು ಈ ಸಂಬಂಧದಲ್ಲಿ ಬೇಕಾಗುವ ಸಲಕರಣೆಗಳಿಗೆ ಕಚ್ಚಾ ಸಾಮಾನನ್ನು ಉಭಯತ್ರರೂ ಸರಬರಾಜು ಮಾಡಿಕೊಳ್ಳಲು ತಕ್ಕ ಸಹಾಯವನ್ನು ಪಡೆಯಬೇಕು. ಎಂದು ೧೦ ಅಂಶಗಳ ಯೋಜನೆಗಳು ಈ ಪ್ರಕಟಣೆಯಲ್ಲಿವೆ.

ಚೈನಾ ಪ್ರಜಾಸರ್ಕಾರಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯಕೊಡುವ ವಿಷಯದಲ್ಲಿ ಮಾತ್ರ ಅವರಲ್ಲಿ ಭಿನ್ನಾಭಿಪ್ರಾಯವುಂಟಾಗಿ ಆ ವಿಷಯದಲ್ಲಿ ತೀರ್ಮಾನಕ್ಕೆ ಬರಲಿಲ್ಲ

ಬ್ರಿಟಿಷ್ ಪ್ರಧಾನಿ ಚೈನಾಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯಕೊಡಬೇಕೆಂದೂ ಅಧ್ಯಕ್ಷ ಟ್ರೂಮನ್ನರು ಅದು ಸಾಧ್ಯವಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿ ತಿಳಿಯಬಂದಿದೆ

ಅಟಂಬಾಂಬನ್ನು ಉಪಯೋಗಿಸುವ ವಿಷಯದಲ್ಲಿ ಅಧ್ಯಕ್ಷ ಟ್ರೂಮನ್ನರು ಅಟಂಬಾಂಬನ್ನು ಉಪಯೋಗಿಸುವ ಸಮಯವು ಒದಗದಿರಲೆಂದು ಆಶಿಸುವುದಾಗಿಯೂ ಆಗಿಂದಾಗ್ಗೆ ಪರಿಸ್ಥಿತಿಯನ್ನು ಬ್ರಿಟಿಷ್ ಪ್ರಧಾನಿಗೆ ತಿಳಿಸುವುದಾಗಿ ಹೇಳಿದರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೧೦ ಭಾನುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ. ೭-೩೦ ಮಿಶ್ರಮಾಧುರ್ಯ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ನಾಗಸ್ವರ. ೧-೫೦ ನಾವು ಮತ್ತು ನಮ್ಮವರು ೨-೦ ನಿಮ್ಮ ಮೆಚ್ಚಿನ ಹಾಡುಗಳು (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಎಮ್. ಬಿ. ಕೌಶಲ್ಯ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ವಾದ್ಯ ಸಮ್ಮೇಳನ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ (ಹಿಂದಿ). ೭-೫ ಚಿತ್ರಲೋಕ (ರಿ) ೭-೩೦ ಎಮ್. ಬಿ. ಕೌಶಲ್ಯ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಸಂಗೀತ. ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಬಿ. ಎಮ್. ಶ್ರೀಕಂಠಯ್ಯನವರು ಬರೆದ 'ಅಶ್ವತ್ಥಾಮನ್' ಎಂಬ ನಾಟಕ ೧೦-೦ ಮುಕ್ತಾಯ.

ಡಿಸೆಂಬರ್ ೧೧ ಸೋಮವಾರ

ಬೆಳಗ್ಗೆ ೭-೧೫ ಸುಪ್ರಭಾತ ಕಾರ್ಯಕ್ರಮ ವಿವರಣೆ. ೭-೨೦ ಚಿತ್ರಸಂಗೀತ (ರಿ) ೭-೩೫ ಪಕ್ಷಿನೋಟ. ೭-೪೫ ಕನ್ನಡದಲ್ಲಿ ವಾರ್ತೆ ೮ ೦ ಇಂಗ್ಲೀಷಿನಲ್ಲಿ ವಾರ್ತೆ. ೮ ೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಗಿಟಾರ್ ೧-೪೫ ಹಿಂದಿ ಶಿಕ್ಷಣ. ೨-೦ ಜನರಂಜಿನಿ (ರಿ) ೨ ೧೫ ವಾದ್ಯಸಮ್ಮೇಳನ ೨-೩೦ ಮುಕ್ತಾಯ

ಸಂಜೆ ೫-೩೦ ಎಸ್. ಶಂಕರನಾರಾಯಣಶಾಸ್ತ್ರಿ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಗಾನವಿಹಾರ (ಸಂಗೀತ ಪಾಠ) ೬-೩೦ ಸ್ಥಳೀಯ ಪ್ರಕಟಣೆ ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಭಾರತ ಕಿ ಗೀತ್ (ಹಿಂದಿಯಲ್ಲಿ ಭಾಷಣ) ೭-೧೫ ಎಸ್ ಶಂಕರನಾರಾಯಣಶಾಸ್ತ್ರಿ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಕೆ. ಆರ್. ಗಣಪತಿ (ರಿ) ೮-೧೫ ಇಂಗ್ಲೀಷಿನಲ್ಲಿ ಭಾಷಣ ೮-೩೦ ಹೆಚ್. ವಿ. ವೆಂಕಟರಾಮಯ್ಯ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಹೆಚ್. ವಿ ವೆಂಕಟರಾಮಯ್ಯ (ಸಂಗೀತ) ೧೦-೦ ಮುಕ್ತಾಯ.

FOR SALE :
One Oliver No. 9 Brief size
Pica types Typewriter
in Excellent condition
THE TOURIST BUREAU,
Lansdowne Buildings, Mysore

ನ್ಯೂ ಅಪೆರಾ
ತಾ॥ ೯-೧೨-೫೦ ರಿಂದ ದಿನವಹಿ ೩ ಆಟಗಳು
★ ಭಾರತಿ ★
(ಕನ್ನಡ)
ಅಭಿನಯ—ಸಂಪತ್-ಮರಿರಾವ್, ರಾಜಕುಮಾರಿ-ಸೂರ್ಯಕುಮಾರಿ, ಲಲಿತ-ಪದ್ಮಿನಿ.

ನಗರ ಕಾಂಗ್ರೆಸ್ ಸಮಿತಿಗೆ ಚುನಾವಣೆ

ಮೈಸೂರು ಡಿ. ೧೦

ರಾಜಧಾನಿಯ ನಗರ ಕಾಂಗ್ರೆಸ್ ಸಮಿತಿಗೆ ಈ ಕೆಳಗೆ ಕಂಡವರು ಚುನಾಯಿತರಾಗಿರುತ್ತಾರೆ.

೧ನೇ ವಾರ್ಡಿನಿಂದ ಶ್ರೀಗಳಾದ ಕೆ. ಎಸ್. ಸೂರ್ಯನಾರಾಯಣರಾವ್, ಎಂ. ಎನ್. ಜೋಯಿಸ್ ಮತ್ತು ಈಶ್ವರರಾವ್.

೨ನೇ ವಾರ್ಡಿನಿಂದ ಶ್ರೀಗಳಾದ ಎ ಶಿವಣ್ಣ ಶ್ರೀಮತಿ ಸುನಂದಮ್ಮ, ಎಂ. ಆರ್. ಸಿ ಬಸಪ್ಪ.

೩ನೇ ವಾರ್ಡಿಗೆ ಶ್ರೀ ಟಿ ವೆಂಕಟರಮಣಯ್ಯ, ಎನ್. ರಾಚಯ್ಯ ಮತ್ತು ಎ. ಕೃಷ್ಣಮೂರ್ತಿರಾಯರು

ನಗರ ಕಾಂಗ್ರೆಸ್ ಸಮಿತಿಯನ್ನು ಮೊನ್ನೆ ಸಂಜೆ ರಚಿಸಲಾಯಿತು ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷರಾಗಿಯೂ, ಬಿ ನಾರಾಯಣಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ಎಸ್. ಸೂರ್ಯನಾರಾಯಣರಾವ್ ಮತ್ತು ಟಿ. ವೆಂಕಟರಮಣಯ್ಯನವರು ಕಾರ್ಯದರ್ಶಿಗಳಾಗಿಯೂ ಶ್ರೀ ಎಂ ಆರ್. ಸಿ ಬಸಪ್ಪನವರು ಖಜಾಂಚಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ.

ವಾರ್ಡು ಸಮಿತಿಗಳಿಗೆ ಅಧಿಕಾರಿ ವರ್ಗವನ್ನು ಈ ರೀತಿ ಚುನಾಯಿಸಲಾಗಿದೆ: ೧ನೇ ವಾರ್ಡಿಗೆ ಶ್ರೀ ಅಗರಂ ರಂಗಯ್ಯನವರು ಅಧ್ಯಕ್ಷರು, ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರು ಕಾರ್ಯದರ್ಶಿ; ೨ನೇ ವಾರ್ಡಿಗೆ ಶ್ರೀ ಕೆ. ಪುಟ್ಟಸ್ವಾಮಿ ಅಧ್ಯಕ್ಷರು, ಶ್ರೀ ಬಿ ಎಸ್ ಉಪಾಧ್ಯ ಕಾರ್ಯದರ್ಶಿ ಮತ್ತು ೩ನೇ ವಾರ್ಡಿಗೆ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷರು ಮತ್ತು ಶ್ರೀ ಟಿ. ರಾಜ್ ಕಾರ್ಯದರ್ಶಿ.

ಹೆಚ್ಚಿಗೆ ಆಹಾರ ಧಾನ್ಯ

೧೯೫೧-೫೨ ನೇ ಸಾಲಿಗೆ ೧,೪೨,೦೦೦ ಟನ್ ಆಹಾರ ಧಾನ್ಯವನ್ನು ಒದಗಿಸಬೇಕೆಂದು ಮೈಸೂರು ಸರ್ಕಾರವು ಕೇಂದ್ರ ಸರ್ಕಾರವನ್ನು ಕೇಳಲಿದೆಯೆಂದು ತಿಳಿಯಬರುತ್ತದೆ.

ಒಲಂಪಿಯಾ
7-12-50 ರಿಂದ ಅಮೋಘ 2 ನೇವಾರ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀ ಕೃಷ್ಣ

ಶ್ರೀಮನ್ಮಹಾರಾಜರಿಂದ ಪ್ರಾರಂಭೋತ್ಸವ

ಮೈಸೂರು ಡಿ. ೧೦

ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ನಿನ್ನೆ ಸಂಜೆ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದ್ದರು. ಪ್ರಭುಗಳು ಈ ಕೆಳಗೆ ಕಂಡ ಕಾರ್ಯಕ್ರಮಗಳನ್ನು ನೆರವೇರಿಸಲು ಒಪ್ಪಿರುವುದಾಗಿ ತಿಳಿದುಬಂದಿದೆ:—ಜನವರಿ ೧೮ನೇ ತಾ|| ಚುಂಚನಕಟ್ಟೆ ಸೇತುವೆಯ ಶಂಕುಸ್ಥಾಪನೆ; ೧೯ನೇ ತಾ|| ಟಿ. ನರಸೀಪುರದ ಗ್ರಾಮವಿದ್ಯೋದಯ ಸ್ಕೂಲ್ ಕಟ್ಟಡದ ಆರಂಭೋತ್ಸವ; ೨೬ನೇ ತಾ|| ಬನ್ನೂರು ಬಳಿ ಕಾವೇರಿ ನದಿ ಸೇತುವೆಯ ಶಂಕುಸ್ಥಾಪನೆ; ೨೮ನೇ ತಾ|| ಹೆ. ಕೋಟೆ ತಾ|| ಕುಂಬಸೋಗೆ ಸೇತುವೆಯ ಆರಂಭೋತ್ಸವ

ದೊರೆಸ್ವಾಮಿಶಾಸ್ತ್ರಿಯವರ ಉಪನ್ಯಾಸ

ರಾಜಧಾನಿಯ ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ ಭಾರತದ ಸಂಸ್ಕೃತಿಯ ಬಗ್ಗೆ ಮದರಾಸಿನ ವಿದ್ಯಾಭೂಷಣ ಶ್ರೀ ಎಸ್ ಆರ್. ದೊರೆಸ್ವಾಮಿ ಶಾಸ್ತ್ರಿಗಳವರಿಂದ ಏರ್ಪಡಿಸಿರುವ ಮೂರು ಉಪನ್ಯಾಸಗಳ ಪೈಕಿ ಇಂದು ಸಂಜೆ ೬ ಗಂಟೆಗೆ ಶ್ರೀಯುತರಿಂದ "ಮಹಾಭಾರತದಲ್ಲಿ ಶ್ರೀ ಕೃಷ್ಣ" ಎಂಬ ವಿಷಯದ ಮೇಲೆ ಟೌನ್ ಹಾಲಿನಲ್ಲಿ ಭಾಷಣವನ್ನು ಏರ್ಪಡಿಸಲಾಗಿದೆ

ರಣಜಿತ್
8-12-50 ರಿಂದ ಅಮೋಘ ೨ ನೇ ವಾರ
ದಿನವಹಿ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಭಾಯಿ ಬಹೆನ್
(ಸಹೋದರ ಸಹೋದರಿ)
ಪಾತ್ರ:
ಗೀತಾಬಾಲಿ, ಪ್ರೇಮ್ ಅದೀಬ್, ನಿರೂಪ ರಾಯ್, ಕಕ್ಕೂ, ಗೋಪ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೧೨ ಮಂಗವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ ೭-೩೦ ಎಸ್. ಎನ್. ನಾಗಮಣಿ (ಸಂಗೀತ) ೭,೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ಕೊಳಲು ೧-೧೫ ಹಿಂದೀ ಶಿಕ್ಷಣ ೨-೦ ಎನ್. ಗುರುವಯ್ಯ (ಸಹರಾನಿ) ೨-೩೦ ಮುಕ್ತಾಯ.

ಸಂಜೆ ೫-೩೦ ಎಂ.ಎಸ್. ಸುಬ್ರಹ್ಮಣ್ಯಂ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬.೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ). ೭.೫ ಗುರುವಯ್ಯ (ಸಹರಾಯಿ) ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಎಂ. ಎಸ್. ಸುಬ್ರಹ್ಮಣ್ಯಂ (ಪಿಟೀಲು) ೮-೪೦ ವೃಂದ ಸಂಗೀತ ೯-೦ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನಾಮೃತ ೧೦-೦ ಮುಕ್ತಾಯ.

ಅಮೆರಿಕಾದಲ್ಲಿ ಜರೂರು ಸ್ಥಿತಿ ಘೋಷಣೆಯೇ:

ಅಮೆರಿಕಾದಲ್ಲಿ ಅತ್ಯಂತ ಜರೂರು ಪರಿಸ್ಥಿತಿಯುಂಟಾಗಿರುವುದೆಂದು ಅಧ್ಯಕ್ಷ ಟ್ರೂಮನ್ನರು ಘೋಷಿಸುವ ಆಲೋಚನೆಯಲ್ಲಿರುತ್ತಾರೆಂದು ರಕ್ಷಣಾಮಂತ್ರಿ ಜಾರ್ಜ್ ಮಾರ್ಷಲ್ ಹೇಳಿರುವರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಚುನಾವಣೆ

ಮೊನ್ನೆ ದಿನ ಜಿಲ್ಲಾ ಕಾಂಗ್ರೆಸ್ ಸಮಿತಿಗೆಯ ಚುನಾವಣೆ ನಡೆದು ಹುಣಸೂರು ತಾಲ್ಲೂಕಿನಿಂದ ಶ್ರೀಗಳಾದ ಎ ವಿ ಶ್ರೀನಿವಾಸಯ್ಯಂಗಾರ್ಯರ್ ಮತ್ತು ಹೆಚ್. ಆರ್. ಸೀತಾರಾಮಯ್ಯನವರೂ, ನಂಜನಗೂಡು ತಾಲ್ಲೂಕಿನಿಂದ ಶ್ರೀಗಳಾದ ಹೆಜ್ಜಿಗೆ ಲಿಂಗಣ್ಣ ಮತ್ತು ರಾಚಯ್ಯನವರೂ ಆರಿಸಲ್ಪಟ್ಟರು ಉಳಿದ ತಾಲ್ಲೂಕುಗಳಿಂದ ನಿಂತಿದ್ದ ಉಮೇದುವಾರರು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ನ್ಯೂ ಅಪೆರಾ
ತಾ|| ೯-೧೨-೫೦ ರಿಂದ ದಿನವಹಿ ೩ ಆಟಗಳು
★ ಭಾರತಿ ★
(ಕನ್ನಡ)
ಅಭಿನಯ—ಸಂಪತ್-ಮರಿರಾವ್, ರಾಜಕುಮಾರಿ-ಸೂರ್ಯಕುಮಾರಿ, ಲಲಿತ-ಪದ್ಮಿನಿ.

FOR SALE :
One Oliver No. 9 Brief size
Pica types Typewriter
in Excellent condition
THE TOURIST BUREAU,
Lansdowne Buildings, Mysore

ನಗರ ಕಾಂಗ್ರೆಸ್ ಸಮಿತಿಗೆ ಚುನಾವಣೆ

ಮೈಸೂರು ಡಿ. ೧೦

ರಾಜಧಾನಿಯ ನಗರ ಕಾಂಗ್ರೆಸ್ ಸಮಿತಿಗೆ ಈ ಕೆಳಗೆ ಕಂಡವರು ಚುನಾಯಿತರಾಗಿರುತ್ತಾರೆ.

೧ನೇ ವಾರ್ಡಿನಿಂದ ಶ್ರೀಗಳಾದ ಕೆ. ಎಸ್ ಸೂರ್ಯನಾರಾಯಣರಾವ್, ಎಂ ಎನ್. ಜೋಯಿಸ್ ಮತ್ತು ಈಶ್ವರರಾವ್.

೨ನೇ ವಾರ್ಡಿನಿಂದ ಶ್ರೀಗಳಾದ ಎ ಶಿವಣ್ಣ; ಶ್ರೀಮತಿ ಸುನಂದಮ್ಮ, ಎಂ. ಆರ್ ಸಿ ಬಸಪ್ಪ.

೩ನೇ ವಾರ್ಡಿಗೆ ಶ್ರೀ ಟಿ ವೆಂಕಟರಮಣಯ್ಯ, ಎ. ರಾಚಯ್ಯ ಮತ್ತು ಎ. ಕೃಷ್ಣಮೂರ್ತಿರಾಯರು

ನಗರ ಕಾಂಗ್ರೆಸ್ ಸಮಿತಿಯನ್ನು ಮೊನ್ನೆ ಸಂಜೆ ರಚಿಸಲಾಯಿತು ಶ್ರೀ ಎಸ್ [illegible] ಅಧ್ಯಕ್ಷರಾಗಿಯೂ, ಬಿ ನಾರಾಯಣಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ ಎಸ್. ಸೂರ್ಯನಾರಾಯಣರಾವ್ ಮತ್ತು ಟಿ ವೆಂಕಟರಮಣಯ್ಯನವರ ಕಾರ್ಯದರ್ಶಿಗಳಾಗಿಯೂ ಶ್ರೀ ಎಂ ಆರ್ ಸಿ ಬಸಪ್ಪನವರ ಖಜಾಂಚಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ

ವಾರ್ಡು ಸಮಿತಿಗಳಿಗೆ ಅಧಿಕಾರಿ ವರ್ಗವನ್ನು ಈ ರೀತಿ ಚುನಾಯಿಸಲಾಗಿದೆ.— ೧ನೇ ವಾರ್ಡಿಗೆ ಶ್ರೀ ಅಗರಂ ರಂಗಯ್ಯನವರು ಅಧ್ಯಕ್ಷರು, ಶ್ರೀ ಕೆ ಎಸ್. ಸೂರ್ಯನಾರಾಯಣರಾಯರು ಕಾರ್ಯದರ್ಶಿ, ೨ನೇ ವಾರ್ಡಿಗೆ ಶ್ರೀ ಕೆ ಪುಟ್ಟಸ್ವಾಮಿ ಅಧ್ಯಕ್ಷರು, ಶ್ರೀ ಬಿ ಎಸ್ ಉಪಾಧ್ಯ ಕಾರ್ಯದರ್ಶಿ ಮತ್ತು ೩ನೇ ವಾರ್ಡಿಗೆ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷರು ಮತ್ತು ಶ್ರೀ ಟಿ. ರಾಜನ್ ಕಾರ್ಯದರ್ಶಿ

ಹೆಚ್ಚಿಗೆ ಆಹಾರ ಧಾನ್ಯ

೧೯೫೧-೫೨ ನೇ ಸಾಲಿಗೆ ೧,೪೨,೦೦೦ ಟನ್ ಆಹಾರ ಧಾನ್ಯವನ್ನು ಒದಗಿಸಬೇಕೆಂದು ಮೈಸೂರು ಸರ್ಕಾರವು ಕೇಂದ್ರ ಸರ್ಕಾರವನ್ನು ಕೇಳಲಿದೆಯೆಂದು ತಿಳಿಯಬರುತ್ತದೆ

ಒಲಂಪಿಯಾ
7-12-50 ರಿಂದ ಅಮೋಘ ೨ ನೇ ವಾರ
ಪ್ರತಿ ದಿನ 3 ಆಟಗಳು
ಸಾಹುಮೋದಕ್, ಸುಲೋಚನ ಚಟರ್ಜಿ
ಪಾತ್ರವಹಿಸಿರುವ
ಭಗವಾನ್
ಶ್ರೀಕೃಷ್ಣ

ಶ್ರೀಮನ್ಮಹಾರಾಜರಿಂದ ಪ್ರಾರಂಭೋತ್ಸವ

ಮೈಸೂರು ಡಿ. ೧೦

ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ನಿನ್ನೆ ಸಂಜೆ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದ್ದರು ಪ್ರಭುಗಳು ಈ ಕೆಳಗೆ ಕಂಡ ಕಾರ್ಯಕ್ರಮಗಳನ್ನು ನೆರವೇರಿಸಲು ಒಪ್ಪಿರುವುದಾಗಿ ತಿಳಿದುಬಂದಿದೆ.—ಜನವರಿ ೧೮ನೇ ತಾ|| ಚುಂಚನಕಟ್ಟೆ ಸೇತುವೆಯ ಶಂಕುಸ್ಥಾಪನೆ; ೨೧ನೇ ತಾ|| ಟಿ. ನರಸೀಪುರದ ಗ್ರಾಮವಿದ್ಯೋದಯ ಹೈಸ್ಕೂಲ್ ಕಟ್ಟಡದ ಆರಂಭೋತ್ಸವ; ೨೬ನೇ ತಾ|| ಬನ್ನೂರು ಬಳಿ ಕಾವೇರಿ ನದಿ ಸೇತುವೆಯ ಶಂಕುಸ್ಥಾಪನೆ, ೨೮ನೇ ತಾ|| ಹೆ. ಕೋಟೆ ತಾ|| ತುಂಬಸೋಗೆ ಸೇತುವೆಯ ಆರಂಭೋತ್ಸವ

ದೊರೆಸ್ವಾಮಿಶಾಸ್ತ್ರಿಯವರ ಉಪನ್ಯಾಸ

ರಾಜಧಾನಿಯ ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ ಭಾರತದ ಸಂಸ್ಕೃತಿಯ ಬಗ್ಗೆ ಮದರಾಸಿನ ವಿದ್ಯಾಭೂಷಣ ಶ್ರೀ ಎಸ್ ಆರ್ ದೊರೆಸ್ವಾಮಿ ಶಾಸ್ತ್ರಿಗಳವರಿಂದ ಏರ್ಪಡಿಸಿರುವ ಮೂರು ಉಪನ್ಯಾಸಗಳ ಪೈಕಿ ಇಂದು ಸಂಜೆ ೬ ಗಂಟೆಗೆ ಶ್ರೀಯುತರಿಂದ "ಮಹಾಭಾರತದಲ್ಲಿ ಶ್ರೀ ಕೃಷ್ಣ" ಎಂಬ ವಿಷಯದ ಮೇಲೆ ಟೌನ್ ಹಾಲಿನಲ್ಲಿ ಭಾಷಣವನ್ನು ಏರ್ಪಡಿಸಲಾಗಿದೆ

ರಣಜಿತ್
8-12 50 ರಿಂದ ಅಮೋಘ ೨ ನೇ ವಾರ
ದಿನವಹಿ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ
ಭಾಯಿ ಬಹೆನ್
(ಸಹೋದರ ಸಹೋದರಿ)
ಪಾತ್ರ :
ಗೀತಾಬಾಲಿ, ಪ್ರೇಮ್ ಆದೀಬ್, ನಿರೂಪ ರಾಯ್, ಕಕ್ಕೂ, ಗೋಪ್

ಸಂಪಾದಕರು ಮತ್ತು ಪ್ರಕಾಶಕರು: ಜಿ ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ ಹೆಚ್ ರಾಮರಾವ್, ಬಿ ಎಸ್ ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೧೨ ಮಂಗವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರ. ೭-೨೦ ಎಸ್. ಎನ್. ನಾಗಮಣಿ (ಸಂಗೀತ) ೭,೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪ ಕೊಳಲು ೧-೧೫ ಹಿಂದೀ ಶಿಕ್ಷಣ ೨-೦ ಎ. ಗುರುಯ್ಯ (ಷಹನಾಯಿ) ೨-೩೦ ಮುಕ್ತಾಯ.

ಸಂಜೆ ೫-೩೦ ಎಂ.ಎಸ್. ಸುಬ್ರಹ್ಮಣ್ಯಂ (ಪಿಟೀಲು ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬ ೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭.೦ ಸ್ಥಳೀಯ ಪ್ರಕಟಣೆ (ಹಿಂದಿ). ೭.೫ ಗುರುವಯ್ಯ (ಷಹರಾಯಿ) ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ. ೮ ೦ ಎಂ ಎಸ್. ಸುಬ್ರಹ್ಮಣ್ಯ (ಪಿಟೀಲು) ೮-೬೦ ವೃಂದ ಸಂಗೀತ ೯-೦ ೯ ೦ ಇಂಗ್ಲಿಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩ ಗಾನಾಮೃತ ೧೦-೦ ಮುಕ್ತಾಯ.

ಅಮೆರಿಕಾದಲ್ಲಿ ಜರೂರು ಸ್ಥಿತಿ ಘೋಷಣೆಯೇ :

ಅಮೆರಿಕಾದಲ್ಲಿ ಅತ್ಯಂತ ಜರೂರು ಪರಿಸ್ಥಿತಿಯುಂಟಾಗಿರುವುದೆಂದು ಅಧ್ಯಕ್ಷ ಟ್ರೂಮನ್ನರು ಘೋಷಿಸಲು ಆಲೋಚನೆಯಲ್ಲಿರುತ್ತಾರೆಂದು ರಕ್ಷಣಾಮಂತ್ರಿ ಜಾರ್ಜ್ ಮಾರ್ಷಲ್ ಹೇಳಿರುವರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಚುನಾವಣೆ

ಮೊನ್ನೆ ದಿನ ಜಿಲ್ಲಾ ಕಾಂಗ್ರೆಸ್ ಸಮಿತಿಗೆಯ ಚುನಾವಣೆ ನಡೆದು ಹುಣಸೂರು ತಾಲ್ಲೂಕಿನಿಂದ ಶ್ರೀಗಳಾದ ಎ ವಿ ಶ್ರೀನಿವಾಸಯ್ಯಂಗಾರ್ಯರ್ ಮತ್ತು ಹೆಚ್. ಆರ್ ಸೀತಾರಾಮಯ್ಯನವರೂ, ನಂಜನಗೂಡು ತಾಲ್ಲೂಕಿನಿಂದ ಶ್ರೀಗಳಾದ ಹೆಜ್ಜಿಗೆ ಲಿಂಗಣ್ಣ ಮತ್ತು ರಾಚಯ್ಯನವರೂ ಆರಿಸಲ್ಪಟ್ಟರು ಉಳಿದ ತಾಲ್ಲೂಕುಗಳಿಂದ ನಿಂತಿದ್ದ ಉಮೇದುವಾರರು ಅವಿರೋಧವಾಗಿ ಆರಿಸಲ್ಪಟ್ಟವರು.

ನ್ಯೂ ಆಪೆರಾ
ತಾ|| ೯-೧೨-೫೦ ರಿಂದ ದಿನವಹಿ ೩ ಆಟಗಳು
★ ಭಾರತಿ ★
(ಕನ್ನಡ)
ಅಭಿನಯ—ಸಂಪತ್-ಮರಿರಾವ್, ರಾಜಕುಮಾರಿ-ಸೂರ್ಯಕುಮಾರಿ, ಲಲಿತ-ಪದ್ಮಿನಿ.

FOR SALE
One Oliver No. 9 Brief size
Pica types Typewriter
in Excellent condition
THE TOURIST BUREAU,
Lansdowne Buildings, Mysore

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೩— ೧೨—೧೯೫೦ನೇ ಬುಧವಾರ [ಸಂಚಿಕೆ ೪೬

ಅವಿಶ್ವಾಸ ನಿರ್ಣಯ ಅಧಿಕೃತವಾಗಿ ಮಂಡಿಸಲಾಯಿತು

೨೭ನೇ ತಾರೀಖು ಕಾಂಗ್ರೆಸ್ ಪಕ್ಷ ಸಭೆ ನಡೆಯುವ ಸಂಭವವಿಲ್ಲ

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರ ನಾಯಕತ್ವದಲ್ಲಿ ವಿಶ್ವಾಸವಿಲ್ಲವಾದ್ದರಿಂದ ಬೇರೆನಾಯಕರನ್ನು ಚುನಾಯಿಸಬೇಕೆಂಬ ಒಂದು ನಿರ್ಣಯವನ್ನು ಸೋಮವಾರ ರಾತ್ರಿ ೯-೩೦ ಗಂಟೆ ಸಮಯದಲ್ಲಿ ೩೫ ಜನರು ಸಹಿಮಾಡಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ಸಲ್ಲಿಸಲಾಯಿತೆಂದು ತಿಳಿಯಬರುತ್ತದೆ.

ಮುಂಚೆ ಶ್ರೀ ಕೆ. ಸಿ ರೆಡ್ಡಿಯವರಿಗೆ ಇದೇ ೩೫ ಜನರು ಸಹಿಮಾಡಿ ಒಂದು ಪತ್ರವನ್ನು ಸಲ್ಲಿಸಿದ್ದರು. ಈ ರೆಡ್ಡಿಯವರ ನಾಯಕತ್ವದಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಅದರಲ್ಲಿ ನಮೂದಿಸಲಾಗಿತ್ತು. ಅದು ಒಂದು ಸಲಹಾ ಪತ್ರವಾಗಿದ್ದಿತೇ ವಿನಹ ನಿರ್ಣಯವಾಗಿರಲಿಲ್ಲ. ಆ ಪತ್ರವನ್ನು ಶ್ರೀ ರೆಡ್ಡಿಯವರಿಗೆ ಕೊಡುವಾಗ ನೀವೇ ರಾಜೀನಾಮೆ ಕೊಡಿ ಇಲ್ಲವಾದರೆ ವಿಶ್ವಾಸ ನಿರ್ಣಯವನ್ನ ನೀವೇ ಸಭೆಯಲ್ಲಿ ಮಂಡಿಸಿ, ಎಲ್ಲರ ವಿಶ್ವಾಸ ಬೆಂಬಲವನ್ನು ಪಡೆಯಿರಿ ಎಂಬ ಸಲಹೆಯನ್ನು ವಿರೋಧಪಕ್ಷದವರು ಇತ್ತರೆಂದು ವರದಿಯಾಗಿದೆ. ಶ್ರೀ ರೆಡ್ಡಿಯವರು ತಾವು ಆಲೋಚಿಸಿ ಉತ್ತರವೀಯುವುದಾಗಿ ಹೇಳಿದ್ದರು. ಈ ವಿಷಯವು ಪಕ್ಷದಲ್ಲಿ ತೀರ್ಮಾನವಾಗಬೇಕಾಗಿರುವುದರಿಂದ ಪಕ್ಷದ ಸಭೆಯನ್ನು ೨೭ನೇ ತಾರೀಖು ಕರೆದಿರುವುದಾಗಿ ಶ್ರೀ ರೆಡ್ಡಿಯವರು ಅನಂತರ ತಿಳಿಸಿದರು.

ಪಕ್ಷದ ಸಭೆಯು ೨೭ನೇ ತಾರೀಖು ನಡೆಯುವಾಗ ನಾಯಕರು ಈ ಪತ್ರವನ್ನು ಅದರ ಮುಂದಿಟ್ಟು, ರುಜು ಹಾಕಿರುವವರಿಗೂ ನಾಯಕರಿಗೂ ಸಂಬಂಧಪಟ್ಟ ವಿಷಯವೆನ್ನಿಸಿ ಆ ಪತ್ರದಮೇಲೆ ಯಾವ ರೀತಿಯಾದ ಕಾರ್ಯಕ್ರಮವನ್ನೂ ಕೈಗೊಳ್ಳದಿರುವಂತೆ ಏರ್ಪಾಡು ಮಾಡಿಸುವುದಾಗಿ ವಿರೋಧ ಪಕ್ಷದವರು ಯೋಚಿಸಿ, ಸೋಮವಾರ ರಾತ್ರಿ ಒಂದು ಅಧಿಕೃತ ನಿರ್ಣಯವನ್ನು ಮಂಡಿಸಿರುವುದಾಗಿ ತಿಳಿಯಬಂದಿದೆ. ಈ ನಿರ್ಣಯವನ್ನು ಮಂಡಿಸಿರುವುದರಿಂದ ೨೭ನೇ ತಾರೀಖು ಪಕ್ಷದ ಸಭೆಯು ನಡೆಯುವ ಸಂಭವವಿಲ್ಲ ಈ ನಿರ್ಣಯವನ್ನು ಚರ್ಚಿಸಲು ನಿರ್ಣಯವನ್ನು ಮಂಡಿಸಿದ ೧೫ ದಿನಗಳೊಳಗಾಗಿ, ಬೇರೆ ಸಭೆಯನ್ನು ಕರೆಯುವ ಏರ್ಪಾಡು ಮಾಡಿ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿ ಮುಂದಿನ ತೀರ್ಮಾನಕ್ಕೆ ಬರಬೇಕಾಗಿದೆ.

ಈ ನಿರ್ಣಯವನ್ನು ಮಂಡಿಸುವ ವಿಷಯವನ್ನು ಮುಂಗಡವಾಗಿ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿಗೆ ತಿಳಿಸಬೇಕೆಂದೂ ಅವರ ಸಲಹೆಯನ್ನು ಪಡೆಯಬೇಕೆಂದೂ ನಿಯಮಾವಳಿಯಲ್ಲದಿದ್ದರೂ ಪದ್ಧತಿಯಿದೆಯೆಂದೂ ಅದೇ ರೀತಿ ವಿರೋಧಪಕ್ಷದವರು ಮಾಡಿರುವುದಾಗಿಯೂ ತಿಳಿಯಬರುತ್ತದೆ. ಪಾರ್ಲಿಮೆಂಟರಿ ಬೋರ್ಡಿನವರು ಕೊಡುವ ಸಲಹೆಯಂತೆಯೇ ನಡೆಯಬೇಕೆಂಬ ನಿರ್ಬಂಧವಿಲ್ಲವೆಂದು ಹೇಳಲಾಗಿದೆ.

ಕಲಾಕ್ಷೇತ್ರ

ಇಂದು ಈ ಪತ್ರಿಕೆಯ ನಾಲ್ಕನೇ ಸಂಚಿಕೆಯು ಹೊರಬಿದ್ದಿದೆ. ಇದರಲ್ಲಿ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಬೆಳಕು ಸಂಪಾದಕರಾದ ರಾವೆಂ ಶ್ರೀನಿವಾಸ ಮತ್ತು ಎಸ್ ವಿ ಶ್ರೀನಿವಾಸರಾವ್‌ರವರ ಸಂದೇಶಗಳಿಂದಲೂ, ಕನ್ನಡಕ್ಕೆ ಒಬ್ಬ ಕ್ರೈ, ಭಾರತೀಯಕಲೆ ಮತ್ತು ಅದರ ಪುನರುಜ್ಜೀವನ, ಕಲಾವಿದರ ಚಿತ್ರ, ಮಾನವನಲ್ಲಿ ಪುರುಷಾರ್ಥ ಇದೆಯೇ ? ಹಾಗು, ದೇವ, ನಿರವು, ಕರೆ, ಬಲುವಿನ ಮನೆಯಲ್ಲಿ, ಮಳೆ, ರಾಜಮಹಲ್ ದರ್ಶನ, ಪ್ರಾರ್ಥನೆ, ಚಂದ್ರ, ಬಾಷ್ಪ, ಮಾತೃಭಾಷೆ, ಕವಿತೆಕವನಗಳಿಂದಲೂ, ಶ್ರೀಯೋಗಿ ಅರವಿಂದರು, ಗುರುದೇವ ಮತ್ತು ರಷ್ಯಾದ ಕಲಾವಿದ ರಿಷ್ಕನ್ನರ ಭಾವಚಿತ್ರಗಳಿಂದಲೂ ಕೂಡಿ ಪುಟಪುಟವೂ ಅಂದವಾಗಿ ಪ್ರಕಾಶಿಸುತ್ತಿದೆ

ಹೊಸ ಅಗ್ರಹಾರದಲ್ಲಿ ಆದಿಕರ್ನಾಟಕರ ದೇವಸ್ಥಾನ ಪ್ರವೇಶ

ತಾ|| ೯-೧೨-೧೯೫೦ನೇ ಕಡೆಯ ಕಾರ್ತಿಕ ಶನಿವಾರದ ದಿನ ಕೃಷ್ಣರಾಜನಗರದ ತಾಲ್ಲೂಕು ಹೊಸ ಅಗ್ರಹಾರದ ಗ್ರಾಮದಲ್ಲಿ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಉತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಈ ಸಮಯದಲ್ಲಿ ಈ ಗ್ರಾಮದ ಸವರ್ಣೀಯ ಮುಖ್ಯಸ್ಥರುಗಳಾದ ಶ್ರೀಮಾನ್ ಶ್ಯಾ|| ಪಿ. ನಂಜುಂಡಪ್ಪನವರು, ಶ್ಯಾ|| ಶ್ರೀಕಂಠಯ್ಯನವರು, ರಾಮರಾಯರು, ಪ|| ಚಿಕ್ಕವೀರಪ್ಪನವರು, ಬೋರೇಗೌಡರು, ಅಂಗಡಿ ಚಿಕ್ಕವೀರಪ್ಪನವರು, ಲಿಂಗರಾಜಗೌಡರು, ಚನ್ನೇಗೌಡರು, ರಂಗಸ್ವಾಮಿಯವರು, ಸದಾಶಿವಯ್ಯ ಮತ್ತು ಎಲ್ಲಾ ಸವರ್ಣೀಯರೂ ಒಪ್ಪಿಗೆಯಿಂದ ತಾವೇ ಆದಿಕರ್ನಾಟಕರನ್ನು ಕರೆದು, ದೇವಸ್ಥಾನ ಪ್ರವೇಶಮಾಡಿಸಿ, ಅವರಿಗೇ ಮೊದಲು ತೀರ್ಥಪ್ರಸಾದಗಳನ್ನು ಹಂಚಿ, ಎಲ್ಲರೂ ಒಟ್ಟಿಗೆ ಸೇರಿ, ದೇವಸ್ಥಾನದಲ್ಲಿಯೇ ಭಜನೆಯನ್ನು ಮಾಡಿ, ಭಗವಂತನ ಕರುಣೆಗೆ ಪಾತ್ರರಾಗಿದ್ದಾರೆ. ಈ ಊರು ಒಂದು ಸಾಮಾನ್ಯವಾದ ಹಳ್ಳಿಯಾದರೂ ಇಲ್ಲಿನ ಸವರ್ಣೀಯರು ದೂರಾಲೋಚನೆಯಿಂದಲೂ ಮತ್ತು ಪ್ರಗತಿಮಾರ್ಗದಿಂದಲೂ ಆದಿಕರ್ನಾಟಕರನ್ನು ದೇವಸ್ಥಾನದ ಪ್ರವೇಶಮಾಡಿಸಿರುವುದು ಬಹಳ ಸ್ತೋತ್ರಾರ್ಹವಾಗಿರುವುದಲ್ಲದೆ ಇತರೇ ಊರಿನವರಿಗೆ ಒಂದು ಒಳ್ಳೆಯಮಾರ್ಗ ದರ್ಶಕತ್ವವನ್ನು ತೋರಿಸಿದ್ದಾರೆ. ಈರೀತಿಯಾದ ನಡವಳಿಕೆಯಿಂದ ಜಾತಿಯ ಮತ್ತು ಕೋಮುವಾರಿನ ವೈಮನಸ್ಸುಗಳು ಕಳೆದು, ಸಹೋದರಭಾವ ಬೆಳೆದು, ದೇಶದ ಭದ್ರತೆಯು ಹೆಚ್ಚುವುದಕ್ಕೆ ದಾರಿಯಾಗಿದೆ. ಈ ಸೌಹಾರ್ದಕಾರ್ಯಕ್ಕೆ ಈ ಊರಿನ ಆದಿಕರ್ನಾಟಕರೆಲ್ಲರೂ ಚಿರಋಣಿಗಳಾಗಿದ್ದಾರೆ ಎಂದು ಶ್ರೀ ಜವರಾಮೇಸ್ತ್ರಿ ಇವರು ಬರೆಯುತ್ತಾರೆ.

ನೆಹರೂ ಬೆಂಗಳೂರಿಗೆ

ಪ್ರಧಾನಿ ಪಂಡಿತ ನೆಹರೂರವರು ಜನವರಿ ೧ನೇ ತಾ|| ಬೆಂಗಳೂರಿಗೆ ಆಗಮಿಸಿ ಸೈನ್ಸ್‌ಕಾಂಗ್ರೆಸ್ ಅಧಿವೇಶನದ ಪ್ರಾರಂಭೋತ್ಸವವನ್ನು ಮಾಡಿ ಮಾರನೆದಿನವೇ ಬೊಂಬಾಯಿಮಾರ್ಗವಾಗಿ ಲಂಡನ್ನಿಗೆ ತೆರಳುವರು.

ಜುಲ್ಮಾನೆ

ಹಳೇಅಗ್ರಹಾರದಲ್ಲಿರುವ ಪ್ರಮುಖ ವರ್ತಕರಾದ ಶ್ರೀ ನಂಜುಂಡಪ್ಪ ಎಂಡ್ ಸನ್ಸ್ ನವರ ಅಂಗಡಿಯಲ್ಲಿ ಸರ್ಕಾರದಿಂದ ನಿಗದಿಯಾದ ಮತ್ತು ಸರ್ಕಾರ ಸೀಲಿಟ್ಟದ ಒಂದು ತಗಡಿನ ಚೊಂಬಿನಲ್ಲಿ ಎಣ್ಣೆಯನ್ನು ಅಳೆಯುತ್ತಲಿದ್ದರೆಂಬ ಅಪಾದನೆ ಮೇಲೆ ಅಲ್ಲಿಯೇ ಎಣ್ಣೆಯನ್ನು ಅಳೆಯುತ್ತಲಿದ್ದ ಗುರುಸ್ವಾಮಿ ಎಂಬುವವರಿಗೆ ಒಂದನೇ ದರ್ಜೆಯ ಮ್ಯಾಜಿಸ್ಟ್ರೇಟರು ೨೫ರೂ ರೂಪಾಯಿಗಳ ಜುಲ್ಮಾನೆಯನ್ನು ನಿನ್ನೆ ವಿಧಿಸಿದರು.

ಅಳತೆ ಮತ್ತು ತೂಕದ ಇನ್ಸ್‌ಪೆಕ್ಟರವರು ಇದನ್ನು ಕಂಡು ಹಿಡಿದು ಅವರಮೇಲೆ ಕೇಸು ದಾಖಲ್ಮಾಡಿದ್ದರು.

ಭಾಷಣ

ರಾಜಧಾನಿಯ ಸಾರ್ವಜನಿಕ ವಿಚಾರಸಂಸ್ಥೆಯ ಆಶ್ರಯದಲ್ಲಿ ಮದರಾಸಿನ ವಿದ್ಯಾಭೂಷಣ ಶ್ರೀ ಎಸ್. ಆರ್. ದೊರೆಸ್ವಾಮಿ ಶಾಸ್ತ್ರಿಗಳವರಿಂದ 'ಭಾರತ ಸಂಸ್ಕೃತಿಯ ಪುನರುಜ್ಜೀವನ' ವಿಷಯದಲ್ಲಿ ಪುರಭವನದಲ್ಲಿ ಇಂದು ಭಾಷಣವಾಡುವರು ಕಾರ್ಮಿಕ ಮತ್ತು ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ ಭಾಷ್ಯಂರವರು ಅಧ್ಯಕ್ಷತೆ ವಹಿಸುವರು

ರಜತ ಮಹೋತ್ಸವ

ಮೈಸೂರಿನ ಬೈಟ್‌ಕಾಲೇಜ್ ಆಫ್ ಕಾಮರ್ಸಿನ ರಜತ ಮಹೋತ್ಸವವು ೧೭ನೇ ತಾ|| ಭಾನುವಾರ ಮತ್ತು ೧೮ನೇ ತಾ|| ಸೋಮವಾರ ಪುರಭವನದಲ್ಲಿ ನಡೆಯುವುದು. ಎಕನಾಮಿಕ್ ಡೆವಲಪ್‌ಮೆಂಟ್ ಕಮಿಷನರಾದ ಶ್ರೀ ಜೆ. ಬಿ ಮಲ್ಲಾರಾಧ್ಯರವರು ಅಧ್ಯಕ್ಷತೆ ವಹಿಸುವರು. ಮಹಾತ್ಮ ಗಾಂಧಿಯವರ ಭಾವಚಿತ್ರ ಅನಾವರಣವನ್ನೂ ಮಾಡುವರು. ಟ್ವೆಂಟಿಯತ್ ಎಕ್ಸ್ ಬಿಷನ್ನಿನಲ್ಲಿ ತಾಯಿನಾಡು ಪತ್ರಿಕೆಯ ಮೈಸೂರಿನ ಪ್ರತಿನಿಧಿಯಾದ ಶ್ರೀ ಎನ್. ಶ್ರೀನಿವಾಸಮೂರ್ತಿಯವರು ಉದ್ಘಾಟನಮಾಡುವರು.

ಮೈಸೂರಿಗೆ ಬರ್ಮಾ ಅಕ್ಕಿ

ಮೊನ್ನೆ ಮದರಾಸಿಗೆ ಬಂದ ೨,೯೯೫೮ ಟನ್ ಬರ್ಮಾ ಅಕ್ಕಿಯಲ್ಲಿ ೧,೦೦೦ ಟನ್ನು ಅಕ್ಕಿಯನ್ನು ಮೈಸೂರಿಗೆ ಕೊಡಲಾಗಿದೆ.

ಪತ್ರ ವ್ಯವಹಾರ

ಸ್ವಾಮಿ—

ಮೈಸೂರು ಸಿಟಿ ಮುನಿಸಿಪಲ್ ಆಕ್ಟ್ರಾಯ್ ಆಫೀಸಿನ ಅವ್ಯವಸ್ಥೆ ವಿಚಾರವಾಗಿ ಕೆಲವು ವಿಷಯಗಳನ್ನು ತಿಳಿಯಪಡಿಸಬೇಕಾಗಿದೆ

ಸುಂಕದ ಅಧಿಕಾರಿಗಳ ಅಸಭ್ಯ ಮತ್ತು ಅಸಹನೀಯ ವರ್ತನೆ ಜನಗಳಿಗೆ ವೃಥಾ ಕೊಡತಕ್ಕ ತೊಂದರೆ ಇವುಗಳೆಲ್ಲವೂ ಸುಂಕದ ಆಫೀಸಿಗೆ ಹೋದವರೆಲ್ಲರಿಗೂ ಗೊತ್ತಿದೆ. ಯಾವ ಲಾರಿಯೇ ಆಗಲಿ, ಗಾಡಿಯೇ ಆಗಲಿ ಹೋದರೆ ೨-೩ ಗಂಟೆಗಳಕಾಲಕ್ಕಿಂತ ಮುಂಚೆ ಬರಲು ಸಾಧ್ಯವೇ ಇಲ್ಲ. ಆಫೀಸು ತೆಗೆಯುವ ಕಾಲ ೧೧ ರಿಂದ ೧ ಗಂಟೆ ಮತ್ತು ೫ ರಿಂದ ೬ ಗಂಟೆ. ಅದರಲ್ಲೂ ಆ ಅಧಿಕಾರಿಗಳು ಬಂದ ಹೊರತು ಯಾವ ಕೆಲಸವೂ ಆಗುವ ಹಾಗೆ ಇಲ್ಲ. ಆಮೇಲೂ ಕಾಯಬೇಕು. ಸುಂಕ ತೀರಿಸಲು ಅಪ್ಪಣೆಕೊಡುವ ರೀತಿಯಲ್ಲಿ ಯಾವ ವಿಧವಾದ ಕ್ರಮವೂ ಕಾಣಬರುವುದಿಲ್ಲ. ಜೊತೆಗೆ ಕಾನೂನುಗಳನ್ನು ತಮಗೆ ತೋಚಿದಂತೆ ತಿರುಗಿಸಿ, ಅಸಂಜಸವಾದ ವಿವರಣೆಗಳನ್ನು ಕೊಟ್ಟು ಸುಂಕ ವಸೂಲು ಮಾಡುತ್ತಾರೆ. ಒಟ್ಟಿನಲ್ಲಿ ಸುಂಕಕೊಡಲು ಹೋದವರೆಲ್ಲಗೂ, ಅಸಾಧ್ಯ ಕಿರುಕುಳವೇ ಹೊರತು, ಅವರ ಕಾಲ ಮತ್ತು ಕೆಲಸಕ್ಕೆ ಲೆಕ್ಕವೇ ಇಲ್ಲ. ಈ ವಿಷಯದಲ್ಲಿ ಒಂದು ಉದಾಹರಣೆಯನ್ನು ಇಲ್ಲಿ ಕೊಡಲಾಗಿದೆ.

೬-೧೨-೫೦ ರಲ್ಲಿ ನಮಗೆ ಬೆಂಗಳೂರು ಹಿಮಾಂಶು ಕಂಪೆನಿಯಿಂದ ಒಂದು ರೇಡಿಯೋ ಬೆಂಗಳೂರು ಟ್ರಾನ್ಸಿಟ್ ಕಂಪೆನಿ ಲಾರಿ ಸರ್ವಿಸ್ ಮೂಲಕ ಬಂತು. ಮಾರನೆದಿನ ಸುಂಕ ತೀರಿಸುವಾಗ, ನಮ್ಮ ಸಾಮಾನಿಗೆ ನಮ್ಮ ಹೆಸರಿನಲ್ಲಿ ರಸೀದಿಯನ್ನು ಕೊಡಲು ನಿರಾಕರಿಸಿ, ಲಾರಿಸರ್ವೀಸ್ ಹೆಸರಿನಲ್ಲಿ ಮಾತ್ರ ಕೊಡುವುದಾಗಿ ತಿಳಿಸಿದರು. ಈ ಉತ್ತರವನ್ನು ಕೊಡಲು ಒಂದು ಗಂಟೆ ಕಾಯಬೇಕಾಯಿತು. ಈ ವಿಷಯವಾಗಿ ಮುನಿಸಿಪಲ್ ಕಮಿಷನರವರ ಹತ್ತಿರ ದೂರುಕೊಡಲು, ಅವರು ಸುಂಕದ ಅಧಿಕಾರಿ ಮಾಡಿದ್ದೇ ಸರಿಯೆಂದೂ ಬೇಕಾದರೆ ಕೋರ್ಟಿನಲ್ಲಿ ವ್ಯಾಜ್ಯವನ್ನು ಹೂಡಬಹುದೆಂದೂ ತಿಳಿಸಿದರು.

ಪ್ರಜಾ ಸರ್ಕಾರದಲ್ಲಿಯೂ, ಈ ದಬ್ಬಾಳಿಕೆಯನ್ನು ತೋರಿಸತಕ್ಕ ಸುಂಕದ ಅಧಿಕಾರಿಗಳಿಂದ ಪ್ರಜೆಗಳಿಗೆ ಆಗತಕ್ಕ ತೊಂದರೆಯನ್ನು ನೋಡಿದರೆ, ಪೌರಸಭೆಗೆ ಆದಾಯ ಮುಖ್ಯವೇ ಹೊರತು, ಪ್ರಜೆಗಳ ನ್ಯಾಯವಾದ ಸೌಕರ್ಯದ ಕಡೆ ಗಮನವಿಲ್ಲವೆನ್ನುವ ಹಾಗೆ ಕಾಣುತ್ತದೆ.

ಆದ್ದರಿಂದ ಎಲ್ಲರ ಹಿತದೃಷ್ಟಿಯಲ್ಲೂ ಸರ್ಕಾರದವರಾಗಲೀ, ಪೌರಸಭೆಯವರಾಗಲೀ ಸುಂಕದ ಆಫೀಸಿನ ಕೆಲಸಮಾಡುವ ಕಾಲ ಮತ್ತು ಜನಗಳ ಸೌಕರ್ಯದ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡುವರೆಂಬುದಾಗಿ ನಂಬಿರುತ್ತೇನೆ.

ಎಸ್. ವಿ. ರಘೋತ್ತಮರಾವ್.

ಮಾತುಕಥೆ ಬಿರುಸಾಗಿವೆ

ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಮಿ|| ಟ್ರಿಗ್ವಿಲೀಯವರಿಗೂ ಚೈನಾ ಪ್ರತಿನಿಧಿಗಳಿಗೂ ಭೇಟಿ ನಡೆದು ಪ್ರಮುಖ ವಿಷಯಗಳ ಬಗ್ಗೆ ಮಾತುಕಥೆ ನಡೆದುವೆಂದು ವರದಿಯಾಗಿದೆ. ಪುನಃ ಭಾರತ ಪ್ರತಿನಿಧಿ ಶ್ರೀ. ಬಿ. ಎನ್. ರಾವ್‌ರವರಿಗೂ ಈ ನಿಯೋಗದವರಿಗೂ ಭೇಟಿಯಾಗುವ ಸಂಭವವಿದೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೧೪ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ. ೭-೨೦ ಬಿ. ನಾಗೇಂದ್ರಪ್ಪ (ಕ್ಲಾರಿಯೋನೆಟ್) ೭,೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ವೀಣೆ ೧-೪೫ ಹಿಂದೀ ಶಿಕ್ಷಣ ೨-೦ ಚಿತ್ರಸಂಗೀತ ೨-೩೦ ಮುಕ್ತಾಯ.

ಸಂಜೆ ೫-೩೦ ಬಿ. ನಾಗೇಂದ್ರಪ್ಪ (ಕ್ಲಾರಿಯೋನೆಟ್) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ ೬.೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭.೦ ಸ್ಥಳೀಯ ಪ್ರಕಟಣೆ (ಹಿಂದಿ). ೭.೫ ಎನ್ ಕೇಸಿ (ರಿ) ೭-೧೫ ಎಮ್. ಎಸ್. ಗೋವಿಂದಸ್ವಾಮಿ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಆರ್. ಚಂದ್ರ (ಕನ್ನಡ ಪದ್ಯವಾಚನ) ೮-೨೫ ಕ್ರೀಡಾರಂಗ ಎಂಬ ವಿಷಯದಲ್ಲಿ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಎಮ್. ಎಸ್. ಗೋವಿಂದಸ್ವಾಮಿ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಿದ್ಯಾರ್ಥಿ ಮಂಡಳಿ (ವಿದ್ಯಾರ್ಥಿಗಳಿಗಾಗಿ) ೧೦-೦ ಮುಕ್ತಾಯ.

ಒಲಂಪಿಯಾ
14-12-50 ರಿಂದ ದಿನವಹಿ 3 ಆಟಗಳು
ಅಪರಿಚಿತ ಕಾಡು ಮೃಗಗಳ ಭೇಟಿ
ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ
ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿ
ಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅದಲ್ಲದೆ
೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ
ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ
ಹಾಲ್‌ರೋಚ್‌ರವರ
ಒನ್ ಮಿಲಿಯನ್ ಬಿ. ಸಿ.
(ONE MILLION B.C.)
ನೀವು ಹಿಂದೆ ಎಂದೂ ನೋಡದೆ ಮುಂದೆ
ನೋಡದಿರುವ ಚಿತ್ರ

ಚೀಫ್ ಇಂಜನಿಯರುಗಳಿಗೆ ರಜಾ

ಸಂಸ್ಥಾನದ ಚೀಫ್ ಇಂಜನಿಯರು ಶ್ರೀ ಎಂ. ಎನ್. ಲಕ್ಷ್ಮಣರಾವ್ ಮತ್ತು ಸ್ಪೆಷಲ್ ಚೀಫ್ ಇಂಜನಿಯರು ಶ್ರೀ ನರಸಿಂಗರಾಯರಿಗೆ ನಿವೃತ್ತರಾಗುವ ಮುನ್ನ ರಜಾ ಕೊಡಲಾಗಿದೆಯೆಂದೂ, ಸೂ|| ಇಂಜನಿಯರಾದ ಶ್ರೀ ಬಿಳಿಗಿರಿರಾವ್‌ರು ಸ್ಪೆಷಲ್ ಚೀಫ್ ಇಂಜನಿಯರಾಗಿಯೂ, ಶ್ರೀ ನೀಲಕಂಠಪ್ಪನವರು ಚೀಫ್ ಇಂಜನಿಯರಾಗಿಯೂ ನೇಮಕವಾಗಿದ್ದಾರೆಂದು ತಿಳಿಯಬಂದಿದೆ.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನರವರ
★ ಸರ್ಗಮ್ ★
(ಹಿಂದಿ)
ಪಾತ್ರ: ● ರಹೇನಾ ● ರಾಜಕಪೂರ್
ಬೆಳಗಿನ ಪ್ರದರ್ಶನ
ಬಾಂಬೆ ಟಾಕೀಸಿನವರ
ಕಿಸ್ಮತ್
ಪಾತ್ರ:
ಅಶೋಕ್‌ಕುಮಾರ್ ಮುಂಮ್ತಾಜ್‌ಶಾಂತಿ

FOR SALE :
One Oliver No. 9 Brief size
Pica types Typewriter
in Excellent condition
THE TOURIST BUREAU,
Lansdowne Buildings, Mysore

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ನ್ಯೂ ಅಪೆರಾ
ತಾ|| ೯-೧೨-೫೦ ರಿಂದ ದಿನವಹಿ ೩ ಆಟಗಳು
★ ಭಾರತಿ ★
(ಕನ್ನಡ)
ಅಭಿನಯ—ಸಂಪತ್-ಮರಿರಾವ್, ರಾಜಕುಮಾರಿ-ಸೂರ್ಯಕುಮಾರಿ, ಲಲಿತ-ಪದ್ಮಿನಿ.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] [illegible]—೧೨—೧೯೫೦ನೇ ಗುರುವಾರ [ಸಂಚಿಕೆ ೮೭

ಮೆಕಾರ್ಥರಿಗೆ ಮಂಕು ಬಡಿದಂತಾಗಿದೆ

ಲಂಡನ್ ಡಿ. ೧೩

ಇಲ್ಲಿಗೆ ಬರುತ್ತಿರುವ ವರ್ತಮಾನದ ಪ್ರಕಾರ, ಜನರಲ್ ಮೆಕಾರ್ಥರಿಗೆ ಕೊರಿಯದಲ್ಲಿ ತಮ್ಮ ಸೈನ್ಯಕ್ಕಾದ ಅನಾಹುತದಿಂದ ಮಂಕು ಬಡಿದಂತಾಗಿದೆ. ಈಗ ಅಲ್ಲಿ ಅವರ ಸೇನೆಗೆ ಉಳಿದಿರುವುದು ಎರಡೇ ಮಾರ್ಗ: ಕೊರಿಯದಿಂದ ಕಾಲು ಕೀಳುವುದು. ಇಲ್ಲವೆ ಪ್ರಬಲವಾದ ಸೇನಾ ಸಹಾಯ ಒದಗಿಸಿ ಪುನಃ ಯುದ್ಧ ಪ್ರಾರಂಭಿಸುವುದು ಮತ್ತೆ ಹೋರಾಡುವುದು ಪ್ರಸಂಗದಲ್ಲಿ ಅಮೆರಿಕ ಬಿಟ್ಟು ಬೇರೆ ಯಾರಿಗೂ ಬೇಕಿಲ್ಲ. ಅದಕ್ಕೆ ಮೆಕಾರ್ಥರು ಪೆಚ್ಚಾಗಿದ್ದಾರೆ.

ಚೈನಾಸೈನ್ಯ ವಿಸ್ತರಣೆ

ಕೊರಿಯಾ ಯುದ್ಧರಂಗದಲ್ಲಿ ಚೈನಾವು ವಿಮಾನ ಮತ್ತು ನೌಕಾ ಸೈನ್ಯಬಲವನ್ನೂ ಉಪಯೋಗಿಸಲು ತಕ್ಕ ವ್ಯವಸ್ಥೆ ಮಾಡುತ್ತಲಿರುವುದಾಗಿ ವರದಿಯಾಗಿದೆ.

ಚೈನಾಕ್ಕೆ ಶಾಂತಿಬೇಕು

ಅನೇಕ ವರ್ಷಗಳಿಂದ ಚೈನಾದೇಶವು ಯುದ್ಧದಲ್ಲಿ ಹೋರಾಡಿ ಶಾಂತಿಯನ್ನು ಬಯಸುತ್ತಲಿದೆ ಚೈನಾ ಪ್ರಜೆಗಳಿಗೆ ಯುದ್ಧ ಬೇಕಾಗಿಲ್ಲ. ಆದರೆ ವಿಶ್ವಸಂಸ್ಥೆಯು ಮತ್ತು ಅಮೆರಿಕಾ ಸೈನ್ಯಬಲಗಳು ಚೈನಾಬಳಿಗೆ ಬಂದು ಯುದ್ಧಮಾಡುತ್ತ ಚೈನಾವನ್ನು ಯುದ್ಧರಂಗಕ್ಕೆ ತಾವಾಗಿಯೇ ಎಳೆದಿವೆಯೆಂದು ಚೈನಾದ ನಿಯೋಗ ನಾಯಕರು ಹೇಳಿರುವರು.

ವರ್ಗಾವರ್ಗಿ

ಮೈಸೂರಿನ ಜಿಲ್ಲಾ ಸರ್ವೆ ಆಫೀಸರಾದ ಶ್ರೀ ಡಿ ಜಿ ನಾರಾಯಣಸಿಂಗರನ್ನು ತುಮಕೂರು ಜಿಲ್ಲಾ ಟ್ರೆಜರಿ ಆಫೀಸರಾಗಿ, ರಜದಮೇಲಿರುವ ಶ್ರೀ ಎ. ಸಚ್ಚಿದಾನಂದ ಮೂರ್ತಿಯವರನ್ನು ಮೈಸೂರು ಸರ್ವೆ ಆಫೀಸರಾಗಿಯೂ, ಮೈಸೂರು ಡಿಸ್ಟ್ರಿಕ್ಟ್ ಟ್ರೆಷರಿ ಆಫೀಸರಾದ ಶ್ರೀ ಎಚ್. ಸಿದ್ದಯ್ಯನವರನ್ನು ಮೈಸೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರಾಗೀ, ಹಾಲಿ ಪರ್ಸನಲ್ ಅಸಿಸ್ಟೆಂಟರಾಗಿರುವ ಜನಾಬ್ ಅಬ್ದುಲ್‌ಕರೀಂರವರವನ್ನು ಮೈಸೂರು ಜಿಲ್ಲಾ ಟ್ರೆಷರಿ ಆಫೀಸರಾಗಿ ವರ್ಗಾಯಿಸಲಾಗಿದೆ.

ಆಹಾರಕಂಟ್ರೋಲ್ ಹೋಗುವುದಿಲ್ಲ

ಆಹಾರ ಕಂಟ್ರೋಲ್, ಈಗಿನ ಆಹಾರ ಪರಿಸ್ಥಿತಿಯಲ್ಲಿ ತೆಗೆಯಲು ಸಾಧ್ಯವಿಲ್ಲವೆಂದು ಬೊಂಬಾಯಿಯಲ್ಲಿ ನಡೆದ ಆಹಾರ ಮಂತ್ರಿಗಳ ಸಭೆಯಲ್ಲಿ ತೀರ್ಮಾನವಾಯಿತೆಂದು ತಿಳಿಯಬರುತ್ತದೆ.

ಆಟಂಬಾಂಬು ಬಹಿಷ್ಕರಿಸಿ

ಆಟಂಬಾಂಬನ್ನು ಕಾನೂನು ಬಾಹಿರವಾಗಿ ಮಾಡಬೇಕು ಮತ್ತು ಆಟಾಮಿಕ್ ಶಕ್ತಿ ವಿನಿಯೋಗ ವಿಷಯವನ್ನು ಅಂತರ ರಾಷ್ಟ್ರೀಯ ವಿದೇಶಾಂಗ ಮಂತ್ರಿ ಆಂಡ್ರಿ ವಿಷಿನ್ಸ್ಕಿಯವರು ಪ್ರಪಂಚ ಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ಒತ್ತಾಯಮಾಡಿರುವರು.

ಕೊರಿಯಾಕ್ಕೆ ಹೆಚ್ಚಿಗೆ ಸೈನ್ಯ

ಕೋರಿಯ ಯುದ್ಧಕ್ಕಾಗಿ ಬಲಾತ್ಕಾರ ಮಿಲಿಟರಿ ಯೋಜನೆಗೆ ಜನವರಿಯಲ್ಲಿ ೮೦,೦೦೦ ಯುವಕರನ್ನು ಸೇರಿಸಿಕೊಳ್ಳಲು ನಿರ್ಧರಿಸಿದೆ. ಈ ಯುದ್ಧಕ್ಕಾಗಿಯೇ ೩,೭೦,೮೮೦ ಕ್ಕೆ ಸೈನ್ಯಕರನ್ನು ತೆಗೆದುಕೊಂಡಂತಾಗುವುದು.

ಚೈನಾಕ್ಕೆ ಸ್ಥಾನ

'ಪ್ರಪಂಚ ಸಂಸ್ಥೆಯಲ್ಲಿ ಚೀಣಾದ ಪರವಾಗಿ ಕಮ್ಯೂನಿಸ್ಟರ ಸರ್ಕಾರಕ್ಕೆ ಪ್ರಾತಿನಿಧ್ಯ ಕೊಟ್ಟು ಸ್ಥಾನವನ್ನು ಕೊಡುವ ವಿಷಯವನ್ನು ನಿರ್ಧರಿಸಲು ಪ್ರಪಂಚ ಸಂಸ್ಥೆಯ ಜನರಲ್ ಅಸೆಂಬ್ಲಿಯು 'ಏಳು ರಾಷ್ಟ್ರಗಳ ಸಮಿತಿಯೊಂದನ್ನು ನೇಮಿಸಿದೆ ಈ ಸಮಿತಿಯಲ್ಲಿ ಭಾರತ ಪ್ರತಿನಿಧಿಯೂ ಇದ್ದಾರೆ

ವಿಲನೀಕರಣ ನ್ಯಾಯಬದ್ಧವಲ್ಲ

ಬರೋಡಾ ಸಂಸ್ಥಾನವನ್ನು ಬೊಂಬಾಯಿ ಪ್ರಾಂತ್ಯದಲ್ಲಿ ಸಂಪೂರ್ಣವಾಗಿ ವಿಲೀನಗೊಳಿಸಿರುವುದು ನ್ಯಾಯಬದ್ಧವಲ್ಲವೆಂದು ಬರೋಡ ಮಹಾರಾಜರು ರಾಷ್ಟ್ರಪತಿ ರಾಜೇಂದ್ರಪ್ರಸಾದರಿಗೆ ಒಂದು ಮನವಿ ಸಲ್ಲಿಸಿದ್ದಾರೆ.

ಸರ್ದಾರ್ ಪಟೇಲರು

ಬೊಂಬಾಯಿಗೆ ಸರ್ದಾರರು ಬಂದ ಮೇಲೆ ಅವರ ದೇಹಸ್ಥಿತಿಯು ಉತ್ತಮವಾಗುತ್ತಲಿದೆ.

ಅಟಾಮಿಕ್ ಶಾಸ್ತ್ರಗಳಿಗೆ

ಅಟಾಮಿಕ್ ಶಾಸ್ತ್ರಗಳನ್ನು ತಯಾರಿಸಲು ೧,೦೫೦ ಮಿಲಿಯನ್ ಡಾಲರುಗಳನ್ನು ಹೊಸದಾಗಿ ಪುನಃ ಅಮೇರಿಕಾ ಸರ್ಕಾರವು ಪಡೆದಿದೆ.

ಮಾರ್ಷಲ್ ಸಹಾಯವಿಲ್ಲ

ಬ್ರಿಟನ್ನಿಗೆ ಮಾರ್ಷಲ್ ಸಹಾಯ ಯೋಜನೆಯ ಪ್ರಕಾರ ಅಮೇರಿಕಾವು ಕೊಡುತ್ತಲಿದ್ದ ದ್ರವ್ಯಸಹಾಯವನ್ನು ತಾತ್ಕಾಲಿಕವಾಗಿ ಅಮೇರಿಕಾ ಬ್ರಿಟನ್ನಿನ ಒಪ್ಪಂದವಾಗಿ ನಿಲ್ಲಿಸಲಾಗಿದೆಯೆಂದು ತಿಳಿಯಬರುತ್ತದೆ. ಪ್ರಕೃತದಲ್ಲಿ ಮಂಜೂರಾಗಿರುವ ೧೭೫ ಮಿಲಿಯನ್ನು ಡಾಲರುಗಳನ್ನು ಮಾತ್ರ ಬ್ರಿಟನ್ನು ಪಡೆಯುವುದೆಂದು ತಿಳಿಯಬರುತ್ತದೆ ಬ್ರಿಟನ್ನಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿರುವುದರಿಂದ ಮತ್ತು ಅಮೇರಿಕಾಕ್ಕೆ ಖರ್ಚು ವಿಶೇಷವಾಗುತ್ತಲಿರುವುದರಿಂದ ಈರೀತಿ ಸಹಾಯವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆಯೆಂದು ತಿಳಿಯಬರುತ್ತದೆ.

ಕಾರ್ಪೊರೇಷನ್ ವಾರ್ಷಿಕೋತ್ಸವ

ಬೆಂಗಳೂರು ಕಾರ್ಪೊರೇಷನ್ನಿನ ಪ್ರಥಮವಾರ್ಷಿಕೋತ್ಸವವು ಡಿ. ೧೭ನೇ ತಾ|| ಭಾನುವಾರ ಸರ್ ಕೆ. ಪಿ. ಪುಟ್ಟಣಶೆಟ್ಟಿರ ಪುರಭವನದಲ್ಲಿ ನಡೆಯಲಿದೆ. ನಗರದ ಪೌರರೆಲ್ಲಾ ಈ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಈ ಸಂದರ್ಭದಲ್ಲಿ ವಿವಿಧವಿನೋದಾವಳಿ ಮನರಂಜನೆ ಕಾರ್ಯಕ್ರಮವೊಂದು ನಡಯಲಿದೆ. ಮೈಸೂರಿನ ಮಾಜಿ ಸಚಿವ ಶ್ರೀ ಪಾಮಡಿ ಸುಬ್ಬರಾಮಶೆಟ್ಟಿಯವರು ಅಧ್ಯಕ್ಷತೆವಹಿಸುವರು.

ಮದರಾಸಿನಲ್ಲಿ ಆಹಾರಪರಿಸ್ಥಿತಿ

ಮದರಾಸಿನಲ್ಲಿ ಮುಂದಿನ ವರ್ಷ ಆಹಾರ ಪರಿಸ್ಥಿತಿಯು ಹೀನವಾಗುವುದೆಂದು ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜರವರು ಹೇಳಿರುವರು. ಸಕಾಲಕ್ಕೆ ಮಳೆಯಿಲ್ಲದೆ ಪೈರುಗಳೆಲ್ಲಾ ಹಾಳಾಗುತ್ತಲಿರುವುದರಿಂದ ಹೆಚ್ಚಿಗೆ ಆಹಾರ ಬೆಳೆಯಲು ಸಾಧ್ಯವಾಗಿಲ್ಲವೆಂದು ಹೇಳಲಾಗಿದೆ.

'ಲೌಡ್‌ಸ್ಪೀಕರ್' ಉಪಯೋಗಿಸಲು ಜಿಲ್ಲಾ ಮ್ಯಾಜಿಸ್ಟ್ರೇಟರ ಅನುಮತಿ ಅಗತ್ಯ

ನಗರದ ಕಾರ್ಪೊರೇಷನ್ ಸರಹದ್ದಿನೊಳಗೆ, ಯಾರೂ ತಮ್ಮ ಅನುಮತಿ ಪಡೆಯದೆ, ಲೌಡ್‌ಸ್ಪೀಕರ್‌ಗಳನ್ನು ಉಪಯೋಗಿಸಕೂಡದೆಂದು ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ.

ಹಳ್ಳಿಗಾಡಿನ ರೇಷನಿಂಗ್ ರದ್ದುಪಡಿಸುವ ವಿಚಾರದಲ್ಲಿ ವ್ಯವಸ್ಥೆ

ಗ್ರಾಮಾಂತರ ಪ್ರದೇಶಗಳಲ್ಲಿ ರೇಷನಿಂಗ್ ವ್ಯವಸ್ಥೆಯನ್ನು ರದ್ದುಪಡಿಸಬೇಕೇ ಇಲ್ಲವೇ ಎಂಬ ವಿಚಾರದಲ್ಲಿ ಎರಡೂವರೆ ದಿನ ಚರ್ಚೆಯಾದ ಮೇಲೆ, ಆಹಾರಮಂತ್ರಿಗಳ ಸಮ್ಮೇಳನದ ೮ ಜನರ ಉಪಸಮಿತಿಯು ಈವತ್ತು ಪ್ರಾತಃಕಾಲ ಒಂದು ವ್ಯವಸ್ಥೆಗೆ ಬಂದು ಅದನ್ನು ಸಮ್ಮೇಳನಕ್ಕೆ ಒಪ್ಪಿಸಲು ತೀರ್ಮಾನಿಸಿತು.

ಉಪಸಮಿತಿಯು ಅಧ್ಯಕ್ಷತೆವಹಿಸಿದ್ದ ಕೇಂದ್ರ ಆಹಾರ ಮಂತ್ರಿ ಕೆ ಎಂ. ಮುನ್ಷಿಯವರು ಮಧ್ಯಾಹ್ನ ಪತ್ರಿಕಾ ಪ್ರತಿನಿಧಿಗನ್ನು ಕಂಡು "ಎರಡೂವರೆ ಗಂಟೆಗಳ ಕಾಲ ಈವತ್ತು ಚರ್ಚೆ ನಡೆಸಿ ಎಲ್ಲ ಆಹಾರ ಸಮಸ್ಯೆಗಳ ವಿಚಾರದಲ್ಲೂ ಸಮಗ್ರವಾದ ಒಪ್ಪಂದಕ್ಕೆ ಬಂದಿದ್ದೇವೆ" ಎಂದರು.

ಸರ್ದಾರ್ ಪಟೇಲರು ಗುಣಮುಖರಾಗುತ್ತಿದ್ದಾರೆ

ದೆಹಲಿಯಿಂದ ಬೊಂಬಾಯಿವರೆಗಣ ಶ್ರಮಪ್ರದವಾದ ದೀರ್ಘಪ್ರಯಾಣವು ಸರ್ವಸಾಧಾರಣ ದಿನಗಳಲ್ಲೆ ಸರ್ದಾರ್ ಪಟೇಲರನ್ನು ಆಯಾಸಗೊಳಿಸುತ್ತಿದ್ದಿತಾದರೂ ದೆಹಲಿಯ ಅತಿ ಶೀತ ವಾತಾವರಣದಿಂದ ಬೊಂಬಾಯಿನ ಸುಖಕರವಾದ ಶೀತ ವಾತಾವರಣಕ್ಕೆ ಬಂದಿರುವ ಕಾರಣ ಸರ್ದಾರ್ ಪಟೇಲರು ಈಗಾಗಲೆ ಗುಣಮುಖರಾಗುತ್ತಿರುವುದು ವ್ಯಕ್ತಪಡುತ್ತಿದೆ.

ರಾಜಪ್ರಮುಖರಿಂದ ವೈಜ್ಞಾನಿಕ ಸಮ್ಮೇಳನದ ಪ್ರಾರಂಭೋತ್ಸವ

ವೈಜ್ಞಾನಿಕ ಸಮ್ಮೇಳನವನ್ನು ರಾಜಪ್ರಮುಖರು [illegible]

ರಾಜ್ಯಾಡಳಿತದಲ್ಲಿ ಶ್ರೀರಾಮನ ಪಾತ್ರ

ಮೈಸೂರು ಡಿ. ೧೩

ಪ್ರಜಾಸತ್ತಾತ್ಮಕ ಸರ್ಕಾರದ ಆಡಳಿತ ಪದ್ಧತಿಯನ್ನು ಕಲಿಯಲು ಯಾವ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರವಾಸ ಕೈಗೊಂಡು ಅಲ್ಲಿ ಕಲಿಯಬೇಕಾದ ಅವಶ್ಯಕವೇನೂ ಇಲ್ಲ.

ರಾಮಾಯಣವನ್ನು ಓದಿ ಶ್ರೀರಾಮನ ರಾಜ್ಯಾಡಳಿತ ನೈಪುಣ್ಯತೆಯನ್ನು ಯಾರು ಚೆನ್ನಾಗಿ ಅರಿತುಕೊಳ್ಳುವರೋ ಅವರಿಗೆ ಸಾಕಾದಷ್ಟು ಅನುಭವವು ನಮ್ಮ ದೇಶದಲ್ಲಿಯೇ ಸಿಗುವುದು ಎಂದು ಮದರಾಸಿನ ವಿದ್ಯಾಭೂಷಣ, ವಿದ್ಯಾ ವಾಚಸ್ಪತಿ ಶ್ರೀ. ಎಸ್. ಆರ್. ದೊರಸ್ವಾಮಿಶಾಸ್ತ್ರಿಗಳು ನಿನ್ನೆ ಪುರಭವನದಲ್ಲಿ ಭಾಷಣ ಮಾಡುತ್ತ ಹೇಳಿದರು.

ತಮ್ಮ ಭಾಷಣವನ್ನು ಮುಂದುವರಿಸುತ್ತ ರಾಮಾಯಣವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಭಾರತದ ಸಂಸ್ಕೃತಿಯನ್ನು ಚೆನ್ನಾಗಿ ಅರಿತುಕೊಂಡು ಅಭಿವೃದ್ಧಿಪಡಿಸಲು ಸಂಸ್ಕೃತ ಭಾಷೆಯನ್ನು ಕಲಿಯಬೇಕಾದುದು ಅತ್ಯವಶ್ಯಕವೆಂದೂ ಹೇಳಿದರು.

ಶ್ರೀ ಕೆ. ಟಿ. ಭಾಷ್ಯಂ

ಮೈಸೂರು ಡಿ. ೧೪

ಮೈಸೂರಿಗೆ ಆಗಮಿಸಿದ್ದ ಶ್ರೀ ಕೆ. ಟಿ. ಭಾಷ್ಯಂರವರು ನಿನ್ನೆ ರಾತ್ರಿ ಬೆಂಗಳೂರಿಗೆ ಹಿಂತಿರುಗಿದರು. ಅವರು ಪುನಃ ನಾಳೆ ಮೈಸೂರಿಗೆ ಬಂದು ಕಡಕೊಳದಲ್ಲಿರುವ ಗಣಿಗಳ ಕಾರ್ಮಿಕರ ಸಂಘಕ್ಕೆ ಭೇಟಿಯಿತ್ತು ರಾತ್ರಿ ೭-೩೦ ಗಂಟೆಗೆ ರೇಡಿಯೋ ಭಾಷಣ ಮಾಡಿ ರಾತ್ರಿಯೇ ಬೆಂಗಳೂರಿಗೆ ವಾಪಸ್ಸಾಗುವರು.

FOR SALE :

One Oliver No. 9 Brief size

Pica types Typewriter
in Excellent condition

THE TOURIST BUREAU,

Lansdowne Buildings, Mysore

ಗೀತಾ ಸಪ್ತಾಹ

ಶ್ರೀ ಗೀತಾಪ್ರಚಾರಿಣೀ ಸಭೆಯವರು ೧೯ನೇ ತಾ|| ಮಂಗಳವಾರ ಲಾಗಾಯ್ತು ೩೧ನೇ ತಾ|| ಭಾನುವಾರದವರೆಗೆ ಗೀತಾಸಪ್ತಾಹ ಮಹೋತ್ಸವವನ್ನು ಏರ್ಪಡಿಸಿರುವರು.

ಬೀರಕ್‌ನಗರ ಕಾಂಗ್ರೆಸ್ ವಶ

ನೇಪಾಳದ ಮುಖ್ಯ ವ್ಯಾಪಾರಸ್ಥಳವಾದ, ಖಾಟ್ಮಂಡುವಿಗೆ ೧೫೦ ಮೈಲಿ ದೂರದಲ್ಲಿರುವ ಬೀರರ್‌ನಗರವು ನೇಪಾಳಕಾಂಗ್ರೆಸ್ ಸ್ವಯಂಸೇವಕರ ವಶವಾಗಿದೆಯೆಂದು ವರದಿಬಂದಿದೆ. ಗೌರ್ನರಬಿಡಾರ ವಿನಹ ಮಿಕ್ಕ ಪ್ರದೇಶವೆಲ್ಲವೂ ಅವರ ಸ್ವಾಧೀನದಲ್ಲಿದೆಯೆಂದು ತಿಳಿಯಬರುತ್ತದೆ

ರೇಡಿಯೋ ಭಾಷಣ

ಇದೇ ೧೫ನೇ ತಾ|| ರಾತ್ರಿ ೭-೩೦ ಗಂಟೆಗೆ 'ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಅಭಿವೃದ್ಧಿ' ಎಂಬ ವಿಷಯದಲ್ಲಿ ಕಾರ್ಮಿಕ ಮತ್ತು ನ್ಯಾಯಾಂಗ ಮಂತ್ರಿ ಶ್ರೀ ಕೆ. ಟಿ. ಭಾಷ್ಯಂರವರು ಮೈಸೂರು ರೇಡಿಯೋ ಕೇಂದ್ರದಿಂದ ಭಾಷಣಮಾಡುವರು.

ಪಾರ್ಲಿಮೆಂಟಿನಲ್ಲಿ ನೂತನ ಮಸೂದೆಗಳು

ಕೇಂದ್ರ ಪಾರ್ಲಿಮೆಂಟಿನಲ್ಲಿ ಗೋರಕ್ಷಣೆ, ಏಕ ಪತ್ನೀತ್ವ, ವಿವಾಹ ವಯಸ್ಸು ನಿರ್ಧಾರ, ವಕೀಲವೃತ್ತಿ ಮುಂತಾದುವುಗಳಿಗೆ ಸಂಬಂಧಪಟ್ಟ ಬಿಲ್ಲುಗಳನ್ನು ಮಂಡಿಸಲಾಗಿದೆ.

ಒಲಂಪಿಯಾ

14-12-50 ರಿಂದ ದಿನವಹಿ 3 ಆಟಗಳು

ಅಪರಿಚಿತ ಕಾಡು ಮೃಗಗಳ ಭೇಟಿ

ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ
ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿ
ಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅವಲ್ಲವೆ
೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ
ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ

ಹಾಲ್‌ರೋಚ್‌ರವರ

ಒನ್ ಮಿಲಿಯನ್ ಬಿ. ಸಿ.

(ONE MILLION B.C.)

ನೀವು ಹಿಂದೆ ಎಂದೂ ನೋಡದ ಮುಂದೆ
ನೋಡದಿರುವ ಚಿತ್ರ

ನ್ಯೂ ಅಪೆರಾ

ತಾ|| ೯-೧೨-೫೦ ರಿಂದ ದಿನವಹಿ ೩ ಆಟಗಳು

★ ಭಾರತಿ ★

(ಕನ್ನಡ)

ಅಭಿನಯ—ಸಂಪತ್-ಮರಿರಾವ್, ರಾಜಕುಮಾರಿ-ಸೂರ್ಯಕುಮಾರಿ, ಲಲಿತ-ಪದ್ಮಿನಿ.

ಚೈನಾಕ್ಕೆ ಪ್ರಾತಿನಿಧ್ಯ ಕೊಡದಿರುವುದು ತಪ್ಪು

ಚೈನಾಪ್ರಜಾ ಸರ್ಕಾರಕ್ಕೆ ಮನ್ನಣೆಯನ್ನೀಯದಿ ವುದು ಒಂದು ದೊಡ್ಡ ತಪ್ಪು. ಮಂಚೂರಿಯಾ ಗ ಯವರೆಗೆ ಪರರಾಷ್ಟ್ರ ಸೈನ್ಯಗಳು ಬಂದಿರುವಾಗ ಚೈನಾ ಸುಮ್ಮನೆ ಹೇಗೆ ಕುಳಿತುಕೊಂಡಿರಲಾಗುವುದೆಂದು ಬ್ರಿ ಟ್ಟಿನ ವರ್ಕ್ಸ್ ಮಂತ್ರಿ ಮಿ|| ರಿಚರ್ಡ್‌ಸ್ಟೋಕ್ ರವರು ಅಮೇರಿಕಾ ನೀತಿಯನ್ನು ಖಂಡಿಸಿದ್ದಾರೆ.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೭ ಮೀಟರು

ಡಿಸೆಂಬರ್ ೧೫ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮ ವಿವರಣೆ ೭-೨೦ ವಿ. ಎಲ್. ರಾವ್ (ದೇವೀಭಜನೆ) ೭-೩ ಚಿತ್ರಲೋಕ (ರಿ) ೭,೪೫ ಕನ್ನಡದಲ್ಲಿ ವಾರ್ತೆ ೮- ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪ ಕ್ಲಾರಿಯೊನೆಟ್. ೧-೪೫ ಹಿಂದೀ ಶಿಕ್ಷಣ. ೨-೦ ನಿಮ್ಮ ಮೆಚ್ಚಿನ ಕಲಾವಿದರು. ೨-೩೦ ಮುಕ್ತಾಯ.

ಸಂಜೆ ೫-೩೦ ಎ. ಕೆ. ಕೃಷ್ಣ (ಪಿಟೀಲು) ೬- ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭- ಸ್ಥಳೀಯ ಪ್ರಕಟಣೆ (ಹಿಂದಿ). ೭-೫ ಹಿಂದೀವಾಚನ ೭-೧೫ ಎಂ. ಕೆ. ಕೃಷ್ಣ (ಪಿಟೀಲು) ೭-೩೦ ಕನ್ನಡದಲ್ಲಿ ಭಾಷಣ ೭-೪೫ ಇಂಗ್ಲೀಷಿನಲ್ಲಿ ವಾರ್ತೆ. ೮-೦ ನಾದಶ್ರೀ (ರಿ) ೮-೧೫ ವಿ ಎನ್. ರಾವ್ (ರಾಗ, ತಾನ ಪಲ್ಲವಿ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಅರಮನೆ ಆರ್ಕೆಸ್ಟ್ರಾ ೧೦-೦ ಮುಕ್ತಾಯ.

ರಣಜಿತ್

15-12-50 ರಿಂದ ಅಮೋಘ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಫಿಲಂಸ್ಥಾನರವರ

★ ಸರ್ಗಮ್ ★

(ಹಿಂದಿ)

ಪಾತ್ರ: ● ರಹೇನಾ ● ರಾಜಕಪೂರ್

ಬೆಳಗಿನ ಪ್ರದರ್ಶನ

ಬಾಂಬೆ ಟಾಕೀಸಿನವರ

ಕಿಸ್ಮತ್

ಪಾತ್ರ :

ಅಶೋಕ್‌ಕುಮಾರ್ ಮುಮ್ತಾಜ್‌ಶಾಂತಿ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೫—೧೨—೧೯೫೦ನೇ ಶುಕ್ರವಾರ [ಸಂಚಿಕೆ ೬೬

ಸರ್ದಾರ್ ಪಟೇಲರ ನಿಧನ



ರಘುಪತಿರಾಘವರಾಜಾರಾಂ ಪತಿತಪಾವನ ಸೀತಾರಾಂ

ಭಾರತ ಉಪಪ್ರಧಾನಿ ಸರ್ದಾರ್ ಪಟೇಲರು ಇಂದು ಬೆಳಿಗ್ಗೆ ೯-೩೭ ಗಂಟೆಗೆ ಬೊಂಬಾಯಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಸರ್ದಾರ್‌ಪಟೇಲರು ಈಗ್ಗೆ ಕೆಲವು ದಿವಸಗಳಿಂದ ಖಾಯಿಲೆಯಿದ್ದು ಸ್ವಲ್ಪ ಗುಣವಾಗಿ ಮೊನ್ನೆ ಬೊಂಬಾಯಿಗೆ ಆಗಮಿಸಿದರು. ಇಂದು ಬೆಳಗಿನ ಜಾವ ೩ ಗಂಟೆಯಲ್ಲಿ ಹೃದಯ ಬಾಧೆಯುಂಟಾಗಿ ಪ್ರಜ್ಞೆತಪ್ಪಿತು. ಕೂಡಲೇ ಆಮ್ಲಜನಕ ಪ್ರಯೋಗದಿಂದ ೯-೧೦ ಗಂಟೆ ವೇಳೆಗೆ ಸ್ವಲ್ಪಸುಸ್ಥಿಗೆ ಪ್ರಜ್ಞೆಬಂದಿತು. ೯ ೩೭ ವೇಳೆಗೆ ದೈವಾಧೀನರಾದರು. ಈ ಸಮಯದಲ್ಲಿ ಅವರ ಬಳಿ ಅವರ ಮಗ ದಯಾಭಾಯಿಪಟೇಲ್, ಪುತ್ರಿ ಶ್ರೀಮತಿ ಮಣಿಬೆನ್‌ಪಟೇಲು ಮತ್ತು ಇತರ ಬಂಧುವರ್ಗದವರೆಲ್ಲರೂ ಇದ್ದರು.

ದೈವಾಧೀನವಾದೊಡನೆಯೇ ವಿಷಯವನ್ನು ರಾಷ್ಟ್ರಪತಿ ಪ್ರಧಾನಿ ಮುಂತಾದವರಿಗೆ ತಿಳಿಸಿದರು. ಭಾರತಾದ್ಯಂತ ಪ್ರಜೆಗಳು ಶೋಕಸಾಗರದಲ್ಲಿ ಮುಳುಗಿರುವರು. ಎಲ್ಲಾ ಸರ್ಕಾರಿ ಕಛೇರಿ ಶಾಲಾ ಕಾಲೇಜುಗಳು ಮುಚ್ಚಲಾಗಿದೆ.

ತ್ರಿರಾಷ್ಟ್ರಗಳ ಕಮಿಷನ್

ಕೊರಿಯಾದಲ್ಲಿ ಸೀಸ್‌ಫೈರ್ ಏರ್ಪಡಿಸಬೇಕೆಂಬ ೧೩ ರಾಷ್ಟ್ರಗಳ ನಿರ್ಣಯವು ನಿನ್ನೆ ಪ್ರಪಂಚಸಂಸ್ಥೆಯ ರಾಜಕೀಯಸಮಿತಿಯಲ್ಲಿ ಅಂಗೀಕೃತವಾಯಿತು. ಇದರ ಬಗ್ಗೆ ಮೂರು ರಾಷ್ಟ್ರಗಳ ಒಂದು ಕಮಿಷನ್ ಏರ್ಪಡಬೇಕೆಂಬುದು ಅಂಗೀಕೃತವಾಯಿತು. ಕಮಿಷನ್‌ನಲ್ಲಿ ಭಾರತ, ಕೆನಡಾದ ಪ್ರತಿನಿಧಿಗಳು ಮತ್ತು ಅಸೆಂಬ್ಲಿ ಅಧ್ಯಕ್ಷರು ಇವರು ಮೂವರು ಇರುವರು

ಮೈಸೂರಿನಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯ

ಮೈಸೂರು ಡಿ ೧೫

ಮೈಸೂರಿನ ಮಾಜಿ ವಿದ್ಯಾಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ನಿನ್ನೆ ಆಗಮಿಸಿದರು. ನಾಳೆ ಬೆಳಗ್ಗೆ ಶ್ರೀಮನ್ಮಹಾರಾಜರನ್ನು ಭೇಟಿಮಾಡಲಿರುವರೆಂದು ತಿಳಿಯಬರುತ್ತದೆ

ದಕ್ಷಿಣ ಭಾರತದಲ್ಲಿ ಪ್ರಯಾಣ ವಿಮಾನ ಅಪಘಾತ ಇದೇ ಪ್ರಥಮ

ಮದರಾಸು ಅಧಿಕಾರಿಗಳ ಕರ್ತವ್ಯನಿಷ್ಠೆ

ಇನ್ನೂ ವಿಮಾನ ಪತ್ತೆ ಇಲ್ಲ

ಮೈಸೂರು ಡಿ ೧೫

ಮದರಾಸಿನಿಂದ ಬೆಂಗಳೂರು ಮಾರ್ಗವಾಗಿ ತಿರುವಾಂಕೂರಿಗೆ ೧೭ ಜನ ಪ್ರಯಾಣಿಕರನ್ನು ಕರೆದೊಯ್ಯುತ್ತಲಿದ್ದ ವಿಮಾನವು ಇಂದು ಸಂಜೆ ೫ ಗಂಟೆಯವರೆವಿಗೂ ಪತ್ತೆಯಾಗಿರಲಿಲ್ಲ. ವಿಮಾನವು ಬಿಳಿಗಿರಿರಂಗನ ಬೆಟ್ಟದ ಶ್ರೇಣಿಯಲ್ಲಿ ಬಿದ್ದಿರಬಹುದೆಂದು ಊಹಿಸಲಾಗಿದೆ. ನಿನ್ನೆ ಸಂಜೆವೇಳೆಗೇ ಕೊಯಮುತ್ತೂರುಕಡೆಯಿಂದ ಮದರಾಸಿನ ಮಿಲಿಟರಿ ಮತ್ತು ಪೋಲೀಸು ಅಧಿಕಾರಿಗಳು ಬಿಳಿಗಿರಿರಂಗನ ಬೆಟ್ಟಕ್ಕೆ ಬಂದು ವಿಮಾನವನ್ನು ಪತ್ತೆ ಹಚ್ಚಲು ವಿಶೇಷ ಶೋಧನೆ ಮಾಡುತ್ತಲಿರುವರು.

ಕೊಯಮತ್ತೂರು ಡಿ ಎಸ್ ಪಿ ಮಿ|| ಹಾರ್ವಿ ಮದರಾಸಿನ ಎರಡನೇ ಬೆಟಾಲಿಯನ್‌ಗೆ ಸೇರಿದ ಕ್ಯಾಪ್ಟನ್ ಸುಂದರಂ, ಮೇಜರ್ ಜಗದೇವ್, ಕ್ಯಾಪ್ಟನ್ ಮಂಜೀರ್ ಮುಂತಾದ ಪೋಲೀಸು ಮತ್ತು ಮಿಲಿಟರಿ ಅಧಿಕಾರಿಗಳು ತಮ್ಮ ದಳಗಳೊಡನೆ, ಏರ್ ಇಂಡಿಯಾದ ಕ್ಯಾಪ್ಟನ್ ಡವೀಸ್ ಮುಂತಾದವರೆಲ್ಲರೂ ಪತ್ತೆಹಚ್ಚುವ ಕಾರ್ಯದಲ್ಲಿ ಉದ್ಯುಕ್ತರಾಗಿರುವರು. ನಾಲ್ಕೈದು ವೈರ್‌ಲೆಸ್ ರೇಡಿಯೋ ಸೆಟ್ಟುಗಳನ್ನು ತಂದು ಬೆಟ್ಟದ ಬೇರೆ ಬೇರೆ ಪ್ರದೇಶಗಳಲ್ಲಿ ಒಂದೊಂದು ಪಡೆಯನ್ನಿಟ್ಟು ಕಾರ್ಯವನ್ನೆಸಗುತ್ತಲಿರುವರು. ೪,೨೦೦ ಅಡಿ ಎತ್ತರದಲ್ಲಿರುವ ಹನ್ನೆವಟ್ಟಿ ಎಸ್ಟೇಟಿನ ಮಾಲೀಕರಾದ ಕರ್ನಲ್ ಮತ್ತು ಮಿಸೆಸ್ ಮಾರಿಸ್‌ರವರು ಈ ಪತ್ತೆಕಾರ್ಯದಲ್ಲಿ ತೊಡಗಿರುವರೊಡನೆ ತಾವೂ ಸೇರಿ ಇವರಿಗೆ ವಿಶೇಷ ಸಹಾಯಮಾಡುತ್ತಲಿರುವರು

ನಮ್ಮ ವಿಶೇಷ ಪ್ರತಿನಿಧಿಯು ಇಂದು ಈ ಪ್ರಾಂತ್ಯಕ್ಕೆ ಭೇಟಿಯಿತ್ತಾಗ ಮಧ್ಯಾಹ್ನದಲ್ಲಿಯೇ ಇಲ್ಲಿ ವಿಶೇಷವಾಗಿ ಮಂಜುಬೀಳುತ್ತಲಿದ್ದುದರಿಂದ ಹನ್ನವಟ್ಟಿ ಎಸ್ಟೇಟಿಗೆ ಹೋಗುವುದೇ ದುಸ್ಸಾಧ್ಯವಾಯಿತು. ಚಾಮರಾಜನಗರಕ್ಕೆ ೧೮ ಮೈಲಿನಲ್ಲಿರುವ ಗುಡಹಟ್ಟಿ ಫಾರೆಸ್ಟ್ ಲಾಡ್ಜಿನ ಹತ್ತಿರ ವಿಚಾರಿಸಲಾಗಿ ನಿನ್ನೆ ಬೆಳಗ್ಗೆ ಸುಮಾರು ೧೦.೩೦ ಗಂಟೆ ಸಮಯದಲ್ಲಿ ವಿಮಾನವೊಂದು ಬಿದ್ದ ಶಬ್ದ ಕೇಳಬಂತೆಂದು ಅಲ್ಲಿಯ ಫಾರೆಸ್ಟು ಗಾರ್ಡ್ ಸಯ್ಯದ್‌ಖಾದರ್ ಎಂಬುವರು ಹೇಳಿದರು. ಹನ್ನವಟ್ಟಿ ಎಸ್ಟೇಟಿನ ಮಿಸೆಸ್ ಮಾರಿಸ್‌ರವರು ಸಹ ೧೦.೩೦ ಗಂಟೆ ಸಮಯದಲ್ಲಿ ಒಂದು ವಿಮಾನವನ್ನು ಎರಡು ಪರ್ವತಶ್ರೇಣಿಗಳ ನಡುವೆ ನೋಡಿದುದಾಗಿ ಹೇಳಿದರು. ಈ ವರ್ತಮಾನದಿಂದ ವಿಮಾನವು ಈ ಪ್ರಾಂತ್ಯದಲ್ಲಿಯೇ ಅಪಘಾತಕ್ಕೀಡಾಗಿದೆಯೆಂದು ಊಹಿಸಲಾಗಿದೆ. ೨,೦೦೦ ೩,೦೦೦ ಅಡಿ ಆಳವಿರುವ ಗಿಡ, ಮರ, ಕಾಡುಮೃಗಗಳಿಂದ ಕೂಡಿದ ಕಮರಿಗಳಲ್ಲಿಯೇ ಈ ವಿಮಾನವು ಬಿದ್ದಿರಬಹುದೆಂದು ಹೇಳಲಾಗಿದೆ. ಈ ನಿಬಿಡವಾದ ಕಾಡಿನಲ್ಲಿ ಈ ವಿಮಾನವನ್ನು ಪತ್ತೆ ಹಚ್ಚಲಾಗುತ್ತದೆಯೋ ಇಲ್ಲವೋ ಎಂಬ ಸಂಶಯವು ಸಹ ಈಗಾದು ಪ್ರಶ್ನೆಯುಂಟಾಗುತ್ತದೆ. ಇದ್ದಕ್ಕಿದ್ದ

ಯೇ ವಿಶೇಷವಾಗಿ ಮಂಜು ಮುಚ್ಚಿಕೊಂಡು ಮಾರ್ಗವೆಲ್ಲವೂ ಕಾಣದಹಾಗಾಗುತ್ತದೆ. ಆದಾಗ್ಯೂ ಮದರಾಸಿನ ಪೋಲೀಸು ಮತ್ತು ಮಿಲಿಟರಿಯವರು ವಿಮಾನವನ್ನು ಪತ್ತೆ ಹಚ್ಚಲು ಸರ್ವಪ್ರಯತ್ನ ಮಾಡುತ್ತಲಿರುವರು.

ವಿಮಾನ ಅಪಘಾತದ ವಿಷಯವನ್ನು ಕೊಯಮತ್ತೂರು ಪೋಲೀಸಿನವರು ಚಾಮರಾಜನಗರ ಪೋಲೀಸ್ ಅಧಿಕಾರಿಗಳಿಗೆ ಇಂದು ಬೆಳಗ್ಗೆ ತಂತಿಮೂಲಕ ತಿಳಿಸಿದ ಮೇಲೆ ಚಾಮರಾಜನಗರದ ಅಮಲ್ದಾರ್ ಶ್ರೀ ಮುರುಘೇಂದ್ರಸ್ವಾಮಿ ಮತ್ತು ಸಬ್-ಇನ್ಸ್‌ಪೆಕ್ಟರು ಶ್ರೀ ಸುಬ್ರಹ್ಮಣ್ಯಶಾಸ್ತ್ರಿಯವರು ಪೋಲೀಸ್ ಸಿಬ್ಬಂದಿಯೊಡನೆ ಹನವಟ್ಟಿ ಎಸ್ಟೇಟ್ ಬಳಿಗೆ ಬಂದು ಮದರಾಸಿನ ಅಧಿಕಾರಿಗಳಿಗೆ ಸಹಾಯನೀಡುತ್ತಲಿರುವರು.

ಮೈಸೂರು ಜಿಲ್ಲಾ ಪೋಲೀಸ್ ಸೂಪರಿನ್‌ಟೆನ್‌ಡೆಂಟರಿಗೆ ಈ [illegible] ಗಂಟೆವೇಳೆಗೆ ತಿಳಿಯಲಾಗಿ ಅವರೂ ಸಹ ಕೆಲವು ಪೋಲೀಸು ಅಧಿಕಾರಿಗಳೊಡನೆ ಹನವಟ್ಟಿ ಎಸ್ಟೇಟಿನ ಹತ್ತಿರಕ್ಕೆ ಸಂಜೆ ೫-೩೦ ಗಂಟೆ ವೇಳೆಗೆ ಬಂದರು. ೫ ಗಂಟೆ ವೇಳೆಗೆ ಮಂಜು ವಿಶೇಷವಾಗಿ ಕವಿದು ಒಬ್ಬರನ್ನೊಬ್ಬರು ಕಾಣುವುದೂ ದುಸ್ಸಹವಾದುದರಿಂದ ಪತ್ತೆ ಕೆಲಸವನ್ನು ನಾಳೆ ಕೈಗೊಳ್ಳುವುದೆಂದು ನಿರ್ಧರಿಸಿ ಎಲ್ಲರೂ ವಿಶ್ರಾಂತಿಗೆ ತೆರಳಿದ ಮೇಲೆ ಮೈಸೂರು ಪೋಲೀಸಿನವರು ಆ ಸ್ಥಳಕ್ಕೆ ಹೋಗಲಾಗಿ ಯಾವ ಮುಂದಿನ ಕಾರ್ಯದಲ್ಲಿ ಭಾಗವಹಿಸಲಾರದೆ ಹಿಂತಿರುಗಿದರು. ಮೈಸೂರಿನ ಫಾರೆಸ್ಟ್ ಇಲಾಖಾಧಿಕಾರಿಗಳೂ ಸಂಜೆ ೫ ಗಂಟೆವರೆಗೆ ಎಲ್ಲಿಯೂ ಕಾಣಬರಲಿಲ್ಲ. ಪುನಃ ಪತ್ತೆಹಚ್ಚುವ ಕಾರ್ಯವು ನಾಳೆ ಬೆಳಗ್ಗೆ ಪ್ರಾರಂಭವಾಗುವುದು.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನರವರ
★ ಸರ್ಗಮ್ ★
(ಹಿಂದಿ)
ಪಾತ್ರ: ● ರಹೇನಾ ● ರಾಜಕಪೂರ್

ಬೆಳಗಿನ ಪ್ರದರ್ಶನ
ಬಾಂಬೆ ಟಾಕೀಸಿನವರ
ಕಿಸ್ಮತ್
ಪಾತ್ರ.
ಅಶೋಕ್‌ಕುಮಾರ್ ಮುಂಮ್ತಾಜ್‌ಶಾಂತಿ

ಭಾರತದಲ್ಲಿ ಆಟಾಮಿಕ್ ಸಮ್ಮೇಳನ

ಇಂದು ಬೊಂಬಾಯಿನಲ್ಲಿ ಟಾಟಾರಿಸರ್ಚ್ ಇನ್ಸ್ಟಿಟ್ಯೂಟ್‌ನ ಆಶ್ರಯದಲ್ಲಿ ಹತ್ತು ದಿನಗಳ ಪ್ರಪಂಚದ ಪರಮಾಣುಸಂಶೋಧನಾ ಸಮ್ಮೇಳನವು ಪ್ರಾರಂಭವಾಯಿತು. ಭಾರತದಲ್ಲಿ ಈ ಸಮ್ಮೇಳನವು ನಡೆಯುತ್ತಿರುವುದು ಇದೇ ಮೊದಲನೇ ಬಾರಿ. ಪ್ರತಿನಿಧಿಗಳನ್ನು ಕುರಿತು ಬೊಂಬಾಯಿನ ಮುಖ್ಯಮಂತ್ರಿ ಬಿ. ಜಿ ಖೇರ್‌ರವರು ಭಾಷಣಮಾಡಿದರು. ಶ್ರೀ. ಜೆ ಆರ್. ಡಿ ಟಾಟಾ ಮತ್ತು ಪ್ರೊ- ಬ್ಲಾಕೆಟ್‌ರವರು ಸ್ವಾಗತ ಭಾಷಣವನ್ನು ಮಾಡಿದರು. ಪಂಡಿತ ನೆಹರೂರವರು ಸಮ್ಮೇಳನಕ್ಕೆ ಶುಭ ಸಂದೇಶಗಳನ್ನು ಕಳುಹಿಸಿದ್ದಾರೆ. ಈ ಸಮ್ಮೇಳನದಲ್ಲಿ ಏಷ್ಯಾ, ಅಮೇರಿಕ ದೇಶಗಳ ಪ್ರತಿನಿಧಿಗಳೂ ವೈಜ್ಞಾನಿಕರೂ ಭಾಗವಹಿಸಿದ್ದಾರೆ. ಸುಮಾರು ೨೫೦ ಮಂದಿ ಪ್ರತಿನಿಧಿಗಳು ಮತ್ತು ವೈಜ್ಞಾನಿಕರ ಗೌರವಾರ್ಥವಾಗಿ ಟಾಟಾ ಇನ್‌ಸ್ಟಿಟ್ಯೂಟಿನ ಪರವಾಗಿ ಶ್ರೀ. ಜೆ ಆರ್ ಡಿ ಟಾಟಾರವರು ನಿನ್ನೆ ಸತ್ಕಾರ ಕೂಟವನ್ನೇರ್ಪಡಿಸಿದ್ದರು

ಬೆಂಗಳೂರಿನಲ್ಲಿ ಜನವರಿ ೧ ರಲ್ಲಿ ನಡೆಯಲಿರುವ ಎಂಟು ದಿವಸದ ಭಾರತೀಯ ವೈಜ್ಞಾನ ಶಾಸ್ತ್ರಸಮ್ಮೇಳನದ ಜೊತೆಯಲ್ಲಿ ಹಿಂದೂ ಸಾಗರದ ವಿಜ್ಞಾನ ಸಮ್ಮೇಳನವು (Indian Ocean Science Congress) ನಡೆಯುವುದು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್ ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್ ರಾಮರಾವ್, ಬಿ ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

FOR SALE :

One Oliver No. 9 Brief size
Pica types Typewriter
in Excellent condition

THE TOURIST BUREAU,
Lansdowne Buildings, Mysore

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯·೪೬ ಮೀಟರು
ಡಿಸೆಂಬರ್ ೧೬ ಶನಿವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮದ ವಿವರಣೆ. ೭-೨೦ ಚಿತ್ರಜಗತ್ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ದಿಲ್‌ರುಬ ೧-೪೫ ಎಸ್. ಶಮಂತಕಮಣಿ (ಕನ್ನಡ ಗೀತೆ) ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಸಂಗೀತ ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಮದುರೈಮಣಿ ಐಯ್ಯರ್ (ರಿ) ೬-೨೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ತಾಳವಾದ್ಯ ೭-೧೫ ವನಿತಾ ವಿಹಾರ (ಹೆಂಗಸರಿಗಾಗಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಕಥಾಕಾಲಕ್ಷೇಪ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನವಾರಿಧಿ (ರಿ) ೧೦-೦ ಮುಕ್ತಾಯ.

೨೭ನೇ ತಾರೀಖಿನೊಳಗೆ ಶ್ರೀ ರೆಡ್ಡಿಯವರ ರಾಜೀನಾಮೆಯೇ?

ಇದೇ ಮಾಹೆ ೨೭ನೇ ತಾರೀಖಿನೊಳಗೆ ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ರಾಜೀನಾಮೆಕೊಡುವರೆಂದು ಕೆಲವು ವೃತ್ತಗಳಲ್ಲಿ ಹೇಳಲಾಗುತ್ತಲಿದೆ.

ಸಿಂಗಪುರದಲ್ಲಿ ಕರ್ಫ್ಯೂ

ನಿನ್ನೆ ಸಿಂಗಪುರದಲ್ಲಿ ಸ್ವಲ್ಪ ಗಲಭೆಯಾದುದರಿಂದ ನಗರದಲ್ಲೆಲ್ಲಾ ಕರ್ಫ್ಯೂ ವಿಧಿಸಲಾಗಿದೆ.

ಒಲಿಂಪಿಯಾ
14-12-50 ರಿಂದ ದಿನವಹಿ 3 ಆಟಗಳು
ಅಪರಿಚಿತ ಕಾಡು ಮೃಗಗಳ ಭೇಟಿ
ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ
ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿ
ಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅವಲ್ಲದೆ
೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ
ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ
ಹಾಲ್‌ರೋಚ್‌ರವರ
ಒನ್ ಮಿಲಿಯನ್ ಬಿ. ಸಿ.
(ONE MILLION B.C.)
ನೀವು ಹಿಂದೆ ಎಂದೂ ನೋಡದೆ ಮುಂದೆ
ನೋಡದಿರುವ ಚಿತ್ರ

ಬೆಳಗಿನ ಪ್ರದರ್ಶನ 15-12-50 ರಿಂದ
3 ದಿನ ಮಾತ್ರ
"ಹಾಂಟೆಡ್ ಹಾರ್ಬರ್"

ನ್ಯೂ ಅಪೆರಾ
ತಾ॥ ೯-೧೨-೫೦ ರಿಂದ
ದಿನವಹಿ ೩ ಆಟಗಳು
★ ಭಾರತಿ ★
(ಕನ್ನಡ)
ಅಭಿನಯ—ಸಂಪತ್-ಮರಿರಾವ್, ರಾಜಕುಮಾರಿ-ಸೂರ್ಯಕುಮಾರಿ, ಲಲಿತ-ಪದ್ಮಿನಿ.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೬—೧೨—೧೯೫೦ನೇ ಶನಿವಾರ [ಸಂಚಿಕೆ ೮೯

ವಿಮಾನ ಇನ್ನೂ ಪತ್ತೆ ಇಲ್ಲ

ಮದರಾಸಿನಿಂದ ಇನ್ನೂ ೬೦೦ ಜನ ಮಿಲಿಟರಿಯವರು ಪತ್ತೆಮಾಡಲು ಬರಲಿರುವರು

(ನಮ್ಮ ವಿಶೇಷ ಪ್ರತಿನಿಧಿಯಿಂದ) ಮೈಸೂರು ಡಿ. ೧೬

ನಿನ್ನೆ ಸಂಜೆ ೭ ಗಂಟೆಯವರೆಗೂ ಇನ್ನೂ ಬಿಳಿಗಿರಿರಂಗನ ಬೆಟ್ಟದಲ್ಲಿ ಅಪಘಾತಕ್ಕೀಡಾಗಿರುವ ವಿಮಾನವು ಪತ್ತೆಯಾಗಿಲ್ಲ. ಮದರಾಸು ಪ್ರಾಂತ್ಯದ ಪೋಲೀಸ್ ಮತ್ತು ಮಿಲ್ಟರಿಯವರು ರಾತ್ರಿ ಹಗಲು ಪತ್ತೆಮಾಡಲು ಶ್ರಮಿಸುತ್ತಲಿರುವರು.

ಚಾಮರಾಜನಗರದಲ್ಲಿ ಬಿಡಾರಮಾಡಿರುವ ಮೈಸೂರಿನ ಜಿಲ್ಲಾ ಪೋಲೀಸ್ ಅಧಿಕಾರಿಗಳು ನಿನ್ನೆ ಸಂಜೆ ೪ ಗಂಟೆವೇಳೆಗೆ ಪತ್ತೆ ಹಚ್ಚಲು ಶ್ರಮಿಸುತ್ತಲಿರುವರಲ್ಲಿ ಈ ಸುದ್ದಿಯನ್ನು ವಿಚಾರಿಸಿಕೊಂಡು ಚಾಮರಾಜನಗರಕ್ಕೆ ಹಿಂತಿರುಗಿರುವರು.

ಮೈಸೂರು ಪೋಲೀಸ್ ಮತ್ತು ಫಾರೆಸ್ಟ್ ಇಲಾಖೆಯವರ ಸಹಕಾರವಿಲ್ಲದಿರುವುದಕ್ಕಾಗಿ ಕೆಲವು ಮದರಾಸಿನ ಅಧಿಕಾರಿಗಳು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು.

[ವಿಮಾನ ಅಪಘಾತದ ಸುದ್ದಿ ಬಂದೊಡನೆಯೇ ಮದರಾಸಿನ ಪೋಲೀಸು ಮತ್ತು ಮಿಲ್ಟರಿ ಅಧಿಕಾರಿಗಳು ತಮ್ಮ ದಳಗಳೊಡನೆ ಪತ್ತೆ ಹಚ್ಚಲು ಬುಧವಾರದಿಂದಲೇ ಬಿಳಿಗಿರಿರಂಗನ ಬೆಟ್ಟವನ್ನೆಲ್ಲಾ ಹುಡುಕುತ್ತಲಿರುವ ವೇಳೆ ನಮ್ಮ ಮೈಸೂರು ಪೋಲೀಸಿನವರೂ ಸಹ ತಮಗೆ ಈ ವಿಷಯವು ತಿಳಿದೊಡನೆಯೇ ತಕ್ಕ ಸಿಬ್ಬಂದಿಯೊಡನೆ ಆ ಸ್ಥಳಕ್ಕೆ ಹೋಗಿ ಮದರಾಸಿನವರೊಡನೆ ಕಲೆತು ಪತ್ತೆ ಕೆಲಸದಲ್ಲಿ ಭಾಗವಹಿಸಬೇಕಾಗಿದ್ದುದು ಅವರ ಕರ್ತವ್ಯ ಅದನ್ನು ಬಿಟ್ಟು ಬೆಳಗ್ಗೆ ವರ್ತಮಾನ ತಿಳಿದರೂ ಸಂಜೆ ವೇಳೆಗೆ ಪತ್ತೆಕಾರ್ಯವನ್ನು ಮುಂದುವರಿಸಲಾಗದ ವೇಳೆಗೆ ಆ ಸ್ಥಳಕ್ಕೆ ಹೋಗಿ ಹಿಂತಿರುಗಿದುದು ಅತ್ಯಂತ ಶೋಚನೀಯ. ನಮ್ಮ ಸಂಸ್ಥಾನದಲ್ಲಿ ಉಂಟಾಗಿರುವ ಈ ಅಪಘಾತವನ್ನು ಪತ್ತೆ ಹಚ್ಚಲು ಮದರಾಸಿನವರಿಗಿಂತಲೂ ನಮ್ಮವರು ಹೆಚ್ಚಾಗಿ ಶ್ರಮವಹಿಸಬೇಕಾದುದು ನಮ್ಮ ಅಧಿಕಾರಿಗಳ ಮುಖ್ಯ ಕರ್ತವ್ಯ ನೂರಾರು ಜನ ಮಿಲಿಟರಿ ಮತ್ತು ಪೋಲೀಸ್‌ನವರು ಕೊಯಮತ್ತೂರು ನೀಲಗಿರಿ ಮುಂತಾದ ಕಡೆಯಿಂದ ಬಂದು ರಾತ್ರಿ ಹಗಲು ಈ ಪತ್ತೆಕಾರ್ಯದಲ್ಲಿ ತೊಡಗಿರುವ ವೇಳೆಯಲ್ಲಿ ನಮ್ಮ ಪೋಲೀಸ್ ಅಧಿಕಾರಿಗಳೂ, ಫಾರೆಸ್ಟ್ ಅಧಿಕಾರಿಗಳೂ, ರಿಸರ್ವ್ ಪೋಲೀಸ್ ಮತ್ತು ಫಾರೆಸ್ಟ್ ಸಿಬ್ಬಂದಿಯೊಡನೆ ಹೆಚ್ಚಿಗೆ ಸಂಖ್ಯೆಯಲ್ಲಿ ಆ ಸ್ಥಳಕ್ಕೆ ಆ ದಿನವೇ ಅವರನ್ನು ಕೊಂಡೊಯ್ದು ಅಲ್ಲಿ ಪತ್ತೆ ಹಚ್ಚುವ ಕಾರ್ಯದಲ್ಲಿ ಮದರಾಸಿನವರೊಡನೆ ಹೆಚ್ಚಾಗಿ ಸಹಕರಿಸಿದ್ದರೆ ಕಾರ್ಯವು ತ್ವರಿತವಾಗಿ ನಡೆಯುತ್ತಿರಲಿಲ್ಲವೇ? ಅದನ್ನು ಬಿಟ್ಟು ಸ್ವಲ್ಪ ಪೋಲೀಸು ಅಧಿಕಾರಿಗಳು ಚಾಮರಾಜನಗರದಲ್ಲಿ ಬಿಡಾರ ಮಾಡಿ ನಿತ್ಯವೂ ಮಧ್ಯಾಹ್ನದ ವೇಳೆಗೆ ಅವರು ಹುಡುಕುತ್ತಲಿರುವ ಪ್ರದೇಶಕ್ಕೆ ಹೋಗಿ ಸಮಾಚಾರವನ್ನು ತಿಳಿದುಕೊಂಡು ಹಿಂತಿರುಗುತ್ತಲಿರುವುದು ನಮ್ಮ ಅಧಿಕಾರಿಗಳಿಗೆ ಈ ವಿಷಯದಲ್ಲಿ ಎಷ್ಟು ಮುತವರ್ಜಿಯಿದೆಯೆಂಬುದು ತಿಳಿಯಬರುತ್ತಿದೆ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳು

ಸರ್ದಾರರ ಅಂತ್ಯ ಸಂಸ್ಕಾರ

ದೇಶಾದ್ಯಂತ ಜನರು ಶೋಕ ಸಾಗರದಲ್ಲಿ ಮುಳುಗಿರುವರು

ಸ್ವಾತಂತ್ರ ಸಂಗ್ರಾಮ ವೀರಾಗ್ರಣಿಯ ಕಣ್ಮರೆ

ಬೊಂಬಾಯಿ ಸೋಲಾಪುರದ ಹಸಘಾಟಿನಲ್ಲಿ ಸರ್ದಾರರ ಅಣ್ಣ ಶ್ರೀ ವಿಠಲಭಾಯಿ ಪಟೇಲರ ಸಮಾಧಿ ಮಗ್ಗುಲಲ್ಲಿಯೇ ನಿನ್ನೆ ಸಂಜೆ ೭-೨೫ರ ವೇಳೆಗೆ ಶವ ಸಂಸ್ಕಾರವು ನಡೆಯಿತು

ಪಟೇಲರು ನಿಧನರಾದ ಮೇಲೆ ಅವರ ಶವವನ್ನು ಪ್ರಜೆಗಳೆಲ್ಲರೂ ದರ್ಶನಮಾಡಿ ಅಂತ್ಯ ಪ್ರಣಾಮಗಳನ್ನು ಸಲ್ಲಿಸಲೋಸುಗ ೧೦ ಗಂಟೆಕಾಲ ಅದನ್ನು ಬಿರ್ಲಾಭವನದಲ್ಲಿಟ್ಟಿದ್ದರು ಆ ವೇಳೆಗಾಗಲೇ ಡೆಹಲಿಯಿಂದ ರಾಷ್ಟ್ರಾಧ್ಯಕ್ಷ ಪ್ರಧಾನಿ ನೆಹರೂರವರು ಶ್ರೀ ಸಿ. ರಾಜಗೋಪಾಲಾಚಾರಿ ಮುಂತಾದ ಎಲ್ಲಾ ಸಚಿವರು ವಿದೇಶ ರಾಯಭಾರಿ ಮುಂತಾದವರೆಲ್ಲರೂ ಬೊಂಬಾಯಿಗೆ ಆಗಮಿಸಿದರು.

ಸಂಜೆ ೫-೧೫ರ ವೇಳೆಗೆ ಸರ್ದಾರ ಪಟೇಲರ ಕಳೇಬರವನ್ನು ಕುಂಕುಮತಿಲಕ ಗಂಧಾದಿಲೇಪನ ಹೂಮಾಲೆಗಳಿಂದ ಅಲಂಕರಿಸಿ ಫಿರಂಗಿ ಗಾಡಿಗೆ ತಂದು ಇಳಿಸಿ ಮಿಲಿಟರಿ ಗೌರವವನ್ನು ಸಲ್ಲಿಸಿದ ವೇಳೆ ಮೆರವಣಿಗೆಯು ಹೊರಟಿತು. ಶವದ ಮಗ್ಗುಲಲ್ಲಿ ಸರ್ದಾರರ ಮಗ ಶ್ರೀ ದಯಾಭಾಯಿಪಟೇಲ್ ಮತ್ತು ಪುತ್ರಿ ಶ್ರೀ ಮಣಿಬೆನ್ ಪಟೇಲ್ ಗಾಡಿಯಲ್ಲಿ ಕುಳಿತಿದ್ದರು ಹಿಂದೆ ಬಂದು ಜೀಪಿನಲ್ಲಿ ರಾಷ್ಟ್ರಾಧ್ಯಕ್ಷರು, ಪ್ರಧಾನಿ ನೆಹರೂ, ಶ್ರೀ ಸಿ. ರಾಜಗೋಪಾಲಚಾರಿ ಮುಂತಾದವರೂ, ಕಪ್ಪು ಕೈಪಟ್ಟಿಕಟ್ಟಿದ ಪೋಲೀಸ್ ಮತ್ತು ಮಿಲಿಟರಿಯವರು ಸಂದೇಶಗಳ ರಾಯಭಾರಿಗಳು ಬಂಧು ಮಿತ್ರರನೇಕರು ಹಿಂದೆ ಹೊರಟರು ೧೦ ಲಕ್ಷ ಜನರು ಮೇಲ್ಪಟ್ಟು ೪ ಮೈಲಿಯ ಈ ಮೆರವಣಿಗೆಯನ್ನು ನೋಡಲು ಕಿಕ್ಕಿರಿದು ಪುಷ್ಪಗಳನ್ನು ಅರ್ಪಿಸುತ್ತಲಿದ್ದರು ಅನೇಕ ವಿಮಾನಗಳು ಆಕಾಶದಲ್ಲಿ ಹಾರಾಡುತ್ತ ಶವದ ಮೇಲೆ ಹೂವಿನ ಸುರಿಮಳೆಗರೆಯುತ್ತಲಿದ್ದವು. ನೌಕಾ, ವಿಮಾನ ಸೈನ್ಯಗಳೆಲ್ಲವೂ ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದವು.

ಸುಮಾರು ೭-೨೦ ವೇಳೆಗೆ ದಹನ ಸ್ಥಳವನ್ನು ಸೇರಿ ಗಂಧ ನಿರ್ಮಿತ ಚಿತೆಯ ಮೇಲೆ ಕಳೇಬರವನ್ನು ತಂದಿಟ್ಟು ಬಾಬು ರಾಜೇಂದ್ರಪ್ರಸಾದ್, ಪ್ರಧಾನಿ ನೆಹರೂ ಮುಂತಾದವರೆಲ್ಲರೂ ತಮ್ಮ ಅಂತ್ಯ ಪ್ರಣಾಮವನ್ನು ಸಲ್ಲಿಸಿದ ಮೇಲೆ ತಿರುವಾಂಕೂರು ಲೈಟ್ ಇನ್‌ಪೆಂಟ್ರಿಯವರು ಮಿಲ್ಟರಿ ಗೌರವವನ್ನು ಸಲ್ಲಿಸಿದರು ಅನಂತರ ರಾಷ್ಟ್ರಾಧ್ಯಕ್ಷರು ಸ್ವಲ್ಪಕಾಲ ಮಾತನಾಡಿ, ಸರ್ದಾರರ ದೇಹವನ್ನು ಬೆಂಕಿಯು ದಹಿಸಿದರೂ ಅವರ ಕೀರ್ತಿಯನ್ನು ಯಾವ ಬೆಂಕಿಯೂ ಸುಡಲಾರದು ಎಂದು ಹೇಳಿ ಪಂಡಿತ ನೆಹರೂರವರನ್ನು ಮಾತನಾಡಬೇಕೆಂದು ಕೇಳಿದರು ನೆಹರೂರವರ ಶೋಕದಲ್ಲಿ ಅವರು ಮಾತನಾಡಲಾರದೇ ಹೋದರು ಶ್ರೀ ಸಿ ರಾಜಗೋಪಾಲಾಚಾರಿಯವರು ಗದ್ಗದ ಸ್ವರದಲ್ಲಿ ದೇಶದಲ್ಲಿ ಯಾರೂ ಹತಾಶರಾಗಬಾರದು ನೆಹರೂರವರು ಈಗ ಒಬ್ಬಂಟಿಗರಾದರು ಅವರಿಗೆ ಎಲ್ಲರೂ ನೆರವಾಗಿ ಎಂದುಹೇಳಿದರು ಅನಂತರ ಚಿತೆಗೆ ಅಗ್ನಿ ಸಂಸ್ಕಾರಮಾಡಲಾಯಿತು.

ಆಟಂಬಾಂಬನ್ನು ಉಪಯೋಗಿಸಬೇಕು

ಇಂದಿನ ಪರಿಸ್ಥಿತಿಯಲ್ಲಿ ಆಕ್ರಮಣಮಾಡುತ್ತಲಿರುವ ರಾಷ್ಟ್ರಗಳೊಡನೆ ಸಂಧಾನ ನಡೆಸಿದರೆ ಫಲಕಾರಿಯಾಗುವುದೆಂದು ಹೇಳಲು ಸಾಧ್ಯವಿಲ್ಲ

ಆಕ್ರಮಣಕಾರರು ಆಟಂಬಾಂಬು ಉಪಯೋಗಿಸುವವರೆಗೆ ನಾವು ಅದನ್ನು ಉಪಯೋಗಿಸಲಾಗುವುದೆಂದು ಹೇಳುವುದು ಶುದ್ಧ ಮೂಢತನ ಇದರಿಂದ ಯುದ್ಧವು ಹತ್ತಿರಕ್ಕೆ ಬರುತ್ತದೆ ಎಂದು ಮಾಜಿ ಪ್ರಧಾನಿ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ನೇಪಾಳದಲ್ಲಿ ಕದನ

ನೇಪಾಳದಲ್ಲಿ ಸರ್ಕಾರೀ ಸೈನ್ಯಗಳಿಗೂ ಕಾಂಗ್ರೆಸ್ ಸ್ವಯಂಸೇವಕರಿಗೂ ಬಿರುಸಾಗಿ ಕದನ ನಡೆಯುತ್ತಲೇ ಇದೆಯೆಂದು ತಿಳಿಯಬರುತ್ತದೆ

ಬಹಿರಂಗ ಸಭೆ

ನಿನ್ನೆ ಸಂಜೆ ಮೈಸೂರು ನಗರ ಕಾಂಗ್ರೆಸ್ ಆಶ್ರಯದಲ್ಲಿ ಸರ್ದಾರರ ನಿಧನದ ಶೋಕಸಭೆಯು ಪುರಭವನದ ಮೈದಾನದಲ್ಲಿ ನಡೆಯಿತು ಸಾವಿರಾರು ಜನರು ನೆರೆದು ತಮ್ಮ ಶೋಕವನ್ನು ವ್ಯಕ್ತಪಡಿಸಿದರು. ಪೌರಸಭೆಯಲ್ಲಿ ನಿನ್ನೆ ಸದಸ್ಯರು ಸೇರಿ ಸಭೆ ನಡೆಸಿ ಶೋಕವನ್ನು ವ್ಯಕ್ತಪಡಿಸಿದರು

ಪತ್ರವ್ಯವಹಾರ ಪ್ರಕಟಣೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಂಡನ್ನರವರಿಗೂ, ಡೆಮೋಕ್ರಾಟಿಕ್‌ಫ್ರಂಟ್ ವಿಷಯವಾಗಿ ನಡೆಯುತ್ತಲಿರುವ ಪತ್ರವ್ಯವಹಾರವು ಸದ್ಯದಲ್ಲಿಯೇ ಪ್ರಕಟವಾಗುವುದೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಕಾಳವೆಂಕಟರಾಯರು ಹೇಳಿರುವರು

ನಗರಾಭಿವೃದ್ಧಿ ಸಮಿತಿ
ಮೈಸೂರು
ಪ್ರಕಟಣೆ
ಮಾದರಿ ಮನೆಗಳ ಮಾರಾಟ

ಮೇಲ್ಕಂಡ ಸಮಿತಿಯವರಿಂದ ನಜರ್‌ಬಾದ್ ಮೊಹಲ್ಲಾ ಇಟ್ಟಿಗೆಗೂಡಿನಲ್ಲಿ ಜನಾರ್ದನ್ ಎದುರಿಗೆ ಹೊಸದಾಗಿ ಕಟ್ಟಿಸಿರುವ ೩೬ ಮಾದರಿ ಮನೆಗಳ ವಿಲೆಬಗ್ಗೆ ತಾ॥ ೫-೧-೧೯೫೧ನೇ ಶುಕ್ರವಾರ ಮಧ್ಯಾಹ್ನ ೪ ಗಂಟೆ ವರೆವಿಗೆ ೨೫೦ ರೂ ಗಳ [illegible] ಸಮೇತ ಮೈಸೂ[illegible] ಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದವರಿಂದ ವಿಧಾಯಕವಾದ ನಮೂನೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ ಇಟ್ಟಿಗೆಗೂಡಿನಲ್ಲಿ ವಾಸವಾಗಿರುವ ಸ್ವಂತ ಮನೆಗಳಿಲ್ಲದವರಿಂದ ಬರುವ ಅರ್ಜಿಗಳಿಗೆ ಮೊದಲು ಪುರಸ್ಕಾರ ಕೊಡಲಾಗುತ್ತದೆ ಈರೀತಿ ವಿಲೆಯಾಗದೆ ಉಳಿರುವ ಪಕ್ಷದಲ್ಲಿ ಇತರ ಮೊಹಲ್ಲಾ ನಿವಾಸಿಗಳ ಅರ್ಜಿಗಳಿಗೆ ಸಿಗಾಕೊಡಲಾಗುತ್ತದೆ ಮನೆ ಮಂಜೂರಾಗದ ಅರ್ಜಿದಾರರಿಗೆ ರೇವಣಿಮೊಬಲಗು ವಾಪಸುಮಾಡಲಾಗುತ್ತದೆ ಮನೆ ೧ಕ್ಕೆ ಬೆಲೆ ೩,೮೫೦ ರೂಪಾಯಿಗಳ, ಮಂಜೂರಾದ ಅರ್ಜಿದಾರರು ತಮಗೆ ತಿಳಿಸಲಕಿ ಕೊಟ್ಟ ಮೇಗಾಯ್ತು ೧೫ ದಿನಗಳಲ್ಲಿ ಪೂರ್ತ ಮೊಬಲಗು ಪಾವತಿ ಮಾಡಿ ಮನೆ ಸ್ವಾಧೀನಪಡಿಸತಕ್ಕದ್ದು. ತಪ್ಪಿದಲ್ಲಿ ರೇವಣಿಮೊಬಲಗು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಮನೆ ಕೊಂಡುಕೊಂಡವರು ಹತ್ತುವರ್ಷಗಳ ವರೆವಿಗೆ ಪರಾಧೀನಮಾಡಲು ಅವಕಾಶವಿರುವುದಿಲ್ಲ ಕಟ್ಟಡ ಬದಲಾಯಿಸುವುದಕ್ಕೆ ಹಕ್ಕಿರುವುದಿಲ್ಲ ರೇವಣಿ ಇಲ್ಲದೆ ಬರುವ ಅರ್ಜಿಗಳಿಗೆ ಸಿಗಾ ಕೊಡಲಾಗುವುದಿಲ್ಲ. ಹೆಚ್ಚಿಗೆ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. ಹಿಂದೆ ರೇವಣಿ ಸಮೇತ ಹಾಕಿರುವ ಅರ್ಜಿದಾರರು ಮತ್ತೆ ಕೊಡಬೇಕಾಗಿಲ್ಲ.

(Sd) ಪಿ ಗೋಪಾಲಕೃಷ್ಣಶೆಟ್ಟಿ

ತಾ॥ ೧೩-೧೨-೫೦ ಅಧ್ಯಕ್ಷರು.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್
ಬೆಳಗಿನ ಪ್ರದರ್ಶನ
ಬಾಂಬೆ ಟಾಕೀಸಿನವರ
ಕಿಸ್ಮತ್
ಪಾತ್ರ :
ಅಶೋಕ್‌ಕುಮಾರ್ ಮುಮ್ತಾಜ್‌ಶಾಂತಿ

ಶೋಕದಿನಾಚರಣೆ

ಸರ್ದಾರರ ನಿಧನದ ಬಗ್ಗೆ ಭಾರತಾದ್ಯಂತ ಒಂದುವಾರ ಶೋಕ ದಿನಾಚರಣೆಯನ್ನಾಚರಿಸಲಾಗುವುದು. ಎಲ್ಲೆಡೆಯಲ್ಲಿಯೂ ಸಾರ್ವಜನಿಕ ಸಭೆ, ಸೂತ್ರಯಜ್ಞ ಮುಂತಾದುವು ನಿನ್ನೆ [illegible] ನಡೆಯುತ್ತಲಿವೆ

೩೮ನೇ ಅಕ್ಷಾಂಶ ದಾಟಿದರು

ಚೈನಾ ಪಡೆಗಳು ಕೊರಿಯಾ ಯುದ್ಧರಂಗದಲ್ಲಿ ೩೮ನೇ ಅಕ್ಷಾಂಶವನ್ನು ದಾಟಿರುವರೆಂದು ಹೇಳಲಾಗುತ್ತಿದೆ.

ರೈಲ್ವೆ ಅಪಘಾತ

ಅಲಹಾಬಾದ್ ಘೋರಕ್‌ಪುರದಮಾರ್ಗದಲ್ಲಿ ನಿನ್ನೆ ಸಂಜೆ ೫ ೩೦ ಗಂಟೆಯಲ್ಲಿ ರೈಲ್ವೆ ಅಪಘಾತವುಂಟಾಗಿದೆಯೆಂದು ತಿಳಿಯಬರುತ್ತದೆ

ಒಲಂಪಿಯಾ
14-12-50 ರಿಂದ ದಿನವಹಿ 3 ಆಟಗಳು
ಅಪರಿಚಿತ ಕಾಡು ಮೃಗಗಳ ಭೇಟಿ
ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ
ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿ
ಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅಡಗಿವೆ
೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ
ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ
ಹಾಲ್‌ರೋಚ್‌ರವರ
ಒನ್ ಮಿಲಿಯನ್ ಬಿ. ಸಿ.
(ONE MILLION B.C.)
ನೀವು ಹಿಂದೆ ಎಂದೂ ನೋಡದೆ ಮುಂದೆ
ನೋಡದಿರುವ ಚಿತ್ರ
ಬೆಳಗಿನ ಪ್ರದರ್ಶನ 15-12-50 ರಿಂದ
3 ದಿನ ಮಾತ್ರ
“ಹಾಂಟೆಡ್ ಹಾರ್ಬರ್”

ಸಂಪಾದಕರು ಮತ್ತು ಪ್ರಕಾಶಕರು. ಜಿ ಎಲ್ ಸ್ವಾಮಿ ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್ ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು

ವಿದೇಶಗಳಲ್ಲಿ ಸಂತಾಪ

ಪ್ರಪಂಚದಲ್ಲೆಲ್ಲಾ ಸರ್ದಾರರ ನಿಧನದ ಸುದ್ದಿ ಹರಡಿದೊಡನೆಯೇ ವಿದೇಶಗಳಲ್ಲಿರುವ ಭಾರತರಾಯಭಾರಿ ಕಛೇರಿಗಳನ್ನು ಮುಚ್ಚಿದನಂತರ ಸಂತಾಪ ಸಭೆಗಳನ್ನು ನಡೆಸಿದರು. ಪ್ರಪಂಚದ ಎಲ್ಲಾ ಕಡೆಯಿಂದಲೂ ಸಂತಾಪಸೂಚನಾಪತ್ರ, ತಂತಿಗಳು ಬರುತ್ತಲಿವೆ. ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲೀಯವರು ದೇಶದ ಸ್ವಾತಂತ್ರ ದಲ್ಲಿ ಅಮೋಘಪಾತ್ರವನ್ನು ವಹಿಸಿದ ಸರ್ದಾರರ ನಿಧನದಿಂದ ದೇಶಕ್ಕೆ ಅಪಾರವಾದ ನಷ್ಟವಾಗಿದೆ. ಅವರ ಹೆಸರು ಚರಿತ್ರೆಯಲ್ಲಿ ಶಾಶ್ವತವಾಗಿರುವುದೆಂದು ಹೇಳಿರುವರು ಮಹಾನಾಯಕರಲ್ಲೊಬ್ಬರು ಕಣ್ಮರೆಯಾದರೆಂದು ಇಂಡೊನೇಷಿಯಾ ಅಧ್ಯಕ್ಷರು ಹೇಳಿರುವರು

ಭಾರತ ನಿರ್ಮಾಪಕರೂ, ಮೇಧಾವಿಗಳೂ ಆದ ನಾಯಕರ ನಿಧನದಿಂದ ಅತ್ಯಂತ ನಷ್ಟವಾಗಿದೆ.— ಪಾಕಿಸ್ಥಾನಪ್ರಧಾನಿ.

ಭಾರತ ಸರ್ಕಾರದ ಸ್ಥಿರತ್ವಕ್ಕೆ ಆಧಾರಸ್ತಂಭಗಳಲ್ಲೊಂದು ಬಿದ್ದಂತಾಯಿತು.—ಶ್ರೀಮತಿ ವಿಜಯಲಕ್ಷ್ಮಿ ಪಂಡಿತ ಎಂದು ಅನೇಕರು ತಮ್ಮ ಸಂತಾಪವನ್ನು ಸೂಚಿಸಿದ್ದಾರೆ.

ಬ್ರಿಟಿಷ್ ಇಂಡಿಯ ಲೀಗ್‌ನಲ್ಲಿ ಶುಕ್ರವಾರ ಸಭೆಯನ್ನು ಏರ್ಪಡಿಸಲಾಗಿದೆ ಲಂಡನ್ನಿನಲ್ಲಿ ಲಾರ್ಡ್ ಮೇಯರವರ ಗೌರವಾರ್ಥವಾಗಿ ನಡೆಯಬೇಕಾಗಿದ್ದ ಸತ್ಕಾರಕೂಟವನ್ನು ಮುಂದುವರಿಸಲಾಗಿದೆ

ಪ್ಯಾರಿಸ್‌ನಲ್ಲಿ ಶೋಕ ಸಭೆಯನ್ನು ಸೋಮವಾರ ನಡೆಸಲೇರ್ಪಡಿಸಲಾಗಿದೆ

ಬ್ಯಾಗದಾದಿನಲ್ಲಿ ಸಭೆ ಸೇರಿದ್ದರು ಇರಾಕಿನ ಪ್ರಮುಖರೆಲ್ಲರೂ ಈ ಸಭೆಯಲ್ಲಿ ಭಾಗವಹಿಸಿದ್ದರು.

ಭಾರತಕ್ಕೆ ಅದರಲ್ಲೂ ಎಲ್ಲಾ ರಾಜಮನೆತನದವರುಗಳಿಗೆ ಅಪಾರ ನಷ್ಟವೆಂದು ಹೈದರಾಬಾದ್ ನೈಜಾಂರವರು ಹೇಳಿರುವರು

ಮೈಸೂರು ಮಹಾರಾಜರೂ ತಮ್ಮ ಶೋಕವನ್ನು ಸೂಚಿಸಿ ತಂತಿಯನ್ನು ಕಳುಹಿಸುವರು.

ಮುಖ್ಯಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರೂ ಒಂದ ಶೋಕಸೂಚಿಸುವ ಹೇಳಿಕೆಯನ್ನಿತ್ತು ಮೈಸೂರಿನ ವಿಷಯದಲ್ಲಿ ಸರ್ದಾರರಿಗೆ ವಿಶೇಷ ಆಸಕ್ತಿಯಿತ್ತು, ಅದಕ್ಕೆ ನಾವೆಲ್ಲರೂ ಅತ್ಯಂತ ಶೋಕಪಡಬೇಕಾಗಿದೆ ಎಂದು ಹೇಳಿರುವರು.

NEW OPERA
From 16-12-50 Daily 3 shows
James Brother of Missouri
(A REPUBLIC SERIAL)
Featuring :— Keith Richards, Robert Rice, Nele Neill,
Roy Barcroft, PariciaKnox

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೧೮—೧೨— ೧೯೫೦ನೇ ಸೋಮವಾರ [ಸಂಚಿಕೆ ೯೦

ಅವಿಸ್ವಾಸ ನಿರ್ಣಯ ಪ್ರಕರಣ

ರಾಜೀನಾಮೆ ಒತ್ತಾಯ ಪತ್ರಕ್ಕೆ ಸಹಿಗಳು ಇನ್ನೂ ಬೀಳುತ್ತಲಿವೆ

ಬೆಂಗಳೂರು ಡಿ. ೧೭

ಮುಖ್ಯ ಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರ ರಾಜೀನಾಮೆ ಒತ್ತಾಯ ಪತ್ರಕ್ಕೆ ಇನ್ನೊಂದು ಸಹಿಬಿತ್ತೆಂದೂ ಈಗ ಸಂಖ್ಯೆಯು ೩೭ ಕ್ಕೆ ಏರಿದೆಯೆಂದು ತಿಳಿಯಬರುತ್ತದೆ. ಸದ್ಯದಲ್ಲೆ ಇನ್ನು ೩-೪ ಸಹಿಗಳು ಬೀಳುವ ಸಂಭವವದೆಯೆಂದು ಹೇಳಲಾಗಿದೆ. ಸಹಿ ಹಾಕಿರುವವರು ಹಿಂದಕ್ಕೆ ತೆಗೆದುಕೊಳ್ಳುವಂತೆ ಅನೇಕ ಕಡೆ ಒತ್ತಾಯ ನಡೆಯುತ್ತಲಿದೆಯೆಂದೂ ಹೇಳಲಾಗಿದೆ

ಪ್ರಮಾಣವಚನ ಭಂಗ

ಶ್ರೀ ಎನ್. ಸಿ ನಾಗಯ್ಯರೆಡ್ಡಿಯವರು ಮೈಸೂರಿನ ಮಾಜಿ ವಿದ್ಯಾಸಚಿವ ಶ್ರೀ ಟಿ ಸಿದ್ದಲಿಂಗಯ್ಯನವರ ಮೇಲೆ ಆರೋಪಣೆ ಮಾಡಿ ಪತ್ರಿಕೆಗಳಿಗೆ ಕೊಟ್ಟಿರುವ ಹೇಳಿಕೆ ಬಗ್ಗೆ ಜನತೆಯಲ್ಲಿ ಉಂಟಾಗಿರುವ ಸಂಶಯವನ್ನು ಪರಿಹರಿಸಲು ಮೈಸೂರು ಪ್ರಾಂತೀಯ ಕಾಂಗ್ರೆಸ್ ಒಂದು ವಿವರಣೆಯನ್ನು ಕೊಟ್ಟಿದೆ.

ತಾ|| ೨೯-೧೧-೫೦ ರಲ್ಲಿ ಶ್ರೀ ಎನ್. ಸಿ. ನಾಗಯ್ಯರೆಡ್ಡಿಯವರು ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಿಗೆ ಒಂದು ಪತ್ರ ಬರೆದು ಶ್ರೀ ಟಿ. ಸಿದ್ದಲಿಂಗಯ್ಯನವರು ಮಂತ್ರಿಮಂಡಲದ ಮೇಲೆ ಅವಿಶ್ವಾಸ ಪತ್ರಕ್ಕೆ ಸಹಿ ಹಾಕಿರುವುದಲ್ಲದೆ ಸಾರ್ವಜನಿಕಸಭೆಗಳಲ್ಲಿ ಸರ್ಕಾರವನ್ನು ಟೀಕಿಸುತ್ತಲಿರುವುದು ಮಂತ್ರಿಮಂಡಲದ ಒಬ್ಬ ಸದಸ್ಯರಾಗಿದ್ದುಕೊಂಡು ಈರೀತಿ ಮಾಡುವುದು ನ್ಯಾಯಬಾಹಿರವೆಂದು ಈ ವಿಷಯವನ್ನು ಕಾರ್ಯಕಾರಿ ಸಮಿತಿಗೆ ಇಡಬೇಕೆಂದು ತಿಳಿಸಿದ್ದರು

ಈ ಪತ್ರಕ್ಕೆ ಉತ್ತರವಾಗಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹನುಮಂತಯ್ಯನವರು ಮಂತ್ರಿಮಂಡಲದ ರಹಸ್ಯಗಳನ್ನು ಹೊರಗೆಡಬಾರದು ಶ್ರೀ ಟಿ. ಸಿದ್ದಲಿಂಗಯ್ಯನವರ ಮೇಲೆ ಮಾಡಿರುವ ಆಪಾದನೆ ವಿಚಾರಣೆ ಅಗತ್ಯ, ಅದನ್ನು ಮಂತ್ರಿಮಂಡಲ ಪ್ರಮುಖರಾದ ಶ್ರೀ ಕೆ. ಸಿ. ರೆಡ್ಡಿಯವರೇ ನಡೆಸಬೇಕು. ಆದರೆ ಯಾವ ರೀತಿಯಾದ ಆಪಾದನೆಗಳೂ ವರದಿಯಾಗಲೀ ಶ್ರೀ ಟಿ ಸಿದ್ದಲಿಂಗಯ್ಯನವರಿಂದ, ಉತ್ತರ ಬಂದನಂತರ ಎಲ್ಲಾ ಪತ್ರಗಳನ್ನು ಶ್ರೀ ಕೆ ಸಿ. ರೆಡ್ಡಿಯವರಿಗೆ ಕಳುಹಿಸುವುದಾಗಿ ತಿಳಿಸಿದರು. ತನ್ನ ಮೇಲೆ ಮಾಡಿರುವ ಆರೋಪಣೆಗಳೆಲ್ಲವೂ ಸತ್ಯಕ್ಕೆ ದೂರವೆಂದು ಶ್ರೀ ಸಿದ್ದಲಿಂಗಯ್ಯನವರು ಉತ್ತರವಿತ್ತರು.

ಶ್ರೀ ನಾಗಯ್ಯರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಿಗೆ ಬರೆದು ಪತ್ರವನ್ನು ಅವರ ಅನುಮತಿಯಿಲ್ಲದೆ ಪ್ರಕಟಿಸಿ ಅಧ್ಯಕ್ಷರ ಉತ್ತರವನ್ನು ಪ್ರಕಟಿಸಲಿಲ್ಲ. ಅನಂತರ ಶ್ರೀ ಟಿ. ಸಿದ್ದಲಿಂಗಯ್ಯನವರ ರಾಜೀನಾಮೆ ಪತ್ರವನ್ನು ೨೩ನೇ ತಾ|| ಕಾರ್ಯಕಾರಿ ಸಮಿತಿ ಮುಂದಿಡಲಾಯಿತು ಅಲ್ಲಿ ರಾಜೀನಾಮೆ ಪತ್ರವನ್ನು ಶ್ರೀ ಟಿ ಸಿದ್ದಲಿಂಗಯ್ಯನವರೇ ನೇರವಾಗಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ಕಳುಹಿಸಲು ಹಿಂದಕ್ಕೆ ಕೊಡಲಾಯಿತು. ಶ್ರೀ ಟಿ. ಸಿದ್ದಲಿಂಗಯ್ಯನವರು ರಾಜೀನಾಮೆಯನ್ನು ನೇರವಾಗಿ ಮುಖ್ಯಮಂತ್ರಿಗಳಿಗೆ ಕೊಟ್ಟರು. ಅದು ಅಂಗೀಕಾರವಾಯಿತು.

ಡಿಸೆಂಬರ್ ೭ನೇ ತಾ|| ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ೩೫ ಮಂದಿ ಸದಸ್ಯರು ಪಕ್ಷದ ನಾಯಕರಾದ ಶ್ರೀ ಕೆ. ಸಿ ರೆಡ್ಡಿಯವರ ನಾಯಕತ್ವದಲ್ಲಿ ತಮಗೆ ನಂಬಿಕೆಯಿಲ್ಲವೆಂದು ಅವರು ರಾಜೀನಾಮೆ ಕೊಡಬೇಕೆಂದು ಸೂಚಿಸಿದರು.

ಪುನಃ ಭೇಟಿ

ಭಾರತ ಪ್ರತಿನಿಧಿ ಶ್ರೀ ಬಿ. ಎನ್ ರಾವ್‌ರವರಿಗೂ ಚೈನಾ ಪ್ರತಿನಿಧಿಗೂ ಪುನಃ ಲೇಕ್ ಸಕ್ಸೆಸ್ಸಿನಲ್ಲಿ ಭೇಟಿ ನಡೆದು ಮಾತುಕಥೆ ನಡೆಯುತ್ತಲಿವೆ.

ಹಿಂತಿರುಗುತ್ತಾರೆ

ಕೊರಿಯಾ ಯುದ್ಧದ ಚರ್ಚೆಯಲ್ಲಿ ಭಾಗವಹಿಸಲೋಸುಗ ಹೋಗಿದ್ದ ಚೈನಾ ಪ್ರತಿನಿಧಿಗಳ ನಿಯೋಗವು ನಾಳೆ ಪೀಕಿಂಗ್‌ಗೆ ಹಿಂತಿರುಗುವುದಾಗಿ ತಿಳಿಯ ಬರುತ್ತದೆ

ಹಿಂದಕ್ಕೆ ಬರುವುದಿಲ್ಲ

ವಿಶ್ವಸಂಸ್ಥೆಯ ಸೈನ್ಯಗಳು ಕೊರಿಯಾ ರಣರಂಗದಿಂದ ಸಂಪೂರ್ಣವಾಗಿ ಹಿಂತಿರುಗುವವರೆಗೆ ತಮ್ಮ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಚೈನಾ ಸರ್ಕಾರವು ಹೇಳಿರುವುದಾಗಿ ಸುದ್ದಿ ಹೊರಬಿದ್ದಿದೆ

ಸಿ. ಆರ್. ರು
ಪಟೇಲರ ಸ್ಥಾನಕ್ಕೆ

ಭಾರತ ಸರ್ಕಾರದ ಉಪಪ್ರಧಾನಿ ದಿವಂಗತ ಸರ್ದಾರರ ಸ್ಥಾನಕ್ಕೆ ಶ್ರೀ. ಸಿ ರಾಜಗೋಪಾಲಾಚಾರಿಯವರು ಬರುವರೆಂದು ಹೇಳಲಾಗಿದೆ ಅವರು ಗೃಹ ಮತ್ತು ಸಂಸ್ಥಾನ ಶಾಖೆಗಳ ಪೋರ್ಟ್‌ಫೋಲಿಯೋಗಳನ್ನು ತೆಗೆದುಕೊಳ್ಳುವರೆಂದು ತಿಳಿಯಬರುತ್ತದೆ.

ಹಿರೋಹಿಟೋ ವಿಚಾರಣೆ

ಜಪಾನಿನ ಚಕ್ರವರ್ತಿ ಹಿರೋಹಿಟೊ ಮತ್ತು ಕೆಲವು ಜಪಾನಿನ ಸೈನ್ಯದ ಜನರಲ್‌ರ ವಿಚಾರಣೆಯನ್ನು ನಡೆಸಬೇಕೆಂದು ರಷ್ಯಾವು ಬ್ರಿಟನಿಗೆ ಒಂದು ಪತ್ರವನ್ನು ಕಳುಹಿಸಿದೆ.

ಸಂತಾಪ ನಿರ್ಣಯ

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಸಭೆಯು ಭಾನುವಾರ ಸಂಜೆ ೭ ಗಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ಚನ್ನಯನವರ ಅಧ್ಯಕ್ಷತೆಯಲ್ಲಿ ಸೇರಿ ದಿವಂಗತ ಸರ್ದಾರ್ ಪಟೇಲರ ನಿಧನದ ಬಗ್ಗೆ ಶೋಕವನ್ನು ಸೂಚಿಸುವ ನಿರ್ಣಯವು ಎಲ್ಲ ಸದಸ್ಯರು ಒಂದು ನಿಮಿಷಕಾಲ ಮೌನವಾಗಿ ನಿಂತು ಅಂಗೀಕರಿಸಲ್ಪಟ್ಟಿತು. ಈ ನಿರ್ಣಯವನ್ನು ದಿವಂಗತರ ಮಗಳು ಶ್ರೀಮತಿ ಮಣಿಬೆನ್ ಪಟೇಲರಿಗೆ ಕಳುಹಿಸಲಾಯಿತು.

ಅಮೆರಿಕಾದಿಂದ ಆಹಾರ

ಅಮೆರಿಕಾದಿಂದ ಭಾರತಕ್ಕೆ ೨೦ ಲಕ್ಷ ಟನ್‌ಗಳ ಆಹಾರವು ಬರುವುದಾಗಿ ಭಾರತ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಹೇಳಿರುವರು.

ಶ್ರೀ ರಾಮಕೃಷ್ಣ ಡಾಲ್ಮಿಯ

ತಮ್ಮ ಅನುಭಾವ ಮತ್ತು ಸಲಹೆನೀಡಲು ಹಿಂದೂ ಮಹಾಸಭೆಯ ಅಧಿವೇಶನಕ್ಕೆ ತಾವು ಬರಬೇಕೆಂದು ಶ್ರೀ ಡಾಲ್ಮಿಯವರನ್ನು ಹಿಂದೂಮಹಾಸಭಾ ಅಧ್ಯಕ್ಷ ಡಾ|| ಎನ್ ಬಿ ಖಾರೆಯವರು ಡೆಹಲಿಗೆ ಹೋಗಿ ಆಹ್ವಾನವನ್ನಿತ್ತಿರುವರು ಹಿಂದೂ ಮಹಾಸಭೆಯ ಕಾರ್ಯದರ್ಶಿ ಶ್ರೀ ಎನ್. ಆರ್. ಜಾಟಿಯವರು ಶ್ರೀ ಭೂಪಟಕರ್‌ರಿಂದ ಬಂದ ಪತ್ರವನ್ನು ತೆಗೆದುಕೊಂಡು ಹೋಗಿ ಶ್ರೀ ಡಾಲ್ಮಿಯವರನ್ನು ಆಹ್ವಾನಿಸಿರುವರು

ಶತಮಾನೋತ್ಸವ

ಮಹಾರಾಜಾ ಕಾಲೇಜಿನ ಶತಮಾನೋತ್ಸವದ ಪ್ರಾರಂಭೋತ್ಸವವನ್ನು ಮುಂದಿನ ಮಾರ್ಚಿ ೨೦ ನೇ ತಾರೀಖು ಶ್ರೀಮನ್ಮಹಾರಾಜರವರು ನಡೆಸಲು ಒಪ್ಪಿರುವರು. ಶ್ರೀಮಾನ್ ಟಿ ಸಿದ್ದಲಿಂಗಯ್ಯನವರು ಶ್ರೀಮನ್ಮಹಾರಾಜರನ್ನು ಆಹ್ವಾನಿಸಲು ಭೇಟಿ ಮಾಡಿದ್ದರು.

ಇಂಡಿಯಾಕ್ಕೆ ಸೋವಿಯೆಟ್ ಗೋಧಿ

ಸೋವಿಯಟ್ ಯೂನಿಯನ್ನಿನವರು ಇಂಡಿಯಾಕ್ಕೆ ಎಷ್ಟು ಬೇಕಾದರೂ ಗೋಧಿ, ಜೋಳ ಮತ್ತು ಇತರ ಆಹಾರ ಧಾನ್ಯಗಳನ್ನು ಕೊಡಲು ಸಿದ್ಧರಾಗಿದ್ದಾರೆಂದು ಖಚಿತವಾದ ಕಡೆಯಿಂದ ವರದಿಯಾಗಿದೆ ಸೋವಿಯಟ್ ಯೂನಿಯನ್ನಿನಲ್ಲಿ ಈ ವರುಷ ಬೆಳೆ ಬಹಳ ಚೆನ್ನಾಗಿ ಆಗಿದೆಯೆಂದೂ ರಷ್ಯನ್ ಗೋಧಿ ಅಮೆರಿಕಾ ಮತ್ತು ಆಸ್ಟ್ರೇಲಿಯಾಗಳಿಂದ ತರಿಸುತ್ತಿರುವ ಗೋಧಿಗಿಂತಲೂ ಉತ್ಕೃಷ್ಟವಾಗಿದೆಯೆಂದು ಹೇಳಲಾಗಿದೆ

ಮುಖ್ಯಮಂತ್ರಿಗಳ ಆಗಮನ

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಇಂದು ಬೆಳಗ್ಗೆ ಮೈಸೂರಿಗೆ ಆಗಮಿಸಿದ್ದಾರೆ.

ಲಾಯರುಗಳ ಜಗಳ

ಡೆಹಲಿಯ ಒಂದು ಕೋರ್ಟಿನಲ್ಲಿ ವಾದಿ ಪ್ರತಿವಾದಿ ಲಾಯರುಗಳಿಗೆ ಬಿಸಿಬಿಸಿ ಮಾತುನಡೆದು ಒಬ್ಬ ಲಾಯರು ಮತ್ತೊಬ್ಬರನ್ನು ಕಾಲಿನಿಂದ ಒದೆಯಲು ಆತನು ಬಿದ್ದು ತನ್ನ ಕಾಲನ್ನು ಮುರಿದುಕೊಂಡಿರುತ್ತಾನೆ. ಪೋಲೀಸಿನವರು ಒದೆದ ಲಾಯರನ್ನು ದಸ್ತಗಿರಿ ಮಾಡಿದ್ದಾರೆ.

ಖದ್ದರ್ ಪರಸ್ಪರಸಹಾಯ ಸಂಘ

ಮೈಸೂರು ಡಿ. ೧೮

ಈ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ಬದನವಾಳಿನಲ್ಲಿ ನಡೆಯಿತು.

ಬದನವಾಳು ಕೇಂದ್ರದ ವ್ಯವಸ್ಥಾಪಕ ಶ್ರೀ ರಾಜಾರಾಮಯ್ಯಂಗಾರ್‌ರವರು ಸಂಘದ ಸದಸ್ಯರನ್ನುದ್ದೇಶಿಸಿ ಕೇಂದ್ರದ ಕಾರ್ಯಕಲಾಪಗಳನ್ನು ವಿವರಿಸಿದರು.

ಸಭೆಯು ಶ್ರೀ ಎಂ. ಎ. ದೊರೆಸ್ವಾಮಯ್ಯಂಗಾರ್ ರವರ ಅಧ್ಯಕ್ಷತೆಯಲ್ಲಿ ನಡೆದು ಪಟೇಲರ ನಿಧನದ ಬಗ್ಗೆ ಅನುತಾಪವನ್ನು ವ್ಯಕ್ತಪಡಿಸಿ ಎರಡು ನಿಮಿಷ ಮೌನವನ್ನು ಆಚರಿಸಿದರು

ಮೈಸೂರು ನಗರದಲ್ಲಿ ಖಾದಿ ಉತ್ಪತ್ತಿಕೇಂದ್ರವನ್ನು ಆರಂಭಿಸುವ ವಿಷಯದಲ್ಲಿ ವ್ಯವಸ್ಥಾಪಕ ಶ್ರೀ ರಾಜಾರಾಮಯ್ಯಂಗಾರ್‌ರವರು ಸೂಕ್ತ ಸಲಹೆಯನ್ನಿತ್ತರು.

ರಷ್ಯಾ ಸರ್ವಾಧಿಕಾರತ್ವ ಏಷ್ಯಾಕ್ಕೆ ಬೇಡ

ಏಷ್ಯಾ ಪ್ರಜೆಗಳು ರಷ್ಯಾ ದೇಶದ ಸರ್ವಾಧಿಕಾರತ್ವದ ದಬ್ಬಾಳಿಕೆಗೆ ಒಳಗಾಗಕೂಡದೆಂಬುದೇ ನಮ್ಮೆಲ್ಲರ ಆಶಯ. ನಮ್ಮ ನಮ್ಮ ದೇಶಗಳಲ್ಲಿ ಹಿತರಕ್ಷಣೆಗಾಗಿ ಸೈನ್ಯವನ್ನು ಬಲಪಡಿಸಿಕೊಳ್ಳಬೇಕು. ಚೈನಾವು ಈಗಾಗಲೇ ಅನೇಕ ವರ್ಷಗಳಿಂದ ಯುದ್ಧದಲ್ಲಿ ಸಿಕ್ಕಿ ಅನೇಕ ತೊಂದರೆಗಳನ್ನನುಭವಿಸಿದೆ ಜನರ ಜೀವನ ಮಟ್ಟವನ್ನು ಉತ್ತಮಗೊಳಿಸಬೇಕಾದ ಈ ಸಮಯದಲ್ಲಿ ಚೈನಾವು ಯುದ್ಧವನ್ನು ಅಪೇಕ್ಷಿಸುವುದಿಲ್ಲವೆಂದು ಕಾಣುತ್ತದೆಯೆಂದು ಬ್ರಿಟನ್ ಪ್ರಧಾನಿ ಮಿ|| ಅಟ್ಲೀಯವರು ಹೇಳಿರುವರು.

ವಿಶ್ವಸಂಸ್ಥೆ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಳ್ಳಿ

ವಿಶ್ವಸಂಸ್ಥೆಯು ಸೈನವನ್ನು ಕೊರಿಯಾ, ಟೈಸಾ, ದೂರ ಪ್ರಾಚ್ಯ ಯುದ್ಧರಂಗದಿಂದ ಹಿಂದಕ್ಕೆ ಕರೆಸಿಕೊಳ್ಳುವುದಲ್ಲದೆ ಯುದ್ಧಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಾಚರಣೆಯನ್ನು ನಿಲ್ಲಿಸಿದರೆ ತಾವು ಸಂಧಾನಕ್ಕೆ ಬರುವುದಾಗಿ ಚೈನಾ ಪ್ರಜಾ ಸರ್ಕಾರವು ತಿಳಿಸಿದೆಯೆಂದು ವರದಿಯಾಗಿದೆ.

ಕಾಶ್ಮೀರ ಪ್ರಶ್ನೆ

ವಿಶ್ವಸಂಸ್ಥೆಯು ಕಾಶ್ಮೀರ ಪ್ರಶ್ನೆಯನ್ನು ಪರಿಶೀಲಿಸಲು ಕೂಡಲೇ ಚರ್ಚೆಯನ್ನು ಆರಂಭಿಸಬೇಕೆಂದು ಸಮಿತಿಗೆ ಪಾಕಿಸ್ಥಾನ ವಿದೇಶಾಂಗಮಂತ್ರಿ ಮಿ|| ಜಫರುಲ್ಲಾಖಾನರವರು ಪತ್ರವನ್ನು ಬರೆದಿರುವರು.

ವಿಮಾನ ಕಾರ್ಯಚರಣೆ ಹೆಚ್ಚಿದೆ

ಕೊರಿಯಾ ಯುದ್ಧರಂಗದಲ್ಲಿ ಕದನವು ವಿಶೇಷ ಬಿರುಸಾಗಿ ನಡೆಯುತ್ತಲಿದೆ. ೩೮ನೇ ಅಕ್ಷಾಂಶಕ್ಕೆ ೩೦ ಮೈಲಿ ಉತ್ತರದಲ್ಲಿ ಕದನವು ನಡೆಯುತ್ತಲಿದೆ. ಚೈನಾ ಪಡೆಗಳ ಮೇಲೆ ಅಮೆರಿಕಾ ಸೂಪರ್‌ಫೈಟರ್ ಮತ್ತು ಜೆಟ್‌ಫೈಟರುಗಳು ಧಾಳಿ ನಡೆಸುತ್ತಲಿವೆ. ಮಂಚೂರಿಯ ಗಡಿಯಲ್ಲಿ ರಷ್ಯಾ ನಮೂನೆಯ ಜೆಟ್‌ಫೈಟರುಗಳ ಮೇಲೆಯೂ ವಿಶೇಷ ಧಾಳಿ ನಡೆಯುತ್ತಲಿವೆ ಎಲ್ಲೆಡೆಯಲ್ಲಿಯೂ ವಿಮಾನ ಕಾರ್ಯಾಚರಣೆ ಹೆಚ್ಚಿದೆ.

ದಕ್ಷತೆಯ ಸಂಕೇತ ಸ್ವರೂಪ

ಮಹಾತ್ಮ ಗಾಂಧಿಯವರ ಅನುಯಾಯಿಗಳೂ ಭಾರತದ ವೀರ ಸೇನಾನಾಯಕರೂ ದಕ್ಷತೆಯ ಸಂಕೇತ ಸ್ವರೂಪರೂ ಆಗಿದ್ದ ಸರ್ದಾರರ ಮರಣದಿಂದ ರಾಷ್ಟ್ರಕ್ಕೆ ವಿಶೇಷ ನಷ್ಟವುಂಟಾಗಿದೆಯೆಂದು ಮಿ ಜಿ. ಎಲ್. ಮೇಧಾರವರು ಹೇಳಿರುವರು.

ನ್ಯಾಷನಲ್ ಎಮರ್ಜನ್ಸಿ

ಪ್ರಪಂಚದಲ್ಲಿ ಕಮ್ಯೂನಿಸ್ಟರ ಹಾವಳಿಯನ್ನು ತಡೆಗಟ್ಟಲು, ದೇಶದ ಹಿತರಕ್ಷಣೆಗಾಗಿ ಪ್ರಜೆಗಳೆಲ್ಲರೂ ತಮ್ಮ ಕೈಲಾದಷ್ಟು ಸಹಾಯನೀಡಬೇಕೆಂದೂ ಪ್ರಜೆಗಳನ್ನೆಲ್ಲಾ ಅಧ್ಯಕ್ಷ ಟ್ರೂಮನ್ನರು ಕೋರಿದ್ದಾರೆ.

ಒಲಂಪಿಯಾ
14-12-50 ರಿಂದ ದಿನವಹಿ 3 ಆಟಗಳು
ಅಪರಿಚಿತ ಕಾಡು ಮೃಗಗಳ ಭೇಟಿ
ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ
ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿ
ಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅದಲ್ಲದೆ
೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ
ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ
ಹಾಲ್‌ರೋಚ್‌ರವರ
ಒನ್ ಮಿಲಿಯನ್ ಬಿ. ಸಿ.
(ONE MILLION B.C.)
ನೀವು ಹಿಂದೆ ಎಂದೂ ನೋಡದೆ ಮುಂದೆ
ನೋಡದಿರುವ ಚಿತ್ರ

NEW OPERA
From 16-12-50 Daily 3 shows
James Brother of Missouri
(A REPUBLIC SERIAL)
Featuring :— Keith Richards, Robert Rice, Nele Neill,
Roy Barcroft, PariciaKnox

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೧೯ ಮಂಗಳವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ ೭-೨೦ ಎಸ್. ಬಿ. ಕೇಶವಮೂರ್ತಿ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೭ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಕ್ಲಾರಿಯೋನೆಟ್ ೧-೪೫ ಹಿಂದಿ ಶಿಕ್ಷಣ ೨-೦ ಸಿತಾರ್ ೨-೩೦ ಮುಕ್ತಾಯ.

ಸಂಜೆ ೫-೩೦ ರಾಜಲಕ್ಷ್ಮಿ ಶ್ರೀನಿವಾಸನ್ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ (ಸಂಗೀತ ಶಿಕ್ಷಣ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೩೫ ಸಿತಾರ್. ೭-೪೦ ಜಿ. ಪಿ. ರಾಜರತ್ನಂ ಅವರಿಂದ 'ಕಾಳಿದಾಸನ ಕಲಾಕೃತಿಗಳು' ಎಂಬ ವಿಷಯದಲ್ಲಿ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ ೮-೦ ರಾಜಲಕ್ಷ್ಮಿ ಶ್ರೀನಿವಾಸನ್ (ವೀಣೆ) ೮-೩೦ ಆರ್. ಪದ್ಮ (ವೃಂದ ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನಾಮೃತ (ರ) ೧೦-೦ ಮುಕ್ತಾಯ.

ರಷ್ಯಾ-ಚೈನಾ ಪಡೆಗಳು

ಚೈನಾದ ಮುಖ್ಯ ಪ್ರದೇಶಗಳಲ್ಲಿ ರಷ್ಯಾ ಮತ್ತು ಚೈನಾಗಳಿಗೆ ಸೇರಿದ ವಿಮಾನ ಮತ್ತು ಭೂದಳಗಳು ಕಾರ್ಯಾಚರಣೆ ನಡೆಸುತ್ತಲಿವೆಯೆಂದೂ ಷಾಂಗೈ ವಿಮಾನ ನಿಲ್ದಾಣದಲ್ಲಿರುವ ವಿಮಾನಗಳೆಲ್ಲವೂ ರಷ್ಯಾದವರ ಹತೋಟಿಯಲ್ಲಿಯೇ ರಷ್ಯಾ ಕಮ್ಯಾಂಡರ್ ಜನರಲ್ ಮಾಡೆವೀಸ್‌ರವರ ಆಜ್ಞೆಪ್ರಕಾರ ಕಾರ್ಯಾಚರಣೆಯಲ್ಲಿ ಇರುವುದಾಗಿದೆಯೆಂದು ವರದಿಬಂದಿದೆ.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನ‌ರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧ | ೨೦—೧೨—೧೯೫೦ ಬುಧವಾರ [ಸಂಚಿಕೆ ೯೧

ಮಂತ್ರಿಮಂಡಲ ಬದಲಾವಣೆಗೆ ನಿರ್ದಿಷ್ಟ ಕಾರಣಗಳಿರಬೇಕು

ಸಂಸ್ಥೆಯ ಹಿತದೃಷ್ಟಿಯಿಂದ ಅವಿಶ್ವಾಸನಿರ್ಣಯ ಅಪ್ರಕೃತ

ಹುಣಸೂರು ಪೌರಸಭಾಧ್ಯಕ್ಷರು

ಹುಣಸೂರು ಪೌರಸಭಾಧ್ಯಕ್ಷರಾಗಿ ಶ್ರೀ ಎಂ. [illegible] ಶ್ರೀನಿವಾಸಯ್ಯಂಗಾರ್ ಚುನಾಯಿತರಾಗಿರುವುದನ್ನು ಸರ್ಕಾರದವರು ಅಂಗೀಕರಿಸಿರುವರು

ಶಾಸನ ಸಭಾಧಿವೇಶನ

ಮುಂದಿನ ಮಾಹೆ ೧೭ನೇ ತಾ|| ಮೈಸೂರು ಶಾಸನ ಸಭಾಧಿವೇಶನವು ಬೆಂಗಳೂರು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಸೇರುವುದು. ಶ್ರೀಮನ್ಮಹಾರಾಜರು ಪ್ರಾರಂಭ ಭಾಷಣಮಾಡುವರು.

ಯೂರೋಪು ರಕ್ಷಣೆ

ಸಂಯುಕ್ತ ಯುರೋಪಿನ ರಕ್ಷಣೆಗಾಗಿ ಜನರಲ್ ಐಸನ್‌ಹೊವರವರು ಸುಪ್ರೀಂ ಕಮಾಂಡರಾಗಿ ನೇಮಕವಾಗಿದ್ದಾರೆ. ಮಿಲಿಟರಿಯ ವಿಶೇಷ ಅಧಿಕಾರಗಳನ್ನು ಇವರಿಗೆ ಕೊಡಲಾಗುವುದು.

ಪ್ರಕಾಶಂರಿಗೆ ನೋಟೀಸು

ಕಾಂಗ್ರೆಸ್ ಶಿಸ್ತಿಗೆ ವಿರೋಧವಾಗಿ ಮಂತ್ರಿಗಳ ಆಪಾದನೆಯ ಸೂಚನೆಯನ್ನು ಶಾಸನಸಭೆಯಲ್ಲಿ ಮಂಡಿಸಿದ್ದಕ್ಕೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಷೋಕಾಸ್ ನೋಟೀಸನ್ನು ಶ್ರೀ ಪ್ರಕಾಶಂರವರಿಗೂ ಅವರ ಅನುಯಾಯಿಗಳಾದ ಮತ್ತೆ ಐವರಿಗೆ ಕೊಡಲಾಗಿದೆ. ಜನವರಿ ೨ ನೇ ತಾರೀಖಿನೊಳಗೆ ಅವರು ಈ ನೋಟೀಸಿಗೆ ಉತ್ತರಕೊಡಬೇಕಾಗಿದೆ.

ಕನ್ನಡಸಾಹಿತ್ಯ ಸಮ್ಮೇಳನ

ಬೊಂಬಾಯಿಯಲ್ಲಿ ಇದೇ ತಿಂಗಳು ೨೬ನೇ ತಾ|| ಸೇರಲಿರುವ ಕನ್ನಡ ಸಾಹಿತ್ಯಸಮ್ಮೇಳನದ ಪ್ರಾರಂಭೋತ್ಸವವನ್ನು ಕೇಂದ್ರಸರ್ಕಾರದ ವಾರ್ತಾಸಚಿವ ಶ್ರೀ ಆರ್. ಆರ್. ದಿವಾಕರ್‌ರವರು ನೆರವೇರಿಸುವರು. ಮಂಜೇಶ್ವರದ ಶ್ರೀ ಗೋವಿಂದಪೈರವರು ಅಧ್ಯಕ್ಷತೆ ವಹಿಸುವರು. ೨೭ನೇ ತಾ|| ಕರ್ಣಾಟಕ ಕುಶಲಕಲೆಗಳ ಪ್ರದರ್ಶನವನ್ನು ಬೊಂಬಾಯಿನ ಸಚಿವ ಶ್ರೀ ಎಂ. ಪಿ. ಪಾಟೀಲರು ತೆರೆಯುವರು.

ಚುನಾವಣೆ

ಮೈಸೂರು ನಗರ ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಇದೇ ಮಾಹೆ ೨೭ನೇ ತಾ|| ಮಧ್ಯಾಹ್ನ ೪ ಗಂಟೆಗೆ ನಡೆಯುವುದು.

ಅಧ್ಯಕ್ಷಸ್ಥಾನಕ್ಕೆ ಶ್ರೀಗಳಾದ ಟಿ. ನರಸಿಂಹಯ್ಯಂಗಾರ್ (ಕಾಂ) ಮತ್ತು ಎಂ. ಆರ್. ಶ್ರೀನಿವಾಸಯ್ಯಂಗಾರ್ (ಪ್ರಜಾಸಂಘ) ರವರೂ, ಉಪಾಧ್ಯಕ್ಷಸ್ಥಾನಕ್ಕೆ ಶ್ರೀಗಳಾದ ಎಂ. ಎಸ್. ನಂಜಪ್ಪ (ಕಾಂ) ಮತ್ತು ಬಿ. ಜಿ. ದಾಸ್ (ಪ್ರಜಾಸಂಘ) ರವರು ಉಮೇದುವಾರರಾಗಿರುವರು.

ಜಿಲ್ಲಾಬೋರ್ಡ್ ಸಭೆ

ಮೈಸೂರು ಜಿಲ್ಲಾಬೋರ್ಡು ಸಭೆಯು ಇದೇ ಮಾಹೆ ೩೦ನೇ ತಾ|| ಮಧ್ಯಾಹ್ನ ಒಂದು ಗಂಟೆಗೆ ಜಿಲ್ಲಾಬೋರ್ಡು ಕಛೇರಿಯಲ್ಲಿ ಸೇರುವುದು.

ಹಿಂತಿರುಗಿದರು

ಚೈನಾಪ್ರತಿನಿಧಿಗಳು [illegible]ದಿಂದ ನಿನ್ನೆರಾತ್ರಿ ಚೀನಾಗೆ ಹಿಂತಿರುಗಿದರು. ಅವರನ್ನು ಬೀಳ್ಕೊಡಲು ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರು ಹೋಗಿದ್ದರು. ಚೈನಾ ಭಾರತದಲ್ಲಿ ಮಧುರ ಬಾಂಧವ್ಯವಿರಬೇಕೆಂದು ಚೈನಾ ಪ್ರತಿನಿಧಿಗಳು ಶ್ರೀ ಬಿ. ಎನ್. ರಾವ್‌ರವರಿಗೆ ತಿಳಿಸಿದರೆಂದು ಹೇಳಲಾಗಿದೆ.

ವಿಮಾನವು ಸಿಕ್ಕಿತು

ಬೆಂಗಳೂರಿನಿಂದ ತಿರುವಾಂಕೂರಿಗೆ ಹೊರಟು ಕಳೆದ ಬುಧವಾರ ಅದೃಶ್ಯವಾದ ವಿಮಾನವು ನಿನ್ನೆ ಕೊಯಮತ್ತೂರಿಗೆ ೬೨ ಮೈಲಿಯಲ್ಲಿ ಕೋಟಗಿರಿ ಎಂಬಲ್ಲಿಗೆ ೪ ಮೈಲಿಯಲ್ಲಿ ದಟ್ಟವಾದ ಕಾಡಿನ ನಡುವೆ ಸಿಕ್ಕಿದೆ. ೧೬ ಪ್ರಯಾಣಿಕರು ೪ ವಿಮಾನ ಚಾಲಕರೆಲ್ಲರೂ ಮಡಿದಿರುವರು. ವಿಮಾನವು ಚೂರುಚೂರಾಗಿ ಬಿದ್ದಿದೆ.

ಶ್ರೀಮತಿ ವಿಜಯಲಕ್ಷ್ಮಿಯವರು ಲಂಡನ್ನಿಗೆ

ಮುಂದಿನ ತಿಂಗಳು ಲಂಡನ್ನಿನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಸಚಿವರ ಸಮ್ಮೇಳನದಲ್ಲಿ ಭಾಗವಹಿಸುವ ಭಾರತ ಪ್ರಧಾನಿ ಪಂಡಿತ ನೆಹರೂರವರನ್ನು ಭೇಟಿಮಾಡಿ ಅನೇಕ ವಿಷಯಗಳಲ್ಲಿ ಅವರೊಡನೆ ಸಮಾಲೋಚನೆ ನಡೆಸಲು ಅಮೆರಿಕಾದಲ್ಲಿರುವ ಭಾರತ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಜನವರಿ ಒಂದನೇ ತಾರೀಖು ಲಂಡನ್ನಿಗೆ ಅಮೆರಿಕಾದಿಂದ ತೆರಳುವರು.

ಕಾಶ್ಮೀರ ಪ್ರಶ್ನೆಯಿಲ್ಲ

ಏಷ್ಯಾಖಂಡದ ಇಂದಿನ ಪರಿಸ್ಥಿತಿಯಲ್ಲಿ ಪುನಃ ಕಾಶ್ಮೀರ ಪ್ರಶ್ನೆಯನ್ನು ಪ್ರಪಂಚ ಸಂಸ್ಥೆಯಲ್ಲಿ ಚರ್ಚಿಸಲು ಸಮಯವಲ್ಲ ಮತ್ತು ಪ್ರಯೋಜನಕಾರಿಯಾಗದೆಂದು ಬ್ರಿಟನ್ ಮತ್ತು ಅಮೆರಿಕಾ ಪ್ರತಿನಿಧಿಗಳು ಅಭಿಪ್ರಾಯಪಟ್ಟಿರುವರು. ಈ ಪ್ರಶ್ನೆಯನ್ನು ಮುಂದೆ ಹಾಕಲು ಪಾಕಿಸ್ಥಾನ ವಿದೇಶಾಂಗ ಮಂತ್ರಿ ಒಪ್ಪಿರುವರು.

ಸೀಸ್ ಫೈರ್ ಸಲಹಾಸಮಿತಿ

ವಿಶ್ವಸಂಸ್ಥೆಯು ನೇಮಿಸಿರುವ ಸೀಸ್ ಫೈರ್ ಸಲಹಾ ಸಮಿತಿಯಲ್ಲಿ ಚೈನಾಪ್ರಜಾ ಸರ್ಕಾರಕ್ಕೆ ಮನ್ನಣೆಯನ್ನೀಯದ ಪರ್ಶಿಯಾ ಮತ್ತು ಕೆನಡಾ ಪ್ರತಿನಿಧಿಗಳಿರುವುದರಿಂದ ಈ ಸಮಿತಿಯು ನ್ಯಾಯ ಬದ್ಧವಲ್ಲವೆಂದು ಚೈನಾ ಪ್ರತಿನಿಧಿಗಳು ಹೇಳಿರುವರು.

ಅವಿಶ್ವಾಸ ನಿರ್ಣಯಮಾಡಿ ಬೇರೇ ನಾಯಕರನ್ನು ಚುನಾಯಿಸಿಕೊಳ್ಳುವ ವಿಷಯದಲ್ಲಿ ಪಾರ್ಲಿಮೆಂಟರಿ ಬೋರ್ಡು ಪ್ರವೇಶಿಸಕೂಡದು. ಕಾಂಗ್ರೆಸ್ ನಿಯಮಾವಳಿಯಲ್ಲಿ ಇದು ಇಲ್ಲ. ಅವಿಶ್ವಾಸನಿರ್ಣಯವನ್ನು ತರಬೇಕಾದಲ್ಲಿ ಪಾರ್ಲಿಮೆಂಟರಿ ಬೋರ್ಡಿಗೆ ವಿಷಯವನ್ನು ತಿಳಿಸಬೇಕೆಂದು ಹಿಂದೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಒಂದು ತೀರ್ಮಾನವಾಗಿದೆ. ಆದರಂತೆ ನಾವು ಪಾರ್ಲಿಮೆಂಟರಿಬೋರ್ಡಿಗೆ ವಿಷಯವನ್ನು ತಿಳಿಸಿರುವೆವು. ನಮಗೆ ಇರುವ ಹಕ್ಕನ್ನು ಮೊಟಕು ಮಾಡಲು ಪಾರ್ಲಿಮೆಂಟರಿಬೋರ್ಡು ಪ್ರವೇಶಿಸುವುದು ನ್ಯಾಯವಲ್ಲ. ಅದು ಪ್ರಜಾಪ್ರಭುತ್ವತತ್ವಕ್ಕೇ ವಿರೋಧ. ನಾವು ಈಗ ಕಾಂಗ್ರೆಸ್ ಶಿಸ್ತಿಗೆ ಒಳಪಟ್ಟೇ ನಡೆಯುತ್ತಾ ಸಂಸ್ಥೆಯ ಕೀರ್ತಿಗೆ ಧಕ್ಕೆ ತರದಂತೆ ಕಾಂಗ್ರೆಸ್ ನಿಯಮಾವಳಿಗನುಸಾರವಾಗಿಯೇ ವರ್ತಿಸುತ್ತಲಿದ್ದೇವೆ. ಈ ವಿಷಯ ಪಾರ್ಲಿಮೆಂಟರಿಬೋರ್ಡಿನ ತೀರ್ಪಿಗೆ ಒಳಪಡುವುದಿಲ್ಲ. ಹಾಗೇನಾದರೂ ಅವರು ಈ ವಿಷಯದಲ್ಲಿ ಪ್ರವೇಶಿಸಿದಲ್ಲಿ ಅದು ಅತಿಕ್ರಮಣ ಮಾಡಿದಂತಾವುದು. ಅದನ್ನು ನಾವು ಪ್ರತಿಭಟಿಸಲೇಬೇಕಾಗುತ್ತದೆ. ಬೇರೆ ನಾಯಕರನ್ನು ಆರಿಸಿಕೊಳ್ಳಲು ಸಕಾರಣಗಳಿರದೆ ಬಹುಮತ ಸದಸ್ಯರು ಅವಿಶ್ವಾಸನಿರ್ಣಯಕ್ಕೆ ಒಪ್ಪುವುದಿಲ್ಲ. ಈಗಾಗಲೇ ಸ್ಥೂಲವಾಗಿ ಕಾರಣಗಳನ್ನು ತಿಳಿಸಲಾಗಿದೆ. ಬೇಕಾದಲ್ಲಿ ಅವುಗಳನ್ನು ವಿಶದೀಕರಿಸುವೆವು. ಸಂಸ್ಥೆಯ ಹಿತದೃಷ್ಟಿಯಿಂದ ಇದು ಹಿತವಲ್ಲವೆಂದು ಅವಿಶ್ವಾಸ ನಿರ್ಣಯವನ್ನು ಮಂಡಿಸಿರುವ ಕಾಂಗ್ರೆಸ್ ಪಕ್ಷದವರು ಹೇಳುತ್ತಲಿರುವರೆಂದು ತಿಳಿದುಬಂದಿದೆ. ಅವಿಶ್ವಾಸ ನಿರ್ಣಯಕ್ಕೆ ರುಜು ಹಾಕಿರುವವರ ಸಂಖ್ಯೆಯು ಈಗಾಗಲೇ ೩೪ ರಿಂದ ೩೬ ಕ್ಕೆ ಏರಿದೆ. ಇನ್ನೂ ಸಹಿಗಳು ಬೀಳುವುದರಲ್ಲಿವೆ. ಈಗಿನ ನಾಯಕರ ಪಕ್ಷಕ್ಕೆ ಸೇರಿದವರು ಒಡಕನ್ನುಂಟುಮಾಡಲು ಪ್ರಯತ್ನಿಸುತ್ತಲಿರುವರೆಂದು ಹೇಳಲಾಗುತ್ತಲಿದೆ.

ಇಂಥಾ ಸ್ಥಿತಿಯಲ್ಲಿ ಪಾರ್ಲಿಮೆಂಟರಿ ಬೋರ್ಡಿನವರು ಅವಿಶ್ವಾಸ ನಿರ್ಣಯವನ್ನು ತರಲು ಆಸ್ಪದ ಕೊಡುವಂತೆ ಕಾಣುವುದಿಲ್ಲ. ಆದರೆ ವಿರೋಧಿ ಪಕ್ಷದವರು ಬೇರೇ ನಾಯಕರನ್ನು ಚುನಾಯಿಸಿಕೊಂಡು ಹೊಸ ಮಂತ್ರಿಮಂಡಲನ್ನೆ ರಚಿಸುತ್ತೇವೆಂದು ಕಂಕಣಬದ್ಧರಾಗಿರುವರೆಂದು ಹೇಳುತ್ತಲಿದ್ದಾರೆ.

ಸ್ವಾತಂತ್ರ್ಯವನ್ನು ಪಡೆಯುವ ಕಾಲದಲ್ಲಿ ಪ್ರಜೆಗಳು ಯಾವ ಆಶೋತ್ತರಗಳನ್ನಿಟ್ಟುಕೊಂಡಿದ್ದರೋ ಅವುಗಳಲ್ಲಿ ಯಾವುವೂ ಈಡೇರದಿರುವುದರಿಂದ ಸಂಸ್ಥೆಯಲ್ಲಿ ಈ ಒಳ ಜಗಳಗಳೇ ಎದ್ದು ಕಾಣುತ್ತಲಿರುವುದರಿಂದ ಉಭಯ ಪಕ್ಷದವರ ಬೆಂಬಲಿಗರಿಗೆ ವಿನಹ ಪ್ರಜಾ ವರ್ಗಕ್ಕೆ ಈಗಿನ ಮೈಸೂರಿನ ರಾಜಕೀಯದಲ್ಲಿ ಆಸಕ್ತಿಯೇ ಇಲ್ಲದಾಗಿದೆ.

ಜುಲ್ಮಾನೆ

ಹಾಲಿಗೆ ಶೇಕಡ ೩೫ರಷ್ಟು ನೀರನ್ನು ಬೆರಸಿ ಮಾರುತ್ತಲಿದ್ದಳೆಂಬ ಆಪಾದನೆಮೇಲೆ ಸಣ್ಣಮ್ಮ ಎಂಬುವಳಿಗೆ ೨೦ ರೂ. ಶೇಕಡ ೬೮ ಕೊಬ್ಬನ್ನು ಸೇರಿಸಿ ಬೆಣ್ಣೆಯನ್ನು ಮಾರುತ್ತಲಿದ್ದ ಪಾಷಾ ಎಂಬುವವನಿಗೆ ೫೦ ರೂ ಶೇಕಡ ೯೦ ರಷ್ಟು ಕೊಬ್ಬನ್ನು ಸೇರಿಸಿ ತುಪ್ಪವನ್ನು ಮಾರುತ್ತಲಿದ್ದ ಆಳಗಿರಿ ಶೆಟ್ಟಿಯಾರ್‌ಗೆ ೫೦ ರೂ ಜುಲ್ಮಾನೆಯನ್ನು ಒಂದನೇ ದರ್ಜೆಯ ಮ್ಯಾಜಿಸ್ಟ್ರೇಟರಾದ ಶ್ರೀ ಎಂ. ಎಸ್. ಶಂಕರರಾಯರು ವಿಧಿಸಿರುತ್ತಾರೆ.

ಪೌರಸಭೆ ಅಧ್ಯಕ್ಷರು

ಯಳಂದೂರು ಪೌರಸಭೆಗೆ ಅಧ್ಯಕ್ಷರಾಗಿ ಶ್ರೀ ಎಸ್. ಲಕ್ಷ್ಮೀನಾರಾಯಣರ [illegible] ಚುನಾಯಿತರಾಗಿರುವುದನ್ನು ಸರ್ಕಾರದವರು ಅಂಗೀಕರಿಸಿರುವರು.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ತಾನ್‌ರವರ
★ ಸರ್ಗಮ್ ★
(ಹಿಂದಿ)
ಪಾತ್ರ: ● ರಹೇನಾ ● ರಾಜಕಪೂರ್
ಬೆಳಗಿನ ಪ್ರದರ್ಶನ
ಡಾ॥ ಕೋಟ್‌ನೀಸ್

ಕೊರಿಯಾಪ್ರಜೆಗಳ ಕೊಲೆ

ದಕ್ಷಿಣ ಕೊರಿಯಾ ಸರ್ಕಾರವು ಕೊರಿಯಾ ಪ್ರಜೆಗಳನ್ನು ಕೊಲೆಮಾಡುತ್ತಲಿರುವುದನ್ನು ಬ್ರಿಟಿಷ್ ಸೈನ್ಯಗಳು ಸಹಿಸುವುದಿಲ್ಲವೆಂದು ಬ್ರಿಟಿಷ್ ಬ್ರಿಗೇಡಿಯರ್ ಮಿ॥ ಟಾಂಬ್ರೋಡಿಯರ್‌ರವರು ತಿಳಿಸಿ, ಅದನ್ನು ತಡೆಗಟ್ಟಲು ತಮ್ಮ ಸೈನ್ಯವನ್ನು ಕಳುಹಿಸಿರುವರು. ಅಕ್ಟೋಬರ್ ೧ರಿಂದ ಇಲ್ಲಿಯವರೆಗೆ ೨೪೨ ಜನರನ್ನು ಕೊಲೆಮಾಡಲಾಗಿದೆ. ಕಳೆದ ಶುಕ್ರವಾರ ದಿನವೇ ೬೧ ಜನರನ್ನು ಕೊಲ್ಲಲಾಗಿದೆ. ಕೊಲೆ ಮಾಡಿದ ಸ್ಥಳಕ್ಕೆ 'ಕೊಲೆ ಪರ್ವತ' ವೆಂಬ ಹೆಸರನ್ನು ಕೊಡಲಾಗಿದೆ.

ಸಾರ್ವತ್ರಿಕ ರಜಾ

ಕಾರ್ಪೊರೇಷನ್ನಿನ ಚುನಾವಣೆಗಳಿಗಾಗಿ ಡಿಸೆಂಬರ್ ೨೩ನೇ ತಾ॥ ಬೆಂಗಳೂರು ನಗರದಲ್ಲೆಲ್ಲಾ ಸಾರ್ವತ್ರಿಕ ರಜಾದಿನವೆಂದು ಸರ್ಕಾರದವರು ಆಜ್ಞೆ ಹೊರಡಿಸಿರುವರು. ನೆಗೋಷಿಯಬಲ್ ಇನ್‌ಸ್ಟ್ರುಮೆಂಟು ಆಕ್ಟಿನ ಪ್ರಕಾರವೂ ರಜಾದಿನವಾಗಿದೆ.

ಆಪೇರಾ
20-12-50 ರಿಂದ ಪ್ರತಿದಿನ 3 ಆಟಗಳು
ಕನ್ನಿಯಿನ್ ಕಾದಲಿ
ಅಂಜಲಿದೇವಿ, ಮಾಧುರಿದೇವಿ, ಕೆ. ಆರ್.
ರಾಮಸ್ವಾಮಿ ಪಾತ್ರವಹಿಸಿರುವ
ಮಹೋನ್ನತ ತಮಿಳುಚಿತ್ರ

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೬ ಮೀಟರು

ಡಿಸೆಂಬರ್ ೨೧ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಬಿ. ನಾಗೇಂದ್ರಪ್ಪ (ಕ್ಲಾರಿಯೊನೆಟ್) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ದಿಲ್‌ರುಬ ೧-೪೫ ಹಿಂದಿ ಶಿಕ್ಷಣ ೨-೦ ಚಿತ್ರಸಂಗೀತ ೨-೩೦ ಮುಕ್ತಾಯ.

ಸಂಜೆ ೫-೩೦ ಎಂ. ಪ್ರಭಾಕರ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭.೫ ಜೂತಿಕಾ ರಾಯ್ ಮತ್ತು ಕಮಲಾದೇವ್‌ಗುಪ್ತ (ರಿ) ೭-೧೫ ಬಿ. ನಾಗೇಂದ್ರಪ್ಪ (ಕ್ಲಾರಿಯೊನೆಟ್) ೭-೪೫ ಕನ್ನಡದಲ್ಲಿ ವಾರ್ತೆ ೮-೦ ಕನ್ನಡ ಪದ್ಯಪಠನ ೮-೧೫ ಇಂಗ್ಲೀಷಿನಲ್ಲಿ ಭಾಷಣ ೮-೩೦ ಎಂ. ಪ್ರಭಾಕರ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ ೯-೧೫ ಹಿಂದಿಯಲ್ಲಿ ವಾರ್ತೆ ೯-೩೦ ಕಥೆ ೧೦-೦ ಮುಕ್ತಾಯ.

ಗಡಿನಾಡಿನ ಗಾಂಧಿ

ಗಡಿನಾಡಿನ ಗಾಂಧಿಖಾನ್ ಅಬ್ದುಲ್ ಘಫಾರ್‌ಖಾನ್ ರವರು ದೇಹಾಲಸ್ಯದಿಂದಿರುವರೆಂದು ಭಾರತ ಪತ್ರಿಕೆಗಳಲ್ಲಿ ಪ್ರಕಟಿಸಿರುವುದು ಸತ್ಯಕ್ಕೆ ದೂರವೆಂದೂ ಅವರು ಆರೋಗ್ಯವಾಗಿರುವರೆಂದು ಪಾಕಿಸ್ಥಾನ ರೇಡಿಯೋ ಪ್ರಸಾರಮಾಡಿದೆ.

ಒಲಂಪಿಯಾ
14-12-50 ರಿಂದ ದಿನವಹಿ 3 ಆಟಗಳು
ಅಪರಿಚಿತ ಕಾಡು ಮೃಗಗಳ ಭೇಟಿ
ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ
ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿ
ಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅದಲ್ಲದೆ
೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ
ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ
ಹಾಲ್‌ರೋಚ್‌ರವರ
ಒನ್ ಮಿಲಿಯನ್ ಬಿ. ಸಿ.
(ONE MILLION B.C.)
ನೀವು ಹಿಂದೆ ಎಂದೂ ನೋಡದೆ ಮುಂದೆ
ನೋಡದಿರುವ ಚಿತ್ರ

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ
ಮಾದರಿಯಾದ ಗುಣವುಳ್ಳವು! ಬಹುಕಾಲ ಬಾಳಿಕೆ ಬರುವುವು!!
ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು!!!
ಮೈಸೂರು ಉಕ್ಕಿನ ಸಾಮಾನುಗಳು
ಗಾಡಿಪಟ್ಟಿ ಅಥವಾ ಹಳಿಗಳು (Flats) ದುಂಡು ಮತ್ತು ಚದುರ ಸಲಾಕಿಗಳು (Rounds and Squares) ಕೋನ ಕಂಬಿಗಳು (Angles) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (Reinforcing Rods) ಮತ್ತು ಬೀಲುಪಟ್ಟಿಗಳು (Hoops) ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು
ಮೈಸೂರು ಬೀಡು ಕಬ್ಬಿಣ (Charcoal Pig Iron)
ವಿವಿಧ ಕೆಲಸಗಳಿಗೆ ಬೇಕಾಗುವ ಗುಣಗಳಿಗೆ ಅನುಸಾರವಾಗಿ ಏಳು ದರ್ಜೆಗಳಲ್ಲಿ ತಯಾರಾಗುವುವು
ಮೈಸೂರು ಕಬ್ಬಿಣದ ಕೊಳಾಯಿಗಳು (C. I. Pipes)
೨ ಅಂಗುಲದಿಂದ ೩೦ ಅಂಗುಲ ವ್ಯಾಸವುಳ್ಳವು. ನೀರು ಸರಬರಾಯಿಗೆ ಉಪಯುಕ್ತವಾಗಿವೆ.
ಮೈಸೂರು ಎರಕದ ಕಬ್ಬಿಣದ ಸಾಮಾನುಗಳು (Castings)
ಕಟಾಂಜನಗಳೂ (Railings), ಅಂದವಾದ ಬಾಗಿಲುಗಳೂ, ಲಾಂದ್ರ ಕಂಭಗಳೂ,
ನೀರಾಡುವ ಬುಗ್ಗೆಗಳೂ, ಮಹಡಿ ಹಂತಗಳು, ಕಿಟಕಿಗಳೂ ಇತ್ಯಾದಿ,
ಮೈಸೂರು ಸೌದೆ ಭಟ್ಟಿಯಿಂದ ತಯಾರಾಗುವ (Bye Products)
ತಾರೆಣ್ಣೆ, ಕಪ್ಪುಬಣ್ಣ, ಮೆಥನಾಲ್, ಕ್ರಿಮಿನಾಶಕ ಮತ್ತು ಮರರಕ್ಷಕ ಎಣ್ಣೆಗಳು.
ಬೆಲೆ ಮತ್ತು ಹೆಚ್ಚಿನವಿವರಗಳಿಗೆ ದಯಮಾಡಿಟ್ಟು ಬರೆಯಿರಿ.
ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ,
ಭದ್ರಾವತಿ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ. ಟೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone. 374

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್ ಸ್ವಾಮಿ

ಸಂಪುಟ ೧] ೨೧—೧೨—೧೯೫೦ನೇ ಗುರುವಾರ [ಸಂಚಿಕೆ ೯೨

ಕಾಂಗ್ರೆಸ್ಸಿಗರ ಮೇಲೆ ಶಿಸ್ತಿನ ಕ್ರಮ

ಕಾರ್ಪೊರೇಷನ್ ಚುನಾವಣೆಗೆ ಸ್ವತಂತ್ರವಾಗಿ ನಿಂತಿದ್ದಕ್ಕೆ

ಸ್ವತಂತ್ರವಾಗಿ ನಿಂತು ಉಮೇದುವಾರಿಕೆ ವಾಪಸ್ಸು ಪಡೆದವರಿಗೆ ಅಭಿನಂದನೆ

ಅಸ್ಥಿ ವಿಸರ್ಜನೆ

ಸರ್ದಾರ ಪಟೇಲರ ಅಸ್ಥಿಯನ್ನು ಅಲಹಾಬಾದಿನಲ್ಲಿ ಗಂಗಾ ಯಮುನಾ ತ್ರಿವೇಣಿ ಸಂಗಮದಲ್ಲಿ ಡಿಸೆಂಬರ ೨೯ ರಲ್ಲಿ ಬಿಡಲು ನಿರ್ಧರಿಸಲಾಗಿದೆ.

ವಿಮಾನಗಳಿಗೆ ಸೂಚನೆ

ರಷ್ಯಾ ಮತ್ತು ಅವರ ಮಿತ್ರರಾಷ್ಟ್ರಗಳಿಗೆ ಅಮೆರಿಕಾ ವಿಮಾನಗಳು ಯಾವ ಸಾಮಾನುಗಳನ್ನೂ ಕೊಂಡೊಯ್ಯಲಾಗದೆಂದು ಅಮೆರಿಕಾ ಸರ್ಕಾರವು ಆಜ್ಞೆಮಾಡಿದೆ

ಶುಭಾಶಯ

ಮಿ|| ಸ್ಟಾಲಿನ್ನರವರ ಜನ್ಮೋತ್ಸವ ಸಂದರ್ಭದಲ್ಲಿ ಭಾರತಪ್ರಧಾನಿ ನೆಹರೂರವರು ಮಿ|| ಸ್ಟಾಲಿನ್ನರಿಗೆ ಶುಭಾಶಯಗಳನ್ನು ಕಳುಹಿಸಿರುವರು

ಸಕ್ಕರೆ ಪಡಿತರ ವಜಾ

ಭಾರತಾದ್ಯಂತ ಸಕ್ಕರೆ ಪಡಿತರವನ್ನು ರದ್ದುಗೊಳಿಸಲಾಗಿದೆ. ಆದರೆ ಸಕ್ಕರೆಯನ್ನು ಡಿಪೋಗಳ ಮೂಲಕವೇ ಮಾರಲಾಗುವುದು. ಬೆಲ್ಲವನ್ನು ಹಿಂದಿನಂತೆಯೇ ಯಾವ ರಾಹದಾರಿಯೂ ಇಲ್ಲದೆ ತಯಾರಿಸಿ ಮಾರಬಹುದು. ಸಕ್ಕರೆ ಕಾರ್ಖಾನೆಗಳಲ್ಲಿ ನಿಗದಿಮಾಡಿರುವ ಪ್ರಮಾಣಕ್ಕಿಂತ ಹೆಚ್ಚಿಗೆ ತಯಾರು ಮಾಡಿದ ಸಕ್ಕರೆಯನ್ನು ಯಾವ ಅಂಗಡಿಗಳಲ್ಲಿ ಬೇಕಾದರೂ ಮಾರಬಹುದು

ಚತುರ್ರಾಷ್ಟ್ರಗಳ ಮುಖಂಡರ ಭೇಟಿಯೆ ?

ರಷ್ಯಾ ಮತ್ತು ಚೈನಾ ಮುಖಂಡರುಗಳು ಮಿ|| ಟ್ರೂಮನ್ ಮತ್ತು ಮಿ|| ಅಟ್ಲಿಯವರು ಒಂದೆಡೆ ಸೇರಿ ವಿಚಾರವಿನಿಮಯಮಾಡಿಕೊಳ್ಳುವ ವಿಷಯದಲ್ಲಿ ಕಾರ್ಯಕ್ರಮ ನಡೆಯುತ್ತಲಿದೆಯೆಂದು ವರದಿಯಾಗಿದೆ

ಹಾಕಿ ಪಂದ್ಯ

ತಾ|| ೨೦-೧೨-೫೦

ರಲ್ಲಿ ನಿನ್ನೆ ನಡೆದ ಸೆಂಟ್‌ಫಿಲೋಮಿನಾ ಹೈಸ್ಕೂಲಿನವರಿಗೂ ಮತ್ತು ಹಾರ್ಡ್ವಿಕ್ ಹೈಸ್ಕೂಲಿನವರಿಗೂ, ನಡೆಯಿತು, ಸೆಂಟ್ ಫಿಲೋಮಿನಾ ಹೈಸ್ಕೂಲಿನವರು ಮೂರುಗೋಲುಗಳಿಂದ ವಿಜಯಶಾಲಿಯಾದರು.

ಕೃಷ್ಣದಾಸ್ ಗಾಂಧಿ

ಈ ತಿಂಗಳು ೨೪ ನೇ ತಾರೀಖು ಅಖಿಲಭಾರತ ಚರಕ ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣದಾಸ್ ಗಾಂಧಿಯವರು ಮಂಗಳೂರಿನಿಂದ ರಾಜಧಾನಿಗೆ ಬರುವರು. ೨೫ ನೇ ತಾರೀಖು ಬೆಳಗ್ಗೆ ಖಾದಿ ಪ್ರೇಮಿಗಳು, ರಚನಾತ್ಮಕ ಕೆಲಸಗಾರರನ್ನುದ್ದೇಶಿಸಿ ಭಾಷಣಮಾಡುವರು. ವಯಸ್ಕರ ಶಿಕ್ಷಣಸಮಿತಿ, ಮಹಿಳಾ ಸದನ ಮತ್ತು ವನಿತಾಸದನಗಳಿಗೆ ಭೇಟಿಯೀಯುವರು.

ಕೊಲೆ

ಮೈಸೂರು ಡಿ ೨೦

ನಿನ್ನೆ ಸಂಜೆ ಅಂಚೆಗೆ ಕಾಗದಗಳನ್ನು ಹಾಕಲು ಹೋದ ಮೈಸೂರು ತಾಲ್ಲೂಕು ಆಫೀಸ್ ಜವಾನ ಶೇಕ್ ಹುಸೇನ್ ಎಂಬುವವನು ಪತ್ತೆಯಿಲ್ಲದಿದ್ದು ಇಂದು ಮಧ್ಯಾಹ್ನ ೧೨ ಗಂಟೆ ವೇಳೆಗೆ ಅವನ ಶವವು ಬನ್ನೀಮಂಟಪರಸ್ತೆಯ ಒಂದು ಮೈದಾನದಲ್ಲಿ ಸಿಕ್ಕಿತು. ತಲೆ ಮೇಲೆ ವಿಶೇಷವಾಗಿ ಏಟುಬಿದ್ದು ಕೊಲೆಯಾದಂತೆ ಕಾಣಬರುತ್ತದೆ, ತನಿಖೆ ನಡೆಯುತ್ತಲಿದೆ.

ರಾಷ್ಟ್ರಾಧ್ಯಕ್ಷರ ಸಂತಾಪ

ಡಿಸೆಂಬರ್ ೧೩ ರಲ್ಲಿ ಅಪಘಾತಕ್ಕೀಡಾದ ಬೆಂಗಳೂರಿನಿಂದ ಕೊಯಮತ್ತೂರಿಗೆ ಹೊರಟಿದ್ದ ಏರಿಂಡಿಯಾ ಡಕೋಟಾ ವಿಮಾನದಲ್ಲಿ ದುರಂತಕ್ಕೀಡಾದವರ ಬಂಧುಗಳಿಗೆ ಭಾರತ ರಾಷ್ಟ್ರಾಧ್ಯಕ್ಷರು ತಮ್ಮ ಅನುತಾಪವನ್ನು ಸೂಚಿಸಿದ್ದಾರೆ.

ಸ್ಥಳದಲ್ಲಿಯೇ ಹೂಳಲಾಯಿತು

ನೀಲಗಿರಿ ಪರ್ವತಶ್ರೇಣಿಯಲ್ಲಿ ಎರಡು ಗುಡ್ಡಗಳ ನಡುವೆ ಆಳವಾದ ಕಣಿವೆಯೊಂದರಲ್ಲಿ ವಿಮಾನವು ಬಿದ್ದು ಎಲ್ಲಾ ಮೃತದೇಹಗಳನ್ನು ನಿನ್ನೆ ಸಿಕ್ಕಿದುವು. ಶರೀರಗಳೆಲ್ಲವೂ ಕೊಳೆತು ಸಾಗಿಸಲು ಅಸಾಧ್ಯವಿದ್ದರಿಂದ ಆ ಶವಗಳನ್ನೆಲ್ಲಾ ಅಲ್ಲೇ ಹೂಳಲಾಯಿತು.

ಒಂದು ಗೋಣೀಚೀಲಕ್ಕೆ ಆರೂಕಾಲು ರೂಪಾಯಿ

ಪಾಕಿಸ್ತಾನದಲ್ಲಿ ಒಂದು ಗೋಣೀಚೀಲಕ್ಕೆ ಆರುಕಾಲು ರೂಪಾಯಿನಂತೆ ಮಾರಲಾಗುತ್ತಲಿದೆ. ಎಷ್ಟೇ ಬೆಲೆ ಬಾಳಲಿ ಮತ್ತು ಎಷ್ಟೇ ಸಂಖ್ಯೆಯಲ್ಲಾಗಲೀ ಭಾರತದ ಗೋಣೀಚೀಲಗಳನ್ನು ಕೊಳ್ಳಲು ಚೀಣಾ ಸಿದ್ಧವಿದೆ ಆಹಾರ ಧಾನ್ಯಗಳನ್ನು ಸಾಗಿಸಲು ಭಾರತದಲ್ಲಿಯೇ ಈ ಚೀಲಗಳಿಗೆ ವಿಶೇಷ ಆವಶ್ಯಕತೆಯಿದೆ

ಶ್ರೀ ಅಶೋಕಮೆಹ್ತರವರ ಆಗಮನ

ಅ|| ಭಾ|| ಸೋಷಲಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಶ್ರೀ ಅಶೋಕಮೆಹ್ತರವರು ಇಂದು ಬೆಳಗ್ಗೆ ಬೆಂಗಳೂರಿಗೆ ಆಗಮಿಸುವರು

ಮಂತ್ರಿಮಂಡಲದ ಸಭೆ

ಇಂದು ಮಧ್ಯಾಹ್ನ ಆಠಾರಾಕಚೇರಿಯಲ್ಲಿ ಮುಖ್ಯಮಂತ್ರಿಗಳ ಚೇಂಬರ್ಸಿನಲ್ಲಿ ಮಂತ್ರಿಮಂಡಲದ ಸಭೆ ಸೇರಲಿದೆ

ಸ್ಥಳೀಯ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ದೆಹಲಿಗೆ ಹೋಗಿದ್ದ ಸಚಿವ ಶ್ರೀ ಚೆನ್ನಿಗರಾಮಯ್ಯನವರು ಇಂದು ಬೆಂಗಳೂರಿಗೆ ಹಿಂತಿರುಗಿದರು

ಬೆಂಗಳೂರು ಡಿ ೨೦

ಕೆಳಗೆ ಕಂಡವರು ಕಾರ್ಪೊರೇಷನ್ ಚುನಾವಣೆಗೆ ತಮ್ಮ ಉಮೇದುವಾರಿಕೆಗಳನ್ನು ವಾಪಸ್ ತೆಗೆದುಕೊಳ್ಳದುದರಿಂದ ಅವರು ಶಿಸ್ತನ್ನು ಮುರಿದಿರುವರೆಂದೂ ಅವರ ಮೇಲೆ ಶಿಸ್ತಿನಕ್ರಮ ಅಗತ್ಯವೆಂದೂ ಇಂದು ಸೇರಿದ ಪಾರ್ಲಿಮೆಂಟರಿ ಸಮಿತಿ ಎಂ. ಪಿ. ಸಿ. ಸಿ. ಕಾರ್ಯಸಮಿತಿಗೆ ಸೂಚಿಸಿದೆ.

ಶ್ರೀಗಳಾದ ಎ. ಸಿದ್ದಪ್ಪ, ಎಚ್. ಬಿ. ಶಂಕರಪ್ಪ, ಎಂ. ಆರ್. ನರಸಿಂಹಯ್ಯಂಗಾರ್, ಕೆ. ಸಂಜಯ್ಯ, ಪಿ. ಸಂಜಪ್ಪ, ನವನೀತಕುಮಾರ್ ಮತ್ತು ಕೆ. ಆರ್. ರಾಜಗೋಪಾಲಾಚಾರ್, ಈ ಸದಸ್ಯರುಗಳ ಮೇಲೆ ಶಿಸ್ತಿನ ಕ್ರಮ ಅಗತ್ಯವೆಂದು ಸೂಚಿಸಲಾಗಿದೆ. ಅವರನ್ನು ಕಾಂಗ್ರೆಸ್ ಸದಸ್ಯತ್ವದಿಂದ ತೆಗೆದುಹಾಕಿ ಮತ್ತೆ ಮೂರು ವರ್ಷಕಾಲ ಅವರು ಕಾಂಗ್ರೆಸ್ಸಿಗೆ ಸೇರಲು ಅವಕಾಶವಿರಕೂಡದೆಂದೂ ಸಮಿತಿ ಸೂಚಿಸಿದೆ

ಪಾರ್ಲಿಮೆಂಟರಿ ಉಪಸಮಿತಿಯ ಸೂಚನೆಗನುಗುಣವಾಗಿ ತಮ್ಮ ಉಮೇದುವಾರಿಕೆಗಳನ್ನು ವಾಪಸ್ ಪಡೆದಿರುವ ಶ್ರೀಗಳಾದ ಬಿ. ರಾಮಸ್ವಾಮಿ, ರಾಮಲಾಲ್ ತಿವಾರಿ ಮತ್ತು ಎ. ಎನ್. ವೀರಪ್ಪ ಇವರುಗಳ ಬಗ್ಗೆ ಸಮಿತಿ ಮೆಚ್ಚುಗೆ ಸೂಚಿಸಿದೆ.

ಮೆಣಸಿನಕಾಯಿ ರಫ್ತಿನಮೇಲಿನ ಪ್ರತಿಬಂಧಕದ ರದ್ದು

ಬೆಂಗಳೂರು ಡಿ ೨೦

ಸಂಸ್ಥಾನದ ಹೊರಗಡೆಗೆ ಮೆಣಸಿನ ಕಾಯಿನ ರಫ್ತಿನ ಮೇಲಿದ್ದ ಪ್ರತಿಬಂಧಕವನ್ನು ಈಗ ರದ್ದುಗೊಳಿಸಲಾಗಿದೆಯೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ

೩ ಕೋಟಿ ಸಸಿಗಳು

ಆಹಾರ ಮಂತ್ರಿ ಶ್ರೀ ಮುನಿಷಿಯವರು ಪಾರ್ಲಿಮೆಂಟಿನಲ್ಲಿ ಉತ್ತರಕೊಡುತ್ತ, ವನಮಹೋತ್ಸವಕಾಲದಲ್ಲಿ ೩ ಕೋಟಿ ಸಸಿಗಳನ್ನು ನೆಡಲಾಯಿತೆಂದೂ ಅವುಗಳನ್ನು ಕಾಪಾಡಿ ಅಭಿವೃದ್ಧಿಪಡಿಸಲು ಸಂಸ್ಥಾನ ಸರ್ಕಾರಗಳು ಭರವಸೆನೀಡಿವೆಯೆಂದೂ ತಿಳಿಸಿದರು.

ಬೆಂಗಳೂರು ಡಿ ೨೧

ಬೆಂಗಳೂರಿನಲ್ಲಿ ಸದ್ಯದಲ್ಲೇ ನಡೆಯಲಿರುವ ಅ|| ಭಾ|| ವಿಜ್ಞಾನಸಮ್ಮೇಳನದ ಸಂದರ್ಭದಲ್ಲಿ ಅರ್ಥಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಡಿಸೆಂಬರ್ ೩೧ ನೇ ತಾ|| ಬೆಳಿಗ್ಗೆ ೧೦ ಗಂಟೆಗೆ ಅ|| ಭಾ|| ಫಾರ್ಮಸ್ಯೂಟಿಕಲ್ ಸಮ್ಮೇಳನದ ಉದ್ಘಾಟನೆಯನ್ನು ನಡೆಸುವರು.

ಮೈಸೂರು ಸಿಟಿ ಮುನಿಸಿಪಾಲಿಟಿ

ಟೆಂಡರ್ ನೋಟಿಫಿಕೇಷನ್

ಈ ಮೂಲಕ ತಿಳಿಯಪಡಿಸುವುದೇನೆಂದರೆ :—

೧೯೫೧-೫೨ (೧-೨-೧೯೫೧ರಿಂದ ೩೧-೧-೧೯೫೨ ರವರೆವಿಗೆ) ನೆ ಸಾಲಿಗೆ ಬೇಕಾಗುವ ಈ ಕೆಳಗೆ ವಿವರಿಸಿರುವ ಸಾಮಾನುಗಳನ್ನು ಸಪ್ಲೈಮಾಡಲು ಮೊಹರಾದ (Sealed Tenders with Samples) ಟೆಂಡರುಗಳನ್ನು ಸ್ಯಾಂಪಲ್‌ಗಳೊಡನೆ ೧೯೫೧ನೇ ಇಸವಿ ಜನವರಿ ಮಾಹೆ ೮ನೇ ತಾರೀಖು ಸೋಮವಾರ ಮಧ್ಯಾಹ್ನ ೪ ಗಂಟೆವರೆವಿಗೂ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ಈ ಕೆಳಗೆ ನಮೂದಿಸಿರುವ ಟೆಂಡರ್ ಡಿಪಾಜಟ್ ಹಣವನ್ನು ಜವಾ ಮಾಡಿ ಮುನಿಸಿಪಲ್ ಖಜಾನೆಯಿಂದ ಪಡೆದ ಸರ್ಟಿಫೈಡ್ ಚಲನ್ ಸಮೇತ ತಮ್ಮ ಟೆಂಡರುಗಳನ್ನು ಕಳುಹಿಸತಕ್ಕದ್ದು. ಹೆಚ್ಚಿಗೆ ವಿವರಗಳನ್ನು ಆಫೀಸುವೇಳೆಯಲ್ಲಿ ಪಡೆಯಬಹುದು ಮತ್ತು ನೋಟೀಸ್ ಬೋರ್ಡಿನಲ್ಲಿಯೂ ಕಾಣಬಹುದು.

-: ವಿವರ :-

ಬಾಬು	ಟೆಂಡರ್ ಡಿಪಾಜಟ್
ಎ. ಹುರುಳಿ ಮತ್ತು ಉಪ್ಪು	೩೦೦ ರೂ. ಗಳು
ಬಿ. ಒಣಗಿದ ನೆಲ್ಲುಹುಲ್ಲು	೩೦೦ ರೂ. ಗಳು
ಸಿ. ಚರಕೆಹಗ್ಗ ನೂಲಿನ ಹಗ್ಗ ಮತ್ತು ಎರೆ ಎಣ್ಣೆ	೧೫೦ ರೂ. ಗಳು

(ಸಹಿ) ಸಿ. ನರಸಿಂಹಮೂರ್ತಿ.
ಕಮೀಷನರ್,
ಸಿಟಿ ಮುನಿಸಿಪಲ್ ಕೌನ್ಸಿಲ್,
ಮೈಸೂರು.

ಕೊರಿಯಾ ಯುದ್ಧರಂಗ

ಕಮ್ಯೂನಿಸ್ಟ್ ಸೈನ್ಯವು ದಕ್ಷಿಣಕೊರಿಯಾವನ್ನು ಮುತ್ತಿ, ಸುಯಾಲ್ ಪಟ್ಟಣವನ್ನು ವಶಪಡಿಸಿಕೊಳ್ಳುವುದಲ್ಲದೆ ಅಮೆರಿಕಾ ಸೈನ್ಯವನ್ನು ಕೊರಿಯಾ ದೇಶದಿಂದ ಹೊಡೆದೋಡಿಸಿ ಸಂಯುಕ್ತ ಕೊರಿಯಾವನ್ನು ಸ್ಥಾಪಿಸುವವರೆಗೆ ಯುದ್ಧಮಾಡುವುದಾಗಿ ಉತ್ತರಕೊರಿಯಾ ಸರ್ಕಾರವು ಘೋಷಿಸಿದೆ.

ಸಿಯಾಲ್ ಪಟ್ಟಣವನ್ನು ಅಮೆರಿಕಾ ಸೈನ್ಯವು ಹಾಳುಮಾಡುತ್ತಲಿರುವುದನ್ನು ಅಲ್ಲಿಯ ಪ್ರಜೆಗಳಲ್ಲೆಲ್ಲಾ ತಡೆಗಟ್ಟಬೇಕೆಂದೂ ಸಿಯಾಲ್ ಪ್ರದೇಶದಲ್ಲಿರುವ ವಿಶ್ವಸಂಸ್ಥೆಯ ಸೈನ್ಯವನ್ನೆಲ್ಲಾ ನಾಶಮಾಡಬೇಕೆಂದು ಜನರಿಗೆ ಮನವಿಮಾಡಿಕೊಂಡಿದೆ.

ಚೈನಾ ಸ್ವಯಂಸೇವಕರು ಕೊರಿಯಾ ಸಂಗ್ರಾಮದಲ್ಲಿ ಪ್ರವೇಶಿಸಿರುವುದು ನ್ಯಾಯಬದ್ಧವಾಗಿದೆಯೆಂದೂ ಹೇಳಲಾಗಿದೆ.

ಕೊರಿಯಾ ಯುದ್ಧಕ್ಕೆ ಭಾರತೀಯರು

ಕಮ್ಯೂನಿಸ್ಟ್ ಫ್ರೆಂಟ್‌ಗೆ ಸೇರಿದ ೩೦೦ ಜನ ಭಾರತೀಯರು ಕೊರಿಯಾ ಯುದ್ಧರಂಗವನ್ನು ಸೇರಿ, ವಿಶ್ವಸಂಸ್ಥೆಯ ಸೈನ್ಯವನ್ನೆದುರಿಗೆ ಕಾದಾಡಲು ತಮಗೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಭಾರತ ಸರ್ಕಾರವನ್ನು ಕೇಳಿರುವುದಾಗಿ ಹಾಂಕಾಂಗಿನ ವರದಿಯೊಂದು ತಿಳಿಸುತ್ತದೆ.

ಅಧ್ಯಕ್ಷರ ಮೆರವಣಿಗೆ ನಿಲ್ಲಿಸಲಾಯಿತು

ಪೂನಾದಲ್ಲಿ ನಡೆಯಲಿರುವ ಹಿಂದೂ ಮಹಾ ಸಭಾಧಿವೇಶನದ ಅಂಗವಾಗಿ ಇಟ್ಟುಕೊಂಡಿದ್ದ ಅಧ್ಯಕ್ಷರ ಮೆರವಣಿಗೆಯನ್ನು ಸರ್ದಾರರ ನಿಧನದ ಬಗ್ಗೆ ಈ ವಾರವೆಲ್ಲವೂ ಶೋಕವಾರವನ್ನಾಗಿ ಆಚರಿಸಬೇಕಾಗಿರುವುದರಿಂದ ನಿಲ್ಲಿಸಲಾಗಿದೆ

ಶತಮಾನೋತ್ಸವ

ಮಹಾರಾಜಾ ಕಾಲೇಜಿನ ಶತಮಾನೋತ್ಸವಕ್ಕೆ ಇಲ್ಲಿಯವರೆಗೆ ೯,೧೯೦ ರೂ. ಗಳು ವಸೂಲಾಗಿದೆ. ಜನಾಬ್ ಎ. ಸಿ. ಗಫೂರ್‌ಖಾನ್‌ರವರು ೬,೦೦೦ ರೂ. ಡಾ॥ ಸಿ. ಆರ್. ರೆಡ್ಡಿ ೧,೦೦೦ ರೂ. ಶ್ರೀ ಎಸ್. ಕೇಶವಯ್ಯಂಗಾರ್ ೧೦೦ ರೂ. ಶ್ರೀ ಎನ್. ರೂರ್ಜ್ ೧೦೦ ರೂ. ಶ್ರೀ ವಿ. ಎಲ್. ಡಿಸೋಜಾ ೧೦೦ ರೂ. ಜನಾಬ್ ಎ. ಜಿ. ಗಫೋರ್ ೧೦೦ ರೂ. ಶ್ರೀ ಎನ್. ಮಾಧವರಾವ್ ೧೦೦ ರೂ. ಶ್ರೀ ಯು. ವೆಂಕಟರಾವ್ ೧೦೦ ರೂ. ಶ್ರೀ ಅಂಬಲೆ ಸುಬ್ರಹ್ಮಣ್ಯ ಅಯ್ಯರ್ ೧೦೦ ರೂ. ಜನಾಬ್ ಎಂ. ಜಿ. ಮೇಕ್ರಿ ೧೦೦ ರೂ. ಮಿ॥ ರೋಲೋ ೧೦೦ ರೂ. ಶ್ರೀ ಹೆಚ್. ಸಿ. ದಾಸಪ್ಪ ೧೦೧ ರೂ ಶ್ರೀ ಎಂ. ಕೆ. ರಂಗಸ್ವಾಮಯ್ಯಂಗಾರ್ ೧೦೧ ರೂ. ತುಮಕೂರು ಪೌರಸಭೆ ೧೦೧ ರೂ ಹಾಸನ ಪೌರಸಭೆ ೧೦೪ ರೂ. ಚಂದಾ ಕೊಟ್ಟಿರುವರು.

ಚೈನಾ ಪ್ರತಿನಿಧಿಗಳು

ವಿಶ್ವಸಂಸ್ಥೆಯಲ್ಲಿ ಕೊರಿಯಾದ ಪರಿಸ್ಥಿತಿಯ ಚರ್ಚೆಯಲ್ಲಿ ಭಾಗವಹಿಸಲು ತೆರಳಿದ್ದ ಚೈನಾ ಪ್ರತಿನಿಧಿಗಳು ಹಿಂದಕ್ಕೆ ಹೊರಟಿರುವರು. ಅವರು ಮಾಸ್ಕೋ ಮಾರ್ಗವಾಗಿ ಚೈನಾಕ್ಕೆ ಹೋಗುವರು.

ಅವರು ಲಂಡನ್ನಲ್ಲಿ ಮಾತನಾಡುತ್ತ ಚೈನಾವು ಕೊರಿಯಾದಲ್ಲಿರುವ ತಮ್ಮ ಸ್ವಯಂಸೇವಕರಿಗೆ ಮಿಲಿಟರಿ ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಹೇಳಲು ಸಿದ್ಧವಿದೆಯೆಂದೂ ಅದಕ್ಕೆ ಮುಂಚೆ ಅಮೆರಿಕಾವು ತನ್ನ ಕಾರ್ಯಾಚರಣೆಯನ್ನು ನಿಲ್ಲಿಸಿದರೆ ಸಾಧ್ಯವೆಂದು ಹೇಳಿರುವರು.

ಅಮೆರಿಕಾವನ್ನು ಬಿಡುವ ಮುನ್ನ ನಿಯೋಗದವರು ಭಾರತ ಪ್ರತಿನಿಧಿ ಶ್ರೀ ಬಿ. ಎನ್. ರಾವ್‌ರವರಿಗೆ ಅಂತರರಾಷ್ಟ್ರೀಯ ಶಾಂತಿಯನ್ನುಂಟುಮಾಡುವ ಕಾರ್ಯವನ್ನು ಮುಂದುವರಿಸಿ ಎಂದು ಹೇಳಿರುವರೆಂದು ತಿಳಿಯಬರುತ್ತದೆ.

ಅಪೇರಾ
20-12-50 ರಿಂದ ಪ್ರತಿದಿನ 3 ಆಟಗಳು
ಕನ್ನಿಯಿನ್ ಕಾದಲಿ
ಅಂಜಲಿದೇವಿ, ಮಾಧುರಿದೇವಿ, ಕೆ. ಆರ್. ರಾಮಸ್ವಾಮಿ ಪಾತ್ರವಹಿಸಿರುವ
ಮಹೋನ್ನತ ತಮಿಳುಚಿತ್ರ

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೬ ಮೀಟರು
ಡಿಸೆಂಬರ್ ೨೨ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಟಿ. ಪುಟ್ಟಸ್ವಾಮಯ್ಯ (ದೇವೀಭಜನೆ) ೭-೩೫ ಪಂಕಜಮಲ್ಲಿಕ್ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧. ೪೦ ನಾಗಸ್ವರ ೧-೪೫ ಹಿಂದಿ ಶಿಕ್ಷಣ ೨-೦ ನಿಮ್ಮ ಮೆಚ್ಚಿನ ಕಲಾವಿಧರು ೨-೩೦ ಮುಕ್ತಾಯ.

ಸಂಜೆ ೫-೩೦ ಆರ್. ಸುಬ್ಬಶಾಸ್ತ್ರಿ (ಪಿಟೀಲು) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ, ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ). ೭-೫ ಹಿಂದೀ ವಾಚನ. ೭-೧೫ ಆರ್. ಸುಬ್ಬಶಾಸ್ತ್ರಿ (ಪಿಟೀಲ್) ೭-೩೦ ವಿಶ್ವವಾರ್ತೆ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ನಾದ ಶ್ರೀ (ರಿ) ೮-೧೫ ಟಿ. ಪುಟ್ಟಸ್ವಾಮಯ್ಯ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಅರಮನೆ ಆರ್ಕೆಸ್ಟ್ರಾ. ೧೦-೦ ಮುಕ್ತಾಯ.

ಸೆನ್ಸಾರ್

ಕೊರಿಯ ಯುದ್ಧಕ್ಕೆ ಸಂಬಂಧಪಟ್ಟ ಸುದ್ದಿಗಳು ರೇಡಿಯೋ ವರದಿಗಳು ಪತ್ರಿಕಾ ಲೇಖನಗಳು, ಚಿತ್ರಗಳು ಮುಂತಾದುವುಗಳ ಮೇಲೆಲ್ಲ ಜನರಲ್ ಮೆಕಾರ್ಥರ್ ಸೆನ್ಸಾರ್ ಜಾರಿಮಾಡಿದ್ದಾರೆ.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನ್‌ರವರ
★ ಸರ್ಗಮ್ ★
(ಹಿಂದಿ)
ಪಾತ್ರ: ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ.
ಬೆಳಗಿನ ಪ್ರದರ್ಶನ 22-12-50 ರಿಂದ
ಶಾಂತರಾಂ ಪಾತ್ರವಹಿಸಿರುವ
ಡಾ॥ ಕೋಟ್ನೀಸ್

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ ೩ ಪೈ ದಿನಪತ್ರಿಕೆ **Phone: 574**

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೨—೧೨—೧೯೫೦ನೇ ಶುಕ್ರವಾರ [ಸಂಚಿಕೆ ೯೩

ಸಕ್ಕರೆ ಪಡಿತರದಲ್ಲಿ ನೂತನ ವ್ಯವಸ್ಥೆ

ಅವಿಧಾಯಕ ಪಡಿತರ ಮುಂದುವರಿಯುವುದು

ಸಕ್ಕರೆ ದರ ಏರುವುದು

ಸಕ್ಕರೆಯ ಶಾಸನಬದ್ಧ ಹತೋಟಿಯನ್ನು ವಜಾಮಾಡಿ ಅನಿರ್ಬಂಧನೀತಿಯ ಹತೋಟಿಯನ್ನಿಡಲಾಗಿದೆ.

ಈಗಿರುವ ಪಡಿತರ ಪ್ರಮಾಣದಲ್ಲಿಯೇ ರೇಷನ್ ಕಾರ್ಡಿನವರಿಗೆಲ್ಲಾ ಡಿಪೋಗಳ ಮೂಲಕ ಸಕ್ಕರೆ ಕೊಡಲಾಗುವುದು.

ಈ ಹೊಸ ಆಜ್ಞೆಯ ಪ್ರಕಾರ ಬೆಲ್ಲವನ್ನು ತಯಾರಿಸಲು ಲೈಸನ್ಸ್ ಬೇಕಾಗಿಲ್ಲ. ಬೆಲ್ಲ, ಸಕ್ಕರೆ ಮತ್ತು ಕಬ್ಬಿನ ಬೆಲೆಯನ್ನು ಬದಲಾಯಿಸಲಾಗುವುದು. ಸಕ್ಕರೆ ಕಾರ್ಖಾನೆಗಳಿಂದ ನಿಗದಿಯಾದ ಪ್ರಮಾಣದಲ್ಲಿ ಸಕ್ಕರೆಯನ್ನು ಕೊಂಡು ಅದನ್ನು ಡಿಪೋಗಳ ಮೂಲಕ ಮಾರಲಾಗುವುದು. ಕಾರ್ಖಾನೆಗಳು ನಿಗದಿಯಾದ ಪ್ರಮಾಣಕ್ಕಿಂತ ಹೆಚ್ಚಿಗೆ ತಯಾರಿಸಿದಲ್ಲಿ ಅವರೇ ನೇರವಾಗಿ ವ್ಯಾಪಾರ ಮಾಡಬಹುದು.

ಕಬ್ಬಿನ ಬೆಲೆಯನ್ನು ಹೆಚ್ಚಿಸಿರುವುದರಿಂದ ಈಗ ಸಕ್ಕರೆ ಬೆಲೆಯನ್ನು ಮಣ ೧ಕ್ಕೆ ೨೮ ರೂ. ೮ ಆಣೆಯಿಂದ ೨೯ ರೂ. ೧೩ ಆಣೆಗೆ ಹೆಚ್ಚಿಸಲಾಗಿದೆ. ಈ ಬೆಲೆಯು ಕಾರ್ಖಾನೆಗಳಿಂದ ಸರ್ಕಾರದವರು ಕೊಳ್ಳುವ ಸಕ್ಕರೆಗೆ ಮಾತ್ರ ಅನ್ವಯಿಸುತ್ತದೆ. ಉಳಿಕೆ ಸಕ್ಕರೆಯನ್ನು ಮಾರುವ ಬೆಲೆಗೆ ನಿಗದಿಯಿಲ್ಲ

ನೇಪಾಳದಲ್ಲಿ ಸುಧಾರಣೆ

ನೇಪಾಳದಲ್ಲಿ ಸ್ವಾತಂತ್ರ್ಯ ಭದ್ರತೆ ಮತ್ತು ಪ್ರಗತಿ ದೃಷ್ಟಿಯಿಂದ ತಕ್ಕ ಸುಧಾರಣೆಗಳನ್ನು ಮಾಡಬೇಕೆಂದು ಭಾರತ ಪ್ರಧಾನಿ ನೆಹರೂರವರು ಸಲಹೆಗಳನ್ನಿತ್ತಿದ್ದರು ಅವುಗಳಲ್ಲಿ ಮುಖ್ಯವಾದವು ನೇಪಾಳದಲ್ಲಿ ಚುನಾವಣಾ ಸದಸ್ಯರನ್ನೊಳಗೊಂಡ ರಾಜ್ಯಾಂಗ ಸಭೆಯನ್ನು ಕೂಡಲೇ ನೇಮಿಸಿ ತನ್ನ ಮುಂದಿನ ರಾಜ್ಯಾಂಗ ರಚನೆಯನ್ನು ನಿರ್ಧರಿಸಿಕೊಳ್ಳುವುದು ಎರಡನೆಯದಾಗಿ ಕೂಡಲೇ ಪ್ರಜಾಪ್ರತಿನಿಧಿಗಳನ್ನೊಳಗೊಂಡ ತಾತ್ಕಾಲಿಕ ಸರ್ಕಾರವನ್ನು ಮಹಾರಾಜರು ಮುಖ್ಯ ಮಂತ್ರಿಗಳ ಸಲಹೆಯ ಮೇಲೆ ನೇಮಿಸುವುದು ಇದರಲ್ಲಿ ರಾಣಾ ಮನೆತನದವರಿಗೂ ಸ್ಥಳವನ್ನು ಕೊಡುವುದಲ್ಲದೆ ಅವರಲ್ಲೊಬ್ಬರು ಮುಖ್ಯ ಮಂತ್ರಿಯಾಗಿರುವುದು. ಮೂರನೆಯದಾಗಿ ಈಗಿರುವ ಮಹಾರಾಜ ತ್ರಿಭುವನ ವಿಕ್ರಮರವರೇ ದೊರೆಯಾಗಿರತಕ್ಕದ್ದು.

ದೇಶದಲ್ಲಿ ಪರಿಸ್ಥಿತಿಯು ಉತ್ತಮಗೊಳ್ಳಬೇಕಾದ್ದಲ್ಲಿ ಸುಧಾರಣೆಗಳನ್ನು ಆದಷ್ಟು ಜಾಗ್ರತೆಯಾಗಿ ಮಾಡಬೇಕೆಂದೂ ಸೂಚಿಸಲಾಗಿದೆ. ಈ ರಾಜ್ಯಾಂಗ ಸುಧಾರಣೆಗಳಲ್ಲಿ ಸಹಾಯವನ್ನು ನೀಡಲು ಭಾರತವು ಸಿದ್ಧವಾಗಿದೆಯೆಂದೂ ತಿಳಿಸಲಾಗಿತ್ತು. ನೇಪಾಳ ಮುಖ್ಯಮಂತ್ರಿ ಈ ಸಲಹೆಗಳನ್ನು ತಾವು ಸಾವಧಾನವಾಗಿ ಪರಿಶೀಲಿಸಿ ಈ ಮಾಹೆ ಅಂತ್ಯದೊಳಗೆ ರಾಜ್ಯಾಂಗ ಸುಧಾರಣೆಗಳ ಘೋಷಣೆಯನ್ನು ಮಾಡುವುದಾಗಿ ಹೇಳಿರುವರೆಂದು ಪಂಡಿತ ನೆಹರೂರವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಗ್ರಾಮಾಂತರಗಳಲ್ಲಿ ರೇಷನ್ ವಜಾ

ಮದರಾಸು ಪ್ರಾಂತ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ರೇಷನ್ನು ಮುಂದಿನ ತಿಂಗಳಿಂದ ವಜಾ ಮಾಡಲಾಗುವುದು. ಪೌರಸಭೆಗಳಿರುವ ಪ್ರದೇಶಗಳಲೆಲ್ಲಾ ಶಾಸನಬದ್ಧ ಪಡಿತರ ಪದ್ಧತಿಯನ್ನು ಜಾರಿಗೆ ತರಲಾಗುವುದು. ಆಹಾರವನ್ನು ಕಡಮೆಯಾಗಿ ಬೆಳೆಯುವ ಪ್ರದೇಶಗಳಲ್ಲಿ ಆಹಾರಪದಾರ್ಥಗಳ ಸಂಗ್ರಹಣಕಾರ್ಯವನ್ನು ಮಾಡುವುದನ್ನು ನಿಲ್ಲಿಸಲಾಗುವುದು.

ಪುನಃ ಸಂಧಾನ

ವಿಶ್ವ ಸಂಸ್ಥೆಯು ನೇಮಿಸಿರುವ ಕೊರಿಯಾ ಸಂಗ್ರಾಮ ಸಮಾಪ್ತಿ ಸಮಿತಿಯು ಪುನಃ ಸೀಸ್‌ಫೈರ್ ವಿಷಯದಲ್ಲಿ ಚೈನಾಕ್ಕೆ ಒಂದು ಕೇಬಲ್ ಕಳುಹಿಸುವುದಾಗಿ ತಿಳಿಯಬರುತ್ತದೆ.

ಕೊರಿಯಾದಲ್ಲಿ ನಷ್ಟ

ಕೊರಿಯಾ ಯುದ್ಧದಲ್ಲಿ ನವಂಬರ್ ೨೧ ರಿಂದ ಡಿಸೆಂಬರ್ ೧೨ರ ವರೆಗೆ ೧೩,೦೦೦ ಜನರ ನಷ್ಟವು ವಿಶ್ವಸಂಸ್ಥೆಯ ಸೈನ್ಯಕ್ಕೆ ಆಗಿದೆ. ಇದರಲ್ಲಿ ಅಮೆರಿಕಾ ಸೈನ್ಯಕ್ಕೆ ೧೨,೦೦೦ ನಷ್ಟವಾಗಿದೆ.

ಶ್ರೀ ಸಿ. ಆರ್. ರು ಪ್ರಧಾನಿ

ಪಂಡಿತ ನೆಹರೂರವರು ಲಂಡನ್ನಿಗೆ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಲಿರುವುದರಿಂದ ಅವರು ಭಾರತದಲ್ಲಿರುವುದಿಲ್ಲ. ಆ ಕಾಲದಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಪ್ರಧಾನಿಗಳ ಕಾರ್ಯವನ್ನು ನೋಡುವರು.

ಅಂಚೆ ರಜಾ

ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಡಿಸೆಂಬರ್ ೨೫ನೇ ತಾರೀಖು ಅಂಚೆ ಮತ್ತು ತಂತೀ ಇಲಾಖೆಗೆ ಪೂರ್ತಿ ರಜಾ ಕೊಡಲಾಗಿದೆ.

ಸಂತೋಷ ಸಮಾರಂಭಗಳಿಲ್ಲ

ಅಂತರಾಷ್ಟ್ರೀಯ ಪರಿಸ್ಥಿತಿಯು ಅತಿಶಯವಾಗಿ ವಿಷಮಿಸಿಕೊಂಡಿರುವುದರಿಂದ ಪರ್ಷಿಯಾ ಷಾರವರ ಮದುವೆ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ವೈಭವಯುಕ್ತ ಸತ್ಕಾರಕೂಟ ಮುಂತಾದ ಎಲ್ಲಾ ಸಂತೋಷ ಸಮಾರಂಭಗಳನ್ನು ನಿಲ್ಲಿಸಲಾಗಿದೆ.

ಇಂಡೋ ಚೈನಾಕ್ಕೆ ಕೆಂಪು ಚೀಣಾ ಪ್ರವೇಶ

ಇಂಡೋ ಚೀಣಾದಲ್ಲಿ ವಿದೇಶೀಯರ ಆಳ್ವಿಕೆಯು ಕೂಡಲೇ ಕೊನೆಗೊಂಡದಿದ್ದಲ್ಲಿ ಕೆಂಪು ಚೀಣಾವು ಇಂಡೋ ಚೀಣಾಕ್ಕೆ ತನ್ನ ಸ್ವಯಂಸೇವಕರನ್ನು ಕಳುಹಿಸುವುದೆಂದು ಹೇಳಲಾಗಿದೆ.

ಮೆಣಸಿನಕಾಯಿ ರಫ್ತಿನ ಪ್ರತಿಬಂಧಕ ತೆಗೆದಿದ್ದು ತಪ್ಪು

ಮೈಸೂರು ಡಿ. ೨೨

ಮೆಣಸಿನಕಾಯಿಯ ಮೇಲೆ ವಿಧಿಸಿದ್ದ ರಫ್ತಿನ ಪ್ರತಿಬಂಧಕವನ್ನು ತೆಗೆದಿರುವುದು ತಪ್ಪೆಂದೂ ೭೫ ಲಕ್ಷ ಜನರ ಹಿತದೃಷ್ಟಿಯಿಂದ ಈ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಶ್ರೀ ಎಂ. ಆರ್. ಸಿ. ಬಸಪ್ಪನವರು ಮುಖ್ಯ ಮಂತ್ರಿ ಮತ್ತು ಆಹಾರ ಮಂತ್ರಿಗಳಿಗೆ ತಂತಿಯನ್ನು ಕಳುಹಿಸಿರುವರು.

ಮಂತ್ರಿಗಳ ಮೇಲೆ ಆಪಾದನೆ

ಶ್ರೀ ಪ್ರಕಾಶಂರವರು ಕ್ರಮಬದ್ಧವಾಗಿ ತಂದ ಆಪಾದನೆಗಳನ್ನು ಮದರಾಸು ಶಾಸನ ಸಭಿಕರು ತಮ್ಮ ಬಹುಮತದಿಂದ ಸೋಲಿಸಿದರು. ಆದರೆ ಈಗೊಂದು ಹೊಸ ರೀತಿಯ ತಕರಾರು ಹುಟ್ಟಿ ೨೫ ಮಂದಿ ಶಾಸನ ಸಭಾ ಸದಸ್ಯರು ಸಹಿಹಾಕಿದ ‘ಶಿಸ್ತುಭಂಗ’ ದ ಅರ್ಜಿಯೊಂದು ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರ ಹಸ್ತಗತವಾಗಿದೆ. ಮೂವರು ಮಂತ್ರಿಗಳ ನಡತೆಯನ್ನು ವಿಚಾರಿಸಲು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆ ಕರೆಯಬೇಕೆಂದೂ ಒತ್ತಾಯ ಹೂಡಲಾಗಿದೆ.

ಸಮ್ಮೇಳನ

ಇದೇ ಮಾಹೆ ೨೭, ೨೮, ೨೯ ನೇ ತಾರೀಖುಗಳಲ್ಲಿ, ಅಖಿಲ ಭಾರತ ಸೆನ್ಸಸ್ ಕಮಿಷನರುಗಳ ಸಮ್ಮೇಳನವು ದೆಹಲಿಯಲ್ಲಿ ನಡೆಯುವುದು. ಮೈಸೂರು ಪರವಾಗಿ ಶ್ರೀ ಮಲ್ಲಾರಾಧ್ಯರವರು ಭಾಗವಹಿಸುವರು.

ಸತ್ಯಾಗ್ರಹವೇ ?

ಮೈಸೂರು ಸಂಸ್ಥಾನದಲ್ಲಿ ವೋಟರ್ ಲಿಸ್ಟುಗಳನ್ನು ಅಚ್ಚುಮಾಡಿಕೊಟ್ಟ ಮುದ್ರಣಾಲಯದವರಿಗೆ ಇನ್ನೂ ಅವರ ವೆಚ್ಚವನ್ನು ಕೊಡದಿರುವುದರಿಂದ ಮಂತ್ರಿಗಳ ಕಛೇರಿಯ ಮುಂದೆ ಸತ್ಯಾಗ್ರಹ ಹೂಡಲು ನಿಶ್ಚಯಿಸಿರುತ್ತಾರೆಂದು ಹೇಳಲಾಗಿದೆ.

ರಾಷ್ಟ್ರಾಧ್ಯಕ್ಷರು ಮದ್ರಾಸಿಗೆ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರವರು ಮಾರ್ಚಿ ಪ್ರಾರಂಭದಲ್ಲಿ ಮದರಾಸಿಗೆ ಬಂದು ಎರಡು ದಿನವಿರುವರೆಂದು ಗೊತ್ತಾಗಿದೆ

○ ಅಖಿಲ ಭಾರತ ಚರಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೃಷ್ಣದಾಸ್ ಗಾಂಧಿಯವರು ೨೫ನೇ ತಾರೀಖು ಸೋಮವಾರ ಬೆಳಗ್ಗೆ ೯ ಗಂಟೆಗೆ ಚಾಮರಾಜರಸ್ತೆಯಲ್ಲಿರುವ ಸಹಕಾರಭವನದಲ್ಲಿ ಖಾದಿ ಮತ್ತು ರಚನಾತ್ಮಕ ಕಾರ್ಯಕ್ರಮ ಎಂಬ ವಿಷಯದಲ್ಲಿ ಭಾಷಣ ಮಾಡುವರು. ಖಾದಿ ಪ್ರೇಮಿಗಳು, ರಚನಾತ್ಮಕ ಕಾರ್ಯಕರ್ತರುಗಳೂ ನೂಲುವ ಮಂಡಲದ ಸದಸ್ಯರೂ ದಯಮಾಡಿಸಬೇಕಾಗಿ ಖದ್ದರ್ ಪರಸ್ಪರ ಸಹಾಯಸಂಘದ ಕಾರ್ಯದರ್ಶಿಗಳು ಕೋರುತ್ತಾರೆ

ಪ್ರವಾಸ ರದ್ದು

ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರ ಈ ಮಾಹೆ ೨೮ರಿಂದ ಜನವರಿ ೩ ರ ವರೆಗೆ ಮೈಸೂರು, ಹಾಸನ ಜಿಲ್ಲಾ ಪ್ರವಾಸವು ರದ್ದಾಗಿದೆ.

Mysore city Municipality

TENDER NOTIFICATION

Sealed tenders will be received up to 4 p.m. on 28-12-50 by the Municipal Engineer for (1) Changing the storm water drain running in the Town Hall permises Lashkar Mohalla (2) Dispose of waste water to the underground drain from the public fountain in Ramalingeswara Road, K.R. Mohalla, (3) Providing dust bins required in the 2nd Division of K R. Mohalla, (4) Supplying and fixing of Gandhi Memorial Stoopa in the Gandhi Square. Each tender should be accompanied with a challanfor having remitted in the Municipal Treasury Rs. 75/-, Rs. 25/-, Rs. 75/-, and Rs. 300/- respectively as earnest money. Tenders without earnest money and tenders without furnishing full details of rate for the different kinds of works will not be considered on any account. For full particulars please see detailed notification on the Office Notice Board.

(Sd.) V. K. MUKUNDAN,
Municipal Engineer

ಒಲಂಪಿಯಾ
14-12-50 ರಿಂದ ದಿನವಹಿ 3 ಆಟಗಳು
ಅಪರಿಚಿತ ಕಾಡು ಮೃಗಗಳ ಭೇಟಿ
ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ
ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿ
ಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅದಲ್ಲದೆ
೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ
ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ
ಹಾಲ್‌ರೋಚ್‌ರವರ
ಒನ್ ಮಿಲಿಯನ್ ಬಿ. ಸಿ.
(ONE MILLION B.C.)
ನೀವು ಹಿಂದೆ ಎಂದೂ ನೋಡದೆ ಮುಂದೆ
ನೋಡದಿರುವ ಚಿತ್ರ

ಬೆಳಗಿನ ಪ್ರದರ್ಶನ
20-12-50 ರಿಂದ ಪ್ರತಿದಿನ 10-30ಕ್ಕೆ
ಕಿಡಕಿ
ಪಾತ್ರ :—ರೆಹನ, ಮುತ್ತಾಜ್ ಅಲಿ.

ತನಿಖೆ

ನೀಲಗಿರಿಯ ಬಳಿ ದುರಂತಕ್ಕೀಡಾದ ಏರ್ ಇಂಡಿಯಾ ವಿಮಾನದ ಅಪಘಾತದ ಬಗ್ಗೆ ವಿಚಾರಣೆಯನ್ನು ನಡೆಸಲೇರ್ಪಡಿಸಿದೆ. ಬೆಂಗಳೂರಿನಲ್ಲಿರುವ ಸಿವಿಲ್ ಏವಿಯೇಷನ್ ಇಲಾಖಾ ಡೈರೆಕ್ಟರು ಈ ತನಿಖೆಯನ್ನು ನಡೆಸುವರು.

ನೆಹರೂ-ಲಿಯಾಕತ್ ಭೇಟಿ

ಲಂಡನ್ನಿನಲ್ಲಿ ನಡೆಯುವ ಕಾಮನ್ವೆಲ್ತ್ ಪ್ರಧಾನ ಮಂತ್ರಿಗಳ ಸಮ್ಮೇಳನವು ಮುಗಿದು ಹಿಂತಿರುಗಿದ ಮೇಲೆ ಭಾರತ ಪ್ರಧಾನಿ ಶ್ರೀ ನೆಹರೂ ಮತ್ತು ಪಾಕಿಸ್ಥಾನ ಪ್ರಧಾನಿ ಲಿಯಾಕತ್ ಅಲಿಖಾನರವರ ಭೇಟಿಯಾಗುವುದು.

ಈ ವಿಷಯವನ್ನು ಪ್ರಧಾನಿ ಪಂಡಿತ ನೆಹರೂರವರು ಪಾರ್ಲಿಮೆಂಟಿನಲ್ಲಿ ತಿಳಿಸುತ್ತಾ ಯುದ್ಧತ್ಯಾಗ ಘೋಷಣೆಗೆ ಪಾಕಿಸ್ಥಾನ ಪ್ರಧಾನಿ ಇನ್ನೂ ಒಪ್ಪದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿದರು.

ಭಾರತದಲ್ಲಿ ರಕ್ಷಣಾಬಲ

ದೇಶದ ಉತ್ಪತ್ತಿಯಲ್ಲಿ ಶೇಕಡ ೫೦ ರಷ್ಟು ರಕ್ಷಣೆಗಾಗಿ ವೆಚ್ಚವಾಗುತ್ತಲಿದೆಯೆಂದು ಕೆಲವೆಡೆ ಹೇಳುತ್ತಲಿರುವುದು ನಿಜವಲ್ಲ. ಪ್ರಾಂತ್ಯಗಳ ಸರ್ಕಾರಗಳ ವೆಚ್ಚ ಮತ್ತು ಕೇಂದ್ರದ ವೆಚ್ಚವನ್ನೆಲ್ಲಾ ಪರಿಶೀಲಿಸಿದಲ್ಲಿ ಶೇ. ೨೫-೩೦ ರಷ್ಟು ಮಾತ್ರ ವೆಚ್ಚವಾಗುತ್ತಲಿದೆಯೆಂದು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು.

ಪೌರಸಭೆಯ ಅಧಿವೇಶನ

ಮೈಸೂರು ಪೌರಸಭೆಯ ಮಾಹೆಯಾನಾ ಅಧಿವೇಶನವು ಇದೇ ಮಾಹೆ ೨೯ ನೇ ತಾ|| ಸಂಜೆ ೪ ಗಂಟೆಗೆ ನಡೆಯುವುದು.

ಮೈಸೂರು ಸಿಟಿಯಲ್ಲಿ ನಡೆಯತಕ್ಕ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಸಮಿತಿಯಲ್ಲಿ ರೈತರ ಪರ ೫ ಸದಸ್ಯರು, ವ್ಯಾಪಾರಸ್ಥರ ಪರ ೫ ಸದಸ್ಯರು, ಕೊಂಡು ತಿನ್ನುವವರ ಪರ ೫ ಸದಸ್ಯರುಗಳನ್ನೊಳಗೊಂಡ ಸಮಿತಿಗೆ ಮುನಿಸಿಪಲ್ ಪ್ರೆಸಿಡೆಂಟರು ಅಧ್ಯಕ್ಷರಾಗಬೇಕೆಂದು ರೆಗ್ಯುಲೇಟೆಡ್ ಮಾರ್ಕೆಟ್ಟಿನ ಆಕ್ಟನ್ನು ಬದಲಾಯಿಸಬೇಕೆಂದು ಸರ್ಕಾರವನ್ನು ಕೋರುವ ಒಂದು ನಿರ್ಣಯವನ್ನು ಶ್ರೀ ಚೌಡಯ್ಯನವರು ಮಂಡಿಸಿರುವರು.

ಅಪೇರಾ
20-12-50 ರಿಂದ ಪ್ರತಿದಿನ 3 ಆಟಗಳು
ಕನ್ನಿಯಿನ್ ಕಾದಲಿ
ಅಂಜಲಿದೇವಿ, ಮಾಧುರಿದೇವಿ, ಕೆ. ಆರ್.
ರಾಮಸ್ವಾಮಿ ಪಾತ್ರವಹಿಸಿರುವ
ಮಹೋನ್ನತ ತಮಿಳುಚಿತ್ರ

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯·೪೭ ಮೀಟರು
ಡಿಸೆಂಬರ್ ೨೩ ಶನಿವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಚಿತ್ರಜಗತ್ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ವೀಣೆ. ೧-೪೫ ಚೌಡಮ್ಮ (ಕನ್ನಡ ಗೀತೆಗಳು). ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಜಿ. ಆರ್. ರಾಜರತ್ನಂ (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಎಂ. ಎಲ್. ವಸಂತಕುಮಾರಿ (ರಿ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಡಿ. ಸೀನಪ್ಪ (ತಬಲ) ೭-೧೫ ವನಿತಾವಿಹಾರ ೭-೪೦ ಕನ್ನಡದಲ್ಲಿ ವಾರ್ತೆ. ೮-೦ ಟಿ. ಕೆ. ವೇಣುಗೋಪಾಲದಾಸರು (ಕಥಾಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಾದ್ಯ ಸಮ್ಮೇಳನ ೯-೪೫ ಗಾನಾಮೃತ ೧೦-೦ ಮುಕ್ತಾಯ.

ಸಿಮೆಂಟು ಸರಬರಾಯಿ

ಸಿಮೆಂಟು ವಿಶೇಷವಾಗಿ ಬರುತ್ತಲಿರುವುದರಿಂದ ಸಿಮೆಂಟು ಮಾರುವವರೆಲ್ಲರೂ ೨ ಟನ್ ಸಿಮೆಂಟು ಪ್ರಮಾಣದವರೆಗೆ ಪರ್ಮಿಟ್ ಇಲ್ಲದೆ ಮಾರಬಹುದೆಂದೂ ಈ ರಿಯಾಯಿತಿಯು ೧೯೫೧ ನೇ ಫೆಬ್ರವರಿ ಮಾಹೆ ೧೫ ರ ವರೆಗೆ ಜಾರಿಯಲ್ಲಿರುವುದೆಂದು ಮೈಸೂರು ಸರ್ಕಾರಿ ಪತ್ರಿಕಾ ಪ್ರಕಟಣೆ ತಿಳಿಸುತ್ತದೆ. ಸಿಮೆಂಟು ತರಿಸುವವರು ತಮಗೆ ಬರುವ ಪ್ರಮಾಣದಲ್ಲಿ ಶೇ. ೫೦ ರಷ್ಟನ್ನು ಈ ರೀತಿ ಪರ್ಮಿಟ್ ಇಲ್ಲದೆ ಮಾರಬಹುದೆಂದು ತಿಳಿಸಲಾಗಿದೆ.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ
ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ.

ಬೆಳಗಿನ ಪ್ರದರ್ಶನ 22-12-50 ರಿಂದ
ಶಾಂತರಾಂ ಪಾತ್ರವಹಿಸಿರುವ
ಡಾ|| ಕೊಟ್‌ನೀಸ್

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೩—೧೨—೧೯೫೦ನೇ ಶನಿವಾರ [ಸಂಚಿಕೆ ೯೪

ಅವಿಶ್ವಾಸ ನಿರ್ಣಯ ಪ್ರಕರಣ

ಅವಿಶ್ವಾಸ ನಿರ್ಣಯಕ್ಕೆ ರುಜು ಮಾಡಿರುವವರಲ್ಲೊಬ್ಬರಾದ ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ನಿನ್ನೆ ಪತ್ರಿಕಾ ಕರ್ತರನ್ನು ಬರಮಾಡಿಕೊಂಡು ಅವಿಶ್ವಾಸ ನಿರ್ಣಯವನ್ನು ಮಂಡಿಸಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ರೆಡ್ಡಿಯವರ ಸರ್ಕಾರ ಬಂದ ಮೇಲೆ, ಆಡಳಿತದಲ್ಲಿ ಬಿಗಿ ತಪ್ಪಿತು ; ಲಂಚ ರುಷುವತ್ತುಗಳು ಹೆಚ್ಚಾಗುತ್ತಲಿವೆ.

ಜಾತಿಭೇಧಗಳು ವಿಶೇಷವಾಗಿ ನಡೆಯುತ್ತಲಿವೆ. ಪಕ್ಷದ ಅಥವಾ, ಶಾಸನ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳದೆಯೇ ಸ್ವತಂತ್ರವಾಗಿ ವರ್ತಿಸಿ ಅನೇಕ ಬಾಬುಗಳಲ್ಲಿ ಕೇಂದ್ರ ವಿಲೀನೀಕರಣಕ್ಕೆ ಒಪ್ಪಿರುವರು. ಇದರಿಂದ ಮಂತ್ರಿ ಮಂಡಲ ಬದಲಾವಣೆ ಅವಶ್ಯಕವೆಂದು ಅರಿತು ಮಂತ್ರಿ ಮಂಡಲದ ಬದಲಾವಣೆ ಮಾಡಲು ತಾವುಗಳು ಹೊರಟಿದ್ದೆವು. ಸದ್ಯದಲ್ಲೇ ಮಹಾ ಚುನಾವಣೆ ನಡೆಯುವುದೆಂದು ತಿಳಿದು ನಾಯಕರ ಬದಲಾವಣೆಯು ಆಗುವ ಸಂಭವವಿದ್ದುದರಿಂದ ತಾವು ಇಲ್ಲಿಯವರೆಗೆ ಸುಮ್ಮನಿದ್ದೆವು, ಚುನಾವಣೆಗಳು ವಿಶೇಷ ಕಾಲ ದೂರವಾಗಿ ಹೋದುದರಿಂದ ಈ ಕ್ರಮವನ್ನು ಅನುಸರಿಸಬೇಕಾಯಿತೆಂದೂ ತಿಳಿಸಿದರು. ಶ್ರೀ ಕೆ. ಸಿ. ರೆಡ್ಡಿಯವರಿಗೆ ಆಡಳಿತದಲ್ಲಿಯ ನ್ಯೂನಾತಿರಿಕ್ತಗಳನ್ನು ಎಷ್ಟುಬಾರಿ ತಿಳಿಸಿದರೂ ಅವರು ಗಮನಿಸದೆ ಇದ್ದುದೇ ಈ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಕ್ಕೆ ಒಂದು ಮುಖ್ಯ ಕಾರಣ. ಅವಿಶ್ವಾಸ ನಿರ್ಣಯಕ್ಕೂ ಶ್ರೀ ಸಿದ್ಧಲಿಂಗಯ್ಯನವರು ಮಂತ್ರಿಪದವಿಗೆ ಇತ್ತ ರಾಜೀನಾಮೆಗೂ ಏನೂ ಸಂಬಂಧವಿಲ್ಲ. ಮಂತ್ರಿಮಂಡಲದಲ್ಲಿರುವ ದೋಷಗಳನ್ನು ಸರಿಪಡಿಸಲು ಅವರು ಮಂತ್ರಿ ಮಂಡಲವನ್ನು ಸೇರಿ, ಅದು ಅಸಾಧ್ಯವೆಂದು ಅರಿತು ರಾಜೀನಾಮೆಯಿತ್ತರೆಂದು ಹೇಳಿದರು.

೨೭ ನೇ ತಾರೀಖಿನ ದಿವಸ ಪಕ್ಷದ ಸಭೆಯನ್ನು ಕರೆದಿರುವುದರಲ್ಲಿ ಪಕ್ಷದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ಚರ್ಚಿಸಲು ಎಂದು ಸಮೂದಿಸಲಾಗಿದೆ ನಿರ್ದಿಷ್ಟವಾಗಿ ಈ ಅವಿಶ್ವಾಸ ನಿರ್ಣಯ ವಿಷಯವನ್ನು ಮಂಡಿಸುವದಕ್ಕೆಂದು ತಿಳಿಸಿಲ್ಲ, ಆದ್ದರಿಂದ ಆ ಸಭೆಯು ಬರೀ ಮಾತುಕತೆ, ಚರ್ಚೆಗಳಲ್ಲೇ ಮುಕ್ತಾಯವಾದರೂ ಆಗಬಹುದು ಅಲ್ಲಿ ನಾವುಗಳು ಅವಿಶ್ವಾಸ ನಿರ್ಣಯವನ್ನು ಸಭೆಯಲ್ಲಿ ಮಂಡಿಸುವುದಿಲ್ಲ ತಮ್ಮ ನಾಯಕರೇ ಅದನ್ನು ಮಂಡಿಸಬೇಕೆಂದು ತಿಳಿಸಿದರು. ಹಾಗೇನಾದರೂ ಅವರು ಮಾಡದಿದ್ದಲ್ಲಿ ಕಾಂಗ್ರೆಸ್ ನಿಯಮಾವಳಿ ಪ್ರಕಾರ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ಹೇಳಿದರು.

ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಅಧಿಕಾರ ವ್ಯಾಪ್ತಿಯ ವಿಷಯವಾಗಿ ಪ್ರಸ್ತಾಪಿಸಲಾಗಿ ಅವರು ಸಲಹೆಯನ್ನು ಕೊಡಬಹುದೆಂದೂ ಅದನ್ನು ನಾವು ಪಾಲಿಸಬೇಕೆಂಬ ನಿರ್ಬಂಧವಿಲ್ಲ. ಈಗಿನ ಸರ್ಕಾರದವರು ಕೇಂದ್ರ ಸರ್ಕಾರ ಮತ್ತು ಎಲ್ಲಾ ಮೇಲಿನ ಬೋರ್ಡಿಗೆ ಇಲ್ಲದ ದೊಡ್ಡಸ್ತಿಕೆಯನ್ನು ಕೊಟ್ಟು, ಅವರಿಗೆ ಅಧೀನವರ್ತಿಗಳಾಗಿರುವುದರಿಂದ ಅವರು ಪ್ರವೇಶಿಸಬಹುದೆಂದೂ ತಾವು ಅವರ ಸಲಹೆ ಸೂಕ್ತವೆಂದು ತೋರಿದಲ್ಲಿ ಗಮನಿಸುವುದಾಗಿ ಹೇಳಿದರು.

ಕೊಂಡು ಕೊಂಡ ಹಡಗು ಕೊಡುವುದಿಲ್ಲ

ಇಂದಿನ ಅಂತರರಾಷ್ಟ್ರೀಯ ಪರಿಸ್ಥಿತಿಯಿಂದ ಭಾರತವು ಬ್ರಿಟನ್ನಿನಿಂದ ಕೊಂಡುಕೊಂಡು ಕೊಡಲು ಸಿದ್ಧವಿದ್ದ ಕ್ರೂಸರನ್ನು ಬ್ರಿಟನ್ನು ಈಗ ಕೊಡುವುದಿಲ್ಲವೆಂದು ಹೇಳಿದೆ.

ಸೈನ್ಯ ವಿಸರ್ಜನೆ

ಭಾರತಸೈನ್ಯದಲ್ಲಿ ತರಪೇತಿಲ್ಲದ ಅಪ್ರಯೋಜಕವಾಗಿರುವ ಸೈನ್ಯವನ್ನೆಲ್ಲಾ ವಿಸರ್ಜಿಸಿ ಉತ್ತಮ ರೀತಿಯ ಸೈನ್ಯವನ್ನು ಇಟ್ಟುಕೊಂಡಿರಬೇಕೆಂದು ಸರ್ಕಾರವು ನಿರ್ಧರಿಸಿದೆ.

ಶರಣಾಗತರಾಗಿ

ನಿಮ್ಮ ಶಸ್ತ್ರಾಸ್ತ್ರಗಳನ್ನು ಬಿಸುಟು ನಮ್ಮೊಡನೆ ಸಹೋದರರಾಗಿ ಸೇರಿಕೊಳ್ಳಿ ಎಂದು ಉತ್ತರಕೊರಿಯಾ ಜನರು ದಕ್ಷಿಣಕೊರಿಯಾದವರನ್ನು ಮನವಿಮಾಡಿಕೊಂಡಿರುತ್ತಾರೆ

ಮತದಾರರ ಪಟ್ಟಿಯ ತಕರಾರು

ಮತದಾರರ ಪಟ್ಟಿಯ ವಿಷಯದಲ್ಲಿ ತಕರಾರನ್ನು ಕಳುಹಿಸುವ ಕಾಲವನ್ನು ೧೯೫೧ನೇ ಜನವರಿ ೧೫ರ ವರೆಗೆ ಹೆಚ್ಚಿಸಲಾಗಿದೆಯೆಂದು ಸರ್ಕಾರಿ ಪ್ರಕಟಣೆಯು ತಿಳಿಸುತ್ತದೆ.

ಪಾರ್ಲಿಮೆಂಟುಸಭೆ ಮುಂದುವರಿಯಿತು

೩೯ ದಿನಗಳಿಂದ ನಡೆದ ಭಾರತ ಪಾರ್ಲಿಮೆಂಟು ಸಭೆಯು ನಿನ್ನೆ ಮುಕ್ತಾಯಗೊಂಡು ಪುನಃ ೧೯೫೧ನೇ ಫೆಬ್ರವರಿ ೫ನೇ ತಾ|| ಮುಂದುವರಿಯಿತು.

೩೮ನೇ ಅಕ್ಷಾಂಶ

ಚೈನಾವು ೩೮ನೇ ಅಕ್ಷಾಂಶ ದಾಟಿ ಮುನ್ನುಗ್ಗಲು ಸರ್ವಸಿದ್ಧತೆಗಳನ್ನು ಮಾಡಿಕೊಳ್ಳುತ್ತಲಿವೆಯೆಂದು ತಿಳಿಯಬಂದಿದೆ.

ಸೀಸ್ ಫೈರ್ ಸಲಹೆಗೆ ತಿರಸ್ಕಾರ

ಸೀಸ್‌ಫೈರ್ ಆಜ್ಞೆಯನ್ನು ಅಕ್ಟೋಬರಿನಲ್ಲಿ ಯಾಕೆ ಹೊರಡಿಸಲಿಲ್ಲ

ಪೀಕಿಂಗ್ ರೇಡಿಯೋ ಪ್ರಸಾರ

ಕೊರಿಯಾದ ಸೀಸ್‌ಫೈರ್ ಯೋಜನೆಯನ್ನು ಚೈನಾವು ತಿರಸ್ಕರಿಸಿರುವುದಾಗಿ ಚೈನಾ ವಿದೇಶಾಂಗ ಮಂತ್ರಿಗಳು ಹೇಳಿರುವುದಾಗಿ ಪೀಕಿಂಗ್ ರೇಡಿಯೋ ಪ್ರಸಾರ ಮಾಡಿದೆ.

೩೮ನೇ ಅಕ್ಷಾಂಶವನ್ನು ವಿಶ್ವಸೈನ್ಯಗಳು ಕಳೆದ ಅಕ್ಟೋಬರಿನಲ್ಲಿ ದಾಟುವಾಗ ಈ ಸಲಹೆಯನ್ನೇಕೆ ಮಾಡಲಿಲ್ಲವೆಂದೂ ವಿಶ್ವಸೈನ್ಯವು ೩೮ನೇ ಅಕ್ಷಾಂಶವನ್ನು ದಾಟಿ ಮುನ್ನುಗ್ಗಿದುದರಿಂದ ತಾವು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಬೇಕಾಯಿತೆಂದೂ ಅಲ್ಲದೆ ಚೈನಾಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನವನ್ನು ಕೊಡದಿರುವುದರಿಂದ ವಿಶ್ವಸಂಸ್ಥೆಯು ಚೈನಾಕ್ಕೆ ಯಾವ ಸಲಹೆಯನ್ನೂ ಕೊಡುವ ಸ್ಥಿತಿಯಲ್ಲಿಲ್ಲವೆಂದೂ ಅದನ್ನು ಚೈನಾವು ಗಮನಿಸಬೇಕಾಗಿಲ್ಲವೆಂದೂ ಅವರು ಹೇಳಿರುವುದಾಗಿ ತಿಳಿಯಬರುತ್ತದೆ

ಪ್ರಾರಂಭೋತ್ಸವ

ಮೈಸೂರು ದಳವಾಯಿ ಸ್ಕೂಲಿನಲ್ಲಿ ನೂತನವಾಗಿ ಕಟ್ಟಿರುವ ಕಟ್ಟಡದ ಪ್ರಾರಂಭೋತ್ಸವ ಸಮಾರಂಭವು ಇಂದು ಸಂಜೆ ೪-೧೫ ಗಂಟೆಗೆ ನಡೆಯುವುದು. ವಿದ್ಯಾ ಇಲಾಖಾ ಮುಖ್ಯಾಧಿಕಾರಿ ಶ್ರೀ ಕೆ. ಗುರುದತ್‌ರವರು ಅಧ್ಯಕ್ಷತೆ ವಹಿಸುವರು.

ವನಮಹೋತ್ಸವ

ಮೈಸೂರು ಸಂಸ್ಥಾನವಾದ್ಯಂತ ನವೆಂಬರ್ ಅಖೈರ್ ವರೆಗೆ ೩೪,೮೨,೮೭೩ ಗಿಡಗಳನ್ನು ವನಮಹೋತ್ಸವ ಸಮಾರಂಭದ ಅಂಗವಾಗಿ ನೆಡಲಾಗಿದೆಯೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ. ತುಮಕೂರು ಜಿಲ್ಲೆಯಲ್ಲಿ ಹೆಚ್ಚಾಗಿ ಗಿಡಗಳನ್ನು ನೆಡಲಾಗಿದೆ.

LATEST

ಅವಿಶ್ವಾಸನಿರ್ಣಯ ಒತ್ತಾಯಪಡಿಸಬೇಡಿ

ಬೆಂಗಳೂರು ಡಿ. ೨೩

ಕೇಂದ್ರಪಾರ್ಲಿಮೆಂಟರಿ ಬೋರ್ಡಿನವರು ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಹನುಮಂತಯ್ಯನವರಿಗೆ ಒಂದು ಪತ್ರ ಬರೆದು ಈಗಿನ ದೇಶದ ಪರಿಸ್ಥಿತಿಯಲ್ಲಿ ಅವಿಶ್ವಾಸ ನಿರ್ಣಯವನ್ನು ಒತ್ತಾಯಪಡಿಸಬೇಡವೆಂದೂ, ಮಂತ್ರಿ ಮಂಡಲದಲ್ಲಿ ಸೂಕ್ತ ಬದಲಾವಣೆ ಮಾಡಿರೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

ಸ್ಟಾಲಿನ್ ಜನ್ಮೋತ್ಸವ

ಮಾರ್ಷಲ್ ಸ್ಟಾಲಿನ್ನ ಮೊನ್ನೆ ೭೧ ಜನ್ಮದಿನೋತ್ಸವವು ರಷ್ಯಾದೇಶದಲ್ಲೆಲ್ಲಾ ನಡೆಯಿತು.

ರಷ್ಯಾ ಜೆಟ್ ವಿಮಾನಗಳು

ರಷ್ಯಾ ದೇಶದಲ್ಲಿ ತಯಾರಾದ ಜೆಟ್ ವಿಮಾನಗಳ ಮೇಲೆ ಕೊರಿಯಾ ಯುದ್ಧರಂಗದಲ್ಲಿ ಅಮೆರಿಕಾ ಜೆಟ್ ವಿಮಾನಗಳು ಧಾಳಿ ನಡೆಸಿದುವೆಂದು ವಾರ್ತೆ ಬಂದಿದೆ.

ಕನ್ನಡ ಶಿಕ್ಷಣ-ಮಾಧ್ಯಮ
ಚಳವಳಿ

ಈ ಚಳುವಳಿಯ ಬಗ್ಗೆ ಅನೇಕ ಮಹನೀಯರು ತಮ್ಮ ಪೂರ್ಣ ಬೆಂಬಲ ಮತ್ತು ಸಹಕಾರಗಳನ್ನು ಸಂದೇಶದ ಮೂಲಕ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ವಾರ್ತಾ ಸಚಿವರಾದ ಶ್ರೀ ಆರ್. ಆರ್. ದಿವಾಕರ್‌ರವರು, ನಿಮ್ಮ ಮನವಿಯಲ್ಲಡಕವಾಗಿರುವ ಶಿಕ್ಷಣ ಮಾಧ್ಯಮವು ಕನ್ನಡದಲ್ಲಾಗಬೇಕೆಂಬ ತತ್ತ್ವವನ್ನು ನಾನು ಪೂರ್ಣ ಒಪ್ಪುತ್ತೇನೆ ಮತ್ತು ಈ ತತ್ತ್ವವನ್ನು ಕರ್ನಾಟಕದ ಎಲ್ಲಾ ಶಾಲೆ, ಕಾಲೇಜುಗಳಲ್ಲೂ ಕೂಡಲೇ ಜಾರಿಗೆ ತರಬೇಕು. ದೇವನಾಗರಿ ಲಿಪಿಯುಳ್ಳ ಹಿಂದೀ ಭಾಷೆಯನ್ನು ಮಿಡಲ್ ಮತ್ತು ಕಾಲೇಜುಗಳಲ್ಲಿ ಕಡ್ಡಾಯವಾಗಿ ಬೋಧಿಸಬೇಕು. ಎಂದೂ ಬೊಂಬಾಯಿ ಸರ್ಕಾರ ನೇಮಿಸಿದ್ದ ಕರ್ನಾಟಕ ವಿಶ್ವವಿದ್ಯಾನಿಲಯ ಕಮಿಷನ್ನಿನ ವರದಿಯು ಹಾಗೇಯಿದೆ. ಎಂದು ತಿಳಿಸಿದ್ದಾರೆ.

ಕರ್ನಾಟಕದ ಕವಿಸಾರ್ವಭೌಮರೂ, ಮತ್ತು ಒಳನೆ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷರೂ ಆದ ಶ್ರೀ ಎಂ. ಗೋವಿಂದಪೈರವರು ತಮ್ಮ ಸಂದೇಶದಲ್ಲಿ, ತಮ್ಮ ಪ್ರತಿಪಕ್ಷದವರಲ್ಲಿ ಯಾವ ಬಗೆಯ ದ್ವೇಷವನ್ನೂ, ಮನಸ್ಸಿನಲ್ಲಿಟ್ಟುಕೊಳ್ಳದೆ ತಾವು ಮಾಡುತ್ತಿರುವ ಪ್ರಯತ್ನವು ಶುದ್ಧವಾದ ಮನಸ್ಸಿನಿಂದ ಮಾಡುತ್ತೀರಿ. ಮತ್ತು ನಿಷ್ಕಾಮಕರ್ಮವಾಗಿ ಮಾಡುತ್ತಿದ್ದೀರಿ. ಅದೇ ದೇವರಿಗೆ ಒಪ್ಪಿಗೆ. ಈ ಪ್ರಯತ್ನ ಕೂಡಲೇ ಯಶಸ್ವಿಯಾಗಿ ಕನ್ನಡ ಜನತೆಜ್ಞಾನದ ಬೆಳಕು ಕಾಣಲೆಂದು ಹಾರೈಸುತ್ತೇವೆ ಎಂದು ತಿಳಿಸಿದ್ದಾರೆ.

ಮೈಸೂರು ಸಂಸ್ಥಾನದ ಹಿರಿಯ ಸಾಹಿತಿಗಳಾದ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು ತಮ್ಮ ಸಂದೇಶದಲ್ಲಿ ತಮ್ಮ ಪ್ರಯತ್ನಕ್ಕೆ ನನ್ನ ಮತ್ತು ಪರಿಷತ್ತಿನ ಸಂಪೂರ್ಣ ಬೆಂಬಲವಿದೆ. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು. ಕನ್ನಡ ಪ್ರಥಮ ಭಾಷೆಯಾಗಬೇಕು. ಎಂಬ ನಮ್ಮ ಧ್ಯೇಯಗಳು. ಸಾಧನೆಯಾಗುವವರೆಗೂ ಸುಮ್ಮನೆ ಕೂಡಬಾರದೆಂದು ಒತ್ತಿ ಹೇಳುತ್ತೇನೆ. ಮೇಲಾಗಿ ನಿಮ್ಮ ಚಳುವಳಿಯನ್ನು ಸಾಂಸ್ಕೃತಿಕವಾಗಿ ಮುಂದುವರಿಸಿ ಎಂದು ಬೆನ್ನುತಟ್ಟಿರುತ್ತಾರೆ.

ಕ್ರಿಯಾ ಸಮಿತಿಯು ತಮ್ಮ ಚಳುವಳಿ ಬಗ್ಗೆ ಸಂಸ್ಥಾನಾದ್ಯಂತ ಪ್ರವಾಸ ಮಾಡಿ ಅಲ್ಲೆಲ್ಲಾ ಒಂದೊಂದು ಕ್ರಿಯಾಸಮಿತಿಯ ಶಾಖೆಯನ್ನು ಸ್ಥಾಪಿಸಿ ತಮ್ಮ ಕಾರ್ಯಗಳಲ್ಲೊಂದಾದ ಪ್ರಚಾರ ಕಾರ್ಯ ಸಂಗ್ರಹಣೆ, ಇವೇ ಮೊದಲಾದುವನ್ನು ಭರದಿಂದ ಸಾಗಿಸುತ್ತಲಿದೆ.

ಅಸ್ಸಾಂನಿಧಿಗೆ

ಮುಖ್ಯ ಮಂತ್ರಿಗಳ ಅಸ್ಸಾಂನಿಧಿಗೆ ಇಲ್ಲಿಯವರೆಗೆ ೩,೬೬,೨೬೮-೧೫-೧ ರೂ. ವಸೂಲಾಗಿದೆ.

ಬೆಂಗಳೂರು ಚುನಾವಣೆಗೆ ಅಖಿಲಭಾರತ ಕಾಂಗ್ರೆಸ್ ಜನರಲ್ ಸೆಕ್ರೆಟರಿಯವರ ಮನವಿ

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಪ್ರಧಾನಕಾರ್ಯದರ್ಶಿಯಾದ ಶ್ರೀ ಮೋಹನಲಾಲ್ ಗೌತಮರವರು ಬೆಂಗಳೂರು ಚುನಾವಣೆಗಳನ್ನು ಕುರಿತು ಒಂದು ಹೇಳಿಕೆಯನ್ನು ಕೊಟ್ಟಿರುವರು.

“ದೇಶದ ಇಂದಿನ ಕಷ್ಟಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸಂಸ್ಥೆ ಮಾತ್ರವೇ ದೇಶವನ್ನು ರಕ್ಷಿಸಬಲ್ಲದು. ಮೈಸೂರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೀರ್ತಿಯುತವಾದ ಪಾತ್ರವನ್ನು ವಹಿಸಿದೆ. ದಕ್ಷಿಣ ಭಾರತದಲ್ಲಿ ಬೆಂಗಳೂರು ಪ್ರಸಿದ್ಧನಗರ. ಬೆಂಗಳೂರು ಕಾರ್ಪೋರೇಷನ್ ಚುನಾವಣೆಯಲ್ಲಿ ಮತದಾರರೆಲ್ಲರೂ ಕಾಂಗ್ರೆಸ್ ಉಮೇದುವಾರರಿಗೇ ಓಟುಕೊಡಬೇಕು. ಕಾಂಗ್ರೆಸ್ ಸಂಸ್ಥೆಯನ್ನು ಬಲಗೊಳಿಸಬೇಕು ಇದೇ ನನ್ನ ಪ್ರಾರ್ಥನೆ”

ಅಪೇರಾ
20-12-50 ರಿಂದ ಪ್ರತಿದಿನ 3 ಆಟಗಳು
ಕನ್ನಿಯಿನ್ ಕಾದಲಿ
ಅಂಜಲಿದೇವಿ, ಮಾಧುರಿದೇವಿ, ಕೆ. ಆರ್. ರಾಮಸ್ವಾಮಿ ಪಾತ್ರವಹಿಸಿರುವ
ಮಹೋನ್ನತ ತಮಿಳುಚಿತ್ರ

ಒಲಂಪಿಯಾ
14-12-50 ರಿಂದ ದಿನವಹಿ 3 ಆಟಗಳು
ಅಪರಿಚಿತ ಕಾಡು ಮೃಗಗಳ ಭೇಟಿ
ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿಗಳನ್ನೊಳಗೊಂಡ ಅರಣ್ಯ ಮಧ್ಯದಲ್ಲಿ ಅಪಲ್ಲದೆ ೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ
ಹಾರ್‌ಡೋಚ್‌ರವರ
ಒನ್ ಮಿಲಿಯನ್ ಬಿ. ಸಿ.
(ONE MILLION B.C.)
ನೀವು ಹಿಂದೆ ಎಂದೂ ನೋಡದ ಮುಂದೆ ನೋಡದಿರುವ ಚಿತ್ರ
ಬೆಳಗಿನ ಪ್ರದರ್ಶನ
20-12-50 ರಿಂದ ಪ್ರತಿದಿನ 10-30ಕ್ಕೆ
ಕಿಡಕಿ
ಪಾತ್ರ :—ರೆಹನ, ಮುತ್ತಾಜ್ ಅಲಿ.

ಸಿಟಿ ಮುನಿಸಿಪಲ್ ಆಫೀಸು ಮೈಸೂರು

ಎಲೆಕ್ಟೋರಲ್ ರೋಲ
(ಚುನಾವಣೆದಾರರ ಪಟ್ಟಿ)

ತಾ|| ೨೩-೧೨-೧೯೫೦

ಮೈಸೂರು ನಗರದ ಎಲೆಕ್ಟೋರಲ್‌ರೋಲ್ (ಚುನಾವಣೆದಾರರ ಪಟ್ಟಿ) ಗೆ ಸಂಬಂಧಪಟ್ಟ ಹಕ್ಕುಸಾಧನೆ ಪತ್ರಗಳನ್ನೂ ಮತ್ತು ತಕರಾರು ಪತ್ರಗಳನ್ನೂ (Claims and Objections) ಕಳುಹಿಸಲು ೧೯೫೧ನೇ ಜನವರಿ ೧೬ನೇ ತಾರೀಖಿನವರೆಗೆ ಕಾಲಾವಕಾಶವನ್ನು ಹೆಚ್ಚಿಸಲಾಗಿದೆಯೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಸಿ. ನರಸಿಂಹಮೂರ್ತಿ,
ಮುನಿಸಿಪಲ್ ಕಮಿಷನರ್ ಮತ್ತು
ಎಲೆಕ್ಟೋರಲ್ ರಿಜಿಸ್ಟ್ರೇಷನ್ ಆಫೀಸರ್.

ಮದುವೆ ಮುಂದೆ ಹೋಯಿತು

ಪರ್ಷಿಯಾ ಷಾರವರ ಮದುವೆಯು ವಧುವಿನ ಅನಾರೋಗ್ಯ ನಿಮಿತ್ತ ಈ ಮಾಹೆ ೨೭ ರಲ್ಲಿ ನಡೆಯಬೇಕಾಗಿದ್ದುದು ಮುಂದೆ ಹಾಕಲಾಗಿದೆ.

ಕಾರ್ಯಕಾರಿ ಸಮಿತಿ

ಮೈಸೂರು ಪ್ರಾಂತೀಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಸಭೆಯು ೨೫ನೇ ತಾ|| ಸಂಜೆ ೫ ಗಂಟೆಗೆ ಬೆಂಗಳೂರಿನಲ್ಲಿ ಸೇರಲಿದೆ

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನ್‌ರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ.
ಬೆಳಗಿನ ಪ್ರದರ್ಶನ 23—12—50 ರಿಂದ
ಶಾಂತಾರಾಂ ಪಾತ್ರವಹಿಸಿರುವ
ಡಾ|| ಕೋಟ್‌ನೀಸ್

ಸಂಪಾದಕರು ಮತ್ತು ಪ್ರಕಾಶಕರು: ಜೀ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೫—೧೨—೧೯೫೦ನೆ, ಸೋಮವಾರ [ಸಂಚಿಕೆ ೯೫

ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಸಲಹೆ

ಪಂಡಿತ ನೆಹರೂರವರ ಹಿತನುಡಿಯೆ ?

ಶಾಸನ ಸಭೆಯ ಕೆಲವು ಸದಸ್ಯರು ಅವಿಶ್ವಾಸ ನಿರ್ಣಯವನ್ನು ಸಲ್ಲಿಸುವ ಮುನ್ನ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿಗೆ ಈ ನಿರ್ಣಯವನ್ನು ಕಳುಹಿಸಿದ್ದರು. ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ. ಕೆ. ಸಿ. ರೆಡ್ಡಿಯವರಿಗೆ ಒಂದು ಪತ್ರವನ್ನು ಬರೆಯುತ್ತ ಕಾರ್ಯಕಾರಿಸಮಿತಿಯ ನಿರ್ಣಯಸಹಿತ ಪಾರ್ಲಿಮೆಂಟರಿ ಬೋರ್ಡಿಗೆ ಈ ವಿಷಯವನ್ನು ಸಕಾಲದಲ್ಲಿ ತಿಳಿಸದಿರುವುದು ಸರಿಯಲ್ಲವೆಂದೂ, ಆದಾಗ್ಯೂ ೨೭ ನೇ ತಾರೀಖು ಪಕ್ಷದ ಸಭೆಯನ್ನು ಕರೆದಿರುವುದರಿಂದ ಅಲ್ಲಿ ಇತ್ಯರ್ಥಮಾಡಿಕೊಂಡು ತಮಗೆ ವರದಿ ಕಳುಹಿಸಿಯೆಂದು ಪತ್ರದಲ್ಲಿ ಬರೆದಿರುವುದಾಗಿ ತಿಳಿಯಬರುತ್ತದೆ. ಈ ಪತ್ರದ ನಕಲನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ಹನುಮಂತಯ್ಯನವರಿಗೆ ಕಳುಹಿಸಲಾಗಿದೆ.

ಪ್ರಧಾನಿ ಪಂಡಿತ ನೆಹರೂರವರು ಜನವರಿ ೨ ನೇ ತಾರೀಖು ಬೆಂಗಳೂರಿನಲ್ಲಿ ನಡೆಯುವ ವಿಜ್ಞಾನ ಶಾಸ್ತ್ರ ಸಮ್ಮೇಳನದ ಉದ್ಘಾಟನೆಯನ್ನು ನಡಿಸಲು ಬಂದಾಗ ಈ ಸಂಬಂಧದಲ್ಲಿ ಪಕ್ಷದ ಸದಸ್ಯರನ್ನು ಭೇಟಿ ಮಾಡುವರೆಂದೂ ೨೭ ನೇ ತಾರೀಖಿನ ಸಭೆಯ ತೀರ್ಮಾನವನ್ನು ತಮಗೆ ತಿಳಿಸಬೇಕೆಂದೂ ಭಾರತ ಕಾಂಗ್ರೆಸ್ ಅಧ್ಯಕ್ಷರು ಕಾಗದದಲ್ಲಿ ಬರೆದಿರುವರೆಂದು ತಿಳಿಯಬಂದಿದೆ.

ಪೌರಸಭೆಯ ಚುನಾವಣೆ

ಮೈಸೂರು ಡಿ. ೨೪

ಮೈಸೂರು ನಗರ ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸು ಪಕ್ಷದ ಶ್ರೀ. ಟಿ. ನರಸಿಂಹಯ್ಯಂಗಾರ್ ಮತ್ತು ಶ್ರೀ ಎಂ. ಎಸ್. ನಂಜಪ್ಪನವರು ೧೮ ಓಟುಗಳನ್ನು ಗಳಿಸಿ ಜಯಶೀಲರಾದರು. ಪ್ರಜಾಸಂಘದಪರವಾಗಿ ಅಧ್ಯಕ್ಷಸ್ಥಾನಕ್ಕೆ ಶ್ರೀ. ಶ್ರೀನಿವಾಸಯ್ಯಂಗಾರ್ ಮತ್ತು ಶ್ರೀ ಬಿ. ಜಿ. ದಾಸ್‌ರವರು ಸ್ಪರ್ಧಿಸಿದ್ದು ೧೦ ಓಟುಗಳನ್ನು ಗಳಿಸಿ ಪರಾಜಿತರಾದರು.

ಭಾರತಕ್ಕೆ ಸಹಾಯ

ಭಾರತದಲ್ಲಿ ಉಂಟಾಗಿರುವ ಕ್ಷಾಮ ನಿವಾರಣೆಯನ್ನು ಮಾಡಲು ಅಮೆರಿಕಾ ಸರ್ಕಾರವು ಭಾರತಕ್ಕೆ ಸಾಕಾಗುವಷ್ಟು ಆಹಾರವನ್ನು ಸರಬರಾಯಿ ಮಾಡಬೇಕೆಂದೂ ಅಲ್ಲದೆ ಭಾರತಕ್ಕೆ ಬೇಕಾಗುವ ಇತರ ಸಹಾಯವನ್ನು ನೀಡಿದಲ್ಲಿ ಏಷ್ಯಾದಲ್ಲಿ ಸ್ವಾತಂತ್ರ ರಕ್ಷಣೆಯನ್ನು ಮಾಡಲು ಭಾರತವು ಶಕ್ತಿಯುತವಾಗುವುದೆಂದೂ ಅಮೆರಿಕಾ ರಿಪಬ್ಲಿಕ್ ಸದಸ್ಯ ಮಿ। ಜಾಕೋಬ್ ಜವಿಟ್ಸ್‌ರವರು ಹೇಳಿರುವರು.

ವಾರ್ಷಿಕೋತ್ಸವ

ಮೈಸೂರು ಡಿ ೨೪

ರಾಮಸಮುದ್ರ ಸರ್ಕಲ್ ದೊಡ್ಡರಾಯಪೇಟೆ ಸಮಗ್ರ ಗ್ರಾಮ ಸೇವಾಸಂಘದ ಮೊದಲನೆಯ ವಾರ್ಷಿಕೋತ್ಸವವು ನಿನ್ನೆ ರಾಮಸಮುದ್ರದಲ್ಲಿ ಮೈಸೂರು ಜಿಲ್ಲಾಧಿಕಾರಿ ಜನಾಬ್ ಮಹಮದ್ ಅಹಮದ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಮಾರಂಭದಲ್ಲಿ ಮೈಸೂರು ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಎಸ್. ರಂಗರಾಮಯ್ಯನವರು, ಪತ್ರಿಕೋದ್ಯೋಗಿಗಳು, ರೈತರ ಸಂಘದ ಅಧ್ಯಕ್ಷ ಶ್ರೀ ದೇವದಾಸ್ ಮುಂತಾದವರು ಭಾಗವಹಿಸಿದ್ದರು. ಸಮಗ್ರ ಗ್ರಾಮ ಸೇವಾ ಸಹಕಾರ ಸಂಘಗಳ ಕಾರ್ಯನಿರ್ವಾಹಕ ವಿಷಯದಲ್ಲಿ ಶ್ರೀಗಳಾದ ಎಸ್. ರಂಗರಾಮಯ್ಯ, ದೇವದಾಸ್ ಮತ್ತು ಕುಮಾರಸ್ವಾಮಿಯವರು ಭಾಷಣಮಾಡಿ, ಈ ಸಂಘವು ಮಾಡಿರುವ ಕಾರ್ಯವನ್ನು ಪ್ರಶಂಸಿಸಿದರು.

ಬಟ್ಟೆ ಚಿಲ್ಲರೆ ವ್ಯಾಪಾರಿಗಳ ಸಂಘ

ಮೈಸೂರು ನಗರದಲ್ಲಿರುವ ಬಟ್ಟೆ ಚಿಲ್ಲರೆ ವ್ಯಾಪಾರಿಗಳ ಸಂಘದ ೭ ನೇ ವಾರ್ಷಿಕೋತ್ಸವವು ಡಿಸೆಂಬರ್ ೩೧ ನೇ ತಾರೀಖು ಭಾನುವಾರ ಸಂಜೆ ೫-೩೦ ಗಂಟೆಗೆ ಚಾಮುಂಡೇಶ್ವರೀ ಭವನದಲ್ಲಿ, ನಗರ ಪೌರಸಭಾಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವುದು

ಟ್ಯಾಂಕುಗಳು

ಚೈನಾ ಪಡೆಗಳು ಕೊರಿಯಾ ಯುದ್ಧದಲ್ಲಿ ಟ್ಯಾಂಕುಗಳನ್ನು ಪಯೋಗಿಸಿ ಯುದ್ಧಮಾಡಲಾರಂಭಿಸಿವೆಯೆಂದು ತಿಳಿಯಬರುತ್ತದೆ.

ಡಾ॥ ಖರೆ

ಕಾಂಗ್ರೆಸ್ ಅಧಿಕಾರದಲ್ಲಿರುವವರೆಗೂ ನಿರಾಶ್ರಿತ ಸಮಸ್ಯೆ ಬಗೆಹರಿಯಲಾರದೆಂದು ಅಖಿಲ ಭಾರತ ಹಿಂದೂ ಮಹಾಸಭಾಧ್ಯಕ್ಷ ಡಾ॥ ಖರೆ ತಿಳಿಸಿದರು.

ಭಾರತ ಸರ್ಕಾರದ ಸಲಹೆಯ ಅಂಗೀಕಾರ

ನೇಪಾಳದಲ್ಲಿ ಆಡಳಿತದಲ್ಲಿ ಪ್ರಜಾಸತ್ತೆಯ ತತ್ವಗಳ ಮೇಲೆ ಪುನರ್ವ್ಯವಸ್ಥೆ ಮಾಡಬೇಕೆಂದು ಭಾರತದ ಸಲಹೆಯನ್ನು ನೇಪಾಳ ಸರಕಾರ ಅಂಗೀಕರಿಸಿ, ನಾಲ್ವರು ಪ್ರಜಾಪ್ರತಿನಿಧಿಗಳನ್ನು ಸರಕಾರಕ್ಕೆ ನೇಮಿಸುತ್ತಾರೆಂದು ತಿಳಿಯುತ್ತದೆ.

ಕಾಮನ್‌ವೆಲ್ತ್ ಸಮ್ಮೇಳನದಲ್ಲಿ

ಲಂಡನ್ನಿನ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಕೆಲವು ಮುಖ್ಯ ರಕ್ಷಣೆ ವಿಷಯಗಳೂ ಶಾಂತಿಸ್ಥಾಪನೆಯ ವಿಷಯಗಳೂ ಚರ್ಚಿಸಲ್ಪಡಲಿವೆ. ಅವುಗಳ ನಿಷ್ಕರ್ಷೆಯಲ್ಲಿ ಪಂಡಿತ ಜವಹರಲಾಲ್ ನೆಹರೂರವರು ಪ್ರಧಾನ ಪ್ರಭಾವವನ್ನು ಬೀರುವುದು ಖಂಡಿತ ಎಂದು ಹೇಳಲಾಗಿದೆ.

ಸಕ್ಕರೆ ಮೇಲಿನ ನಿರ್ಬಂಧ

ಸಕ್ಕರೆ ಕಾರ್ಖಾನೆಗಳವರು ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚು ತಯಾರಿಸಿದಾಗ ಮಾತ್ರ ಹೆಚ್ಚುವರಿ ಸಕ್ಕರೆಯನ್ನು ಮಾರಾಟ ಮಾಡಬಹುದು. ಈಗ ಸಕ್ಕರೆ ಮಾರಾಟಕ್ಕೆ ಅವಕಾಶ ಕೊಟ್ಟಿರುವುದು ಅಕ್ರಮ ದಾಸ್ತಾನು ಹೊರಕ್ಕೆ ಬಂದು ಜನರಿಗೆ ಸಕ್ಕರೆ ಲಭಿಸುವಂತೆ ಮಾಡುವುದಕ್ಕಾಗಿ ಮಾತ್ರ - ಎಂದು ಸರ್ಕಾರಿ ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ಸಿಗೆ ಬಹುಮತ

ಬೆಂಗಳೂರು ಡಿ: ೨೪

ನಗರ ಕಾರ್ಪೋರೇಷನ್ನಿನ ನಗರಭಾಗದ ಸಾಮಾನ್ಯ ಕ್ಷೇತ್ರಗಳಿಂದ ಒಟ್ಟು ೩೧ ಸ್ಥಾನಗಳಿಗೆ ೨೦ ಮಂದಿ ಕಾಂಗ್ರೆಸ್ಸಿನವರೂ ೯ ಮಂದಿ ಸ್ವತಂತ್ರರೂ, ೨ ಸೋಷಿಯಲಿಸ್ಟರೂ ಆರಿಸಿ ಬಂದಿದ್ದಾರೆ. ೨೦ ಕಾಂಗ್ರೆಸ್ಸಿಗರಲ್ಲಿ ಇಬ್ಬರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಕನ್ನಡಿಗರು ಇತರ ಭಾಷೆಯ ಸಾಹಿತ್ಯ ತಿಳಿದಿರುವುದು ಅಗತ್ಯ

ನಮ್ಮ ಭಾಷೆಯಲ್ಲದೆ ಇತರ ಭಾರತೀಯ ಭಾಷೆಗಳಲ್ಲಿ ಜ್ಞಾನವನ್ನು ಪಡೆದಿರಬೇಕಾದುದು ನಮ್ಮ ವಿದ್ಯಾಭ್ಯಾಸದ ಭಾಗವಾಗಿರಬೇಕು. ಇದರಿಂದ ಮಾತ್ರ ಪ್ರತ್ಯೇಕ ಮನೋಭಾವ, ಪ್ರಾಂತೀಯ ಮನೋಭಾವಗಳನ್ನು ತೊರೆದು ಸೌಹಾರ್ದ ಮನೋಭಾವ ಮತ್ತು ರಾಷ್ಟ್ರೀಯ ಸಂಘಗಳನ್ನು ಪಡೆಯಲು ಸಾಧ್ಯವೆಂದು ಕೇಂದ್ರ ವಾರ್ತಾ ಸಚಿವ ಶ್ರೀ ರಂಗನಾಥ ದಿವಾಕರರವರು ಬೊಂಬಾಯನ್ನು ೩, ೪ ನೇ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸುತ್ತ ಹೇಳಿದರು.

ಒಂದು ಆಟಂ ಬಾಂಬಿನ ಬೆಲೆಗೆ ಏನನ್ನು ಕೊಳ್ಳಬಹುದು

ಒಂದು ಆಟಂಬಾಂಬು ತಯಾರಿಸಲು ಆಗುವ ಖರ್ಚು ರೂ. ೬,೫೦೦,೦೦೦,೦೦೦. ಇದನ್ನು ತಯಾರು ಮಾಡುವ ಖರ್ಚಿನಲ್ಲಿ (೧) ಇಂಡಿಯಾ ದೇಶದ ಜನರಿಗೆಲ್ಲ ಐದು ತಿಂಗಳಿಗಾಗುವಷ್ಟು ಆಹಾರ ಧಾನ್ಯಗಳನ್ನು ಕೊಳ್ಳಬಹುದು (೨) ಪ್ರಪಂಚದ ಜನಕ್ಕೆಲ್ಲಾ ಒಂದು ಹೊಸ ಸೂಟನ್ನು ಕೊಡಬಹುದು (೩) ಹಿಂದೂಸ್ಥಾನದ ಪ್ರತಿಯೊಂದು ಹಳ್ಳಿಗೂ ಒಂದೊಂದು ಸ್ಕೂಲನ್ನು ಕಟ್ಟಿಸಿ ಕೊಡಬಹುದು. (೪) ಹಿಂದೂಸ್ಥಾನದ ಹಳ್ಳಿಗಳಿಗೆಲ್ಲಾ ಆಧುನಿಕ ಆಸ್ಪತ್ರೆಯನ್ನು ಕಟ್ಟಿಸಿಕೊಡಬಹುದು.

ಇದೇ ಆಟಂಬಾಂಬು ೨೦೦,೦೦೦ ಜನರನ್ನು ನಿರ್ಮೂಲಮಾಡಲು ಬಲ್ಲದು. ಬೊಂಬಾಯಿನಷ್ಟು ದೊಡ್ಡಪಟ್ಟಣವನ್ನು ಹೆಸರಿಲ್ಲದಂತೆ ಮಾಡಬಲ್ಲುದು. ನಿಮಗೆ ಯಾವ ಮಾರ್ಗಬೇಕು?

ಅಪೇರಾ

20-12-50 ರಿಂದ ಪ್ರತಿದಿನ 3 ಆಟಗಳು

ಕನ್ನಿಯಿನ್ ಕಾದಲಿ

ಅಂಜಲಿದೇವಿ, ಮಾಧುರಿದೇವಿ, ಕೆ. ಆರ್. ರಾಮಸ್ವಾಮಿ ಪಾತ್ರವಹಿಸಿರುವ

ಮಹೋನ್ನತ ತಮಿಳುಚಿತ್ರ

ಒಲಂಪಿಯಾ

14-12-50 ರಿಂದ ದಿನವಹಿ 3 ಆಟಗಳು

ಅಪರಿಚಿತ ಕಾಡು ಮೃಗಗಳ ಭೇಟಿ

ಅವುಗಳಲ್ಲಿನ ಪರಸ್ಪರ ಪ್ರೀತಿ ಮತ್ತು ಭಯಂಕರ ಹೋರಾಟ ಇವೆಲ್ಲವೂ ಭಯೋತ್ಪಾದಕ ಜ್ವಾಲಾಮುಖಿಗಳನ್ನೊಳಗೊಂಡ ಆರಣ್ಯ ಮಧ್ಯದಲ್ಲಿ ಅದಲ್ಲದೆ ೧೦ ಲಕ್ಷ ವರ್ಷಗಳ ಹಿಂದೆ ಮಾನವನ ಪ್ರೇಮ ಹೇಗಿತ್ತೆಂಬುದನ್ನು ತಿಳಿಸುವ ಅಪೂರ್ವ

ಹಾಲ್‌ರೋಚ್‌ರವರ

ಒನ್ ಮಿಲಿಯನ್ ಬಿ. ಸಿ.

(ONE MILLION B.C.)

ನೀವು ಹಿಂದೆ ಎಂದೂ ನೋಡದೆ ಮುಂದೆ ನೋಡದಿರುವ ಚಿತ್ರ

ರಣಜಿತ್

15-12-50 ರಿಂದ ಅಮೋಘ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಫಿಲಂಸ್ಥಾನ್‌ರವರ

★ ಸರ್ಗಮ್ ★

(ಹಿಂದಿ)

ಪಾತ್ರ: ● ರಹೇನಾ ● ರಾಜಕಪೂರ್

ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ

ಬೆಳಗಿನ ಪ್ರದರ್ಶನ 22-12-50 ರಿಂದ

ಶಾಂತರಾಂ ಪಾತ್ರವಹಿಸಿರುವ

ಡಾ|| ಕೋಟ್‌ನೀಸ್

ವಿದ್ಯಾರ್ಥಿಗಳ ಕರ್ತವ್ಯ

ಮೈಸೂರು ಡಿ ೨೪

ಹೈಸ್ಕೂಲು, ಕಾಲೇಜುಗಳಲ್ಲಿ ಪಠ್ಯಪುಸ್ತಕಗಳನ್ನು ಓದಿದ ಮಾತ್ರಕ್ಕೆ ಯಾರೂ ವಿದ್ಯಾವಂತರಾಗುವುದಿಲ್ಲ. ತನ್ನ ಜೀವಮಾನವನ್ನೆಲ್ಲಾ ವಿದ್ಯಾರ್ಜನೆಗಾಗಿಯೇ ದುಡಿಯಬೇಕು, ಶಾಲಾ ಕಾಲೇಜುಗಳಲ್ಲಿ ಓದಿ ಯಾವುದಾದರೊಂದು ಉದ್ಯೋಗಕ್ಕೆ ಪ್ರವೇಶಿಸಿದ್ದರೆ ಅನಂತರ ಓದುವ ಹಂಬಲನ್ನೇ ನಾವು ಬಿಟ್ಟುಬಿಡುತ್ತೇವೆ ನಮ್ಮ ನಿತ್ಯ ಜೀವನದಲ್ಲಿ ಜ್ಞಾನಾರ್ಜನೆಗೆ ವ್ಯಾಸಂಗವೂ ಅತ್ಯವಶ್ಯಕ. ಪಾಶ್ಚಿಮಾತ್ಯ ದೇಶಗಳಲ್ಲಿಯ ಅನೇಕ ಪದ್ಧತಿಗಳನ್ನು ನಾವು ಕಲಿತು ನಮ್ಮ ಪೂರ್ವೀಕರು ಹಿಂದಿನಿಂದಲೂ ಹಾಕಿಕೊಟ್ಟಿರುವ ಅನೇಕ ವಾಡಿಕೆಗಳನ್ನೆಲ್ಲಾ ನಾವು ಮರೆಯುತ್ತಲಿದ್ದೇವೆ ಹಿಂದಿನವಾಡಿಕೆಗಳನ್ನೆಲ್ಲಾ ನಾವು ಅಕ್ಷರಶಃ ಪಾಲಿಸಲ, ಇಂದಿನ ಪರಿಸ್ಥಿತಿಯಲ್ಲಿ [illegible] ಕಾಲಕ್ಕೆ ತಕ್ಕಂತೆ ಸ್ವಲ್ಪ ಬದಲಾವಣೆ ಮಾಡಿಕೊಂಡು ಅವುಗಳನ್ನು ಪಾಲಿಸಬೇಕು. ನಮ್ಮ ಭಾರತದೇಶದಲ್ಲಿರುವ ಸನಾತನ ಧರ್ಮವನ್ನು ಯಾರೂ ಮರೆಯಬಾರದು ಅದನ್ನು ಆಚರಣೆಗೆ ತರಬೇಕು. ಇದನ್ನು ಬದಲಾಯಿಸಬೇಕಾಗಿಲ್ಲ ವಿಜ್ಞಾನಶಾಸ್ತ್ರಗಳು ಪ್ರತಿ ನಿತ್ಯವೂ ಹೊಸ ಹೊಸ ರೂಪವನ್ನು ತಾಳುತ್ತವೆ. ಆದರೆ ಧರ್ಮವು ಮಾತ್ರ ಬದಲಾಯಿಸುವುದಿಲ್ಲ ಇದನ್ನು ನಾವು ಕಿತ್ತೊಗೆದು ಹೊಸ ರೂಪವನ್ನು ಕೊಡಲಾರೆವು. ಇದು ಯಂತ್ರೋಪಕರಣದಂತೆ ಪ್ರತಿನಿತ್ಯವೂ ಬದಲಾವಣೆಯಾಗುವುದಿಲ್ಲ, ನಶಿಸುವುದಿಲ್ಲ. ಈ ಧರ್ಮವು ನಮ್ಮ ಜನಾಂಗಕ್ಕೆಲ್ಲಾ ಸೇರಿದುದೇ ವಿನಹ ಯಾವ ಕೋಮಿಗೂ ಪಂಗಡಕ್ಕೂ ಸೇರಿದ್ದಲ್ಲವೆಂದು ವಿದ್ಯಾ ಇಲಾಖಾ ಮುಖ್ಯಾಧಿಕಾರಿ ಶ್ರೀ ಗ ೨.ದತ್‌ರವರು ನಿನ್ನೆ ದಳವಾಯಿ ಹೈಸ್ಕೂಲಿನ ಹೊಸ ಕಟ್ಟಡದ ಪ್ರಾರಂಭೋತ್ಸವವನ್ನು ನಡೆಸುತ್ತ ತಿಳಿಸಿದರು. ಅವರು ತಮ್ಮ ಭಾಷಣದಲ್ಲಿ ಬಾಲಕರಿಗೆ ಹಿತವಚನವನ್ನು ನುಡಿಯುತ್ತ ನಾವು ಸ್ವಾತಂತ್ರವನ್ನು ಗಳಿಸಿದ ಮೇಲೆ ಅದನ್ನು ಕಾಪಾಡಿಕೊಳ್ಳಲು ಸರ್ವಥಾ ಪ್ರಯತ್ನಿಸಬೇಕು. ಅದಕ್ಕೆ ನಮ್ಮಲ್ಲಿ ಶಿಸ್ತು ಮುಖ್ಯವಾಗಿಬೇಕು. ಬಾಲಕರು ಎಳೆ ವಯಸ್ಸಿನಿಂದಲೂ ಶಿಸ್ತು ಸಂಪ್ರದಾಯ ಗಳನ್ನು ಕಲಿತರೆ ದೇಶಕ್ಕೆ ಹಿತ ಭಾರತದ ಭವಿಷ್ಯ ವಿದ್ಯಾರ್ಥಿಗಳ ಕೈಲಿದೆ ಅದನ್ನು ಕಾಪಾಡಲು ಬಾಲಕರು ಉತ್ತಮ ದರ್ಜೆಯ ಗುಣವಂತರಾಗಬೇಕು. ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡಿದಲ್ಲಿ ಮಾತ್ರ ಇದು ಸಾಧ್ಯವೆಂದು ಹೇಳಿದರು.

ಪ್ರಾರಂಭದಲ್ಲಿ ಕಮಿಟಿಯ ಅಧ್ಯಕ್ಷ ಶ್ರೀ. ಸಿ. ನರಸಿಂಹಯ್ಯನವರು ಅತಿಥಿಗಳನ್ನು ಸ್ವಾಗತಿಸಿ, ಅವರಿಗೆ ವಿದ್ಯಾಭ್ಯಾಸದಲ್ಲಿರುವ ಆಸಕ್ತಿಯನ್ನು ಪ್ರಶಂಸಿಸಿದರು. ಸಮಿತಿ ಕಾರ್ಯದರ್ಶಿಗಳಾದ ಶ್ರೀ. ವೈ. ಶ್ರೀನಿವಾಸಯ್ಯನವರು ಸಂಘದ ವರದಿಯನ್ನೋದಿ ೧೮೮೯ ರಲ್ಲಿ ಒಂದು ಸಣ್ಣ ಪಾಠಶಾಲೆಯಾಗಿ ಸ್ಥಾಪಿತವಾಗಿ ಈಗ ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲುಗಳನ್ನು ನಡೆಸಿಕೊಂಡು ಸಾರ್ವಜನಿಕರ ಸಹಾಯದಿಂದ ಅಭಿವೃದ್ಧಿಯಾಗುತ್ತಲಿರುವುದನ್ನು ವಿವರಿಸಿದರು.

ಈ ಹೊಸದಾಗಿ ಕಟ್ಟಿರುವ ನೂತನ ಕಟ್ಟಡಕ್ಕೆ ಧರ್ಮರತ್ನಾಕರ ಶ್ರೀನಂದೀಬಸಪ್ಪನವರು ೫೦೦೦ ರೂ ಗಳನ್ನು ಕೊಟ್ಟಿರುವುದನ್ನು ಮತ್ತೊಂದು ಕಟ್ಟಡವನ್ನು ಕಟ್ಟಿಸಿಕೊಟ್ಟ ಶ್ರೀ. ವೀರಭದ್ರಮೊದಲಿಯಾರ್‌ರವರಿಗೂ ಬಿನ್ನವತ್ತಳೆಗಳನ್ನು ರಜತಕರಂಡದಲ್ಲಿ ಅರ್ಪಿಸಲಾಯಿತು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯·೪೭ ಮೀಟರು

ಡಿಸೆಂಬರ್ ೨೬ ಮಂಗಳವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಎಸ್. ರಾಮಚಂದ್ರರಾವ್ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ದಿಲ್‌ರುಬ. ೧-೪೫ ಹಿಂದೀ ಶಿಕ್ಷಣ ೨-೦ ಪ್ರೇಮನಂದ (ಸಂಗೀತ) ೨-೩೦ ಮುಕ್ತಾಯ.

ಸಂಜೆ ೫-೩೦ ಎ. ಕೃಷ್ಣಮೂರ್ತಿ (ಪಿಟೀಲ್) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭.೫ ಪ್ರೇಮಾನಂದ (ಸಂಗೀತ) ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಎ. ಕೃಷ್ಣಮೂರ್ತಿ (ಪಿಟೀಲು) ೮-೩೦ ವೃಂದಸಂಗೀತ ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಗಾನಾಮೃತ. ೧೦-೦ ಮುಕ್ತಾಯ.

ಆನೆಯ ಅವಾಂತರ

ಇಬ್ಬರು ಮಾವಟಿಗರನ್ನು ಕೊಂದಿತು

ತಿರುಚೂರಿನಲ್ಲಿ ವೈಕುಂಠ ಏಕಾದಶೀ ಉತ್ಸವದ ನಂತರ ಒಂದು ಆನೆಯು ಮಾವಟಿಗರ ಹತೋಟಿ ತಪ್ಪಿ ೧೨ ಗಂಟೆ ಕಾಲ ಊರಲ್ಲೆಲ್ಲಾ ಓಡಾಡಿ ಅನೇಕ ಗುಡಿಸಲುಗಳು, ಮನೆಗಳ ಕಾಂಪೌಂಡು ಮುಂತಾದುವನ್ನೆಲ್ಲಾ ಹಾಳುಮಾಡಿತು. ಆ ರೋಷದಲ್ಲಿ ಇಬ್ಬರು ಮಾವಟಿಗರನ್ನು ತುಳಿದು ಕೊಂದುಹಾಕಿತು. ಅದನ್ನು ಹಿಡಿಯಲಾರದೆ ೧೨ ಬಾರಿ ಅದಕ್ಕೆ ಗುಂಡು ಹಾರಿಸಿ ಕೊಲ್ಲಲಾಯಿತು. ಅದರ ಕೋಪಕ್ಕೆ ಸಿಕ್ಕಿ ಒಂದು ಹಸುವೂ ಸತ್ತುಹೋಯಿತು. ಮತ್ತೊಂದಕ್ಕೆ ಗಾಯಗಳಾಗಿವೆ.

ಸರ್ಕಾರ ವರ್ಗಾ

ಸಿಯಾಲ್‌ನಿಂದ ದಕ್ಷಿಣ ಕೊರಿಯ ಸರ್ಕಾರವನ್ನು ಡಾ|| ರೀಯವರು ಅಮೆರಿಕಾ ಸೇನಾಧಿಪತಿಯ ಸಲಹೆಯ ಮೇಲೆ ಪೇರೀಕಡೆಗೆ ಬದಲಾಯಿಸಿದ್ದಾರೆ. ಇದು ಸಾಮಾನ್ಯ ಪ್ರಜೆಗಳಿಗೂ ಅನ್ವಯಿಸುತ್ತದೆ. ಮಿಲಿಟರಿ ಮತ್ತು ಪೋಲೀಸು ಪಡೆಗಳು ಹೋರಾಡಿ ರಾಜಧಾನಿಯನ್ನು ಶತ್ರುಗಳು ಹಾಳುಮಾಡದಂತೆ ನೋಡಿಕೊಳ್ಳಬೇಕೆಂದು ಅವರು ಮನವಿ ಮಾಡಿಕೊಂಡಿರುವರು.

ಗೌರ್ನರ್ ಶರಣಾಗತರಾದರು

ನೇಪಾಳ ಮುಖ್ಯನಗರವಾದ ಬೀರ್‌ಗಂಜ್ ನಗರದ ಗೌರ್ನರ್‌ರು ನೇಪಾಳ ಕಾಂಗ್ರೆಸು ಸ್ವಯಂಸೇವಕರಿಗೆ ಶರಣಾಗತರಾಗಿರುವರೆಂದು ವರದಿಯಾಗಿದೆ.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೬—೧೨—೧೯೫೦ನೇ ಮಂಗಳವಾರ [ಸಂಚಿಕೆ ೯೬

ಕಾಂಗ್ರೆಸ್ಸಿಗರಿಗೇ ಬಹುಮತ ಜಯ

ಬೆಂಗಳೂರು ಕಾರ್ಪೊರೇಷನ್ ಚುನಾವಣೆಯಲ್ಲಿ

ಬೆಂಗಳೂರು ಕಾರ್ಪೋರೇಷನ್ನಿನ ಚುನಾವಣೆಯ ಫಲಿತಾಂಶವು ನಿನ್ನೆ ಹೊರಬಿತ್ತು. ಒಟ್ಟಿನಲ್ಲಿ ಕಾರ್ಪೋರೇಷನ್ನಿನ ೭೦ ಚುನಾಯಿತ ಸ್ಥಾನಗಳ ಪೈಕಿ ಕಾಂಗ್ರೆಸ್ಸಿಗೆ ೪೫ ಸೋಷಿಯಲಿಸ್ಟರಿಗೆ ೫, ಸ್ವತಂತ್ರರಿಗೆ ೨೦ ಸ್ಥಾನಗಳು ಬಂದಿವೆ.

೧೪ ಜನರು ಠೇವಣಿ ಕಳೆದುಕೊಂಡಿರುವರು.

ಕನ್ನಡದ ಭವಿಷ್ಯ

ಕೈಲಾದಮಟ್ಟಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಿ, ನಮ್ಮ ಶಬ್ದಸ್ತೋಮವನ್ನು ಹೆಚ್ಚಿಸಬೇಕು. ಏಕೆಂದರೆ ಈಗ ಹೊಸ ಹೊಸ ಭಾವನೆಗಳು ಹುಟ್ಟುತ್ತಿರುವಲ್ಲಿ ಅವುಗಳನ್ನು ಯಥಾವತ್ತಾಗಿ ಮಂಡಿಸಲಿಕ್ಕೆ ಹಳೆಯ ಶಬ್ದ ಸಂಗ್ರಹ ಸಾಲದು.

ಲೋಕದ ಅಮೌಲ್ಯಕರವಾದ ಗ್ರಂಥಗಳಲ್ಲಿ ಶ್ರೇಷ್ಠವಾದದ್ದನ್ನು ಮಾತ್ರ ಕನ್ನಡದಲ್ಲಿ ಅನುವರ್ತಿಸಬೇಕು ಪಾತ್ರಗಳ ಸ್ಥಾನ ಇತ್ಯಾದಿ ಹೆಸರುಗಳನ್ನು ಮಾರ್ಪಡಿಸಬಾರದು

ನಮ್ಮ ಕನ್ನಡ ಸಾಹಿತ್ಯವೂ ಜಗತ್ತಿನ ಉತ್ತಮೋತ್ತಮ ಸಾಹಿತ್ಯಗಳ ಶ್ರೇಣಿಯಲ್ಲಿ ನಿಲ್ಲಬಲ್ಲದು, ಬಾಳಬಲ್ಲದು ಆ ಬಗ್ಗೆ ಎಲ್ಲಕ್ಕೂ ಹೇಳಲಾಗಿ ಬರಹದಲ್ಲಿ ಹುರುಳಿರಬೇಕು, ತಿರುಳಿರಬೇಕು, ಕರುತಿಳಿಯಬೇಕು, ಏಕಷ್ಟು ಮರಳೂ ಇರಬೇಕು. ತೊಟ್ಟು ತೊಟ್ಟಾಗಿ ಹುಟ್ಟಿದ ಹಳ್ಳಕೊಳ್ಳವಾಗಿ ಬೆಳೆದು ಕಾವೇರಿಯಂತೆ ಮಹಾನದಿಯಾಗಿ ವಿಪುಲವಾಗಿ ಹರಿದು ಬಂದ ನಮ್ಮ ಸಾಹಿತ್ಯ ಮತ್ತು ವಿಶಾಲವಾಗಿ ವಿಶ್ವಸಾಹಿತ್ಯದ ಮಹೋದಧಿಯಲ್ಲಿ ಆ ಸಾಹಿತ್ಯರತ್ನಾಕರದಲ್ಲಿ ಸುರಿಯಲಿ ಎಂಬುದೇ ನನ್ನ ಹೃದಯದ ಏಕಮಾತ್ರವಾದ ಉತ್ಕಂಠೆ ದೇವರಲ್ಲಿ ನನ್ನ ಏಕಮಾತ್ರವಾದ ಪ್ರಾರ್ಥನೆ

ಇಂದಿನ ಯುಗವೆಂದರೆ ಯಂತ್ರದ ಯುಗ, ವಿಜ್ಞಾನದ ಯುಗ, ವಿವಿಧ ಬಾಂಬುಗಳ ಯುಗ, ಈ ಯುಗದಲ್ಲಿ ನಾವು ಹತ್ತು ಮಂದಿಯ ಜತೆಯಲ್ಲಿ ಇರಬೇಕಲ್ಲದೆ, ಬೆಕ್ಕಿನ ಬಿಡಾರ ಬೇರೆಯಂತೆ ಲೋಕದಿಂದ ಪೃಥಕ್ಕಾಗಿ ವಿಂಗಡವಾಗಿ ಇದ್ದಿರಲಾರೆವು ಹಾಗೂ ಆ ಹತ್ತು ಮಂದಿ ವಿಜ್ಞಾನದಲ್ಲಿ ವಿಚಕ್ಷಣರಾಗಿದ್ದು ಅವರ ನಡುವೆ ನಾವು ಅವರಂತೆಯೇ ಸ್ವತಂತ್ರವಾಗಿ ತಲೆಯನ್ನು ಮೇಲಕ್ಕೆತ್ತಿ ಬಾಳಬೇಕಾದರೆ ನಮಗೆ ಸಾಹಿತ್ಯದ ನೆರವಾಗದು ವಿಜ್ಞಾನಬೇಕು. ವಿಜ್ಞಾನವಿಲ್ಲದೆ ಅನ್ಯಗತಿಯಿಲ್ಲ. ಈ ಕಾರಣ ನಮ್ಮಲ್ಲಿ ಸಾಹಿತ್ಯ ಹತ್ತುವವರು ಸಾಹಿತ್ಯವನ್ನು, ಹೇಗೆ ಹಾಗೆ ವಿಜ್ಞಾನ ಹತ್ತುವವರು ವಿಜ್ಞಾನವನ್ನೂ ಆಶ್ರಯಿಸಬೇಕು. ಹಾಗೆ ಎರಡೂ ಗಾಲಿಗಳಿಂದ ನಮ್ಮನ್ನು ಮುಂದುವರಿಸಬೇಕೆಂಬ ಶ್ರೀ ಮಂಜೇಶ್ವರದ ಗೋವಿಂದಪೈಗಳು ಬೊಂಬಾಯಿನಲ್ಲಿ ೨೪ ನೇ ತಾರೀಖು ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧಿವೇಶನದಲ್ಲಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಬೆರಿಕೆ ಕಾಫಿಪುಡಿ

ಕಾಫಿಪುಡಿಯ ಜೊತೆಗೆ ಈಚಲುಬೀಜ, ಹುಣಸೇಬೀಜಗಳ ಪುಡಿಯನ್ನು ಮಿಶ್ರಮಾಡಿ ಮಾರುತ್ತಲಿರುವುದರಿಂದ ವ್ಯಾಪಾರಕ್ಕೆ ಕುಂದಕಬರುವುದಲ್ಲದೆ ಜನರ ಆರೋಗ್ಯವೂ ಕೆಡುವುದರಿಂದ ಇದನ್ನು ಕೂಡಲೇ ತಡೆಗಟ್ಟಬೇಕೆಂದು ಚಿಕ್ಕಮಗಳೂರಿನಲ್ಲಿರುವ ಇಂಡಿಯನ್ ಕಾಫಿ ಪ್ಲಾಂಟರುಗಳ ಸಂಘದವರು ಮೈಸೂರು ಸರ್ಕಾರದ ಆರೋಗ್ಯ ಇಲಾಖಾಧಿಕಾರಿಗಳನ್ನೂ, ಇಂಡಿಯನ್ ಕಾಫಿ ಬೋರ್ಡಿನ ಅಧಿಕಾರಿಗಳನ್ನೂ ಕೋರಿದ್ದಾರೆ

ನೇಪಾಳ ಸುಧಾರಣೆ

ನೇಪಾಳದಲ್ಲಿ ಮಾಡಬೇಕೆಂದಿರುವ ರಾಜಕೀಯ ಸುಧಾರಣೆಗಳನ್ನು ಭಾರತ ಸರ್ಕಾರಕ್ಕೆ ಒಪ್ಪಿಸಲು ನೇಪಾಳದ ಸರ್ಕಾರ ಮತ್ತು ಶಾಸನ ಸಭೆಯ ಒಪ್ಪಿಗೆಯನ್ನು ಪಡೆದು ಒಂದು ಕರಡಪ್ರತಿಯನ್ನು ನೇಪಾಳದ ವಿದೇಶಾಂಗ ಶಾಖಾ ಡೈರೆಕ್ಟರ್ ಜನರಲ್‌ರವರು ನಿನ್ನೆ ದೆಹಲಿಗೆ ಬಂದಿರುವರು. ಇಂದು ಆ ಪ್ರತಿಯನ್ನು ಭಾರತ ಸರ್ಕಾರಕ್ಕೆ ಒಪ್ಪಿಸಿರುವರು ಇದರ ಜೊತೆಯಲ್ಲಿ ನೇಪಾಳದಲ್ಲಿರುವ ಭಾರತ ರಾಯಭಾರಿ ಶ್ರೀ ಸಿ ಪಿ. ಎನ್. ಸಿಂಗರವರೂ ಬಂದಿರುವರು

ರಾಜಧಾನಿಯ ಮೇಲೆ ಆಕ್ರಮಣ

ನೇಪಾಳದ ಖಾಟ್ಮಂಡುವಿನ ಮೇಲೆ ಕಾಂಗ್ರೆಸ್ ಸ್ವಯಂ ಸೇವಕರು ಪೂರ್ವ ಮತ್ತು ಪಶ್ಚಿಮ ಭಾಗಗಳ ಆಕ್ರಮಣ ನಡೆಸಲು ಪ್ರಯತ್ನಿಸುತ್ತಲಿರುವರೆಂದೂ ಈಗ ಅವರ ಅಧೀನದಲ್ಲಿ ೩೦ ಸಾವಿರ ಚದರ ಮೈಲಿ ವಿಸ್ತೀರ್ಣದ ರಾಜ್ಯವು ಅಧೀನವಾಗಿದೆಯೆಂದು ಹೇಳಲಾಗಿದೆ. ೫೦ ಸಾವಿರ ಜನಕ್ಕೆ ಮೇಲ್ಪಟ್ಟು ನೇಪಾಳದ ಪ್ರಸಿದ್ಧ ಕವಿ ಶ್ರೀ ಬಾಲಕೃಷ್ಣ ಶಂಷೇರ್ ಜಂಗ್ ಬಹದ್ದೂರ್‌ರವರ ಮುಖಂಡತ್ವದಲ್ಲಿ ರಾಣಾ ಅರಮನೆಯ ಮುಂದೆ ಖಾಟ್ಮಂಡುವಿನಲ್ಲಿ ಪ್ರದರ್ಶನ ನಡೆಸಿ ಮಹಾರಾಜರನ್ನು ಹಿಂದಕ್ಕೆ ಕರೆಸಿ, ರಾಣಾ ಸರ್ಕಾರವು ಕೊನೆಗಾಣಲಿ, ಎಂಬ ಘೋಷಣೆಗಳೂ ನಡೆದುವು. ಈ ಸಂದರ್ಭದಲ್ಲಿ ಮಾಜಿ ಪ್ರಧಾನಿಯ ಮೂವರು ಮಕ್ಕಳು ಮುಂತಾದವರ ದಸ್ತಗಿರಿಯಾಗಿದೆ ಎಂದು ತಿಳಿಯಬರುತ್ತದೆ.

ವಿಶ್ವಶಾಂತಿಗೆ ಚೀಣಾಭಾರತ ಸಹಕಾರ

ಭಾರತ ಮತ್ತು ಚೀಣ ದೇಶಗಳ ಜನರು ಪರಸ್ಪರ ಸಹಕಾರದಿಂದ ವರ್ತಿಸಿ, ವಿಶ್ವಶಾಂತಿ ರಕ್ಷಿಸಲು ಒಟ್ಟಿಗೆ ಶ್ರಮಿಸಿದರೆ ವಿಶ್ವರಾಜಕೀಯ ರಂಗದಲ್ಲಿ ಮಹತ್ತರ ಪರಿಣಾಮವಾಗುವುದೆಂದು ಡಾ|| ಶಾಮಪ್ರಸಾದ ಮುಖರ್ಜಿಯವರು ಶಾಂತಿನಿಕೇತನದಲ್ಲಿ ಚೀಣ ಭಾರತ ಸಂಸ್ಥೆಯ ವಾರ್ಷಿಕಾಧಿವೇಶನದ ಅಧ್ಯಕ್ಷತೆಯನ್ನು ವಹಿಸುತ್ತಾ ತಿಳಿಸಿರುವರು.

ಪಟೇಲರ ದಿನ

೨೯ ನೇ ತಾರೀಖು ಭಾರತಾದ್ಯಂತ ಪಟೇಲ ದಿನಾಚರಣೆಯನ್ನು ನಡೆಯಿಸಿ ಆದಿನ ಉಪವಾಸ ಸೂತ್ರಯಜ್ಞ ಸಾಮೂಹಿಕ ನೂಲುವುದು ಪ್ರಾರ್ಥನಾ ಸಭೆ ಮುಂತಾದುವನ್ನು ಮಾಡಬೇಕೆಂದು ಕಾಂಗ್ರೆಸ್ ಅಧ್ಯಕ್ಷರು ಕೋರಿದ್ದಾರೆ

ಚರ್ಚೆ ನಡೆಯುತ್ತಲಿದೆ

ಮೈಸೂರು ಪ್ರಾಂತ್ಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ಅವಿಶ್ವಾಸ ನಿರ್ಣಯದ ಬಗ್ಗೆ ಪರಿಶೀಲಿಸಲು ಸಭೆ ಸೇರಿ ಚರ್ಚೆಯಲ್ಲಿಯೇ ಮುಕ್ತಾಯವಾಯಿತು. ಇಂದೂ ಸಭೆ ನಡೆಯಲಿದೆ.

ನಿರ್ಣಯಕ್ಕೆ ಸಹಿ ಹಾಕಿರುವವರ ಸಭೆಯು ಶ್ರೀ. ಟಿ ಸಿದ್ದಲಿಂಗಯ್ಯನವರ ಮನೆಯಲ್ಲಿ ಇಂದು ಮಧ್ಯಾಹ್ನ ಸೇರಿದ

ಪತ್ರಿಕೆಗಳ ಜವಾಬ್ದಾರಿ

“ಕರ್ನಾಟಕದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಉದ್ಧಾರ ಕಾರ್ಯದಲ್ಲಿ ಕರ್ನಾಟಕದ ಪತ್ರಿಕೆಗಳು ಅತಿ ಗುರುತರವಾದ ಜವಾಬ್ದಾರಿಯನ್ನು ಹೊರಬೇಕು ಕರ್ನಾಟಕವಿನ್ನೂ ಚೂರು ಚೂರಾಗಿಯೇ ಇದೆ ನಮ್ಮ ಐಕ್ಯ ಕರ್ನಾಟಕ ಆದರ್ಶ ದೂರವಾಗಿಯೇ ಇದೆ. ಅಖಿಲಭಾರತ ರಾಜಕೀಯದಲ್ಲಿ ನಮಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನ ನಮಗಿನ್ನೂ ಕೊಡಲ್ಪಟ್ಟಿಲ್ಲ”

ಕರ್ನಾಟಕದ ಪತ್ರಿಕಾ ವೃತ್ತಿಗೆ ಉಜ್ವಲ ಭವಿಷ್ಯವಿದೆಯೆಂದು ಹೇಳಿ, ಸರಿಯಾದ ತರಬೇತು. ಅನುಭವಗಳನ್ನು ಪಡೆಯದೆಯೇ ವಿದೇಶಗಳಿಗೆ ಪತ್ರಿಕಾ ವೃತ್ತಿಯ ಅಧ್ಯಯನಕ್ಕಾಗಿ ಯುವಕರು ಹೋಗುತ್ತಿರುವುದರ ಕಡೆಗೆ ಸಭೆಯ ಗಮನವನ್ನು ಸೆಳೆದು, ಈ ನ್ಯೂನತೆಯಿಂದ ಅವರ ಅಧ್ಯಯನ ಸಾಫಲವಾಗದ ಪ್ರಕರಣಗಳೂ ತಮಗೆ ಗೊತ್ತೆಂದೂ ಹೇಳಿದರು

ಜನರಿಗೆ ಸರಿಯಾದ ಮಾರ್ಗದಲ್ಲಿ ಹೋಗಲು ಸ್ಫೂರ್ತಿಯಿತ್ತು, ದೇಶಕ್ಕೂ ಜನತೆಗೂ ಸೇವೆಯನ್ನು ಮಾಡಬೇಕಾದುದು ಎಲ್ಲಕ್ಕಿಂತಲೂ ಹೆಚ್ಚಾಗಿ ಕಷ್ಟದಿಂದ ಗಳಿಸಿದ ಸ್ವಾತಂತ್ರ್ಯ ಅಸ್ತವ್ಯಸ್ತವಾಗದಂತೆ ನೋಡಿಕೊಳ್ಳಲು ಪತ್ರಿಕೆಗಳು ಪ್ರಯತ್ನಿಸಬೇಕೆಂದು ಸಂಯುಕ್ತ ಕರ್ನಾಟಕ ಪತ್ರಿಕೆ ಸಂಪಾದಕರಾದ ಶ್ರೀ ಮೊಹರೆಯವರು ಒತ್ತಿ ಹೇಳಿದರು.

ಸಮ್ಮೇಳನವನ್ನು ಉದ್ಘಾಟಿಸಿದ ಕೇಂದ್ರ ವಾರ್ತಾ ಸಚಿವ ಶ್ರೀ ಆರ್. ದಿವಾಕರರು ನಿಜಾಂಶಗಳನ್ನು ತಿಳಿಸುವುದೂ, ಅವುಗಳ ಬಗ್ಗೆ ನಿರ್ಭಯ ಹಾಗೂ ನಿರ್ದಾಕ್ಷಿಣ್ಯ ಟೀಕೆಗಳನ್ನು ಘನತೆ ಹಾಗೂ ಬಿಗಿಯಿಂದ ಮಾಡಬೇಕಾದುದೂ ಪತ್ರಿಕಾ ಕರ್ತವ್ಯವೆಂದೂ ಹೇಳಿದರು

ಪತ್ರಿಕಾಕರ್ತರು ಜನತೆಗೆ ಅವರ ಭಾಷೆಯಲ್ಲಿಯೇ ಜ್ಞಾನವನ್ನು ಕೊಡಲು ಅಶಕ್ತರಾದಲ್ಲಿ ಪ್ರಜಾಪ್ರಭುತ್ವಕ್ಕೆ ಅರ್ಥವೇ ಇರದು” ಎಂದು ಅವರು ಹೇಳಿದರು.

ಸಮಾಚಾರ

ಮಂಗಳವಾರ ತಾರೀಖು ೨೬

ಮುಕ್ತಾಯವಾಗಲಿ

ಹತ್ತಾರುವರ್ಷಗಳಿಂದ ಮೈಸೂರು ಸಂಸ್ಥಾನವು ನಾನಾ ರೀತಿಯ ಪ್ರಗತಿಮಾರ್ಗವನ್ನನುಸರಿಸಿ ಭಾರತದಲ್ಲೆಲ್ಲಾ ಮುಂದುವರಿದ ಸಂಸ್ಥಾನವೆಂದೆನಿಸಿಕೊಂಡಿತು. ಆಂಗ್ಲರು ಕಾಲದಲ್ಲಿಯೇ ಗಳಿಸಿದ ಈ ಕೀರ್ತಿಯನ್ನು ಎತ್ತಿ ಹಿಡಿದು ಭಾರತದ ಇತರ ಭಾಗಗಳಿಗೆ 'ಮೇಲ್ಪಂಕ್ತಿಯಾಗಿರಿ. ಹಿಂದಿನ ಕೀರ್ತಿಗೆ ಕಳಂಕ ತರಬೇಡಿರೆಂದು ಸ್ವಾತಂತ್ರವನ್ನು ಗಳಿಸಿದ ಮೇಲೂ ನಮ್ಮ ಸಂಸ್ಥಾನಕ್ಕೆ ಬಂದ ಪ್ರಮುಖ ನಾಯಕರುಗಳೆಲ್ಲರೂ ಹಿತೋಕ್ತಿಯನ್ನು ಹೇಳುತ್ತಲೇ ಬಂದಿರುವರು. ಸ್ವಾತಂತ್ರ ಹೋರಾಟದಲ್ಲಿ ಎಲ್ಲಾ ಪ್ರಾಂತ್ಯಗಳಿಗಿಂತಲೂ ಮಿಗಿಲಾಗಿ ಹೋರಾಡಿ ಪ್ರಜಾಸರ್ಕಾರವನ್ನು ಸ್ಥಾಪನೆಮಾಡಿದ, ನಮ್ಮ ಕಾಂಗ್ರೆಸ್ ಸಂಸ್ಥೆಯು ಪ್ರಾಂತ್ಯದಲ್ಲಿ ಪ್ರಕೃತ ಅಧಿಕಾರಲೋಲುಪ್ತರಾದ ಕೆಲವರ ಕೈವಾಡದಿಂದ ಗಳಿಸಿದ ಕೀರ್ತಿಯನ್ನು ಅಳಿಸಿಕೊಳ್ಳುವ ಸ್ಥಿತಿ ಬಂದಿದೆಯೆಂದು ಪ್ರತಿಯೊಬ್ಬ ಪ್ರಜೆಯೂ ಖಿನ್ನಮನಸ್ಕನಾಗಿರುವನು

ಕಾಂಗ್ರೆಸ್ ಅಧಿಕಾರವನ್ನು ವಹಿಸಿಕೊಂಡ ಮೇಲೆ ಜನರ ಆಶೋತ್ತರಗಳಲ್ಲಿ ಯಾವವೂ ಈಡೇರಲಿಲ್ಲ. ಇದಕ್ಕೆ ಕಾರಣಗಳು ಅನೇಕ. ಪ್ರಕೃತದಲ್ಲಿ ಕಾಂಗ್ರೆಸ್ಸಿಗರಲ್ಲಿ ಭಿನ್ನತೆ ತಲೆದೋರಿ ಭಾರತದ ಅನೇಕ ಪ್ರಾಂತ್ಯಗಳಲ್ಲಿ ಸಂಸ್ಥೆಯ ವಿಷಯದಲ್ಲಿ ಜನರಿಗಿದ್ದ ಸದಭಿಪ್ರಾಯನೆಲ್ಲವೂ ಅಳಿದು ಹೋಗುತ್ತಲಿದೆ.

ನಮ್ಮ ಸಂಸ್ಥಾನಕ್ಕೂ ಈ ಗಾಳಿಯು ಬೀಸಿರುವುದು ಅತ್ಯಂತ ಶೋಚನೀಯ.

ಇತ್ತೀಚೆಗೆ ಕಾಂಗ್ರೆಸ್ ಸಂಸ್ಥೆಯ ಕೆಲವರು 'ತಮ್ಮ ನಾಯಕರ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿರುವರು. ಕಾರಣಗಳನ್ನು ಸ್ಥೂಲವಾಗಿ ತಿಳಿಸಿರುವರು—ಲಂಚರುಷುವತ್ತುಗಳು ಹೆಚ್ಚಿವೆ, ಅಧಿಕಾರ ಸಡಿಲವಾಗಿದೆ, ಕೋಮುವಾರು ಭಾವನೆ ಹೆಚ್ಚಾಗುತ್ತಲಿದೆ, ಇವು ಮುಖ್ಯವಾದುವು. ನಾಯಕರು ಮತ್ತು ಸದಸ್ಯರು ಕುಳಿತು ತಮ್ಮ ತಮ್ಮಲ್ಲಿಯೇ ಈ ವಿಷಯಗಳಲ್ಲಿ ವಿಶದವಾಗಿ ಚರ್ಚೆ ನಡೆಸಿ ದೇಶದ ಹಿತದೃಷ್ಟಿಯಿಂದ ತಮ್ಮಲ್ಲಿಯೇ ಇವುಗಳನ್ನು ಸರಿಮಾಡಿಸಿಕೊಳ್ಳುವುದು ಕಾಂಗ್ರೆಸ್ಸಿಗರ ಕರ್ತವ್ಯ. ಪ್ರಜಾಸರ್ಕಾರವು ಸ್ಥಾಪಿತವಾಗುವ ಮುನ್ನ ಸರ್ಕಾರಿ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಂತ್ರಿಗಳ ಪ್ರವೇಶವಿಲ್ಲದೆ ನಡೆಯಿಸುತ್ತಿರಲಿಲ್ಲವೇ ? ಅದೇ ರೀತಿ ಈಗ ನಡೆಸಿದರೆ, ಅಲ್ಲದೆ ಅಧಿಕಾರಿಗಳಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟುಕೊಂಡು ಕಾನೂನು ರೀತ್ಯಾ ಅವರು ಕೆಲಸ ನಡೆಸುವುದಿಲ್ಲವೇ ಎನ್ನುವುದನ್ನು ಮಂತ್ರಿಗಳು ಪರೀಕ್ಷಿಸುತ್ತ ಬಂದಲ್ಲಿ ಸರ್ಕಾರದಲ್ಲಿ ಬಿಗಿತಪ್ಪುವುದಿಲ್ಲ. ದಕ್ಷತೆಗೆ ಪುರಸ್ಕಾರ ಕೊಡುತ್ತಾ ಬಂದಲ್ಲಿ ಕೋಮು, ಜಾತಿ ಪ್ರಶ್ನೆಯೆಲ್ಲಿಯೇಳುವುದು ?

ಇವುಗಳನ್ನೆಲ್ಲಾ ಮಂತ್ರಿಗಳಾಗಲೀ ಅಥವಾ ಶಾಸನಸಭೆಯ ಕಾಂಗ್ರೆಸ್ ಪಕ್ಷದ ೭೫ ಸದಸ್ಯರಾಗಲೀ ಸರಿಪಡಿಸುವುದು ಕಷ್ಟವಲ್ಲ.

ನಾಳೆ ನಡೆಯುವ ಪಕ್ಷದ ಸಭೆಯಲ್ಲಿ ಮಂತ್ರಿವರ್ಗದವರು ಯಾವ ರೀತಿಯಲ್ಲಿ ಬದಲಾವಣೆಯಾಗಬೇಕೆಂಬುದನ್ನು ದೇಶದ ಹಿತದೃಷ್ಟಿಯಿಂದ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದು ಆದರಂತೆ ಮಂತ್ರಿಗಳು ಮುಂದೆ ನಡೆಯುವಂತೆ ಮಾಡಿದಲ್ಲಿ ದೇಶಕ್ಕೆ ಹಿತವೇ ವಿನಹ ಯಾವುದೋ ಒಂದು ಗುರಿಯಿಂದ ಮಂತ್ರಿಮಂಡಲವನ್ನು ಬದಲಾಯಿಸುತ್ತ ಹೋದಲ್ಲಿ ಜನಸಾಮಾನ್ಯಕ್ಕೆ ಏನೂ ಪ್ರಯೋಜನವಿಲ್ಲ. ನಮ್ಮ ಸಂಸ್ಥಾನದ ಕೀರ್ತಿಗೂ ಧಕ್ಕೆ ಬರುವುದಿಲ್ಲ. ಹೊರಗಿನವರ ಪ್ರವೇಶಕ್ಕೆ ಮಾರ್ಗವೂ ಇರುವುದಿಲ್ಲ.

ಸ್ವಾತಂತ್ರ್ಯ ಬಂದಮೇಲೆ ದೇಶದಲ್ಲಿ ಅನೇಕ ಕ್ರಾಂತಿಕಾರಕ ಪಕ್ಷಗಳು ಜನಿಸಿ ಆಂದೋಳನವನ್ನು ಮಾಡಲೆತ್ನಿಸುತ್ತಲಿರುವ ಈ ವೇಳೆಯಲ್ಲಿ ಕಾಂಗ್ರೆಸ್ಸಿನಲ್ಲಿಯೇ ಒಳಜಗಳಗಳು ಹುಟ್ಟಿ ಕಾಂಗ್ರೆಸ್ಸಿಗರೇ ಒಬ್ಬರೊಡನೊಬ್ಬರು ಹೋರಾಡಲು ತೊಡಗಿದರೆ ಈ ಕ್ರಾಂತಿಕಾರಕ ಪಕ್ಷಗಳ ಬೆಳವಣಿಗೆಗೆ ಸಹಕಾರಿಯಾಗುವುದು. ಇದನ್ನರಿತು ಈಗಿನ ಮೈಸೂರು ರಾಜಕೀಯ ಘಟನೆಗಳೆಲ್ಲವೂ ನಾಳೆಯೇ ಮುಕ್ತಾಯವಾಗಲಿ.

ಜೈ ಹಿಂದ್.

ಸಹಕಾರ ಸಮ್ಮೇಳನ

ಮೈಸೂರು ಡಿ. ೨೫

ಮೈಸೂರು ಜಿಲ್ಲಾ ತೃತೀಯ ಸಹಕಾರ ಸಮ್ಮೇಳನವು ನಿನ್ನೆ ಮೈಸೂರಿನ ಬಳಿ ಇರುವ ಆಲನಹಳ್ಳಿಯಲ್ಲಿ ಟಿ. ನರಸೀಪುರದ ಪೌರಸಭಾಧ್ಯಕ್ಷರೂ, ಸಹಕಾರಿಗಳೂ ಆದ ಶ್ರೀ. ಎಸ್. ಶ್ರೀನಿವಾಸಯ್ಯಂಗಾರ್‌ರವರು ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ಜಿಲ್ಲಾಧಿಕಾರಿ ಜನಾಬ್ ಮಹಮ್ಮದ್ ಅಹಮದ್‌ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಮಿತಿಯ ಅಧ್ಯಕ್ಷ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಸ್ವಾಗತ ಭಾಷಣ ಮಾಡಿದಮೇಲೆ ಕಾರ್ಯದರ್ಶಿ ಶ್ರೀ ಎಂ. ಎಸ್. ರಾಮಸ್ವಾಮಿಯವರು ವರದಿಯನ್ನು ಒಪ್ಪಿಸಿದರು.

ಜಿಲ್ಲಾಧಿಕಾರಿಗಳು ಸಮ್ಮೇಳನದ ಆರಂಭಗೊಳಿಸುತ್ತ ಮಾಡಿದ ಭಾಷಣದಲ್ಲಿ ಸಹಕಾರ ತತ್ವದ ಮಹತ್ವವನ್ನು ವಿವರಿಸಿ ಮೈಸೂರು ಜಿಲ್ಲೆಯಲ್ಲಿ ಸಹಕಾರ ಚಳುವಳಿಯ ಪ್ರಗತಿಯನ್ನು ವಿವರಿಸಿದರು.

ಸಮ್ಮೇಳನದ ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ ದಿವಂಗತ ಸರ್ದಾರ ಪಟೇಲರ ಗುಣಗಾನ ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುವ ನಿರ್ಣಯವನ್ನು ಮೌನದಿಂದೆದ್ದು ಅಂಗೀಕರಿಸಲಾಯಿತು.

ನಗರದಲ್ಲಿ ಪ್ರಮುಖ ಸಹಕಾರಿಗಳೂ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಶ್ರೀ. ಪಿ. ಗೋಪಾಲಕೃಷ್ಣ ಶೆಟ್ಟರು ಸಮ್ಮೇಳನದ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಪ್ರತಿನಿಧಿಗಳ ಗೌರವಾರ್ಥವಾಗಿ ಜಿಲ್ಲಾ ಸಹಕಾರ ಪ್ರಚಾರಸಮಿತಿಯವರು ರಾತ್ರಿ ಇಂದ್ರ ಭವನದಲ್ಲಿ ಭೋಜನವನ್ನೇರ್ಪಡಿಸಿದ್ದರು.

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯.೪೭ ಮೀಟರು

ಡಿಸೆಂಬರ್ ೨೭ ಬುಧವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಎನ್. ಚನ್ನಕೇಶವಯ್ಯ (ಸಂಗೀತ) ೭-೩೫ ಚಿತ್ರಗೀತೆ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಮಹಿಳಾವೀಣೆ. ೧-೫೫ ಹಿಂದೀ ಶಿಕ್ಷಣ ೨-೦ ವನಿತಾ ವಿಹಾರ ೨-೩೦ ಮುಕ್ತಾಯ.

ಸಂಜೆ ೫-೩೦ ಎನ್. ಚನ್ನಕೇಶವಯ್ಯ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಬಾಲಜಗತ್ ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ಹಿಂದೀ ಕಥೆ ೭-೧೫ ಗೀತಾಂಜಲಿ ೭-೩೦ ಕನ್ನಡದಲ್ಲಿ ಭಾಷಣ. ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಆರ್. ಕೆ. ರಾಮನಾಥನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು ೧೦-೦ ಮುಕ್ತಾಯ.

ಪ್ರಾಂತ್ಯ ಸಹಕಾರಸಮ್ಮೇಳನ

ಮೈಸೂರು ಪ್ರಾಂತ್ಯ ಸಹಕಾರ ಸಮ್ಮೇಳನವು ಇದೇ ಮಾಹೆ ೩೦ ನೇ ತಾರೀಖು ಕೇಂದ್ರಸರ್ಕಾರದ ವ್ಯವಸಾಯ ಇಲಾಖಾ ಕಾರ್ಯದರ್ಶಿಯವರಾದ ಶ್ರೀ. ಕೆ.ಎಲ್. ಪಂಜಾಬಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಸಹಕಾರ ಭವನದಲ್ಲಿ ನಡೆಯುವುದು.

೩೧ ನೇ ತಾರೀಖು ಕೋ-ಆಪರೇಟಿವ್ ಇನ್ಸ್ಟಿಟ್ಯೂಟಿನ ಸ್ಥಾಪಕಾಧ್ಯಕ್ಷರಾದ ದಿವಂಗತ ಶ್ರೀ. ಎಂ. ಶಾಮರಾವ್‌ರವರ ಭಾವಚಿತ್ರ ಅನಾವರಣವನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರೊಛಾನ್ಸಿಲರ್ ಶ್ರೀ. ಸಿ. ಆರ್. ರೆಡ್ಡಿಯವರು ನೆರವೇರಿಸುವರು.

ಹಾಸನದ ಪ್ರಸಿದ್ಧ ವಕೀಲರಾದ ಶ್ರೀ. ಎಸ್. ವೆಂಕಟೇಶಯ್ಯನವರು ಶ್ರೀ ಶಾಮರಾಯರ ವಿಷಯವಾಗಿ ಭಾಷಣಮಾಡುವರು.

ಅಪೇರಾ

20-12-50 ರಿಂದ ಪ್ರತಿದಿನ 3 ಆಟಗಳು

ಕನ್ನಿಯಿನ್ ಕಾದಲಿ

ಅಂಜಲಿದೇವಿ, ಮಾಧುರಿದೇವಿ, ಕೆ. ಆರ್.
ರಾಮಸ್ವಾಮಿ ಪಾತ್ರವಹಿಸಿರುವ

ಮಹೋನ್ನತ ತಮಿಳುಚಿತ್ರ

ಬಿಡಿ ಪತ್ರಿಕೆ 3 ಪೈ ಬಿಡಿ ಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೭ –೧೨—೧೯೫೦ನೇ ಬುಧವಾರ [ಸಂಚಿಕೆ ೯೭

ಚರ್ಚೆಗೆ ಅವಕಾಶವಿಲ್ಲ

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯಸಮಿತಿ ತೀರ್ಮಾನ

ಕಾಂಗ್ರೆಸ್ ಪಕ್ಷದ ನಾಯಕರ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸುವ ವಿಷಯದಲ್ಲಿ ಸಹಿ ಹಾಕಿರುವವರು ಅ|| ಭಾ|| ಕಾರ್ಯಕಾರಿ ಸಮಿತಿಯ ನಿರ್ಣಯದ ರೀತ್ಯಾ ನಡೆದಿಲ್ಲವೆಂದು ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನವರು ಬರೆದಿರುವುದರಿಂದ, ಅವಿಶ್ವಾಸ ಸೂಚನಾ ಪತ್ರ ಕಳಿಸಿರುವುದರಿಂದ ಉಂಟಾಗಿರುವ ಪರಿಣಾಮವನ್ನು ಮಾತ್ರ ಕುರಿತು ಸಾಮಾನ್ಯ ಚರ್ಚೆ ನಡೆಸಬೇಕೆಂದು ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ ತೀರ್ಮಾನಿಸಿರುವುದಾಗಿ ವರದಿಯಾಗಿದೆ.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಇಂದು ಮಧ್ಯಾಹ್ನ ೨ ಗಂಟೆಗೆ ಕುಮಾರಾಪಾರ್ಕಿನಲ್ಲಿ ಸೇರಿದೆ.

ಲಾಸಾ ಭಾರತಕ್ಕೆ

ಟಿಬೆಟ್ಟಿನ ಲಾಮಾರವರು ಭಾರತಕ್ಕೆ ಬರುವ ಉದ್ದೇಶದಿಂದ ಲಾಸಾವನ್ನು ೨೦೦ ಮಂದಿ ಸಂಗಡಿಗರೊಡನೆ ಬಿಟ್ಟಿರುವುದಾಗಿ ವರದಿ ಬಂದಿದೆ.

ಕ್ರಿಸ್‌ಮಸ್ ವಿರಾಮ ರದ್ದು

ಅಧ್ಯಕ್ಷ ಟ್ರೂಮನ್ನರು ತಮ್ಮ ಕ್ರಿಸ್‌ಮಸ್ ವಿರಾಮವನ್ನು ರದ್ದುಗೊಳಿಸಿ ತಮ್ಮ ಸ್ವಗ್ರಾಮದಿಂದ ವಾಷಿಂಗ್‌ಟನ್ನಿಗೆ ಹಿಂತಿರುಗಿರುವರು. ಕೊರಿಯ ಯುದ್ಧದ ಪರಿಸ್ಥಿತಿ, ಯುರೋಪಿನ ರಕ್ಷಣಾಕ್ರಮ ಮುಂತಾದ ವಿಷಯದಲ್ಲಿ ತ್ವರಿತವಾಗಿ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿರುವುದರಿಂದ ತಮ್ಮ ವಿರಾಮವನ್ನು ರದ್ದುಗೊಳಿಸಿರುವುದಾಗಿ ತಿಳಿಯಬರುತ್ತದೆ.

ಕೋ-ಆಪರೇಟಿವ್ ಕಾಲೇಜು

ಪಾಕಿಸ್ಥಾನ ಸರ್ಕಾರವು ಪೂರ್ವ ಪಶ್ಚಿಮ ಪಾಕೀಸ್ಥಾನಗಳಲ್ಲಿ ಕೋ-ಆಪರೇಟಿವ್ ಕಾಲೇಜುಗಳನ್ನು ಸ್ಥಾಪಿಸಿ ಸಹಕಾರ ಶಿಕ್ಷಣಕೊಡುವ ಏರ್ಪಾಡನ್ನು ಮಾಡುವುದಾಗಿ ನಿನ್ನೆ ನಡೆದ ಅಂತರರಾಷ್ಟ್ರೀಯ ಸಹಕಾರ ಸಮ್ಮೇಳನದಲ್ಲಿ ಪಾಕಿಸ್ಥಾನ ಸಹಕಾರ ಮಂತ್ರಿಯು ಹೇಳಿರುವರು.

ಪ್ರಸಾರ ಭಾಷಣ

ಡಿಸೆಂಬರ್ ೩೧ ನೇ ತಾರೀಖು, ಲಂಡನ್ನಿಗೆ ಹೊರಡುವ ಮುನ್ನ ಪ್ರಧಾನಿ ನೆಹರೂರವರು ದೇಶಕ್ಕೆ ಸಂದೇಶವನ್ನೊಳಗೊಂಡ ಪ್ರಸಾರ ಭಾಷಣ ಮಾಡುವರು.

ಭಾರತದ ಆಯವ್ಯಯ

ಭಾರತ ಸರ್ಕಾರದ ಮತ್ತು ಎಲ್ಲಾ ಪ್ರಾಂತ್ಯ ಸರ್ಕಾರಗಳ ೧೯೫೦-೫೧ ರ ಆದಾಯವು ೭೧೧·೫ ಕೋಟಿ ರೂಪಾಯಿಗಳು. ವೆಚ್ಚವು ೭೧೩ ಕೋಟಿರೂಪಾಯಿಗಳು. ಸ್ಥಳೀಯ ಸಂಸ್ಥೆಗಳಾದ ಪೌರಸಭೆಗಳ, ಜಿಲ್ಲಾ ಬೋರ್ಡುಗಳು, ಮುಂತಾದವುಗಳ ಆಯ ವ್ಯಯವನ್ನು ಸೇರಿಸದೆ ಸರ್ಕಾರಗಳ ಆಯವ್ಯಯವನ್ನು ಕ್ರೋಡೀಕರಿಸಿರುವುದು ಇದೇ ಮೊದಲನೇ ಬಾರಿ. ರಾಷ್ಟ್ರ ರಕ್ಷಣೆಗಾಗಿ ೧೬೮ ಕೋಟಿ ರೂಪಾಯಿಗಳ ವೆಚ್ಚವನ್ನು ತೋರಿಸಲಾಗಿದೆ

ಸಕ್ಕರೆ ಮಾರಾಟದ ಬಗ್ಗೆ ಪ್ರಕಟನೆ

ಸಕ್ಕರೆ ಮಾರಾಟದ ಬಗ್ಗೆ ಕೇಂದ್ರ ಸರ್ಕಾರವು ಒಂದು ಪ್ರಕಟನೆಯನ್ನು ಹೊರಡಿಸಿ, ಯಾವ ಸಕ್ಕರೆ ಕಾರ್ಖಾನೆಯೇ ಆಗಲಿ ಸರ್ಕಾರವು ಗೊತ್ತುಮಾಡಿರುವ ನಿರ್ದಿಷ್ಟ ಉತ್ಪತ್ತಿ ಪ್ರಮಾಣಕ್ಕಿಂತ ಹೆಚ್ಚಿಗೆ ತಯಾರಿಸಿದಲ್ಲಿ ಅದನ್ನು ಮಾತ್ರ ಸರ್ಕಾರದ ಅನುಮತಿ ಪಡೆದು ಯಾರಿಗಾದರೂ ಮಾರಬಹುದು. ನಿಗದಿ ಮಾಡಿರುವುದಕ್ಕಿಂತ ಕಡಮೆ ತಯಾರಿಸುವ ಕಾರ್ಖಾನೆಗಳು ಸ್ವತಂತ್ರವಾಗಿ ಮಾರಾಟ ಮಾಡಲು ಸರ್ಕಾರ ಅನುಮತಿ ಕೊಡುವುದಿಲ್ಲ. ಎಲ್ಲಾ ಪ್ರಾಂತ್ಯಗಳಲ್ಲಿ ಈಗಿರುವಂತೆಯೇ ಸಕ್ಕರೆ ಪಡಿತರ ಪದ್ಧತಿಯು ಮುಂದುವರಿಯುವುದು. ಕೇಂದ್ರ ಸರ್ಕಾರವು ಶೇಖರಿಸುವ ೧೦ ಲಕ್ಷ ಟನ್ ಸಕ್ಕರೆಯನ್ನು ಎಲ್ಲಾ ಪ್ರಾಂತ್ಯಗಳಿಗೂ ನಿಗದಿಮಾಡಿ ಹಂಚುವುದು ಆ ಸಕ್ಕರೆಯು ರೇಷನ್ ಡಿಪೋಗಳಲ್ಲಿಯೇ ಸರ್ಕಾರ ನಿಗದಿಮಾಡಿದ ಬೆಲೆಗೆ ಮಾರಲಾಗುವುದು. ಒಂದು ಪ್ರಾಂತ್ಯದಿಂದ ಮತ್ತೊಂದು ಸ್ಥಳಕ್ಕೆ ಸಕ್ಕರೆ ಕಳುಹಿಸಲು ಪ್ರತಿಬಂಧಕವಿಲ್ಲ. ಆದರೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಕಳುಹಿಸಲು ಕೇಂದ್ರದ ಅನುಮತಿಬೇಕು ಎಂದು ತಿಳಿಸಿದೆ.

ಚಿನ್ನ ರವಾನೆಗೆ ರಹದಾರಿ

ಪೂರ್ವ ಪಶ್ಚಿಮ ಪಾಕಿಸ್ಥಾನಗಳಿಗೆ ಚಿನ್ನವನ್ನು ಕೊಂಡೊಯ್ಯಲು ಪಾಕಿಸ್ಥಾನ ರಿಸರ್ವ್ ಬ್ಯಾಂಕಿನಿಂದ ರಹದಾರಿಯನ್ನು ಪಡೆಯಬೇಕೆಂದು ಪಾಕಿಸ್ಥಾನ ಸರ್ಕಾರವು ಆಜ್ಞೆಮಾಡಿದೆ.

ರಾಜೀನಾಮೆ

ನೇಪಾಳದಲ್ಲಿ ರಾಣಾ ಮನೆತನಕ್ಕೆ ಸೇರಿದ ೭೦ ಜನ ಸರ್ಕಾರದ ಉನ್ನತಾಧಿಕಾರಿಗಳೆಲ್ಲರೂ ರಾಣಾ ಸರ್ಕಾರವನ್ನು ಪ್ರತಿಭಟಿಸಿ ತಮ್ಮ ಹುದ್ದೆಗಳಿಗೆ ರಾಜೀನಾಮೆಯನ್ನಿತ್ತಿರುವರು. ಇವರಲ್ಲಿ ಹೆಚ್ಚಿಗೆ ಸಂಖ್ಯೆಯು ನೇಪಾಳ ಸೈನ್ಯದಲ್ಲಿರುವವರಾಗಿದ್ದಾರೆ.

ನೇಪಾಳ ಮುಖ್ಯ ಮಂತ್ರಿಯು ಅರಮನೆಯಲ್ಲಿ ೧೩೦ ಅಧಿಕಾರಿಗಳ ಸಭೆ ನಡೆದಾಗ ಮುಖ್ಯ ಮಂತ್ರಿಯು ದೇಶದಲ್ಲಿ ತರಬೇಕೆಂದಿರುವ ಸುಧಾರಣೆ ವಿಷಯಗಳನ್ನು ಚರ್ಚಿಸಿ ಅದರ ಪ್ರತಿಗಳನ್ನು ಅವರಿಗೆ ಹಂಚಲಾಯಿತು. ಈ ಸುಧಾರಣೆಗಳು ಸಮರ್ಪಕವಾಗಿಲ್ಲವಾಗಿ ೭೦ ಜನರ ಇದನ್ನು ಹರಿದು ಬಿಸಾಟು ತಮ್ಮ ಹುದ್ದೆಗಳಿಗೆ ರಾಜಿನಾಮೆಯನ್ನಿತ್ತಿರುವರು ಅಲ್ಲದೆ ತಮ್ಮ ದೊರೆಯೊಡನೆ ಹೋರಾಡಲು ಅವರು ಇಷ್ಟಪಡುವದಿಲ್ಲವೆಂದೂ ಕೂಡಲೇ ರಾಜಾ ತ್ರಿಭುವನ ವಿಕ್ರಮರನ್ನು ಕರೆಸಿಕೊಳ್ಳಬೇಕೆಂದೂ ಅವರು ತಮ್ಮ ರಾಜೀನಾಮೆಯಲ್ಲಿ ತಿಳಿಸಿರುವರೆಂದು ವರದಿಯಾಗಿದೆ.

ಸರ್ಕಾರಿ ಸೈನ್ಯ ಕಾಂಗ್ರೆಸ್ ಸೇರಿದುವು

ನೇಪಾಳ ಸರ್ಕಾರವು ಕಾಂಗ್ರೆಸ್ ಸ್ವಯಂಸೇವಕರ ವಿರೋಧವಾಗಿ ಹೋರಾಡಲು ಕಳುಹಿಸುತ್ತಲಿರುವ ಸರ್ಕಾರಿ ಸೈನ್ಯವೆಲ್ಲವೂ ತಮ್ಮ ಮದ್ದು ಗುಂಡುಗಳೊಡನೆ ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತಲಿರುವರೆಂದು ತಿಳಿಯಬಂದಿದೆ.

ರಜಾ

ಸೀನಿಯರ್ ಡಿ. ಐ. ಜಿ ಯವರಾದ ಶ್ರೀ ಯು. ಕೆ. ಸೋಮಪ್ಪನವರ ರಜಾವನ್ನು ಡಿಸೆಂಬರ್ ಒಂದರಿಂದ ಮತ್ತೆರಡು ತಿಂಗಳು ಹೆಚ್ಚಿಸಲಾಗಿದೆ.

ವರ್ಗ

ಮಂಡ್ಯ ಜಿಲ್ಲಾ ಟ್ರಜರಿ ಆಫೀಸರಾದ ಶ್ರೀ ಡಿ. ಬಸವರಾಜೇ ಅರಸರವರನ್ನು ಮಂಡ್ಯ ಸಬ್‌ಡಿವಿಜನ್ ಆಫೀಸರಾಗಿಯೂ, ರಜದಮೇಲಿರುವ ಜನಾಬ್ ಅಬ್ದುಲ್ ಖಾಸೀಮ್‌ರವರನ್ನು ಮಂಡ್ಯ ಜಿಲ್ಲಾ ಟ್ರೆಜರಿ ಆಫೀಸರಾಗಿ ವರ್ಗಮಾಡಲಾಗಿದೆ.

ಅಧಿಕ ರೇಷನ್ ಇಲ್ಲ

ಇಂದಿನ ಆಹಾರ ಪರಿಸ್ಥಿತಿಯಲ್ಲಿ ಸಾಮಾನ್ಯ ಪಂಚಾಣಿಕೆಯು ಕಷ್ಟವಾಗಿರುವುದರಿಂದ ಮುಂದಿನ ತಿಂಗಳಿನಲ್ಲಿ ಹಾಸನದಲ್ಲಿ ನಡೆಯುವ ದನಗಳ ಪ್ರದರ್ಶನಕ್ಕೆ ಹೋಗುವವರಿಗೆ ರೇಷನ್ ಪದಾರ್ಥಗಳನ್ನು ಕೊಡಲು ಸಾಧ್ಯವಿಲ್ಲವೆಂದು ಸರ್ಕಾರಿ ಪ್ರಕಟನೆಯು ತಿಳಿಸುತ್ತದೆ.

ನೆಹರೂರವರ ಹಿತೋಕ್ತಿ

ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರನ್ನುದ್ದೇಶಿಸಿ ಪ್ರಧಾನಿ ನೆಹರೂರವರು ಜನವರಿ ೧ ನೇ ತಾರೀಖು ಬೆಳಿಗ್ಗೆ ೭-೩೦ ಗಂಟೆಗೆ ಭಾಷಣ ಮಾಡುವರು. ಪ್ರಧಾನಿ ನೆಹರೂರವರ ಜೊತೆಯಲ್ಲಿ ಜನವರಿ ೨ ನೇ ತಾ|| ಅ|| ಭಾ|| ಕಾಂಗ್ರೆಸ್ [illegible] ಕಾರ್ಯದರ್ಶಿ ಶ್ರೀ ಮೋಹನಲಾಲ್ ಗೌತಮರವರೂ ಬೆಂಗಳೂರಿಗೆ ಬರುವರು.

ಜ|| ಕಾರಿಯಪ್ಪ

ನಾಳೆ ಬೆಂಗಳೂರಿನಲ್ಲಿ ನಡೆಯಲಿರುವ ಸೇವಾದಳ ಸಮಾರಂಭದಲ್ಲಿ ಭಾಗವಹಿಸಲು ಭಾರತದಂಡ ನಾಯಕ ಜ|| ಕಾರಿಯಪ್ಪನವರು ಬರುವರು.

ಮದರಾಸ್ ಪತ್ರಿಕೆಗಳಿಗೆ ಮಾರಾಟ ತೆರಿಗೆ ಇಲ್ಲ

೧೯೫೧ ನೆಯ ಜನವರಿ ತಾ|| ೧ ರಿಂದ ಮದರಾಸಿನ ವರ್ತಮಾನ ಪತ್ರಿಕೆಗಳಿಗೆ ಮಾರಾಟದ ತೆರಿಗೆ ವಿಧಿಸುವುದನ್ನು ನಿಲ್ಲಿಸಲು ಸರ್ಕಾರ ಆಜ್ಞೆ ಮಾಡುತ್ತದೆಂದು ಅಧಿಕಾರಯುತವಾಗಿ ತಿಳಿಯುತ್ತದೆ. ಇದರಿಂದ ವರ್ಷಕ್ಕೆ ೨ ಲಕ್ಷ ರೂಪಾಯಿಗಳು ನಷ್ಟವಾಗುತ್ತದೆ

ಸಮಾಚಾರ

ಬುಧವಾರ ತಾರೀಖು ೨೭.

ಎಚ್ಚೆತ್ತುಕೊಳ್ಳಬೇಕು

ಬೆಂಗಳೂರು ಕಾರ್ಪೋರೇಷನ್ನಿನ ಚುನಾವಣೆಗಳು ನಡೆದು ಕಾಂಗ್ರೆಸ್ಸಿಗರು ಬಹುಮತದಲ್ಲಿ ಸ್ಥಾನಗಳನ್ನು ಗಳಿಸಿರುವರು. ವಯಸ್ಕರ ಪದ್ಧತಿಯ ಪ್ರಕಾರ ಚುನಾವಣೆ ನಡೆದಿರುವುದು ಭಾರತದಲ್ಲಿ ಇದೇ ಪ್ರಥಮ. ಚುನಾವಣೆ ವಿಷಯದಲ್ಲಿ ವಿಶೇಷವಾಗಿ ಪ್ರಚಾರವು ನಡೆದು, ಜನರಿಗೆ ಅನೇಕ ರೀತಿಯಾಗಿ ತಿಳುವಳಿಕೆ ಕೊಟ್ಟಿದ್ದರೂ ಮತದಾರರಲ್ಲಿ ಕೇವಲ ೫೦ ರಷ್ಟು ಮತದಾನದಲ್ಲಿ ಭಾಗವಹಿಸಿರುವರು. ನಮ್ಮ ಜನರಿಗೆ ತಮ್ಮ ಮತವನ್ನು ಛಲಾಯಿಸುವುದು ಹಕ್ಕು, ಕರ್ತವ್ಯವೆಂದು ಇನ್ನೂ ಸಂಪೂರ್ಣ ತಿಳುವಳಿಕೆ ಬಂದಿಲ್ಲದಿರುವುದೇ ಎಲ್ಲಾ ಮತದಾರರೂ ಇದರಲ್ಲಿ ಭಾಗವಹಿಸದಿರುವುದಕ್ಕೆ ಕಾರಣ. ಈ ವಿಷಯದಲ್ಲಿ ಉಮೇದುವಾರರು, ಪಕ್ಷದವರು ಮತ್ತು ಸರ್ಕಾರವು ಪ್ರಜೆಗಳಿಗೆ ತಿಳುವಳಿಕೆಯನ್ನು ಹೆಚ್ಚಾಗಿ ಕೊಡಬೇಕಾಗಿದೆ. ಮುಖ್ಯಪಟ್ಟಣವಾದ ಬೆಂಗಳೂರು ನಗರದಲ್ಲಿಯೇ ಈ ರೀತಿಯಾದಲ್ಲಿ ಮಹಾಚುನಾವಣೆಗಳಾಗುವ ಸಮಯದಲ್ಲಿ ಗ್ರಾಮಾಂತರಗಳಲ್ಲಿ ಎಲ್ಲಾ ಜನರು ಓಟುಮಾಡಲು ತಮ್ಮ ಹಕ್ಕನ್ನು ಛಲಾಯಿಸುವರೇ ಎಂಬ ಸಂಶಯ ತಲೆದೋರುತ್ತದೆ. ಇದಕ್ಕೆ ಆಸ್ಪದ ಕೊಡದೆ ಈಗಿನಿಂದಲೇ ಜನರಿಗೆ ತಕ್ಕ ತಿಳುವಳಿಕೆಯನ್ನು ಕೊಡುವುದು ಅತ್ಯವಶ್ಯಕ.

ಮತ್ತೊಂದು ಗಮನಾರ್ಹ ವಿಷಯವೇನೆಂದರೆ ಕಾಂಗ್ರೆಸ್ ಸಂಸ್ಥೆಗೆ ಕಾರ್ಪೋರೇಷನ್ನಿನ ಚುನಾಯಿತವಾದ ೭೦ ಸ್ಥಾನಗಳಲ್ಲಿ ೪೫ ಸ್ಥಾನಗಳು ಮಾತ್ರ ದೊರೆತಿವೆ. ಅಂದರೆ ಶೇ. ೬೪ ರಷ್ಟು. ಪಕ್ಷಕ್ಕೆ ಬಹುಮತವಿದ್ದಾಗ್ಯೂ ಇತ್ತೀಚೆಗೆ ಕಾಂಗ್ರೆಸ್ಸಿಗೆ ಹೆಚ್ಚಿಗೆ ಮತ ಬರುವುದು ಕಡಮೆಯಾಗುತ್ತ ಬಂದಿದೆ. ಹಿಂದೆ ಮೈಸೂರುನಗರ ಪೌರಸಭೆಯ ಚುನಾವಣೆಯಲ್ಲಿ ೨೪ ಸ್ಥಾನಗಳಿಗೆ ಕೇವಲ ೧೩ ಸ್ಥಾನಗಳನ್ನು ಕಾಂಗ್ರೆಸ್ಸಿನವರು ಪಡೆದರು. ಅಂದರೆ ಕಾಂಗ್ರೆಸ್ಸಿಗೆ ಜನರ ಬೆಂಬಲವು ಕಡಮೆಯಾಗುತ್ತ ಬರುತ್ತಲಿದೆ. ಪ್ರಜಾಸರ್ಕಾರವು ಸ್ಥಾಪಿತವಾದ ಮೇಲೆ ಕಾಂಗ್ರೆಸ್ಸಿನವರಲ್ಲಿ ಅಧಿಕಾರಲಾಲಸೆ, ಸ್ವಕಾರ್ಯ ಧುರಂಧರತೆ, ಕೋಮುವಾರು ಭಾವನೆ ಮುಂತಾದುವು ವಿಶೇಷವಾಗಿ ಸಂಸ್ಥೆಯೇ ಕಲುಶಿತವಾಗುತ್ತಲಿದೆ. ಕಾಂಗ್ರೆಸ್ಸಿನಲ್ಲಿ ರಚನಾತ್ಮಕ ಕಾರ್ಯಗಳಾವುವೂ ನಡೆಯುತ್ತಲಿಲ್ಲ. ಮಹಾತ್ಮಾಜಿಯವರಿಗೆ ಅತ್ಯಂತ ಪ್ರಿಯವಾದ ಖಾದಿಯ ಬೆಳವಳಿಗೆಯು ಸಹ ತಟಸ್ಥವಾಗಿದೆ. ಸ್ವತಂತ್ರಗಳಿಸಿದ ಕಾರ್ಯವು ಮುಗಿದಿರುವುದರಿಂದ ಕಾಂಗ್ರೆಸ್ ಸಂಸ್ಥೆಯು ರಚನಾತ್ಮಕ ಕಾರ್ಯದಲ್ಲಿ ತೊಡಗಿ ಜನರ ಸುಖಸಂಪತ್ತಿಗೆ ನೆರವಾಗಿ ಜನರ ವಿಶ್ವಾಸವನ್ನು ಗಣಿಸಿದರೆ ಎಲ್ಲಾ ಚುನಾವಣೆ ಮತ್ತು ಇತರ ಕಾರ್ಯಗಳಲ್ಲಿ ಕಾಂಗ್ರೆಸ್ಸಿಗೆ ಬಹುಮತವು ದೊರೆಯುವುದು. ಈಗಿರುವ ರೀತಿಯಲ್ಲಿಯೇ ಮುಂದುವರಿದರೆ ಕಾಂಗ್ರೆಸ್ ಸಂಸ್ಥೆಯು ಜನರ ಬೆಂಬಲವನ್ನು ಸಂಪೂರ್ಣವಾಗಿ ಕಳೆದುಕೊಂಡು ಸಂಸ್ಥೆಯು ಅದೃಶವಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈಗಲೇ ಎಚ್ಚೆತ್ತುಕೊಳ್ಳುವುದು ಅತ್ಯವಶ್ಯಕ.

ಮಾತೃಭಾಷೆಯೇ ಮಾಧ್ಯಮವಾಗಬೇಕು

ಈಗಿನ ವಿದ್ಯಾಭ್ಯಾಸಕ್ರಮವು ಸಂಪೂರ್ಣವಾಗಿ ಮಾರ್ಪಾಟಾಗಬೇಕು. ಆಂಗ್ಲೇಯರ ಈ ವಿದ್ಯಾಭ್ಯಾಸಕ್ರಮವು ಸರ್ಕಾರೀ ಅಥವಾ ಖಾಸಗೀ ಕೆಲಸಕ್ಕೆ ಉಪಯುಕ್ತವಾಗುವ ರೀತಿಯಲ್ಲಿತ್ತೇ ವಿನಹ ಜ್ಞಾನಾರ್ಜನೆಗಾಗಿರಲಿಲ್ಲ. ಈ ವಿದ್ಯಾಭ್ಯಾಸಕ್ರಮವನ್ನು ಮಾರ್ಪಾಟು ಮಾಡಿ ಮಾತೃಭಾಷೆಯೇ ಮಾಧ್ಯಮವಾಗುವಂತೆ ಏರ್ಪಡಿಸಬೇಕು ಎಂದು ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರಪ್ರಸಾದರವರು ನಾಗಪುರ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಭಾಷಣದಲ್ಲಿ ಹೇಳಿದರು.

ಶ್ರೀ ಸಿ. ಆರ್. ಗೆ ಗೃಹಶಾಖೆ

ದಿವಂಗತ ಸರದಾರ್ ಪಟೇಲರ ಆಡಳಿತದಲ್ಲಿದ್ದ ಗೃಹಶಾಖೆಯನ್ನು ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಸಂಸ್ಥಾನ ಶಾಖೆಯನ್ನು ಶ್ರೀ ಎನ್. ಜಿ ಗೋಪಾಲಸ್ವಾಮಯ್ಯಂಗಾರ್‌ರವರಿಗೆ ವಹಿಸಲಾಗಿದೆ.

ಭೇಟಿ

ನೇಪಾಳದ ವಿದೇಶಾಂಗ ಶಾಖಾ ಡೈರೆಕ್ಟರ್ ಜನರಲ್‌ರವರು ನಿನ್ನೆ ಭಾರತ ಪ್ರಧಾನಿ ಪಂಡಿತ ನೆಹರೂರವರನ್ನು ಭೇಟಿಮಾಡಿ ನೇಪಾಳದಲ್ಲಿ ಮಾಡಬೇಕೆಂದಿರುವ ಸುಧಾರಣೆಗಳ ವಿಷಯವಾಗಿ ಚರ್ಚಿಸಿದರೆಂದು ತಿಳಿಯಬರುತ್ತದೆ.

೩೮ ನೇ ಅಕ್ಷಾಂಶ ದಾಟಿದೆ

ಚೈನಾ ಮತ್ತು ಉತ್ತರ ಕೊರಿಯ ಪಡೆಗಳು ೩೮ ನೇ ಅಕ್ಷಾಂಶವನ್ನು ದಾಟಿ ದಕ್ಷಿಣ ಕೊರಿಯ ಪ್ರವೇಶಿಸಿರುವುದಾಗಿ ಅಮೇರಿಕಾ ಪಡೆಗಳು ಅಧಿಕೃತವಾಗಿ ಹೇಳಿವೆ.

ಹಿಂದೂಸ್ಥಾನ ವಿಮಾನ ಸಂಸ್ಥೆ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ ವಿಮಾನ ಕಾರ್ಖಾನೆಯನ್ನು ಕೈಗಾರಿಕಾ ಮಂತ್ರಿಗಳ ಆಡಳಿತದಿಂದ ರಕ್ಷಣಾ ಮಂತ್ರಿಗಳ ಆಡಳಿತಕ್ಕೆ ಕೇಂದ್ರ ಸರ್ಕಾರವು ಬದಲಾಯಿಸಿದೆ.

ರಣಜಿತ್
15-12-50 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾನವರ
★ ಸರ್ಗಮ್ ★
(ಹಿಂದಿ)
ಪಾತ್ರ: ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ.

ಬೆಳಗಿನ ಪ್ರದರ್ಶನ 22-12-50 ರಿಂದ
ಶಾಂತರಾಂ ಪಾತ್ರವಹಿಸಿರುವ
ಡಾ|| ಕೋಟ್‌ನೀಸ್

ರೇಡಿಯೋ

ಎ. ಐ. ಆರ್. ಮೈಸೂರು
೩೧೦ ಮೀಟರು ೪೯.೪೬ ಮೀಟರು
ಡಿಸೆಂಬರ್ ೨೮ ಗುರುವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಎಲ್. ಶೇಷಗಿರಿರಾವ್ (ವೀಣೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಕ್ಲಾರಿಯೋನೆಟ್. ೧-೪೫ ಹಿಂದೀ ಶಿಕ್ಷಣ ೨-೦ ತಾರಾವಾಹಿನಿ (ರಿ) ೨-೩೦ ಮುಕ್ತಾಯ.

ಸಂಜೆ ೫-೩೦ ಎಲ್. ಶೇಷಗಿರಿರಾವ್. (ವೀಣೆ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಪಾಶ್ಚಿಮಾತ್ಯ ಸಂಗೀತ (ರಿ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ (ಹಿಂದಿ) ೭-೫ ರಸನಿಮಿಷ (ರಿ) ೭-೧೫ ಜಿ. ಆರ್. ದಾಸಪ್ಪ (ಸಂಗೀತ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಮಲ್ಲಿಕಾರ್ಜುನಪ್ಪ (ವಚನಗಾನ) ೮-೧೫ ಇಂಗ್ಲೀಷಿನಲ್ಲಿ ಭಾಷಣ. ೮-೩೦ ಜಿ. ಆರ್. ದಾಸಪ್ಪ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಕಣ್ಣುಮುಚ್ಚಾಲೆ ೧೦-೦ ಮುಕ್ತಾಯ.

ಅಪೇರಾ
27-12-50 ರಿಂದ ಪ್ರತಿದಿನ 3 ಆಟಗಳು
ಸಂಸಾರ ನಾರದ
ಕೃಷ್ಣಮೂರ್ತಿ, ಸುಬ್ಬರಾವ್, ಸರೋಜ
ಪಾತ್ರವಹಿಸಿರುವ
(ಅತ್ಯಮೋಘ ತೆಲುಗು ಚಿತ್ರ)

ಒಲಂಪಿಯಾ
28-12-50 ರಿಂದ ದಿನವಹಿ 3 ಆಟಗಳು
ವಿವಿಧ ನೃತ್ಯಗಳಿಂದ ನಿಮ್ಮ ಮನಸ್ಸನ್ನು
ಸೂರೆಗೊಳ್ಳುವ
ರೆಹನ, ಸಿತಾರ ಮತ್ತು ಪ್ಯಾರೋ
ಪಾತ್ರವಹಿಸಿರುವ
ಕಿಶೋರ್ ಸಾಹುರವರ
★ ಬಿಜಿಲಿ ★
(ಹಿಂದಿ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ, ಮೈಸೂರು ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೮—೧೨—೧೯೫೦ನೇ ಗುರುವಾರ [ಸಂಚಿಕೆ ೯೮

ಕಾಂಗ್ರೆಸ್ ಪಕ್ಷದ ಸಭೆ

ನಾಯಕರ ಮೇಲಿನ ಅವಿಶ್ವಾಸ ಪ್ರಕರಣದ ಬಗ್ಗೆ

ಮಂತ್ರಿಮಂಡಲ ಬದಲಾವಣೆಯಾಗಲೇಬೇಕು

ಬೆಂಗಳೂರು ಡಿ. ೨೮

ನಿನ್ನೆ ಮಧ್ಯಾಹ್ನ ೨-೧೫ ಗಂಟೆಗೆ ಕುಮಾರಾಪಾರ್ಕಿನಲ್ಲಿ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ಸೇರಿ ನಾಯಕರ ಮೇಲೆ ಅವಿಶ್ವಾಸ ವಿಷಯವಾಗಿ ಚರ್ಚೆಗಳನ್ನು ಆರಂಭಿಸಿದರು.

ಮೋಟಾರು ಅಪಘಾತಕ್ಕೀಡಾಗಿದ್ದ ಶ್ರೀಗಳಾದ ಸುಬ್ರಹ್ಮಣ್ಯಂ ಮತ್ತು ಟಿ. ಸಿದ್ದಲಿಂಗಯ್ಯನವರೂ ಸಹ ಸಭೆಗೆ ಹಾಜರಾಗಿದ್ದರು. ಶ್ರೀ ಗಳಾದ ಎಸ್. ಚನ್ನಯ್ಯ ಮತ್ತು ಹನುಮಂತಯ್ಯನವರು ವಿಶೇಷ ಆಹ್ವಾನದ ಮೇಲೆ ಸಭೆಯಲ್ಲಿ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಮಾತನಾಡುತ್ತ ಕೆಲವರು ತಮ್ಮಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿ ರಾಜೀನಾಮೆಯನ್ನೀಯಬೇಕೆಂಬ ಒತ್ತಾಯಪಡಿಸಿರುವುದಾಗಿಯೂ ಅದು ಪಕ್ಷಕ್ಕೆ ಸಂಬಂಧಪಟ್ಟ ವಿಷಯವಾದ್ದರಿಂದ ನಿಯಮಾವಳಿ ಪ್ರಕಾರ ಪಾರ್ಟಿ ಸಭೆ ಕರೆಯಲಾಗಿದೆಯೆಂದೂ ಸಂಸ್ಥಾನಗಳ ರಾಜಕೀಯವು ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಸೂಚನೆಗೊಳಪಟ್ಟಿರುವುದರಿಂದ ಅವರ್‍ಯಾವ ರೀತಿ ಸೂಚನೆಯನ್ನೀಯುವರೋ ಅದನ್ನನುಸರಿಸಬೇಕೆಂದು ಹೇಳಿದರು.

ಶ್ರೀ ಎ. ಜಿ. ರಾಮಚಂದ್ರರಾಯರು ಮಾತನಾಡುತ್ತಾ ನೂರು ವರ್ಷಗಳ ಆಡಳಿತದಿಂದ ಅಸಮಾಧಾನ ಹಬ್ಬಿದೆ. ನಾಯಕತ್ವ ಬದಲಾವಣೆಯಾಗಬೇಕೆಂದರು. ಶ್ರೀ ಭೀಮಪ್ಪನಾಯಕರು ಸ್ನೇಹದಿಂದ ಜವಾಬ್ದಾರಿ ಅರಿತು ವರ್ತಿಸಬೇಕೆಂದೂ ಸಲಹೆಯಿತ್ತರು. ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮಾತನಾಡುತ್ತಾ ಪಕ್ಷದವರ ವಿಶ್ವಾಸ ನಾಯಕರಿಗಿದೆಯೇ ಎಂಬುದನ್ನು ಅವರೇ ಕಲ್ಪಿಸಿಕೊಡಲಿ ಪ್ರಜಾಪ್ರಭುತ್ವವನ್ನು ಅವರೇ ಬೆಳಗಬೇಕೆಂದು ಹೇಳಿದರು.

ಶ್ರೀ ಕೆ. ಸಿ. ರೆಡ್ಡಿಯವರು ಪುನಃ ಮಾತನಾಡುತ್ತಾ ಲಂಚ ಪರ್ಮಿಟ್ ಮುಂತಾದ ಆಪಾದನೆಗಳು ರುಜುವಾತಾಗಬೇಕು. ರುಜು ಹಾಕಿರುವವರಲ್ಲಿಯೂ ಪರ್ಮಿಟ್ ಮುಂತಾದ ಅನೇಕ ಸೌಲಭ್ಯಗಳನ್ನು ಪಡೆದಿರುವರಿರುವರು. ಇದು ಆಪಾದನೆಯಾಗಲಾರದೆಂದು ಹೇಳಿದರು.

ಶ್ರೀ ಎಸ್. ರಂಗರಾಮಯ್ಯನವರು ಮಾತನಾಡುತ್ತ ಮಂತ್ರಿಮಂಡಲದ ಮೇಲೆ ಅನೇಕ ಆರೋಪಣೆಗಳಿವೆ. ಶ್ರೀ ರೆಡ್ಡಿಯವರು ಪಾರ್ಟಿಯ ವಿಶ್ವಾಸ ಪಡೆಯಬೇಕು. ಎಲ್ಲವನ್ನೂ ಇತ್ಯರ್ಥಮಾಡಲು ನಾಯಕನ್ನೊಳಗೊಂಡ ಪಣ್ಣಸಮಿತಿ ರಚಿಸಬೇಕೆಂದು ಸೂಚಿಸಿದರು.

೩೫ ಜನರು ಅವಿಶ್ವಾಸವನ್ನು ಸೂಚಿಸಿರುವುದರಿಂದ ಶ್ರೀ. ರೆಡ್ಡಿಯವರು ಅಧಿಕಾರಬಿಟ್ಟು ಹೋಗುವುದೊಳ್ಳೆಯದೆಂದು ಶ್ರೀ ಹನುಮಂತಯ್ಯನವರು ಹೇಳಿದರು. ಮತ್ತೆ ಕೆಲವು ಸದಸ್ಯರು ಮಾತನಾಡಿ ಮಂತ್ರಿಮಂಡಲದ ಬದಲಾವಣೆ ಅಗತ್ಯವೆಂದೂ ತಿಳಿಸಿದರು.

ಸಭೆಯು ಪುನಃ ರಾತ್ರಿ ಸೇರಬೇಕೆಂದು ಆರು ಗಂಟೆಗೆ ಮುಕ್ತಾಯವಾಯಿತು.

ಏನೂ ನಿರ್ಧಾರವಿಲ್ಲ

ರಾತ್ರಿ ೮-೩೦ ಗಂಟೆಗೆ ಪುನಃ ಎಲ್ಲರೂ ಸೇರಿ ೨॥ ಗಂಟೆಕಾಲ ಚರ್ಚೆ ನಡೆಸಿದರು. ಕೊನೆಗೆ ಶ್ರೀ. ಎ. ಜಿ. ರಾಮಚಂದ್ರರಾಯರು ಈಗಿನ ಪರಿಸ್ಥಿತಿಯಲ್ಲಿ ನಾಯಕರ ಬದಲಾವಣೆ ಆಗಬೇಕಾಗಿರುವುದು ಅನಿವಾರ್ಯವೆಂದು ಅರ್ಥಬರುವ ಒಂದು ನಿರ್ಣಯವನ್ನು ಮಂಡಿಸಿ

ರಾಷ್ಟ್ರಭಾಷೆ ಅಭಿವೃದ್ಧಿ

ರಾಷ್ಟ್ರಭಾಷೆ ಅಭಿವೃದ್ಧಿಯಾಗಬೇಕೆಂದಿರುವವರು ಹಿಂದಿಗೆ ಸಂಬಂಧಪಟ್ಟ ಒಳ ಸಮಸ್ಯೆಗಳನ್ನು ಬಿಡಬೇಕು. ಲಿಪಿಯ ಪ್ರಶ್ನೆ, ಶಬ್ದಕೋಶ ಇವುಗಳನ್ನು ಶಾಂತಿಯಿಂದ ತೀರ್ಮಾನ ಮಾಡಿಕೊಂಡು ಮುಗಿಸಬೇಕು. ಹಿಂದಿಯು ವಿಶಾಲದೃಷ್ಟಿಯಿಂದ ಮತ್ತು ಅಖಿಲ ಭಾರತದ ಹಿತಸಾಧನೆ ದೃಷ್ಟಿಯಿಂದ ಅಭಿವೃದ್ಧಿ ಹೊಂದಬೇಕು. ಅದು ತನ್ನ ಪ್ರಾಂತಿಕ ಭಾವನೆಯನ್ನು ಬಿಡಬೇಕು. ಭಾರತದ ರಾಜ್ಯಾಂಗ ಶಾಸನದಲ್ಲಿ ಹಿಂದಿಗೆ ಸಿಕ್ಕಿರುವ ಅಧಿಕೃತ ಸ್ಥಾನವನ್ನು ಹೊಂದಲು ಅದು ಪ್ರಾಂತ ಭಾಷೆಗಳನ್ನು ಅದರಲ್ಲೂ ದ್ರಾವಿಡ ಭಾಷೆಗಳನ್ನು ಹಿಂದೀ ಪ್ರವೀಣರು ಕಲಿಯಬೇಕು. ಆ ಭಾಷೆಗಳ ಉತ್ತಮ ಸಾಹಿತ್ಯಗಳನ್ನು ಹಿಂದಿಗೆ ಭಾಷಾಂತರಿಸಬೇಕು. ಹಿಂದೀ ಬೆಳವಣಿಗೆಯು ಅಖಿಲಭಾರತ ದೃಷ್ಟಿಯಿಂದ ಅಭಿವೃದ್ಧಿ ಆಗಬೇಕು. ಹಿಂದಿಯ ಹಿತಸಾಧಕರು ಇತರ ಪ್ರಾಂತೀಯರಲ್ಲಿರುವ ಸಂಶಯಗಳನ್ನು ನಿವಾರಿಸಬೇಕು. ಅವರ ವಿಶ್ವಾಸಗಳಿಸಬೇಕು. ಎಂದು ರಾಷ್ಟ್ರಭಾಷಾ ಪರಿಷತ್ತಿನ ಅಧ್ಯಕ್ಷತೆ ವಹಿಸಿದಾಗ ಶ್ರೀ. ಆರ್. ಆರ್. ದಿವಾಕರ್‌ರವರು ಹೇಳಿದರು.

ಶ್ರೀ ಪುರುಷೋತ್ತಮದಾಸ್ ತ್ರಿಕಂದಾಸ್

ಸಮತಾವಾದಿ ಪಕ್ಷದ ನಾಯಕರಾದ ಶ್ರೀ ಪುರುಷೋತ್ತಮದಾಸ್ ತ್ರಿಕಂದಾಸರವರು ನಾಳೆ ೧೧-೩೦ ಗಂಟೆಗೆ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸುವರು. ಸಂಜೆ ೬-೩೦ ಗಂಟೆಗೆ ಪುರಭವನ ಮೈದಾನದಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು. ಶನಿವಾರ ಬೆಳಗ್ಗೆ ೯-೩೦ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಭಾಷಣ ಮಾಡಿದ ನಂತರ ಒಂದು ಗಂಟೆ ವೇಳೆಗೆ ಪಕ್ಷದ ಸದಸ್ಯರನ್ನುದ್ದೇಶಿಸಿ ಪಕ್ಷದ ಕಛೇರಿಯಲ್ಲಿ ಭಾಷಣಮಾಡುವರು ನಾಳೆ ಮಧ್ಯಾಹ್ನ ೨ ಗಂಟೆಗೆ ಕೃಷ್ಣರಾಜನಗರ, ಶನಿವಾರ ಸಂಜೆ ೫ ಗಂಟೆ ಯಳಂದೂರಿಗೂ ಭೇಟಿಯಿತ್ತು ಅಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು.

ಶ್ರೀ ದೊರೆಸ್ವಾಮಿಶಾಸ್ತ್ರಿಗಳ ಭಾಷಣ

ರಾಜಧಾನಿಯ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ೨೯ ನೇ ತಾರೀಖು ಸಂಜೆ ೬ ಗಂಟೆಗೆ ಶ್ರೀ ಮುದ್ದುಸ್ವಾಮಿ ದೀಕ್ಷಿತರ ದಿನಾಚರಣೆಯು ನಡೆಯುವುದು. ಮದರಾಸಿನ ಶ್ರೀ ದೊರೆಸ್ವಾಮಿ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿ, ಸಂಗೀತವ ಮೇಲೆ ಉಪನ್ಯಾಸ ಮಾಡುವರು. ಶ್ರೀ ದೀಕ್ಷಿತರ ಜೀವನಕ್ಕೆ ಸಂಬಂಧಪಟ್ಟ ಕೃತಿಗಳ ಸಂಗೀತವು ಮೈಸೂರು

ಭಿಕ್ಷುಕರ ದಸ್ತಗಿರಿ

ಮೈಸೂರು ಸಿಟಿ ಮುನಿಸಿಪಲ್ ವೈಸ್ ಪ್ರೆಸಿಡೆಂಟರೂ ಭಿಕ್ಷುಕರ ವಸತಿಗೃಹದ ಸೂಪರಿನ್‌ಟೆನ್‌ಡೆಂಟರೂ ಆದ ಶ್ರೀ ಎ. ಕೃಷ್ಣಮೂರ್ತಿರಾಯರು ಇಂದು ಬೆಳಗ್ಗೆ ನಗರದ ನಾನಾಭಾಗಗಳಲ್ಲಿ ಪೋಲೀಸಿನವರ ಸಹಾಯದಿಂದ ೨೭ ಜನ ಭಿಕ್ಷುಕರನ್ನು ಹಿಡಿದು ವಸತಿಗೃಹಕ್ಕೆ ಕೊಂಡೊಯ್ದಿರುವರು.

ಕಾನ್ವೊಕೇಷನ್

ಫೆಬ್ರವರಿ ಮಾಹೆ ೨ ನೇ ತಾರೀಖು ನಡೆಯಲಿರುವ ಮೈಸೂರು ವಿಶ್ವವಿದ್ಯಾನಿಲಯದ ಪದವೀಧಾನ ಸಮಾರಂಭಕಾಲದಲ್ಲಿ ಪದವೀಧರರನ್ನುದ್ದೇಶಿಸಿ ಮದರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ ಪಿ. ವಿ. ರಾಜಮನ್ನಾರ್‌ರವರು ಭಾಷಣ ಮಾಡುವರೆಂದು ತಿಳಿಯಬರುತ್ತದೆ.

ಸ್ವಾತಂತ್ರ್ಯ ರಕ್ಷಣೆ

ಭಾರತ ಸ್ವಾತಂತ್ರ್ಯರಕ್ಷಣೆಗೆ ದೃಢನಿರ್ಧಾರ ಮತ್ತು ದೇಶಭಕ್ತಿ ಸಮರ್ಪಣೆಗೆ ದೇಶದ ರಾಜರೆಲ್ಲರೂ ಬದ್ಧಕಂಕಣರಾಗಿರುವರೆಂದು ಬೊಂಬಾಯಿನಲ್ಲಿ ನಡೆದ ರಾಜಸಮ್ಮೇಳನವು ನಿರ್ಣಯಮಾಡಿದೆ. ಬರೋಡ ಮಹಾರಾಜರು ಅಧ್ಯಕ್ಷತೆ ವಹಿಸಿದ್ದರು.

ಜ॥ ಐಸನ್ ಹೋವರ್‌ಮನೆಯ ಮುಂದೆ ಪಿಕೆಟಿಂಗ್

ಮೂರು ಡಜನ್ ಸ್ತ್ರೀಯರು ಜರ್ಮನಿಯ ಶಸ್ತ್ರೀಕರಣಕ್ಕಾಗಿ ಜ॥ ಐಸನ್‌ಹೋವರ್ ಹೋಗಕೂಡದೆಂದೂ, ಜರ್ಮನಿಯಲ್ಲಿ ಶಸ್ತ್ರೀಕರಣಮಾಡಿದರೆ ಪುನಃ ನಾಜಿ ಪ್ರಭಾವವು ತಲೆ ದೋರುವುದೆಂದೂ ೨ ಲಕ್ಷ ಜರ್ಮನರೆಂದರೆ ಒಂದು ನಾಜೀ ಸೈನ್ಯವೇ ಆಗುವುದೆಂದೂ ಈ ನಾಜೀ ಸೈನ್ಯಕ್ಕೆ ಜ. ಐಸನ್‌ಹೋವರ್ ದಂಡನಾಯಕರಾಗಕೂಡದೆಂದೂ ಅವರು ಪಿಕೆಟಿಂಗ್ ನಡೆಸಿದರು. ಜ॥ ಐಸನ್ ಹೋವರ್‌ರವರು ಇದಕ್ಕೆ ತಾವು ಏನೂ ಮಾಡಲಾಗುವುದಿಲ್ಲವೆಂದೂ, ಆಜ್ಞೆಗಳನ್ನು ಪರಿಪಾಲಿಸುವುದೇ ಸೈನ್ಯಾಧಿಕಾರಿಯ ಕರ್ತವ್ಯವೆಂದು ಉತ್ತರವಿತ್ತಿರುವರು.

ವಿದೇಶಕ್ಕೆ ಪ್ರವಾಸ

ಮದರಾಸಿನ ಸುಪ್ರಸಿದ್ಧ ಸಂಸ್ಕೃತ ಪಂಡಿತರಾದ ಶ್ರೀ. ದೊರೆಸ್ವಾಮಿಶಾಸ್ತ್ರಿಗಳವರನ್ನು ಭಾರತ ಸರ್ಕಾರವು ಪಾಶ್ಚಿಮಾತ್ಯ ದೇಶಗಳಲ್ಲಿ ಭಾರತ ಸಂಸ್ಕೃತಿಯ ಪ್ರಚಾರ ಕಾರ್ಯಕ್ಕಾಗಿ ಕಳುಹಿಸುವುದು ಶ್ರೀ ಶಾಸ್ತ್ರಿಗಳವರು ಬರುವ ಮಾರ್ಚಿ ಕೊನೆಯ ವಾರದಲ್ಲಿ ವಿದೇಶ ಪ್ರವಾ

ವಿರೋಧಿಸಿ ಮಾತನಾಡಿದರು ಕೊನೆಗೆ ಈ ಹೊಸ ನಿರ್ಣಯ ಚರ್ಚಿಸಲು ಅವಕಾಶ ಕೊಡಬೇಕೇ ಬೇಡವೇ ಎಂಬುದು ಇತ್ಯರ್ಥವಾಗದೆ ಸಭೆಯು ಪುನಃ ನಾಳೆ ಮಧ್ಯಾಹ್ನ ಒಂದು ಗಂಟೆಗೆ ಸೇರತಕ್ಕದೆಂದು ತೀರ್ಮಾನವಾಗಿ ಮುಂದುವರಿಯಿತು.

ಶ್ರೀ. ಕೆ. ಹನುಮಂತಯ್ಯನವರು ಯಾವುದಾದರೂ ಒಂದು ನಿರ್ಧಾರಕ್ಕೆ ಬರಲು ಶ್ರೀ ಕೆ. ಸಿ. ರೆಡ್ಡಿಯನ್ನು ಪುನಃ ಭೇಟಿಮಾಡುವುದಾಗಿ ಹೇಳಿದ ಮೇಲೆ ಸಭೆಯು ಮುಗಿಯಿತು.

ಕೇಂದ್ರದ ಪುನರ್ರಚಿತ ಮಂತ್ರಿಮಂಡಲ

ಶ್ರೀ ಜವಹರಲಾಲ್ ನೆಹರೂ ಪ್ರಧಾನಿ ಮತ್ತು ವಿದೇಶಾಂಗ ಮತ್ತು ಕಾಮನವೆಲ್ತ್ ಸಂಬಂಧಗಳು; ಶ್ರೀ ರಾಜಗೋಪಾಲಾಚಾರಿ-ಒಳಾಡಳಿತಶಾಖೆ; ಮೌಲಾನಾ ಆಜಾದ್-ವಿದ್ಯಾಶಾಖೆ; ಶ್ರೀ ಸಿ. ಡಿ. ದೇಶಮುಖ್ ಹಣಕಾಸು; ಶ್ರೀ ಎನ್. ಗೋಪಾಲಸ್ವಾಮಯ್ಯಂಗಾರ್-ಸಂಚಾರ ಸೌಕರ್ಯ ಮತ್ತು ಸಂಸ್ಥಾನ ಶಾಖೆ.

ಶ್ರೀ ಹರೆಕೃಷ್ಣ ಮೆಹತಾಬ್ ವಾಣಿಜ್ಯ ಮತ್ತು ಕೈಗಾರಿಕೆ; ಶ್ರೀ ಎನ್. ವಿ. ಗಾಡ್ಗಿಲ್-ಕಾಮಗಾರಿ, ಗಣಿ, ವಿದ್ಯುಚ್ಛಕ್ತಿ; ಶ್ರೀ ಶ್ರೀ ಪ್ರಕಾಶ-ಸ್ವಾಭಾವಿಕಸಾಧನ ಸಂಪತ್ತು ಮತ್ತು ವೈಜ್ಞಾನಿಕ ಸಂಶೋಧನೆ

ಸರ್ದಾರ್ ಬಲದೇವಸಿಂಗ್-ರಕ್ಷಣೆ; ಶ್ರೀ ಕೆ. ಎಂ ಮುನ್ಷಿ-ಆಹಾರ-ವ್ಯವಸಾಯ; ರಫಿ ಅಹಮದ್‌ಕಿದ್ವಾಯಿ-ಸಂಪರ್ಕ ಶಾಖೆ; ರಾಜಕುಮಾರಿ ಅಮೃತಕೌರ್-ಆರೋಗ್ಯ; ಶ್ರೀ ಜಗಜೀವನರಾಮ್-ಕಾರ್ಮಿಕಶಾಖೆ; ಡಾ|| ಅಂಬೇಡ್ಕರ್-ಶಾಸನಾಂಗ.

ಉಪಸಚಿವರು

ಶ್ರೀ ಕೆ ಸಂತಾನಂ-ಸಂಚಾರಶಾಖೆ. ಶ್ರೀ ಸತ್ಯನಾರಾಯಣಸಿನ್ಹ-ಪಾರ್ಲಿಮೆಂಟರಿ ವಿಷಯ. ಶ್ರೀ ಅಜಿತಪ್ರಸಾದ್ ಜೈನ್-ಪುನರ್ವ್ಯವಸ್ಥೆ. ಶ್ರೀ ಆರ್. ಆರ್. ದಿವಾಕರ್-ಶುದ್ಧಿ, ಪ್ರಸಾರ ಶ್ರೀ ಸಿ. ಸಿ. ಬಿಸ್ವಾಸ್-ಅಲ್ಪಸಂಖ್ಯಾತರ ವಿಷಯ.

ರಣಜಿತ್
29-12-50 ರಿಂದ 3 ನೇ ವಾರ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾರರವರ
★ ಸರ್ಗಮ್ ★
(ಹಿಂದಿ)
ಪಾತ್ರ: ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ
ಬೆಳಗಿನ ಪ್ರದರ್ಶನ 28-12-50 ರಿಂದ
3 ದಿನ ಮಾತ್ರ
ಶಾಂತರಾಂ ಪಾತ್ರವಹಿಸಿರುವ
ಖಜಾಂಚಿ

ದಾನ

ಯಳಂದೂರಿನ ಜೋಡಿದಾರ್ ಶ್ರೀ ವೈ. ನರಸಿಂಗರಾಯರು ಮೈಸೂರು ಖದ್ದರ್ ಪರಸ್ಪರ ಸಹಾಯಸಂಘಕ್ಕೆ ಸುಂದರವಾದ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಉದಾರವಾಗಿ ಕೊಟ್ಟಿರುತ್ತಾರೆ.

ಜಿಲ್ಲಾಬೋರ್ಡು ಪುನರ್ವ್ಯವಸ್ಥೆ

ಮದ್ರಾಸ್ ಪ್ರಾಂತದಲ್ಲಿ ಜಿಲ್ಲಾ ಬೋರ್ಡುಗಳನ್ನು ಪುನರ್ವ್ಯವಸ್ಥೆಮಾಡುವ ವಿಚಾರವನ್ನು ಸರ್ಕಾರವು ಪರಿಶೀಲಿಸುತ್ತಲಿದೆ.

ನೆಹರೂರವರ ಕಾರ್ಯಕ್ರಮ

ಪಂಡಿತ ಜವಾಹರಲಾಲ್ ನೆಹರೂರವರು ಜನವರಿ ಒಂದನೇ ತಾರೀಖು ಮಧ್ಯಾಹ್ನ ೩-೧೫ ಗಂಟೆಗೆ ಬೆಂಗಳೂರಿಗೆ ವಿಮಾನದಲ್ಲಿ ಆಗಮಿಸುವರು ಶ್ರೀಮನ್ಮಹಾರಾಜರವರು ಅವರನ್ನು ಹಿಂದುಸ್ಥಾನ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸುವರು.

ಪ್ರಧಾನಿಗಳು ರೆಸಿಡೆನ್ಸಿಗೆ ತೆರಳಿ ಸ್ವಲ್ಪ ವಿಶ್ರಮಿಸಿಕೊಂಡು ತಾತಾ ವಿಜ್ಞಾನ ಮಂದಿರಕ್ಕೆ ಭೇಟಿಕೊಡುವರು. ಎಲೆಕ್ಟ್ರೋ ಕಮ್ಯೂನಿಕೇಷನ್ ಶಾಖೆಯನ್ನು ಪರಿಶೀಲಿಸಿ ಸಂಜೆ ಸೌತ್‌ಪೆರೇಡ್ ಮೈದಾನದಲ್ಲಿ ಬೆಂಗಳೂರು ಮಿಲಿಟರಿ ಸಬ್ ಏರಿಯದವರನ್ನು ಉದ್ದೇಶಿಸಿ ಭಾಷಣಮಾಡುವರು.

ಜನವರಿ ೨ ನೇ ತಾರೀಖು ಇಂಡಿಯನ್ ಸೈನ್ಸ್ ಕಾಂಗ್ರೆಸ್ ಆರಂಭೋತ್ಸವವನ್ನು ನಡೆಸುವರು. ಬೆಳಗ್ಗೆ ೧೦-೧೫ ಗಂಟೆ ಹೊತ್ತಿಗೆ ಬೊಂಬಾಯಿಗೆ ಹಿಂತಿರುಗುವರು.

ಸಾಧ್ಯವಾದರೆ ಕಾಂಗ್ರೆಸ್ ಕೆಲಸಗಾರರನ್ನು ಉದ್ದೇಶಿಸಿ ಮಾತನಾಡುವರೆಂದು ತಿಳಿಯಬರುತ್ತದೆ.

ಒಲಂಪಿಯಾ
28-12-50 ರಿಂದ ದಿನವಹಿ 3 ಆಟಗಳು
ವಿವಿಧ ನೃತ್ಯಗಳಿಂದ ನಿಮ್ಮ ಮನಸ್ಸನ್ನು ಸೂರೆಗೊಳ್ಳುವ
ರೆಹನ, ಸಿತಾರ ಮತ್ತು ಪ್ಯಾರೋ
ಪಾತ್ರವಹಿಸಿರುವ
ಕಿಶೋರ್ ಸಾಹುರವರ
★ ಬಿಜಿಲಿ ★
(ಹಿಂದಿ)
ಬೆಳಗಿನ ಪ್ರದರ್ಶನ
28-12-50 ರಿಂದ 5 ದಿನಗಳು ಮಾತ್ರ
ಶೋಕಿನ್

ರೇಡಿಯೋ

ಎ. ಐ. ಆರ್. ಮೈಸೂರು
೪೧೦ ಮೀಟರು ೪೯.೪೭ ಮೀಟರು
ಡಿಸೆಂಬರ್ ೨೯ ಶುಕ್ರವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಆರ್. ಕೆ. ಶ್ರೀಕಂಠನ್ (ದೇವೀಭಜನ) ೭-೩೫ ಚಿತ್ರಲೋಕ (ರೆ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ.

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧-೪೦ ಮುಖವೀಣೆ ೧-೪೫ ಹಿಂದೀ ಶಿಕ್ಷಣ. ೨-೦ ನಿಮ್ಮ ಮೆಚ್ಚಿನ ಕಲಾವಿಧರು (ಗ) ೨-೩೦ ಮುಕ್ತಾಯ.

ಸಂಜೆ ೫-೩೦ ಎಂ ವಿ. ಲಕ್ಷ್ಮೀನರಸಿಂಹಯ್ಯ (ಸ್ಯಾಕ್ಸೊಫೋನ್‌ವಾದನ) ೬-೦ ಇಂಗ್ಲೀಷಿನಲ್ಲಿ ವಾರ್ತೆ. ೬-೧೦ ಗಾನವಿಹಾರ. ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ. ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭-೫ ಸಮಾಚಾರ ಸಮೀಕ್ಷೆ (ಹಿಂದಿ) ೭-೧೫ ಎಂ. ವಿ. ಲಕ್ಷ್ಮೀನರಸಿಂಹಯ್ಯ (ಸಾಕ್ಸೊಫೋನ್‌ವಾದನ) ೭-೩೦ ಕನ್ನಡದಲ್ಲಿ ಭಾಷಣ ೭-೪೫ ಕನ್ನಡದಲ್ಲಿ ವಾರ್ತೆ ೮-೦ ಟಿ. ವಿ. ಸುಬ್ರಹ್ಮಣ್ಯಪಿಳ್ಳೆ (ರೆ) ೮-೧೫ ಆರ್ ಕೆ. ಶ್ರೀಕಂಠನ್ (ಸಂಗೀತ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ಅರಮನೆ ಆರ್ಕೆಸ್ಟ್ರಾ ೧೦-೦ ಮುಕ್ತಾಯ.

ನ್ಯೂಸ್‌ಪ್ರಿಂಟು ಬಳಕೆ

ಜನವರಿ ಒಂದರಿಂದ ದೈನಂದಿನ ಪತ್ರಿಕೆಗಳು ವಾರಕ್ಕೆ ೬೦ ಪುಟಗಳಿಗೆ ಮೀರದಂತೆ ನ್ಯೂಸ್‌ಪ್ರಿಂಟ್ ಉಪಯೋಗಿಸಬೇಕೆಂದು ಕೇಂದ್ರ ಸರ್ಕಾರವು ಆಜ್ಞೆ ಹೊರಡಿಸಿದೆ.

ಆಪೇರಾ
27-12-50 ರಿಂದ ಪ್ರತಿದಿನ 3 ಆಟಗಳು
ಸಂಸಾರ ನಾರದ
ಕೃಷ್ಣಮೂರ್ತಿ,
● ಸುಬ್ಬರಾವ್,
● ಸರೋಜ,
ಪಾತ್ರವಹಿಸಿರುವ
(ಲಕ್ಷ್ಮೋಘ ತೆಲುಗು ಚಿತ್ರ)

ಸಂಪಾದಕರು ಮತ್ತು ಪ್ರಕಾಶಕರು: ಜಿ. ಎಲ್. ಸ್ವಾಮಿ, ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನಪತ್ರಿಕೆ Phone: 574

ಸಮಾಚಾರ

SAMACHARA, MYSORE
ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೨೯—೧೨—೧೯೫೦ ನೇ ಶುಕ್ರವಾರ [ಸಂಚಿಕೆ ೯೯

ಆಸ್ಟ್ರೇಲಿಯ ಗೋಧಿ

ಆಸ್ಟ್ರೇಲಿಯಾದಿಂದ ಕೊಚ್ಚಿನ್ ಬಂದರಿಗೆ ೮.೬೦೦ ಟನ್ ಗೋಧಿಯು ಬಂದಿದೆ.

ಕಬ್ಬಿನ ಬೆಲೆ ಹೆಚ್ಚುವುದಿಲ್ಲ

ಕಬ್ಬಿನ ಬೆಲೆಯನ್ನು ಕೇಂದ್ರ ಸರ್ಕಾರವು ಈಗ ನಿಗದಿ ಮಾಡಿರುವುದನ್ನು ಬದಲಾಯಿಸುವುದಿಲ್ಲವೆಂದು ತಿಳಿಯಬಂದಿದೆ.

ಪ್ರೆಸ್‌ಗ್ಯಾಲರಿ ಕಮಿಟಿ

೧೯೫೧ನೇ ಜನವರಿಯಲ್ಲಿ ನಡೆಯಲಿರುವ ಶಾಸನ ಸಭೆಯ ಅಧಿವೇಶನ ಸಂದರ್ಭದಲ್ಲಿ ಡೆಪ್ಯುಟಿ ಸ್ಪೀಕರ ಅಧ್ಯಕ್ಷತೆಯಲ್ಲಿ ಪ್ರೆಸ್ ಗ್ಯಾಲರಿ ಕಮಿಟಿಯನ್ನು ರಚಿಸಲಾಗಿದೆ. ಮೇಲ್‌ಪತ್ರಿಕಾ ಪ್ರತಿನಿಧಿ, ತಾಯಿನಾಡು ಪತ್ರಿಕಾ ಸಂಪಾದಕ ಮತ್ತು ಜಯಭಾರತ್ ಪತ್ರಿಕೆಯ ಶ್ರೀ ಟಿ. ವೀರಪ್ಪನವರು ಸದಸ್ಯರು ಶಾಸನಸಭೆಯ ಕಾರ್ಯದರ್ಶಿಗಳು ಈ ಕಮಿಟಿಯ ಕಾರ್ಯದರ್ಶಿಗಳು.

ಕೊರಿಯಾ ಬಿಟ್ಟು ಹೊರಡಿ

ಕೊರಿಯಾ ಮತ್ತು ಫಾರ್ಮೋಸಾವನ್ನು ಕೂಡಲೇ ಬಿಟ್ಟು ಹೊರಡಿ ಇಲ್ಲವಾದಲ್ಲಿ ನಾವು ನಿಮ್ಮನ್ನು ಹೊರದೂಡುತ್ತೇವೆಂದು ಚೈನಾ ಕಮ್ಯೂನಿಸ್ಟ್ ಸರ್ಕಾರ ರೇಡಿಯೋ ಮೂಲಕ ಅಮೆರಿಕಾ ಸೈನ್ಯಗಳಿಗೆ ಕೊನೆಯ ಎಚ್ಚರಿಕೆಯನ್ನು ಕೊಟ್ಟಿರುವುದಾಗಿ ವರದಿಯಾಗಿದೆ.

ಹಾರ್ಲಿಕ್ಸ್

ಮಕ್ಕಳ ಉಪಯೋಗಕ್ಕಾಗಿರುವ ಕೆಲವು ಆಹಾರ ಪದಾರ್ಥಗಳ ಬೆಲೆಗಳನ್ನು ಭಾರತ ಸರ್ಕಾರವು ಪ್ರಕಟಿಸಿದೆ.

ಹಾರ್ಲಿಕ್ಸ್ ಒಂದು ಪೌಂಡು ೩-೮-೦ ಅರ್ಧಪೌಂಡು ೨-೦-೦; ಗ್ಲಾಕ್ಸೋ ಒಂದು ಪೌಂಡು ೩-೨-೦, ೨ ಪೌಂಡು ೫-೧೫-೦ ಆಸ್ಟರ್‌ಮಿಲ್ಕ್ ೧ ಪೌಂಡು ೩-೩-೦ ಎರಡು ಪೌಂಡು ೬-೦-೦.

ಖಡ್ಮಂಡು ಪರಿಸ್ಥಿತಿ ಹದಗೆಟ್ಟಿದೆ

ಇತ್ತೀಚೆಗೆ ನೇಪಾಳದ ರಾಜಧಾನಿಯಾದ ಖಡ್ಮಂಡುವಿನ ಪರಿಸ್ಥಿತಿಯು ಹದಗೆಟ್ಟಿದೆ. ಕಾಂಗ್ರೆಸ್ ಸ್ವಯಂಸೇವಕರು ಸೆರೆಮನೆ, ಸರ್ಕಾರೀ ಕಟ್ಟಡ ಮುಂತಾದುವುಗಳಿಗೆಲ್ಲಾ ನುಗ್ಗಿ ಬೆಂಕಿಹತ್ತಿಸುತ್ತಲಿದ್ದಾರೆ. ಎಲ್ಲೆಡೆಯಲ್ಲಿಯೂ ಸರ್ಕಾರಿ ವಿರೋಧ ಪ್ರದರ್ಶನಗಳು ನಡೆಯುತ್ತಲಿವೆ. ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿಯಲ್ಲಿದ್ದಾಗ್ಯೂ ಅದನ್ನು ಯಾರು ಪಾಲಿಸುತ್ತಲಿಲ್ಲ. ಸರ್ಕಾರೀ ಕಾಂಗ್ರೆಸ್ ಸೈನ್ಯಪಡೆಗಳಿಗೆ ಘರ್ಷಣೆಗಳು ವಿಶೇಷವಾಗಿ ನಡೆಯುತ್ತಲಿವೆ.

ಥೈಲಾಂಡಿನಿಂದ ಅಕ್ಕಿ

ಥೈಲಾಂಡಿನಿಂದ ಭಾರತಕ್ಕೆ ಮುಂದಿನ ವರ್ಷ ೩,೦೦,೦೦೦ ಟನ್ ಅಕ್ಕಿಯು ಬರುವುದಾಗಿ ತಿಳಿಯಬರುತ್ತದೆ. ಈ ವರ್ಷ ಥೈಲಾಂಡು ಭಾರತಕ್ಕೆ ೬೦,೦೦೦ ಟನ್ ಅಕ್ಕಿಯನ್ನು ಕೊಟ್ಟಿತ್ತು.

ವಿದೇಶಿ ಸೆಮಿನಾರ್

ಅಮೆರಿಕದ ರಾಷ್ಟ್ರೀಯ ವಿದ್ಯಾರ್ಥಿ ಸಂಘದವರು ಏರ್ಪಡಿಸಿರುವ ವಿದೇಶಿ ವಿದ್ಯಾರ್ಥಿಗಳ ಬೇಸಿಗೆ ಸೆಮಿನಾರ್ ಸಭೆಗೆ ಮೂರು ಜನ ಭಾರತೀಯ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿದೆ. ೧೯೫೧ನೇ ಜೂನ್ ೪ ರಂದು ಸೆಮಿನಾರ್ ಪ್ರಾರಂಭವಾಗಿ ಸೆಪ್ಟಂಬರ್ ೧೪ ರವರೆಗೆ ನಡೆಯುವುದು. ಈ ಸಮ್ಮೇಳನಕ್ಕೆ ಹಾಜರಾಗಬೇಕೆಂದು ಭಾರತೀಯ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿದೆ. ವೈಜ್ಞಾನಿಕ ಪರಿಶೋಧನೆ, ಎಂಜನಿಯರಿಂಗ್, ಕ್ಷೇತ್ರೀಯ ಪ್ಲಾನಿಂಗ್ ಮುಂತಾದ ಕಾರ್ಯಗಳಲ್ಲಿ ಈ ವಿದ್ಯಾರ್ಥಿಗಳು ಭಾಗವಹಿಸಬೇಕಾಗಿದೆ.

ನೂತನ ಶಿಕ್ಷಣಪದ್ಧತಿ

ಮುಂದೆ ಪದವೀಧರರಾಗುವ ವಿದ್ಯಾರ್ಥಿಗಳಲ್ಲಿ ರಾಷ್ಟ್ರಸೇವಾ ತತ್ಪರತೆ, ರಾಷ್ಟ್ರೀಯ ಸಂಸ್ಕೃತಿ ಮತ್ತು ನೀತಿಯನ್ನುಂಟುಮಾಡಲು ಭಾರತದ ಎಲ್ಲಾ ವಿಶ್ವವಿದ್ಯಾನಿಲಯಗಳೂ ನೂತನ ಏರ್ಪಾಡೊಂದನ್ನವಲಂಬಿಸಬೇಕೆಂದು ಅಖಿಲಭಾರತ ಹಿಂದಿ ಸಾಹಿತ್ಯಸಮ್ಮೇಳನದ ೩೮ನೇ ಅಧಿವೇಶನವು ನಿರ್ಣಯಮಾಡಿದೆ.

ಜ|| ಕಾರಿಯಪ್ಪ

ಭಾರತ ದಂಡನಾಯಕ ಜ|| ಕರಿಯಪ್ಪನವರು ಇಂದು ಮಧ್ಯಾಹ್ನ ಬೆಂಗಳೂರಿಗೆ ಆಗಮಿಸಿದರು.

ಸೇವಾದಳ ರ್‍ಯಾಲಿ

ಭಾರತ ಸೇವಾದಳ ರಾಲಿಯು ನಿನ್ನೆ ಬೆಳಗ್ಗೆ ಪ್ರಾರಂಭವಾಯಿತು.

ಬೆಳಗ್ಗೆ ೯ ಗಂಟೆಗೆ ರೇಸ್‌ಕೋರ್ಸಿನಲ್ಲಿ ಡಾ|| ಹಾರ್ಡೀಕರವರು ಧ್ವಜಾರೋಹಣ ಮಾಡಿದರು. ಧ್ವಜಾರೋಹಣ ಸಮಾರಂಭದಲ್ಲಿ ಡಾ|| ಹಾರ್ಡೀಕರ್‌ರವರು ಶಿಸ್ತು ಹಾಗೂ ಸ್ವಚ್ಛತೆಯ ಬೆಲೆಯನ್ನು ತಿಳಿಸಿ, ಶಿಸ್ತು ಹಾಗೂ ರಾಷ್ಟ್ರಪ್ರೇಮದಿಂದ ಬೆಳೆದು ಯುವಕರು ಉತ್ಕೃಷ್ಟ ಪೌರರಾಗಬೇಕೆಂದು ಹೇಳಿದರು.

ವಿಶ್ವವಿದ್ಯಾನಿಲಯಗಳ ಸಮ್ಮೇಳನ

ಕಾಮನ್ವೆಲ್ತ್ ರಾಷ್ಟ್ರಗಳ ವಿವಿಧ ವಿಶ್ವವಿದ್ಯಾನಿಲಯಗಳ ಮುಂದಿನ ಸಮ್ಮೇಳನವು ೧೯೫೧ ನೇ ಡಿಸೆಂಬರ್ ತಿಂಗಳಲ್ಲಿ ಭಾರತದಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಚೀಣಾದಲ್ಲಿ ಅಮೆರಿಕಾ ಆಸ್ತಿಗಳ ಮುಟ್ಟುಗೋಲು

ಬ್ಯಾಂಕಿನ ಲೆಕ್ಕಾಚಾರ ಅಮಾನತ್ತು

ಚೀಣಾದಲ್ಲಿರುವ ಅಮೆರಿಕಾ ಆಸ್ತಿಗಳಿಗೆಲ್ಲಾ ಚೀಣಾ ಪ್ರಜಾಸರ್ಕಾರವು ಸ್ವಾಧೀನಪಡಿಸಿಕೊಂಡಿದೆ. ಬ್ಯಾಂಕಿನ ಲೆಕ್ಕಾಚಾರಗಳನ್ನೆಲ್ಲಾ ಅಮಾನತ್ತಿನಲ್ಲಿಡಲಾಗಿದೆ. ಅಮೆರಿಕಾವು ಆಕ್ರಮಣ, ವಿರೋಧಕಾರ್ಯದಲ್ಲಿ ತೊಡಗಿರುವುದರಿಂದ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೆಂದು ಪೀಕಿಂಗ್ ರೇಡಿಯೋ ವರದಿಮಾಡಿದೆ.

ಈಗಾಗಲೇ ಚೈನಾ ಸೈನ್ಯ ಪಡೆಯಲ್ಲಿ ೨/೫ ಭಾಗವು ವಿಶ್ವಸಂಸ್ಥೆಗೆ ವಿರುದ್ಧ ಹೋರಾಡುತ್ತಲಿದೆ. ಕೊರಿಯ ರಣರಂಗದಲ್ಲಿ ಸುಮಾರು ೬ ಲಕ್ಷ ಚೀಣಿಯರಿರುವರೆಂದೂ ೧,೩೦,೦೦೦ ಉತ್ತರ ಕೊರಿಯನ್ನರಿಗೆ ಚೀಣಾ ಸರ್ಕಾರವು ಶಿಕ್ಷಣ ಕೊಡುತ್ತಲಿದೆ. ಪ್ರಕೃತ ಸ್ತಬ್ಧ ಪರಿಸ್ಥಿತಿಯಲ್ಲಿದೆ. ಹೊಸ ವರ್ಷ ಪ್ರಾರಂಭವಾದೊಡನೆಯೇ ಕಾದಾಟ ಪ್ರಾರಂಭವಾಗಲಿದೆ. ೩೮ ನೇ ಅಕ್ಷಾಂಶದ ಹತ್ತಿರ ಸುಮಾರು ೧|| ಲಕ್ಷ ಚೈನಾ ಸೈನ್ಯವು ಜಮಾವಣೆಯಾಗಿದೆ. ಕೊರಿಯಾ ಯುದ್ಧದಲ್ಲಿ ಚೈನಾವು ಸೂತ್ರಧಾರಿಯಾಗಿ ಕೆಲಸಮಾಡುತ್ತಲಿದೆಯೆಂದು ವರದಿಯಾಗಿದೆ.

ಅಸ್ಥಿ ಸಂಚಯನ

ಸರ್ದಾರ್ ಪಟೇಲರ ಭಸ್ಮಾವಶೇಷವನ್ನು ನಿನ್ನೆ ಬೊಂಬಾಯಿನಿಂದ ದೆಹಲಿಗೆ ಕೊಂಡೊಯ್ದು ರಾಜಘಾಟಿನಲ್ಲಿ ಮಹಾತ್ಮ ಗಾಂಧಿಯವರ ಸಮಾಧಿಯ ಬಳಿ ಅಂತ್ಯಪ್ರಣಾಮವನ್ನು ಸಲ್ಲಿಸಲು ಇಡಲಾಯಿತು. ಪ್ರಧಾನಿ ಪಂಡಿತನೆಹರೂರವರು ಆದಿಯಾಗಿ ಕೇಂದ್ರದ ಮಂತ್ರಿಗಳು, ಮಿಲಿಟರಿ ಅಧಿಕಾರಿಗಳು, ಲಕ್ಷಾಂತರ ಜನರು ಹೂವುಗಳನ್ನು ಅರ್ಪಿಸಿ ತಮ್ಮ ಪ್ರಣಾಮವನ್ನು ಸಲ್ಲಿಸಿದರು.

ಇಂದು ಬೆಳಗ್ಗೆ ಅದನ್ನು ವಿಶೇಷ ವಿಮಾನದಲ್ಲಿ ಅಲಹಾಬಾದಿಗೆ ಕೊಂಡೊಯ್ಯಲಾಯಿತು. ಅವಶೇಷಗಳನ್ನು ಇಂದು ೧-೩೦ ವೇಳೆಯಲ್ಲಿ ದೋಣಿಯಲ್ಲಿ ತ್ರಿವೇಣಿ ಸಂಗಮಕ್ಕೆ ತೆಗೆದುಕೊಂಡುಹೋಗಿ ಅಲ್ಲಿ ಸಂಗಮದಲ್ಲಿ ಬಿಡಲಾಯಿತು. ಈ ಸಮಯದಲ್ಲಿ ರಾಷ್ಟ್ರಾಧ್ಯಕ್ಷರೂ, ಕಾಂಗ್ರೆಸ್ ಅಧ್ಯಕ್ಷರು ಕೊನೆಯದಾಗಿ ಶ್ರದ್ಧಾಂಜಲಿಯನ್ನರ್ಪಿಸುತ್ತಾ ರಾಜನೀತಿಯಲ್ಲಿ ಭೀಷ್ಮಪಿತಾಮಹರಾಗಿದ್ದ ಸರ್ದಾರರು ಅವರಾಗಿರುವರೆಂದು ನುಡಿದರು.

ಸ್ಮಾರಕ

ಸರ್ದಾರ್ ಪಟೇಲರಿಗೆ ಸರಿಯಾದ ಸ್ಮಾರಕವೊಂದನ್ನು ರಚಿಸಲು ಗುಜರಾತ್ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ.

ಅವಿಶ್ವಾಸ ನಿರ್ಣಯ ಹಿಂದಕ್ಕೆ ತೆಗೆದುಕೊಳ್ಳಲಾಯಿತು

ಪಕ್ಷದ ಸಭೆ ಪುನಃ ಜನವರಿ ೧೦ಕ್ಕೆ ಸೇರುವುದು

ಬೆಂಗಳೂರು ಡಿ. ೨೮

ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟ ಕಾಂಗ್ರೆಸ್ ಪಕ್ಷದ ಸಭೆಯು ಇಂದು ಮಧ್ಯಾಹ್ನ ೧ ಗಂಟೆಗೆ ಪುನಃ ಕುಮಾರಾಪಾರ್ಕಿನಲ್ಲಿ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯತೆಯಲ್ಲಿ ಸೇರಿತು.

ಶ್ರೀ ಎ. ಜಿ. ರಾಮಚಂದ್ರರಾಯರು ತಾವು ಕಳುಹಿಸಿರುವ ನಾಯಕತ್ವ ಬದಲಾವಣೆಯ ಅಗತ್ಯದ ನಿರ್ಣಯಕ್ಕೂ, ಅವಿಶ್ವಾಸ ನಿರ್ಣಯಕ್ಕೂ ಸ ಘಪದ್ದೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಸೂಚಿಸಿದರು.

ಶ್ರೀ ಎಸ್. ಚನ್ನಯ್ಯನವರು ಈಗಿರುವ ಜಿಜ್ಞಾಸಗಳನ್ನು ಮುಕ್ತಾಯಗೊಳಿಸುವುದು ಅವಶ್ಯಕ ಅವಿಶ್ವಾಸ ಠರಾವನ್ನು ಈ ಸಭೆಯಲ್ಲಿ ಮಂಡಿಸದಿರುವುದರಿಂದ ಶ್ರೀ ಕೆ. ಸಿ. ರೆಡ್ಡಿಯವರು ತಮ್ಮಲ್ಲಿ ಸಭೆಯ ವಿಶ್ವಾಸವಿದೆಯೇ ಎಂಬುದಾಗಿ ಕೇಳಬಹುದೆಂದು ತಿಳಿಸಿದರು.

ವಿಪುಲಚರ್ಚೆ ನಡೆದು ಬಂದು ಸರ್ವಸಮ್ಮತವಾಗಿ ಒಂದು ನಿರ್ಧಾರಕ್ಕೆ ಬಂದಿತು. ಶ್ರೀಗಳಾದ ಕೆ. ಸಿ. ರೆಡ್ಡಿ, ಕೆ. ಹನುಮಂತಯ್ಯ, ಎಸ್. ಚನ್ನಯ್ಯ, ಎಂ. ಎನ್. ಜೋಯಿಸ್ ಮತ್ತು ಟಿ. ಸಿದ್ದಲಿಂಗಯ್ಯನವರು ಪ್ರತ್ಯೇಕವಾಗಿ ಸೇರಿ ತಮ್ಮಲ್ಲಿ ಯೋಚನೆ ನಡೆಸಿ ತೀರ್ಮಾನಕ್ಕೆ ಬಂದು ಸಭೆಯ ಮುಂದಿಟ್ಟರು.

(೧) ಅವಿಶ್ವಾಸ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

(೨) ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಸೂಚನೆ ಮುಂತಾದವನ್ನು ಗಮನಿಸದೆ, ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿ, ಇಲ್ಲಿಯವರೆಗೆ ಸಭೆಯಲ್ಲಿ ನಡೆದ ಚರ್ಚೆಯನ್ನು ಗಮನಿಸಿ ನಾಯಕರಾದ ಶ್ರೀ ರೆಡ್ಡಿಯವರು ಮುಂದಿನ ತಿಂಗಳು ೧೦ನೇ ತಾರೀಖಿನೊಳಗೆ ತಮ್ಮ ಮಂತ್ರಿಮಂಡಲದ ಬಗ್ಗೆ ವಿಶ್ವಾಸವನ್ನು ಕೋರುವ ನಿರ್ಣಯವನ್ನು ಪಕ್ಷದ ಸಭೆಯು ಮುಂದಿಡಬೇಕು ಇಲ್ಲವಾದರೆ ತಮ್ಮ ಮಂತ್ರಿಮಂಡಲ ರಾಜೀನಾಮೆಯನ್ನೊಪ್ಪಿಸಬೇಕು.

ನಾಯಕರು ಈ ತೀರ್ಮಾನವನ್ನು ಸಭೆಯ ಮುಂದಿಟ್ಟು ಜನವರಿ ೧೦ ನೇ ತಾರೀಖಿಗೆ ಸಭೆಯನ್ನು ಮುಂದುವರಿಸಬೇಕೆಂದು ಹೇಳಿದರು. ಸದಸ್ಯರೆಲ್ಲರೂ ಇದಕ್ಕೆ ಒಪ್ಪಿಗೆಯಿತ್ತುದರಿಂದ ಸಭೆಯು ಮುಕ್ತಾಯವಾಯಿತು.

ನಿಧಿ ಸಂಗ್ರಹ

ಮಹಾರಾಜಾಕಾಲೇಜು ಶತಮಾನೋತ್ಸವಕ್ಕೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಹಾರಾಜಾಕಾಲೇಜು ಹಳೇ ವಿದ್ಯಾರ್ಥಿಗಳಿಂದ ೧೨೩೯ ರೂ. ಗಳು ವಸೂಲಾಗಿದೆ ಎಂದು ಗೌರವ ಕಾರ್ಯದರ್ಶಿ ಶ್ರೀ ಹೆಚ್. ಕೃಷ್ಣರಾಯರು ತಿಳಿಸುತ್ತಾರೆ.

ಜೈನ ದೇವಾಲಯಗಳಿಗೆ

ಭಾರತದಲ್ಲಿರುವ ಎಲ್ಲಾ ಜೈನ ದೇವಾಲಯಗಳಿಗೆ ಹರಿಜನ ಪ್ರವೇಶಕ್ಕೆ ಜೈನ ಜನಾಂಗವು ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ದೆಹಲಿಯಲ್ಲಿ ನಡೆದ ಅಖಿಲ ಭಾರತ ದಿಗಂಬರ ಪರಿಷತ್ತಿನವರು ನಿರ್ಣಯಮಾಡಿರುವರು.

ರೇಡಿಯೋ

ಎ. ಐ. ಆರ್. ಮೈಸೂರು

೩೧೦ ಮೀಟರು ೪೯ ೪೭ ಮೀಟರು

ಡಿಸೆಂಬರ್ ೩೦ ಶನಿವಾರ

ಬೆಳಗ್ಗೆ ೭-೧೫ ಸುಪ್ರಭಾತ, ಕಾರ್ಯಕ್ರಮವಿವರಣೆ. ೭-೨೦ ಚಿತ್ರಜಗತ್ (ರಿ) ೭-೪೫ ಕನ್ನಡದಲ್ಲಿ ವಾರ್ತೆ. ೮-೦ ಇಂಗ್ಲೀಷಿನಲ್ಲಿ ವಾರ್ತೆ. ೮-೧೫ ಮುಕ್ತಾಯ

ಮಧ್ಯಾಹ್ನ ೧-೩೦ ಇಂಗ್ಲೀಷಿನಲ್ಲಿ ವಾರ್ತೆ. ೧ ೪೦ ವೀಣೆ ೧-೪೫ ಟಿ. ನಾಗಮ್ಮ (ಕನ್ನಡ ಗಾದೆಗಳು) ೨-೦ ಬಾಲಜಗತ್ ೨-೩೦ ಮುಕ್ತಾಯ.

ಸಂಜೆ ೫-೩೦ ಟಿ ಎಸ್. ಮಂಜುಳ (ಸಂಗೀತ) ೬-೦ ಇಂಗ್ಲೀಷಿನಲ್ಲಿ ವಾರ್ತೆ ೬-೧೦ ಡಿ. ಕೆ ಪಟ್ಟಮ್ಮಾಳ್ (ರಿ) ೬-೩೦ ಸ್ಥಳೀಯ ಪ್ರಕಟಣೆ. ೬-೩೫ ಗ್ರಾಮಸ್ಥರಿಗಾಗಿ ೭-೦ ಸ್ಥಳೀಯ ಪ್ರಕಟಣೆ. (ಹಿಂದಿ) ೭.೫ ತಾಳ ವಾದ್ಯ ೭-೧೫ ವನಿತಾವಿಹಾರ ೭-೪೫ ಕನ್ನಡದಲ್ಲಿ ವಾರ್ತೆ ೮-೧ ಕೆ. ಎಸ್. ಸೀತಾರಾಮಶಾಸ್ತ್ರಿ (ಕಥಾಕಾಲಕ್ಷೇಪ) ೯-೦ ಇಂಗ್ಲೀಷಿನಲ್ಲಿ ವಾರ್ತೆ. ೯-೧೫ ಹಿಂದಿಯಲ್ಲಿ ವಾರ್ತೆ. ೯-೩೦ ವಾದ್ಯ ಸಮ್ಮೇಳನ ೯-೪೫ ಗೀತವಿನ್ಯಾಸ ೧೦-೦ ಮುಕ್ತಾಯ.

ಔದ್ಯೋಗಿಕ ಮತ್ತು ವ್ಯವಸಾಯ ಶಿಕ್ಷಣ

ಭಾರತಾದ್ಯಂತ ಎಲ್ಲಾ ಪ್ರೌಢ ಪಾಠಶಾಲೆಗಳಲ್ಲಿ ಔದ್ಯೋಗಿಕ ಮತ್ತು ವ್ಯವಸಾಯ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರವರು ಹೇಳಿರುವರು.

ಪ್ರೈಮರಿ ವಿದ್ಯಾಭ್ಯಾಸವನ್ನೂ ಕಡ್ಡಾಯವಾಗಿ ಎಲ್ಲರಿಗೂ ಕೊಡಬೇಕೆಂದೂ ತಿಳಿಸಿರುವರು.

ರಣಜಿತ್
29 12-50 ರಿಂದ 3 ನೇ ವಾರ
ದಿನವಹಿ 3 ಪ್ರದರ್ಶನಗಳು
ಫಿಲಂಸ್ಥಾರ್‌ರವರ
★ ಸರ್ಗಮ್ ★
(ಹಿಂದಿ)
ಪಾತ್ರ : ● ರಹೇನಾ ● ರಾಜಕಪೂರ್
ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ.
ಬೆಳಗಿನ ಪ್ರದರ್ಶನ 28-12-50 ರಿಂದ
3 ದಿನ ಮಾತ್ರ
ಖಜಾಂಚಿ

ಒಲಂಪಿಯಾ
28-12-50 ರಿಂದ ದಿನವಹಿ 3 ಆಟಗಳು
ವಿವಿಧ ನೃತ್ಯಗಳಿಂದ ನಿಮ್ಮ ಮನಸ್ಸನ್ನು ಸೂರೆಗೊಳ್ಳುವ
ರೆಹನ, ಸಿತಾರ ಮತ್ತು ಪ್ಯಾರೋ
ಪಾತ್ರವಹಿಸಿರುವ
ಕಿಶೋರ್ ಸಾಹುರವರ
★ ಬಿಜಲಿ ★
(ಹಿಂದಿ)
ಬೆಳಗಿನ ಪ್ರದರ್ಶನ
28-12-50 ರಿಂದ 5 ದಿನಗಳು ಮಾತ್ರ
ಶೋಕಿನ್

ಅಪೇರಾ
27-12-50 ರಿಂದ ಪ್ರತಿದಿನ 3 ಆಟಗಳು
ಸಂಸಾರ ನಾರದ
● ಕೃಷ್ಣಮೂರ್ತಿ,
● ಸುಬ್ಬರಾವ್,
● ಸರೋಜ,
ಪಾತ್ರವಹಿಸಿರುವ
(ಅತ್ಯಮೋಘ ತೆಲುಗು ಚಿತ್ರ)

ಸಂಪಾದಕರು ಮತ್ತು ಪ್ರಕಾಶಕರು : ಜಿ. ಎಲ್. ಸ್ವಾಮಿ. ಟೂರಿಸ್ಟ್ ಬ್ಯೂರೋ, ಮೈಸೂರು. ಮುದ್ರಕರು ಜಿ. ಹೆಚ್. ರಾಮರಾವ್, ಬಿ ಎಸ್‌ಸಿ. ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು.

ಬಿಡಿ ಪತ್ರಿಕೆ 3 ಪೈ ದಿನ ಪತ್ರಿಕೆ Phone: 574

ಸಮಾಚಾರ

SAMACHARA, MYSORE

ಸಂಪಾದಕ : ಜಿ. ಎಲ್. ಸ್ವಾಮಿ

ಸಂಪುಟ ೧] ೩೦—೧೨—೧೯೫೦ ನೇ ಶನಿವಾರ [ಸಂಚಿಕೆ ೧೦೦

ಸೇವಾದಳ ಶಕ್ತಿಯುತ ಸಂಸ್ಥೆಯಾಗಬೇಕು

ಡಾ|| ಹಾರ್ಡೀಕರರ ಹಿತೋಕ್ತಿ

ಬೆಂಗಳೂರು, ಡಿ. ೨೯

‘ ನಮಗೆ ನರವಿದೆ ಮತ್ತು ನಾವು ನಮ್ಮ ಗುರಿಸಾಧಿಸಬಲ್ಲೆವೆಂಬ ಸ್ಥೈರ್ಯ ನಮಗಿದೆ’ ಎಂದು ಸೇವಾದಳದ ಸ್ಥಾಪನಾಚಾರ್ಯರಾದ ಡಾ|| ಎನ್. ಎಸ್. ಹರ್ಡೀಕರರು ನಿನ್ನೆ ಪ್ರಾತಃಕಾಲ ರೇಸ್‌ಕೋರ್ಸಿನಲ್ಲಿ ಸೇವಾದಳದ ರ್‍ಯಾಲಿಯನ್ನು ನೆರವೇರಿಸುತ್ತ ಹೇಳಿದರು. ಸಮಾರಂಭದ ಅಂಗವಾಗಿ ರಾಷ್ಟ್ರಧ್ವಜದ ಆರೋಹಣ ನೆರವೇರಿಸಿದರು. ಸಂಸ್ಥಾನಾದ್ಯಂತದಿಂದ ಸುಮಾರು ೨೦೦೦ ಸ್ವಯಂಸೇವಕರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಡಾ|| ಹರ್ಡೀಕರವರು ‘ ಇದು ಸೇವಾದಳದ ೨೭ನೆಯ ವಾರ್ಷಿಕೋತ್ಸವ. ೧೯೨೩ ರಲ್ಲಿ ಕಾಕಿನಾಡದಲ್ಲಿ ಪ್ರಜ್ವಲಗೊಂಡ ರಾಷ್ಟ್ರೀಯ ತೇಜಸ್ಸು, ಎಷ್ಟೇ ಎಡರು ತೊಡರುಗಳನ್ನು ಸೇವಾದಳವು ಎದುರಿಸಬೇಕಾಗಿ ಬಂದರೂ ಸ್ವಯಂಸೇವಕರಲ್ಲಿ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವುದನ್ನು ಕಂಡು ನನಗೆ ಆತ್ಮವಿಶ್ವಾಸವುಂಟಾಗುತ್ತದೆ. ಸ್ವಯಂಸೇವಕರು ಪಡಬೇಕಾದ ಕಷ್ಟ ಕಾರ್ಪಣ್ಯಗಳನ್ನು ನಾನು ಬಲ್ಲೆ. ಅವರ ಸ್ಥೈರ್ಯ, ಉತ್ಸಾಹ ಮತ್ತು ತದೇಕನಿಷ್ಠೆಯನ್ನು ನಾನು ಮೆಚ್ಚಿದ್ದೇನೆ ಇವತ್ತು ಕಾಲ ಅನುಕೂಲವಾಗಿದೆ. ಆದರೆ ನಮ್ಮ ಗಮನದ ಹಾದಿ ಕಾಲ್ತೊಡರುಗಳಿಂದ ಕೂಡಿದೆ ಲೋಕಯಾತ್ರಿಕನ ಧೈರ್ಯಗಳಿಂದ ನಮ್ಮ ಹಾದಿಯನ್ನು ತುಳಿಯೋಣ ’ ಎಂದರು.

‘ ಸೇವಾದಳವು ಶಕ್ತಿಯುತವಾದ ಸೇವಾ ಸಂಸ್ಥೆಯಾಗಿ ಬೆಳೆಯಬೇಕೆಂದೂ ಕ್ರಿಯಾವಂತರಾದ ಉತ್ಸಾಹಿ ಯುವಕರಿಂದ ಇದು ಕೂಡಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಳವಳಿಯಾಗಿ ಮಾರ್ಪಟ್ಟು ಇತೋಪ್ಯತಿಶಯವಾಗಿ ಅಭಿವೃದ್ಧಿಗೊಳ್ಳಬೇಕೆಂದೂ ನಾನು ಪದೇಪದೇ ಹೇಳಬೇಕಾಗಿಲ್ಲ. ನಾವು ಈ ಸಂಸ್ಥೆಯ ಮೂಲಕ ಜವಣಿಸಿಕೊಂಡು ಆಚರಣೆಗೆ ತರಬೇಕಾದ ನೀತಿ ನಡವಳಿಕೆಗಳೂ ತತ್ವ ಸಿದ್ಧಾಂತಗಳೂ ಇದಕ್ಕೆ ಅನುಗುಣವಾಗಿರಬೇಕು. ಲೋಕಶಾಂತಿ ಮತ್ತು ಸೋದರಭಾವವನ್ನೇ ಪರಮ ಧ್ಯೇಯವಾಗುಳ್ಳ ಆರ್ಥಿಕ ಸಾಮಾಜಿಕರಾಜಕೀಯ ಹಕ್ಕು ಬಾಧ್ಯತೆಗಳಿಂದಲೂ ಸಮಾನಾವಕಾಶಗಳಿಂದಲೂ ಆಧಾರಗೊಂಡ ಸರ್ವ ಜನ ಹಿತಸಾಧಕವಾದ ಸಹಕಾರಿ ಕಾರ್ಯ ಯೋಜನೆಯನ್ನು ಜನರಲ್ಲಿ ರೂಢಿಸಲು ಯುವ ಜನದ ಶಕ್ತಿ ಸಾಮರ್ಥ್ಯಗಳಿಗೆ ಕ್ರಮಬದ್ಧವಾದ ಸಂಸ್ಕಾರವನ್ನು ನೀಡುವುದೇ ಸೇವಾದಳದ ಗುರಿಯಾಗಿರಬೇಕು.

‘ ಮೇಲೆ ಸೂಚಿಸಿರುವ [illegible]ನ್ನು ನೆರವೇರಿಸಲು ಪ್ರಬಲವೂ ಪರಿಣಾಮಕಾರಿಯೂ ಆಗಿ ಈ ಸಂಸ್ಥೆಯನ್ನು ಬೆಳೆಸಬೇಕಾದರೆ ಸ್ವಾವಲಂಬನವೇ ಸರ್ವಪ್ರಥಮವಾದ ಆವಶ್ಯಕತೆ. ನಮ್ಮನ್ನು ಪ್ರಗತಿಪಥದಲ್ಲಿ ಮುಂದಕ್ಕೆ ಒಯ್ಯಬಲ್ಲುದು ಶೀಲ ಮತ್ತು ಸಚ್ಚಾರಿತ್ರ್ಯಗಳು ಸೇವಾದಳದ ಸ್ವಯಂಸೇವಕರು ಆತ್ಮಾವಲಂಬನವನ್ನು ಅಭ್ಯಸಿಸಬೇಕೆಂದು ನಾನು ಮೊರೆಯಿಡುತ್ತೇನೆ ಸೇವಾದಳ ಸಂಸ್ಥೆಯೂ ಅದರ ಚಟುವಟಿಕೆಗಳೂ ಸರ್ವವಿಧದಲ್ಲೂ ಆತ್ಮಾವಲಂಬಿಯಾಗಿ ವೃದ್ಧಿಗೊಳ್ಳಬೇಕು.

‘ ದೂರದ ಆಕಾಶದಲ್ಲಿ ಹೊಳೆಯುವ ನಕ್ಷತ್ರಗಳನ್ನು ನಾವು ಕಣ್ಣಿಟ್ಟು ನೋಡುವ ಭರದಲ್ಲಿ ನಾವು ನಿಂತಿರುವ ಭೂಮಿಯನ್ನು ನಮ್ಮನ್ನು ಸುತ್ತುವರದಿರುವ ವಾತಾವರಣವನ್ನೂ ಮರೆಯದಿರೋಣ. ಮನುಷ್ಯನು ಸಮಾಜ ಕರ್ತವ್ಯಗಳನ್ನು ನಿರ್ವಹಿಸುವಂತೆ ಮಾಡುತ್ತಿರುವ ಶಕ್ತಿಯೆಂದರೆ ಶೀಲ ಮತ್ತು ಸಚ್ಚರಿತೆ ಇದನ್ನು ಕುರಿತು ಬಹಳ ಹೇಳಬೇಕಾಗಿದೆ. ಅದನ್ನು ಬೆಳೆಸಿಕೊಳ್ಳಿ, ರೂಢಿಸಿಕೊಳ್ಳಿ. ವ್ಯಕ್ತಿಗಳಲ್ಲೂ ಸಂಸ್ಥೆಗಳಲ್ಲೂ ವ್ಯವಹಾರಗಳಲ್ಲೂ ನೀವು ಸಂಪರ್ಕವಿಟ್ಟಿರುವ ಎಲ್ಲೆಲ್ಲೂ ಇದನ್ನು ಬಲಪಡಿಸಿ ವೃದ್ಧಿಗೊಳಿಸಿಕೊಳ್ಳಿ. ಇದೇ ಸೇವಾದಳದಲ್ಲಿ ಯುವಕರಿಗೆ ನೀಡುವ ಸಂಸ್ಕಾರ. ನಮ್ಮ ಚಟುವಟಿಕೆಯ ಪ್ರತಿ ಅಂಶದಲ್ಲೂ, ನಮ್ಮ ಯೋಚನೆಯ ಪ್ರತಿ ಅಂಶದಲ್ಲೂ ನಮ್ಮ ದೇಹದ ಪ್ರತಿಕಣದಲ್ಲೂ ಶೀಲ ಮತ್ತು ಸಚ್ಚಾರಿತ್ರ್ಯಗಳ ಮುದ್ರೆಯನ್ನು ಧಾರಣೆ ಮಾಡೋಣ.

‘ ಈ ಕಾರ್ಯದಲ್ಲಿ ನನ್ನ ಸಹಾಯ ಮತ್ತು ಮಾರ್ಗದರ್ಶನವನ್ನು ನಾನು ನೀಡಲು ಭರವಸೆಕೊಡುತ್ತೇನೆ.’

ಪುರಸಭೆಯ ಅಧಿವೇಶನ

ಮೈಸೂರು ಡಿ. ೨೯

ಮೈಸೂರು ಪುರಸಭೆಯ ಸಾಮಾನ್ಯ ಅಧಿವೇಶನವು ಇಂದು ಸಂಜೆ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ ಸಾಮಾನ್ಯ ವಿಷಯಗಳನ್ನು ಚರ್ಚಿಸಿತು ಮುಂದಿನ ವರ್ಷಕ್ಕೆ ಎಲ್ಲಾ ಉಪಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲಾಯಿತು.

ಮ್ಯಾನೇಜಿಂಗ್ ಕಮಿಟಿ:—ಶ್ರೀಗಳಾದ ಬಿ. ಕೆ. ರಾಮಕೃಷ್ಣಯ್ಯ, ಟಿ. ನಾರಾಯಣಪ್ಪ, ಜಿ. ಆರ್. ರಂಗಸ್ವಾಮಯ್ಯ, ಎಸ್. ಲಿಂಗಣ್ಣ, ಪಿ. ಸೀತಾರಾಮಯ್ಯ, ಹೆಚ್. ಎಲ್. ಮುದ್ದಯ್ಯ, ಎಲ್. ರಾಚಯ್ಯ ಜನಾಬ್ ಅಹಮದ್ ಖಾನ್.

ವರ್ಕ್ಸ್ ಕಮಿಟಿ:—ಶ್ರೀಗಳಾದ ಎಂ. ಆರ್. ಶ್ರೀನಿವಾಸಯ್ಯಂಗಾರ್, ಚೌಡಯ್ಯ, ಪಿ. ಸೀತಾರಾಮಯ್ಯ, ಜನಾಬ್ ಅಹಮದ್ ಖಾನ್.

ಹೆಲ್ತ್ ಕಮಿಟಿ:—ಶ್ರೀಗಳಾದ ಬಿ. ಜಿ. ದಾಸ್, ಪಿ. ಡಿ. ಕೃಷ್ಣಸ್ವಾಮಿ, ಲಿಂಗಯ್ಯ, ಜನಾಬ್ ಸರ್ದಾರ್ ಅಬ್ದುಲ್ ರಹಿಮಾನ್.

ಟೌನ್‌ಹಾಲ್ ಕಮಿಟಿ:—ಶ್ರೀಗಳಾದ ಯು. ಎಲ್. ರಾಮಚಂದ್ರರಾವ್, ಟಿ. ಎಸ್. ರಾಜಗೋಪಾಲಯ್ಯಂಗಾರ್, ಡೇವಿಡ್, ರೇ ಫಾದರ್ ಆಡಿಯೋ.

ಆಡಿಟ್ ಕಮಿಟಿ:—ಶ್ರೀಗಳಾದ ಎಂ. ಎಸ್. ನಂಜಪ್ಪ, ಸುಬ್ಬಣ್ಣ, ಬಿ. ಕೆ. ರಾಮಕೃಷ್ಣಯ್ಯ.

ಲೀಗಲ್ ಕಮಿಟಿ:—ಶ್ರೀಗಳಾದ ಟಿ. ನರಸಿಂಹಯ್ಯಂಗಾರ್, ಪಿ. ಸೀತಾರಾಮಯ್ಯ, ಬಿ. ಕೆ. ರಾಮಕೃಷ್ಣಯ್ಯ.

ಇಂದಿನ ಪೌರಸಭಾ ನಡೆವಳಿಕೆಗಳನ್ನು ವೀಕ್ಷಿಸಲು ಆಜ್ಜಂಪುರ ಪೌರಸಭೆಯ ಅಧ್ಯಕ್ಷ ಶ್ರೀ ಎಸ್. ಸುಬ್ರಹ್ಮಣ್ಯಶೆಟ್ಟಿಯವರು ಮತ್ತು ಕೆಲವು ಸದಸ್ಯರು ಬಂದಿದ್ದರು.

ಅಭಾವದ ಪ್ರದೇಶಗಳಲ್ಲಿ ಧಾನ್ಯಶೇಖರಣೆ ಇಲ್ಲ

ಪ್ರಾಂತದಲ್ಲಿ ಆಹಾರ ಧಾನ್ಯಗಳ ಅಭಾವವಿರುವ ಜಿಲ್ಲೆಗಳಲ್ಲಿ ಬರುವ ಜನವರಿ ೧ ರಿಂದ ಧಾನ್ಯ ಶೇಖರಣೆ ಮಾಡಕೂಡದೆಂದು ಮದರಾಸ್ ಸರ್ಕಾರ ಆಜ್ಞೆಮಾಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಮೇಣರೇಷನಿಂಗ್ ರದ್ದುಗೊಳಿಸುವ ಯೋಜನೆಯ ಮೊದಲ ಹಂತ ಇದೆಂದು ಹೇಳಲಾಗಿದೆ.

ಸುಗ್ಗಿಯ ಫಸಲು ಚೆನ್ನಾಗಿದ್ದು ಸ್ಥಳೀಯ ಪರಿಸ್ಥಿತಿ ತೃಪ್ತಿಕರವಾಗಿದ್ದಲಿ ಅಂಥ ಹಳ್ಳಿಗಳಲ್ಲಿ ರೇಷನಿಂಗ್ ರದ್ದುಗೊಳಿಸಲು ಕಲೆಕ್ಟರುಗಳಿಗೆ ಅಧಿಕಾರಕೊಡಲಾಗಿದೆ.

ಸಂಸ್ಥೆಯ ಹಿತವನ್ನು ಗಮನಿಸಿ

ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರ ಬಗ್ಗೆ ಸೂಚಿಸಿರುವ ಅವಿಶ್ವಾಸ ನಿರ್ಣಯದಿಂದ ಮೈಸೂರು ಕಾಂಗ್ರೆಸ್ಸಿನಲ್ಲಿ ಇತ್ತೀಚೆಗೆ ಆಗುತ್ತಿರುವ ಪರಿವರ್ತನೆಗಳ ಬಗ್ಗೆ ತಮ್ಮ ಅಭಿಪ್ರಾಯವೇನು ಎಂಬ ಪ್ರಶ್ನೆಗೆ, ಕೆ. ಪಿ ಸಿ.ಸಿ. ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು, ಅಧಿಕಾರ ಸ್ಥಾನಗಳು ಮತ್ತು ಸೌಲಭ್ಯಾವಕಾಶಗಳನ್ನು ಗಳಿಸಿಕೊಳ್ಳಲು ಈಗ ನಡೆಯುತ್ತಿರುವ ಯತ್ನ, ಅದರ [illegible] ಜಾತೀಯತಾಭಾವನೆ ಇವು ತಮಗೆ ವಿಸ್ಮಯ ಮತ್ತು ವಿಷಾದವುಂಟುಮಾಡಿದೆಯೆಂದು ತಿಳಿಸಿದರು. ಈ ಪ್ರಕರಣದಲ್ಲಿ ಸ್ವಲಾಭ ರಾಜಕೀಯ ಮುಖ್ಯಸ್ಥಾನ ಪಡೆದಿರುವುದು ವಿಷಾದಕರ. ಉಭಯತ್ರರೂ ಪರಸ್ಪರ ಮಧ್ಯಸ್ಥಿಕೆ ಮನೋಭಾವದಿಂದ ವರ್ತಿಸಿ ಕಾಂಗ್ರೆಸ್ ಸಂಸ್ಥೆಯ ಹಿತವನ್ನು ಗಮನಿಸುವರೆಂದು ತಾವು ಆಶಿಸುವುದಾಗಿ ಅವರು ತಿಳಿಸಿದರು.

ಈ ಬಗ್ಗೆ ಚರ್ಚೆಮುಂದುವರಿಸಲು ಅವರು ಒಪ್ಪಲಿಲ್ಲ.

ಹೋಟಲು ಕೆಲಸಗಾರರ ಮುಷ್ಕರ

ಬೊಂಬಾಯಿನಲ್ಲಿ ಮುಷ್ಕರ ಹೂಡಿರುವ ೧೮೦೦ ಮಂದಿ ಹೋಟೆಲು ಕೆಲಸಗಾರರು ಮಾಲೀಕವರ್ಗ ಇತ್ತಿದ್ದ ೪೮ ಗಂಟೆಗಳ ನೋಟೀಸನ್ನು ಅನುಸರಿಸಿ ಕೆಲಸಕ್ಕೆ ಹಿಂದಿರುಗದಿದ್ದುದರಿಂದ ಅವರನ್ನು ಕೆಲಸದಿಂದ ವಜಾಮಾಡಲಾಯಿತು. ನಗರದ ೮ ಭಾರಿ ಹೋಟೆಲುಗಳಿಗೆ ಸೇರಿದ ಈ ಕೆಲಸಗಾರರು ತಮ್ಮ ಸಂಬಳಸಾರಿಗೆಗಳನ್ನು ಹೆಚ್ಚಿಸಬೇಕೆಂದು ಕ್ರಿಸ್‌ಮಸ್ ಸಂಜೆ ಮುಷ್ಕರ ಪ್ರಾರಂಭಿಸಿದರು.

ಫಿಸಿಕ್ಸ್ ಪ್ರೊಫೆಸರಾಗಿ ನೇಮಕ

ಕೋಲಾರದ ಇಂಟರ್‌ಮೀಡಿಯೆಟ್ ಕಾಲೇಜಿನ ಸೂಪರಿಂಟೆಂಡೆಂಟರಾದ ಡಾ|| ಎಲ್. ಸೀಬಯ್ಯನವರನ್ನು ಮೈಸೂರು ವಿಶ್ವವಿದ್ಯಾನಿಲಯದ (ಖಾಯಂ) ಫಿಸಿಕ್ಸ್ ಪ್ರೊಫೆಸರಾಗಿ ನೇಮಿಸಲಾಗಿದೆ.

ಸಮಾಚಾರ

ಶನಿವಾರ ತಾರೀಖು ೩೦

ಇದೇನು ಹುಡುಗಾಡಿಕೆ

ಮೈಸೂರು ನಗರ ಸಭೆಯ ಮಾಹೆಯಾನಾ ಅಧಿವೇಶನವು ನಿನ್ನೆ ನಡೆದು ಮುಂದಿನ ವರ್ಷಕ್ಕೆ ಉಪಸಮಿತಿಯ ಸದಸ್ಯರುಗಳ ಚುನಾವಣೆಯು ನಡೆಯಿತು. ಕಾಂಗ್ರೆಸ್ ಪಕ್ಷದವರು ಮಾಮೂಲಿನಂತೆ ತಮ್ಮ ಪಕ್ಷದ ಸದಸ್ಯರನ್ನು ಈ ಉಪಸಮಿತಿಗಳಿಗೆ ಚುನಾಯಿಸಿಕೊಳ್ಳುವುದಲ್ಲದೆ ಪ್ರಜಾಸಂಘದ ಕೆಲವು ಸದಸ್ಯರನ್ನು ಸೂಚಿಸಿ ಸರ್ವಾನುಮತದಿಂದ ಚುನಾವಣೆ ನಡೆಯಿತು. ಅಂದರೆ ಪ್ರಜಾಸಂಘದವರೂ ಈ ಉಪಸಮಿತಿಗಳಲ್ಲಿರಲು ಸಮ್ಮತಿಸಿದುದರಿಂದ ಅವಿರೋಧವಾಗಿ ಚುನಾವಣೆ ನಡೆಯಿತು.

ನವಂಬರ್ ತಿಂಗಳ ಮಧ್ಯಭಾಗದಲ್ಲಿ, ವಾಚಕರಿಗೆ ತಿಳಿದಿರುವಂತೆ, ಈ ಪ್ರಜಾಸಂಘದ ಸದಸ್ಯರೆಲ್ಲರೂ ಒಬ್ಬೊಬ್ಬರಾಗಿ ಈ ಉಪಸಮಿತಿಗಳಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು. ಈ ಸದಸ್ಯರಿಗೆ ದೆಹಲಿಯಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ಹೋಗಲು ಚುನಾಯಿಸಲಿಲ್ಲವೆಂದು ಪ್ರತಿಭಟಿಸಲೋಸುಗ ರಾಜೀನಾಮೆಯನ್ನಿತ್ತರು. ಸದಸ್ಯರನ್ನು ವಿಚಾರಿಸಲಾಗಿ ದೆಹಲಿ ಪ್ರಸಂಗಕ್ಕೂ ತಮ್ಮ ರಾಜೀನಾಮೆಗೂ ಸಂಬಂಧವಿಲ್ಲವೆಂದೂ ಕಾಂಗ್ರೆಸ್ ಸದಸ್ಯರು ಮಾಡುತ್ತಲಿರುವ ಕೆಲಸಕಾರ್ಯಗಳು ಸಮರ್ಪಕವಾಗಿಲ್ಲವಾಗಿ ತಾವು ಈ ಉಪಸಮಿತಿಗಳಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿದರು.

ನಿನ್ನೆ ನಡೆದ ಚುನಾವಣೆಯಲ್ಲಿ ಪುನಃ ಉಪಸಮಿತಿಗಳಿಗೆ ಸೇರಿರುವರು. ಇದೇನು ವಿಚಿತ್ರವೋ ಹೇಳಲಾಗುವುದಿಲ್ಲ. ಉಪಸಮಿತಿಗಳಿಗೆ ರಾಜೀನಾಮೆಯಿತ್ತದ್ದೇಕೆ ? ಪುನಃ ಈಗ ಸೇರುವುದೇಕೆ ? ಈ ಪಕ್ಷದವರ ಕೆಲಸಕಾರ್ಯಗಳಲ್ಲಿ ತಪ್ಪು, ಶಿಸ್ತು, ಮುಂತಾದುವೇನಾದರೂ ಇದೆಯೇ ಎಂಬುದೇ ದೊಡ್ಡಶಂಕೆ. ಒಂದೆಡೆ ಕಾಂಗ್ರೆಸ್ ಸದಸ್ಯರ ಬೆಂಬಲ, ಅವರ ಕೆಲಸಕಾರ್ಯಗಳಲ್ಲಿ ಒಪ್ಪಿಗೆಯಿಲ್ಲವೆಂದು ಹೇಳುವುದು. ಪುನಃ ಅವರೊಡನೆ ಸೇರುವುದು. ಬಿಡುವುದು, ಪುನಃ ಸೇರುವುದು ಇದೇನು ಹುಡುಗಾಟಿಕೆ ?

೪೦ ಅಡಿ ಎತ್ತರದ ಪೆಡಂಭೂತ 'ಡೈನೋಸಾರ್'

ವಂಶನಷ್ಟವಾಗಿ ಹೋಗಿದೆಯೆಂದು ಲೋಕಭಾವಿಸಿರುವ ಇತಿಹಾಸ ಪೂರ್ವಕಾಲದಲ್ಲಿತ್ತೆಂದು ಹೇಳಲಾಗಿರುವ ೪೦ ಅಡಿ ಎತ್ತರದ ಪೆಡಂಭೂತ 'ಡೈನೊಸಾರ್'ನ್ನು ತಾವು ನ್ಯೂಗಿನಿ ಕಾಡಿನಲ್ಲಿ ಕಂಡಂತೆ ಅಮೆರಿಕದ ಚಾರ್ಲ್ಸ್‌ಮಿಲ್ಲರ್ ಆತನ ನವವಧು ತಮ್ಮ "ಕ್ಯಾನಿಬಾಲ್ ಕ್ಯಾರವಾನ್"ಎಂಬ ಪ್ರವಾಸಪುಸ್ತಕದಲ್ಲಿಬರೆದಿದ್ದಾರೆ.

ಅಸ್ಥಿಶಾಸ್ತ್ರಜ್ಞರು ಪುನರ್ನಿರ್ಮಿಸಿಟ್ಟಿರುವ ಮ್ಯೂಸಿಯಂ ಡೈನೋಸಾರ್ ಮಾದರಿಯಲ್ಲಿಯೆ ಅದು ಇತ್ತೆಂದು ಅವರು ತಿಳಿಸುತ್ತಾರೆ.

ಮೈಸೂರು ಪ್ರಾಂತೀಯ ಸಹಕಾರ ಸಮ್ಮೇಳನ

ಮೈಸೂರು ಡಿ. ೩೦

ಮೈಸೂರು ಪ್ರಾಂತೀಯ ಸಹಕಾರ ಸಮ್ಮೇಳನ ಇಂದು ಬೆಳಗ್ಗೆ ೯ ಗಂಟೆಗೆ ಮೈಸೂರು ಸಹಕಾರಭವನದಲ್ಲಿ ಪ್ರಾರಂಭವಾಯಿತು. ಸಹಕಾರ ಸಚಿವರಾದ ಶ್ರೀ ಟಿ ಮರಿಯಪ್ಪನವರು ಪ್ರಾರಂಭೋತ್ಸವವನ್ನು ನಡೆಸಿದರು. ಕೇಂದ್ರ ಸರ್ಕಾರದ ವ್ಯವಸಾಯ ಕಾರ್ಯದರ್ಶಿ ಶ್ರೀ ಕೆ. ಎಲ್. ಪಂಜಾಬಿಯವರು ಅಧ್ಯಕ್ಷತೆ ವಹಿಸಿದ್ದರು.

ಪ್ರೊವಿನ್ಸಿಯಲ್ ಕೋ-ಆಪರೇಟಿವ್ ಇನ್ಸ್ಟಿಟ್ಯೂಟಿನ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್‌ರವರು, ಸಮ್ಮೇಳನದ ಸ್ವಾಗತಸಮಿತಿ ಅಧ್ಯಕ್ಷರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರವರು ಅತಿಥಿಗಳನ್ನೂ, ಪ್ರತಿನಿಧಿಗಳನ್ನೂ ಸ್ವಾಗತಿಸಿದರು.

ಸಮ್ಮೇಳನವನ್ನು ಉದ್ಘಾಟಿಸುತ್ತಾ ಶ್ರೀ ಟಿ ಮರಿಯಪ್ಪನವರು ಸಂಸ್ಥಾನದಲ್ಲಿ ೪೫ ವರ್ಷಗಳಿಂದಲೂ ಸಹಕಾರ ಸಂಘಗಳು ವಿಶೇಷ ಕಾರ್ಯವನ್ನೆಸಗಿವೆ, ಗ್ರಾಮಾಂತರಗಳಲ್ಲಿ ಸಹಕಾರತತ್ವಗಳು ಹೊಸದೇನೂ ಅಲ್ಲ. ನೂರಾರು ವರ್ಷಗಳಿಂದ ಸಹಕಾರತತ್ವದ ಮೇಲೆ [illegible] ಕೆಲಸಕಾರ್ಯಗಳು ನಡೆಯುತ್ತಲಿವೆ ಇತ್ತೀಚೆಗೆ ವಿವಿಧೋದ್ದೇಶ ಸಹಕಾರಸಂಘಗಳನ್ನು ಸ್ಥಾಪಿಸಿ ಜನರ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲು ಅನುಕೂಲವಾಗಿದೆ ಸಹಕಾರ ತತ್ವಕ್ಕನುಸಾರವಾಗಿ ಅನೇಕ ಭಾಗಗಳಲ್ಲಿ ಮಹನೀಯರು ಕೆಲಸಮಾಡುತ್ತಲಿರುವರು. ಆದರೆ ಕೆಲವು ಸ್ವಾರ್ಥಿಗಳು, ಪಕ್ಷಗಳು ವಿರೋಧವಾಗಿ ಕೆಲಸಮಾಡುತ್ತಲಿದ್ದಾಗ್ಯೂ ತತ್ವಕ್ಕನುಗುಣವಾಗಿ ಇತರರು ಕೆಲಸಮಾಡಿದಲ್ಲಿ ಸಹಕಾರಸಂಘಗಳು ಅಭಿವೃದ್ಧಿಯಾಗುವುವೆಂದೂ ತಿಳಿಸಿದರು.

ಶ್ರೀ ಪಂಜಾಬಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಭಾರತದಲ್ಲಿಸಹಕಾರಪದ್ಧತಿಯು ಯಾವ ರೀತಿಯಾಗಿ ಅಭಿವೃದ್ಧಿಗೆ ಬರುತ್ತಲಿದೆಯೆಂಬುದನ್ನು ವಿವರಿಸಿ ಮೈಸೂರಿನಲ್ಲಿ ನಡೆದಿರುವ ಕೆಲಸಗಳಿಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು

ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ ಸರ್ದಾರ್ ಪಟೇಲರ ನಿಧನದ ಬಗ್ಗೆ ಸಮ್ಮೇಳನವು ತನ್ನ ಅನುತಾಪವನ್ನು ಸೂಚಿಸಿ, ಎರಡು ನಿಮಿಷ ಮೌನವನ್ನಾಚರಿಸಿತು.

ಒಲಂಪಿಯಾ

28-12-50 ರಿಂದ ದಿನವಹಿ 3 ಆಟಗಳು

ವಿವಿಧ ನೃತ್ಯಗಳಿಂದ ನಿಮ್ಮ ಮನಸ್ಸನ್ನು
ಸೂರೆಗೊಳ್ಳುವ
ರೆಹನ, ಸಿತಾರ ಮತ್ತು ಪ್ಯಾರೋ
ಪಾತ್ರವಹಿಸಿರುವ
ಕಿಶೋರ್‌ಸಾಹುರವರ

★ ಬಿಜಿಲಿ ★

(ಹಿಂದಿ)

ಬೆಳಗಿನ ಪ್ರದರ್ಶನ

28-12-50 ರಿಂದ 5 ದಿನಗಳು ಮಾತ್ರ

ಶೋಕಿನ್

ರೈಲ್ವೆ ಪುನರ್ವಿಂಗಡನೆ

ಮುಂದಿನ ಪಾರ್ಲಿಮೆಂಟು ಸಭೆ ಸೇರುವುದರೊಳಗಾಗಿಯೇ ರೈಲ್ವೆ ಪುನರ್ವಿಂಡಗನೆ ಕಾರ್ಯಕ್ರಮವು, ಅತ್ಯಂತ ಸ್ಥಳ ಪಲ್ಲಟ ರೀತಿಯಲ್ಲಿ ನಡೆಯುವುದೆಂದು ರೈಲ್ವೆ ಉಪಸಚಿವ ಶ್ರೀ ಸಂತಾನಂರವರು ಬೊಂಬಾಯಿನಲ್ಲಿ ತಿಳಿಸಿರುವರು.

ಹೊಸಹುದ್ದೆ

ಸ್ಪೆಷಲ್ ಚೀಫ್ ಇಂಜನಿಯರ್ ಆಗಿ ರಜಾದ ಮೇಲಿರುವ ಶ್ರೀ ಬಿ.ಎಸ್. ನರಸಿಂಗರಾಯರನ್ನು ಜನವರಿ ೧೩ರಿಂದ ಕೃಷ್ಣರಾಜಸಾಗರ ಮತ್ತು ಮೇಜರ್ ಇರಿಗೇಷನ್ ವರ್ಕ್ಸ್‌ನ ಅಡ್ವೈಜರ್‌ರಾಗಿ ನೇಮಕ ಮಾಡಲಾಗಿದೆ.

ನ್ಯೂ ಆಪೇರಾ
ಶ್ರೀ
ಟಾಕೀಸ್
ಮೈಸೂರು

೩೦-೧೨-೫೦ ಪ್ರತಿದಿನ ೩ ಆಟಗಳು

ಕೃಷ್ಣ ವಿಜಯಂ

(ತಮಿಳು)

ಆರ್. ಬಾಲಸುಬ್ರಮಣ್ಯಂ
ಲಲಿತ : ಪದ್ಮಿನಿ-ಪ್ರೇಮಾವತಿ
ಅಂಗ ಮುತ್ತು : ನರಸಿಂಹಭಾರತಿ
ವಸಂತಕೋಕಿಲಂ : ಭಾಗ್ಯಮ್

ರಣಜಿತ್

29-12-50 ರಿಂದ 3 ನೇ ವಾರ

ದಿನವಹಿ 3 ಪ್ರದರ್ಶನಗಳು

ಫಿಲಂಸ್ತಾನ್‌ರವರ

★ ಸರ್ಗಮ್ ★

(ಹಿಂದಿ)

ಪಾತ್ರ : ● ರಹೇನಾ ● ರಾಜಕಪೂರ್

ಈ ಚಿತ್ರದೊಂದಿಗೆ ಸರ್ದಾರ್ ಪಟೇಲರ ಅಂತಿಮ ಯಾತ್ರೆಯ ಚಿತ್ರವನ್ನು ತೋರಿಸಲಾಗುತ್ತದೆ

ಬೆಳಗಿನ ಪ್ರದರ್ಶನ 28-12-50 ರಿಂದ

3 ದಿನ ಮಾತ್ರ

ಖಜಾಂಚಿ

ಸಂಪಾದಕರು ಮತ್ತು ಪ್ರಕಾಶಕರು: ಜಿ ಎ
ಸ್ವಾಮಿ. ಟ್ಯೂರಿಸ್ಟ್‌ಬ್ಯೂರೋ, ಮೈಸೂರು. ಮುದ್ರಕ
ಜಿ. ಹೆಚ್. ರಾಮರಾವ್, ಬಿ. ಎಸ್‌ಸಿ. ಮೈಸೂ
ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂ